ಭಾರತದ ಸ್ವಾತಂತ್ರ್ಯದ ಬೆಳ್ಳಿಹಬ್ಬ

೧೯೭೨

ಪುಸ್ತಕ ಭಾಗ್ಯ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು ೧೮

ಸಾಹಿತ್ಯ ಪ್ರಸಾರ ಯೋಜನೆಗೆ ನಿಮ್ಮ ಸಹಕಾರ

ಭಾರತ ಸ್ವಾತಂತ್ರ್ಯದ ಬೆಳ್ಳಿಹಬ್ಬದ ಪ್ರಯುಕ್ತ ಕನ್ನಡ ಸಾಹಿತ್ಯ ಪರಿಷತ್ತು 1972ನೆಯ ಆಗಸ್ಟ್ 15ರಿಂದ 1973ನೆಯ ಆಗಸ್ಟ್ 15ರ ವರೆಗೆ ಒಂದು ವರ್ಷಕಾಲ ನಾಡಿನಾದ್ಯಂತ ಸಾಹಿತ್ಯ ಪ್ರಸಾರ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಕನ್ನಡ ಜನತೆಯಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸಿ ಕನ್ನಡದ ಬಗ್ಗೆ ಅವರಲ್ಲಿ ಕರ್ತವ್ಯಪ್ರಜ್ಞೆಯನ್ನು ಬೆಳೆಸಬೇಕೆಂಬುದೇ ಈ ಸಾಹಿತ್ಯ ಪ್ರಸಾರ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಈ ಯೋಜನೆಯ ಯಶಸ್ಸಿನಿಂದ ಕನ್ನಡದ ಸ್ಥಾನಮಾನವು ಮತ್ತು ನಾಡಿನ ಗೌರವವು ಮತ್ತಷ್ಟು ಎತ್ತರಕ್ಕೆ ಏರುವುದರಲ್ಲಿ ಯಾವ ಸಂಶಯವೂ ಇಲ್ಲ.

ಒಂದು ವರ್ಷ ಕಾಲ ನಡೆಯುವ ಈ ಸಾಹಿತ್ಯ ಪ್ರಸಾರ ಕಾರ್ಯವನ್ನು ಕಾರ್ಯಗತಗೊಳಿಸುವ ಈ ಪವಿತ್ರ ಕಾರ್ಯದಲ್ಲಿ ತಮ್ಮ ನೆರವು ಪರಿಷತ್ತಿಗೆ ಅವಶ್ಯಕವಾಗಿ ಬೇಕಾಗಿದೆ. ಈ ಕೆಳಕಂಡಂತೆ ತಾವು ಈ ಕಾರ್ಯದಲ್ಲಿ ಪಾಲ್ಗೊಳ್ಳಬಹುದು:

1, ಜಿಲ್ಲೆ ಜಿಲ್ಲೆಗಳಲ್ಲಿ ಪರಿಷತ್ತು ಏರ್ಪಡಿಸುವ ಕನ್ನಡ ಪುಸ್ತಕ ಪ್ರದರ್ಶನ ಮತ್ತು ಪುಸ್ತಕ ಮಾರಾಟಕಾರ್ಯದಲ್ಲಿ ಉತ್ತಮ ಗ್ರಂಥಗಳನ್ನು ಮಾತ್ರ ಪ್ರದರ್ಶನಕ್ಕೆ ಮತ್ತು ಮಾರಾಟಕ್ಕೆ ಇಡಲಾಗುವುದು. ಪ್ರತಿ ಪುಸ್ತಕದ ಮೇಲೂ ರೂಪಾಯಿಗೆ 10 ಪೈಸೆಯಂತೆ ಕೊಳ್ಳುವವರಿಗೆ ರಿಯಾಯಿತಿ ನೀಡಲಾಗುವುದು. ಆ ಸಂದರ್ಭದಲ್ಲಿ ನೀವು ನಿಮ್ಮ ಸ್ವಂತಕ್ಕೆ ಅಥವಾ ನೀವು ಮುಖ್ಯಸ್ಥರು, ಅಧ್ಯಕ್ಷರು ಅಥವಾ ಸದಸ್ಯರಾಗಿರುವ ಶಾಲಾ-ಕಾಲೇಜುಗಳು, ತಾಲ್ಲೂಕ್ ಬೋರ್ಡ್‌ಗಳು, ಪುರಸಭೆಗಳು, ಪಂಚಾಯ್ತಿಗಳು ಇನ್ನಿತರ ಸಂಘಸಂಸ್ಥೆಗಳ ಪುಸ್ತಕ ಭಂಡಾರಗಳಿಗೆ ಈ ವರ್ಷ ಬೇಕಾಗುವ ಕನ್ನಡ ಪುಸ್ತಕಗಳನ್ನು ಜಿಲ್ಲಾ ಕೇಂದ್ರಗಳಲ್ಲಿ, ಬೆಂಗಳೂರು ನಗರದ ವಿವಿಧ ಬಡಾವಣೆಗಳಲ್ಲಿ ಪರಿಷತ್ತು ನಡೆಸುವ ಪುಸ್ತಕಪ್ರದರ್ಶನ ಮತ್ತು ಪುಸ್ತಕ ಮಾರಾಟದ ಸಂದರ್ಭದಲ್ಲಿ ಕೊಳ್ಳಬಹುದು.

2. ಪುಸ್ತಕ ಮಾರಾಟದ ಕೂಪನ್ನುಗಳನ್ನು ಮಾರಾಟ ಮಾಡಲು ಬರುವ ಪರಿಷತ್ತಿನ ಪ್ರತಿನಿಧಿಗಳಿಂದ ಮುಂಚಿತವಾಗಿ ಕೂಪನ್ನುಗಳನ್ನು ಕೊಳ್ಳಬಹುದು. ಮತ್ತು ಅವರು ತರುವ ಪುಸ್ತಕದ ಪಟ್ಟಿಯಲ್ಲಿ ತಮಗೆ ಬೇಕಾದ ಪುಸ್ತಕಗಳಾವುವು ಎಂಬುದನ್ನು ತಿಳಿಸಬಹುದು.

3. ಸಾಹಿತ್ಯ ಪ್ರಸಾರ ಕಾರ್ಯಕ್ರಮದ ಅಂಗವಾಗಿ ಆಯಾ ಜಿಲ್ಲೆಗಳಲ್ಲಿ ನಡೆಯುವ ಸಾಹಿತ್ಯ ಪ್ರದರ್ಶನ ಚರ್ಚಾಗೋಷ್ಠಿ, ಸಭೆ ಸಮಾರಂಭಗಳಲ್ಲಿ ಭಾಗವಹಿಸಬಹುದು.

4. ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ವಾಚನಾಭಿರುಚಿಯನ್ನು ಬೆಳೆಸುವ ಉದ್ದೇಶದಿಂದ ಪರಿಷತ್ತು ಪ್ರತಿಯೊಂದು ಜಿಲ್ಲೆಯ ಶಾಲಾ-ಕಾಲೇಜುಗಳಲ್ಲಿ ಏರ್ಪಡಿಸುವ ವಾಚನ ಸ್ಪರ್ಧೆ ಅಥವಾ ಲೇಖನ ಸ್ಪರ್ಧೆಗಳನ್ನು ಯಶಸ್ವಿಗೊಳಿಸಲು ತಮ್ಮ ಸಹಾಯ ಸಹಕಾರಗಳನ್ನು ನೀಡಬಹುದು.

5. (ಅ) ಈ ವರ್ಷದಲ್ಲಿ ತಾವು ಏರ್ಪಡಿಸುವ ಅಥವಾ ತಾವು ಭಾಗವಹಿಸುವ ಸಭೆ ಸಮಾರಂಭಗಳಲ್ಲಿ ಅತಿಥಿಗಳಿಗೆ ಹಾರದ ಬದಲು ಪುಸ್ತಕಗಳನ್ನು ನೀಡುವುದು. ಮತ್ತು ತಾವೂ ಹಾರದ ಬದಲು ಪುಸ್ತಕಗಳನ್ನೇ ಸ್ವೀಕರಿಸುವುದು.

(ಆ) ಹಾಗೆಯೇ ತಾವು ಮುಖ್ಯಸ್ಥರು, ಅಧ್ಯಕ್ಷರು ಅಥವಾ ಸದಸ್ಯರಾಗಿರುವ ಸಂಸ್ಥೆಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ ಈ ವರ್ಷ ನಡೆಯುವ ಸ್ಪರ್ಧೆಗಳಲ್ಲಿ ಇತರೇ ಬಹುಮಾನದ ಜೊತೆಗೆ ಪುಸ್ತಕವನ್ನೂ ಬಹುಮಾನವಾಗಿ ನೀಡುವ ಪದ್ಧತಿಯನ್ನು ಜಾರಿಗೆ ತರುವುದು.

(ಇ) ಈ ವರ್ಷದಲ್ಲಿ ತಾವು ನಡೆಸುವ ಅಥವಾ ಭಾಗವಹಿಸುವ ಮದುವೆ ಮುಂತಾದ ಶುಭ ಸಮಾರಂಭಗಳಲ್ಲಿ ವಧೂವರರಿಗೆ ಇತರೇ ವಸ್ತುಗಳ ಜೊತೆಗೆ ಪುಸ್ತಕಗಳನ್ನೂ ಉಡುಗೊರೆಯಾಗಿ ಕೊಡುವ ಸಂಪ್ರದಾಯವನ್ನು ಬೆಳೆಸುವುದು. ಇತ್ಯಾದಿ, ಇತ್ಯಾದಿ,

ಸಿರಿಗನ್ನಡಂ ಗೆಲ್ಗೆ

ಜೈ ಕರ್ನಾಟಕಮಾತೆ

ಸಿರಿಗನ್ನಡಂ ಬಾಳ್ಗೆ



ಎಂ. ಎಸ್. ಎಂ. ಪರಿಷ್ಕರಣ ಕಾರ್ಖಾನೆ
ಕನ್ನಡ ಸಂಘ, (ರಿ.)

ಮಾಗಡಿ ರಸ್ತೆ :: ಬೆಂಗಳೂರು-೫೬೦೦೨೩

ಮೇಲ್ಕಂಡ ಕನ್ನಡ ಸಂಘದ ಕ್ರಿಯಾಸಮಿತಿ ಆಶ್ರಯದಲ್ಲಿ ದಿನಾಂಕ ೨೩-೧೧-೧೯೮೮ನೇ ಶುಕ್ರವಾರ

೨೮ನೇ ಕರ್ನಾಟಕ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು

ಮಧ್ಯಾಹ್ನ ೨ ಘಂಟೆಗೆ ಕಾರ್ಖಾನೆಯ ಆವರಣದಲ್ಲಿ ಏರ್ಪಡಿಸಲಾಗಿದೆ.

-: ಕಾರ್ಯಕ್ರಮದ ವಿವರಣೆ :-

ಧ್ವಜಾರೋಹಣ : ಬೆಳಿಗ್ಗೆ ೯-೩೦ಕ್ಕೆ ಆಡಳಿತಾಧಿಕಾರಿಯಾದ ಶ್ರೀ ವೈ. ಎನ್. ಶೆಟ್ಟಿ ಹಾಗೂ
ಕಾರ್ಮಿಕ ಕಲ್ಯಾಣಾಧಿಕಾರಿಯಾದ ಶ್ರೀ ದಕ್ಷಿಣಾಮೂರ್ತಿ ಇವರ ನೇತೃತ್ವದಲ್ಲಿ ನೆರವೇರುವುದು.

ಸಮಾರಂಭದ ಅಂಗವಾಗಿ ಕಲಾ ಸೇವೆ ಮಾಡುತ್ತಿರುವ **ಶ್ರೀ ಹೊನ್ನಪ್ಪಭಾಗವತರಿಗೆ** ಸನ್ಮಾನಿಸಲಾಗುತ್ತದೆ.

ಹಾಗೂ ಕಾರ್ಖಾನೆಯಲ್ಲಿ ಕನ್ನಡ ಸೇವೆ ಮಾಡಿಕೊಂಡು ಬಂದಂತ ಕೆಲವು ಮಹನೀಯರಿಗೂ ಸಹ ಸನ್ಮಾನಿಸಲಾಗುವುದು.

ಅಧ್ಯಕ್ಷತೆ : ಶ್ರೀ ವಾಟಾಳ್ ನಾಗರಾಜ್ (ಕನ್ನಡ ಚಳುವಳಿ ನಾಯಕರು)

... ಶ್ರೀ ಪ್ರಾ. ದಾ. ಗೋವಿಂದು (ಅಧ್ಯಕ್ಷರು, ಅ. ಕ. ಡಾ|| ರಾಜ್ ಅ. ಸಂಘ)

ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿ...

ಪುಸ್ತಕಭಾಗ್ಯ

ಸಂಪಾದಕ

ಹಿ. ಮ.. ನಾಗಯ್ಯ

ಹಿ. ಮ. ನಾಗಯ್ಯ

ಮಮತೆಯ ಮಾತೆ ನುಡಿಸಿದ ಕನ್ನಡ
ಗುರುದೈವ ಕಲಿಸಿದ ವಿದ್ಯೆಯೇ ಕನ್ನಡ
ಸೋದರ ಸೌಹಾರ್ದತೆಯ ಬೆಳೆಸುವುದೇ ಕನ್ನಡ ।
ತಾತ ಮುತ್ತಾತರ ನಡೆನುಡಿಯೇ ಕನ್ನಡ
ಗುರುಹಿರಿಯರ ಸಂಸ್ಕೃತಿಯೇ ಕನ್ನಡ
ಇಂದಿನ ಮಕ್ಕಳ ನುಡಿಯೇ ಕನ್ನಡ ॥

...ನ್ನಡವ ಸವಿದ
...ನ್ನಡಿ... ಕನ್ನಡ ಒಂದೇ ದೈವ
...ದರ ಹಿಂದೆ ಉಳಿದುದ್ದೆಲ್ಲಾ
ಎಂಬ ಬಿ. ಎಂ. ಶ್ರೀಯವರ ವಾಣಿ
ಕನ್ನಡಿಗರಿಗಾಗಲೀ ಅಮರವಾಣಿ

—ಗೋವಿಂದಪ್ಪ ...ಗೌಡ.

ಕನ್ನಡ ಸಾಹಿತ್ಯ ...

ಪಂಪಮಹಾಕವಿ ಮಾರ್ಗ, ...

ಬೆಂಗಳೂರು-...

"PUSTAKA BHAGYA"—A Souvenir in Connection with the programme for propagation of Literature during "International BookYear 1972" and Silver Jubilee Celebration of Independence of India.

ಮುಖಚಿತ್ರ : ಜಿ. ಕೆ. ಸತ್ಯ

ಮುದ್ರಕರು
ಶೇಷನಾರಾಯಣ
ವಿಕಾಸ ಮುದ್ರಣ ಸೌತ್ ಎಂಡ್ ರಸ್ತೆ ಬೆಂಗಳೂರು–೪

ಸಂದೇಶಗಳು

G. S. PATHAK
Vice-President
India

New Delhi
July 25, 1972

I am glad to know that the Kannada Sahitya Parishat is launching a scheme for the propagation of Kannada Literature in connection with the celebration of the Silver Jubilee of India's Independence and that it is bringing out a Souvenir "Pustaka Bhagya" as a part of this programme. I send my best wishes for the success of the activities of the Parishat.

G. S. PATHAK

MOHANLAL SUKHADIA
Governor

Raj Bhavan
Bangalore
25th July 1972

I am happy to learn that the Kannada Sahitya Parishat has launched a scheme for the propagation of Kannada literature as part of Silver Jubilee Celebration of the Indian Independence. This year has also been declared by the UNESCO as International Book Year.

Kannada Sahitya Parishat, as the literary mouth-piece of the people of Karnataka, is best suited to undertake this stupendous task. I have no doubt that the efforts of the Parishat will receive hearty co-operation from the people, and that the message that the Kannada literature has to convey reaches every home in Karnataka.

I wish the programme all success.

MOHANLAL SUKHADIA

ಡಿ. ದೇವರಾಜ್ ಅರಸ್
ಮುಖ್ಯ ಮಂತ್ರಿ

" ವಿಧಾನ ಸೌಧ
ಬೆಂಗಳೂರು-೧
೫-೮-೧೯೭೨

ಕನ್ನಡ ಸಾಹಿತ್ಯ ಪರಿಷತ್ತು, ಸಾಹಿತ್ಯ ಪ್ರಸಾರ ಯೋಜನೆಯ ಅಂಗವಾಗಿ " ಪುಸ್ತಕ ಭಾಗ್ಯ" ನೆನಪಿನ ಸಂಚಿಕೆ ಹೊರತರುತ್ತಿರುವುದು ಅಭಿಮಾನದ ಸಂಗತಿ. ನಾಡು, ನುಡಿಯ ಬಹುಮುಖ ಸೇವೆಯಲ್ಲಿ ನಿರತವಾಗಿರುವ ಸಾಹಿತ್ಯ ಪರಿಷತ್ತಿನ ಈ ಯತ್ನ ಜನರಲ್ಲಿ ವಾಚನಾಭಿರುಚಿಯನ್ನು ಬೆಳೆಸಲು ಸಾಧಕವಾಗಲಿ ಎಂದು ಹಾರೈಸುತ್ತೇನೆ.

ಡಿ. ದೇವರಾಜ್ ಅರಸ್

A. R. BADARI NARAYAN
Minister for Education

Vidhana Soudha,
Bangalore-1
31st July 1972

I am glad to learn that the Kannada Sahitya Parishath will be celebrating the Silver Jubilee of the Indian Independence and to commemorate the occasion they are brining out a special publication "Pusthaka Bhagya" on 15th August 1972, detailing the efforts of the Parishath.

I send my best wishes for the success of the venture.

A. R. BADARI NARAYANA

ಸಿ. ನಿಜಲಿಂಗಪ್ಪ ಧಾರವಾಡ

೧೮–೭–೧೯೭೨

ಭಾರತದ ಸ್ವಾತಂತ್ರ್ಯದ ದಿನ ಹೆಮ್ಮೆಯ ದಿನ; ರಾಷ್ಟ್ರ ಒಂದಾಗಿ ಜನಾಂಗ ಒಂದಾಗಿ ಸರ್ವ ಸ್ವಾತಂತ್ರ್ಯವಾದ ದಿನ. ಆ ಮಹಾದಿನದ ನಂತರ ೨೫ ವರ್ಷಗಳು ಕಳೆದುಹೋದವು. ಇಲ್ಲಿಯ ವರೆಗೆ ಅಂದರೆ ಈ ಕಾಲು ಶತಮಾನದಲ್ಲಿ ನಮ್ಮ ಸಾಧನೆಗಳೇನು ಸಾಹಸಗಳೇನು, ಧ್ಯೇಯಗಳ ಸಾಧನೆ ಎಷ್ಟಾಗಿದೆ; ಆ ಪ್ರಯತ್ನಕ್ಕೆ ಎಡರು ತೊಡರುಗಳೇನು, ಪ್ರತಿಬಂಧಕಗಳೇನು; ನಮ್ಮಿಂದ ಆದವುಗಳೆಷ್ಟು ಹೊರಗಿನವರಿಂದ ಆದವುಗಳೆಷ್ಟು; ಮುಂದಿನ ರಾಜಕೀಯ ಸಾಮಾಜಿಕ, ಸಾಂಪತ್ತಿಕ ದೃಷ್ಟಿಯತ್ತ, ಪ್ರಜಾಪ್ರಭುತ್ವ ಶಾಶ್ವತವೇ ಅಲ್ಲವೇ ಮುಂತಾದ ಅನೇಕ ಪ್ರಶ್ನೆಗಳು ನಮ್ಮ ಮುಂದೆ ಎದ್ದು ನಿಂತಿವೆ. ಹಿಂದಿನ ೨೫ ವರ್ಷಗಳ ಅನುಭವದಿಂದ ಮುಂದಿನದನ್ನು ತೀರ್ಮಾನಿಸುವ ಸಮಯವಿದು. ಈ ಬಿಕ್ಕಟ್ಟಿನ ಸಮಯದಲ್ಲಿ ನಮಗೆ ಆಳವಾದ ಅಗಲವಾದ ಎತ್ತರವಾದ ದೃಷ್ಟಿ ಬೇಕು. ಅದಕ್ಕನುಗುಣವಾದ ಆಲೋಚನೆ, ತೀರ್ಮಾನ ಅಗತ್ಯ. ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರುವ ಒಗ್ಗಟ್ಟು ಧೈರ್ಯ ಅಪಾರವಾದ ನಿಸ್ವಾರ್ಥ ದುಡಿಮೆ ಇವುಗಳು ಅತ್ಯವಶ್ಯಕ. ಈ ಮಹಾಕಾರ್ಯಕ್ಕೆ ವಿರೋಧವಾಗಿ ಬೃಹದಾಕಾರದಲ್ಲಿ ಬೆಳೆಯುತ್ತಿರುವ ಜಾತೀಯತೆ ಮುಂತಾದ ಕೀಳುದರ್ಜೆಯ ಸಂಕುಚಿತ ಮತ್ತು ಸ್ವಾರ್ಥದಿಂದ ಕೂಡಿದ ಭಾವನೆಗಳು, ಅದನ್ನನುಸರಿಸುವ ಸಣ್ಣತನದ ಕೆಲಸಕಾರ್ಯಗಳು ಇಲ್ಲದಂತಾಗಬೇಕು.

ಈ ಮಹತ್ಕಾರ್ಯ ಸಾಧಿಸಲು ಎಲ್ಲರೂ ದುಡಿಯಬೇಕಾದರೂ ಸಾಹಿತಿಗಳ ಭಾಗ ದೊಡ್ಡದು ಮುಖ್ಯವಾದುದು, ಅವಶ್ಯಕವಾದುದು, ಒಂದು ದೃಷ್ಟಿಯಿಂದ ಅನಿವಾರ್ಯವಾದುದು ಎಂದು ನನ್ನ ಭಾವನೆ, ಸ್ಪಷ್ಟ ಅಭಿಪ್ರಾಯ ಮತ್ತು ಸಾಹಿತಿಗಳಲ್ಲಿ ನಮ್ರ ವಿನಂತಿ. ಈ ಮಾತು ಚಾರಿತ್ರಿಕವಾಗಿಯೂ ಸತ್ಯ.

ಈ ದೆಸೆಯಲ್ಲಿ ಪದ್ಯ, ಗದ್ಯ, ನಾಟಕ, ಕಾದಂಬರಿ ವಗೈರೆ ವಗೈರೆ ರೂಪಗಳಲ್ಲಿ ಸಾಹಿತ್ಯ ಹೊರಹೊಮ್ಮುವಂತೆ ಮಾಡುವ ತೀರ್ಮಾನವನ್ನು, ಕನ್ನಡಿಗರ ಸೇವೆಯನ್ನು ಅರ್ಧಶತಮಾನಕ್ಕೂ ಮೇಲ್ಪಟ್ಟ ಕಾಲದಿಂದ ಯಶಸ್ವಿಯಾಗಿ ಮಾಡಿಕೊಂಡಿರುವ ಕನ್ನಡ ಸಾಹಿತ್ಯ ಪರಿಷತ್ತು ಕೈಕೊಳ್ಳಲೆಂದು ಹಾರೈಸುತ್ತೇನೆ.

ಸ್ವಾತಂತ್ರ್ಯದ ಬೆಳ್ಳಿಯ ಹಬ್ಬವನ್ನು ಪರಿಣಾಮಕಾರಿಯಾಗಿ ನೆರವೇರಿಸುವ ತಮ್ಮ ತೀರ್ಮಾನ ಮತ್ತು ಯೋಜನೆ ಮೆಚ್ಚತಕ್ಕದ್ದಾಗಿದೆ; ಹೊಗಳತಕ್ಕದ್ದಾಗಿದೆ; ಪ್ರೋತ್ಸಾಹಿಸತಕ್ಕದ್ದಾಗಿದೆ. ಮೇಲಿನ ನನ್ನ ಅಭಿಪ್ರಾಯ ಅಥವಾ ಸೂಚನೆಯ ಜೊತೆಗೆ ಮತ್ತೊಂದು ಸಲಹೆ. ಅನೇಕ ಮನೆಗಳಲ್ಲಿ ಅದರಲ್ಲೂ ಪುರಾತನ ಕಾಲದಿಂದಲೂ ಬದುಕಿ ಬಾಳಿದ ಅನೇಕ ಮನೆಗಳಲ್ಲಿ ಹಾಗೂ ಅನೇಕ ಮಠಗಳಲ್ಲಿ ಸಹಸ್ರಾರು ಹಳೆಯ ಓಲೆಗರಿಯ ಗ್ರಂಥಗಳಿವೆ. ಅವುಗಳನ್ನು ಹುಡುಕಿಸಿ ಯೋಗ್ಯವಾದವುಗಳನ್ನು ಪ್ರಕಟಿಸುವ ಪ್ರಯತ್ನವೂ ಸಾಗಲೆಂದು.

ಅದರಂತೆಯೇ ಈ ಪವಿತ್ರ ದಿನದ ನೆನಪಿಗಾಗಿ ಕನ್ನಡದ ಪುರಾತನ ಕವಿಗಳ, ಮಧ್ಯಮ ಕಾಲದ ಕವಿಗಳ ಅಥವಾ ಸಾಹಿತಿಗಳ ಸಾಹಿತ್ಯದ ನಾನಾ ಮುಖದ ಬೆಳವಣಿಗೆ ಸಹಾಯಕರ ಸಂಬಂಧದ ಈಗಿನ ಕವಿಗಳ ಕಾದಂಬರಿಗಳ ಆಯಿಕೆ ಮಾಡಿ ೧೦ ಸಂಪುಟಗಳಲ್ಲಿ ೧೦೦ ರೂಪಾಯಿಗಳಿಗೆ ದೊರೆಯುವಂತೆ ಮಾಡಬಹುದೆಂದು ಮಗುದೊಂದು ನನ್ನ ಸೂಚನೆ. ಸರ್ಕಾರವೂ ಸಹಾಯ ಮಾಡಬೇಕು. ಇವು ನನ್ನ ಸೂಚನೆಗಳು. ಇವನ್ನು ಒಪ್ಪಿದರೆ ಸಂತೋಷ, ಒಪ್ಪದೆ ಹೋದರೆ ವ್ಯಸನವಿಲ್ಲ.

ನಿಮ್ಮ "ಪುಸ್ತಕ ಭಾಗ್ಯ" ನೆನಪಿನ ಸಂಚಿಕೆ ನಿಮ್ಮ ಯೋಜನೆ ಮತ್ತು ಇತರ ಚಟುವಟಿಕೆಗಳು ಒಟ್ಟಿನಲ್ಲಿ ಬೆಳ್ಳಿಯ ಹಬ್ಬದ ಆಚರಣೆಯೂ ಅತ್ಯಂತ ಯಶಸ್ವಿಯಾಗಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಸಿದ್ದವ್ವನಹಳ್ಳಿ ನಿಜಲಿಂಗಪ್ಪ

ಡಿ. ವಿ. ಗುಂಡಪ್ಪ — **ಬೆಂಗಳೂರು**

ನಮ್ಮ ಜನ ಪುಸ್ತಕ ಓದುವ ಅಭ್ಯಾಸವನ್ನು ಬೆಳೆಸಿಕೊಳ್ಳುವಂತೆ ಒಡಂಬಡಿಸುವ ಏರ್ಪಾಡು ಯಾವುದಾದರೂ ಅದನ್ನು ಯಾರು ಮಾಡಿದರೂ ಅದು ಜಯವಂತವಾಗಲಿ ಎಂದು ನಾನು ಬೇಡುವುದು ಸ್ವಾಭಾವಿಕವಾಗಿಯೇ ಇದೆ. ಕನ್ನಡದಲ್ಲಿ ಒಳ್ಳೊಳ್ಳೆಯ ಹೊಸ ಜಾತಿಯ ಪುಸ್ತಕಗಳು ಹೆಚ್ಚುಹೆಚ್ಚಾಗಿ ಬರಲೆಂದು ನಾವು ಬೇಡಿಕೊಳ್ಳುತ್ತಿದ್ದ ಕಾಲವೊಂದಿತ್ತು. ಈಗ ಪುಸ್ತಕ ಬರುತ್ತಿದೆ. ಹೊಸ ಹೊಸ ಆಕಾರಗಳಲ್ಲಿ, ಹೊಸ ಹೊಸ ಕಾಂತಿಗಳಲ್ಲಿ, ಹೊಸ ಹೊಸ ಜ್ಞಾನಕ್ಷೇತ್ರಗಳಲ್ಲಿ, ಹೊಸ ಹೊಸ ಶೈಲಿಗಳಲ್ಲಿ ಕನ್ನಡದ ಗ್ರಂಥಗಳು ಬರುತ್ತಿವೆ. ದಿನದಿನವೂ ಹೊಸ ಹೊಸದು ಬರುತ್ತಿವೆ. ಹಾಗೆಯೇ ಓದುವವರೂ ದೊರೆತು ಬರಬೇಕು. ಅನ್ನವಸ್ತ್ರಗಳ ಹೊಸ ಹೊಸ ನಮೂನೆಗಳಿಗೆ ಜನ ಹೇಗೆ ಸಂಭ್ರಮಿಸಿ ನುಗ್ಗಿ ಬರುತ್ತಾರೊ ಹೊಸ ಪುಸ್ತಕಗಳಿಗೂ ಜನ ಹಾಗೆ ಬರಬೇಕು.

ನನಗೆ ತಿಳಿದ ಮಟ್ಟಿಗೆ ತಮಿಳಿನಲ್ಲಿ ಜನ ಹಾಗೆ ನುಗ್ಗಿ ಬರುತ್ತಿದ್ದಾರೆ. ತೆಲುಗಿನಲ್ಲಿಯೂ ಹಾಗೆ ಆಗುತ್ತಿದೆಯೆಂದು ಕೇಳಿದ್ದೇನೆ. ಮಲೆಯಾಳಿ, ಮರಾಠಿ, ಹಿಂದಿ, ಬಂಗಾಳಿ ಈ ಸೋದರ ಭಾಷೆಗಳಲ್ಲಿಯೂ ಗ್ರಂಥವಾಚಕರ ಸಂಖ್ಯೆ ಯಥೇಷ್ಟವಾಗಿ ಬೆಳೆದಿದೆ ಎಂದು ಕೇಳಿದ್ದೇನೆ.

ಪರಿಷತ್ತು ಮಾಡುತ್ತಿರುವ ಪ್ರಯತ್ನಗಳಿಂದ ಕನ್ನಡದಲ್ಲಿಯೂ ಹಾಗೆ ಪುಸ್ತಕಗಳನ್ನು ಕೊಂಡು ಓದುವವರ ಸಂಖ್ಯೆ ಬೆಳೆಯುವಂತೆ ಜ್ಞಾನಸ್ವರೂಪಿಯಾದ ಭಗವಂತನು ಅನುಗ್ರಹಿಸಲಿ.

ಡಿ.ವಿ.ಜಿ.

ವಿ. ಎಸ್. ಕೌಜಲಗಿ
ರಾಜ್ಯ ಮಂತ್ರಿ,
ಯುವಜನ ಸೇವೆ

"ವಿಧಾನ ಸೌಧ"
ಬೆಂಗಳೂರು-೧
೨೧-೭-೧೯೭೨

ಕನ್ನಡ ಭಾಷೆಯ ಬಗ್ಗೆ ಜನತೆಯಲ್ಲಿ ಅಭಿರುಚಿ ಹುಟ್ಟಿಸಿ, ಅವರಲ್ಲಿ ಭಾಷಾಭಿಮಾನ ಬೆಳೆಯುವಂತೆ ಮಾಡುವ ದಿಶೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಈಗಾಗಲೇ ಪ್ರಗತಿಪರ ಹೆಜ್ಜೆ ಇರಿಸಿದೆ. ಸಾಹಿತ್ಯ ಪ್ರಸಾರದ ಉದ್ದೇಶದಿಂದ "ಪುಸ್ತಕಭಾಗ್ಯ" ಎಂಬ ನೆನಪಿನ ಸಂಚಿಕೆಯನ್ನು ಸ್ವಾತಂತ್ರ್ಯ ದಿನೋತ್ಸವ ಸಂದರ್ಭದಲ್ಲಿ ಹೊರತರುವ ಕಾರ್ಯಕ್ರಮ, ನಾಡು ನುಡಿಗಾಗಿ ಈ ಸಂಸ್ಥೆ ಸಲ್ಲಿಸುತ್ತಿರುವ ಸೇವೆಯ ದ್ಯೋತಕವಾಗಿದೆ.

ಪರಿಷತ್ತಿನ ಕಾರ್ಯಕ್ರಮ ಯಶಸ್ವಿಯಾಗಲಿ, ಜನತೆಯ ಪೂರ್ಣ ಸಹಕಾರ ಅದಕ್ಕೆ ದೊರಕಲಿ ಎಂದು ಹಾರೈಸುತ್ತೇನೆ.

ವೀರಣ್ಣ ಕೌಜಲಗಿ

ಮಾಸ್ತಿ

ಗವೀಪುರ
ಬೆಂಗಳೂರು–೧೯
೪–೮–೧೯೭೨

ಪುಸ್ತಕಗಳ ಪ್ರಚಾರದ ಬಗ್ಗೆ ನೀವು ಕೈಗೊಂಡಿರುವ ಕೆಲಸ ಅಗತ್ಯವಾಗಿ ನಡೆಯಬೇಕಾದದ್ದು. ಇದು ಚೆನ್ನಾಗಿ ನಡೆಯಲಿ. ಸಾಹಿತ್ಯ ಬೆಳೆಯಲು ಸಾಧಕವಾಗಲಿ.

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಕುವೆಂಪು

‘ಉದಯರವಿ’
ವಾಣೀವಿಲಾಸ ಪುರಂ, ಮೈಸೂರು–೨
೫–೮–೧೯೭೨

“ಪುಸ್ತಕ ಭಾಗ್ಯ” ಎಂಬ ಹೆಸರೇ ರೋಮಾಂಚಕಾರಿಯಾಗಿದೆ. ಪುಸ್ತಕವನ್ನು ಭಾಗ್ಯ ಎಂದು ಕರ್ನಾಟಕದ ಜನತೆ ಭಾವಿಸುವಂತೆ ಮಾಡಲು ನೀವು ಕಂಕಣಬದ್ಧರಾಗಿದ್ದೀರಿ. ನಿಮ್ಮಂತಹ ಭಗೀರಥರು ಈ ಮಹಾ ಸಾಹಸೋದ್ಯಮದಲ್ಲಿ ತೊಡಗಿರುವಾಗ ಗ್ರಂಥಗಂಗೆ ಮನೆಮನೆಗೂ ಹರಿಯುವುದರಲ್ಲಿ ಯಾವ ಸಂದೇಹವೂ ಇಲ್ಲ.

ನಿಮ್ಮ ಈ ಉದ್ಯಮ ಯಶಸ್ವಿಯಾಗಲಿ, ಮನೆ ಮನೆಯಲ್ಲೂ ಗ್ರಂಥಗಳ ಗರ್ಭಗುಡಿ ರಚಿತವಾಗಲಿ, ಕನ್ನಡಿಗರ ಪ್ರಜ್ಞೆ ವಿಶ್ವಪ್ರಜ್ಞೆಯಾಗಲಿ ಎಂದು ಹಾರೈಸುತ್ತೇನೆ.

ವಿಶ್ವಾಸಪೂರ್ವಕ ವಂದನೆಗಳೊಡನೆ,

ನಿಮ್ಮ
ಕುವೆಂಪು

ಶಿವರಾಮ ಕಾರಂತ **ಪುತ್ತೂರು**

೧೯-೭-೧೯೭೨

ನೀವು ಭಾರತದ ಸ್ವಾತಂತ್ರ್ಯದ ಬೆಳ್ಳಿಯಹಬ್ಬದ ಸಲುವಾಗಿಯೇ ಒಂದು ಸ್ಮರಣ ಸಂಚಿಕೆಯನ್ನು ತರುವ ಹಂಬಲ ಪ್ರಕಟಿಸಿದ್ದೀರಿ. ಸಂತೋಷ.

ದೇಶಕ್ಕೆ ಸ್ವಾತಂತ್ರ್ಯ ದೊರಕಿ ಇಪ್ಪತ್ತೈದು ವರ್ಷಗಳು ತುಂಬುತ್ತ ಬಂದಿದೆ ನಿಜ. ಈ ಸ್ವಾತಂತ್ರ್ಯ ಎಂಬುದು ನಿಜವಾಗಲೂ ವ್ಯಕ್ತಿಗಳ ಬದುಕು ಸ್ವತಂತ್ರವಾಗಬೇಕು. ಅವರ ನಿರಂತರವಾದ ಮಾನಸಿಕ, ದೈಹಿಕ ಬೆಳವಣಿಗೆಯಲ್ಲಿ ಅಂಥ ಲಕ್ಷಣ ಕಾಣಿಸಬೇಕು. ಎಲ್ಲಿಯ ತನಕ ಆ ಸಮುದಾಯ–ಅಂಧಾನುಕರಣೆಯಲ್ಲಿ, ಜಡ, ಮೃತ, ಜೀವಂತ ಮೂರ್ತಿಪೂಜೆಯಲ್ಲಿ ತಲ್ಲೀನವೋ ಅಲ್ಲಿಯ ತನಕ ಅವರು ದಾಸರೇ. ಈ ಅಂಧತೆ ಮತಗಳಿಂದ ಬರಬಹುದು, ರಾಜಕೀಯದಿಂದ ಬರಬಹುದು ಆದರೆ ಕುರುಡು ನಂಬಿ ಕಕುರುಡು ಬದುಕಿನ ಚಿಹ್ನೆ ಹೊರತು–ಚೇತನಾಶಾಲಿಯಾದ ಸ್ವತಂತ್ರ ಮನಸ್ಸಿನ ಲಕ್ಷಣವಲ್ಲ. ಎಲ್ಲ ವಿಧದ ಮಾನಸಿಕ ದಾಸ್ಯಗಳನ್ನು ಕಳಚಿ ಮನುಷ್ಯ ಸ್ವತಂತ್ರನಾಗುವಂತೆ ಪ್ರೇರಿಸುವ ಹೊಣೆ–ಸಾಹಿತಿಗಳದ್ದು, ಸಾಹಿತ್ಯದ್ದು. ಈ ಹೊರೆಯನ್ನು ತನ್ನ ಕರ್ತವ್ಯವೆಂದು ನಿತ್ಯ ಜೀವನದಲ್ಲಿ ಸಾಧಿಸಬಲ್ಲ ಸಾಹಿತಿ ತನ್ನ ಜನತೆಗೆ ಮಾರ್ಗದರ್ಶಕನಾಗಬಲ್ಲ.

ಮನಸ್ಸಿನ ಆನುವಂಶಿಕ, ಪರಂಪರಾಗತ, ಸಂಪಾದಿತ ದಾಸ್ಯವನ್ನು ಆತ ಕಳಚಿಕೊಂಡು–ಇದೊಂದು ನಿಜಕ್ಕೂ ಸ್ವತಂತ್ರ ಜನರುಳ್ಳ ಸ್ವತಂತ್ರ ಭಾರತ–ಎಂದು ಜಗಕ್ಕೆ ತೋರಿಸುವ ಕಾಲ ಬರಲಿ.

ಇತಿ,

ಶಿವರಾಮ ಕಾರಂತ

ಆದ್ಯ ರಂಗಾಚಾರ್ಯ ೨೮, ೬ನೇ ಮುಖ್ಯ ಬೀದಿ

ಮಲ್ಲೇಶ್ವರಂ, ಬೆಂಗಳೂರು–೩

೨೧–೭–೭೨

ಸ್ವಾತಂತ್ರ್ಯದ ಬೆಳ್ಳಿಯಹಬ್ಬದ ಅಂಗವಾಗಿ ಪರಿಷತ್ತು ಕೈಕೊಳ್ಳಲಿರುವ ಸಾಹಿತ್ಯ ಪ್ರಸಾರ ಯೋಜನೆಗೆ ಆನುಷಂಗಿಕವಾಗಿ " ಪುಸ್ತಕ ಭಾಗ್ಯ " ಎಂಬ ನೆನಪಿನ ಸಂಚಿಕೆಯನ್ನು ಪ್ರಕಟಿಸಲ ನಿರ್ಧರಿಸಿದ್ದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ.

ದೇಶದಲ್ಲಿ ಸಾಕ್ಷರತೆ ಬೆಳೆಯುವುದಕ್ಕಾಗಿ ಸಂತೋಷವನ್ನು ಪಡುವಾಗ ನಾವು ಒಂದು ಎಚ್ಚರಿಕೆಯನ್ನು ವಹಿಸುವುದಗತ್ಯವಾಗಿದೆ. ಸಾಕ್ಷರತೆಗೂ ಶಿಕ್ಷಣಕ್ಕೂ ನಿಕಟ ಸಂಬಂಧವಿರಬೇಕಾಗಿಲ್ಲವಾದ್ದರಿಂದ ಹೊಸ ಸಾಕ್ಷರ–ರ ಕೈಗೆ ಎಂತಹ ಸಾಹಿತ್ಯ ಲಭ್ಯವಿದೆ ಎಂಬುದು ಮಹತ್ವದ ಯೋಚನೆಯಾಗಿದೆ. ಆ ದೃಷ್ಟಿಯಿಂದ ಸರಕಾರಗಳೂ, ಅಕಾಡೆಮಿಗಳೂ, ಪುಸ್ತಕ ಭಂಡಾರಗಳೂ ಮತ್ತು ಪರಿಷತ್ತೂ ಸಂಸ್ಕೃತಿ ಪೋಷಕ ಸಾಹಿತ್ಯದ ಸುಲಭ ಲಭ್ಯತೆಗಾಗಿ ಸೂಕ್ತ ಕ್ರಮಗಳನ್ನು ಕೈಕೊಳ್ಳುವುದಗತ್ಯ. ಇಲ್ಲವಾದರೆ ಸಂಸ್ಕೃತ ಭಾಷೆಯ ಸುಭಾಷಿತವೊಂದು ಹೇಳುವಂತೆ " ಸಾಕ್ಷರರು ಸಾಂಸ್ಕೃತಿಕ ರಾಕ್ಷಸ "ರಾಗುವ ಹೆದರಿಕೆ ಇದೆ.

ತಮ್ಮ ಯೋಜನೆ ಯಶಸ್ವಿಯಾಗಲಿ.

ಶ್ರೀರಂಗ

ವಿ. ಸೀತಾರಾಮಯ್ಯ

೧, ಎರಡನೇ ಮುಖ್ಯ ರಸ್ತೆ,
ಚಾಮರಾಜಪೇಟೆ
ಬೆಂಗಳೂರು–೧೮

ನೀವು ಕೈಕೊಂಡಿರುವ ಕೆಲಸ ತುಂಬಾ ಶ್ಲಾಘ್ಯವಾದುದು. ಇಂಥ ಕೆಲಸಗಳು ನಡೆಯಬೇಕೆಂದೇ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿದುದು; ಇರುವುದು; ಇರಬೇಕಾದುದು. ಇಷ್ಟು ದಿನ ಇಂಥ ವಿಸ್ತಾರವಾದ ಕಾರ್ಯಕ್ರಮ ಕೈಕೊಳ್ಳಲು ಆಗಲಿಲ್ಲ. ನೀವು ಇದಕ್ಕೆ ಅಗತ್ಯವಾದ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡು, ಇದರ ನಿರ್ವಹಣೆಗೆ ಅಗತ್ಯವಾದ ವ್ಯವಸ್ಥೆಗಳನ್ನೆಲ್ಲಾ ಮಾಡುತ್ತಿದ್ದೀರಿ.

ಈ ಸಾರಸ್ವತ ಸೇವೆ ಕನ್ನಡ ನಾಡಿಗೆ ಶುಭವನ್ನು ತರಲಿ. ಜನರಲ್ಲಿ ವಾಚನಾಭಿರುಚಿ ಹೆಚ್ಚಬೇಕು. ಅವರು ಪುಸ್ತಕಗಳನ್ನು ಕೊಳ್ಳುವ ಅಭ್ಯಾಸ ಮಾಡಬೇಕು. ಅದಾದಲ್ಲದೆ ಯಾವ ಪ್ರಕಟನ ಕಾರ್ಯವೂ ಫಲಕಾರಿಯಾಗುವುದಿಲ್ಲ. ಪುಸ್ತಕಗಳ ಪ್ರಕಟಣೆಗೂ ಮಾರಾಟಕ್ಕೂ ಉತ್ಸಾಹ, ಪ್ರೋತ್ಸಾಹ ದೊರೆತ ಹೊರತು ಅದು ನೆರವೇರುವುದಿಲ್ಲ.

ಇವೆಲ್ಲವನ್ನೂ ನೀವು ಕೈಗೊಂಡಿದ್ದೀರಿ. ನಿಮ್ಮ ಕಾರ್ಯ ನಾಡಿನ ಹಿತಕಾರ್ಯಗಳಲ್ಲಿ ಬಹು ದೊಡ್ಡ ಉಪಕಾರವನ್ನು ಮಾಡುವಂಥದು.

"ಪುಸ್ತಕಭಾಗ್ಯ"ಕ್ಕೆ ನನ್ನ ಹರಕೆಯೇನು ಬೇಕು? ಒಳ್ಳೆಯ ಕೆಲಸ ನಡೆದಲ್ಲೆಲ್ಲ; ನಡೆದಾಗಲೆಲ್ಲ ಅದರ ಹರಕೆ ಅದಕ್ಕಿದೆ.

ಬರೆವವರ ಪುಸ್ತಕಗಳು ಅಚ್ಚಾಗುವಂತೆ, ಅವರ ಜೀವನ ನಡೆವಂತೆ, ಮೇಧಾವಿಗಳ ಬದುಕು ಸಾರ್ಥಕವಾಗುವಂತೆ ಆದರೆ ನನಗೆ ಸಂತೋಷ.

ಬರವಣಿಗೆಗೆ ಮೀಸಲು ಮಾಡಿಕೊಳ್ಳುವವರಿಗೆ, ಅವರ ಸಂಸಾರದ ಜೀವನ ನಡೆವಂತೆ ಪ್ರಕಟನ ಮತ್ತು ಮಾರಾಟದ ವ್ಯವಸ್ಥೆ ಆದರೆ ಆ ದಿನ ಮಹಾದಿನವಾಗುವುದೆಂದು ನನ್ನ ನಂಬಿಕೆ.

ಇದನ್ನು ನಿಮ್ಮ ಕ್ರಿಯಾವಿಧಾನ ಸಾಧಿಸುವುದೆಂದು ನಾನು ಎಣಿಸಿದ್ದೇನೆ.

ಇಂಥ ಮಂಗಳವನ್ನು ಸಾಧಿಸುವ ಕಾರ್ಯದಲ್ಲಿ ಎಲ್ಲ ಕೃತಾರ್ಥತೆಯೂ ನಿಮಗೆ–ಪರಿಷತ್ತಿಗೆ–ಉಂಟಾಗಲಿ.

ವಿ. ಸೀತಾರಾಮಯ್ಯ

ಡಾ॥ ವಿ. ಕೃ. ಗೋಕಾಕ್

ಬೆಂಗಳೂರು
೨೧–೭–೭೨

ತಮ್ಮ ಕಾಗದ ತಲುಪಿ ಅಭಿಪ್ರಾಯವಾಯಿತು. ಸ್ವಾತಂತ್ರ್ಯದ ಬೆಳ್ಳಿಯ ಹಬ್ಬವನ್ನು ಆಚರಿಸಲು ತಾವು ಬಂಗಾರದಂಥ ಯೋಜನೆಯನ್ನು ಹಾಕಿಕೊಂಡಿದ್ದೀರಿ. ಜನಜೀವನಕ್ಕೆ ಶ್ರೀಮಂತಿಕೆಯನ್ನೂ ಸ್ವಯಂಪ್ರಜ್ಞೆಯನ್ನೂ ತಂದುಕೊಡುವದೇ ಸ್ವಾತಂತ್ರ್ಯದ ತಿರುಳಾಗಿದೆ. ಸಾಹಿತ್ಯೋಪಾಸನೆಯಿಂದ ನೇರವಾಗಿ ಈ ಸಿದ್ಧಿ ಜನಜೀವನದೊಳಗೆ ಇಳಿಯಬಲ್ಲದು. ಅಂತೇ ಪರಿಷತ್ತಿನಂತಹ ಸಂಸ್ಥೆ ಸಾಹಿತ್ಯ ಪ್ರಸಾರದ ಯೋಜನೆಯನ್ನು ಈ ಶುಭ ಸಂದರ್ಭದಲ್ಲಿ ಹಾಕಿಕೊಂಡಿರುವುದು ತುಂಬಾ ಉಚಿತವೂ ಸಾರ್ಥಕವೂ ಆಗಿದೆ. ಈ ಕಾರ್ಯ ಸರ್ವವಿಧದಲ್ಲಿ ಯಶಸ್ವಿಯಾಗಲಿ.

ವಂದನೆಗಳು.

ವಿ. ಕೃ. ಗೋಕಾಕ್

ದೇ. ಜವರೇಗೌಡ
ಕುಲಪತಿ

ಮೈಸೂರು–೬
೧೯–೭–೧೯೭೨

ಭಾರತದ ಸ್ವಾತಂತ್ರ್ಯದ ಬೆಳ್ಳಿಯಹಬ್ಬವನ್ನು ಸಾಹಿತ್ಯ ಪ್ರಸಾರದ ಮೂಲಕ ಆಚರಿಸಬೇಕೆಂದು ನೀವು ಸಿದ್ಧಪಡಿಸಿಕೊಂಡಿರುವ ಯೋಜನೆ ಅತ್ಯಂತ ಶ್ಲಾಘ್ಯವಾದುದು. ನಿಮ್ಮ ಯೋಜನೆಯ ವಿವರಗಳನ್ನೆಲ್ಲಾ ನಾನು ಓದಿ ಮೆಚ್ಚಿಕೊಂಡಿದ್ದೇನೆ. ನೀವು ಅಧ್ಯಕ್ಷರಾದಂದಿನಿಂದ ಕನ್ನಡ ಸಾಹಿತ್ಯ ಪರಿಷತ್ತು ಅತ್ಯಂತ ಚೈತನ್ಯಯುತವಾಗಿ ಯಶಸ್ವಿಯಾಗಿ ಅನೇಕ ಕಾರ್ಯಕ್ರಮಗಳನ್ನು ಎಸಗುತ್ತಿದೆ. ಪರಿಷತ್ತು ಒಂದು ಶಕ್ತಿಕೇಂದ್ರವಾಗಿ, ಜನತೆಯಲ್ಲಿ ಹುರುಪು ಹುಮ್ಮಸ್ಸುಗಳನ್ನು ಮೂಡಿಸುತ್ತಿದೆ. ನೀವು ಯಾವ ಯೋಜನೆ ಹಾಕಿದರೂ ಅದು ಯಶಸ್ವಿಯಾಗುತ್ತದೆಂದೂ ಪರಿಣಾಮಕಾರಿಯಾಗುತ್ತದೆಂದೂ ಈಗ ಎಲ್ಲರೂ ತಿಳಿದುಕೊಂಡಿದ್ದಾರೆ. ನಿಮ್ಮ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಇಂತು ತಮ್ಮವ,
ದೇ. ಜವರೇಗೌಡ

ಟಿ. ಕೆ. ತುಕೋಳ್
ಉಪಕುಲಪತಿ

ಬೆಂಗಳೂರು ವಿಶ್ವವಿದ್ಯಾಲಯ

ಈ ವರ್ಷವನ್ನು ಅಂತರ ರಾಷ್ಟ್ರೀಯ ಪುಸ್ತಕ ವರ್ಷವೆಂದು ಆಚರಿಸಲು "ಯುನೆಸ್ಕೊ" ಕರೆಕೊಟ್ಟಿದೆ. ಭಾರತಕ್ಕೆ ಈ ಕಾಲ ಐತಿಹಾಸಿಕ ಮಹತ್ವ ಮತ್ತು ಪವಿತ್ರತೆಯಿಂದ ಕೂಡಿದೆ. ಆಗಸ್ಟ್ ೧೫ರಂದು ನಮ್ಮ ರಾಷ್ಟ್ರದ ಸ್ವಾತಂತ್ರ್ಯದ ಬೆಳ್ಳಿಹಬ್ಬ. ಅಂದೇ ಮಹಾ ಯೋಗಿಗಳಾದ ಅರವಿಂದರ ಶತಮಾನೋತ್ಸವ. ಇಂತಹ ಪ್ರಸಂಗದಲ್ಲಿ ಜ್ಞಾನಪ್ರಚಾರಕ್ಕಿಂತಲೂ ಹೆಚ್ಚಿನ ಪವಿತ್ರವಾದ ಕಾರ್ಯ ಮತ್ತೊಂದಿಲ್ಲ.

ಕನ್ನಡ ಸಾಹಿತ್ಯ ಪರಿಷತ್ತಿನವರು ಈಗಾಗಲೇ ಶ್ರೀ ಜಿ. ನಾರಾಯಣರವರ ಅಧ್ಯಕ್ಷತೆಯಲ್ಲಿ ಅನೇಕ ಫಲದಾಯಕವಾದ ಕಾರ್ಯಕ್ರಮವನ್ನು ಕೈಕೊಂಡು ಕನ್ನಡ ನಾಡು-ನುಡಿಗೆ ಅನನ್ಯ ಸೇವೆಯನ್ನು ಸಲ್ಲಿಸಿದ್ದಾರೆ. ಸಾಹಿತ್ಯ ಪ್ರಸಾರಕ್ಕೆ ವಾಚನಾಭಿರುಚಿಯನ್ನು ಹುಟ್ಟಿಸುವುದು ಅವಶ್ಯ. ಪರಿಷತ್ತು ಕೈಕೊಂಡ "ಸಾಹಿತ್ಯ ಪ್ರಸಾರ ಯೋಜನೆ" ತುಂಬಾ ವಿಶಾಲವಾಗಿದೆ. ಪುಸ್ತಕ ಪ್ರದರ್ಶನ, ವಿಚಾರಗೋಷ್ಠಿಗಳು, ಪುಸ್ತಕ ಮಾರಾಟ ಮತ್ತು "ಮನೆಗೊಂದು ಪುಸ್ತಕ ಭಂಡಾರ" ಯೋಜನೆ–ಇವೆಲ್ಲ ವಿಶಾಲವಾದ ಕಾರ್ಯಕ್ರಮಗಳು : ಇದಕ್ಕೆ ವಿಶ್ವವಿದ್ಯಾಲಯಗಳು, ಸಾಹಿತ್ಯ ಸಂಘಗಳು, ಸಾರ್ವಜನಿಕರು ಸಕ್ರಿಯ ಸಹಕಾರವನ್ನು ನೀಡುವುದು ಅವಶ್ಯ. ಈ ಯೋಜನೆಯ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಟಿ. ಕೆ. ತುಕೋಳ್

ಡಾ|| ಅಪ್ಪಾಸಾಹೇಬ ಅಡಕೆ
ಕುಲಪತಿಗಳು

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೨೮–೭–೧೯೭೨

ಭಾರತದ ಸ್ವಾತಂತ್ರ್ಯದ ಬೆಳ್ಳಿಹಬ್ಬವನ್ನು ಸಾಹಿತ್ಯ ಪ್ರಸಾರದ ಮೂಲಕ ಆಚರಿಸಬೇಕೆಂದು ಕನ್ನಡ ಸಾಹಿತ್ಯ ಪರಿಷತ್ತು ಯೋಜನೆ ಹಾಕಿಕೊಂಡಿರುವುದು ಸ್ತುತ್ಯವಾಗಿದೆ. ಕನ್ನಡ ಜನತೆಯಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸಿ ಕನ್ನಡದ ಬಗ್ಗೆ ಅವರಲ್ಲಿ ಕರ್ತವ್ಯಪ್ರಜ್ಞೆಯನ್ನು ಬೆಳೆಸಲು ಪರಿಷತ್ತು ಆಶಿಸಿರುವದು ಯಥೋಚಿತವಾಗಿದೆ. ಪರಿಷತ್ತು ಯೋಚಿಸಿರುವ–ಸ್ವಾತಂತ್ರ್ಯೋತ್ತರ ಸಾಹಿತ್ಯ ಸಾಧನೆ, ಕುರಿತು ಪುಸ್ತಕ ಪ್ರಕಟಣೆ, ವಿಚಾರಗೋಷ್ಠಿಗಳು, ಪುಸ್ತಕ ಪ್ರದರ್ಶನ, ಮನೆಗೊಂದು ಪುಸ್ತಕ ಭಂಡಾರ, ಪ್ರತಿ ಜಿಲ್ಲಾ ಸಮಿತಿಗೂ ಪುಸ್ತಕ ಭಂಡಾರ, ಪುಸ್ತಕ ಕೊಳ್ಳುವವರಿಗೆ ರಿಯಾಯಿತಿ–ಇವೇ ಮೊದಲಾದ ಸಾಹಿತ್ಯ ಪ್ರಸಾರದ ಕಾರ್ಯಕ್ರಮಗಳು ತುಂಬ ಉಪಯುಕ್ತವಾಗಿವೆ. ಈ ದಿಸೆಯಲ್ಲಿ ಎಲ್ಲ ಸಂಘ ಸಂಸ್ಥೆಗಳ, ಕನ್ನಡಾಭಿಮಾನಿಗಳ ಸಹಕಾರ ಪರಿಷತ್ತಿಗೆ ದೊರೆತು ಸಾಹಿತ್ಯ ಪ್ರಸಾರ ಕಾರ್ಯ ಯಶಸ್ವಿಯಾಗಿ ನಡೆಯಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಈ ವಿಶೇಷ ಸಂದರ್ಭದ ನೆನಪಿಗಾಗಿ ಅನೇಕ ಉಪಯುಕ್ತ ಲೇಖನಗಳೊಂದಿಗೆ ಪ್ರಕಟವಾಗಲಿರುವ "ಪುಸ್ತಕ ಭಾಗ್ಯ" ಎಂಬ ಸಂಚಿಕೆ ಎಲ್ಲ ಓದುಗರಿಗೂ ಭಾಗ್ಯನಿಧಿಯಾಗಿ ಪರಿಣಮಿಸಲಿ ಎಂದು ಕೋರುತ್ತೇನೆ.

ವಿಶ್ವಾಸ ಪೂರ್ವಕ ವಂದನೆಗಳೊಂದಿಗೆ,

ಅ. ಶೆ. ಅಡಕೆ

SAHITYA ACADEMY

Rabindra Bhavan
New Delhi
24th July 1972

We are very glad to learn that the Kannada Sahitya Parishath Kannada Literary Academy is celebrating the Silver Jubilee Year of Indian Independence through the propagation of Kannada Literature.

We send our best wishes for the success of this laudable work.

P. MACHWE
Secretary

ಪುಸ್ತಕ ಭಾಗ್ಯೋದಯ

ಸಮಸ್ತ ಸಮಾಜ ಜೀವನದ ಮಾನಸಿಕ ಆರೋಗ್ಯ ಸಂಪತ್ತನ್ನು ಸಮೃದ್ಧಗೊಳಿಸುವ ಜ್ಞಾನಗಂಗೆಯು ಮಾನವ ಜೀವನದ ಆದಿಯಿಂದಲೂ ಸಾಗಿ ಬರುತ್ತಲಿದ್ದಾಳೆ; ಗ್ರಂಥರಾಶಿಯಲ್ಲಿ ನೆಲೆ ನಿಲ್ಲುತ್ತಲಿದ್ದಾಳೆ. ಗ್ರಂಥಸ್ಥ ಜ್ಞಾನಗಂಗೋತ್ರಿಯು ಅನಂತ ಮುಖವಾಗಿ ಹರಿದು, ಮನೆ–ಮನಗಳನ್ನು ಮುಟ್ಟಿ, ಜನ ಜೀವನದ ವಿಶ್ವ ವಿಶಾಲ ಕ್ಷೇತ್ರದಲ್ಲಿ ಪ್ರಸರಿಸಿ, ಬದುಕನ್ನು ಫಲಪ್ರದವನ್ನಾಗಿ ಮಾಡುವಂತಾಗಲೆಂಬುದೇ ನಮ್ಮ ಮಹದಾಶಯವಾಗಿದೆ.

ಜ್ಞಾನಗಂಗೆಯನ್ನು ಸರ್ವತೋಮುಖವಾಗಿ ಹರಿಸಬೇಕೆಂಬ ಹೆಬ್ಬಯಕೆಯಿಂದ ಕನ್ನಡ ಸಾಹಿತ್ಯ ಪರಿಷತ್ತು ಬೃಹದ್ ಯೋಜನೆಯೊಂದನ್ನು ಹಾಕಿಕೊಂಡು ಕಾರ್ಯೋನ್ಮುಖವಾಗಿದೆ.

೧೯೭೨ನೆಯ ಇಸವಿಯನ್ನು "ಪುಸ್ತಕವರ್ಷ"ವೆಂದು 'ಯುನೆಸ್ಕೋ' ಸಾರಿದೆ. ಅದಕ್ಕಾಗಿ ವಿಶ್ವವ್ಯಾಪೀ ಕಾರ್ಯಕ್ರಮವೊಂದನ್ನು ರೂಪಿಸಿಕೊಂಡಿದೆ. ಭಾರತವು ತನ್ನ ಸ್ವಾತಂತ್ರ್ಯದ ಬೆಳ್ಳಿಹಬ್ಬವನ್ನು 'ಪುಸ್ತಕವರ್ಷ'ಕ್ಕೆ ಲಗತ್ತಿಸಿಕೊಂಡು ಕಾರ್ಯಪ್ರವೃತ್ತವಾಗಿದೆ.

"ಪುಸ್ತಕವರ್ಷ"ವನ್ನೂ ಸ್ವಾತಂತ್ರ್ಯದ ಬೆಳ್ಳಿಹಬ್ಬವನ್ನೂ ಸಾಹಿತ್ಯ ಪ್ರಸಾರ ಯೋಜನೆಯ ಮೂಲಕ ಆಚರಿಸಬೇಕೆಂದು ಸಂಕಲ್ಪಿಸಿಕೊಂಡಿರುವ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಉದ್ದೇಶ ಸಾಧನೆಗಾಗಿ ಸರ್ವರ ಸಹಕಾರವನ್ನು ಅಪೇಕ್ಷಿಸುತ್ತದೆ.

ಪರಿಷತ್ತು ಹಮ್ಮಿಕೊಂಡಿರುವ 'ಸಾಹಿತ್ಯ ಪ್ರಸಾರ ಯೋಜನೆ'ಗೆ ಪೂರಕವಾಗಿ ಹೊರಹೊಮ್ಮಿರುವ "ಪುಸ್ತಕ ಭಾಗ್ಯ"ವನ್ನು ಸಹೃದಯ ಸಂಪನ್ನರಾದ ಕನ್ನಡ ಜನತೆಯ ಔದಾರ್ಯದ ಮಡಲಿಗೆ ತುಂಬುತ್ತಲಿದ್ದೇವೆ; ಸಾರ್ಥಕತೆಯನ್ನು ಪಡೆಯಲೆಂದು ಸಲ್ಲಿಸುತ್ತಲಿದ್ದೇವೆ; ಹಾರೈಸುತ್ತಲಿದ್ದೇವೆ.

"ಪುಸ್ತಕ ಭಾಗ್ಯ"ವು ಯೋಚಿಸಿಕೊಂಡದ್ದಕ್ಕಿಂತ ದೊಡ್ಡದಾಗಿ ಮೂಡಿಬಂದಿದೆ. ಸಮಯದ ಇತಿ-ಮಿತಿಯಲ್ಲಿ ನಡೆಸಿದ ಈ ಪ್ರಯತ್ನಕ್ಕೆ, ಸಂಬಂಧಪಟ್ಟ ಸರ್ವರೂ ಸಂಪೂರ್ಣ ಸಹಕಾರ ನೀಡಿದ್ದರಿಂದ ಸಮಯಕ್ಕೆ ಸರಿಯಾಗಿ ಹೊರತರಲು ಸಾಧ್ಯವಾಯಿತೆಂದು ತಿಳಿಸಲು ಸಂತೋಷಪಡುತ್ತೇವೆ.

ನಮ್ಮ ಅವಸರದ ಪ್ರಾರ್ಥನೆಗೆ ಓಗೊಟ್ಟು, ಎಲ್ಲ ಮಹನೀಯರೂ ತಮ್ಮ ಅಮೂಲ್ಯ ಲೇಖನಗಳನ್ನು ಸಕಾಲದಲ್ಲಿ ಒದಗಿಸಿ ಉಪಕಾರ ಮಾಡಿದ್ದಾರೆ; "ಪುಸ್ತಕ ಭಾಗ್ಯ"ಕ್ಕೆ ಭವ್ಯತೆಯನ್ನು ತಂದುಕೊಟ್ಟಿದ್ದಾರೆ. ಈ ಎಲ್ಲ ಮಹನೀಯರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಗ್ರಂಥಾಲಯ ವಿಜ್ಞಾನ, ಗ್ರಂಥಾಲಯ ವ್ಯವಸ್ಥೆ, ಗ್ರಂಥರಚನೆ, ಮುದ್ರಣ, ಮಾರಾಟ, ವಾಚನಾಭಿರುಚಿ, ಕನ್ನಡ ಅಧ್ಯಯನ—ಮೊದಲಾದ ಸಂಗತಿಗಳ ಸಂಗಮ ಇಲ್ಲಿ ಆಗಿದೆ; ವಿಚಾರಮಥನ ನಡೆದಿದೆ.

ರಾಷ್ಟ್ರದ ಹಾಗೂ ರಾಜ್ಯದ ಹಿರಿಯ ನಾಯಕರೂ ಕನ್ನಡ ಸಾರಸ್ವತ ಸಂಪತ್ತನ್ನು ಸಮೃದ್ಧಗೊಳಿಸಿರುವ ಸಾಹಿತ್ಯಸಾಮ್ರಾಟರೂ ಶುಭ ಸಂದೇಶಗಳನ್ನು ಕಳುಹಿಸಿ, ಒಳ್ಳೆಯದಾಗಲೆಂದು ಹಾರೈಸಿದ್ದಾರೆ; ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಇವರೆಲ್ಲರಿಗೆ ನಾವು ಕೃತಜ್ಞರಾಗಿದ್ದೇವೆ.

ಸಾಹಿತ್ಯ ಪರಿಷತ್ತಿನ ಯಾವುದೇ ಒಂದು ಯೋಜನೆಯು, ಅದರಲ್ಲಿಯೂ ಮನೋಭೂಮಿಕೆಗೆ ಸಂಬಂಧಿಸಿದ ಸಾಹಿತ್ಯ ಪ್ರಸಾರದಂತಹ ಬೃಹದ್ ಯೋಜನೆಯು, ಸಮಗ್ರ ಜನತೆಯ ಬೆಂಬಲದಿಂದ ಮಾತ್ರ ಯಶಸ್ಸನ್ನು ಸಾಧಿಸಲು ಸಾಧ್ಯ. ಪರಿಷತ್ತಿನ ಎಲ್ಲ ಕಾರ್ಯಕರ್ತರ ಹಾಗೂ ಜಿಲ್ಲಾಪ್ರತಿನಿಧಿಗಳ ಅವಿರತವಾದ ಪ್ರಯತ್ನಗಳು ಯಶಸ್ಸಿನತ್ತ ಸಾಗುತ್ತಲಿವೆಯೆಂಬುದನ್ನು ಇಲ್ಲಿ ಸಂತೋಷದಿಂದ ಸ್ಮರಿಸಿಕೊಳ್ಳುತ್ತೇವೆ.

ಸಾಹಿತ್ಯ ಪ್ರಸಾರ ಯೋಜನೆಯ ಆದ್ಯ ಪ್ರವರ್ತಕರಾದ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರ ಧೀರ ನಿರ್ಧಾರವೇ "ಪುಸ್ತಕ ಭಾಗ್ಯ"ವು ಮೈದಳೆದು ಬರುವುದಕ್ಕೆ ಮುಖ್ಯ ಕಾರಣವಾಗಿದೆ. ಸಾಹಿತ್ಯಸಂವರ್ಧನೆಗೆ ಪೂರಕವಾಗಬಹುದಾದ ಯಾವೊಂದು ಕಾರ್ಯಕ್ಕೂ ಸಾಹಸದ ಕೊರತೆ ಇರಬಾರ ದೆಂಬುದೇ ಶ್ರೀ ನಾರಾಯಣ ಅವರ ಸ್ಪಷ್ಟ ಅಭಿಪ್ರಾಯವಾಗಿದೆ. ಶ್ರೀಯುತರ ಈ ನಿಲುವೇ ಇವರನ್ನು ಅವಿಶ್ರಾಂತ ದುಡಿಮೆಗೆ ಪ್ರವೃತ್ತರನ್ನಾಗಿ ಮಾಡಿದೆಯೆಂದು ಭಾವಿಸುತ್ತೇವೆ. "ಪುಸ್ತಕ ಭಾಗ್ಯ"ವನ್ನು ಅತ್ಯಲ್ಪ ಕಾಲದಲ್ಲಿಯೇ ಇಷ್ಟೊಂದು ದೊಡ್ಡ ಆಕಾರದಲ್ಲಿ ಹೊರತರಲು ಸಾಧ್ಯವಾದುದಕ್ಕೆ ಶ್ರೀ ನಾರಾಯಣ ಅವರ ಸಮರ್ಥನೀಯ ಬೆಂಬಲ ಹಾಗೂ ಸಹೃದಯ ಉತ್ತೇಜನ ಮುಖ್ಯ ಕಾರಣವೆಂದು ತಿಳಿಸಲು ಸಂತೋಷಪಡುತ್ತೇವೆ. ಅಧಿಕಾರ ವರ್ಗದ ಹಾಗೂ ಆಡಳಿತ ವರ್ಗದ ಇತರ ಸದಸ್ಯರ ಸಮಯೋಚಿತ ಸಹಕಾರವನ್ನು ಇಲ್ಲಿ ನೆನೆಯುತ್ತೇವೆ.

ಮುಖಪುಟದ ವಿನ್ಯಾಸವನ್ನು ಅಂದವಾಗಿ ರೂಪಿಸಿಕೊಟ್ಟ ಶ್ರೀ ಜಿ. ಕೆ. ಸತ್ಯ ಅವರಿಗೆ ನಮ್ಮ ನೆನಕೆಗಳು ಸಲ್ಲುತ್ತವೆ.

ಇಂತಹ ಹೆಬ್ಬೊತ್ತಗೆಯನ್ನು ಕೇವಲ ಸ್ವಲ್ಪ ಕಾಲದಲ್ಲಿಯೇ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ವಿಕಾಸ ಮುದ್ರಣದ ಶ್ರೀ ಶೇಷನಾರಾಯಣ ಅವರಿಗೆ ನಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇವೆ; ಇವರ ನಿಷ್ಠಾಪೂರ್ಣ ಕಾರ್ಯತಲ್ಲೀನತೆಗಾಗಿ ಸಂತೋಷವನ್ನು ವ್ಯಕ್ತಪಡಿಸುತ್ತೇವೆ. ವಿಕಾಸ ಮುದ್ರಣದ ಎಲ್ಲ ಕೆಲಸಗಾರರು ತುಂಬಿದ ಅಭಿಮಾನದಿಂದ ಅವಿಶ್ರಾಂತವಾಗಿ ದುಡಿದು, ಸಹಕರಿಸಿದ್ದಾರೆ. ಇವರೆಲ್ಲರಿಗೆ ನಮ್ಮ ಶುಭಾಶಯಗಳನ್ನು ಕೋರುತ್ತೇವೆ.

ನಮ್ಮ ಈ ಸಂಪಾದಕೀಯವನ್ನು ಓದುತ್ತಲಿರುವ ತಮ್ಮ ಕೈಯಲ್ಲಿಯೇ "ಪುಸ್ತಕ ಭಾಗ್ಯ" ಇರುವುದರಿಂದ, ಇದರ ಮಹತ್ತಿನ ಬಗ್ಗೆ ಮತ್ತೆ ಹೇಳಬೇಕಾಗಿಲ್ಲವೆಂದು ಭಾವಿಸುತ್ತೇವೆ.

ನಮ್ಮ ಹೊಣೆಗಾರಿಕೆಯನ್ನು ಹಗುರಗೊಳಿಸಲು ಸರ್ವ ರೀತಿಯಿಂದಲೂ ಸಲಹೆ–ಸಹಕಾರಗಳನ್ನು ಸಕಾಲದಲ್ಲಿ ನೀಡಿದ ಸನ್ಮಿತ್ರವೃಂದಕ್ಕೆ ಕೃತಜ್ಞರಾಗಿದ್ದೇವೆ.

ಜಾಹಿರಾತುಗಳನ್ನಿತ್ತು ಬೆಂಬಲಿಸಿದ ಮಹನೀಯರಿಗೆ ಉಪಕೃತರಾಗಿದ್ದೇವೆ.

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಮುಖ ಕಾರ್ಯ ಚಟುವಟಿಕೆಗಳನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡುವುದಕ್ಕಾಗಿ, ಈ ಹಿಂದೆ ನಡೆದ ಕೆಲವು ಮುಖ್ಯ ಸಭೆ–ಸಮಾರಂಭಗಳ ಚಿತ್ರಗಳನ್ನು ಅಲ್ಲಲ್ಲಿ ಪ್ರಕಟಿಸಿದ್ದೇವೆ.

"ಪುಸ್ತಕ ಭಾಗ್ಯ"ವು ಸಮಸ್ತ ಕನ್ನಡಿಗರ ಕೈತುಂಬಿ, ಮನತುಂಬಿ ಬರಲೆಂದು ಹಾರೈಸುತ್ತೇವೆ.

ಹಿ. ಮ. ನಾಗಯ್ಯ
ಸಂಪಾದಕ

ಪರಿವಿಡಿ

ರಾಜ್ಯದ ವಿಶ್ವವಿದ್ಯಾನಿಲಯಗಳು

ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರು—ಅಧಿವೇಶನ—ಸ್ಥಳ—ವರ್ಷ

ಅಧಿವೇಶನ	ಸ್ಥಳ	ಅಧ್ಯಕ್ಷರು	ವರ್ಷ
೧.	ಬೆಂಗಳೂರು	ಶ್ರೀ ಎಚ್. ವಿ. ನಂಜುಂಡಯ್ಯ ಅವರು	೧೯೧೫ ಮೇ ೩, ೪, ೫, ೬
೨.	ಬೆಂಗಳೂರು	ಶ್ರೀ ಎಚ್. ವಿ. ನಂಜುಂಡಯ್ಯ ಅವರು	೧೯೧೬ ಮೇ ೬, ೭, ೮
೩.	ಮೈಸೂರು	ಶ್ರೀ ಎಚ್. ವಿ. ನಂಜುಂಡಯ್ಯ ಅವರು	೧೯೧೭, ಜೂನ್ ೮, ೯, ೧೦
೪.	ಧಾರವಾಡ	ಶ್ರೀ ಆರ್. ನರಸಿಂಹಾಚಾರ್ ಅವರು	೧೯೧೮ ಮೇ ೧೧, ೧೩
೫.	ಹಾಸನ	ಶ್ರೀ ಕರ್ಪೂರ ಶ್ರೀನಿವಾಸರಾಯರು	೧೯೧೯ ಮೇ ೬, ೮
೬.	ಹೊಸಪೇಟೆ	ಶ್ರೀ ರೊದ್ದ ಶ್ರೀನಿವಾಸರಾಯರು	೧೯೨೦ ಜೂನ್ ೨೦, ೨೧
೭.	ಚಿಕ್ಕಮಗಳೂರು	ಶ್ರೀ ಕೆ. ಪಿ. ಪುಟ್ಟಣ್ಣ ಶೆಟ್ಟರು	೧೯೨೧ ಮೇ ೧೯, ೨೦, ೨೧
೮.	ದಾವಣಗೆರೆ	ಶ್ರೀ ಎಂ. ವೆಂಕಟಕೃಷ್ಣಯ್ಯ ಅವರು	೧೯೨೨ ಮೇ ೧೨, ೧೩
೯.	ಬಿಜಾಪುರ	ಶ್ರೀ ಸಿದ್ಧಾಂತಿ ಶಿವಶಂಕರಶಾಸ್ತ್ರಿಯವರು	೧೯೨೩ ಮೇ ೨೧, ೨೩
೧೦.	ಕೋಲಾರ	ಶ್ರೀ ಹೊಸಕೋಟೆ ಕೃಷ್ಣಶಾಸ್ತ್ರಿ ಅವರು	೧೯೨೪ ಮೇ ೧೬–೧೮
೧೧.	ಬೆಳಗಾವಿ	ಶ್ರೀ ಬೆನಗಲ್ ರಾಮರಾವ್ ಅವರು	೧೯೨೫ ಮೇ ೯, ೧೧
೧೨.	ಬಳ್ಳಾರಿ	ಶ್ರೀ ಫ. ಗು. ಹಳಕಟ್ಟಿ ಅವರು	೧೯೨೬ ಮೇ ೨೨, ೨೪
೧೩.	ಮಂಗಳೂರು	ಶ್ರೀ ಆರ್. ತಾತಾ ಅವರು	೧೯೨೭ ಮೇ ೧೯, ೨೧
೧೪.	ಕಲಬುರ್ಗಿ	ಶ್ರೀ ಬಿ. ಎಂ. ಶ್ರೀಕಂಠಯ್ಯ ಅವರು	೧೯೨೮ ಜೂನ್ ೧, ೨, ೩
೧೫.	ಬೆಳಗಾವಿ	ಶ್ರೀ ಮಾಸ್ತಿ ವೆಂಕಟೇಶಅಯ್ಯಂಗಾರ್ ಅವರು	೧೯೨೯ ಮೇ ೧೨–೧೪
೧೬.	ಮೈಸೂರು	ಶ್ರೀ ಆಲೂರ ವೆಂಕಟರಾಯರು	೧೯೩೦ ಅಕ್ಟೋಬರ್ ೫–೭
೧೭.	ಕಾರವಾರ	ಶ್ರೀ ಮುಳಿಯ ತಿಮ್ಮಪ್ಪಯ್ಯ ಅವರು	೧೯೩೧ ಡಿಸೆಂಬರ್ ೨೮–೩೦
೧೮.	ಮಡಕೇರಿ	ಶ್ರೀ ಡಿ. ವಿ. ಗುಂಡಪ್ಪ ಅವರು	೧೯೩೨ ಡಿಸೆಂಬರ್ ೨೮, ೨೯, ೩೦
೧೯.	ಹುಬ್ಬಳ್ಳಿ	ಶ್ರೀ ವೈ. ನಾಗೇಶಶಾಸ್ತ್ರಿಗಳವರು	೧೯೩೩ ಡಿಸೆಂಬರ್ ೨೯–೩೧
೨೦.	ರಾಯಚೂರು	ಶ್ರೀ ಪಂಜೆ ಮಂಗೇಶರಾಯರು	೧೯೩೪ ಡಿಸೆಂಬರ್ ೨೮–೩೦
೨೧.	ಮುಂಬಯಿ	ಶ್ರೀ ಎನ್. ಎಸ್. ಸುಬ್ಬರಾಯರು	೧೯೩೫ ಡಿಸೆಂಬರ್ ೨೬–೨೮
೨೨.	ಜಮಖಂಡಿ	ಶ್ರೀ ಬೆಳ್ಳಾವೆ ವೆಂಕಟನಾರಣಪ್ಪ ಅವರು	೧೯೩೭ ಡಿಸೆಂಬರ್ ೨೯–೩೧
೨೩.	ಬಳ್ಳಾರಿ	ಶ್ರೀ ರಂ. ರಾ. ದಿವಾಕರ್	೧೯೩೮ ಡಿಸೆಂಬರ್ ೨೯–೩೧
೨೪.	ಬೆಳಗಾವಿ	ಶ್ರೀ ಮುದವೀಡು ಕೃಷ್ಣರಾಯರು	೧೯೩೯ ಡಿಸೆಂಬರ್ ೨೫,೨೬,೨೭,೨೮
೨೫.	ಧಾರವಾಡ	ಶ್ರೀ ವೈ. ಚಂದ್ರಶೇಖರ ಶಾಸ್ತ್ರಿಗಳು	೧೯೪೦ ಡಿಸೆಂಬರ್ ೨೭, ಜನವರಿ ೧
೨೬.	ಹೈದರಾಬಾದ್	ಶ್ರೀ ಎ. ಕೃಷ್ಣ ಶಾಸ್ತ್ರಿಗಳು	೧೯೪೧ ಡಿಸೆಂಬರ್ ೨೭–೨೯
೨೭.	ಶಿವಮೊಗ್ಗ	ಶ್ರೀ ದ. ರಾ. ಬೇಂದ್ರೆ ಅವರು	೧೯೪೩ ಡಿಸೆಂಬರ್
೨೮.	ರಬಕವಿ	ಶ್ರೀ ಎಸ್. ಎಸ್. ಬಸವನಾಳರು	೧೯೪೪ ಡಿಸೆಂಬರ್ ೨೮–೩೦

ಅಧಿವೇಶನ	ಸ್ಥಳ	ಅಧ್ಯಕ್ಷರು	ವರ್ಷ
೨೯.	ಮದರಾಸು	ಶ್ರೀ ಟಿ. ಪಿ. ಕೈಲಾಸಂ ಅವರು	೧೯೪೫ ಡಿಸೆಂಬರ್ ೨೬–೨೮
೩೦.	ಹರಪನಹಳ್ಳಿ	ಶ್ರೀ ಕೆ. ವೆಂಕಟರಾಮಯ್ಯ ಅವರು	೧೯೪೭ ಮೇ ೨೯
೩೧.	ಕಾಸರಗೋಡು	ಶ್ರೀ ತಿರುಮಲೆ ತಾತಾಚಾರ್ಯ ಶರ್ಮರು	೧೯೪೮ ಡಿಸೆಂಬರ್ ೨೯–೩೧
೩೨.	ಕಲಬುರ್ಗಿ	ಶ್ರೀ ಉತ್ತಂಗಿ ಚನ್ನಪ್ಪನವರು	೧೯೪೯ ಮಾರ್ಚ್ ೫, ೬, ೭
೩೩.	ಸೊಲ್ಲಾಪುರ	ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಗಳು	೧೯೫೦ ಮೇ ೨೪–೨೬
೩೪.	ಮುಂಬಯಿ	ಶ್ರೀ ಎಂ. ಗೋವಿಂದ ಪೈ ಅವರು	೧೯೫೧ ಡಿಸೆಂಬರ್ ೨೬–೨೮
೩೫.	ಬೇಲೂರು	ಶ್ರೀ ಎಸ್. ಸಿ. ನಂದಿಮಠ ಅವರು	೧೯೫೨ ಮೇ ೧೬–೧೮
೩೬.	ಕುಮಟ	ಶ್ರೀ ವಿ. ಸೀತಾರಾಮಯ್ಯನವರು	೧೯೫೪ ಡಿಸೆಂಬರ್ ೨೬–೨೮
೩೭.	ಮೈಸೂರು	ಶ್ರೀ ಶಿವರಾಮ ಕಾರಂತರು	೧೯೫೫ ಜೂನ್ ೧೦–೧೨
೩೮.	ರಾಯಚೂರು	ಶ್ರೀ ಆದ್ಯ ರಂಗಾಚಾರ್ಯರು	೧೯೫೫ ಡಿಸೆಂಬರ್ ೨೫–೨೭
೩೯.	ಧಾರವಾಡ	ಶ್ರೀ ಕೆ. ವಿ. ಪುಟ್ಟಪ್ಪನವರು	೧೯೫೭ ಮೇ ೭–೯
೪೦.	ಬಳ್ಳಾರಿ	ಶ್ರೀ ವಿ. ಕೆ. ಗೋಕಾಕ್ ಅವರು	೧೯೫೮ ಜನವರಿ ೧೮–೨೦
೪೧.	ಬಿದರೆ	ಶ್ರೀ ಡಿ. ಎಲ್. ನರಸಿಂಹಾಚಾರ್	೧೯೬೦ ಫೆಬ್ರವರಿ ೧೧–೧೩
೪೨.	ಮಣಿಪಾಲ	ಶ್ರೀ ಅ. ನ. ಕೃಷ್ಣರಾಯರು	೧೯೬೦ ಡಿಸೆಂಬರ್ ೨೭–೨೯
೪೩.	ಗದಗ	ಶ್ರೀ ಕೆ. ಜಿ. ಕುಂದಣಗಾರರು	೧೯೬೧ ಡಿಸೆಂಬರ್ ೨೭–೨೯
೪೪.	ಸಿದ್ಧಗಂಗಾ	ಶ್ರೀ ರಂ. ಶ್ರೀ. ಮುಗಳಿ ಅವರು	೧೯೬೩ ಡಿಸೆಂಬರ್ ೨೮–೩೦
೪೫.	ಕಾರವಾರ	ಶ್ರೀ ಕಡೆಂಗೋಡ್ಲು ಶಂಕರಭಟ್ಟ ಅವರು	೧೯೬೫ ಮೇ ೧೦, ೧೧, ೧೨
೪೬.	ಶ್ರವಣಬೆಳಗೊಳ	ಶ್ರೀ ಆ. ನೆ. ಉಪಾಧ್ಯೆ ಅವರು	೧೯೬೭ ಮೇ ೨೬–೨೮
೮೭.	ಬೆಂಗಳೂರು	ಶ್ರೀ ದೇ. ಜವರೇಗೌಡ ಅವರು	೧೯೭೦ ಡಿಸೆಂಬರ್ ೨೭, ೨೮, ೨೯

ಪರಿಷತ್ತಿನ ಅಧ್ಯಕ್ಷರು

೧.	ರಾಜಮಂತ್ರ ಪ್ರವೀಣ ಎಚ್. ವಿ. ನಂಜುಂಡಯ್ಯನವರು	೫-೫-೧೯೧೫	ಮಾರ್ಚ್ ೧೯೨೦
೨.	ರಾಜಸೇವಾಧುರೀಣ ಸರ್ ಎಂ. ಕಾಂತರಾಜ ಅರಸರವರು	೧೯೨೦	ಅಕ್ಟೋಬರ್ ೧೯೩೩
೩.	ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್ ಅವರು	೧೯೩೪	೮-೯-೧೯೪೦
೪.	ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಅವರು	೧೯೪೦	೧೯೪೦
೫.	ಒಂಟಮುರಿಯ ಶ್ರೀಮಂತ ಬಸವ ಪ್ರಭು ರಾಜಾಲಖಮನ ಗೌಡ ಸರದೇಸಾಯಿ ಬಹದ್ದೂರ್ ಅವರು	೧೯೪೧	೧೯೪೬
೬.	ಶ್ರೀ ಜಸ್ಟೀಸ್ ಲೋಕೂರ್ ನಾರಾಯಣರಾವ್ ಸ್ವಾಮಿರಾವ್ ಅವರು	೮-೫-೧೯೪೭	೨೯-೧೨-೧೯೪೭
೭.	ಶ್ರೀ ತಿರುಮಲೆ ತಾತಾಚಾರ್ಯ ಶರ್ಮ ಅವರು	೨೯-೧೨-೧೯೪೭	೬-೩-೧೯೪೯
೮.	ರೆವರೆಂಡ್ ಉತ್ತಂಗಿ ಚನ್ನಪ್ಪ ಅವರು	೬-೩-೧೯೪೯	೧೭-೨-೧೯೫೦
೯.	ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿ ಅವರು	೧೭-೨-೧೯೫೦	೧೬-೯-೧೯೫೩
೧೦.	ಶ್ರೀ ಮಾಸ್ತಿ ವೆಂಕಟೇಶಅಯ್ಯಂಗಾರ್ ಅವರು	೩೦-೯-೧೯೫೩	೬-೫-೧೯೫೪
೧೧.	ಶ್ರೀ ಎ. ಎನ್. ಮೂರ್ತಿರಾವ್ ಅವರು	೯-೫-೧೯೫೪	೧೭-೫-೧೯೫೬
೧೨.	ಶ್ರೀ ಬಿ. ಶಿವಮೂರ್ತಿ ಶಾಸ್ತ್ರೀ ಅವರು	೧೭-೬-೧೯೫೬	೨೫-೧೦-೧೯೬೪
೧೩.	ಶ್ರೀ ಜಿ. ವೆಂಕಟಸುಬ್ಬಯ್ಯ ಅವರು	೨೬-೧೦-೧೯೬೪	೧೧-೫-೧೯೬೯
೧೪.	ಶ್ರೀ ಜಿ. ನಾರಾಯಣ ಅವರು	೧೨-೫-೧೯೬೯ರಿಂದ	

ಉಪಾಧ್ಯಕ್ಷರು

೧.	ರಾಜಕಾರ್ಯಪ್ರಸಕ್ತ		
	ರಾವ್‌ಬಹದ್ದೂರ್ ಎಂ. ಶಾಮರಾವ್	೫-೫-೧೯೧೫	೧೯೧೯
೨.	ರಾಜಸಭಾಭೂಷಣ		
	ಕರ್ಪೂರ ಶ್ರೀನಿವಾಸರಾಯರು	೧೯೧೯	೧೯೩೩
೩.	ಶ್ರೀ ಡಿ. ವಿ. ಗುಂಡಪ್ಪನವರು	೧೯೩೪	೧೯೩೭
೪.	ರಾಜಸೇವಾಸಕ್ತ		
	ಶ್ರೀ ಬಿ. ಎಂ. ಶ್ರೀಕಂಠಯ್ಯನವರು	೧೯೩೮	೧೯೪೨
೫.	ರಾಜಸೇವಾಸಕ್ತ		
	ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು	೧೯೪೩	೧೯೪೭

ಕನ್ನಡ ಸಾಹಿತ್ಯ ಪರಿಷತ್ತಿನ

ಕಾರ್ಯಸಮಿತಿ ಸದಸ್ಯರು

೧. ಶ್ರೀ ಜಿ. ನಾರಾಯಣ ಅವರು
ಅಧ್ಯಕ್ಷರು

೨. ಶ್ರೀ ವೆಂಕಟೇಶ ಸಾಂಗಲಿ ಅವರು
ಗೌರವ ಕಾರ್ಯದರ್ಶಿ

೩. ಶ್ರೀ ಹಂಪ ನಾಗರಾಜಯ್ಯನವರು
ಗೌರವ ಕಾರ್ಯದರ್ಶಿ

೪. ಶ್ರೀ ಎನ್. ವರದರಾಜನ್ ಅವರು
ಕೋಶಾಧಿಕಾರಿ

ಸದಸ್ಯರು

೫. ಪ್ರೊ॥ ಜಿ. ವೆಂಕಟಸುಬ್ಬಯ್ಯ
೬. ಶ್ರೀಮತಿ ಕೆ. ಟಿ. ಬನಶಂಕರಮ್ಮ
೭. ಶ್ರೀ ಎಂ. ಫಜಲ್ಲುಲ್ ಹಸನ್
೮. ಡಾ॥ ಎಸ್. ರಾಮಕೃಷ್ಣ
೯. ಶ್ರೀ ತವಗ ಭೀಮಸೇನರಾವ್
೧೦. ಶ್ರೀ ಬಸವರಾಜ ಕಟ್ಟೀಮನಿ
೧೧. ಶ್ರೀ ಎನ್. ಎಸ್. ಹೆಗಡೆ
೧೨. ಶ್ರೀ ಆರ್. ಎಸ್. ಆರಾಧ್ಯ
೧೩. ಶ್ರೀ ಕೆ. ಕಾಶೀನಾಥಶಾಸ್ತ್ರಿ
೧೪. ಶ್ರೀ ಕಾ. ನಾ. ಶ್ರೀನಿವಾಸ್
೧೫. ಶ್ರೀ ಹೆಚ್. ಬಿ. ಜ್ವಾಲನಯ್ಯ
೧೬. ಶ್ರೀ ಮಿರ್ಜಿ ಅಣ್ಣಾರಾಯ
೧೭. ಶ್ರೀ ಕೆ. ಟಿ. ಚಂದು
೧೮. ಪ್ರೊ॥ ಸಂಗಮನಾಥ ಜಿ. ಹಂಡಿ
೧೯. ಶ್ರೀ ವಿ. ಎಚ್. ಗೌಡ
೨೦. ಶ್ರೀ ಎಸ್. ಕರಿಯಪ್ಪ
೨೧. ಡಾ॥ ಎಚ್. ನರಸಿಂಹಯ್ಯ
೨೨. ಶ್ರೀಮತಿ ಪ್ರಮೀಳಾ
೨೩. ಶ್ರೀ ಜಿ. ಕೆ. ಸತ್ಯ
೨೪. ಶ್ರೀ ಆರ್. ಶಾಮಣ್ಣ
೨೫. ಶ್ರೀ ಬಿ. ಮರಿರಾಜ್
೨೬. ಡಾ॥ ರಂ. ಶ್ರೀ ಮುಗಳಿ
೨೭. ಡಾ॥ ಹಾ. ಮಾ. ನಾಯಕ
೨೮. ಶ್ರೀ ಆರ್. ವೈ. ಧಾರವಾಡಕರ್
೨೯. ಶ್ರೀ ಎಸ್. ಕೆ. ಮಹಾಬಲರಾವ್
೩೦. ಶ್ರೀ ಬಿ. ಎಂ. ಇದಿನಬ್ಬ
೩೧. ಶ್ರೀ ಕೆ. ವಿರೂಪಾಕ್ಷಗೌಡ
೩೨. ಶ್ರೀ ಕೆ. ಬಿ. ಪೂರ್ವಾಚಾರ್ಯ
೩೩. ಶ್ರೀ ಡಿ. ಜೆ. ಪದ್ಮನಾಭ
೩೪. ಡಾ॥ ಸರ್ಜಾ ಚಂದ್ರಶೇಖರಯ್ಯ
೩೫. ಶ್ರೀ ಹನುಮಂತಪ್ಪ ಪಾಟೀಲ್
೩೬. ಡಾ॥ ಜಿ. ಎಸ್. ಶಿವರುದ್ರಪ್ಪ
೩೭. ಶ್ರೀ ಜಿ. ಪಿ. ರಾಜರತ್ನಂ

ಸಿರಿಗನ್ನಡಂ ಗೆಲ್ಗೆ

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು



ಮಹಾತ್ಮಗಾಂಧಿ



ನೆಚ್ಚಿನ ನಾಯಕ ನೆಹರು




ರಾಷ್ಟ್ರಾಧ್ಯಕ್ಷ ಶ್ರೀ ವಿ. ವಿ. ಗಿರಿ



ಉಪರಾಷ್ಟ್ರಪತಿ ಶ್ರೀ ಜಿ. ಎಸ್. ಪಾಠಕ್



ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ



ರಾಜ್ಯಪಾಲ ಶ್ರೀ ಮೋಹನಲಾಲ್ ಸುಖಾಡಿಯ



ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸ್

೧೯೭೦ರಲ್ಲಿ ನಡೆದ ಸುವರ್ಣ ಮಹೋತ್ಸವದಲ್ಲಿ ಭಾಗವಹಿಸಿದ ನಾಯಕರು




ಶ್ರೀ ಸಿ. ನಿಜಲಿಂಗಪ್ಪ



ಶ್ರೀ ಕೆ. ಹನುಮಂತಯ್ಯ



ಶ್ರೀ ವೀರೇಂದ್ರ ಪಾಟೀಲ್




ಶ್ರೀ ಕೆ. ವಿ. ಶಂಕರಗೌಡ



ಶ್ರೀ ರಾಮಕೃಷ್ಣ ಹೆಗ್ಡೆ




ಶ್ರೀಮತಿ ಸರೋಜಿನಿ ಮಹಿಷಿ
(ದೆಹಲಿಯಲ್ಲಿ ನಡೆಯಲಿರುವ ಕನ್ನಡಿಗರ ಸಮ್ಮೇಳನದ
ಸ್ವಾಗತ ಸಮಿತಿ ಅಧ್ಯಕ್ಷಿಣಿ)



ಶ್ರೀ ಟಿ. ಕೆ. ತುಕೋಳ್
('ಪುಸ್ತಕ ಭಾಗ್ಯ' ಬಿಡುಗಡೆ)



ಡಾ॥ ರಂ. ಶ್ರೀ. ಮುಗಳಿ
(ಸ್ವಾತಂತ್ರ್ಯೋತ್ತರ ಸಾಹಿತ್ಯ ಬೆಳವಣಿಗೆಯ
ಪರಿಚಯ ಗ್ರಂಥಗಳ ಬಿಡುಗಡೆ)



ಶ್ರೀ ಎ. ಆರ್. ಬದರೀನಾರಾಯಣ್
ಶಿಕ್ಷಣ ಸಚಿವರು
(ವಿಚಾರಗೋಷ್ಠಿಗಳ ಉದ್ಘಾಟನಾ
ಸಮಾರಂಭದ ಅಧ್ಯಕ್ಷರು)



ಶ್ರೀ ಎಂ. ವೈ. ಘೋರ್ಪಡೆ
ಅರ್ಥ ಸಚಿವರು



ಶ್ರೀ ಕೆ. ಹೆಚ್. ಪಾಟೀಲ್
ವ್ಯವಸಾಯ, ಅರಣ್ಯಶಾಖಾ ಸ
(ಸಾಹಿತ್ಯ ಪ್ರಸಾರ ಯೋಜ
ಉದ್ಘಾಟನಾ ಸಮಾರಂಭದ ಅಧ್ಯ

ಪರಿಷತ್ತಿನ ಹಿಂದಿನ ಅಧ್ಯಕ್ಷರು



ಶ್ರೀ ಬಿ. ಶಿವಮೂರ್ತಿಶಾಸ್ತ್ರಿ



ಶ್ರೀ ಎ. ಎನ್. ಮೂರ್ತಿರಾವ್




ಶ್ರೀ ಜಿ. ವೆಂಕಟಸುಬ್ಬಯ್ಯ


ಕನ್ನಡ ಸಾಹಿತ್ಯ ಪರಿಷತ್ತಿನ ಅಧಿಕಾರವರ್ಗ




ಅಧ್ಯಕ್ಷರು—ಶ್ರೀ ಜಿ. ನಾರಾಯಣ



ಶ್ರೀ ಎನ್. ವರದರಾಜನ್
(ಕೋಶಾಧಿಕಾರಿಗಳು)



ಶ್ರೀ ವೆಂಕಟೇಶ ಸಾಂಗಲಿ
(ಗೌ|| ಕಾರ್ಯದರ್ಶಿಗಳು)



ಶ್ರೀ ಹಂಪ. ನಾಗರಾಜಯ್ಯ
(ಗೌ|| ಕಾರ್ಯದರ್ಶಿಗಳು)


ಪರಿಷತ್ತಿನ ಸ್ಥಾಪನೆ ಮತ್ತು ಬೆಳವಣಿಗೆಗೆ ಕಾರಣರಾದ ಮಹನೀಯರು



ಶ್ರೀ ನಾಲ್ಕನೆ ಕೃಷ್ಣರಾಜ ಒಡೆಯರ್



ಶ್ರೀ ಕಂಠೀರವ ನರಸಿಂಹರಾಜ ಒಡೆಯರ್




ಶ್ರೀ ಜಯಚಾಮರಾಜ ಒಡೆಯರ್



ಶ್ರೀ ಬಿ. ಎಂ. ಶ್ರೀಕಂಠಯ್ಯ


ಕನ್ನಡ ಸಾಹಿತ್ಯ ಸಮ್ಮೇಳನಗಳ
ಅಧ್ಯಕ್ಷರುಗಳು



ಡಾ|| ಎಂ. ವಿಶ್ವೇಶ್ವರಯ್ಯ




ಶ್ರೀ ಹೆಚ್. ವಿ. ನಂಜುಂಡಯ್ಯ



ಶ್ರೀ ಬೆಳ್ಳಾವೆ ವೆಂಕಟನಾರಣಪ್ಪ




ಶ್ರೀ ಆರ್. ನರಸಿಂಹಾಚಾರ್ಯ




ಡಾ॥ ಡಿ. ವಿ. ಗುಂಡಪ್ಪ




ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್




ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿ




ಶ್ರೀ ಎ. ಆರ್. ಕೃಷ್ಣಶಾಸ್ತ್ರಿ


ಶ್ರೀ ಆಲೂರು ವೆಂಕಟರಾವ್


ಶ್ರೀ ಉತ್ತಂಗಿ ಚನ್ನಪ್ಪ



ಶ್ರೀ ಕೆ. ಜಿ. ಕುಂದಣಗಾರ್



ಶ್ರೀ ಎಂ. ಗೋವಿಂದ ಪೈ




ಶ್ರೀ ತಿ. ತಾ. ಶರ್ಮ




ಶ್ರೀ ಆರ್. ಆರ್. ದಿವಾಕರ್




ಡಾ॥ ಕೆ. ವಿ. ಪುಟ್ಟಪ್ಪ



ಡಾ॥ ದ. ರಾ. ಬೇಂದ್ರೆ



ಡಾ॥ ಶಿವರಾಮ ಕಾರಂತ



ಡಾ॥ ಆದ್ಯರಂಗಾಚಾರ್



ಪ್ರೊ. ವಿ. ಸೀತಾರಾಮಯ್ಯ



ಡಾ|| ವಿ. ಕೃ. ಗೋಕಾಕ್



ಪ್ರೊ. ದೇ. ಜವರೇಗೌಡ



ಶ್ರೀ ವೈ. ಚಂದ್ರಶೇಖರ ಶಾಸ್ತ್ರಿ



ಡಾ|| ಅ. ನ. ಕೃಷ್ಣರಾವ್




ಶ್ರೀ ಜಿ. ಪಿ. ರಾಜರತ್ನಂ


ಸಂಪಾದಕರು



ಹಿ. ಮ. ನಾಗಯ್ಯ
" ಕನ್ನಡ ನುಡಿ " " ಪುಸ್ತಕ ಭಾಗ್ಯ"




ಪ್ರೊ. ಎಂ. ಮರಿಯಪ್ಪ ಭಟ್ಟರು
" ಕನ್ನಡ–ಕನ್ನಡ ನಿಘಂಟು "



೧೯೧೫ರಲ್ಲಿ ಬೆಂಗಳೂರಿನಲ್ಲಿ ನಡೆದ ಪ್ರಥಮ ಕರ್ನಾಟಕ ಸಾಹಿತ್ಯ ಸಮ್ಮೇಳನ

ಪರಿಷತ್ತಿನ ಕಾರ್ಯಕಾರಿ ಸಮಿತಿಯ ಇತರ ಸದಸ್ಯರು



ಡಾ॥ ಜಿ. ಎಸ್ ಶಿವರುದ್ರಪ್ಪ
ಬೆಂಗಳೂರು



ಶ್ರೀ ಬಸವರಾಜಕಟ್ಟೀಮನಿ
ಧಾರವಾಡ




ಶ್ರೀ ಮಿರ್ಜಿ ಅಣ್ಣಾರಾವ್
ಬೆಳಗಾಂವ್



ಡಾ॥ ಹಾ. ಮಾ. ನಾಯಕ
ಮೈಸೂರು




ಪ್ರೊ. ಆರ್. ವೈ. ಧಾರವಾಡಕರ್
ಧಾರವಾಡ



ಡಾ॥ ಹೆಚ್. ನರಸಿಂಹಯ್ಯ
ಬೆಂಗಳೂರು




ಶ್ರೀ ಆರ್. ಎಸ್. ಆರಾಧ್ಯ
ತುಮಕೂರು



ಶ್ರೀಮತಿ ಕೆ. ಟಿ. ಬನಶಂಕರಮ್ಮ
ಬೆಂಗಳೂರು




ಶ್ರೀಮತಿ ಪ್ರಮೀಳಾ
ಬೆಂಗಳೂರು



ಶ್ರೀ ಕೆ. ವಿರೂಪಾಕ್ಷಗೌಡ
ಬಳ್ಳಾರಿ



ಶ್ರೀ ಡಿ. ಜೆ. ಪದ್ಮನಾಭ
ಕೊಡಗು



ಶ್ರೀ ಕೆ. ಬಿ. ಪೂರ್ವಾಚಾರ್ಯ
ಸೊಲ್ಲಾಪುರ



ಶ್ರೀ ಆರ್. ಶಾಮಣ್ಣ
ಬೆಂಗಳೂರು



ಶ್ರೀ ಎಸ್. ಕರಿಯಪ್ಪ
ಬೆಂಗಳೂರು ಜಿಲ್ಲೆ



ಶ್ರೀ ಎನ್. ಎಸ್. ಹೆಗಡೆ
ಉ. ಕನ್ನಡ



ಶ್ರೀ ಬಿ. ಮರಿರಾಜ್ (ಡಿ.ಪಿ.ಐ.)
ಬೆಂಗಳೂರು



ಶ್ರೀ ಕಾ. ನ. ಶ್ರೀನಿವಾಸರಾವ್
ಚಿತ್ರದುರ್ಗ



ಶ್ರೀ ಕೆ. ಟಿ. ಚಂದು
ಮಂಡ್ಯ



ಶ್ರೀ ಬಿ. ಎಂ. ಇದಿನಬ್ಬ
ದಕ್ಷಿಣ ಕನ್ನಡ



ಪ್ರೊ. ಸಂಗಮನಾಥ ಹಂಡಿ
ಬಿಜಾಪುರ



ಶ್ರೀ ಎಂ. ಫಜಲ್ಲುಲ್‌ಹಸನ್
ಬೆಂಗಳೂರು



ಡಾ॥ ಎಸ್. ರಾಮಕೃಷ್ಣ
ರಾಯಚೂರು



ಶ್ರೀ ವಿ. ಹೆಚ್. ಗೌಡ
ಮೈಸೂರು



ಶ್ರೀ ತವಗ ಭೀಮಸೇನರಾವ್
ಗುಲ್ಬರ್ಗ



ಶ್ರೀ ಹೆಚ್. ಬಿ. ಜ್ವಾಲನಯ್ಯ
ಹಾಸನ



ಶ್ರೀ ಎಸ್. ಕೆ. ಮಹಾಬಲರಾವ್
ಚಿಕ್ಕಮಗಳೂರು



ಡಾ|| ಸರ್ಜಾ ಚಂದ್ರಶೇಖರಯ್ಯ
ಶಿವಮೊಗ್ಗ



ಶ್ರೀ ಹನುಮಂತಪ್ಪ ಪಾಟೀಲ್
ಬೀದರ್



ಶ್ರೀ ಜಿ. ಕೆ. ಸತ್ಯ
ಬೆಂಗಳೂರು



ಶ್ರೀ ಕೆ. ಕಾಶೀನಾಥ ಶಾಸ್ತ್ರಿ
ಕೋಲಾರ



ಶ್ರೀ ಎಲ್. ಎಸ್. ಶೇಷಗಿರಿರಾವ್
(ಸ್ವಾತಂತ್ರ್ಯೋತ್ತರ ಸಾಹಿತ್ಯ ಪರಿಚಯ ಗ್ರಂಥಗಳ
ಸಹಾಯಕ ಸಂಪಾದಕರು)




ಶ್ರೀ ಆರ್. ಎಸ್. ರಾಮರಾವ್
"ಪರಿಷತ್ಪತ್ರಿಕೆ"



ಸಾಹಿತ್ಯ ಸಪ್ತಸಾಗರ ಸಂಗಮ




ಪರಿಷತ್ತಿನ ಅಧಿಕಾರವರ್ಗ, ಸಂಪಾದಕೀಯ ಮಂಡಲಿ, ಸಿಬ್ಬಂದಿ



ಸಾಹಿತ್ಯ ಪರಿಷತ್ತಿನ ಜಿಲ್ಲಾ ಪ್ರತಿನಿಧಿಗಳ ಸಮೂಹ ಚಿತ್ರ



ಪರಿಷತ್ತಿನ ಹಳೆಯ ಕಟ್ಟಡ



ಸುವರ್ಣ ಮಹೋತ್ಸವ ಕಟ್ಟಡ ನಿರ್ಮಾಣದ ಹಂತದಲ್ಲಿ



೧೯೩೪ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ಪ್ರಥಮ ಗ್ರಂಥ ಪ್ರದರ್ಶನದ ಒಂದು ನೋಟ

ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಪ್ರಸಾರ ಯೋಜನೆ

(೧೯೭೨ ಅಗಸ್ಟ್ ೧೫ ರಿಂದ ೧೯೭೩ ಆಗಸ್ಟ್ ೧೫ರ ವರೆಗೆ)

ಕನ್ನಡ ಸಾಹಿತ್ಯ ಪರಿಷತ್ತಿನ ತ್ರೈವಾರ್ಷಿಕ ಯೋಜನೆಯ ಪ್ರಕಾರ ೧೯೭೦ರಲ್ಲಿ ಪ್ರಾರಂಭವಾದ ಕಾರ್ಯಗಳು ಈ ವೇಳೆಗೆ ಸಾಕಷ್ಟು ಪ್ರಗತಿ ಹೊಂದಿವೆ. ಯೋಜನೆಯ ಪ್ರಕಾರ ಕನ್ನಡಿಗರಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸಲು ಈ ವರ್ಷ ನಾವು ಸಾಹಿತ್ಯ ಪ್ರಸಾರಕ್ಕೆ ಹೆಚ್ಚು ಗಮನ ಕೊಡಬೇಕಾಗಿದೆ. ಅಲ್ಲದೆ ಈ ವರ್ಷವನ್ನು ಅಂತರರಾಷ್ಟ್ರೀಯ ಪುಸ್ತಕದ ವರ್ಷವನ್ನಾಗಿ ಆಚರಿಸಬೇಕೆಂದು “ಯುನೆಸ್ಕೊ” ಘೋಷಿಸಿದೆ. ಪರಿಷತ್ತು ಈ ವರ್ಷವನ್ನು ಸಾಹಿತ್ಯ ಪ್ರಸಾರಕ್ಕೆ ಮೀಸಲಾಗಿಡಲು ಮತ್ತೊಂದು ಕಾರಣವೂ ಇದೆ. ೧೯೭೨ನೇ ಆಗಸ್ಟ್ ೧೫ಕ್ಕೆ ಭಾರತಕ್ಕೆ ಸ್ವಾತಂತ್ರ್ಯ ಬಂದು ೨೫ ವರ್ಷಗಳಾಗುತ್ತವೆ. ಈ ವರ್ಷ ನಾವು ಸ್ವಾತಂತ್ರ್ಯದ ಬೆಳ್ಳಿಹಬ್ಬವನ್ನು ಆಚರಿಸುತ್ತೇವೆ. ಈ ಎಲ್ಲ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ೧೯೭೨ನೇ ಆಗಸ್ಟ್ ೧೫ ರಿಂದ ೧೯೭೩ನೇ ಆಗಸ್ಟ್ ೧೫ರ ವರೆಗೆ ಕನ್ನಡ ಸಾಹಿತ್ಯ ಪ್ರಸಾರದ ಮೂಲಕ ಭಾರತದ ಸ್ವಾತಂತ್ರ್ಯದ ರಜತ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿ ಕನ್ನಡ ಜನತೆಯಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸಿ ಕನ್ನಡದ ಬಗ್ಗೆ ಅವರಲ್ಲಿ ಕರ್ತವ್ಯಪ್ರಜ್ಞೆಯನ್ನು ಬೆಳೆಸಲು ಪರಿಷತ್ತು ಆಶಿಸಿದೆ. ಪರಿಷತ್ತು ಯೋಜಿಸಿರುವ ಸಾಹಿತ್ಯ ಪ್ರಸಾರದ ಕಾರ್ಯಕ್ರಮಗಳು ಸ್ಥೂಲವಾಗಿ ಕೆಳಗೆ ಕಂಡಂತಿವೆ :

೧. ಸ್ವಾತಂತ್ರ್ಯೋತ್ತರ ಕಾಲದಲ್ಲಿ ವಿವಿಧ ಪ್ರಕಾರಗಳಲ್ಲಿ ಕನ್ನಡ ಸಾಹಿತ್ಯದ ಸಾಧನೆಯನ್ನು ಅವಲೋಕಿಸಿ ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ ಜನತೆಗೆ ನೀಡಲಾಗುವುದು. ಅನಂತರ ಅದನ್ನು ಸಂಗ್ರಹಿಸಿ ಇತರೆ ಭಾಷೆಗಳಲ್ಲಿಯೂ ಅನುವಾದ ಮಾಡಲಾಗುವುದು. ಇದರಿಂದ ಸಂಖ್ಯೆಯಲ್ಲಿ ಮತ್ತು ಗುಣದಲ್ಲಿ ಕನ್ನಡ ಸಾಹಿತ್ಯದ ಸಾಧನೆ ಇತರೆ ಭಾಷೆಯವರಿಗೂ ಪರಿಚಯವಾಗಲು ಸಹಾಯವಾಗುವುದು.

೨. ಉದಯೋನ್ಮುಖ ಬರಹಗಾರರ ಲೇಖನಗಳನ್ನು ಆಯ್ದು ಅವುಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸಿ ಅವರಿಗೆ ಉತ್ತೇಜನ ನೀಡಲಾಗುವುದು.

* * *

೧. ಲೇಖಕರು, ಪ್ರಕಾಶಕರು, ಮುದ್ರಣಕಾರರು ಮತ್ತು ಪುಸ್ತಕ ಮಾರಾಟಗಾರರನ್ನು ಆಹ್ವಾನಿಸಿ ಗ್ರಂಥ ಪ್ರಕಟನೆಯ ಕಾರ್ಯದಲ್ಲಿ ಎದುರಾಗುವ ತೊಂದರೆಗಳನ್ನು ಕುರಿತು ಚರ್ಚಿಸುವುದು.

೨. ಪ್ರಕಾಶಕರಿಂದ ಮತ್ತು ಲೇಖಕರಿಂದ ಕನ್ನಡ ಪುಸ್ತಕಗಳನ್ನು ಕೊಳ್ಳುವಾಗ ಸರ್ಕಾರ ಮತ್ತು ಗ್ರಂಥಾಲಯಗಳು ಅನುಸರಿಸಬೇಕಾದ ನೀತಿಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಡನೆ ವಿಚಾರ–ವಿನಿಮಯ ನಡೆಸುವುದು.

೩. ಖಾಸಗಿ ಪ್ರಕಾಶಕರು ಪುಸ್ತಕಗಳಿಗೆ ಕಡಮೆ ಬೆಲೆಯನ್ನು ಇಡಲು ಸಾಧ್ಯವಾಗುವಂತೆ ಸರ್ಕಾರ, ಸಾಹಿತ್ಯ ಅಕಾಡೆಮಿ ಮುಂತಾದವರಿಂದ ಯಾವ ರೀತಿಯ ಪ್ರೋತ್ಸಾಹ ಮತ್ತು ಸಹಾಯಧನ ಅವರಿಗೆ ದೊರೆಯಬೇಕೆಂಬ ಬಗ್ಗೆ ಚರ್ಚಿಸುವುದು.

೪. ಕನ್ನಡ ಜನರಲ್ಲಿ ಓದುವ ಹವ್ಯಾಸವನ್ನು ಬೆಳೆಸಲು, ಕನ್ನಡ ಪುಸ್ತಕಗಳು ಅಧಿಕ ಸಂಖ್ಯೆಯಲ್ಲಿ ಮಾರಾಟವಾಗಲು ಸಹಾಯಕವಾಗುವಂತೆ ಪುಸ್ತಕ ಪ್ರದರ್ಶನಗಳನ್ನು ಏರ್ಪಡಿಸುವುದಕ್ಕೆ ಯಾವ ರೀತಿ ಕ್ರಮ ಕೈಗೊಳ್ಳಬೇಕೆಂಬುದರ ಸಮೀಕ್ಷೆ ನಡೆಸುವುದು.

೫. ಮಹಿಳೆಯರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ವಾಚನಾಭಿರುಚಿ ಬೆಳೆಸಲು ಅಗತ್ಯವಾದ ಕ್ರಮಗಳನ್ನು ಸೂಚಿಸಲು ಅಧ್ಯಾಪಕರು, ಮಹಿಳೆಯರು ಮತ್ತು ವಿದ್ಯಾರ್ಥಿಗಳ ಗೋಷ್ಠಿ ಏರ್ಪಡಿಸುವುದು.

೬. ಕಾರ್ಮಿಕರು ಮತ್ತು ಗ್ರಾಮಾಂತರ ಜನರಲ್ಲಿ ಕನ್ನಡ ವಾಚನಾಭಿರುಚಿಯನ್ನು ಬೆಳೆಸಲು ಆವಶ್ಯಕವಾದ ಕಾರ್ಯಕ್ರಮಗಳ ಬಗ್ಗೆ ವಿಚಾರ ವಿನಿಮಯ ನಡೆಸು ವುದು.

೭. "ಮನೆಗೊಂದು ಪುಸ್ತಕ ಭಂಡಾರ" ಕಾರ್ಯ ಕ್ರಮವನ್ನು ಯಶಸ್ವಿಗೊಳಿಸಲು ಅನುಸರಿಸಬೇಕಾದ ಮಾರ್ಗಗಳನ್ನು ಕುರಿತು ಸಲಹೆ ನೀಡುವುದಕ್ಕಾಗಿ ವಿಶ್ವ ವಿದ್ಯಾನಿಲಯಗಳು, ಸರ್ಕಾರಿ ಪುಸ್ತಕ ಭಂಡಾರದ ಹಾಗೂ ವಯಸ್ಕರ ಶಿಕ್ಷಣ ಸಮಿತಿಯ ಪ್ರತಿನಿಧಿಗಳನ್ನು ಆಹ್ವಾನಿಸಿ ವಿಚಾರ ಸಂಕಿರಣ ನಡೆಸುವುದು.

೮. ಕನ್ನಡದಲ್ಲಿ ಪ್ರಕಟವಾದ ಎಲ್ಲ ಪುಸ್ತಕಗಳು ಒಂದು ಕಡೆ ದೊರೆಯುವಂತೆ ವ್ಯವಸ್ಥೆ ಮಾಡುವುದರ ಬಗ್ಗೆ ಆಲೋಚಿಸುವುದು.

೯. ಕನ್ನಡ ಪುಸ್ತಕಗಳ ಪ್ರಕಟಣೆಗೆ ಒಂದು ಸಹ ಕಾರಿ ಸಂಸ್ಥೆಯನ್ನು ಸ್ಥಾಪಿಸುವ ವಿಷಯ ಕುರಿತು ವಿಚಾರ-ವಿನಿಮಯ ಮಾಡುವುದು.

* * *

೧. ಕನ್ನಡ ನಾಡಿನ ರಾಜಧಾನಿಯಾದ ಬೆಂಗಳೂರು ನಗರದಲ್ಲಿ ಕನ್ನಡ ಪುಸ್ತಕಗಳ ಖಾಯಂ ಪ್ರದರ್ಶನ ವೊಂದನ್ನು ಈ ವರ್ಷದಲ್ಲಿ ಪ್ರಾರಂಭಿಸುವುದು.

೨. ಬೆಂಗಳೂರು ನಗರದ ವಿವಿಧ ಬಡಾವಣೆಗಳ ಲ್ಲಿಯೂ ಕನ್ನಡ ನಾಡಿನ ೧೯ ಜಿಲ್ಲಾ ಕೇಂದ್ರಗಳಲ್ಲಿಯೂ ಮುಖ್ಯವಾದ ತಾಲ್ಲೂಕು ಕೇಂದ್ರಗಳಲ್ಲಿಯೂ ಒಂದೊಂದು ಕಡೆ ಕನಿಷ್ಠ ಪಕ್ಷ ೫ ದಿನಗಳಾದರೂ ಪುಸ್ತಕಪ್ರದರ್ಶನ ಮತ್ತು ಪುಸ್ತಕ ಮಾರಾಟ ವ್ಯವಸ್ಥೆಯನ್ನು ಏರ್ಪಡಿಸು ವುದು.

೩. ವಿದ್ಯಾರ್ಥಿಗಳಲ್ಲಿ ಪುಸ್ತಕ ಪ್ರಜ್ಞೆ ಹೆಚ್ಚಿಸಲು ಪುಸ್ತಕ ಪ್ರದರ್ಶನ ಏರ್ಪಡಿಸುವ ಊರುಗಳಲ್ಲಿ ವಿದ್ಯಾರ್ಥಿ ಗಳಿಗಾಗಿಯೇ ಆಯಾ ಶಾಲಾ ಕಾಲೇಜುಗಳಲ್ಲಿ ಪುಸ್ತಕ ಗಳ ಬಗ್ಗೆ ಪ್ರತ್ಯೇಕ ಉಪನ್ಯಾಸ ಏರ್ಪಡಿಸುವುದು, ಚರ್ಚಾಸ್ಪರ್ಧೆ ನಡೆಸುವುದು, ಪ್ರಬಂಧ ಸ್ಪರ್ಧೆ ಏರ್ಪ ಡಿಸಿ ಬಹುಮಾನಗಳನ್ನು ಹಂಚುವುದು ಇತ್ಯಾದಿ.

೪. ಪುಸ್ತಕ ಪ್ರದರ್ಶನದ ಜೊತೆಗೆ ಆಯಾ ಸ್ಥಳ ಗಳಲ್ಲಿ ಪ್ರತಿ ದಿನ ಪುಸ್ತಕಗಳ ಬಗ್ಗೆ ಉಪನ್ಯಾಸ, ಚಿತನೆ ಪ್ರದರ್ಶನ, ಕವಿತಾ ವಾಚನ, ಲಾವಣಿ, ಮನರಂಜ ಇತ್ಯಾದಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

* * *

ಪುಸ್ತಕ ಪ್ರದರ್ಶನದ ಏರ್ಪಾಟು ಕೆಲವು ಗೊತ್ತಾದ ಸ್ಥಳಗಳಲ್ಲಲ್ಲದೆ ಬೆಂಗಳೂರು ನಗರದ ಹಾಗೂ ಎಲ್ಲಾ ಜಿಲ್ಲಾ ಕೇಂದ್ರಗಳ ಇತರ ಸ್ಥಳಗಳಲ್ಲಿಯೂ ಸರ್ಕಲ್‌ಗಳ ಲ್ಲಿಯೂ ವ್ಯಾನ್ ಮೂಲಕ ಪುಸ್ತಕ ಪ್ರದರ್ಶನ ಮಾಡ ಲಾಗುವುದು. ಈ ಪ್ರದರ್ಶನ ಕಾರ್ಯಕ್ಕಾಗಿಯೇ ಪ್ರತ್ಯೇಕ ವ್ಯಾನಿದ್ದು ಅದರಲ್ಲಿ ಪುಸ್ತಕಗಳನ್ನು ಅಂದವಾಗಿ ಜೋಡಿಸಲಾಗುವುದು. ಪುಸ್ತಕ ಮಾರಾಟಕ್ಕೆ ವ್ಯಾನಿ ನಲ್ಲಿ ಅವಕಾಶ ಮಾಡಲಾಗುವುದು. ಇದಲ್ಲದೆ ಕೆಲವು ಪ್ರಮುಖ ತಾಲ್ಲೂಕು ಕೇಂದ್ರಗಳಲ್ಲಿಯೂ ವ್ಯಾನ್ ಮೂಲಕ ಪುಸ್ತಕ ಪ್ರದರ್ಶನ ಏರ್ಪಡಿಸುವ ಯೋಚನೆ ಇದೆ.

* * *

ಪ್ರತಿಯೊಂದು ಜಿಲ್ಲೆಯಲ್ಲಿಯೂ ಪುಸ್ತಕ ಪ್ರದರ್ಶನ ಮತ್ತು ಪುಸ್ತಕಗಳಿಗೆ ಸಂಬಂಧಪಟ್ಟ ಪ್ರಸಾರ ಕಾರ್ಯ ಕೈಗೊಳ್ಳುವಾಗ "ಮನೆಗೊಂದು ಪುಸ್ತಕ ಭಂಡಾರ" ಇರಬೇಕು ಎನ್ನುವ ಘೋಷಣೆಯ ಮೂಲಕ ಕನಿಷ್ಠ ಒಂದುನೂರು ರೂಪಾಯಿಗಳ ಕನ್ನಡದ ಒಳ್ಳೆಯ ಪುಸ್ತಕ ಗಳನ್ನು ಮನೆಯಲ್ಲಿರಿಸಿ ಪ್ರತಿದಿನ ಓದುವಂತೆ ಪ್ರಚಾರ ಕೈಗೊಳ್ಳಲಾಗುವುದು. ಮತ್ತು ಈ ಯೋಜನೆಯಂತೆ ತಮ್ಮ ತಮ್ಮ ಮನೆಗಳಲ್ಲಿ ಸ್ವಂತ ಪುಸ್ತಕ ಭಂಡಾರ ಇಟ್ಟುಕೊಳ್ಳುವವರಿಗೆ ರಿಯಾಯಿತಿ ದರದಲ್ಲಿ ಪುಸ್ತಕ ಗಳನ್ನು ಮಾರಲಾಗುವುದು. ಈ ಮೊದಲೆ ಖಾಸಗಿ ಯವರು ತಮ್ಮ ಮನೆಗಳಲ್ಲಿ ಒಳ್ಳೆಯ ಪುಸ್ತಕ ಭಂಡಾರ ವನ್ನಿಟ್ಟಿದ್ದರೆ, ಅಂಥವರಿಗೆ ಪುಸ್ತಕಗಳ ರೂಪದಲ್ಲಿ ಬಹು ಮಾನ ನೀಡುವ ಉದ್ದೇಶವೂ ಇದೆ. ಅಂಥವರಿಂದ ಸಿಗುವ ಪ್ರಮುಖವಾದ ಪ್ರಾಚೀನ ಕನ್ನಡ ಗ್ರಂಥಗಳನ್ನು ಪ್ರದ ರ್ಶಿಸಲು ಅಥವಾ ಬೆಲೆಗೆ ಕೊಟ್ಟರೆ ಕೊಂಡುಕೊಳ್ಳಲೂ ಪರಿಷತ್ತು ಸಿದ್ಧವಾಗಿದೆ.

* * *

ಪುಸ್ತಕ ಪ್ರದರ್ಶನ ಮತ್ತು ಪುಸ್ತಕ ಮಾರಾಟ ಕಾರ್ಯ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಯಶಸ್ವಿಯಾಗಿ ನಡೆಯಬೇಕಾದರೆ ಪರಿಷತ್ತಿನ ಜಿಲ್ಲಾ ಸಮಿತಿಗಳು ಪ್ರಮುಖ ಪಾತ್ರ ವಹಿಸಬೇಕು. ಜಿಲ್ಲಾ ಸಮಿತಿ ಸದ ಸ್ಯರು ಪ್ರತಿ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಸಂಚರಿಸಿ ವ್ಯಕ್ತಿ ಮತ್ತು ಸಂಸ್ಥೆಗಳನ್ನು ಭೇಟಿ ಮಾಡಿ ಪುಸ್ತಕ

ಮಾರಾಟದ ಕೂಪನ್ನುಗಳನ್ನು ಅವರಿಗೆ ಮುಂಚಿತವಾಗಿ ಮಾರಬೇಕು. ಈ ರೀತಿ ಮಾರಾಟದಿಂದ ಬರುವ ಹಣದ ಕಮಿಷನ್ನಿನಲ್ಲಿ ಸ್ವಲ್ಪ ಅಂಶವನ್ನು ಪ್ರಚಾರ ಕಾರ್ಯದ ವೆಚ್ಚಕ್ಕೂ ಹೆಚ್ಚಿನ ಅಂಶವನ್ನು ಪುಸ್ತಕ ರೂಪದಲ್ಲಿ ತಮ್ಮ ಜಿಲ್ಲಾ ಸಮಿತಿ ಆಶ್ರಯದಲ್ಲಿ ಒಂದು ಪುಸ್ತಕ ಭಂಡಾರ ತೆರೆಯುವುದಕ್ಕೂ ಉಪಯೋಗಿಸಬಹುದು.

ಪುಸ್ತಕಭಾಗ್ಯ

ಈ ಸಾಹಿತ್ಯ ಪ್ರಸಾರ ಕಾರ್ಯ ಒಂದು ವರ್ಷ ಕಾಲ ನಡೆಯುವ ದೀರ್ಘ ಕಾರ್ಯಕ್ರಮವಾಗಿದ್ದು ಈ ಬಗೆಯ ಕಾರ್ಯಕ್ರಮ ಕನ್ನಡದ ಬೆಳವಣಿಗೆಗೆ ಸಂಬಂಧಪಟ್ಟಂತೆ ಕನ್ನಡ ನಾಡಿನಲ್ಲಿ ಇದೇ ಪ್ರಪ್ರಥಮ ಕಾರ್ಯಕ್ರಮವಾಗಿದ್ದು ಭಾರತದ ಸ್ವಾತಂತ್ರ್ಯದ ಬೆಳ್ಳಿಯ ಹಬ್ಬದ ದಿನವಾದ ಆಗಸ್ಟ್ ೧೫ರಂದು ಪ್ರಾರಂಭವಾಗುವುದರಿಂದ ಈ ವಿಶೇಷ ಸಂದರ್ಭದ ನೆನಪಿಗಾಗಿ "ಪುಸ್ತಕ ಭಾಗ್ಯ" ಎಂಬ ಹೆಸರಿನಿಂದ ನೆನಪಿನ ಸಂಚಿಕೆ (ಸಾವೆನಿರ್) ಯನ್ನು ಪ್ರಕಟಿಸಲಾಗುವುದು. ಈ ಸಂಚಿಕೆಯಲ್ಲಿ ರಾಜ್ಯ ಸರ್ಕಾರ, ವಿಶ್ವ ವಿದ್ಯಾನಿಲಯಗಳು ನಡೆಸುತ್ತಿರುವ ಪುಸ್ತಕ ಭಂಡಾರಗಳು, ಪುಸ್ತಕ ಭಂಡಾರಗಳ ಅವಶ್ಯಕತೆ, ಪ್ರಯೋಜನ, ಖಾಸಗಿ ಪುಸ್ತಕ ಭಂಡಾರಗಳ ಮಹಿಮೆ, ಪುಸ್ತಕ ಓದುವ ಅಭ್ಯಾಸ, ಪುಸ್ತಕ ಭಂಡಾರಗಳ ಬಗ್ಗೆ ಇರುವ ಶಾಸನಗಳು ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ಅನೇಕ ಉಪಯುಕ್ತ ಲೇಖನಗಳಿರುವುವು. ಈ ನೆನಪಿನ ಸಂಚಿಕೆಯನ್ನು ಸಂಖ್ಯೆಯಲ್ಲಿ ಮುದ್ರಿಸಿ ಜನಸಾಮಾನ್ಯರು ಕೊಳ್ಳುವಂತೆ ಸುಲಭ ಬೆಲೆಗೆ ಮಾರಾಟ ಮಾಡಲಾಗುವುದು.

ಪುಸ್ತಕಗಳನ್ನು ಕುರಿತು ಸೂಕ್ತಿಗಳು

ಸಮಾಜ ಜೀವನದಲ್ಲಿ ಪುಸ್ತಕಗಳ ಉಪಯುಕ್ತತೆಯನ್ನು ಕುರಿತು ಜಗತ್ತಿನ ನಾನಾ ವ್ಯಕ್ತಿಗಳು ಹಾಗೂ ಕನ್ನಡ ನಾಡಿನ ಹಿರಿಯ ಕವಿಗಳು, ಸಾಹಿತಿಗಳು ಹೇಳಿರುವ ಸೂಕ್ತಿಗಳನ್ನು ಸಣ್ಣ ಪ್ರಕಟಣೆಯ ರೂಪದಲ್ಲಿ ಅಚ್ಚುಮಾಡಿಸಿ ಪುಸ್ತಕ ಕೊಳ್ಳುವವರಿಗೆ ಉಚಿತವಾಗಿಯೂ, ಬೇರೆಯವರಿಗೆ ಹತ್ತು ಪೈಸೆಗೆ ಒಂದರಂತೆಯೂ ಮಾರಲಾಗುವುದು.

ಪುಸ್ತಕ ಕೊಳ್ಳುವವರಿಗೆ ರಿಯಾಯಿತಿ

ಸಾಹಿತ್ಯ ಪ್ರಸಾರ ಕಾರ್ಯ ನಡೆಯುವ ಅವಧಿಯಲ್ಲಿ ಪುಸ್ತಕ ಕೊಳ್ಳುವವರು ನೇರವಾಗಿ ಪ್ರದರ್ಶನಕ್ಕೆ ಭೇಟಿ ಕೊಟ್ಟು ತಮಗೆ ಇಷ್ಟ ಬಂದ ಪುಸ್ತಕಗಳನ್ನು ಹಣ ಕೊಟ್ಟು ಪಡೆಯಬಹುದು ಅಥವಾ ತಮಗೆ ಅನುಕೂಲವಾದಾಗ ಮುಂಚಿತವಾಗಿ ಹಣ ಕೊಟ್ಟು ಪುಸ್ತಕ ಮಾರಾಟದ ಕೂಪನ್ನುಗಳನ್ನು ಪಡೆದು ಪುಸ್ತಕ ಪ್ರದರ್ಶನ ಕಾಲದಲ್ಲಿ ಅವುಗಳನ್ನು ಕೊಟ್ಟು ತಮಗೆ ಬೇಕಾದ ಪುಸ್ತಕಗಳನ್ನು ಪಡೆಯಬಹುದು. ಈ ರೀತಿ ಪುಸ್ತಕ ಕೊಳ್ಳುವವರಿಗೆ ರೂಪಾಯಿಗೆ ೧೦ ಪೈಸೆಯಂತೆ ರಿಯಾಯಿತಿ ನೀಡಲಾಗುವುದು.

ಯೋಜನೆ ಯಶಸ್ಸಿಗೆ ಎಲ್ಲರ ಸಹಕಾರ ಅಗತ್ಯ

ಈ ಸಾಹಿತ್ಯ ಪ್ರಸಾರ ಕಾರ್ಯ ಪರಿಣಾಮಕಾರಿಯಾಗಿ ಬೃಹತ್ ಪ್ರಮಾಣದಲ್ಲಿ ವ್ಯಾಪಕವಾಗಿ ಇಡೀ ವರ್ಷ ನಡೆಯಬೇಕಾದರೆ ಕನ್ನಡ ನಾಡಿನಲ್ಲಿರುವ ಎಲ್ಲ ಸಂಘ-ಸಂಸ್ಥೆಗಳ, ಕನ್ನಡಾಭಿಮಾನಿಗಳ ಸಹಕಾರ ಬೇಕಾಗುವುದು. ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ರಾಜ್ಯ ಸಾಹಿತ್ಯ ಅಕಾಡೆಮಿ, ಸಂಸ್ಕೃತಿ ಪ್ರಚಾರ ಇಲಾಖೆ, ರಾಜ್ಯದ ಎಲ್ಲ ವಿಶ್ವವಿದ್ಯಾನಿಲಯಗಳು, ಪ್ರಕಾಶನ ಸಂಸ್ಥೆಗಳು, ಖಾಸಗಿ ಪ್ರಕಾಶಕರು, ಲೇಖಕರು, ವಯಸ್ಕರ ಶಿಕ್ಷಣ ಸಮಿತಿ, ಸರಕಾರೀ ಗ್ರಂಥಾಲಯದ ಅಧಿಕಾರಿಗಳು, ಶಾಲೆ ಕಾಲೇಜುಗಳ ಪುಸ್ತಕ ಭಂಡಾರಾಧಿಕಾರಿಗಳು, ಪತ್ರಿಕೆಗಳು, ಕನ್ನಡ ಕಾರ್ಯಕರ್ತರು ಇವರುಗಳೆಲ್ಲರ ಸಹಕಾರವನ್ನು ಪಡೆಯಲು ಪರಿಷತ್ತು ಪ್ರಯತ್ನ ನಡೆಸುವುದು.

ಪ್ರದರ್ಶನಕ್ಕೆ ಐದು ಸಾವಿರ ಶೀರ್ಷಿಕೆಗಳು

ಬೆಂಗಳೂರು ನಗರ ಮತ್ತು ನಾಡಿನ ಇತರ ಭಾಗಗಳಲ್ಲಿ ಸುಮಾರು ಒಂದು ನೂರು ದಿನಗಳ ಕಾಲ ನಡೆಯುವ ಪುಸ್ತಕ ಪ್ರದರ್ಶನದಲ್ಲಿ ಕಡೇ ಪಕ್ಷ ಐದು ಸಾವಿರ ಶೀರ್ಷಿಕೆಗಳಾದರೂ ಪ್ರದರ್ಶನಕ್ಕೆ ಬೇಕಾಗುತ್ತವೆ. ಮಾರಾಟಕ್ಕೆ ಕನಿಷ್ಠ ಪಕ್ಷ ೨೦ ಲಕ್ಷ ರೂಪಾಯಿ ಬೆಲೆ ಬಾಳುವ ಪುಸ್ತಕಗಳಾದರೂ ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ. ಪುಸ್ತಕ ಪ್ರದರ್ಶನಕ್ಕೆ ಬೇಕಾದ ಸಲಕರಣೆಗಳನ್ನಲ್ಲದೆ ಪುಸ್ತಕಗಳನ್ನೂ ಸಿಬ್ಬಂದಿಯವರನ್ನು

ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಪರಿಷತ್ತು ಒಂದು ವಾಹನವನ್ನು ತೆಗೆದುಕೊಂಡಿದೆ.

ಇತರ ಕಾರ್ಯಕ್ರಮಗಳು

ಪರಿಷತ್ತಿನ ಸಾಹಿತ್ಯ ಪ್ರಸಾರ ಯೋಜನೆಯ ಕಡೆ ಜನರ ಗಮನವನ್ನು ಸೆಳೆದು ಜನರಲ್ಲಿ ಪುಸ್ತಕದ ಬಗ್ಗೆ ಆಸಕ್ತಿಯನ್ನು ಕೆರಳಿಸಲು ಇನ್ನೂ ಕೆಲವು ವಿಶಿಷ್ಟ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಕೆಲವು ಈ ಕೆಳಗಿನಂತಿವೆ.

೧. ಪುಸ್ತಕಗಳ ಉಪಯುಕ್ತತೆ ಬಗ್ಗೆ ಸಿನಿಮಾ ಸ್ಲೈಡ್ ತೋರಿಸುವುದು.

೨. ಈ ವರ್ಷ ನಾಡಿನಲ್ಲಿ ನಡೆಯುವ ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಅತಿಥಿಗಳಿಗೆ ಹಾರದ ಬದಲು ಪುಸ್ತಕಗಳನ್ನು ನೀಡಿ ಸತ್ಕರಿಸುವಂತೆ ವ್ಯವಸ್ಥಾಪಕರನ್ನು ಪ್ರಾರ್ಥಿಸುವುದು.

೩. ಶಾಲಾ ಕಾಲೇಜುಗಳಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಇತರೇ ಬಹುಮಾನದ ಜೊತೆಗೆ ಪುಸ್ತಕಗಳನ್ನೂ ನೀಡುವಂತೆ ವಿನಂತಿ ಮಾಡಿಕೊಳ್ಳುವುದು.

೪. ಮದುವೆ ಮುಂತಾದ ಶುಭ ಸಮಾರಂಭಗಳಲ್ಲಿ ವಧೂವರರಿಗೆ ಇತರೇ ವಸ್ತುಗಳ ಜೊತೆಗೆ ಪುಸ್ತಕಗಳನ್ನೂ ಉಡುಗೊರೆಯಾಗಿ ಕೊಡುವಂತೆ ಪ್ರಾರ್ಥಿಸುವುದು, ಇತ್ಯಾದಿ, ಇತ್ಯಾದಿ.

ನಾನು ಓದದ ಪುಸ್ತಕ ನಿನ್ನೆ ಅಚ್ಚಾದುದಾಗಿರಲಿ, ನೂರು ವರ್ಷಗಳ ಹಿಂದೆ ಅಚ್ಚಾದುದಿರಲಿ—ನನ್ನ ಪಾಲಿಗೆ ಹೊಸದೇ.

—ವಿಲಿಯಂ ಹ್ಯಾಜ್ಲಿಟ್

ಪುಸ್ತಕಗಳು ಇನ್ನೂ ಹುಟ್ಟಲಿರುವ ಜನಾಂಗದ ಆಸ್ತಿ.

—ಜೋಸೆಫ್ ಎಡಿಸನ್

ಶಾಸನಗಳು ಸಾಯುತ್ತವೆ; ಗ್ರಂಥಗಳಿಗೆ ಸಾವಿಲ್ಲ.

—ಬುಲ್‌ವರ್ ಲಿಟ್ಟನ್

ಯಾವುದೊಂದು ಮಹಾಗ್ರಂಥವೂ ಚಿಕ್ಕದೊಂದು ದೇಶ, ಜನ ಅಥವಾ ಭಾಷೆಯದಾಗುವುದಿಲ್ಲ.

—ವಿಕ್ಟರ್ ಹ್ಯೂಗೋ

ಪುಸ್ತಕಗಳು ಆಯಾಕಾಲದ ಸಂಸ್ಕೃತಿಯ ಜೀವಂತ ಪ್ರತೀಕ.

—ಎಮರ್ಸನ್

ಮನುಷ್ಯ ಕೋಟಿ ಮಾಡಿದ್ದೂ ಯೋಚಿಸಿದ್ದೂ ಪಡೆದದ್ದು ಎಲ್ಲವೂ ಮುಪ್ಪುರಿಗೊಂಡಂತೆ ಪುಸ್ತಕಗಳ ಪುಟಗಳಲ್ಲಿ ಸುರಕ್ಷಿತವಾಗಿದೆ.

—ಥಾಮಸ್ ಕಾರ್ಲೈಲ್

ಗ್ರಂಥಾಲಯ ವಿಜ್ಞಾನ

ಮತ್ತು

ಸ್ವಾತಂತ್ರ್ಯ ರಜತ ಮಹೋತ್ಸವ ವರ್ಷದಲ್ಲಿ ಸಲ್ಲಿಸುವ ಸೇವೆ

ಒಂದು ಯೋಚನಾಧಾರೆ

● ಡಾ॥ ಎಸ್. ಆರ್. ರಂಗನಾಥನ್

ಗ್ರಂಥಪಾಲಕನಾಗಲು ಅನಿಚ್ಛೆ

ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಗಣಿತದ ಸಹಾಯಕ ಪ್ರಾಧ್ಯಾಪಕನಾಗಿದ್ದೆ. ೧೯೨೪ನೆಯ ಜನವರಿ ನಾಲ್ಕರಂದು ನನ್ನ ಸ್ಥಳದಿಂದ ಮದರಾಸ್ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಸ್ಥಾಪಿಸಿದ ಗ್ರಂಥಪಾಲಕನ ಹುದ್ದೆಗೆ ನನ್ನನ್ನು ವರ್ಗ ಮಾಡಿದರು. ಈ ವರ್ಗ ನನಗೆ ಇಷ್ಟವಿರಲಿಲ್ಲ. ನನ್ನ ಕಲ್ಪನೆಯಲ್ಲಿ ಗ್ರಂಥಪಾಲಕನೆಂದರೆ, ಪುಸ್ತಕಗಳನ್ನು ಶುಭ್ರವಾಗಿ ಇಡುವ, ಅವುಗಳನ್ನು ಧೂಳಿನಿಂದ, ಹುಳಗಳಿಂದ ರಕ್ಷಿಸುವ ಮತ್ತು ತನಗೆ ಸಾಧ್ಯವಿದ್ದಷ್ಟು ಮಟ್ಟಿಗೆ ಮಾನವನ ಹಸ್ತಗಳಿಂದ ಕಾಪಾಡುವ ಅರೆ ವಿದ್ಯಾವಂತನಾದ ಪರಿಚಾರಕ–ಎಂಬುದೇ ಆಗಿತ್ತು. ಮೊದಲ ಕೆಲವು ದಿನಗಳಲ್ಲಿ ವಿಶ್ವವಿದ್ಯಾನಿಲಯದ ಗ್ರಂಥಪಾಲಕನಾಗಿ ನಾ ಕಂಡದ್ದೆಂದರೆ, ವಿಶ್ವವಿದ್ಯಾನಿಲಯದ ಮತ್ತು ಅದೇ ಕಟ್ಟಡದ ಭಾಗದಲ್ಲಿದ್ದ ಕನ್ನೆಮಾರ ಸಾರ್ವಜನಿಕ ಪುಸ್ತಕ ಭಂಡಾರಗಳಲ್ಲಿ ನಾನು ಮೇಲೆ ಹೇಳಿದ ರೀತಿಯಲ್ಲಿ ನಡೆಯುತ್ತಿದ್ದ ಕೆಲಸವೇ ಆಗಿತ್ತು. ಆದ್ದರಿಂದ ನಾನು ಕಾಲೇಜಿನ ಪ್ರಿನ್ಸಿಪಾಲರ ಬಳಿಗೆ ಹೋಗಿ 'ಕಾಲೇಜಿನ ನನ್ನ ಜಾಗಕ್ಕೆ ನಾನು ಹಿಂತಿರುಗಲು ಅಪೇಕ್ಷಿಸುತ್ತೇನೆ' ಎಂದು ಹೇಳಿದೆ. ಅವರು ತುಂಬಾ ಚತುರರು. ಸ್ಕಾಟ್ ದೇಶದವರು. ಅವರು ಹೇಳಿದರು : "ನಿಮ್ಮನ್ನು ಪಾಶ್ಚಾತ್ಯ ದೇಶದ ಕೆಲವು ಪ್ರದೇಶಗಳಿಗೆ ಪುಸ್ತಕ ಭಂಡಾರಗಳು ನಡೆಯುವ ವಿಧಾನವನ್ನು ಅಭ್ಯಾಸ ಮಾಡಲು ಕಳುಹಿಸಿ ಕೊಡಲಾಗುವುದು. ಅಲ್ಲಿಯವರೆಗೆ ತಡೆಯಿರಿ. ಈ ಅವಕಾಶವನ್ನು ಉಪಯೋಗಿಸಿಕೊಂಡು ಪ್ರಪಂಚವನ್ನು ಸಂತೋಷದಿಂದ ಸುತ್ತಾಡಿಕೊಂಡು ಬನ್ನಿ. ಹಿಂದಿರುಗಿ ಬಂದ ಮೇಲೂ ಗ್ರಂಥಪಾಲಕನ ಕೆಲಸ ನಿಮಗೆ ಹಿಡಿಸದಿದ್ದರೆ ನಿಮ್ಮನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ."

೨. ಗ್ರಂಥಪಾಲನ ವೃತ್ತಿಗೆ ವರ್ಗಾಯಿಸಿಕೊಳ್ಳುವ ನಿಶ್ಚಯ

ಪಶ್ಚಿಮ ದೇಶಗಳಲ್ಲಿ ಅನೇಕ ಪುಸ್ತಕ ಭಂಡಾರಗಳನ್ನು ಮಕ್ಕಳ ಪುಸ್ತಕ ಭಂಡಾರಗಳು, ತರುಣರ ಪುಸ್ತಕ ಭಂಡಾರಗಳು, ವಯಸ್ಕರ ಪುಸ್ತಕ ಭಂಡಾರಗಳು, ಶಾಲಾ ಗ್ರಂಥಭಂಡಾರಗಳು, ಕಾಲೇಜು ಪುಸ್ತಕ ಭಂಡಾರಗಳು ವಿಶ್ವವಿದ್ಯಾನಿಲಯದ ಪುಸ್ತಕ ಭಂಡಾರಗಳು ಮತ್ತು

ಸಂಶೋಧನ ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ವಿಶಿಷ್ಟ ಪುಸ್ತಕ ಭಂಡಾರಗಳು—ಎಲ್ಲ ವಿಧದ ಪುಸ್ತಕ ಭಂಡಾರಗಳನ್ನು ಸಂದರ್ಶಿಸುತ್ತ ಒಂದು ವರ್ಷ ಕಳೆದೆ. ಈ ಎಲ್ಲ ಪುಸ್ತಕ ಭಂಡಾರಗಳು ಬಹಳಮಟ್ಟಿಗೆ ಓದುಗರಿಂದ ತುಂಬಿರುತ್ತಿದ್ದವು, ಅವರಲ್ಲಿ ಕೆಲವರೊಡನೆ ಮಾತನಾಡಿದೆ. ಈ ಅನುಭವ ಪುಸ್ತಕ ಭಂಡಾರಗಳ ಮಹೌಲ್ಯದ ಬಗ್ಗೆ ಇದ್ದ ನನ್ನ ತಿಳಿವಳಿಕೆಯನ್ನು ಅಸಾಧಾರಣ ರೀತಿಯಲ್ಲಿ ಬದಲಾಯಿಸಿತು. ಸರ್ವರಿಗೂ ದೊರೆಯುವ ಒಳ್ಳೆಯ ಗ್ರಂಥಾಲಯ ಸೇವೆಯ ಸಾಮಾಜಿಕ ಮಹೌಲ್ಯವು ರಾಷ್ಟ್ರವನ್ನು ಸಂಪದಭಿವೃದ್ಧಿ ಹಾಗೂ ಸುಖೀರಾಜ್ಯವನ್ನಾಗಿ ಪರಿವರ್ತಿಸಲು ಹೇಗೆ ಸಹಾಯಕವಾಗುತ್ತದೆ ಎಂಬ ತಿಳಿವು ನನ್ನಲ್ಲಿ ಮೂಡಿತು. ಅದಲ್ಲದೆ ಹತ್ತು-ಹನ್ನೆರಡು ವಿದ್ಯಾರ್ಥಿಗಳಿಗೆ ಪ್ರೌಢಗಣಿತ ಶಾಸ್ತ್ರವನ್ನೂ ಬೋಧಿಸುವ ಕಾರ್ಯಮಹತ್ವವು ಬೇರೆ ಅಳತೆಯದೇ ಆಗಿರುತ್ತದೆ; ಅಲ್ಲದೆ, ಅದರ ಸಾಮಾಜಿಕ ವಿಸ್ತಾರವು ಬೇರೆಯೇ ಆಗಿರುತ್ತದೆ. ಆದ್ದರಿಂದ ನಾನು ಮದರಾಸಿನ ವಿಶ್ವವಿದ್ಯಾನಿಲಯದ ಗ್ರಂಥಪಾಲಕನಾಗಿ ಮುಂದುವರಿಯಲು ನಿರ್ಧರಿಸಿದೆ. ೪೪ ವರ್ಷಗಳ ನಂತರ ಈಗ, ನನ್ನ ಅಂದಿನ ಆ ನಿರ್ಧಾರಕ್ಕಾಗಿ ವ್ಯಥೆ ಪಡುವುದಿಲ್ಲ.

೩. ಗ್ರಂಥಾಲಯ ವಿಜ್ಞಾನದ ಮೂಲ ಸಿದ್ಧಾಂತಗಳು

ಪಾಶ್ಚಾತ್ಯ ದೇಶಗಳ ಪುಸ್ತಕ ಭಂಡಾರಗಳ ಸಂದರ್ಶನದಿಂದ ಉಂಟಾದ ನನ್ನ ಅನುಭವದಿಂದಾಗಿ ಅವರು ಗ್ರಂಥಭಂಡಾರಗಳನ್ನು ಅಂದಾಜಿನ ಅಥವಾ ಕಾರ್ಯ ಯೋಗ್ಯವೆನಿಸಿದ ಮತ್ತು ಪ್ರಯೋಗ ಪ್ರಯತ್ನದ ವಿಧಾನಗಳಿಂದ ಅಂತೂ ವರ್ಷೇ ವರ್ಷೇ ಪಡೆದ ಅನುಭವದ ಆಧಾರದ ಮೇಲೆ ನಡೆಸುತ್ತಿದ್ದರೆಂದು ಯೋಚಿಸುವಂತಾಯಿತು.

ಹಿಂದಿನ ಮತ್ತು ಇಂದಿನ ಗ್ರಂಥಾಲಯ ಅಭಿವೃದ್ಧಿಯನ್ನು ಯಾವುದೇ ಒಂದು ವಿಧವಾದ ಮೂಲ ಸಿದ್ಧಾಂತಗಳಿಗೆ ಅಳವಡಿಸಲು ಸಾಧ್ಯವಾದರೆ, ಒಳ್ಳೆಯ ಗ್ರಂಥಾಲಯದ ಸಾಮಾಜಿಕ ಸಾಧ್ಯತೆ ಎಷ್ಟೆಂಬುದನ್ನು ಪೂರ್ಣವಾಗಿ ಗ್ರಹಿಸಿಕೊಳ್ಳಲು ಸಾಧ್ಯವಾಗಬಹುದೆಂದು ಭಾವಿಸಿದೆ. ನಾನು ನೋಡಿದ ರೀತಿಯಿಂದ ಮಾತ್ರವಲ್ಲ; ಯಾವರೀತಿ ಆಗಬೇಕೆಂಬುದರ ಮೇಲೆ ಹಾಗೂ ಸಾಮಾಜಿಕ ಅಗತ್ಯಗಳಿಗನುಗುಣವಾಗಿ, ಕಾಲಕಾಲಕ್ಕೆ ಯಾವ ರೀತಿ ಹೊಂದಾಣಿಕೆ ಮಾಡಿಕೊಳ್ಳಬೇಕೆಂಬುದರ ಮೇಲೆ ಆಧರಿಸಿ, ಸಿದ್ಧಾಂತ ಅಥವಾ ಸೂತ್ರಗಳನ್ನು ರೂಪಿಸಬೇಕೆಂದೆನಿಸಿತು. ಹಾಗಾದರೆ ಮಾತ್ರ, ಸಾಮಾಜಿಕ ಸ್ಥಿತಿಗಳೂ, ಬೇಡಿಕೆಗಳೂ ಬದಲಾದಂತೆ, ಜನತೆಗೆ ಸಲ್ಲಿಸಬಹುದಾಂತಹ ಗ್ರಂಥಾಲಯ ಸೇವೆಯನ್ನು ಮೂಲ ಸಿದ್ಧಾಂತಗಳ ಆಧಾರದ ಮೇಲೆ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ—ಎಂದೆನಿಸಿತು. ದೇವರ ದಯದಿಂದ, ೧೯೨೪ರ ವೇಳೆ, ಕೆಲವು ಮೂಲ ಸಿದ್ಧಾಂತಗಳನ್ನು ರೂಪಿಸಿಕೊಳ್ಳಲು ಸಾಧ್ಯವಾಯಿತು. ಅನಂತರ ನಮ್ಮ ದೇಶದ ನಾನಾ ಸಮ್ಮೇಳನಗಳಲ್ಲಿ, ಈ ಮೂಲ ಸಿದ್ಧಾಂತಗಳ ಬಗ್ಗೆ ವ್ಯಾಖ್ಯಾನ ಮಾಡಲಾಯಿತು. ಕೊನೆಗೆ, ೧೯೩೧ರಲ್ಲಿ "ಗ್ರಂಥಾಲಯ ವಿಜ್ಞಾನದ ಪಂಚ ಸೂತ್ರಗಳು" [Five laws of library science]—ಎಂಬ ಪುಸ್ತಕ ರೂಪದಲ್ಲಿ ಇವುಗಳನ್ನು ಪ್ರಕಟಿಸಲಾಯಿತು.

೪. ಸಿದ್ಧಾಂತ—೨

೪೧. ಅದರ ಮೇಳಗೀತ

ಪುಸ್ತಕ ಭಾಗ್ಯದ ಸಂಪಾದಕ ಶ್ರೀ ಹಿ.ಮ. ನಾಗಯ್ಯನವರು, ನನಗೆ ಲೇಖನವನ್ನು ಕೇಳಿ ಬರೆದಿರುವ ಪತ್ರವನ್ನು ಓದಿದ ಮೇಲೆ, ನನ್ನ ೨ನೇ ಸಿದ್ಧಾಂತದ ಮೇಲೆ ಲೇಖನವೊಂದನ್ನು ಬಯಸಿದ್ದಾರೆ ಎಂದೆನ್ನಿಸಿತು. ಈ ಸಿದ್ಧಾಂತದ ಒಂದು ಅರ್ಥ "ಎಲ್ಲರಿಗೂ ಪುಸ್ತಕ". ಮತ್ತೊಂದು ಅರ್ಥ "ಪ್ರತಿ ಓದುಗನಿಗೂ ಅವನ ಪುಸ್ತಕ". ೨ನೇ ಸಿದ್ಧಾಂತದ ಮೇಳಗಾನ ಈ ರೀತಿ ಇದೆ:—

ಎಲ್ಲರಿಗಿಲ್ಲಿದೆ ಅವಕಾಶ;
ಕಲಿತವನಿರಲಿ !
ಕಲಿಯದನಿರಲಿ !
ಪುಸ್ತಕ ಭಾಗ್ಯಕೆ ಮಿತಿ ಬೇಡ ! !
'ಕೃಪೆ ಇದ್ದವರಿಗೆ'—ಎನಬೇಡ !
ಬಡವನೆ ಇರಲಿ
ಬಲ್ಲಿದನಿರಲಿ,
ಎಲ್ಲರಿಗಿಲ್ಲಿದೆ ಪುಸ್ತಕ ರಾಶಿ !
ಅಡ್ಡಾ ದಿಡ್ಡಿಗು ಇಲ್ಲಿದೆ ಪುಸ್ತಕ ! !
ಗಣಿತಾಗ್ರಣಿಗೂ ಸಿಗಲಿದೆ ಪುಸ್ತಕ !
ನಗರಿಗನಿಗು ಇದೆ,
ಹಳ್ಳಿಗನಿಗು ಇದೆ;

ಎಲ್ಲರಿಗಿಲ್ಲಿದೆ ಪುಸ್ತಕ ರಾಶಿ!
ಅವಗೂ—ಇವಗೂ
ಎಲ್ಲರಿಗಿಲ್ಲಿದೆ ಪುಸ್ತಕ ರಾಶಿ!!
ಬುದ್ಧಿಯ ಬೆಳೆಸುವ ಸಿದ್ಧಿಯ ರಾಶಿ!

೪೨. ಗ್ರಂಥಾಲಯ ವಿಜ್ಞಾನ ಸಿದ್ಧಾಂತ ೨ರ ಪ್ರತಿಮೆ

೧೯೬೧ರಲ್ಲಿ ಪೂರ್ವ ಬರ್ಲಿನ್‌ನಲ್ಲಿ ನಡೆದ ಜರ್ಮನಿಯ ರಾಷ್ಟ್ರೀಯ ಪುಸ್ತಕ ಭಂಡಾರದ ತ್ರಿಶತಮಾನೋತ್ಸವದ ಸಮಾರಂಭಕ್ಕೆ ನಾನು ಹೋಗಿದ್ದೆ. ೧೯೬೧ನೆಯ ಅಕ್ಟೋಬರ್ ೨೧ರ ಶನಿವಾರ ಬೆಳಗ್ಗೆ ಒಂದು ಅಸಾಮಾನ್ಯವಾದ ಘಟನೆ ನಡೆಯಿತು. ರಾಷ್ಟ್ರೀಯ ಗ್ರಂಥಪಾಲಕರಾದ ನನ್ನ ಮಿತ್ರ ಡಾ|| ಕುಂಜೆ ಪುಸ್ತಕ ಭಂಡಾರವನ್ನು ಬಳಸುವಂತಿದ್ದ ಸಾಮಾನ್ಯ ಕಾರ್ಮಿಕನೊಬ್ಬನ ಪ್ರತಿಮೆಯನ್ನು ಅನಾವರಣ ಮಾಡುವ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಈ ಪ್ರತಿಮೆಯನ್ನು ರಾಷ್ಟ್ರೀಯ ಪುಸ್ತಕ ಭಂಡಾರದ ಕಟ್ಟಡದ ಎದುರುಗಡೆ ನಿಲ್ಲಿಸಿದ್ದರು. ಅದು ನನ್ನ ಮನಸ್ಸಿಗೆ, ಗ್ರಂಥಾಲಯ ವಿಜ್ಞಾನದ ಎರಡನೇ ಸಿದ್ಧಾಂತದ ಪ್ರತಿಮೆಯಂತೆ ಕಂಡಿತು. ದಿನವೆಲ್ಲ ನನ್ನ ಮನಸ್ಸು ಆ "ಸಾಮಾನ್ಯ ಕಾರ್ಮಿಕ"ನನ್ನೇ ಕುರಿತು ಆಲೋಚಿಸುತ್ತಿತ್ತು. ರಾಷ್ಟ್ರೀಯ ಪುಸ್ತಕ ಭಂಡಾರದ ಎದುರು ಎತ್ತರದ ವೇದಿಕೆಯಮೇಲೆ ನಿಂತು, ಎದುರಿಗೆ ಓಡಾಡುವ ಪ್ರತಿಯೊಬ್ಬ ದಾರಿಹೋಕನನ್ನೂ—ಅವನು ಸಾಮಾಜಿಕವಾಗಿ, ಬೌದ್ಧಿಕವಾಗಿ, ಆರ್ಥಿಕವಾಗಿ ಎಷ್ಟೇ ಕಡಮೆ ದರ್ಜೆಯವನಾದರೂ ಸರಿಯೆ ಅವನನ್ನು ಕೂಗುತ್ತಾ, "ಬಾ ಮಿತ್ರ, ನಾಚಿಕೆಪಟ್ಟುಕೊಳ್ಳಬೇಡ; ಈ ಪುಸ್ತಕ ಭಂಡಾರ ಶ್ರೀಮಂತರಿಗೆ, ಜ್ಞಾನಿಗಳಿಗೆ ಮಾತ್ರ ಎಂದು ಭಾವಿಸಬೇಡ. ಅಂಜಿಕೆ ಬಿಟ್ಟು ಬಾ, ನಿರ್ದಾಕ್ಷಿಣ್ಯವಾಗಿ ಬಾ. ನಿನ್ನ ಹಕ್ಕಿನ ಅಧಿಕಾರದಿಂದ ಬಾ, ಮತ್ತೆಲ್ಲರಿಗೂ ದೊರಕುವ ಜ್ಞಾನದ ಔತಣ ನಿನಗೂ ಲಭಿಸುತ್ತದೆ. ಇಲ್ಲಿನ ಗ್ರಂಥಪಾಲಕ ಬೇರೊಬ್ಬ ಓದುಗನಿಗೆ ತೋರಿಸುವ ಆಸಕ್ತಿ, ನಮ್ರತೆ, ವಾತ್ಸಲ್ಯವನ್ನು ನಿನಗೂ ತೋರಿಸಿ ನಿನ್ನನ್ನೂ ಬರಮಾಡಿಕೊಳ್ಳುತ್ತಾನೆ. ಅವರಂತೆಯೇ ನಿನ್ನ ಸೇವೆಯನ್ನೂ ಮಾಡುತ್ತಾನೆ" ಎಂದು ಹೇಳುವಂತೆ ಕಾಣಿಸುತ್ತಿತ್ತು.

೪೩. ನಮ್ಮ ಗ್ರಂಥಾಲಯ ಸೇವೆಯ ಅಣಕ

'ಎಲ್ಲರಿಗೆ ಪುಸ್ತಕ' ಎಂಬ ಸೂತ್ರದಲ್ಲಿನ 'ಎಲ್ಲರು' ಎಂಬ ಪದ ಅಕ್ಷರಸ್ಥರನ್ನು ಮಾತ್ರವಲ್ಲದೆ ಅನಕ್ಷರಸ್ಥರನ್ನೂ ಮತ್ತು ಹೊಸದಾಗಿ ಅಕ್ಷರ ಕಲಿತವರನ್ನೂ ಸೇರಿಸಿಕೊಳ್ಳುತ್ತದೆ. ನಮ್ಮ ಇಂದಿನ ಜನಸಂಖ್ಯೆಯಲ್ಲಿ ಶೇಕಡ ೭೦ರಷ್ಟು ಅನಕ್ಷರಸ್ಥರೂ ಹೊಸದಾಗಿ ಅಕ್ಷರ ಕಲಿತವರೂ ಇದ್ದಾರೆ.

ಜಾಗ್ರತಾವಸ್ಥೆಯಲ್ಲಿರುವ ಇತರ ದೇಶಗಳ ಪ್ರಜಾಪ್ರಭುತ್ವದ ಮೂಲಕ, ನೂರಕ್ಕೆ ನೂರರಷ್ಟು ಅಕ್ಷರಸ್ಥರನ್ನು ಪಡೆದಿರುವಾಗ, ನಮ್ಮ ದೇಶದ ಇಂದಿನ ಪರಿಸ್ಥಿತಿಗೆ, ಕಳೆದ ಕೆಲವು ಶತಮಾನಗಳಿಂದ ಸಾಂಸ್ಕೃತಿಕ ಶೋಷಣೆಗೊಳಗಾಗಿ, ನಿದ್ರಾವಸ್ಥೆಯಲ್ಲಿದ್ದುದೇ ಮುಖ್ಯ ಕಾರಣವಾಗಿದೆ. ಈ ಶತಮಾನದ ಪ್ರಾರಂಭದಿಂದಲೂ, ನೂರಕ್ಕೆ ನೂರರಷ್ಟು ಅಕ್ಷರಸ್ಥರನ್ನು ಹೊಂದಿರುವ ಬ್ರಿಟನ್ನಿನಲ್ಲಿ ಪ್ರತಿಶತ (ಶೇಕಡ) ೩೦ರಷ್ಟು ಜನರು ಮಾತ್ರ, ರಾಷ್ಟ್ರೀಯ ಗ್ರಂಥಾಲಯ ಜಾಲವು ಒದಗಿಸುತ್ತಿರುವ ಉಚಿತ ಪುಸ್ತಕ ಸೇವೆಯ ಪ್ರಯೋಜನವನ್ನು ಪಡೆಯುತ್ತಲಿದ್ದಾರೆ. ನಾವು, ಈಗ ಮಾಡುತ್ತಿರುವಂತೆ, ನಮ್ಮ ಸಾರ್ವಜನಿಕ ಗ್ರಂಥಾಲಯ ವಿಧಾನದ ಮೂಲಕ ಉಚಿತ ಪುಸ್ತಕ ಸೇವೆಯನ್ನು ಸಲ್ಲಿಸುವುದಾದರೆ, ನಮ್ಮ ಜನರು ಶೇಕಡ ೩೦ರಷ್ಟು ಜನರಲ್ಲಿ ಶೇಕಡ ೩೦ರಷ್ಟು ಜನ ಮಾತ್ರ—ಅಂದರೆ, ಶೇಕಡ ೯ರಷ್ಟು ಜನ ಮಾತ್ರ—ಇದರ ಪ್ರಯೋಜನ ಪಡೆಯುತ್ತಾರೆಂದಾಯಿತು.

ಆದ್ದರಿಂದ ರಾಷ್ಟ್ರದ ತುಂಬ ಸಾರ್ವಜನಿಕ ಪುಸ್ತಕ ಭಂಡಾರಗಳ ಜಾಲವನ್ನು ಹರಡಿ ನಾವು ಎಲ್ಲರಿಗೆ ಉಚಿತ ಪುಸ್ತಕ ಸೇವೆಯನ್ನು ಒದಗಿಸಿದ್ದೇವೆ ಎಂದು ಹೆಮ್ಮೆಪಟ್ಟುಕೊಂಡರೆ ಸಿದ್ಧಾಂತ-೨ ನಕ್ಕೀತು; ಮತ್ತು "ಎಂಥ ಅಣಕ" ಎಂದು ಹೇಳೀತು. ಅಲ್ಲೊಂದು-ಇಲ್ಲೊಂದರಂತೆ ಕೆಲವೇ ಪುಸ್ತಕ ಭಂಡಾರಗಳನ್ನು ಸ್ಥಾಪಿಸಿ, ಅಲ್ಲಿ ಅಂತಃಕರಣಪೂರ್ಣವಾದ ಸೇವೆ ಸಲ್ಲಿಸಲು ತರಬೇತಿ ಹೊಂದಿದ ಗ್ರಂಥಪಾಲಕರು ಇಲ್ಲದೆ ಹೋದರೆ ಈ ಅಣಕ ಮತ್ತೂ ಹೆಚ್ಚಾದೀತು!

೫. ಕರ್ನಾಟಕದಲ್ಲಿ ಗಮನಿಸಬೇಕಾದ ಸಮಸ್ಯೆಗಳು

ಸಿದ್ಧಾಂತ ೨ರಿಂದ ಬರಬಹುದಾದ ಆಪಾದನೆಗಳನ್ನು

ನಿವಾರಿಸಿಕೊಳ್ಳಲು ಈ ಕೆಳಗಿನ ಸಮಸ್ಯೆಗಳನ್ನು ಕರ್ನಾಟಕವು ಗಮನಿಸಬೇಕು.

೧. ಪ್ರತಿಯೊಬ್ಬರಿಗೂ ಉಚಿತ ಪುಸ್ತಕ ಸೇವೆಯನ್ನು ನೀಡಲು ಸಾರ್ವಜನಿಕ ಪುಸ್ತಕ ಭಂಡಾರಗಳ ರಾಜ್ಯಮಟ್ಟದ ಜಾಲವೊಂದನ್ನು ಸ್ಥಾಪಿಸಬೇಕು.

೨. ಸಾರ್ವಜನಿಕ ಪುಸ್ತಕ ಭಂಡಾರ ಕ್ರಮದ ಉದ್ದೇಶವನ್ನು ನಿರ್ವಹಿಸಲು ಪುಸ್ತಕಭಂಡಾರ ನಿರ್ವಹಣೆಗೆ ಅವಶ್ಯವಾದ ಸಿಬ್ಬಂದಿಯನ್ನು ಪಡೆಯಲು ಅವಕಾಶ ಕಲ್ಪಿಸಬೇಕು.

೩. ೧ ಮತ್ತು ೨ನೆಯ ವಿಭಾಗಗಳನ್ನು ಕಾಯಂಗೊಳಿಸಲು ಸಾರ್ವಜನಿಕ ಗ್ರಂಥಾಲಯ ಶಾಸನವನ್ನು ಅನುಷ್ಠಾನಕ್ಕೆ ತರಬೇಕು. ಮತ್ತು ಅದಕ್ಕೆ ಅವಶ್ಯಕವಾದ ಹಣ ದೊರೆಯುವಂತೆ ಖಚಿತಪಡಿಸಿಕೊಳ್ಳಬೇಕು.

೪. ಅನಕ್ಷರಸ್ಥರಿಗೆ ಮತ್ತು ಹೊಸದಾಗಿ ಅಕ್ಷರ ಕಲಿತವರಿಗೆ ಪುಸ್ತಕ ಸೇವೆಯನ್ನು ಒದಗಿಸಬೇಕು.

೫. ೨ನೆಯ ವಿಭಾಗದ ಉದ್ದೇಶವನ್ನು ನಿರ್ವಹಿಸುವುದಕ್ಕಾಗಿ ಅಗತ್ಯವಾದ ತಾಂತ್ರಿಕ ಸೌಲಭ್ಯಗಳನ್ನೊದಗಿಸಲು ಅವಕಾಶ ಕಲ್ಪಿಸಬೇಕು. ಮತ್ತು

೬. ಹೊಸದಾಗಿ ಅಕ್ಷರ ಕಲಿತವರ ಅಗತ್ಯಕ್ಕನುಗುಣವಾಗಿ, ವಿವಿಧ ವಿಷಯಗಳ ಮೇಲೆ ನಾನಾ ದರ್ಜೆಯ ಪುಸ್ತಕಗಳನ್ನು ತಯಾರಿಸಲು ಉತ್ತೇಜನ ಕೊಡಬೇಕು; ಅಭಿವೃದ್ಧಿಪಡಿಸಬೇಕು.

೫೧. ಮೈಸೂರು ಸಾರ್ವಜನಿಕ ಪುಸ್ತಕ ಭಂಡಾರದ ೧೯೬೫ರ ಶಾಸನ

ಆರು ಅವಶ್ಯಕತೆಗಳಲ್ಲಿ, ಮೂರನೆಯ ಆವಶ್ಯಕತೆ ಈಗಾಗಲೆ ಕರ್ಣಾಟಕದಲ್ಲಿ ಪೂರೈಕೆಗೊಂಡಿದೆ. ಮೈಸೂರು ಸಾರ್ವಜನಿಕ ಪುಸ್ತಕ ಭಂಡಾರದ ಶಾಸನ ೧೯೬೫ರಲ್ಲಿ ಜಾರಿಗೆ ಬಂದಿತು. ಈ ಸ್ಮರಣ ಸಂಚಿಕೆ ಓದುವವರಿಗೆ ಈ ಶಾಸನದ ಹುಟ್ಟಿನ ಚರಿತ್ರೆ ತಿಳಿಯಲು ಕುತೂಹಲವಿರಬಹುದು. ೧೯೫೮ರಲ್ಲಿ ಒಂದು ದಿನ ನಾನು ಮದ್ರಾಸಿನಿಂದ ಮಂಗಳೂರಿಗೆ ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದೆ: ಕರ್ನಾಟಕದ ಆಗಿನ ನ್ಯಾಯಾಂಗ ಸಚಿವ ಶ್ರೀ ವೈಕುಂಠಬಾಳಿಗ ಅವರೂ ಬೆಂಗಳೂರಿನಲ್ಲಿ ನನ್ನ ಜೊತೆಗೆ ಸೇರಿಕೊಂಡರು. ಕರ್ನಾಟಕದ ಹಿಂದಿನ ಮಂತ್ರಿಗಳೂ ನಮ್ಮಿಬ್ಬರ ಮಿತ್ರರೂ ಆದ ಶ್ರೀ ಎ. ಬಿ. ಶೆಟ್ಟಿ ಅವರು ನಮ್ಮನ್ನು ಸ್ವಾಗತಿಸಲು ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಅಲ್ಲಿ ಶ್ರೀ ಶೆಟ್ಟರು ಬಾಳಿಗ ಅವರನ್ನು ಕೇಳಿದರು: "ನಮ್ಮ ಸ್ನೇಹಿತರು ಇಲ್ಲಿಗೆ ಬಂದಿರುವ ಅವಕಾಶವನ್ನು ನಮ್ಮ ರಾಜ್ಯಕ್ಕೆ ಒಂದು ಗ್ರಂಥಾಲಯ ಶಾಸನ ಸಿದ್ಧಪಡಿಸಲು ಏತಕ್ಕೆ ಉಪಯೋಗಿಸಿಕೊಳ್ಳಬಾರದು" ಎಂದು. ಶ್ರೀ ಬಾಳಿಗ ಅವರು ಸಲಹೆಯನ್ನು ಕಾರ್ಯಕ್ಕೆ ಇಳಿಸುವ ಆಲೋಚನೆ ಮಾಡಿದರು. ೧೯೬೦ರಲ್ಲಿ ಮತ್ತೊಮ್ಮೆ, ಆಗ ಕರ್ನಾಟಕದ ವಿದ್ಯಾ ಇಲಾಖೆಯ ನಿರ್ದೇಶಕರಾಗಿದ್ದ, ಶ್ರೀ ದೇವೇಗೌಡರು ಮತ್ತು ನಾನು ದೆಹಲಿಯಿಂದ ಬೆಂಗಳೂರಿಗೆ ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದೆವು. ಅವರೂ ಕೂಡ ನನ್ನನ್ನು ಕೇಳಿದರು, 'ಕರ್ಣಾಟಕ ರಾಜ್ಯ ಸರ್ಕಾರ, ಸಾರ್ವಜನಿಕ ಗ್ರಂಥಾಲಯ ಶಾಸನ ತಯಾರಿಸಲು ತಾವು ಸಹಾಯಮಾಡಲು ಸಾಧ್ಯವಾದೀತೇ?'—ಎಂದು. ಈ ಎರಡು ಘಟನೆಗಳು, ಆಗ ಮುಖ್ಯಮಂತ್ರಿಗಳೂ ವಿದ್ಯಾ ಸಚಿವರೂ ಆಗಿದ್ದ ಶ್ರೀ ಎಸ್. ಆರ್. ಕಂಠಿ ಅವರು ಒಂದು ಪುಸ್ತಕ ಭಂಡಾರ ಸಮಿತಿಯನ್ನು ರಚಿಸುವುದಕ್ಕೆ ಅನುವು ಮಾಡಿಕೊಟ್ಟವು. ಅದಕ್ಕೆ ನನ್ನನ್ನೇ ಅಧ್ಯಕ್ಷರನ್ನಾಗಿಯೂ ನೇಮಿಸಿದರು. ಅದರ ಉದ್ದೇಶ ಸಾರ್ವಜನಿಕ ಪುಸ್ತಕ ಭಂಡಾರಗಳನ್ನು ರೂಢಿಸುವುದಕ್ಕೆ ಒಂದು ಮಸೂದೆಯನ್ನು ತಯಾರಿಸುವುದು ಮತ್ತು ಅಭಿವೃದ್ಧಿ ಕಾರ್ಯಕ್ರಮವನ್ನು ನಿಯೋಜಿಸಲು ಸಲಹೆ ನೀಡುವುದು. ಸರ್ಕಾರದ ಸೆಕ್ರೆಟೇರಿಯಟ್ ಮಟ್ಟದ ಅಧಿಕಾರಿಗಳಲ್ಲಿ ಕೆಲವರನ್ನು ಆರಿಸಿ ಸಮಿತಿಯ ಇತರ ಸದಸ್ಯರನ್ನಾಗಿ ನೇಮಿಸಿದರು. ಪುಸ್ತಕ ಭಂಡಾರದ ಶಾಸನವನ್ನು ತೃಪ್ತಿಕರವಾಗಿ ಜಾರಿಗೆ ತರುವ ಕಾರ್ಯಗಳಲ್ಲಿ ಇದರಿಂದ ಆದ ಅನುಕೂಲವೆಂದರೆ, ತಮಿಳುನಾಡು ಮತ್ತು ಆಂಧ್ರ ಪ್ರದೇಶ ರಾಜ್ಯಗಳಲ್ಲಿ ಅನುಭವಿಸಿದಂತಹ ಅಧಿಕಾರಿಗಳ ದರ್ಪದ ತೊಂದರೆಗಳು ಆದಷ್ಟು ಕಡಮೆಯಾದದ್ದು.

ಈ ಯೋಜನೆ ತೃಪ್ತಿಕರವಾಗಿ ನಡೆಯಿತು. ಮೈಸೂರು ಪುಸ್ತಕ ಭಂಡಾರಗಳ ಸಂಘ ೧೯೬೨ರಲ್ಲಿ ರೂಪಿತವಾಯಿತು. ಶ್ರೀ ಎಂ. ಆರ್. ನರಸಿಂಹ ಅಯ್ಯಂಗಾರ್ ಅವರು ಸಂಘದ ಕಾರ್ಯದರ್ಶಿಗಳಾಗಿದ್ದರು. ಅವರು

ವಿಧಾನ ಸಭೆಯ ಶಾಸಕರೊಡನೆ ಬೆರೆತು ಅವರಿಂದ ಅಪೂರ್ವವಾದ ಸಹಕಾರವನ್ನು ಗಳಿಸಿ ಅತ್ಯುತ್ತಮ ಕೆಲಸ ಮಾಡಿದರು. ಇದರ ಫಲವಾಗಿ ೧೯೬೫ರಲ್ಲಿ ಈ ಶಾಸನವನ್ನು "ಶಾಸನದ ಗ್ರಂಥ"ದಲ್ಲಿ ಸೇರಿಸಲಾಯಿತು.

ಶ್ರೀ ಫ್ರಾಂಕ್ ಎಂ. ಗಾರ್ಡನರ್ ಅವರ "ಸಾರ್ವಜನಿಕ ಗ್ರಂಥಾಲಯ ಶಾಸನ—ಒಂದು ತುಲನಾತ್ಮಕ ಅಧ್ಯಯನ (೧೯೭೧)"ದ ಪ್ರಕಾರ ಮೈಸೂರಿನ ಗ್ರಂಥಾಲಯ ಶಾಸನ ಭಾರತದ ಇತರ ಬೇರೆ ಬೇರೆ ಪ್ರಾಂತಗಳಲ್ಲಿ ಜಾರಿಯಲ್ಲಿರುವ ಶಾಸನಗಳಿಗಿಂತ ಉತ್ತಮವಾದುದು. ಈ ಶಾಸನವು ರಾಜ್ಯಾದ್ಯಂತ ಸಾರ್ವಜನಿಕ ಪುಸ್ತಕ ಭಂಡಾರದ ಜಾಲವನ್ನು ಸ್ಥಾಪಿಸಲು ಅನುಮತಿ ನೀಡುತ್ತದೆ— ಇದು ಆವಶ್ಯಕತೆ-೧. ಆದರೂ ಗ್ರಂಥಾಲಯದ ಸಿಬ್ಬಂದಿ ಪೂರೈಕೆಯ ೨ನೇ ಅಗತ್ಯದ ಸಂಬಂಧದಲ್ಲಿ ಶಾಸನದ ಅನುಷ್ಠಾನವು ದೋಷದಿಂದ ಕೂಡಿದೆ.

'ಸಹಾಯವನ್ನು ನೀಡಬಲ್ಲ ಮಾನವ ಸಿಬ್ಬಂದಿ ಸಿದ್ಧವಾದ ಮೇಲೆ ಮಾತ್ರ ಭೂಮಿಗಿಳಿದು ಬಂದು ಪ್ರಯೋಜನಕಾರಿಯಾಗುತ್ತೇನೆ'—ಎಂದು ಪರಮಾತ್ಮನು ತಾನು ರಾಮ ಮತ್ತು ಕೃಷ್ಣರ ಅವತಾರವಾಗಿ ಬರುವುದಕ್ಕೆ ಮುಂಚೆಯೇ ಹೇಳಿದ್ದ. ಕರ್ನಾಟಕ ರಾಜ್ಯ ಸರಕಾರವು, ಈ ಪೂರ್ವ ಸಿದ್ಧತೆಯ ಪ್ರಮುಖ ಅಗತ್ಯದ ಕಡೆಗೆ, ಸಾಕಷ್ಟು ಗಮನ ಕೊಡಲಿಲ್ಲ. ಗ್ರಂಥಾಲಯೋದ್ಯಮದ ಸಾಕಷ್ಟು ಸಿಬ್ಬಂದಿಯನ್ನು ರೂಢಿಸಿಕೊಳ್ಳದೆ, ಸಾಧ್ಯವಾದಷ್ಟು ಸ್ಥಳಗಳಲ್ಲಿ ಗ್ರಂಥಾಲಯಗಳನ್ನು ಆದಷ್ಟು ತ್ವರಿತವಾಗಿ ಸ್ಥಾಪಿಸಿದರೆ, ಕೆಲವು ರಾಜಕೀಯ ಮತ್ತು ಭಾವುಕ ಅನುಕೂಲಗಳು ಒದಗಬಹುದೇ ಹೊರತು ಅದು ಗ್ರಂಥಾಲಯದ ಉದ್ದೇಶಕ್ಕೆ ಸಹಾಯಕವಾಗದೆ ಭಂಗವೇ ಆಗುತ್ತದೆ. ಅಲ್ಲದೆ ಸರಕಾರವು ಈ ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಂಡಂತಿಲ್ಲ—

೧. ಗ್ರಂಥಾಲಯದ ಉದ್ಯಮವು ಬುದ್ಧಿಶಕ್ತಿಗೆ, ಬುದ್ಧಿಶಕ್ತಿಯ ಮೂಲಕ ಸೇವೆ ಸಲ್ಲಿಸುತ್ತದೆ; ಮತ್ತು

೨. ಇತರೇ ಬುದ್ಧಿವಂತರ ವೇತನ ಶ್ರೇಣಿಗಳಿಗೆ ಇವರ ವೇತನ ಶ್ರೇಣಿಗಳನ್ನು ಏರಿಸದಿದ್ದರೆ, ಸಾಕಷ್ಟು ದಕ್ಷತೆಯುಳ್ಳ ಬುದ್ಧಿವಂತರನ್ನು ಆಕರ್ಷಿಸುವುದಾಗಲೀ ಅವರನ್ನು ಉಳಿಸಿಕೊಳ್ಳಲಾಗಲೀ ಸಾಧ್ಯವಿಲ್ಲ. ಕರ್ನಾಟಕ ಸರ್ಕಾರ ಈ ಕಡೆ ಗಮನ ಹರಿಸಬೇಕು.

ಕರ್ನಾಟಕದಲ್ಲಿ ಗ್ರಂಥಾಲಯ ಶಿಕ್ಷಣದ ನಾಟಕ ಸತತವಾಗಿ ನಡೆಯುತ್ತಿದೆ.

೧೯೬೨ರಲ್ಲಿ ನನ್ನ ಸಲಹೆಯಂತೆ ಕರ್ನಾಟಕ ರಾಜ್ಯ ಸರ್ಕಾರವು ಗ್ರಂಥಾಲಯ ಶಾಲೆಯನ್ನು ತೆರೆಯಿತು. ಅಲ್ಲಿ ಗ್ರಂಥಾಲಯದ ಕೆಲಸಕ್ಕಾಗಿ ೪ ಅಥವಾ ೫ ತಂಡಗಳಿಗೆ ಶಿಕ್ಷಣ ನೀಡಲು ಆರಂಭಿಸಿತು. ಶಾಲಾ ಗ್ರಂಥಾಲಯಗಳ ಮೇಲ್ವಿಚಾರಣೆಗೆ ನೇಮಿತವಾಗುವ ಉಪಾಧ್ಯಾಯರಿಗೆ ನೀಡುವ ಪಾಠಕ್ರಮವು (ಕೋರ್ಸ್) ಆರು ತಿಂಗಳ ಅವಧಿವರೆಗೆ ಇತ್ತು.

ಗ್ರಂಥಾಲಯಗಳಲ್ಲಿ ತೀರಾ ಅಗತ್ಯವಾದ ಕೆಲಸ ಮಾಡುವ 'ಸಬ್-ಸೆಮಿಪ್ರೊಫೆಷನಲ್ಸ್'ಗಳಿಗೆ ೧೨ ವಾರಗಳ ಪಾಠಕ್ರಮ (ಕೋರ್ಸ್) ಇತ್ತು. ಇದರ ಅಗತ್ಯ ೫ ವರ್ಷಗಳ ಹಿಂದೆಯೇ ಅಂತರ್ಧಾನವಾಯಿತು! ಅಂದಿನಿಂದ ನಾನು ಸರ್ಕಾರಕ್ಕೆ ಹೇಳುತ್ತಲೇ ಬಂದಿದ್ದೇನೆ, ಈ ರೀತಿಯ 'ಅಲ್ಪ ಲಾಭದ ದಿಢೀರ್ ಫಲದ' ತೋರಿಕೆಯ ಗ್ರಂಥಾಲಯ ಶಾಲೆಗಳನ್ನು ತೆಗೆದು ಹಾಕಿ ಎಂದು. ಆದರೆ ಅದನ್ನು ಇನ್ನೂ ಮಾಡಿಲ್ಲ. ಇಂತಹ ಶಾಲೆಗಳನ್ನು ಮುಂದುವರಿಸಿಕೊಂಡು ಬರುವುದು ಅಪಾಯಕಾರಿ. ಇದು ಅಧಿಕಾರಿಗಳ ಮನಸ್ಸಿನಲ್ಲಿ ಸ್ವಯಂ ಭ್ರಾಂತಿಯನ್ನು ಹುಟ್ಟಿಸುತ್ತದೆ. ಸಾರ್ವಜನಿಕ ಪುಸ್ತಕ ಭಂಡಾರ ಸ್ಥಾಪನೆಯ ಉದ್ದೇಶಕ್ಕೆ ಶಾಸನವು ಸಾಕಷ್ಟು ಹಣವನ್ನು ಒದಗಿಸುತ್ತದೆ, ಇದು ಆಸೆ-ಆಮಿಷಗಳಿಗೆ ಮೂಲವಾದಂತೆ ತೋರುತ್ತದೆ. ಈ ಹಣದಲ್ಲಿ ಕೆಲವು ಭಾಗವನ್ನು ಗ್ರಂಥಾಲಯದ ಕಟ್ಟಡಗಳ ಖರ್ಚಿಗಾಗಿ, ಮೂಲವೆಚ್ಚವಾಗಿ ಉಪಯೋಗಿಸಲಾಗುತ್ತಿದೆ. ಇದು ಸರಿಯಲ್ಲ. ಏಕೆಂದರೆ ಇದರ ಪರಿಣಾಮವಾಗಿ, ಹೊಸ ಗ್ರಂಥಾಲಯಗಳನ್ನು ಸ್ಥಾಪಿಸಲು ಗ್ರಂಥನಿಧಿಯು ತೀರಾ ಕಡಮೆಯಾಗಿದೆಯೆಂಬುದನ್ನು, ರಾಜ್ಯಗ್ರಂಥಾಲಯ ವ್ಯವಸ್ಥೆಯು ಕಂಡುಕೊಳ್ಳುವಂತಹ ಪರಿಸ್ಥಿತಿ ಬಂದೊದಗುತ್ತದೆ. ನಮ್ಮ ರಾಷ್ಟ್ರದಲ್ಲಿ ಹಾಕುತ್ತಿರುವ ತೆರಿಗೆಯ ಕ್ರಮದ ದೃಷ್ಟಿಯಲ್ಲಿ ನೋಡಿದರೆ, ಗ್ರಂಥಾಲಯ ಕಟ್ಟಡದಂತಹ ಮೂಲ ವೆಚ್ಚಕ್ಕೆ ಪ್ರತಿ ವರ್ಷವೂ ರಾಜ್ಯ ಸರಕಾರ ಒದಗಿಸುವ ಹಣದಿಂದ ಬಳಸಬೇಕು; ಇದು ಐದನೆಯ ಆರ್ಥಿಕ ಆಯೋಗವು ಮಾಡಿರುವ ಶಿಫಾರಸುಗಳಿಗೆ

ಅನುಗುಣವಾಗಿದೆ. ಈ ವಿಷಯವನ್ನು ಕೂಡ ಕರ್ನಾಟಕ ಸರ್ಕಾರ ತೀವ್ರವಾಗಿ ಗಮನಿಸಬೇಕು.

೫೨. ಅನಕ್ಷರಸ್ಥರ ಮತ್ತು ಹೊಸ ಅಕ್ಷರಸ್ಥರ ಬಗ್ಗೆ ಅಲಕ್ಷ್ಯ

೪ ಮತ್ತು ೫ನೇ ಅವಶ್ಯಕತೆಗಳು—ಅಂದರೆ ಅನಕ್ಷರಸ್ಥರ ಹಾಗೂ ಹೊಸ ಅಕ್ಷರಸ್ಥರ ಪುಸ್ತಕ ಸೇವೆಯ ಬಗ್ಗೆ—ಕರ್ನಾಟಕದ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯು ಗಮನವನ್ನು ಹರಿಸಿದಂತೆ ಕಾಣುವುದಿಲ್ಲ. "ಪುಸ್ತಕ ಸೇವೆಯನ್ನು ಅನಕ್ಷರಸ್ಥರಿಗೆ ಮತ್ತು ನವಾಕ್ಷರಸ್ಥರಿಗೆ ಹೇಗೆ ನೀಡಬೇಕು?" ಎಂದು ಪುಸ್ತಕ ಭಂಡಾರಗಳ ಇಲಾಖೆ ಕೇಳಬಹುದು. ಇದು ಪದಶಹ ಅಸಮಂಜಸ. ಇದು ಹಾಗೆ ಹೇಳುವುದಾದರೆ, ಈ ವಿಚಾರದಲ್ಲಿ ಪುನರಾಲೋಚನೆ ಮಾಡಲೇಬೇಕು; ಮತ್ತು ಪುನಃ ತಿಳಿವಳಿಕೆ ಪಡೆದುಕೊಳ್ಳಬೇಕು. ಅದನ್ನು ಹೇಗೆ ಮಾಡಬೇಕು; ಏಕೆ ಮಾಡಲೇಬೇಕು ಎಂಬ ವಿಷಯವನ್ನು "ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯ ರಾಷ್ಟ್ರೀಯ ಜಾಲ: ತುಲನಾತ್ಮಕ ಗ್ರಂಥಾಲಯ ಶಾಸನ (ಭಾರತ, ನೇಪಾಳ, ಶ್ರೀಲಂಕ, ಇಂಗ್ಲೆಂಡ್ ಮತ್ತು ಅಮೆರಿಕ) (೧೯೭೨)" ಎಂಬ ಹೊತ್ತಿಗೆಯ E ಅಧ್ಯಾಯದಲ್ಲಿ ಸೂಚಿಸಲಾಗಿದೆ. ಬೆಂಗಳೂರಿನಲ್ಲಿ ಏಪ್ರಿಲ್ ೨೮ರಿಂದ ೩೦ರ ವರೆಗೆ "ಸಾರ್ವಜನಿಕ ಪುಸ್ತಕ ಭಂಡಾರಗಳ ವ್ಯವಸ್ಥೆ" ಬಗ್ಗೆ ನಡೆದ ಅಖಿಲ ಭಾರತ ವಿಚಾರಗೋಷ್ಠಿಯ ಸಂದರ್ಭದಲ್ಲಿ ಈ ಹೊತ್ತಿಗೆಯನ್ನು ಪ್ರಕಟಿಸಲಾಗಿದೆ. ಮೈಸೂರು ಪುಸ್ತಕ ಭಂಡಾರಗಳ ಸಂಘದ ಐದು ಜನ ಸದಸ್ಯರಿಂದ ಕೂಡಿದ ವ್ಯವಸ್ಥಾ ಸಮಿತಿ ಪ್ರಕಟಿಸಿದ ಗ್ರಂಥ ಇದು. ಈ ವಿಷಯವು ಕರ್ನಾಟಕದ ಪುಸ್ತಕ ಭಂಡಾರಗಳ ಇಲಾಖೆಯು ಕೂಡಲೆ ಕೈಗೊಳ್ಳತಕ್ಕಂತಹುದಾಗಿದೆ.

೫೩. ಹೊಸದಾಗಿ ಅಕ್ಷರ ಕಲಿತವರಿಗಾಗಿ ಪುಸ್ತಕಗಳ ಅಭಿವೃದ್ಧಿ

೫ನೆಯ ವಿಭಾಗದಲ್ಲಿ ಪ್ರಸ್ತಾಪಿಸಿರುವಂತೆ, ವಿವಿಧ ಶಾಲೆಗಳ ಹೊಸ ಅಕ್ಷರಸ್ಥರಿಗೆ ಅಗತ್ಯವಾದ, ವಿವಿಧ ವಿಷಯಗಳ ಮೇಲಿನ ವಿವಿಧ ಹಂತದ ಪುಸ್ತಕಗಳ ಉತ್ಪನ್ನದ ಅಭಿವೃದ್ಧಿ ಬಗೆಗಿನ ಅದೇ ಅಗತ್ಯದ ಬಗ್ಗೆ ಈಗ ನೀಡುವ ಗಮನಕ್ಕಿಂತ ಹೆಚ್ಚಿನ ಗಮನವನ್ನು ನೀಡಬೇಕಾದ ಅಗತ್ಯ ಬಹಳವಾಗಿದೆ. ೩೦ ವರ್ಷಗಳ ಹಿಂದೆಯೇ ಮೈಸೂರಿನ ವಯಸ್ಕರ ಶಿಕ್ಷಣ ಸಂಸ್ಥೆ ಈ ಕ್ಷೇತ್ರದಲ್ಲಿ ಸ್ವಲ್ಪ ಕೆಲಸ ಮಾಡಿತ್ತು. ಪುಸ್ತಕ ಭಂಡಾರಗಳ ಇಲಾಖೆಯು ಮೈಸೂರು ಪುಸ್ತಕ ಭಂಡಾರಗಳ ಸಂಘದೊಡನೆ ಮತ್ತು ಮೈಸೂರು ವಯಸ್ಕರ ಶಿಕ್ಷಣ ಸಂಸ್ಥೆಯೊಡನೆ ಕ್ರಿಯಾತ್ಮಕವಾಗಿ ಸಹಕರಿಸಿ ಹೊಸದಾಗಿ ಅಕ್ಷರ ಕಲಿತವರಿಗೆ ಪುಸ್ತಕಗಳನ್ನು ತಯಾರಿಸಲು ಬೆಂಬಲ ನೀಡಬೇಕು. ಹೊಸ ಅಕ್ಷರ ಜ್ಞಾನಿಗಳು ಅವರು ಸಂಪೂರ್ಣವಾಗಿ ಅಕ್ಷರಸ್ಥರಲ್ಲ ಎಂಬ ಒಂದು ಕಾರಣದಿಂದ ಆಸಕ್ತ ವಿಷಯಗಳ ಮೇಲೆ ಯಾವುದೇ ರೀತಿಯ ನಿರ್ಬಂಧವಿರಕೂಡದು. ಅಕ್ಷರಸ್ಥರು ಎದುರಿಸುವ ಸಮಸ್ಯೆಗಳನ್ನೇ ಅವರು ಎದುರಿಸುತ್ತಾರೆ. ಅಕ್ಷರಸ್ಥರು ಕೆಲಸ ಮಾಡುವ ಎಲ್ಲ ಸ್ಥಳಗಳಲ್ಲಿ ಅವರೂ ದುಡಿಯುತ್ತಾರೆ. ಆದರೆ ಅವರ ಸ್ಥಾನ ಸ್ವಲ್ಪ ಕೆಳಮಟ್ಟದ್ದಿರಬಹುದು. ಅವರ ಸರಾಸರಿ ಸಾಮಾನ್ಯ ಬುದ್ಧಿವಂತಿಕೆಯನ್ನು ಅಕ್ಷರಸ್ಥರ ಬುದ್ಧಿಮಟ್ಟದೊಡನೆ ಹೋಲಿಕೆ ಮಾಡುವಷ್ಟರಮಟ್ಟಿಗಿರುತ್ತದೆ. ಸರ್ಕಾರದ ಕೆಲಸವನ್ನು ಜಾಗರೂಕತೆಯಿಂದ ನೋಡಿಕೊಳ್ಳುವುದರಲ್ಲಿಯೂ ಆಗಾಗ ಅಗತ್ಯವಾದ ತಿದ್ದುಪಾಟು ಮಾಡುವುದರ ನಿರ್ವಹಣೆಯಲ್ಲಿಯೂ ಮತ್ತು ರಾಷ್ಟ್ರದ ಸಾಮಾಜಿಕ ಕ್ಷೇತ್ರವನ್ನು ಪ್ರಗತಿದಾಯಕವಾಗಿ ಮುಂದುವರಿಸುವಲ್ಲಿ ಅವರು ವಹಿಸಬೇಕಾದ ಮುಖ್ಯ ಪಾತ್ರ ಅಕ್ಷರಸ್ಥರ ಪಾತ್ರಕ್ಕಿಂತ ಕಡಮೆಯಾದುದೇನೂ ಅಲ್ಲ. ಹೊಸ ಅಕ್ಷರಸ್ಥರಿಗೆ ಅವಶ್ಯಕವಾದ ಪುಸ್ತಕಗಳು ಎಲ್ಲ ರೀತಿಯ ವಿಷಯಗಳನ್ನೂ ಒಳಗೊಂಡಿರಬೇಕು.

೫೪. ಹೊಸ ಅಕ್ಷರಸ್ಥರ ಪುಸ್ತಕಗಳ ಅಂತಸ್ತುಗಳು

ಹೊಸ ಅಕ್ಷರಸ್ಥರಿಗೆ ಒದಗಿಸುವ ಪುಸ್ತಕಗಳ ವೈಚಿತ್ರ್ಯವೇನೆಂದರೆ ಅಭಿಪ್ರಾಯಗಳನ್ನು ಅವರಿಗೆ ಏಕಕಾಲದಲ್ಲಿ ಎರಡು ವಿಧವಾಗಿ ತಿಳಿಸತಕ್ಕಂಥಾದ್ದು—ಒಂದನೆಯದು ಅಚ್ಚಾದ ಪದಗಳು, ಎರಡನೆಯದು ಚಿತ್ರಗಳು. ಹೊಸ ಅಕ್ಷರಸ್ಥರ ಪುಸ್ತಕಗಳ ಅಂತಸ್ತುಗಳು ವಿಷಯ ವಿಸ್ತಾರದಿಂದ ಕೂಡಿರಬೇಕು. ಅತ್ಯಂತ ಕೆಳಗಿನ ಹಂತದಲ್ಲಿ, ಚಿತ್ರಗಳಿಗಾಗಿ ಮುದ್ರಿತವಾದ ಪದಗಳ ಸರಾಸರಿ ಪ್ರಮಾಣವು ೧ ರಿಂದ ೧೦ಕ್ಕಿಂತ ಹೆಚ್ಚಾಗಿರಬಾರದು. ವರ್ಗಗಳ ಮಟ್ಟವನ್ನು ಹೆಚ್ಚಿಸುತ್ತಾ ಹೋದಂತೆ ಈ ಪ್ರಮಾಣ ಹೆಚ್ಚುತ್ತಾ ಹೋಗಬೇಕು. ಮಧ್ಯಮ ಹಂತವನ್ನು ತಲಪಿದಾಗ ಎರಡು ವಿಧಾನಗಳು ಸಾಧ್ಯ. ಪ್ರತಿ

ಯೊಂದು ಪುಟದ ಮೇಲುಭಾಗ ಚಿತ್ರದಿಂದ ಕೂಡಿದ್ದು ಕೆಳಭಾಗದಲ್ಲಿ ಅಚ್ಚಾದ ಪದಗಳಿರಬೇಕು. ಅದಲ್ಲದಿದ್ದರೆ ಒಂದು ಪುಟದಲ್ಲಿ ಅಚ್ಚಾದ ಪದಗಳಿದ್ದು ಆದರ ಎದುರು ಪುಟದಲ್ಲಿ ಅದಕ್ಕೆ ಸಂಬಂಧಿಸಿದ ಚಿತ್ರಗಳಿರಬೇಕು. ಅಲ್ಲಿಂದ ಮೇಲ್ಮಟ್ಟಕ್ಕೆ ಮುಂದುವರಿದಂತೆ ಪದಗಳಿಗೂ ಚಿತ್ರಗಳಿಗೂ ಇರುವ ಪ್ರಮಾಣ ಹೆಚ್ಚುತ್ತಾ ಹೋಗಿ ಕೊನೆಗೆ ೧೦ ರಿಂದ ೧೫ ರ ವರೆಗಿನ ಅಧಿಕ ಪ್ರಮಾಣವನ್ನು ಮುಟ್ಟಬಹುದು. ಇಂಥ ಮುಖ್ಯವಾದ ಕಾರ್ಯವನ್ನು ಪುಸ್ತಕೋದ್ಯಮದ ಖುಷಿಗಾಗಲೀ ಅದರ ಮರ್ಜಿಗಾಗಲೀ ಬಿಡಕೂಡದು. ಇದು ಅಷ್ಟೊಂದು ಲಾಭದಾಯಕವಾದುದಲ್ಲವಾದ್ದರಿಂದ ಅದರಲ್ಲಿ ಇವರಿಗೆ ಆಸಕ್ತಿ ಹುಟ್ಟಲಿಕ್ಕಿಲ್ಲ. ಈ ಕೆಲಸವನ್ನು ಸಾರ್ವಜನಿಕ ಪುಸ್ತಕ ಭಂಡಾರದ ಕಾನೂನಿನ ಪರಿಧಿಯಲ್ಲಿ ಸಾರ್ವಜನಿಕ ಉದ್ಯಮದಂತೆ ಕೈಕೊಳ್ಳಬೇಕು.

೫೫. ಮೂರು ಮಾರ್ಗಗಳುಳ್ಳ ಪುಸ್ತಕಗಳು

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ನಾನು ಲಂಡನ್ನಿನ ಛಾಸರ್ ಭವನದಲ್ಲಿ ಬ್ರಿಟಿಷ್ ಪುಸ್ತಕಾಲಯಗಳ ಸಂಘದ ಸದಸ್ಯರನ್ನು ಕುರಿತು ಮಾತನಾಡುತ್ತಿದ್ದೆ. ಕೆಳ ಅಂತಸ್ತಿನ ಹೊಸ ಅಕ್ಷರಸ್ಥರಿಗೆ ಅಗತ್ಯವಾದ ಮೂರು ಮಾರ್ಗಾನುಸರಣೆಯ ಹೊಸ ವಿಧಾನದ ಪುಸ್ತಕವೊಂದರ ಕಲ್ಪನೆಯು, ನನ್ನ ಭಾಷಣದ ಮಧ್ಯೆ, ನನಗೆ ಹೊಳೆಯಿತು. "ಎರಡು ಮಾರ್ಗಗಳುಳ್ಳ—ಎಂದರೆ ಅಚ್ಚಾದ ಪದಗಳ ಮತ್ತು ಚಿತ್ರಗಳ—ಪುಸ್ತಕಗಳ ಜೊತೆಗೆ, ಪುಸ್ತಕದ ಕೊನೆಯಲ್ಲಿ ಅಂಟಿಸಿದ ಒಂದು ಸಣ್ಣ ಚೀಲದಲ್ಲಿ ಧ್ವನಿ ಮುದ್ರಿಸಿಕೊಂಡ ಟೇಪಿನ ಚೂರನ್ನೋ ಅಥವಾ ಗ್ರಾಮಫೋನಿನ ತಟ್ಟೆಯನ್ನೋ ಇಟ್ಟಿರಬೇಕು. ಈ ಧ್ವನಿ ಮುದ್ರಣವು ಅಚ್ಚಾದ ಪದಗಳು ಮತ್ತು ಚಿತ್ರಗಳು ಹೊರಹೊಮ್ಮಿಸುವ ಭಾವನೆಯನ್ನು ಪ್ರತಿಧ್ವನಿಸುವಂತಿರಬೇಕು." ಎಂಬುದಾಗಿತ್ತು. ಅದಾದ ಒಂದು ವರ್ಷದ ನಂತರ ಬ್ರಿಟನ್ನಿನ ಒಬ್ಬ ಸಾಹಸಿ ಮುದ್ರಣಕಾರ ಅಂಥ ಪುಸ್ತಕಗಳನ್ನು ಹೊರತಂದಿದ್ದನೆಂದು ನಾನು ಕೇಳಿದೆ. ಅದನ್ನು ಪ್ರಕಟಿಸುವುದು ಕಷ್ಟಕರವೇನೂ ಅಲ್ಲ. ಆದರೆ ಅಂಥ ಪುಸ್ತಕಗಳಿಗೆ ಮಾರುಕಟ್ಟೆ ಇನ್ನೂ ಸಿದ್ಧವಾಗಿಲ್ಲದಿರುವುದರಿಂದ, ಗ್ರಂಥೋದ್ಯಮಿಗಳು ಅಂಥ ಪ್ರಕಟಣೆಗಳನ್ನು ಕೈಗೊಳ್ಳುವುದಿಲ್ಲ. ಇದು ಗ್ರಂಥಾಲಯಗಳ ಮತ್ತು ವಯಸ್ಕರ ವಿದ್ಯಾಭ್ಯಾಸದ ಇಲಾಖೆಗಳು ಕೈಕೊಳ್ಳಬೇಕಾದ ಕಾರ್ಯ.

೬. ಕನ್ನಡ ಸಾಹಿತ್ಯ ಪರಿಷತ್ತಿನ ಅದ್ಭುತ ಕಾರ್ಯ

ನಮ್ಮ ಸ್ವಾತಂತ್ರ್ಯದ ಬೆಳ್ಳಿ ಹಬ್ಬದ ವರ್ಷದಲ್ಲಿ ಜನರಲ್ಲಿ ಮೂಡುವ ಹೊಸ ಉತ್ಸಾಹವನ್ನು ಗ್ರಂಥಾಲಯ ಸೇವಾ ಕಾರ್ಯದ ಉದ್ದೇಶ ಸಾಧನೆಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಬಳಸಿಕೊಳ್ಳುತ್ತಿರುವುದು ನಿಜವಾಗಿಯೂ ಸೂಕ್ತವಾದ ಕ್ರಮವಾಗಿದೆ. ಸಂಚಾರಿ ಪುಸ್ತಕಾಲಯಗಳನ್ನು ಕರ್ನಾಟಕ ರಾಜ್ಯಾದ್ಯಂತ ವರ್ಷಪೂರ್ಣ ತಿರುಗಾಡಿಸುವುದು ಸಮಯೋಚಿತವಾದ ಯೋಜನೆಯಾಗಿದೆ. ಈ ಯೋಜನೆಯು ಅತ್ಯುತ್ತಮ ಫಲದಾಯಕವಾಗುವಂತೆಮಾಡಲು ಇಲ್ಲಿ ಕೆಲವು ಸಲಹೆಗಳಿವೆ :

೧. ಉದಾತ್ತ ಭಾವನೆಯಿಂದ, ಪುಸ್ತಕಗಳ ಬಗ್ಗೆ ವಿವರಿಸಬೇಕು. ಇಂಥ ವಿವರಣೆಗೆ "ಪುಸ್ತಕಗಳು ಮತ್ತು ಸಂಬಂಧಪಟ್ಟ ವಾಚನಾಸಾಮಗ್ರಿಗಳು"ಎಂಬ ಪದಗುಚ್ಛವನ್ನು ಇತ್ತೀಚೆಗೆ ಬಳಸಲಾಗುತ್ತಿದೆ. ಸಂಬಂಧಪಟ್ಟ ವಾಚನಾ ವಸ್ತುಗಳೆಂದರೆ ನಿಯತಕಾಲಿಕ ಪತ್ರಿಕೆಗಳು; ಭೂ ಮತ್ತು ಚಿತ್ರ ಪಟಗಳು, ಅಲ್ಲದೆ, ಗ್ರಾಮಫೋನ್ ರಿಕಾರ್ಡುಗಳು ಮತ್ತು ಟೇಪ್ ರಿಕಾರ್ಡುಗಳು ಮೊದಲಾದುವುಗಳನ್ನೊಳಗೊಂಡ ಶ್ರವಣ–ದರ್ಶನ ಸಾಮಗ್ರಿಗಳು.

೨. ಗ್ರಂಥವಾಹನವು, ತಾನು ತೆರಳಿದ ಪ್ರತಿ ಸ್ಥಳದಲ್ಲಿ ಇಡೀ ದಿನವಲ್ಲದಿದ್ದರೂ ಕಡೆಯ ಪಕ್ಷ ಅರ್ಧದಿನವಾದರೂ ನಿಲ್ಲಬೇಕು.

೩. ಮುಕ್ತದ್ವಾರ ಗ್ರಂಥಾಲಯದಂತೆ ಸೇವೆ ಸಲ್ಲಿಸಲು ಅನುಕೂಲವಾಗುವಂತೆ, ಗ್ರಂಥ ವಾಹನವನ್ನು ರೂಪಿಸಬೇಕು. ಮದರಾಸಿನ ಗ್ರಂಥಾಲಯ ಸಂಸ್ಥೆಯವರು ಇಂಥ ಗಾಡಿಯೊಂದರ ರೂಪರೇಷೆಗಳನ್ನು ಮುದ್ರಿಸಿದ್ದಾರೆ. [ಇದರ ಪ್ರತಿಯನ್ನು ಶ್ರೀ ಕುಮಾರ್ ಖಜಾಂಚಿ, ಮದರಾಸ್ ಗ್ರಂಥಾಲಯದ ಸಂಘ, ಬ್ರಿಟಿಷ್ ಕೌನ್ಸಿಲ್–೧೫೦A ಮೌಂಟ್ ರೋಡ್, ಮದ್ರಾಸ್-೨. ತಮಿಳುನಾಡು ಇವರಿಂದ ಪಡೆಯಬಹುದು]

೪. ಜನರು, ತಮಗಿಷ್ಟವಾದ ಪುಸ್ತಕ-ಪತ್ರಿಕೆಗಳನ್ನು ತೆಗೆದುಕೊಂಡು ಓದುವುದಕ್ಕೆ ಸಹಾಯ ಮಾಡುವ ಗೌರವ ಗ್ರಂಥಪಾಲಕರೊಬ್ಬರು, ಅಂತಹ ಗ್ರಂಥ ವಾಹನದ ವಹಿವಾಟನ್ನು ವಹಿಸಿಕೊಳ್ಳಬೇಕು.

೫. ಈ ಸಣ್ಣ ಸಂಚಾರೀ ಗ್ರಂಥಾಲಯವು, ಗೊತ್ತಾದ ಸ್ಥಳಕ್ಕೆ ಬಂದಕೂಡಲೆ ಸಂಗೀತದ ರಿಕಾರ್ಡುಗಳನ್ನು ಹಾಕಬೇಕು. ಇದರಿಂದ ಆ ಸ್ಥಳದ ಜನ ಗ್ರಂಥಾಲಯವನ್ನು ನೋಡಲು ಬರುವುದಕ್ಕೆ ಅನುಕೂಲವಾಗುತ್ತದೆ.

೬. ಚಿತ್ರಪಟಗಳನ್ನೂ ಭೂಪಟಗಳನ್ನೂ ಅನುಕೂಲವಾದ ರೀತಿಯಲ್ಲಿ, ಜನ ಅದನ್ನು ಪರಿಶೀಲಿಸಲು ಸಾಧ್ಯವಾಗುವಂತೆ ನೇತುಹಾಕಬೇಕು.

೭. ಯಾರಾದರೊಬ್ಬರಿಂದ ಪುಸ್ತಕಗಳ ವಿವಿಧ ಮೌಲ್ಯಗಳನ್ನು ಕುರಿತು ಸ್ವಾರಸ್ಯವಾಗಿ ಮನ ಮುಟ್ಟುವಂತೆ, ಜನರಲ್ಲಿ ಆಸಕ್ತಿ ಹುಟ್ಟಿಸುವಂತೆ ಪುಸ್ತಕಗಳನ್ನು ಎಲ್ಲರೂ ಓದಲು ಪ್ರೋತ್ಸಾಹಿಸುವಂತೆ ಭಾಷಣ ಮಾಡಿಸಬೇಕು. ಆನಂತರ ಅಲ್ಲಿ ಸೇರಿದ ಜನರೊಡನೆ ಪುಸ್ತಕದ ವಿಚಾರದಲ್ಲಿ ಚರ್ಚೆಗಳನ್ನು ಏರ್ಪಡಿಸಬೇಕು.

೮. ಪ್ರತಿಯೊಂದು ಸ್ಥಳಕ್ಕೆ ಭೇಟಿ ಕೊಟ್ಟಾಗಲೂ ಮುಖ್ಯ ಘಟನೆಗಳನ್ನೂ ಅನುಭವಗಳನ್ನೂ ಮೊದಲೇ ಹಾಕಿಕೊಂಡ ಯೋಜನೆಯ ಪ್ರಕಾರ ಶೇಖರಿಸಬೇಕು—ಅಂಕಿ ಅಂಶಗಳೊಡನೆ. ಆನಂತರ ಈ ಎಲ್ಲ ಅಂಕಿ—ಅಂಶಗಳನ್ನೂ ಕ್ರೋಢೀಕರಿಸಬೇಕು. ಇದೆಲ್ಲದರಿಂದ ದೊರೆತ ಫಲಿತಾಂಶವನ್ನು, ಶೈಕ್ಷಣಿಕ ದೃಷ್ಟಿಯಿಂದ ಪ್ರಕಾಶನಗೊಳಿಸಬೇಕು.

೭. ಸಿಂಹಾವಲೋಕನ

ನಮ್ಮ ಸ್ವಾತಂತ್ರ್ಯದ ಬೆಳ್ಳಿಹಬ್ಬದ ವರ್ಷವು ಕಾಲದ ದೃಷ್ಟಿಯಿಂದ ಬಹು ಮುಖ್ಯವಾದ ಅಂಶವಾಗಿದೆ. ನಾವು ಅದರ ಉತ್ತುಂಗದತ್ತ ಹತ್ತುತ್ತಿದ್ದೇವೆ. ಅಲ್ಲಿಂದ ನಾವು ಹಿಂದಿನದನ್ನೂ, ಮುಂದಿನದನ್ನೂ ಅವಲೋಕಿಸುತ್ತೇವೆ. ನಾವು ಹಿಂದೆ ಸಾಧಿಸಿದುದನ್ನು ನೋಡುವಾಗ, ಮಾತಿಗೆ ಹೇಳುವುದಾದರೆ 'ಸಾಮಾಜಿಕ ಲಾಭ ನಷ್ಟದ' ಲೆಕ್ಕವನ್ನು ತೆಗೆಯಲು ಪ್ರಯತ್ನಿಸುತ್ತೇವೆ; ಕರ್ನಾಟಕದಲ್ಲಿ ಗ್ರಂಥಾಲಯ ವಿಜ್ಞಾನದ ೨ನೇ ಸಿದ್ಧಾಂತದ ಸಾಹಸವನ್ನೂ ಗಮನಿಸುತ್ತೇವೆ. ಭವಿಷ್ಯದತ್ತ ನೋಡುವಾಗ, ಮುಂಬರುವ ೨೫ ವರ್ಷಗಳಲ್ಲಿ ೨ನೇ ಸಿದ್ಧಾಂತವು ಏನೆಲ್ಲ ಸಾಧಿಸಬಹುದೆಂಬ ನಿರೀಕ್ಷಣೆಯ ಮೇಲೆ, ಯೋಜನೆಯನ್ನು ರೂಪಿಸಿಕೊಳ್ಳಬೇಕು. ಈ ರೀತಿಯಲ್ಲಿ ನಾವು ನಮ್ಮ ಸಾಮಾಜಿಕ ಆಯವ್ಯಯವನ್ನು ರೂಪಿಸಿಕೊಳ್ಳಬೇಕು. ಹಾಗೆಂದು ಹೇಳುವುದಾದರೆ, ಮುಂಬರುವ ೨೫ ವರ್ಷಗಳಲ್ಲಿ, ಗ್ರಂಥಾಲಯ ವಿಜ್ಞಾನದ ದ್ವಿತೀಯ ಸಿದ್ಧಾಂತದ ಪ್ರಗತಿಯಿಂದ ಅತ್ಯುತ್ತಮ ಫಲವನ್ನು ಪಡೆಯುವ ರೀತಿಯಲ್ಲಿ ಇದು ಇರಬೇಕು. ಮತ್ತು ಅವನ್ನು ಕಾರ್ಯಗತಮಾಡಲು ಕೈಗೊಳ್ಳುವ ಕ್ರಮಗಳೇನು ಎಂಬುದನ್ನು ಆಲೋಚಿಸಬೇಕು.

"ಓ ಪುಸ್ತಕಗಳೇ, ನೀವು ದೇವಮಂದಿರದ ಚಿನ್ನದ ಪಾತ್ರೆಗಳು ;
ಕೈಯಲ್ಲಿ ಹಿಡಿಯಬಹುದಾದ ಪ್ರಜ್ವಲಿಸುವ ಜ್ಯೋತಿಗಳು."

—ರಿಚರ್ಡ್ ಡೀ ಬರಿ

ಪುಸ್ತಕಗಳು, ಸಂತನಿರುವ ಅಥವಾ ಇದ್ದಾನೆಂದು ನಂಬಲಾದ ದೇವಮಂದಿರಗಳು.

—ಫ್ರಾನ್ಸಿಸ್ ಬೇಕನ್

ಮೈಸೂರು ರಾಜ್ಯದಲ್ಲಿ ಶಾಲಾ ಪುಸ್ತಕ ಭಂಡಾರಗಳು

● ಎ. ಸಿ. ದೇವೇಗೌಡ

ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿಗೆ ಸಂಬಂಧಿಸಿದ ರಾಷ್ಟ್ರೀಯ ಪರಿಷತ್ತು (ಕೌನ್ಸಿಲ್), ಕೆಲವು ವರ್ಷಗಳ ಹಿಂದೆ, ಸೆಕೆಂಡರೀ ಶಾಲೆಗಳ ಬಗ್ಗೆ ಮೋಜಣಿ (ಸರ್ವೆ) ನಡೆಸಿತು. ಶೇಕಡ ೧೦ರ ಮಾದರಿಯ ಆಧಾರದ ಮೇಲೆ ನಡೆದ ಈ ಮೋಜಣಿಯಿಂದಾಗಿ, ನಮ್ಮ ಶಾಲಾ ಪುಸ್ತಕ ಭಂಡಾರಗಳ ಬಗ್ಗೆ, ಈ ಕೆಳಗಿನ ಅಂಶಗಳು ಹೊರಬಿದ್ದವು.

೧. ಕೇವಲ ಶೇಕಡ ೨೫ರಷ್ಟು ಶಾಲೆಗಳಲ್ಲಿ ಪುಸ್ತಕ ಭಂಡಾರಕ್ಕಾಗಿಯೇ ಪ್ರತ್ಯೇಕ ಕೋಣೆಗಳನ್ನು ನಿರ್ಮಿಸಲಾಗಿದೆ. ಶೇಕಡ ೩೬ರಷ್ಟು ಶಾಲೆಗಳಲ್ಲಿ ತರಗತಿ ಕೋಣೆಗಳನ್ನೇ ಪರಿವರ್ತಿಸಿ ಪುಸ್ತಕ ಭಂಡಾರಕ್ಕಾಗಿ ಉಪಯೋಗಿಸಲಾಗುತ್ತಿದೆ. ಶೇಕಡ ೩೪ರಷ್ಟು ಶಾಲೆಗಳ ಪುಸ್ತಕ ಭಂಡಾರಗಳು ಸೂಕ್ತವಲ್ಲದ ಬೇರೆ ಸ್ಥಳಗಳಲ್ಲಿವೆ.

೨. ಶೇಕಡ ೭ರಷ್ಟು ಶಾಲೆಗಳ ಪುಸ್ತಕ ಭಂಡಾರದ ಕೋಣೆಗಳಲ್ಲಿ ೫೦ಕ್ಕಿಂತ ಹೆಚ್ಚುಮಂದಿ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಶೇ. ೪೨ರಷ್ಟು ಶಾಲೆಗಳಲ್ಲಿ ೨೦ಕ್ಕಿಂತಲೂ ಕಡಮೆ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಶೇಕಡ ೨೮ ಶಾಲೆಗಳಲ್ಲಿ ೨೦ರಿಂದ ೫೦ರಷ್ಟು ವಿದ್ಯಾರ್ಥಿಗಳಿಗೆ ಅವಕಾಶವಿದೆ.

೩. ಕೇವಲ ಶೇಕಡ ೭-೧/೨ಯಷ್ಟು ಶಾಲೆಗಳಲ್ಲಿ ಪ್ರತ್ಯೇಕ ವಾಚನಾಲಯಗಳಿವೆ. ಶೇ. ೩೮ರಷ್ಟು ಶಾಲೆಗಳ ಪುಸ್ತಕ ಭಂಡಾರದ ಕೋಣೆಗಳಲ್ಲಿಯೇ ವಾಚನಾಲಯಗಳನ್ನು ಅಳವಡಿಸಲಾಗಿದೆ. ಇನ್ನು ಶೇ. ೨೭ರಷ್ಟು ಶಾಲೆಗಳಲ್ಲಿ ಜಗಲಿ ಮೊದಲಾದ ಸ್ಥಳಗಳಲ್ಲಿಯೇ ವಾಚನಾಲಯಗಳನ್ನು ಏರ್ಪಡಿಸಲಾಗಿದೆ.

೪. ಭಾರತದ ಪ್ರೌಢಶಾಲೆಗಳ ಪುಸ್ತಕ ಭಂಡಾರಗಳಲ್ಲಿ ಸರಾಸರಿ ೧೭೭೫ ಪುಸ್ತಕಗಳಿವೆ.

೫. ಕೇವಲ ಶೇಕಡ ೨೮ರಷ್ಟು ಶಾಲೆಗಳಲ್ಲಿ ಪ್ರತ್ಯೇಕವಾಗಿ ತರಗತಿ ಪುಸ್ತಕ ಭಂಡಾರಗಳಿವೆ.

೬. ಕೇವಲ ಶೇ. ೪ರಷ್ಟು ಶಾಲೆಗಳು ಮಾತ್ರ ತಮ್ಮ ಪುಸ್ತಕ ಭಂಡಾರಗಳನ್ನು ಭಾನುವಾರ ಮತ್ತು ರಜಾ ದಿನಗಳಲ್ಲಿ ತೆರೆದಿರುತ್ತವೆ.

೭. ಶೇಕಡ ೪೩ ಶಾಲೆಗಳಲ್ಲಿ, ವಿರಾಮ ಕಾಲದಲ್ಲಿ ಮಾತ್ರ, ಪುಸ್ತಕ ಭಂಡಾರಗಳನ್ನು ಬಳಸಲು ಅವಕಾಶ ಕಲ್ಪಿಸಲಾಗುತ್ತಿದೆ. ಶೇ. ೫೨ರಷ್ಟು ಶಾಲೆಗಳಲ್ಲಿ, ವಿದ್ಯಾರ್ಥಿಗಳಿಗೆ, ಯಾವ ಕೆಲ

ಸವೂ ಇಲ್ಲದ ಸಂದರ್ಭಗಳಲ್ಲಿ ಮಾತ್ರ ಪುಸ್ತಕ ಭಂಡಾರಗಳನ್ನು ಉಪಯೋಗಿಸಲು ಅವಕಾಶ ಕೊಡಲಾಗುತ್ತಿದೆ.

೮. ಒಂದು ಶಾಲೆಯು, ಚಂದಾ ಹಣವನ್ನೀಯುವುದರ ಮೂಲಕ, ಪಡೆಯುವ ನಿಯತಕಾಲಿಕಗಳ ಸಂಖ್ಯೆ ಸರಾಸರಿ ೧೦ ಮಾತ್ರ. ಉಪಾಧ್ಯಾಯರಿಗೆ ಬೇಕಾಗುವ ಔದ್ಯೋಗಿಕ (ಪ್ರೊಫೆಷನಲ್) ನಿಯತಕಾಲಿಕಗಳು ಸರಾಸರಿ ಕೇವಲ ೨: ವೃತ್ತ ಪತ್ರಿಕೆಗಳು ಸರಾಸರಿ ೩–ಅಷ್ಟೆ!

೯. ಕೇವಲ ಶೇ. ೮ರಷ್ಟು ಶಾಲೆಗಳಲ್ಲಿ ಪೂರ್ಣ ಕಾಲದ ಗ್ರಂಥಪಾಲಕ (ಲೈಬ್ರೇರಿಯನ್)ರಿರುತ್ತಾರೆ. ಪೂರ್ಣ ಕಾಲದ ಗ್ರಂಥಪಾಲಕರಲ್ಲಿ ಶೇಕಡ ೮೮ರಷ್ಟು ಮಂದಿ ಪದವೀಧರರಲ್ಲದವರು; ಶೇ. ೧೩ರಷ್ಟು ಮಂದಿ ಪದವೀಧರರು ಮತ್ತು ಶೇ. ೩ರಷ್ಟು ಮಂದಿ ಸ್ನಾತಕೋತ್ತರ ಪದವೀಧರರು. ಇವರಲ್ಲಿ ಶೇ. ೬೯ ಮಂದಿ ಗ್ರಂಥಪಾಲನಾ ತರಬೇತಿ ಹೊಂದಿದವರಾಗಿದ್ದಾರೆ. ಉಳಿದ ಶೇ. ೩೧ ಮಂದಿ ತರಬೇತಿ ಹೊಂದದವರಾಗಿದ್ದಾರೆ. ಶೇ. ೩೩ ಶಾಲೆಗಳಲ್ಲಿ ಉಪಾಧ್ಯಾಯರೂ ಶೇ. ೧೧ರಷ್ಟು ಶಾಲೆಗಳಲ್ಲಿ ಗುಮಾಸ್ತರೂ ಮತ್ತೆ ಶೇ. ೧೨ ಶಾಲೆಗಳಲ್ಲಿ ಬೇರೆ ಯಾರಾದರೊಬ್ಬರೂ ಅಪೂರ್ಣ ಕಾಲಾವಧಿಯ (ಪಾರ್ಟ್–ಟೈಮ್) ಗ್ರಂಥ ಪಾಲಕರಾಗಿ ಕೆಲಸ ಮಾಡುತ್ತಾರೆ. ಉಳಿದ ಶೇ. ೩೬ ಶಾಲೆಗಳಲ್ಲಿ ಗ್ರಂಥಪಾಲಕರೇ ಇರುವುದಿಲ್ಲ.

ದೆಹಲಿಯಲ್ಲಿರುವ, ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿಗೆ ಸಂಬಂಧಿಸಿದ, ರಾಷ್ಟ್ರೀಯ ಪರಿಷತ್ತು ಸೆಕೆಂಡರೀ ಶಾಲೆಗಳ ಮೇಲ್ವಿಚಾರಣೆ ಮತ್ತು ಪರಿಶೀಲನೆಗಾಗಿ ಕೆಲವೊಂದು ಮೌಲ್ಯಮಾಪನ ಪ್ರಮಾಣಗಳನ್ನು ರೂಪಿಸಿತು. ಇದರ ಸಹಾಯದ ಮೇಲೆ ಭಾರತದ ೧೨ ರಾಜ್ಯಗಳ ಸುಮಾರು ೨೦೦ ಸೆಕೆಂಡರೀ ಶಾಲೆಗಳಲ್ಲಿ ಮೌಲ್ಯಮಾಪನ ಮಾಡಲಾಯಿತು. ಮೌಲ್ಯಮಾಪನ ದಸ್ತಾವೇಜಿನಲ್ಲಿ (ಇನ್‌ಸ್ಟ್ರುಮೆಂಟ್) ಶಾಲಾ ಪುಸ್ತಕ ಭಂಡಾರಗಳು ಮತ್ತು ಅದರ ಬಳಕೆಯ ವಿಚಾರವೂ ಒಂದಾಗಿತ್ತು. ಈ ಪರಿಶೀಲನಾ ಅಧ್ಯಯನದಿಂದಾಗಿ ಕೆಲವು, ಮನೋವ್ಯಾಕುಲತೆಯನ್ನುಂಟುಮಾಡುವಂತಹ ಸಂಗತಿಗಳು ಹೊರಬಿದ್ದವು. ಅನೇಕ ಶಾಲೆಗಳಲ್ಲಿ ಪುಸ್ತಕ ಭಂಡಾರಗಳು ಕೇವಲ ಪುಸ್ತಕಗಳ ರಾಶಿ–ಅಷ್ಟೆ! ಇವುಗಳಲ್ಲಿ ಅನೇಕವು ಓಬೀರಾಯನ ಕಾಲದವು. ಮತ್ತೆ ಕೆಲವು ಕಡೆ ಪುಸ್ತಕಗಳನ್ನು ಕಪಾಟುಗಳಿಂದ ಕದಲಿಸಿಯೇ ಇರುವುದಿಲ್ಲ! ಬಹುತೇಕ ಶಾಲೆಗಳಲ್ಲಿ ಉಪಾಧ್ಯಾಯರೇ ಆಗಲೀ ವಿದ್ಯಾರ್ಥಿಗಳೇ ಆಗಲೀ ಪುಸ್ತಕಗಳನ್ನು ಬಳಸುವುದೇ ವಿರಳ. ಸಂದರ್ಭಸೇವಾ (ರೆಫೆರೆನ್ಸ್) ಪುಸ್ತಕಗಳನ್ನಂತೂ ಮುಟ್ಟಿಯೇ ಇರುವುದಿಲ್ಲ. ಪುಸ್ತಕ ಭಂಡಾರಗಳನ್ನು ಬಳಸುವ ಬಗ್ಗೆ, ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ, ಶಾಲೆಗಳು, ಪ್ರೇರಣೆಯನ್ನೇ ಮಾಡುವುದಿಲ್ಲ. ವಾಸ್ತವವಾಗಿ ಹೇಳಬೇಕೆಂದಾದರೆ, ಶೈಕ್ಷಣಿಕ ವಿಧಾನವು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ ಸಂದರ್ಭ ಸೇವಾ ಗ್ರಂಥಗಳ ನೆರವನ್ನು ಪಡೆಯಲೇಬೇಕಾದಂತಹ ಸವಾಲಿನ ಪರಿಸ್ಥಿತಿಯನ್ನು ಉಂಟುಮಾಡುತ್ತಿಲ್ಲ. ಶಾಲೆಗಳ ಮೌಲ್ಯಮಾಪನದ ಅನೇಕ ಸಂದರ್ಭದಲ್ಲಿ ಹೊರಬಿದ್ದ ಮತ್ತೊಂದು ಮುಖ್ಯವಾದ ಅಂಶವೆಂದರೆ—ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ತಮ್ಮ ಶಾಲಾ ಪುಸ್ತಕ ಭಂಡಾರದಲ್ಲಿರುವ ಉಪಯುಕ್ತ ಪುಸ್ತಕಗಳ, ನಿಯತಕಾಲಿಕಗಳ ಹಾಗೂ ಪತ್ರಿಕೆಗಳ ಪರಿಚಯವೇ ಆಗಿರುವುದಿಲ್ಲ!! ಇನ್ನೊಂದು ಆತ್ಯಾಶ್ಚರ್ಯಕರ ಸಂಗತಿಯೆಂದರೆ, ತಮ್ಮ ಶಾಲಾ ಪುಸ್ತಕ ಭಂಡಾರದ ಮೇಜುಗಳ ಮೇಲೆ ಬಿದ್ದಿರುವ ಪತ್ರಿಕೆಗಳ ಹಾಗೂ ನಿಯತಕಾಲಿಕಗಳ ಹೆಸರುಗಳು ಕೂಡ ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಗೊತ್ತಿರುವುದಿಲ್ಲ!

ಪುಸ್ತಕ ಭಂಡಾರಗಳಲ್ಲಿ ವರ್ಗೀಕರಣ ಮಾಡಿ ಜೋಡಿಸಿರುವುದಂತೂ ತುಂಬಾ ಅಪರೂಪ. ಹೀಗಾಗಿ, ಯಾರಾದರೂ, ತಮಗೆ ಬೇಕಾದ ಪುಸ್ತಕವನ್ನು ಆರಿಸಿ ತೆಗೆದುಕೊಳ್ಳಲು ಕಷ್ಟವಾಗುತ್ತದೆ. ಸಾಮಾನ್ಯವಾಗಿ, ನಿಷ್ಪ್ರಯೋಜಕವೂ ಅಕಾಲಿಕವೂ ಆದ ಪುಸ್ತಕಗಳನ್ನು ಉಪಯುಕ್ತವಾದ ಪುಸ್ತಕಗಳ ಜೊತೆಗೆ ಬೆರೆಸಿರುವುದು ಕಂಡುಬರುತ್ತದೆ.

ಶೈಕ್ಷಣಿಕ ಉದ್ದೇಶಕ್ಕಾಗಿ, ಪುಸ್ತಕ ಭಂಡಾರದ ಉಪಯೋಗವನ್ನೊಳಗೊಂಡಿರುವ ವಿಧಾನವನ್ನು ಅನುಸರಿಸುವ ಶಾಲೆಗಳು ಇಲ್ಲವೇ ಇಲ್ಲವೆಂದು ಹೇಳಬಹುದು. ಪರೀಕ್ಷೆಗಳಲ್ಲಿ ಕೂಡ ಕೇವಲ ಪಠ್ಯಪುಸ್ತಕಗಳಿಂದ ಪ್ರಶ್ನೆಗಳನ್ನು ಆಯ್ದು ಕೊಡಲಾಗುತ್ತಿದೆಯೇ ವಿನಾ ಪುಸ್ತಕ ಭಂಡಾರದಲ್ಲಿರುವ ಸಂದರ್ಭ ಸೇವಾ (ರೆಫೆರೆನ್ಸ್) ಪುಸ್ತಕಗಳಿಂದ ಪ್ರಶ್ನೆಗಳನ್ನು ಆಯ್ದು ಕೊಡುತ್ತಿಲ್ಲ.

ಪುಸ್ತಕ ಭಂಡಾರ ಭೂಯಿಷ್ಠವಾದ ಶಿಕ್ಷಣ

ಇಂತಹ ಪರಿಸ್ಥಿತಿಗೆ ಕಾರಣಗಳೇನೆಂಬುದನ್ನು ಪತ್ತೆ ಹಚ್ಚಲು ಕಷ್ಟವೇನೂ ಆಗಲಾರದು. ಶೈಕ್ಷಣಿಕ ವಿಧಾನದಲ್ಲಿ ಪುಸ್ತಕಭಂಡಾರಗಳ ಸ್ಥಾನ ಮತ್ತು ಪ್ರಾಮುಖ್ಯತೆಯೇನೆಂಬುದನ್ನು ತರಬೇತಿ ಹೊಂದಿದ ಉಪಾಧ್ಯಾಯರು ಕೂಡ ಪೂರ್ಣವಾಗಿ ಅರಿತುಕೊಂಡಿಲ್ಲ. ತಮ್ಮ ವಿದ್ಯಾರ್ಥಿಗಳು ಪಠ್ಯಪುಸ್ತಕಗಳನ್ನು ಓದಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರೆ ಸಾಕು ಎಂಬ ತೃಪ್ತಿಯನ್ನು ಅನೇಕ ಉಪಾಧ್ಯಾಯರು ಹೊಂದಿರುತ್ತಾರೆ. ಈ ವಿಚಾರದಲ್ಲಿ ಉಪಾಧ್ಯಾಯರನ್ನೂ ಅಲ್ಲಗಳೆಯುವುದಕ್ಕಾಗುವುದಿಲ್ಲ; ಏಕೆಂದರೆ, ನಮ್ಮ ಪರೀಕ್ಷಾ ಪದ್ಧತಿಯೇ ಆ ರೀತಿ ಇದೆ. ಪರೀಕ್ಷೆಗಳೆಲ್ಲವೂ ಪಠ್ಯಪುಸ್ತಕಗಳನ್ನೇ ಆಧರಿಸಿರುತ್ತವೆ; ವಿದ್ಯಾರ್ಥಿಯ ಸ್ವಂತ ಯೋಚನಾ ಸಾಮರ್ಥ್ಯವನ್ನಾಗಲೀ, ತಾನು ಗಳಿಸಿಕೊಂಡ ಜ್ಞಾನವನ್ನು ಜೀವನ ಮಾರ್ಗದಲ್ಲಿ ಬಳಸಿಕೊಳ್ಳುವ ಬಗೆಯನ್ನಾಗಲೀ ಪರೀಕ್ಷಿಸುವ ಪ್ರಶ್ನೆಗಳೇ ಇರುವುದಿಲ್ಲ. ಅಲ್ಲದೆ, ಯಾವುದೇ ಒಂದು ವಿಷಯದಲ್ಲಿ, ತಾನು ಪುಸ್ತಕಗಳನ್ನು ಓದಿಯೋ ಪತ್ರಿಕೆಗಳನ್ನು ಅವಲೋಕಿಸಿಯೋ ಗಳಿಸಿಕೊಂಡ ಸಾಮಾನ್ಯ ಜ್ಞಾನವನ್ನು ಪರೀಕ್ಷಿಸುವ ಪ್ರಶ್ನೆಗಳು ಕೂಡ ಇರುವುದಿಲ್ಲ. ಆದ್ದರಿಂದ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡುವುದಕ್ಕಾಗಿ ಶಾಲಾ ಪುಸ್ತಕ ಭಂಡಾರಗಳನ್ನು ಬಳಸಿಕೊಳ್ಳುವ ಬಗ್ಗೆ ಉಪಾಧ್ಯಾಯರಿಗೆ ತರಬೇತಿ ನೀಡಲು ವಿಚಾರಗೋಷ್ಠಿಗಳನ್ನು ಕಾರ್ಯಾಗಾರ (ವರ್ಕ್‌ಷಾಪ್)ಗಳನ್ನೂ ವ್ಯವಸ್ಥೆಗೊಳಿಸಬೇಕಾದುದು ಅತ್ಯಂತ ಅವಸರದ ಕೆಲಸವಾಗಿದೆ. ಅವರ ಗಮನವನ್ನು, ಪುಸ್ತಕ ಭಂಡಾರ ಭೂಯಿಷ್ಠವಾದ ಶಿಕ್ಷಣದ ಕಡೆಗೆ ಸೆಳೆಯುವುದು ತುಂಬಾ ಅಗತ್ಯವಾಗಿದೆ.

ಗ್ರಂಥಪಾಲನಾ ವೃತ್ತಿ ಹೊಂದಿರುವವರ ಅಗತ್ಯ

ಗ್ರಂಥಪಾಲಕನ ಕೆಲಸವು ವೃತ್ತ್ಯಾತ್ಮಕ (ಪ್ರೊಫೆಷನಲ್ ಜಾಬ್)ವಾದುದೆಂಬುದನ್ನೂ ತರಬೇತಿ ಹೊಂದಿದ ಗ್ರಂಥಪಾಲಕನು ಮಾತ್ರ ತೃಪ್ತಿಕರವಾಗಿ ಕೆಲಸ ಮಾಡಬಲ್ಲನೆಂಬುದನ್ನೂ ನಾವು ಒಪ್ಪಿಕೊಳ್ಳಬೇಕು. ಸೆಕೆಂಡರಿ ಶಾಲೆಗಳಿಗೆ, ತರಬೇತಿ ಹೊಂದಿದ ಗ್ರಂಥಪಾಲಕರನ್ನು ನೇಮಕಮಾಡುವ ಅಗತ್ಯವನ್ನು ಸರಕಾರ ಹಾಗೂ ಶಿಕ್ಷಣ ಇಲಾಖೆ ಒಪ್ಪಿಕೊಳ್ಳಬೇಕು; ಇಂಥವರ ನೇಮಕಕ್ಕೆ ಅಗತ್ಯವಾದ ನೀತಿ ನಿರೂಪಣೆಯನ್ನೂ ಮಾಡಬೇಕು.

ಸೆಕೆಂಡರೀ ಶಾಲೆಗಳ ಸಹಾಯಧನ ವಿನಿಯೋಗ ನಿಯಮಾವಳಿಗಳಲ್ಲಿ ಈ ಕೆಳಗಿನ ಅವಕಾಶಗಳನ್ನು ಕಲ್ಪಿಸಲಾಗಿದೆ:

೧. ಒಂಬತ್ತು ವಿಭಾಗಗಳಿಗಿಂತ ಹೆಚ್ಚು ಮತ್ತು ೪೫೧ ರಿಂದ ೭೦೦ರವರೆಗೆ ವಿದ್ಯಾರ್ಥಿ ಸಂಖ್ಯೆ ಇರುವ ಶಾಲೆಗಳಿಗೆ, ಗುಮಾಸ್ತೆ ಕೆಲಸವನ್ನು ನೋಡಿಕೊಳ್ಳುವ ಒಬ್ಬ ಗ್ರಂಥಪಾಲಕ.

೨. ಹದಿನಾಲ್ಕು ಡಿವಿಜನ್‌ಗಳಿಗಿಂತ ಹೆಚ್ಚು ಮತ್ತು ೭೦೧ರಿಂದ ೧೦೦೦ ವಿದ್ಯಾರ್ಥಿಗಳ ವರೆಗೆ ಇರುವ ಶಾಲೆಗಳಿಗೆ ಒಬ್ಬ ಗ್ರಂಥಪಾಲಕ.

ಸರಕಾರೀ ಶಾಲೆಗಳ ವಿಚಾರದಲ್ಲಿ ಈ ಅಲ್ಪ ಅವಕಾಶವನ್ನು ಕೂಡ ಕಲ್ಪಿಸಲಾಗಿಲ್ಲವೆಂದು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ಈ ವ್ಯತಿಕ್ರಮವನ್ನು ಶೀಘ್ರವಾಗಿ ಸರಿಗೊಳಿಸಬೇಕಾದುದು ಅಗತ್ಯವಾಗಿದೆ. ಸೆಕೆಂಡರಿ ಶಾಲೆಗಳಲ್ಲಿ, ಗ್ರಂಥಪಾಲಕರನ್ನು ನೇಮಕ ಮಾಡುವ ಬಗ್ಗೆ ಈ ಕೆಳಗಿನ ವಿಧಾನಗಳನ್ನು ರಾಜ್ಯ ಸರಕಾರ ಅನುಸರಿಸಬಹುದಾಗಿದೆ:

೧. ೨೦೦ಕ್ಕಿಂತ ಕಡಮೆ ವಿದ್ಯಾರ್ಥಿಗಳಿರುವ ಶಾಲೆಗಳಿಗೆ: ಒಬ್ಬ ಅಪೂರ್ಣ ಕಾಲಾವಧಿಯ 'ಉಪಾಧ್ಯಾಯ–ಗ್ರಂಥಪಾಲಕ' ನಿರಬೇಕು. ಗ್ರಂಥಪಾಲನಾ ವಿಜ್ಞಾನ ಶಾಲೆಯಲ್ಲಿ ಈತನಿಗೆ ಅಲ್ಪ ಕಾಲಾವಧಿಯ ತರಬೇತಿ ದೊರೆತಿರಬೇಕು. ಅಪೂರ್ಣ ಕಾಲಾವಧಿಯ ಗ್ರಂಥಪಾಲಕನಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುವಂತೆ, ಈತನ (ಅಧ್ಯಾಪನಾ) ಕೆಲಸದಲ್ಲಿ ಶೇಕಡ ೫೦ರಷ್ಟನ್ನು ಕಡಮೆ ಮಾಡಬೇಕು. ತಿಂಗಳಿಗೆ ೩೦ ರೂಪಾಯಿಗಳಂತೆ ಭತ್ಯವನ್ನೀಯಬೇಕು. ಪ್ರತಿ ಶನಿವಾರ, ಶಾಲಾ ವೇಳೆಯ ಹೊರಗೆ ಮತ್ತು ರಜಾ ದಿನಗಳಲ್ಲಿ ಎರಡೆರಡು ಗಂಟೆಗಳ ಕಾಲ ಗ್ರಂಥಾಲಯವನ್ನು ಈತ ತೆರೆದಿರಬೇಕು. ಅಲ್ಲದೆ ಶನಿವಾರವನ್ನುಳಿದು, ಮಿಕ್ಕೆಲ್ಲಾ ದಿನಗಳಲ್ಲಿ ಪಾಠಗಳು ಪ್ರಾರಂಭವಾಗುವುದಕ್ಕೆ ಮುಂಚೆ ಒಂದು ಗಂಟೆ ಕಾಲ ಗ್ರಂಥಾಲಯವನ್ನು ತೆರೆದಿರಬೇಕು. ಈತನಿಗೆ ನೆರವು ನೀಡಲು ಓದು ಕಲಿತ ಪೂರ್ಣ ಕಾಲದ ಪರಿಚಾರಕ (ಅಟೆಂಡರ್)ನೊಬ್ಬನಿರಬೇಕು. ಶಾಲಾ ವೇಳೆಯ ನಂತರವೂ ಶನಿವಾರ ಮತ್ತು ರಜಾ

ದಿನಗಳಲ್ಲಿಯೂ, ಈತನು ಕೆಲಸ ಮಾಡಬೇಕಾಗುವುದರಿಂದ, ಈತನಿಗೆ (ಪರಿಚಾರಕನಿಗೆ) ತಿಂಗಳೊಂದಕ್ಕೆ ೧೫ ರೂಪಾಯಿಗಳಂತೆ ಹೆಚ್ಚುವರಿ ಭತ್ಯವನ್ನು ಕೊಡಬೇಕು.

೨. ೨೦೧ರಿಂದ ೪೫೦ರಷ್ಟು ವಿದ್ಯಾರ್ಥಿಗಳಿರುವ ಸೆಕೆಂಡರಿ ಶಾಲೆಗಳಿಗೆ: ಎಸ್.ಎಸ್.ಎಲ್.ಸಿ. ಆಗಿದ್ದು, ಗ್ರಂಥಾಲಯ ತರಬೇತಿ ಶಾಲೆಯೊಂದರಲ್ಲಿ ತರಬೇತಿ ಹೊಂದಿದ, ಗ್ರಂಥಪಾಲನೆಯನ್ನೇ ಪೂರ್ಣ ಉದ್ಯೋಗವನ್ನಾಗಿ ಅವಲಂಬಿಸಿಕೊಳ್ಳದ ಪೂರ್ಣಕಾಲ ಕೆಲಸಮಾಡುವ ಒಬ್ಬಾತನೂ; ಪೂರ್ಣಕಾಲದ ಅಕ್ಷರಸ್ಥ ಪರಿಚಾರಕನೊಬ್ಬನೂ ಇರಬೇಕು. ಇವರಿಗೆ ಮಾಹೆಯಾನ ೨೦ ಮತ್ತು ೧೫ ರೂಪಾಯಿಗಳಂತೆ ಭತ್ಯವನ್ನೀಯಬೇಕು. ಈ ಮೊದಲು ಒಂದನೇ ವಿಭಾಗದಲ್ಲಿ ಸೂಚಿಸಿರುವಂತೆ, ಇವರು ಶಾಲಾ ವೇಳೆಯ ಮೊದಲು ಹಾಗೂ ನಂತರವೂ ರಜಾ ದಿನಗಳಲ್ಲಿಯೂ ಗ್ರಂಥಾಲಯವನ್ನು ತೆರೆದಿರಬೇಕು.

೩. ೪೫೧ರಿಂದ ೭೦೦ ರವರೆಗೆ ವಿದ್ಯಾರ್ಥಿಗಳನ್ನೊಳಗೊಂಡ ಸೆಕೆಂಡರೀ ಶಾಲೆಗಳಿಗೆ:— ಒಬ್ಬ ಪೂರ್ಣ ಕಾಲಾವಧಿಯ ಪದವೀಧರ ಗ್ರಂಥ ಪಾಲಕನೂ ಒಬ್ಬ ಪರಿಚಾರಕನೂ ಇರಬೇಕು. ಒಂದನೇ ವಿಭಾಗದಲ್ಲಿ ಸೂಚಿಸಿರುವ ಕಾರಣಗಳಿಗಾಗಿಯೇ, ಇವರಿಗೆ ತಿಂಗಳೊಂದಕ್ಕೆ ತಲಾ ೩೦ ಮತ್ತು ೧೫ ರೂಪಾಯಿಗಳಂತೆ ಭತ್ಯವನ್ನೀಯಬೇಕು.

೪. ೭೦೧ರಿಂದ ೧೦೦೦ ವಿದ್ಯಾರ್ಥಿಗಳ ವರೆಗಿರುವ ಸೆಕೆಂಡರೀ ಶಾಲೆಗಳಿಗೆ:—ಒಬ್ಬ ಪೂರ್ಣಕಾಲದ ಪದವೀಧರ ಗ್ರಂಥಪಾಲಕನೂ, ಒಬ್ಬ ಪೂರ್ಣಕಾಲದ ಅರ್ಧೋದ್ಯಮಿ ಗ್ರಂಥಪಾಲಕ (ಸೆಮಿ–ಪ್ರೊಫೆಷನಲ್ ಲೈಬ್ರೆರಿಯನ್)ನೂ ಇಬ್ಬರು ಪರಿಚಾರಕರೂ ಇರಬೇಕು. ಇವರಿಗೆ ಮೇಲೆ ಸೂಚಿಸಿದಂತೆಯೇ ಭತ್ಯವನ್ನೀಯಬೇಕು.

೫. ಆನಂತರ ಪ್ರತಿ ೩೦೦ ವಿದ್ಯಾರ್ಥಿಗಳಿಗೆ ಒಬ್ಬ ಅರ್ಧೋದ್ಯಮಿ ಗ್ರಂಥಪಾಲಕನನ್ನೂ ಒಬ್ಬ ಪರಿಚಾರಕನನ್ನೂ ಮಂಜೂರು ಮಾಡಬೇಕು. ಮೇಲೆ ಸೂಚಿಸಿದಂತೆಯೇ ಭತ್ಯವನ್ನೀಯಬೇಕು.

ಮೈಸೂರು ರಾಜ್ಯದಲ್ಲಿ, ೧೯೬೭ರಲ್ಲಿ ನಡೆಸಿದ ಎರಡನೇ ಶೈಕ್ಷಣಿಕ ಮೋಜಣಿ (ಸರ್ವೆ) ಪ್ರಕಾರ, ವಿದ್ಯಾರ್ಥಿ ಸಂಖ್ಯೆಗನುಗುಣವಾದ ಸೆಕೆಂಡರಿ ಶಾಲೆಗಳ ವಿವರ ಈ ಕೆಳಗಿನಂತಿದೆ :

ದಾಖಲಾತಿ	ಪ್ರತಿಶತ (ಶೇಕಡ)	ಶಾಲಾಸಂಖ್ಯೆ
೨೦೦ವಿದ್ಯಾರ್ಥಿಗಳವರೆಗೆ	೫೦	೧೦೦೦
೨೦೧ರಿಂದ ೪೫೦	೩೦	೬೦೦
೪೫೧ರಿಂದ ೭೦೦	೧೦	೨೦೦
೭೦೧ರಿಂದ ೧೦೦೦	೫	೧೦೦
೧೦೦೧ರಿಂದ ೧೩೦೦	೩	೬೦
೧೩೦೦ಕ್ಕಿಂತ ಅಧಿಕ	೨	೪೦
	೧೦೦	೨೦೦೦

ಶೇಕಡ (ಪ್ರತಿಶತ) ೨೦ರಷ್ಟು ಶಾಲೆಗಳಲ್ಲಿ ೪೫೦ಕ್ಕಿಂತ ಅಧಿಕ ವಿದ್ಯಾರ್ಥಿಗಳ ದಾಖಲಾತಿ ಇದೆ ಎಂದು ವರದಿಯಲ್ಲಿ ವ್ಯಕ್ತಪಡಿಸಲಾಗಿದೆ. ೪೫೦ಕ್ಕಿಂತ ಅಧಿಕ ವಿದ್ಯಾರ್ಥಿಗಳಿರುವ ಶಾಲೆಗಳ ಪ್ರತಿ ಶತ ಲೆಕ್ಕಾಚಾರವನ್ನು ನಾನೇ ಹಾಕಿದ್ದೇನೆ.

ಆಗತ್ಯವಾದ ಪೂರ್ಣ ಕಾಲದ ಹಾಗೂ ಅಪೂರ್ಣಕಾಲದ ಗ್ರಂಥಪಾಲಕರ ಮತ್ತು ಪರಿಚಾರಕರ ಸಂಖ್ಯೆ ಎಷ್ಟೆಂಬುದನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ:

ದಾಖಲಾತಿ	ಹೈಸ್ಕೂಲುಗಳ ಸಂಖ್ಯೆ	ಅಪೂರ್ಣಕಾಲ 'ಉಪಾಧ್ಯಾಯ–ಗ್ರಂಥಪಾಲಕ'ರು	ಎರಡನೇ ವರ್ಗದ ಪೂರ್ಣಕಾಲಾ ವಧಿಯ ಗ್ರಂಥ ಪಾಲಕರು	ಪೂರ್ಣಕಾಲಾ ವಧಿಯ ಒಂದನೇ ವರ್ಗದ ಗ್ರಂಥ ಪಾಲಕರು	ಪೂರ್ಣ ಕಾಲದ ಪರಿಚಾರಕರು
೨೦೦ ವಿದ್ಯಾರ್ಥಿಗಳವರೆಗೆ	೧೦೦೦	೧೦೦೦	—	—	೧೦೦೦
೨೦೧–೪೫೦	೬೦೦	—	೬೦೦	—	೬೦೦
೪೫೦–೬೦೦	೨೦೦	—	—	೨೦೦	೨೦೦
೬೦೧–೧೦೦೦	೧೦೦	—	೧೦೦	೧೦೦	೨೦೦
೧೦೦೧–೧೫೦೦	೬೦	—	೧೨೦	೬೦	೧೮೦
೧೫೦೦ಕ್ಕಿಂತ ಹೆಚ್ಚು	೪೦	—	೧೨೦	೪೦	೧೬೦
	೨೦೦೦	೧೦೦೦	೯೪೦	೪೦೦	೨೩೪೦

ತರಬೇತಿ ಹೊಂದಿದ ಗ್ರಂಥಪಾಲಕನೊಬ್ಬನನ್ನು ನೇಮಕಮಾಡಿದರೆ ಹಾಗೂ ಉಪಾಧ್ಯಾಯರಿಗೆ ಸರಿಯಾದ ತಿಳಿವಳಿಕೆ ನೀಡಿದರೆ, ಶಾಲಾ ಶಿಕ್ಷಣ ಕಾರ್ಯಕ್ರಮದ ಯಶಸ್ಸಿಗೆ, ಹೈಸ್ಕೂಲ್ ಗ್ರಂಥಾಲಯವು ಮಹತ್ವಪೂರ್ಣ ಸೇವೆಯನ್ನು ಸಲ್ಲಿಸುತ್ತದೆಂಬುದರಲ್ಲಿ ಅನುಮಾನವಿಲ್ಲ. ಈ ಕೆಳಗೆ ಸೂಚಿಸುವ ಅಂಶಗಳಿಗೆ ಅವಕಾಶವನ್ನು ಕಲ್ಪಿಸುವುದಗತ್ಯ.

೧. ವಿದ್ಯಾರ್ಥಿಗಳಿಗೆ ಗ್ರಂಥಾಲಯ ಕೌಶಲದಲ್ಲಿ ವ್ಯವಸ್ಥಿತ ಶಿಕ್ಷಣವನ್ನೊದಗಿಸುವ ಅವಕಾಶವನ್ನು ಶಾಲೆಯು ಕಲ್ಪಿಸಬೇಕು.
೨. ಶಾಲಾದಿನದ ಪೂರ್ತಿಯಾಗಿಯೂ, ರಜಾ ದಿನಗಳಲ್ಲೂ ವಿದ್ಯಾರ್ಥಿಗಳಿಗೆ ಗ್ರಂಥಾಲಯದ ಸೌಲಭ್ಯವಿರಬೇಕು.
೩. ಗ್ರಂಥಾಲಯದಲ್ಲಿ ಏನೇನು ಲಭ್ಯವಿದೆಯೆಂಬುದರಬಗ್ಗೆ, ಗ್ರಂಥಪಾಲಕನಿಗೆ ಪೂರ್ಣ ಮಾಹಿತಿ ಇರಬೇಕು; ಅಲ್ಲದೆ, ಉಪಾಧ್ಯಾಯರಿಗೆ ಪಾಠ ಪ್ರವಚನಕ್ಕೆ ಪೂರಕವಾದ ಸಾಹಿತ್ಯಗಳನ್ನು ಒದಗಿಸಬೇಕು.
೪. ವಿದ್ಯಾರ್ಥಿಗಳಿಗೆ ಗ್ರಂಥಭಂಡಾರದ ಸೌಲಭ್ಯಗಳನ್ನು ಪಡೆಯುವುದರಲ್ಲಿ ಆಸಕ್ತಿ ಹುಟ್ಟುವಂತೆ, ಉಪಾಧ್ಯಾಯರು ಕ್ರಮವಾಗಿ ಗ್ರಂಥಾಲಯದ ಉಪಯೋಗವನ್ನೊಳಗೊಂಡ ಪಾಠಕ್ರಮಗಳನ್ನೊದಗಿಸಬೇಕು.
೫. ಜಿಲ್ಲಾ ಗ್ರಂಥಭಂಡಾರ, ನಗರ ಗ್ರಂಥಾಲಯ, ಉಪಾಧ್ಯಾಯ ತರಬೇತಿ ಕಾಲೇಜುಗಳ ವಿಸ್ತರಣ ಸೇವಾ ವಿಭಾಗದ ಪುಸ್ತಕಭಂಡಾರ— ಮೊದಲಾದ ಸಂಸ್ಥೆಗಳ ನೆರವಿನಿಂದ, ತಮ್ಮ ಶಾಲಾ ಪುಸ್ತಕಭಂಡಾರದ ಸಂಪತ್ತನ್ನು ಬೆಳೆಸಿಕೊಳ್ಳಲು ಉಪಾಧ್ಯಾಯರಿಗೂ, ಗ್ರಂಥಪಾಲಕರಿಗೂ ಉತ್ತೇಜನವನ್ನೀಯಬೇಕು.

ಶಾಲಾ ಪುಸ್ತಕಭಂಡಾರದ ಪುಸ್ತಕಗಳ ಸಂಖ್ಯೆ

ವಿದ್ಯಾರ್ಥಿ ಸಂಖ್ಯೆಗನುಗುಣವಾಗಿ, ಶಾಲಾ ಪುಸ್ತಕ ಭಂಡಾರದಲ್ಲಿ ಎಷ್ಟು ಪುಸ್ತಕಗಳಿರಬೇಕೆಂಬುದನ್ನು ಪರಿಶೀಲಿಸಬೇಕಾದುದು ಮುಂದಿನ ಪ್ರಶ್ನೆ. ಪುಸ್ತಕ ಭಂಡಾರ ಪರಿಣತರು ಈ ಕೆಳಗಿನ ಕೆಲವು ವಿಧಾನಗಳನ್ನು ಸೂಚಿಸಿದ್ದಾರೆ:

೧. ಉತ್ತರ ಪ್ರದೇಶದಲ್ಲಿ, ಕೇಂದ್ರ ಸರಕಾರದ ಶಿಕ್ಷಣ ಇಲಾಖೆಯು ನಡೆಸಿದ ಸೆಕೆಂಡರೀ ಶಾಲೆಗಳ ಮೋಜಣೀ(ಸರ್ವೆ)ಆಧಾರದ ಮೇಲೆ,

ಪ್ರತಿ ವಿದ್ಯಾರ್ಥಿಗೆ ೧೦ ಪುಸ್ತಕಗಳಷ್ಟಿರಬೇಕೆಂದು ಸಲಹೆ ಮಾಡಲಾಗಿದೆ.

೨. ಐರೀನ್‌ವೆಲ್ಸ್ ಎಂಬ ಮಹಿಳೆಯು ತಮ್ಮ "ನಿಮ್ಮ ಶಾಲಾ ಪುಸ್ತಕ ಭಂಡಾರವನ್ನು ಬಲಗೊಳಿಸುವಿಕೆ"–(ವೈಟ–ಲೈಜಿಂಗ್ ಯುವರ್ ಸ್ಕೂಲ್ ಲೈಬ್ರರೀಸ್) ಎಂಬ ಪುಸ್ತಕದಲ್ಲಿ ಶಾಲಾಪುಸ್ತಕ ಭಂಡಾರದ ಬಾಹುಳ್ಯ ಈ ಕೆಳಗಿನಂತಿರಬೇಕೆಂದು ಸೂಚಿಸಿದ್ದಾರೆ:

೨೦೦ ವಿದ್ಯಾರ್ಥಿಗಳಿಗೆ	೨,೦೦೦ ಪುಸ್ತಕಗಳು
೫೦೦ ,,	೫,೦೦೦ ,,
೧,೦೦೦ ,,	೭,೦೦೦ ,,

೩. ಡಾ|| ಎಸ್.ಆರ್. ರಂಗನಾಥನ್‌ರವರು ತಮ್ಮ "ಶಾಲಾ ಮತ್ತು ಕಾಲೇಜ್ ಪುಸ್ತಕ ಭಂಡಾರ"–ಎಂಬ ಪುಸ್ತಕದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ೨೪ ಪುಸ್ತಕಗಳಿರಬೇಕೆಂದು ಸಲಹೆ ಮಾಡಿದ್ದಾರೆ:

೪. ರಿಚರ್ಡ್ ಡಾರ್ಲಿಂಗ್‌ರವರು ತಮ್ಮ "ಅಮೆರಿಕದ ಶಾಲಾ ಪುಸ್ತಕ ಭಂಡಾರದ ಮಟ್ಟದ ಮೋಜಣಿ" [ಸರ್ವೆ ಆಫ್ ಸ್ಕೂಲ್ ಲೈಬ್ರರಿ ಸ್ಟ್ಯಾಂಡರ್ಡ್ ಇನ್ ದಿ ಯು. ಎಸ್. ಎ.]– ಎಂಬ ಪುಸ್ತಕದಲ್ಲಿ ವಿವಿಧ ರಾಜ್ಯಗಳು ನಿರೂಪಿಸಿರುವ ವಿಧಾನಗಳ ಪಟ್ಟಿಯನ್ನು ಈ ಕೆಳಗಿನಂತೆ ಕೊಟ್ಟಿದ್ದಾರೆ;

	ವಿದ್ಯಾರ್ಥಿ ಸಂಖ್ಯೆ	ಶೀರ್ಷಿಕೆ	ಪುಸ್ತಕ (ವಾಲ್ಯೂಂ) *
A. ಐವೋವ	೨೦೦ಕ್ಕಿಂತ ಕಡಮೆ	೩೫೦೦	೫೦೦೦
	೨೦೦–೪೯೯	೫೦೦೦	೭೦೦೦
	೫೦೦–೭೯೯	೭೦೦೦	೧೦,೦೦೦
	೮೦೦ಕ್ಕಿಂತ ಅಧಿಕ	೧೦,೦೦೦	ಅಗತ್ಯಕ್ಕೆ ತಕ್ಕಷ್ಟು ಪ್ರತಿಗಳು.

* ಪುಸ್ತಕಗಳೆಂಬಲ್ಲಿ ಒಂದೇ ಪುಸ್ತಕದ ಅನೇಕ ಪ್ರತಿಗಳು ಸೇರಿವೆ.

	ಪ್ರತಿ ದಿನ ಸರಾಸರಿ ಹಾಜರಾತಿ	ಶೀರ್ಷಿಕೆಗಳು
B. ನ್ಯೂಯಾರ್ಕ್	೫೦೦	೪೦೦೦
	೧,೦೦೦	೭೫೦೦
C. ಕ್ಯಾಲಿಫೋರ್ನಿಯ	೨೦೦	ಪ್ರತಿ ವಿದ್ಯಾರ್ಥಿಗೆ ಹತ್ತು.
	ದೊಡ್ಡ ಶಾಲೆಗಳು	ಪ್ರತಿ ವಿದ್ಯಾರ್ಥಿಗೆ ೫ರಿಂದ ೮.

ನಮ್ಮ ರಾಜ್ಯದಲ್ಲಿ ಈ ಕೆಳಗಿನ ವಿಧಾನಗಳನ್ನು ಒಪ್ಪಿಕೊಳ್ಳಬಹುದು:

೨೦೦ಕ್ಕಿಂತ ಕಡಮೆ ವಿದ್ಯಾರ್ಥಿಗಳಿರುವ ಶಾಲೆಗಳು	—	೨೦೦೦ ಪುಸ್ತಕಗಳು
೨೦೧ ರಿಂದ ೪೫೦	—	೪೦೦೦ ,,
೪೫೧–೭೦೦	—	೬೦೦೦ ,,
೭೦೧–೧೦೦೦	—	೮೦೦೦ ,,

ಪ್ರತಿ ೩೦೦ ವಿದ್ಯಾರ್ಥಿಗಳ ಹೆಚ್ಚಳಕ್ಕೆ ೨೦೦೦ ಪುಸ್ತಕಗಳನ್ನು ಹೆಚ್ಚಾಗಿ ಸೇರಿಸಬೇಕು.

ಪುಸ್ತಕ ಭಂಡಾರಗಳ ಆರ್ಥಿಕ ವ್ಯವಸ್ಥೆ

ಶಾಲಾ ಪುಸ್ತಕ ಭಂಡಾರಗಳ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಸುಧಾರಿಸಲು ರಾಜ್ಯಮಟ್ಟದಲ್ಲಷ್ಟೇ ಅಲ್ಲದೆ, ಶಾಲಾಮಟ್ಟದಲ್ಲಿಯೂ ಸಾಕಷ್ಟು ಹಣದ ಪೂರೈಕೆಯಾಗಬೇಕು. ೧೯೭೦-೭೧ನೇ ಸಾಲಿನಲ್ಲಿ ರಾಜ್ಯ ಸರಕಾರವು ಸೆಕೆಂಡರೀ ಶಿಕ್ಷಣಕ್ಕಾಗಿ ಸುಮಾರು ೧೦ ಕೋಟಿ ರೂಪಾಯಿಗಳನ್ನು ಒದಗಿಸಿತು. ಆದರೆ, ಶಾಲಾ ಪುಸ್ತಕ ಭಂಡಾರಗಳಿಗೆ ವೆಚ್ಚ ಮಾಡಿದ ಹಣ ತೀರಾ ಕಡಮೆ. ಉದಾಹರಣೆಗೆ, ಒಂದು ಸರಕಾರೀ ಹೈಸ್ಕೂಲನ್ನು ಪ್ರಾರಂಭಿಸಿದಾಗ, ಪುಸ್ತಕ ಭಂಡಾರಕ್ಕಾಗಿ ಪುಸ್ತಕಗಳನ್ನು ಕೊಳ್ಳಲು, ಮೊದಲನೆ ಮೂರು ವರ್ಷಗಳಿಗೆ, ಪ್ರತಿ ವರ್ಷಕ್ಕೆ ಕೇವಲ ೬೦೦ ರೂ.ಗಳನ್ನು ಒದಗಿಸಲಾಗುತ್ತದೆ. ಆನಂತರ ೬೦ರಿಂದ ೮೫ ರೂ.ಗಳವರೆಗೆ ಪುಸ್ತಕ ಭಂಡಾರದ ಸಹಾಯ ಧನ (ಗ್ರಾಂಟ್) ಎಂದು ಮಂಜೂರುಮಾಡಲಾಗುವುದು, ಅಷ್ಟೆ ! ಸಹಾಯ ಧನ ಪಡೆಯುವ ಶಾಲೆಗಳು (ಏಡೆಡ್ ಸ್ಕೂಲ್ಸ್)ಪ್ರಾರಂಭವಾದಾಗಲಂತೂ ತೀರಾ ಕಡಮೆ ನೆರವು ದೊರೆಯುತ್ತದೆ. ಇದರ ಮೊತ್ತವು ಆಯಾ ಆಡಳಿತ ವರ್ಗವು ಖರ್ಚು ಮಾಡಬಹುದಾದ ಹಣವನ್ನವಲಂಬಿಸಿಕೊಂಡಿರುತ್ತದೆ. ಆನಂತರ, ಗ್ರಂಥಭಂಡಾರಗಳಿಗಾಗಿ ವಾರ್ಷಿಕ ಸಹಾಯ ಧನ ಸಿಕ್ಕುವುದೇ ಇಲ್ಲ. ಯಾವುದಾದರೂ ಒಂದು ವರ್ಷ, ಶಾಲಾ ಆಡಳಿತ ವರ್ಗದವರು ಪರೀಕ್ಷಾಧಿಕಾರಿಗಳ (ಇನ್‌ಸ್ಪೆಕ್ಟರ್) ಅನುಮತಿಯೊಡನೆ ಪುಸ್ತಕಗಳನ್ನು ಕೊಂಡುಕೊಂಡಿದ್ದರೆ, ಶಿಕ್ಷಣ ಇಲಾಖೆಯು ಹಣದ ಸಾಧ್ಯತೆ ಇದ್ದರೆ ಮಾತ್ರ, ಸ್ವಲ್ಪ ಸಹಾಯವನ್ನೀಯುತ್ತದೆ. ಸರಕಾರದ ಮತ್ತು ಸಹಾಯಧನ ಪಡೆಯುವ ಶಾಲೆಗಳು, ಪುಸ್ತಕಗಳನ್ನು ಕೊಳ್ಳಲು, ಮುಖ್ಯವಾಗಿ ವಿದ್ಯಾರ್ಥಿಗಳಿಂದ ವಸೂಲಿ ಮಾಡಿದ ವಾಚನಾಲಯ ಮತ್ತು ಗ್ರಂಥಾಲಯ ಶುಲ್ಕದ ಹಣವನ್ನೇ ಅವಲಂಬಿಸಿಕೊಂಡಿರುತ್ತವೆ. ವರ್ಷವೊಂದಕ್ಕೆ ಒಬ್ಬ ವಿದ್ಯಾರ್ಥಿಯಿಂದ ೨ ರೂಪಾಯಿಗಳ ಶುಲ್ಕವನ್ನು ಇದಕ್ಕಾಗಿ ವಸೂಲಿ ಮಾಡಬೇಕೆಂದು ಸರಕಾರವೇ ನಿಗದಿ ಮಾಡಿದೆ. ಅಲ್ಲದೆ, ಈ ಹಣವನ್ನು, ಯಾವ ಯಾವ ವಿಧಾನದಲ್ಲಿ ಖರ್ಚು ಮಾಡಬೇಕೆಂಬುದನ್ನೂ ನಿಗದಿ ಮಾಡಿರುತ್ತದೆ. ಉದಾಹರಣೆಗೆ– ಶೇಕಡ ೪೦ ರೂಪಾಯಿಗಳಷ್ಟು ಹಣವನ್ನು ಪುಸ್ತಕಗಳ ಕೊಳ್ಳುವಿಕೆಗಾಗಿ ಉಪಯೋಗಿಸಬೇಕು. ಅಂದರೆ, ೫೦೦ ವಿದ್ಯಾರ್ಥಿಗಳಿರುವ ಶಾಲೆಯಲ್ಲಿ ಕೇವಲ ೪೦೦ ರೂಪಾಯಿಗಳ ಪುಸ್ತಕಗಳನ್ನು ಕೊಳ್ಳಬೇಕಾಗುತ್ತದೆ. ಒಟ್ಟನಲ್ಲಿ ಸುಮಾರು ೧೦೦ ಪುಸ್ತಕಗಳನ್ನು ಗ್ರಂಥಭಂಡಾರಕ್ಕೆ ಸೇರಿಸಲು ಸಾಧ್ಯವಾದಂತಾಯಿತು. ಈಗಾಗಲೆ ಒಪ್ಪಿತವಾದ ದಾಮಾಷದ ಪ್ರಕಾರ ಒಬ್ಬ ವಿದ್ಯಾರ್ಥಿಗೆ ಒಂದು ಪುಸ್ತಕದಂತೆ–ಅಂದರೆ, ೫೦೦ ವಿದ್ಯಾರ್ಥಿಗಳಿಗೆ ೫೦೦ ಪುಸ್ತಕಗಳಂತೆ—ಶಾಲಾ ಗ್ರಂಥಭಂಡಾರಕ್ಕೆ ಸೇರಿಸಬೇಕು. ೧೯೪೦ರಷ್ಟು ಹಿಂದಿನಿಂದಲೂ ಪ್ರತಿ ವಿದ್ಯಾರ್ಥಿಯಿಂದ ೩ ರೂ.ಗಳಂತೆ ವಾಚನಾಲಯ ಮತ್ತು ಗ್ರಂಥಭಂಡಾರ ಶುಲ್ಕವನ್ನು ವಸೂಲಿ ಮಾಡುತ್ತಲಿದ್ದಿತಾದರೂ ಈಗ ಅದನ್ನು ೨ ರೂ.ಗಳಿಗೆ ಇಳಿಸಲಾಗಿದೆ. ಇದು ಆಶ್ಚರ್ಯದ ಸಂಗತಿ. ಹೈಸ್ಕೂಲುಗಳಲ್ಲಿ ಶಿಕ್ಷಣ ಶುಲ್ಕವನ್ನು ತೆಗೆದು ಹಾಕಿದ್ದರೂ ಕೂಡ, ೩ ರೂ.ಗಳಿಂದ ೨ ರೂ.ಗಳಿಗೆ ಇಳಿಸಿರುವುದು ಇನ್ನೂ ಆಶ್ಚರ್ಯದ ಸಂಗತಿಯಾಗಿದೆ. ವಾಚನಾಲಯ ಮತ್ತು ಗ್ರಂಥಭಂಡಾರ ಶುಲ್ಕವನ್ನು ೫ ರೂ.ಗಳಷ್ಟಕ್ಕೆ ಹೆಚ್ಚಿಸಬೇಕು ; ಗ್ರಂಥಗಳ ಹಾಗೂ ನಿಯತಕಾಲಿಕಗಳ ಬೆಲೆಗಳು ಜಾಸ್ತಿಯಾಗಿರುವುದರಿಂದಲೂ ಈ ರೀತಿ ಹೆಚ್ಚಿಸಬೇಕಾದುದು ಅಗತ್ಯ. ಅಲ್ಲದೆ ಸೆಕೆಂಡರೀ ಶಿಕ್ಷಣವು, ಈಗ, ಉಚಿತವಾಗಿ ದೊರೆಯುತ್ತಲಿದೆಯೆಂಬುದನ್ನು, ಇಲ್ಲಿ ಗಮನಿಸಬೇಕಾಗುತ್ತದೆ. ಹೀಗೆ ಮಾಡಿದರೆ ೫೦೦ ಮಂದಿ ವಿದ್ಯಾರ್ಥಿಗಳಿರುವ ಶಾಲೆಗಳಲ್ಲಿ ೨,೫೦೦ ರೂಪಾಯಿಗಳನ್ನು ಸಂಗ್ರಹಿಸಲು ಸಾಧ್ಯವಾಗುತ್ತದೆ. ರಾಜ್ಯ ಸರಕಾರವು ಪ್ರತಿ ವಿದ್ಯಾರ್ಥಿಗೆ ೨ ರೂಪಾಯಿಗಳಂತೆ–ಗ್ರಂಥಭಂಡಾರಕ್ಕಾಗಿಯೇ—ವಾರ್ಷಿಕ ಸಹಾಯಧನವನ್ನೀಯುವುದರ ಮೂಲಕ, ಪೂರಕಗೊಳಿಸಬೇಕು. ಹೀಗೆ ಮಾಡಿದರೆ, ಶಾಲೆಗೆ ಪುಸ್ತಕಗಳನ್ನು ಕೊಳ್ಳುವುದಕ್ಕಾಗಿ ೨,೦೦೦ ರೂ.ಗಳು [ವಿದ್ಯಾರ್ಥಿಗಳಿಂದ ವಸೂಲಿಯಾದ ೨,೫೦೦ ರೂ.ಗಳಲ್ಲಿ ಶೇಕಡ ೪೦ರಂತೆ ೧,೦೦೦ ರೂ. ಮತ್ತು ಸರಕಾರದ ಸಹಾಯಧನ ೧,೦೦೦ ರೂ.] ದೊರೆತಂತಾಗುತ್ತದೆ. ಆಗ, ಸುಮಾರು ೫೦೦ ಪುಸ್ತಕಗಳನ್ನು ಪ್ರತಿ ವರ್ಷ ಗ್ರಂಥಭಂಡಾರಕ್ಕೆ ಸೇರಿಸಬಹುದು. ಇದು, ಅಂಗೀಕೃತವಾದ ವಿಧಾನಗಳಿಗನುಗುಣವಾಗಿರುತ್ತದೆ.

ಗ್ರಂಥಪಾಲಕರ ಅರ್ಹತೆ ಮತ್ತು ವೇತನ ಶ್ರೇಣಿಗಳು

ಸರಕಾರೀ ಶಾಲೆಗಳು ಮತ್ತು ಕಾಲೇಜುಗಳಲ್ಲಿ ಕೆಲಸ ಮಾಡುವ ಎಲ್ಲ ಗ್ರಂಥಪಾಲಕರನ್ನು, ಸಾರ್ವಜನಿಕ

ಗ್ರಂಥಭಂಡಾರಗಳ ಇಲಾಖೆಯ ಚೌಕಟ್ಟಿನಲ್ಲಿ ಸೂಕ್ತ, ರೀತಿಯಲ್ಲಿ ಅಳವಡಿಸಬೇಕು. ಅಲ್ಲದೆ, ಅವರು ಶಿಕ್ಷಣ ಇಲಾಖೆಯ ಕೆಳಗೆ ಕೆಲಸ ಮಾಡಬೇಕಾಗುವುದು. ಈ ಎರಡು ಇಲಾಖೆಗಳ ನಡುವೆ, ಪರಸ್ಪರ ಸಮಾಲೋಚನೆಯೊಡನೆ ಇವರನ್ನು ವರ್ಗಾವಣೆ ಮಾಡಿಕೊಳ್ಳಬಹುದು. ಸಾರ್ವಜನಿಕ ಗ್ರಂಥಭಂಡಾರಗಳ ಇಲಾಖೆಯಲ್ಲಿ ಗ್ರಂಥಪಾಲಕರ ಜಾಗಗಳನ್ನು ರೂಪಿಸಿಕೊಳ್ಳಲಾಗುವುದು; ಶಿಕ್ಷಣ ಇಲಾಖೆಯಿಂದ ಕೇಳಿಕೆಯು ಬಂದಾಗ, ಸೇರ್ಪಡೆ ಮಾಡಿಕೊಳ್ಳಲಾಗುವುದು :

ಈ ಕೆಳಗೆ ಸೂಚಿಸುವ ಪದ್ಧತಿಯನ್ನು ಅನುಸರಿಸಬಹುದು.

ಅ. ಹೈಸ್ಕೂಲುಗಳು :

ಪ್ರಥಮ ಶ್ರೇಣಿ — ಗ್ರಂಥಾಲಯ ವಿಜ್ಞಾನದಲ್ಲಿ ಡಿಪ್ಲೊಮಾ ಪಡೆದಿರುವ ಪದವೀಧರರು ಅಥವಾ ಗ್ರಂಥಾಲಯ ವಿಜ್ಞಾನದಲ್ಲಿ ಬ್ಯಾಚುಲರ್ ಪದವೀಧರರು (ರೂ. ೧೭೫–೪೫೦).

ದ್ವಿತೀಯ ಶ್ರೇಣಿ :— ಮಹಿಳಾ ಪಾಲಿಟೆಕ್ನಿಕ್‌ಗಳಿಂದ ಗ್ರಂಥಾಲಯ ವಿಜ್ಞಾನದಲ್ಲಿ ಡಿಪ್ಲೊಮಾ ಪಡೆದ ಪಿ. ಯು. ಸಿ. ಅಭ್ಯರ್ಥಿಗಳು. (೧೨೦–೨೪೦.) ಗ್ರಂಥಾಲಯ ತರಬೇತಿ ಶಾಖೆಗಳ ಗ್ರಂಥಾಲಯ ವಿಜ್ಞಾನ ಸರ್ಟಿಫಿಕೇಟ್ ಪಡೆದ ಎಸ್. ಎಸ್. ಎಲ್. ಸಿ. ಅಭ್ಯರ್ಥಿಗಳು (ರೂ. ೧೦೦–೨೨೦).

ಆ. ಉಪಾಧ್ಯಾಯ ತರಬೇತಿ ಸಂಸ್ಥೆಗಳು ಮತ್ತು ಸಂಶೋಧನಾ ಕೇಂದ್ರ ೧೭೫–೪೫೦ ರೂ. ಪ್ರಥಮ ಶ್ರೇಣಿ.

ಇ. ಬಿ.ಎಡ್. ಕಾಲೇಜು ೨೨೫–೪೫೦ ರೂ. ಪದವೀಧರ ಉಪಾಧ್ಯಾಯರ ಆಯ್ಕೆ ಶ್ರೇಣಿ (ಸೆಲೆಕ್ಷನ್ ಗ್ರೇಡ್)

ಈ. ಶಾಲಾ ಪುಸ್ತಕ ಭಂಡಾರಗಳ ಜಿಲ್ಲಾ ಪರೀಕ್ಷಕರು ರೂ. ೨೭೫-೫೫೦, ಹೈಸ್ಕೂಲು ಮುಖ್ಯೋಪಾಧ್ಯಾಯರ ಅಂತಸ್ತು.

ಉ. ಶಾಲಾ ಪುಸ್ತಕ ಭಂಡಾರಗಳ ರಾಜ್ಯಮಟ್ಟದ ಪರೀಕ್ಷಕರು ರೂ. ೪೦೦–೯೫೦ (ಜೂನಿಯರ್ ಒಂದನೇ ವರ್ಗ)

ಶಾಲಾ ಪುಸ್ತಕ ಭಂಡಾರಗಳ ವಸ್ತುಸ್ಥಿತಿಯನ್ನೂ ಶೈಕ್ಷಣಿಕ ಮೌಲ್ಯವನ್ನೂ ಉತ್ತಮಗೊಳಿಸುವುದಕ್ಕೆ ಗ್ರಂಥಪಾಲಕರಿಗೆ ಅವರ ಉದ್ಯಮದಲ್ಲಿ ಮಾರ್ಗದರ್ಶನವನ್ನೀಯಲು ಒಬ್ಬ ರಾಜ್ಯಮಟ್ಟದ ಅಧಿಕಾರಿಯನ್ನೂ ೨೦ ಮಂದಿ ಜಿಲ್ಲಾಮಟ್ಟದ ಅಧಿಕಾರಿಗಳನ್ನೂ ನೇಮಕ ಮಾಡುವುದು ಅಗತ್ಯವಾಗಿದೆ. ಇವರು "ಸಬ್ಜೆಕ್ಟ್ ಇನ್‌ಸ್ಪೆಕ್ಟರು"ಗಳ ರೀತಿಯಲ್ಲಿ ಕೆಲಸ ಮಾಡಿ ಜಿಲ್ಲಾ ವಿದ್ಯಾಧಿಕಾರಿಗಳಾದ ಡೆಪ್ಯುಟಿ ಡೈರೆಕ್ಟರ್ ಅವರಿಗೆ, ಶಾಲಾ ಪುಸ್ತಕ ಭಂಡಾರಗಳ ಮೇಲ್ವಿಚಾರಣಾ ಕೆಲಸದಲ್ಲಿ ನೆರವು ನೀಡುತ್ತಾರೆ. ರಾಜ್ಯಮಟ್ಟದ ಅಧಿಕಾರಿಯೂ, ಜಿಲ್ಲಾ ಮಟ್ಟದ ಅಧಿಕಾರಿಗಳೂ ಅಂಗೀಕೃತವಾದ ಪುಸ್ತಕಗಳ ಪಟ್ಟಿಯನ್ನು ಸಿದ್ಧಗೊಳಿಸಿ, ಕಳುಹಿಸಿಕೊಡುತ್ತಾರೆ; ಅಲ್ಲದೆ, ಆಗಾಗ, ಹೆಚ್ಚುವರಿ ಪಟ್ಟಿಗಳನ್ನು–ಮೊದಲನೆ ಪಟ್ಟಿಗೆ ಪೂರಕವಾಗುವಂತೆ–ಕಳುಹಿಸಿ ಕೊಡುತ್ತಾರೆ. ಹೀಗೆ ಮಾಡುವುದರಿಂದ, ಮುಖ್ಯೋಪಾಧ್ಯಾಯರು ಪುಸ್ತಕಗಳನ್ನು ಕೊಳ್ಳುವುದರಲ್ಲಿ ಆಗುವ ವಿಳಂಬದ ಕಾರಣಗಳಲ್ಲೊಂದನ್ನು ನಿವಾರಿಸಿದಂತಾಗುತ್ತದೆ.

ಮೇಲ್ವಿಚಾರಣೆ ಮತ್ತು ಪುಸ್ತಕಗಳ ನಷ್ಟ

ರಾಜ್ಯ ಹಾಗೂ ಜಿಲ್ಲಾ ಮಟ್ಟದ ಮೇಲ್ವಿಚಾರಕರು, ಮೇಲೆ ಸೂಚಿಸಿದ ಕರ್ತವ್ಯಗಳ ಜೊತೆಗೆ ಹೊಸ ಹೊಸ ಅಭಿಪ್ರಾಯಗಳನ್ನೂ ಅತ್ಯುತ್ತಮವೆಂದು ಸಿದ್ಧಾಂತಗೊಂಡ ಗ್ರಂಥಾಲಯ ವಿಧಾನಗಳನ್ನೂ ಸೆಕೆಂಡರೀ ಶಾಲೆಗಳಿಗೆ ಪ್ರಚಾರಮಾಡಬೇಕು. ಪುಸ್ತಕಗಳನ್ನು ಬೃಹದ್ ಪ್ರಮಾಣದಲ್ಲಿ ಕೊಳ್ಳುವ (ಬಲ್ಕ್ ಪರ್ಚೇಸ್) ಯೋಜನೆಯ ಮೂಲಕ, ಶಿಕ್ಷಣ ಇಲಾಖೆಯು ಜಿಲ್ಲೆಗಳಿಗೆ ಒದಗಿಸಿದ ಪುಸ್ತಕಗಳನ್ನು ಕೂಡಲೆ ಹಂಚಿಕೆ ಮಾಡುವ ಜವಾಬ್ದಾರಿಯನ್ನು ಇವರಿಗೇ ವಹಿಸಬೇಕು. ಇವರು ಆಗಾಗ, ವಿಚಾರ ಸಂಕಿರ್ಣಗಳನ್ನು ನಡೆಸಿ, ಗ್ರಂಥ ಭಂಡಾರದ ಬಳಕೆ ವಿಚಾರದಲ್ಲಿ, ಉಪಾಧ್ಯಾಯರಿಗೆ ಸರಿಯಾದ ವಿಧಾನಗಳನ್ನು ತಿಳಿಯಪಡಿಸಬೇಕು. ಹೀಗೆ ಮಾಡುವು

ದರಿಂದ ಅವರು (ಉಪಾಧ್ಯಾಯರು) ವಿದ್ಯಾರ್ಥಿಗಳಿಗೆ, ಈ ವಿಚಾರದಲ್ಲಿ, ಮಾರ್ಗದರ್ಶನವನ್ನೀಯಲು ಸಹಾಯಕವಾಗುತ್ತದೆ. ಮುಖ್ಯೋಪಾಧ್ಯಾಯರು ಕಳುಹಿಸಿದ ಪುಸ್ತಕಗಳ ಪಟ್ಟಿಯನ್ನು ಒಪ್ಪುವುದಕ್ಕೂ, ವಾಚನಾಲಯ ನಿಧಿಯಿಂದ ಖರ್ಚು ಮಾಡಲು ಮಂಜೂರಾತಿ ನೀಡುವುದಕ್ಕೂ, ಈ ಅಧಿಕಾರಿಗಳಿಗೆ, ಅಧಿಕಾರವನ್ನೀಯಬಹುದು. ವಾಚನಾಲಯ ನಿಧಿಯಿಂದ ಮಾಡುವ ಖರ್ಚಿಗೆ ಒಪ್ಪಿಗೆಯನ್ನೀಯುವ ಪೂರ್ಣ ಅಧಿಕಾರವನ್ನು–ನಿಯಮದ ಪ್ರಕಾರ–ಆಯಾ ಶಾಲೆಯ ಪುಸ್ತಕ ಭಂಡಾರ ಹಾಗೂ ವಾಚನಾಲಯ ಸಮಿತಿಗೆ ಕೊಡಬೇಕು. ವಿಶೇಷ ಸಂದರ್ಭಗಳಲ್ಲಿ ಮಾತ್ರ ಮೇಲಧಿಕಾರಿಗಳ ಒಪ್ಪಿಗೆಯನ್ನು ಪಡೆಯುವಂತಾಗಬೇಕು. ಪುಸ್ತಕ ಭಂಡಾರದ ಕಾರ್ಯನಿರ್ವಹಣೆಯಲ್ಲಿಕಳೆದುಹೋಗಬಹುದಾದಪುಸ್ತಕಗಳ ಮೌಲ್ಯವನ್ನು ಲೆಕ್ಕಪತ್ರದಿಂದ ತೊಡೆದು ಹಾಕುವ ಅಧಿಕಾರವು ಈ ಸಮಿತಿಗೇ ಇರಬೇಕು. ಪ್ರತಿ ವರ್ಷ ಉಪಯೋಗಾರ್ಥವಾಗಿ ನೀಡಿದ ಪ್ರತಿ ೧೦೦೦ ಪುಸ್ತಕಗಳಿಗೆ ಮೂರು ಪುಸ್ತಕಗಳಷ್ಟನ್ನು ಮಾತ್ರ ತೊಡೆದು ಹಾಕಲು, ಈ ಅಧಿಕಾರವು ಸೀಮಿತವಾಗಿರಬೇಕು; ಇದು, ಗ್ರಂಥಾಲಯ ಪರಿಣತರು ನಿಗದಿಗೊಳಿಸಿದ ಸಿದ್ಧಾಂತಕ್ಕನುಗುಣವಾಗಿರುತ್ತದೆ. ಈಗಿನ ನಿಯಮಗಳ ಪ್ರಕಾರ, ಪುಸ್ತಕ ಭಂಡಾರದ ಕೆಲಸವನ್ನು ವಹಿಸಿಕೊಂಡ ಉಪಾಧ್ಯಾಯನೇ ಆಗಲೀ, ಗುಮಾಸ್ತನೇ ಆಗಲೀ ಕಳೆದುಹೋದ ಪುಸ್ತಕಗಳ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ; ಅಲ್ಲದೆ, ಅದರ ಖರ್ಚನ್ನು ಭರಿಸಬೇಕಾಗುತ್ತದೆ. ಈ ವಿಧಾನವು ಗ್ರಂಥಾಲಯ ಆಡಳಿತದ, ಒಪ್ಪಿತವಾದ, ಎಲ್ಲ ವಿಧಾನಗಳಿಗೂ ವಿರುದ್ಧವಾದುದಾಗಿದೆ. ಏಕೆಂದರೆ, ಅತ್ಯುತ್ತಮವಾದ ಆಡಳಿತವಿರುವ ಗ್ರಂಥಾಲಯಗಳಲ್ಲಿ ಕೂಡ ಕೆಲವೊಂದು ಮಟ್ಟಿನ ನಷ್ಟವು ಅನಿವಾರ್ಯವೆಂಬ ತೀರ್ಮಾನಕ್ಕೆ ಬರಲಾಗಿದೆ. ನಮ್ಮ ಶಾಲೆಗಳಲ್ಲಿ ಪುಸ್ತಕ ಭಂಡಾರಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳದಿರುವುದಕ್ಕೆ ಈ ನಿಬಂಧನೆಯೂ ಒಂದು ಕಾರಣವಾಗಿದೆ. ಏಕೆಂದರೆ, ಪುಸ್ತಕ ಭಂಡಾರದ ಜವಾಬ್ದಾರಿಯನ್ನು ಹೊತ್ತ ವ್ಯಕ್ತಿಯು, ಪುಸ್ತಕಗಳನ್ನು ಬೀಗಮುದ್ರೆಯಲ್ಲಿ ಭದ್ರವಾಗಿರಿಸಿ, ಸಂಭಾವನಾರಹಿತವಾದ ಅಧಿಕ ಕೆಲಸದಿಂದ ನುಣುಚಿಕೊಳ್ಳುತ್ತಾನಲ್ಲದೆ, ತನ್ನ ಕೈಯಿಂದ ಚೆಲ್ಲಬೇಕಾಗಿ ಬರಬಹುದಾದ ನಷ್ಟದ ಬಾಬತ್ತಿನಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಈ ಸಂಬಂಧದಲ್ಲಿ ಸರಕಾರದ ಆಜ್ಞೆಯೊಂದು ತ್ವರಿತವಾಗಿ ಹೊರಡಬೇಕಾದುದು ತುಂಬಾ ಅಗತ್ಯವಾಗಿದೆ. ಮೈಸೂರು ಲೈಬ್ರರಿ ಅಸೋಸಿಯೇಷನ್ನಿನ ಸಭೆಯೊಂದರಲ್ಲಿ, ಸರಕಾರೀ ಕಾಲೇಜಿನ ಗ್ರಂಥಪಾಲಕರೊಬ್ಬರು, ಈ ಪ್ರಶ್ನೆಯನ್ನು ಎತ್ತಿದರು. ಮೇಲೆ ಸೂಚಿತವಾದ ಆಜ್ಞೆಗಳು, ಕಾಲೇಜು ಪುಸ್ತಕ ಭಂಡಾರಗಳಿಗೂ ಅನ್ವಯವಾಗಬೇಕೆಂದು ಅಭಿಪ್ರಾಯಪಡಲಾಯಿತು. ನಷ್ಟವಾದ ಪುಸ್ತಕಗಳ ಮೊತ್ತವನ್ನು ಲೆಕ್ಕಪತ್ರದಿಂದ ತೊಡೆದು ಹಾಕುವುದಕ್ಕೆ ಮುನ್ನ, ಅಂತಹ ನಷ್ಟಕ್ಕೆ ಕಾರಣವೇನೆಂಬುದನ್ನು, ವಾಚನಾಲಯ ಹಾಗೂ ಪುಸ್ತಕ ಭಂಡಾರ ಸಮಿತಿಯು ಪರಿಶೀಲಿಸುತ್ತದೆ; ಆ ನಷ್ಟವು ಪುಸ್ತಕ ಭಂಡಾರದ ಸಿಬ್ಬಂದಿಯ ನಿರ್ಲಕ್ಷ್ಯದಿಂದ ಆದುದಲ್ಲ ಎಂಬುದನ್ನು ಖಾತ್ರಿ ಮಾಡಿಕೊಳ್ಳುತ್ತದೆ.

ಮುಕ್ತದ್ವಾರ ಸಂಪರ್ಕ ವಿಧಾನ

ಗ್ರಂಥಾಲಯ ವ್ಯವಸ್ಥೆಯಲ್ಲಿ ಆಗಬೇಕಾದ ಇನ್ನೊಂದು, ಅಗತ್ಯವಾದ ಸುಧಾರಣೆ ಎಂದರೆ, ನೇರ ಪ್ರವೇಶ ಪದ್ಧತಿ ಅಥವಾ ಮುಕ್ತದ್ವಾರ ಸಂಪರ್ಕ ವಿಧಾನವನ್ನು ಜಾರಿಗೆ ತರುವುದು. ಇದರಿಂದ, ವಿದ್ಯಾರ್ಥಿ-ವಿದ್ಯಾರ್ಥಿನಿಯರು ನೇರವಾಗಿ, ಪುಸ್ತಕ ಭಂಡಾರವನ್ನು ಪ್ರವೇಶಿಸಿ, ತಮಗೆ ಬೇಕಾದ ಪುಸ್ತಕವನ್ನು ಆರಿಸಿಕೊಂಡು, ಕೆಲ ಹೊತ್ತು ಅಲ್ಲಿಯೇ ಅದನ್ನು ಓದಲು, ಅಥವಾ, ಬೇಕೆನಿಸಿದರೆ, ಮನೆಗೆ, ಎರವಲಾಗಿ ಪಡೆದುಕೊಂಡು ಹೋಗಲು ಸಾಧ್ಯವಾಗುತ್ತದೆ. ಈಗಿನ ಪದ್ಧತಿಯ ಪ್ರಕಾರ, ಪುಸ್ತಕಭಂಡಾರದ ಕಪಾಟುಗಳು ಬೀಗ ಹಾಕಲ್ಪಟ್ಟಿರುತ್ತವೆ. ಪುಸ್ತಕ ಭಂಡಾರದ ಸಿಬ್ಬಂದಿಯ ಸಹಾಯವಿಲ್ಲದೆ, ವಿದ್ಯಾರ್ಥಿಗಳು ಯಾವೊಂದು ಪುಸ್ತಕವನ್ನೂ ನೇರವಾಗಿ ಪಡೆಯಲಾರರು. ಈ ಪದ್ಧತಿಯು, ಈ ಕಾಲಕ್ಕೆ ಅನುಗುಣವಾಗಿಲ್ಲ. ಅಲ್ಲದೆ, ಗ್ರಂಥಾಲಯ ಸಿದ್ಧಾಂತಗಳೆಲ್ಲವಕ್ಕೂ ವಿರುದ್ಧವಾದುದಾಗಿದೆ. ಶಾಲಾ ಪುಸ್ತಕ ಭಂಡಾರಗಳಲ್ಲಿ ಮುಕ್ತದ್ವಾರ ಸಂಪರ್ಕ ವಿಧಾನವನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುವಂತೆಮಾಡಲು ಅಕ್ಷರಸ್ಥ ಪರಿಚಾರಕನೊಬ್ಬನನ್ನು ನೇಮಕ ಮಾಡುವುದು ತುಂಬಾ ಅಗತ್ಯವಾಗಿದೆ. ಮೇಲೆ ಪ್ರಸ್ತಾಪಿತವಾದ ಯೋಜನೆಯಲ್ಲಿ ಈ ನೇಮಕಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ.

ತರಗತಿಯ ಪುಸ್ತಕ ಭಂಡಾರಗಳು

ಶಾಲಾ ಪುಸ್ತಕ ಭಂಡಾರಗಳ ಜೊತೆಗೆ ಪ್ರತಿಯೊಂದು

ಹೈಸ್ಕೂಲಿನಲ್ಲಿಯೂ ತರಗತಿಯ ಪುಸ್ತಕ ಭಂಡಾರಗಳನ್ನು ವ್ಯವಸ್ಥೆಗೊಳಿಸಬೇಕು. ಆಯಾ ವಿದ್ಯಾರ್ಥಿಗಳ ತಂಡದ ಶೈಕ್ಷಣಿಕ ಹಾಗೂ ಮಾನಸಿಕ ಅಗತ್ಯಗಳಿಗನುಗುಣವಾಗಿ, ತರಗತಿಯ ಉಪಾಧ್ಯಾಯರು, ಪುಸ್ತಕಗಳನ್ನು ಆರಿಸಿಕೊಳ್ಳಬೇಕು; ಇವುಗಳನ್ನು ತರಗತಿಯಲ್ಲಿ ಒಂದು ಸಣ್ಣ ಪೆಟ್ಟಿಗೆಯಲ್ಲಿರಿಸಬಹುದು. ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಪುಸ್ತಕಗಳನ್ನಿಡಬಹುದು. ಈ ಪುಸ್ತಕಗಳನ್ನು, ವಿದ್ಯಾರ್ಥಿಗಳು, ಕೇವಲ ಪುಸ್ತಕ ಭಂಡಾರದ ವೇಳೆ (ಪೀರಿಯಡ್)ಯಲ್ಲಷ್ಟೇ ಅಲ್ಲದೆ, ಯಾರಾದರೂ ಉಪಾಧ್ಯಾಯರು ಗೈರು ಹಾಜರಿಯಾದ ಸಂದರ್ಭದಲ್ಲಿಯೂ ಉಪಯೋಗಿಸಿಕೊಳ್ಳಬಹುದು.

ಕೋಲಾರದ ಸರಕಾರೀ ಹೈಸ್ಕೂಲಿನಲ್ಲಿ ನಾನು ಮುಖ್ಯೋಪಾಧ್ಯಾಯನಾಗಿದ್ದಾಗ ನಡೆಸಿದ ಪ್ರಯೋಗವೊಂದರ ಬಗ್ಗೆ ಇಲ್ಲಿ ವಿವರಿಸಬಯಸುತ್ತೇನೆ. ೫೦ರಿಂದ ೬೦ ವಿದ್ಯಾರ್ಥಿಗಳಿದ್ದ ಪ್ರತಿಯೊಂದು ವಿಭಾಗದ ಉಪಯೋಗಕ್ಕಾಗಿ ತುಂಬಾ ವಿವೇಚನೆಯಿಂದ ಆರಿಸಿದ ೫ ಅಥವಾ ೬ ಪುಸ್ತಕಗಳ ತಲಾ ೧೦ ಪ್ರತಿಗಳನ್ನು ಕೊಂಡು ಇಡಲಾಯಿತು. ಈ ಪುಸ್ತಕಗಳನ್ನು ಪುಸ್ತಕ ಭಂಡಾರ ಶುಲ್ಕದ ಹಣದಿಂದಲೇ ಕೊಳ್ಳಲಾಗುತ್ತಿತ್ತು. ೫೦ರಿಂದ ೬೦ರವರೆಗೆ ಇರುತಿದ್ದ ಆ ಪುಸ್ತಕಗಳೇ (ಪ್ರತಿಗಳು) ತರಗತಿಯ ಪುಸ್ತಕ ಭಂಡಾರವಾಗಿ ಪರಿಣಮಿಸುತ್ತಿದ್ದವು. ತರಗತಿಯ ಉಪಾಧ್ಯಾಯನು, ಈ ೫ರಿಂದ ೬ ಪುಸ್ತಕಗಳನ್ನು ಮೊದಲೇ ಓದಿ, ಅವುಗಳಲ್ಲಿರುವ ಇಡೀ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಸಿದ್ಧಗೊಳಿಸಿರಬೇಕಾಗುತ್ತಿತ್ತು. ವಿದ್ಯಾರ್ಥಿಗಳು ಈ ಎಲ್ಲ ಪುಸ್ತಕಗಳನ್ನು–ಅಂದರೆ, ೫–೬ ಪುಸ್ತಕಗಳನ್ನು–ಒಂದು ವರ್ಷದಲ್ಲಿ, ತರಗತಿಯಲ್ಲಿಯೇ ಓದಿ ಮುಗಿಸಬೇಕಾಗುತ್ತಿತ್ತು. ಅದಕ್ಕಾಗಿಯೇ ಮೀಸಲಾಗಿರಿಸಿದ್ದ ನೋಟ್ ಪುಸ್ತಕಗಳಲ್ಲಿ ಪ್ರಶ್ನೆಗಳಿಗೆಲ್ಲ ಉತ್ತರಗಳನ್ನು ಬರೆದಿಡಬೇಕಾಗುತ್ತಿತ್ತು. ಉಪಾಧ್ಯಾಯರು ಈ ಕೆಲಸವನ್ನು ಕೂಡ ಅಭ್ಯಾಸ (ಎಕ್ಸರ್‌ಸೈಜ್) ಕ್ರಮವೆಂದೇ ಭಾವಿಸಿ, ಪ್ರಬಂಧ (ಕಂಪೊಜಿಷನ್) ಪುಸ್ತಕಗಳನ್ನು ತಿದ್ದುವಂತೆ, ಅವುಗಳನ್ನೂ ತಿದ್ದಬೇಕಾಗುತ್ತಿತ್ತು. ಈ ಪದ್ಧತಿಯನ್ನನುಸರಿಸಿದುದರಿಂದ, ಒಂದು ವರ್ಷದಲ್ಲಿ ಒಬ್ಬ ವಿದ್ಯಾರ್ಥಿ, ಕನಿಷ್ಟ ಪಕ್ಷ ೫ರಿಂದ ೬ ಪುಸ್ತಕಗಳನ್ನು ಓದಿದ್ದಾನೆಂಬುದು ಖಾತ್ರಿಯಾಗುತ್ತಿದ್ದಿತು.

ಪುಸ್ತಕ ಭಂಡಾರಕ್ಕೆ ಸ್ಥಳಾವಕಾಶ

ಯಾವುದೇ ಒಂದು ವೇಳೆಯಲ್ಲಿ ಕನಿಷ್ಠ ಪಕ್ಷ ೭೫ ಮಂದಿ ವಿದ್ಯಾರ್ಥಿಗಳು ಕುಳಿತು ಓದುವಷ್ಟು ಜಾಗವನ್ನಾದರೂ ಪುಸ್ತಕ ಭಂಡಾರಕ್ಕೆ ಒದಗಿಸಬೇಕು. ಈ ೭೫ರಲ್ಲಿ ೪೦–೫೦ ಮಂದಿ ತರಗತಿ ವಿಭಾಗದ ವಿದ್ಯಾರ್ಥಿಗಳೂ ೨೦–೨೫ ಮಂದಿ ಇತರ ವಿದ್ಯಾರ್ಥಿಗಳೂ ೫ ಮಂದಿ ಉಪಾಧ್ಯಾಯರೂ ಸೇರಿರಬಹುದು. ಗ್ರಂಥಾಲಯ ಪರಿಣತರು ಶಿಫಾರ್ಸು ಮಾಡಿರುವ ರೀತಿಯಲ್ಲಿ, ಪ್ರತಿ ವಿದ್ಯಾರ್ಥಿಗೆ ೨೫ ಚದರ ಅಡಿಗಳಷ್ಟು ಜಾಗದಂತೆ, ಒಟ್ಟು ೧೮೭೫ ಚದರ ಅಡಿಗಳಷ್ಟು ಜಾಗ ಬೇಕಾಗುತ್ತದೆ. ಅಂದರೆ, ಮೇಜು, ಕುರ್ಚಿ, ಕಪಾಟು ಮತ್ತು ಓಡಾಡುವ ದಾರಿ—ಎಲ್ಲವೂ ಸೇರಿ ಇಷ್ಟು ಜಾಗ ಬೇಕಾಗುತ್ತದೆ. ಶಾಲಾ ಕಟ್ಟಡಗಳಿಗೆ ನಕ್ಷೆಯನ್ನು ಸಿದ್ಧಗೊಳಿಸುವಾಗ, ಈ ಪ್ರಮುಖವಾದ ಅಂಶಕ್ಕೆ ಅವಕಾಶವನ್ನು ಕಲ್ಪಿಸಬೇಕು.

ಗ್ರಂಥಪಾಲಕರ ತರಬೇತಿ

ಗ್ರಂಥಾಲಯ ವಿಜ್ಞಾನದಲ್ಲಿ ಬ್ಯಾಚುಲರ್ ಪದವಿ ಪಡೆಯಲು ಅನುಕೂಲವಾಗುವಂತೆ, ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾಲಯಗಳು, ಪದವೀಧರರಿಗೆ, ಈ ವಿಷಯದಲ್ಲಿ, ಶಿಕ್ಷಣ ಸೌಲಭ್ಯವನ್ನೊದಗಿಸಿವೆ. ಇಂಥದೊಂದು ಶಿಕ್ಷಣ ಕ್ರಮವ (ಕೋರ್ಸ್)ನ್ನು ಪ್ರಾರಂಭಿಸಲು ಬೆಂಗಳೂರು ವಿಶ್ವವಿದ್ಯಾಲಯವು ಕೂಡ ನಿರ್ಧರಿಸಿದೆ. ಇದಲ್ಲದೆ, ಬೆಂಗಳೂರಲ್ಲಿರುವ ಮಹಿಳಾ ವೃತ್ತಿ ಶಿಕ್ಷಣ ಶಾಲೆ (ಪಾಲಿಟೆಕ್ನಿಕ್)ಯಲ್ಲಿ, ಪಿ.ಯು.ಸಿ.ಯಾದವರಿಗೆ, ೧೮ ತಿಂಗಳ ಕಾಲ ಗ್ರಂಥಪಾಲನಾ ತರಬೇತಿ ನೀಡುವ ವ್ಯವಸ್ಥೆ ಇದೆ. ಗ್ರಂಥಾಲಯ ಇಲಾಖೆಯವರು ನಡೆಸುತ್ತಿರುವ ಗ್ರಂಥಾಲಯ ತರಬೇತಿ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ಆದ ಗ್ರಂಥಾಲಯ ಸಹಾಯಕರಿಗೂ, ಹೈಸ್ಕೂಲ್ ಉಪಾಧ್ಯಾಯರಿಗೂ ತರಬೇತಿ ಕೊಡುವ ವ್ಯವಸ್ಥೆಯಿದೆ. ಹೈಸ್ಕೂಲು ಉಪಾಧ್ಯಾಯರಿಗೆ ೬ ವಾರಗಳ ತರಬೇತಿಯನ್ನೂ ಗ್ರಂಥಾಲಯ ಸಹಾಯಕರಿಗೆ ೩ ತಿಂಗಳ ಅವಧಿಯ ತರಬೇತಿಯನ್ನೂ ನಿಗದಿ ಮಾಡಲಾಗಿದೆ. ಹೈಸ್ಕೂಲ್ ಉಪಾಧ್ಯಾಯರಿಗೆ ನೀಡುತ್ತಿದ್ದ ತರಬೇತಿಯು ಆದರಣೀಯವಾಗಲಿಲ್ಲ. ತಿಂಗಳಿಗೆ ಕೇವಲ ೪೫ ರೂ. ಶಿಕ್ಷಣ ವೇತನ(ಸ್ಟೈಪೆಂಡ್) ಕೊಡುತ್ತಿದ್ದುದೇ ಇದಕ್ಕೆ ಕಾರಣ. ಹೀಗಾಗಿ ಈ ತರಬೇತಿಯನ್ನು ನಿಲ್ಲಿಸ

ಲಾಯಿತು. ಗ್ರಂಥಾಲಯ ಸಹಾಯಕರಿಗೆ ನೀಡುತ್ತಿದ್ದ ತರಬೇತಿಯ ಅವಧಿ ತೀರಾ ಕಡಮೆಯೆಂದೂ, ಅಷ್ಟು ಅವಧಿಯಲ್ಲಿ ಸಾಕಷ್ಟು ಅರ್ಹತೆ ಪಡೆಯುವಂತಹ ತರಬೇತಿಯನ್ನು ಕೊಡಲು ಸಾಧ್ಯವಿಲ್ಲವೆಂದೂ ಭಾವಿಸಲಾಯಿತು. ತಿಂಗಳಿಗೆ ೭೫ ರೂ.ಗಳಂತೆ ಶಿಕ್ಷಣ ವೇತನವನ್ನೀಯುವುದರ ಮೂಲಕ ಹೈಸ್ಕೂಲ್ ಉಪಾಧ್ಯಾಯರ ತರಬೇತಿ (ಕೋರ್ಸ್)ಯನ್ನೂ ಪುನಃ ಪ್ರಾರಂಭಿಸುವುದೊಳಿತೆಂಬುದೇ ನನ್ನ ಅಭಿಪ್ರಾಯ. ಹಾಗಾದರೆ ಮಾತ್ರ, ೨೦೦ ವಿದ್ಯಾರ್ಥಿಗಳಿಗಿಂತ ಕಡಮೆ ಸಂಖ್ಯೆಯಲ್ಲಿರುವ ೧,೦೦೦ಕ್ಕಿಂತಲೂ ಅಧಿಕವಾಗಿರುವ ನಮ್ಮ ಹೈಸ್ಕೂಲುಗಳಲ್ಲಿ ಅಪೂರ್ಣ ಕಾಲಾವಧಿಯ (ಪಾರ್ಟ್‌ಟೈಮ್) ಗ್ರಂಥಪಾಲಕರಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಈ ಮೊದಲು ಸಲಹೆ ಮಾಡಿರುವಂತೆ, ಇವರ ಕಾರ್ಯಬಾಹುಳ್ಯವನ್ನು ಶೇಕಡ ೫೦ರಷ್ಟು ಕಡಮೆ ಮಾಡಿ, ಪುಸ್ತಕ ಭಂಡಾರವನ್ನು, ಶಾಲಾವೇಳೆಯ ಹೊರಗೂ, ಶನಿವಾರ ಮತ್ತು ರಜಾ ದಿನಗಳಲ್ಲಿಯೂ, ತೆರೆದಿಡುವಂತೆ ಮಾಡಲು ತಿಂಗಳಿಗೆ ೩೦ ರೂ.ಗಳ ಭತ್ಯವನ್ನೀಯಬೇಕು. ಗ್ರಂಥಾಲಯ ಸಹಾಯಕರ ತರಬೇತಿ ಅವಧಿಯನ್ನು ೯ ತಿಂಗಳಿಗೆ ಹೆಚ್ಚಿಸಬೇಕು.

ರಾಜ್ಯ ಶೈಕ್ಷಣಿಕ ಗ್ರಂಥಾಲಯ

ರಾಜ್ಯ ಶೈಕ್ಷಣಿಕ ಗ್ರಂಥಾಲಯವು, ಈ ಕೆಳಗಿನ ಉದ್ದೇಶಗಳನ್ನಿಟ್ಟುಕೊಂಡು ೧೯೫೮ರಲ್ಲಿ ಪ್ರಾರಂಭವಾಯಿತು.

೧. ಶಿಕ್ಷಣ, ಮಾನಸಿಕ ಶಾಸ್ತ್ರ ಮೊದಲಾದ ವಿಷಯಗಳ ಮೇಲಿನ ಇತ್ತೀಚಿನ ಪುಸ್ತಕಗಳೂ ನಿಯತಕಾಲಿಕಗಳೂ, ಬೆಂಗಳೂರು ನಗರದ ಉಪಾಧ್ಯಾಯರಿಗೆ ದೊರೆಯುವಂತೆ ಮಾಡುವುದು ;

೨. ಬೆಂಗಳೂರು ನಗರದಲ್ಲಿರುವ ಉಪಾಧ್ಯಾಯರು ತಮ್ಮ ಬೋಧನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದಕ್ಕೂ, ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಜನೆಯನ್ನು ಉತ್ತಮಗೊಳಿಸಿಕೊಳ್ಳುವುದಕ್ಕೂ ಮತ್ತು ಅವರ ಸಾಮಾನ್ಯ ಜ್ಞಾನವನ್ನು ಅಧಿಕಗೊಳಿಸಿಕೊಳ್ಳುವುದಕ್ಕೂ ಸಹಾಯಕವಾಗುವಂತೆ, ಪರಾಮರ್ಶನ (ರೆಫರೆನ್ಸ್) ಗ್ರಂಥಗಳು ದೊರೆಯುವಂತೆ ಮಾಡುವುದು ;

೩. ಮಕ್ಕಳು ತಮ್ಮ ವಾಚನಾಭಿರುಚಿಯನ್ನು ಅಧಿಕಗೊಳಿಸಿಕೊಳ್ಳುವುದಕ್ಕೆ ಸಹಾಯಕವಾಗುವಂತೆ, ಮನೋರಂಜಕ, ಚಿತ್ರಮಯ ಹಾಗೂ ಆಕರ್ಷಕ ಪುಸ್ತಕಗಳನ್ನೊದಗಿಸುವುದು ;

೪. ಬಿ.ಎಡ್., ಎಂ.ಎಡ್., ವಿದ್ಯಾರ್ಥಿಗಳಿಗೂ ಮತ್ತು ಸಂಶೋಧನೆಯಲ್ಲಿ ತೊಡಗಿರುವವರಿಗೂ ಅನುಕೂಲವಾಗುವಂತೆ ಪರಾಮರ್ಶನ ಗ್ರಂಥಗಳನ್ನೊದಗಿಸುವುದು.

ಇದರ ಆರ್ಥಿಕ ವ್ಯವಸ್ಥೆ ಈ ಕೆಳಗಿನಂತಿದೆ :

ಸರಕಾರದ ಸಹಾಯಧನ		೨೧,೧೦೦ ರೂ.
ಪುಸ್ತಕಗಳು	೧೫,೦೦೦	
ನಿಯತಕಾಲಿಕಗಳು	೪,೦೦೦	
ಅನಿಶ್ಚಿತ ವೆಚ್ಚಗಳ ಸಹಾಯ ಧನ	೧,೫೦೦	
ಸಂಕೀರ್ಣ ವೆಚ್ಚ (ಮಿಸಲೇನಿಯಸ್)	೬೦೦	
	ರೂ. ೨೧,೧೦೦	
ಬೆಂಗಳೂರು ನಗರದಲ್ಲಿ, ಮಾಧ್ಯಮಿಕ ಹಾಗೂ ಹೈಸ್ಕೂಲುಗಳಲ್ಲಿ ವಸೂಲಿಯಾಗುವ ವಾಚನಾಲಯ ಶುಲ್ಕದ ಶೇಕಡ ೧೦ರಷ್ಟು ಸುಮಾರು		೫,೦೦೦
ಒಟ್ಟು		ರೂ. ೨೬,೧೦೦

ಮಂಜೂರಾದ ಸಿಬ್ಬಂದಿಯ ಸಂಖ್ಯೆ ಈ ಕೆಳಗಿನಂತಿದೆ:

೧.	ಗ್ರಂಥಪಾಲಕ	ರೂ. ೨೭೫–೫೫೦	೧	ಹುದ್ದೆ
೨.	ತಾಂತ್ರಿಕ ಸಹಾಯಕ	ರೂ. ೨೨೫–೪೫೦	೧	,,
೩.	ಪ್ರಥಮ ದರ್ಜೆಯ ಗುಮಾಸ್ತ	ರೂ. ೧೩೦–೨೯೦	೩	,,
೪.	ದ್ವಿತೀಯ ದರ್ಜೆಯ ಗುಮಾಸ್ತ	ರೂ. ೯೦–೨೦೧	೧	,,
೫.	ದ್ವಿತೀಯ ಬೆರಳಚ್ಚುಗ (ಟೈಪಿಸ್ಟ್)	ರೂ. ೯೦–೨೦೦	೧	,,
೬.	ಪರಿಚಾರಕ	ರೂ. ೮೦–೧೪೫	೧	,,
೭.	ಸೇವಕ	ರೂ. ೬೫–೯೫	೧	,,
೮.	ಪಹರೆದಾರ (ವಾಚ್‌ಮನ್)	ರೂ. ೬೫–೯೫	೧	,,

ಒಟ್ಟು ೧೨

ಈ ಗ್ರಂಥಾಲಯದಲ್ಲಿ, ೩೨,೦೦೦ ಪುಸ್ತಕಗಳಿವೆ; ೧,೫೦೦ ಮಂದಿ ಸದಸ್ಯರಿದ್ದಾರೆ; ಪ್ರತಿದಿನ ೪೦೦ ಮಂದಿ ಭೇಟಿ ನೀಡುತ್ತಾರೆ. ಇದು ಅತ್ಯುಪಯುಕ್ತವಾದ ಸೇವೆಯನ್ನು ಸಲ್ಲಿಸುತ್ತಲಿದೆ. ಆದರೆ, ಸದಸ್ಯರು ದೂರದೂರದಿಂದ ಬರಬೇಕಾಗಿರುವುದರಿಂದಾಗಿ, ಇದರ ಕಾರ್ಯಚಟುವಟಿಕೆಗಳು ಮಿತಿಗೊಂಡಿವೆ. ಈ ಕಾರಣದಿಂದಾಗಿ, ನಗರದ ಹತ್ತು ಕೇಂದ್ರಗಳಲ್ಲಿ ಪ್ರಾದೇಶಿಕ ಶಾಖೆಗಳನ್ನು ತೆರೆಯಬಹುದೆಂದು ಆಡಳಿತ ಸಮಿತಿಯು ತೀರ್ಮಾನವನ್ನು ಕೈಗೊಂಡಿದೆ. ಸದ್ಯಕ್ಕೆ ನಾಲ್ಕು ಶಾಖೆಗಳು ಮಾತ್ರ ಕೆಲಸ ಮಾಡುತ್ತಲಿವೆ. ಆದರೆ, ಇವುಗಳಿಗೆ ಹೆಚ್ಚಿನ ಸಿಬ್ಬಂದಿಯ ನೇಮಕವಾಗಿಲ್ಲ. ರಾಜ್ಯ ಶೈಕ್ಷಣಿಕ ಗ್ರಂಥಾಲಯದಿಂದಲೇ ಒಬ್ಬರು ವಾರಕ್ಕೊಂದು ಸಲ ಹೋಗಿ, ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ವಿತರಣೆ ಮಾಡಿ ಬರುತ್ತಾರೆ. ಪ್ರತಿಯೊಂದು ಶಾಖೆಗೆ ಒಬ್ಬ ಗ್ರಂಥಾಲಯ ಸಹಾಯಕನನ್ನೂ ಇಬ್ಬರು ಪರಿಚಾರಕರನ್ನೂ ಮಂಜೂರು ಮಾಡಬಹುದೆಂದು ರಾಜ್ಯ ಶೈಕ್ಷಣಿಕ ಗ್ರಂಥಾಲಯದ ಗ್ರಂಥಪಾಲಕರು ಸಲಹೆ ಮಾಡಿದ್ದಾರೆ. ಸಾರ್ವಜನಿಕ ಗ್ರಂಥಾಲಯ ಇಲಾಖೆಯು, ಬೆಂಗಳೂರು ನಗರದಲ್ಲಿ ನಗರ ಹಾಗೂ ಪ್ರಾದೇಶಿಕ ಗ್ರಂಥಾಲಯಗಳನ್ನು ತೆರೆಯುತ್ತಲಿದೆ—ಎಂಬ ಅಂಶವನ್ನು ಈ ಸಂದರ್ಭದಲ್ಲಿ ಗಮನಿಸಬೇಕಾಗಿದೆ. ಇವುಗಳಲ್ಲಿ ಮಕ್ಕಳ ವಿಭಾಗಗಳೂ ಇರುತ್ತವೆ. ಯಾವುದೇ ಒಂದು ಪ್ರದೇಶದಲ್ಲಿ, ಗ್ರಂಥಾಲಯಾನುಕೂಲಗಳು, ಅನಗತ್ಯವಾಗಿ ದ್ವಿಗುಣಿತವಾಗದಂತೆ ನೋಡಿಕೊಳ್ಳಲು ಎಚ್ಚರಿಕೆ ವಹಿಸಬೇಕು. ಶಿಕ್ಷಣ ಇಲಾಖೆಯ ನಿರ್ದೇಶಕರೂ (ಡೈರೆಕ್ಟರ್) ಸಾರ್ವಜನಿಕ ಗ್ರಂಥಾಲಯಗಳ ಮುಖ್ಯಾಧಿಕಾರಿಯೂ ಮತ್ತು ಶಿಕ್ಷಣ ಇಲಾಖೆಯ ಕಾರ್ಯದರ್ಶಿಯೂ ಸೇರಿದ ಸಭೆಯೊಂದರಲ್ಲಿ ಈ ಬಗ್ಗೆ ಚರ್ಚಿಸಿ, ಒಂದು ನಿರ್ಧಾರಕ್ಕೆ ಬರಬಹುದು. ಗ್ರಂಥಪಾಲಕರು ಮಾಡಿರುವ ಸಲಹೆಯ ಪ್ರಕಾರ, ಹೆಚ್ಚುವರಿ ಸ್ಥಳಾವಕಾಶದ ಅಗತ್ಯವೂ ಬೀಳುತ್ತದೆ. ರಾಜ್ಯ ಶೈಕ್ಷಣಿಕ ಗ್ರಂಥಾಲಯವು ಕೂಡ ಸಣ್ಣ ಹಾಗೂ ಅಸೂಕ್ತ ಕಟ್ಟಡದಲ್ಲಿ ಅಡಕವಾಗಿದೆ. ಹೀಗಾಗಿ, ಇದು ಎಷ್ಟರಮಟ್ಟಿನ ಸೇವೆ ಸಲ್ಲಿಸಬೇಕೋ ಅಷ್ಟರ ಮಟ್ಟಿನ ಸೇವೆ ಸಲ್ಲಿಸಲು ಸಾಧ್ಯವಾಗುತ್ತಲಿಲ್ಲ. ಈ ಗ್ರಂಥಾಲಯವನ್ನು ಬೇರೆ ಉತ್ತಮವಾದ ದೊಡ್ಡ ಕಟ್ಟಡಕ್ಕೆ ಸ್ಥಳಾಂತರಗೊಳಿಸಬೇಕಾದುದು ಅತ್ಯವಸರದ ಕೆಲಸವಾಗಿದೆ.

ಈ ಗ್ರಂಥಾಲಯದ ಉಪಯೋಗವನ್ನು ಹೆಚ್ಚಿಸುವುದಕ್ಕಾಗಿ, ಅರ್ಹತೆ ಪಡೆದ (ಕ್ವಾಲಿಫೈಡ್) ಗ್ರಂಥಪಾಲಕರನ್ನು ನಿಯಮಿಸುವುದರ ಮೂಲಕ, ಈಗಿನ ಸಿಬ್ಬಂದಿಯಲ್ಲಿ ಕೆಲವರನ್ನು ಬದಲಾಯಿಸುವುದು ಅಗತ್ಯವಾಗಿದೆ. ೨೦೦–೪೫೦ ರೂ.ಗಳ ಅಂತಸ್ತಿನಲ್ಲಿ (ಗ್ರೇಡ್) ೩ ಮಂದಿ ಗ್ರಂಥಾಲಯ ಸಹಾಯಕರನ್ನು ನಿಯಮಿಸುವುದರ

(೧೨೯ನೇ ಪುಟ ನೋಡಿ)

ಭಾರತದ ರಾಷ್ಟ್ರೀಯ ಗ್ರಂಥಾಲಯ - ಕಲ್ಕತ್ತಾ

● ಟಿ. ವಿ. ವೆಂಕಟರಮಣಯ್ಯ

ನಮ್ಮ ರಾಷ್ಟ್ರದ ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸದಲ್ಲಿ ಗಣನೀಯ ಪಾತ್ರ ವಹಿಸಿರುವ ಕಲ್ಕತ್ತಾ ನಗರದ ಆಲಿಪುರದಲ್ಲಿರುವ ರಾಷ್ಟ್ರೀಯ ಗ್ರಂಥಾಲಯ ನಮ್ಮ ದೇಶದಲ್ಲೇ ಅತಿ ದೊಡ್ಡದು. ಜಗತ್ತಿನ ವಿಖ್ಯಾತ ಗ್ರಂಥಾಲಯಗಳ ಜೊತೆಗೆ ಹೆಗಲೆಣೆಯಾಗಿ ನಿಲ್ಲಬಲ್ಲ ಅದು ನಮ್ಮ ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾಗಿದೆ. ರಾಷ್ಟ್ರದ ಸಾಂಸ್ಕೃತಿಕ ಕೇಂದ್ರ ಬಿಂದುವಾಗಿದೆ. ಸ್ವತಂತ್ರ ಭಾರತದ ಯಾತ್ರಾಸ್ಥಳಗಳಲ್ಲಿ ಇದೂ ಒಂದಾಗಿದೆ. ಭಾರತದ ರಾಜಧಾನಿ ದಿಲ್ಲಿಗೆ ಸ್ಥಳಾಂತರವಾಗುವ ಮೊದಲು ವೈಸ್‌ರಾಯ್‌ರವರ ನಿವಾಸವಾಗಿದ್ದ 'ಬೆಲ್ವೆಡೆರೆ' ಎಂಬ ವಿಶಾಲವಾದ ಸೌಧ ವಿದೆ. ಇಲ್ಲಿಯೇ ಬಹುಶಃ ಭಾರತವನ್ನು ಪೂರ್ಣವಾಗಿ ಆಂಗ್ಲರ ಪಾದಾಕ್ರಾಂತವಾಗಿ ಮಾಡಿದ ಹಲವು ಸಂಚುಗಳು ನಡೆದಿರಬೇಕು. ಆದರೆ ಈಗ ಈ ಪ್ರಾಸಾದದಲ್ಲಿ ರಾಜತಂತ್ರದ ಯಾವ ಆಟವೂ ನಡೆಯುವುದಿಲ್ಲ. ನಿಶ್ಶಬ್ದ ಆವರಣದಲ್ಲಿ ಸರಸ್ವತಿಯ ಆರಾಧನೆ ಇಲ್ಲಿ ನಡೆಯುತ್ತಿದೆ.

ಕಲ್ಕತ್ತೆಯ ಸಾರ್ವಜನಿಕ ಪುಸ್ತಕ ಭಂಡಾರ:

೧೯ನೆಯ ಶತಮಾನದ ಆದಿಭಾಗದಲ್ಲಿ ಸ್ಥಾಪಿತವಾದ ಈ ಕಲ್ಕತ್ತೆಯ ಸಾರ್ವಜನಿಕ ಪುಸ್ತಕಭಂಡಾರದ ವಿಷಯವನ್ನು ಪ್ರಸ್ತಾಪಿಸದಿದ್ದರೆ ನಮ್ಮ ರಾಷ್ಟ್ರೀಯ ಗ್ರಂಥಾಲಯದ ಇತಿಹಾಸ ಪೂರ್ಣವಾಗದು. ಅಂದಿನ 'ಇಂಗ್ಲಿಷ್ ಮನ್' ಪತ್ರಿಕೆಯ ಸಂಪಾದಕನಾದ ಜೆ. ಎಚ್. ಸ್ಟಾಕ್ವೆಲರ್ ಎಂಬಾತನು ಈ ಸಾರ್ವಜನಿಕ ಪುಸ್ತಕ ಭಂಡಾರವನ್ನು ಆರಂಭಿಸಲು ಕಾರಣಕರ್ತನು. ೧೮೩೫ರ ಆಗಸ್ಟ್ ತಿಂಗಳಲ್ಲಿ ತನ್ನ ಯೋಜನೆಯನ್ನು ಗಣ್ಯ ಸಾರ್ವಜನಿಕರ ಸಭೆ ಮುಂದೆ ಇಟ್ಟು, ಸಭೆಯ ಒಪ್ಪಿಗೆ ಪಡೆದನು. ೨೪ ಸದಸ್ಯರಿರುವ ಒಂದು ವ್ಯವಸ್ಥಾಪಕ ಮಂಡಳಿಯನ್ನು ರಚಿಸಲಾಯಿತು. ಈ ಮಂಡಳಿಯಲ್ಲಿ ಕೇವಲ ಇಬ್ಬರು ಮಾತ್ರ ಭಾರತೀಯರಿದ್ದರು. ಸ್ಟಾಕ್ವೆಲರ್‌ನೇ ಅದರ ಮೊದಲ ಗೌರವ ಕಾರ್ಯದರ್ಶಿ ಆದನು. ಮುನ್ನೂರು ರೂಪಾಯಿಗಳನ್ನು ಕೊಡಬಲ್ಲವರು ಮಾತ್ರ ಈ ಪುಸ್ತಕ ಭಂಡಾರದ ಮಾಲಿಕರಾಗಬಹುದಿತ್ತು. ಕವಿ ರವೀಂದ್ರರ ಅಜ್ಜ ದೊರೆ ದ್ವಾರಕನಾಥ ಠಾಕೂರರು ಅದರ ಮೊದಲ ಮಾಲಿಕರಾದರು. ಅವರ ಉದಾರ ಕೊಡುಗೆಗೆ ಕೃತಜ್ಞತೆ ಸೂಚಿಸಲು ಕಲ್ಕತ್ತೆಯ ನಾಗರಿಕರು ಅಮೃತ ಶಿಲೆಯಲ್ಲಿ ಕಡೆದ ಅವರ ಮೂರ್ತಿಯನ್ನು ಗ್ರಂಥಾಲಯದಲ್ಲಿ ಸ್ಥಾಪಿಸಿದರು. (ಆ ಶಿಲಾ ಪ್ರತಿಮೆ ಹಾಲಿ ರಾಷ್ಟ್ರೀಯ ಗ್ರಂಥಾಲಯದ ಪ್ರವೇಶದ್ವಾರದ ಬಳಿ ಇದೆ) ಮಾಲಿಕರಿಂದ ಸಲ್ಲುತ್ತಿದ್ದ ಹಣ ಹಾಗೂ ಸಾಮಾನ್ಯ ಚಂದಾದಾರರ ಚಂದಾ ಹಣದ ಜೊತೆಗೆ ಆಗಾಗ ನಿಧಿ

ಸಂಗ್ರಹಿಸಲಾಗುತ್ತಿತ್ತು. ಆದರೂ ಹಣದ ಕೊರತೆಯಿಂದ ಆದರ ಪ್ರಗತಿ ಮಂದಗತಿಯಲ್ಲಿ ಸಾಗಿತ್ತು. ಮಿಗಿಲಾಗಿ ಸಿಪಾಯಿ ದಂಗೆಯ ಕಾರಣ ಆಂಗ್ಲರ ಆಸಕ್ತಿಯೂ ಕಡಿಮೆ ಆಗಿತ್ತು.

ಇಂಥ ವೇಳೆಯಲ್ಲಿ ಪುಸ್ತಕ ಭಂಡಾರದ ಮಾಲಿಕರಲ್ಲಿ ಒಬ್ಬನೂ ಬಂಗಾಲದ ದೊಡ್ಡ ಅಧಿಕಾರಿಯೂ ಆಗಿದ್ದ ಎ. ಮೆಕೆನ್ಸಿ ಎಂಬಾತನು ಈ ಪುಸ್ತಕ ಭಂಡಾರದ ಹೊಣೆಯನ್ನು ನಗರಸಭೆ ಹಾಗೂ ಸರ್ಕಾರ ವಹಿಸಬೇಕೆಂಬ ಒಂದು ಯೋಜನೆಯನ್ನು ಸಿದ್ಧಪಡಿಸಿದನು. ಅದರ ಪ್ರಕಾರ ನಗರಸಭೆಯ ಪ್ರತಿನಿಧಿಗಳೇ ಹೆಚ್ಚಾಗಿದ್ದ ಒಂದು ವ್ಯವಸ್ಥಾಪಕ ಮಂಡಳಿಯ ಕೈಗೆ ಸಾರ್ವಜನಿಕ ಪುಸ್ತಕ ಭಂಡಾರ ೧೮೯೦ರಲ್ಲಿ ಸೇರಿತು. ಇದರಿಂದ ಪುಸ್ತಕ ಭಂಡಾರ ವಿಸ್ತರಿಸಲು ಸಹಾಯವಾಯಿತು. ರೂ ೧೦೦–೨೦೦ ಸಂಬಳದಂತೆ ಒಬ್ಬ ಗ್ರಂಥಭಂಡಾರಿಗಾಗಿ ಜಾಹೀರಾತು ನೀಡಲಾಗಿ ೨೨೦ ಅರ್ಜಿಗಳು ಬಂದವು. ಅವುಗಳಲ್ಲಿ ಮುಂದೆ ರಾಷ್ಟ್ರನಾಯಕರಾಗಲಿದ್ದ ಬಿಪಿನ್ ಚಂದ್ರಪಾಲ್ ಅವರ ಅರ್ಜಿ ಸ್ವೀಕೃತವಾಗಿ, ಅವರು ಅಧಿಕಾರ ಸ್ವೀಕರಿಸಿದರು. ಅವರು ಗ್ರಂಥಸೂಚಿಯ ಮಹತ್ವದ ಕೆಲಸವನ್ನು ಆರಂಭಿಸಿದರು. ಇಂದಿನ ರಾಷ್ಟ್ರೀಯ ಗ್ರಂಥಾಲಯದಲ್ಲಿರುವ ಹಲವಾರು ಅಮೂಲ್ಯ ಗ್ರಂಥಗಳಿಗೆ ಈ ಸಾರ್ವಜನಿಕ ಪುಸ್ತಕ ಭಂಡಾರವೇ ಕಾರಣವಾಯಿತು.

ಇಂಪೀರಿಯೆಲ್ ಲೈಬ್ರೆರಿ

ಕಲ್ಕತ್ತೆಯಂಥ ದೊಡ್ಡ ನಗರದಲ್ಲಿ ಸುವ್ಯವಸ್ಥಿತವಾದ ದೊಡ್ಡ ಪುಸ್ತಕ ಭಂಡಾರ ಒಂದು ಇರಬೇಕೆಂಬ ಯೋಚನೆ ಲಾರ್ಡ್‌ಕರ್ಜನ್ನನಿಗೆ ಮೊದಲು ಹೊಳೆಯಿತು. ಅವನು ೧೮೯೯ರಲ್ಲಿ ಕಲ್ಕತ್ತೆಗೆ ನೀಡಿದ ಭೇಟಿಯಲ್ಲಿ ಸರ್ಕಾರೀ ಭವನಗಳನ್ನೂ ಸಾರ್ವಜನಿಕ ಸಂಸ್ಥೆಗಳನ್ನೂ ಸುತ್ತಾಡಿ ನೋಡಿದ. ಉತ್ತಮ ಗ್ರಂಥಗಳಿದ್ದಾಗ್ಯೂ ಅನುಕೂಲತೆಯ ಅಭಾವದಿಂದ ಎರಡು ದೊಡ್ಡ ಪುಸ್ತಕ ಭಂಡಾರಗಳು ನಿರುಪಯೋಗಿಯಾಗಿರುವುದನ್ನು ಗಮನಿಸಿದ. ಮೊದಲನೆಯದು, ವಿವಿಧ ಸರ್ಕಾರಿ ಇಲಾಖೆಗಳಿಗೆ ಸಂಬಂಧಿಸಿದ ಗ್ರಂಥ ಸಂಗ್ರಹಗಳಿಂದ ರೂಪುಗೊಂಡಿದ್ದ ಇಂಪೀರಿಯಲ್ ಲೈಬ್ರೆರಿ. ಭಾರತ ಸರ್ಕಾರಕ್ಕೆ ಸೇರಿದ್ದ ಈ ಗ್ರಂಥಭಂಡಾರದಲ್ಲಿ ಹಲವು ಅಪರೂಪದ ಪುಸ್ತಕಗಳಿದ್ದವು. ಅವುಗಳನ್ನು ಉಪಯೋಗಿಸುವ ಹಕ್ಕು ಉನ್ನತ ಅಧಿಕಾರಿಗಳಿಗೆ ಮಾತ್ರವಿದ್ದಿತು. ಸಾರ್ವಜನಿಕರಿಗೆ ಬೇಕಿದ್ದರೆ ವಿಶೇಷ ಅನುಮತಿ ಪಡೆದುಕೊಳ್ಳಬೇಕಿತ್ತು. ಮತ್ತೊಂದು, ಶೋಚನೀಯ ಸ್ಥಿತಿಯಲ್ಲಿದ್ದ ಸಾರ್ವಜನಿಕ ಪುಸ್ತಕ ಭಂಡಾರ. ಈ ಗ್ರಂಥಾಲಯದ ದೀನಸ್ಥಿತಿಯನ್ನು ನೋಡಿ ಲಾರ್ಡ್ ಕರ್ಜನ್ನನ ಮನಸ್ಸು ತಲ್ಲಣಗೊಂಡಿರಬೇಕು. ಧೂಳಿನ ರಾಶಿಯಿದ್ದ ಕಪಾಟುಗಳಲ್ಲಿನ ಪುಸ್ತಕಗಳು ತಮ್ಮ ಹೊದಿಕೆಗಳಿಂದ ದೂರವಾಗಿದ್ದವು. ವಾಚಕರು ಕೂಡಬೇಕಾದ ಸ್ಥಳವನ್ನು ಅಲ್ಲಿಯೇ ವಾಸವಾಗಿದ್ದ ಪಾರಿವಾಳಗಳು ಆಕ್ರಮಿಸಿಕೊಳ್ಳುತ್ತಿದ್ದವು. ಮೂಲೆ ಮೂಲೆಗಳಲ್ಲಿ ಜೇಡಗಳು ತಮ್ಮ ಬಳಗವನ್ನು ಬೆಳೆಯಿಸಿಕೊಂಡು ಹಾಯಾಗಿ ಸುಖದಿಂದ ಇದ್ದವು. ಮಿಂಚಿನ ವೇಗದಿಂದ ಕೆಲಸಮಾಡುವ ಪ್ರವೃತ್ತಿಯುಳ್ಳ ಕರ್ಜನ್ ಈ ಎರಡೂ ಗ್ರಂಥಾಲಯಗಳನ್ನು ಸೇರಿಸಿ ಸಜ್ಜುಗೊಳಿಸಬೇಕೆಂದು ಇಚ್ಛಿಸಿದ. ಆದರೆ ಸಾರ್ವಜನಿಕ ಪುಸ್ತಕ ಭಂಡಾರಕ್ಕೆ ಹಲವರು ಮಾಲಿಕರಿದ್ದುದರಿಂದ ಅದು ಅಷ್ಟು ಸುಲಭವಾಗಿರಲಿಲ್ಲ. ಮಾಲಿಕರಿಗೆ ಪರಿಹಾರ ನೀಡುವುದರ ಮೂಲಕ ಹಾಗೂ ಇತರೆ ಕೆಲವು ನಿಯಮಗಳಿಗನುಸಾರವಾಗಿ ಕರ್ಜನ್ ಈ ಎರಡು ಪುಸ್ತಕ ಭಂಡಾರಗಳನ್ನೂ ಏಕೀಕರಿಸಿದ. ಇದಕ್ಕಾಗಿ ಅಂದಿನ ಸರ್ಕಾರ ೨೮,೫೦೦ ರೂ.ಗಳನ್ನು ಖರ್ಚು ಮಾಡಿತು. ಈ ಎರಡು ಪುಸ್ತಕಭಂಡಾರಗಳ ಜೊತೆಗೆ ಈಸ್ಟ್ ಇಂಡಿಯಾ ಕಾಲೇಜ್ ಲೈಬ್ರೆರಿಯನ್ನೂ ವಿಲೀನಗೊಳಿಸಿದ.

ಈ ರೀತಿ ರೂಪಗೊಂಡ ಹೊಸ ಪುಸ್ತಕ ಭಂಡಾರಕ್ಕಾಗಿ ವ್ಯವಸಾಯ ಇಲಾಖೆಯಲ್ಲಿದ್ದ 'ಮೆಟ್ಕಾಫ್ ಹಾಲ'ನ್ನು ಬಾಡಿಗೆಗೆ ಪಡೆದುಕೊಳ್ಳಲಾಯಿತು. ಪುಸ್ತಕಗಳನ್ನು ಬ್ರಿಟಿಷ್ ಮ್ಯೂಜಿಯಂ ಮಾದರಿಯಲ್ಲಿ ವ್ಯವಸ್ಥೆ ಮಾಡಲಾಯಿತಲ್ಲದೆ ಅವುಗಳ ಸೂಚಿಯನ್ನೂ ತಯಾರಿಸಲಾಯಿತು. ೧೯೦೩ರ ಜನವರಿ ೩೦ರಂದು ಸಂಜೆ ನಡೆದ ವಿಶೇಷ ಸಮಾರಂಭದಲ್ಲಿ ಪುಸ್ತಕಭಂಡಾರವನ್ನು ಸಾರ್ವಜನಿಕರಿಗೆ ತೆರೆಯಲಾಯಿತು. ಸರ್ ಅಶುತೋಷ ಮುಖರ್ಜಿಯವರೂ ಉಪಸ್ಥಿತರಿದ್ದರು. 'ಜನರು ಬ್ರಿಟಿಷ್ ಮ್ಯೂಜಿಯಂನ ಗ್ರಂಥಾಲಯವನ್ನು ಅಥವಾ ಆಕ್ಸ್‌ಫರ್ಡ್‌ನಲ್ಲಿಯ ಬಾಡ್ಲೀಯನ್ ಗ್ರಂಥಾಲಯವನ್ನು ಜ್ಞಾನದಾಹವನ್ನಿಂಗಿಸಿಕೊಳ್ಳಲು ಹೇಗೆ ಮುತ್ತುವರೋ ಹಾಗೆಯೇ ಈ ಗ್ರಂಥಾಲಯದ ಆತಿಥ್ಯವನ್ನು ಕೋರಿ ಬರಬೇಕು' ಎಂಬುದೇ ಕರ್ಜನ್ ಮಹಾಶಯನ ಮಹದಾಶಯವಾಗಿತ್ತು. ಅಂತೆಯೇ ಅವನು

ಬ್ರಿಟಿಷ್ ಮ್ಯೂಜಿಯಂನಲ್ಲಿ ಕೆಲಸಮಾಡುತ್ತಿದ್ದ ಮ್ಯಾಕ್ ಫರ್ಲೇನ್ ಎಂಬ ಗ್ರಂಥಾಲಯ ಶಾಸ್ತ್ರಜ್ಞನನ್ನು ಕರೆಸಿ ಇಂಪೀರಿಯಲ್ ಲೈಬ್ರೆರಿಯ ಗ್ರಂಥಪಾಲನನ್ನಾಗಿ ನೇಮಿಸಿದ. ಪುಸ್ತಕ ಭಂಡಾರದ ಪರಮಾಧಿಕಾರ ಭಾರತ ಸರ್ಕಾರದ ಗೃಹ ಇಲಾಖೆಗೆ ಸೇರಿದ್ದರೂ ಆಡಳಿತ ವ್ಯವಸ್ಥೆಗಾಗಿ ಒಂದು ಮಂಡಳಿಯನ್ನು ನೇಮಿಸಲಾಯಿತು. ಟಿ. ರ್‍ಯಾಲೆ ಎಂಬಾತ ಅದರ ಮೊದಲ ಅಧ್ಯಕ್ಷನಾಗಿದ್ದ. ಸದಸ್ಯವರ್ಗದಲ್ಲಿ ಜಸ್ಟಿಸ್ ಗುರುದಾಸ ಬ್ಯಾನರ್ಜಿ ಸೇರಿದ್ದರು. ಪುಸ್ತಕ ಭಂಡಾರದ ಪೂರ್ಣ ಆರ್ಥಿಕ ಹೊಣೆ ಭಾರತ ಸರ್ಕಾರದ್ದಾಗಿತ್ತು. ೧೯೦೬ರಲ್ಲಿ ಜಾನ್ ಮ್ಯಾಕ್ ಫರ್ಲೇನ್ ಅವರ ಅಕಾಲ ಮರಣದಿಂದಾಗಿ ಗ್ರಂಥಾಲಯಕ್ಕೆ ಬಹಳ ನಷ್ಟವುಂಟಾಯಿತು. ನಂತರ ಖ್ಯಾತ ಭಾಷಾಶಾಸ್ತ್ರಜ್ಞ ಹರಿನಾಥರೇ ೨೨-೨-೧೯೦೭ರಲ್ಲಿ ಗ್ರಂಥ ಭಂಡಾರಿಯಾಗಿ ಅಧಿಕಾರ ಸ್ವೀಕರಿಸಿದರು. ಅವರ ಅಧಿಕಾರದ ಅಲ್ಪಕಾಲಾವಧಿಯ ನಂತರ ಭಂಡಾರಿಗರಾದ ಜೆ. ಎ. ಚಾಪ್‌ಮನ್‌ರವರ ಕಾಲದಲ್ಲೂ ಪುಸ್ತಕ ಭಂಡಾರ ಎಲ್ಲಾ ದಿಕ್ಕಿನಲ್ಲಿ ಪ್ರಗತಿ ಸಾಧಿಸಿತು.

ಅನೇಕ ಖಾಸಗಿ ವ್ಯಕ್ತಿಗಳು ತಮ್ಮ ಗ್ರಂಥ ಸಂಗ್ರಹಗಳನ್ನು ಗ್ರಂಥಾಲಯಕ್ಕೆ ದಾನವಾಗಿ ಕೊಟ್ಟದ್ದರಿಂದ ಪುಸ್ತಕಭಂಡಾರ ತೀವ್ರವಾಗಿ ಬೆಳೆಯಲು ನೆರವಾಯಿತು. ಹಾಗೆ ಬಂದ ಮೊತ್ತ ಮೊದಲ ಸಂಗ್ರಹಗಳಲ್ಲಿ ಬಿಹಾರಿನ ಜಮೀನ್ದಾರರದ್ದೂ, ತ್ರಿಪುರಾದ ಮಹಾರಾಜರದ್ದೂ ಉಲ್ಲೇಖನೀಯ. ಒಂದು ಲಕ್ಷ ಪುಸ್ತಕಗಳ ಸಂಗ್ರಹದೊಂದಿಗೆ ಇಂಪೀರಿಯಲ್ ಲೈಬ್ರೆರಿ ತನ್ನ ಕಾರ್ಯಾರಂಭ ಮಾಡಿತು. ಸ್ಥಳದ ಅಭಾವದಿಂದ ಪುಸ್ತಕ ಭಂಡಾರವನ್ನು 'ಮೆಟ್ಕಾಫ್ ಹಾಲ್' ನಿಂದ 'ಎಸ್ಪ್ಲನೇಡ್ ಈಸ್ಟ್'ಕ್ಕೆ ಸ್ಥಳಾಂತರಿಸಲಾಯಿತು. (ಈಗ ಅಲ್ಲಿ ರಾಷ್ಟ್ರೀಯ ಗ್ರಂಥಾಲಯದ ವಾಚನಾಲಯವಿದೆ)

೧೯೨೯ರಿಂದ ಪುಸ್ತಕ ಭಂಡಾರದ ಆಡಳಿತ ಸಮಿತಿಯಲ್ಲಿ ಭಾರತದ ಎಲ್ಲಾ ಭಾಗಕ್ಕೂ ಪ್ರಾತಿನಿಧ್ಯ ನೀಡಲು ಪ್ರಾರಂಭವಾಯಿತು. ಎರಡನೇ ಮಹಾಯುದ್ಧ ಗ್ರಂಥಾಲಯದ ಬೆಳವಣಿಗೆಯ ಮೇಲೂ ತನ್ನ ಪ್ರಭಾವ ಬೀರಿತು. ಪುಸ್ತಕ ಭಂಡಾರ ಪುನಃ ಚಿತ್ತರಂಜನದಾಸ್ ರಸ್ತೆಯಲ್ಲಿನ ಕಟ್ಟಡವೊಂದಕ್ಕೆ ಬದಲಾಯಿತು. ಸೂಚೀಕರಣ ನಿಂತಿತು. ೧೯೪೭ರಲ್ಲಿ ಗ್ರಂಥಾಲಯದಲ್ಲಿ ೩ ಲಕ್ಷ ೫೦ ಸಾವಿರ ಗ್ರಂಥಗಳಿದ್ದವು. ಹೀಗೆ ಹೆಚ್ಚಿದ ೩ ೧/೨ ಲಕ್ಷ ಗ್ರಂಥಗಳಲ್ಲಿ ಅರ್ಧಕ್ಕಿಂತ ಹೆಚ್ಚು ಖಾಸಗಿ ವ್ಯಕ್ತಿಗಳಿಂದ ಬಂದ ದಾನದ ಫಲ. ಪುಸ್ತಕ ಭಂಡಾರದ ಜೊತೆಗೇ ಸಾರ್ವಜನಿಕ ವಾಚನಾಲಯವೂ ಬೆಳೆಯತೊಡಗಿತ್ತು. ಪ್ರಾರಂಭದಲ್ಲಿ ಪುಸ್ತಕ ಭಂಡಾರ ಸರ್ಕಾರಿ ಅಧಿಕಾರಿಗಳ ಉಪಯೋಗಕ್ಕೇ ಹೆಚ್ಚು ಮೀಸಲಾಗಿದ್ದರೂ ಬರಬರುತ್ತಾ ಅದು ಸಾರ್ವಜನಿಕರ ಸೊತ್ತಾಯಿತು. ಗ್ರಂಥಾಲಯ ತರಬೇತಿಯ ಪ್ರಥಮ ಕೇಂದ್ರವನ್ನೂ ತೆರೆಯಲಾಯಿತು.

ರಾಷ್ಟ್ರೀಯ ಗ್ರಂಥಾಲಯ

ಸ್ಟಾಕ್ವೆಲರ್‌ನ ಆಸಕ್ತಿ ಹಾಗೂ ಲಾರ್ಡ್ ಕರ್ಜನ್‌ನ ದೂರದೃಷ್ಟಿಯ ಫಲವಾಗಿ ರೂಪಿತಗೊಂಡ ಈ ಇಂಪೀರಿಯಲ್ ಲೈಬ್ರೆರಿ ಹೀಗೆ ಬೆಳೆದುದರ ಫಲವಾಗಿ ಸ್ವತಂತ್ರ ಭಾರತ ಸುಲಭವಾಗಿ ರಾಷ್ಟ್ರೀಯ ಗ್ರಂಥಾಲಯವನ್ನು ರೂಪಿಸಿಕೊಳ್ಳಲು ಸಾಧ್ಯವಾಯಿತು. ಸ್ವಾತಂತ್ರ್ಯದ ಅರುಣೋದಯದವರೆಗೆ ಮೆಟ್ಕಾಫ್ ಹಾಲ್‌ನಲ್ಲಿ ಸ್ಥಳ ಸಂಕೋಚದಿಂದಾಗಿ ಹಾಗೂ ಹೀಗೂ ಉಸಿರು ಕಟ್ಟಿಕೊಂಡ ಅವಸ್ಥೆಯಲ್ಲಿದ್ದುದರಿಂದ ಅದರ ಸ್ಥಳಾಂತರದ ಅವಶ್ಯಕತೆ ಗೋಚರಿಸಿತು. ೧೯೪೮ರಲ್ಲಿ ರಾಷ್ಟ್ರೀಯ ಗ್ರಂಥಾಲಯವನ್ನು ಪ್ರಾರಂಭಿಸುವ ನಿರ್ಣಯವಾದಾಗ ಭಾರತ ಸರ್ಕಾರಕ್ಕೆ ಗ್ರಂಥಾಲಯದ ಸಂಚಾಲಕತ್ವದ ಘನತರವಾದ ಹೊಣೆ ಹೊರಲು ಕನ್ನಡಿಗರಾದ ಪದ್ಮಶ್ರೀ ಬಿ. ಎಸ್. ಕೇಶವನ್ನರಷ್ಟು ಅರ್ಹರಾದವರು ಬೇರಾರೂ ದೊರೆಯಲಿಲ್ಲ. ಅವರು ಅಧಿಕಾರ ವಹಿಸಿಕೊಂಡನಂತರ ಕಲಕತ್ತೆಯ 'ಬೆಲ್ವೆಡೆರೆ'ನ ವೈಸರಾಯರ ಭಾರಿ ಸೌಧವು ರಾಷ್ಟ್ರೀಯ ಗ್ರಂಥಾಲಯದ ಕೇಂದ್ರವಾಗಬೇಕೆಂದು ಇಚ್ಛಿಸಿ ಅಂದಿನ ಬಂಗಾಲದ ಗೌರ್ನರ್ ಆಗಿದ್ದ ಚಕ್ರವರ್ತಿ ರಾಜಗೋಪಾಲಾಚಾರಿಯವರು ದಿ. ಪ್ರಧಾನಿ ನೆಹ್ರೂರಿಗೆ ಒಂದು ಪತ್ರ ಬರೆದರು; ನೆಹರೂ ಅದಕ್ಕೆ ಒಪ್ಪಿದರು. ಬೆಲ್ವೆಡೆರೆಯು ಗ್ರಂಥಗಳ ಉಗ್ರಾಣವಾಗಿರದೆ, ಜಗತ್ತಿನ ಅತ್ಯುತ್ತಮ ಆಧುನಿಕ ಗ್ರಂಥ ಭಂಡಾರವಾಗಬೇಕೆಂದು ನೆಹ್ರೂ ಆಶಿಸಿದರು. ಶಿಕ್ಷಣ ಸಚಿವರಾಗಿದ್ದ ಮೌಲಾನಾ ಆಜಾದರು ಇದಕ್ಕೆ ರೂಪುಕೊಟ್ಟರು. ಇದರಲ್ಲಿ ಅವರಿಗೆ ಪ್ರೊ|| ಹುಮಾಯೂನ್ ಕಬೀರ್, ಡಾ|| ತಾರಾಚಂದ್ ಮೊದಲಾದವರು ಸಹಾಯದ ಹಸ್ತ ನೀಡಿದರು. ಹಳೆಯ ಇಂಪೀರಿಯಲ್ ಲೈಬ್ರೆರಿಗೆ ರಾಷ್ಟ್ರೀಯ ಗ್ರಂಥಾಲಯವೆಂದು ನಾಮಕರಣ ಮಾಡಲಾಯಿತು. ಪುಸ್ತಕ ಭಂಡಾರವನ್ನು 'ಬೆಲ್ವೆಡೆರೆ'ಗೆ ಸ್ಥಳಾಂತರಿಸಲಾಯಿತು. ಹಳೆಯ ಹಾಗೂ ವಿಲಾಸಿ ಭವನವನ್ನು ಗ್ರಂಥಾಲಯದ ಕಾರ್ಯ

ಚಟುವಟಿಕೆಗಳ ಅನುಕೂಲಕ್ಕೆ ತಕ್ಕಂತೆ ನಾಲ್ಕು ವರ್ಷಗಳಲ್ಲಿ ಮಾರ್ಪಾಡು ಮಾಡಲಾಯಿತು. ಸಲಕರಣೆಗಳು ಹಾಗೂ ವಿದ್ಯುತ್ ವ್ಯವಸ್ಥೆ ಮೊದಲಾದ ಎಲ್ಲಾ ಅಂಶಗಳಲ್ಲೂ ಹೊಸ ವ್ಯವಸ್ಥೆ ಮಾಡಲಾಯಿತು. ವೈಸ್ರಾಯ್ ಭವನದ ನಾಟ್ಯಗೃಹ ವಾಚನಾಲಯವಾಯಿತು. 'ಮನ್ಮಥನು ಸರಸ್ವತಿಗೆ ಸ್ಥಾನವನ್ನು ಬಿಟ್ಟುಕೊಟ್ಟ'ನೆಂದು ಅಂದಿನ ಪತ್ರಿಕೆಯೊಂದು ಬರೆಯಿತು !

ಇದೇ ವೇಳೆಗೆ ೧೯೪೮ರಲ್ಲಿ ದಿ. ಸರ್ ಅಶುತೋಷ್ ಮುಖರ್ಜಿಯವರ ಮಕ್ಕಳು, ಮೌಲಾನಾ ಆಜಾದರಿಗೆ ಪತ್ರವೊಂದನ್ನು ಬರೆದು ತಮ್ಮ ತಂದೆಯವರ ಅಮೂಲ್ಯ ಗ್ರಂಥಸಂಗ್ರಹವನ್ನು ರಾಷ್ಟ್ರೀಯ ಗ್ರಂಥಾಲಯಕ್ಕೆ ಕಾಣಿಕೆ ನೀಡುವುದಾಗಿ ತಿಳಿಸಿದರು. ಸುಮಾರು ೮೫ ಸಾವಿರ ಗ್ರಂಥಸಂಗ್ರಹದ ಈ ಅಮೂಲ್ಯ ಕಾಣಿಕೆಯನ್ನು ಆಜಾದರು ಕೃತಜ್ಞತೆಯಿಂದ ಸ್ವೀಕರಿಸಿದರು. ಇದನ್ನು ಅನುಸರಿಸಿ ಇನ್ನೂ ಇಂಥ ಅನೇಕ ಕೊಡುಗೆಗಳು ಗ್ರಂಥಾಲಯಕ್ಕೆ ಬಂದಿವೆ. ಅದನ್ನು ವಿಸ್ತರಿಸುತ್ತಿವೆ.

ಈ ಗ್ರಂಥಾಲಯ ಕಳೆದ ೨೪ ವರ್ಷಗಳಲ್ಲಿ ಮಹಾಸಂಸ್ಥೆಯಾಗಿ, ಸ್ವತಂತ್ರ ಭಾರತದ ಕೆಲವೇ ಅದ್ಭುತಗಳಲ್ಲಿ ಒಂದಾಗಿ ಒಂದು ಪುಣ್ಯಕ್ಷೇತ್ರವಾಗಿ ಬೆಳೆದು ಬಂದಿದೆ. ಹೆಮ್ಮೆಯಿಂದ ಮೆರೆಯುತ್ತಿದೆ. ಈ ರೀತಿ ಬಹುಮುಖವಾಗಿ ಗ್ರಂಥಾಲಯದ ಅಭಿವೃದ್ಧಿಗೆ ಕಾರಣರಾಗಿ ದುಡಿದವರು ಪದ್ಮಶ್ರೀ ಬಿ. ಎಸ್. ಕೇಶವನ್ ಎಂಬುದು ಕನ್ನಡಿಗರಿಗೆ ಅಭಿಮಾನದ ಸಂಗತಿ.

ಗ್ರಂಥಗಳ ವ್ಯಾಪ್ತಿ

೧೯೫೪ರಲ್ಲಿ ಭಾರತ ಸರ್ಕಾರವು ಮಾಡಿರುವ ಕಾಯಿದೆಯ ಪ್ರಕಾರ ಭಾರತದ ಎಲ್ಲಾ ರಾಜ್ಯಗಳಲ್ಲೂ ಎಲ್ಲಾ ಭಾಷೆಗಳಲ್ಲಿ ಪ್ರಕಟವಾಗುವ ಗ್ರಂಥಗಳ ಒಂದು ಪ್ರತಿಯನ್ನು ಪುಸ್ತಕ ಭಂಡಾರಕ್ಕೆ ಸಲ್ಲಿಸಬೇಕು.* ಅಲ್ಲದೆ ನಿಯತಕಾಲಿಕೆ ಹಾಗೂ ದಿನಪತ್ರಿಕೆಗಳೂ (೧೯೫೬ರಲ್ಲಿ ಸುಧಾರಿಸಿದ ಕಾನೂನಿನ ಪ್ರಕಾರ) ಈ ಗ್ರಂಥಾಲಯಕ್ಕೆ ತಲುಪುತ್ತವೆ. ಬೈಂಡ್ ಆದ ನಿಯತಕಾಲಿಕೆಗಳ ಸಂಪುಟಗಳನ್ನು ಕೊಳ್ಳಲಾಗುತ್ತಿದೆ. ೧೯೫೪ಕ್ಕೆ ಮುಂಚೆ ಪ್ರಕಟವಾದ ಅಮೂಲ್ಯ ಗ್ರಂಥಗಳನ್ನೂ ಆಕರ ಗ್ರಂಥಗಳನ್ನೂ ಗ್ರಂಥಾಲಯ ಕೊಳ್ಳುತ್ತದೆ. ಭಾರತವು ಅನ್ಯದೇಶಗಳೊಡನೆ ರಾಜಕೀಯ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿರುವುದರಿಂದ ಅನ್ಯದೇಶಗಳಿಗೆ ಸಂಬಂಧಿಸಿದ ಪ್ರಕಟಣೆಗಳನ್ನೂ ಕೊಳ್ಳುವ ವ್ಯವಸ್ಥೆಯಿದೆ.

ಕಾಯಿದೆಹಾಗೂ ಕೊಳ್ಳುವುದರಮೂಲಕವಲ್ಲದೆಗ್ರಂಥಾಲಯಕ್ಕೆ ಹಲವಾರು ಗ್ರಂಥಗಳು ವಿನಿಮಯದ ಮೂಲಕ ಹಾಗೂ ಕೊಡುಗೆ ರೂಪದಲ್ಲಿ ಬರುತ್ತವೆ. ಕೊಡುಗೆ ರೂಪದಲ್ಲಿ ಬಂದಿರುವ ಸಂಗ್ರಹಗಳಲ್ಲಿ ಉಲ್ಲೇಖನೀಯವಾದವು– ಅರಬ್ಬೀ, ಫಾರಸೀ ಹಾಗೂ ಉರ್ದು ಹಸ್ತಪ್ರತಿ ಹಾಗೂ ಗ್ರಂಥಗಳುಳ್ಳ ವಿಖ್ಯಾತವಾದ 'ಬುಹಾರ್ ಸಂಗ್ರಹ', ಭಾರತೀಯ ವಿಷಯಗಳಲ್ಲಿ ಎತ್ತಿದ ಕೈಯುಳ್ಳವರಾದ ಥೀಬಾ ಅವರ ಸಂಸ್ಕೃತ ಹಸ್ತಲಿಪಿಗಳ ಸಂಗ್ರಹ, ೮೫ ಸಾವಿರದಷ್ಟು ದೊಡ್ಡದಾದ ಅಶುತೋಷ ಮುಖರ್ಜಿಯವರ ಅಮೂಲ್ಯ ಸಂಗ್ರಹ, ಅತಿ ವಿರಳ ಹಾಗೂ ಅಮೂಲ್ಯ ಬಂಗಾಲಿ ಗ್ರಂಥಗಳುಳ್ಳ ರಾಮದಾಸ ಸೂರ್ ಸಂಗ್ರಹ, ಬೋಲಾರಾಮ ಸಂಗ್ರಹ, ಚೀನೀ ಸಂಗ್ರಹ, ಅಮೆರಿಕೆಗೆ ಸಂಬಂಧಪಟ್ಟ ಸಂಗ್ರಹ, ಡಾ. ಸುರೇಂದ್ರನಾಥಸೇನ್ ಅವರ ವೈಯಕ್ತಿಕ ಗ್ರಂಥ ಸಂಗ್ರಹ, (ಇತಿಹಾಸ ಹಾಗೂ ಇತರೆವಿಷಯಗಳಿಗೆ ಸಂಬಂಧಿಸಿದವು), ವೈಯಾಪುರಿಪಿಳ್ಳೆ ಸಂಗ್ರಹ (ತಮಿಳು ಹಸ್ತಪ್ರತಿಗಳು ಹಾಗೂ ಗ್ರಂಥಗಳು), ಜಾದೂನಾಥ್ ಸರ್ಕಾರ್ ಅವರ ಸಂಗ್ರಹ (ಮಧ್ಯಕಾಲೀನ ಭಾರತೀಯ ಇತಿಹಾಸಕ್ಕೆ ಸಂಬಂಧಿಸಿದ ಆಕರ ಗ್ರಂಥಗಳು, ಭೂಪಟಗಳು, ಹಸ್ತಪ್ರತಿಗಳು). ಅಲ್ಲದೆ ದಿ|| ಸುಬ್ರಹ್ಮಣ್ಯ ಭಾರತಿಯವರು ನಡೆಸುತ್ತಿದ್ದ 'ಇಂಡಿಯಾ' ಎಂಬ ಪತ್ರಿಕೆಯ ಅಮೂಲ್ಯ ಪ್ರತಿಯೂ ಸಹ ಇಲ್ಲಿದೆ.

ಸೂಚೀಕರಣ ಹಾಗೂ ವರ್ಗೀಕರಣ

ಮೇಲ್ಕಂಡ ರೀತಿ ಪ್ರಾಪ್ತವಾದ ಗ್ರಂಥಗಳನ್ನು ಆಧುನಿಕ ರೀತಿಯಲ್ಲಿ ಸೂಚೀಕರಣ ಹಾಗೂ ವರ್ಗೀಕರಣ ಮಾಡುವ ವ್ಯವಸ್ಥೆಯಿದೆ. ಇದಕ್ಕಾಗಿ ಭಾರತೀಯ ಭಾಷೆಗಳಿಗಾಗಿ ಹಾಗೂ ವಿದೇಶೀ ಭಾಷೆಗಳಿಗಾಗಿ ಪ್ರತ್ಯೇಕ ವಿಭಾಗಗಳಿವೆ. ಗ್ರಂಥಸೂಚಿಗಳು ಮುದ್ರಿತರೂಪದಲ್ಲಿಯೂ ಪತ್ರಕಗಳ ರೂಪದಲ್ಲಿಯೂ ಇವೆ. ಅಲ್ಲದೆ ಗ್ರಂಥಾಲಯಕ್ಕೆ ಹೊಸದಾಗಿ ಸೇರಿಸಿದ ಗ್ರಂಥಗಳ ಸೂಚಿಯನ್ನು ವಾಚಕರ ಅನುಕೂಲಕ್ಕಾಗಿ ಪ್ರತಿ ತಿಂಗಳು ಹೊರಡಿಸಲಾಗುತ್ತದೆ.

---

* ಕಾಯಿದೆಯ ಸಾರಾಂಶಕ್ಕೆ ಅನುಬಂಧ ನೋಡಿ.

ಭಾರತೀಯ ಭಾಷಾ ವಿಭಾಗಗಳು

ಹಿಂದೆ ಭಾರತೀಯ ಭಾಷೆಗಳಲ್ಲಿನ ಪ್ರಕಾಶನಗಳನ್ನು ಕೊಳ್ಳುತ್ತಿರಲಿಲ್ಲ. ಆದರೆ ಸ್ವಾತಂತ್ರ್ಯಾನಂತರ ಗ್ರಂಥಾಲಯವು ತನ್ನ ಈಗಿನ ನಿವಾಸಕ್ಕೆ ಸ್ಥಳಾಂತರಗೊಂಡ ಕೂಡಲೇ ಭಾರತೀಯ ಭಾಷೆಗಳಲ್ಲಿನ ಎಲ್ಲ ಆಕರ ಗ್ರಂಥಗಳನ್ನೂ ಸಂಗ್ರಹಿಸುವ ಕಡೆ ಆದ್ಯ ಗಮನ ನೀಡಲಾಯಿತು. ಅದಕ್ಕಾಗಿ ಕೇಂದ್ರ ಸರ್ಕಾರ ೧೯೫೭–೫೮ರಲ್ಲಿ ೫೦,೦೦೦ ರೂ.ಗಳನ್ನು ವಿಶೇಷ ಅನುದಾನವನ್ನಾಗಿ ಇತ್ತಿತು. ಸಾಕಷ್ಟು ಗ್ರಂಥಗಳ ಸಂಗ್ರಹವಾದ ನಂತರ ಆಯಾ ವಿಭಾಗಕ್ಕೆ ಬೇಕಾದ ಸಿಬ್ಬಂದಿ ವರ್ಗದ ನೇಮಕದ ವ್ಯವಸ್ಥೆ ಮಾಡಲಾಯಿತು. ಆಯಾ ಭಾಷಾ ವಿಭಾಗಗಳನ್ನು ಸಮೃದ್ಧಗೊಳಿಸುವುದು, ಗ್ರಂಥಗಳ ವರ್ಗೀಕರಣ, ಸೂಚೀಕರಣ, ಸಂದರ್ಭ ಸೇವೆ, ನಿಯತಕಾಲಿಕೆಗಳ ಸೂಚಿ ಹಾಗೂ ಪ್ರಕಾಶಕರ ಸೂಚಿಗಳನ್ನು ಸಿದ್ಧಪಡಿಸಿ ಕ್ರಮವಾಗಿಡುವುದು; ಹೊಸದಾಗಿ ಸೇರಿಸಿದ ಗ್ರಂಥಗಳ ಸೂಚಿಯನ್ನು ತರುವುದರಲ್ಲಿ ನೆರವಾಗುವುದು—ಈ ವಿಭಾಗಗಳ ಅಧಿಕಾರಿಗಳ ಹೊಣೆಯಾಗಿರುತ್ತದೆ.

ವಾಚನಾಲಯ

ಹಿಂದಿನ ವೈಸರಾಯರ ಕಾಲದಲ್ಲಿ ನಾಟ್ಯಗೃಹವಾಗಿದ್ದ ವಿಶಾಲ ಅಂಗಳದಲ್ಲಿ ಏಕಕಾಲಕ್ಕೆ ಸುಮಾರು ೩೫೦ ವಾಚಕರು ಕುಳಿತು ಓದಲನುಕೂಲವಾಗುವಂತೆ ವಾಚನಾಲಯವಿದೆ. ಈ ವಾಚನಾಲಯದಲ್ಲಿ ಸುಮಾರು ಹದಿನೈದು ಸಾವಿರಕ್ಕೆ ಮಿಕ್ಕಿ ಸಂದರ್ಭಗ್ರಂಥಗಳನ್ನಿಡಲಾಗಿದೆ. ಸಂಶೋಧಕರಿಗೆ ವಾಚನಾಲಯದಲ್ಲಿ ವಿಶೇಷ ವ್ಯವಸ್ಥೆ ಇರುವ ಕೋಣೆಗಳಿವೆ. ಭಾರತದ ಯಾವ ಪ್ರಜೆಗೂ ಅವನು ಪ್ರಾಪ್ತವಯಸ್ಕನಾಗಿದ್ದಲ್ಲಿ ಇಲ್ಲಿ ಪ್ರವೇಶವಿದೆ. ವಾಚಕರಿಗಾಗಿ ನೀಡುವ 'ಟಿಕೆಟ್' ಅವರ ವಾಚನಾಲಯದ ಸದಸ್ಯತ್ವವನ್ನು ಸೂಚಿಸುತ್ತದೆ. ಆದರೆ ಗ್ರಂಥಾಲಯದ ಖಾಯಂ ಸದಸ್ಯತ್ವ ಪಡೆಯಲು ಕೆಲವು ಪ್ರತಿಷ್ಠಿತ ವ್ಯಕ್ತಿಗಳ ಶಿಫಾರಸನ್ನು ಪಡೆಯಬೇಕು. ಹಿಂದೆ ವರ್ಷದಲ್ಲಿ ಕೇವಲ ೨೫೦ ದಿನಗಳು ಗ್ರಂಥಾಲಯವನ್ನು ತೆರೆಯಲಾಗುತ್ತಿತ್ತು. ಆದರೆ ಈಗ ವರ್ಷದಲ್ಲಿ ೩೬೨ ದಿನಗಳೂ ಗ್ರಂಥಾಲಯ ತೆರೆದಿರುತ್ತದೆ. ವಾರದ ದಿನಗಳಲ್ಲಿ ಬೆಳಗ್ಗೆ ೯ ರಿಂದ ರಾತ್ರಿ ೮ ಗಂಟೆಯವರೆಗೆ ಕೆಲಸಮಾಡುತ್ತದೆ. ಆದರೆ ಭಾನುವಾರ ಹಾಗೂ ಇತರೆ ರಜಾ ದಿನಗಳಲ್ಲಿ ಬೆಳಗ್ಗೆ ೧೦ರಿಂದ ಸಂಜೆ ೫ರವರೆಗೆ ಗ್ರಂಥಾಲಯವನ್ನು ತೆರೆದಿಡಲಾಗುತ್ತದೆ.

ಗ್ರಂಥಗಳ ಎರವಲು ಸೇವೆ

ಸಾಮಾನ್ಯವಾಗಿ ರಾಷ್ಟ್ರೀಯ ಗ್ರಂಥಾಲಯಗಳ ಮುಖ್ಯ ಕರ್ತವ್ಯವು ತನ್ನಲ್ಲಿರುವ ಗ್ರಂಥ ಸಂಪತ್ತನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗಾಗಿ ಸುರಕ್ಷಿತವಾಗಿಡುವುದು ಹಾಗೂ ಸ್ಥಳದಲ್ಲೇ ಪರಾಮರ್ಶೆಗೆ ಹಾಗೂ ವಾಚನಕ್ಕೆ ಅನುಕೂಲತೆಗಳನ್ನು ಒದಗಿಸುವುದು. ಈ ದೃಷ್ಟಿಯಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಾರ್ವಜನಿಕ ಪುಸ್ತಕ ಭಂಡಾರ ಅಲ್ಲ. ಆದರೂ ಕಲ್ಕತ್ತಾದಲ್ಲಿ ಬೇರೊಂದು ಉತ್ತಮ ಸಾರ್ವಜನಿಕ ಪುಸ್ತಕ ಭಂಡಾರದ ಕೊರತೆಯಿಂದಾಗಿ ಈ ಗ್ರಂಥಾಲಯವನ್ನು ಸಾರ್ವಜನಿಕರ ಉಪಯೋಗಕ್ಕೆ ೧೯೫೩ರಿಂದ ತೆರೆಯಲಾಗಿದೆ.

ಪ್ರತಿಯೊಬ್ಬ ವಾಚಕರಿಗಾಗಿ ಒಂದು ಟಿಕೆಟ್ ಕೊಡಲಾಗುವುದು. ಒಂದು ಸಲಕ್ಕೆ ಅವನು ಎರಡು ಪುಸ್ತಕಗಳನ್ನು ಮನೆಗೆ ಎರವಲಾಗಿ ಒಯ್ಯಬಹುದು. ಈ ರೀತಿ ಮನೆಗೆ ಒಯ್ಯಲು ವಾಚಕರು ಪ್ರತಿ ತಿಂಗಳೂ ಚಂದಾ ತೆರಬೇಕಿಲ್ಲ. ಆದರೆ ಅವರು ಒಯ್ಯಬೇಕೆಂದಿರುವ ಗ್ರಂಥಗಳ ಬೆಲೆಗೆ ಸರಿಸಮನಾಗಿ ಠೇವಣಿ ಇಡಬೇಕಾಗುತ್ತದೆ.

ಸಂದರ್ಭ ಗ್ರಂಥಗಳು, ಅಪೂರ್ವ ಗ್ರಂಥಗಳು ಹಾಗೂ ನಿಯತಕಾಲಿಕೆಗಳನ್ನು ಮನೆಗೆ ಒಯ್ಯಲು ಅವಕಾಶವಿಲ್ಲ.

ದೇಶದ ಯಾವುದೆ ಭಾಗದ ಸಂಶೋಧಕರಿಗೆ, ವಿದ್ವಾಂಸರಿಗೆ ಬೇಕಾದ ಗ್ರಂಥಗಳನ್ನು ತನ್ನ ಭಂಡಾರದಿಂದ ಒದಗಿಸಲು ಗ್ರಂಥಾಲಯ ವ್ಯವಸ್ಥೆ ಮಾಡುತ್ತಿದೆ. ಕೆಲವು ನಿಯಮಗಳಿಗನುಸಾರವಾಗಿ ವೈಯಕ್ತಿಕ ವಿದ್ವಾಂಸರಿಗೆ ಇಲ್ಲವೇ ಅಂತರ ಗ್ರಂಥಾಲಯ ಎರವಲು ಸೇವೆ ಮೂಲಕ ಬೇಕಾದ ಗ್ರಂಥಗಳನ್ನು ತನ್ನಲ್ಲಿಲ್ಲದಿದ್ದರೆ ಬೇರೆ ದೇಶಗಳ ರಾಷ್ಟ್ರೀಯ ಗ್ರಂಥಾಲಯಗಳ ನೆರವಿನಿಂದ ಒದಗಿಸುವ ಏರ್ಪಾಡು ಮಾಡಲಾಗುತ್ತಿದೆ. ಇದಕ್ಕಾಗಿ ರಾಷ್ಟ್ರೀಯ ಗ್ರಂಥಾಲಯ ಅಮೆರಿಕದ 'ಲೈಬ್ರೆರಿ ಆಫ್ ಕಾಂಗ್ರೆಸ್' ಹಾಗೂ ಲಂಡನ್ನಿನ 'ರಾಷ್ಟ್ರೀಯ ಕೇಂದ್ರ ಗ್ರಂಥಾಲಯ' ದೊಡನೆ ಸಂಪರ್ಕ ಹೊಂದಿದೆ. ಭಾರತದ ಬಗ್ಗೆ ಬರೆದ ಪುಸ್ತಕಗಳ ಬೇಡಿಕೆ ಬೇರೆ ದೇಶಗಳಿಂದ ಬಂದಾಗಲೂ ತನ್ನಲ್ಲಿನ ಗ್ರಂಥಭಂಡಾರದಿಂದ ಅಥವಾ ದೇಶದ ಇತರೆ ಗ್ರಂಥಾಲಯಗಳಿಂದ ಪಡೆದು ಒದಗಿಸುವ ಯತ್ನ ಮಾಡಲಾಗುತ್ತಿದೆ.

ಗ್ರಂಥಾಲಯದ ಪ್ರಕಟಣೆಗಳು

ಗ್ರಂಥಾಲಯವು ತನ್ನ ಸಂಗ್ರಹದ ಗ್ರಂಥಸೂಚಿಗಳನ್ನು ಬಿಟ್ಟು, ಎಲ್ಲಾ ಭಾಷೆಗಳಲ್ಲಿನ ಅನುವಾದಗಳ ಸೂಚಿ ಹಾಗೂ ಪ್ರದರ್ಶನಗಳನ್ನು ಏರ್ಪಡಿಸಿದಾಗ ಅವಕ್ಕೆ ಸಂಬಂಧಿಸಿದ ಕೆಲವು ಪರಿಚಯಾತ್ಮಕ ಲಘು ಪುಸ್ತಿಕೆಗಳನ್ನು ಪ್ರಕಟಿಸುತ್ತದೆ.

ಭಾರತದ ಇತಿಹಾಸ, ಸಂಸ್ಕೃತಿ, ಭಾಷೆ ಹಾಗೂ ವಿಜ್ಞಾನಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲೂ ಒಂದೊಂದು ವಾಙ್ಮಯದರ್ಶಕವನ್ನು ತಯಾರಿಸುವ ಒಂದು ಬೃಹತ್ ಯೋಜನೆಯನ್ನು ಈಗಾಗಲೇ ಕೈಕೊಂಡು ಕೆಲವು ವಿಷಯಗಳ ವಾಙ್ಮಯ ದರ್ಶಕಗಳು ಹೊರಬಂದಿವೆ. ೫೭ ಸಂಪುಟಗಳ ಈ ಯೋಜನೆ ಕರಗತವಾದಾಗ ದೇಶೀಯ ಹಾಗೂ ವಿದೇಶೀಯ ವಿದ್ವಾಂಸರಿಗೆ ಬಹಳ ಉಪಯೋಗವಾಗುವುದರಲ್ಲಿ ಸಂದೇಹವಿಲ್ಲ.

ಗ್ರಂಥ ಹಾಗೂ ವಸ್ತು ಪ್ರದರ್ಶನಗಳು

ಗ್ರಂಥಾಲಯವು ಸಂದರ್ಭಾನುಸಾರವಾಗಿ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಪ್ರದರ್ಶನಗಳನ್ನು ಏರ್ಪಡಿಸುತ್ತಾ ಬಂದಿದೆ. ಉಲ್ಲೇಖನೀಯ ಪ್ರದರ್ಶನಗಳು—ವಿಲಿಯಂ ಕ್ಯಾರೇ ಪ್ರದರ್ಶನ, ೧೮೫೭ರ ಪ್ರದರ್ಶನ, ಸ್ವಾಮಿ ವಿವೇಕಾನಂದ, ಕವಿ ರವೀಂದ್ರನಾಥ ಠಾಕೂರ್, ಷೇಕ್ಸ್‌ಪಿಯರ್ ಹಾಗೂ ರಾಮಾನಂದ ಚಟರ್ಜಿ ಅವರ ಜೀವನ–ಕೃತಿಗಳ ಬಗ್ಗೆ ಏರ್ಪಡಿಸಿದ ಪ್ರದರ್ಶನಗಳು.

ಗ್ರಂಥ ರಕ್ಷಣಾ ವಿಭಾಗ

ಜೀರ್ಣಗೊಂಡ ಗ್ರಂಥಗಳ ಸಂರಕ್ಷಣೆಗೆ ಗ್ರಂಥಾಲಯವು ತನ್ನದೇ ಆದ ಬೈಂಡರಿ ಹಾಗೂ ರಾಸಾಯನಿಕ ಪ್ರಯೋಗ ಶಾಲೆಯನ್ನು ಹೊಂದಿದೆ. ಕ್ರಿಮಿಕೀಟಗಳಿಂದ ಗ್ರಂಥಗಳು ನಾಶವಾಗದಂತಿರಲು ರಾಸಾಯನಿಕ ಕ್ರಿಯೆ ವ್ಯವಸ್ಥೆ ಇದೆ. ನುರಿತ ಹಾಗೂ ಅನುಭವಿ ರಾಸಾಯನಿಕ ತಜ್ಞರೊಬ್ಬರ ಮೇಲ್ವಿಚಾರಣೆಯಲ್ಲಿ ಈ ವಿಭಾಗ ಕೆಲಸ ಮಾಡುತ್ತಿದೆ. ಅಮೂಲ್ಯ ಕೃತಿಗಳ ಹಾಗೂ ಹಸ್ತಪ್ರತಿಗಳ ಚಿತ್ರೀಕರಣಕ್ಕೆ ವ್ಯವಸ್ಥೆಯಾಗುತ್ತಿದೆ.

ರಾಷ್ಟ್ರೀಯ ಗ್ರಂಥಸೂಚಿ

ನಮ್ಮ ದೇಶದ ಇತಿಹಾಸದಲ್ಲಿಯೇ ಮೊದಲನೆ ಸಾರಿ ಭಾರತದ ಭಾಷೆಗಳಲ್ಲಿಯ ಸಮಗ್ರ ಪ್ರಕಟಣೆಗಳನ್ನು ೧೯೫೪ನೇ ಇಸವಿಯ ಪ್ರಕಾಶನಗಳನ್ನು ಗ್ರಂಥಾಲಯಗಳಿಗೆ ಕಳಿಸಿಕೊಡುವ ಕಾನೂನಿನ ಮೇರೆಗೆ ಒಟ್ಟು ತರಲಾಯಿತು. ದೆಹಲಿಯಲ್ಲಿ ಸ್ಥಾಪಿತವಾಗಲಿರುವ 'ಸೆಂಟ್ರಲ್ ರೆಫರೆನ್ಸ್ ಲೈಬ್ರೆರಿ'ಯು ರಾಷ್ಟ್ರೀಯ ಗ್ರಂಥಾಲಯದ ಆವರಣದಲ್ಲೇ ಕೆಲಸಮಾಡುತ್ತಿದೆ. ಈ ವಿಭಾಗದಲ್ಲಿ ಕಾನೂನಿನ ಪ್ರಕಾರ ರಾಷ್ಟ್ರೀಯ ಗ್ರಂಥಾಲಯಕ್ಕೆ ಬಂದ ಗ್ರಂಥಗಳ ಒಂದು ವಿವರಣಾತ್ಮಕ ಸೂಚಿಯನ್ನು ೧೯೫೭ನೇ ಇಸವಿಯ ಕೊನೆಯ ಮೂರು ತಿಂಗಳ ಅವಧಿಯಿಂದ ಪ್ರಾರಂಭಿಸಿ, ಪ್ರತಿ ಮೂರು ತಿಂಗಳಿಗೊಮ್ಮೆ ಹೊರಡಿಸಲಾಗುತ್ತಿತ್ತು. ಈಗ ಈ ಸೂಚಿಯು ಪ್ರತಿ ತಿಂಗಳೂ ಪ್ರಕಟವಾಗುತ್ತಿದೆ. ಭಾರತದ ಎಲ್ಲಾ ಭಾಷೆಗಳಲ್ಲಿಯ ಈ ಗ್ರಂಥವಿವರಣ ಸೂಚಿಯನ್ನು ರೋಮನ್ ಲಿಪಿಯಲ್ಲಿ ಮುದ್ರಿಸಿ ಅದನ್ನು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಉಪಯೋಗದ ಪರಾಮರ್ಶನ ಗ್ರಂಥವನ್ನಾಗಿ ಮಾಡುವ ಉದ್ದೇಶವನ್ನಿರಿಸಲಾಗಿತ್ತು. ಆದರೆ ಎಲ್ಲಾ ಭಾಷೆಗಳ ಒಟ್ಟುಗೂಡಿಸಲಾದ ಈ ಗ್ರಂಥ ವಿವರಣ ಸೂಚಿಯ ಬೆಲೆಯು ಹೆಚ್ಚಾದ್ದರಿಂದ ವೈಯಕ್ತಿಕವಾಗಿಯಾಗಲೀ, ಚಿಕ್ಕಪುಟ್ಟ ಗ್ರಂಥಾಲಯದವರಿಗಾಗಲೀ ಅಥವಾ ಶಾಲೆ ಕಾಲೇಜಿನವರಿಗಾಗಲೀ ಕೊಳ್ಳುವುದು ಸ್ವಲ್ಪ ಕಠಿಣವಾಯಿತು. ಆದಕಾರಣ, ರಾಜ್ಯ ಸರ್ಕಾರಗಳ ಸಹಕಾರದೊಂದಿಗೆ ಭಾರತ ಸರ್ಕಾರದವರು, ಆಯಾ ರಾಜ್ಯದಲ್ಲಿ ಪ್ರಕಟಿಸಲಾದ ಪುಸ್ತಕಗಳ ಗ್ರಂಥವಿವರಣಾ ಪಟ್ಟಿಯನ್ನು ಆಯಾ ರಾಜ್ಯದ ಭಾಷೆಯಲ್ಲಿ ತಯಾರಿಸಲು ನಿರ್ಧರಿಸಿದರು. ಈ ನಿರ್ಧಾರದ ನಂತರ ಹಲವು ರಾಜ್ಯಗಳ ಭಾಷೆಗಳಲ್ಲಿನ ಗ್ರಂಥಸೂಚಿಗಳು ಹೊರಬಂದಿವೆ. ರಾಷ್ಟ್ರೀಯ ಗ್ರಂಥಸೂಚಿಯ ಕನ್ನಡ ವಿಭಾಗದ ಪ್ರಕಟಣೆಯನ್ನು ರಾಜ್ಯ ಸರ್ಕಾರದ ಸಾಂಸ್ಕೃತಿಕ ಇಲಾಖೆ ಹೊತ್ತಿದೆ. ಕನ್ನಡ ಗ್ರಂಥಸೂಚಿಗಳು ೧೯೫೪ ರಿಂದ ೧೯೬೮ರವರೆಗೆ ಹೊರಬಂದಿವೆ.

ಶಿಶು ಗ್ರಂಥಾಲಯ

ಗ್ರಂಥಾಲಯದ ಪ್ರಧಾನ ಕಟ್ಟಡದ ಒಂದು ಪಕ್ಕದಲ್ಲಿ ೧೯೬೦ರಲ್ಲಿ ಮಕ್ಕಳಿಗಾಗಿ ಒಂದು ವಿಭಾಗವನ್ನು ತೆರೆಯ

ಲಾಯಿತು. ಸಧ್ಯಕ್ಕೆ ಆರು ಭಾಷೆಗಳಲ್ಲಿನ ಶಿಶು ಸಾಹಿತ್ಯವನ್ನು ಸಂಗ್ರಹಿಸಿಡಲಾಗಿದೆ. ಚೇತೋಹಾರಿ ವಾತಾವರಣ ಹಾಗೂ ಯುಕ್ತ ಉಪಕರಣಗಳಿಂದ ಕೂಡಿ ಮಕ್ಕಳಿಗೊಂದು ಕನಸಿನ ಲೋಕದಂತಿರುವ ಈ ಗ್ರಂಥಾಲಯದ ಕಲ್ಪನೆ ಶ್ರೀ ಕೇಶವನ್ ಅವರದೇ.

ಓದುಗರ ಹಾಸ್ಟೆಲ್

ಭಾರತ ಹಾಗೂ ಇತರ ದೇಶಗಳಿಂದ ರಾಷ್ಟ್ರೀಯ ಗ್ರಂಥಾಲಯಕ್ಕೆ ವ್ಯಾಸಂಗಕ್ಕೆ ಬರುವ ಸಂಶೋಧನಾ ವಿದ್ಯಾರ್ಥಿಗಳ ಹಾಗೂ ವಿದ್ವಾಂಸರ ಉಪಯೋಗಕ್ಕಾಗಿ ಒಂದು ವಸತಿಗೃಹ ಗ್ರಂಥಾಲಯಕ್ಕೆ ಸಮೀಪದಲ್ಲೇ ಇದೆ.

ಗ್ರಂಥಾಲಯದ ಸಹಕಾರಿ ಚಟುವಟಿಕೆಗಳು

ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಪಂಚದ ವಿವಿಧ ದೇಶಗಳಲ್ಲಿ ಪ್ರಕಟವಾಗುವ ಅನುವಾದ ಕೃತಿಗಳ ವರ್ಗೀಕೃತ ಸೂಚಿಯನ್ನು ತರುವುದರಲ್ಲಿ ಯುನೆಸ್ಕೋದೊಡನೆ ರಾಷ್ಟ್ರೀಯ ಗ್ರಂಥಾಲಯವು ಸಹಕರಿಸುತ್ತಿದೆ.

ರಾಷ್ಟ್ರೀಯ ಮಟ್ಟದಲ್ಲಿ—ಸಾಹಿತ್ಯ ಅಕಾಡೆಮಿಯು ಹೊರತಂದಿರುವ ಭಾರತೀಯ ಸಾಹಿತ್ಯದ ವಾಙ್ಮಯ ದರ್ಶಕ (೧೯೦೧–೧೯೫೩)ದ ಸಿದ್ಧತೆಯಲ್ಲಿ ಗ್ರಂಥಾಲಯವು ಪೂರ್ಣ ಸಹಕಾರವನ್ನಿತ್ತಿದೆ.

ಸೆಂಟ್ರಲ್ ರೆಫರೆನ್ಸ್ ಲೈಬ್ರೆರಿಯು ಈ ಗ್ರಂಥಾಲಯದ ಆಶ್ರಯದಲ್ಲಿಯೇ ತನ್ನ 'ರಾಷ್ಟ್ರೀಯ ಗ್ರಂಥಸೂಚಿ' ಯನ್ನು ಪ್ರಕಟಿಸುತ್ತಿದೆ.

ಭಾರತೀಯ ವೈಜ್ಞಾನಿಕ ಹಾಗೂ ಸಂಶೋಧಕ ಮಂಡಳಿಗೆ ೧೯೬೦ರಲ್ಲಿ ಭಾರತೀಯ ವೈಜ್ಞಾನಿಕ ಹಾಗೂ ಶಾಂತ್ರಿಕ ಗ್ರಂಥಗಳ ವಾಙ್ಮಯದರ್ಶಕವನ್ನೂ ಸಿದ್ಧಪಡಿಸಿಕೊಟ್ಟಿತು.

ಕಲ್ಕತ್ತಾ ವಿಶ್ವವಿದ್ಯಾನಿಲಯಕ್ಕೆ ಹಾಗೂ ವಂಗೀಯ ಗ್ರಂಥಾಲಯ ಪರಿಷತ್ತಿಗೆ ಗ್ರಂಥಾಲಯ ವಿಜ್ಞಾನ ತರಗತಿಗಳನ್ನು ನಡೆಸುವುದರಲ್ಲಿ ಸಹಕಾರವನ್ನೂ ನೀಡುತ್ತಿದೆ.

ಅಲ್ಲದೆ ವಿವಿಧ ಸರ್ಕಾರಗಳು ಹಾಗೂ ಸಂಘ ಸಂಸ್ಥೆಗಳಿಗೆ ಅವುಗಳ ಗ್ರಂಥ ಭಂಡಾರಿಗಳನ್ನು ತರಬೇತಿ ಮಾಡುವಲ್ಲಿ ಹಾಗೂ ಮಾರ್ಗದರ್ಶನ ನೀಡುವುದರಲ್ಲಿ ಯಾವಾಗಲೂ ಮುಂದೆ ಬಂದಿದೆ.

ಮುಂದಿನ ಕೆಲವು ಯೋಜನೆಗಳು

ಗ್ರಂಥಾಲಯಕ್ಕೆ ಪ್ರತಿನಿತ್ಯ ಹೇರಳವಾಗಿ ಬರುವ ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳನ್ನು 'ಮೈಕ್ರೋಫಿಲಂ' ಮಾಡಿಸಿ ಸಂಗ್ರಹಿಸುವುದು;

ತಜ್ಞರಿಂದ ಹಾಗೂ ವಿದ್ವಾಂಸರಿಂದ ವಿವಿಧ ವಿಷಯಗಳ ಮೇಲೆ ಉಪನ್ಯಾಸಗಳನ್ನೇರ್ಪಡಿಸಿ ಅವುಗಳನ್ನು ಪ್ರಕಟಿಸುವುದು;

ಸದ್ಯಕ್ಕೆ ನಿಲ್ಲಿಸಿರುವ ಗ್ರಂಥಾಲಯ ತರಬೇತಿ ಕಾರ್ಯವನ್ನು ಪುನಃ ಆರಂಭಿಸುವುದು.

ವಿಸ್ತರಣೆ

ಬೆಳೆಯುತ್ತಿರುವ ಗ್ರಂಥಸಂಗ್ರಹಕ್ಕೆ ಪ್ರಧಾನ ಕಟ್ಟಡದಲ್ಲಿ ಸ್ಥಳದ ಅಭಾವ ಬಹಳವಿದ್ದುದರಿಂದ ೯ ಅಂತಸ್ತುಳ್ಳ ವಿಸ್ತರಣಾ ಕಟ್ಟಡವನ್ನು ನಿರ್ಮಿಸಲಾಯಿತು. ಇಲ್ಲಿ ಒಂದು ವಾಚನಾಲಯ, ಉಪಾಹಾರಗೃಹ, ಸಭಾಂಗಣ ಮೊದಲಾದುವುಗಳಿವೆ.

ಗ್ರಂಥಾಲಯದ ಸಿಬ್ಬಂದಿಗೆ ವಸತಿಗೃಹಗಳನ್ನು ಗ್ರಂಥಾಲಯದ ಆವರಣದಲ್ಲೇ ಕಟ್ಟಿಸಿ ಒದಗಿಸಲಾಗಿದೆ.

ಪಾರ್ಲಿಮೆಂಟಿನ ಅಂದಾಜು ಸಮಿತಿ ೧೯೫೭ರಲ್ಲಿ ಸಲ್ಲಿಸಿದ ತನ್ನ ವರದಿಯಲ್ಲಿ ಗ್ರಂಥಾಲಯದ ಈ ಸಾಧನೆಗಳನ್ನು ಮೆಚ್ಚಿ ದೇಶದ ಎಲ್ಲಾ ಗ್ರಂಥಭಂಡಾರಿಗಳನ್ನೂ ತರಬೇತಿಗಾಗಿ ಗ್ರಂಥಾಲಯಕ್ಕೆ ಕಳಿಸುವಂತೆ ಸೂಚಿಸಿತು.

ಗ್ರಂಥಾಲಯದ ಆಡಳಿತ

ಗ್ರಂಥಾಲಯದ ಆಡಳಿತವು ಮೊದಲು ಭಾರತ ಸರ್ಕಾರದ ವೈಜ್ಞಾನಿಕ ಸಂಶೋಧನೆ ಹಾಗೂ ಸಾಂಸ್ಕೃತಿಕ ಸಚಿವಾಲಯದ ನೇರ ಆಡಳಿತದಲ್ಲಿದ್ದು ಈಗ ಶಿಕ್ಷಣ ಸಚಿವಾಲಯದ ಆಡಳಿತಕ್ಕೊಳಪಟ್ಟಿದೆ. ರಾಜ್ಯ ಸರ್ಕಾರಗಳ ಹಾಗೂ ಇನ್ನಿತರ ಶಿಕ್ಷಣ ಸಂಸ್ಥೆಗಳ ಶಿಫಾರಸಿನ ಮೇಲೆ ಕೇಂದ್ರ ಸರ್ಕಾರ ನೇಮಿಸುವ ಹನ್ನೊಂದು ಜನರ ಒಂದು ಮಂಡಳಿ ಆಡಳಿತವನ್ನು ನೋಡಿಕೊಳ್ಳುತ್ತದೆ. ಸಚಿವ ಶಾಖೆಯ ಕಾರ್ಯದರ್ಶಿಯವರು ಅಧಿಕಾರ ನಿಮಿತ್ತ ಮಂಡಳಿಯ ಅಧ್ಯಕ್ಷರು. ಗ್ರಂಥಾಲಯದ ಅಧಿಕಾರಿಯವರು ಸದಸ್ಯ ಕಾರ್ಯದರ್ಶಿಗಳು.

ಈ ಗ್ರಂಥಾಲಯದ ಗ್ರಂಥಪಾಲಕರಿಗೆ ಭಾರತ ಸರ್ಕಾರದ ಇತರೆ ಉನ್ನತ ಅಧಿಕಾರಿಗಿರುವಷ್ಟೇ ಅಂತಸ್ತು ಅಧಿಕಾರ ಇದೆ.

೧೯೫೩ರಂದು ರಾಷ್ಟ್ರೀಯ ಗ್ರಂಥಾಲಯದ ಆರಂಭ ವಿಧ್ಯುಕ್ತವಾಗಿ ನಡೆಯಿತು. ಆದಿನ ಇಂಪೀರಿಯಲ್ ಲೈಬ್ರೆರಿಯ ಸ್ವರ್ಣಮಹೋತ್ಸವವೂ ಆಗಿತ್ತು. ಆಗ ಬಂಗಾಲದ ಗೌರ್ನರ್ ಆಗಿದ್ದ ಹರೇಂದ್ರಕುಮಾರ್ ಮುಖರ್ಜಿಯವರು ಅಧ್ಯಕ್ಷತೆ ವಹಿಸಿದ್ದ, ಡಾ|| ಬಿ. ಸಿ. ರಾಯ್ ಮೊದಲಾದ ಗಣ್ಯವಕ್ತಿಗಳು ಹಾಜರಿದ್ದ ಆ ಸಮಾರಂಭದಲ್ಲಿ ಮೌಲಾನ ಅಬುಲ್ ಕಲಂ ಆಜಾದರು ಗ್ರಂಥಾಲಯದ ಆರಂಭೋತ್ಸವವನ್ನು ನೆರವೇರಿಸುತ್ತಾ, ತಮ್ಮ ಭಾಷಣದ ಕೊನೆಯಲ್ಲಿ ರಾಷ್ಟ್ರೀಯ ಗ್ರಂಥಾಲಯದ ಸ್ವರೂಪವನ್ನು ಸೊಗಸಾಗಿ ವಿವರಿಸಿದ್ದಾರೆ. ತಮ್ಮ ಭಾಷಣದ ಕೊನೆಯಲ್ಲಿ ಹಾಫಿಜ್ ಕವಿಯ ಚೌಪದಿಯನ್ನು ಉದಾಹರಿಸಿದರು :

*'ಇಬ್ಬರು ಗೆಳೆಯರು, ಎರಡು ಮಡಿಕೆ ತನಿದ್ರಾಕ್ಷಾರಸ, ಪುಸ್ತಕಗಳ ಜೊತೆ ಹಾಗೂ ಉದ್ಯಾನದ ಮೂಲೆ–ಇವಿಷ್ಟು ಸಿಕ್ಕರೆ ನಾನು ಇಹದಲ್ಲೂ ಪರದಲ್ಲೂ ಉಳಿದ ಎಲ್ಲ ಸುಖ ಸಂತೋಷಗಳನ್ನೂ ತ್ಯಜಿಸಬಲ್ಲೆ' ಎಂದು ಆ ಚೌಪದಿಯ ಭಾವ. ಮೌಲಾನರು ನಂತರ ನುಡಿದರು : 'ಈ ಪುಸ್ತಕ ಭಂಡಾರದಲ್ಲಿ ಸಾಕಷ್ಟು ಪುಸ್ತಕಗಳಿವೆ ; ಇಬ್ಬರು ಗೆಳೆಯರು ದೊರೆಯುವುದು ಕಷ್ಟವಾಗದು ; ಮನಮೋಹಕ ಉದ್ಯಾನವನ ನಿಮ್ಮೆದುರಿಗಿದೆ. ಅಲ್ಲಿ ನಿಮಗೆ ಬೇಕಾದ ಮೂಲೆಯನ್ನು ಹಿಡಿಯಬಹುದು. ಆದರೆ ನಾನು ವಿಷಾದದಿಂದ ಹೇಳಬೇಕು–ಕವಿ ತಿಳಿಸಿದ ಮತ್ತೊಂದು ಅಂಶ ಇಲ್ಲಿ ದೊರೆಯಲಾರದು. ಆದರೆ ನಿಮ್ಮ ಕಲ್ಪನೆ ಆ ಕೊರತೆಯನ್ನು ತುಂಬೀತು !'

ಕಲ್ಕತ್ತೆಯ ರಾಷ್ಟ್ರೀಯ ಗ್ರಂಥಾಲಯವನ್ನು ಕಣ್ಣಾರೆ ನೋಡದವರಿಗೆ ಈ ಮಾತಿನ ಸ್ವಾರಸ್ಯ ಬಹುಶಃ ಅರ್ಥವಾಗದು.

* ಡಾ|| ಹಾ. ಮಾ. ನಾಯಕರ ಅನುವಾದದ ಸಾರಾಂಶ.

ಗ್ರಂಥಾಲಯ ಇತಿಹಾಸದಲ್ಲಿನ ಪ್ರಮುಖ ಘಟನೆಗಳು

೧೮೩೫	ಆಗಸ್ಟ್ ೩೧ನೇ ತಾರೀಖು ಕಲ್ಕತ್ತೆಯಲ್ಲಿ ಗಣ್ಯ ನಾಗರಿಕರು ಸಭೆ ಸೇರಿ ಸಾರ್ವಜನಿಕ ಗ್ರಂಥಾಲಯ ಸ್ಥಾಪನೆಗೆ ನಿರ್ಧರಿಸಿದರು.
೧೮೩೬	ಮಾರ್ಚ್ ೨೧ನೇ ತಾರೀಖು ಕಲ್ಕತ್ತಾ ಸಾರ್ವಜನಿಕ ಗ್ರಂಥಾಲಯವನ್ನು ಸಾರ್ವಜನಿಕರಿಗೆ ತೆರೆಯಲಾಯಿತು.
೧೮೪೧	ಜುಲೈನಲ್ಲಿ ಗ್ರಂಥಾಲಯವನ್ನು ಫೋರ್ಟ್ ವಿಲಿಯಂಗೆ ಸ್ಥಳಾಂತರ ಮಾಡಲಾಯಿತು.
೧೮೪೪	ಜೂನ್‌ನಲ್ಲಿ ಗ್ರಂಥಾಲಯವನ್ನು ಮೆಟ್ಕಾಫ್‌ಹಾಲ್‌ಗೆ ಸ್ಥಳಾಂತರ ಮಾಡಲಾಯಿತು.
೧೮೯೦	ಕಲ್ಕತ್ತಾ ನಗರಸಭೆ ಸಾರ್ವಜನಿಕ ಗ್ರಂಥಾಲಯದ ಖರ್ಚಿನ ಹೊಣೆ ಹೊರಲು ನಿರ್ಧರಿಸಿತು.
೧೮೯೧	ಭಾರತ ಸರ್ಕಾರದ ವಿವಿಧ ಖಾತೆಗಳ ಗ್ರಂಥ ಸಂಗ್ರಹಗಳನ್ನು ವಿಲೀನಗೊಳಿಸಿ ಇಂಪೀರಿಯಲ್ ಲೈಬ್ರೆರಿಯನ್ನಾಗಿ ಪರಿವರ್ತನೆ ಮಾಡಲಾಯಿತು.
೧೮೯೬	ಕಲ್ಕತ್ತಾ ಸಾರ್ವಜನಿಕ ಗ್ರಂಥಾಲಯಕ್ಕೆ ಲಾರ್ಡ್ ಕರ್ಜನ್ನನ ಭೇಟಿ.
೧೯೦೨	ಇಂಪೀರಿಯಲ್ ಲೈಬ್ರೆರಿ ಕಾನೂನಿನ ಅಂಗೀಕಾರ.
೧೯೦೩	ಜನವರಿ ೩೦ನೇ ತಾರೀಖು ಇಂಪೀರಿಯಲ್ ಲೈಬ್ರೆರಿಯನ್ನು ವಿದ್ಯುಕ್ತವಾಗಿ ಸಾರ್ವಜನಿಕರಿಗೆ ತೆರೆಯಲಾಯಿತು.
೧೯೩೫	ಗ್ರಂಥಾಲಯ ವಿಜ್ಞಾನದ ತರಗತಿ ಉದ್ಘಾಟನೆ.
೧೯೪೮	ಬೆಲ್ವೆಡೆರೆಗೆ ಗ್ರಂಥಾಲಯದ ಸ್ಥಳಾಂತರ.

ಭಾರತದ ರಾಷ್ಟ್ರೀಯ ಗ್ರಂಥಾಲಯ - ಕಲ್ಕತ್ತಾ

● ಟಿ. ವಿ. ವೆಂಕಟರಮಣಯ್ಯ

ನಮ್ಮ ರಾಷ್ಟ್ರದ ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸದಲ್ಲಿ ಗಣನೀಯ ಪಾತ್ರ ವಹಿಸಿರುವ ಕಲ್ಕತ್ತಾ ನಗರದ ಆಲಿಪುರದಲ್ಲಿರುವ ರಾಷ್ಟ್ರೀಯ ಗ್ರಂಥಾಲಯ ನಮ್ಮ ದೇಶದಲ್ಲೇ ಅತಿ ದೊಡ್ಡದು. ಜಗತ್ತಿನ ವಿಖ್ಯಾತ ಗ್ರಂಥಾಲಯಗಳ ಜೊತೆಗೆ ಹೆಗಲೆಣೆಯಾಗಿ ನಿಲ್ಲಬಲ್ಲ ಅದು ನಮ್ಮ ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾಗಿದೆ. ರಾಷ್ಟ್ರದ ಸಾಂಸ್ಕೃತಿಕ ಕೇಂದ್ರ ಬಿಂದುವಾಗಿದೆ. ಸ್ವತಂತ್ರ ಭಾರತದ ಯಾತ್ರಾಸ್ಥಳಗಳಲ್ಲಿ ಇದೂ ಒಂದಾಗಿದೆ. ಭಾರತದ ರಾಜಧಾನಿ ದಿಲ್ಲಿಗೆ ಸ್ಥಳಾಂತರವಾಗುವ ಮೊದಲು ವೈಸ್‌ರಾಯ್‌ರವರ ನಿವಾಸವಾಗಿದ್ದ 'ಬೆಲ್ವೆಡೆರೆ' ಎಂಬ ವಿಶಾಲವಾದ ಸೌಧವಿದೆ. ಇಲ್ಲಿಯೇ ಬಹುಶಃ ಭಾರತವನ್ನು ಪೂರ್ಣವಾಗಿ ಆಂಗ್ಲರ ಪಾದಾಕ್ರಾಂತವಾಗಿ ಮಾಡಿದ ಹಲವು ಸಂಚುಗಳು ನಡೆದಿರಬೇಕು. ಆದರೆ ಈಗ ಈ ಪ್ರಾಸಾದದಲ್ಲಿ ರಾಜತಂತ್ರದ ಯಾವ ಆಟವೂ ನಡೆಯುವುದಿಲ್ಲ. ನಿಶ್ಶಬ್ದ ಆವರಣದಲ್ಲಿ ಸರಸ್ವತಿಯ ಆರಾಧನೆ ಇಲ್ಲಿ ನಡೆಯುತ್ತಿದೆ.

ಕಲ್ಕತ್ತೆಯ ಸಾರ್ವಜನಿಕ ಪುಸ್ತಕ ಭಂಡಾರ:

೧೯ನೆಯ ಶತಮಾನದ ಆದಿಭಾಗದಲ್ಲಿ ಸ್ಥಾಪಿತವಾದ ಈ ಕಲ್ಕತ್ತೆಯ ಸಾರ್ವಜನಿಕ ಪುಸ್ತಕಭಂಡಾರದ ವಿಷಯವನ್ನು ಪ್ರಸ್ತಾಪಿಸದಿದ್ದರೆ ನಮ್ಮ ರಾಷ್ಟ್ರೀಯ ಗ್ರಂಥಾಲಯದ ಇತಿಹಾಸ ಪೂರ್ಣವಾಗದು. ಅಂದಿನ 'ಇಂಗ್ಲಿಷ್‌ಮನ್' ಪತ್ರಿಕೆಯ ಸಂಪಾದಕನಾದ ಜೆ. ಎಚ್. ಸ್ಟಾಕ್ವೆಲರ್ ಎಂಬಾತನು ಈ ಸಾರ್ವಜನಿಕ ಪುಸ್ತಕ ಭಂಡಾರವನ್ನು ಆರಂಭಿಸಲು ಕಾರಣಕರ್ತನು. ೧೮೩೫ರ ಆಗಸ್ಟ್ ತಿಂಗಳಲ್ಲಿ ತನ್ನ ಯೋಜನೆಯನ್ನು ಗಣ್ಯ ಸಾರ್ವಜನಿಕರ ಸಭೆ ಮುಂದೆ ಇಟ್ಟು, ಸಭೆಯ ಒಪ್ಪಿಗೆ ಪಡೆದನು. ೨೪ ಸದಸ್ಯರಿರುವ ಒಂದು ವ್ಯವಸ್ಥಾಪಕ ಮಂಡಳಿಯನ್ನು ರಚಿಸಲಾಯಿತು. ಈ ಮಂಡಳಿಯಲ್ಲಿ ಕೇವಲ ಇಬ್ಬರು ಮಾತ್ರ ಭಾರತೀಯರಿದ್ದರು. ಸ್ಟಾಕ್ವೆಲರ್‌ನೇ ಅದರ ಮೊದಲ ಗೌರವ ಕಾರ್ಯದರ್ಶಿ ಆದನು. ಮುನ್ನೂರು ರೂಪಾಯಿಗಳನ್ನು ಕೊಡಬಲ್ಲವರು ಮಾತ್ರ ಈ ಪುಸ್ತಕ ಭಂಡಾರದ ಮಾಲಿಕರಾಗಬಹುದಿತ್ತು. ಕವಿ ರವೀಂದ್ರರ ಅಜ್ಜ ದೊರೆ ದ್ವಾರಕನಾಥ ಠಾಕೂರರು ಅದರ ಮೊದಲ ಮಾಲಿಕರಾದರು. ಅವರ ಉದಾರ ಕೊಡುಗೆಗೆ ಕೃತಜ್ಞತೆ ಸೂಚಿಸಲು ಕಲ್ಕತ್ತೆಯ ನಾಗರಿಕರು ಅಮೃತ ಶಿಲೆಯಲ್ಲಿ ಕಡೆದ ಅವರ ಮೂರ್ತಿಯನ್ನು ಗ್ರಂಥಾಲಯದಲ್ಲಿ ಸ್ಥಾಪಿಸಿದರು. (ಆ ಶಿಲಾ ಪ್ರತಿಮೆ ಹಾಲಿ ರಾಷ್ಟ್ರೀಯ ಗ್ರಂಥಾಲಯದ ಪ್ರವೇಶದ್ವಾರದ ಬಳಿ ಇದೆ) ಮಾಲಿಕರಿಂದ ಸಲ್ಲುತ್ತಿದ್ದ ಹಣ ಹಾಗೂ ಸಾಮಾನ್ಯ ಚಂದಾದಾರರ ಚಂದಾ ಹಣದ ಜೊತೆಗೆ ಆಗಾಗ ನಿಧಿ

ಸಂಗ್ರಹಿಸಲಾಗುತ್ತಿತ್ತು. ಆದರೂ ಹಣದ ಕೊರತೆಯಿಂದ ಅದರ ಪ್ರಗತಿ ಮಂದಗತಿಯಲ್ಲಿ ಸಾಗಿತ್ತು. ವಿಗಿಲಾಗಿ ಸಿಪಾಯಿ ದಂಗೆಯ ಕಾರಣ ಆಂಗ್ಲರ ಆಸಕ್ತಿಯೂ ಕಡಿಮೆ ಆಗಿತ್ತು.

ಇಂಥ ವೇಳೆಯಲ್ಲಿ ಪುಸ್ತಕ ಭಂಡಾರದ ಮಾಲಿಕರಲ್ಲಿ ಒಬ್ಬನೂ ಬಂಗಾಲದ ದೊಡ್ಡ ಅಧಿಕಾರಿಯೂ ಆಗಿದ್ದ ಎ. ಮೆಕೆನ್ಜಿ ಎಂಬಾತನು ಈ ಪುಸ್ತಕ ಭಂಡಾರದ ಹೊಣೆಯನ್ನು ನಗರಸಭೆ ಹಾಗೂ ಸರ್ಕಾರ ವಹಿಸಬೇಕೆಂಬ ಒಂದು ಯೋಜನೆಯನ್ನು ಸಿದ್ಧಪಡಿಸಿದನು. ಅದರ ಪ್ರಕಾರ ನಗರಸಭೆಯ ಪ್ರತಿನಿಧಿಗಳೇ ಹೆಚ್ಚಾಗಿದ್ದ ಒಂದು ವ್ಯವಸ್ಥಾಪಕ ಮಂಡಳಿಯ ಕೈಗೆ ಸಾರ್ವಜನಿಕ ಪುಸ್ತಕ ಭಂಡಾರ ೧೮೯೦ರಲ್ಲಿ ಸೇರಿತು. ಇದರಿಂದ ಪುಸ್ತಕ ಭಂಡಾರ ವಿಸ್ತರಿಸಲು ಸಹಾಯವಾಯಿತು. ರೂ ೧೦೦–೨೦೦ ಸಂಬಳದಂತೆ ಒಬ್ಬ ಗ್ರಂಥಭಂಡಾರಿಗಾಗಿ ಜಾಹೀರಾತು ನೀಡಲಾಗಿ ೨೨೦ ಅರ್ಜಿಗಳು ಬಂದವು. ಅವುಗಳಲ್ಲಿ ಮುಂದೆ ರಾಷ್ಟ್ರನಾಯಕರಾಗಲಿದ್ದ ಬಿಪಿನ್ ಚಂದ್ರ ಪಾಲ್ ಅವರ ಅರ್ಜಿ ಸ್ವೀಕೃತವಾಗಿ, ಅವರು ಅಧಿಕಾರ ಸ್ವೀಕರಿಸಿದರು. ಅವರು ಗ್ರಂಥಸೂಚಿಯ ಮಹತ್ವದ ಕೆಲಸವನ್ನು ಆರಂಭಿಸಿದರು. ಇಂದಿನ ರಾಷ್ಟ್ರೀಯ ಗ್ರಂಥಾಲಯದಲ್ಲಿರುವ ಹಲವಾರು ಅಮೂಲ್ಯ ಗ್ರಂಥಗಳಿಗೆ ಈ ಸಾರ್ವಜನಿಕ ಪುಸ್ತಕ ಭಂಡಾರವೇ ಕಾರಣವಾಯಿತು.

ಇಂಪೀರಿಯಲ್ ಲೈಬ್ರರಿ

ಕಲ್ಕತ್ತೆಯಂಥ ದೊಡ್ಡ ನಗರದಲ್ಲಿ ಸುವ್ಯವಸ್ಥಿತವಾದ ದೊಡ್ಡ ಪುಸ್ತಕ ಭಂಡಾರ ಒಂದು ಇರಬೇಕೆಂಬ ಯೋಚನೆ ಲಾರ್ಡ್‌ಕರ್ಜನ್ನನಿಗೆ ಮೊದಲು ಹೊಳೆಯಿತು. ಅವನು ೧೮೯೯ರಲ್ಲಿ ಕಲ್ಕತ್ತೆಗೆ ನೀಡಿದ ಭೇಟಿಯಲ್ಲಿ ಸರ್ಕಾರೀ ಭವನಗಳನ್ನೂ ಸಾರ್ವಜನಿಕ ಸಂಸ್ಥೆಗಳನ್ನೂ ಸುತ್ತಾಡಿ ನೋಡಿದ. ಉತ್ತಮ ಗ್ರಂಥಗಳಿದ್ದಾಗ್ಯೂ ಅನುಕೂಲತೆಯ ಅಭಾವದಿಂದ ಎರಡು ದೊಡ್ಡ ಪುಸ್ತಕ ಭಂಡಾರಗಳು ನಿರುಪಯೋಗಿಯಾಗಿರುವುದನ್ನು ಗಮನಿಸಿದ. ಮೊದಲನೆಯದು, ವಿವಿಧ ಸರ್ಕಾರಿ ಇಲಾಖೆಗಳಿಗೆ ಸಂಬಂಧಿಸಿದ ಗ್ರಂಥ ಸಂಗ್ರಹಗಳಿಂದ ರೂಪುಗೊಂಡಿದ್ದ ಇಂಪೀರಿಯಲ್ ಲೈಬ್ರರಿ. ಭಾರತ ಸರ್ಕಾರಕ್ಕೆ ಸೇರಿದ್ದ ಈ ಗ್ರಂಥಭಂಡಾರದಲ್ಲಿ ಹಲವು ಅಪರೂಪದ ಪುಸ್ತಕಗಳಿದ್ದವು. ಅವುಗಳನ್ನು ಉಪಯೋಗಿಸುವ ಹಕ್ಕು ಉನ್ನತ ಅಧಿಕಾರಿಗಳಿಗೆ ಮಾತ್ರವಿದ್ದಿತು. ಸಾರ್ವಜನಿಕರಿಗೆ ಬೇಕಿದ್ದರೆ ವಿಶೇಷ ಅನುಮತಿ ಪಡೆದುಕೊಳ್ಳಬೇಕಿತ್ತು. ಮತ್ತೊಂದು, ಶೋಚನೀಯ ಸ್ಥಿತಿಯಲ್ಲಿದ್ದ ಸಾರ್ವಜನಿಕ ಪುಸ್ತಕ ಭಂಡಾರ. ಈ ಗ್ರಂಥಾಲಯದ ದೀನಸ್ಥಿತಿಯನ್ನು ನೋಡಿ ಲಾರ್ಡ್ ಕರ್ಜನ್ನನ ಮನಸ್ಸು ತಲ್ಲಣಗೊಂಡಿರಬೇಕು. ಧೂಳಿನ ರಾಶಿಯಿದ್ದ ಕಪಾಟುಗಳಲ್ಲಿನ ಪುಸ್ತಕಗಳು ತಮ್ಮ ಹೊದಿಕೆಗಳಿಂದ ದೂರವಾಗಿದ್ದವು. ವಾಚಕರು ಕೂಡಬೇಕಾದ ಸ್ಥಳವನ್ನು ಅಲ್ಲಿಯೇ ವಾಸವಾಗಿದ್ದ ಪಾರಿವಾಳಗಳು ಆಕ್ರಮಿಸಿಕೊಳ್ಳುತ್ತಿದ್ದವು. ಮೂಲೆ ಮೂಲೆಗಳಲ್ಲಿ ಜೇಡಗಳು ತಮ್ಮ ಬಳಗವನ್ನು ಬೆಳೆಯಿಸಿಕೊಂಡು ಹಾಯಾಗಿ ಸುಖದಿಂದ ಇದ್ದವು. ಮಿಂಚಿನ ವೇಗದಿಂದ ಕೆಲಸಮಾಡುವ ಪ್ರವೃತ್ತಿಯುಳ್ಳ ಕರ್ಜನ್ ಈ ಎರಡೂ ಗ್ರಂಥಾಲಯಗಳನ್ನು ಸೇರಿಸಿ ಸಜ್ಜುಗೊಳಿಸಬೇಕೆಂದು ಇಚ್ಛಿಸಿದ. ಆದರೆ ಸಾರ್ವಜನಿಕ ಪುಸ್ತಕ ಭಂಡಾರಕ್ಕೆ ಹಲವರು ಮಾಲಿಕರಿದ್ದುದರಿಂದ ಅದು ಅಷ್ಟು ಸುಲಭವಾಗಿರಲಿಲ್ಲ. ಮಾಲಿಕರಿಗೆ ಪರಿಹಾರ ನೀಡುವುದರ ಮೂಲಕ ಹಾಗೂ ಇತರೆ ಕೆಲವು ನಿಯಮಗಳಿಗನುಸಾರವಾಗಿ ಕರ್ಜನ್ ಈ ಎರಡು ಪುಸ್ತಕ ಭಂಡಾರಗಳನ್ನೂ ಏಕೀಕರಿಸಿದ. ಇದಕ್ಕಾಗಿ ಅಂದಿನ ಸರ್ಕಾರ ೨೮,೫೦೦ ರೂ.ಗಳನ್ನು ಖರ್ಚು ಮಾಡಿತು. ಈ ಎರಡು ಪುಸ್ತಕಭಂಡಾರಗಳ ಜೊತೆಗೆ ಈಸ್ಟ್ ಇಂಡಿಯಾ ಕಾಲೇಜ್ ಲೈಬ್ರರಿಯನ್ನೂ ವಿಲೀನಗೊಳಿಸಿದ.

ಈ ರೀತಿ ರೂಪಗೊಂಡ ಹೊಸ ಪುಸ್ತಕ ಭಂಡಾರಕ್ಕಾಗಿ ವ್ಯವಸಾಯ ಇಲಾಖೆಯಲ್ಲಿದ್ದ 'ಮೆಟ್ಕಾಫ್ ಹಾಲ'ನ್ನು ಬಾಡಿಗೆಗೆ ಪಡೆದುಕೊಳ್ಳಲಾಯಿತು. ಪುಸ್ತಕಗಳನ್ನು ಬ್ರಿಟಿಷ್ ಮ್ಯೂಜಿಯಂ ಮಾದರಿಯಲ್ಲಿ ವ್ಯವಸ್ಥೆ ಮಾಡಲಾಯಿತಲ್ಲದೆ ಅವುಗಳ ಸೂಚಿಯನ್ನೂ ತಯಾರಿಸಲಾಯಿತು. ೧೯೦೩ರ ಜನವರಿ ೩೦ರಂದು ಸಂಜೆ ನಡೆದ ವಿಶೇಷ ಸಮಾರಂಭದಲ್ಲಿ ಪುಸ್ತಕಭಂಡಾರವನ್ನು ಸಾರ್ವಜನಿಕರಿಗೆ ತೆರೆಯಲಾಯಿತು. ಸರ್ ಅಶುತೋಷ ಮುಖರ್ಜಿಯವರೂ ಉಪಸ್ಥಿತರಿದ್ದರು. 'ಜನರು ಬ್ರಿಟಿಷ್ ಮ್ಯೂಜಿಯಂನ ಗ್ರಂಥಾಲಯವನ್ನು ಅಥವಾ ಆಕ್ಸ್‌ಫರ್ಡ್‌ನಲ್ಲಿಯ ಬಾಡ್ಲೇಯನ್ ಗ್ರಂಥಾಲಯವನ್ನು ಜ್ಞಾನದಾಹವನ್ನಿಂಗಿಸಿಕೊಳ್ಳಲು ಹೇಗೆ ಮುತ್ತುವರೋ ಹಾಗೆಯೇ ಈ ಗ್ರಂಥಾಲಯದ ಆತಿಥ್ಯವನ್ನು ಕೋರಿ ಬರಬೇಕು' ಎಂಬುದೇ ಕರ್ಜನ್ ಮಹಾಶಯನ ಮಹದಾಶಯವಾಗಿತ್ತು. ಅಂತೆಯೇ ಅವನು

ಬ್ರಿಟಿಷ್ ಮ್ಯೂಜಿಯಂನಲ್ಲಿ ಕೆಲಸಮಾಡುತ್ತಿದ್ದ ಮ್ಯಾಕ್ ಫರ್ಲೇನ್ ಎಂಬ ಗ್ರಂಥಾಲಯ ಶಾಸ್ತ್ರಜ್ಞನನ್ನು ಕರೆಸಿ ಇಂಪೀರಿಯಲ್ ಲೈಬ್ರರಿಯ ಗ್ರಂಥಪಾಲನನ್ನಾಗಿ ನೇಮಿಸಿದ. ಪುಸ್ತಕ ಭಂಡಾರದ ಪರಮಾಧಿಕಾರ ಭಾರತ ಸರ್ಕಾರದ ಗೃಹ ಇಲಾಖೆಗೆ ಸೇರಿದ್ದರೂ ಆಡಳಿತ ವ್ಯವಸ್ಥೆಗಾಗಿ ಒಂದು ಮಂಡಳಿಯನ್ನು ನೇಮಿಸಲಾಯಿತು. ಟಿ. ರ್‍ಯಾಲೆ ಎಂಬಾತ ಅದರ ಮೊದಲ ಅಧ್ಯಕ್ಷನಾಗಿದ್ದ. ಸದಸ್ಯವರ್ಗದಲ್ಲಿ ಜಸ್ಟಿಸ್ ಗುರುದಾಸ ಬ್ಯಾನರ್ಜಿ ಸೇರಿದ್ದರು. ಪುಸ್ತಕ ಭಂಡಾರದ ಪೂರ್ಣ ಆರ್ಥಿಕ ಹೊಣೆ ಭಾರತ ಸರ್ಕಾರದ್ದಾಗಿತ್ತು. ೧೯೦೬ರಲ್ಲಿ ಜಾನ್ ಮ್ಯಾಕ್ ಫರ್ಲೇನ್ ಅವರ ಅಕಾಲ ಮರಣದಿಂದಾಗಿ ಗ್ರಂಥಾಲಯಕ್ಕೆ ಬಹಳ ನಷ್ಟವುಂಟಾಯಿತು. ನಂತರ ಖ್ಯಾತ ಭಾಷಾಶಾಸ್ತ್ರಜ್ಞ ಹರಿನಾಥರೇ ೨೨-೨-೧೯೦೭ರಲ್ಲಿ ಗ್ರಂಥ ಭಂಡಾರಿಯಾಗಿ ಅಧಿಕಾರ ಸ್ವೀಕರಿಸಿದರು. ಅವರ ಅಧಿಕಾರದ ಅಲ್ಪಕಾಲಾವಧಿಯ ನಂತರ ಭಂಡಾರಿಗರಾದ ಜೆ. ಎ. ಚಾಪ್‌ಮನ್‌ರವರ ಕಾಲದಲ್ಲೂ ಪುಸ್ತಕ ಭಂಡಾರ ಎಲ್ಲಾ ದಿಕ್ಕಿನಲ್ಲಿ ಪ್ರಗತಿ ಸಾಧಿಸಿತು.

ಅನೇಕ ಖಾಸಗಿ ವ್ಯಕ್ತಿಗಳು ತಮ್ಮ ಗ್ರಂಥ ಸಂಗ್ರಹಗಳನ್ನು ಗ್ರಂಥಾಲಯಕ್ಕೆ ದಾನವಾಗಿ ಕೊಟ್ಟದ್ದರಿಂದ ಪುಸ್ತಕಭಂಡಾರ ತೀವ್ರವಾಗಿ ಬೆಳೆಯಲು ನೆರವಾಯಿತು. ಹಾಗೆ ಬಂದ ಮೊತ್ತ ಮೊದಲ ಸಂಗ್ರಹಗಳಲ್ಲಿ ಬಿಹಾರಿನ ಜಮೀನ್ದಾರರದ್ದೂ, ತ್ರಿಪುರಾದ ಮಹಾರಾಜರದ್ದೂ ಉಲ್ಲೇಖನೀಯ. ಒಂದು ಲಕ್ಷ ಪುಸ್ತಕಗಳ ಸಂಗ್ರಹದೊಂದಿಗೆ ಇಂಪೀರಿಯಲ್ ಲೈಬ್ರರಿ ತನ್ನ ಕಾರ್ಯಾರಂಭ ಮಾಡಿತು. ಸ್ಥಳದ ಅಭಾವದಿಂದ ಪುಸ್ತಕ ಭಂಡಾರವನ್ನು 'ಮೆಟ್ಕಾಫ್ ಹಾಲ್' ನಿಂದ 'ಎಸ್ಪ್ಲನೇಡ್ ಈಸ್ಟ್, ೫'ಕ್ಕೆ ಸ್ಥಳಾಂತರಿಸಲಾಯಿತು. (ಈಗ ಅಲ್ಲಿ ರಾಷ್ಟ್ರೀಯ ಗ್ರಂಥಾಲಯದ ವಾಚನಾಲಯವಿದೆ)

೧೯೨೨ರಿಂದ ಪುಸ್ತಕ ಭಂಡಾರದ ಆಡಳಿತ ಸಮಿತಿಯಲ್ಲಿ ಭಾರತದ ಎಲ್ಲಾ ಭಾಗಕ್ಕೂ ಪ್ರಾತಿನಿಧ್ಯ ನೀಡಲು ಪ್ರಾರಂಭವಾಯಿತು. ಎರಡನೇ ಮಹಾಯುದ್ಧ ಗ್ರಂಥಾಲಯದ ಬೆಳವಣಿಗೆಯ ಮೇಲೂ ತನ್ನ ಪ್ರಭಾವ ಬೀರಿತು. ಪುಸ್ತಕ ಭಂಡಾರ ಪುನಃ ಚಿತ್ತರಂಜನದಾಸ್ ರಸ್ತೆಯಲ್ಲಿನ ಕಟ್ಟಡವೊಂದಕ್ಕೆ ಬದಲಾಯಿತು. ಸೂಚೀಕರಣ ನಿಂತಿತು. ೧೯೪೭ರಲ್ಲಿ ಗ್ರಂಥಾಲಯದಲ್ಲಿ ೩ ಲಕ್ಷ ೫೦ ಸಾವಿರ ಗ್ರಂಥಗಳಿದ್ದವು. ಹೀಗೆ ಹೆಚ್ಚಿದ ೩ ೧/೨ ಲಕ್ಷ ಗ್ರಂಥಗಳಲ್ಲಿ ಅರ್ಧಕ್ಕಿಂತ ಹೆಚ್ಚು ಖಾಸಗಿ ವ್ಯಕ್ತಿಗಳಿಂದ ಬಂದ ದಾನದ ಫಲ. ಪುಸ್ತಕ ಭಂಡಾರದ ಜೊತೆಗೇ ಸಾರ್ವಜನಿಕ ವಾಚನಾಲಯವೂ ಬೆಳೆಯತೊಡಗಿತ್ತು. ಪ್ರಾರಂಭದಲ್ಲಿ ಪುಸ್ತಕ ಭಂಡಾರ ಸರ್ಕಾರಿ ಅಧಿಕಾರಿಗಳ ಉಪಯೋಗಕ್ಕೇ ಹೆಚ್ಚು ಮೀಸಲಾಗಿದ್ದರೂ ಬರಬರುತ್ತಾ ಅದು ಸಾರ್ವಜನಿಕರ ಸೊತ್ತಾಯಿತು. ಗ್ರಂಥಾಲಯ ತರಬೇತಿಯ ಪ್ರಥಮ ಕೇಂದ್ರವನ್ನೂ ತೆರೆಯಲಾಯಿತು.

ರಾಷ್ಟ್ರೀಯ ಗ್ರಂಥಾಲಯ

ಸ್ಟಾಕ್ವೆಲರ್‌ನ ಆಸಕ್ತಿ ಹಾಗೂ ಲಾರ್ಡ್ ಕರ್ಜನ್‌ನ ದೂರದೃಷ್ಟಿಯ ಫಲವಾಗಿ ರೂಪಿತಗೊಂಡ ಈ ಇಂಪೀರಿಯಲ್ ಲೈಬ್ರರಿ ಹೀಗೆ ಬೆಳೆದುದರ ಫಲವಾಗಿ ಸ್ವತಂತ್ರ ಭಾರತ ಸುಲಭವಾಗಿ ರಾಷ್ಟ್ರೀಯ ಗ್ರಂಥಾಲಯವನ್ನು ರೂಢಿಸಿಕೊಳ್ಳಲು ಸಾಧ್ಯವಾಯಿತು. ಸ್ವಾತಂತ್ರ್ಯದ ಅರುಣೋದಯದವರೆಗೆ ಮೆಟ್ಕಾಫ್ ಹಾಲ್‌ನಲ್ಲಿ ಸ್ಥಳ ಸಂಕೋಚದಿಂದಾಗಿ ಹಾಗೂ ಹೀಗೂ ಉಸಿರು ಕಟ್ಟಿಕೊಂಡ ಅವಸ್ಥೆಯಲ್ಲಿದ್ದುದರಿಂದ ಅದರ ಸ್ಥಳಾಂತರದ ಅವಶ್ಯಕತೆ ಗೋಚರಿಸಿತು. ೧೯೪೮ರಲ್ಲಿ ರಾಷ್ಟ್ರೀಯ ಗ್ರಂಥಾಲಯವನ್ನು ಪ್ರಾರಂಭಿಸುವ ನಿರ್ಣಯವಾದಾಗ ಭಾರತ ಸರ್ಕಾರಕ್ಕೆ ಗ್ರಂಥಾಲಯದ ಸಂಚಾಲಕತ್ವದ ಘನತರವಾದ ಹೊಣೆ ಹೊರಲು ಕನ್ನಡಿಗರಾದ ಪದ್ಮಶ್ರೀ ಬಿ. ಎಸ್. ಕೇಶವನ್ನರಷ್ಟು ಅರ್ಹರಾದವರು ಬೇರಾರೂ ದೊರೆಯಲಿಲ್ಲ. ಅವರು ಅಧಿಕಾರ ವಹಿಸಿಕೊಂಡನಂತರ ಕಲಕತ್ತೆಯ 'ಬೆಲ್ವಿಡೆರೆ'ನ ವೈಸರಾಯರ ಭಾರಿ ಸೌಧವು ರಾಷ್ಟ್ರೀಯ ಗ್ರಂಥಾಲಯದ ಕೇಂದ್ರವಾಗಬೇಕೆಂದು ಇಚ್ಛಿಸಿ ಅಂದಿನ ಬಂಗಾಲದ ಗೌರ್ನರ್ ಆಗಿದ್ದ ಚಕ್ರವರ್ತಿ ರಾಜಗೋಪಾಲಾಚಾರಿಯವರು ದಿ. ಪ್ರಧಾನಿ ನೆಹ್ರೂರಿಗೆ ಒಂದು ಪತ್ರ ಬರೆದರು; ನೆಹರೂ ಅದಕ್ಕೆ ಒಪ್ಪಿದರು. ಬೆಲ್ವಿಡೆರೆಯು ಗ್ರಂಥಗಳ ಉಗ್ರಾಣವಾಗಿರದೆ, ಜಗತ್ತಿನ ಅತ್ಯುತ್ತಮ ಆಧುನಿಕ ಗ್ರಂಥ ಭಂಡಾರವಾಗಬೇಕೆಂದು ನೆಹ್ರೂ ಆಶಿಸಿದರು. ಶಿಕ್ಷಣ ಸಚಿವರಾಗಿದ್ದ ಮೌಲಾನಾ ಆಜಾದರು ಇದಕ್ಕೆ ರೂಪುಕೊಟ್ಟರು. ಇದರಲ್ಲಿ ಅವರಿಗೆ ಪ್ರೊ|| ಹುಮಾಯೂನ್ ಕಬೀರ್, ಡಾ|| ತಾರಾಚಂದ್ ಮೊದಲಾದವರು ಸಹಾಯದ ಹಸ್ತ ನೀಡಿದರು. ಹಳೆಯ ಇಂಪೀರಿಯಲ್ ಲೈಬ್ರರಿಗೆ ರಾಷ್ಟ್ರೀಯ ಗ್ರಂಥಾಲಯವೆಂದು ನಾಮಕರಣ ಮಾಡಲಾಯಿತು. ಪುಸ್ತಕ ಭಂಡಾರವನ್ನು 'ಬೆಲ್ವಿಡೆರೆ'ಗೆ ಸ್ಥಳಾಂತರಿಸಲಾಯಿತು. ಹಳೆಯ ಹಾಗೂ ವಿಲಾಸಿ ಭವನವನ್ನು ಗ್ರಂಥಾಲಯದ ಕಾರ್ಯ

ಚಟುವಟಿಕೆಗಳ ಅನುಕೂಲಕ್ಕೆ ತಕ್ಕಂತೆ ನಾಲ್ಕು ವರ್ಷಗಳಲ್ಲಿ ಮಾರ್ಪಾಡು ಮಾಡಲಾಯಿತು. ಸಲಕರಣೆಗಳು ಹಾಗೂ ವಿದ್ಯುತ್ ವ್ಯವಸ್ಥೆ ಮೊದಲಾದ ಎಲ್ಲಾ ಅಂಶಗಳಲ್ಲೂ ಹೊಸ ವ್ಯವಸ್ಥೆ ಮಾಡಲಾಯಿತು. ವೈಸ್ರಾಯ್ ಭವನದ ನಾಟ್ಯಗೃಹ ವಾಚನಾಲಯವಾಯಿತು. 'ಮನ್ಮಥನು ಸರಸ್ವತಿಗೆ ಸ್ಥಾನವನ್ನು ಬಿಟ್ಟುಕೊಟ್ಟ'ನೆಂದು ಅಂದಿನ ಪತ್ರಿಕೆಯೊಂದು ಬರೆಯಿತು !

ಇದೇ ವೇಳೆಗೆ ೧೯೪೯ರಲ್ಲಿ ದಿ. ಸರ್ ಅಶುತೋಷ್ ಮುಖರ್ಜಿಯವರ ಮಕ್ಕಳು, ಮೌಲಾನಾ ಆಜಾದರಿಗೆ ಪತ್ರವೊಂದನ್ನು ಬರೆದು ತಮ್ಮ ತಂದೆಯವರ ಅಮೂಲ್ಯ ಗ್ರಂಥಸಂಗ್ರಹವನ್ನು ರಾಷ್ಟ್ರೀಯ ಗ್ರಂಥಾಲಯಕ್ಕೆ ಕಾಣಿಕೆ ನೀಡುವುದಾಗಿ ತಿಳಿಸಿದರು. ಸುಮಾರು ೭೫ ಸಾವಿರ ಗ್ರಂಥಸಂಗ್ರಹದ ಈ ಅಮೂಲ್ಯ ಕಾಣಿಕೆಯನ್ನು ಆಜಾದರು ಕೃತಜ್ಞತೆಯಿಂದ ಸ್ವೀಕರಿಸಿದರು. ಇದನ್ನು ಅನುಸರಿಸಿ ಇನ್ನೂ ಇಂಥ ಅನೇಕ ಕೊಡುಗೆಗಳು ಗ್ರಂಥಾಲಯಕ್ಕೆ ಬಂದಿವೆ. ಅದನ್ನು ವಿಸ್ತರಿಸುತ್ತಿವೆ.

ಈ ಗ್ರಂಥಾಲಯು ಕಳೆದ ೨೮ ವರ್ಷಗಳಲ್ಲಿ ಮಹಾ ಸಂಸ್ಥೆಯಾಗಿ, ಸ್ವತಂತ್ರ ಭಾರತದ ಕೆಲವೇ ಅದ್ಭುತಗಳಲ್ಲಿ ಒಂದಾಗಿ ಒಂದು ಪುಣ್ಯಕ್ಷೇತ್ರವಾಗಿ ಬೆಳೆದು ಬಂದಿದೆ. ಹೆಮ್ಮೆಯಿಂದ ಮೆರೆಯುತ್ತಿದೆ. ಈ ರೀತಿ ಬಹುಮುಖವಾಗಿ ಗ್ರಂಥಾಲಯದ ಅಭಿವೃದ್ಧಿಗೆ ಕಾರಣರಾಗಿ ದುಡಿದವರು ಪ್ರದ್ಮಶ್ರೀ ಬಿ. ಎಸ್. ಕೇಶವನ್ ಎಂಬುದು ಕನ್ನಡಿಗರಿಗೆ ಅಭಿಮಾನದ ಸಂಗತಿ.

ಗ್ರಂಥಗಳ ವ್ಯಾಪ್ತಿ

೧೯೫೪ರಲ್ಲಿ ಭಾರತ ಸರ್ಕಾರವು ಮಾಡಿರುವ ಕಾಯಿದೆಯ ಪ್ರಕಾರ ಭಾರತದ ಎಲ್ಲಾ ರಾಜ್ಯಗಳಲ್ಲೂ ಎಲ್ಲಾ ಭಾಷೆಗಳಲ್ಲಿ ಪ್ರಕಟವಾಗುವ ಗ್ರಂಥಗಳ ಒಂದು ಪ್ರತಿಯನ್ನು ಪುಸ್ತಕ ಭಂಡಾರಕ್ಕೆ ಸಲ್ಲಿಸಬೇಕು.* ಅಲ್ಲದೆ ನಿಯತಕಾಲಿಕೆ ಹಾಗೂ ದಿನಪತ್ರಿಕೆಗಳೂ (೧೯೫೬ರಲ್ಲಿ ಸುಧಾರಿಸಿದ ಕಾನೂನಿನ ಪ್ರಕಾರ) ಈ ಗ್ರಂಥಾಲಯಕ್ಕೆ ತಲುಪುತ್ತವೆ. ಬೈಂಡ್ ಆದ ನಿಯತಕಾಲಿಕೆಗಳ ಸಂಪುಟಗಳನ್ನು ಕೊಳ್ಳಲಾಗುತ್ತಿದೆ. ೧೯೫೪ಕ್ಕೆ ಮುಂಚೆ ಪ್ರಕಟವಾದ ಅಮೂಲ್ಯ ಗ್ರಂಥಗಳನ್ನೂ ಆಕರ ಗ್ರಂಥಗಳನ್ನೂ ಗ್ರಂಥಾಲಯ ಕೊಳ್ಳುತ್ತದೆ. ಭಾರತವು ಅನ್ಯದೇಶಗಳೊಡನೆ ರಾಜಕೀಯ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿರುವುದರಿಂದ ಅನ್ಯದೇಶಗಳಿಗೆ ಸಂಬಂಧಿಸಿದ ಪ್ರಕಟಣೆಗಳನ್ನೂ ಕೊಳ್ಳುವ ವ್ಯವಸ್ಥೆಯಿದೆ.

ಕಾಯಿದೆಹಾಗೂ ಕೊಳ್ಳುವುದರಮೂಲಕವಲ್ಲದೆಗ್ರಂಥಾಲಯಕ್ಕೆ ಹಲವಾರು ಗ್ರಂಥಗಳು ವಿನಿಮಯದ ಮೂಲಕ ಹಾಗೂ ಕೊಡುಗೆ ರೂಪದಲ್ಲಿ ಬರುತ್ತವೆ. ಕೊಡುಗೆ ರೂಪದಲ್ಲಿ ಬಂದಿರುವ ಸಂಗ್ರಹಗಳಲ್ಲಿ ಉಲ್ಲೇಖನೀಯವಾದವು– ಅರಬ್ಬೀ, ಫಾರಸೀ ಹಾಗೂ ಉರ್ದು ಹಸ್ತಪ್ರತಿ ಹಾಗೂ ಗ್ರಂಥಗಳುಳ್ಳ ವಿಖ್ಯಾತವಾದ 'ಬುಹಾರ್ ಸಂಗ್ರಹ', ಭಾರತೀಯ ವಿಷಯಗಳಲ್ಲಿ ಎತ್ತಿದ ಕೈಯುಳ್ಳವರಾದ ಥೀಬಾ ಅವರ ಸಂಸ್ಕೃತ ಹಸ್ತಲಿಪಿಗಳ ಸಂಗ್ರಹ, ೭೫ ಸಾವಿರದಷ್ಟು ದೊಡ್ಡದಾದ ಅಶುತೋಷ ಮುಖರ್ಜಿಯವರ ಅಮೂಲ್ಯ ಸಂಗ್ರಹ, ಅತಿ ವಿರಳ ಹಾಗೂ ಅಮೂಲ್ಯ ಬಂಗಾಲಿ ಗ್ರಂಥಗಳುಳ್ಳ ರಾಮದಾಸ ಸೂರ್ ಸಂಗ್ರಹ, ಬೋಲಾರಾಮ ಸಂಗ್ರಹ, ಚೀನೀ ಸಂಗ್ರಹ, ಅಮೆರಿಕೆಗೆ ಸಂಬಂಧಪಟ್ಟ ಸಂಗ್ರಹ, ಡಾ. ಸುರೇಂದ್ರನಾಥಸೇನ್ ಅವರ ವೈಯಕ್ತಿಕ ಗ್ರಂಥ ಸಂಗ್ರಹ, (ಇತಿಹಾಸ ಹಾಗೂ ಇತರೆವಿಷಯಗಳಿಗೆ ಸಂಬಂಧಿಸಿದವು), ವೈಯಾಪುರಿಪಿಳ್ಳೆ ಸಂಗ್ರಹ (ತಮಿಳು ಹಸ್ತಪ್ರತಿಗಳು ಹಾಗೂ ಗ್ರಂಥಗಳು), ಜಾದೂನಾಥ್ ಸರ್ಕಾರ್ ಅವರ ಸಂಗ್ರಹ (ಮಧ್ಯಕಾಲೀನ ಭಾರತೀಯ ಇತಿಹಾಸಕ್ಕೆ ಸಂಬಂಧಿಸಿದ ಆಕರ ಗ್ರಂಥಗಳು, ಭೂಪಟಗಳು, ಹಸ್ತಪ್ರತಿಗಳು). ಅಲ್ಲದೆ ದಿ|| ಸುಬ್ರಹ್ಮಣ್ಯ ಭಾರತಿಯವರು ನಡೆಸುತ್ತಿದ್ದ 'ಇಂಡಿಯಾ' ಎಂಬ ಪತ್ರಿಕೆಯ ಅಮೂಲ್ಯ ಪ್ರತಿಯೂ ಸಹ ಇಲ್ಲಿದೆ.

ಸೂಚೀಕರಣ ಹಾಗೂ ವರ್ಗೀಕರಣ

ಮೇಲ್ಕಂಡ ರೀತಿ ಪ್ರಾಪ್ತವಾದ ಗ್ರಂಥಗಳನ್ನು ಆಧುನಿಕ ರೀತಿಯಲ್ಲಿ ಸೂಚೀಕರಣ ಹಾಗೂ ವರ್ಗೀಕರಣ ಮಾಡುವ ವ್ಯವಸ್ಥೆಯಿದೆ. ಇದಕ್ಕಾಗಿ ಭಾರತೀಯ ಭಾಷೆಗಳಿಗಾಗಿ ಹಾಗೂ ವಿದೇಶೀ ಭಾಷೆಗಳಿಗಾಗಿ ಪ್ರತ್ಯೇಕ ವಿಭಾಗಗಳಿವೆ. ಗ್ರಂಥಸೂಚಿಗಳು ಮುದ್ರಿತರೂಪದಲ್ಲಿಯೂ ಪತ್ರಕಗಳ ರೂಪದಲ್ಲಿಯೂ ಇವೆ. ಅಲ್ಲದೆ ಗ್ರಂಥಾಲಯಕ್ಕೆ ಹೊಸದಾಗಿ ಸೇರಿಸಿದ ಗ್ರಂಥಗಳ ಸೂಚಿಯನ್ನು ವಾಚಕರ ಅನುಕೂಲಕ್ಕಾಗಿ ಪ್ರತಿ ತಿಂಗಳು ಹೊರಡಿಸಲಾಗುತ್ತದೆ.

---

* ಕಾಯಿದೆಯ ಸಾರಾಂಶಕ್ಕೆ ಅನುಬಂಧ ನೋಡಿ.

ಭಾರತೀಯ ಭಾಷಾ ವಿಭಾಗಗಳು

ಹಿಂದೆ ಭಾರತೀಯ ಭಾಷೆಗಳಲ್ಲಿನ ಪ್ರಕಾಶನಗಳನ್ನು ಕೊಳ್ಳುತ್ತಿರಲಿಲ್ಲ. ಆದರೆ ಸ್ವಾತಂತ್ರ್ಯನಂತರ ಗ್ರಂಥಾಲಯವು ತನ್ನ ಈಗಿನ ನಿವಾಸಕ್ಕೆ ಸ್ಥಳಾಂತರಗೊಂಡ ಕೂಡಲೇ ಭಾರತೀಯ ಭಾಷೆಗಳಲ್ಲಿನ ಎಲ್ಲ ಆಕರ ಗ್ರಂಥಗಳನ್ನೂ ಸಂಗ್ರಹಿಸುವ ಕಡೆ ಆದ್ಯ ಗಮನ ನೀಡಲಾಯಿತು. ಅದಕ್ಕಾಗಿ ಕೇಂದ್ರ ಸರ್ಕಾರ ೧೯೫೨–೫೩ರಲ್ಲಿ ೫೦,೦೦೦ ರೂ.ಗಳನ್ನು ವಿಶೇಷ ಅನುದಾನವನ್ನಾಗಿ ಇತ್ತಿತು. ಸಾಕಷ್ಟು ಗ್ರಂಥಗಳ ಸಂಗ್ರಹವಾದ ನಂತರ ಆಯಾ ವಿಭಾಗಕ್ಕೆ ಬೇಕಾದ ಸಿಬ್ಬಂದಿ ವರ್ಗದ ನೇಮಕದ ವ್ಯವಸ್ಥೆ ಮಾಡಲಾಯಿತು. ಆಯಾ ಭಾಷಾ ವಿಭಾಗಗಳನ್ನು ಸಮೃದ್ಧಗೊಳಿಸುವುದು, ಗ್ರಂಥಗಳ ವರ್ಗೀಕರಣ, ಸೂಚೀಕರಣ, ಸಂದರ್ಭ ಸೇವೆ, ನಿಯತಕಾಲಿಕೆಗಳ ಸೂಚಿ ಹಾಗೂ ಪ್ರಕಾಶಕರ ಸೂಚಿಗಳನ್ನು ಸಿದ್ಧಪಡಿಸಿ ಕ್ರಮವಾಗಿಡುವುದು; ಹೊಸದಾಗಿ ಸೇರಿಸಿದ ಗ್ರಂಥಗಳ ಸೂಚಿಯನ್ನು ತರುವುದರಲ್ಲಿ ನೆರವಾಗುವುದು—ಈ ವಿಭಾಗಗಳ ಅಧಿಕಾರಿಗಳ ಹೊಣೆಯಾಗಿರುತ್ತದೆ.

ವಾಚನಾಲಯ

ಹಿಂದಿನ ವೈಸರಾಯರ ಕಾಲದಲ್ಲಿ ನಾಟ್ಯಗೃಹವಾಗಿದ್ದ ವಿಶಾಲ ಅಂಗಳದಲ್ಲಿ ಏಕಕಾಲಕ್ಕೆ ಸುಮಾರು ೩೫೦ ವಾಚಕರು ಕುಳಿತು ಓದಲನುಕೂಲವಾಗುವಂತೆ ವಾಚನಾಲಯವಿದೆ. ಈ ವಾಚನಾಲಯದಲ್ಲಿ ಸುಮಾರು ಹದಿನೈದು ಸಾವಿರಕ್ಕೆ ಮಿಕ್ಕಿ ಸಂದರ್ಭಗ್ರಂಥಗಳನ್ನಿಡಲಾಗಿದೆ. ಸಂಶೋಧಕರಿಗೆ ವಾಚನಾಲಯದಲ್ಲಿ ವಿಶೇಷ ವ್ಯವಸ್ಥೆ ಇರುವ ಕೋಣೆಗಳಿವೆ. ಭಾರತದ ಯಾವ ಪ್ರಜೆಗೂ ಅವನು ಪ್ರಾಪ್ತವಯಸ್ಕನಾಗಿದ್ದಲ್ಲಿ ಇಲ್ಲಿ ಪ್ರವೇಶವಿದೆ. ವಾಚಕರಿಗಾಗಿ ನೀಡುವ 'ಟಿಕೆಟ್' ಅವರ ವಾಚನಾಲಯದ ಸದಸ್ಯತ್ವವನ್ನು ಸೂಚಿಸುತ್ತದೆ. ಆದರೆ ಗ್ರಂಥಾಲಯದ ಖಾಯಂ ಸದಸ್ಯತ್ವ ಪಡೆಯಲು ಕೆಲವು ಪ್ರತಿಷ್ಠಿತ ವ್ಯಕ್ತಿಗಳ ಶಿಫಾರಸನ್ನು ಪಡೆಯಬೇಕು. ಹಿಂದೆ ವರ್ಷದಲ್ಲಿ ಕೇವಲ ೨೫೦ ದಿನಗಳು ಗ್ರಂಥಾಲಯವನ್ನು ತೆರೆಯಲಾಗುತ್ತಿತ್ತು. ಆದರೆ ಈಗ ವರ್ಷದಲ್ಲಿ ೩೬೨ ದಿನಗಳೂ ಗ್ರಂಥಾಲಯ ತೆರೆದಿರುತ್ತದೆ. ವಾರದ ದಿನಗಳಲ್ಲಿ ಬೆಳಗ್ಗೆ ೯ ರಿಂದ ರಾತ್ರಿ ೮ ಗಂಟೆಯವರೆಗೆ ಕೆಲಸಮಾಡುತ್ತದೆ. ಆದರೆ ಭಾನುವಾರ ಹಾಗೂ ಇತರೆ ರಜಾ ದಿನಗಳಲ್ಲಿ ಬೆಳಗ್ಗೆ ೧೦ರಿಂದ ಸಂಜೆ ೫ರವರೆಗೆ ಗ್ರಂಥಾಲಯವನ್ನು ತೆರೆದಿಡಲಾಗುತ್ತದೆ.

ಗ್ರಂಥಗಳ ಎರವಲು ಸೇವೆ

ಸಾಮಾನ್ಯವಾಗಿ ರಾಷ್ಟ್ರೀಯ ಗ್ರಂಥಾಲಯಗಳ ಮುಖ್ಯ ಕರ್ತವ್ಯವು ತನ್ನಲ್ಲಿರುವ ಗ್ರಂಥ ಸಂಪತ್ತನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗಾಗಿ ಸಂರಕ್ಷಿತವಾಗಿಡುವುದು ಹಾಗೂ ಸ್ಥಳದಲ್ಲೇ ಪರಾಮರ್ಶೆಗೆ ಹಾಗೂ ವಾಚನಕ್ಕೆ ಅನುಕೂಲತೆಗಳನ್ನು ಒದಗಿಸುವುದು. ಈ ದೃಷ್ಟಿಯಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಾರ್ವಜನಿಕ ಪುಸ್ತಕ ಭಂಡಾರ ಅಲ್ಲ. ಆದರೂ ಕಲ್ಕತ್ತಾದಲ್ಲಿ ಬೇರೊಂದು ಉತ್ತಮ ಸಾರ್ವಜನಿಕ ಪುಸ್ತಕ ಭಂಡಾರದ ಕೊರತೆಯಿಂದಾಗಿ ಈ ಗ್ರಂಥಾಲಯವನ್ನು ಸಾರ್ವಜನಿಕರ ಉಪಯೋಗಕ್ಕೆ ೧೯೫೩ರಿಂದ ತೆರೆಯಲಾಗಿದೆ.

ಪ್ರತಿಯೊಬ್ಬ ವಾಚಕರಿಗಾಗಿ ಒಂದು ಟಿಕೆಟ್ ಕೊಡಲಾಗುವುದು. ಒಂದು ಸಲಕ್ಕೆ ಅವನು ಎರಡು ಪುಸ್ತಕಗಳನ್ನು ಮನೆಗೆ ಎರವಲಾಗಿ ಒಯ್ಯಬಹುದು. ಈ ರೀತಿ ಮನೆಗೆ ಒಯ್ಯಲು ವಾಚಕರು ಪ್ರತಿ ತಿಂಗಳೂ ಚಂದಾ ತೆರಬೇಕಿಲ್ಲ. ಆದರೆ ಅವರು ಒಯ್ಯಬೇಕೆಂದಿರುವ ಗ್ರಂಥಗಳ ಬೆಲೆಗೆ ಸರಿಸಮನಾಗಿ ಠೇವಣಿ ಇಡಬೇಕಾಗುತ್ತದೆ. ಸಂದರ್ಭ ಗ್ರಂಥಗಳು, ಅಪೂರ್ವ ಗ್ರಂಥಗಳು ಹಾಗೂ ನಿಯತಕಾಲಿಕೆಗಳನ್ನು ಮನೆಗೆ ಒಯ್ಯಲು ಅವಕಾಶವಿಲ್ಲ.

ದೇಶದ ಯಾವುದೆ ಭಾಗದ ಸಂಶೋಧಕರಿಗೆ, ವಿದ್ವಾಂಸರಿಗೆ ಬೇಕಾದ ಗ್ರಂಥಗಳನ್ನು ತನ್ನ ಭಂಡಾರದಿಂದ ಒದಗಿಸಲು ಗ್ರಂಥಾಲಯ ವ್ಯವಸ್ಥೆ ಮಾಡುತ್ತಿದೆ. ಕೆಲವು ನಿಯಮಗಳಿಗನುಸಾರವಾಗಿ ವೈಯಕ್ತಿಕ ವಿದ್ವಾಂಸರಿಗೆ ಇಲ್ಲವೇ ಅಂತರ ಗ್ರಂಥಾಲಯ ಎರವಲು ಸೇವೆ ಮೂಲಕ ಬೇಕಾದ ಗ್ರಂಥಗಳನ್ನು ತನ್ನಲ್ಲಿಲ್ಲದಿದ್ದರೆ ಬೇರೆ ದೇಶಗಳ ರಾಷ್ಟ್ರೀಯ ಗ್ರಂಥಾಲಯಗಳ ನೆರವಿನಿಂದ ಒದಗಿಸುವ ಏರ್ಪಾಡು ಮಾಡಲಾಗುತ್ತಿದೆ. ಇದಕ್ಕಾಗಿ ರಾಷ್ಟ್ರೀಯ ಗ್ರಂಥಾಲಯ ಅಮೆರಿಕದ 'ಲೈಬ್ರೆರಿ ಆಫ್ ಕಾಂಗ್ರೆಸ್' ಹಾಗೂ ಲಂಡನ್ನಿನ 'ರಾಷ್ಟ್ರೀಯ ಕೇಂದ್ರ ಗ್ರಂಥಾಲಯ' ದೊಡನೆ ಸಂಪರ್ಕ ಹೊಂದಿದೆ. ಭಾರತದ ಬಗ್ಗೆ ಬರೆದ ಪುಸ್ತಕಗಳ ಬೇಡಿಕೆ ಬೇರೆ ದೇಶಗಳಿಂದ ಬಂದಾಗಲೂ ತನ್ನಲ್ಲಿನ ಗ್ರಂಥಭಂಡಾರದಿಂದ ಅಥವಾ ದೇಶದ ಇತರೆ ಗ್ರಂಥಾಲಯಗಳಿಂದ ಪಡೆದು ಒದಗಿಸುವ ಯತ್ನ ಮಾಡಲಾಗುತ್ತಿದೆ.

ಗ್ರಂಥಾಲಯದ ಪ್ರಕಟಣೆಗಳು

ಗ್ರಂಥಾಲಯವು ತನ್ನ ಸಂಗ್ರಹದ ಗ್ರಂಥಸೂಚಿಗಳನ್ನು ಬಿಟ್ಟು, ಎಲ್ಲಾ ಭಾಷೆಗಳಲ್ಲಿನ ಅನುವಾದಗಳ ಸೂಚಿ ಹಾಗೂ ಪ್ರದರ್ಶನಗಳನ್ನು ಏರ್ಪಡಿಸಿದಾಗ ಅವಕ್ಕೆ ಸಂಬಂಧಿಸಿದ ಕೆಲವು ಪರಿಚಯಾತ್ಮಕ ಲಘು ಪುಸ್ತಿಕೆಗಳನ್ನು ಪ್ರಕಟಿಸುತ್ತದೆ.

ಭಾರತದ ಇತಿಹಾಸ, ಸಂಸ್ಕೃತಿ, ಭಾಷೆ ಹಾಗೂ ವಿಜ್ಞಾನಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲೂ ಒಂದೊಂದು ವಾಙ್ಮಯದರ್ಶಕವನ್ನು ತಯಾರಿಸುವ ಒಂದು ಬೃಹತ್ ಯೋಜನೆಯನ್ನು ಈಗಾಗಲೇ ಕೈಕೊಂಡು ಕೆಲವು ವಿಷಯಗಳ ವಾಙ್ಮಯ ದರ್ಶಕಗಳು ಹೊರಬಂದಿವೆ. ೫೬ ಸಂಪುಟಗಳ ಈ ಯೋಜನೆ ಕರಗತವಾದಾಗ ದೇಶೀಯ ಹಾಗೂ ವಿದೇಶೀಯ ವಿದ್ವಾಂಸರಿಗೆ ಬಹಳ ಉಪಯೋಗವಾಗುವುದರಲ್ಲಿ ಸಂದೇಹವಿಲ್ಲ.

ಗ್ರಂಥ ಹಾಗೂ ವಸ್ತು ಪ್ರದರ್ಶನಗಳು

ಗ್ರಂಥಾಲಯವು ಸಂದರ್ಭಾನುಸಾರವಾಗಿ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಪ್ರದರ್ಶನಗಳನ್ನು ಏರ್ಪಡಿಸುತ್ತಾ ಬಂದಿದೆ. ಉಲ್ಲೇಖನೀಯ ಪ್ರದರ್ಶನಗಳು—ವಿಲಿಯಂ ಕ್ಯಾರೇ ಪ್ರದರ್ಶನ, ೧೮೫೭ರ ಪ್ರದರ್ಶನ, ಸ್ವಾಮಿ ವಿವೇಕಾನಂದ, ಕವಿ ರವೀಂದ್ರನಾಥ ಠಾಕೂರ್, ಷೇಕ್ಸ್‌ಪಿಯರ್ ಹಾಗೂ ರಾಮಾನಂದ ಚಟರ್ಜಿ ಅವರ ಜೀವನ-ಕೃತಿಗಳ ಬಗ್ಗೆ ಏರ್ಪಡಿಸಿದ ಪ್ರದರ್ಶನಗಳು.

ಗ್ರಂಥ ರಕ್ಷಣಾ ವಿಭಾಗ

ಜೀರ್ಣಗೊಂಡ ಗ್ರಂಥಗಳ ಸಂರಕ್ಷಣೆಗೆ ಗ್ರಂಥಾಲಯವು ತನ್ನದೇ ಆದ ಬೈಂಡರಿ ಹಾಗೂ ರಾಸಾಯನಿಕ ಪ್ರಯೋಗ ಶಾಲೆಯನ್ನು ಹೊಂದಿದೆ. ಕ್ರಿಮಿಕೀಟಗಳಿಂದ ಗ್ರಂಥಗಳು ನಾಶವಾಗದಂತಿರಲು ರಾಸಾಯನಿಕ ಕ್ರಿಯೆ ವ್ಯವಸ್ಥೆ ಇದೆ. ನುರಿತ ಹಾಗೂ ಅನುಭವಿ ರಾಸಾಯನಿಕ ತಜ್ಞರೊಬ್ಬರ ಮೇಲ್ವಿಚಾರಣೆಯಲ್ಲಿ ಈ ವಿಭಾಗ ಕೆಲಸ ಮಾಡುತ್ತಿದೆ. ಅಮೂಲ್ಯ ಕೃತಿಗಳ ಹಾಗೂ ಹಸ್ತಪ್ರತಿಗಳ ಚಿತ್ರೀಕರಣಕ್ಕೆ ವ್ಯವಸ್ಥೆಯಾಗುತ್ತಿದೆ.

ರಾಷ್ಟ್ರೀಯ ಗ್ರಂಥಸೂಚಿ

ನಮ್ಮ ದೇಶದ ಇತಿಹಾಸದಲ್ಲಿಯೇ ಮೊದಲನೆ ಸಾರಿ ಭಾರತದ ಭಾಷೆಗಳಲ್ಲಿಯ ಸಮಗ್ರ ಪ್ರಕಟಣೆಗಳನ್ನು ೧೯೫೪ನೇ ಇಸವಿಯ ಪ್ರಕಾಶನಗಳನ್ನು ಗ್ರಂಥಾಲಯಗಳಿಗೆ ಕಳಿಸಿಕೊಡುವ ಕಾನೂನಿನ ಮೇರೆಗೆ ಒಟ್ಟು ತರಲಾಯಿತು. ದೆಹಲಿಯಲ್ಲಿ ಸ್ಥಾಪಿತವಾಗಲಿರುವ 'ಸೆಂಟ್ರಲ್ ರೆಫರೆನ್ಸ್ ಲೈಬ್ರರಿ'ಯು ರಾಷ್ಟ್ರೀಯ ಗ್ರಂಥಾಲಯದ ಆವರಣದಲ್ಲೇ ಕೆಲಸಮಾಡುತ್ತಿದೆ. ಈ ವಿಭಾಗದಲ್ಲಿ ಕಾನೂನಿನ ಪ್ರಕಾರ ರಾಷ್ಟ್ರೀಯ ಗ್ರಂಥಾಲಯಕ್ಕೆ ಬಂದ ಗ್ರಂಥಗಳ ಒಂದು ವಿವರಣಾತ್ಮಕ ಸೂಚಿಯನ್ನು ೧೯೫೭ನೇ ಇಸವಿಯ ಕೊನೆಯ ಮೂರು ತಿಂಗಳ ಅವಧಿಯಿಂದ ಪ್ರಾರಂಭಿಸಿ, ಪ್ರತಿ ಮೂರು ತಿಂಗಳಿಗೊಮ್ಮೆ ಹೊರಡಿಸಲಾಗುತ್ತಿತ್ತು. ಈಗ ಈ ಸೂಚಿಯು ಪ್ರತಿ ತಿಂಗಳೂ ಪ್ರಕಟವಾಗುತ್ತಿದೆ. ಭಾರತದ ಎಲ್ಲಾ ಭಾಷೆಗಳಲ್ಲಿಯ ಈ ಗ್ರಂಥವಿವರಣ ಸೂಚಿಯನ್ನು ರೋಮನ್ ಲಿಪಿಯಲ್ಲಿ ಮುದ್ರಿಸಿ ಅದನ್ನು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಉಪಯೋಗದ ಪರಾಮರ್ಶನ ಗ್ರಂಥವನ್ನಾಗಿ ಮಾಡುವ ಉದ್ದೇಶವನ್ನಿರಿಸಲಾಗಿತ್ತು. ಆದರೆ ಎಲ್ಲಾ ಭಾಷೆಗಳ ಒಟ್ಟುಗೂಡಿಸಲಾದ ಈ ಗ್ರಂಥ ವಿವರಣ ಸೂಚಿಯ ಬೆಲೆಯು ಹೆಚ್ಚಾದ್ದರಿಂದ ವೈಯಕ್ತಿಕವಾಗಿಯಾಗಲೀ, ಚಿಕ್ಕಪುಟ್ಟ ಗ್ರಂಥಾಲಯದವರಿಗಾಗಲೀ ಅಥವಾ ಶಾಲೆ ಕಾಲೇಜಿನವರಿಗಾಗಲೀ ಕೊಳ್ಳುವುದು ಸ್ವಲ್ಪ ಕಠಿಣವಾಯಿತು. ಆದಕಾರಣ, ರಾಜ್ಯ ಸರ್ಕಾರಗಳ ಸಹಕಾರದೊಂದಿಗೆ ಭಾರತ ಸರ್ಕಾರದವರು, ಆಯಾ ರಾಜ್ಯದಲ್ಲಿ ಪ್ರಕಟಿಸಲಾದ ಪುಸ್ತಕಗಳ ಗ್ರಂಥವಿವರಣಾ ಪಟ್ಟಿಯನ್ನು ಆಯಾ ರಾಜ್ಯದ ಭಾಷೆಯಲ್ಲಿ ತಯಾರಿಸಲು ನಿರ್ಧರಿಸಿದರು. ಈ ನಿರ್ಧಾರದ ನಂತರ ಹಲವು ರಾಜ್ಯಗಳ ಭಾಷೆಗಳಲ್ಲಿನ ಗ್ರಂಥಸೂಚಿಗಳು ಹೊರಬಂದಿವೆ. ರಾಷ್ಟ್ರೀಯ ಗ್ರಂಥಸೂಚಿಯ ಕನ್ನಡ ವಿಭಾಗದ ಪ್ರಕಟಣೆಯನ್ನು ರಾಜ್ಯ ಸರ್ಕಾರದ ಸಾಂಸ್ಕೃತಿಕ ಇಲಾಖೆ ಹೊತ್ತಿದೆ. ಕನ್ನಡ ಗ್ರಂಥಸೂಚಿಗಳು ೧೯೫೮ ರಿಂದ ೧೯೬೮ರವರೆಗೆ ಹೊರಬಂದಿವೆ.

ಶಿಶು ಗ್ರಂಥಾಲಯ

ಗ್ರಂಥಾಲಯದ ಪ್ರಧಾನ ಕಟ್ಟಡದ ಒಂದು ಪಕ್ಕದಲ್ಲಿ ೧೯೬೦ರಲ್ಲಿ ಮಕ್ಕಳಿಗಾಗಿ ಒಂದು ವಿಭಾಗವನ್ನು ತೆರೆಯ

ಲಾಯಿತು. ಸಧ್ಯಕ್ಕೆ ಆರು ಭಾಷೆಗಳಲ್ಲಿನ ಶಿಶು ಸಾಹಿತ್ಯವನ್ನು ಸಂಗ್ರಹಿಸಿಡಲಾಗಿದೆ. ಚೇತೋಹಾರಿ ವಾತಾವರಣ ಹಾಗೂ ಯುಕ್ತ ಉಪಕರಣಗಳಿಂದ ಕೂಡಿ ಮಕ್ಕಳಿಗೊಂದು ಕನಸಿನ ಲೋಕದಂತಿರುವ ಈ ಗ್ರಂಥಾಲಯದ ಕಲ್ಪನೆ ಶ್ರೀ ಕೇಶವನ್ ಅವರದೇ.

ಓದುಗರ ಹಾಸ್ಟೆಲ್

ಭಾರತ ಹಾಗೂ ಇತರ ದೇಶಗಳಿಂದ ರಾಷ್ಟ್ರೀಯ ಗ್ರಂಥಾಲಯಕ್ಕೆ ವ್ಯಾಸಂಗಕ್ಕೆ ಬರುವ ಸಂಶೋಧನಾ ವಿದ್ಯಾರ್ಥಿಗಳ ಹಾಗೂ ವಿದ್ವಾಂಸರ ಉಪಯೋಗಕ್ಕಾಗಿ ಒಂದು ವಸತಿಗೃಹ ಗ್ರಂಥಾಲಯಕ್ಕೆ ಸಮೀಪದಲ್ಲೇ ಇದೆ.

ಗ್ರಂಥಾಲಯದ ಸಹಕಾರಿ ಚಟುವಟಿಕೆಗಳು

ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಪಂಚದ ವಿವಿಧ ದೇಶಗಳಲ್ಲಿ ಪ್ರಕಟವಾಗುವ ಅನುವಾದ ಕೃತಿಗಳ ವರ್ಗೀಕೃತ ಸೂಚಿಯನ್ನು ತರುವುದರಲ್ಲಿ ಯುನೆಸ್ಕೋದೊಡನೆ ರಾಷ್ಟ್ರೀಯ ಗ್ರಂಥಾಲಯವು ಸಹಕಗಿಸುತ್ತಿದೆ.

ರಾಷ್ಟ್ರೀಯ ಮಟ್ಟದಲ್ಲಿ—ಸಾಹಿತ್ಯ ಅಕಾಡೆಮಿಯು ಹೊರತಂದಿರುವ ಭಾರತೀಯ ಸಾಹಿತ್ಯದ ವಾಙ್ಮಯ ದರ್ಶಕ (೧೯೦೧–೧೯೫೩)ದ ಸಿದ್ಧತೆಯಲ್ಲಿ ಗ್ರಂಥಾಲಯವು ಪೂರ್ಣ ಸಹಕಾರವನ್ನಿತ್ತಿದೆ.

ಸೆಂಟ್ರಲ್ ರೆಫರೆನ್ಸ್ ಲೈಬ್ರೆರಿಯು ಈ ಗ್ರಂಥಾಲಯದ ಆಶ್ರಯದಲ್ಲಿಯೇ ತನ್ನ 'ರಾಷ್ಟ್ರೀಯ ಗ್ರಂಥಸೂಚಿ' ಯನ್ನು ಪ್ರಕಟಿಸುತ್ತಿದೆ.

ಭಾರತೀಯ ವೈಜ್ಞಾನಿಕ ಹಾಗೂ ಸಂಶೋಧಕ ಮಂಡಳಿಗೆ ೧೯೬೦ರಲ್ಲಿ ಭಾರತೀಯ ವೈಜ್ಞಾನಿಕ ಹಾಗೂ ತಾಂತ್ರಿಕ ಗ್ರಂಥಗಳ ವಾಙ್ಮಯದರ್ಶಕವನ್ನೂ ಸಿದ್ಧಪಡಿಸಿಕೊಟ್ಟಿತು.

ಕಲ್ಕತ್ತಾ ವಿಶ್ವವಿದ್ಯಾನಿಲಯಕ್ಕೆ ಹಾಗೂ ವಂಗೀಯ ಗ್ರಂಥಾಲಯ ಪರಿಷತ್ತಿಗೆ ಗ್ರಂಥಾಲಯ ವಿಜ್ಞಾನ ತರಗತಿಗಳನ್ನು ನಡೆಸುವುದರಲ್ಲಿ ಸಹಕಾರವನ್ನೂ ನೀಡುತ್ತಿದೆ.

ಅಲ್ಲದೆ ವಿವಿಧ ಸರ್ಕಾರಗಳು ಹಾಗೂ ಸಂಘ ಸಂಸ್ಥೆಗಳಿಗೆ ಅವುಗಳ ಗ್ರಂಥ ಭಂಡಾರಿಗಳನ್ನು ತರಬೇತಿ ಮಾಡುವಲ್ಲಿ ಹಾಗೂ ಮಾರ್ಗದರ್ಶನ ನೀಡುವುದರಲ್ಲಿ ಯಾವಾಗಲೂ ಮುಂದೆ ಬಂದಿದೆ.

ಮುಂದಿನ ಕೆಲವು ಯೋಜನೆಗಳು

ಗ್ರಂಥಾಲಯಕ್ಕೆ ಪ್ರತಿನಿತ್ಯ ಹೇರಳವಾಗಿ ಬರುವ ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳನ್ನು 'ಮೈಕ್ರೋಫಿಲಂ' ಮಾಡಿಸಿ ಸಂಗ್ರಹಿಸುವುದು ;

ತಜ್ಞರಿಂದ ಹಾಗೂ ವಿದ್ವಾಂಸರಿಂದ ವಿವಿಧ ವಿಷಯಗಳ ಮೇಲೆ ಉಪನ್ಯಾಸಗಳನ್ನೇರ್ಪಡಿಸಿ ಅವುಗಳನ್ನು ಪ್ರಕಟಿಸುವುದು ;

ಸದ್ಯಕ್ಕೆ ನಿಲ್ಲಿಸಿರುವ ಗ್ರಂಥಾಲಯ ತರಬೇತಿ ಕಾರ್ಯವನ್ನು ಪುನಃ ಆರಂಭಿಸುವುದು.

ವಿಸ್ತರಣೆ

ಬೆಳೆಯುತ್ತಿರುವ ಗ್ರಂಥಸಂಗ್ರಹಕ್ಕೆ ಪ್ರಧಾನ ಕಟ್ಟಡದಲ್ಲಿ ಸ್ಥಳದ ಅಭಾವ ಬಹಳವಿದ್ದುದರಿಂದ ೯ ಅಂತಸ್ತುಳ್ಳ ವಿಸ್ತರಣಾ ಕಟ್ಟಡವನ್ನು ನಿರ್ಮಿಸಲಾಯಿತು. ಇಲ್ಲಿ ಒಂದು ವಾಚನಾಲಯ, ಉಪಾಹಾರಗೃಹ, ಸಭಾಂಗಣ ಮೊದಲಾದುವುಗಳಿವೆ.

ಗ್ರಂಥಾಲಯದ ಸಿಬ್ಬಂದಿಗೆ ವಸತಿಗೃಹಗಳನ್ನು ಗ್ರಂಥಾಲಯದ ಆವರಣದಲ್ಲೇ ಕಟ್ಟಿಸಿ ಒದಗಿಸಲಾಗಿದೆ.

ಪಾರ್ಲಿಮೆಂಟಿನ ಅಂದಾಜು ಸಮಿತಿ ೧೯೫೭ರಲ್ಲಿ ಸಲ್ಲಿಸಿದ ತನ್ನ ವರದಿಯಲ್ಲಿ ಗ್ರಂಥಾಲಯದ ಈ ಸಾಧನೆಗಳನ್ನು ಮೆಚ್ಚಿ ದೇಶದ ಎಲ್ಲಾ ಗ್ರಂಥಭಂಡಾರಿಗಳನ್ನೂ ತರಬೇತಿಗಾಗಿ ಗ್ರಂಥಾಲಯಕ್ಕೆ ಕಳಿಸುವಂತೆ ಸೂಚಿಸಿತು.

ಗ್ರಂಥಾಲಯದ ಆಡಳಿತ

ಗ್ರಂಥಾಲಯದ ಆಡಳಿತವು ಮೊದಲು ಭಾರತ ಸರ್ಕಾರದ ವೈಜ್ಞಾನಿಕ ಸಂಶೋಧನೆ ಹಾಗೂ ಸಾಂಸ್ಕೃತಿಕ ಸಚಿವಾಲಯದ ನೇರ ಆಡಳಿತದಲ್ಲಿದ್ದು ಈಗ ಶಿಕ್ಷಣ ಸಚಿವಾಲಯದ ಆಡಳಿತಕ್ಕೊಳಪಟ್ಟಿದೆ. ರಾಜ್ಯ ಸರ್ಕಾರಗಳ ಹಾಗೂ ಇನ್ನಿತರ ಶಿಕ್ಷಣ ಸಂಸ್ಥೆಗಳ ಶಿಫಾರಸಿನ ಮೇಲೆ ಕೇಂದ್ರ ಸರ್ಕಾರ ನೇಮಿಸುವ ಹನ್ನೊಂದು ಜನರ ಒಂದು ಮಂಡಳಿ ಆಡಳಿತವನ್ನು ನೋಡಿಕೊಳ್ಳುತ್ತದೆ. ಸಚಿವ ಶಾಖೆಯ ಕಾರ್ಯದರ್ಶಿಯವರು ಅಧಿಕಾರ ನಿಮಿತ್ತ ಮಂಡಳಿಯ ಅಧ್ಯಕ್ಷರು. ಗ್ರಂಥಾಲಯದ ಅಧಿಕಾರಿಯವರು ಸದಸ್ಯ ಕಾರ್ಯದರ್ಶಿಗಳು.

ಈ ಗ್ರಂಥಾಲಯದ ಗ್ರಂಥಪಾಲಕರಿಗೆ ಭಾರತ ಸರ್ಕಾರದ ಇತರೆ ಉನ್ನತ ಅಧಿಕಾರಿಗಿರುವಷ್ಟೇ ಅಂತಸ್ತು ಅಧಿಕಾರ ಇದೆ.

೧೯೫೩ರಂದು ರಾಷ್ಟ್ರೀಯ ಗ್ರಂಥಾಲಯದ ಆರಂಭ ವಿಧ್ಯುಕ್ತವಾಗಿ ನಡೆಯಿತು. ಆದಿನ ಇಂಪೀರಿಯಲ್ ಲೈಬ್ರೆರಿಯ ಸ್ವರ್ಣಮಹೋತ್ಸವವೂ ಆಗಿತ್ತು. ಆಗ ಬಂಗಾಲದ ಗೌರ್ನರ್ ಆಗಿದ್ದ ಹರೇಂದ್ರಕುಮಾರ್ ಮುಖರ್ಜಿಯವರು ಅಧ್ಯಕ್ಷತೆ ವಹಿಸಿದ್ದ, ಡಾ|| ಬಿ. ಸಿ. ರಾಯ್ ಮೊದಲಾದ ಗಣ್ಯವಕ್ತಿಗಳು ಹಾಜರಿದ್ದ ಆ ಸಮಾರಂಭದಲ್ಲಿ ಮೌಲಾನ ಅಬುಲ್ ಕಲಂ ಆಜಾದರು ಗ್ರಂಥಾಲಯದ ಆರಂಭೋತ್ಸವವನ್ನು ನೆರವೇರಿಸುತ್ತಾ, ತಮ್ಮ ಭಾಷಣದ ಕೊನೆಯಲ್ಲಿ ರಾಷ್ಟ್ರೀಯ ಗ್ರಂಥಾಲಯದ ಸ್ವರೂಪವನ್ನು ಸೊಗಸಾಗಿ ವಿವರಿಸಿದ್ದಾರೆ. ತಮ್ಮ ಭಾಷಣದ ಕೊನೆಯಲ್ಲಿ ಹಾಫಿಜ್ ಕವಿಯ ಚೌಪದಿಯನ್ನು ಉದಾಹರಿಸಿದರು :

*'ಇಬ್ಬರು ಗೆಳೆಯರು, ಎರಡು ಮಡಿಕೆ ತನಿ ದ್ರಾಕ್ಷಾರಸ, ಪುಸ್ತಕಗಳ ಜೊತೆ ಹಾಗೂ ಉದ್ಯಾನದ ಮೂಲೆ–ಇವಿಷ್ಟು ಸಿಕ್ಕರೆ ನಾನು ಇಹದಲ್ಲೂ ಪರದಲ್ಲೂ ಉಳಿದ ಎಲ್ಲ ಸುಖ ಸಂತೋಷಗಳನ್ನೂ ತ್ಯಜಿಸಬಲ್ಲೆ' ಎಂದು ಆ ಚೌಪದಿಯ ಭಾವ. ಮೌಲಾನರು ನಂತರ ನುಡಿದರು : 'ಈ ಪುಸ್ತಕ ಭಂಡಾರದಲ್ಲಿ ಸಾಕಷ್ಟು ಪುಸ್ತಕಗಳಿವೆ ; ಇಬ್ಬರು ಗೆಳೆಯರು ದೊರೆಯುವುದು ಕಷ್ಟವಾಗದು ; ಮನಮೋಹಕ ಉದ್ಯಾನವನ ನಿಮ್ಮೆದುರಿಗಿದೆ. ಅಲ್ಲಿ ನಿಮಗೆ ಬೇಕಾದ ಮೂಲೆಯನ್ನು ಹಿಡಿಯಬಹುದು. ಆದರೆ ನಾನು ವಿಷಾದದಿಂದ ಹೇಳಬೇಕು– ಕವಿ ತಿಳಿಸಿದ ಮತ್ತೊಂದು ಅಂಶ ಇಲ್ಲಿ ದೊರೆಯಲಾರದು. ಆದರೆ ನಿಮ್ಮ ಕಲ್ಪನೆ ಆ ಕೊರತೆಯನ್ನು ತುಂಬೀತು !'

ಕಲ್ಕತ್ತೆಯ ರಾಷ್ಟ್ರೀಯ ಗ್ರಂಥಾಲಯವನ್ನು ಕಣ್ಣಾರೆ ನೋಡದವರಿಗೆ ಈ ಮಾತಿನ ಸ್ವಾರಸ್ಯ ಬಹುಶಃ ಅರ್ಥವಾಗದು.

* ಡಾ|| ಹಾ. ಮಾ. ನಾಯಕರ ಅನುವಾದದ ಸಾರಾಂಶ.

ಗ್ರಂಥಾಲಯ ಇತಿಹಾಸದಲ್ಲಿನ ಪ್ರಮುಖ ಘಟನೆಗಳು

೧೮೩೫ ಆಗಸ್ಟ್ ೩೧ನೇ ತಾರೀಖು ಕಲ್ಕತ್ತೆಯಲ್ಲಿ ಗಣ್ಯ ನಾಗರಿಕರು ಸಭೆ ಸೇರಿ ಸಾರ್ವಜನಿಕ ಗ್ರಂಥಾಲಯ ಸ್ಥಾಪನೆಗೆ ನಿರ್ಧರಿಸಿದರು.

೧೮೩೬ ಮಾರ್ಚ್ ೨೧ನೇ ತಾರೀಖು ಕಲ್ಕತ್ತಾ ಸಾರ್ವಜನಿಕ ಗ್ರಂಥಾಲಯವನ್ನು ಸಾರ್ವಜನಿಕರಿಗೆ ತೆರೆಯಲಾಯಿತು.

೧೮೪೧ ಜುಲೈನಲ್ಲಿ ಗ್ರಂಥಾಲಯವನ್ನು ಪೋರ್ಟ್ ವಿಲಿಯಂಗೆ ಸ್ಥಳಾಂತರ ಮಾಡಲಾಯಿತು.

೧೮೪೪ ಜೂನ್‌ನಲ್ಲಿ ಗ್ರಂಥಾಲಯವನ್ನು ಮೆಟ್ಕಾಫ್‌ಹಾಲ್‌ಗೆ ಸ್ಥಳಾಂತರ ಮಾಡಲಾಯಿತು.

೧೮೯೦ ಕಲ್ಕತ್ತಾ ನಗರಸಭೆ ಸಾರ್ವಜನಿಕ ಗ್ರಂಥಾಲಯದ ಖರ್ಚಿನ ಹೊಣೆ ಹೊರಲು ನಿರ್ಧರಿಸಿತು.

೧೮೯೧ ಭಾರತ ಸರ್ಕಾರದ ವಿವಿಧ ಖಾತೆಗಳ ಗ್ರಂಥ ಸಂಗ್ರಹಗಳನ್ನು ವಿಲೀನಗೊಳಿಸಿ ಇಂಪೀರಿಯಲ್ ಲೈಬ್ರೆರಿಯನ್ನಾಗಿ ಪರಿವರ್ತನೆ ಮಾಡಲಾಯಿತು.

೧೮೯೬ ಕಲ್ಕತ್ತಾ ಸಾರ್ವಜನಿಕ ಗ್ರಂಥಾಲಯಕ್ಕೆ ಲಾರ್ಡ್ ಕರ್ಜನ್ನನ ಭೇಟಿ.

೧೯೦೨ ಇಂಪೀರಿಯಲ್ ಲೈಬ್ರೆರಿ ಕಾನೂನಿನ ಅಂಗೀಕಾರ.

೧೯೦೩ ಜನವರಿ ೩೦ನೇ ತಾರೀಖು ಇಂಪೀರಿಯಲ್ ಲೈಬ್ರೆರಿಯನ್ನು ವಿದ್ಯುಕ್ತವಾಗಿ ಸಾರ್ವಜನಿಕರಿಗೆ ತೆರೆಯಲಾಯಿತು.

೧೯೩೫ ಗ್ರಂಥಾಲಯ ವಿಜ್ಞಾನದ ತರಗತಿ ಉದ್ಘಾಟನೆ.

೧೯೪೮ ಬೆಲ್ವೆಡೆರೆಗೆ ಗ್ರಂಥಾಲಯದ ಸ್ಥಳಾಂತರ.

ಭಾರತದ ರಾಷ್ಟ್ರೀಯ ಗ್ರಂಥಾಲಯ - ಕಲ್ಕತ್ತಾ

● ಟಿ. ವಿ. ವೆಂಕಟರಮಣಯ್ಯ

ನಮ್ಮ ರಾಷ್ಟ್ರದ ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸದಲ್ಲಿ ಗಣನೀಯ ಪಾತ್ರ ವಹಿಸಿರುವ ಕಲ್ಕತ್ತಾ ನಗರದ ಆಲಿಪುರದಲ್ಲಿರುವ ರಾಷ್ಟ್ರೀಯ ಗ್ರಂಥಾಲಯ ನಮ್ಮ ದೇಶದಲ್ಲೇ ಅತಿ ದೊಡ್ಡದು. ಜಗತ್ತಿನ ವಿಖ್ಯಾತ ಗ್ರಂಥಾಲಯಗಳ ಜೊತೆಗೆ ಹೆಗಲೆಣೆಯಾಗಿ ನಿಲ್ಲಬಲ್ಲ ಅದು ನಮ್ಮ ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾಗಿದೆ. ರಾಷ್ಟ್ರದ ಸಾಂಸ್ಕೃತಿಕ ಕೇಂದ್ರ ಬಿಂದುವಾಗಿದೆ. ಸ್ವತಂತ್ರ ಭಾರತದ ಯಾತ್ರಾಸ್ಥಳಗಳಲ್ಲಿ ಇದೂ ಒಂದಾಗಿದೆ. ಭಾರತದ ರಾಜಧಾನಿ ದಿಲ್ಲಿಗೆ ಸ್ಥಳಾಂತರವಾಗುವ ಮೊದಲು ವೈಸ್‌ರಾಯ್‌ರವರ ನಿವಾಸವಾಗಿದ್ದ 'ಬೆಲ್ವೆಡೆರೆ' ಎಂಬ ವಿಶಾಲವಾದ ಸೌಧ ವಿದೆ. ಇಲ್ಲಿಯೇ ಬಹುಶಃ ಭಾರತವನ್ನು ಪೂರ್ಣವಾಗಿ ಆಂಗ್ಲರ ಪಾದಾಕ್ರಾಂತವಾಗಿ ಮಾಡಿದ ಹಲವು ಸಂಚುಗಳು ನಡೆದಿರಬೇಕು. ಆದರೆ ಈಗ ಈ ಪ್ರಾಸಾದದಲ್ಲಿ ರಾಜತಂತ್ರದ ಯಾವ ಆಟವೂ ನಡೆಯುವುದಿಲ್ಲ. ನಿಶ್ಶಬ್ದ ಆವರಣದಲ್ಲಿ ಸರಸ್ವತಿಯ ಆರಾಧನೆ ಇಲ್ಲಿ ನಡೆಯುತ್ತಿದೆ.

ಕಲ್ಕತ್ತೆಯ ಸಾರ್ವಜನಿಕ ಪುಸ್ತಕ ಭಂಡಾರ :

೧೯ನೆಯ ಶತಮಾನದ ಆದಿಭಾಗದಲ್ಲಿ ಸ್ಥಾಪಿತವಾದ ಈ ಕಲ್ಕತ್ತೆಯ ಸಾರ್ವಜನಿಕ ಪುಸ್ತಕಭಂಡಾರದ ವಿಷಯವನ್ನು ಪ್ರಸ್ತಾಪಿಸದಿದ್ದರೆ ನಮ್ಮ ರಾಷ್ಟ್ರೀಯ ಗ್ರಂಥಾಲಯದ ಇತಿಹಾಸ ಪೂರ್ಣವಾಗದು. ಅಂದಿನ 'ಇಂಗ್ಲಿಷ್ ಮನ್' ಪತ್ರಿಕೆಯ ಸಂಪಾದಕನಾದ ಜೆ. ಎಚ್. ಸ್ಟಾಕ್ವೆಲರ್ ಎಂಬಾತನು ಈ ಸಾರ್ವಜನಿಕ ಪುಸ್ತಕ ಭಂಡಾರವನ್ನು ಆರಂಭಿಸಲು ಕಾರಣಕರ್ತನು. ೧೮೩೬ರ ಆಗಸ್ಟ್ ತಿಂಗಳಲ್ಲಿ ತನ್ನ ಯೋಜನೆಯನ್ನು ಗಣ್ಯ ಸಾರ್ವಜನಿಕರ ಸಭೆ ಮುಂದೆ ಇಟ್ಟು, ಸಭೆಯ ಒಪ್ಪಿಗೆ ಪಡೆದನು. ೨೪ ಸದಸ್ಯರಿರುವ ಒಂದು ವ್ಯವಸ್ಥಾಪಕ ಮಂಡಳಿಯನ್ನು ರಚಿಸಲಾಯಿತು. ಈ ಮಂಡಳಿಯಲ್ಲಿ ಕೇವಲ ಇಬ್ಬರು ಮಾತ್ರ ಭಾರತೀಯರಿದ್ದರು. ಸ್ಟಾಕ್ವೆಲರ್‌ನೇ ಅದರ ಮೊದಲ ಗೌರವ ಕಾರ್ಯದರ್ಶಿ ಆದನು. ಮುನ್ನೂರು ರೂಪಾಯಿಗಳನ್ನು ಕೊಡಬಲ್ಲವರು ಮಾತ್ರ ಈ ಪುಸ್ತಕ ಭಂಡಾರದ ಮಾಲಿಕರಾಗಬಹುದಿತ್ತು. ಕವಿ ರವೀಂದ್ರರ ಅಜ್ಜ ದೊರೆ ದ್ವಾರಕನಾಥ ಠಾಕೂರರು ಅದರ ಮೊದಲ ಮಾಲಿಕರಾದರು. ಅವರ ಉದಾರ ಕೊಡುಗೆಗೆ ಕೃತಜ್ಞತೆ ಸೂಚಿಸಲು ಕಲ್ಕತ್ತೆಯ ನಾಗರಿಕರು ಅಮೃತ ಶಿಲೆಯಲ್ಲಿ ಕಡೆದ ಅವರ ಮೂರ್ತಿಯನ್ನು ಗ್ರಂಥಾಲಯದಲ್ಲಿ ಸ್ಥಾಪಿಸಿದರು. (ಆ ಶಿಲಾ ಪ್ರತಿಮೆ ಹಾಲಿ ರಾಷ್ಟ್ರೀಯ ಗ್ರಂಥಾಲಯದ ಪ್ರವೇಶದ್ವಾರದ ಬಳಿ ಇದೆ) ಮಾಲಿಕರಿಂದ ಸಲ್ಲುತ್ತಿದ್ದ ಹಣ ಹಾಗೂ ಸಾಮಾನ್ಯ ಚಂದಾದಾರರ ಚಂದಾ ಹಣದ ಜೊತೆಗೆ ಆಗಾಗ ನಿಧಿ

ಚಟುವಟಿಕೆಗಳ ಅನುಕೂಲಕ್ಕೆ ತಕ್ಕಂತೆ ನಾಲ್ಕು ವರ್ಷಗಳಲ್ಲಿ ಮಾರ್ಪಾಡು ಮಾಡಲಾಯಿತು. ಸಲಕರಣೆಗಳು ಹಾಗೂ ವಿದ್ಯುತ್ ವ್ಯವಸ್ಥೆ ಮೊದಲಾದ ಎಲ್ಲಾ ಅಂಶಗಳಲ್ಲೂ ಹೊಸ ವ್ಯವಸ್ಥೆ ಮಾಡಲಾಯಿತು. ವೈಸ್ರಾಯ್ ಭವನದ ನಾಟ್ಯಗೃಹ ವಾಚನಾಲಯವಾಯಿತು. 'ಮನ್ಮಥನು ಸರಸ್ವತಿಗೆ ಸ್ಥಾನವನ್ನು ಬಿಟ್ಟುಕೊಟ್ಟ'ನೆಂದು ಅಂದಿನ ಪತ್ರಿಕೆಯೊಂದು ಬರೆಯಿತು !

ಇದೇ ವೇಳೆಗೆ ೧೯೪೮ರಲ್ಲಿ ದಿ. ಸರ್ ಅಶುತೋಷ್ ಮುಖರ್ಜಿಯವರ ಮಕ್ಕಳು, ಮೌಲಾನಾ ಆಜಾದರಿಗೆ ಪತ್ರವೊಂದನ್ನು ಬರೆದು ತಮ್ಮ ತಂದೆಯವರ ಅಮೂಲ್ಯ ಗ್ರಂಥಸಂಗ್ರಹವನ್ನು ರಾಷ್ಟ್ರೀಯ ಗ್ರಂಥಾಲಯಕ್ಕೆ ಕಾಣಿಕೆ ನೀಡುವುದಾಗಿ ತಿಳಿಸಿದರು. ಸುಮಾರು ೭೫ ಸಾವಿರ ಗ್ರಂಥಸಂಗ್ರಹದ ಈ ಅಮೂಲ್ಯ ಕಾಣಿಕೆಯನ್ನು ಆಜಾದರು ಕೃತಜ್ಞತೆಯಿಂದ ಸ್ವೀಕರಿಸಿದರು. ಇದನ್ನು ಅನುಸರಿಸಿ ಇನ್ನೂ ಇಂಥ ಅನೇಕ ಕೊಡುಗೆಗಳು ಗ್ರಂಥಾಲಯಕ್ಕೆ ಬಂದಿವೆ. ಅದನ್ನು ವಿಸ್ತರಿಸುತ್ತಿವೆ.

ಈ ಗ್ರಂಥಾಲಯ ಕಳೆದ ೨೫ ವರ್ಷಗಳಲ್ಲಿ ಮಹಾ ಸಂಸ್ಥೆಯಾಗಿ, ಸ್ವತಂತ್ರ ಭಾರತದ ಕೆಲವೇ ಅದ್ಭುತಗಳಲ್ಲಿ ಒಂದಾಗಿ ಒಂದು ಪುಣ್ಯಕ್ಷೇತ್ರವಾಗಿ ಬೆಳೆದು ಬಂದಿದೆ. ಹೆಮ್ಮೆಯಿಂದ ಮೆರೆಯುತ್ತಿದೆ. ಈ ರೀತಿ ಬಹುಮುಖವಾಗಿ ಗ್ರಂಥಾಲಯದ ಅಭಿವೃದ್ಧಿಗೆ ಕಾರಣರಾಗಿ ದುಡಿದವರು ಪ್ರದ್ಮಶ್ರೀ ಬಿ. ಎಸ್. ಕೇಶವನ್ ಎಂಬುದು ಕನ್ನಡಿಗರಿಗೆ ಅಭಿಮಾನದ ಸಂಗತಿ.

ಗ್ರಂಥಗಳ ವ್ಯಾಪ್ತಿ

೧೯೫೪ರಲ್ಲಿ ಭಾರತ ಸರ್ಕಾರವು ಮಾಡಿರುವ ಕಾಯಿದೆಯ ಪ್ರಕಾರ ಭಾರತದ ಎಲ್ಲಾ ರಾಜ್ಯಗಳಲ್ಲೂ ಎಲ್ಲಾ ಭಾಷೆಗಳಲ್ಲಿ ಪ್ರಕಟವಾಗುವ ಗ್ರಂಥಗಳ ಒಂದು ಪ್ರತಿಯನ್ನು ಪುಸ್ತಕ ಭಂಡಾರಕ್ಕೆ ಸಲ್ಲಿಸಬೇಕು.* ಅಲ್ಲದೆ ನಿಯತಕಾಲಿಕೆ ಹಾಗೂ ದಿನಪತ್ರಿಕೆಗಳೂ (೧೯೫೬ರಲ್ಲಿ ಸುಧಾರಿಸಿದ ಕಾನೂನಿನ ಪ್ರಕಾರ) ಈ ಗ್ರಂಥಾಲಯಕ್ಕೆ ತಲುಪುತ್ತವೆ. ಬೈಂಡ್ ಆದ ನಿಯತಕಾಲಿಕೆಗಳ ಸಂಪುಟಗಳನ್ನು ಕೊಳ್ಳಲಾಗುತ್ತಿದೆ. ೧೯೫೪ಕ್ಕೆ ಮುಂಚೆ ಪ್ರಕಟವಾದ ಅಮೂಲ್ಯ ಗ್ರಂಥಗಳನ್ನೂ ಆಕರ ಗ್ರಂಥಗಳನ್ನೂ ಗ್ರಂಥಾಲಯ ಕೊಳ್ಳುತ್ತದೆ. ಭಾರತವು ಅನ್ಯದೇಶಗಳೊಡನೆ ರಾಜಕೀಯ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿರುವುದರಿಂದ ಅನ್ಯದೇಶಗಳಿಗೆ ಸಂಬಂಧಿಸಿದ ಪ್ರಕಟಣೆಗಳನ್ನೂ ಕೊಳ್ಳುವ ವ್ಯವಸ್ಥೆಯಿದೆ.

ಕಾಯಿದೆ ಹಾಗೂ ಕೊಳ್ಳುವುದರ ಮೂಲಕವಲ್ಲದೆ ಗ್ರಂಥಾಲಯಕ್ಕೆ ಹಲವಾರು ಗ್ರಂಥಗಳು ವಿನಿಮಯದ ಮೂಲಕ ಹಾಗೂ ಕೊಡುಗೆ ರೂಪದಲ್ಲಿ ಬರುತ್ತವೆ. ಕೊಡುಗೆ ರೂಪದಲ್ಲಿ ಬಂದಿರುವ ಸಂಗ್ರಹಗಳಲ್ಲಿ ಉಲ್ಲೇಖನೀಯವಾದವು– ಅರಬ್ಬೀ, ಫಾರಸೀ ಹಾಗೂ ಉರ್ದು ಹಸ್ತಪ್ರತಿ ಹಾಗೂ ಗ್ರಂಥಗಳುಳ್ಳ ವಿಖ್ಯಾತವಾದ 'ಬುಹಾರ್ ಸಂಗ್ರಹ', ಭಾರತೀಯ ವಿಷಯಗಳಲ್ಲಿ ಎತ್ತಿದ ಕೈಯುಳ್ಳವರಾದ ಥೀಬಾ ಅವರ ಸಂಸ್ಕೃತ ಹಸ್ತಲಿಪಿಗಳ ಸಂಗ್ರಹ, ೭೫ ಸಾವಿರದಷ್ಟು ದೊಡ್ಡದಾದ ಅಶುತೋಷ ಮುಖರ್ಜಿಯವರ ಅಮೂಲ್ಯ ಸಂಗ್ರಹ, ಅತಿ ವಿರಳ ಹಾಗೂ ಅಮೂಲ್ಯ ಬಂಗಾಲಿ ಗ್ರಂಥಗಳುಳ್ಳ ರಾಮದಾಸ ಸೂರ್ ಸಂಗ್ರಹ, ಬೋಲಾರಾಮ ಸಂಗ್ರಹ, ಚೀನೀ ಸಂಗ್ರಹ, ಅಮೆರಿಕೆಗೆ ಸಂಬಂಧಪಟ್ಟ ಸಂಗ್ರಹ, ಡಾ. ಸುರೇಂದ್ರನಾಥಸೇನ್ ಅವರ ವೈಯಕ್ತಿಕ ಗ್ರಂಥ ಸಂಗ್ರಹ, (ಇತಿಹಾಸ ಹಾಗೂ ಇತರವಿಷಯಗಳಿಗೆ ಸಂಬಂಧಿಸಿದವು), ವೈಯಾಪುರಿಪಿಳ್ಳೈ ಸಂಗ್ರಹ (ತಮಿಳು ಹಸ್ತಪ್ರತಿಗಳು ಹಾಗೂ ಗ್ರಂಥಗಳು), ಜಾದೂನಾಥ್ ಸರ್ಕಾರ್ ಅವರ ಸಂಗ್ರಹ (ಮಧ್ಯಕಾಲೀನ ಭಾರತೀಯ ಇತಿಹಾಸಕ್ಕೆ ಸಂಬಂಧಿಸಿದ ಆಕರ ಗ್ರಂಥಗಳು, ಭೂಪಟಗಳು, ಹಸ್ತಪ್ರತಿಗಳು). ಅಲ್ಲದೆ ದಿ|| ಸುಬ್ರಹ್ಮಣ್ಯ ಭಾರತಿಯವರು ನಡೆಸುತ್ತಿದ್ದ 'ಇಂಡಿಯಾ' ಎಂಬ ಪತ್ರಿಕೆಯ ಅಮೂಲ್ಯ ಪ್ರತಿಯೂ ಸಹ ಇಲ್ಲಿದೆ.

ಸೂಚೀಕರಣ ಹಾಗೂ ವರ್ಗೀಕರಣ

ಮೇಲ್ಕಂಡ ರೀತಿ ಪ್ರಾಪ್ತವಾದ ಗ್ರಂಥಗಳನ್ನು ಆಧುನಿಕ ರೀತಿಯಲ್ಲಿ ಸೂಚೀಕರಣ ಹಾಗೂ ವರ್ಗೀಕರಣ ಮಾಡುವ ವ್ಯವಸ್ಥೆಯಿದೆ. ಇದಕ್ಕಾಗಿ ಭಾರತೀಯ ಭಾಷೆಗಳಿಗಾಗಿ ಹಾಗೂ ವಿದೇಶೀ ಭಾಷೆಗಳಿಗಾಗಿ ಪ್ರತ್ಯೇಕ ವಿಭಾಗಗಳಿವೆ. ಗ್ರಂಥಸೂಚಿಗಳು ಮುದ್ರಿತರೂಪದಲ್ಲಿಯೂ ಪತ್ರಕಗಳ ರೂಪದಲ್ಲಿಯೂ ಇವೆ. ಅಲ್ಲದೆ ಗ್ರಂಥಾಲಯಕ್ಕೆ ಹೊಸದಾಗಿ ಸೇರಿಸಿದ ಗ್ರಂಥಗಳ ಸೂಚಿಯನ್ನು ವಾಚಕರ ಅನುಕೂಲಕ್ಕಾಗಿ ಪ್ರತಿ ತಿಂಗಳು ಹೊರಡಿಸಲಾಗುತ್ತದೆ.

* ಕಾಯಿದೆಯ ಸಾರಾಂಶಕ್ಕೆ ಅನುಬಂಧ ನೋಡಿ.

ಭಾರತೀಯ ಭಾಷಾ ವಿಭಾಗಗಳು

ಹಿಂದೆ ಭಾರತೀಯ ಭಾಷೆಗಳಲ್ಲಿನ ಪ್ರಕಾಶನಗಳನ್ನು ಕೊಳ್ಳುತ್ತಿರಲಿಲ್ಲ. ಆದರೆ ಸ್ವಾತಂತ್ರ್ಯಾನಂತರ ಗ್ರಂಥಾಲಯವು ತನ್ನ ಈಗಿನ ನಿವಾಸಕ್ಕೆ ಸ್ಥಳಾಂತರಗೊಂಡ ಕೂಡಲೇ ಭಾರತೀಯ ಭಾಷೆಗಳಲ್ಲಿನ ಎಲ್ಲ ಆಕರ ಗ್ರಂಥಗಳನ್ನೂ ಸಂಗ್ರಹಿಸುವ ಕಡೆ ಆದ್ಯ ಗಮನ ನೀಡಲಾಯಿತು. ಅದಕ್ಕಾಗಿ ಕೇಂದ್ರ ಸರ್ಕಾರ ೧೯೫೨–೫೩ರಲ್ಲಿ ೫೦,೦೦೦ ರೂ.ಗಳನ್ನು ವಿಶೇಷ ಅನುದಾನವನ್ನಾಗಿ ಇತ್ತಿತು. ಸಾಕಷ್ಟು ಗ್ರಂಥಗಳ ಸಂಗ್ರಹವಾದ ನಂತರ ಆಯಾ ವಿಭಾಗಕ್ಕೆ ಬೇಕಾದ ಸಿಬ್ಬಂದಿ ವರ್ಗದ ನೇಮಕದ ವ್ಯವಸ್ಥೆ ಮಾಡಲಾಯಿತು. ಆಯಾ ಭಾಷಾ ವಿಭಾಗಗಳನ್ನು ಸಮೃದ್ಧಗೊಳಿಸುವುದು, ಗ್ರಂಥಗಳ ವರ್ಗೀಕರಣ, ಸೂಚೀಕರಣ, ಸಂದರ್ಭ ಸೇವೆ, ನಿಯತಕಾಲಿಕೆಗಳ ಸೂಚಿ ಹಾಗೂ ಪ್ರಕಾಶಕರ ಸೂಚಿಗಳನ್ನು ಸಿದ್ಧಪಡಿಸಿ ಕ್ರಮವಾಗಿಡುವುದು; ಹೊಸದಾಗಿ ಸೇರಿಸಿದ ಗ್ರಂಥಗಳ ಸೂಚಿಯನ್ನು ತರುವುದರಲ್ಲಿ ನೆರವಾಗುವುದು—ಈ ವಿಭಾಗಗಳ ಅಧಿಕಾರಿಗಳ ಹೊಣೆಯಾಗಿರುತ್ತದೆ.

ವಾಚನಾಲಯ

ಹಿಂದಿನ ಮೈಸೂರು ರಾಜರ ಕಾಲದಲ್ಲಿ ನಾಟ್ಯಗೃಹವಾಗಿದ್ದ ವಿಶಾಲ ಅಂಗಳದಲ್ಲಿ ಏಕಕಾಲಕ್ಕೆ ಸುಮಾರು ೩೫೦ ವಾಚಕರು ಕುಳಿತು ಓದಲನುಕೂಲವಾಗುವಂತೆ ವಾಚನಾಲಯವಿದೆ. ಈ ವಾಚನಾಲಯದಲ್ಲಿ ಸುಮಾರು ಹದಿನೈದು ಸಾವಿರಕ್ಕೆ ಮಿಕ್ಕಿ ಸಂದರ್ಭಗ್ರಂಥಗಳನ್ನಿಡಲಾಗಿದೆ. ಸಂಶೋಧಕರಿಗೆ ವಾಚನಾಲಯದಲ್ಲಿ ವಿಶೇಷ ವ್ಯವಸ್ಥೆ ಇರುವ ಕೋಣೆಗಳಿವೆ. ಭಾರತದ ಯಾವ ಪ್ರಜೆಗೂ ಅವನು ಪ್ರಾಪ್ತವಯಸ್ಕನಾಗಿದ್ದಲ್ಲಿ ಇಲ್ಲಿ ಪ್ರವೇಶವಿದೆ. ವಾಚಕರಿಗಾಗಿ ನೀಡುವ 'ಟಿಕೆಟ್' ಅವರ ವಾಚನಾಲಯದ ಸದಸ್ಯತ್ವವನ್ನು ಸೂಚಿಸುತ್ತದೆ. ಆದರೆ ಗ್ರಂಥಾಲಯದ ಖಾಯಂ ಸದಸ್ಯತ್ವ ಪಡೆಯಲು ಕೆಲವು ಪ್ರತಿಷ್ಠಿತ ವ್ಯಕ್ತಿಗಳ ಶಿಫಾರಸನ್ನು ಪಡೆಯಬೇಕು. ಹಿಂದೆ ವರ್ಷದಲ್ಲಿ ಕೇವಲ ೨೫೦ ದಿನಗಳು ಗ್ರಂಥಾಲಯವನ್ನು ತೆರೆಯಲಾಗುತ್ತಿತ್ತು. ಆದರೆ ಈಗ ವರ್ಷದಲ್ಲಿ ೩೬೨ ದಿನಗಳೂ ಗ್ರಂಥಾಲಯ ತೆರೆದಿರುತ್ತದೆ. ವಾರದ ದಿನಗಳಲ್ಲಿ ಬೆಳಗ್ಗೆ ೯ ರಿಂದ ರಾತ್ರಿ ೮ ಗಂಟೆಯವರೆಗೆ ಕೆಲಸಮಾಡುತ್ತದೆ. ಆದರೆ ಭಾನುವಾರ ಹಾಗೂ ಇತರೆ ರಜಾ ದಿನಗಳಲ್ಲಿ ಬೆಳಗ್ಗೆ ೧೦ರಿಂದ ಸಂಜೆ ೫ರವರೆಗೆ ಗ್ರಂಥಾಲಯವನ್ನು ತೆರೆದಿಡಲಾಗುತ್ತದೆ.

ಗ್ರಂಥಗಳ ಎರವಲು ಸೇವೆ

ಸಾಮಾನ್ಯವಾಗಿ ರಾಷ್ಟ್ರೀಯ ಗ್ರಂಥಾಲಯಗಳ ಮುಖ್ಯ ಕರ್ತವ್ಯವು ತನ್ನಲ್ಲಿರುವ ಗ್ರಂಥ ಸಂಪತ್ತನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗಾಗಿ ಸುರಕ್ಷಿತವಾಗಿಡುವುದು ಹಾಗೂ ಸ್ಥಳದಲ್ಲೇ ಪರಾಮರ್ಶೆಗೆ ಹಾಗೂ ವಾಚನಕ್ಕೆ ಅನುಕೂಲತೆಗಳನ್ನು ಒದಗಿಸುವುದು. ಈ ದೃಷ್ಟಿಯಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಾರ್ವಜನಿಕ ಪುಸ್ತಕ ಭಂಡಾರ ಅಲ್ಲ. ಆದರೂ ಕಲ್ಕತ್ತಾದಲ್ಲಿ ಬೇರೊಂದು ಉತ್ತಮ ಸಾರ್ವಜನಿಕ ಪುಸ್ತಕ ಭಂಡಾರದ ಕೊರತೆಯಿಂದಾಗಿ ಈ ಗ್ರಂಥಾಲಯವನ್ನು ಸಾರ್ವಜನಿಕರ ಉಪಯೋಗಕ್ಕೆ ೧೯೫೩ರಿಂದ ತೆರೆಯಲಾಗಿದೆ.

ಪ್ರತಿಯೊಬ್ಬ ವಾಚಕರಿಗಾಗಿ ಒಂದು ಟಿಕೆಟ್ ಕೊಡಲಾಗುವುದು. ಒಂದು ಸಲಕ್ಕೆ ಅವನು ಎರಡು ಪುಸ್ತಕಗಳನ್ನು ಮನೆಗೆ ಎರವಲಾಗಿ ಒಯ್ಯಬಹುದು. ಈ ರೀತಿ ಮನೆಗೆ ಒಯ್ಯಲು ವಾಚಕರು ಪ್ರತಿ ತಿಂಗಳೂ ಚಂದಾ ತೆರಬೇಕಿಲ್ಲ. ಆದರೆ ಅವರು ಒಯ್ಯಬೇಕೆಂದಿರುವ ಗ್ರಂಥಗಳ ಬೆಲೆಗೆ ಸರಿಸಮನಾಗಿ ಠೇವಣಿ ಇಡಬೇಕಾಗುತ್ತದೆ. ಸಂದರ್ಭ ಗ್ರಂಥಗಳು, ಅಪೂರ್ವ ಗ್ರಂಥಗಳು ಹಾಗೂ ನಿಯತಕಾಲಿಕೆಗಳನ್ನು ಮನೆಗೆ ಒಯ್ಯಲು ಅವಕಾಶವಿಲ್ಲ.

ದೇಶದ ಯಾವುದೇ ಭಾಗದ ಸಂಶೋಧಕರಿಗೆ, ವಿದ್ವಾಂಸರಿಗೆ ಬೇಕಾದ ಗ್ರಂಥಗಳನ್ನು ತನ್ನ ಭಂಡಾರದಿಂದ ಒದಗಿಸಲು ಗ್ರಂಥಾಲಯ ವ್ಯವಸ್ಥೆ ಮಾಡುತ್ತಿದೆ. ಕೆಲವು ನಿಯಮಗಳಿಗನುಸಾರವಾಗಿ ವೈಯಕ್ತಿಕ ವಿದ್ವಾಂಸರಿಗೆ ಇಲ್ಲವೇ ಅಂತರ ಗ್ರಂಥಾಲಯ ಎರವಲು ಸೇವೆ ಮೂಲಕ ಬೇಕಾದ ಗ್ರಂಥಗಳನ್ನು ತನ್ನಲ್ಲಿಲ್ಲದಿದ್ದರೆ ಬೇರೆ ದೇಶಗಳ ರಾಷ್ಟ್ರೀಯ ಗ್ರಂಥಾಲಯಗಳ ನೆರವಿನಿಂದ ಒದಗಿಸುವ ಏರ್ಪಾಡು ಮಾಡಲಾಗುತ್ತಿದೆ. ಇದಕ್ಕಾಗಿ ರಾಷ್ಟ್ರೀಯ ಗ್ರಂಥಾಲಯ ಅಮೆರಿಕದ 'ಲೈಬ್ರೆರಿ ಆಫ್ ಕಾಂಗ್ರೆಸ್' ಹಾಗೂ ಲಂಡನ್ನಿನ 'ರಾಷ್ಟ್ರೀಯ ಕೇಂದ್ರ ಗ್ರಂಥಾಲಯ' ದೊಡನೆ ಸಂಪರ್ಕ ಹೊಂದಿದೆ. ಭಾರತದ ಬಗ್ಗೆ ಬರೆದ ಪುಸ್ತಕಗಳ ಬೇಡಿಕೆ ಬೇರೆ ದೇಶಗಳಿಂದ ಬಂದಾಗಲೂ ತನ್ನಲ್ಲಿನ ಗ್ರಂಥಭಂಡಾರದಿಂದ ಅಥವಾ ದೇಶದ ಇತರೆ ಗ್ರಂಥಾಲಯಗಳಿಂದ ಪಡೆದು ಒದಗಿಸುವ ಯತ್ನ ಮಾಡಲಾಗುತ್ತಿದೆ.

೧೯೫೩ರಂದು ರಾಷ್ಟ್ರೀಯ ಗ್ರಂಥಾಲಯದ ಆರಂಭ ವಿಧ್ಯುಕ್ತವಾಗಿ ನಡೆಯಿತು. ಆದಿನ ಇಂಪೀರಿಯಲ್ ಲೈಬ್ರೆರಿಯ ಸ್ವರ್ಣಮಹೋತ್ಸವವೂ ಆಗಿತ್ತು. ಆಗ ಬಂಗಾಲದ ಗೌರ್ನರ್ ಆಗಿದ್ದ ಹರೇಂದ್ರಕುಮಾರ್ ಮುಖರ್ಜಿಯವರು ಅಧ್ಯಕ್ಷತೆ ವಹಿಸಿದ್ದ, ಡಾ|| ಬಿ. ಸಿ. ರಾಯ್ ಮೊದಲಾದ ಗಣ್ಯವಕ್ತಿಗಳು ಹಾಜರಿದ್ದ ಆ ಸಮಾರಂಭದಲ್ಲಿ ಮೌಲಾನ ಅಬುಲ್ ಕಲಂ ಆಜಾದರು ಗ್ರಂಥಾಲಯದ ಆರಂಭೋತ್ಸವವನ್ನು ನೆರವೇರಿಸುತ್ತಾ, ತಮ್ಮ ಭಾಷಣದ ಕೊನೆಯಲ್ಲಿ ರಾಷ್ಟ್ರೀಯ ಗ್ರಂಥಾಲಯದ ಸ್ವರೂಪವನ್ನು ಸೊಗಸಾಗಿ ವಿವರಿಸಿದ್ದಾರೆ. ತಮ್ಮ ಭಾಷಣದ ಕೊನೆಯಲ್ಲಿ ಹಾಫಿಜ್ ಕವಿಯ ಚೌಪದಿಯನ್ನು ಉದಾಹರಿಸಿದರು :

*'ಇಬ್ಬರು ಗೆಳೆಯರು, ಎರಡು ಮಡಿಕೆ ತನಿ ದ್ರಾಕ್ಷಾರಸ, ಪುಸ್ತಕಗಳ ಜೊತೆ ಹಾಗೂ ಉದ್ಯಾನದ ಮೂಲೆ–ಇವಿಷ್ಟು ಸಿಕ್ಕರೆ ನಾನು ಇಹದಲ್ಲೂ ಪರದಲ್ಲೂ ಉಳಿದ ಎಲ್ಲ ಸುಖ ಸಂತೋಷಗಳನ್ನೂ ತ್ಯಜಿಸಬಲ್ಲೆ' ಎಂದು ಆ ಚೌಪದಿಯ ಭಾವ. ಮೌಲಾನರು ನಂತರ ನುಡಿದರು : 'ಈ ಪುಸ್ತಕ ಭಂಡಾರದಲ್ಲಿ ಸಾಕಷ್ಟು ಪುಸ್ತಕಗಳಿವೆ; ಇಬ್ಬರು ಗೆಳೆಯರು ದೊರೆಯುವುದು ಕಷ್ಟವಾಗದು; ಮನಮೋಹಕ ಉದ್ಯಾನವನ ನಿಮ್ಮೆದುರಿಗಿದೆ. ಅಲ್ಲಿ ನಿಮಗೆ ಬೇಕಾದ ಮೂಲೆಯನ್ನು ಹಿಡಿಯಬಹುದು. ಆದರೆ ನಾನು ವಿಷಾದದಿಂದ ಹೇಳಬೇಕು– ಕವಿ ತಿಳಿಸಿದ ಮತ್ತೊಂದು ಅಂಶ ಇಲ್ಲಿ ದೊರೆಯಲಾರದು. ಆದರೆ ನಿಮ್ಮ ಕಲ್ಪನೆ ಆ ಕೊರತೆಯನ್ನು ತುಂಬೀತು !'

ಕಲ್ಕತ್ತೆಯ ರಾಷ್ಟ್ರೀಯ ಗ್ರಂಥಾಲಯವನ್ನು ಕಣ್ಣಾರೆ ನೋಡದವರಿಗೆ ಈ ಮಾತಿನ ಸ್ವಾರಸ್ಯ ಬಹುಶಃ ಅರ್ಥವಾಗದು.

* ಡಾ|| ಹಾ. ಮಾ. ನಾಯಕರ ಅನುವಾದದ ಸಾರಾಂಶ.

ಗ್ರಂಥಾಲಯ ಇತಿಹಾಸದಲ್ಲಿನ ಪ್ರಮುಖ ಘಟನೆಗಳು

೧೮೩೫	ಆಗಸ್ಟ್ ೩೧ನೇ ತಾರೀಖು ಕಲ್ಕತ್ತೆಯಲ್ಲಿ ಗಣ್ಯ ನಾಗರಿಕರು ಸಭೆ ಸೇರಿ ಸಾರ್ವಜನಿಕ ಗ್ರಂಥಾಲಯ ಸ್ಥಾಪನೆಗೆ ನಿರ್ಧರಿಸಿದರು.
೧೮೩೬	ಮಾರ್ಚ್ ೨೧ನೇ ತಾರೀಖು ಕಲ್ಕತ್ತಾ ಸಾರ್ವಜನಿಕ ಗ್ರಂಥಾಲಯವನ್ನು ಸಾರ್ವಜನಿಕರಿಗೆ ತೆರೆಯಲಾಯಿತು.
೧೮೪೧	ಜುಲೈನಲ್ಲಿ ಗ್ರಂಥಾಲಯವನ್ನು ಫೋರ್ಟ್ ವಿಲಿಯಂಗೆ ಸ್ಥಳಾಂತರ ಮಾಡಲಾಯಿತು.
೧೮೪೪	ಜೂನ್‌ನಲ್ಲಿ ಗ್ರಂಥಾಲಯವನ್ನು ಮೆಟ್ಕಾಫ್‌ಹಾಲ್‌ಗೆ ಸ್ಥಳಾಂತರ ಮಾಡಲಾಯಿತು.
೧೮೯೦	ಕಲ್ಕತ್ತಾ ನಗರಸಭೆ ಸಾರ್ವಜನಿಕ ಗ್ರಂಥಾಲಯದ ಖರ್ಚಿನ ಹೊಣೆ ಹೊರಲು ನಿರ್ಧರಿಸಿತು.
೧೮೯೧	ಭಾರತ ಸರ್ಕಾರದ ವಿವಿಧ ಖಾತೆಗಳ ಗ್ರಂಥ ಸಂಗ್ರಹಗಳನ್ನು ವಿಲೀನಗೊಳಿಸಿ ಇಂಪೀರಿಯಲ್ ಲೈಬ್ರೆರಿಯನ್ನಾಗಿ ಪರಿವರ್ತನೆ ಮಾಡಲಾಯಿತು.
೧೮೯೯	ಕಲ್ಕತ್ತಾ ಸಾರ್ವಜನಿಕ ಗ್ರಂಥಾಲಯಕ್ಕೆ ಲಾರ್ಡ್ ಕರ್ಜನ್ನನ ಭೇಟಿ.
೧೯೦೨	ಇಂಪೀರಿಯಲ್ ಲೈಬ್ರೆರಿ ಕಾನೂನಿನ ಅಂಗೀಕಾರ.
೧೯೦೩	ಜನವರಿ ೩೦ನೇ ತಾರೀಖು ಇಂಪೀರಿಯಲ್ ಲೈಬ್ರೆರಿಯನ್ನು ವಿದ್ಯುಕ್ತವಾಗಿ ಸಾರ್ವಜನಿಕರಿಗೆ ತರೆಯಲಾಯಿತು.
೧೯೩೫	ಗ್ರಂಥಾಲಯ ವಿಜ್ಞಾನದ ತರಗತಿ ಉದ್ಘಾಟನೆ.
೧೯೪೮	ಬೆಲ್ವೆಡೆರೆಗೆ ಗ್ರಂಥಾಲಯದ ಸ್ಥಳಾಂತರ.

೧೯೪೮ ಸೆಪ್ಟೆಂಬರ್ ತಿಂಗಳಲ್ಲಿ ಗ್ರಂಥಾಲಯಕ್ಕೆ 'ರಾಷ್ಟ್ರೀಯ ಗ್ರಂಥಾಲಯ'ವೆಂಬ ನಾಮಕರಣ.

೧೯೪೯ ಸರ್ ಅಶುತೋಷ್ ಮುಖರ್ಜಿಯವರ ಅಮೂಲ್ಯ ಗ್ರಂಥ ಸಂಗ್ರಹದ ಕೊಡುಗೆ—ಸ್ವೀಕಾರ.

೧೯೫೩ ಫೆಬ್ರವರಿ ೧ನೇ ತಾರೀಖು ಮೌಲಾನಾ ಅಬುಲ್ ಕಲಂ ಆಜಾದರಿಂದ ವಿಧ್ಯುಕ್ತವಾಗಿ ರಾಷ್ಟ್ರೀಯ ಗ್ರಂಥಾಲಯವನ್ನು ಸಾರ್ವಜನಿಕರಿಗೆ ತೆರೆಯಲಾಯಿತು.

೧೯೫೪ ಪ್ರಕಾಶನಗಳನ್ನು ಸಾರ್ವಜನಿಕ ಗ್ರಂಥಾಲಯಗಳಿಗೆ ಕಳಿಸಿಕೊಡುವ ಕಾಯಿದೆಯ ಅಂಗೀಕಾರ.

೧೯೫೬ ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳನ್ನೊಳಗೊಳ್ಳಲು ೨೯-೧೨-೫೬ರಲ್ಲಿ ಮೇಲ್ಕಂಡ ಕಾಯಿದೆಯ ಸುಧಾರಣೆ.

೧೯೬೦ ಗ್ರಂಥಾಲಯದಲ್ಲಿ ಶಿಶುವಿಭಾಗದ ಉದ್ಘಾಟನೆ.

೧೯೬೧ ದಿ. ಜವಾಹರಲಾಲ್ ನೆಹ್ರೂರವರಿಂದ ಮೇ ೮ನೇ ತಾರೀಖು ಗ್ರಂಥಾಲಯಕ್ಕೆ ಮತ್ತೊಂದು ಒಂಬತ್ತು ಅಂತಸ್ತಿನ ಕಟ್ಟಡದ ಶಂಕುಸ್ಥಾಪನೆ.

ಅಂಕಿಅಂಶಗಳ ಪಕ್ಷಿನೋಟ

ಗ್ರಂಥಾಲಯವು ವರ್ಷದಲ್ಲಿ ಕೆಲಸ ಮಾಡುವ ದಿನಗಳು	೩೬೨
ಒಟ್ಟು ಗ್ರಂಥಗಳ ಸಂಖ್ಯೆ	೧೪,೧೯,೮೭೫
ಭಾರತೀಯ ಭಾಷೆಗಳಲ್ಲಿನ ಗ್ರಂಥಗಳು	೨,೬೭,೨೧೯
ಹಸ್ತ ಪ್ರತಿಗಳು	೨,೮೮೨
ಭೂಪಟಗಳು	೬೬,೫೧೧
ನಿತ್ಯ ಬರುವ ನಿಯತಕಾಲಿಕೆಗಳು	೧೨,೨೯೯
ಬೈಂಡ್ ಆಗಿರುವ ನಿಯತಕಾಲಿಕೆಗಳ ಸಂಖ್ಯೆ	೮೮,೨೭೧
ಕೊಡುಗೆ ಹಾಗೂ ವಿನಿಮಯ ರೂಪದಲ್ಲಿ ಬಂದ ಪ್ರಕಟಣೆಗಳು	೨,೭೧,೪೫೧
ಕಾಯಿದೆ ಪ್ರಕಾರ ಬಂದ ಗ್ರಂಥಗಳು	೪,೨೯,೬೮೮
ಭಾರತೀಯ ಸರ್ಕಾರಿ ಪ್ರಕಟಣೆಗಳು	೧,೩೭,೨೯೫
ಸಂಯುಕ್ತ ರಾಷ್ಟ್ರ ಸಂಘ, ಅಮೆರಿಕ ಹಾಗೂ ಇತರೆ ವಿದೇಶಿ ಪ್ರಕಟಣೆಗಳು	೨,೫೧,೮೪೫

ಆಯವ್ಯಯ (೧೯೭೧-೭೨) :

ಯೋಜನೇತರ	ರೂ. ೩೦,೩೭,೦೦೦
ಯೋಜನೆಯನ್ವಯ	೮,೦೦,೦೦೦
	೩೮,೩೭,೦೦೦

ಪ್ರತಿನಿತ್ಯ ಬರುವ ವಾಚಕರ ಸರಾಸರಿ ಸಂಖ್ಯೆ : ೮೪೪

ಪ್ರತಿನಿತ್ಯ ಎರವಲು ನೀಡುವ ಪುಸ್ತಕಗಳ ಸಂಖ್ಯೆ : ೨೬೫

ಭಾರತೀಯ ಹಾಗೂ ಏಷ್ಯನ್ ಭಾಷೆಗಳಲ್ಲಿನ ಗ್ರಂಥಗಳ ಸಂಖ್ಯೆ (೧–೪–೧೯೭೨ರಲ್ಲಿದ್ದಂತೆ)

ಅಸ್ಸಾಮಿ	೩,೨೯೨
ಬಂಗಾಲಿ	೫೭,೨೩೪
ಗುಜರಾತಿ	೩೩,೯೩೫
ಹಿಂದೀ	೩೭,೮೮೬
ಕನ್ನಡ	೧೦,೧೮೮
ಮಲಯಾಳಂ	೧೫,೦೦೧
ಮರಾಠಿ	೨೦,೫೬೨
ಒರಿಯಾ	೬,೬೯೮
ಪಂಜಾಬಿ	೬,೭೫೬
ಸಂಸ್ಕೃತ, ಪಾಲಿ, ಪ್ರಾಕೃತ:	೧೪.೧೬೭
ತಮಿಳು	೨೧,೯೬೭
ತೆಲುಗು	೧೬,೧೨೭
ಅರಾಬಿಕ್, ಉರ್ದು ಮತ್ತು ಪರ್ಷಿಯನ್:	೨೨,೧೩೭
ಇತರೆ	೧,೨೭೫
ಒಟ್ಟು	೨,೬೭,೨೧೯

ಗ್ರಂಥಾಲಯದ ನೌಕರರ ಸಂಖ್ಯೆ : ೬೧೧

ಇವರಲ್ಲಿ ಒಂದನೇ ದರ್ಜೆ ಅಧಿಕಾರಿಗಳು—೭ ; ಎರಡನೆ ದರ್ಜೆ ಅಧಿಕಾರಿಗಳು—೨೮+೭ ಮೂರನೇ ದರ್ಜೆ ನೌಕರರು—೩೭೨ ; ನಾಲ್ಕನೆ ದರ್ಜೆ ನೌಕರರ—೧೯೭.

ಅನುಬಂಧ

ಗ್ರಂಥಾಲಯಗಳಿಗೆ ಪ್ರಕಾಶನಗಳನ್ನು ಕಳಿಸಿಕೊಡುವ ಕಾಯಿದೆಯ ಸಾರಾಂಶ (೧೯೫೪)

(Delivery of Books Act-Public Libraries 1954. No. 27)

ವೈಯಕ್ತಿಕವಾಗಿರಲಿ, ಕ್ರಮಬದ್ಧವಾಗಿ ರೂಪಿತವಾದ ಸಂಸ್ಥೆಗಳಾಗಿರಲಿ ಅಥವಾ ತಮ್ಮ ಪುಸ್ತಕಗಳನ್ನು ತಾವೇ ಪ್ರಕಟಿಸುವ ಗ್ರಂಥಕರ್ತರಾಗಿರಲಿ, ತಮ್ಮ ಪ್ರಕಟಣೆಗಳಿಗೆ ಬೆಲೆಯನ್ನು ಇಟ್ಟಿರಲಿ, ಇಲ್ಲದಿರಲಿ–ಭಾರತದ ಎಲ್ಲ ಪ್ರಕಾಶಕರ ಗಮನವನ್ನು ದಿನಾಂಕ ೧೩-೫-೧೯೫೫ರ ಇಂಡಿಯಾ ಗೆಜೆಟ್ಟಿನ ಎರಡನೆಯ ಭಾಗದ ಮೂರನೆಯ ಪ್ರಕರಣದಲ್ಲಿ ಪ್ರಕಟವಾದ ಸಾರ್ವಜನಿಕ ಪುಸ್ತಕ ಭಂಡಾರಗಳಿಗೆ 'ಪುಸ್ತಕಗಳನ್ನು ಸಲ್ಲಿಸುವ' ಕಾನೂನಿನ ಭಾಗಗಳ ಕಡೆಗೆ, ಸೆಳೆಯಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಎಲ್ಲಾ ಇಲಾಖೆಯವರ ಗಮನವನ್ನೂ ಮೇಲೆ ಹೇಳಿದ ಕಾನೂನಿನೆಡೆಗೆ ಸೆಳೆಯಲಾಗಿದೆ. ಭಾರತದ ಬಹುಪಾಲು ಪ್ರಕಾಶಕರಿಗೆ, ಈ ಕಾನೂನಿನ ಪ್ರಕಾರ ಅವರ ಕರ್ತವ್ಯವನ್ನು ಕುರಿತು ಪ್ರಕಟಣೆಯನ್ನು ರಾಷ್ಟ್ರೀಯ ಗ್ರಂಥಾಲಯದಿಂದ ರಿಜಿಸ್ಟರ್ ಮೂಲಕ ಕಳುಹಿಸಲಾಗಿದೆ. ಅವರಲ್ಲಿ ಹಲವರು ಇದಕ್ಕೆ ಉತ್ತರಿಸಿದ್ದಾರೆ. ಮಿಕ್ಕವರು ಮೌನ ತಾಳಿದ್ದಾರೆ. ಕೆಲವಾರು ಪ್ರಕಾಶಕರಿಗೆ ಈ ಪ್ರಕಟಣೆ ಪ್ರತ್ಯೇಕವಾಗಿ ತಲುಪದೆ ಇರುವ ಸಂಭವವಿರುವುದರಿಂದ ರಾಷ್ಟ್ರೀಯ ಗ್ರಂಥಾಲಯದ ಅಧಿಕಾರ ವರ್ಗದವರು ಈ ಮೂಲಕವಾಗಿ ಮೇಲೆ ಹೇಳಿದ ಕಾನೂನಿನ ಸೂಕ್ತ ಭಾಗಗಳ ಕಡೆಗೆ ಗಮನವನ್ನು ಸೆಳೆದಿದ್ದಾರೆ.

“೩. ಸಾರ್ವಜನಿಕ ಪುಸ್ತಕ ಭಂಡಾರಗಳಿಗೆ ಪುಸ್ತಕಗಳನ್ನು ಸಲ್ಲಿಸುವುದು

ಈ ಕಾನೂನಿಗೆ ಸಂಬಂಧಿಸಿದಂತೆ ಮಾಡಬಹುದಾದ ಯಾವುದೇ ನಿಯಮಗಳಿಗೆ ಅವಕಾಶವಿದ್ದು, ಆದರೆ ೧೮೬೭ನೆಯ ವರ್ಷದ (೧೮೬೭ರ XXV) ಪ್ರೆಸ್ ಮತ್ತು ಪುಸ್ತಕಗಳ ರಿಜಿಸ್ಟ್ರೇಷನ್ ಕಾನೂನಿನ ಒಂಬತ್ತನೆಯ ಪ್ರಕರಣವು ಒಳಗೊಂಡ ಭಾಗಗಳಿಗೆ ಧಕ್ಕೆಯಾಗದಂತೆ, ಈ ಕಾನೂನು ಅನುಷ್ಠಾನಕ್ಕೆ ಬಂದೊಡನೆಯೇ ಅದು ಅನ್ವಯವಾಗುವ ರಾಜ್ಯದಲ್ಲಿನ ಪ್ರತಿಯೊಂದು ಪುಸ್ತಕ ಪ್ರಕಾಶಕರೂ, ಪ್ರತಿಯಾದ ಯಾವ ಒಪ್ಪಂದಗಳಿದ್ದರೂ ಕೂಡ, ಪುಸ್ತಕ ಪ್ರಕಟವಾದ ಮೂವತ್ತು ದಿನಗಳ ಒಳಗಾಗಿ ತನ್ನ ಸ್ವಂತ ವೆಚ್ಚದಲ್ಲಿ ಪುಸ್ತಕದ ಒಂದು ಪ್ರತಿಯನ್ನು ಕಲ್ಕತ್ತಾದ ನ್ಯಾಷನಲ್ ಲೈಬ್ರರಿಗೂ ಮತ್ತು ಅಂಥ ಒಂದೊಂದು ಪ್ರತಿಯನ್ನು ಬೇರೆ ಮೂರು ಸಾರ್ವಜನಿಕ ಪುಸ್ತಕ ಭಂಡಾರಗಳಿಗೂ ಸಲ್ಲಿಸತಕ್ಕದ್ದು.”

“೫. ಜುಲ್ಮಾನೆ

ಈ ಕಾನೂನಿನ ಯಾವ ಭಾಗವನ್ನಾಗಲಿ ಅಥವಾ ಅದರಿಂದಾದ ಯಾವ ನಿಯಮವನ್ನಾಗಲಿ ಉಲ್ಲಂಘಿಸುವ ಯಾವ ಪ್ರಕಾಶಕರೇ ಆಗಲಿ ೫೦ ರೂ.ಗಳ ತನಕ ವಿಧಿಸಬಹುದಾದ ಜುಲ್ಮಾನೆಯನ್ನು ಮತ್ತು ಪುಸ್ತಕದ ಬೆಲೆಯನ್ನೂ ತೆರುವಂತೆ ಶಿಕ್ಷಾರ್ಹರಾಗಿರುತ್ತಾರೆ. ಅಪರಾಧವನ್ನು ನಿರ್ಣಯಿಸುವ ನ್ಯಾಯಾಲಯವು, ಹೀಗೆ ವಸೂಲಾದ ಜುಲ್ಮಾನೆಯ ಪೂರ್ಣ ಹಣವಾಗಲೀ ಅಥವಾ ಅದರ ಒಂದು ಭಾಗವಾಗಲೀ ಆ ಪುಸ್ತಕವು ಸಲ್ಲಬೇಕಾಗಿದ್ದ ಸಾರ್ವಜನಿಕ ಪುಸ್ತಕ ಭಂಡಾರಕ್ಕೆ ಪರಿಹಾರ ರೂಪವಾಗಿ ಸಲ್ಲಬೇಕೆಂದು ನಿರ್ದೇಶಿಸಬಹುದು.”

ಈ ಸಾರ್ವಜನಿಕ ಪ್ರಕಟಣೆಯ ನಂತರವೂ ಪುಸ್ತಕಗಳನ್ನು ಸಲ್ಲಿಸದೆ ಉಳಿದರೆ ಅಂಥವರ ಮೇಲೆ ಕಾನೂನಿನ ಪ್ರಕಾರವಾಗಿ ಕ್ರಮ ಕೈಗೊಳ್ಳಲಾಗುವುದು.

ಪ್ರಕಾಶಕರ ತಿಳಿವಳಿಕೆಗಾಗಿ, ಕಲ್ಕತ್ತಾ ನ್ಯಾಷನಲ್ ಲೈಬ್ರೇರಿಯನ್ನುಳಿದು, ಅವರು ತಮ್ಮ ಪ್ರಕಾಶನಗಳನ್ನು ಸಲ್ಲಿಸಬೇಕಾದ ಮಿಕ್ಕ ಮೂರು ಪುಸ್ತಕ ಭಂಡಾರಗಳನ್ನು ಇಲ್ಲಿ ಸೂಚಿಸಲಾಗಿದೆ : ೧. ಕನೆಮರಾ ಪಬ್ಲಿಕ್ ಲೈಬೆರಿ, ಮದರಾಸು ; ೨. ದಿ ಸೆಂಟ್ರಲ್ ಲೈಬ್ರೆರಿ, ಟೌನ್‌ಹಾಲ್ ಮುಂಬಯಿ, ಮತ್ತು ೩. ದೆಹಲಿಯಲ್ಲಿ ಆರಂಭವಾಗುವ ನ್ಯಾಷನಲ್ ಸೆಂಟ್ರಲ್ ಲೈಬ್ರೆರಿ.

ಕೊನೆಯಲ್ಲಿ ಹೇಳಿದ ಪುಸ್ತಕ ಭಂಡಾರಕ್ಕೆ ಮಾತ್ರ. ಪುಸ್ತಕಗಳನ್ನು ಸಲ್ಲಿಸಬೇಕೆಂದು ಪ್ರಕಟಿಸಿದ ಮೇಲೆಯೇ ಪುಸ್ತಕಗಳನ್ನು ಸಲ್ಲಿಸಬೇಕು.

[ಈ ಲೇಖನ ಬರೆಯುವಾಗ

1. India's National Library by B. S. Kesavan.

2. National Library of India (article) by M. N. Nagaraj & P. N. Venkatachari.

3. ಡಾ. ಹಾ. ಮಾ. ನಾಯಕ ಅವರು ೧೯೬೧ರಲ್ಲಿ ಪ್ರಬುದ್ಧ ಕರ್ಣಾಟಕದಲ್ಲಿ ‘ರಾಷ್ಟ್ರೀಯ ಗ್ರಂಥಾಲಯ, ಕಲ್ಕತ್ತಾ’ದ ಬಗ್ಗೆ ಬರೆದ ಲೇಖನ ಸಾರಾಂಶ.

4. ಅಲ್ಲದೆ ನ್ಯಾಷನಲ್ ಲೈಬ್ರೆರಿಯಲ್ಲಿ ಅಸಿಸ್ಟೆಂಟ್ ಲೈಬ್ರೇರಿಯನ್ ಆಗಿರುವ ಶ್ರೀ ಎಂ. ಎನ್. ನಾಗರಾಜ್ ಅವರು ರಾಷ್ಟ್ರೀಯ ಗ್ರಂಥಾಲಯದ ಇತ್ತೀಚಿನ ಬೆಳವಣಿಗೆ ಬಗ್ಗೆ ಅಂಕಿ ಅಂಶಗಳನ್ನೊದಗಿಸಿ ಉಪಕರಿಸಿದ್ದಾರೆ. ಈ ಎಲ್ಲಾ ಮಹನೀಯರಿಗೂ ನಾನು ಕೃತಜ್ಞ]

ಮೈಸೂರು ರಾಜ್ಯದಲ್ಲಿ ಗ್ರಂಥಾಲಯ ಸೇವೆಯ ಒಂದು ಸಮೀಕ್ಷೆ

● ಎನ್. ಡಿ. ಬಗರಿ

ಹಳೇ ಮೈಸೂರು ರಾಜ್ಯದಲ್ಲಿ, ರಾಜ್ಯಗಳ ಪುನರ್ವಿಂಗಡಣೆಗಳ ಮುನ್ನ ಅಂದರೆ, ೧–೧೧–೧೯೫೬ರ ಪೂರ್ವದಲ್ಲಿ ಗ್ರಂಥಾಲಯ ಸೌಲಭ್ಯವನ್ನೊದಗಿಸುವುದಕ್ಕೆ ಪ್ರತ್ಯೇಕ ಗ್ರಂಥಾಲಯ ಕಾನೂನು ಇರಲಿಲ್ಲ. ರಾಜ್ಯ ಪುನರ್ವಿಂಗಡಣೆಯ ಪರಿಣಾಮವಾಗಿ ಬೇರೆ ಬೇರೆ ರಾಜ್ಯದ ಮುಂದೆ ಹೇಳಿದ ಭಾಗಗಳು ಮೈಸೂರು ರಾಜ್ಯಕ್ಕೆ ಕೂಡಿದವು. ಅಂದರೆ ಮುಂಬೈ ರಾಜ್ಯದಿಂದ ಧಾರವಾಡ, ಬೆಳಗಾಂ, ಬಿಜಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳೂ, ಹೈದರಾಬಾದ್‌ನಿಂದ ರಾಯಚೂರು, ಬಿದರ್ ಗುಲ್ಬರ್ಗ ಜಿಲ್ಲೆಗಳೂ, ಮದ್ರಾಸ್‌ನಿಂದ ಬಳ್ಳಾರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳೂ ಹಾಗೂ ಕೇಂದ್ರ ರಾಜ್ಯಾಡಳಿತ ಭಾಗವಾದ ಕೊಡಗು ಜಿಲ್ಲೆಯೂ ವಿಲೀನವಾದವು.

ಗ್ರಂಥಾಲಯ ಸೇವೆ ಸಲ್ಲಿಸಲು ನಿಗದಿಯಾದ ಕಾನೂನು ಬಳ್ಳಾರಿ ಮತ್ತು ಮಂಗಳೂರು ಜಿಲ್ಲೆಗಳನ್ನು ಬಿಟ್ಟರೆ ಉಳಿದ ಯಾವುದೇ ಭಾಗದಲ್ಲಿ ಇರಲಿಲ್ಲವೆಂದು ಹೇಳಬೇಕಾಗಿದೆ; ಅಂತೆಯೇ ನಿಯಮಾವಳಿಗಳೂ ಬೇರೆ ಬೇರೆ ಇದ್ದು, ಗ್ರಂಥಾಲಯ ಸೇವೆಯ ಸೌಲಭ್ಯವನ್ನು ಒದಗಿಸಲು, ಒಂದು ನಿರ್ದಿಷ್ಟ ಕಾನೂನು ಮತ್ತು ನಿಯಮಾವಳಿಗಳು ಹೊಸ ಮೈಸೂರು ರಾಜ್ಯದಲ್ಲಿ ಅವಶ್ಯವಾದವು.

ಹಳೆಯ ಮೈಸೂರಿನಲ್ಲಿ ಗ್ರಂಥಾಲಯ ಸೌಲಭ್ಯವು ಸಾರ್ವಜನಿಕರಿಗೆ ಸ್ವಲ್ಪಮಟ್ಟಿಗೆ ಮೈಸೂರು ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯಿಂದ ಹಾಗೂ ಸರ್ಕಾರದ ಧನ ಸಹಾಯದಿಂದ, ನಡೆಯುತ್ತಿದ್ದ ಕೆಲವು ಸಾರ್ವಜನಿಕ ಗ್ರಂಥಾಲಯಗಳ ಮುಖಾಂತರ ಲಭ್ಯವಾಗುತ್ತಿತ್ತು.

ಮುಂಬೈ ಕರ್ನಾಟಕದಲ್ಲಿ ೧೯೩೯ರಲ್ಲಿ ನೇಮಿಸಿದ ಫೈಜಿ ಕಮಿಟಿಯ ಆದೇಶದಂತೆ ೧೯೪೭ ರಿಂದ ಗ್ರಂಥಾಲಯಗಳ ಆಡಳಿತವನ್ನು ರಾಜ್ಯ ಅಭಿವೃದ್ಧಿ ಯೋಜನೆಯ ಅಧಿಕಾರಿಗಳ ಮತ್ತು ಜಿಲ್ಲಾ ವಿದ್ಯಾಧಿಕಾರಿಗಳ ಸಹಾಯದಿಂದ ಕ್ಯೂರೇಟರ್ ಆಫ್ ಲೈಬ್ರರೀಸ್ ಅವರು ನೋಡುತ್ತಿದ್ದರು.

ಮದ್ರಾಸ್ ಕರ್ನಾಟಕದಲ್ಲಿ, ಮದ್ರಾಸ್ ಗ್ರಂಥಾಲಯ ಕಾಯ್ದೆ ೧೯೪೮ರ ಪ್ರಕಾರ ಗ್ರಂಥಾಲಯ ಸೌಲಭ್ಯವು ಸ್ಥಾನಿಕ ಗ್ರಂಥಾಲಯ ಪ್ರಾಧಿಕಾರಿಗಳಿಂದ ದೊರೆಯುವಂತೆ ನಿಗದಿಯಾಗಿತ್ತು.

ಹೈದರಾಬಾದ್ ಕರ್ನಾಟಕದಲ್ಲಿ ಗ್ರಂಥಾಲಯ ಸೌಲ

ಭ್ಯವು, ಹೈದರಾಬಾದ್ ಗ್ರಂಥಾಲಯ ಕಾಯ್ದೆ ೧೯೫೫ ರ ಪ್ರಕಾರ ಸಾರ್ವಜನಿಕರಿಗೆ ತಲಪುವ ಪೂರ್ವದಲ್ಲಿಯೇ ರಾಜ್ಯ ಪುನರ್ವಿಂಗಡಣೆಯಾಗಿ, ಹೇಳಿಕೊಳ್ಳುವಂತಹ ಸೇವಾ ಸೌಕರ್ಯ ತನ್ನೊಡನೆ ಆ ಭಾಗ ತರಲಿಲ್ಲ. ಅಂತೆಯೇ ನವ ಮೈಸೂರು ರಾಜ್ಯಕ್ಕೆ ಏಕತೆಯನ್ನು ರೂಪಿಸುವ ಸಾರ್ವಜನಿಕ ಗ್ರಂಥಾಲಯಗಳ ಕಾಯ್ದೆಯು ಅತ್ಯವಶ್ಯಕವಾಗಿ ಕಂಡುಬಂದಿತು. ಅದರಂತೆ ಸಾರ್ವಜನಿಕ ಪುಸ್ತಕ ಭಂಡಾರ ವ್ಯವಸ್ಥೆಗೆ ಒಂದು ಪ್ರತ್ಯೇಕ ಕಾಯ್ದೆ ಇರಬೇಕೆಂಬ ಅಭಿಪ್ರಾಯತಾಳಿ ಸಾರ್ವಜನಿಕ ಗ್ರಂಥಾಲಯ ಕಾಯ್ದೆಯನ್ನು ಮೈಸೂರು ರಾಜ್ಯದಲ್ಲಿ ಅಂಗೀಕರಿಸಲು ಪದ್ಮಶ್ರೀ ಡಾ|| ರಂಗನಾಥನ್‌ರವರ ಸಹಾಯ ದೊರೆತದ್ದು ತುಂಬಾ ಪ್ರಸಂಶನೀಯವಾದದ್ದು.

ಮೈಸೂರು ಸಾರ್ವಜನಿಕ ಗ್ರಂಥಾಲಯ ಕಾನೂನು ೧೯೬೫ರಲ್ಲಿ ಅಂಗೀಕೃತವಾಗಿ, ೧೯೬೬ರ ಏಪ್ರಿಲ್ ೧ ರಿಂದ ಜಾರಿಗೆ ಬಂದು, ೧-೧೧-೧೯೬೬ರಂದು ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಪ್ರಾರಂಭವಾಯಿತು. ಅದಕ್ಕೆ ರಾಜ್ಯ ಗ್ರಂಥಾಧಿಕಾರಿ ಮುಖ್ಯಸ್ಥರಾಗಿ ನೇಮಕಗೊಂಡರು. ಮೈಸೂರು ರಾಜ್ಯದ ಕಾಯ್ದೆಯು (೧೯೬೫) ತೀರ ಆಧುನಿಕವಿದ್ದು ಅದು ಈ ದಿಶೆಯಲ್ಲಿ ತಜ್ಞರ ಹಾಗೂ ಸಮಿತಿಗಳ ಅಭಿಪ್ರಾಯಕ್ಕೆ ಮನ್ನಣೆಕೊಟ್ಟು ಪುರೋಗಾಮಿ ಅಂಶಗಳನ್ನು ಒಳಗೊಂಡಿದೆ. ಆದುದರಿಂದ ಅದು ಇತರ ರಾಜ್ಯ ಕಾಯ್ದೆಗಳಿಗೆ ಒಂದು ಮಾದರಿಯಾಗಿದೆ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಇಲಾಖೆ ಪ್ರಾರಂಭವಾದ ಕೂಡಲೇ ಅಂದರೆ ೫-೧೨-೧೯೬೬ರಲ್ಲಿ ಶೇಷಾದ್ರಿ ಐಯ್ಯರ್‌ರವರ ಸ್ಮಾರಕ ಕಟ್ಟಡವನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ಅದನ್ನು ರಾಜ್ಯ ಕೇಂದ್ರ ಗ್ರಂಥಾಲಯವನ್ನಾಗಿ ಮಾರ್ಪಡಿಸಲಾಯಿತು. ಅನಂತರ ಸಾರ್ವಜನಿಕ ಗ್ರಂಥಾಲಯ, ಮೈಸೂರು; ಮಹಾತ್ಮಗಾಂಧಿ ಸಾರ್ವಜನಿಕ ಗ್ರಂಥಾಲಯ, ಮಡಿಕೇರಿ; ಕಾರ್ನಾಡ್ ಸದಾಶಿವರಾವ್ ಗ್ರಂಥಾಲಯ, ಮಂಗಳೂರು; ಇವುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು, ನಗರ ಕೇಂದ್ರ ಗ್ರಂಥಾಲಯ ಮೈಸೂರು, ಮಂಗಳೂರು ಮತ್ತು ಜಿಲ್ಲಾ ಕೇಂದ್ರ ಗ್ರಂಥಾಲಯ ಕೊಡಗು ಮತ್ತು ದಕ್ಷಿಣ ಕನ್ನಡವಾಗಿ ಮಾರ್ಪಡಿಸಲ್ಪಟ್ಟಿತು. ಕರ್ನಾಟಕ ಗ್ರಂಥಾಲಯ, ಧಾರವಾಡ ಮತ್ತು ಜಿಲ್ಲಾ ಕೇಂದ್ರ ಗ್ರಂಥಾಲಯ, ಬಳ್ಳಾರಿ, ಇವುಗಳನ್ನು ಇಲಾಖೆಯ ವಶಕ್ಕೆ ತೆಗೆದುಕೊಂಡು ಅನುಕ್ರಮವಾಗಿ ನಗರ ಕೇಂದ್ರ ಗ್ರಂಥಾಲಯ, ಧಾರವಾಡ, ಮತ್ತು ಜಿಲ್ಲಾ ಕೇಂದ್ರ ಗ್ರಂಥಾಲಯ ಧಾರವಾಡ, ಮತ್ತು ಜಿಲ್ಲಾ ಕೇಂದ್ರ ಗ್ರಂಥಾಲಯ ಬಳ್ಳಾರಿ ಎಂದು ಮಾರ್ಪಡಿಸಲಾಯಿತು.

ಜಿಲ್ಲಾ ಕೇಂದ್ರ ಗ್ರಂಥಾಲಯ ಚಿತ್ರದುರ್ಗ, ಹಾಸನ, ಚಿಕ್ಕಮಗಳೂರು, ತುಮಕೂರು, ಚಿಂತಾಮಣಿ (ಕೋಲಾರ), ಇವುಗಳನ್ನು ಸಾರ್ವಜನಿಕ ಗ್ರಂಥಾಲಯಗಳನ್ನಾಗಿ ಪರಿವರ್ತಿಸಿ ಅವುಗಳ ಮೂಲಕ ಸಾರ್ವಜನಿಕರಿಗೆ ಗ್ರಂಥಾಲಯ ಸೇವೆಯನ್ನು ಕೊಡಲಾಗುತ್ತದೆ

ಶಾಖೆಗಳು

ಬೆಂಗಳೂರು ನಗರ ಕೇಂದ್ರ ಗ್ರಂಥ ಭಂಡಾರದ ವ್ಯಾಪ್ತಿಗೆ ಒಳಪಟ್ಟಂತೆ, ೧) ನಗರದ ಕೆಂಗಲ್ ಹನುಮಂತಯ್ಯ ರಸ್ತೆ, ಜಯನಗರ, ಚಾಮರಾಜ ಪೇಟೆ, ವಿಶ್ವೇಶ್ವರಪುರಂ, ರಾಜಾಜಿನಗರ, ಕೆಂಪೇಗೌಡನಗರ, ಸೆಂಟ್ರಲ್ ಜೈಲ್, ಹೊಸಹಳ್ಳಿ, ಹಾಗೂ ಜಾಗುಪಾಳ್ಯಗಳಲ್ಲಿ ಉಪಗ್ರಂಥ ಭಂಡಾರಗಳನ್ನು ತೆರೆಯಲಾಗಿದೆ. ೨) ಇವುಗಳಲ್ಲದೆ ೧೭ ಪುಸ್ತಕಗಳ ವಿತರಣೆ ಕೇಂದ್ರಗಳು ನಗರದ ನಾನಾ ಭಾಗಗಳಲ್ಲಿ ಸಾರ್ವಜನಿಕರಿಗಾಗಿ ಗ್ರಂಥಾಲಯ ಸೌಲಭ್ಯವನ್ನು ಒದಗಿಸುತ್ತಾ ಇವೆ.

ಇದರಂತೆ ಹುಬ್ಬಳ್ಳಿ-ಧಾರವಾಡ ನಗರ ಕೇಂದ್ರ ಗ್ರಂಥಾಲಯಕ್ಕೆ ಒಳಪಟ್ಟಂತೆ ಶಾಖಾ ಗ್ರಂಥ ಭಂಡಾರಗಳನ್ನು ಧಾರವಾಡದಲ್ಲಿ ಮಾಳಮಡ್ಡಿ, ಮೃತ್ಯುಂಜಯ ನಗರ, ಯು. ಬಿ. ಹಿಲ್, ಮತ್ತು ಮೆಂಟಲ್ ಆಸ್ಪತ್ರೆಯಲ್ಲಿಯೂ, ಹುಬ್ಬಳ್ಳಿಯಲ್ಲಿ, ಹೊಸೂರು, ಹಳೇ ಹುಬ್ಬಳ್ಳಿ, ಮತ್ತು ರೈಲ್ವೆ ಕಾಲೊನಿಗಳಲ್ಲಿ ಸಾರ್ವಜನಿಕರಿಗಾಗಿ ಗ್ರಂಥಾಲಯ ಸೌಲಭ್ಯವನ್ನೊದಗಿಸುತ್ತಿರುತ್ತದೆ.

ಮೈಸೂರು ನಗರ ಕೇಂದ್ರ ಗ್ರಂಥಾಲಯವು, ಶಾಖಾ ಗ್ರಂಥಾಲಯಗಳನ್ನು ಸರಸ್ವತೀಪುರಂ, ಗಾಂಧಿನಗರ ಮತ್ತು ಅಶೋಕಪುರಂಗಳಲ್ಲಿ ಸಾರ್ವಜನಿಕರಿಗಾಗಿ ತೆರೆದಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರ ಗ್ರಂಥಾಲಯವು ಕೂಡ ೭ ಶಾಖಾ ಗ್ರಂಥ ಭಂಡಾರಗಳನ್ನೂ, ೩೫ ವಿತರಣೆ ಕೇಂದ್ರಗಳನ್ನೂ ಸಾರ್ವಜನಿಕರಿಗೆ ತೆರೆದು ಅವುಗಳ ಮುಖಾಂತರ ವಾಚಕರ ಸೇವೆಯನ್ನು ಉತ್ತಮ ರೀತಿಯಲ್ಲಿ ಮಾಡುತ್ತಲಿದೆ.

ಬಳ್ಳಾರಿ ಜಿಲ್ಲಾ ಕೇಂದ್ರ ಗ್ರಂಥಾಲಯವು, ೧೫ ಶಾಖಾ ಗ್ರಂಥ ಭಂಡಾರಗಳನ್ನು ಜಿಲ್ಲೆಯಲ್ಲೆಲ್ಲಾ ತೆರೆದು ಗ್ರಂಥಾಲಯ ಸೌಲಭ್ಯ ಸಾರ್ವಜನಿಕರಿಗೆ ಒದಗುವಂತೆ ಮಾಡಲಾಗಿದೆ.

ಕೋಲಾರ ಜಿಲ್ಲೆಯ ಕೇಂದ್ರ ಗ್ರಂಥಾಲಯವಾದ ಚಿಂತಾಮಣಿಯು, ಕೋಲಾರದಲ್ಲಿ ಒಂದು ಗ್ರಂಥಾಲಯ ಶಾಖೆಯನ್ನು ಪ್ರಾರಂಭಿಸಿದೆ.

ಚಿತ್ರದುರ್ಗ ಜಿಲ್ಲಾ ಕೇಂದ್ರ ಗ್ರಂಥಾಲಯವು ಸಾರ್ವಜನಿಕರಿಗಾಗಿ ೪ ಶಾಖಾ ಗ್ರಂಥಾಲಯಗಳನ್ನು ಪ್ರಾರಂಭಿಸಿದೆ. ಹೀಗೆ ಗ್ರಂಥಾಲಯ ಜಾಲವನ್ನು ಹಬ್ಬಿಸಲು ಗ್ರಂಥಾಲಯ ಇಲಾಖೆಯು, ಸಿಬ್ಬಂದಿಯ ಕೊರತೆಯಿದ್ದರೂ ಕೂಡ ಸಾಕಷ್ಟು ತ್ವರಿತಗತಿಯಲ್ಲಿ ಮುಂದೆ ನಡೆದಿದೆ.

ರಾಜ್ಯ ಗ್ರಂಥಾಲಯ ಕಾಯ್ದೆ ೧೯೬೫ರ ಪ್ರಕಾರ, ೩ನೇ ವಿಭಾಗದ ಅಧಿನಿಯಮದ ಪ್ರಕಾರ ಮೈಸೂರು ರಾಜ್ಯದ ಗ್ರಂಥಾಲಯ ಪ್ರಾಧಿಕಾರಿ ವರ್ಗವು ರಚನೆಯಾಗಿದೆ. ಮೈಸೂರು ರಾಜ್ಯದ ಗ್ರಂಥಾಲಯ ಕಾಯ್ದೆ ೧೯೬೫ರ ಪ್ರಕಾರ ೧೬ನೇ ವಿಭಾಗದಂತೆ, ೫ ನಗರ ಕೇಂದ್ರ ಪ್ರಾಧಿಕಾರಿ ವರ್ಗಗಳೂ ಮತ್ತು ೧೯ ಜಿಲ್ಲಾ ಕೇಂದ್ರ ಪ್ರಾಧಿಕಾರಿ ವರ್ಗಗಳು ಸರ್ಕಾರದಿಂದ ಮಂಜೂರಾತಿ ಪಡೆದು ರಚಿಸಲಾಗಿದೆ.

ತರಬೇತಿ ಕೇಂದ್ರ

ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಸೇರಿದಂತೆ ಬೆಂಗಳೂರಿನಲ್ಲಿ ಗ್ರಂಥಾಲಯ ವಿಜ್ಞಾನ ತರಬೇತಿ ಕೇಂದ್ರದಲ್ಲಿ, ೩೬ನೇ ತಂಡದಲ್ಲಿ ೪೦ ಜನ ವಿದ್ಯಾರ್ಥಿ—ವಿದ್ಯಾರ್ಥಿನಿಯರು ತರಬೇತಿ ಪಡೆಯುತ್ತಿದ್ದಾರೆ. ಈವರೆಗೆ ಸುಮಾರು ೮೨೦ ಮಂದಿ ವಿದ್ಯಾರ್ಥಿ—ವಿದ್ಯಾರ್ಥಿನಿಯರು ವಿಜ್ಞಾನ ತರಬೇತಿಯನ್ನು ಪಡೆದಿದ್ದು ಶೇಕಡಾ ೮೦ ಮಂದಿ ನಾನಾ ಗ್ರಂಥ ಭಂಡಾರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಗ್ರಂಥಾಲಯ ವಿಜ್ಞಾನ ತರಬೇತಿಯ ಅವಧಿಯು ಮೂರು ತಿಂಗಳದಾಗಿದ್ದು ಅದನ್ನು ಇನ್ನು ಮುಂದೆ ಒಂಭತ್ತು ತಿಂಗಳುಗಳಿಗೆ ಹೆಚ್ಚಿಸುವ ಸಾಧ್ಯತೆ ಇದೆ.

ರಾಜ್ಯದ ಪಂಚವಾರ್ಷಿಕ ಯೋಜನೆಯ ರೀತ್ಯಾ ೧೯ ಜಿಲ್ಲಾ ಕೇಂದ್ರ ಗ್ರಂಥಾಲಯಗಳು, ಐದು ನಗರ ಕೇಂದ್ರ ಗ್ರಂಥಾಲಯಗಳೂ ೪೦೮ ಶಾಖಾ ಗ್ರಂಥಾಲಯಗಳೂ, ಹಾಗೂ ೫೨೪೬ ವಿತರಣ ಕೇಂದ್ರಗಳನ್ನು ತೆರೆಯುವ ಕಾರ್ಯಕ್ರಮ ತೃಪ್ತಿಕರವಾಗಿ ಕಾರ್ಯರೂಪಕ್ಕೆ ಬರಲು ಇಲಾಖೆಯು ತವಕಿಸುತ್ತಾ ಇದೆ. ಜಿಲ್ಲಾ ಮತ್ತು ವಿತರಣೆ ಕೇಂದ್ರಗಳ ಸ್ಥಾಪನೆ ನಿಧಾನವಾಗುವುದಕ್ಕೆ, ಜಿಲ್ಲಾ ಕೇಂದ್ರ ಗ್ರಂಥಾಲಯ ಅಧಿಕಾರಿಗಳನ್ನು ನೇಮಕಮಾಡುವುದು ವಿಳಂಬವಾಗಿರುವುದರಿಂದ ಪ್ರಗತಿ ಸ್ವಲ್ಪಮಟ್ಟಿಗೆ ಕುಂಠಿತವಾಗಿದೆ. ಈ ಅಧಿಕಾರಿಗಳು ನೇಮಕಗೊಂಡಂತೆಲ್ಲಾ ಅವರುಗಳು ಶಾಖಾ ಗ್ರಂಥಭಂಡಾರಗಳನ್ನೂ, ವಿತರಣೆ ಕೇಂದ್ರಗಳನ್ನೂ ವ್ಯವಸ್ಥೆ ಮಾಡಲು ಗಮನ ಕೊಡುವರು.

ಗ್ರಂಥಾಲಯ ಇಲಾಖೆಯಲ್ಲಿ ಈ ಕೆಳಗೆ ಕಾಣಿಸಿದ ಸಿಬ್ಬಂದಿ ಇದೆ :

(ಅ)	ಗ್ರಂಥಾಲಯ ವಿಜ್ಞಾನ ತರಬೇತಿ ಪಡೆದ ಸಿಬ್ಬಂದಿ	೫೩
(ಆ)	ತರಬೇತಿ ಪಡೆಯದ ಇತರ ಸಿಬ್ಬಂದಿ	೧೦೫
(ಇ)	ಕೆಳದರ್ಜೆ ಸಿಬ್ಬಂದಿ	೧೬೨
	ಒಟ್ಟು	೩೨೦

ಒಟ್ಟು ೩೨೦ ಸಿಬ್ಬಂದಿಯಲ್ಲಿ ಗೆಜೆಟೆಡ್ ೨೩ ಮಂದಿ, ಮೂರನೆ ವರ್ಗದ ೬೫ ಮಂದಿ ಅಂದರೆ ಒಟ್ಟು ೮೮ ಜಾಗಗಳು ಈಗ್ಯೆ ಖಾಲಿಯಿವೆ. ನಾನಾ ಕಾರಣಗಳಿಂದ ಭರ್ತಿ ಮಾಡಲು ಅವಕಾಶವಾಗಿಲ್ಲ. ಕೆಲವೇ ದಿನಗಳಲ್ಲಿ ಇವುಗಳನ್ನೆಲ್ಲಾ ತುಂಬಲು ಏರ್ಪಾಟು ಮಾಡಲಾಗುತ್ತೆ. ಆಯಾ ನಗರ ಮತ್ತು ಜಿಲ್ಲಾ ಪ್ರಾಧಿಕಾರಿ ವರ್ಗಗಳ ಬೇಡಿಕೆ ಮೇರೆಗೆ ಸುಮಾರು ೨೬೮ ಮಂದಿ ತಾತ್ಕಾಲಿಕ ಸಿಬ್ಬಂದಿಯನ್ನು ಲೈಬ್ರರಿ ಫಂಡಿನಲ್ಲಿ ದಿನವಹಿ ಕೆಲಸದ ಮೇರೆಗೆ ನೇಮಿಸಿ ಗ್ರಂಥಾಲಯ ಸೌಲಭ್ಯವನ್ನು ಒದಗಿಸಿದೆ. ಅವರಲ್ಲಿ ಶೇಕಡಾ ೬೦ರಷ್ಟು ಜನ ತರಬೇತಿ ಹೊಂದಿದವರು ಇರುವರು.

ಗ್ರಂಥಾಲಯ ಇಲಾಖೆಯ ಆರ್ಥಿಕ ವ್ಯವಸ್ಥೆ

ಮೈಸೂರು ರಾಜ್ಯದ ಸಾರ್ವಜನಿಕ ಗ್ರಂಥಾಲಯಗಳ ಕಾಯ್ದೆ ೧೯೬೫ರ ಪ್ರಕಾರ ಒಂದು ಲಕ್ಷಕ್ಕಿಂತ ಮೀರಿದ ಜನಸಂಖ್ಯೆ ಇರುವ ನಗರಗಳನ್ನು ಮತ್ತು ಜಿಲ್ಲೆಯ ಉಳಿದ ಭಾಗವನ್ನು ಪ್ರತ್ಯೇಕಿಸಿ ಅವುಗಳಿಗೆ ಆರ್ಥಿಕ

ಹಾಗೂ ಆಡಳಿತ ದೃಷ್ಟಿಯಿಂದ ಬೇರೆ ಬೇರೆ ಘಟಕಗಳನ್ನಾಗಿ ಮಾಡುವುದು.

ಭಾರತದಲ್ಲಿಯ ಪ್ರಚಲಿತ ಕಾಯ್ದೆಗಳು ಹಾಗೂ ಪುಸ್ತಕಭಂಡಾರ ಸಲಹಾ ಸಮಿತಿಯು ನಗರಗಳಲ್ಲಿ ಆಸ್ತಿಕರವನ್ನು ಮಾತ್ರ ವಿಧಿಸಿದರೆ, ಮೈಸೂರು ಕಾಯ್ದೆಯಲ್ಲಿ ಇತರ ಮೂರು ಸುಂಕ ಮೂಲಗಳನ್ನು ಕಂಡುಹಿಡಿಯಲಾಗಿದೆ. ಮತ್ತು ಅವುಗಳ ಮೇಲೆ ಸಹ ರೂಪಾಯಿಗೆ ೩ ಪೈಸೆಯಂತೆ ಸುಂಕವನ್ನು ವಿಧಿಸಲಾಗಿದೆ. (೧) ಜಕಾತಿ, (೨) ವಾಹನ ತೆರಿಗೆ ಮತ್ತು (೩) ವೃತ್ತಿ ತೆರಿಗೆ ಇವೇ ಹೆಚ್ಚಿನ ಆದಾಯ ಮೂಲಗಳಾಗಿವೆ.

ಪ್ರಚಲಿತ ಕಾಯ್ದೆಗಳು ಜಿಲ್ಲೆಯಲ್ಲಿ ಅಂದರೆ ನಗರ ಪ್ರದೇಶವನ್ನು ಹೊರತುಪಡಿಸಿ, ಇರುವ ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ತಿಕರವು ಮಾತ್ರ ಆದಾಯ ಮೂಲವಾಗಿದೆ. ಆದರೆ ಮೈಸೂರು ಕಾಯ್ದೆಯಲ್ಲಿ ಆದರ ಜೊತೆಗೆ ಶೇಖರಿಸಲ್ಪಟ್ಟ ಭೂಕಂದಾಯ ಸರ್ಕಾರ ಮಂಜೂರುಮಾಡುವ ಹಣವೂ ಕೂಡ ಆದಾಯವಾಗುವುದು. ಆಯಾ ಜಿಲ್ಲೆಯಲ್ಲಿ ಸಂದಾಯವಾಗುವ ಭೂಕಂದಾಯದ ಮೇಲೆ ನೂರಕ್ಕೆ ಮೂರಷ್ಟು ಹಲವು ಜಿಲ್ಲಾ ಪುಸ್ತಕಭಂಡಾರ ಪ್ರಾಧಿಕಾರಿ ವರ್ಗಕ್ಕೆ ಸರ್ಕಾರದಿಂದ ದೊರಕುವುದು.

ಇದರ ಪ್ರಕಾರ ಮೈಸೂರು ರಾಜ್ಯದಲ್ಲಿ ೧೯೬೧–೬೨ ಸಾಲಿನಲ್ಲಿ ಲೈಬ್ರರಿ ಸುಂಕವು ನಗರ ಕೇಂದ್ರಗಳಾದ ಬೆಂಗಳೂರು, ಮೈಸೂರು; ಹುಬ್ಬಳ್ಳಿ–ಧಾರವಾಡ ಹಾಗೂ ಮಂಗಳೂರು, ಅಲ್ಲದೆ ಇತರೆ ನಗರ ಕೇಂದ್ರ ಗ್ರಂಥಗಳಿಂದ ಸುಮಾರು ೨೫,೦೦,೦೦೦ ರೂಪಾಯಿಗಳಾಗುತ್ತೆಂದು ಅಂದಾಜು ಮಾಡಲಾಗಿದೆ. ಇದಲ್ಲದೆ ಸರ್ಕಾರದಿಂದ ಶೇಕಡಾ ೩ ರೂ.ನಂತೆ ಭೂಕಂದಾಯ ಶೇಖರಣೆಯ ಮೇಲಿಂದ ೧೯೬೧–೬೨ನೇ ಸಾಲಿಗೆ ೨೪,೦೦,೦೦೦ ರೂ.ಗಳೆಂದು ಪರಿಶೀಲಿಸಲಾಗಿದೆ. ಒಟ್ಟಿಗೆ ಇಲಾಖೆಗೆ ೪೯,೦೦,೦೦೦ ರೂಪಾಯಿಗಳು ಆದಾಯವಾಗಿ ದೊರೆಯುವುದು. ಈ ಹಣ ಗ್ರಂಥಾಲಯಕ್ಕೆ ಬೇಕಾಗುವ ಸಾಹಿತ್ಯ ಸಾಮಗ್ರಿಗಳಿಗೆ ವಿನಿಯೋಗ ಮಾಡಲಾಗುವುದು.

ನಾಲ್ಕನೇ ಪಂಚವಾರ್ಷಿಕ ಅವಧಿಯಲ್ಲಿ ಅಂದರೆ ೧೯೬೯–೭೦ರಿಂದ ೧೯೭೩–೭೪ರ ಒಳಗೆ ೨೦ ಲಕ್ಷ ರೂ.ಗಳನ್ನು ಗ್ರಂಥಾಲಯ ಸೇವಾಭಿವೃದ್ಧಿಗೆ ಮೀಸಲಾಗಿರಿಸಿದೆ. ಈ ಅವಧಿಯಲ್ಲಿ ೨೦ ಲಕ್ಷ ರೂ.ಗಳನ್ನು ಈ ಕೆಳಗೆ ಕಾಣಿಸಿದ ವಿಭಾಗಗಳಿಗೆ ಖರ್ಚುಮಾಡಲು ನಿರ್ಧರಿಸಿದೆ:

(ಅ) ನಗರ ಕೇಂದ್ರ ಮತ್ತು ಜಿಲ್ಲಾ ಕೇಂದ್ರ ಗ್ರಂಥಾಲಯಗಳ ಸಿಬ್ಬಂದಿ;

(ಆ) ಬೆಂಗಳೂರು, ಹುಬ್ಬಳ್ಳಿ–ಧಾರವಾಡ, ಮೈಸೂರು ನಗರ ಕೇಂದ್ರಗಳ ಕಟ್ಟಡಗಳ ಸಲುವಾಗಿ;

(ಇ) ಇಲಾಖೆಗೆ ಬೇಕಾಗುವ ವಾಹನಗಳನ್ನು ಕೊಳ್ಳುವುದಕ್ಕೆ, ಹಾಗೂ

(ಈ) ಮೈಸೂರು ರಾಜ್ಯ ಕೇಂದ್ರ ಗ್ರಂಥಾಲಯಕ್ಕೆ ಬೇಕಾಗುವ ಉಪಕರಣಗಳನ್ನು ಒದಗಿಸುವುದಕ್ಕೆ–

ರಾಜ್ಯದಲ್ಲಿ ಓದುಬಲ್ಲವರ ಸಂಖ್ಯೆ ೬೦–೭೦ ಲಕ್ಷಕ್ಕಿಂತ ಹೆಚ್ಚಾಗಲಿಕ್ಕಿಲ್ಲ. ಸಧ್ಯ ಗ್ರಂಥಾಲಯಗಳ ಉಪಯೋಗ ಪಡೆಯುತ್ತಿರುವವರ ಸಂಖ್ಯೆಯೇ ೪–೫ಲಕ್ಷವಾಗಬಹುದು. ಆದರೆ ೧೯೭೭ರ ಹೊತ್ತಿಗೆ ರಾಜ್ಯದಲ್ಲೆಲ್ಲಾ ಗ್ರಂಥಾಲಯ ಸೌಕರ್ಯ ಒದಗಿಸಿ ಓದಬಲ್ಲಯಾವತ್ತರಿಗೂ ಗ್ರಂಥಾಲಯಗಳ ಉಪಯೋಗ ಲಭ್ಯವಾಗುವಂತೆ ಮಾಡಲು ಯೋಚಿಸಲಾಗಿದೆ. ಇದೊಂದು ಮಹತ್ವಾಕಾಂಕ್ಷೆಯ ಯೋಜನೆ. ಈಗ ನಗರ ಕೇಂದ್ರ ಗ್ರಂಥಾಲಯಗಳು ಮತ್ತು ಜಿಲ್ಲಾ ಕೇಂದ್ರ ಗ್ರಂಥಾಲಯಗಳೂ ಅವುಗಳ ಶಾಖಾ ಗ್ರಂಥಾಲಯಗಳಲ್ಲಿ ಸುಮಾರು ೨,೫೦೦ ಪತ್ರಿಕೆಗಳ ದಿನಪತ್ರಿಕೆಗಳು ಸೇರಿಸಿ ನಿಯತಕಾಲಿಕೆ ಪತ್ರಗಳನ್ನು ಕೊಂಡು ಸಾರ್ವಜನಿಕರಿಗೆ ಉಪಯೋಗವಾಗುವಂತೆ ಮಾಡಿದೆ.

ಬೆಂಗಳೂರು ನಗರ ಗ್ರಂಥಾಲಯ ಮತ್ತು ಶಾಖೆಗಳಲ್ಲಿ ಸುಮಾರು ೧,೫೦,೦೦೦ ಗ್ರಂಥಗಳೂ ಹಾಗೂ ಸಾವಿರದ ವರೆಗೆ ನಿಯತಕಾಲಿಕ ಪತ್ರಿಕೆಗಳನ್ನು ತರಿಸಲು ವ್ಯವಸ್ಥೆ ಮಾಡಿ ಬೆಂಗಳೂರಿಗೆ ಬಹುದಿನಗಳಿಂದ ಕೊರತೆಯಾಗಿದ್ದ ಗ್ರಂಥಾಲಯ ಸೇವೆ ಲಭ್ಯವಾಗುತ್ತಿದೆ.

ಹುಬ್ಬಳ್ಳಿ–ಧಾರವಾಡ ನಗರ ಕೇಂದ್ರ ಗ್ರಂಥಾಲಯ ಕಟ್ಟಡದಲ್ಲಿ ೮೦೦ರಿಂದ ೧,೦೦೦ ಜನ ವಾಚಕರು ಓದುವಂತೆ ಸೌಕರ್ಯ ಕಲ್ಪಿಸಲಾಗಿದೆ. ಲಕ್ಷಗಟ್ಟಲೆ ಗ್ರಂಥಗಳನ್ನು, ನಿಯತಕಾಲಿಕೆಗಳನ್ನು ಇಡುವ ಏರ್ಪಾಡು ಮಾಡಲಾಗಿದೆ. ಗ್ರಂಥಾಲಯ ಇಲಾಖೆಯಿಂದ ಸ್ಥಾಪಿಸಲಾಗುತ್ತಿರುವ ಈ ಕಟ್ಟಡವು ಗ್ರಂಥಾಲಯ ಚಳುವಳಿಗೆ

ಪೂರಕವಾಗಲು ಮತ್ತು ಗ್ರಂಥಾಲಯ ಸೇವೆಯನ್ನು ತ್ವರಿತಗತಿಯಿಂದ ಮುಂದುವರೆಸುವಲ್ಲಿ ಒಂದು ಮೈಲುಗಲ್ಲಾಗಿದೆ. ಅದೇ ರೀತಿ ಕೋಲಾರ ಜಿಲ್ಲೆಯ ಚಿಂತಾಮಣಿ, ಬಳ್ಳಾರಿ ಹಾಗೂ ಮೈಸೂರು ನಗರದಲ್ಲಿ ಕಟ್ಟಡಗಳನ್ನು ಕಟ್ಟಲು ಏರ್ಪಾಡು ನಡೆದಿದೆ.

ಮೈಸೂರು ರಾಜ್ಯ ಕೇಂದ್ರ ಗ್ರಂಥಭಂಡಾರದ ಒಂದು ಸಮೀಕ್ಷೆ

ಹಳೆಯ ಮೈಸೂರು ರಾಜ್ಯದ ಶಿಲ್ಪಿ ಶ್ರೀ ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದ(೧೯೧೨-೧೮) ಅವಧಿಯಲ್ಲಿ ಜನತೆಯ ಜ್ಞಾನಪ್ರಸಾರಕ್ಕೆಂದು ಯೋಜನೆ ಸಿದ್ಧವಾಗಿ ಅದನ್ನು ಅನುಷ್ಠಾನಕ್ಕೆ ತಂದ ಫಲವಾಗಿ ೧೯೧೪ರಲ್ಲಿ ಬೆಂಗಳೂರು ಹಾಗೂ ಮೈಸೂರು ನಗರಗಳಲ್ಲಿ ಸಾರ್ವಜನಿಕ ಗ್ರಂಥಭಂಡಾರಗಳು ಸ್ಥಾಪನೆಯಾದವು. ಬೆಂಗಳೂರು ನಗರದ ಕಬ್ಬನ್ ಪಾರ್ಕ್‌ನಲ್ಲಿ ಶೋಭಿಸುತ್ತಿರುವ ಗ್ರಂಥಭಂಡಾರವೂ ಇವುಗಳಲ್ಲೊಂದು.

೧೯೧೪–೧೫ರಲ್ಲಿ ಪ್ರಾರಂಭವಾದ ಸಾರ್ವಜನಿಕ ಗ್ರಂಥಭಂಡಾರದ ಕಟ್ಟಡವು ಸರ್ಕಾರಕ್ಕೆ ಒಳಪಟ್ಟಿತ್ತಾದರೂ ಗ್ರಂಥಭಂಡಾರದ ಒಡೆತನ ಬಹಳ ಕಾಲದವರೆಗೂ ಖಾಸಗಿಯವರ ಅಧೀನದಲ್ಲಿತ್ತು. ಆಗ ಗ್ರಂಥಭಂಡಾರಕ್ಕೆ ಸರ್ಕಾರ ನೀಡುತ್ತಿದ್ದ ವಾರ್ಷಿಕ ಸಹಾಯಧನ ಇಪ್ಪತ್ತೈದು ಸಹಸ್ರ ರೂಪಾಯಿಗಳು. ಸುಮಾರು ಐವತ್ತು ವರ್ಷಗಳ ವರೆಗೆ ಖಾಸಗಿಯವರ ಆಡಳಿತದಲ್ಲಿದ್ದು ಅಷ್ಟಾಗಿ ಗ್ರಂಥಭಂಡಾರದ ಏಳಿಗೆಯೇ ಕಾಣಲಿಲ್ಲ.

೧೯೬೬ನೇ ಡಿಸೆಂಬರ್ ೫ರಂದು ಗ್ರಂಥಭಂಡಾರವನ್ನು ಸರ್ಕಾರವು ತನ್ನ ವಶಕ್ಕೆ ತೆಗೆದುಕೊಂಡಿತು. (೧೯೬೬ರ ಸರ್ಕಾರದ ನಿಯಮಾವಳಿ ಪ್ರಕಾರ) ವಿದ್ಯಾಮಂತ್ರಿಗಳು ಅಧ್ಯಕ್ಷರಾಗಿ ರಚಿತವಾದ ಸಮಿತಿಯಲ್ಲಿ ಇಪ್ಪತ್ತೆರಡು ಜನ ಪ್ರತಿಷ್ಠಿತ ವ್ಯಕ್ತಿಗಳು ಸದಸ್ಯರಿರುವರು. ಸರ್ಕಾರವು ೧೯೬೬ರ ಡಿಸೆಂಬರ್‌ನಲ್ಲಿ ತನ್ನ ಅಧೀನಕ್ಕೆ ಒಳಪಡಿಸಿಕೊಂಡಿತಾದರೂ, ಗ್ರಂಥಭಂಡಾರದ ಏಳಿಗೆಯ ಕಾರ್ಯಾರಂಭವಾದುದು ೧೯೬೭ರ ಮೇ ತಿಂಗಳಿನ.

ಸರ್ಕಾರವು ತನ್ನ ವಶಕ್ಕೆ ತೆಗೆದುಕೊಂಡ ಸಮಯದಲ್ಲಿ ಪಟ್ಟಿಯಲ್ಲಿದ್ದ ಪುಸ್ತಕಗಳ ಸಂಖ್ಯೆ ಐವತ್ತೈದು ಸಾವಿರ. ಆದರೆ ಕೈಗೆ ದೊರೆತ ಪುಸ್ತಕಗಳ ಸಂಖ್ಯೆ ಸುಮಾರು ಮೂವತ್ತೈದು ಸಾವಿರ ಮಾತ್ರ. ಅವುಗಳಲ್ಲೂ ಜೀರ್ಣಾವಸ್ಥೆಯಲ್ಲಿದ್ದ ಪುಸ್ತಕಗಳೇ ಹೆಚ್ಚು. ಪುಸ್ತಕಗಳ ಜೋಡಣೆಯಲ್ಲಾಗಲೀ ಅವುಗಳನ್ನು ಇಡುವುದರಲ್ಲಾಗಲೀ ಉತ್ತಮ ವ್ಯವಸ್ಥೆಯಿರಲಿಲ್ಲ. ಅಲ್ಲದೆ ಆಸನದ ವ್ಯವಸ್ಥೆಯಂತೂ ಅಸ್ತವ್ಯಸ್ತ.

ರಾಜ್ಯ ಕೇಂದ್ರ ಗ್ರಂಥಾಲಯ ಪ್ರಾರಂಭವಾಗಿ ಕೇವಲ ನಾಲ್ಕೈದು ವರ್ಷಗಳಲ್ಲಿ ಗ್ರಂಥಭಂಡಾರದಲ್ಲಿ ಆದ ಮಹತ್ವದ ಬದಲಾವಣೆ ಮತ್ತು ಸುಧಾರಣೆ ಕಂಡು ಬಾಯಿತುಂಬಾ ಹೊಗಳದೆ ಇರುವವರಿಲ್ಲ. ತರಬೇತಿ ಹೊಂದಿದ ಸಿಬ್ಬಂದಿಯು ವಾಚಕರ ಬೇಡಿಕೆಗಳನ್ನು ಲಕ್ಷಿಸಿ ಸದಾ ಸೇವೆಸಲ್ಲಿಸುತ್ತಿರುವುದು ಅನೇಕರನ್ನು ಮುಗ್ಧರನ್ನಾಗಿ ಮಾಡಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಈಗ ಗ್ರಂಥಭಂಡಾರದ ಸ್ವರೂಪವೇ ಆಮೂಲಾಗ್ರವಾಗಿ ಬದಲಾಗಿದೆ. ಸೂಚೀಕರಣ ಮತ್ತು ವರ್ಗೀಕರಣಗಳು ನಿರ್ದಿಷ್ಟಪಡಿಸಿದ ಪದ್ಧತಿಗಳಿಗನುಸಾರವಾಗಿ ಹಾಗೂ ಶಾಸ್ತ್ರೀಯವಾಗಿ ನಡೆದಿರುವುದರಿಂದ ಸರಿಯಾದ ಸಮಯದಲ್ಲಿ, ಸರಿಯಾದ ಗ್ರಂಥ, ಸರಿಯಾದ ವ್ಯಕ್ತಿಗೆ ದೊರಕಿಸಲು ಅನುವಾಗಿದೆ. ಸಧ್ಯ ಸುಮಾರು ೧,೦೦,೦೦೦ ಗ್ರಂಥಗಳಿಂದ ಇದು ರಾಜ್ಯದಲ್ಲೇ ಅತಿ ದೊಡ್ಡ ಮತ್ತು ಹಿರಿದಾದ ಸಾರ್ವಜನಿಕ ವಾಚನಾಲಯವೆನಿಸಿದೆ. ಸುಮಾರು ೧,೨೦೦ — ೧,೩೦೦ ವಾಚಕರು ನಿತ್ಯದರ್ಶನವೀಯುವರು. ೫೦೦ರಿಂದ ೬೦೦ ಗ್ರಂಥಗಳನ್ನು ಎರವಲಾಗಿ ವಾಚಕರು ಕೊಂಡೊಯ್ಯುವರು. ಮೊದಲಿನ ಅಂಕಿ ಸಂಖ್ಯೆಗಳನ್ನು ಗಮನಕ್ಕೆ ತೆಗೆದುಕೊಂಡಾಗ ಶೀಘ್ರದಲ್ಲಿ ಮಹತ್ತರವಾದ ಬದಲಾವಣೆ ಆದದ್ದು ಕಂಡುಬರುತ್ತದೆ.

ಪತ್ರಿಕೆಗಳು

ಇಂದು ರಾಜ್ಯ ಕೇಂದ್ರ ಗ್ರಂಥಭಂಡಾರಕ್ಕೆ ಪ್ರಪಂಚದ ಮೂಲೆ ಮೂಲೆಗಳಿಂದ ಸುದ್ದಿ ಸಮಾಚಾರಗಳನ್ನು ಹೊತ್ತು ತರುವ ದಿನಪತ್ರಿಕೆಗಳ ಸಂಖ್ಯೆ ಇಪ್ಪತ್ತಮೂರು, ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ತೆಲುಗು, ತಮಿಳು ಮುಂತಾದ ಭಾಷೆಗಳಲ್ಲಿ ಪ್ರಾಕೃತಿಕ ವಿಜ್ಞಾನ, ಗಣಿತ, ಭೌತಶಾಸ್ತ್ರ, ಎಂಜಿನಿಯರಿಂಗ್, ಮತ್ತು ಯಂತ್ರವಿಜ್ಞಾನ, ರಾಸಾಯನ ಶಾಸ್ತ್ರ, ಜೀವ

ಶಾಸ್ತ್ರ, ಭೂಗರ್ಭಶಾಸ್ತ್ರ, ಸಸ್ಯಶಾಸ್ತ್ರ, ಕೃಷಿ, ವೈದ್ಯಕೀಯ, ಮತ–ಧರ್ಮ, ಲಲಿತಕಲೆ, ತತ್ವಶಾಸ್ತ್ರ, ಭಾಷಾಶಾಸ್ತ್ರ, ಶಿಕ್ಷಣ, ಮನಶ್ಶಾಸ್ತ್ರ, ಭೂಗೋಳ, ಇತಿಹಾಸ, ರಾಜನೀತಿಶಾಸ್ತ್ರ, ಅರ್ಥಶಾಸ್ತ್ರ, ಸಮಾಜ ಶಾಸ್ತ್ರ ಮತ್ತು ಕಾನೂನುಗಳಿಗೆ ಸಂಬಂಧಪಟ್ಟ ವಾರ ಪತ್ರಿಕೆಗಳೂ, ಮಾಸಪತ್ರಿಕೆಗಳೂ, ದ್ವೈಮಾಸಿಕ, ತ್ರೈಮಾಸಿಕ ಹೀಗೆ ಐದುನೂರಾ ಎಪ್ಪತ್ತು (೫೭೦) ಪತ್ರಿಕೆಗಳು ಈ ಗ್ರಂಥಭಂಡಾರವನ್ನು ಸೇರುತ್ತವೆ. ಇಷ್ಟೇ ಅಲ್ಲದೆ ಕೊಡುಗೆಯ ರೂಪದಲ್ಲಿ ಎಂಭತ್ತೆಂಟು (೮೮) ಪತ್ರಿಕೆಗಳೂ ಸಹ ಬರುತ್ತಿವೆ.

ದಿನೇ ದಿನೇ ಅತ್ಯಾಧುನಿಕವಾಗಿಯೂ ನೂತನ ತಂತ್ರಗಳನ್ನು ಅಳವಡಿಸುವುದರಲ್ಲಿಯೂ, ಹುರುಪು–ಹುಮ್ಮಸ್ಸಿನ ನೌಕರವರ್ಗವು ಯಶಸ್ವಿಯಾಗಿರುವುದಕ್ಕೆ ಸರ್ಕಾರದ ಹಾಗೂ ಇಲಾಖಾ ಮುಖ್ಯಾಧಿಕಾರಿಗಳವರ ಆಡಳಿತ ಮತ್ತು ಪ್ರೋತ್ಸಾಹವೇ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ. ವಿದ್ಯಾರ್ಥಿಗಳಿಗೆ ಅನುಕೂಲ ಮಾಡುವ ಸಲುವಾಗಿ ಅವರ ಪಠ್ಯಪುಸ್ತಕಗಳನ್ನು ದೊರಕಿಸಿ ಕೊಡುವ ಯೋಜನೆಯಂತೂ ಮೆಚ್ಚತಕ್ಕದ್ದು. ಇವುಗಳನ್ನು ಉಪಯೋಗಿಸಿಕೊಳ್ಳಲು ವಿದ್ಯಾರ್ಥಿಗಳು ಗುಂಪುಗುಂಪಾಗಿ ಬರುತ್ತಿದ್ದಾರೆ. ಪುಸ್ತಕಗಳ ಈ ಸದುಪಯೋಗವನ್ನು ಕಂಡಾಗ ವ್ಯಯವಾಗುವ ಹಣ ಸಾರ್ಥಕವಾಗುತ್ತದೆ ಎಂಬ ಸಮಾಧಾನ ಬಾರದೆ ಇರದು. ಅಪರಾಹ್ನ ವೇಳೆಯಲ್ಲಿ ಅಂತೂ ಗ್ರಂಥಾಲಯದಲ್ಲಿ ಸ್ಥಳದ ಅಭಾವ ಬಹಳಾಗುವುದು. ಶೀಘ್ರದಲ್ಲಿ ಈ ಕೇಂದ್ರ ಗ್ರಂಥ ಭಂಡಾರಕ್ಕೆ ಅನುಕೂಲವಾದ ಕಟ್ಟಡ ವ್ಯವಸ್ಥೆಯಾಗದಿದ್ದಲ್ಲಿ ಬಹಳೇ ತೊಂದರೆಯಾಗುವ ಸಂಭವವಿದೆ.

ಮಕ್ಕಳ ವಿಭಾಗ

ದೊಡ್ಡವರ ಮಾತು ಬೇರೆ, ಆದರೆ ಪುಟ್ಟಮಕ್ಕಳಿಗೆ ಏನೂ ಬೇಡವೇ ? ಪುಟ್ಟಮಕ್ಕಳಿಗಾಗಿಯೇ ಪ್ರತ್ಯೇಕ ವಿಭಾಗವಿರುವುದು ಒಂದು ವಿಶೇಷ. ಪುಟ್ಟ ಮಕ್ಕಳಿಗಾಗಿಯೇ ತರಿಸಲಾದ ವಿಶೇಷವಾದ ಬಣ್ಣಬಣ್ಣದ ಪುಸ್ತಕಗಳ ರಾಶಿಯೇ ಇಲ್ಲಿದೆ. ಆಬಾಲ ವೃದ್ಧರಾಗಿ ಎಲ್ಲರಿಗೂ ಈ ಗ್ರಂಥಭಂಡಾರವು ಅವಶ್ಯಕವಾಗಿ ಬೇಕಾದರೆ, ಅಂಧರನ್ನೂ ಕಡೆಗಾಣಿಸದ ಅಂಧರಿಗಾಗಿ ಲೈಬ್ರರಿ ವ್ಯವಸ್ಥೆಯೂ ಇಲ್ಲಿದೆ.

ಭಾರತದ ಡೆಹರಾಡೂನ್‌ನಿಂದ ಬ್ರೈಲ್ ಲಿಪಿಯ ಪುಸ್ತಕಗಳನ್ನು ಪಡೆಯಲಾಗಿದೆ. ಸಾಲದ್ದಕ್ಕಾಗಿ ಅಮೆರಿಕದ ಲೈಬ್ರರಿಯಿಂದ ಬ್ರೈಲ್ ಲಿಪಿಯ ಪುಸ್ತಕಗಳನ್ನು ಪಡೆಯಲು ಸಂಧಾನ ನಡೆದಿದೆ. ಈಗ ಈ ವಿಭಾಗಕ್ಕೆ ಪ್ರತ್ಯೇಕ ಸ್ಥಳಾವಕಾಶವು ಇಲ್ಲದ ಕಾರಣ ಸೇವಾಕ್ಷೇತ್ರಕ್ಕೆ ಈ ದಿಶೆಯಲ್ಲಿ ಸ್ವಲ್ಪ ಅಡಚಣೆಯಾಗಿದೆ.

ಈ ಗ್ರಂಥಭಂಡಾರಕ್ಕೆ ಪುಸ್ತಕಗಳನ್ನು ಕೊಳ್ಳುವಾಗ ವಿನೂತನ ಮಾರ್ಗವನ್ನು ಅನುಸರಿಸಲಾಗುತ್ತಿದೆ. ವಿತರಕರಿಂದ ಬಂದ ಪುಸ್ತಕಗಳ ಪಟ್ಟಿಯನ್ನು ಆಯಾ ಪುಸ್ತಕಗಳಿಗೆ ಸಂಬಂಧಿಸಿದ ತಜ್ಞರೊಡನೆ ಸಮಾಲೋಚನೆ ನಡೆಸಿ ಅವರು ಸೂಚಿಸಿದ ಪುಸ್ತಕಗಳನ್ನು ಮಾತ್ರ ಈ ಗ್ರಂಥಭಂಡಾರಕ್ಕೆ ಕೊಳ್ಳಲಾಗುವುದು. ಸಿಬ್ಬಂದಿಯವರೂ ಅನೇಕ ಮೂಲಗಳಿಂದ ಪಟ್ಟಿಗಳನ್ನು ತಯಾರಿಸಿ ವಿಷಯ ತಜ್ಞರ ಅವಗಾಹನೆಗೆ ತಂದು ಅವಶ್ಯವೆನಿಸಿರುವ ಗ್ರಂಥಗಳನ್ನು ಕೊಂಡಿಡಲು ವ್ಯವಸ್ಥೆ ಮಾಡಲಾಗುವುದು. ಈ ವಿಧಾನದಿಂದ ಗ್ರಂಥಭಂಡಾರಕ್ಕೆ ಅರ್ಹವೆನಿಸಿದ ಪುಸ್ತಕಗಳು ಮಾತ್ರ ಸೇರ್ಪಡೆಯಾಗುತ್ತಿವೆ.

ರಾಜ್ಯದಲ್ಲಿ ಯಾವ ಗ್ರಂಥವೇ ಪ್ರಕಟವಾಗಲಿ, ಪುಕ್ಕಟೆಯಾಗಿ ಅದರ ಪ್ರತಿಯೊಂದು, ರಾಜ್ಯ ಗ್ರಂಥಾಲಯಕ್ಕೆ ದೊರಕುವ ವ್ಯವಸ್ಥೆ ನಡೆದಿದೆ. ಈವರೆವಿಗೆ ೨೫,೦೦೦ಕ್ಕೂ ಮಿಕ್ಕು ಗ್ರಂಥ ಶೇಖರಣೆಯಾಗಿದೆ. ಇದರೊಂದಿಗೆ ರಾಜ್ಯದಲ್ಲಿ ಪ್ರಕಟವಾದ ಕಾಪಿರೈಟ್ ಪುಸ್ತಕಗಳನ್ನು ಶೇಖರಿಸಿ ಅವುಗಳನ್ನು ಜೋಪಾನವಾಗಿಡುವುದು ರಾಜ್ಯ ಕೇಂದ್ರ ಗ್ರಂಥ ಭಂಡಾರದ ಒಂದು ಮಹತ್ವದ ಕಾರ್ಯವಾಗಿದೆ. ಇಷ್ಟು ವ್ಯಾಪಕ ತಳಹದಿಯ ಮೇಲೆ ರಾಜ್ಯವೊಂದರಲ್ಲಿ ಗ್ರಂಥಾಲಯ ಸೌಲಭ್ಯ ನಡೆದಿರುವುದು ಇದೇ ಪ್ರಥಮ. ರಾಜ್ಯದಲ್ಲಿ ಓದುವ ಅಪೇಕ್ಷೆಯುಳ್ಳವರಿಗೆಲ್ಲಾ ಉಚಿತವಾಗಿ ಪುಸ್ತಕಗಳ ಸೌಲಭ್ಯ ಸಿಗಬೇಕೆಂಬುದು ಯೋಜನೆಯ ಮೂಲೋದ್ದೇಶವಾಗಿದೆ. ಸರಸ್ವತಿಯ ಅರ್ಚನೆಗೆ ಖರ್ಚಾಗುವ ಲಕ್ಷಾಂತರ ರೂಪಾಯಿಗಳ ಪ್ರಯೋಜನವಾಗುವುದು ಅದನ್ನು ಉಪಯೋಗಿಸಿಕೊಂಡಾಗ ಮಾತ್ರ. ಆಗಲೇ ಪ್ರಗತಿ, ಸಮೃದ್ಧಿ, ಸಂತೃಪ್ತಿ. ಧೀಮಂತವಾಗಿ ನಿಂತ ಭವ್ಯಕಟ್ಟಡ, ಅಂದೇ ತಾಯಿ ಸರಸ್ವತಿಯ ತೌರಾಗಿ ಕಂಗೊಳಿಸುವುದು. ರಾಷ್ಟ್ರದ ಯಾವುದೇ ಭಂಡಾರದಲ್ಲಿದ್ದರೂ ಬೇಕಾಗಿರುವ

ಗ್ರಂಥಗಳನ್ನು ಎರವಲಾಗಿ ತರಿಸಿಕೊಡುವ ಸೌಲಭ್ಯ ಸಾಧ್ಯತೆಯನ್ನು ವಿವೇಚಿಸಿ ಕಾರ್ಯರೂಪಕ್ಕೆ ತರುವ ಹವಣಿಕೆ ನಡೆದಿವೆ.

ಗ್ರಂಥಾಲಯಗಳ ಕಟ್ಟಡಗಳು

ಸುಮಾರು ೧೫ ಲಕ್ಷ ರೂ.ಗಳ ವೆಚ್ಚದಿಂದ ಧಾರವಾಡದಲ್ಲಿ ಕಟ್ಟಲಾಗುತ್ತಿರುವ ಹುಬ್ಬಳ್ಳಿ-ಧಾರವಾಡ ಕೇಂದ್ರ ಗ್ರಂಥಾಲಯ ಕಟ್ಟಡದ ಶಂಕುಸ್ಥಾಪನೆಯನ್ನು ಹಿಂದಿನ ರಾಜ್ಯಪಾಲರಾದ ಶ್ರೀ ಧರ್ಮವೀರ ಅವರು ಡಿಸೆಂಬರ್ ೩೦, ೧೯೭೧ರಂದು ನೆರವೇರಿಸಿದರು. ಇಲಾಖೆಯವರು ನಿರ್ಮಿಸುತ್ತಿರುವ ಕಟ್ಟಡಗಳಲ್ಲಿ ಇದೇ ಮೊದಲನೆಯದಾಗಿದೆ. ಈ ಕಟ್ಟಡವು ರಾಜ್ಯದಲ್ಲಿ ವಿಶೇಷ ಗ್ರಂಥಭಂಡಾರವೆನಿಸುತ್ತದೆ.

ಮೈಸೂರು ರಾಜ್ಯದಲ್ಲಿ ಸಾರ್ವಜನಿಕರಿಗಾಗಿ ಗ್ರಂಥಾಲಯ ಸೇವೆ ಸಲ್ಲಿಸಲು ವ್ಯಯವಾಗುತ್ತಿರುವ ಲಕ್ಷಾಂತರ ರೂಪಾಯಿಗಳು ಸರಿಯಾದ ರೀತಿಯಲ್ಲಿ ಉಪಯೋಗವಾದಾಗಲೇ ಅದರ ಸಾರ್ಥಕತೆ ಹೆಚ್ಚುತ್ತದೆ. ಇದಕ್ಕೆಲ್ಲಾ ಸರ್ಕಾರದೊಂದಿಗೆ ಸಾರ್ವಜನಿಕ ಸಹಕಾರವೂ ಬೇಕಾಗಿರುತ್ತದೆ.

ಪ್ರಪಂಚದಲ್ಲಿ ಪ್ರತಿ ವರ್ಷ ಪ್ರಕಟವಾಗುವ ಗ್ರಂಥಗಳ ಸಂಖ್ಯೆ

ಭಾಷೆ	ಗ್ರಂಥಗಳು	ಭಾಷೆ	ಗ್ರಂಥಗಳು
ರಷ್ಯನ್	೫೮,೧೦೦	ಇಟಾಲಿಯನ್	೧೩,೦೦೦
ಇಂಗ್ಲಿಷ್	೪೨,೦೦೦	ಪೋರ್ತುಗೀಸ್	೮,೦೦೦
ಜರ್ಮನ್	೩೩,೫೦೦	ಸ್ವೀಡಿಷ್	೬,೦೦೦
ಜಪಾನೀ	೨೫,೦೦೦	ರುಮೇನಿಯನ್	೫,೬೦೦
ಫ್ರೆಂಚ್	೧೬,೦೦೦	ಇತರ	೩೦,೬೭೦
ಸ್ಪ್ಯಾನಿಷ್	೧೫,೦೦೦		

ತಾಂತ್ರಿಕ ಗ್ರಂಥಗಳು

ರಷ್ಯನ್	೨೮,೦೦೦	ಇಟಾಲಿಯನ್	೨,೩೦೦
ಇಂಗ್ಲಿಷ್	೯,೨೦೦	ಫ್ರೆಂಚ್	೨,೨೦೦
ಜರ್ಮನ್	೬,೨೦೦	ಸ್ಪ್ಯಾನಿಷ್	೧,೮೦೦
ಜಪಾನೀ	೪,೦೦೦		

ರಂ. ಶ್ರೀ. ಮುಗಳಿ

ಖಾಸಗೀ ಪುಸ್ತಕ ಭಂಡಾರಗಳು

ಖಾಸಗೀ ಪುಸ್ತಕ ಭಂಡಾರವೆಂದರೆ ಯಾವೊಬ್ಬ ವ್ಯಕ್ತಿ ಖಾಸಗಿಯಾಗಿ ಪ್ರೀತಿಯಿಂದ ಸ್ವಂತ ಉಪಯೋಗಕ್ಕಾಗಿ ಇಟ್ಟುಕೊಂಡ ಗ್ರಂಥ ಸಂಗ್ರಹ. ಇಂಥ ಗ್ರಂಥ ಭಂಡಾರಗಳು ಪ್ರಾಚೀನ ಕಾಲದಲ್ಲಿ ಹೆಚ್ಚಾಗಿ ಇದ್ದುವು. ಆಗ ಸಾರ್ವಜನಿಕ ಗ್ರಂಥ ಭಂಡಾರಗಳು ಒಂದು ಮಠ ಅಥವಾ ಅಗ್ರಹಾರದಲ್ಲಿ ಕ್ವಚಿತ್ತಾಗಿ ಇರುತ್ತಿದ್ದವು. ಆದರೆ ವಿದ್ವಾಂಸರೂ ಅಧ್ಯಾಪಕರೂ ಆದ ಗುರುಗಳು ತಮ್ಮ ಮನೆಗಳಲ್ಲಿಯೆ ಶಿಷ್ಯರಿಗೆ ಪಾಠಪ್ರವಚನಗಳನ್ನು ಹೇಳುತ್ತಿದ್ದರಲ್ಲದೆ ಅವರ ವ್ಯಾಸಂಗಕ್ಕಾಗಿ ಅವಶ್ಯಗ್ರಂಥಗಳನ್ನು ತಮ್ಮ ಸಂಗ್ರಹದಿಂದ ಕೊಡುತ್ತಿದ್ದರು. ಈ ಗ್ರಂಥಗಳು ಓಲೆಗರಿಯಲ್ಲಿ ಮೊದಲು, ಆಮೇಲೆ ಕಾಗದದಲ್ಲಿ ಬರೆದವು ಆಗಿರುತ್ತಿದ್ದವು. ಅವುಗಳ ಸಂಖ್ಯೆಯೂ ತೀರ ಪರಿಮಿತವಾಗಿರುತ್ತಿತ್ತು. ಅವು ಪೀಳಿಗೆಯಿಂದ ಪೀಳಿಗೆಗೆ ಬಳುವಳಿಯಾಗಿ ದೊರೆಯುತ್ತಿದ್ದುವು. ಮುದ್ರಣಯಂತ್ರ ಶೋಧದ ಪರಿಣಾಮವಾಗಿ ಅವು ಹೆಚ್ಚಿನ ಪ್ರಮಾಣದಲ್ಲಿ ಅಚ್ಚಾಗಿ ದೊರೆಯತೊಡಗಿದವು. ಅಂದಿನಿಂದ ಗ್ರಂಥ ಭಂಡಾರಗಳ ವಿಚಾರದಲ್ಲಿ ಹೊಸ ಯುಗವು ಮೊದಲಾಯಿತು.

ಈಗ ಅಚ್ಚಾದ ಕನ್ನಡ ಪುಸ್ತಕಗಳ ಸಂಖ್ಯೆ ಬೆಳೆದಿದೆ; ಇನ್ನೂ ಬೆಳೆಯುವುದರಲ್ಲಿದೆ. ಆದರೆ ಖಾಸಗೀ ಪುಸ್ತಕ ಭಂಡಾರಗಳ ಸಂಖ್ಯೆ ಆ ಮಾನದಿಂದ ತೀರ ಕಡಿಮೆ. ಅಂದರೆ ಗ್ರಂಥಗಳು ಕಡಿಮೆ ಇದ್ದ ಕಾಲಕ್ಕೆ ಖಾಸಗೀ ಪುಸ್ತಕ ಭಂಡಾರಗಳು ಹೆಚ್ಚಾಗಿದ್ದವೆಂದೂ ಗ್ರಂಥಗಳು ಹೆಚ್ಚಾಗಿರುವ ಆಧುನಿಕ ಕಾಲದಲ್ಲಿ ಖಾಸಗೀ ಪುಸ್ತಕ ಭಂಡಾರಗಳು ಕಡಿಮೆಯಾಗಿವೆಯೆಂದೂ ತೋರುತ್ತದೆ. ಈ ವ್ಯಸ್ತ ಪ್ರಮಾಣಕ್ಕೆ ಕಾರಣ ಏನು ?........ಒಂದೇ ಅಲ್ಲ, ಅನೇಕ ಕಾರಣಗಳಿವೆ. ಸಾರ್ವಜನಿಕ ಗ್ರಂಥಭಂಡಾರಗಳಲ್ಲಿಯೂ ವಿದ್ಯಾಸಂಸ್ಥೆಗೆ ಸಂಬಂಧಪಟ್ಟ ಗ್ರಂಥ ಭಂಡಾರಗಳಲ್ಲಿಯೂ ಆಸಕ್ತಿಯುಳ್ಳವರಿಗೆ ಬೇಕಾದ ಪುಸ್ತಕಗಳು ಓದಲು ದೊರೆಯುತ್ತಿರುವ ಕಾರಣ ಖಾಸಗಿಯಾಗಿ ಗ್ರಂಥಭಂಡಾರಗಳನ್ನು ಮಾಡಿಕೊಳ್ಳುವ ಅವಶ್ಯಕತೆ ಅವರಿಗಿಲ್ಲ; ಅವಶ್ಯಕತೆ ಇದ್ದಲ್ಲಿ ಆರ್ಥಿಕ ಅನುಕೂಲತೆ ಅನೇಕರಿಗಿಲ್ಲ. ಮುಖ್ಯವಾಗಿ ಇಂದಿನ ವಿದ್ಯಾಭ್ಯಾಸ ಪದ್ಧತಿಯಲ್ಲಿ ಪರೀಕ್ಷೆಗಳಿಗೆ ದೊರಕಿರುವ ಅವಾಸ್ತವ ಮಹತ್ವದಿಂದ ವಿದ್ಯಾರ್ಥಿಗಳು ಹೆಚ್ಚಾಗಿ ಪರೀಕ್ಷಾರ್ಥಿಗಳಾಗಿ ಪಠ್ಯಪುಸ್ತಕಗಳನ್ನೋ ಅವುಗಳ ಮಾರ್ಗದರ್ಶಿಕೆ (ಗೈಡು)ಗಳನ್ನೋ ಕೊಂಡು ಕೆಲಸ ಮುಗಿದ ಮೇಲೆ ಅವನ್ನು ಎಲ್ಲಿಯೋ ಎಸೆದುಬಿಡುತ್ತಾರೆ. ಬಹುಸಂಖ್ಯೆ ವಿದ್ಯಾರ್ಥಿಗಳಲ್ಲಿ ಸಾಮಾನ್ಯಜ್ಞಾನಕ್ಕಾಗಿ, ಸದಭಿರುಚಿಯ ಸಂವರ್ಧನೆಗಾಗಿ ಒಳ್ಳೆಯ ಪುಸ್ತಕಗಳನ್ನು ಕೊಂಡು ತಮ್ಮವೆಂದು ಅವನ್ನು ಸಂಗ್ರಹಿಸಿಡಬೇಕು ಎಂಬ ದೃಷ್ಟಿಯಿಲ್ಲ. ವಿದ್ಯಾಭ್ಯಾಸವು ಮುಗಿದ ಮೇಲೆ ತಾವು ಯಾವುದೇ ಉದ್ಯೋಗದಲ್ಲಿ ತೊಡಗಿದರೂ ತಮ್ಮದೇ ಒಂದು ಗ್ರಂಥ ಸಂಗ್ರಹವಿರಬೇಕು, ಅದನ್ನು ಅಚ್ಚುಕಟ್ಟಾಗಿ ಇಟ್ಟುಕೊಳ್ಳಬೇಕು, ಕಾಲಕಾಲಕ್ಕೆ ಅದನ್ನು ಬೆಳೆಸುತ್ತ ಹೋಗಬೇಕು ಎಂದು ಅವರಿಗೆ ತೋರುವುದಿಲ್ಲ. ತಂತಮ್ಮ ಮನೆಗಳಲ್ಲಿ ಹಿರಿಯರು ಮಾಡಿದ ಗ್ರಂಥ ಭಂಡಾರಗಳಿಂದ ಬೆಳೆಯುವ ಮಕ್ಕಳು ಪುಸ್ತಕಗಳನ್ನು ಆರಿಸಿಕೊಂಡು ಓದಿ ಅದರಿಂದ ಒಳ್ಳೆಯ ಸಂಸ್ಕಾರ ಪಡೆಯಬೇಕೆಂದು ಯಾರೂ ಅವರಿಗೆ ತಿಳಿಸಿ ಕೊಡುವುದಿಲ್ಲ. ಕೆಲವರ ಮನೆಗಳಲ್ಲಿ ಖಾಸಗೀ ಗ್ರಂಥಭಂಡಾರಕ್ಕೆ

ಬೇಕಾಗುವ ಜಾಗ ಇರುವುದಿಲ್ಲ. ಪುಸ್ತಕಗಳನ್ನಿಡಲು ಕಪಾಟುಗಳಿರುವುದಿಲ್ಲ. ಇಷ್ಟೆಲ್ಲ ಇದ್ದರೂ ಅವನ್ನು ವರ್ಗೀಕರಿಸಿ ಅಚ್ಚುಕಟ್ಟಾಗಿ ಒಂದು ಕೆಟಲಾಗಿನಲ್ಲಿ ಬರೆದು ಕಾಲಕಾಲಕ್ಕೆ ಅವುಗಳಿಗೆ ಗೆದ್ದಲಿ ಹತ್ತದಂತೆ ನೋಡಿಕೊಳ್ಳುವ ವ್ಯವಸ್ಥೆಯಿರಬೇಕು; ಇದನ್ನು ಮಾಡಲು ಹಲವರು ಸಿದ್ಧರಿರುವುದಿಲ್ಲ. ಬೇರೆಯವರಿಗೆ ಪುಸ್ತಕಗಳನ್ನು ಓದಲು ಕೊಡುವುದಕ್ಕೆ ಸಹ ಒಂದು ಯೋಗ್ಯ ವ್ಯವಸ್ಥೆಬೇಕು. ಅದನ್ನೂ ಕೆಲವರು ಮಾಡಲು ಬಯಸುವುದಿಲ್ಲ. ಅಲಕ್ಷ್ಯದ ಮೂಲಕ ಪುಸ್ತಕಗಳು ಒಂದೊಂದಾಗಿ ಕೈಬಿಡಲು ತೊಡಗುತ್ತವೆ.

ಖಾಸಗೀ ಪುಸ್ತಕ ಭಂಡಾರಗಳು ಏತಕ್ಕಿರಬೇಕು ಎಂಬ ಮೂಲಭೂತ ಪ್ರಶ್ನೆಯನ್ನು ಕೆಲವರು ಕೇಳ ಬಹುದು. ಖಾಸಗಿ ಆಸ್ತಿ, ವಸ್ತು ಒಡವೆ ಏತಕ್ಕಿರಬೇಕು ಎಂಬ ಪ್ರಶ್ನೆಯನ್ನು ಇವರು ಕೇಳುವರೆ? ಕೇಳಲಾರರು. ಹಾಗೇ ಪುಸ್ತಕ ಭಂಡಾರವೆಂದರೆ ವಿಚಾರಧನದ ಆಗರ, ಸ್ಫೂರ್ತಿಯ ಸಾಗರ. ಅದು ಬರೀ ನೋಡುವುದಕ್ಕೆ ಚೆಂದ ವಾದ ವಸ್ತುಗಳ "ಶೋಕೇಸ್." ಆದರೆ, ಅದರ ಪ್ರಯೋ ಜನ ಏನೂ ಇಲ್ಲ. ಖಾಸಗೀ ಪುಸ್ತಕ ಭಂಡಾರಗಳಲ್ಲಿಯ ಪುಸ್ತಕಗಳ ಸಂಖ್ಯೆ ಕಡಿಮೆಯಾಗಿರಬಹುದು. ವೈವಿಧ್ಯ ಅವುಗಳಲ್ಲಿ ಇರದೆ ಹೋಗಬಹುದು. ಆದರೆ ಅವನ್ನೆಲ್ಲ ಹೆಚ್ಚಾಗಿ ಭಂಡಾರಗಳ ಯಜಮಾನರು ಆಸಕ್ತಿಯಿಂದ ಓದಿ ಮನನ ಮಾಡಿರಬೇಕು, ಭಕ್ತಿಯಿಂದ ಪಾರಾಯಣ ಮಾಡಿರಬೇಕು. ಹೊಸದಾಗಿ ಈ ಭಂಡಾರಗಳಿಗೆ ಸೇರುವ ಪುಸ್ತಕಗಳು ಇಂಥ ಭಂಡಾರಿಗಳ- ಓದಬೇಕೆಂಬ ಲವಲವಿಕೆ ಯಿಂದ ಕೊಂಡು ತಂದ ಕೃತಿಗಳಾಗಿರಬೇಕು. ಪುಸ್ತಕಗಳ ಆಯ್ಕೆಯಲ್ಲಿ ಅವರ ಸದಭಿರುಚಿ ಮತ್ತು ವಿಶಿಷ್ಟ ಆಸಕ್ತಿ ಗಳ ಸಾಕ್ಷ್ಯ ಕಂಡು ಬರಬೇಕು. ವಿದ್ಯಾರ್ಥಿದೆಸೆಯಿಂದ ಪುಸ್ತಕ ಸಂಗ್ರಹದ ಹವ್ಯಾಸವನ್ನು ಬೆಳೆಸಿಕೊಂಡು ಬಂದರೆ ಇದು ಸಾಧ್ಯವಾಗುತ್ತದೆ. ಇದರಿಂದ ವ್ಯಕ್ತಿಯ ಜೀವನದಲ್ಲಿ ಒಂದು ಸ್ಫೂರ್ತಿಕೇಂದ್ರ ನಿರ್ಮಾಣವಾಗು ತ್ತದೆ. ಅವನ ವಿಕಾಸಕ್ಕೆ ನೆರವಾಗುವ, ವಿಷಾದದಲ್ಲಿದ್ದಾಗ ಧೈರ್ಯ ಕೊಡುವ, ಕತ್ತಲೆಯಲ್ಲಿ ದಾರಿಕಾಣದೆ ತಡ ಕಾಡುವಾಗ ಬೆಳಕಿನ ಬಿಂದುವಾಗಿ ಮುಂದೆ ಕರೆ ದೊಯ್ಯುವ ಕಾರ್ಯವನ್ನು ಅದು ಮಾಡುತ್ತದೆ. ಎಂದಿಗೂ ಬಳಿಯಿರುವ ಜೀವದ ಗೆಳೆಯ, ಆಪ್ತಬಂಧು, ಆದರ್ಶ ಗುರು ಪುಸ್ತಕ ರೂಪದಲ್ಲಿ ಅವನಿಗೆ ದೊರೆಯು ತ್ತಾನೆ. ತನ್ನದೇ ಆದ ಪುಸ್ತಕದಲ್ಲಿ ಅವನು ಮಹತ್ವದ ವಾಕ್ಯಗಳನ್ನು ಗುರುತಿಸಿರುತ್ತಾನೆ; ತಿಳಿಯದ ಪದಗಳ ಅರ್ಥವನ್ನು ಬರೆದಿರುತ್ತಾನೆ. ಅವನ್ನು ಮತ್ತೆ ಮತ್ತೆ ಓದುತ್ತಿರುತ್ತಾನೆ. ಬೇರೆ ಹೊಸದಾಗಿರುವ ಬೇರೆ ಪ್ರತಿ ಗಿಂತ ಹಳೆಯದಾದ ಅವನು ಬಳಸಿ ಮಾಸಿದ ಪುಸ್ತಕವು ಅವನಿಗೆ ಹೆಚ್ಚು ಪ್ರಿಯವಾಗುತ್ತದೆ. ಅವನ ಪುಸ್ತಕ ಹವ್ಯಾಸದಿಂದ ಮನೆಯಲ್ಲಿ ಓದಬಲ್ಲ ಕಿರಿಯರು, ಹಿರಿ ಯರು ಎಲ್ಲರೂ ಪ್ರಭಾವಿತರಾಗುತ್ತಾರೆ. ಅದೊಂದು ಮನೆಯಲ್ಲಿ ಪರಂಪರೆಯಾಗಿ ಬೆಳೆದುಕೊಂಡು ಬರುತ್ತದೆ. ಇಂದು ನಾವು ರಾಜಕೀಯ ಸಾಮಾಜಿಕ ಜೀವನದಲ್ಲಿ ಕಾಣುತ್ತಿರುವ ಹಲವು ಸಮಸ್ಯೆಗಳಿಗೆ ಮೂಲಕಾರಣ ವೆಂದರೆ ಮಾನಸಿಕ ಸ್ಥೈರ್ಯದ ಮತ್ತು ವಿಚಾರವಂತಿ ಕೆಯ ಅಭಾವ. ಈ ಅಭಾವವನ್ನು ಹೋಗಲಾಡಿಸಲು ಖಾಸಗೀ ಪುಸ್ತಕ ಭಂಡಾರಗಳು ನಮಗೆ ನೆರವಾಗುತ್ತವೆ.

ಇಂಥ ಭಂಡಾರಗಳಿಂದ ವ್ಯಕ್ತಿಯ ಹಣ ವೆಚ್ಚವಾಗ ಬಹುದು, ಆದರೆ ಅವನ ಗುಣ ಬೆಳೆಯುತ್ತದೆ, ಚಾರಿತ್ರ್ಯ ವರ್ಧಿಸುತ್ತದೆ. ಅಲ್ಲದೆ, ಪುಸ್ತಕಗಳ ಮಾರಾಟ ಹೆಚ್ಚಿ ಲೇಖಕರಿಗೂ ಪ್ರಕಾಶಕರಿಗೂ ಜೀವನೋಪಾಯವಾಗಿ ಗ್ರಂಥೋದ್ಯಮದ ಏಳಿಗೆಯಾಗುತ್ತದೆ, ಹೊಸ ಹೊಸ ಪ್ರಕಟನೆಗಳಿಗೆ ಉತ್ತೇಜನ ದೊರೆಯುತ್ತದೆ.

ಕರ್ನಾಟಕದಲ್ಲಿ ಅಪರೂಪವಾಗಿಯಾದರೂ ಕೆಲವು ಖಾಸಗೀ ಗ್ರಂಥಭಂಡಾರಗಳಿವೆ. ಅವನ್ನು ಬೆಳೆಸಿದ ಮಹನೀಯರು ತಮ್ಮ ಸರಕಾರೀ ಉದ್ಯೋಗ ಬೇರೆ ಯಾಗಿದ್ದರೂ ಆ ನಿಮಿತ್ತ ಊರಿಂದೂರಿಗೆ ವರ್ಗಾವಣೆ ಆಗುತ್ತಿದ್ದರೂ ಅತ್ಯಂತ ಆಸಕ್ತಿಯಿಂದ ಉನ್ನತಮಟ್ಟದ ಗ್ರಂಥಗಳನ್ನೂ ಪತ್ರಿಕೆಗಳನ್ನೂ ಕನ್ನಡ ನಾಡಿನಲ್ಲಿ ಮಾತ್ರವಲ್ಲ ಪರದೇಶದಿಂದ ತರಿಸಿ ಗ್ರಂಥ ಸಂಗ್ರಹ ಮಾಡಿದ್ದಾರೆ, ವ್ಯವಸ್ಥಿತವಾಗಿ ಇಟ್ಟುಕೊಂಡಿದ್ದಾರೆ. ಸ್ವಂತವಾಗಿ ಓದುವ ಹವ್ಯಾಸವನ್ನು ಬೆಳೆಸಿಕೊಂಡಿದ್ದಾರೆ. ಬೇರೆ ಕೆಲವು ಮಹನೀಯರು ಸಾಹಿತಿಗಳು ಅಥವಾ ಪ್ರಾಧ್ಯಾಪಕರಾಗಿದ್ದು ಸಾವಿರಾರು ಗ್ರಂಥಗಳನ್ನು ಸಂಗ್ರಹ ಮಾಡಿ ಪುಟ್ಟ ಗ್ರಂಥಾಲಯಗಳನ್ನು ನಿರ್ಮಾಣ ಮಾಡಿದ್ದಾರೆ. ಅವುಗಳಲ್ಲಿ ಕೆಲವು ಕೊಂಡಂಥವು, ಅನೇಕ ಕಾಣಿಕೆಯಾಗಿ ಬಂದುವು, ಇನ್ನು ಕೆಲವು ವಿಮರ್ಶೆಗೆ ಬಂದಂಥವು ಇರುತ್ತವೆ. ನನ್ನದೂ ಇಂಥ ಒಂದು ಗ್ರಂಥ ಭಂಡಾರವಿದೆ, ಅವುಗಳ ವರ್ಗೀಕರಣವಾಗಿದ್ದು ಅದೇ ರೀತಿ ಜೋಡಿಸಿದ್ದೂ ಆಗಿದೆ. ಕ್ಯಾಟಲಾಗ್ ಕೂಡ ಸಿದ್ಧ ವಾಗಿದೆ. ಈ ಸಂಗ್ರಹದಲ್ಲಿ ನಾನು ವಿದ್ಯಾರ್ಥಿಯಾಗಿರುವ

ಸಮಯದಲ್ಲಿ ಬಹುಮಾನವಾಗಿ ಪಡೆದ ಪುಸ್ತಕಗಳೂ ಇವೆ. ಅವನ್ನು ನಾನು ಹೆಮ್ಮೆಯಿಂದ ಕಾಪಾಡಿಕೊಂಡು ಬಂದಿದ್ದೇನೆ.

ಖಾಸಗೀ ಗ್ರಂಥಭಂಡಾರಗಳು ಇನ್ನೂ ಹೆಚ್ಚಾಗಿ ಬೆಳೆಯಬೇಕಾದರೆ ವಾಚನಾಭಿರುಚಿಯನ್ನೂ ತಕ್ಕ ವಾತಾವರಣವನ್ನೂ ಉಂಟುಮಾಡಬೇಕು. ಮದುವೆ ಮುಂತಾದ ಸಮಾರಂಭಗಳಲ್ಲಿ ಶಾಲಾ ವಾರ್ಷಿಕ ದಿನ ಸಂದರ್ಭಗಳಲ್ಲಿ ಪುಸ್ತಕಗಳನ್ನೇ ಉಡುಗೊರೆಯಾಗಿ ಬಹುಮಾನವಾಗಿ ಕೊಡುವ ಪದ್ಧತಿಯನ್ನು ನಾವು ಹೆಚ್ಚಿನ ಪ್ರಮಾಣದಲ್ಲಿ ಜಾರಿಗೆ ತರಬೇಕು. ಅಂದರೆ ಇಂಥ ಪುಸ್ತಕಗಳು ಖಾಸಗೀ ಗ್ರಂಥ ಭಂಡಾರಗಳ ಮೂಲಧನವಾಗುತ್ತವೆ. ತರುವಾಯ ಕೆಲವೇ ವರ್ಷಗಳಲ್ಲಿ ಅವು ಮಡದಿ–ಮಕ್ಕಳೆಲ್ಲರೂ ಓದಿ ಆನಂದಿಸುವ ಮನೆಮನೆಯ ಪುಟ್ಟ ಗ್ರಂಥಾಲಯಗಳಾಗಿ ಪರಿಣಮಿಸುತ್ತವೆ, ನಾಡಿನ ತುಂಬ ಜ್ಞಾನದ ಮತ್ತು ಸ್ಫೂರ್ತಿಯ ಪ್ರಸಾರಕೇಂದ್ರಗಳಾಗುತ್ತವೆ.

ಅವರಿವರ ದೃಷ್ಟಿಯಲ್ಲಿ "ಗ್ರಂಥ"

ಒಳ್ಳೆಯ ಗ್ರಂಥಗಳನ್ನು ಓದದ ಸುಶಿಕ್ಷಿತನಿಗೂ ಅವುಗಳನ್ನು ಓದಲರಿಯದ ನಿರಕ್ಷರಿಗೂ ವಿಶೇಷ ವ್ಯತ್ಯಾಸವಿಲ್ಲ.

—ನೆಂಕೇನ್

ಗ್ರಂಥಗಳಲ್ಲಿ ಕೇವಲ ಎರಡು ವರ್ಗ : ಉತ್ತಮವಾಗಿ ಬರೆದವುಗಳು ; ಹೊಲಸಾಗಿ ಬರೆದವುಗಳು.

—ಆಸ್ಕರ್‌ವಾಯಿಲ್ಡ್

ಗ್ರಂಥವು ಬೇಕಾದಾಗ, ಬೇಕಾದ ಹೊತ್ತಿನಲ್ಲಿ, ಬೇಕಾದ ಸ್ಥಳದಲ್ಲಿ ಮತ್ತು ಬೇಕಾದ ಪರಿಸ್ಥಿತಿಯಲ್ಲಿ ತಿಳಿವಳಿಕೆ ನೀಡುವ ಸದಾಸಿದ್ಧಿ ಜ್ಞಾನನಿಧಿ.

—ಎಸ್. ಆರ್. ಗುಂಜಾಳ

ಗ್ರಂಥಾಲಯವು ಶಿಕ್ಷಣದ ಹೃದಯವಾಗಿದೆ.

—ಪೌಲ ಬಕ್

ಗ್ರಂಥಗಳಿಲ್ಲದೆ ಹೋದರೆ ದೇವರು ಮೌನಿಯಾಗುವನು ; ನ್ಯಾಯದೇವತೆ ನಿದ್ರಿಸುವಳು ; ಸೃಷ್ಟಿ ವಿಜ್ಞಾನವು ಸ್ಥಗಿತಗೊಳ್ಳುವುದು ; ತತ್ವಜ್ಞಾನವು ಕುಂಟುವುದು ; ಅಕ್ಷರಗಳು ಅರ್ಥಹೀನವಾಗುವುವು ; ಸಚರಾಚರಗಳು ಮಬ್ಬುಗವಿಯಲ್ಪಡುವುವು.

—ಬಾರ್ಥೋಲನಿ

ಚತುರ್ಮುಖ

● ಎಸ್. ಆರ್. ಗುಂಜಾಳ

ಗ್ರಂಥಾಲಯವನ್ನು ಕೇಂದ್ರ ಬಿಂದುವನ್ನಾಗಿಟ್ಟು ಕೊಂಡು ಅಲ್ಲಿ ನಡೆಯುವ ಜ್ಞಾನದಾಸೋಹ ವನ್ನು ಸೂಕ್ಷ್ಮವಾಗಿ ನೋಡಿದರೆ ನಾಲ್ಕು ವ್ಯಕ್ತಿಗಳು ಕಾರ್ಯನಿರತರಾಗಿರುವದು ನಮಗೆ ಕಂಡುಬರುತ್ತದೆ. ಓದುಗರು ಜ್ಞಾನದ ಹಸಿವೆಯಿಂದ ಜ್ಞಾನಛತ್ರವಾದ ಗ್ರಂಥಾಲಯಕ್ಕೆ ಬರುವರು. ಅವರ ಮನದಣಿಯೆ ಜ್ಞಾನ ದೋಗರವನ್ನು ಉಣಬಡಿಸುವಲ್ಲಿ ಗ್ರಂಥಾಲಯದ ತೆರೆಯ ಮರೆಯಲ್ಲಿ ನಾಲ್ವರು ಸೇವೆ ಸಲ್ಲಿಸುವರು. ಅವರೆಂದರೆ– ಗ್ರಂಥಕರ್ತ, ಪ್ರಕಾಶಕ, ಗ್ರಂಥವ್ಯಾಪಾರಿ ಮತ್ತು ಗ್ರಂಥಭಂಡಾರಿ. ಈ ನಾಲ್ವರು ಗ್ರಂಥದಲ್ಲಿ ಅಡಕ ವಾಗಿರುವ ಅರಿವನ್ನು ಪ್ರಚುರಪಡಿಸುವಲ್ಲಿ ಎಡೆಬಿಡದೆ ನಿರತರಾಗಿರಬೇಕಾಗುತ್ತದೆ. ನಾಲ್ವರಲ್ಲಿ ಒಬ್ಬರಿಗೆ ಮರೆವು ಆವರಿಸಿದರೆ ಗ್ರಂಥದ ಜೀವನ ಸಾರ್ಥಕವಾಗದು; ಪ್ರಯೋಜನಕಾರಿಯಾಗದು. ಆದುದರಿಂದ ಈ ನಾಲ್ವ ರಲ್ಲಿ ಅನ್ಯೋನ್ಯತೆ, ಸಹಕಾರ, ಸೌಹಾರ್ದತೆಗಳಿರುವದು ಅತ್ಯವಶ್ಯ. ನಮ್ಮ ನಾಡಿನಲ್ಲಿ ಇಂದು ಈ ನಾಲ್ವರ ಮುಖಗಳು ನಾಲ್ಕು ದಿಕ್ಕಿಗೆ ಹೊರಳಿದ್ದು ಗ್ರಂಥಪ್ರಚಾರ ಕಾರ್ಯ ಕುಂಠಿತವಾಗಿದೆಯೆಂದು ಹೇಳಬಹುದು. ಇವ ರೆಲ್ಲರು ಒಬ್ಬರನ್ನೊಬ್ಬರು ದೃಷ್ಟಿಸಿ ಸಹಕರಿಸಿದರೆ ಗ್ರಂಥ ಪ್ರಚಾರಕಾರ್ಯವೂ ಚನ್ನಾಗಿ ನಡೆಯುವದಲ್ಲದೆ ಸ್ವಲಾಭವೂ ಉಂಟಾಗುವದರಲ್ಲಿ ಸಂದೇಹವಿಲ್ಲ. ಸಕಲರ ಹಿತವನ್ನು ಸಾಧಿಸಿ ಸಮಾಜ ಸ್ವಾಸ್ಥ್ಯವನ್ನು ಕಾಯ್ದುಕೊಂಡು ಹೋಗುವಲ್ಲಿ ಇವರಿಗೆ ಅವರವರ ಕರ್ತವ್ಯದರಿವನ್ನುಂಟು ಮಾಡಿ ಕೊಡುವದು ಎಂದಿಗಿಂತ ಇಂದು ಅವಶ್ಯವಾಗಿದೆ.

೧. ಗ್ರಂಥಕರ್ತ

ಗ್ರಂಥಗಳು ಗ್ರಂಥಕರ್ತನ ಮಾನಸ ಪುತ್ರರಿದ್ದಂತೆ. ಹೊತ್ತು, ಹೆತ್ತು, ಲಾಲನೆ ಪಾಲನೆ ಮಾಡಿ, ಮುದ್ದಾಡಿ ಬೆಳೆಸಿದ ಮಕ್ಕಳನ್ನು ತಾಯಿಯು ಪ್ರೀತಿಸು ವಂತೆ ಗ್ರಂಥಕರ್ತರು ತಮ್ಮ ಗ್ರಂಥಗಳನ್ನು ಬಹು ಅಕ್ಕ ರತೆಯಿಂದ ಕಾಣುವರು; ಸಂತೋಷಪಡುವರು. ಹೃದಯ ಅರಳಿ, ಮನಸ್ಸು–ಬುದ್ಧಿಗಳು ಪರಿಪಕ್ವಗೊಂಡು ಪರಿಪಾಕ ವಾಗಿ ಗ್ರಂಥರೂಪಗೊಳ್ಳುತ್ತದೆ. ಲೇಖಕನು ಏನೇ ಬರೆ ದರೂ ತನ್ನ ಆತ್ಮ ಸಂತೋಷಕ್ಕಾಗಿ ಬರೆಯುತ್ತಾನೆಂದು ಕೆಲವರ ಅಭಿಮತ. ಆದರೆ ಅದು ಪರಿಪೂರ್ಣ ಸತ್ಯ ವಲ್ಲ.

ಗ್ರಂಥರಚನೆಯಲ್ಲಿ ಗ್ರಂಥಕರ್ತನು ಕೆಲವು ಆಶೋತ್ತರ ಗಳನ್ನು ಇಟ್ಟುಕೊಂಡಿರುತ್ತಾನೆ. ಕನ್ನಡದ ಆದಿಕವಿ ಮತ್ತು ಮಹಾಕವಿ ಎಂದು ಹೆಸರಾದ ಪಂಪನು ತನ್ನ ಆದಿ ಪುರಾಣದಲ್ಲಿ ಈ ಬಗ್ಗೆ ಒಂದು ಮಹತ್ವದ ಮಾತನ್ನು ಹೇಳಿರುವನು.

> "ಕವಿತೆಯೊಳಾಸೆಗೆಯ್ದ ಫಲಮಾವುದೋ?
> ಪೂಜೆ, ನೆಗಳ್ತೆ, ಲಾಭವೆಂಬಿವೆ ವಲಂ"

ಆನಂದದೊಂದಿಗೆ ಕೀರ್ತಿ ಮತ್ತು ಆರ್ಥಿಕ ಲಾಭ ಅಥವಾ ಲೌಕಿಕ ಸುಖ ಇವು ಲೇಖಕನಿಗೆ ದೊರೆಯು ವದು ನಿಶ್ಚಯವೆಂದು ಪಂಪನ ನಂಬಿಕೆ. ಇಂದಿನ ಗ್ರಂಥ ಕರ್ತರು ಈ ನಂಬಿಕೆಗೆ ಅಪವಾದವಾಗಿಲ್ಲ. ಕೃತಿ ರಚನೆ ಯನ್ನು ಇಂದು ಒಂದು ಉಪ ಜೀವನವನ್ನಾಗಿ ಮಾಡಿ ಕೊಂಡವರುಂಟು. ಆದರೆ ಬರೆದದ್ದೆಲ್ಲ ಗ್ರಂಥವಲ್ಲ; ಗ್ರಂಥ ವಾಗಬಾರದು. ಜ್ಞಾನ ವೃಕ್ಷವನ್ನು ಚಿಗುರಿಸುವಲ್ಲಿ ಗ್ರಂಥ ಸಹಾಯವಾಗಬೇಕು. ಅಂದರೆ ಗ್ರಂಥಕರ್ತನಿಗೆ ಕೀರ್ತಿ ಬರುವದಲ್ಲದೆ ಧನಲಾಭವೂ ದೊರೆಯುವದು. ತೃಪ್ತಿಯಂತೂ ಸರಿಯೇ ಸರಿ.

೨. ಗ್ರಂಥಪ್ರಕಾಶಕ

ಗ್ರಂಥಕರ್ತನು ಗ್ರಂಥವನ್ನು ಬರೆದು ಮುಚ್ಚಿಟ್ಟು ಕೊಂಡರಾಗದು. ಅದು ಸಹಸ್ರಾರು ಪ್ರತಿಗಳಲ್ಲಿ ಮುದ್ರಣ ಗೊಂಡು ಪ್ರಕಟವಾಗಬೇಕು. ಗ್ರಂಥಾಲಯ ಶಾಸ್ತ್ರದ ಪ್ರಥಮ ಸೂತ್ರದಂತೆ ಅದು ಸಕಲರಿಗೆ ಓದಲು ಸುಲಭ ದಲ್ಲಿ ದೊರೆಯಬೇಕು. ಅದಕ್ಕಾಗಿ ಗ್ರಂಥಪ್ರಕಾಶನವನ್ನೇ ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡ ಗ್ರಂಥ ಪ್ರಕಾಶಕರು ಮುಂದೆ ಬರುತ್ತಾರೆ. ಗ್ರಂಥಕರ್ತರಷ್ಟೇ ಹೊಣೆ ಇವರ ದಾಗಿದೆ. ಗ್ರಂಥವನ್ನು ಮುದ್ರಿಸುವಲ್ಲಿ ಅವರು ಹಣ

ವನ್ನು ತೊಡಗಿಸಬೇಕಾಗುತ್ತದೆ. ಉತ್ತಮ ಕಾಗದ, ಆಕರ್ಷಕ ಮುದ್ರಣ, ಗಟ್ಟಿಮುಟ್ಟಾದ ರಟ್ಟುಕಟ್ಟು, ಅಂದವಾದ ಮೇಲ್ಕವಚದೊಂದಿಗೆ ಗ್ರಂಥವು ಹೊರಬೀಳುವಂತೆ ಪ್ರಯತ್ನಿಸುವದು ಪ್ರಕಾಶಕನ ಕರ್ತವ್ಯ. ಗ್ರಂಥಕರ್ತನು ತನ್ನ ಪರಿಪಕ್ವ ಅನುಭವದ ಸಾರವನ್ನು ಜೀವಂತಗೊಳಿಸಿಕೊಡುತ್ತಾನೆ. ಜೀವಕ್ಕೆ ತಕ್ಕ ಶರೀರ ರಚನೆಯ ಕಾರ್ಯವನ್ನು ಪ್ರಕಾಶಕ ಮಾಡುತ್ತಾನೆ. ಜೀವ, ಶರೀರಗಳ ಅನ್ಯೋನ್ಯ ಸಂಬಂಧದಿಂದಲೇ ತಾನೆ ಸತ್ಕಾರ್ಯಸಿದ್ಧಿ? ಇಲ್ಲಿ ನೆನಪಿಟ್ಟುಕೊಳ್ಳಬೇಕಾದ ಒಂದು ಮಾತಿದೆ. ಗ್ರಂಥ ಕರ್ತನಿಗೆ ಕೀರ್ತಿಯೊಂದಿಗೆ ಹಣವು ದೊರೆಯಬೇಕಷ್ಟೆ? ಅವನ ದುಡಿಮೆಗೆ ತಕ್ಕ ಫಲ ಸಿಗಬೇಕು. ಪ್ರಕಾಶಕನು ಗ್ರಂಥಕರ್ತನಿಗೆ ಯೋಗ್ಯ ಗೌರವಧನವನ್ನು ಕೊಡಲೇಬೇಕು. ಪ್ರತಿಶತ ಇಂತಿಷ್ಟು ಪ್ರತಿಫಲವನ್ನು ಗ್ರಂಥದ ಬೆಲೆಯಮೇಲೆ ನಿರ್ಣಯಿಸಬೇಕಾಗುತ್ತದೆ. ಜೊತೆಗೆ ಮುದ್ರಣದ ಕಾನೂನಿನಂತೆ ಹಕ್ಕುಗಳ ಬಗೆಗೂ ಒಪ್ಪಂದವಿರಬೇಕಾಗುತ್ತದೆ. ಆ ದೃಷ್ಟಿಯಿಂದ ನಮ್ಮ ನಾಡಿನ ಗ್ರಂಥಕರ್ತರ ಹಾಗೂ ಲೇಖಕರ ನಡುವಿನ ಸಂಬಂಧ ಅಷ್ಟಾಗಿ ಬೆಳೆದು ಬಂದಿಲ್ಲ, ಮೈತ್ರಿ ಏರ್ಪಟ್ಟಿಲ್ಲ. ಒಬ್ಬಿಬ್ಬ ಪ್ರಕಾಶಕರನ್ನು ಬಿಟ್ಟರೆ ಉಳಿದವರೆಲ್ಲ ಲೇಖಕನ ಮೂಗಿಗೆ ತುಪ್ಪ ಹಚ್ಚುವವರೇ ! ಆದಷ್ಟು ಕಡಿಮೆ ಗೌರವ ಧನವನ್ನು ಲೇಖಕನಿಗೆ ಕೊಟ್ಟು ಅತ್ಯಧಿಕ ಲಾಭಮಗಾಗಬೇಕೆಂಬ ಅತ್ಯಾಶೆಯ ಪ್ರಕಾಶಕರಿಂದ ನಾಡುಡಿಗೆ ಹಾನಿಯುಂಟು. ತನ್ನ ಶ್ರಮಕ್ಕೆ ತಕ್ಕ ಫಲವು ೊರೆಯದ ಅತೃಪ್ತ ಬರಹಗಾರನಿಂದ ಉತ್ತಮಗ್ರಂಥಚನೆಯನ್ನಪೇಕ್ಷಿಸುವದು ಸಾಧ್ಯವಿಲ್ಲ. ಆದುದರಿಂದ ವರಿಬ್ಬರಲ್ಲಿ ಪರಸ್ಪರ ತಿಳಿವಳಿಕೆ, ಸಹಕಾರ ಸಹಾಯ ಾಡುವ ಬುದ್ಧಿ ಇರುವದು ಅವಶ್ಯ.

. ಗ್ರಂಥವ್ಯಾಪಾರಿಗಳು

ಗ್ರಂಥ ಪ್ರಕಾಶಕರೇ ಗ್ರಂಥ ವ್ಯಾಪಾರಿಗಳಿರುವದುಂಟು, ಂತಹರ ಸಂಖ್ಯೆ ವಿರಳ. ಆದರೆ ಪ್ರಕಾಶಕರಿಂದ ಗ್ರಂಥಳ ಮುಖ ಬೆಲೆಯ ಮೇಲೆ ಇಂತಿಷ್ಟು ರಿಯಾಯತಿ ಮಿಶನ್) ಪಡೆದು ಗ್ರಂಥಾಲಯಗಳಿಗೆ ಮಾರಾಟ ಾಡುವದು ಇವರ ಮುಖ್ಯ ಕರ್ತವ್ಯ. ಕಮಿಶನ್ ಣದ ಮೇಲೆ ಇವರ ಜೀವನ. ಆದುದರಿಂದ ಪ್ರಕಾಶಕನು ಂಥವನ್ನು ಮಾರುಕಟ್ಟೆಗೆ ತರುವ ಮುನ್ನ ಅದರ ನಿಶ್ಚಿತ ಾರಾಟದ ಬೆಲೆಯನ್ನು ನಿಗದಿ ಪಡಿಸುತ್ತಾನೆ. ಗ್ರಂಥದ ಒಟ್ಟು ಬೆಲೆಯಲ್ಲಿ ಲೇಖಕನಿಗೆ ಸಲ್ಲಿಸಿದ ಗೌರವ ಧನ, ಮುದ್ರಣ ವೆಚ್ಚ, ವ್ಯಾಪಾರಿಗೆ ಬಿಡಬೇಕಾದ ಕಮಿಶನ್ ಮತ್ತು ತನಗೆ ಬರಬೇಕಾದ ಲಾಭ—ಇಷ್ಟೆಲ್ಲ ಸೇರಿರುತ್ತದೆ. ಇದಲ್ಲದೆ ಗ್ರಂಥಕ್ಕಿರುವ ಬೇಡಿಕೆಯ ಮೇಲಿಂದಲೂ ಬೆಲೆಯು ಹೆಚ್ಚು-ಕಡಿಮೆಯಾಗುವದುಂಟು. ನಮ್ಮ ರಾಜ್ಯದಲ್ಲಿ ಪ್ರಕಾಶಕ ಹಾಗೂ ಮಾರಾಟಗಾರರ ಮಧ್ಯದಲ್ಲಿ ಒಂದಿಲ್ಲೊಂದು ಬಗೆಯ ಸ್ನೇಹವೇರ್ಪಟ್ಟಿದೆಯಾದರೂ ಅದರ ಬೆಳವಣಿಗೆಯಾಗಿಲ್ಲ. ಇಬ್ಬರೂ ಹೆಚ್ಚು ಲಾಭಕ್ಕಾಗಿ ಆಶೆ ಮಾಡುವವರಾದ್ದರಿಂದ ಒಬ್ಬರಿಗೊಬ್ಬರು ಹಣ ಕೊಡುಕೊಳ್ಳುವಲ್ಲಿ ಮೋಸ-ವಂಚನೆಗಳಿಗೆ ಎಡೆ ಮಾಡಿಕೊಡುವ ಸಂಭವವೇ ಹೆಚ್ಚು. ಪ್ರಕಾಶಕರು ಮತ್ತು ವ್ಯಾಪಾರಿಗಳು ಗ್ರಂಥ ಪ್ರಕಟನೆ ಮಾರಾಟಕಾರ್ಯಗಳಲ್ಲಿ ಸಲಹೆ-ಸೂಚನೆಗಳನ್ನು ಪರಸ್ಪರರಲ್ಲಿ ಒಪ್ಪಿಕೊಳ್ಳಬೇಕಾಗುತ್ತದೆ. ನಂಬಿಕೆ, ಪ್ರಾಮಾಣಿಕತೆಗಳ ತಳಹದಿಯ ಮೇಲೆ ಮಾಡಿದ ವ್ಯಾಪಾರದಲ್ಲಿ ತೃಪ್ತಿಯೂ ಉಂಟು, ಲಾಭವೂ ಉಂಟು. ಗ್ರಂಥ ಪ್ರಕಾಶಕ ಮತ್ತು ಗ್ರಂಥ ವ್ಯಾಪಾರಿಗಳಲ್ಲಿ ತಾಳ ಮೇಳವಿಲ್ಲದುದರಿಂದಲೂ, ದುರಾಶೆ ಹೆಚ್ಚಾದುದರಿಂದಲೂ ಗ್ರಂಥಕರ್ತನಿಗೆ ಸಾಕಷ್ಟು ಪುರಸ್ಕಾರ, ಪ್ರೋತ್ಸಾಹ ಸಿಕ್ಕದೆ ಪ್ರಯೋಜನಕಾರಿಯಾದ ಗ್ರಂಥಗಳ ನಿರ್ಮಾಣ ಕಾರ್ಯ ಮಂದ ಗತಿಯಲ್ಲಿ ಸಾಗಿದೆ. ಗ್ರಂಥಕರ್ತ-ಪ್ರಕಾಶಕ-ವ್ಯಾಪಾರಿ ಈ ಮೂವರ ಮುಪ್ಪರಿಯಲ್ಲಿ ಶ್ರೇಷ್ಠ ಗ್ರಂಥಗಳು ಬೆಳಕು ಕಾಣಬಲ್ಲವು. ಹಾಗೆ ಬೆಳಕು ಕಾಣುವದು ಸಮಾಜದ ಹಿತದೃಷ್ಟಿಯಿಂದ ಇಷ್ಟ. ಉತ್ತಮ ಗ್ರಂಥಗಳು ಸಂಸ್ಕೃತಿಯ ದ್ಯೋತಕ, ಸಮಾಜದ ಪ್ರತಿಬಿಂಬ.

೪. ಗ್ರಂಥಭಂಡಾರಿ

ಅಂತೂ ಒಮ್ಮೆ ಗ್ರಂಥ ಪ್ರಕಟವಾಗಿ ಮಾರಾಟಕ್ಕೆ ಸಿದ್ಧವಾಗುತ್ತದೆ. ಆಗ ಓದುಗರ ಪ್ರತಿನಿಧಿಯಾಗಿ ಗ್ರಂಥ ಭಂಡಾರಿ ಬರುತ್ತಾನೆ. ತನ್ನ ಗ್ರಂಥಾಲಯದ ಓದುಗರ ಅಭಿರುಚಿ, ಒಲವುಗಳನ್ನು ಚನ್ನಾಗಿ ಅರಿತ ಗ್ರಂಥ ಭಂಡಾರಿಯು ಯೋಗ್ಯ ಗ್ರಂಥಗಳನ್ನು ಕೊಂಡುಕೊಂಡು ವಾಚಕರಿಗೆ ಪೂರೈಸುತ್ತಾನೆ.

“ ಗ್ರಂಥ ಓದಲು ; ಗ್ರಂಥಕೊಬ್ಬರು ;
ಎಲ್ಲರಿಗು ಗ್ರಂಥಗಳು ;
ಗ್ರಂಥಭಕ್ತಗೆ ಸಮಯ ಉಳಿಸಿರಿ ;
ಬೆಳೆವ ಶಿಶು ಗ್ರಂಥಾಲಯ. ”

ಎಂಬ ಗ್ರಂಥಾಲಯ ಪಂಚಸೂತ್ರಗಳ ಮಂತ್ರ ಪಠಿಸುತ್ತ ಅನುಷ್ಠಾನಕ್ಕೆ ತರುತ್ತಾನೆ. ಗ್ರಂಥವು ಓದುಗನ ಕೈಗೆ ಬೀಳದಿದ್ದರೆ ಅದರ ರಚನೆಯ ಉದ್ದೇಶ ಸಾರ್ಥಕವಾಗುವದಿಲ್ಲ. ಅಮೃತವನ್ನು ತುಂಬಿದ ಕಲಶಗಳನ್ನು ಕೈಗೆತ್ತಿಕೊಂಡು ಬಾಯಾರಿಕೆಯಾದವನು ಕುಡಿದು ತೃಪ್ತಿಪಡುವಂತೆ ಅಮೃತಮಯವಾದ ಗ್ರಂಥಗಳನ್ನು ವಾಚಕನು ಓದಿ ಪ್ರಯೋಜನ ಪಡೆಯಬೇಕಾದರೆ ಗ್ರಂಥಭಂಡಾರಿಯು ಸಹಾಯಕ್ಕೆ ಬರಬೇಕಾಗುತ್ತದೆ. ವಧುವರರಲ್ಲಿ ಪರಸ್ಪರ ಪ್ರೇಮವನ್ನು ಕುದುರಿಸಿ ಮದುವೆ ಮಾಡುವ ಸ್ವಾಮಿಯಂತೆ, ಪುರೋಹಿತನಂತೆ ಗ್ರಂಥಭಂಡಾರಿ ವಾಚಕನ ಮನವರಳಿಸುವ, ಬುದ್ಧಿಯನ್ನು ಕುದುರಿಸುವ, ಬಾಳಿಗೆ ಬೆಳಕನ್ನು ತೋರುವ ಗ್ರಂಥಗಳ ಪರಿಚಯ ಮಾಡಿಕೊಡುತ್ತಾನೆ.

ವಾಚಕನಿಗೆ ಗ್ರಂಥಗಳ ಪರಿಚಯ ಮಾಡಿಕೊಡುವುದೆಂದರೆ–ಗ್ರಂಥಕರ್ತ, ಗ್ರಂಥ ಪ್ರಕಾಶಕ, ಗ್ರಂಥ ವ್ಯಾಪಾರಿಗಳನ್ನು ಒಂದಿಲ್ಲೊಂದು ಬಗೆಯಲ್ಲಿ ಪರಿಚಯ ಮಾಡಿಕೊಟ್ಟಂತೆಯೇ ಸರಿ. ಗ್ರಂಥನಿರ್ಮಾಣ ಕಾರ್ಯವು ಸಾರ್ಥಕಗೊಳ್ಳಬೇಕಾದರೆ ಗ್ರಂಥಭಂಡಾರಿಯ ಪಾತ್ರ ಅತ್ಯಧಿಕವಾಗಿದೆ. ಗ್ರಂಥಕರ್ತನಿಗೆ ಗೌರವ ಧನ ಸಲ್ಲಬೇಕಾದರೆ ಪ್ರಕಾಶಕನಿಗೆ ಲಾಭ ತಟ್ಟಬೇಕಾದರೆ, ಮಾರಾಟಗಾರನಿಗೆ ರಿಯಾಯತಿ ಸಿಗಬೇಕಾದರೆ ಅದನ್ನು ಗ್ರಂಥಾಲಯಕ್ಕೆ ಕೊಳ್ಳಬೇಕು. ಗ್ರಂಥಭಂಡಾರಿಯ ಮೂಲಕವಾಗಿಯೇ ಇವರಿಗೆಲ್ಲ ಹಣ ಸಂದಾಯವಾಗುತ್ತದೆ. ಆದರೆ ನಿಜವಾದ ಹಣ ಕೊಡುವವರು ಓದುಗರು. ಅವರಿಂದ ಸಂಗ್ರಹವಾದ ಹಣ ಹೀಗೆ ಬಳಕೆಯಾಗುತ್ತದೆ.

'ಮಾಲೆಗಾರನು ಹೊಸ ಪೂಮಾಲೆಯನ್ನು ಅಂದವಾಗಿ ಹೆಣೆದು ಸಿದ್ಧಪಡಿಸಿದರೇನು ಪ್ರಯೋಜನ' ಅದನ್ನು ಮುಡಿದು ಆನಂದಿಸುವ ಭೋಗಿಗಳಿಲ್ಲದೆ? ಗ್ರಂಥಕರ್ತ, ಪ್ರಕಾಶಕರ ಪ್ರಯತ್ನದಿಂದ ಮಾರಾಟಗಾರರಲ್ಲಿ ಓದುಗರಿಗೆ ಮಾರಾಟವಾಗದೆ ಉಳಿದ ಗ್ರಂಥಗಳಿಂದ ಪ್ರಯೋಜನವೇನು? ಅವುಗಳನ್ನು ಗ್ರಂಥಭಂಡಾರಿಗಳ ಮುಖಾಂತರ ಓದುಗರು ಓದಿ ಪ್ರಯೋಜನ ಪಡೆಯದಿದ್ದರೆ ಗ್ರಂಥದ ಜನ್ಮ ಸಾರ್ಥಕವಾಗದು. ಆದುದರಿಂದ ಸರಸ್ವತಿಯ ಮಂದಿರವಾದ ಗ್ರಂಥಾಲಯದಲ್ಲಿ ಪೂಜಾರಿಯ ಕಾರ್ಯವನ್ನು ಹೊತ್ತುಕೊಂಡ ಗ್ರಂಥಭಂಡಾರಿಯ ಹೊಣೆ ಬಹು ಗುರುತರವಾಗಿದೆ.

ಗ್ರಂಥಕರ್ತ (Author), ಗ್ರಂಥ ಪ್ರಕಾಶಕ (Book publisher) ಗ್ರಂಥ ವ್ಯಾಪಾರಿ (Book seller) ಮತ್ತು ಗ್ರಂಥಭಂಡಾರಿ (Librarian) ಈ ನಾಲ್ವರು ಒಬ್ಬರನ್ನೊಬ್ಬರು ಅರಿತುಕೊಂಡು, ಸಹಕರಿಸಿ ಕೆಲಸ ಮಾಡಿದರೆ ಗ್ರಂಥಪ್ರಚಾರ ಕಾರ್ಯ ಉತ್ಕೃಷ್ಟ ರೀತಿಯಲ್ಲಿ ಜರುಗುವುದು. ಗ್ರಂಥಪ್ರಚಾರ ಕಾರ್ಯವೇ ಶಿಕ್ಷಣಾಭಿವೃದ್ಧಿ ಕಾರ್ಯ! ಜ್ಞಾನಪ್ರಸಾರ ಕಾರ್ಯ!! ನಿರಕ್ಷತೆಯ ನಿರ್ಮೂಲನ ಕಾರ್ಯ! ದೇಶೋದ್ಧಾರದ ಪವಿತ್ರ ಕಾರ್ಯ!!

ಅವರಿವರ ದೃಷ್ಟಿಯಲ್ಲಿ "ಗ್ರಂಥ"

ಒಂದು ಉತ್ತಮ ಗ್ರಂಥವನ್ನು ನಾಶಪಡಿಸುವುದೆಂದರೆ ಒಬ್ಬ ಸಜ್ಜನ ಮನುಷ್ಯನನ್ನೇ ಕೊಂದಂತೆ.

ಜಾನ್ ಮಿಲ್ಟನ್

ಯಾವ ಗ್ರಂಥವನ್ನು ಆಶಾದೃಷ್ಟಿಯಿಂದ ತೆರೆದು, ಲಾಭ ಪಡೆದು ಮುಚ್ಚುತ್ತೇವೆಯೋ ಅದು ಉತ್ತಮ ಗ್ರಂಥ.

ಎಚ್. ಬಿ. ಆಲಕಾಟ್

ಒಂದು ಅಪೂರ್ವ ಕನ್ನಡ ಗ್ರಂಥಪ್ರದರ್ಶನ

● ವೆಂಕಟೇಶ ಸಾಂಗಲಿ

ಬೆಳೆಯುತ್ತಿರುವ ಗ್ರಂಥಸಂಪತ್ತು ಸಾರ್ಥಕ ಹೊಂದುವುದು ಜನತೆಯ ಮೂಲಕ. ಪುಸ್ತಕದ ಮಹತ್ವವನ್ನು ತಿಳಿದವರು ತಮಗೆ ಬೇಕಾದುದನ್ನು ಮಾರುಕಟ್ಟೆಯಲ್ಲಿ ಕೊಳ್ಳುತ್ತಾರೆ. ಅದು ಸಿಕ್ಕದಿದ್ದಲ್ಲಿ ಪ್ರಕಾಶಕರನ್ನೋ ಲೇಖಕರನ್ನೋ ಕೇಳಿ ಆ ಪುಸ್ತಕ ಪಡೆಯಲು ಯತ್ನಿಸುತ್ತಾರೆ. ಆದರೆ ಇಂಥವರ ಸಂಖ್ಯೆ ತೀರ ಕಡಮೆ. ಮಾರುಕಟ್ಟೆಯಲ್ಲಿ ತಾವು ಬಯಸಿದ ಪುಸ್ತಕ ಸಿಕ್ಕದೆ ಹೋದಾಗ 'ಇಂಥ ಪುಸ್ತಕಕ್ಕಾಗಿ ಇಡಿಯ ಮಾರುಕಟ್ಟೆ ಸುತ್ತುಹಾಕಿದೆ; ಸಿಕ್ಕಲೇ ಇಲ್ಲ'—ಎಂಬ ಒಂದು ನಿರಾಶೆಯ ಮಾತಿನಲ್ಲಿ ತಮ್ಮ ಅಪೇಕ್ಷೆಯನ್ನು ಹತ್ತಿಕ್ಕಿಕೊಳ್ಳುವ ಜನ ಮತ್ತೊಂದು ವರ್ಗ. ತನ್ನನ್ನೇ ಹುಡುಕಿಕೊಂಡು ಬರುವ ಇಂಥ ವ್ಯಾಸಂಗವೃತ್ತಿಯ ಜನರಿಗಿಂತಲೂ ತನ್ನನ್ನು ಸಂಪೂರ್ಣವಾಗಿ ಅಲಕ್ಷಿಸಿದ ಬಹುಸಂಖ್ಯೆಯ ಪ್ರಜಾಕೋಟಿಯನ್ನು ಅರಸುತ್ತ ಹೋಗುವುದು ಪುಸ್ತಕದ ಮುಖ್ಯ ಉದ್ದೇಶವಾಗಿದೆ. ಗ್ರಂಥವಿಜ್ಞಾನದ ಸೂತ್ರಗಳಲ್ಲಿ ಇದೂ ಒಂದು. ಈ ಉದ್ದೇಶವು ಹೇಗೆ ಕೈಗೂಡಬಲ್ಲದು? ಪುಸ್ತಕ ವ್ಯಾಪಾರಿಯೊಬ್ಬ ಹೊಸ ಪುಸ್ತಕಗಳನ್ನು ನೀಟಾಗಿ, ಕಣ್ಣು ಸೆಳೆಯುವಂತೆ ತನ್ನ ಅಂಗಡಿಯ ಮುಂಭಾಗದಲ್ಲಿ ಇಟ್ಟಾಗ, ಸಾಮಾನ್ಯ ಜನರ ಕುತೂಹಲವನ್ನೂ ಸೆಳೆಯಬಲ್ಲ. ವಿಷಯ ಎಂಥದು, ಬರೆದವರು ಯಾರು—ಎಂಬುದನ್ನು ಅರಿತುಕೊಳ್ಳುವ ತವಕದಿಂದ ಶ್ರೀಸಾಮಾನ್ಯನೊಬ್ಬ ಒಳಗೆ ಬಂದು ವಿಚಾರಿಸಿ, ಮನಸ್ಸು ಒಪ್ಪಿದರೆ ಆ ಪುಸ್ತಕವನ್ನು ಕೊಂಡುಕೊಳ್ಳುತ್ತಾನೆ. ಮಾರಾಟಗಾರನಿಗೂ ಸಮಾಧಾನ; ಕೊಂಡವನಿಗೂ ತೃಪ್ತಿ. ಪುಸ್ತಕಕ್ಕಂತೂ ಸಾರ್ಥಕತೆಯ ಹಿಗ್ಗು.

ಒಬ್ಬ ವಾಚಕನ ಒಂದು ಪುಸ್ತಕಕ್ಕೆ ಸಂಬಂಧಿಸಿದ ಮಾತು ಇದು. ನೂರಾರು ಪುಸ್ತಕಗಳನ್ನೂ ವಾಚಕರನ್ನೂ ಒಂದು ಕಡೆಗೆ ತರುವ, ಪರಸ್ಪರ 'ನೆಂಟತನ' ಏರ್ಪಡಿಸುವ ವೇದಿಕೆಯೊಂದು ನಮಗೆ ಅಗತ್ಯವಾಗಿ ಬೇಕು. ಗ್ರಂಥಪ್ರದರ್ಶನವು ಅಂಥ ಮಾಧ್ಯಮ.

ಓದುಗರ ಸಂಖ್ಯೆ ಬೆಳೆಸಲು, ಅವರ ವಾಚನದ ಅವಶ್ಯಕತೆಗಳನ್ನು ಪೂರೈಸಲು ಪುಸ್ತಕ ಪ್ರದರ್ಶನದಂಥ ಸಾಧನೆ ಬೇರೊಂದಿಲ್ಲ. ಸಾಹಿತ್ಯ ಪ್ರಸಾರದ ರಾಜಮಾರ್ಗ ಇದು. ಸಾಮಾನ್ಯ ಓದುಗರಂತೆ, ಪಂಡಿತರೂ ಇಲ್ಲಿ ಪ್ರಯೋಜನ ಪಡೆಯಬಲ್ಲರು. ಗ್ರಂಥಪ್ರದರ್ಶನದ ವಿವಿಧ ಪ್ರಕಾರಗಳು, ಅವುಗಳನ್ನು ಏರ್ಪಡಿಸುವ ಕ್ರಮ-ಮುಂತಾದ ವಿವರಣೆ ಈ ಲೇಖನದ ಉದ್ದೇಶವಲ್ಲ.

ಕನ್ನಡ ಗ್ರಂಥನಿರ್ಮಾಣದ ಬೆಳವಣಿಗೆಯನ್ನೂ ಪುಸ್ತಕಗಳ ವಿಷಯ ವ್ಯಾಪ್ತಿಯನ್ನೂ ತಿಳಿಯುವ

ಉದ್ದೇಶದಿಂದ ೧೯೩೪, ಮೇ ೬ನೆಯ ದಿನಾಂಕ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಒಂದು ಅಪೂರ್ವವಾದ ಗ್ರಂಥಪ್ರದರ್ಶನವು ಏರ್ಪಟ್ಟಿತ್ತು. ಶಿಸ್ತು, ಸಂಘಟನೆ, ದಕ್ಷತೆಗಳಿಗೆ ಎರಡನೆಯ ಹೆಸರಾದ ಪೂಜ್ಯ ಡಿ. ವಿ. ಗುಂಡಪ್ಪನವರು ಆಗ ಉಪಾಧ್ಯಕ್ಷರು. ಸನ್ಮಾನ್ಯ ಸಿ. ಕೆ. ವೆಂಕಟರಾಮಯ್ಯನವರು ಗೌರವ ಕಾರ್ಯದರ್ಶಿಗಳು. ಅಂದಿನವರೆಗೆ ಗ್ರಂಥ ಸಂಶೋಧನೆ, ಗ್ರಂಥ ಪ್ರಕಾಶನ–ಭಾಷಾಭಿವೃದ್ಧಿಯ ಈ ಎರಡು ಮುಖ್ಯ ಭಾಗಗಳಲ್ಲಿ ಕೆಲಸ ಮಾಡುತ್ತಿದ್ದ ಪರಿಷತ್ತು ಸಾರ್ವಜನಿಕ ಅಗತ್ಯಗಳ ಕಡೆಗೆ ತನ್ನ ಕಾರ್ಯವನ್ನು ವಿಸ್ತರಿಸಿತು. ಮೇ ಆರನೆಯ ದಿನಾಂಕದಿಂದ ಒಂದು ವಾರದ ಕಾಲ ಪರಿಷನ್ಮಂದಿರದಲ್ಲಿ ಪ್ರಥಮ ಬಾರಿಗೆ 'ವಿಶೇಷ ಸಾಹಿತ್ಯೋತ್ಸವ'ದ ಹೆಸರಿನಲ್ಲಿ ಈ ಉಪನ್ಯಾಸಗಳ ಸಮಾರಂಭ ನಡೆಯಿತು. ಆಧುನಿಕ ಪ್ರಪಂಚದ ಜೀವನಕ್ಕೆ ಸಂಬಂಧಪಟ್ಟ ಎಲ್ಲ ವಿಚಾರಗಳನ್ನೂ ಕುರಿತು ಕನ್ನಡದಲ್ಲಿ ಭಾಷಣ ಮಾಡುವುದೂ ಚರ್ಚೆ ನಡೆಸುವುದೂ ಸಾಧ್ಯವೆಂಬುದನ್ನು ಮಹಾಜನರಿಗೆ ತೋರಿಸಿಕೊಡಬೇಕೆಂಬುದು ಒಂದು. ಇಂಥ ವಿಚಾರಗಳನ್ನು ಕುರಿತ ತಿಳಿವಳಿಕೆಯನ್ನು ಸಂಪಾದಿಸಿಕೊಳ್ಳಲು ದೇಶವಿಚಾರ ನಿಷ್ಠರಾದವರಿಗೆ–ವಿಶೇಷವಾಗಿ ಉಪಾಧ್ಯಾಯ ಮಂಡಲಿಗೆ–ಅವಕಾಶ ಕಲ್ಪಿಸಿಕೊಡಬೇಕೆಂಬುದು ಇನ್ನೊಂದು — ಇವು ವಿಶೇಷ ಸಾಹಿತ್ಯೋತ್ಸವದ ಉದ್ದೇಶಗಳು.

ಈ ಉತ್ಸವದ ಅಂಗವಾಗಿ ಮೇಲೆ ಹೇಳಿದ ಗ್ರಂಥ ಪ್ರದರ್ಶನವು ಪರಿಷನ್ಮಂದಿರದ ಸಮೀಪದ ಮೈಸೂರು ಪ್ರೊವಿನ್ಷಿಯಲ್ ಕೋ-ಆಪರೇಟಿವ್ ಅಪೆಕ್ಸ್ ಬ್ಯಾಂಕಿನಲ್ಲಿ, ಅಲಂಕೃತವಾದ ಸಭಾಮಂದಿರದಲ್ಲಿ ಏಳು ದಿನಗಳ ಕಾಲ ನಡೆಯಿತು. ಪ್ರದರ್ಶನವನ್ನು ಕುರಿತು ಉಪಾಧ್ಯಕ್ಷರು ಆಡಿದ ಮಾತು ಇವು. "....ಕನ್ನಡ ಸಾಹಿತ್ಯ ಪ್ರಪಂಚದ ಮಹಾಮಹೋಪಾಧ್ಯಾಯರಾದ ಶ್ರೀಮಾನ್ ನರಸಿಂಹಾಚಾರ್ಯರವರು ಕನ್ನಡ ಗ್ರಂಥ ಲೇಖಕರ ಚರಿತ್ರೆಯನ್ನು ಕ್ರಿ. ಶ. ೧೯ನೆಯ ಶತಮಾನದ ಅಂತ್ಯದ ವರೆಗೆ ಸಂಗ್ರಹಿಸಿ ಕೊಟ್ಟಿರುತ್ತಾರಷ್ಟೆ. ಅಲ್ಲಿಂದೀಚಿನ ೩೩ ವರ್ಷಗಳಲ್ಲಿ—ಎಂದರೆ, ಒಂದು ಶತಮಾನದ ಮೂರನೆಯ ಒಂದಂಶದಲ್ಲಿ–ಕನ್ನಡದ ಸಾಹಿತ್ಯವು ಹೇಗೆ ಅಭಿವೃದ್ಧಿ ಹೊಂದಿದೆಯೆಂಬುದನ್ನು ಪ್ರತ್ಯಕ್ಷಪಡಿಸುವುದೇ ಈ ಪ್ರದರ್ಶನದ ತಾತ್ಪರ್ಯ. ದೇಶದ ಜನತೆಯ ವೃದ್ಧಿಕ್ಷಯಗಳ ರೀತಿಯನ್ನು ಅರಿತುಕೊಳ್ಳಲು ಸಾಧನವಾಗುವಂತೆ ಹತ್ತು ವರ್ಷಗಳಲ್ಲೊಂದು ಬಾರಿ ಪ್ರಜಾಗಣನೆ ಮಾಡಬೇಕೆಂದು ಸರ್ಕಾರವು ವಿಧಾಯಕ ಮಾಡುವುದುಂಟಷ್ಟೆ. ಅದೇ ರೀತಿಯಾಗಿ ಆಗಿಂದಾಗ್ಗೆ ಸರಸ್ವತೀ ರಾಜ್ಯದ ಪ್ರಜಾಗಣನೆಯನ್ನು ಮಾಡುವುದು ಭಾಷಾಭಿಮಾನಿಗಳ ಕರ್ತವ್ಯವಾಗಿರುತ್ತದೆ."

ಈ ಪ್ರದರ್ಶನದ ಉದ್ದೇಶ ವಿವರಗಳನ್ನು ಪತ್ರಿಕೆಗಳಲ್ಲಿ ಹಲವು ಬಾರಿ ಪ್ರಕಟಿಸಲಾಯಿತು. ಸಾಧ್ಯವಿದ್ದ ಮಟ್ಟಿಗೆ ಪ್ರತಿ ಲೇಖಕನಿಗೂ ಪ್ರಕಾಶಕನಿಗೂ ಬರೆದು ಗ್ರಂಥಗಳನ್ನು ಕಳುಹಿಸಲು ಕೇಳಿಕೊಂಡದ್ದಾಯಿತು. ಉತ್ತರ ಕೊಡದೆ ಇದ್ದವರೂ ಕೆಲವರು. "ಹೀಗಿದ್ದರೂ ಒಟ್ಟಿನ ಮೇಲೆ ಈ ಪ್ರದರ್ಶನವು ಕನ್ನಡ ಗ್ರಂಥಪ್ರಕಟನ ಕಾರ್ಯದ ಸಮಗ್ರ ಪ್ರತಿಬಿಂಬವಾಗಿದೆಯೆಂದು ಹೇಳಬಹುದಾಗಿದೆ"–ಎಂಬುದು ಉಪಾಧ್ಯಕ್ಷರ ಅಭಿಪ್ರಾಯವಾಗಿತ್ತು. ಗ್ರಂಥ ಪ್ರದರ್ಶನದಲ್ಲಿ ಸುಮಾರು ೧,೦೦೦ ಮಂದಿ ಗ್ರಂಥಕರ್ತರೂ ಪ್ರಕಟನಕಾರರೂ ಸಹಕಾರ ನೀಡಿದರು.

ಈ ಪ್ರದರ್ಶನದಿಂದ ಕಂಡುಬಂದ ಕೆಲವು ಅಂಶಗಳನ್ನು ಕೆಳಗಿನಂತೆ ಸಂಗ್ರಹಿಸಲಾಗಿದೆ :

೧. ಕನ್ನಡ ಗ್ರಂಥಕರ್ತರಲ್ಲಿ ಕ್ರೈಸ್ತರೂ ಮುಸಲ್ಮಾನರೂ ಇದ್ದಾರೆ.

೨. ಮಹಿಳೆಯರೂ ಕೂಡ ಗ್ರಂಥ ರಚಿಸಿದ್ದಾರೆ.

೩. ಸಾಮಾನ್ಯ ಜನರು ಮಾತ್ರವಲ್ಲ; ಇಂಗ್ಲಿಷ್ ವಿದ್ವಾಂಸರೂ ನವನಾಗರಿಕರೂ ಹುದ್ದೇದಾರರೂ ಸಹ ಓದಿ ಸಂತೋಷಿಸಬಹುದಾದ ಗ್ರಂಥಗಳು ಕನ್ನಡದಲ್ಲಿ ಕೆಲವಾದರೂ ಇವೆ.

೪. ೧೯೦೧ನೆಯ ಇಸವಿಯಿಂದ ೧೯೧೫ರ ವರೆಗೆ ಒಟ್ಟು ೨೦೬ ಪುಸ್ತಕಗಳೂ ಮುಂದಿನ ೧೮ ವರ್ಷಗಳಲ್ಲಿ (೧೯೧೬–೧೯೩೪) ೨೨೨೬ ಪುಸ್ತಕಗಳೂ ಪ್ರಕಟವಾಗಿವೆ.

೫. ಪ್ರದರ್ಶಿತ ಗ್ರಂಥರಾಶಿಯಲ್ಲಿ ೧೨ ಮುಖ್ಯ ವರ್ಗಗಳೂ ೬೦ ಉಪವರ್ಗಗಳೂ ಇರುವುದನ್ನು ನೋಡಿದರೆ ಗ್ರಂಥವಿಷಯಗಳು ವಿವಿಧವಾಗಿ, ಸಾಹಿತ್ಯವು ನಾನಾ ಮುಖಗಳನ್ನು ತಾಳುತ್ತಿದೆ ಎಂಬುದು ಗೋಚರವಾಗುತ್ತದೆ.

೬. ಮತಾಚಾರ ಮತ್ತು ಜ್ಯೋತಿಷ–ಶಕುನ–ಸಾಮುದ್ರಿಕಾದಿ ಅದೃಷ್ಟರಹಸ್ಯಗಳ ಗ್ರಂಥ ಹೇರಳವಾಗಿದೆ.

೭. ಎಲ್ಲಕ್ಕಿಂತ ಹೆಚ್ಚಿನ ಸಂಖ್ಯೆಯ ಗ್ರಂಥಗಳು ಪದ್ಯಗ್ರಂಥಗಳು.

೮. ದೇಶಚರಿತ್ರೆ, ಜೀವನಚರಿತ್ರೆ, ವಿಜ್ಞಾನ ಮೊದಲಾದ ವಿಷಯಕ್ಕೆ ಸಂಬಂಧಪಟ್ಟ ಗ್ರಂಥಗಳು ತೀರ ಕಡಮೆ.

ಪ್ರದರ್ಶನದಲ್ಲಿ ಹಲವು ಗ್ರಂಥಕರ್ತರ ಭಾವಚಿತ್ರಗಳನ್ನು ಇರಿಸಲಾಗಿತ್ತು. ಅಲ್ಲದೆ ಪುಸ್ತಕಗಳನ್ನು ವಿಷಯಾನುಗುಣವಾಗಿ ವರ್ಗೀಕರಿಸಿ, "ಯಾವ ಯಾವ ಜಾತಿಗೆ ಸೇರಿದ ಪುಸ್ತಕಗಳು ಯಾವ ಯಾವ ವರ್ಷಗಳಲ್ಲಿ ಎಷ್ಟೆಷ್ಟು ಪ್ರಕಟವಾದುವೆಂಬ ಲೆಕ್ಕವನ್ನೂ ತಯಾರಿಸಿ ಇಡಲಾಗಿತ್ತು." ಬಂದಿದ್ದ ಗ್ರಂಥಗಳಲ್ಲಿ ಕೂಡ ಅನೇಕ ಗ್ರಂಥಗಳ ಮೊದಲನೆಯ ಮುದ್ರಣ ಕಾಲ ಮುಂತಾದ ವಿವರಗಳ ನಿಷ್ಕರ್ಷೆಯಾಗಿ ತಿಳಿಯಲು ಅವಕಾಶವಿರಲಿಲ್ಲ. ಆದ್ದರಿಂದ "ಈ ಸಂಖ್ಯೆಗಳನ್ನು ಸ್ಥೂಲದೃಷ್ಟಿಯಿಂದ ನೋಡತಕ್ಕದ್ದೇ ಹೊರತು ಇದೇ ಖಚಿತವೆಂದು ಯಾರೂ ತಿಳಿಯಕೂಡದು" ಎಂಬ ಸೂಚನೆಯನ್ನು ವ್ಯವಸ್ಥಾಪಕರು ಕೊಟ್ಟಿದ್ದಾರೆ.

ಪರಿಷತ್ತು ಏರ್ಪಡಿಸಿದ್ದ ಗ್ರಂಥ ಪ್ರದರ್ಶನವನ್ನು ನೋಡಲು ಏಳನೆಯ ತಾರೀಖಿನಿಂದ ಕೊನೆಯ ದಿನದವರೆಗೆ ಬಂದ ಪ್ರೇಕ್ಷಕರ ಸಂಖ್ಯೆ ೧೯೯೩. ಆರಂಭದ ದಿನ (೬ನೆಯ ತಾರೀಖು) ಸುಮಾರು ೫೦೦ ಜನರು ಬಂದಿರಬಹುದು. ಒಟ್ಟು ೨,೫೦೦ ಜನಕ್ಕೆ ಕಡಮೆಯಿಲ್ಲದೆ ಈ ಪ್ರದರ್ಶನವನ್ನು ನೋಡಿದರು. ಕನ್ನಡ ನಾಡಿನ ಬೇರೆ ಬೇರೆ ಭಾಗಗಳಿಂದ ಬಂದ ಹಲವಾರು ಪ್ರತಿನಿಧಿಗಳು ಈ ಪ್ರದರ್ಶನವನ್ನು ನೋಡಿ ಸಂತೋಷಪಟ್ಟರು. ಪಂಡಿತರು, ಭಾಷಾಭಿಮಾನಿಗಳು ಪ್ರದರ್ಶನದ ವ್ಯವಸ್ಥಾಪಕರನ್ನು ಅಭಿನಂದಿಸಿದರು.

ಪುಸ್ತಕಗಳ ಸಂಖ್ಯೆ

ಪ್ರಪಂಚದಲ್ಲಿ ಎಷ್ಟು ಪುಸ್ತಕಗಳಿವೆ ?

ಗ್ರಂಥಭಂಡಾರಗಳು ಪಡೆದಿರುವ ಪಟ್ಟಿಗಳ ಆಧಾರದ ಮೇಲೆ ಒಬ್ಬ ತಜ್ಞ ಕೆಲವು ಊಹೆಗಳನ್ನು ಮಾಡಿದ್ದಾನೆ. ನಾಲ್ಕೂವರೆ ಶತಮಾನಗಳ ಹಿಂದೆ ಮುದ್ರಣ ಕಲೆ ಆರಂಭವಾದಂದಿನಿಂದ ಇಂದಿನವರೆಗೆ ಜಗತ್ತಿನಲ್ಲೆಲ್ಲ ಸುಮಾರು ೧೮,೦೦೦,೦೦೦ ಗ್ರಂಥಗಳು ಪ್ರಕಟವಾಗಿವೆ ಎಂದು ಅವನ ಎಣಿಕೆ. ಸರಾಸರಿ ಒಂದು ಗ್ರಂಥಕ್ಕೆ ೩,೦೦೦ ಪ್ರತಿಗಳು ಎಂದಿಟ್ಟುಕೊಂಡರೆ ಪ್ರಪಂಚದಲ್ಲಿ ಸುಮಾರು ೫೪ ಬಿಲಿಯನ್ ಪುಸ್ತಕಗಳಿವೆ. ಆ ತಜ್ಞನ ಪ್ರಕಾರ ೧೮,೦೦೦,೦೦೦ ಪುಸ್ತಕಗಳಲ್ಲಿ ೧೯೦೦ರಿಂದ ಈಚೆಗೆ ಪ್ರಕಟವಾದುದೇ ೬,೦೦೦,೦೦೦ದಷ್ಟಿವೆ. ಅವನು ಹೇಳುವಂತೆ ಈ ಪುಸ್ತಕಗಳಲ್ಲಿ ನೂರಾರು ವರ್ಷ ನಿಲ್ಲಬಲ್ಲ ಅತ್ಯುತ್ತಮ ಪುಸ್ತಕಗಳ ಸಂಖ್ಯೆ ಕೇವಲ ೨೦,೦೦೦.

ಗ್ರಂಥಾಲಯದಲ್ಲಿ ಪರಾಮರ್ಶನ ಸೇವೆ ಮತ್ತು ಕೆಲವು ಪರಾಮರ್ಶನ ಗ್ರಂಥಗಳು

• ಲೀಲಾ ಸುಬ್ರಮಣ್ಯಂ

ಗ್ರಂಥಾಲಯಕ್ಕೆ ಬರುವ ಓದುಗರಲ್ಲಿ ಕೆಲವರು ತಮಗೆ ತಿಳಿದ ವಿಷಯದ ಬಗ್ಗೆ ಹೆಚ್ಚು ವಿಷಯ ತಿಳಿಯಲು ಬರುವವರು, ಮತ್ತೆ ಕೆಲವರು ಒಂದು ವಿಷಯದ ಬಗ್ಗೆ ಏನೂ ತಿಳಿಯದೆ ಹುಡುಕಲು ಬರುತ್ತಾರೆ. ಹೇಗೆ? ಏತಕ್ಕೆ? ಎಲ್ಲಿ? ಯಾವಾಗ? ಯಾರು? ಎಂಬ ಪ್ರಶ್ನೆಗಳಿಗೆ ಗ್ರಂಥಾಲಯದಲ್ಲಿ ಉತ್ತರವನ್ನು ಪಡೆಯಲು ಬರುವುದು ಸಹಜ. ಪ್ರಶ್ನೆ ಯಾವ ರೂಪದಲ್ಲಿದ್ದರೂ ಗ್ರಂಥಾಲಯವು ಓದುಗನಿಗೆ ಆತನ ಆಸಕ್ತ ವಿಷಯದ ಬಗ್ಗೆ ಹೆಚ್ಚು ಹೆಚ್ಚು ಮಾಹಿತಿಯನ್ನು ಒದಗಿಸುವ ಕೇಂದ್ರವಾಗಬೇಕು. ಗ್ರಂಥಾಲಯವು ಎಷ್ಟೇ ಚಿಕ್ಕದಾಗಿದ್ದರೂ ಅವುಗಳಲ್ಲಿ ಓದುಗನು ಕೇಳುವ ವಿಷಯಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ ಇರುವ ಪುಸ್ತಕಗಳನ್ನು, ಲೇಖನಗಳನ್ನು ಆತನಿಗೆ ಪರಿಚಯ ಮಾಡಿಕೊಡುವುದು ಗ್ರಂಥಪಾಲಕನ ಕರ್ತವ್ಯ.

ಪರಾಮರ್ಶನ ಗ್ರಂಥಗಳು

ಈ ಲೇಖನದಲ್ಲಿ ಓದುಗರು ಹೆಚ್ಚು ಉಪಯೋಗಿಸುವ, ಕೆಲವೇ ಮುಖ್ಯವಾದ ಪರಾಮರ್ಶನ ಗ್ರಂಥಗಳನ್ನು ವಿವೇಚಿಸಲಾಗಿದೆ. ಪರಾಮರ್ಶನ ಸೇವೆಗೆ ಎಲ್ಲಾ ಪ್ರಕಟಿತ ಪುಸ್ತಕಗಳು ಲೇಖನಗಳು ಸಹಾಯ ಮಾಡುತ್ತದೆ. ಆದರೆ ಈ ಪರಾಮರ್ಶನ ಗ್ರಂಥಗಳು ಓದುಗನಿಗೆ ತನ್ನ ಒಂದು ನಿರ್ದಿಷ್ಟ ವಿಷಯದ ಬಗ್ಗೆ ಅಲ್ಪಕಾಲದಲ್ಲಿ ನಿರ್ದಿಷ್ಟವಾದ ಮಾಹಿತಿಯನ್ನು ತಿಳಿಯಲು ಉಪಯುಕ್ತವಾದವುಗಳು. ವಿಷಯವು ಒಂದು ಪದದ ಹುಟ್ಟು, ಬೆಳವಣಿಗೆ ಬಗ್ಗೆ ಇರಬಹುದು. ಒಂದು ವಸ್ತು ಅಥವಾ ಶಾಸ್ತ್ರದ ವಿಷಯವಾಗಿರಬಹುದು. ಮಹತ್ವದ ಘಟನೆಗಳು, ಮುಖ್ಯ ವ್ಯಕ್ತಿಗಳು, ಒಂದು ಗೊತ್ತಾದ ಚಾರಿತ್ರಿಕ ಕಾಲಕ್ಕೆ ಸಂಬಂಧಿಸಿರಬಹುದು, ಅಥವಾ ನಿರ್ದಿಷ್ಟ ಸ್ಥಳದ ಬಗ್ಗೆ, ಹೀಗೆ ಅನೇಕ ಪ್ರಶ್ನೆಗಳು ಬರಬಹುದು. ಗ್ರಂಥಪಾಲಕನು ಇಂತಹ ಪ್ರಶ್ನೆಗಳನ್ನು ಉತ್ತರಿಸಲು ಕೆಲವೇ ನಿರ್ದಿಷ್ಟ ಗ್ರಂಥಗಳನ್ನು ಉಪಯೋಗಿಸುತ್ತಾನೆ. ಈ ರೀತಿಯ ಗ್ರಂಥಗಳು, ನಿಘಂಟುಗಳು, ವಿಶ್ವಕೋಶಗಳು, ಕೈಪಿಡಿಗಳು ಮುಂತಾದವುಗಳನ್ನು "ಪರಾಮರ್ಶನ ಗ್ರಂಥಗಳೆ"ಂದೂ, ಇವುಗಳಲ್ಲಿ ಸಾಮಾನ್ಯವಾದವುಗಳನ್ನುಳಿದು, ಮುಖ್ಯ ಮಾಹಿತಿಗಳನ್ನು ಓದುಗನಿಗೆ ಪರಿಚಯ ಮಾಡಿಸಿಕೊಡುವ ಸೇವೆಗೆ "ಪರಾಮರ್ಶನ ಸೇವೆ" ಎಂದೂ ಹೇಳುತ್ತಾರೆ.

ನಿಘಂಟುಗಳು

ಭಾಷೆಯ ಪದಗಳ ಬಗ್ಗೆ ನಿಘಂಟುಗಳು ಹೆಚ್ಚು ವಿಷಯವನ್ನು ತಿಳಿಸುತ್ತವೆ. ಒಂದು ಪದದ ಕಾಗುಣಿತ, ಅರ್ಥ, ಉಚ್ಚಾರಣೆ, ನುಡಿಗಟ್ಟುಗಳು ಮತ್ತು ಆ ಪದಗಳ ವ್ಯಾಕರಣ ರೂಪವನ್ನು ತಿಳಿಸುತ್ತದೆ. ನಿಘಂಟುಗಳಿಂದ ಒಂದು ಪದದ ಸಮಾನಾರ್ಥಪದಗಳನ್ನೂ, ವಿರೋ

ಥಾರ್ಥ ಶಬ್ದಗಳನ್ನೂ, ನಿಷ್ಕೃಷ್ಟಾರ್ಥವನ್ನೂ (definitions) ಅಲ್ಲದೆ, ಆ ಪದಗಳ ಚಾರಿತ್ರಿಕ ಹುಟ್ಟು, ಪ್ರಾಮುಖ್ಯತೆಯನ್ನು ತಿಳಿಯಬಹುದು. ಅನೇಕ ನಿಘಂಟುಗಳಲ್ಲಿ ರೇಖಾಪಟಗಳನ್ನೂ ಚಿತ್ರಪಟಗಳನ್ನೂ ಕಾಣಬಹುದು. ಇಂಗ್ಲಿಷ್ ಭಾಷೆಯಲ್ಲಿ ರಾಬರ್ಟ್ ಕೌಡ್ರೆ ಕ್ರಿ.ಶ. ೧೬೦೪ರಲ್ಲಿ ಪ್ರಥಮ ಇಂಗ್ಲಿಷ್ ನಿಘಂಟನ್ನು ಪ್ರಕಟಿಸಿದ. ಅನೇಕ ಆಂಗ್ಲ ಭಾಷೆಯ ನಿಘಂಟುಗಳು ಹೊರಬಂದಿದ್ದರೂ ಅವುಗಳಲ್ಲಿ ಆಕ್ಸ್‌ಫರ್ಡ್ ಇಂಗ್ಲಿಷ್ ಡಿಕ್ಷನರಿ, ಚೇಂಬರ್ಸ್ ಮತ್ತು ವೆಬ್‌ಸ್ಟೆರ್ ನಿಘಂಟುಗಳು ಪ್ರಾಮುಖ್ಯವಾದವುಗಳು.

ಭಾರತದಲ್ಲಿ ಪ್ರಾದೇಶಿಕ ಭಾಷೆಗಳಲ್ಲೂ ನಿಘಂಟುಗಳು ಬಂದಿವೆ. ಇಂಗ್ಲಿಷ್ ಪದಕ್ಕೆ ಪ್ರದೇಶ ಭಾಷೆಯ ಸಮಾನಾರ್ಥವುಳ್ಳ ನಿಘಂಟುಗಳು, ಒಂದೇ ಪ್ರಾದೇಶಿಕ ಭಾಷೆಯ ಪದಗಳಿಗೆ ಆ ಭಾಷೆಯಲ್ಲೇ ಸಮಾನಾರ್ಥ ಕೊಡುವ ನಿಘಂಟುಗಳು, ಎರಡು ಅಥವಾ ಮೂರು ಪ್ರಾದೇಶಿಕ ಭಾಷೆಗಳ ನಿಘಂಟುಗಳು ಇವೆ. ಇದಕ್ಕೆ ಏಕಭಾಷೆಯ ನಿಘಂಟುಗಳು (Lingual), ದ್ವಿಭಾಷಾ ನಿಘಂಟುಗಳು (Bi-lingual), ಬಹುಭಾಷಾ ನಿಘಂಟುಗಳೆನ್ನು (Multi–lingual)ತ್ತಾರೆ. ೧೯೭೦ ಮಾರ್ಚಿಯಲ್ಲಿ ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಭಾರತದ ಭಾಷಾಶಾಸ್ತ್ರದ ಕೇಂದ್ರೀಯ ಸಂಸ್ಥೆಯಲ್ಲಿ ನಿಘಂಟುಗಳ ಬಗ್ಗೆ ಒಂದು ವಿಚಾರಗೋಷ್ಠಿಯು ನಡೆಯಿತು. ಅದರಲ್ಲಿ ಭಾಗವಹಿಸಿದ್ದ ವಿದ್ವಾಂಸರುಗಳು ಭಾರತದ ಭಾಷೆಗಳಲ್ಲಿ ಹೊರಬಂದಿರುವ ನಿಘಂಟುಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.*

ಹಳೆಯ ನಿಘಂಟುಗಳು

ಕನ್ನಡದಲ್ಲಿ ಇರುವ ನಿಘಂಟಿನ ಬಗ್ಗೆ ಶ್ರೀ ಬಸವಾರಾಧ್ಯರು, ಶ್ರೀ ಗುರುನಾಥ ಜೋಶಿಯವರು, ಈ ಸಮ್ಮೇಳನದಲ್ಲಿ ಉಪಯುಕ್ತ ವರದಿಯನ್ನಿತ್ತಿದ್ದಾರೆ. ಕನ್ನಡ ಪ್ರಥಮ ಹಳೆಯ ನಿಘಂಟು ರನ್ನಕಾಂಡ (೧೦ನೇ ಶತಮಾನ), ಕರ್ನಾಟಕ ಶಬ್ದಸಾರ, ಚತುರಾದ್ಯ ನಿಘಂಟು, ಕಬ್ಬಿಗರ ಕೈಪಿಡಿ ಮುಂತಾದ ನಿಘಂಟುಗಳ ನೆರವಿನಿಂದ ಪಾಶ್ಚಾತ್ಯ ನಿಘಂಟುಕಾರರಾದ ರೀವ್ಸ್ ಮತ್ತು ಕಿಟ್ಟೆಲ್‌ರವರು ಕನ್ನಡ–ಇಂಗ್ಲಿಷ್ ನಿಘಂಟುಗಳನ್ನು (೧೮೯೪) ರಚಿಸಿದ್ದಾರೆ. ಇತ್ತೀಚೆಗೆ ಮದರಾಸು, ವಿಶ್ವವಿದ್ಯಾನಿಲಯದವರು ಕನ್ನಡ ಇಲಾಖೆಯ ಶ್ರೀ ಮರಿಯಪ್ಪ ಭಟ್ಟರ ಸಂಪಾದಕತ್ವದಲ್ಲಿ ಈ ನಿಘಂಟನ್ನು ಪರಿಷ್ಕರಿಸಿ ೪ ಸಂಪುಟಗಳಲ್ಲಿ ಹೊಸ ಆವೃತ್ತಿಯನ್ನು ಹೊರತಂದಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು, ಪರಿಷತ್ತಿನವರು ಪ್ರಕಟಿಸುತ್ತಿರುವ ಕನ್ನಡ–ಕನ್ನಡ ನಿಘಂಟು ಕನ್ನಡದಲ್ಲಿ ಬಂದಿರುವ ಮುಖ್ಯ ನಿಘಂಟುಗಳು.

ಕನ್ನಡ–ಕನ್ನಡ ನಿಘಂಟುಗಳು

ಇವುಗಳಲ್ಲದೆ ಕನ್ನಡ ಪದಗಳಿಗೆ ಕನ್ನಡದ ಸಮಾನಾರ್ಥ ಕೊಡುವ ಪದಗಳ ನಿಘಂಟುಗಳಲ್ಲಿ ಕವಲಿಯವರ ಕನ್ನಡ–ಕನ್ನಡ ಕಸ್ತೂರಿ ಕೋಶ (೧೯೫೭). ಶ್ರೀ ಕಾರಂತರ ಸಿರಿಗನ್ನಡ ಅರ್ಥಕೋಶ (೧೯೪೯), ಭಾರದ್ವಾಜರ ಕನ್ನಡ-ಕನ್ನಡ ನಿಘಂಟು ಮುಖ್ಯವಾದವುಗಳು. ಗು.ಭೀ. ಜೋಶಿ ಮತ್ತು ಶ್ರೀನಿವಾಸ ಗೋಪಾಲಾಚಾರ್ಯರ ಸಂಸ್ಕೃತ–ಕನ್ನಡ ನಿಘಂಟುಗಳು, ಗುರುನಾಥ ಜೋಶಿಯವರ ಕನ್ನಡ–ಕನ್ನಡ–ಹಿಂದಿ ಶಬ್ದಕೋಶ ಮುಂತಾದ ದ್ವಿಭಾಷಾ ನಿಘಂಟುಗಳು ಇವೆ. ಹಳೆಯ ಕಾವ್ಯದಿಂದ ಕ್ಲಿಷ್ಟ ಪದಗಳನ್ನು ಆರಿಸಿ ಅವುಗಳಿಗೆ ಅರ್ಥವನ್ನು ಕೊಡುವ ಸುಲಭ ಪದಗಳ ನಿಘಂಟುಗಳು ಶ್ರೀ ಮಾಳವಾಡ ಮತ್ತು ಇತರರ ಕಾವ್ಯಪದಮಂಜರಿ (೧೯೭೦), ಶ್ರೀ ಶಂಕರ ನಾರಾಯಣರಾವ್ ಮುಚ್ಚಿಮಲೆ ಮತ್ತು ಇತರರ ಕನ್ನಡ ನಿಘಂಟು. ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದ ನಿಘಂಟುಗಳಲ್ಲಿ ಶ್ರೀ ವೆಂಕಟರಾವ್ (ಎ) ಮತ್ತು ಇತರರ ಔಷಧಿಕೋಶಂ (೧೯೪೦), ಲೋಕ ಶಿಕ್ಷಣ ಟ್ರಸ್ಟ್‌ರವರ ಪತ್ರಿಕಾ ನಿಘಂಟು(೧೯೬೫)ಗಳನ್ನು ಹೆಸರಿಸಬಹುದು. ಕನ್ನಡದಲ್ಲಿ ಇನ್ನೂ ವಿಜ್ಞಾನ ಶಾಸ್ತ್ರಗಳ ಪದಗಳ ಪ್ರತ್ಯೇಕ ನಿಘಂಟುಗಳು ಬಂದಿಲ್ಲ. ಇತ್ತೀಚೆಗೆ ಆಯಾ ಶಾಸ್ತ್ರಗಳ ಪದಗಳಿಗೆ ಕನ್ನಡ ಸಮಾನಾರ್ಥಗಳ ಪದಪಟ್ಟಿಯನ್ನು ವಿಜ್ಞಾನ ಕರ್ನಾಟಕದಲ್ಲೂ, ಕನ್ನಡದಲ್ಲಿ ಬರೆದಿರುವ ಕೆಲವು ವಿಜ್ಞಾನ ಪುಸ್ತಕಗಳಲ್ಲೂ ಕೊಟ್ಟಿದ್ದಾರೆ. ಕೃಷ್ಣನ್ ಬಿ. ಯವರ—ಮನೋವಿಜ್ಞಾನಕೋಶ (೧೯೬೯), ಕೇಶವನ್ ಬಿ.ಎಸ್.—ವಿಶ್ವವಿಜ್ಞಾನ ಸೂಚಿ, ಶ್ರೀನಿವಾಸಾಚಾರ್—ವಿಜ್ಞಾನ

* National Conference on Dictionary making in Indian Languages. 25–28th March 1970, Central Institute of Indian Languages, Manasagangothri, Mysore-6.

ಶಬ್ದಾವಳಿ (೧೯೬೭), ಜಗನ್ನಾಥರಾವ್‌ರವರ—Glossary of mathematical terms. Kanarese Book Depot: ವೃಕ್ಷಗಳ ವರ್ಣನೆ, ಪಂಡಿತ ನಿಘಂಟು ಇವುಗಳನ್ನು ಹೆಸರಿಸಬಹುದು. ಪಂಪಭಾರತ ನಿಘಂಟು ಸಹ ಒಬ್ಬನೇ ಕವಿಯು ಬಳಸಿರುವ ಪದಗಳ ನಿಘಂಟು.

ಗಾದೆಗಳ ಕೋಶಗಳು

ಇವುಗಳಲ್ಲದೆ ಶ್ರೀ ಟಿ. ವಿ. ವೆಂಕಟರಮಣಯ್ಯನವರ ಕನ್ನಡ-ಪಡಿನುಡಿಗಳ ಕೋಶ (೧೯೬೮) ರಾಜಗೋಪಾಲಾಚಾರ್ಯರ ವಾಗ್ರೂಢಿಗಳು (೧೯೭೦) ಮುಖ್ಯ ನುಡಿಗಟ್ಟುಗಳ ನಿಘಂಟುಗಳು. ಶ್ರೀ ವೆಂಕಟಾಚಲಶಾಸ್ತ್ರಿ ಅವರ ಶ್ರೀವತ್ಸ ನಿಘಂಟು (೧೯೭೧), ೪,೦೦೦ ಸಂಖ್ಯಾ ವಿಶಿಷ್ಟ ಪದಗಳಿಗೆ ವಿವರಣೆಯನ್ನು ನೀಡುವ ನಿಘಂಟು. ಶಬ್ದಗಳನ್ನು ಕಾವ್ಯ, ಇತಿಹಾಸ, ಪುರಾಣ ಮತ್ತು ಅನೇಕ ಶಾಸ್ತ್ರಗಳಿಂದ ಆರಿಸಿದ್ದಾರೆ. ಶ್ರೀ ಅಚ್ಚಪ್ಪನವರ ಗ್ರಂಥಸ್ಥ ಗಾದೆಗಳು (೧೯೬೯) ಕವಿರಾಜ ಮಾರ್ಗದ ಕಾಲದಿಂದ ಮುದ್ದಣನ ಕಾವ್ಯದವರೆಗೂ ಬಂದಿರುವ ಪ್ರಾಚೀನ ಕಾವ್ಯಗಳನ್ನು ನೋಡಿ ಗಾದೆಗಳನ್ನು ಸಂಕಲನಗೊಳಿಸಿದ್ದಾರೆ. ಇವರ ಮತ್ತೊಂದು ಗಾದೆಗಳ ಕೃತಿಯ ಹೆಸರು ಕನ್ನಡ ಗಾದೆಗಳು. ಇವುಗಳಲ್ಲದೆ ಇನ್ನೂ ಅನೇಕ ನಿಘಂಟುಗಳು ಕನ್ನಡದಲ್ಲಿ ಹೊರಬಂದಿವೆ. ಮುಖ್ಯವಾದವುಗಳನ್ನು ಮಾತ್ರ ಇಲ್ಲಿ ಹೇಳಲಾಗಿದೆ.

ವಿಶ್ವಕೋಶಗಳ ಮಹತ್ವ

ಒಂದು ವಿಷಯದ ಬಗ್ಗೆ ಅವುಗಳ ಹಿನ್ನೆಲೆಯ ತಿಳಿವಳಿಕೆಯನ್ನು ವಿಶ್ವಕೋಶಗಳಿಂದ ತಿಳಿಯಬಹುದು. ಪ್ರತಿಯೊಂದು ಗ್ರಂಥಾಲಯದಲ್ಲೂ ಇರಲೇಬೇಕಾದ ಪುಸ್ತಕಗಳು ಹಿರಿಯರ, ಸಂಶೋಧಕರ ಓದಿಗೆ ಬೇಕಾದ ಸಾಮಾನ್ಯ ವಿಶ್ವಕೋಶಗಳು (General Encyclopaedias), ವಿಷಯ ವಿಶ್ವಕೋಶಗಳು (Subject Encyclopaedias) ಮತ್ತು ಕಿರಿಯರ ವಿಶ್ವಕೋಶಗಳು. ವಿಶ್ವಕೋಶಗಳು ತಮ್ಮದೇ ಆದ ವಿಶಿಷ್ಟರೀತಿಯ, ಕ್ರಮಬದ್ಧ ರೀತಿಯಲ್ಲಿ ಜ್ಞಾನದ ನಾನಾ ಶಾಸ್ತ್ರಗಳ ಬಗ್ಗೆ ವಿದ್ವಾಂಸರುಗಳಿಂದ ಬರೆದ ಉಪಯುಕ್ತ ಲೇಖನಗಳನ್ನು ಒಳಗೊಂಡಿರುತ್ತವೆ. ಆಯಾ ಶಾಸ್ತ್ರ ಪರಿಣಿತನು ವಿಶ್ವಕೋಶಗಳಿಗಾಗಿಯೇ ನಿರ್ದಿಷ್ಟ ಮಾಹಿತಿಯುಳ್ಳ ಲೇಖನಗಳನ್ನು ಸುಲಭವಾಗಿ, ಅತ್ಯಲ್ಪ ಕಾಲದಲ್ಲಿ ಓದುಗನಿಗೆ ತಿಳಿಯುವಂತೆ ಬರೆದಿರುತ್ತಾನೆ. ವಿಷಯದ ಹೆಸರಿನ ಅಕಾರಾದಿ ಪಟ್ಟಿಯನ್ನು ಕೊಟ್ಟು, ಪದಪಟ್ಟಿಯನ್ನು ಈ ಗ್ರಂಥಗಳಲ್ಲಿ ಕೊಟ್ಟಿರುತ್ತಾರೆ. ಒಂದೇ ಸಂಪುಟದ ವಿಶ್ವಕೋಶಗಳೂ, ಅನೇಕ ಸಂಪುಟಗಳ ವಿಶ್ವಕೋಶಗಳೂ ಇವೆ.

ಇಂಗ್ಲಿಷ್ ಭಾಷೆಯ ಅತ್ಯುತ್ತಮ ಸಾಮಾನ್ಯ ವಿಶ್ವಕೋಶ "ಬ್ರಿಟಾನಿಕಾ ಎನ್‌ಸೈಕ್ಲೋಪೇಡಿಯ." ೧೭೬೮ರಲ್ಲಿ ಪ್ರಕಟವಾದ ಈ ಜನಪ್ರಿಯ ಗ್ರಂಥ ೫ ವರ್ಷಗಳಿಗೊಮ್ಮೆ ಪುನರ್ಮುದ್ರಿತವಾಗುತ್ತದೆ. ಪ್ರತಿ ವರ್ಷವೂ ಆಯಾ ವರ್ಷದಲ್ಲಿ ನಡೆಯುವ ಘಟನೆಗಳು, ವಿಷಯ ಮಾಹಿತಿಯನ್ನು ಒಳಗೊಂಡ ಬಿಡಿಸಂಚಿಕೆಯನ್ನು ಹೊರತರುತ್ತಾರೆ. ಪ್ರತಿ ಮುದ್ರಣದಲ್ಲೂ ಪರಿಷ್ಕರಿಸಲ್ಪಟ್ಟು, ಸಾರಸ್ವತ ಪ್ರಪಂಚದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಆಂಗ್ಲ ಭಾಷೆಯಲ್ಲಿ ಇದಲ್ಲದೆ ಅನೇಕ ಸಾಮಾನ್ಯ ವಿಶ್ವಕೋಶಗಳು, ಅನೇಕ ವಿಷಯ ವಿಶ್ವಕೋಶಗಳು ಹಿರಿಯರಿಗಾಗಿ ಕಿರಿಯರಿಗಾಗಿ, ಬಂದಿವೆ.

ಶ್ರೀ ಕಾರಂತರ ಕಿರಿಯರ "ಬಾಲಪ್ರಪಂಚ" ವಿಶ್ವಕೋಶ ಕನ್ನಡದ ವಿಶ್ವಕೋಶಗಳಲ್ಲಿ ಪ್ರಥಮ ಸ್ಥಾನಗಳಿಸುತ್ತದೆ. ಅವರ "ವಿಜ್ಞಾನ ಪ್ರಪಂಚ" ಮೊತ್ತಮೊದಲಿನ ವಿಷಯ ವಿಶ್ವಕೋಶ. ೪ ಸಂಪುಟಗಳಲ್ಲಿರುವ ಈ ವಿಶ್ವಕೋಶವು ಒಂದೊಂದು ಸಂಪುಟದಲ್ಲಿ ಒಂದು ವಿಷಯದ ಬಗ್ಗೆ ಅತ್ಯಲ್ಪ ಕಾಲದಲ್ಲಿ ಓದುಗನಿಗೆ ಕನ್ನಡದಲ್ಲಿ ಪರಿಚಯ ಮಾಡಿಕೊಡುತ್ತದೆ. ಮೈಸೂರು ಮಾನಸ ಗಂಗೋತ್ರಿ ಅಧ್ಯಯನ ಸಂಸ್ಥೆಯವರು ಸಾಮಾನ್ಯ ವಿಶ್ವಕೋಶಗಳನ್ನು ಹೊರತರುತ್ತಿದ್ದಾರೆ. ಈಗ ೪ ಸಂಪುಟಗಳು ಪ್ರಕಟವಾಗಿ ೫ನೇ ಸಂಪುಟವು ಹೊರಬರುವುದರಲ್ಲಿದೆ. ವಿಷಯ ವಿಶ್ವಕೋಶಗಳನ್ನು ಸಹ ಹೊರತರಬೇಕೆಂದು ಈ ಸಂಸ್ಥೆಯು ಒಂದು ಯೋಜನೆಯನ್ನು ಹಾಕಿಕೊಂಡಿದೆ. ಕಿರಿಯರಿಗಾಗಿ, ಬೆಂಗಳೂರು ಕರ್ನಾಟಕ ಸಹಕಾರೀ ಪ್ರಕಾಶನದವರು "ಜ್ಞಾನಗಂಗೋತ್ರಿ" ಎಂಬ ವಿಶ್ವಕೋಶವನ್ನು ಏಳು ಸಂಪುಟಗಳಲ್ಲಿ ಪ್ರಕಟಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಪ್ರತಿಯೊಂದು ಸಂಪುಟದಲ್ಲೂ ಒಂದೊಂದು ವಿಷಯದ ಬಗ್ಗೆ ಪರಿಚಯ ಲೇಖನಗಳು ಇವೆ. ಇದರಲ್ಲಿ ೩ ಸಂಪುಟಗಳು ಪ್ರಕಟವಾಗಿವೆ. ಹೀಗೆ ಭಾರತದ ನಾನಾ ಪ್ರಾದೇಶಿಕ ಭಾಷೆಗಳಲ್ಲಿ ವಿಶ್ವಕೋಶಗಳು ಪ್ರಕಟಗೊಂಡಿವೆ.

ಕಲ್ಕತ್ತ ರಾಷ್ಟ್ರೀಯ ಗ್ರಂಥಾಲಯದವರು ಪ್ರಕಟಿಸಿರುವ "A Bibliography of Dictionaries and Encyclopaedias in Indian languages" ನಲ್ಲಿ ಬೇರೆ ಭಾರತೀಯ ಭಾಷೆಗಳ ವಿಶ್ವಕೋಶಗಳ ಪೂರ್ಣ ಮಾಹಿತಿಯನ್ನು ಕೊಟ್ಟಿದ್ದಾರೆ.

ಭೂವಿವರ ನಿಘಂಟುಗಳು

ಒಂದು ಪ್ರಾಂತದ ಅಥವಾ ದೇಶದ ಚಾರಿತ್ರಿಕ, ಸಾಂಸ್ಕೃತಿಕ, ಕಲೆ ಮತ್ತು ಮುಖ್ಯ ಕೈಗಾರಿಕೆಗಳ ವಿಷಯವಾಗಿ ಗ್ರಂಥಾಲಯಕ್ಕೆ ಓದುಗನು ತಿಳಿಯಲು ಬರುತ್ತಾನೆ. ಆಯಾ ಪ್ರದೇಶದ, ಪ್ರಾಂತ್ಯದ ಬಗ್ಗೆ ಭೂಗೋಳ ಶಾಸ್ತ್ರದ ತಜ್ಞರು ತಮ್ಮ ಸಂಶೋಧನೆಯನ್ನು ಮುಂದುವರಿಸಲು ಪ್ರಶ್ನೆಗಳನ್ನು ಕೇಳಿಕೊಂಡು ಬರುವುದುಂಟು. ಅನೇಕ ವೇಳೆ ಪ್ರವಾಸದ ಉದ್ದಿಶ್ಯದಿಂದಲೂ ಹೆಚ್ಚು ವಿವರವನ್ನು ತಿಳಿಯಲು ಗ್ರಂಥಾಲಯಕ್ಕೆ ಓದುಗನು ಬರುತ್ತಾನೆ. ಗೆಜೆಟೀಯರ್ ಅಥವಾ ಭೂವಿವರ ನಿಘಂಟುಗಳು, ಮಾರ್ಗದರ್ಶಕ ಕೈಪಿಡಿಗಳು ಮತ್ತು ಭೂಪಟಗಳು ಇಂತಹ ಪ್ರಶ್ನೆಗಳಿಗೆ ಉತ್ತರವನ್ನು ನೀಡುತ್ತವೆ.

ಭೂವಿವರ ನಿಘಂಟು ಅಥವಾ ಗೆಜೆಟೀಯರ್‌ಗಳಲ್ಲಿ, ಪ್ರಾಂತ್ಯದ, ನಗರಗಳ, ನದಿಗಳ, ಸರೋವರಗಳ ಮುಖ್ಯ ಶಿಖರಗಳ ಹೆಸರಿನ ಅಕಾರಾದಿಯಾಗಿ ಪಟ್ಟಿಮಾಡಿ ವಿವರಣೆಯನ್ನು ನೀಡುತ್ತಾರೆ. ಅಲ್ಲದೆ ಆಯಾ ಪ್ರದೇಶದ ಸ್ಥಳ ನಿರ್ದೇಶನ, ಚಾರಿತ್ರಿಕ, ಸಾಂಸ್ಕೃತಿಕ, ಕಲೆ ಮತ್ತು ಮುಖ್ಯ ಕೈಗಾರಿಕೆ ಇವೇ ಮುಂತಾದ ವಿಷಯಗಳನ್ನು ಸಹ ತಿಳಿಸುತ್ತದೆ. ಭಾರತದ ಚಾರಿತ್ರಿಕ ನಗರಗಳ ಹೆಸರನ್ನು ತಿಳಿಯಲು 'ಇಂಪೀರಿಯಲ್ ಗೆಜೆಟೀಯರ್ ಆಫ್ ಇಂಡಿಯಾ' ಉಪಯುಕ್ತ ಕೈಪಿಡಿ. ಕನ್ನಡದಲ್ಲಿ ಇಂತಹ ಭೂವಿವರ ನಿಘಂಟು ಇಲ್ಲವೆಂದೇ ಹೇಳಬೇಕು. ವೆಂಕಟರಂಗೋ ಕಟ್ಟಿಯವರ ಗ್ಯಾಝೆಟಿಯರ್ (೧೮೯೩) ಮುಂಬಯಿ ಕರ್ನಾಟಕ್ಕೆ ಸೇರಿದ ನಾಲ್ಕು ಪ್ರಾಂತಗಳ ಪರಿಚಯ ಮಾಡಿಕೊಡುತ್ತದೆ. ಶ್ರೀ ಹಯವದನರಾಯರ ಮೈಸೂರು ಗೆಜೆಟೀಯರ್, ಶ್ರೀ ಅನಂತಕೃಷ್ಣ ಅಯ್ಯರ್‌ರವರ Mysore Tribes and castes (೧೯೩೦) ಇಂಗ್ಲಿಷಿನಲ್ಲಿ ಬರೆಯಲ್ಪಟ್ಟವೆ.

ಮಾರ್ಗದರ್ಶಕ ಕೈಪಿಡಿಗಳು

ಪ್ರವಾಸಿಗಳಿಗೆ ಉಪಯುಕ್ತವಾಗುವ ಮಾರ್ಗದರ್ಶಕ ಕೈಪಿಡಿಗಳು ಸಹ ಕನ್ನಡದಲ್ಲಿ ಹೆಚ್ಚು ಇಲ್ಲ. ಪ್ರವಾಸಿಗಳಿಗೆ ತಾವು ಹೋಗಬೇಕೆಂದು ಇರುವ ಜಾಗಕ್ಕೆ ಹೋಗುವ ಮಾರ್ಗಗಳು, ಅಲ್ಲಿರುವ ಅಪೂರ್ವ ಶಾಸನಗಳು, ದೇವಾಲಯಗಳು, ಮೃಗಾಲಯ, ಕಲಾವಸ್ತು ಪ್ರದರ್ಶನ ಮಂದಿರಗಳು, ಚಿತ್ರಶಾಲೆ ಮುಂತಾದ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ವಿವರಣೆಯನ್ನು ನೀಡುತ್ತವೆ. ಪ್ರವಾಸಿಗೆ ಸಿಕ್ಕುವ ಪ್ರವಾಸಿ ಮಂದಿರಗಳು, ಪಾಸ್‌ಪೋರ್ಟ್, ಪರದೇಶದ ನಾಣ್ಯ ವಿನಿಮಯ, ಸುಂಕದ ಅಧಿಕಾರದ ಬಗ್ಗೆ ಸಹ ಇವು ವಿವರಣೆಯನ್ನು ನೀಡುತ್ತವೆ. ಕನ್ನಡದಲ್ಲಿ ಮೈಸೂರು ಸರ್ಕಾರದವರು ಆಯಾ ಡಿಸ್ಟ್ರಿಕ್ಟ್ ಕೈಪಿಡಿಗಳನ್ನು ತಂದಿದ್ದಾರೆ. ವಾರ್ತಾ ಇಲಾಖೆಯವರು ಕೆಲವು ಕೈಪಿಡಿಗಳನ್ನು ಪ್ರಕಟಿಸಿದ್ದಾರೆ. ಅಣ್ಣಿಗೇರಿಯವರ ಬಾದಾಮಿ, ಬನಶಂಕರಿ, ಮಹಾಕೂಟ ಮತ್ತು ಶಿವಯೋಗ ಮಂದಿರದ ಕೈಪಿಡಿ, ಲಕ್ಷ್ಮೀನರಸಿಂಹ ಶಾಸ್ತ್ರಿಗಳವರ ಕೈವಾರ ಕ್ಷೇತ್ರ, ಅನಂತಾಚಾರ್ಯರ ಬೇಲೂರು, ಹಳೇಬೀಡು ಕೈಪಿಡಿ, ಕೆಲವು ಕನ್ನಡದಲ್ಲಿ ಪ್ರಕಟವಾಗಿರುವ ಕೈಪಿಡಿಗಳು.

ಭೂಪಟಗಳು, ಅಟ್ಲಾಸ್‌ಗಳು, ಒಂದು ದೇಶದ ಅಳತೆ, ಭೂವಿಸ್ತಾರ, ಸಮುದ್ರ ಮಟ್ಟದಿಂದ ಆ ಪ್ರದೇಶದ ಎತ್ತರ ತಿಳಿಯಲು ಸಹಾಯಕ ಕೈಪಿಡಿಗಳು.

ವಾರ್ಷಿಕ ಪುಸ್ತಕಗಳು

ಕಳೆದ ವರ್ಷದ ಮುಖ್ಯ ಘಟನೆಗಳ ಬಗ್ಗೆ, ಒಂದು ದೇಶದ ಸರ್ಕಾರದ ಆಡಳಿತ, ಸಂಘ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳ ಬಗ್ಗೆ ಓದುಗನು ಗ್ರಂಥಾಲಯಕ್ಕೆ ಬಂದಾಗ ವಾರ್ಷಿಕ ಪುಸ್ತಕಗಳ ನೆರವಿನಿಂದ ಈ ಪ್ರಶ್ನೆಗಳನ್ನು ಉತ್ತರಿಸುತ್ತಾರೆ. ಈ ಪುಸ್ತಕಗಳು ಓದುಗರ ಅನೇಕ ಪ್ರಶ್ನೆಗಳಿಗೆ ಉತ್ತರ ನೀಡುತ್ತದೆ. ಆರ್ಥಿಕ, ವ್ಯವಸಾಯ, ವಾಣಿಜ್ಯ ಮತ್ತು ಜನಸಂಖ್ಯೆಗಳ ಬಗ್ಗೆ ಅಂಕಿಅಂಶಗಳನ್ನು ತಿಳಿಸುತ್ತದೆ. ಈ ವಾರ್ಷಿಕ ಪುಸ್ತಕಗಳು ಚಾರಿತ್ರಿಕ ಘಟನೆಗಳ ದಿನಾಂಕ, ವಿಶ್ವವಿದ್ಯಾನಿಲಯಗಳ ಪಟ್ಟಿ, ಮುಖ್ಯ ಸಂಘಸಂಸ್ಥೆಗಳ ಪಟ್ಟಿ, ವಿಶೇಷ ಘಟನೆಗಳು ನಡೆದ ದಿನಾಂಕ, ಕೆಲವು ಮುಖ್ಯ ಪ್ರಮಾಣ ಪತ್ರಗಳ ಸಾರಾಂಶ, ಸರ್ಕಾರದ ಮುಖ್ಯ ಅಧಿಕಾರಿಗಳ ಹೆಸರುಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಇಂಗ್ಲಿ

ಷಿನಲ್ಲಿ ಬರುವ World Almanac, Information please Almanac ಇಂತಹ ಗ್ರಂಥಗಳು. ಕನ್ನಡದಲ್ಲಿ ಇಂತಹ ಗ್ರಂಥಗಳು ಬಂದಿಲ್ಲ. ಸರ್ಕಾರದ, ವಿಶ್ವವಿದ್ಯಾನಿಲಯದ, ಮುಖ್ಯ ಸಂಘ ಸಂಸ್ಥೆಗಳ ವಾರ್ಷಿಕ ವರದಿಗಳು ಬಂದರೂ, ಎಲ್ಲವನ್ನೂ ಸೇರಿಸಿ ಒಂದು ಕಡೆ ಖಚಿತ ಅಭಿಪ್ರಾಯವನ್ನು ತಿಳಿಸುವ ವಾರ್ಷಿಕೆಗಳು ಬಂದಿಲ್ಲ. ಅನೇಕ ಮುಖ್ಯ ಘಟನೆಗಳನ್ನು ದಾಖಲು ಮಾಡದೆ ಓದುಗನಿಗೆ ಸಕಾಲದಲ್ಲಿ ಮಾಹಿತಿಯನ್ನು ದೊರಕಿಸುವುದು ಕಷ್ಟವಾಗುವುದು. ಭಾರತದಲ್ಲಿ ಇಂತಹ ಮುಖ್ಯ ವಿಷಯಗಳ ಬಗ್ಗೆ ಸಂಗ್ರಹಿಸಿ ಇಂಗ್ಲಿಷಿನಲ್ಲಿ India Reference Annual, India year bookಗಳನ್ನು ಪ್ರಕಟಿಸುತ್ತಿದ್ದಾರೆ.

ಪುಸ್ತಕ ಪಂಚಾಂಗ

ಇವು ಖಗೋಳಶಾಸ್ತ್ರಜ್ಞರಿಗೆ ಉಪಯುಕ್ತವಾಗುವ ಪುಸ್ತಕ ಪಂಚಾಂಗಗಳು. ಗ್ರಹಗಳ ಸ್ಥಿತಿಯನ್ನು ತಿಳಿಯಲು, ಭವಿಷ್ಯಕಾಲವನ್ನು ನಿರ್ಧರಿಸಲು ಬೇಕಾದ ಸಹಾಯಕ ಗ್ರಂಥಗಳು. ಇಂಗ್ಲಿಷಿನಲ್ಲಿ ಅಮೆರಿಕನ್ ಎಫೀಮೀರಿಯಸ್, ನಾಟಿಕಲ್ ಆಲ್‌ಮನಾಕ್ ಮತ್ತು ಭಾರತದ ಎಫೀಮೀರಿಯಸ್ ಆಲ್‌ಮನಾಕ್ ಮುಖ್ಯವಾದ ಗ್ರಂಥಗಳು. ಕನ್ನಡದಲ್ಲೂ ಪಂಚಾಂಗಗಳು, ಫಲಜ್ಯೋತಿಷ್ಯ ಮುಂತಾದ ಚಿಕ್ಕ ಹೊತ್ತಿಗೆಗಳು ಬಂದಿವೆ. ಜ್ಯೋತಿಶ್ಶಾಸ್ತ್ರ ಓದುಗರಿಗೆ ಬೇಕಾದ ಪರಾಮರ್ಶನ ಗ್ರಂಥಗಳು.

ವ್ಯಕ್ತಿಚಿತ್ರಗಳು

ಗಣ್ಯ ವ್ಯಕ್ತಿಗಳ ಬಗ್ಗೆ ಆತನು ಜೀವಂತನಾಗಿರಬಹುದು ಅಥವಾ ಗತಿಸಿರಬಹುದು. ಅನೇಕ ಓದುಗರು ತಮ್ಮ ಕೃತಿಗಳಲ್ಲಿ ಆ ವ್ಯಕ್ತಿಯ ಬಗ್ಗೆ ಬರೆಯುವುದಕ್ಕಾಗಲೀ ಅಥವಾ ಅವರ ಮುಖ್ಯ ಜೀವನ ಘಟನೆಗಳನ್ನು ತಿಳಿಯುವುದಕ್ಕಾಗಲೀ ಕೇಳಿಕೊಂಡು ಬರುವುದು ಸಾಮಾನ್ಯ. ಸಮಾಜವು ಹಲವಾರು ಪ್ರಮುಖ ರಾಜಕೀಯ ಗಣ್ಯರು, ಸಾಹಿತಿಗಳು, ವಿದ್ವಾಂಸರು, ಕಲಾವಿದರು, ವಿಜ್ಞಾನಿಗಳನ್ನು ಗೌರವಿಸುವುದುಂಟು. ಅಂತಹ ಸಂದರ್ಭದಲ್ಲಿ ಆತನ ಬಗ್ಗೆ ಒಂದು ಪುಸ್ತಕವನ್ನು ಪ್ರಕಟಿಸುವುದು, ಆತನ ಕಾರ್ಯದ, ಜೀವನದ ಬಗ್ಗೆ ನಾಲ್ಕು ಮಾತು ಸಮಾರಂಭದಲ್ಲಿ ಹೇಳುವುದು ಉಂಟು ಇಂತಹ ಸಮಯದಲ್ಲಿ ಗ್ರಂಥಾಲಯಕ್ಕೆ ಓದುಗರು ಆ ವ್ಯಕ್ತಿಯ ಬಗ್ಗೆ ಹೆಚ್ಚು ಹೆಚ್ಚು ತಿಳಿಯಲು ಬರುತ್ತಾರೆ. ವ್ಯಕ್ತಿಗಳ ಹೆಸರಿನ ಅಕಾರಾದಿಯಾಗಿ ಇಂತಹ ಗಣ್ಯರ ಜೀವನದ ಬಗ್ಗೆ ಜೀವನ ಚರಿತ್ರೆಯ ನಿಘಂಟುಗಳು (Biographical Dictionaries) ತಿಳಿಸುತ್ತವೆ. ಇವುಗಳು ಅಂತರ ರಾಷ್ಟ್ರೀಯ ಗಣ್ಯ ವ್ಯಕ್ತಿಗಳ ಚಿತ್ರವನ್ನು ಸಂಕ್ಷಿಪ್ತವಾಗಿ ಕೊಡಬಹುದು ಅಥವಾ ಆಯಾ ದೇಶದ ಮುಖ್ಯ ವ್ಯಕ್ತಿಗಳ ಜೀವನ ಚರಿತ್ರೆ ಮಾತ್ರ ಕೊಡಬಹುದು. ಕೆಲವು ವಿಜ್ಞಾನಿಗಳ ಅಥವಾ ಸಾಹಿತಿಗಳ ಕೈಪಿಡಿಯಾಗಿಯೇ ಇರಬಹುದು. American Men of Sciences, clebster's Biographical Dictionaries, Twentieth Century Authors ಮುಂತಾದ ನಿಘಂಟುಗಳು ಮುಖ್ಯವಾದವುಗಳು. ಗ್ರಂಥಾಲಯದಲ್ಲಿ ವ್ಯಕ್ತಿಗಳ ಬಗ್ಗೆ ಇತ್ತೀಚಿನ ವಿಷಯಗಳನ್ನು ತಿಳಿಯಲು ಪ್ರತಿ ತಿಂಗಳೂ ಇಂಗ್ಲಿಷಿನಲ್ಲಿ Current Biography ಎಂಬ ಬಿಡಿ ಸಂಚಿಕೆಗಳನ್ನು ಪ್ರಕಟಿಸುತ್ತಿದ್ದಾರೆ. ಇವುಗಳನ್ನು ವರ್ಷಕ್ಕೊಮ್ಮೆ ಸೇರಿಸಿ ಪುಸ್ತಕಗಳಾಗಿ ಹೊರ ತರುತ್ತಿದ್ದಾರೆ. ಇಂತಹ ನಿಘಂಟುಗಳಿಂದ ಓದುಗನ ಪ್ರಶ್ನೆಗಳಿಂದ ಒಬ್ಬ ವ್ಯಕ್ತಿಯ ಹುಟ್ಟಿದ ಮತ್ತು ಮರಣ ಹೊಂದಿದ್ದರೆ ಆ ದಿನಾಂಕ, ಆತನ ಕೆಲಸದ ಬಗ್ಗೆ, ಆತನ ಕೃತಿಗಳ ಪಟ್ಟಿ, ಆತನ ವಿಳಾಸ, ಬಿರುದು ಬಾವಲಿಗಳ ಬಗ್ಗೆ ಉತ್ತರಿಸಲು ಸಾಧ್ಯವಾಗುತ್ತದೆ. ಭಾರತದಲ್ಲೂ ಸಾಹಿತ್ಯ ಅಕಾಡೆಮಿಯವರು who is who in Indian Literature ಎಂಬ ಪುಸ್ತಕವನ್ನು ಹೊರ ತಂದಿದ್ದಾರೆ. ಆದರೆ ಆ ಪುಸ್ತಕವನ್ನು ಇತ್ತೀಚಿಗೆ ಪರಿಷ್ಕರಿಸದೆ, ಹೊಸ ಹೊಸ ಸಾಹಿತಿಗಳ ಹೆಸರನ್ನು ಸೇರಿಸದೆ ಮತ್ತು ಹೊಸ ವಿಷಯಗಳನ್ನು ಸೇರಿಸದೆ ಇರುವುದರಿಂದ ಖಚಿತವಾಗಿ ಒಬ್ಬ ಲೇಖಕನ ಬಗ್ಗೆ ಪೂರ್ಣ ಮಾಹಿತಿ ದೊರಕುವುದಿಲ್ಲ.

ಕನ್ನಡದಲ್ಲಿ ರಾ. ನರಸಿಂಹಾಚಾರ್ಯರ "ಕರ್ನಾಟಕ ಕವಿಚರಿತೆ" (೧೯೦೭) ಮೂರು ಸಂಪುಟಗಳಲ್ಲಿ ಇದ್ದು ಕವಿಗಳ ಪರಿಚಯವನ್ನು ನೀಡುತ್ತದೆ. ಇದರಲ್ಲಿ ಪ್ರಾಚೀನ ಕವಿಗಳ ಒಂದು ಪಟ್ಟಿಯನ್ನು ಅವರ ಕಾಲ, ಕೃತಿಗಳೊಡನೆ ಕೊಟ್ಟಿದ್ದಾರೆ. ಕವಿಯ ದೇಶ, ವಂಶ, ಮತ, ಪೋಷಕ, ಬಿರುದುಗಳು, ಗ್ರಂಥದ ಗಾತ್ರ, ಪದ್ಯದ ಛಂದಸ್ಸು ಇವುಗಳ ವಿವರಣೆಯನ್ನು ನೀಡಿದ್ದಾರೆ. ೧೮ನೇ ಶತಮಾನದಿಂದ ೧೯ನೇ ಶತಮಾನದಲ್ಲಿದ್ದ ಕವಿಗಳ ಪಟ್ಟಿಯೆನ್ನಬಹುದು.

ಇತ್ತೀಚೆಗೆ ಎಸ್. ಶಿವಣ್ಣನವರು ಕವಿಚರಿತೆಯಲ್ಲಿ ಬಿಡಲಾಗಿರುವ ಕವಿಗಳಪಟ್ಟಿಯನ್ನು ಕರ್ನಾಟಕ ಕವಿಚರಿತೆಯ ಅನುಕ್ತ ಸೂಚಿಯಲ್ಲಿ (೧೯೬೭) ಸೂಚಿಸಿದ್ದಾರೆ. ೨೫೯ ಶಿವಶರಣರ ಸಂಕ್ಷಿಪ್ತ ಪರಿಚಯ ಮಾಡಿಕೊಡುವ ತ. ಸು. ಶಾಮರಾಯರ ಶಿವಶರಣ ಕಥಾರತ್ನಕೋಶ, (೧೯೬೭) ವೆಂಕಟೇಶ ಸಾಂಗಲಿಯವರ ಸಿರಿಗನ್ನಡ–ಗ್ರಂಥಕರ್ತರ ಚರಿತ್ರಕೋಶ (೧೯೬೦), ವೆಂಕಟಸುಬ್ಬಯ್ಯನವರ ಕೆಲವು ಕನ್ನಡ ಕವಿಗಳ ಜೀವನ ಕಾಲ–ವಿಚಾರ (೧೯೨೭), ಹೆಗಡೆ, ಎನ್. ಕೆ. ಮತ್ತು ಭಟ್ಟ, ಎ. ಎಸ್. ರವರ ೨೦೬ ಗ್ರಂಥಕರ್ತರ ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರು (೧೯೬೯), ಸೂರ್ಯನಾರಾಯಣ ಚಡಗರ ದಕ್ಷಿಣ ಕನ್ನಡದ ಬರಹಗಾರರು (೧೯೬೭) ದಕ್ಷಿಣ ಭಾಷಾ ಸಂಸ್ಥೆಯವರು ಪ್ರಕಟಿಸಿರುವ " ಇಂದಿನ ಕನ್ನಡ ಬರಹಗಾರರು (೧೯೬೨) ಎಂಬ ಪುಸ್ತಕಗಳಲ್ಲದೆ ಕೋಲಾರ, ತುಮಕೂರು, ಹಾಸನ ಜಿಲ್ಲೆಯ ಗ್ರಂಥಕಾರರ ಬಗ್ಗೆ ಕೆಲವು ಲಘು ಪುಸ್ತಕಗಳು ಪ್ರಕಟವಾಗಿವೆ. ಆದರೂ ಕನ್ನಡದಲ್ಲಿ ಈ ದಿಶೆಯಲ್ಲಿ ಹೆಚ್ಚು ಕೆಲಸ ನಡೆದಿಲ್ಲವೆಂದೇ ಹೇಳಬಹುದು.

ಪರಾಮರ್ಶನ ಸೇವೆಗೆ ಪದಪ್ರಯೋಗ ಸೂಚಿಯು (Concordances) ಆವಶ್ಯಕ. ಇಂತಹ ಪುಸ್ತಕಗಳಲ್ಲಿ ಓದುಗನು ಒಂದು ಪದವು ಎಲ್ಲಿ, ಯಾವಾಗ, ಎಷ್ಟು ಸಲ ಒಂದು ಗ್ರಂಥದಲ್ಲಿ ಉಪಯೋಗಿಸಿದೆ ಎಂದು ಕೇಳುವ ಪ್ರಶ್ನೆಗಳಿಗೆ ಉತ್ತರ ಸಿಕ್ಕುತ್ತದೆ. Vedic oncordance, Bible Concordance, hakespeare Concordance, Geeta oncordadce ಇವುಗಳು ಗ್ರಂಥಾಲಯದಲ್ಲಿ ಇರಬೇಕಾದ ಪುಸ್ತಕಗಳು. ಕನ್ನಡದಲ್ಲಿರುವ ಪುರಾಣನಾಮ ಚೂಡಾಮಣಿ ಇಂತಹ ಅಪೂರ್ವ ಗ್ರಂಥ.

ಸಂಶೋಧಕರಿಗೆ, ವಿದ್ವಾಂಸರಿಗೆ ನಿಯತಕಾಲಿಕೆಗಳ ಲೇಖನಗಳ ಪಟ್ಟಿ ಮತ್ತು ಅವರ ನಿರ್ದಿಷ್ಟ ವಿಷಯದ ಬಗ್ಗೆ ಬಂದಿರುವ ಇತ್ತೀಚಿನ ಮುಖ್ಯ ಪುಸ್ತಕಗಳು ಗ್ರಂಥಾಲಯದಲ್ಲಿ ಇರುತ್ತದೆ. ನಾನಾ ಶಾಸ್ತ್ರಗಳಿಗೆ ಸಂಬಂಧಿಸಿದಂತೆ ಪ್ರಪಂಚದಲ್ಲಿ ದಿನವೂ ಅಸಂಖ್ಯಾತ ಲೇಖನಗಳು, ಪುಸ್ತಕಗಳು ಪ್ರಕಟವಾಗುತ್ತಿವೆ. ಈ ರೀತಿ ಬರುವ ಲೇಖನಗಳನ್ನು ತರ್ಕಬದ್ಧವಾಗಿ, ವಿಷಯ ಭಾಗಗಳನ್ನಾಗಿ ವಿಭಜಿಸಿ ಆಯಾ ವಿಷಯಕ್ಕೆ ಸಂಬಂಧಿಸಿದ ಲೇಖನಗಳು ಒಂದೆಡೆ ಸಿಕ್ಕುವಂತೆ ಪಟ್ಟಿ ಮಾಡುತ್ತಾರೆ. ಹಾಗೇ ಒಂದು ನಿರ್ದಿಷ್ಟ ವಿಷಯದ ಬಗ್ಗೆ ಬಂದ ಪುಸ್ತಕಗಳ, ಲೇಖನಗಳ ಗ್ರಂಥಸೂಚಿಗಳು (Subject bibliographies) ಸಂಶೋಧಕನಿಗಾಗಿ ಗ್ರಂಥಪಾಲಕರು ಸಿದ್ಧಪಡಿಸಿದ್ದಾರೆ. ಒಬ್ಬ ಲೇಖಕನ ಅಥವಾ ಸಮಾಜದ ಗಣ್ಯವ್ಯಕ್ತಿಯ ಬಗ್ಗೆ ಪುಸ್ತಕಗಳ ಮತ್ತು ಆತನ ಪುಸ್ತಕಗಳ, ಲೇಖನಗಳ ಸೂಚಿಯನ್ನೂ ಸಿದ್ಧಪಡಿಸಿದ್ದಾರೆ. (Author bibliographies). ಒಂದು ರಾಷ್ಟ್ರದಲ್ಲಿ ಪ್ರಕಟವಾಗುವ ಪುಸ್ತಕಗಳ ಸೂಚಿಯನ್ನೂ ಪ್ರಕಟಿಸುತ್ತಿದ್ದಾರೆ. British National Bibliography, Indion National Bibliogrophy ಮುಂತಾದವುಗಳು. Index India, Reader's Guide to periodical literature, Book rereiw Digest ಮುಂತಾದವುಗಳು ಇಂಗ್ಲಿಷಿನಲ್ಲಿ ಬಂದಿರುವ ಲೇಖನಗಳ ಸೂಚಿಗಳು.

ಲೇಖನ ಸೂಚಿಗಳು

ಕನ್ನಡದಲ್ಲೂ ಈಗ ಕೆಲವು ವ್ಯಕ್ತಿಗಳ ಗ್ರಂಥಸೂಚಿಗಳು ಹೊರಬಂದಿವೆ. ಶ್ರೀ ಶ್ರೀನಿವಾಸ ಹಾವನೂರರ "ಗೋವಿಂದ ಪೈ ವಾಙ್ಮಯ ದರ್ಶನ", ಶ್ರೀ ಗುಂಜಾಳರ "ಬಸವ ಸಾಹಿತ್ಯ ದರ್ಪಣ" ಅಲ್ಲದೆ ಕೆಲವು ಅಭಿನಂದನ ಗ್ರಂಥಗಳಲ್ಲಿ ಸೇರಿಸಿರುವ ಗ್ರಂಥಸೂಚಿಗಳನ್ನು ಹೇಳಬಹುದು. ಕನ್ನಡದಲ್ಲಿ ಬರುವ ಕೆಲವು ನಿಯತ ಕಾಲಿಕೆಗಳ ಲೇಖನಗಳ ಸೂಚಿಯು ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯದಿಂದ ಪ್ರಕಟಿಸುತ್ತಿದ್ದಾರೆ. ಶ್ರೀ ಸಣ್ಣರಾಮೇಗೌಡರು ತಯಾರಿಸಿರುವ ಜೀವನ, ಜಯಕರ್ನಾಟಕ ಮತ್ತು ಶಿವಾನುಭವ ಪತ್ರಿಕೆಗಳ ಲೇಖನ ಸೂಚಿ, ಶ್ರೀ ಸುಬ್ರಮಣ್ಯಂರವರ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯ ಲೇಖನಗಳ ಸೂಚಿ ಮತ್ತು ಪ್ರಬುದ್ಧ ಕರ್ನಾಟಕಲ್ಲಿ ಬಂದಿರುವ ಎನ್. ಅನಂತರಂಗಾಚಾರ್ಯರ ಲೇಖನಗಳ ಸೂಚಿ, ಶ್ರೀ ಮಾಸ್ತಿಯವರ ಜೀವನ ಪತ್ರಿಕೆಗಳಲ್ಲಿ ಬಂದಿರುವ ಲೇಖನಗಳ ಸೂಚಿ; ಶ್ರೀ ವೆಂಕಟರಮಣಯ್ಯನವರ ಲೇಖನ ಸೂಚಿ; ಸಂಶೋಧಕರಿಗೆ ನೆರವಾಗುವ ಸೂಚಿಗಳು. ಆದರೂ ಎಲ್ಲಾ ನಿಯತ ಕಾಲಿಕೆಗಳಲ್ಲಿ ಬರುವ ಲೇಖನಗಳನ್ನು ಓದುಗರಿಗೆ ಸಕಾಲದಲ್ಲಿ ದೊರಕಿಸುವುದು ಅಸಾಧ್ಯವಾಗಿದೆ.

ಹಸ್ತಪ್ರತಿಗಳ ಸೂಚಿ

ಹಸ್ತಪ್ರತಿಗಳ ಸೂಚಿಗಳು ಸಹ ಸಂಶೋಧಕನಿಗೆ ಬೇಕಾದ ಗ್ರಂಥಗಳು. ಕನ್ನಡದಲ್ಲಿ ಪಂಚಮುಖಿಯವರ Descriptive Catalogue of manuscripts in the Kannada Research Institute, Dharwar, ಮೈಸೂರಿನ ಓರಿಯಂಟಲ್ ಇನ್‌ಸ್ಟಿಟ್ಯೂಟ್‌ರವರ ವರ್ಣನಾತ್ಮಕ ಹಸ್ತಪ್ರತಿಗಳ ಸೂಚಿ, ಕುಪ್ಪುಸ್ವಾಮಿ ಶಾಸ್ತ್ರಿ ಮತ್ತು ಇತರರ Descriptive Catalogue of Kannada Manuscripts in the Government Oriental Manuscripts Library, Madras ಸೂಚಿಗಳನ್ನು ಹೆಸರಿಸಬಹುದು.

ಲೇಖನ ಸಾರಾಂಶ

ಸಂಶೋಧಕನಿಗೆ ನೆರವು ನೀಡಲು ಲೇಖನದ ಸಾರಾಂಶದ ಪಟ್ಟಿ (Abstracts) ಸಹ ಹೊರತರುತ್ತಿದ್ದಾರೆ. ವಿಜ್ಞಾನ ವಿಷಯದಲ್ಲಂತೂ ಒಂದೇ ವಿಷಯದ ಮೇಲೆ ಲೇಖನಗಳು ಬೇಗ ಬೇಗ ಪ್ರಕಟವಾಗುವುದರಿಂದ ಎಲ್ಲಾ ಲೇಖನಗಳನ್ನು ಓದುವುದು ಒಬ್ಬ ಸಂಶೋಧಕನಿಗೆ ಕಷ್ಟವಾಗಬಹುದು. ಆದ್ದರಿಂದ ಆ ಲೇಖನಗಳನ್ನು ಸಂಗ್ರಹಿಸಿ ಪ್ರಪಂಚದ ಇತರ ಭಾಗಗಳಲ್ಲಿ ಒಂದು ವಿಷಯದ ಬಗ್ಗೆ ನಡೆಯುತ್ತಿರುವ ಸಂಶೋಧನೆಗಳ ಬಗ್ಗೆ ಅತ್ಯಲ್ಪ ಕಾಲದಲ್ಲಿ ಸಾರಾಂಶ ಪಟ್ಟಿಯು ತಿಳಿಸುವುದು. Chemical Abstracts, Physical Abstracts ನಂತಹ ಲೇಖನಗಳ ಸಾರಾಂಶ ಪಟ್ಟಿಗಳು ವಿಜ್ಞಾನಿಗಳಿಗೆ ಅತ್ಯಂತ ಉಪಯುಕ್ತವಾದ ಕೈಪಿಡಿಗಳು.

ವರದಿಗಳ ಪೂರೈಕೆ

ಮೇಲೆ ತಿಳಿಸಿದ ದರ್ಶಕಗಳಲ್ಲದೆ ಗ್ರಂಥಾಲಯದಲ್ಲಿ ತಮ್ಮ ಹೆಚ್ಚಿನ ವ್ಯಾಸಂಗಕ್ಕಾಗಿ ಭಾರತದ ಮತ್ತು ಇತರ ಪಾಶ್ಚಾತ್ಯ ದೇಶಗಳ ವಿಶ್ವವಿದ್ಯಾನಿಲಯದ ಪಾಠ ಪ್ರವಚನಗಳ ಬಗ್ಗೆ, ವಿಶ್ವವಿದ್ಯಾನಿಲಯದ ವರದಿಗಳು, ಶಿಕ್ಷಣ ತಜ್ಞರ ಸಮ್ಮೇಳನದ ವರದಿಗಳು, ಯೂನೆಸ್ಕೊ ರಿಪೋರ್ಟುಗಳು, ಅಣುಕೇಂದ್ರದ ವರದಿಗಳು, ಸರ್ಕಾರದ ವರದಿಗಳ ಬಗ್ಗೆ ಓದುಗರಿಂದ ಬೇಡಿಕೆ ಇದ್ದೇ ಇರುತ್ತದೆ. ಅಪೂರ್ವಕೃತಿಗಳ ಅಥವಾ ದುರ್ಲಭವಾದ ಲೇಖನಗಳನ್ನೂ ಸಹ ಇತರ ಗ್ರಂಥಾಲಯಗಳಿಂದ ಎರವಲು ಪಡೆದು ಅವುಗಳ ಛಾಯಾಚಿತ್ರಗಳನ್ನು ತೆಗೆದುಕೊಂಡು ಓದುಗರ ಅಗತ್ಯವನ್ನು ಪೂರೈಸುತ್ತಾರೆ. ಅನೇಕ ಗ್ರಂಥಾಲಯದಲ್ಲಿ ಪುಸ್ತಕಗಳ, ಲೇಖನಗಳ ಪ್ರತಿಗಳನ್ನು ಪ್ರತಿಮಾಡುವ ಯಂತ್ರಗಳಿಂದ ತೆಗೆದು ಓದುಗನಿಗೆ ನೀಡುತ್ತಾರೆ.

ಗ್ರಂಥಪಾಲಕನ ಕೆಲಸ

ಹೀಗೆ ಗ್ರಂಥಪಾಲಕನು ಗ್ರಂಥಾಲಯಕ್ಕೆ ಬರುವ ಓದುಗನಿಗೆ ಆತನ ಪ್ರಶ್ನೆಗಳಿಗೆ ಉತ್ತರ ನೀಡಲು ಶ್ರಮಿಸುತ್ತಾನೆ. ಒಂದಾನೊಂದು ಕಾಲದಲ್ಲಿ ಗ್ರಂಥಪಾಲಕನ ಕೆಲಸ ಪುಸ್ತಕಗಳನ್ನು ಕಲೆಹಾಕುವುದು, ಜೋಪಾನ ಮಾಡುವುದು, ಓದುಗನು ಕೇಳಿದಾಗ ಮಾತ್ರ ಪುಸ್ತಕಗಳನ್ನು ತೆಗೆದುಕೊಡುವುದು ಅಥವಾ ಒಂದು ಗ್ರಂಥಾಲಯದಲ್ಲಿರುವ ಪುಸ್ತಕಗಳ ಪಟ್ಟಿಯನ್ನು ಮುದ್ರಿಸುವುದು ಎಂಬ ಕಲ್ಪನೆ ಇತ್ತು. ಈಗ ಗ್ರಂಥಪಾಲಕನ ಕೆಲಸ ಹೆಚ್ಚಿದೆ. ಪುಸ್ತಕಗಳನ್ನು ದಶಾಂಶ ಅಥವಾ ಕೋಲನ್ ವರ್ಗೀಕರಣ ಪದ್ಧತಿಯಂತೆ ಜೋಡಿಸುವುದು, ಗ್ರಂಥಗಳ ಸೂಚೀಕರಣ ಪಟ್ಟಿಯನ್ನು ತಯಾರಿಸುವುದು ಅಲ್ಲದೆ, ಗ್ರಂಥಾಲಯಕ್ಕೆ ಬರುವ ಎಲ್ಲಾ ಓದುಗನಿಗೂ ಆತನ ನಿರ್ದಿಷ್ಟ ವಿಷಯದ ಬಗ್ಗೆ ಮೇಲೆ ತಿಳಿಸಿರುವ ಮುಖ್ಯ ಗ್ರಂಥಗಳ ಮತ್ತು ಇಲ್ಲಿ ಹೆಸರಿಸದೆ ಇರುವ ಪರಾಮರ್ಶನ ಗ್ರಂಥಗಳ ಸಹಾಯದಿಂದ ಆತನಿಗೆ ಮಾಹಿತಿಗಳನ್ನು ಒದಗಿಸುವುದು ಒಂದು ಮುಖ್ಯ ಕಾರ್ಯವಾಗಿದೆ. ಸಂಶೋಧಕರಿಗೆ, ವಿದ್ವಾಂಸರಿಗೆ ಮತ್ತು ಇತರ ಓದುಗರಿಗೆ ಗ್ರಂಥಪಾಲಕನು ಅತ್ಯಲ್ಪ ಕಾಲದಲ್ಲಿ ಸಲ್ಲಿಸುವ ಈ ಸೇವೆಗೆ ಪರಾಮರ್ಶನ ಸೇವೆಯೆನ್ನುತ್ತಾರೆ. (Reference Service) ಈ ಸೇವೆಗೆಂದೇ ಸುಲಭವಾಗಿ ಗ್ರಂಥಾಲಯದಲ್ಲಿ ಇಡಲಾಗಿರುವ ಮೇಲೆ ತಿಳಿಸಿದ ಕೆಲವು ಮುಖ್ಯ ಗ್ರಂಥಗಳನ್ನು "ಪರಾಮರ್ಶನ" ಗ್ರಂಥಗಳೆನ್ನುತ್ತಾರೆ. ಗ್ರಂಥಾಲಯದಲ್ಲಿ ಇರುವ ಇಂತಹ ಪರಾಮರ್ಶನ ಗ್ರಂಥಗಳ ಬಗ್ಗೆ ಗ್ರಂಥಪಾಲಕನಿಗೆ ಪರಿಚಯವಿದ್ದು ಓದುಗರಿಗೆ ವೈಯಕ್ತಿಕವಾಗಿ, ಆತ್ಮೀಯತೆಯಿಂದ ಅವರ ಕಾರ್ಯದಲ್ಲಿ ನೆರವಾಗುತ್ತಾನೆ.

ಗ್ರಂಥಪಾಲಕನು ಓದುಗರಿಂದ ಬಂದ ಪ್ರಶ್ನೆಗಳಿಗೆ ಉತ್ತರಿಸುವುದೇ ಅಲ್ಲದೆ ಓದುಗನಿಗೆ ಆತನ ನಿರ್ದಿಷ್ಟ ವಿಷಯದ ಬಗ್ಗೆ ತಿಳಿಯುವುದು ಹೇಗೆಂದು ತಿಳಿಸುತ್ತಾನೆ. ಬರುವ ಎಲ್ಲಾ ಪ್ರಶ್ನೆಗಳಿಗೂ ಗ್ರಂಥಪಾಲಕನು ಉತ್ತ

ಸಲು ಶ್ರಮಿಸಿ, ಆ ವಿಷಯಕ್ಕೆ ಸಂಬಂಧಿಸಿದ ಪುಸ್ತಕ ಗಳನ್ನೂ, ಲೇಖನಗಳನ್ನೂ ಪರಿಚಯ ಮಾಡಿಕೊಡು ತ್ತಾನೆ. ಗ್ರಂಥಾಲಯದಲ್ಲಿ ಪರಾಮರ್ಶನ ಗ್ರಂಥಗಳ ಂದು ಪ್ರತ್ಯೇಕ ವಿಭಾಗವಿದ್ದು, ಇತ್ತೀಚಿನ ಹೊಸ ನ್ಯತ್ತಿಯ ಗ್ರಂಥಗಳನ್ನು ಗ್ರಂಥಪಾಲಕನು ಕೊಳ್ಳು ತ್ತಾನೆ. ಪ್ರತಿಯೊಂದು ಪರಾಮರ್ಶನ ಗ್ರಂಥಗಳನ್ನು ಾಳ್ಳುವಾಗಲೂ ಗ್ರಂಥಪಾಲಕನು ಆ ಪುಸ್ತಕಗಳ ಬಗ್ಗೆ ಂದಿರುವ ವಿಮರ್ಶೆಗಳನ್ನು ಓದಿ ಮತ್ತು ಪರಾಮರ್ಶನ ಂಥಗಳ ಗ್ರಂಥಸೂಚಿಗಳನ್ನು ನೋಡಿ ಇತ್ತೀಚಿನ ಆವೃ ಯ ಪ್ರತಿಗಳನ್ನು ಗ್ರಂಥಾಲಯಕ್ಕೆ ಸೇರ್ಪಡಿಸುತ್ತಾನೆ. ಧಾರಣವಾಗಿ ಈ ಪರಾಮರ್ಶನ ಗ್ರಂಥಗಳು ಬಹು ೆಯುಳ್ಳವಾಗಿದ್ದು, ಅನೇಕ ಸಂಪುಟಗಳಿಂದ ಪ್ರಕಟ ಗುತ್ತವೆ. ಗ್ರಂಥಪಾಲಕನು ಪರಾಮರ್ಶನ ವಿಭಾಗಕ್ಕೆ ಲ್ಲಾ ಸಂಪುಟಗಳನ್ನು ಬಿಡದೆ ಕೊಂಡು ಪುಸ್ತಕಗಳನ್ನು ಕಾಟುಗಳಲ್ಲಿ ಕ್ರಮಬದ್ಧವಾಗಿ ಇಡುತ್ತಾನೆ.

ಇಂತಹ ಪರಾಮರ್ಶನ ಸೇವೆಯನ್ನು ಸಲ್ಲಿಸುವುದು ಂಥಪಾಲಕನ ಆದ್ಯ ಕರ್ತವ್ಯ. ಪರಾಮರ್ಶನ ಉಪ ೋಗ ಪಡೆಯುವುದು ಎಲ್ಲಾ ವಾಚಕರ ಹಕ್ಕು. ಂಥಾಲಯ ಬರೀ ಪುಸ್ತಕ ಭಂಡಾರವಲ್ಲ, ಎಲ್ಲಾ ದುಗನೂ ಉಪಯೋಗ ಪಡೆಯಬಹುದಾದ ಕೇಂದ್ರ ಂದು ಪ್ರಚುರವಾಗಬೇಕು. ಪಾಶ್ಚಾತ್ಯ ದೇಶದಲ್ಲಿ ಂಥಾಲಯದಲ್ಲಿ ಪರಾಮರ್ಶನ ಸೇವೆಗೆ ಮುಖ್ಯ ಗಮನ ವನ್ನು ಗ್ರಂಥಪಾಲಕರು ಇತ್ತಿದ್ದಾರೆ. ಅಲ್ಲದೆ ಸಂಶೋಧಕ ರಿಗೆ, ರಾಜಕಾರಣಿಗಳಿಗೆ, ಇತರ ಕಾರ್ಯಕರ್ತರಿಗೆ ಅವರುಗಳು ಇರುವ ಸ್ಥಳಕ್ಕೆ ದೂರವಾಣಿಯ ಮೂಲಕ ಪರಾಮರ್ಶನ ಸೇವೆಯನ್ನು ಕಲ್ಪಿಸುತ್ತಾರೆ. ಗ್ರಂಥಶಾಸ್ತ್ರ ನಿಪುಣರು ಈ ಸೇವೆಯ ಬಗ್ಗೆ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ನಮ್ಮಲ್ಲೂ ಓದುಗರ, ವಿದ್ವಾಂಸರ, ಆಡಳಿ ತಾಧಿಕಾರರ ಬೆಂಬಲದಿಂದ ಗ್ರಂಥಪಾಲಕನು ಈ ದಿಶೆಯಲ್ಲಿ ಹೆಚ್ಚು ಹೆಚ್ಚು ಕೆಲಸ ಮಾಡುವ ಅವಕಾಶವುಂಟಾಗಲೀ, ಗ್ರಂಥಾಲಯಕ್ಕೆ ಬರುವ ಓದುಗನಿಗೆ, ಸಂಶೋಧಕನಿಗೆ ಗ್ರಂಥ ಭಂಡಾರಗಳಲ್ಲಿರುವ ಪುಸ್ತಕಗಳನ್ನು ಉಪಯೋಗಿ ಸಲು ಹೆಚ್ಚು ಹೆಚ್ಚು ಅವಕಾಶವುಂಟಾಗಲೀ ಎಂದು ಆಶಿಸೋಣ.

ಆಧಾರ ಗ್ರಂಥಗಳು :

L. Shores : Basic Reference Sources.

A. K. Mukherjee : Reference work and its Tools.

Severns, Hannah : Reference Service in a small Public Library.

S.R. Ranganathan : Reference Service.

Walford : Guide to Reference Material.

Winchell, Constance, M : Guide to Reference books.

ಸೃಷ್ಟಿಯ ಸಂದೇಶವನ್ನು ಪುಸ್ತಕಗಳು ಮೌನದಿಂದ ಸಾರುತ್ತವೆ. ಇವನ್ನು ಬೆಲೆಯಿಂದ ನಿರ್ಧರಿಸಬಾರದು. ಹಸುವನ್ನು ಕರೆದು ನೋಡಬೇಕು. ಪುಸ್ತಕವನ್ನು ಓದಿ ನೋಡಬೇಕು. ಒಂದು ಹಾಲನ್ನು ಕರೆದರೆ, ಇನ್ನೊಂದು ರಕ್ತವನ್ನೇ ಸೂಸುವುದು. ಆ ರಕ್ತಸಂದೇಶದಲ್ಲಿ ನೀನು ಜೀವನದಿಂದಾಚೆಗಿರುವ ಜೀವನದ ಅಂತಿಮ ಗುರಿಯನ್ನೇ ಕಂಡುಕೊಳ್ಳುವಿ.

ಹಿರೇಮಲ್ಲೂರ ಈಶ್ವರನ್ (ಶಿವನಬುಟ್ಟಿ ಪು. 48)

ಗ್ರಂಥ ಸಂಪತ್ತು

● ಬಿ. ಎಸ್. ಸಣ್ಣಯ್ಯ

ಮಕ್ಕಳು ಕಲಿಯುವುದಕ್ಕೆ ಪ್ರಾರಂಭಿಸಿದೊಡನೆಯೇ ತಮಗೇ ಅರಿವಿಲ್ಲದಂತೆ ಪುಸ್ತಕ ಪ್ರಪಂಚಕ್ಕೆ ಕಾಲಿಡುತ್ತವೆ. ಅವರ ಮನಸ್ಸಿನ ಬೆಳವಣಿಗೆ, ಅವರು ಅಭ್ಯಾಸ ಮಾಡುವ ಪುಸ್ತಕಗಳು ಮತ್ತು ವಾತಾವರಣದ ಮೇಲೆ ಅವಲಂಬಿಸಿರುತ್ತದೆ. ಸತತ ಗ್ರಂಥಾಭ್ಯಾಸದಿಂದ ಅವರ ಮನಸ್ಸು ಪುಷ್ಟಿಗೊಂಡು, ಅವರ ದೃಷ್ಟಿಕೋನವೇ ಬದಲಾಗುತ್ತದೆ. ಜ್ಞಾನ ಹೆಚ್ಚುತ್ತದೆ, ಬುದ್ಧಿ ಚುರುಕಾಗುತ್ತದೆ, ಅಂತರಾಳ ಗಾಢವಾಗುತ್ತದೆ. ಗ್ರಂಥದಿಂದ ದೊರೆತ ಜ್ಞಾನ ಇಡೀ ಜೀವನದಲ್ಲಿಯೇ ಅತ್ಯಂತ ಉಪಯುಕ್ತವಾಗಿರುತ್ತದೆ. ಯಾವ ವಯಸ್ಸಿನವರೇ ಆಗಲಿ, ಎಂತಹ ಜ್ಞಾನವೃದ್ಧರೇ ಆಗಿರಲಿ ಅವರ ಬುದ್ಧಿ ಚುರುಕಾಗಿರಬೇಕಾಗಿದ್ದರೆ, ಗಳಿಸಿದ ಜ್ಞಾನ ಸದುಪಯೋಗವಾಗಬೇಕಾದರೆ ಅದಕ್ಕೆ ಕಸರತ್ತು, ಸಾಣೆ ಅವಶ್ಯಕ. ಈ ಆವಶ್ಯಕತೆಯು ಪೂರೈಕೆಯಾಗುವುದು ಗ್ರಂಥಗಳ ಸತತಾಭ್ಯಾಸದಿಂದ.

ಬುದ್ಧಿಯ ಸಾಮರ್ಥ್ಯ

ಬುದ್ಧಿಯು ಗ್ರಂಥದಲ್ಲಿದ್ದುದೆಲ್ಲವನ್ನೂ ಸ್ವೀಕರಿಸುವುದಿಲ್ಲ. ಅದರ ಶಕ್ತಿಗೆ, ಬೆಳವಣಿಗೆಗೆ, ತೋರಿಕೆಗೆ ತಕ್ಕ ರೀತಿಯಲ್ಲಿ ಗ್ರಂಥಸ್ಥ ವಿಷಯವನ್ನು ವಿಮರ್ಶಿಸುತ್ತದೆ. ತನಗೆ ಬೇಕಾದುದನ್ನು ಸ್ವೀಕರಿಸಿ, ಬೇಡವಾದುದನ್ನು ಬಿಡುತ್ತದೆ. ಏಕೆಂದರೆ, ಗ್ರಂಥದಲ್ಲಿರುವುದೆಲ್ಲವೂ ಸಾಮಾನ್ಯಮಾನವನ ವಿವಿಧ ಮಟ್ಟದ ಬುದ್ಧಿ ಶಕ್ತಿಯ, ವಿವಿಧ ರೀತಿಯ ಜ್ಞಾನದ, ಅನುಭವದ ವಸ್ತುವೇ ಆಗಿರುತ್ತದೆ. ಆದುದರಿಂದ ಗ್ರಂಥದಲ್ಲಿ ಬಂದುದೆಲ್ಲವೂ ಸ್ವೀಕಾರಯೋಗ್ಯವಾಗಿರುವುದಿಲ್ಲ. ಕೆಲವರಿಗೆ ಹಿತವಾದುದು, ಮತ್ತೆ ಕೆಲವರಿಗೆ ಅಹಿತವಾಗಬಹುದು. ಕೆಲವರಿಗೆ ಉಪಯೋಗಕ್ಕೆ ಬರುವಂತಹದು. ಮತ್ತೆ ಕೆಲವರಿಗೆ ಅನುಪಯುಕ್ತವಾಗಬಹುದು. ಒಮ್ಮೆ ಓದಿದ ಒಂದು ಗ್ರಂಥದಿಂದ ಏನೂ ಪರಿಣಾಮಕ್ಕೊಳಗಾಗದ ಮನಸ್ಸು ಮತ್ತೊಮ್ಮೆ ಓದಿದಾಗ ಹೆಚ್ಚು ಪರಿಣಾಮಕ್ಕೆ ಒಳಗಾಗಬಹುದು. ಗ್ರಂಥಗಳನ್ನು ಓದುವುದರಿಂದ ಆಗುವ ಪರಿಣಾಮ ಅವರ್ಣನೀಯ; ಆಗುವ ಉಪಯೋಗ ಅವರ್ಣನೀಯ.

ಬುದ್ಧಿಶಕ್ತಿಯ ಅಭಿವೃದ್ಧಿ ಸಾಧನ

ಬುದ್ಧಿಶಕ್ತಿಯ ಅಭಿವೃದ್ಧಿ ಸಾಧನಗಳೆಂದರೆ ಗ್ರಂಥಗಳೇ. ಅವು ಮನಸ್ಸಿನ ಮೇಲೆ ಹಲವು ಪರಿಣಾಮಗಳನ್ನುಂಟುಮಾಡಿ, ಅದನ್ನು ಹದಗೊಳಿಸಿ, ಉತ್ತಮ ಮಾನವನನ್ನಾಗಿ ಮಾಡುತ್ತವೆ. ಒಂದು ಗ್ರಂಥವನ್ನು ಎಷ್ಟು ಆಸಕ್ತಿಯಿಂದ ಪ್ರೀತಿಯಿಂದ ಓದುತ್ತೇವೆಯೊ ಅಷ್ಟೂ ಹೆಚ್ಚು ಲಾಭ ಅದರಿಂದ ಲಭಿಸುತ್ತದೆ. ವಿಶ್ವದ ನಾನಾ ಮೂಲೆಗಳಲ್ಲಿನ ಸಾವಿರಾರು ವರ್ಷಗಳ ಜೀವನ, ನಾಗರಿಕತೆ, ಗಳಿಸಿದ್ದ ಜ್ಞಾನ, ಸಾಧಿಸಿದ ಸಾಧನೆ ಮತ್ತು ಅವುಗಳ ಪರಿಣಾಮವೇ ಮೊದಲಾದುವುಗಳೆಲ್ಲವೂ ಲಭಿಸಿರುವುದು ಗ್ರಂಥಗಳ ಮೂಲಕವೇ. ಥಾಮಸ್ ಕಾರ್ಲೈಲ್ ಹೇಳುವಂತೆ 'ಮಾನವನು ಯೋಚಿಸಿದ, ಗಳಿಸಿದ ಎಲ್ಲ ಸಂಪತ್ತೂ ಗ್ರಂಥಗಳ ಪುಟಗಳಲ್ಲಿ ಪುದುವಟ್ಟಾಗಿ ನಿಂತಿದೆ.' ಶತಶತಮಾನಗಳನ್ನು ಸೇರಿಸಿರುವ ಸೇತುವೆಯೆಂದರೆ ಗ್ರಂಥಗಳೇ. ಹಿಂದೆ ಮಾಡದ್ದನ್ನೇ ಮಾಡಿ ಕಾಲವನ್ನು ಅಪವ್ಯಯ ಮಾಡುವುದು ತಪ್ಪಿ, ಹಿಂದಿನ

ದನ್ನು ಆಧರಿಸಿ ಮುಂದುವರಿಯಲು ಸಾಧ್ಯವಾಗಿರುವುದು ಗ್ರಂಥಗಳಿಂದಲೇ. ಇತಿಹಾಸ, ಜೀವನಚರಿತ್ರೆ, ತತ್ತ್ವ ಶಾಸ್ತ್ರ, ವಿಜ್ಞಾನ, ಕಾವ್ಯ, ಕಥೆ ಮೊದಲಾದ ಎಲ್ಲ ಬಗೆಯ ಸಾಹಿತ್ಯವೂ ಮನಸ್ಸನ್ನು ಉತ್ತೇಜನಗೊಳಿಸಿ, ಮುಂದುವರಿವ ಮನಸ್ಸಿಗೆ ದಿಕ್ಸೂಚಿಯಾಗಿ ನಿಲ್ಲುತ್ತದೆ.

ಸಾಹಿತ್ಯ ಭಂಡಾರದ ನಾಶ

ಭಾರತ ದೇಶದ ಇತಿಹಾಸವನ್ನು ನೋಡಿದರೆ ಅನೇಕ ಅತ್ಯುತ್ತಮ ಗ್ರಂಥಗಳು ಮಣ್ಣಿ ಪಾಲಾಗಿರುವುದು ತಿಳಿದುಬರುತ್ತದೆ. ಕನ್ನಡದಲ್ಲಿ ಭುವನೈಕ ರಾಮಾಭ್ಯು ದಯವೇ ಮೊದಲಾದ ಹಲವಾರು ಕಾವ್ಯಗಳು ಇಂದು ನಮಗೆ ದೊರೆಯದಾಗಿವೆ. ಇಂದೂ ಕೂಡ ಅತ್ಯಂತ ಉಪಯುಕ್ತವಾದ ಅನೇಕ ಹಳೆಯ ಗ್ರಂಥಗಳು ಹುಳು ಗಳ ಪಾಲೋ, ಕೆರೆ ನದಿಗಳ ಪಾಲೋ ಆಗುತ್ತಿವೆ. ಹಲವು ಓಲೆಗ್ರಂಥಗಳನ್ನು ಕಟ್ಟಿಗೆಗಳಾಗಿ ಉಪಯೋಗಿಸಿರು ವುದು ತಿಳಿದುಬಂದಿದೆ. ಇಂದಿಗೂ ಹಲವು ಮನೆಗಳಲ್ಲಿ ಓಲೆಕಟ್ಟುಗಳು ಪೂಜಾಗೃಹವನ್ನು ಸೇರಿ ಹುಳುಗಳ ಆಹಾರವಾಗುತ್ತಿರುವುದು ಅತ್ಯಂತ ಶೋಚನೀಯವಾಗಿದೆ. ಇದಕ್ಕೆ ಕಾರಣ ಅವರಲ್ಲಿ ಬೆಳೆದುಬಂದಿರುವ ಅಂಧಶ್ರದ್ಧೆ. ಇದು ಪೂರ್ವಜರಿಂದ ಬಂದ ಪವಿತ್ರ ಆಸ್ತಿ. ಇವುಗಳನ್ನು ಹೊರಗೆ ಕೊಡಕೂಡದೆಂಬ ಒಂದು ಮಂಗಮುಷ್ಟಿ ಅವ ರನ್ನು ಅಂಧಕಾರದಲ್ಲಿಟ್ಟಿದೆ. ಈ ಅಂಧಶ್ರದ್ಧೆಯ ಮಂಗ ಮುಷ್ಟಿಯ ಹಿಡಿತದಿಂದ ಬಿಡಿಸಿಕೊಳ್ಳಲಾರದ ಅವರು ಅಪಾರ ಜ್ಞಾನರಾಶಿಯನ್ನೇ ತಮ್ಮ ಹಿಡಿತಕ್ಕೆ ಸಿಕ್ಕದ ಜಿರಲೆ, ನುಸಿ, ಗೆದ್ದಲು–ಮೊದಲಾದ ಕೀಟಗಳ ಪಾಲಿಗೆ ಬಿಟ್ಟಿದ್ದಾರೆ. ಹಲವಾರು ದೇವಮಂದಿರಗಳಲ್ಲಿ, ಮಠಗಳಲ್ಲಿ, ಧರ್ಮಶಾಲೆಗಳಲ್ಲಿ ಗ್ರಂಥರಾಶಿಗಳನ್ನು ಕಟ್ಟುಗಳಲ್ಲಿ ಕಟ್ಟಿ ಒಂದೆಡೆ ಒಟ್ಟಿರುವುದೂ ಉಂಟು ; ಹಲವು ಗ್ರಂಥಗಳನ್ನು ಕೆಲವು ದಶಕಗಳವರೆಗೆ ಬಿಚ್ಚಿಲ್ಲದೆ, ಅವು ಅಲ್ಲಿಯೇ ಪುಡಿ ಯಾಗುವಂತಹ ಸ್ಥಿತಿಯನ್ನು ಮುಟ್ಟಿರುವುದೂ ಉಂಟು. ನಾವು, ನಮ್ಮ ಜನ, ಎಂದು ಯಾವಾಗ ಎಚ್ಚೆತ್ತು ಈ ಅಪಾರ ಅಮೂಲ್ಯ ಜ್ಞಾನರಾಶಿಯನ್ನು ಕಾಪಾಡುತ್ತೇ ವೆಂಬ ಮಾತು ಬಿಡಿಸಲಾರದ ಕಗ್ಗಂಟು.

ಗ್ರಂಥರಕ್ಷಣಾ ಮಹತ್ವ

ಪುರಾತನ ಕಾಲದಿಂದ ಬಂದಿರುವ ಹಳೆಯ ಗ್ರಂಥಗಳೇ ಅಲ್ಲದೆ ಪ್ರತಿನಿತ್ಯವೂ ಪ್ರಕಟವಾಗುತ್ತಿರುವ ಸಹಸ್ರಾರು ಗ್ರಂಥಗಳು, ನಿಯತ ಕಾಲಿಕೆಗಳು ಮತ್ತು ದಾಖಲೆ ಪತ್ರ ಗಳನ್ನು ಕಾಪಾಡುವುದು ಅತ್ಯಂತ ಮಹತ್ವವಾದುದು. ಇವು ಇಂದಿನ ಜನಾಂಗಕ್ಕೆ ಮಾತ್ರವಲ್ಲದೆ ಮುಂದಿನ ಪೀಳಿಗೆಗೆ ಆವಶ್ಯಕವಾಗಿ ಬೇಕಾದ ಸಾಧನ ಸಾಮಗ್ರಿಗಳಾ ಗಿವೆ. ಇವುಗಳಲ್ಲಿ ಕ್ರಿಮಿಕೀಟಗಳಿಂದ ಸಂರಕ್ಷಿಸಿ ಅವುಗಳ ಅಪಾರಜ್ಞಾನ ಎಲ್ಲರಿಗೂ ಒದಗುವಂತೆ ಮಾಡುವುದು ಅವಶ್ಯಕವಾಗಿದೆ. ಈ ಸಂರಕ್ಷಣಾ ಕಾರ್ಯವನ್ನು ಹಲ ವಾರು ದೇಶಗಳು ಕೈಗೊಂಡಿವೆ. ಈ ದಿಸೆಯಲ್ಲಿ ಭಾರತದ ರಾಷ್ಟ್ರೀಯ ಪತ್ರಾಗಾರವು ಅನೇಕ ಸಂರಕ್ಷಣಾ ಸಾಧನ ಗಳನ್ನೂ, ರೀತಿ ನೀತಿಗಳನ್ನೂ ನಿರೂಪಿಸಿದೆ.

ಗ್ರಂಥ ಹಾಳಾಗಲು ಕಾರಣ

ಗ್ರಂಥಗಳು ಹಾಳಾಗಲು ಹಲವಾರು ಕಾರಣಗಳಿವೆ. ನಾವು ಉಪಯೋಗಿಸುವಾಗ ಜಾಗರೂಕತೆಯನ್ನು ವಹಿ ಸುವುದರಿಂದ ಗ್ರಂಥದ ನಶಿಸುವಿಕೆಯನ್ನು ತಪ್ಪಿಸಬಹುದು. ಪುಸ್ತಕವನ್ನು ಕಪಾಟಿನಿಂದ ತೆಗೆಯುವಾಗ ಬೆನ್ನಿನ ತುದಿ ಯನ್ನು ಹಿಡಿದೆಳೆಯುವುದಾಗಲಿ, ತೆಗೆದ ಪುಸ್ತಕವನ್ನು ಓದುತ್ತಾ ಹೋದಂತೆ ಅವುಗಳಲ್ಲಿ ಟೀಕೆಟಿಪ್ಪಣಿಗಳನ್ನು ಗುರುತಿಸುವುದಾಗಲಿ, ಓದಿದ ಪುಸ್ತಕಗಳನ್ನು ಎಲ್ಲೆಂದ ರಲ್ಲಿ ಬೀಸಾಡುವುದಾಗಲಿ, ಬೇಕಾದ ಭಾಗಗಳನ್ನು ಕತ್ತ ರಿಸುವುದಾಗಲಿ, ಇಷ್ಟಬಂದ ಪುಸ್ತಕಗಳನ್ನು ಎರವಲು ಪಡೆದು ಮರಳಿ ಕೊಡದಿರುವುದಾಗಲಿ, ಎಲ್ಲಿಯೂ ದೊರೆ ಯದ ಅಪೂರ್ವ ಗ್ರಂಥವನ್ನು ಎರವಲು ಪಡೆದು ಮನೆ ಯಲ್ಲಿಟ್ಟು, ಹಾಳಾಯಿತೆಂದು ಹೇಳಿ ಹಣವನ್ನು ಕಟ್ಟು ವುದಾಗಲಿ ಓದುಗನಲ್ಲಿರಬಾರದಾದ ಅತಿ ಕೆಟ್ಟಚಾಳಿಗ ಳೆಂದು ಪರಿಗಣಿಸಲಾಗಿದೆ. ಗ್ರಂಥಗಳಲ್ಲಿ ಟಿಪ್ಪಣಿಗಳನ್ನು ಬರೆಯುವ ಕೆಟ್ಟಚಾಳಿ ಯಾವನಿಗುಂಟೋ ಆತನನ್ನು ಗ್ರಂಥಾಲಯದ ಹೊಸ್ತಿಲನ್ನು ಹತ್ತಿಸಬಾರದು ಎಂದ ಮೇಲೆ ಉಳಿದವರನ್ನು ಎಷ್ಟು ದೂರವಿರಿಸಬೇಕೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಈ ಎಲ್ಲ ಕಾರಣಗಳನ್ನು ಅರಿತೋ ಅರಿಯದೆಯೋ ಹಸ್ತಪ್ರತಿಗಳ ಲಿಪಿಕಾರರು ಪುಸ್ತಕಗಳನ್ನು ಪರಿಪಾಲಿಸಿ ಕೊಂಡು ಬರಬೇಕೆಂಬುದನ್ನು

ಪುಸ್ತಕಂ ವನಿತಾ ವಿತ್ತಂ ಪರಹಸ್ತಗತಂ ಗತಂ
ಅಥವಾ ಪುನರಾಯಾತಂ ಜೀರ್ಣಂ ಭ್ರಷ್ಟಾಚ ಖಂಡಶಃ ||

ತೈಲಾದ್ರಕ್ಷೇಜ್ಜಲಾದ್ರಕ್ಷೇತ್ ರಕ್ಷೇಚ್ಛಿಥಿಲ ಬಂಧನಾತ್

ಮೂರ್ಖಹಸ್ತೇನ ದಾತವ್ಯಮೇವಂ ವದತಿ ಪುಸ್ತಕಂ॥

" ಎಂದು ದುಃಖಮಿಶ್ರವಾದ ಪರಿಹಾಸದಿಂದ ನುಡಿದಿರುವುದು ಕಾಣುತ್ತದೆ. ಪುಸ್ತಕ, ವನಿತೆ, ವಿತ್ತ–ಈ ಮೂರು ಇತರರ ಕೈಗೆ ಸೇರಿದರೆ ಅವು ಹೋದ ಹಾಗೆಯೇ; ಒಂದು ವೇಳೆ ಅವು ಮರಳಿಬಂದರೆ ಜೀರ್ಣವಾಗಿರುತ್ತವೆ; ಭ್ರಷ್ಟವಾಗಿರುತ್ತವೆ; ಇಲ್ಲವೆ, ಅರ್ಧಮರ್ಧವಾಗಿರುತ್ತವೆ. ಎಣ್ಣೆ ನೀರುಗಳು ಸೋಂಕದ ಹಾಗೆ ಪುಸ್ತಕವನ್ನು ರಕ್ಷಿಸಬೇಕು, ಅವುಗಳನ್ನು ಸಡಿಲವಾಗಿ ಕಟ್ಟಬಾರದು, ಮೂರ್ಖರ ಕೈಗೆ ಅವನ್ನು ಕೊಡಕೂಡದು—ಹೀಗೆಂದು ಪುಸ್ತಕ ಹೇಳುತ್ತದಂತೆ "[1]

ಈ ಮಾತುಗಳಲ್ಲಿ ಬಹುಭಾಗವನ್ನು ಒಪ್ಪುವುದಾದರೂ ಈ ಕಾಲದಲ್ಲಿ ಬೇರೆಯವರಿಗೆ ಪುಸ್ತಕಗಳನ್ನು ಕೊಡದಿರುವುದು, ಅದರಲ್ಲಿಯೂ ಅದಕ್ಕಾಗಿಯೇ ಇರುವ ಗ್ರಂಥಾಲಯಗಳಿಂದ ಸಾಧ್ಯವಿಲ್ಲದ ಮಾತು. ಗ್ರಂಥಾಲಯದ ಮುಖ್ಯ ಉದ್ದೇಶವೇ ಓದುಗರಿಗೆ ಆದಷ್ಟೂ ಹೆಚ್ಚು ಪುಸ್ತಕಗಳನ್ನು ಒದಗಿಸಿ, ಅವರನ್ನು ಗ್ರಂಥಭಂಡಾರದಲ್ಲಿ ಮುಕ್ತದ್ವಾರದಿಂದ Open Access) ಬರಮಾಡಿಕೊಳ್ಳುವುದು ಮತ್ತು ಗ್ರಂಥಗಳ ಸದುಪಯೋಗ ಪಡೆಯುವಂತೆ ಮಾಡುವುದೇ ಆಗಿದೆ. ಆದುದರಿಂದ ಓದುಗರು ತಮ್ಮ ಕರ್ತವ್ಯಗಳನ್ನರಿತು ಗ್ರಂಥಗಳ ಸದುಪಯೋಗಪಡಿಸಿಕೊಳ್ಳುವುದು ಸೂಕ್ತವಾದುದಾಗಿದೆ.

ವಿವಿಧ ಕಾರಣಗಳು

ಹೀಗೆ ನಾವು ಗ್ರಂಥಗಳನ್ನು ಸರಿಯಾಗಿ ಬಳಸಿಕೊಳ್ಳದಿರುವುದು ಅವುಗಳ ನಶಿಸುವಿಕೆ ಕಾರಣವಾಗಿರುವಂತೆ ನೈಸರ್ಗಿಕವಾಗಿ ಒದಗಿಬರುವ ಹುಳುಹುಪ್ಪಟೆಗಳು, ಬೂಷ್ಟು ಮತ್ತು ಗ್ರಂಥಗಳಿಗೆ ಉಪಯೋಗಿಸುವ ಕಾಗದ, ಮಸಿ, ಹೊದಿಕೆ, ಟೇಪು, ದಾರ, ಅಂಟುಗಳೇ ಮೊದಲಾದುವುಗಳ ಗುಣಮಟ್ಟವೂ ಕಾರಣವಾಗಿರುತ್ತವೆ. ಈ ದಿಸೆಯಲ್ಲಿ ಹಲವಾರು ಪ್ರಯೋಗಗಳು ನಡೆದು ಹುಳುಹುಪ್ಪಟೆಗಳನ್ನು ತಡೆಗಟ್ಟಲೂ, ತಕ್ಕ ಗುಣಮಟ್ಟದ ಕಾಗದ, ಮಸಿ–ಮೊದಲಾದವುಗಳನ್ನು ಉಪಯೋಗಿಸಲೂ ಸ್ಪಷ್ಟ ನಿರ್ಣಯಗಳಾಗಿವೆ. ಇದನ್ನು ಪಾಲಿಸಬೇಕಾದುದು ಗ್ರಂಥಪಾಲಕರ ಮತ್ತು ಪ್ರಕಾಶಕರ ಆದ್ಯ ಕರ್ತವ್ಯವಾಗಿದೆ.

ಬೆಳಕು, ಕತ್ತಲೆ ಹಾಗೂ ಗಾಳಿಗಳಿಂದ ಪುಸ್ತಕಗಳು ಹಾನಿಗೀಡಾಗುತ್ತವೆ. ಸೂರ್ಯನ ಕಿರಣಗಳು ನೇರವಾಗಿ ಗ್ರಂಥಗಳ ಮೇಲೆ ಬೀಳದಂತೆ ನೋಡಿಕೊಳ್ಳಬೇಕು. ಸೂರ್ಯಕಿರಣದ ಔಷ್ಣ್ಯದಿಂದ ಹಲವಾರು ಕ್ರಿಮಿಕೀಟಗಳನ್ನು ದೂರವಿರಿಸಬಹುದಾದರೂ ಉಷ್ಣಪ್ರಖರತೆಯಿಂದ ಹಾಳೆಗಳು ಸತ್ವ ಹೀನವಾಗುತ್ತವೆ. ಹಾಗೆಯೇ ಕತ್ತಲೆಯಲ್ಲಿ ಗ್ರಂಥಗಳನ್ನಿಟ್ಟರೆ ಶೀತಾಂಶ ಹೆಚ್ಚಿ ಬೂಷ್ಟು ಬರಲು ಅವಕಾಶವಾಗುವುದಲ್ಲದೆ ಕ್ರಿಮಿಕೀಟಗಳು ಹೆಚ್ಚಲು ಸಹಾಯವಾಗುತ್ತದೆ. ಗಾಳಿಯಿಂದಲೂ ಗ್ರಂಥಗಳಿಗೆ ಕೆಡುಕಾಗುವುದುಂಟು. ಗಾಳಿಯು ಹೆಚ್ಚು ಉಷ್ಣತೆಯಿಂದಾಗಲಿ, ಹೆಚ್ಚು ಶೀತದಿಂದಾಗಲಿ ಕೂಡಿದ್ದರೆ ಗ್ರಂಥಗಳಿಗೆ ಅಪಾಯ ತಪ್ಪಿದ್ದಲ್ಲ. ಗಾಳಿಯೊಡನೆ ಹಲವಾರು ಅನಿಲಗಳು ಸೇರುತ್ತಿರುತ್ತವೆ. ಈ ಅನಿಲಗಳು ಕಾಗದದಲ್ಲಿರುವ ಸೆಲ್ಯುಲೋಸ್ ಮತ್ತು ಉಳಿದ ಪದಾರ್ಥಗಳೊಡನೆ ಸೇರಿ ಅವುಗಳ ಕ್ಷೀಣತೆಗೆ ದಾರಿ ಮಾಡುತ್ತವೆ.

ದೂಳಿನಿಂದ ಗ್ರಂಥಗಳಿಗೆ ಆಗುವ ಅನಾಹುತ ಅಲ್ಪವಲ್ಲ. ಇದು ನೋಡಲು ಬಹಳ ಅಲ್ಪವಾದುದಾದರೂ, ಈ ದೂಳಿನ ಮೂಲಕವಾಗಿಯೇ ಕೀಟಗಳ ಅಂಡಾಣುಗಳು ಹೊರಗಿನಿಂದ ಬಂದು ಗ್ರಂಥದಲ್ಲಿ ಸೇರುವುದು. ಇವುಗಳಿಂದ ಮರಿಗಳು ಉತ್ಪತ್ತಿಯಾಗಿ ಗ್ರಂಥಗಳ ಹಾಳಾಗುವಿಕೆಗೆ ಕಾರಣವಾಗುತ್ತವೆ. ಆದುದರಿಂದ ಗಾಳಿಯ ಮೂಲಕ ಬರುವ ದೂಳನ್ನು ತಡೆಯುವುದೇ ಅಲ್ಲದೆ, ಬಂದ ದೂಳನ್ನು ಆಗಾಗ್ಗೆ ಹೊರತೆಗೆಯುವುದು ಅವಶ್ಯಕವಾಗಿ ಮಾಡಬೇಕಾದ ಕೆಲಸವಾಗಿದೆ. ದೂಳನ್ನು ತುಂಬಾ ಅಚ್ಚುಕಟ್ಟಾಗಿ ಹೊರ ತೆಗೆಯುವ ಸಾಧನವೆಂದರೆ ವಾಯುಶೂನ್ಯ ಶುದ್ಧತಾ ಸಾಧನ (Vacuum Cleaner). ಬಟ್ಟೆಯಿಂದ ಪುಸ್ತಕಗಳ ಎಲ್ಲ ಭಾಗಗಳನ್ನೂ ಒರೆಸುವುದರಿಂದಲೂ ಸಾಕಷ್ಟು ದೂಳನ್ನು ಹೊರತೆಗೆಯಬಹುದು.

ಹೀಗೆ ಗ್ರಂಥ ಸಂರಕ್ಷಣೆಯಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬಹುದಾದರೂ ಕೀಟಗಳಿಂದ ಗ್ರಂಥಗಳಿಗೆ ಆಗುವ ನಷ್ಟ ಅಪಾರವಾಗಿದೆ. ಅದರಲ್ಲಿಯೂ

---

1 ಪ್ರೊ. ಡಿ.ಎಲ್. ನರಸಿಂಹಾಚಾರ್: ಗ್ರಂಥಸಂಪಾದನೆ, ಮೈಸೂರು ೧೯೬೪, ಪು. ೫೫

ಹಸ್ತಪ್ರತಿ ಮತ್ತು ದಾಖಲೆಪತ್ರಗಳಿಗೆ ಇದರ ಉಪಟಳ ಅತಿ ಹೆಚ್ಚಿನದು.

ಕೀಟಗಳಲ್ಲಿ ಎರಡು ಗುಂಪು !

ಈ ಕೀಟಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು. ಒಂದು ಪೂರ್ಣವಾಗಿ ಬೆಳೆಯದ ಪೊರೆ ಹುಳುಗಳು. ಈ ಗುಂಪಿಗೆ ಸೇರುವ ಕೀಟಗಳೆಂದರೆ ಜಿರಲೆ, ಗೆದ್ದಲು, ನುಸಿ ಮತ್ತು ಬುಕ್‌ಲೈಸ್. ಎರಡನೆಯ ಗುಂಪಿಗೆ ಸೇರಿದ ಕೀಟವೆಂದರೆ ತನ್ನ ಜೀವಿತ ವೇಳೆಯಲ್ಲಿ ಗಮನಿಸಬಹುದಾದ ರೂಪಾಂತರಗಳನ್ನು ಹೊಂದುವ ಜೀರುಂಡೆ ಮರಿ ಅಥವಾ ಸಾಮಾನ್ಯವಾಗಿ ಕರೆಯುವ ಪುಸ್ತಕ ಕ್ರಿಮಿ.

ಗ್ರಂಥಗಳ ಶತ್ರು

ಜಿರಲೆಗಳನ್ನು ಗ್ರಂಥಗಳ ಶತ್ರುಗಳೆಂದು ೧೬೦೨ರಲ್ಲಿಯೇ ಯೂಲಿಸಸ್ ಆಲ್ಡ್ರೊವಾಂಡಸ್ ಎಂಬಾತನು ಹೇಳಿದ್ದಾನೆ. ೧೮೩೭ರಲ್ಲಿ ವೆಸ್ಟ್ ಇಂಡೀಸ್ ದೇಶದಲ್ಲಿ ಜಿರಲೆಗಳು ಹೇರಳವಾಗಿದ್ದು ಅನೇಕ ಗ್ರಂಥಗಳ ನಾಶಕ್ಕೆ ಕಾರಣವಾದುವೆಂದು ತಿಳಿದುಬರುತ್ತದೆ. ಇವುಗಳು ಪುಸ್ತಕಗಳಲ್ಲಿನ ಅಂಟುಗಳು, ಕಾಗದ ಮೊದಲಾದುವನ್ನು ತಿಂದು ಹಾಳುಮಾಡುವುದಲ್ಲದೆ, ತಾವು ಓಡಾಡುವೆಡೆಗಳಲ್ಲೆಲ್ಲ ಕಪ್ಪು ದ್ರವ ಪದಾರ್ಥವನ್ನು ವಿಸರ್ಜಿಸುತ್ತವೆ. ಇದರಿಂದ ಗ್ರಂಥಗಳು ಕಪ್ಪುಕಲೆಗಳಿಂದ ಕೂಡಿ ನೋಡಲು ಅಸಹ್ಯವಾಗಿ ಕಾಣುತ್ತವೆ. ಪುಸ್ತಕ ಕ್ರಿಮಿ ಪುಸ್ತಕದಲ್ಲಿಯೇ ಹುಟ್ಟಿ ಅಲ್ಲಿಯೇ ಬದುಕುವುದರಿಂದ ಇದಕ್ಕೆ ಪುಸ್ತಕಕ್ರಿಮಿ ಅಥವಾ ಬುಕ್‌ವರ್ಮ್ ಎಂಬ ಹೆಸರು ಅನ್ವರ್ಥವಾಗಿ ಬಂದಿದೆ. ಈ ಹುಳುಗಳು ಕಾಗದದಿಂದ ತಯಾರಾದ ಗ್ರಂಥಗಳಿಗೇ ಅಲ್ಲದೆ ಓಲೆ ಗ್ರಂಥಗಳಲ್ಲಿಯೂ ಕಂಡುಬರುತ್ತವೆ. ಇವು ಹಾಳೆಗಳಲ್ಲಿ ರಂಧ್ರಗಳನ್ನು ಕೊರೆದು ಗ್ರಂಥಗಳನ್ನು ಹಾಳುಮಾಡುತ್ತವೆ. ಅಂತೆಯೇ ಗೆದ್ದಲು ಹುಳು, ಫೈರ್ ಬ್ರ್ಯಾಟ್ಸ್, ಸೋಸಿಡ್ಸ್ ಮೊದಲಾದ ಕೀಟಗಳೂ ಗ್ರಂಥಗಳ ಶತ್ರುಗಳಾಗಿವೆ. ಜೊತೆಗೆ ಮಿಲ್‌ಡ್ಯೂ ಅಥವಾ ಬೂಷ್ಟಿನಿಂದಲೂ ಗ್ರಂಥಗಳು ಹಾಳಾಗುತ್ತವೆ.

ಪುರಾತನಕಾಲದಿಂದಲೂ ರಕ್ಷಣಾ ಪ್ರಯತ್ನ

ಈ ವಿವಿಧ ರೀತಿಯ ಹಾವಳಿಗಳಿಂದ ಗ್ರಂಥಗಳನ್ನು ಸಂರಕ್ಷಿಸುವ ಪ್ರಯತ್ನಗಳು ಪುರಾತನ ಕಾಲದಿಂದಲೂ ನಡೆದಿವೆ ಎಂಬುದಕ್ಕೆ ಹಲವಾರು ಸಾಕ್ಷಿಗಳಿವೆ. ಗ್ರಂಥಗಳಿಗೆ ಕೀಟಗಳಿಂದೊದಗುವ ಅಪಾಯದ ಬಗ್ಗೆ ಮೆಸಿಡೋನಿಯದ ಆಂಟಿಫೇನ್ಸ್, ಅಸೋನಿಯಸ್, ಇನಿಡೊರಸ್ ಹಿಸ್ಪಲೆನ್ಸಿಸ್–ಮೊದಲಾದವರು ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಕ್ರಿ. ಪೂ. ೩ನೆಯ ಶತಮಾನದಲ್ಲಿ ಚೀನಾ ದೇಶದಲ್ಲಿ ಬಂಬುಗಳಿಂದ ಮಾಡಿದ ಹಲಗೆಗಳನ್ನು ಪೆಟ್ಟಿಗೆಗಳಲ್ಲಿಟ್ಟು ರಕ್ಷಿಸುತ್ತಿದ್ದರೂ, ಈ ಹಲಗೆಗಳ ಮೇಲೆ ಬರೆಯುವುದಕ್ಕೆ ಮೊದಲು, ಅವುಗಳನ್ನು ಬೆಂಕಿಗೆ ಹಿಡಿದು ಅವುಗಳಲ್ಲಿರುವ ರಸವು ಇಂಗಿಹೋಗುವಂತೆ ಮಾಡುತ್ತಿದ್ದರು. ಇದರಿಂದ ಬಂಬುಗಳಲ್ಲಿದ್ದ ರಸಕ್ಕಾಗಿ ಬರುತ್ತಿದ್ದ ಹುಳುಗಳು ಬರದಂತಾಗುತ್ತಿತ್ತು. ಓಲೆಗರಿಗಳನ್ನು ಬರೆಯಲು ಉಪಯೋಗಿಸುವುದಕ್ಕೆ ಮೊದಲು ಬೆಂಕಿಯ ಶಾಖದಲ್ಲಿಡುತ್ತಿದ್ದುದೂ, ಅಡಿಗೆಯ ಮನೆಯ ಅಟ್ಟಗಳಲ್ಲಿ ಒಟ್ಟುತ್ತಿದ್ದುದೂ ಇದೇ ಉದ್ದೇಶದಿಂದ ಇರಬಹುದು. ಕ್ರಿ.ಶ. ೩೩೫ರಲ್ಲಿದ್ದ ಆರಿಸ್ಟಾಟಲನು ತನ್ನ ಹಿಸ್ಟೋರಿಯ ಆನಿಮಲಿಯುಮ್ ಎಂಬ ಗ್ರಂಥದಲ್ಲಿ, ಪುಸ್ತಕಗಳಲ್ಲಿ ಬಾಲವಿಲ್ಲದ ಚೇಳು, ಆರ್ಚ್‌ನಿಡ್ ಚೆಲಿಫರ್, ಕಾನ್‌ಕ್ರೊಯ್ಡ್, ಮತ್ತಿತರ ಕೀಟಗಳನ್ನು ಕಂಡುದಾಗಿ ಹೇಳಿದ್ದಾನೆ. ಹೊರೇಸ್ ಎಂಬಾತನು ದೇವದಾರು ಮರದ ಎಣ್ಣೆಯನ್ನು ಸವರಿ, ಮೆರುಗು ಕೊಟ್ಟ ಸೈಪ್ರೆಸ್ ಮರದಿಂದ ಮಾಡಿದ ಪೆಟ್ಟಿಗೆಗಳಲ್ಲಿಟ್ಟು ಸಂರಕ್ಷಿಸುವುದನ್ನು ವಿವರಿಸಿದ್ದಾನೆ. ಪ್ಲಿನಿ ದಿ ಎಲ್ಡರ್ ಎಂಬಾತನು ದೇವದಾರು ಎಣ್ಣೆಯನ್ನು ಉಪಯೋಗಿಸಿದ ಗ್ರಂಥಗಳು ನುಮಪಾಂಪಿಲಿಸ್ ಎಂಬುವವನ ಗೋರಿಯಲ್ಲಿ ಐನೂರು ವರ್ಷಗಳಿಂದ ಒಳ್ಳೆಯ ಸ್ಥಿತಿಯಲ್ಲಿದ್ದುದನ್ನು ಕಂಡಿದ್ದಾನೆ. ಎರಾಸ್‌ಮುಸ್ ಎಂಬಾತನು ಗ್ರಂಥಗಳನ್ನು ಕ್ರಿಮಿಕೀಟಗಳಿಂದ ರಕ್ಷಿಸಬೇಕಾದರೆ ಅವುಗಳನ್ನು ಉಪಯೋಗಿಸುತ್ತಿರಬೇಕು ಎಂದು ಹೇಳಿದ್ದಾನೆ. ೧೭ನೆಯ ಶತಮಾನದಲ್ಲಿ ರಾಬರ್ಟ್‌ಬ್ರೂಕ್ ಎಂಬ ರಸಾಯನ ಮತ್ತು ಭೌತಶಾಸ್ತ್ರಜ್ಞನು ಸಿಲ್ವರ್‌ಫಿಷ್ ಅಥವಾ ನುಸಿಯನ್ನು 'One of the teeth of time' ಎಂದು ಕರೆದಿದ್ದಾನೆ. ಇ.ಜಿ. ಪೆಗ್‌ನಾಟ್ ಎಂಬ ಫ್ರೆಂಚ್ ಗ್ರಂಥಸೂಚಿಕಾರನು ೧೮೦೭ರಲ್ಲಿ ಪ್ರಕಟವಾದ ತನ್ನ 'Insects Vui rongentles livres' ಎಂಬ ಗ್ರಂಥದಲ್ಲಿ ಗ್ರಂಥಹುಳುವು ತನ್ನ ಒಂದು ನೇರದಾರಿಯಲ್ಲಿ ೨೭ ಸಂಪುಟಗಳನ್ನು ಹಾದುಹೋಗಿರುವುದನ್ನು ತಿಳಿಸಿದ್ದಾನೆ.

ಹೀಗೆ ಗ್ರಂಥಗಳಿಗೆ ಆಗುವ ಅಪಾಯಗಳನ್ನು ಅರಿತ ಜನ ಇದರ ಹತೋಟಿಗಾಗಿ ಬಹು ಹಿಂದಿನಿಂದಲೂ ಪ್ರಯತ್ನಮಾಡಿರುವುದು ತಿಳಿದುಬರುತ್ತದೆ. ೧೭೭೪ರಲ್ಲಿ ರಾಯಲ್ ಸೊಸೈಟಿ ಆಫ್ ಗೋರ್ಟಿಂಗ್‌ಟನ್ ಸಂಸ್ಥೆಯು ಗ್ರಂಥಗಳಿಗೆ ಕೀಟಗಳ ಹಾವಳಿ ಮತ್ತು ಅದರ ನಿವಾರಣೋಪಾಯಗಳ ಬಗ್ಗೆ ಅಧ್ಯಯನ ನಡೆಸಿ ಯಶಸ್ವಿಯಾದ ಡಾ|| ಜೋಹಾನ್ ಎಂಬಾತನಿಗೆ ೧೨ ಡಕಟ್ (Ducat) ಹಣವನ್ನು ಬಹುಮಾನವಾಗಿ ನೀಡಿತು. ಅಮೆರಿಕೆಯ ಎ. ಇ. ಕಿಂಬರ್ಲಿ ಮತ್ತು ಬಿ. ಡಬ್ಲ್ಯು. ಸ್ಕ್ರೈಬ್ನರ್ ಅವರು ತಯಾರಿಸಿದ ೧೯೦೪ರಲ್ಲಿ ಹೊರಬಂದ 'ಸಮ್ಮರಿ ರಿಪೋರ್ಟ್ ಆಫ್ ದಿ ಬ್ಯೂರೊ ಆಫ್ ಸ್ಟ್ಯಾಂಡರ್ಡ್ಸ್ ರಿಸರ್ಚ್ ಆನ್ ಪ್ರಿಸರ್ವೇಷನ್ ಆಫ್ ರಿಕಾರ್ಡ್ಸ್' ಎಂಬ ಹೊತ್ತಗೆಯು ಗ್ರಂಥ ಸಂರಕ್ಷಣಾಧ್ಯಾಯದಲ್ಲಿ ಒಂದು ಮೈಲಿಗಲ್ಲಾಗಿ ಉಳಿದಿದೆ. ಈ ದಿಸೆಯಲ್ಲಿ ಹಲವಾರು ದೇಶಗಳು ಅಧ್ಯಯನ ನಡೆಸುತ್ತಿವೆ; ಹಲವಾರು ನಿವಾರಣೋಪಾಯಗಳನ್ನು ಸೂಚಿಸಿವೆ.

ಗೆದ್ದಲುಬಾರದಂತೆ ಇಡುವಕ್ರಮ

ಗೆದ್ದಲುಬಾರದಂತೆ ಮಾಡಲು ಗ್ರಂಥಾಲಯದ ಕಟ್ಟಡಗಳ ತಳಪಾಯದಲ್ಲಿಯೂ, ಗೋಡೆಗಳ ಸುತ್ತಲೂ ಕೀಟ ವಿರೋಧಕ ವಸ್ತುಗಳನ್ನು ಬಳಸಲಾಗುತ್ತಿದೆ. ಇದರಲ್ಲಿ ಟ್ರೈಕ್ಲೋರೊಬೆಂಜಿನ್, ಪೆಂಟಕ್ಲೋರೊ ಫೆನಾಲ್, ಸೋಡಿಯಂ ಆರ್ಸೆನೈಟ್ ಮತ್ತು ಇತರ ಮತ್ತನ್ನುಂಟುಮಾಡುವ ಪದಾರ್ಥಗಳಿಂದ ಕೂಡಿದ ದ್ರಾವಣವು ಅತ್ಯಂತ ಪರಿಣಾಮಕಾರಿ ಎಂದು ತಿಳಿದುಬಂದಿದೆ. ಈಚೆಗೆ ಡೈಲ್ಡ್ರಿನ್ ಎಂಬ ವಸ್ತುವನ್ನು ಉಪಯೋಗಿಸುವುದು ರೂಢಿಗೆ ಬಂದಿದೆ. ಈ ಮೇಲಿನಂತೆ ಮಾಡದೆ ಈಗಾಗಲೆ ಕಟ್ಟಿರುವ ಕಟ್ಟಡಗಳಲ್ಲಿ ಗೆದ್ದಲು ಬರುವ ಸೂಚನೆಯಿದ್ದರೆ, ಕಟ್ಟಡದಲ್ಲಿ ಕಂಡುಬರುವ ಬಿರುಕುಗಳಿಗೆ ಮತ್ತು ಬಿಲಗಳಿಗೆ ಗೆದ್ದಲು ನಿರೋಧಕ ವಸ್ತುವಾದ ಸೋಡಿಯಂ ಆರ್ಸನೇಟ್ ದ್ರಾವಣವನ್ನು ಹಾಕಿ ಕಾಂಕ್ರೀಟಿನಿಂದ ಮುಚ್ಚಬೇಕು. ಪುಸ್ತಕಗಳಿರುವ ಕಪಾಟುಗಳನ್ನು ಲೋಹದ ತಗಡಿನ ಮೇಲಿಡುವುದು ಮೇಲು. ಇದು ಸಾಧ್ಯವಿಲ್ಲದಾಗ ಕಪಾಟುಗಳ ಕಾಲುಗಳನ್ನು ಇದ್ದಲು ತಾರೆಣ್ಣೆ ಅಥವಾ ಮರದ ತಾರೆಣ್ಣೆಯಿಂದ ಬಟ್ಟೆಯಿಳಿಸಿ ತೆಗೆದ ಕ್ರಿಯೊಸೋಟ್ ಎಣ್ಣೆ ತುಂಬಿದ ಡಬ್ಬಗಳಲ್ಲಿಡಬಹುದು. ಮರಕ್ಕೆ ಬರುವ ಗೆದ್ದಲು ಹುಳುಗಳು ತೆರೆದ ಕಿಟಕಿಗಳ ಮೂಲಕ ಕಟ್ಟಡದೊಳಗೆ ಬಂದು ಮರಮುಟ್ಟುಗಳ ಮೇಲೊ ಗ್ರಂಥಗಳಲ್ಲಿಯೊ ಸೇರುತ್ತವೆ. ಇವುಗಳನ್ನು ಗಡೆಗಟ್ಟುವ ಸಾಧನವೆಂದರೆ ಕಿಟಕಿಗಳಿಗೆ ಪರದೆಗಳನ್ನು ಹಾಕುವುದು ಮತ್ತು ಮರಮುಟ್ಟುಗಳಿಗೆ ತಾರೆಣ್ಣೆಯನ್ನು ಉಪಯೋಗಿಸುವುದು. ತಾರೆಣ್ಣೆಯನ್ನು ಉಪಯೋಗಿಸಲು ಸಾಧ್ಯವಿಲ್ಲದೆಡೆಗಳಲ್ಲಿ ನೀರಿನಲ್ಲಿ ಕರಗುವಂಥ ಫ್ಲೋರ್-ಕ್ರೋಮ್-ಡಿನಿಟ್ರೊ-ಫಿನಾಲ್ ಮಿಶ್ರಣದಿಂದ ಕೂಡಿದ ಉಲ್‌ಮನ್ ಸಾಲ್ಟ್ಸ್ ಎಂಬ ಲವಣಗಳನ್ನು ಉಪಯೋಗಿಸುವುದು ಉಚಿತವಾದುದು. ಇದರಂತೆಯೇ ನ್ಯಾಫ್ತ ವಸ್ತುವಿನಿಂದ ಕೂಡಿದ ಕೀಟನಾಶಕ ವಸ್ತುಗಳನ್ನೂ ಉಪಯೋಗಿಸಬಹುದಾಗಿದೆ. ಇವುಗಳಿಗೆ ಬದಲಾಗಿ ಉಪಯೋಗಿಸಬಹುದಾದ ಮತ್ತೊಂದು ವಸ್ತುವೆಂದರೆ ಕ್ಸೈಲಮಾನ್ (Xylaman) ಕ್ರಿಮಿನಾಶಕ. ಇವುಗಳೆಲ್ಲವೂ ಮರದ ಸಾಮಗ್ರಿಗಳಿಗೆ ಉಪಯೋಗಿಸಬಹುದಾದುವೇ ಹೊರತು ಪುಸ್ತಕಗಳಿಗಲ್ಲವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅತ್ಯಂತ ಮುಖ್ಯವಾದುದು. ಅಮೆರಿಕದಲ್ಲಿ ಮರಗಳಿಗೆ ಬರುವ ಗೆದ್ದಲು ಕಟ್ಟಡದೊಳಗಿದ್ದರೆ ಹೈಡ್ರೊಸೈಯಾನಿಕ್ ಅನಿಲವನ್ನು ಧೂಪಹಾಕಿ ಅದನ್ನು ನಾಶಮಾಡುತ್ತಾರೆ. ಇದನ್ನುಪಯೋಗಿಸಿದಾಗ ೪೮ ಗಂಟೆಗಳ ಕಾಲ ಮುಚ್ಚಿದ್ದು ಮತ್ತೆ ೪೮ ಗಂಟೆಗಳ ಕಾಲ ತೆರೆದಿಡಬೇಕು. ಈ ಹೈಡ್ರೊಸೈಯಾನಿಕ್ ಹಬೆಗೆ ಬದಲಾಗಿ ಮೆಥಿಲ್ ಬ್ರೋಮೈಡನ್ನು ಉಪಯೋಗಿಸಬಹುದು. ಇದನ್ನು ಉಪಯೋಗಿಸಿದಾಗ ೪೮ ಗಂಟೆಗಳಿಗೆ ಬದಲಾಗಿ ೧೨ ಗಂಟೆಗಳ ಕಾಲ ಧೂಪಹಾಕಿದರೆ ಸಾಕಾಗುತ್ತದೆ. ಈ ಅನಿಲಗಳು ತುಂಬಾ ಅಪಾಯಕಾರಿಯಾದುದರಿಂದ ಈ ಕೆಲಸವನ್ನು ತಜ್ಞರಿಂದ ಮಾತ್ರ ಮಾಡಿಸಬೇಕು.

ಬೂಷ್ಟು ಬರದಂತೆ ಇರುವ ಕ್ರಮ

ಕೆಲವು ವೇಳೆ ಹವಾಮಾನದ ಒತ್ತಡದಿಂದ ಗ್ರಂಥಗಳಿಗೆ ಬೂಷ್ಟು ಬರುವುದುಂಟು. ಇದು ತಗುಲಿದ ಗ್ರಂಥಗಳನ್ನು ತೆಗೆದು ಪ್ರತ್ಯೇಕ ಸ್ಥಳದಲ್ಲಿ ಜೋಕ್ಕಟಗೊಳಿಸಬೇಕು. ಈ ಗ್ರಂಥಗಳಿರುವ ಕಪಾಟುಗಳಿಗೆ ಅರಗಿನಿಂದ ತಯಾರಿಸಿದ ಮೆರುಗೆಣ್ಣೆಯನ್ನು ಸಿಂಪಡಿಸುವುದು ಉತ್ತಮ. ಈ ಮೆರುಗೆಣ್ಣೆಯು ಬೂಷ್ಟು ಬರದಂತೆ ಮಾಡುವುದಲ್ಲದೆ, ಅದು ಹರಡುವುದನ್ನೂ ತಡೆಗಟ್ಟುತ್ತದೆ. ಮತ್ತು ಇದನ್ನು ಗ್ರಂಥದ ಹೊದಿಕೆಗೆ ಉಪ

ಯೋಗಿಸಿರುವ ಪಿಷ್ಟಪದಾರ್ಥದ ಅಂಟನ್ನು ಹೊಂದಿರುವ ಬಟ್ಟೆಯ ಮೇಲೆ ಸಿಂಪಡಿಸಿದರೆ ಬೂಷ್ಟು ಬರದಂತಾಗುತ್ತದೆ. ಬಂದ ಬೂಷ್ಟಿನಿಂದ ಕಾಗದದ ಮೇಲೆ ಕಲೆಗಳಾಗಿದ್ದರೆ ಮದ್ಯಸಾರ (Alcohal)ವನ್ನು ಉಪಯೋಗಿಸಿ ಹೋಗಲಾಡಿಸಬಹುದು. ಆದರೆ, ಮದ್ಯಸಾರದಿಂದ ಅಕ್ಷರಗಳ ಮೇಲೆ ಏನಾದರೂ ಪರಿಣಾಮವಾಗುವುದೇ ಎಂಬುದನ್ನು ಮೊದಲು ನೋಡಿ ಈ ಕೆಲಸ ಮಾಡಬೇಕಾಗುತ್ತದೆ.

ಇತ್ತೀಚಿನ ಅಧ್ಯಯನದಿಂದ ಬೂಷ್ಟು ಕ್ರಿಮಿಕೀಟಗಳು ಮೊದಲಾದುವನ್ನು ಕ್ರಿಮಿನಾಶಕ ವಸ್ತುಗಳ ಧೂಪದಿಂದ ನಾಶಪಡಿಸಬಹುದೆಂದು ತಿಳಿದುಬಂದಿದೆ. ಹೊರಗಿನಿಂದ ಗ್ರಂಥಾಲಯಕ್ಕೆ ಬಂದ ಯಾವ ಪುಸ್ತಕಗಳನ್ನಾದರೂ ಈ ಪ್ರಧೂಮನ ಒತ್ತಡ (Fumigation)ಕ್ಕೆ ಒಳಗುಮಾಡುವುದು ಉಚಿತ. ಇದರಿಂದ ಹೊರಗನಿಂದ ಬಂದು ಸೇರಬಹುದಾದ ಹುಳುಹುಪ್ಪಟೆಗಳನ್ನು ತಡೆಗಟ್ಟಬಹುದಾಗಿದೆ.

ಗ್ರಂಥಾಲಯದಲ್ಲಿ ಕೀಟಗಳ ಬಾಧೆ ಕಂಡುಬಂದಾಗ ಇಡೀ ಗ್ರಂಥಾಲಯವನ್ನೇ ಈ ಪ್ರಧೂಮನ ಒತ್ತಡಕ್ಕೆ ಒಳಪಡಿಸಬಹುದು. ಕೆಲವು ಪುಸ್ತಕಗಳು ಮಾತ್ರ ಕೀಟಗಳಿಗೆ ತುತ್ತಾದಾಗ ಅವುಗಳನ್ನು ಮಾತ್ರ ಬೇರ್ಪಡಿಸಿ, ಪ್ರಧೂಮನ ಕೊಠಡಿ ಅಥವಾ ಪೆಟ್ಟಿಗೆಯಲ್ಲಿ ಹಬೆಯ ಒತ್ತಡದಲ್ಲಿಟ್ಟು ಕೀಟಗಳನ್ನು ನಾಶಪಡಿಸಬಹುದು. ನವದೆಹಲಿಯಲ್ಲಿರುವ ಭಾರತ ರಾಷ್ಟ್ರೀಯ ಪತ್ರಾಗಾರದಲ್ಲಿ ರೂಪಿಸಿರುವಂತೆ ವಾಯುನಿರ್ಬಂಧಿತ ಕಪಾಟನ್ನು ನಿರ್ಮಿಸಬೇಕು. ಒಳಗಡೆ ಜಾಲರಿಗಳಿರುವ ಹಂತಗಳನ್ನು ರಚಿಸಬೇಕು. ಈ ಹಂತಗಳಲ್ಲಿ ಪುಸ್ತಕಗಳನ್ನು ತೆರೆದು ಬೆನ್ನು ಮೇಲೆ ಬರುವಂತೆ ಜೋಡಿಸಬೇಕು. ಕಪಾಟಿನ ಕೆಳಗಿನ ಹಂತದಲ್ಲಿ ಒಂದು ರಂಧ್ರಮಾಡಿ ಅದರಲ್ಲಿ ಶುದ್ಧ ಉಕ್ಕಿನ ತಟ್ಟೆಯನ್ನು ಅಳವಡಿಸಬೇಕು. ಈ ತಟ್ಟೆಯ ಮೇಲ್ಭಾಗದಲ್ಲಿ ಕಪಾಟಿನ ಒಳಗಡೆ ಥೈಮಾಲ್ ಅಥವಾ ಇತರ ಕ್ರಿಮಿನಾಶಕ ವಸ್ತುವನ್ನಿಡಬೇಕು. ಗಾಜಿನ ತಳಭಾಗದಿಂದ ಶಾಖಬರುವಂತೆ ೪೦–೬೦ ವಾಟ್ ಶಕ್ತಿಯ ಒಂದು ವಿದ್ಯುತ್ ದೀಪವನ್ನು ಅಳವಡಿಸಬೇಕು. ಕಪಾಟಿನ ಬಾಗಿಲನ್ನು ಮುಚ್ಚಿ, ವಿದ್ಯುತ್ ದೀಪವನ್ನು ಹಚ್ಚಿದರೆ ಆ ದೀಪದ ಶಾಖವು ಥೈಮಾಲಿರುವ ತಟ್ಟೆಗೆ ತಟ್ಟಿ, ಥೈಮಾಲ್ ಅನಿಲವು ಉತ್ಪತ್ತಿಯಾಗುತ್ತದೆ. ಹೀಗೆ ಉತ್ಪತ್ತಿಯಾದ ಅನಿಲವು ಪುಸ್ತಕಗಳಲ್ಲಿ ಸೇರಿ ಅದರಲ್ಲಿರುವ ಕೀಟಗಳನ್ನು ನಾಶಪಡಿಸುತ್ತದೆ. ಈ ಥೈಮಾಲು ಬೂಷ್ಟಿಗೆ ಅತ್ಯಂತ ಪರಿಣಾಮಕಾರಿಯಾದುದಾಗಿದೆ. ಕೀಟಗಳಿಗೆ ಪ್ಯಾರ ಡೈಕ್ಲೋರೊ ಬೆಂಜೀನ್ ಮತ್ತು ಕಿಲ್ಲೊ ಟಿರಾಗಳನ್ನೇ ಉಪಯೋಗಿಸಬೇಕಾಗುತ್ತದೆ.

ಔಷಧಿಗಳ ಬಳಕೆ

ಕೆಲವು ಗ್ರಂಥಾಲಯಗಳಲ್ಲಿ ಪುಸ್ತಕಗಳ ರಕ್ಷಣೆಗೆ ನ್ಯಾಫ್ತಲಿನ್ ಬಿಲ್ಲೆಗಳನ್ನು ಉಪಯೋಗಿಸುತ್ತಾರೆ. ಇದೂ ಸಹ ಪರಿಣಾಮಕಾರಿ ಎಂದು ತಿಳಿದುಬಂದಿದೆ. ಇದಲ್ಲದೆ ಪೈರಾತ್ರಮ್ ಪುಡಿಯನ್ನು ಉಪಯೋಗಿಸಬಹುದು. ಇದು ಮನುಷ್ಯರಿಗೆ ಅಪಾಯಕಾರಿಯಾದುದರಿಂದ ಬಹಳ ಜಾಗರೂಕತೆಯಿಂದ ಉಪಯೋಗಿಸಬೇಕಾಗುವುದು. ೧೨ : ೧೦೦ರ ಪ್ರಮಾಣದಲ್ಲಿ ಸೋಡಿಯಂ ಫ್ಲೋರೈಡು ಮತ್ತು ಗೋಧಿಯ ಹಿಟ್ಟನ್ನು ಬೆರಸಿ ಕಪಾಟುಗಳಲ್ಲಿ ಅಥವಾ ಕತ್ತಲ ಮೂಲೆಗಳಲ್ಲಿಟ್ಟರೆ ಜಿರಲೆಗಳನ್ನು ನಾಶ ಮಾಡಬಹುದು.

ಈ ದೆಸೆಯಲ್ಲಿ ಭಾರತದಲ್ಲಿ ಹಲವಾರು ಪ್ರಯತ್ನಗಳು ನಡೆದಿವೆ. ಕೆಲವೆಡೆ ಪಂಡ್ರಿ ಎಂಬ ಒಂದು ವಿಧವಾದ ಹುಲ್ಲು ಮತ್ತು ಘೋರಬಾಚ್ (Ghora Bach: Achorus Calamus) ಇವುಗಳ ಪುಡಿಯನ್ನು ಹಸ್ತಪ್ರತಿಗಳೊಡನಿಟ್ಟಿರುವುದು ತಿಳಿದುಬರುತ್ತದೆ. ಕೆಲವೆಡೆ ಹಸ್ತಪ್ರತಿಗಳನ್ನು ಬಣ್ಣದ ಬಟ್ಟೆಗಳಿಂದ ಸುತ್ತಿಟ್ಟಿರುವುದೂ ಉಂಟು. ಹೀಗೆ ಸುತ್ತಿಡುವುದರಿಂದ ಗ್ರಂಥಗಳನ್ನು ದೂಳಿನಿಂದ ರಕ್ಷಿಸಬಹುದು ; ಮತ್ತು ಕೆಂಪು, ಹಳದಿ ಬಣ್ಣಗಳು ಕೀಟ ನಿರೋಧಕಗಳೂ ಆಗಿವೆ. ಹಲವು ಕಡೆ ಹಲವು ರಾಸಾಯನಿಕ ವಸ್ತುಗಳನ್ನು ಬಳಸುತ್ತಿದ್ದಾರೆ. ಘಾನಾ ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ೧.೬ ಔನ್ಸ್ ಮರ್ಕ್ಯುರಿಕ್ ಕ್ಲೋರೈಡ್ ಮತ್ತು ಶೇಕಡ ೦.೫ ಬೀಚ್ ಮರದ ಕ್ರಿಯೊಸೊಟ್ ಎಣ್ಣೆಯನ್ನು ಒಂದು ಗ್ಯಾಲನ್ ಮೆಥಿಲ್ ಬೆರಸಿದ ಮದ್ಯಸಾರದೊಡನೆ ಮಿಶ್ರ ಮಾಡಿ ಸಣ್ಣ ಕುಂಚದಿಂದ ಪುಸ್ತಕಗಳ ಎರಡೂ ರಟ್ಟುಗಳ ಒಳಭಾಗಕ್ಕೂ, ವಿಭಾಗ ಹೊಲಿಗೆಗಳ ಸಂದುಗಳಿಗೂ ಪುಸ್ತಕದ ಬೆನ್ನುಭಾಗಕ್ಕೂ ನಡುವಣ ಭಾಗಕ್ಕೂ ಪುಸ್ತಕಗಳ ಅಂಚುಗಳಿಗೂ ಸವರುತ್ತಾರೆ.

ಗ್ರಂಥಗಳ ಚರ್ಮದ ಹೊದಿಕೆಗಳನ್ನು ಕಾಪಾಡಲು

ಭಾರತ ರಾಷ್ಟ್ರೀಯ ಪತ್ರಾಗಾರವು ಲ್ಯಾನೊಲಿನ್ ಎಣ್ಣೆಯ ತಯಾರಿಕಾ ಕ್ರಮವನ್ನು ನಿರೂಪಿಸಿದೆ. ಓಲೆಗರಿಗಳಿಗೆ ಮೈಸೂರು ನಗರದಲ್ಲಿ ತಯಾರಾಗುವ ಒಂದು ವಿಧ ಎಣ್ಣೆಯನ್ನು ಉಪಯೋಗಿಸಿ ಓಲೆ ಗ್ರಂಥಗಳನ್ನು ಕಾಪಾಡುವಲ್ಲಿ ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯ ಮತ್ತು ಕನ್ನಡ ಅಧ್ಯಯನ ಸಂಸ್ಥೆಗಳು ಯಶಸ್ವಿಯಾಗಿವೆ.

ಹವಾ ನಿಯಂತ್ರಣ

ಕೀಟಗಳನ್ನು ತಡೆಗಟ್ಟುವಲ್ಲಿ, ಹವಾಮಾನ ವೈಪರೀತ್ಯಗಳಿಂದ ಗ್ರಂಥಗಳನ್ನು ರಕ್ಷಿಸುವಲ್ಲಿ ಮೇಲೆ ಹೇಳಿದ ಎಲ್ಲ ನಿವಾರಣೋಪಾಯಗಳೂ ಅನುಕೂಲಕರವಾಗಿವೆ. ಇವೆಲ್ಲಕ್ಕೂ ಮೇಲಾದ, ಪರಿಣಾಮಕಾರಿಯಾದ ಕ್ರಮವೆಂದರೆ ಹವಾನಿಯಂತ್ರಣದಲ್ಲಿ ಗ್ರಂಥಗಳನ್ನಿಡುವುದು. ಇದು ಸಾಧ್ಯವಿಲ್ಲದಾಗ ನೀರನ್ನಾಗಲಿ, ಕ್ಯಾಲ್ಸಿಯಂ ಕ್ಲೋರೈಡನ್ನಾಗಲಿ ಋತುಮಾನಕ್ಕೆ ತಕ್ಕಂತೆ ಉಪಯೋಗಿಸಿ ಹವಾನಿಯಂತ್ರಣವನ್ನು ಸ್ವಲ್ಪಮಟ್ಟಿಗೆ ಸಾಧಿಸಬಹುದು. ಆದರೆ ಇದರಿಂದ ಗಾಳಿಯ ಶುದ್ಧತೆ ಸಾಧ್ಯವಾಗುವುದಿಲ್ಲ. ಇದಲ್ಲದೆ ಗ್ರಂಥಗಳಿಗೆ ದೂಳು ಬಾರದಂತೆ ನೋಡಿಕೊಳ್ಳುವುದರಿಂದಲೂ ಗ್ರಂಥ ಸಂರಕ್ಷಣೆ ಮಾಡಬಹುದು. ದೂಳೇ ಮುಖ್ಯವಾಗಿ ಎಲ್ಲ ಹುಳುಹುಪ್ಪಟೆಗಳು ಬರಲು ಸಹಕಾರಿಯಾದುದರಿಂದ, ಗ್ರಂಥಗಳನ್ನು ತಿಂಗಳಿಗೊಮ್ಮೆಯಾದರೂ ಹೊರತೆಗೆದು ಅವುಗಳಲ್ಲಿ ಸೇರಿರುವ ದೂಳನ್ನು ಕೊಡವಿ, ಬಟ್ಟೆಯ ಸಹಾಯದಿಂದ ಒರಸಿ. ಕಪಾಟನ್ನು ಸ್ವಚ್ಛಗೊಳಿಸಬೇಕು. ಅವುಗಳನ್ನಿಟ್ಟಿರುವ ಕೊಠಡಿಯ ನೆಲವನ್ನು ಒದ್ದೆ ಬಟ್ಟೆಯಿಂದ ಒರಸಿ ಸ್ವಚ್ಛಗೊಳಿಸಬೇಕು. ಗಾಳಿ ಬೆಳಕು ಚೆನ್ನಾಗಿ ಬರುವಂತೆ ಕಿಟಕಿ ಬಾಗಿಲುಗಳನ್ನು ತೆರೆದಿರಬೇಕು. ಅಂತೆಯೇ ದೂಳನ್ನು ತಡೆಗಟ್ಟುವಂತಹ ಏರ್ಪಾಟಿರಬೇಕು.

ಈ ಎಲ್ಲ ಏರ್ಪಾಟುಗಳ ಜೊತೆಗೆ ಈಗಾಗಲೆ ಹುಳುಗಳಿಂದ ಹಾಗೂ ಹವಾಮಾನದ ಒತ್ತಡದಿಂದ ಕ್ಷೀಣಿಸಿರುವ ಗ್ರಂಥಗಳ ದುರಸ್ತಿಕಾರ್ಯ ಕೈಗೊಂಡು ಗ್ರಂಥಗಳನ್ನು ಕಾಪಾಡಬಹುದಾಗಿದೆ. ನಶಿಸಿದ ಬಿಡಿ ಹಾಳೆಗಳಿಗೆ ಟಿಸ್ಯೂ, ಚಿಪನ್‌ಗಳನ್ನು ಕಾರ್ಬಾಕ್ಸಿ ಮೆಥಿಲ್ ಸೆಲ್ಯುಲೋಸ್ ಅಂಟಿನೊಡನೆ ಹೊದಿಸಿ ಭದ್ರಪಡಿಸಬಹುದಾಗಿದೆ. ಹೀಗೆ ಮಾಡುವುದಕ್ಕೆ ಮೊದಲು ಕಾಗದದಲ್ಲಿರುವ ಆಮ್ಲತೆಯನ್ನು ಹೋಗಲಾಡಿಸಬೇಕಾಗುತ್ತದೆ. ಈ ಕಾರ್ಯದಲ್ಲಿ ನವದೆಹಲಿಯಲ್ಲಿರುವ ಭಾರತ ರಾಷ್ಟ್ರೀಯ ಪತ್ರಾಗಾರವು ನಿರ್ದೇಶಿಸಿರುವ ರೀತಿಯಲ್ಲಿ ಕೆಲಸಮಾಡುವುದು ಸೂಕ್ತವಾದುದಾಗಿದೆ. ಈ ಟಿಸ್ಯೂ ಮತ್ತು ಚಿಪನ್‌ಗಳನ್ನು ಓಲೆಗರಿಗಳಿಗೂ ಹೊದೆಸಬಹುದಾಗಿದೆ.

ಮೈಕ್ರೋಫಿಲ್ಮ್

ಇದರ ಜೊತೆಗೆ ಗ್ರಂಥಗಳನ್ನು ಕಾಪಾಡಲು ಮೈಕ್ರೊಫಿಲ್ಮ್ ಸಾಧನವನ್ನೂ ಬಳಸಬಹುದಾಗಿದೆ. ಮೈಕ್ರೊಫಿಲ್ಮ್ ಪ್ರತಿಗೆ ಮೂಲದ ಮೌಲ್ಯ ದೊರೆಯುವುದಲ್ಲದೆ ಬೇಕಷ್ಟು ಪ್ರತಿಗಳನ್ನೂ ಮಾಡಿಕೊಳ್ಳಬಹುದು; ಹಾಗೂ ಕಾಪಾಡುವುದು ಸುಲಭವಾಗುವುದು. ಮೈಕ್ರೊಫಿಲ್ಮ್ ಮಾಡುವುದರ ಜೊತೆಗೆ ಹಸ್ತಪ್ರತಿಗಳನ್ನು ಒಳ್ಳೆಯ ಕಾಗದದ ಮೇಲೆ ಪ್ರತಿಮಾಡಿ ರಟ್ಟುಕಟ್ಟಿ ಕಾಪಾಡಬಹುದಾಗಿದೆ. ಇದರಲ್ಲಿನ ಒಂದು ಕೊರತೆಯೆಂದರೆ ಮೂಲ ಪ್ರತಿಯ ಮೌಲ್ಯ ಇದಕ್ಕೆ ಇಲ್ಲವಾಗುತ್ತದೆ. ಇದರ ತಯಾರಿಕೆಗೆ ಹೆಚ್ಚು ವೇಳೆ ಹಿಡಿಯುವುದಲ್ಲದೆ ಹಸ್ತಪ್ರತಿಗಳನ್ನು ಸರಿಯಾಗಿ ಓದುವುದೂ ಆವಶ್ಯಕವಾಗುತ್ತದೆ.

ಹೀಗೆ ವಿವಿಧ ರೀತಿಯಲ್ಲಿ ನಾವು ಗ್ರಂಥ ಸಂರಕ್ಷಣೆಯನ್ನು ಮಾಡಬಹುದಾಗಿದೆ. ಇದಕ್ಕೆ ಮುಖ್ಯವಾಗಿ ಬೇಕಾದುದು ಸೂಕ್ತನಿರ್ದೇಶನ ಮತ್ತು ಅರಿತ ನುರಿತ ಕೆಲಸಗಾರರು.



ನಗರ ಕೇಂದ್ರ ಗ್ರಂಥಾಲಯ

ಬೆಂಗಳೂರು

● ಟಿ. ಬಿ. ಚನ್ನಗಂಗಪ್ಪ

ಸುಮಾರು ಹದಿನೇಳು ಹದಿನೆಂಟನೆಯ ಶತಮಾನದಲ್ಲಿ ಗ್ರಂಥಾಲಯಗಳ ಬೆಳವಣಿಗೆ ಇಂಗ್ಲೆಂಡ್–ಅಮೆರಿಕ ದೇಶಗಳಲ್ಲಿಯೂ ಕೂಡ ಸೀಮಿತವಾಗಿ ಮುಂದುವರಿಯುತ್ತಿತ್ತು. ಇಂಗ್ಲೆಂಡ್‌ನಲ್ಲಿ ಸಾರ್ವಜನಿಕ ಗ್ರಂಥಾಲಯ ಕಾಯಿದೆ ೧೮೫೦ರಲ್ಲಿ ಜಾರಿಗೆ ಬಂತು. ಅನಂತರ ಅನೇಕ ಕಾಯಿದೆಗಳ ಪರಿಣಾಮವಾಗಿ ಇಂಗ್ಲೆಂಡಿನಲ್ಲಿ ಇಂದು ಗ್ರಂ ಥಾ ಲ ಯ ಗ ಳು ಸಾರ್ವಜನಿಕ ವಿದ್ಯಾಮಂದಿರಗಳಾಗಿವೆ.

ಹದಿನೆಂಟನೆ ಶತಮಾನದ ಮಧ್ಯ ಮತ್ತು ಆ ನಂತರ ಅಮೆರಿಕದ ಪ್ರತಿ ರಾಜ್ಯವೂ ತಮ್ಮದೇ ಆದ ಸಾರ್ವಜನಿಕ ಗ್ರಂಥಾಲಯಗಳ ಕಾಯಿದೆಯನ್ನು ಜಾರಿಗೆ ತಂದುದರಿಂದಾಗಿ ಗ್ರಂಥಾಲಯಗಳ ಧ್ವಜಪತಾಕೆಯು ಮೂಲೆ ಮೂಲೆಗೂ ಹಾರಾಡುತ್ತಿವೆ.

ಡಾ|| ರಂಗನಾಥನ್ ಅವರ ಸೇವೆ

ಪ್ರಗತಿ ಮಾರ್ಗದಲ್ಲಿ ಹೆಜ್ಜೆ ಇಡುತ್ತಿರುವ ಭಾರತ ದೇಶದಲ್ಲಿ ಪ್ರಥಮ ಬಾರಿಗೆ ಸಾರ್ವಜನಿಕ ಗ್ರಂಥಾಲಯದ ಕಾಯಿದೆ ಮದರಾಸು ರಾಜ್ಯದಲ್ಲಿ ಜಾರಿಗೆ ಬಂದಿತು. ಭಾರತದಲ್ಲಿ ಗ್ರಂಥಾಲಯಗಳ ಅಭಿವೃದ್ಧಿಗೆ ಹಗಲಿರುಳೂ ಶ್ರಮಿಸುತ್ತಿರುವ ಪದ್ಮಶ್ರೀ ಡಾ|| ರಂಗನಾಥನ್‌ರವರ ಹೆಸರನ್ನು ಭಾರತದ ಗ್ರಂಥಾಲಯ ಚಳುವಳಿಯಲ್ಲಿ ಸುವರ್ಣಾಕ್ಷರದಿಂದ ಬರೆಯಬಹುದಾಗಿದೆ. ಇವರ ಶ್ರಮದಾನವೇ ಇಂದು ಅನೇಕ ರಾಜ್ಯಗಳು ಗ್ರಂಥಾಲಯ ಕಾಯಿದೆಯನ್ನು ಹೊಂದಿರುವುದಕ್ಕೆ ಸಾಕ್ಷಿ.

ಡಾ|| ರಂಗನಾಥನ್‌ರವರು ಇಂಗ್ಲೆಂಡ್, ಅಮೇರಿಕ ಮತ್ತು ಅನೇಕ ಐರೋಪ್ಯ ದೇಶಗಳಲ್ಲಿ ಗ್ರಂಥಾಲಯಗಳ ಬಗ್ಗೆ ಅಧ್ಯಯನ ಮಾಡಿ ಸಮಂಜಸವಾಗುವ ಕಾಯಿದೆಯನ್ನು ಮದರಾಸು ರಾಜ್ಯದಲ್ಲಿ ಜಾರಿಗೆ ತರಲು ಸಹಾಯಕರಾದರು. ಈ ಕಾಯಿದೆಗಳು ಈಗ ತಮಿಳುನಾಡು, ಆಂಧ್ರಪ್ರದೇಶ, ಮೈಸೂರು ಮತ್ತು ಮಹಾರಾಷ್ಟ್ರಗಳಲ್ಲಿ ಜಾರಿಯಲ್ಲಿವೆ.

ಮೈಸೂರು ರಾಜ್ಯದಲ್ಲಿ ೧೯೬೫ರಲ್ಲಿ ಸಾರ್ವಜನಿಕ ಗ್ರಂಥಾಲಯ ಕಾಯಿದೆ ಆಯಿತು. ಈ ಕಾಯಿದೆಯ ಪ್ರಕಾರ ಒಂದು ರಾಜ್ಯ ಕೇಂದ್ರ ಗ್ರಂಥಾಲಯ, ೫ ನಗರ ಕೇಂದ್ರ ಗ್ರಂಥಾಲಯಗಳು ಮತ್ತು ೧೯ ಜಿಲ್ಲಾ ಕೇಂದ್ರ ಗ್ರಂಥಾಲಯಗಳು, ಅನೇಕ ಸೇವಾ ಕೇಂದ್ರಗಳು ವ್ಯವಸ್ಥೆ ಮಾಡಲು ಅವಕಾಶ ಕೊಟ್ಟಿದೆ.

ನಗರ ಕೇಂದ್ರ ಗ್ರಂಥಾಲಯ

ಬೆಂಗಳೂರು ನಗರ ಕೇಂದ್ರ ಗ್ರಂಥಾಲಯವು ೧೯೬೮ರಲ್ಲಿ ಅಸ್ತಿತ್ವಕ್ಕೆ ಬಂದಿತು. ಬೆಂಗಳೂರು ನಗರ ಕೇಂದ್ರ ಗ್ರಂಥಾಲಯದ ಶಾಖೆಗಳನ್ನು ಮತ್ತು ಅವುಗಳ ವಿಚಾರ ಪರಿಶೀಲಿಸಲು ೧೦ ಸದಸ್ಯರುಗಳುಳ್ಳ ನಗರ ಕೇಂದ್ರ ಪ್ರಾಧಿಕಾರ ವರ್ಗ ಜಾರಿಗೆ ಬಂದಿತು. ಬೆಂಗಳೂರು ನಗರಾಡಳಿತ ಮೇಯರ್‌ರವರು ಎಕ್ಸ್ ಅಫಿಷಿಯೋ ಛೇರ್‌ಮನ್ ಆಗಿರುತ್ತಾರೆ. ನಗರ ಕೇಂದ್ರ ಗ್ರಂಥಾಲಯದ ಮೊದಲನೆಯ ಸಭೆ ೧೯೬೮ರಲ್ಲಿ ಪ್ರಾರಂಭವಾಯಿತು. ನಗರಾಡಳಿತ ಮೇಲ್ವಿಚಾರಕರಾದ ಶ್ರೀ ಬಾಲಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಒಂದು ನಗರ ಕೇಂದ್ರ ಗ್ರಂಥಾಲಯ, ೪ ದೊಡ್ಡ ಪ್ರಮಾಣದ ಗ್ರಂಥಾಲಯಗಳು ಮತ್ತು ೬೩ ಶಾಖೆಗಳನ್ನೂ ಒಂದು ಕಾರ್ಪೊರೇಷನ್ ಡಿವಿಜನ್ನಿಗೆ ಒಂದು ಗ್ರಂಥಾಲಯ ಶಾಖೆಯಂತೆ ಪ್ರಾರಂಭಿಸುವ ಹಾಗೆ ತೀರ್ಮಾನವಾಯಿತು. ಕರಡು ಅಭಿವೃದ್ಧಿ ಯೋಜನೆಯ ಪ್ರಕಾರ ೩ ಆಸ್ಪತ್ರೆ ಶಾಖೆಗಳು ಒಂದು ಬಂದೀಖಾನೆ ಶಾಖೆ ಒಂದು ಅಭಿವೃದ್ಧಿ ಹೊಂದಿದ ಶಿಕ್ಷಣ ಶಾಖೆಯಲ್ಲಿ ಮತ್ತು ಇನ್ನಿತರ ೨೮

ಸೇವಾ ಕೇಂದ್ರಗಳನ್ನು ಸ್ಥಾಪಿಸುವ ಯೋಜನೆ ಸಿದ್ಧ ಮಾಡಲಾಯಿತು.

೨-೫-೧೯೬೯ರಲ್ಲಿ ನಗರ ಕೇಂದ್ರ ಗ್ರಂಥಾಲಯವನ್ನು ಕೆಂಗಲ್ ಹನುಮಂತಯ್ಯ ರಸ್ತೆಯಲ್ಲಿ, ಆಗ ವಿದ್ಯಾ ಉಪ ಸಚಿವರಾಗಿದ್ದ ಶ್ರೀ ಎಸ್. ಎಂ. ಕೆ. ಸೋಗಿಯವರು ಉದ್ಘಾಟಿಸಿದರು. ಅನಂತರ ಜಯನಗರ ಸೌತ್ ಎಂಡ್ ಸರ್ಕಲ್‌ನಲ್ಲಿ ಆನೆಬಂಡೆ ಪಕ್ಕದಲ್ಲಿ ಒಂದು ಸುಸಜ್ಜಿತ ಗ್ರಂಥಭಂಡಾರವನ್ನು ೨-೨-೧೯೭೦ರಲ್ಲಿ ತೆರೆಯಲಾಯಿತು. ಈ ಗ್ರಂಥಾಲಯವು ದೇಶವಿದೇಶಗಳಿಂದ ಬಂದವರ ಮೆಚ್ಚಿಗೆಯನ್ನು ಪಡೆದಿದೆ. ನಗರ ಕೇಂದ್ರ ಗ್ರಂಥಾಲಯದ ಶಾಖೆಗಳನ್ನು ಚಾಮರಾಜಪೇಟೆ ಒಂದನೇ ಮುಖ್ಯ ರಸ್ತೆಯಲ್ಲಿ – ಹೊಸಹಳ್ಳಿಯಲ್ಲಿ – ವಿಶ್ವೇಶ್ವರಪುರದಲ್ಲಿ–ರಾಜಾಜಿನಗರದ ಶ್ರೀ ಬಸವೇಶ್ವರ ಸಹಕಾರಿ ಸಮಿತಿಯ ಕಟ್ಟಡದಲ್ಲಿ ಹಾಗೂ ಕೆಂಪೇಗೌಡ ನಗರದಲ್ಲಿ ಸ್ಥಾಪಿಸಲಾಯಿತು. ಏಪ್ರಿಲ್ ೧೯೭೨ರಲ್ಲಿ ಕೇಂದ್ರ ಬಂದೀಖಾನೆಯಲ್ಲಿ ಅಲ್ಲಿಯ ನಿವಾಸಿಗಳಿಗೆ ಒಂದು ಗ್ರಂಥಾಲಯದ ಶಾಖೆಯನ್ನೂ ಪ್ರಾರಂಭಿಸಲಾಯಿತು. ಇನ್ನು ಒಂದು ತಿಂಗಳೊಳಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅಲ್ಲಿರುವ ರೋಗಿಗಳಿಗೆ ಉಪಯೋಗವಾಗುವಂತೆ ಒಂದು ಗ್ರಂಥಾಲಯ ಶಾಖೆಯನ್ನೂ ತೆರೆಯಲಾಗುತ್ತದೆ.

ನಗರ ಆಡಳಿತದವರು ಬೆಂಗಳೂರು ನಗರದ ೧೨೮ ವಾಚನಾಲಯಗಳಿಗೆ ಸಹಾಯ ನಿಧಿಯನ್ನು ವರ್ಷಕ್ಕೆ ೧೨೦ರಿಂದ ೪೦೦ರೂ.ಗಳವರೆಗೆ ಕೊಡುತ್ತಿದ್ದರು. ಏಪ್ರಿಲ್ ೧೯೬೮ರಲ್ಲಿ ಈ ಸಹಾಯ ನಿಧಿಯನ್ನು ಮುಂದುವರೆಸಲು ನಗರ ಕೇಂದ್ರ ಗ್ರಂಥಾಲಯಕ್ಕೆ ವಹಿಸಲಾಯಿತು. ಅಂದಿನಿಂದ ಈ ವಾಚನಾಲಯಗಳಿಗೆ ಸಹಾಯ ನಿಧಿಯನ್ನು ೨೫ ರೂ.ಗಳಷ್ಟು ಪತ್ರಿಕೆಗಳ ಮೂಲಕ ಮತ್ತು ಉಳಿದ ಹಣವನ್ನು ಪುಸ್ತಕಗಳ ರೂಪದಲ್ಲಿ ಕೊಡಲಾಗುತ್ತಿದೆ.

ವಾಚನಾಲಯಗಳು

ಇದಲ್ಲದೆ ನಗರಾಡಳಿತದವರೇ ೧೫ ವಾಚನಾಲಯಗಳನ್ನು ನಡೆಸುತ್ತಿದ್ದರು. ಈ ವಾಚನಾಲಯಗಳನ್ನು ಜೂನ್ ೧೯೭೦ರಲ್ಲಿ ನಗರ ಕೇಂದ್ರ ಗ್ರಂಥಾಲಯದ ಆಡಳಿತಕ್ಕೆ ಒಳಪಡಿಸಲಾಯಿತು. ಈ ವಾಚನಾಲಯಗಳು ಸೇವಾ ಗ್ರಂಥಾಲಯಗಳಾಗಿ ಮಾರ್ಪಾಡು ಮಾಡಲ್ಪಟ್ಟವು. ಅಲ್ಲಿಯ ನಿವಾಸಿಗಳಿಗೆ ಗ್ರಂಥಾಲಯದ ಸೌಲಭ್ಯ ಕೊಡುವವರೆಗೂ ಈ ಸೇವಾ ಕೇಂದ್ರಗಳು ಅಲ್ಲಿಯ ಜನತೆಗೆ ಸೇವೆ ಸಲ್ಲಿಸುತ್ತಿರುತ್ತವೆ. ಇಂಥ ಸೇವಾ ಕೇಂದ್ರಗಳು ಸ್ವತಂತ್ರ ಪಾಳ್ಯ ಅರಳೇಪೇಟೆ–ಮಾವಳ್ಳಿ–ಮುನಿರೆಡ್ಡಿ ಪಾಳ್ಯ–ಕಾಕ್ಸ್‌ಟೌನ್–ಮರ್ಫಿಟೌನ್–ಜೌಗುಪಾಳ್ಯ-ಅಲಸೂರು-ರಸಲ್ ಮಾರ್ಕೆಟ್–ಸೆಪ್ಪಿಂಗ್ಸ್ ರೋಡು–ಅಶೋಕನಗರ–ಆಸ್ಟಿನ್‌ಟೌನ್‌ಗಳಲ್ಲಿ ಕಾರ್ಯಾ ಚರಣೆಯಲ್ಲಿವೆ.

ಯೋಜನೆ

ಎಲ್ಲಾ ಶಾಖೆಗಳನ್ನೂ ಏಕಕಾಲದಲ್ಲಿ ಪ್ರಾರಂಭ ಮಾಡಲು ಹಣದ ಕೊರತೆ ಇರುವುದರಿಂದ ಸುಮಾರು ೫ ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ಅಭಿವೃದ್ಧಿ ಯೋಜನೆಯಂತೆ ಒಂದು ನಗರ ಕೇಂದ್ರ ಗ್ರಂಥಾಲಯ, ೪ ದೊಡ್ಡ ಪ್ರಮಾಣದ ಗ್ರಂಥಾಲಯಗಳು, ೬೩ ಶಾಖೆಗಳು ಮತ್ತು ೩ ಆಸ್ಪತ್ರೆ ಶಾಖೆಗಳು, ಒಂದು ಬಂದೀಖಾನೆ ಶಾಖೆ ಮತ್ತು ೨೪ ಸೇವಾ ಕೇಂದ್ರಗಳು–ಇವುಗಳನ್ನು ಪ್ರಾರಂಭಿಸಿ ಪರಿಪೂರ್ಣತೆ ಹೊಂದುವಂತೆ ಮಾಡುವ ನಿರೀಕ್ಷೆ ಇದೆ.

ನಗರ ಕೇಂದ್ರ ಗ್ರಂಥಾಲಯಗಳಲ್ಲಿ ಕನ್ನಡ ಭಾಷೆಯ ಪುಸ್ತಕಗಳನ್ನು ಒದಗಿಸುವಿಕೆಗೆ ಪೂರ್ಣ ಸಹಕಾರ ನೀಡಿದೆ. ಕನ್ನಡದಲ್ಲಿ ಅಚ್ಚಾದ ಪ್ರತಿಯೊಂದು ಒಳ್ಳೆಯ ಪುಸ್ತಕವನ್ನೂ ಶಾಖೆಗಳಲ್ಲಿ ಇಡಲಾಗಿದೆ. ಹೀಗಾಗಿ ಕನ್ನಡ ಭಾಷೆಯಲ್ಲಿ ಅಚ್ಚಾದ ಎಲ್ಲ ಗ್ರಂಥಗಳು ಎಲ್ಲರಿಗೂ ನಿಲುಕುವಂತೆ ಮಾಡಲಾಗಿದೆ.

ಪಠ್ಯಪುಸ್ತಕಗಳ ಶೇಖರಣೆ

ನಗರ ಕೇಂದ್ರ ಗ್ರಂಥಾಲಯದ ವಿಶೇಷ ಸಂಗತಿ ಎಂದರೆ ಪಠ್ಯಪುಸ್ತಕಗಳ ಶೇಖರಣೆ. ಬೆಂಗಳೂರಲ್ಲಿ ಪ್ರೌಢ ಮತ್ತು ವಿಶ್ವವಿದ್ಯಾನಿಲಯದ ಮಟ್ಟದವರೆಗೂ ಪಠ್ಯಪುಸ್ತಕಗಳನ್ನು ಒದಗಿಸಿದೆ. ಅನೇಕ ವಿಭಾಗಗಳಲ್ಲಿ ವಿಜ್ಞಾನ–ಟೆಕ್ನಾಲಜಿ ಮತ್ತು ಸಾಹಿತ್ಯಗಳಲ್ಲಿ ವಿಶ್ವವಿದ್ಯಾ ನಿಲಯಗಳಿಂದ ಅಂಗೀಕೃತವಾದ ಪುಸ್ತಕಗಳನ್ನೂ ನಗರ ಕೇಂದ್ರ ಗ್ರಂಥಾಲಯ–ಜಯನಗರ ಮತ್ತು ರಾಜಾಜಿನಗರ ಶಾಖೆಗಳಲ್ಲಿ ಒದಗಿಸಿದೆ. ಇದರ ಉಪಯೋಗವನ್ನು ಸಹಸ್ರಾರು ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ.

ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳ ಸಕಾಲದಲ್ಲಿ ಸಿಗುತ್ತಿಲ್ಲ. ಎರಡನೆಯದಾಗಿ ಪಠ್ಯಪುಸ್ತ ಗಳನ್ನು ಕೊಳ್ಳಲು ವಿದ್ಯಾರ್ಥಿಗಳಿಗೆ ಸಾಮರ್ಥ್ಯವಿರು

ದಿಲ್ಲ. ಮೂರನೆಯದಾಗಿ ಪರೋಕ್ಷವಾಗಿ ಪರೀಕ್ಷೆಗೆ ಕುಳಿತವರಿಗೆ ಯಾವ ಕಾಲೇಜು ಗ್ರಂಥಾಲಯದಲ್ಲೂ ಅವರಿಗೆ ಪುಸ್ತಕ ಪಡೆಯುವ ಅವಕಾಶವಿಲ್ಲದಿರುವಾಗ ಸಾರ್ವಜನಿಕ ಗ್ರಂಥಾಲಯವು ಪರಿಣಾಮಕಾರಿಯಾಗಿ ಸಹಾಯ ಒದಗಿಸಿದೆ.

ಪುಸ್ತಕಗಳನ್ನು ಆರಿಸುವುದರಲ್ಲಿ ಆಯಾ ವಿಭಾಗದ ತಜ್ಞರಿಂದ ಸಲಹೆ ಮಾಡಲ್ಪಟ್ಟ ಪುಸ್ತಕಗಳನ್ನೇ ಕೊಂಡುಕೊಳ್ಳುವುದಲ್ಲದೆ ಓದುಗರು ತಮಗೆ ಅತ್ಯವಶ್ಯಕವಾಗ್ನಿ ಬೇಕಾಗುವ ಸಲಹೆ ಪತ್ರಗಳ ಮೇಲೆಯೂ ಪುಸ್ತಕಗಳನು ಕೊಂಡು ಒದಗಿಸಿದೆ. ಇದರಿಂದ ಜನರಿಗೆ, ಓದಬೇಕೆಂಬ ತಮ್ಮ ಬಯಕೆಯನ್ನು ಪೂರೈಸಿಕೊಳ್ಳುವುದರ ಮೂಲಕ ಉಂಟಾಗುವ ಸಂತೋಷ ಅಪಾರವಾದುದು.

ಎರವಲು ಕೊಡುವ ಪದ್ಧತಿ

ನಗರ ಗ್ರಂಥಾಲಯದ ನಿಯಮಗಳ ಪ್ರಕಾರ ಓದುಗರಿಗೆ ೧೦ ರೂ. ಮುಂಗಡ ಇಟ್ಟಲ್ಲಿ ೧ ಪುಸ್ತಕ ೧೫ ರೂ. ಮತ್ತು ೨೦ ರೂ.ಗಳನ್ನು ಮುಂಗಡ ಇಟ್ಟಲ್ಲಿ ೨ ಮತ್ತು ೩ ಪುಸ್ತಕಗಳನ್ನು ಮನೆಗೆ ತೆಗೆದುಕೊಂಡು ಹೋಗಿ ಓದಿ ವಾಪಸ್ ಮಾಡುವ ಅವಕಾಶ ಕಲ್ಪಿಸಿದೆ.

ಮಕ್ಕಳ ವಿಭಾಗಗಳು

ನಗರ ಕೇಂದ್ರ ಗ್ರಂಥಾಲಯದ ಪ್ರತಿಯೊಂದು ಶಾಖೆಯಲ್ಲಿಯೂ ಮಕ್ಕಳ ವಿಭಾಗವನ್ನು ತೆರೆಯಲಾಗಿದೆ. ಮಕ್ಕಳ ಸಾಹಿತ್ಯವನ್ನು ಕನ್ನಡ–ಇಂಗ್ಲಿಷ್ ಮತ್ತಿತರ ಭಾಷೆಗಳಲ್ಲಿ ಒದಗಿಸಲಾಗಿದೆ. ದಪ್ಪಕ್ಷರ ಮತ್ತು ಚಿತ್ರಪಠಗಳಿಂದ ಕೂಡಿದ ಪುಸ್ತಕಗಳನ್ನು ಮಕ್ಕಳು ಓದಲು ಅನುಕೂಲವಾಗಿ ಮಕ್ಕಳ ಮನಸ್ಸಿನ ಮೇಲೆ ನಿರಂತರವಾದ ಒಳ್ಳೆಯ ಬದಲಾವಣೆ ಆಗಲು ಅನುಕೂಲವಾಗುತ್ತದೆ. ಮಕ್ಕಳು ಚಿಕ್ಕ ವಯಸ್ಸಿನಲ್ಲಿ ಮಹಾತ್ಮರ ಜೀವನ ಚರಿತ್ರೆಗಳನ್ನು ಓದುವುದರಿಂದ ಅವರ ಆದರ್ಶ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳಲು ಯತ್ನಿಸಿದಲ್ಲಿ ಅವರ ಜೀವನ ಸುಂದರವಾಗುತ್ತದೆ. ಅನೇಕ ವಿಜ್ಞಾನಿಗಳವಿಷಯ ಮತ್ತು ತಮ್ಮ ಪಾಠ ಪ್ರವಚನಗಳಿಗೆ ಸಂಬಂಧಪಟ್ಟ ವಿವರಗಳನ್ನು ಓದುವುದರಿಂದ ಅವರ ಬುದ್ಧಿವಿಕಸನ ಹೊಂದಲು ಅನುಕೂಲವಾಗುತ್ತದೆ. ಚಿಕ್ಕಂದಿನಲ್ಲಿಯೇ ಸಾರ್ವಜನಿಕ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳುವುದರಿಂದ ಶಿಸ್ತು ಮತ್ತು ಸಹೋದರ ಭಾವನೆಯನ್ನು ಬೆಳೆಸಲು ಅನುಕೂಲವಾಗುತ್ತದೆ. ಚಿಕ್ಕಂದಿನಲ್ಲಿ ಕಲಿತ ಒಳ್ಳೆಯ ವಿಷಯಗಳು ಅವರು ದೊಡ್ಡವರಾದ ನಂತರ ಅನುಷ್ಠಾನಕ್ಕೆ ತರಲು ಅವಕಾಶವಾಗುತ್ತದೆ.

ಸಂಚಾರೀ ಗ್ರಂಥಾಲಯ

ಬೆಂಗಳೂರಿನಲ್ಲಿ ಸಂಚಾರೀ ಗ್ರಂಥವಾಹನ ಗ್ರಂಥಾಲಯ ಪದ್ಧತಿಯನ್ನು ಶೀಘ್ರದಲ್ಲಿಯೇ ತರುವ ಯೋಜನೆ ಇದೆ. ಒಂದು ವ್ಯಾನಿನಲ್ಲಿ ಸುಮಾರು ೨೦೦೦ ಪುಸ್ತಕಗಳನ್ನು ಹೊತ್ತು ಹೊರಟು ನಗರದ ನಾನಾ ಭಾಗಗಳಲ್ಲಿ ನಿಯಮಿತ ಕಾಲದಲ್ಲಿ ನಿಂತು ಅಲ್ಲಿನ ಜನಗಳಿಗೆ ಗ್ರಂಥಾಲಯ ಸೌಲಭ್ಯ ಒದಗಿಸಿಸಾಯಂಕಾಲ ಮರಳಿ ನಗರಕೇಂದ್ರ ಗ್ರಂಥಾಲಯಕ್ಕೆ ಬರುತ್ತದೆ. ಈ ಸೌಲಭ್ಯದಿಂದ ಅನೇಕ ಓದುಗರು ತಮ್ಮ ಮನೆಯ ಹತ್ತಿರ ಪುಸ್ತಕಗಳನ್ನು ಓದಲು ತೆಗೆದುಕೊಳ್ಳಬಹುದು. ಬೆಂಗಳೂರು ನಗರದಂತಹ ಹೆಚ್ಚಿಗೆ ಜನಸಂದಣಿ ಇರುವ ಪ್ರದೇಶಗಳಲ್ಲಿ ಈ ಸೌಕರ್ಯ ಬಹಳ ಬೇಕಾದುದು. ಅನೇಕ ಜನರು ತಮ್ಮ ಮನೆಗಳನ್ನು ಬಿಟ್ಟು ಗ್ರಂಥಾಲಯಗಳಿಗೆ ಹೋಗಲು ಪ್ರಯಾಣ ಸೌಕರ್ಯವಿರುವುದಿಲ್ಲ. ಎರಡನೆಯದಾಗಿ ಸಮಯವಿರುವುದಿಲ್ಲ. ಗ್ರಂಥಾಲಯವೇ ತಮ್ಮ ಬಳಿಗೆ ಬಂದರೆ ಓದುಗರ ಸಂಖ್ಯೆ ಹೆಚ್ಚಾಗುತ್ತದೆ. ಮತ್ತು ಶಾಖೆಗಳಲ್ಲಿ ಒತ್ತಡ ಕಡಿಮೆಯಾಗುತ್ತದೆ. ಈ ಯೋಜನೆ ಸಾವಿರಾರು ಜನಕ್ಕೆ ಉಪಯೋಗವಾಗಬಹುದೆಂದು ನಿರೀಕ್ಷಣೆ ಇದೆ.

ನಗರ ಕೇಂದ್ರ ಗ್ರಂಥಾಲಯದ ಪ್ರಗತಿ

ಗ್ರಂಥಾಲಯದ ಪ್ರಗತಿಯು ಪ್ರಾಧಿಕಾರವರ್ಗ ಮತ್ತು ರಾಜ್ಯಗ್ರಂಥಾಲಯ ಅಧಿಕಾರಿಗಳಾದ ಶ್ರೀ ಎನ್. ಡಿ. ಬಗರಿಯವರ ಸಹಕಾರ ಮತ್ತು ಬೆಂಬಲದ ಹೊರತು ಬೇರಿಲ್ಲ. ನಗರ ಕೇಂದ್ರ ಗ್ರಂಥಾಲಯವು ಶಕ್ತಿಮೀರಿ ಕೆಲಸ ಮಾಡುತ್ತಿದೆ. ಕಳೆದ ೩ ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ೨೫ರಿಂದ ೩೦ ಸಾವಿರ ಜನರು ಗ್ರಂಥಾಲಯದ ಸೇವೆಯನ್ನು ಪಡೆಯುತ್ತಿದ್ದಾರೆ. ಇನ್ನೂ ಹೆಚ್ಚು ಜನರು ಈ ಸೌಲಭ್ಯ ಪಡೆಯಲು ಅವಕಾಶವಾಗುವಂತೆ ದೃಢಸಂಕಲ್ಪ ಮಾಡಿ ತೀವ್ರವಾಗಿ ಕೆಲಸ ಮಾಡಲಾಗುತ್ತದೆ.

ದೆಹಲಿಯಲ್ಲಿರುವ

ಮೈಸೂರು ವಾರ್ತಾಕೇಂದ್ರದ ಪುಸ್ತಕ ಭಂಡಾರ

● ಬಿ. ಸಿ. ನಾಗರಾಜ್

ನಾವು ಹುಟ್ಟಿ ಬೆಳೆದ ಕನ್ನಡ ನಾಡಿನಿಂದ ಸಹಸ್ರಾರು ಮೈಲು ದೂರವಿರುವ ಕನ್ನಡಿಗರಿಗೆ ದೆಹಲಿಯಲ್ಲಿ ಕನ್ನಡ ಸಾಹಿತ್ಯದ ಸಂಪರ್ಕ ಇರುವುದು ಹೇಗೆ ಸಾಧ್ಯ? ಓದುವ ಚಟವಿರುವವರಿಗಂತೂ ಕನ್ನಡ ಪುಸ್ತಕಗಳ ಕೊರತೆ ಎದ್ದು ಕಾಣುತ್ತದೆ. ದೆಹಲಿಯ ಅನೇಕ ಬಡಾವಣೆಗಳಲ್ಲಿ ಪುಸ್ತಕ ಮತ್ತು ಪತ್ರಿಕೆ ಮಾರಾಟಗಾರರ ಅಂಗಡಿಗಳ ಕಡೆಗೊಮ್ಮೆ ಕಣ್ಣು ಹಾಯಿಸಿದರೆ, ಕನ್ನಡ ವೆಂಬ ಭಾಷೆ ಇದೆಯೇ? ಇದ್ದಲ್ಲಿ ಕನ್ನಡದಲ್ಲಿ ಪುಸ್ತಕ ಗಳಿಲ್ಲವೇ ಎಂಬ ಸಂದೇಹ ಬರುವುದು ಸಹಜ. ಇದು ರಾಜಧಾನಿ ದೆಹಲಿಯಲ್ಲಿ ಕನ್ನಡ ನಾಡಿಗೆ ಹಾಗೂ, ಭಾಷೆಗೆ ದೊರೆತಿರುವ ಸ್ಥಾನ. ಈ ಕೊರತೆಯನ್ನು ನಿವಾರಿಸಿ ದೆಹಲಿಯ ಕನ್ನಡಿಗರಿಗೆ ಕನ್ನಡ ಭಾಷೆ ಹಾಗೂ ಸಾಹಿತ್ಯದ ಸಂಪರ್ಕ ಒದಗಿಸುವ ಸದುದ್ದೇಶದಿಂದ ಮೈಸೂರು ವಾರ್ತಾಕೇಂದ್ರದಲ್ಲಿ ಒಂದು ಪುಸ್ತಕಭಂಡಾರ ವನ್ನು ತೆರೆಯಲಾಗಿದೆ. ಚಿಕ್ಕದಾದರೂ ಚೊಕ್ಕವಾಗಿರುವ ಈ ಪುಸ್ತಕ ಭಂಡಾರ ಕನ್ನಡಿಗರ ಒಂದು ದೊಡ್ಡ ಕೊರತೆಯನ್ನು ಸ್ವಲ್ಪಮಟ್ಟಿಗಾದರೂ ನಿವಾರಿಸುತ್ತದೆ.

ಪುಸ್ತಕ ಭಂಡಾರದ ವೈಶಿಷ್ಟ್ಯ

ಸಾಮಾನ್ಯವಾಗಿ ಸರಕಾರ ದವತಿಯಿಂದ ರೂಪಿತ ಗೊಂಡ ಪುಸ್ತಕ ಭಂಡಾರವೆಂದರೆ ಪ್ರಚಾರ ಸಾಹಿತ್ಯವೇ ವಿಶೇಷವಾಗಿರುವ ಒಂದು ಪುಸ್ತಕ ಭಂಡಾರವಿರಬೇಕು ಎಂಬ ಭಾವನೆ ಬರುವುದು ಸಹಜ. ಆದರೆ ವಾರ್ತಾ ಕೇಂದ್ರದ ಈ ಪುಸ್ತಕ ಭಂಡಾರದಲ್ಲಿ ಪ್ರಮುಖ ಕನ್ನಡ ಸಾಹಿತಿಗಳ ಕೃತಿಗಳು ಎದ್ದು ಕಾಣುತ್ತವೆ. ಕುವೆಂಪು ರವರ ರಾಮಾಯಣದರ್ಶನ, ಇಕ್ಷು ಗಂಗೋತ್ರಿ, ಕಾನೂರು ಹೆಗ್ಗಡಿತಿ, ಸ್ವಾಮಿ ವಿವೇಕಾನಂದ, ಕನ್ನಡ ಕೈಪಿಡಿ, ರಕ್ತಾಕ್ಷಿ, ಬೆರಳ್‌ಗೆ ಕೊರಳ್, ಯಮನ ಸೋಲು, ಚಿತ್ರಾಂಗದ, ಚಂದ್ರಹಾಸ, ಕಾವ್ಯವಿಹಾರ, ಕೊಳಲು, ನವಿಲು, ಕಥನ ಕವನಗಳು, ಕೃತ್ತಿಕೆ, ಕಾವ್ಯ ತರಂಗಿಣಿ, ಡಿ. ವಿ. ಜಿ. ಯವರ ಶ್ರೀಮದ್ಭಗವದ್ಗೀತಾ ತಾತ್ಪರ್ಯ, ಅಂತಃಪುರ ಗೀತೆಗಳು, ಉಮರನ ಒಸಗೆ, ಮಂಕುತಿಮ್ಮನ ಕಗ್ಗ, ರಾಜ್ಯಾಂಗ ತತ್ತ್ವಗಳು, ವಿದ್ಯಾ ರಣ್ಯ ವಿಜಯ, ಸಾಹಿತ್ಯಶಕ್ತಿ, ಬದುಕಿನ ಹಾಡು, ಇತ್ಯಾದಿ. ಮಾಸ್ತಿಯವರ ಸರ್ ವಿಶ್ವೇಶ್ವರಯ್ಯ, ಜೀವನ ರವೀಂದ್ರನಾಥ ಠಾಕೂರ್, ಸಂಪಾದಕೀಯ (ಎಲ್ಲ ಭಾಗ ಗಳು), ಚೆನ್ನಬಸವನಾಯಕ, ಪುರಂದರದಾಸ, ಕೆಲವು ಸಣ್ಣ ಕಥೆಗಳು, ಪ್ರಸಂಗ, ಕನ್ನಡದ ಸೇವೆ, ಆದಿಕವಿ ವಾಲ್ಮೀಕಿ, ಷೇಕ್ಸ್‌ಪಿಯರ್ ದೃಶ್ಯಗಳು, ಸಾಹಿತ್ಯಲಾಲಸೆ, ಜನಪದ ಸಾಹಿತ್ಯ, ಮನವಿ, ಜನತೆಯ ಸಂಸ್ಕೃತಿ, ಲಿಯರ್ ಮಹಾರಾಜ, ನವರಾತ್ರಿ (ಮೂರು ಭಾಗಗಳು) ಇತ್ಯಾದಿ ಬೇಂದ್ರೆಯವರ ಗಂಗಾವತರಣ, ಯಕ್ಷ-ಯಕ್ಷಿ, ಸಖೀಗೀತ, ಮುಗಿಲ ಮಲ್ಲಿಗೆ, ಉಯ್ಯಾಲೆ, ಗರಿ, ಮಹಾ ರಾಷ್ಟ್ರ ಸಾಹಿತ್ಯ, ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ

ರತ್ನಗಳು ಇತ್ಯಾದಿ. ಹೀಗೆ ಅನೇಕ ಪ್ರಮುಖ ಕೃತಿಗಳು ಇಲ್ಲಿ ನಮಗೆ ಕಾಣಸಿಗುತ್ತವೆ. ಅಷ್ಟೇ ಅಲ್ಲ, ಕರ್ನಾಟಕ ವಿಶ್ವವಿದ್ಯಾಲಯದ, ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಪ್ರಕಟಣೆಗಳು ಇಲ್ಲಿ ಸಿಗುತ್ತವೆ. ಅಂತೆಯೇ ಮೈಸೂರು ವಿಶ್ವವಿದ್ಯಾಲಯದ ಪ್ರಮುಖ ಪ್ರಕಟನೆಗಳನೇಕವು. ಇಲ್ಲಿಯ ಕನ್ನಡಾಭಿಮಾನಿಗಳ ಸಾಹಿತ್ಯ ಅಭಿರುಚಿಗೆ ಇದಕ್ಕಿಂತ ಇನ್ನೇನು ಬೇಕು? ಈ ಪುಸ್ತಕಗಳಷ್ಟೇ ಸಾಲದೆಂಬಂತೆ ಕನ್ನಡ ನಾಡಿನ ಬಗ್ಗೆ ಸಾಕಷ್ಟು ಮಾಹಿತಿಯನ್ನು ಒದಗಿಸಬಲ್ಲ ಅನೇಕ ರೆಫರೆನ್ಸ್ ಪುಸ್ತಕಗಳೂ ಇವೆ. ಮೈಸೂರು ಸರ್ಕಾರ ಹೊರಡಿಸಿರುವ ಜಿಲ್ಲಾ ಗೆಜಟಿಯರ್‌ಗಳ ಜೊತೆಗೆ, 'ಕರ್ನಾಟಕ ದರ್ಶನ', 'ಕರ್ನಾಟಕ ಪರಂಪರೆ' ಇವೇ ಮೊದಲಾದ ಉತ್ಕೃಷ್ಟ ಗ್ರಂಥಗಳೂ ಇವೆ.

ಇತರ ಮುಖ್ಯ ಗ್ರಂಥಗಳು

ಈ ಗ್ರಂಥ ಭಂಡಾರದಲ್ಲಿ ಇತರ ಪ್ರಮುಖ ಗ್ರಂಥಗಳ ಪೈಕಿ History of Freedom movement in Karnataka, An introduction to Karnataka, Mysticism (R. Ranade), The art and Architecture of Ihole (Mihar Rajanjam Ray), A History of South India (Neelakanta Sastry), Indias Contribution to world thought and Culture (Vivekananda Rock Memorial Committee) ಕನ್ನಡ ವಿಷ್ಣುಪುರಾಣಂ. ಕನ್ನಡ ವರಾಹಪುರಾಣಂ, ಕನ್ನಡ ವಿಶ್ವಕೋಶ, ಕರ್ನಾಟಕದ ಇತಿಹಾಸ ದರ್ಶನ ಇತ್ಯಾದಿ. ಪುಸ್ತಕಗಳ ಸಂಖ್ಯೆ 2500ಕ್ಕೂ ಮೇಲ್ಪಟ್ಟಿದೆ. ಅವುಗಳ ಪೈಕಿ ಹಲವು ವಾರ್ತಾಕೇಂದ್ರ ಕೊಂಡದ್ದಾದರೆ ಹಲವು, ಕನ್ನಡಾಭಿಮಾನಿಗಳಿಂದ ಕೇಂದ್ರಕ್ಕೆ ಕೊಡುಗೆಯಾಗಿ ಬಂದವು. ತಾನು ಓದಿದ ಪುಸ್ತಕ ತನಗೆ ಬೇಡವಾದಾಗ ಮತ್ತೊಬ್ಬರಿಗೆ ಉಪಯುಕ್ತವಾಗಲೆಂಬ ಔದಾರ್ಯದ ಫಲವಾಗಿ ಬಂದವು. ಪುಸ್ತಕ ಭಂಡಾರದ ಸದಸ್ಯರಾಗುವುದೂ ಸುಲಭ. ಸದಸ್ಯರಾಗಲು ಪ್ರವೇಶ ಪತ್ರದಲ್ಲಿ ಸಾಕಷ್ಟು ಮಾಹಿತಿ ಕೊಡಬೇಕು. ಜೊತೆಗೆ ಒಬ್ಬ ಪರಿಚಿತ ಸದಸ್ಯನ ಸಹಿಯೊಂದೇ ಸಾಕು. ಸದಸ್ಯತ್ವಕ್ಕೆ ಯಾವ ಶುಲ್ಕವೂ ಇಲ್ಲ. ಸದಸ್ಯರು ಸಾಮಾನ್ಯವಾಗಿ ಎಲ್ಲ ಪುಸ್ತಕಗಳನ್ನೂ ಓದಲು ಪಡೆಯಬಹುದು. ಕೆಲವು ವಿಮರ್ಶೆ ಹಾಗೂ ವಿಚಾರಾತ್ಮಕ ಪುಸ್ತಕಗಳನ್ನೂ ಕೇಂದ್ರದಲ್ಲಿಯೇ ಓದಿ ವಿಷಯ ಸಂಗ್ರಹಿಸಬಹುದು.

ಕನ್ನಡತನದ ಪೋಷಣೆ

ಮೈಸೂರು ರಾಜ್ಯ ಸರ್ಕಾರದ ವಾರ್ತಾ ಇಲಾಖೆಯ ಅಂಗವಾಗಿರುವ ದೆಹಲಿಯ ಮೈಸೂರು ವಾರ್ತಾಕೇಂದ್ರ ದೆಹಲಿ ಜನಕ್ಕೆ ಮೈಸೂರಿನ ವಿಷಯವಾಗಿ ಮಾಹಿತಿ ಒದಗಿಸುವ ಕಾರ್ಯದ ಜೊತೆಗೆ ಈ ಪುಸ್ತಕ ಭಂಡಾರದ ಮೂಲಕ ದೆಹಲಿ ಕನ್ನಡಿಗರ ಕನ್ನಡಾಭಿಮಾನವನ್ನು ಉಳಿಸಿಕೊಂಡು ಹಾಗೂ ಬೆಳೆಸಿಕೊಂಡು ಹೋಗುವುದಕ್ಕೂ ಶ್ರಮಿಸುತ್ತಿದೆ. ಈ ಪುಸ್ತಕ ಭಂಡಾರ ಮೈಸೂರು ಸರ್ಕಾರಕ್ಕೂ ಮತ್ತು ಸಹಸ್ರಾರು ಮೈಲಿ ದೂರವಿರುವ ಸಹಸ್ರಾರು ಜನ ಕನ್ನಡಿಗರ ಮಧ್ಯೆ ಒಂದು ಸೌಹಾರ್ದದ ಕೊಂಡಿಯಾಗಿಯೂ ಕೆಲಸ ಮಾಡುತ್ತಿದೆ ಎಂದರೂ ತಪ್ಪಾಗದು.

ಉತ್ತಮ ಪುಸ್ತಕವು ಜ್ಞಾನಿಯ ಚಿರಂತನ ಚೈತನ್ಯರೂಪ

—ಮಿಲ್ಟನ್

ಹೈದರಾಬಾದಿನ ಕನ್ನಡ ಗ್ರಂಥಾಲಯಗಳು

● ಡಾ|| ಕೆ. ಎಂ. ಕೃಷ್ಣರಾವ್

ಹೈದರಾಬಾದ್ ಈಗ (ಕ್ರಿ.ಶ. ೧೯೫೬ ನವೆಂಬರ್ ನಿಂದ) ಆಂಧ್ರಪ್ರದೇಶದ ರಾಜಧಾನಿ. ಭಾಷಾವಾರು ಪ್ರಾಂತಗಳು ಅಸ್ತಿತ್ವದಲ್ಲಿ ಬರುವ ಮುಂಚೆ ಈ ನಗರ ಭರತಖಂಡದ ದೇಶೀ ಸಂಸ್ಥಾನಗಳಲ್ಲಿ ಒಂದಾದ ಹೈದರಾಬಾದ್ ಸಂಸ್ಥಾನದ ರಾಜಧಾನಿಯಾಗಿತ್ತು. ತೆಲಂಗಾಣ ಎಂದು ಕರೆಯುವ ಪ್ರದೇಶದ ಮುಖ್ಯಸ್ಥಳ ಹೈದರಾಬಾದ್. ಆಗಿನ ನೈಜಾಮ್ ಸಂಸ್ಥಾನದಲ್ಲಿ ಹೈದರಾಬಾದ್‌ನಗರ, ರಾಯಚೂರು, ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳು ಸೇರಿ ನೈಜಾಮ್ ಕರ್ಣಾಟಕ ಅಥವಾ ಹೈದರಾಬಾದ್ ಕರ್ಣಾಟಕ ಎಂದು ಕರೆಯಲಾಗುತ್ತಿತ್ತು. ಇವುಗಳಲ್ಲದೆ ಈಗಲೂ ಕರ್ನೂಲ್, ಗದ್ವಾಲ್, ಮೊಹಬೂಬ್‌ನಗರ ಅನಂತಪುರ ಹಿಂದೂಪುರ ಆದವಾನಿ ಆಲೂರು ಮುಂತಾದ ಆಂಧ್ರ ಪ್ರದೇಶದ ಇತರ ಅನೇಕ ಸ್ಥಳಗಳಲ್ಲಿಯೂ ಕನ್ನಡಿಗರಿದ್ದಾರೆ. ಕಾಕತೀಯ ಪ್ರಸಿದ್ಧ ಓರಂಗಲ್ ಮತ್ತು ವಿಜಯವಾಡಗಳಲ್ಲಿ ಕನ್ನಡ ಸಂಘಗಳಿವೆ.

ಉಸ್ಮಾನಿಯ ವಿಶ್ವವಿದ್ಯಾಲಯ

ತೆಲಂಗಾಣದ ಒಂಭತ್ತು ಜಿಲ್ಲೆಗಳಿಗೂ ಒಂದು ವಿಶ್ವವಿದ್ಯಾಲಯವಿದೆ. ಅದೇ ಉಸ್ಮಾನಿಯ ವಿಶ್ವವಿದ್ಯಾಲಯ. ಇದು ನೈಜಾಮರ ಪ್ರೋತ್ಸಾಹದಿಂದ ೧೯೧೮ರಲ್ಲೇ ಪ್ರಾರಂಭವಾಗಿ, ೧೯೬೮ರಲ್ಲಿ ತನ್ನ ಸುವರ್ಣ ಮಹೋತ್ಸವವನ್ನು ವಿಜೃಂಭಣೆಯಿಂದ ನಡೆಸಿತು. ಉಸ್ಮಾನಿಯ ವಿಶ್ವವಿದ್ಯಾಲಯ ಸ್ಥಾಪಿತವಾದಾಗಿನಿಂದ, ಇಲ್ಲಿನ ಕನ್ನಡಿಗರ ಸೌಕರ್ಯಕ್ಕಾಗಿ ಕನ್ನಡ ವಿಭಾಗವೊಂದು ಇದ್ದೇ ಇದೆ. ಕೆಲ ವರ್ಷಗಳ ತರುವಾಯ ಇಲ್ಲಿ ಕನ್ನಡದ ಪ್ರೌಢ ಶಿಕ್ಷಣಕ್ಕೂ ಅವಕಾಶ ಕಲ್ಪಿಸಲಾಯಿತು.

ಉಸ್ಮಾನಿಯ ವಿಶ್ವವಿದ್ಯಾಲಯದ ಪ್ರಥಮ ಕನ್ನಡ ಪ್ರೊಫೆಸರಾಗಿದ್ದ ದಿವಂಗತ (೧೯೬೯) ಶ್ರೀ ಡಿ. ಕೆ. ಭೀಮಸೇನರಾಯರನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ವ್ಯಾಸಂಗಕ್ಕಾಗಿ ಉಸ್ಮಾನಿಯ ವಿಶ್ವವಿದ್ಯಾನಿಲಯವೇ ಕಳಿಸಿಕೊಟ್ಟಿತ್ತು. ಅವರು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಪ್ರಥಮ ಎಂ.ಎ. ತಂಡದಲ್ಲಿ ವಿದ್ಯಾರ್ಥಿಗಳಾಗಿದ್ದರು (೧೯೩೮–೩೯) ಎರಡು ಮೂರು ವರ್ಷಗಳ ಅನಂತರ ದಿವಂಗತ ಶ್ರೀ ಮಾನ್ವಿ ನರಸಿಂಗರಾಯರೂ ಮೈಸೂರಿಗೆ ಬಂದು ಕನ್ನಡ ಎಂ.ಎ. ವ್ಯಾಸಂಗ ಮಾಡಿದರು. ಅವರೂ ೧೯೬೮-೬೯. ರವರೆಗೆ ಉಸ್ಮಾನಿಯ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದರು.

ವ್ಯಾಸಂಗದ ಅವಕಾಶ

ಹೀಗೆ ಬಹು ವರ್ಷಗಳಿಂದ ಉಸ್ಮಾನಿಯ ವಿಶ್ವವಿದ್ಯಾ

ಲಯದಲ್ಲಿ ಕನ್ನಡ ವ್ಯಾಸಂಗಕ್ಕೆ ಇಂಟರ್ ಮೀಡಿಯಟ್ ಪ್ರೀಯೂನಿವರ್ಸಿಟಿ, ಬಿ.ಎ., ಬಿ.ಎಸ್.ಸಿ., ಬಿ.ಕಾಂ., ಎಂ.ಎ., ಎಂ.ಲಿಟ್. ಮತ್ತು ಪಿ.ಎಚ್.ಡಿ., ಕನ್ನಡ ಡಿಪ್ಲೊಮ, ಬಿ.ಓ.ಎಲ್. ಮುಂತಾದ ವ್ಯಾಸಂಗದ ಎಲ್ಲ ಹಂತಗಳಲ್ಲೂ ಅವಕಾಶವಿದೆ.

೧೯೫೬ರಲ್ಲಿ ಭಾಷಾವಾರು ಪ್ರಾಂತಗಳು ಅಸ್ತಿತ್ವಕ್ಕೆ ಬಂದಮೇಲೆ, ಹೊಸದಾಗಿ ಆರಂಭವಾದುವೂ ಸೇರಿ ಆಂಧ್ರ ಪ್ರದೇಶದ ಮೂರು ವಿಶ್ವವಿದ್ಯಾಲಯಗಳಲ್ಲಿ ಉಸ್ಮಾನಿಯದಲ್ಲೇ ಇನ್ನೂ ಕನ್ನಡಕ್ಕೆ ಹೆಚ್ಚಿನ ಸ್ಥಾನ ವಿದೆಯೆಂಬುದು ನಿಜವಾದರೂ, ಕನ್ನಡಿಗರ ಸಂಖ್ಯೆ ಬಹು ಕಡಿಮೆಯಾಗುತ್ತಿರುವುದರಿಂದ, ಕನ್ನಡ ವಿದ್ಯಾರ್ಥಿಗಳ ಸಂಖ್ಯೆಯೂ ಕಡಿಮೆಯಾಗುತ್ತಿದೆ.

ಗ್ರಂಥಾಲಯದಲ್ಲಿ ಕನ್ನಡ ವಿಭಾಗ

ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿನ ಗ್ರಂಥಾಲಯದ ಕನ್ನಡ ವಿಭಾಗದ ಬೆಳೆವಣಿಗೆಗೆ ಇದು ಹಿನ್ನೆಲೆ. ಪ್ರೌಢವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿರುವುದರಿಂದ, ಅವರಿಗೆ ಬೋಧಿಸುವ ಅಧ್ಯಾಪಕ ವೃಂದವಿರುವುದರಿಂದ, ಅವರ ಉಪಯೋಗಕ್ಕಾಗಿ ಸುಸಜ್ಜಿತ ಕನ್ನಡ ವಿಭಾಗವೊಂದು ಮೊದಲಿನಿಂದಲೂ ಇಲ್ಲಿ ಬೆಳೆಯುತ್ತ ಬಂದಿದೆ.

ಹೈದರಾಬಾದಿನಲ್ಲಿನ ಅನೇಕ ಕಾಲೇಜುಗಳಲ್ಲಿ, ಹೈಸ್ಕೂಲುಗಳಲ್ಲಿ ಕನ್ನಡ ಗ್ರಂಥಾಲಯಗಳಿವೆ. ಅವುಗಳಲ್ಲಿ ಮುಖ್ಯವಾದುವೆಂದರೆ ಯೂನಿವರ್ಸಿಟಿ ಆರ್ಟ್ಸ್ ಮತ್ತು ಕಾಮರ್ಸ್ ಕಾಲೇಜ್, ಯೂನಿವರ್ಸಿಟಿ ಮಹಿಳಾ ಕಾಲೇಜ್, ನೈಜಾಮರ ಕಾಲೇಜ್, ಬದ್ರುಕಾ ಕಾಲೇಜ್, ಸೈಫಾಬಾದ್ ಕಾಲೇಜ್, ಚಾದರ ಘಾಟ್ ಕಾಲೇಜ್. ಆರ್ಟ್ಸ್ ಮತ್ತು ಕಾಮರ್ಸ್ ಕಾಲೇಜಿನಲ್ಲಿ ಸ್ನಾತಕೋತ್ತರ ಪುಸ್ತಕ ಭಂಡಾರ ಮತ್ತು ಸೆಮಿನಾರ್ ಪುಸ್ತಕ ಭಂಡಾರಗಳೂ, ವಾಚನಾಲಯವೂ ಇವೆ. ಇವುಗಳಲ್ಲದೆ ಉಸ್ಮಾನಿಯ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಕನ್ನಡ ವಿಭಾಗ ಪುಷ್ಟವಾಗಿಯೇ ಬೆಳೆದಿದೆ. ಅಲ್ಲದೆ ಹೈದರಾಬಾದಿನ ಕರ್ಣಾಟಕ ಸಾಹಿತ್ಯ ಮಂದಿರ, ಸಿಕಂದರಾಬಾದಿನ ಕನ್ನಡ ಮೈತ್ರಿ ಸಂಘಗಳಲ್ಲೂ ಪುಸ್ತಕ ಭಂಡಾರಗಳಿವೆ. ಇವಲ್ಲದೆ ಆಂಧ್ರ ಪ್ರದೇಶ ಪ್ರಭುತ್ವದ ಕೇಂದ್ರ ಗ್ರಂಥ ಭಂಡಾರದಲ್ಲೂ ಒಳ್ಳೆಯ ಕನ್ನಡ ವಿಭಾಗವಿದೆ. ಹೈದರಾಬಾದಿನ ಬಾಗ್ ಲಿಂಗಂಪಲ್ಲಿಯಲ್ಲಿರುವ ಪ್ರಮುಖವಾದ ಕನ್ನಡ ಶಾಲೆ ನೃಪತುಂಗ ಹೈಯರ್ ಸೆಕಂಡರಿ ಸ್ಕೂಲ್ ಮತ್ತು ಜೂನಿಯರ್ ಕಾಲೇಜುಗಳಲ್ಲಿಯೂ ಕನ್ನಡ ಗ್ರಂಥಾಲಯಗಳಿವೆ. ಅದೇ ವಿಸ್ತರಣದಲ್ಲಿರುವ ಶ್ರೀ ರಾಘವೇಂದ್ರಸ್ವಾಮಿ ಬೃಂದಾವನ ಮತ್ತು ಅಖಿಲ ಭಾರತ ಮಾಧ್ವ ಮಹಾಮಂಡಳದ ಹೈದರಾಬಾದ್ ಶಾಖೆಯ ಆವರಣದಲ್ಲಿ ಕೂಡ ಒಂದು ಸಣ್ಣ ಕನ್ನಡ ಗ್ರಂಥಾಲಯವುಂಟು. ಇದು ಹೆಚ್ಚಾಗಿ ಆಧ್ಯಾತ್ಮಿಕ ಸಾಹಿತ್ಯ ಪುಸ್ತಕಗಳಿಗೆ ಮೀಸಲಾದ ಗ್ರಂಥಾಲಯ.

ಹದಿಮೂರು ಸಾವಿರ ಪುಸ್ತಕಗಳು

ಉಸ್ಮಾನಿಯ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಈಗ ಹದಿಮೂರು ಸಾವಿರ ಅಚ್ಚಾದ ಕನ್ನಡ ಪುಸ್ತಕಗಳಿವೆ. ಅಲ್ಲದೆ ಇನ್ನೂರತೊಂಬತ್ತೈದು ಓಲೆಗರಿ ಮತ್ತು ಕಾಗದದ ಹಸ್ತಪ್ರತಿಗಳಿವೆ.

ಭಾರತದ ವಿಶ್ವವಿದ್ಯಾಲಯಗಳ ಅನುದಾನ ಮಂಡಳಿ (University grants Commission)ಯ ಧನ ಸಹಾಯದಿಂದ ಉಸ್ಮಾನಿಯ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಈ ಹಸ್ತಪ್ರತಿಗಳ ಒಂದು ವಿವರಣಾತ್ಮಕ ಪಟ್ಟಿಯನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದೆ. ಈ ಹಸ್ತಪ್ರತಿಗಳಲ್ಲಿ ಹಲವು ಅಪ್ರಕಟಿತ ಕೃತಿಗಳೂ ಇವೆ. ಈ ಕನ್ನಡ ವಿಭಾಗ 'ತಾವರೆ' ಎಂಬ ಹೆಸರಿನ ಒಂದು ವಾರ್ಷಿಕ ಪತ್ರಿಕೆಯನ್ನೂ ಪ್ರಕಟಿಸುತ್ತದೆ.

ಕನ್ನಡ ಪುಸ್ತಕ ಕೊಳ್ಳಲು ಹಣ ಸಹಾಯ

ವಿಶ್ವವಿದ್ಯಾಲಯದ ಕಾಲೇಜುಗಳಿಗೆ ಮತ್ತು ಪುಸ್ತಕ ಭಂಡಾರಕ್ಕೆ ವರ್ಷಕ್ಕೆ ಒಟ್ಟು ಸುಮಾರು ಮೂರು ಸಾವಿರ ರೂಪಾಯಿಗಳಷ್ಟು ಹಣವನ್ನು ಕನ್ನಡ ಪುಸ್ತಕಗಳನ್ನು ಕೊಳ್ಳಲು ನೀಡಲಾಗುತ್ತಿದೆ. ಸಾರ್ವಜನಿಕ ಕೇಂದ್ರ ಗ್ರಂಥಾಲಯದ ಕನ್ನಡ ವಿಭಾಗಕ್ಕೆ ಕೂಡ ಸುಮಾರು ಸಾವಿರ ರೂಪಾಯಿಗಳಷ್ಟು ಪುಸ್ತಕಗಳನ್ನು ಸೂಚಿಸಲಾಗುತ್ತದೆ.

ಉಸ್ಮಾನಿಯ ವಿಶ್ವವಿದ್ಯಾಲಯದ ವಾಚನಾಲಯಕ್ಕೆ ಪ್ರಬುದ್ಧ ಕರ್ಣಾಟಕ, ಜೀವನ, ಪುಸ್ತಕ ಪ್ರಪಂಚ, ಪ್ರಜಾಮತ, ಸುಧಾ, ಶರಣ ಸಾಹಿತ್ಯ, ಸಾಧನ ಮೊದ

ಲಾದ ಪತ್ರಿಕೆಗಳೂ ಬರುತ್ತವೆ. ಅವುಗಳ ಹಿಂದಿನ ಸಂಚಿಕೆಗಳನ್ನು ಕ್ರಮವಾಗಿ ರಟ್ಟುಹಾಕಿಸಿ ಓದುಗರ ಉಪಯೋಗಕ್ಕಾಗಿ ಪುಸ್ತಕ ಭಂಡಾರದಲ್ಲಿ ಇಡಲಾಗುತ್ತಿದೆ. ಅಲ್ಲದೆ ಈ ಪುಸ್ತಕ ಭಂಡಾರದಲ್ಲಿ ನಿಘಂಟು ವಿಶ್ವಕೋಶಗಳ ಒಂದು ಶಾಖೆಯೇ ಪ್ರತ್ಯೇಕವಾಗಿದೆ. ಅಲ್ಲಿಯೂ ಕನ್ನಡದ ಪ್ರಸಿದ್ಧ ನಿಘಂಟುಗಳು ಕಿಟ್ಟಲ್ ಕನ್ನಡ–ಇಂಗ್ಲಿಷ್ ಕೋಶ (ಇತ್ತೀಚೆಗೆ ಪ್ರಕಟವಾದ ಮದ್ರಾಸ್ ವಿಶ್ವವಿದ್ಯಾಲಯದ್ದೂ ಕೂಡ), ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ಕೋಶ, ಸಂಸ್ಕೃತ ಕನ್ನಡ ಕೋಶ, ಇತರ ಸಣ್ಣ ನಿಘಂಟುಗಳು; ಕನ್ನಡ ವಿಶ್ವಕೋಶದ ಪ್ರಕಟಿತ ಭಾಗಗಳು, ಜ್ಞಾನಗಂಗೋತ್ರಿಯ ಸಂಪುಟಗಳು, ಕಾರಂತರ ಕೃತಿಗಳು ಮೊದಲಾದವುಗಳು ಓದುಗರ ಉಪಯೋಗಕ್ಕಾಗಿ ಕಾದು ಕುಳಿತಿವೆ.

ಕನ್ನಡ ವಿಭಾಗದ ಮುಖ್ಯಸ್ಥರ ಸಲಹೆ

ಉಸ್ಮಾನಿಯ ವಿಶ್ವವಿದ್ಯಾಲಯ ಗ್ರಂಥಭಂಡಾರಕ್ಕೆ ಮತ್ತು ಸಾರ್ವಜನಿಕ ಕೇಂದ್ರ ಗ್ರಂಥಾಲಯಕ್ಕೆ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಮುಖ್ಯಸ್ಥರು ಸೂಚಿಸಿದ ಪುಸ್ತಕಗಳನ್ನೇ ಕೊಳ್ಳುವ ರೂಢಿಯಿದೆ. ಆಂಧ್ರ ಪ್ರದೇಶದ ಕೇಂದ್ರ ಗ್ರಂಥಾಲಯದ ಸಮಿತಿಯಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರೂ ಒಬ್ಬ ಸದಸ್ಯರಾಗಿದ್ದಾರೆ. ಅವರು ಸೂಚಿಸಿದ ಪುಸ್ತಕಗಳ ಪಟ್ಟಿಯೊಂದನ್ನು ಈ ಸಮಿತಿಯ ಅನುಮತಿ ಪಡೆದು ಸರ್ಕಾರಕ್ಕೆ ಕಳುಹಿಸಿ ಅವರ ಅಪ್ಪಣೆಯಾದ ಮೇಲೆ ಆ ಪಟ್ಟಿಯನ್ನು ರಾಜ್ಯದ ಎಲ್ಲ ಸಾರ್ವಜನಿಕ ಗ್ರಂಥಾಲಯಗಳಿಗೂ ಕಳಿಸಿ, ಆ ಪಟ್ಟಿಯಿಂದ ಅವರು ತಮ್ಮ ತಮ್ಮ ಅಗತ್ಯವನ್ನನುಸರಿಸಿ ಪುಸ್ತಕಗಳನ್ನು ಕೊಳ್ಳಬೇಕೆಂಬ ನಿಯಮವಿದೆ.

ಅನುಸರಿಸುತ್ತಿರುವ ಕ್ರಮ

ಈ ಗ್ರಂಥಭಂಡಾರಗಳಲ್ಲಿ ಇತ್ತೀಚಿನ ನವೀನ ಪದ್ಧತಿಯನ್ನೇ ಅನುಸರಿಸಲಾಗುತ್ತಿದೆ. Open shelf ಮತ್ತು Devi Decimal ಪದ್ಧತಿಗಳನ್ನನುಸರಿಸುತ್ತಿರುವುದರಿಂದ, ಅಕಾರಾದಿಯಾಗಿ ಪುಸ್ತಕಗಳ ಹೆಸರು ಮತ್ತು ಗ್ರಂಥಕರ್ತೃವಿನ ಹೆಸರು ಸೂಚಿಸುವ ಕಾರ್ಡುಗಳನ್ನು ತಯಾರಿಸಿ ಇಟ್ಟು ಅವುಗಳಿಗೆ ಕ್ರಮವಾಗಿ ಸಂಖ್ಯೆಗಳನ್ನು ಕೊಟ್ಟಿರುವುದರಿಂದ, ನಮಗೆ ಬೇಕಾದ ಪುಸ್ತಕವನ್ನು ಬೇಗ ಆರಿಸಿಕೊಳ್ಳುವುದು ಸಾಧ್ಯವಾಗುತ್ತಿದೆ. ಅಲ್ಲದೆ ಆ ಪುಸ್ತಕ ಇಲ್ಲಿ ಇದೆಯೋ ಇಲ್ಲವೇ ಎಂಬುದೂ ಕೂಡಲೇ ತಿಳಿಯುತ್ತದೆ.

ವಿದ್ವಾಂಸರ ಮೆಚ್ಚುಗೆ

ಹೈದರಾಬಾದಿನಲ್ಲಿರುವ ಸರ್ಕಾರದ ಸಾರ್ವಜನಿಕ ಕೇಂದ್ರ ಗ್ರಂಥಾಲಯ ಮತ್ತು ಉಸ್ಮಾನಿಯ ವಿಶ್ವವಿದ್ಯಾನಿಲಯದ ಗ್ರಂಥಭಂಡಾರದ ಕನ್ನಡ ವಿಭಾಗಗಳು ತುಂಬ ಚೆನ್ನಾಗಿವೆ ಎಂದು ಅನೇಕ ವಿದ್ವಾಂಸರು ಮೆಚ್ಚಿದ್ದಾರೆ. ವಿದ್ಯಾರ್ಥಿ ಸಂಖ್ಯೆ ಕಡಿಮೆ ಇರುವುದರಿಂದ, ಅವರಿಗೆ ಬೇಕಾದ ಎಲ್ಲ ಪುಸ್ತಕಗಳೂ ಸುಲಭವಾಗಿ ಇಲ್ಲಿ ದೊರೆಯುವುದು ಸಾಧ್ಯವಿದೆ.

ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯವರು ಉಸ್ಮಾನಿಯ ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿರುವ ಹಸ್ತಪ್ರತಿಗಳ Photo Strat ಪ್ರತಿ ತೆಗೆದುಕೊಳ್ಳಲು ಸಹ ಏರ್ಪಾಟು ಮಾಡಿದ್ದರು. ಆ ಕೆಲಸವೂ ಈಗ ಮುಗಿದಿದೆ.

ಕರ್ಣಾಟಕದ ಅನೇಕ ಭಾಗಗಳು ಒಮ್ಮೆ ಸೇರಿದ್ದ ತೆಲಂಗಾಣದ ಈ ಭಾಗದಲ್ಲಿ ಕನ್ನಡ ಪುಸ್ತಕಗಳ ಸಂಖ್ಯೆಗೂ, ಕನ್ನಡ ಅಧ್ಯಯನಕ್ಕೂ ಸಾಕಷ್ಟು ಸೌಲಭ್ಯ ಈಗಲೂ ಇರುವುದು ಸಮಾಧಾನದ–ಸಂತೋಷದ ಸಂಗತಿ.

ಅರಮನೆಯ ಸರಸ್ವತೀ ಭಂಡಾರ

● ಎಂ. ಜಿ. ನಂಜುಂಡಾರಾಧ್ಯ

ಮೈಸೂರು ಅರಮನೆಯ ಸರಸ್ವತೀ ಭಂಡಾರದ ಇತಿಹಾಸ ಸುಮಾರು ನೂರೈವತ್ತು ವರ್ಷಗಳಷ್ಟು ಹಿಂದಿನದು. ಅಂದಿನ ಮಹಾರಾಜರಾಗಿದ್ದ "ಅಭಿನವಭೋಜ" ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರು (೧೭೯೪–೧೮೬೮) ತಮ್ಮ ಉಪಯೋಗಾರ್ಥವಾಗಿ ಸಂಗ್ರಹಿಸಿಕೊಂಡಿದ್ದ ಗ್ರಂಥಭಂಡಾರಕ್ಕೆ "ಸರಸ್ವತೀ ಭಂಡಾರ" ಎಂಬ ಹೆಸರಿತ್ತು. ಈ ಭಂಡಾರವು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರಿಗಿದ್ದ ಸಾಹಿತ್ಯಾಭಿರುಚಿಯ ಸಂಕೇತವೆನಿಸಿತ್ತು.

ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಯೋಗ್ಯ ಶಿಕ್ಷಣ ಪಡೆದಿದ್ದ ಒಡೆಯರು ತಮ್ಮ ಇಪ್ಪತ್ತನೆಯ ವಯಸ್ಸಿಗೇ ಗ್ರಂಥರಚನೆ ಮಾಡಲು ಆರಂಭಿಸಿದ್ದರು ಎಂಬುದು ಅವರು ರಚಿಸಿರುವ ಗ್ರಂಥಗಳಲ್ಲಿ ಉಲ್ಲೇಖಿಸಿರುವ ಶಕವರ್ಷಗಳಿಂದ ವೇದ್ಯವಾಗುತ್ತದೆ. ಮಹಾಸ್ವಾಮಿಯವರು ರಚಿಸಿದವು ಎನ್ನಲಾಗಿರುವ ಸುಮಾರು ಐವತ್ತು ಗ್ರಂಥಗಳಲ್ಲಿ "ದೇವೀ ಮಾಹಾತ್ಮ್ಯ" (ಸನ್. ೧೮೧೫) "ಜೈಮಿನೀ ಭಾರತದ ಅಶ್ವಮೇಧಿಕ ಪರ್ವಟೀಕೆ" (೧೮೨೦) "ಹರಿಶ್ಚಂದ್ರೋಪಾಖ್ಯಾನ", "ಶಂಕರ ಸಂಹಿತೆ" ಮತ್ತು "ಶುಕ ಸಪ್ತತಿಗಳು" (೧೮೨೫) ಲಲಿತೋಪಾಖ್ಯಾನ, (೧೮೪೭) ಮಾಳವಿಕಾಗ್ನಿಮಿತ್ರೀಯ, ಶಾಕುಂತಳೋಪಾಖ್ಯಾನಗಳು (೧೮೪೮) ಸಿರಿನಂಜುಂಡಶತಕ (೧೮೪೯) ಸಂಖ್ಯಾತರತ್ನಮಾಲಾ ಟೀಕೆ (೧೯೬೪) ಕೃಷ್ಣಕಥಾರತ್ನಾಕರ ಮತ್ತು ರಾಮಾಯಣ ಟೀಕೆ (೧೮೬೭) ಮುಂತಾದವುಗಳನ್ನು ಅವರು ತಮ್ಮ ಜೀವಿಕೆಯ ಕಡೆಯ ದಿನಗಳವರೆಗೂ ರಚಿಸುತ್ತಿದ್ದಂತೆ ತಿಳಿದುಬರುತ್ತದೆ.

ಪವಿತ್ರ ಮಣಿಹ

ನಿರಂತರವೂ ವಿದ್ವದ್ಗೋಷ್ಠಿಯಲ್ಲಿದ್ದುಕೊಂಡು ಗ್ರಂಥರಚನೆ, ಪರಿಷ್ಕಾರ, ಗ್ರಂಥ ಸಂಪಾದನೆ ಮತ್ತು ಅಪೂರ್ವ ಗ್ರಂಥಗಳ ಪ್ರತಿಮಾಡಿಸಿ ವಿದ್ಯಾಸಂಸ್ಥೆಗಳಿಗೆ, ಮಠಗಳಿಗೆ ಕಳುಹಿಸುವ ಪವಿತ್ರ ಮಣಿಹವನ್ನು ಕೈಗೊಂಡಿದ್ದ ಮಹಾಸ್ವಾಮಿಯವರಿಗೆ ಸರಸ್ವತೀ ಭಂಡಾರದ ಬೆಳವಣಿಗೆಯಲ್ಲಿ ಆಸಕ್ತಿ ಇದ್ದುದು ಹೆಚ್ಚಲ್ಲ! ಅನೇಕ ವಿದ್ವಾಂಸರ ಮನೆಗಳಲ್ಲಿ, ಮಠಗಳಲ್ಲಿ ಹುಳುಹತ್ತಿ ಜೀರ್ಣವಾಗುತ್ತಿದ್ದ ಓಲೆಗರಿ ಹಾಗೂ ಕೈಬರಹದ ಗ್ರಂಥಗಳಿಗೆ ಮಹಾಸ್ವಾಮಿಯವರು ಸೂಕ್ತ ಪ್ರತಿಫಲ ನೀಡಿ, ಅವುಗಳನ್ನು ತಮ್ಮ ಗ್ರಂಥ ಭಂಡಾರಕ್ಕೆ ಸೇರಿಸಿಕೊಂಡರು. ಕೇವಲ ಗ್ರಂಥಗಳನ್ನು ಸಂಗ್ರಹಿಸಿದ್ದು ಮಾತ್ರವಲ್ಲದೆ ಅವರು ಅವುಗಳ ಪರಿಶೀಲನೆ ಮತ್ತು ಪರಿಷ್ಕಾರಗಳನ್ನು ಎಸಗಲು ಅನೇಕ ವಿದ್ವಾಂಸರನ್ನು ನೇಮಿಸಿದ್ದರು. ಮಹಾಸ್ವಾಮಿಯವರ ಎಲ್ಲ ಗ್ರಂಥಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿರುವ ಸುಪ್ರಸಿದ್ಧ ವಿದ್ವಾಂಸರಾದ ದಿ॥ ಆರ್.

ನರಸಿಂಹಾಚಾರ್ಯರು ಈ ಬಗೆಗೆ ಹೇಳಿರುವ ಮಾತು ಉಲ್ಲೇಖನೀಯ. "ಮಹಾರಾಜನಾಗಿದ್ದರೂ ಈತ ವಿದ್ವದ್ಗೋ ಯಲ್ಲಿ ವಿಶೇಷವಾಗಿ ಕಾಲವನ್ನು ಕಳೆದು ಸಂಸ್ಕೃತದಲ್ಲಿರುವ ಪುರಾಣೇತಿಹಾಸ ಕಾವ್ಯ ನಾಟಕಾದಿ ಗ್ರಂಥಗಳ ಕನ್ನಡಕ್ಕೆ ಪರಿವರ್ತಿಸಿಯೂ, ನೂತನ ಗ್ರಂಥಗಳನ್ನು ರಚಿಸಿಯೂ, ಕನ್ನಡಿಗರಿಗೆ ಮಹೋಪಕಾರ ಮಾಡಿದ್ದಾನೆ. ಕನ್ನ ಸಂಸ್ಕೃತ ಈ ಎರಡು ಭಾಷೆಗಳಲ್ಲಿಯೂ ಈತನಿಗೆ ವಿಶೇಷವಾದ ಪಾಂಡಿತ್ಯವುಂಟು. ದಾತೃತ್ವ, ವಿದ್ವತ್ಪಕ್ಷಪಾತ ಎ ಗುಣಗಳಿಗೆ ಈತನು ತವರುಮನೆಯಾಗಿದ್ದನು. ವಿದ್ವತ್ಪ್ರಭುವಾಗಿ ವಿದ್ವಾಂಸರಿಗೆ ವಿಶೇಷ ಪ್ರೋತ್ಸಾಹಕನಾಗಿದ್ದು ಮಾತ್ರವಲ್ಲದೆ ಧರ್ಮೈಕಪರಾಯಣನಾಗಿ ಎಲ್ಲ ಮಠಗಳಿಗೂ ದೇವಾಲಯಗಳಿಗೂ ದಾನಗಳನ್ನು ಮಾಡಿ ತನ್ನ ಉದಾ ಶಯವನ್ನು ಪ್ರಕಟ ಮಾಡಿರುವನು." (ಕರ್ಣಾಟಕ ಕವಿ ಚರಿತೆ. ಭಾ. III ಪು. ೧೬

ಸರಸ್ವತೀ ಭಂಡಾರದ ವರ್ಗಾಂತರ

ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ ಕಾಲದಲ್ಲಿ ಅರಮನೆಯಲ್ಲಿ ನಿಕ್ಷೇಪವಾಗಿದ್ದ ಸರಸ್ವತೀ ಭಂಡಾರವು ಅ ತರುವಾಯ ಕ್ರಿ. ಶ. ಸು. ೧೮೬೮ರಲ್ಲಿ ಜಗನ್ಮೋಹನ ಅರಮನೆಗೆ ಸ್ಥಳಾಂತರಿಸಲ್ಪಟ್ಟಿತು. ನೂತನ ಪಟ್ಟಾಭಿಷಿಕ್ತರಾಗಿ ಶ್ರೀ ಚಾಮರಾಜೇಂದ್ರ ಒಡೆಯರು ಆಗ್ಗೆ ಇನ್ನೂ ಚಿಕ್ಕವರು. ಅವರಿಗೆ ಗಾರ್ಡಿಯನ್ನರಾಗಿ ನೇಮಿತರಾಗಿದ್ದ ಶ್ರೀ ಜಿ. ಮ್ಯಾಲಿಸನ್ (G. B. MALLESON) ಅವರೇ ಸ್ವತಃ ಈ ಸರಸ್ವತೀ ಭಂಡಾರದ ಮೇಲ್ವಿಚಾರಕರಾಗಿದ್ದರು. ಅ ಕಾಲದಲ್ಲಿ (೧-೧೦-೧೮೭೯) ಸರಸ್ವತೀ ಭಂಡಾರದ ಮೊದಲನೆಯ ಗ್ರಂಥಸೂಚಿ (Classified Catalogue Sansk Works in the Saraswati Bhandaram Library of His Highness the Maharaja of Myso ಸಿದ್ಧವಾಯಿತು.

ಮೇಲೆ ಕಂಡ ಗ್ರಂಥ ಸೂಚಿಯಲ್ಲಿ ನಮೂದಾಗಿರುವ ಹಳೆಯ ಗ್ರಂಥಸೂಚಿ (Number in the old Catatogu ಎಂಬ ಶೀರ್ಷಿಕೆಯಿಂದ ಇದಕ್ಕೂ ಪೂರ್ವದಲ್ಲಿ ಒಂದು ಗ್ರಂಥಸೂಚಿ ಇದ್ದುದಾಗಿ ತಿಳಿದುಬರುತ್ತದೆ. ಆದರ ಗ್ರಂಥಸಂಖ್ಯೆ ಪ್ರಕಾರ ಆಗ್ಗೆ ಸುಮಾರು ೧೮೯೧ ಗ್ರಂಥಗಳು ಸರಸ್ವತೀ ಭಂಡಾರದಲ್ಲಿದ್ದಂತೆ ಕಂಡುಬರುತ್ತದೆ.

ಮ್ಯಾಲಿಸನ್ (೧೮೭೦) ಗ್ರಂಥಪಟ್ಟಿಕೆಯ ಪ್ರಕಾರ ವಿವಿಧ ಲಿಪಿಗಳ ಸುಮಾರು ೬೦೮ ಗ್ರಂಥಗಳು ಅಲ್ಲಿದ್ದ ವ್ಯಕ್ತವಾಗುತ್ತದೆ. ಲಿಪಿ ವಿಭಾಗದ ಕ್ರಮದಲ್ಲಿ ಅವುಗಳನ್ನು ಹೀಗೆ ವಿಂಗಡಿಸಬಹುದು :

೧.	ನಾಗರ ಲಿಪಿ	೭೦	ಗ್ರಂಥಗಳು
೨.	ತೆಲುಗು ಲಿಪಿ	೧೫೮	,,
೩.	ಗ್ರಂಥಾಕ್ಷರ	೨೪೭	,,
೪.	ಕನ್ನಡ ,,	೮೮	,,
೫.	ದೇವನಾಗರಿ ,,	೧೦	,,
೬.	ಮಲೆಯಾಳ ,,	೧	,,

ಈ ಪಟ್ಟಿಕೆಯ ವಿಷಯ ವಿಭಾಗದ ಪ್ರಕಾರ ಅಂದಿಗೆ ಸರಸ್ವತೀ ಭಂಡಾರದಲ್ಲಿ—

೧.	ವೇದ	೨೮	ಗ್ರಂಥಗಳು	೮.	ವ್ಯಾಕರಣ	೨೨	ಗ್ರಂಥಗ
೨.	ಕಲ್ಪಸೂತ್ರ	೨೨	,,	೯.	ನ್ಯಾಯಶಾಸ್ತ್ರ	೩೪	,,
೩.	ಶಿಕ್ಷಾ	೮	,,	೧೦.	ಮೀಮಾಂಸಾಶಾಸ್ತ್ರ	೧೭	,,
೪.	ನಿರುಕ್ತ	—		೧೧.	ವೇದಾಂತ	೮೪	,,
೫.	ಛಂದಸ್ಸು	—		೧೨.	ಸಾಂಖ್ಯ	—	
೬.	ಸ್ಮೃತಿ	೮೫	,,	೧೩.	ಯೋಗ	೧	,,
೭.	ಆಗಮ, ಇತಿಹಾಸ, ಪುರಾಣ	೧೫೦	,,	೧೪.	ಜ್ಯೋತಿಷ	೨೯	,,
				೧೫.	ಮಂತ್ರಶಾಸ್ತ್ರ	೨೯	,,

೧೬.	ವೈದ್ಯ	೧೯	,,	೧೯.	ಶಿಲ್ಪ	೬	,,
೧೭.	ಧನುರ್ವೇದ	—		೨೦.	ನೀತಿ	—	
೧೮.	ಗಾಂಧರ್ವ	೪	,,	೨೧.	ಸಾಹಿತ್ಯ	೭೦	,,

ಹೀಗೆ ಒಟ್ಟು ೬೦೮ ಗ್ರಂಥಗಳಿದ್ದವು.

ಸರಸ್ವತೀ ಭಂಡಾರದ ಮೊದಲ ಪಂಡಿತರು

ಮ್ಯಾಲಿಸನ್ ಸಾಹೇಬರ ತರುವಾಯ ಸರಸ್ವತೀ ಭಂಡಾರದ ಮೇಲ್ವಿಚಾರಕರಾಗಿ ದಿ|| ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು ನೇಮಿತರಾದರು. ಇವರೇ ಸರಸ್ವತೀ ಭಂಡಾರದ ಮೊದಲನೆಯ ಪಂಡಿತರು. ಇವರ ಕಾಲದಲ್ಲಿ (೧೯೦೫) ಶ್ರೀಮನ್ಮಹಾರಾಜರವರ ಅರಮನೆಯ ಸರಸ್ವತೀ ಭಂಡಾರವು ಶಾಸ್ತ್ರ ಕ್ರಮದಿಂದ ಮತ್ತೊಮ್ಮೆ ಪುನರ್ಘಟಿತವಾಗಿ ಕೈಬರಹ ಗ್ರಂಥಗಳ ಪಟ್ಟಿಕೆ ಸಿದ್ಧವಾಯಿತು. ಈ ಪಟ್ಟಿಕೆಯ ಪ್ರಕಾರ ಇದರಲ್ಲಿ :

೧.	ವೇದ	೮೧	ಗ್ರಂಥಗಳು	೧೧.	ಶಿಲ್ಪಶಾಸ್ತ್ರ	೧	ಗ್ರಂಥಗಳು
೨.	ವೇದಾಂಗ	೯೩	,,	೧೨.	ವ್ಯಾಕರಣ	೫೧	,,
೩.	ಸ್ಮೃತಿ	೧೨೩	,,	೧೩.	ವೈದ್ಯ	೧೧	,,
೪.	ಪುರಾಣ	೧೬೭	,,	೧೪.	ಜ್ಯೋತಿಷ	೭೬	,,
೫.	ಕಾವ್ಯ	೪೧೧	,,	೧೫.	ದರ್ಶನ	೭೨೭	,,
೬.	ಅಲಂಕಾರ ಶಾಸ್ತ್ರ	೬೮	,,	೧೬.	ಮಂತ್ರಶಾಸ್ತ್ರ	೫೬	,,
೭.	ಛಂದಸ್ಸು	೪೨	,,	೧೭.	ಆಗಮ	೮೭	,,
೮.	ನಿಘಂಟು	೨೨	,,	೧೮.	ಅನಿರ್ದಿಷ್ಟ	೧೧	,,
೯.	ಕಾಮಶಾಸ್ತ್ರ	೩	,,	೧೯.	ಕರ್ಣಾಟಕ	೫೪	,,
೧೦.	ಭರತಶಾಸ್ತ್ರ	೫	,,	೨೦.	ವೀರಶೈವ–ಕರ್ಣಾಟಕ	೧೮೮	,,
				೨೧.	ಪರಿಶಿಷ್ಟ	೧೮೭	,,

ಹೀಗೆ ಒಟ್ಟು ೨೩೬೨ ಗ್ರಂಥಗಳಿರುತ್ತವೆ. ಲಿಪಿ ವಿಭಾಗದ ಪ್ರಕಾರ ಇವುಗಳನ್ನು ಹೀಗೆ ವಿಂಗಡಿಸಬಹುದು.

೧.	ಗ್ರಂಥಾಕ್ಷರ	೮೯೦	ಗ್ರಂಥಗಳು
೨.	ಆಂಧ್ರ ಲಿಪಿ	೮೯೪	,,
೩.	ಕನ್ನಡ ಲಿಪಿ	೩೫೪	,,
೪.	ನಾಗರ ಲಿಪಿ	೨೫೨	,,
೫.	ದೇವನಾಗರ ಲಿಪಿ	೧	,,
೬.	ಹುಲೆಯಾಳಿ	೨	,,
೭.	ತುಳು	೨	,,

ಪ್ರಸ್ತುತ ಗ್ರಂಥಗಳ ಸಂಖ್ಯೆ

ಪ್ರಕೃತ ಸರಸ್ವತೀ ಗ್ರಂಥ ಭಂಡಾರದಲ್ಲಿ ೨೮೯೫ ಗ್ರಂಥಗಳು ಇರುವುವಲ್ಲದೆ ೧೯೦೫ರ ತರುವಾಯ ಇಲ್ಲಿಯವರೆಗೆ ಹೊಸದಾಗಿ ಸೇರ್ಪಡೆಯಾಗಿರುವ ನೂರಾರು ಓಲೆಗರಿ ಹಾಗೂ ಕೈಬರಹದ ಪ್ರತಿಗಳು ಇಲ್ಲಿ ಸುರಕ್ಷಿತವಾಗಿವೆ.

ತಾಳಪತ್ರ ಗ್ರಂಥ ಸ್ವರೂಪ

ಈ ಭಂಡಾರದಲ್ಲಿರುವ ಓಲೆ ಗ್ರಂಥಗಳ ಪರಿಮಾಣವು ಸುಮಾರು ನಾಲ್ಕು ಅಂಗುಲದಿಂದ ಹಿಡಿದು ಮೂರು ಅಡಿಗಳ

ವರೆಗೆ ಉದ್ದ ಮತ್ತು ಸುಮಾರು ಎರಡೂವರೆ ಅಂಗುಲ ಅಗಲದವರೆಗೂ ಇರುತ್ತದೆ. ಉದಾಹರಣೆಗೆ ನಂ. ೧೭. "ಶವ ರಹಸ್ಯ"ವು $2\frac{3}{4}$ ಅಡಿ ಉದ್ದದ ಆಂಧ್ರ ಲಿಪಿಯ ೨೬೭ ಪತ್ರಗಳಿಂದ ಕೂಡಿದೆ. ಅದೇ ಅಳತೆಯ ನಂ. ೭೮೪. ನಾಗರ ಲಿಪಿಯ ಸರಸ್ವತೀ ವಿಲಾಸವು ೨೮೧ ಪತ್ರಗಳಿಂದ ಕೂಡಿದೆ.

ಕೆಲವು ತಾಳಪತ್ರ ಗ್ರಂಥಗಳ ಸ್ಥೂಲ ಪರಿಚಯ

	ಗ್ರಂಥ	ಪತ್ರಸಂಖ್ಯೆ	ಲಿಪಿ
೧.	ಋಕ್‌ಸಂಹಿತೆ	೩೧೧	ಗ್ರಂಥಲಿಪಿ
೨.	ತೈತ್ತಿರೀಯ ಸಂಹಿತೆ	೩೧೬	,,
೩.	ತೈತ್ತಿರೀಯ ಸಂಹಿತಾಭಾಷ್ಯ	೩೪೭	,,
೪.	ಯಾಜ್ಞವಲ್ಕ್ಯಸ್ಮೃತಿ ಮಿತಾಕ್ಷರ–ವಿಜ್ಞಾನೇಶ್ವರಯೋಗಿ	೧೭೬	ಆಂಧ್ರಲಿಪಿ
೫.	ಡಿಟೊ	೨೩೩	ಗ್ರಂಥಲಿಪಿ
೬.	ಅನಂತಧರ್ಮಸಂಗ್ರಹ	೩೩೮	ಗ್ರಂಥ
೭.	ಮಹಾಭಾರತ (೧೧ ಸಂಪುಟಗಳು)	೨೦೦೬	,,
೮.	ಶ್ರೀಮದ್ರಾಮಾಯಣ (೧೬ ,,)	೩೦೦೭	,,
೯.	ಭಾಗವತ (೧೦ ,,)	೨೦೧೩	,,
೧೦.	(ತರ್ಕ) ತತ್ತ್ವಚಿಂತಾಮಣಿ (ಗಂಗೋಶೋಪಾಧ್ಯಾಯ) ೩ ಪ್ರತಿ	೨೯೭	,,
೧೧.	,, ೫ ,,		ಆಂಧ್ರ
೧೨.	,, ೫ ,,		ನಾಗರಲಿಪಿ
೧೩.	,, ಮಾಧುವೀವ್ಯಾಖ್ಯಾನ (೧೦ ಪ್ರತಿ)		
೧೪.	ವ್ಯುತ್ಪತ್ತಿವಾದ ೭ ,,		
೧೫.	ಸಾಮಾನ್ಯ ನಿರುಕ್ತಿ ೧೧ ,,		
೧೬.	ಸಿದ್ಧಾಂತ ಮುಕ್ತಾವಳಿ ೧೦ ,,		
೧೭.	ಶಾಸ್ತ್ರ ದೀಪಿಕಾ ೯ ,,		

ಇದರಂತೆ ಅಲಂಕಾರ, ವ್ಯಾಕರಣ, ವೈದ್ಯ ಮುಂತಾದ ವಿಭಾಗಗಳಲ್ಲಿ ಒಂದೊಂದು ಗ್ರಂಥದ ಹತ್ತಾರು ಪ್ರತಿಗಳು ಇಲ್ಲಿ ಸಂಗ್ರಹೀತವಾಗಿವೆ.

ಓಲೆ ಗ್ರಂಥ ರಕ್ಷಣೆಯ ಉಪಾಯಗಳು

ಓಲೆ ಗ್ರಂಥಗಳ ಸಂರಕ್ಷಣೆಯ ಬಗೆಗೆ ಸರಸ್ವತೀ ಭಂಡಾರವು ಮೊದಲಿನಿಂದಲೂ ಎಚ್ಚರವಹಿಸಿದೆ. ಒಳಗೆ ಧಾರಾಳವಾಗಿ ಗಾಳಿಯಾಡಲು ಅನುಕೂಲವಾಗುವಂತೆ ಸೂಕ್ಷ್ಮ ತಂತಿಗಳ ಜಾಲರಿಯಿರುವ ಐದು ದೊಡ್ಡ ದೊಡ್ಡ ಬೀರುಗಳು ಇಲ್ಲಿವೆ. ಅವು ಒಂದೊಂದೂ ಸುಮಾರು ಏಳು ಅಡಿ ಎತ್ತರ, ಒಂಬತ್ತು ಅಡಿ ಉದ್ದ ಮತ್ತು ಮೂರು ಅಡಿ ಅಗಲವುಳ್ಳವುಗಳಾಗಿವೆ. ಓಲೆಗಳಿಗೆ ಹುಳು ಹತ್ತದೆ ಇರಲು "ಓಲೆ ರಕ್ಷಕ ತೈಲ" (Manuscript preserver oil)ವನ್ನು ಪ್ರತಿ ವರ್ಷವೂ ಲೇಪಿಸುವ ವ್ಯವಸ್ಥೆಯಿದೆ. ಇದಕ್ಕಾಗಿ ಮೊದಲು ಸರಸ್ವತೀ ಭಂಡಾರದಲ್ಲಿ ಮೂವರು ಪಂಡಿತರು ನಿಯುಕ್ತರಾಗಿದ್ದು ಹಾಲಿ ಒಬ್ಬರು ಪಂಡಿತರು ಮಾತ್ರ ಇರುತ್ತಾರೆ.

೧೮೯೮–೯೯ರ ಸುಮಾರಿನಲ್ಲಿ ಅರಮನೆಗೆ ಬೆಂಕಿ ಬಿದ್ದಾಗ ಅನೇಕ ಓಲೆ ಮತ್ತು ಕೈಬರಹದ ಗ್ರಂಥಗಳು ನಷ್ಟವಾದವೆಂದು ಹೇಳಲಾಗುತ್ತದೆ. ಪ್ರಕೃತ ಇಲ್ಲಿ ಕೈಬರೆಹ ಗ್ರಂಥಗಳ ಒಟ್ಟು ಸಂಖ್ಯೆ ೨೨೦೦, ಕಟ್ಟುಗಳು ೧೬೪೮ ಇರುತ್ತವೆ.

ಮುದ್ರಿತ ಗ್ರಂಥಸೂಚಿ

ಅರಮನೆಯ ಸರಸ್ವತೀ ಭಂಡಾರದ ಮುದ್ರಿತ ಗ್ರಂಥ ಪಟ್ಟಿಕೆಯು ೧೯೫೫ರಿಂದ ಈಚೆಗೆ ಮತ್ತೆ ಪ್ರಕಟವಾಗಿಲ್ಲ. ೯೫೫ರಲ್ಲಿ ಮುದ್ರಿತವಾದ ಗ್ರಂಥಸೂಚಿಯ ಪ್ರಕಾರ ಅದರಲ್ಲಿ ಎ. ಬಿ. ಮತ್ತು ಸಿ. ಎಂಬ ಮೂರು ವಿಭಾಗಗಳಿವೆ. ಇವುಗಳಲ್ಲಿ ಕ್ರಮವಾಗಿ 'ಎ' ವಿಭಾಗವು ಸಂಸ್ಕೃತ ಗ್ರಂಥಗಳಿಗೂ, 'ಬಿ' ವಿಭಾಗವು ಕನ್ನಡ ಮುಂತಾದ ದೇಶಭಾಷಾ ಗ್ರಂಥಗಳಿಗೂ 'ಸಿ' ವಿಭಾಗವು ಆಂಗ್ಲ ಗ್ರಂಥಗಳಿಗೂ ವಿನ್ಯಾಸಲಾಗಿದೆ. ಮುದ್ರಿತ ಗ್ರಂಥಗಳ ಒಟ್ಟು ಸಂಖ್ಯೆ ಸುಮಾರು ೆರು ಸಾವಿರ. ಅವುಗಳನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು :

'ಎ' ವಿಭಾಗ

೧.	ಸಾಮಾನ್ಯ	೨೮	ಗ್ರಂಥಗಳು
೨.	ಕ್ಯಾಟಲಾಗುಗಳು	೧೧೬	,,
೩.	ನಿಘಂಟುಗಳು	೫೨	,,
೪.	ಋಗ್ವೇದ ವಿಭಾಗ	೫೦	,,
೫.	ಯಜುರ್ವೇದ ,,	೩೯	,,
೬.	ಸಾಮವೇದ ,,	೨೨	,,
೭.	ಅಥರ್ವವೇದ ,,	೧೬	,,
೮.	ಮಂತ್ರಶಾಸ್ತ್ರ	೫೬	,,
೯.	ಉಪನಿಷತ್ತು	೩೬	,,
೦.	ವೇದಾಂಗಗಳು	೩೫	,,
೧.	ಸೂತ್ರ ವಿಭಾಗ ಶ್ರೌತ-ಗೃಹ್ಯ-ಧರ್ಮ	೧೨೫	,,
೨.	ಸ್ಮೃತಿಗಳು	೨೯	,,
೩.	ನಿಬಂಧಗಳು	೨೬೯	,,
೪.	ವ್ರತಗಳು	೨೧	,,
೫.	ಮಾಹಾತ್ಮ್ಯಗಳು	೭೪	,,
೬.	ಗೀತೆಗಳು	೪೯	,,
೭.	ಸ್ತೋತ್ರ	೧೯೦	,,
೧೮.	ಸುಭಾಷಿತ	೩೫	ಗ್ರಂಥಗಳು
೧೯.	ಪದ್ಯಕಾವ್ಯ	೧೭೨	,,
೨೦.	ಚರಿತ್ರೆ	೬೧	,,
೨೧.	ಚಂಪೂ	೫೭	,,
೨೨.	ನಾಟಕ	೧೧೮	,,
೨೩.	ವ್ಯಾಕರಣ	೧೪೧	,,
೨೪.	ಛಂದಸ್ಸು	೧೩	,,
೨೫.	ಸಂಗೀತ	೫೦	,,
೨೬.	ನಾಟ್ಯ, ಕಲೆ, ಅಲಂಕಾರ	೬೬	,,
೨೭.	ಆಯುರ್ವೇದ	೪೨	,,
೨೮.	ಜ್ಯೋತಿಷ	೭೭	,,
೨೯.	ಅರ್ಥಶಾಸ್ತ್ರ	೧೯	,,
೩೦.	ಆಗಮ	೩೩	,,
೩೧.	ಮಂತ್ರಶಾಸ್ತ್ರ	೬೧	,,
೩೨.	ಶಿಲ್ಪ	೪	,,
೩೩.	ಕಾಮಶಾಸ್ತ್ರ	೩	,,
೩೪.	ದರ್ಶನ ವಿಭಾಗ	೨೨೨	,,
೩೫.	ವೇದಾಂತ ವಿಭಾಗ	೫೭೮	,,
೩೬.	ಜೈನಾದಿ	೩೫	,,

ಹೀಗೆ ಒಟ್ಟು ೩೪೫೨ ಗ್ರಂಥಗಳು 'ಎ' ಭಾಗದ ಸರಸ್ವತೀ ಭಂಡಾರದಲ್ಲಿವೆ.

'ಬಿ' ವಿಭಾಗ—ಕನ್ನಡದಲ್ಲಿ

೧. ಛಂದಸ್ಸು
೨. ಅಲಂಕಾರ
೩. ಉಪನಿಷತ್ತು
೪. ನಿಬಂಧ
೫. ಇತಿಹಾಸ–ಪುರಾಣ
೬. ಸ್ತೋತ್ರ
೭. ಸುಭಾಷಿತ

೮. ಪದ್ಯಕಾವ್ಯ
೯. ಕಥೆ–ಚರಿತ್ರೆ–ಕೈಪಿಡಿ
೧೦. ನಾಟಕ
೧೧. ಸಂಗೀತ
೧೨. ವೈದ್ಯ
೧೩. ಜ್ಯೋತಿಷ್ಯ
೧೪. ಅರ್ಥಶಾಸ್ತ್ರ
೧೫. ವೇದಾಂತ
೧೬. ಯೋಗ
೧೭. ಮೀಮಾಂಸಾ
೧೮. ಗೀತಾದಿ
೧೯. ವೀರಶೈವ
೨೦. ಜೈನ
೨೧. ಬೌದ್ಧ
೨೨. ಕಲಾದಿಶಾಸ್ತ್ರ

ಮುಂತಾಗಿ ಒಟ್ಟು ೧೪೦೭ ಗ್ರಂಥಗಳಿವೆ. ಇದರಂತೆ:

೧.	ಆಂಧ್ರ ಭಾಷೆಯಲ್ಲಿ		೯೪	ಗ್ರಂಥಗಳು
೨.	ತಮಿಳು	,,	೪೧	,,
೩.	ಹಿಂದಿ	,,	೯೫	,,
೪.	ಮರಾಠಿ	,,	೧೩೫	,,
೫.	ಪಾಳಿ	,,	೨	,,
೬.	ಗುಜರಾತಿ	,,	೨೬	,,
೭.	ಉರ್ದು	,,	೯೧	,,

'ಸಿ' ವಿಭಾಗ—ಇಂಗ್ಲಿಷ್

೧೯೨ ಗ್ರಂಥಗಳು ಸೇರಿ ಒಟ್ಟು ೫೯೦೩ ಗ್ರಂಥಗಳು ಇಲ್ಲಿವೆ. ಈಚಿನ ದಿನಗಳಲ್ಲಿ ಮೈಸೂರಿನ ಮಹಾ ಪ್ರಭುಗಳವರಿಗೆ ಗ್ರಂಥಕರ್ತರಿಂದ, ಪ್ರಕಾಶಕರಿಂದ ಕಾಣಿಕೆಯಾಗಿ ಬಂದ ಎಷ್ಟೋ ಅಮೂಲ್ಯ ಗ್ರಂಥಗಳು ಇದರಲ್ಲಿ ಸೇರ್ಪಡೆಯಾಗಿವೆ.

ಉಪಸಂಹಾರ

ಮೈಸೂರು ಅರಮನೆಯ ಸರಸ್ವತೀ ಭಂಡಾರವು ಭಾರತದ ಇತರ ಗ್ರಂಥ ಭಂಡಾರಗಳಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಗ್ರಂಥ ಸಂಶೋಧನೆ ಮತ್ತು ಪರಿಷ್ಕಾರಗಳಿಗೆ ಇಂದಿಗೂ ಇದು ಅನೇಕ ವಿದ್ವಾಂಸರಿಗೆ ಶ್ರೇಷ್ಠ ಆಕರವೆನಿಸಿದೆ. ೧೯೨೪ರ ತರುವಾಯ ಸರಸ್ವತೀ ಭಂಡಾರವು ಶ್ರೀ ಮನ್ಮಹಾರಾಜ ಸಂಸ್ಕೃತ ಮಹಾ ಪಾಠಶಾಲೆಗೆ ವರ್ಗಾಯಿಸಲ್ಪಟ್ಟು ವಿದ್ವಾಂಸರ ಹಾಗೂ ವಿದ್ಯಾರ್ಥಿಗಳಿಗೆ ತುಂಬಾ ನೆರವಾಗಿದೆ. ಭಾರತದ ರಾಷ್ಟ್ರಾಧ್ಯಕ್ಷರಾಗಿದ್ದ ಡಾ|| ರಾಜೇಂದ್ರ ಪ್ರಸಾದ್ ಮತ್ತು ಭಾರತರತ್ನ ಶ್ರೀ ಎಸ್. ರಾಧಾಕೃಷ್ಣನ್ ಮುಂತಾದ ಹಿರಿಯರ ಪ್ರಶಂಸೆಗೆ ಪಾತ್ರವಾಗಿರುವ ಅರಮನೆ ಸರಸ್ವತೀ ಭಂಡಾರದ ಸಂರಕ್ಷಣೆ ಮತ್ತು ಅದರ ಸದುಪಯೋಗವು ಸ್ವತಂತ್ರ ಭಾರತದ ಭಾಗ್ಯೋದಯಕ್ಕೆ ಕಾರಣ. ಅಲ್ಲಿಯ ಅಮೂಲ್ಯ ಪುಸ್ತಕಭಾಗ್ಯ ನಮ್ಮನಾಡಿಗೆ ಮೈಸೂರು ಅರಮನೆ ನೀಡಿದ ಅಪೂರ್ವ ಕೊಡುಗೆ.

ಪುಸ್ತಕ ಭಂಡಾರಗಳಲ್ಲಿ ಸಂಶೋಧನೆಯ ಶಾಖೆ

● ಎಂ. ಜಿ. ವೆಂಕಟೇಶಯ್ಯ

ಮುದ್ರಣ ಕಾರ್ಯ ಪ್ರಾರಂಭವಾದ ಕೂಡಲೆ ಮಾನವ ನಿಗೆ ಒಂದು ನೂತನ ಯುಗವೇ ಪ್ರಾರಂಭವಾಯಿ ಂದರೆ ತಪ್ಪಾಗಲಾರದು. ಅದಕ್ಕೆ ಮುಂಚಿತವಾಗಿ ುಸ್ತಕಗಳಿದ್ದವು; ಆದರೆ ಆ ಪುಸ್ತಕಗಳು ಜನಸಾಮಾ ರ ಕಣ್ಣಿಗೆ ಯಾವುದೋ ಒಂದು ಸಂದರ್ಭದಲ್ಲಿ ಬೀಳ ಹುದಾಗಿತ್ತಾಗಲಿ ಅವುಗಳನ್ನು ಮುಟ್ಟುವುದಕ್ಕೆ ಕೂಡ ವರಿಗೆ ಅವಕಾಶ ಸಿಗುತ್ತಿರಲಿಲ್ಲ. ಆ ಪುಸ್ತಕಗಳು ಹುವಾಗಿ ಮತಗ್ರಂಥಗಳಾಗಿಯೇ ಇರುತ್ತಿದ್ದವು.

ಚಿತ್ರ ಸಂಗತಿ

Fox Acter and Monuments—ಎಂಬ ಗ್ರಂಥ ಲ್ಲಿ ಒಂದು ವಿಚಿತ್ರವಾದ ಸಂಗತಿ ಬರೆಯಲಾಗಿದೆ ಎಂದು ಂದೆ ನಾನು ನಮ್ಮ ಅಧ್ಯಾಪಕರಿಂದ ಕೇಳಿದ್ದೆ. ಅದನ್ನು ಲ್ಲಿ ಓದುಗರ ಅವಗಾಹನೆಗಾಗಿ ಕೊಡುತ್ತಿದ್ದೇನೆ.

ಥಾಮಸ್ ಹಾರ್ಡಿಂಗ್ ಎಂಬಾತನು ಕ್ರಿ. ಶ. ೧೫೩೨ ಲ್ಲಿ ಇಂಗ್ಲೆಂಡಿನಲ್ಲಿದ್ದನಂತೆ. ಈಸ್ಟರ್ ದಿನಗಳಲ್ಲಿ ಅವನು ರ್ಚಿಗೆ ಹೋಗದೆ ಅಲ್ಲೇ ಇದ್ದ ಒಂದು ಸಣ್ಣ ರಣ್ಯಕ್ಕೆ ಹೋಗಿ ಪುಸ್ತಕಗಳನ್ನು ಓದುತ್ತಿದ್ದನಂತೆ. ಂದು ದಿನ ಒಬ್ಬ ಮನುಷ್ಯನು ಅದನ್ನು ನೋಡಿದ. ರ್ಚಿಗೆ ಹೋಗದೆ ಪುಸ್ತಕವನ್ನು ಓದುತ್ತಾ ಕುಳಿತಿದ್ದ ಕಾರವನ್ನು ಅವನು ಅಧಿಕಾರಿಗಳಿಗೆ ತಿಳಿಸಿದ. ಕೂಡಲೆ ಕಾರಿಗಳು ಅವನ ವಾಸಸ್ಥಾನವನ್ನು ಶೋಧನೆ ಮಾಡಿ . ಅವನು ಮಲಗುತ್ತಿದ್ದ ಸ್ಥಳದಲ್ಲಿ, ಭೂಮಿಯ ಒಳಗಡೆ ಇದ್ದ ಗೂಡಿನಲ್ಲಿ, ಹತ್ತಾರು ಪುಸ್ತಕಗಳು ಸಿಕ್ಕವು. ಅವುಗಳಲ್ಲಿ ಬೈಬಲ್ ಕೂಡ ಇತ್ತು. ಇಷ್ಟೇ ಸಾಕ್ಷ್ಯ ಸಾಕಾಯಿತು. ಅವನನ್ನು ಆ ಪುಸ್ತಕಗಳ ಜೊತೆ ಯಲ್ಲಿ ಸುಟ್ಟು ಹಾಕಿದರಂತೆ (Many Thoughts of Many minds–Second Series Charlees Griffin and Conpany, L o n d o n MDccc Lxxvii P. 517)

ಇದರಿಂದ ಹದಿನಾರನೆಯ ಶತಮಾನದಲ್ಲಿ ಪುಸ್ತಕ ಗಳಿಗೂ ಪುಸ್ತಕಗಳನ್ನು ಓದುವವರಿಗೂ ಎಷ್ಟರಮಟ್ಟಿಗೆ ಉತ್ತೇಜನ ಸಿಗುತ್ತಿತ್ತು ಎಂಬುದು ನಮಗೆ ವ್ಯಕ್ತವಾಗು ತ್ತದೆ.

ಹಳ್ಳಿಹಳ್ಳಿಗೂ ಪುಸ್ತಕ ಭಂಡಾರ

ಪುಸ್ತಕ ಭಂಡಾರಗಳು ಪ್ರತಿಯೊಂದು ಹಳ್ಳಿಯಲ್ಲಿಯೂ ಇರಬೇಕೆನ್ನುವುದು ಈಗಿನ ಮತ. ಏತಕ್ಕೆಂದರೆ, ಹಳ್ಳಿ ಯಲ್ಲಿ ವಾಸವಾಗಿರುವವರಿಗೂ ಓದುವ ಇಚ್ಛೆಯಿದ್ದರೆ, ಅವರಿಗೆ ಸುಲಭವಾಗಿ ಪುಸ್ತಕಗಳು ಸಿಗಬೇಕು. ಯಾವ ಹಂತದಲ್ಲಿಯೇ ಇರಲಿ ವ್ಯಕ್ತಿಯು ಓದು, ಆ ಹಂತಕ್ಕೆ ಅನುಗುಣವಾಗುವ ಅಲ್ಲದೆ ಅಲ್ಲಿಂದ ಮುಂದೆ ಹಂತಕ್ಕೆ ಸಾಗಲು ಅನುಕೂಲವಾಗುವ ಪುಸ್ತಕಗಳು ಪುಸ್ತಕ ಭಂಡಾರಗಳಲ್ಲಿರಬೇಕು.

ಪುಸ್ತಕ ಭಂಡಾರದಿಂದಾದ ಪ್ರಯೋಜನವನ್ನು ಹೇಗೆ ಅಳೆಯಬೇಕು? ಈ ವಿಚಾರದಲ್ಲಿ ಭಿನ್ನಾಭಿಪ್ರಾಯಗಳು ಬಂದರೂ ಬರಬಹುದು. ಉದಾಹರಣೆಗಾಗಿ— ಒಂದು

ಹಳ್ಳಿಯಲ್ಲಿ ಒಂದು ಪುಸ್ತಕ ಭಂಡಾರವಿದೆ ಎಂಬೋಣ. ೧೯೭೦ನೇ ಇಸವಿಯಲ್ಲಿ ಎರಡು ಸಾವಿರ ಮಂದಿ ಅದನ್ನು ಉಪಯೋಗಿಸಿದರು; ೧೯೭೧ನೆಯ ಇಸವಿಯಲ್ಲಿ ಎರಡು ಸಾವಿರದ ಐನೂರು ಮಂದಿ ಅದರೊಳಕ್ಕೆ ಬಂದು ಕೂತು ಓದಿದರು. ಈ ಅಂಕೆಗಳಿಂದ, ಪುಸ್ತಕ ಭಂಡಾರದ ಉಪಯೋಗ ೧೯೭೧ರಲ್ಲಿ ಹೆಚ್ಚಾಯಿತು ಎಂದು ಹೇಳಬಹುದೆ? ಹೇಳಬಹುದು ಎನ್ನುವುದು ಸುಲಭವಾಗಿ ನಿರ್ಣಯಿಸುವ ಮತ. ಅದರಲ್ಲಿ ನಿಜ ಸ್ಥಿತಿ ಎಷ್ಟು ಎಂದು ಹೇಳುವುದು ಸುಲಭವಲ್ಲ.

ಪುಸ್ತಕಭಂಡಾರದ ಆಸ್ತಿ ಅಳೆಯುವ ಬಗೆ

ಒಂದು ಪುಸ್ತಕ ಭಂಡಾರದ ಆಸ್ತಿಯನ್ನು ಅಳೆಯಬೇಕಾದರೆ, ನಾವು ಮೂರು ವಿಚಾರಗಳನ್ನಾದರೂ ನೋಡಬೇಕೆಂದು ನನಗೆ ತೋರುತ್ತದೆ.

೧. ಅದರಲ್ಲಿರುವ ಪುಸ್ತಕಗಳಲ್ಲಿನ ವಿಚಾರಸಂಪತ್ತು.
೨. ಆ ವಿಚಾರ ಸಂಪತ್ತಿನಿಂದ ಉಂಟಾಗುವ ಉಪಯೋಗ.
೩. ಆ ವಿಚಾರ ಸಂಪತ್ತಿನಿಂದ ಓದುಗರ ಮನಸ್ಸಿನ ಮೇಲೆ ಉಂಟಾಗುವ ಆನಂದ.

ವಿಚಾರ ಸಂಪತ್ತು ಮತ್ತು, ಉಪಯೋಗ ಇವು ಕಾಲ ದೇಶಗಳನ್ನನುಸರಿಸಿ ಬದಲಾಗಬಹುದು. ಮೂರನೆಯದಾದ, ಪುಸ್ತಕದ ಓದಿನಿಂದ ಉಂಟಾಗುವ ಆನಂದದಲ್ಲಿ ಬದಲಾವಣೆ ಬಹು ಕಡಿಮೆ ಎಂತಲೇ ಹೇಳಬೇಕು.

ಆಹಾರದಂತೆ ಆರೋಗ್ಯ !

ಮಾನವನ ದೇಹವು ಬೆಳೆಯಬೇಕಾದರೆ ಅವನು ಅದಕ್ಕೆ ತಕ್ಕ ಒಳ್ಳೆಯ ಆಹಾರವನ್ನೇ ಊಟ ಮಾಡಬೇಕು; ತನ್ನ ದೇಹದಲ್ಲಿ ಅದು ಜೀರ್ಣವಾಗುವಂತೆ ನೋಡಿಕೊಳ್ಳಬೇಕು. ಆಹಾರವು ಕೆಟ್ಟ ಪದಾರ್ಥವಾದರೆ ದೇಹಕ್ಕೆ ರೋಗವು ತಪ್ಪದೆ ಪ್ರಾಪ್ತವಾಗುತ್ತದೆ. ಜೊಳ್ಳು ಆಹಾರದಿಂದ ದೇಹಕ್ಕೆ ಸತ್ವವುಂಟಾಗುವುದಿಲ್ಲ. ದೇಶಭಾಷೆಗಳ ವಿಹಾರದಲ್ಲಿಯೂ ಹೀಗೆಯೇ. ಅವುಗಳ ಬೆಳವಣಿಗೆಗೆ ಪುಸ್ತಕಗಳೇ ಈಗ ತಳಹದಿ. ಈ ದೃಷ್ಟಿಯಿಂದ ಪುಸ್ತಕಗಳು ಕೇವಲ ವಿಚಾರವಾಹಿನಿಗಳೇ ಅಲ್ಲದೆ ಜ್ಞಾನಕ್ಕೆ ಅನುಪಾನವೂ ಕೂಡ.

ಈ ದಶಕದಲ್ಲಿ ಪುಸ್ತಕ ಭಂಡಾರಕ್ಕೆ ಬರುವ ಜನಸಂಖ್ಯೆ ದಿನೇ ದಿನೇ ಹೆಚ್ಚುತ್ತಲಿದೆ. ಇದರಿಂದ ಅದರ ಉಪಯೋಗವು ಒಂದು ದೃಷ್ಟಿಕೋನದಿಂದ ಹೆಚ್ಚುತ್ತಿದೆ ಎಂದು ಹೇಳಬೇಕಾಗಿದೆ. ಆದರೆ ಅದಕ್ಕೆ ಮತ್ತೊಂದು ದೃಷ್ಟಿಕೋನವೂ ಉಂಟು.

ಒಂದು ದೊಡ್ಡ ಪುಸ್ತಕ ಭಂಡಾರದಲ್ಲಿ ಸುಮಾರು ಒಂದು ಲಕ್ಷ ಪುಸ್ತಕಗಳಿವೆ; ಅದರಲ್ಲಿ ಹದಿನೈದು ಸಾವಿರಕ್ಕಿಂತಲೂ ಹೆಚ್ಚಾಗಿ ಕಾದಂಬರಿಗಳು ಮತ್ತು ಕತೆ ಪುಸ್ತಕಗಳು. ಓದುಗರಿಗೆ ಸುಮಾರು ನೂರು ಕುರ್ಚಿಗಳಿವೆ. ಜನರು ಕುಳಿತಿರುತ್ತಾರೆ. ಆದರೆ ಅವರಲ್ಲಿ ಶೇಕಡ ೯೫ ಜನರ ಕೈಗಳಲ್ಲಿ ಶೃಂಗಾರಪೂರಿತವಾದ ಕಾದಂಬರಿಗಳೋ ಅಥವಾ ಪತ್ತೇದಾರಿ ಕತೆಗಳೋ ಇರುತ್ತವೆ. ಇಂಥಾ ಒಂದು ಸಂದರ್ಭದಲ್ಲಿ ಒಬ್ಬ ಕಾಲೇಜಿನ ವಿದ್ಯಾರ್ಥಿಗೆ ವಿಜ್ಞಾನಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ಕೆಲವು ಅಂಶಗಳು ಬೇಕಾಯಿತು. ಪುಸ್ತಕವನ್ನು ಕೈಗೆ ತೆಗೆದುಕೊಂಡ. ಆದರೆ ಕುಳಿತುಕೊಳ್ಳಲು ಸ್ಥಳವಿಲ್ಲ. ಅರ್ಧಗಂಟೆ ಕಾಲವಾದರೂ ಅವನಿಗೆ ಸ್ಥಳ ಸಿಗಲಿಲ್ಲ. ಸಾರ್ವಜನಿಕ ಪುಸ್ತಕ ಭಂಡಾರದಲ್ಲಿ ಕುಳಿತಿರುವ ಯಾರನ್ನಾದರೂ ಎಬ್ಬಿಸಿ ಮತ್ತೊಬ್ಬರಿಗೆ ಸ್ಥಳ ಮಾಡಿಕೊಡಲು ಸಾಧ್ಯವಿಲ್ಲ.

ಪುಸ್ತಕಭಂಡಾರದ ಮಟ್ಟ

ಪುಸ್ತಕಗಳು ಜ್ಞಾನಕ್ಕೆ ಅನುಪಾನವೆಂಬ ದೃಷ್ಟಿ ಪುಸ್ತಕ ಭಂಡಾರಕ್ಕೆ ಬರುವುದು ಅಷ್ಟು ಸುಲಭವಲ್ಲ. ಸಾಮಾನ್ಯ ಮಾನವನ ಮಟ್ಟಕ್ಕೆ ಪುಸ್ತಕ ಭಂಡಾರಗಳನ್ನಿಳಿಸಬೇಕೆಂಬ ಪ್ರಯತ್ನವು ನಡೆಯುತ್ತಿದ್ದಂತೆ ತೋರುತ್ತಾಗಲಿ ಪುಸ್ತಕ ಭಂಡಾರದ ಮೂಲಕವಾಗಿ ಸಾಮಾನ್ಯ ಮಾನವನ ಮಟ್ಟವನ್ನು ಮೇಲಕ್ಕೆತ್ತಬೇಕೆಂಬ ಪ್ರಯತ್ನ ನಡೆಯುತ್ತಿರುವಂತೆ ತೋರುವುದಿಲ್ಲ. ಇದಕ್ಕೆ ಮುಖ್ಯ ಕಾರಣ ನಮ್ಮ ರಾಜಕೀಯ ವಾತಾವರಣವಿದ್ದರೂ ಇರಬಹುದು.

ಸಂಶೋಧನಾ ವಿಭಾಗ

ಇಂಥಾ ವಾತಾವರಣದಲ್ಲಿ ಸಾರ್ವಜನಿಕ ಪುಸ್ತಕ ಭಂಡಾರಗಳಲ್ಲಿ ಸಂಶೋಧನೆಯ ಶಾಖೆಯ ವಿಚಾರವೆಂದರೆ—ಒಡ್ಡರಾಕೆಯನ್ನು ಕುಪ್ಪಸದ ವಿಚಾರ ಕೇಳಿದ ಹಾಗೆ. ಕನ್ನಡ ಪುಸ್ತಕಗಳನ್ನು ಹೆಚ್ಚುಹೆಚ್ಚಾಗಿ ಬಳಕೆಗೆ ತರಬೇಕೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಅವುಗಳನ್ನು ಪ್ರತ್ಯೇಕವಾಗಿಟ್ಟು ಓದುಗರಿಗೆ ಸುಲಭವಾಗಿ ದೊರಕು

ಸಂತೆ ಮಾಡಬೇಕೆಂಬುದನ್ನೂ ಒಪ್ಪುತ್ತಾರೆ. ಅಲ್ಲಿಗೆ ಅದರ ವಿಚಾರ ನಿಂತು ಹೋಗುತ್ತದೆ. ಮುಂದಿನ ಯೋಚನೆ—ಕನ್ನಡ ಭಾಷೆಯಲ್ಲಿ ಸಂಶೋಧನೆ ನಡೆಸಲು ಅನುಕೂಲವಾದ ವಾತಾವರಣವನ್ನು ಕಲ್ಪಿಸಬೇಕೆಂಬುದು ಕೇವಲ ಕನ್ನಡ ಅಧ್ಯಾಪಕರ ಮತ ಮಾತ್ರ ಎಂದು ಉಳಿಕ್ಕವರ ಭಾವನೆ. ಪುಸ್ತಕ ಭಂಡಾರದ ಅಧಿಕಾರಿಗಳು ಈ ವಿಚಾರದಲ್ಲಿ ಶ್ರದ್ಧೆಯನ್ನು ವಹಿಸಿ, ಅದಕ್ಕೆ ತಕ್ಕ ಏರ್ಪಾಟನ್ನು ಮಾಡದಿದ್ದರೆ ಕಾಲಕ್ರಮೇಣ ಪುಸ್ತಕ ಭಂಡಾರದ ತುಂಬ ಕತೆ ಕಾದಂಬರಿಗಳ ಓಡಾಟವೇ ಆಗುತ್ತದೆ; ಕನ್ನಡದಲ್ಲಿ ಸಂಶೋಧನೆ ಮಾಡಲು ಸಾರ್ವಜನಿಕ ಪುಸ್ತಕ ಭಂಡಾರಗಳಿಂದ ಯಾವ ಸಹಾಯವೂ ಸಿಕ್ಕುವುದಿಲ್ಲ.

ಇದಕ್ಕೆ ಮೊದಲನೆಯ ಹಂತವಾಗಿ ದೊಡ್ಡ ದೊಡ್ಡ ಪುಸ್ತಕ ಭಂಡಾರಗಳಲ್ಲಿ ಸಂಶೋಧನೆ ಕಾರ್ಯವನ್ನು ಕೈಗೊಂಡು ಅಲ್ಲಿಗೆ ಬಂದವರಿಗೆ ಪ್ರತ್ಯೇಕವಾದ ಒಂದು ಸ್ಥಳವನ್ನು ಏರ್ಪಡಿಸಬೇಕು. ಕನ್ನಡ ಶಾಸನ, ನಿಘಂಟುಗಳು ಮತ್ತು ಅದಕ್ಕೆ ಬೇಕಾಗುವ ಪುಸ್ತಕ ಸಂಪತ್ತನ್ನೂ ಆ ಸ್ಥಳದಲ್ಲೇ ಇರುವಂತೆ ಮಾಡಬೇಕು. ಬೇರೆ ಬೇರೆ ಪುಸ್ತಕ ಭಂಡಾರಗಳಿಂದ ಅವರಿಗೆ ಬೇಕಾದ ಪುಸ್ತಕಗಳ ಸರಬರಾಜು ಆಗುವಂತೆ ಏರ್ಪಾಟು ಮಾಡಬೇಕು. ಅಲ್ಲದೆ, ಹೆಸರಾಂತ ಸಂಶೋಧಕರ ಸಂಪರ್ಕ ಅವರಿಗೆ ಸಿಗುವಂತಿರಬೇಕು.

ಸತ್ತ ಭಾಷೆಗೆ ಸಂಶೋಧನೆ ಕಾರ್ಯದಿಂದ ಅಲ್ಪ ಸ್ವಲ್ಪ ಜೀವ ಬರುತ್ತದೆ. ಜೀವಂತವಾಗಿರುವ ಭಾಷೆಯಲ್ಲಿ ಸಂಶೋಧನೆ ನಿಂತರೆ ಅದು ಸತ್ತಂತಾಗುತ್ತದೆ. ಈ ದೃಷ್ಟಿಯು ಕೂಡ ಪುಸ್ತಕ ಭಂಡಾರಗಳಿಗೆ ಅತ್ಯಗತ್ಯವೆಂದು ನನಗೆ ತೋರುತ್ತದೆ.

ಪುಸ್ತಕಗಳು

ಪುಸ್ತಕಗಳಿಂದ ಸದುಪಯೋಗ ಪಡೆಯುವವನ ಮೇಲೆ ಪುಸ್ತಕಗಳು ಹೆಚ್ಚಿನ ಪರಿಣಾಮ ಮಾಡುತ್ತವೆ. ವೃತ್ತಪತ್ರಿಕೆಗಳಾಗಲಿ, ಸಿನಿಮಾ ಆಗಲಿ ಇಂಥ ಪರಿಣಾಮ ಮಾಡವು. ಭಾರತದಲ್ಲಿ ಪುಸ್ತಕಗಳನ್ನು ಓದುವವರ ಸಂಖ್ಯೆ ಕಡಿಮೆಯೆಂಬುದು ದುಃಖಸಂಗತಿಯಾಗಿದೆ.

—ಜವಹರಲಾಲ್ ನೆಹರೂ

* * *

ಮತ್ತೆ ಮತ್ತೆ ಯಾವ ಪುಸ್ತಕವನ್ನು ಓದುತ್ತೇವೆಯೋ ಅದು ಉತ್ತಮವಾದ ಪುಸ್ತಕ.

—ಜಾನ್ ರಸ್ಕಿನ್

ಪುಸ್ತಕಾಲಯದಿಂದ
ಆಗುವ ಲಾಭ

ಹಿಂದಿ ಮೂಲ : ರಮೇಶಚಂದ್ರ ಕುಲಶ್ರೇಷ್ಠ,
ವಿದ್ಯಾರಾಮ ಶರ್ಮ
ಕನ್ನಡಕ್ಕೆ : ಕೆ. ಎನ್. ಗಾಯಿತ್ರಿದೇವಿ

ಜ್ಞಾನದ ಕ್ಷೇತ್ರ ಸೀಮಾತೀತವಾದುದು, ಮನುಷ್ಯನ ಜೀವನ ಕ್ಷಣಿಕವಾದುದು. ಬುದ್ಧಿವಂತರು ಜೀವನದ ಸಮಯವನ್ನು ಸದುಪಯೋಗಪಡಿಸಿಕೊಳ್ಳಲು ಇಚ್ಛಿಸುತ್ತಾರೆ. ಹೀಗೆ ಉಪಯುಕ್ತ ಜೀವನವನ್ನು ನಡೆಸಲು ಸಹಾಯಕವಾಗುವ ಮಾಧ್ಯಮಗಳಲ್ಲಿ 'ಪುಸ್ತಕಾಲಯ'ದ ಸ್ಥಾನ ಪ್ರಮುಖವಾದುದು, ಇದರಿಂದ ಸಮಾಜದಲ್ಲಿ ಜ್ಞಾನದ ಕಿರಣಗಳು ಹರಡುತ್ತವೆ. ಮನುಷ್ಯನ ಅಜ್ಞಾನ, ಅಂಧಕಾರಗಳು ನಾಶಹೊಂದುತ್ತವೆ. ಹೊಸ ಜೀವನದ ಮೊಗ್ಗು ವಿಕಸಿತವಾಗಲಾರಂಭಿಸುತ್ತದೆ. ಆದ್ದರಿಂದ ಮುತ್ತಿಕೊಂಡಿರುವ ಅಂಧಕಾರವನ್ನು ಜ್ಞಾನಜ್ಯೋತಿಯನ್ನು ಬೆಳಗಿಸುವುದರ ಮೂಲಕ ಹೋಗಲಾಡಿಸಲು ಪುಸ್ತಕಾಲಯದ ಆವಶ್ಯಕತೆ ಹೆಚ್ಚಿನ ಪ್ರಮಾಣದಲ್ಲಿದೆ.

ಜ್ಞಾನಾರ್ಜನೆಗೆ ನೆರವು

ಶಾಲೆಗಳಲ್ಲಿ ಓದಿದ ಮಾತ್ರದಿಂದ ವಾಸ್ತವಿಕ ಪ್ರಜ್ಞೆ (ಪ್ರಾಪಂಚಿಕ ಜ್ಞಾನ) ಉಂಟಾಗಲಾರದು. ಪುಸ್ತಕಾಲಯದ ಸಹಾಯವಿಲ್ಲದೆ ಯಾವುದೇ ವಿಷಯದ ಬಗ್ಗೆ ಪೂರ್ಣ ಅರಿವು ಉಂಟಾಗದು. ದೊಡ್ಡ ದೊಡ್ಡ ಪುಸ್ತಕಾಲಯಗಳಲ್ಲಿ ಅಧ್ಯಯನ ಮಾಡುವವರಿಗೆ ಕ್ರಮಬದ್ಧ ವ್ಯವಸ್ಥೆ ಮಾಡಲಾಗಿರುತ್ತದೆ. ಬಡವಿದ್ಯಾರ್ಥಿಗಳಿಗೆ ಪುಸ್ತಕಾಲಯಗಳಿಂದ ಹೆಚ್ಚಿನ ಸಹಾಯ ದೊರೆಯುತ್ತದೆ.

ಪುಸ್ತಕಾಲಯಗಳ ಮೂಲಕ ಯಾವ ಪುಸ್ತಕಗಳನ್ನು ಅಧ್ಯಯನ ಮಾಡುತ್ತೇವೆಯೋ ಅವುಗಳಿಂದ ಆತ್ಮದ ಉನ್ನತಿಗೆ (ಏಳಿಗೆಗೆ) ಬಹಳ ಸಹಾಯವಾಗುತ್ತದೆ. ಮನಸ್ಸಿನ ಸಂದೇಹ, ಭ್ರಮೆಗಳು ದೂರವಾಗುತ್ತವೆ. ಮಾನಸಿಕ ಸ್ವಾಸ್ಥ್ಯ ಸುಧಾರಿಸುತ್ತದೆ. ಮಹಾನ್ ಪುರುಷರ ಜೀವನ ಚರಿತ್ರೆ ಹಾಗೂ ಸಂದೇಶಗಳು ಮಾನವನನ್ನು ಉನ್ನತಿಯ ಶಿಖರದ ಮೇಲೆ ಕೊಂಡೊಯ್ಯುತ್ತದೆ.

ಸಮಯದ ಸದುಪಯೋಗ

ಸಮಯದ ಸದುಪಯೋಗ ಪುಸ್ತಕಗಳನ್ನು ಓದುವ ದರ ಹೊರತು ಬೇರಾವುದರಿಂದಲೂ ಆಗದು. ಕೆಲಸ ಇಲ್ಲದವರು ತಮ್ಮ ಸಮಯವನ್ನು ಕೆಟ್ಟ ಕೆಲಸಗಳಲ್ಲಿ ಜಗಳದಲ್ಲಿ, ನಿದ್ರಿಸುವುದರಲ್ಲಿ ಕಳೆಯುತ್ತಾರೆ. ಆದ ಪುಸ್ತಕಾವಲೋಕನದಿಂದ ಸಮಯದ ಸದುಪಯೋಗ ಆಗುತ್ತದೆ. ಸ್ವಲ್ಪವೇ ಮಾಸಿಕ–ಚಂದಾ ನೀಡುವುದ ರಿಂದ, ತಾವು ಬೇಕಷ್ಟು ಪುಸ್ತಕಗಳನ್ನು ಓದಲು ಅಧಿ ಕಾರ ಪಡೆಯುತ್ತಾರೆ. ಪುಸ್ತಕಾಲಯದಲ್ಲಿಡಲ್ಪಟ್ಟಿರುವ "ವಿಷಯ–ಸೂಚಿ"ಯ ಸಹಾಯದಿಂದ ತಾವು ತಮಗ ಬೇಕಾದ ಪುಸ್ತಕವನ್ನು ಕ್ಷಣಮಾತ್ರದಲ್ಲಿ ತೆಗೆಯ ಬಹುದು.

ಪುಸ್ತಕಾಲಯದ ಮಹತ್ವ

ಮನರಂಜನೆಗಾಗಿ ರೋಡಿಯೋ ಕೊಳ್ಳಲಿಕ್ಕಾಗಲೀ, ಸಿನೆಮಾ ನೋಡಲಿಕ್ಕಾಗಲೀ, ವಿಶೇಷ ಸಂಚಾರ ಮಾಡ ಲಿಕ್ಕಾಗಲೀ, ತಮ್ಮಿಂದ ಆರ್ಥಿಕ ಮುಗ್ಗಟ್ಟಿನ ಕಾರಣ— ಸಾಧ್ಯವಾಗದಿದ್ದರೆ, ಉನ್ನತ ಪರಿಚಯ ಮಾಡಿಕೊಡುವ ಗ್ರಂಥಗಳನ್ನೊಳಗೊಂಡ 'ಪುಸ್ತಕಾಲಯ' ತಮ್ಮ ಸಹಾ ಯಕ್ಕಾಗಿ ಸದಾ ಸಿದ್ಧವಾಗಿರುತ್ತದೆ. ಪುಸ್ತಕಾಲಯದಲ್ಲಿ ಹೋಗಿ ಕುಳಿತುಕೊಂಡರೆ, ತಮ್ಮ ಮುಂದೆ ಮನೋರಂಜ ನೆಯ ವಿಶಾಲವಾದ ರಾಶಿ ಬೀಳುತ್ತದೆ. ಬಯಸಿದರೆ ತಾವು ತುಲಸೀದಾಸರ ಕಾವ್ಯದ ಆನಂದ ಪಡೆಯಬಹುದು. ಕಾಳಿದಾಸನ ವಿಯೋಗಿನಿ ಶಕುಂತಳೆಯ ಜೊತೆಗೆ ಕಂಬ ನಿಯ ಒಂದೆರಡು ಹನಿಗಳನ್ನು ಕರುಣೆಯಿಂದ ಹೊರಗೆಡ ಹಬಹುದು. ಬಯಸಿದರೆ ಕಾವ್ಯದಲ್ಲಿನ ಪಾತ್ರಗಳೊಂ ದಿಗೆ ಮಾತನಾಡಬಹುದು. ಇಲ್ಲಿ ತಾವು ಸೂರದಾಸನ ಕೃಷ್ಣನ ಮುರಳಿಯ ನಾದವನ್ನು ಕೇಳಬಹುದು. ಭೂಷ ಣನ ಶಿವಾಜಿಯ ಬಾಯಿಂದ ವೀರರೆದೆ ನಡುಗಿಸುವಂಥ

ಮಾತುಗಳನ್ನೂ ಕೇಳಬಹುದು. ಈ ತರಹದ ‘ಜ್ಞಾನ ಕೋಶ’ದ ಪ್ರಾಪ್ತಿ ‘ಪುಸ್ತಕಾಲಯ’ ದಲ್ಲಲ್ಲದೆ ಬೇರೆಡೆ ಆಗಲು ಸಾಧ್ಯವೇ ?

ಸಮಾಜದ ಸುಧಾರಣೆಯ ಮಾರ್ಗದಲ್ಲೂ ಕೂಡ ‘ಪುಸ್ತಕಾಲಯ’ ಬಹಳ ಸಹಾಯ ಮಾಡುತ್ತದೆ. ಅದು ಸಮಾಜದಲ್ಲಿ ಹರಡಿಕೊಂಡಿರುವ ದುಷ್ಟ ಪ್ರವೃತ್ತಿಗಳನ್ನು ಛಿನ್ನ–ವಿಚ್ಛಿನ್ನ ಮಾಡಿಹಾಕುತ್ತದೆ. ಪುಸ್ತಕಗಳನ್ನು ಓದುವುದರಿಂದ ಮನುಷ್ಯನ ಜ್ಞಾನ ಹಾಗೂ ಸಭ್ಯತೆಗಳ ವೃದ್ಧಿ ಆಗುತ್ತದೆ. ಸುವಿಚಾರಗಳ ಮಾಧ್ಯಮದಿಂದ ಅಭಿರುಚಿಯ ಪರಿಷ್ಕಾರವಾಗುತ್ತದೆ.

ಮೂರು ಭಾಗಗಳು

ಮಾನವನ ಕಲ್ಯಾಣಕ್ಕಾಗಿ ನೆಲೆಗಟ್ಟಿ ನಿಂತಿರುವ ಪುಸ್ತಕಾಲಯಗಳನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು.

೧. ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಮಾತ್ರ ಉಪಯೋಗವಾಗುವ ‘ಪಾಠಶಾಲೆ’ಯ ಪುಸ್ತಕಾಲಯಗಳು.

೨. ಅಧ್ಯಯನದಲ್ಲಿ ವಿಶೇಷ ಆಸಕ್ತಿಯನ್ನು ವ್ಯಕ್ತಪಡಿಸುವ ಅಭ್ಯಾಸಿಗಳಿಗೆ ಇರುವ ಪುಸ್ತಕಾಲಯಗಳು.

೩. ಲಾಭಕ್ಕೋಸ್ಕರ ಸ್ಥಾಪಿತವಾಗಿರುವ ಪುಸ್ತಕಾಲಯಗಳು. ಅವುಗಳಿಂದ, ಮಾಸಿಕ-ಚಂದಾ ನೀಡುವುದರ ಮೂಲಕ ಸಾಕಷ್ಟು–ಲಾಭ ಹೊಂದುವ ಕರ್ತವ್ಯ ಎಲ್ಲರದು. ಅಧ್ಯಯನದಲ್ಲಿ ವಿಶೇಷ ಆಸಕ್ತಿಯುಳ್ಳವರು ಮುಂದಿಟ್ಟ ಮಿಠಾಯಿಯನ್ನು ಹಸುಳೆ ಆಸೆಯ ಕಂಗಳಿಂದ ನೋಡುವ ತರಹ–ಪುಸ್ತಕಾಲಯದ ಬಾಗಿಲು ತೆರೆದ ತಕ್ಷಣ ಒಳನುಗ್ಗುತ್ತಾರೆ. ಅದು ಸಹಜ.

ಭಾರತದಲ್ಲಿ ಬಹಳ ಕಡಿಮೆ

ಬಹಳ ದುಃಖದ ವಿಚಾರವೆಂದರೆ—ನಮ್ಮ ದೇಶದಲ್ಲಿ ಪುಸ್ತಕಾಲಯಗಳು ತುಂಬಾ ಕಡಿಮೆ ಪ್ರಮಾಣದಲ್ಲಿವೆ. ನಗರಗಳಲ್ಲಿ ಮಾತ್ರ ಅಗತ್ಯವಿದ್ದಷ್ಟು ಪುಸ್ತಕಾಲಯಗಳು ಇವೆ. ಪ್ರಗತಿ ಪಥದಲ್ಲಿರುವ ರೈತರಿಗೆ, ಗ್ರಾಮಸ್ಥರಿಗೆ—ಪುಸ್ತಕಾಲಯಗಳ ವ್ಯವಸ್ಥೆ ಈವರೆಗೆ ಆಗಿಲ್ಲ. ಆದ್ದರಿಂದ ಭಾರತದ ಕೋಟ್ಯಂತರ ಜನ ಅವಿದ್ಯೆಯೆಂಬ ಅಂಧಕಾರದಲ್ಲಿ ಸುರುಳಿಸುತ್ತಿಕೊಂಡು ಬಿದ್ದಿದ್ದಾರೆ. ಜ್ಞಾನದ ಕಿರಣಗಳು, ರಾಷ್ಟ್ರದ ಮಣ್ಣಿನಲ್ಲಿ ಹರಡಿಕೊಳ್ಳಬೇಕಾದರೆ—ಸರಕಾರ, ಸಂಘಸಂಸ್ಥೆಗಳು, ದಾನಿಗಳು—ತಮ್ಮ ಉದಾರ ಬುದ್ಧಿಯಿಂದ ‘ಪುಸ್ತಕಾಲಯ’ಗಳ ಬೆಳವಣಿಗೆ ಮಾಡುವುದು ಇಂದು ಅಗತ್ಯವಾಗಿದೆ.

ವಿದೇಶಗಳಲ್ಲಿ

ವಿದೇಶಗಳಲ್ಲಿ ಪುಸ್ತಕಾಲಯಗಳ ಕ್ರಮಬದ್ಧ ವ್ಯವಸ್ಥೆ ಇದೆ. ಕೆಲವು ‘ಪುಸ್ತಕಾಲಯ’ಗಳು ತಮ್ಮ ಧರ್ಮದ ಅಥವಾ ಸಿದ್ಧಾಂತದ ಪ್ರಚಾರಕ್ಕಾಗಿ ಉಚಿತವಾಗಿ ಪ್ರತಿಯೊಂದು ದೇಶಕ್ಕೂ ಪುಸ್ತಕಗಳನ್ನು ಕಳುಹಿಸುತ್ತಿರುತ್ತವೆ. ಗ್ರಾಮಸ್ಥರಿಗೆ ತಿಳಿವಳಿಕೆ ನೀಡಲಗತ್ಯವಾದ ‘ಸಂಚಾರ ಪುಸ್ತಕಾಲಯ’ಗಳ ವ್ಯವಸ್ಥೆಯೂ ಅಲ್ಲಿದೆ. ಈ ತರಹದ ಪುಸ್ತಕಾಲಯಗಳು ಗ್ರಾಮಗ್ರಾಮಗಳಲ್ಲಿ ಸಂಚರಿಸಿ ಗ್ರಾಮಸ್ಥರಿಗೆ ಸುಂದರ ಪುಸ್ತಕಗಳನ್ನೊದಗಿಸುವ ಅಪೂರ್ವ ಕಾರ್ಯದಲ್ಲಿ ನಿರತವಾಗಿರುತ್ತವೆ.

ನಮ್ಮ ದೇಶದಲ್ಲಿ ಅಶಿಕ್ಷಿತರ ಸಂಖ್ಯೆ ಅತಿ ಹೆಚ್ಚಿದೆ. ಪ್ರತಿಯೊಬ್ಬನಿಗೂ ವಿಚಾರಪ್ರದಗ್ರಂಥಗಳನ್ನು ಒದಗಿಸಲು ಸಾಧ್ಯವಾಗದಿರುವುದೇ ಇದಕ್ಕೆ ಕಾರಣ. ಸಮಾಚಾರ ಪತ್ರವನ್ನೂ ಕೊಂಡುಕೊಳ್ಳಲಾಗದ ಪ್ರಜೆ ಜ್ಞಾನದ ಅಭಿವೃದ್ಧಿ ಹೇಗೆ ಮಾಡಿಕೊಂಡಾನು ?

ಭವ್ಯ ಭವಿಷ್ಯದ ನಿರೀಕ್ಷೆ

ಸಂತಸದ ವಿಷಯವೆಂದರೆ, ಈಗ ನಮ್ಮ ದೇಶ ಸ್ವತಂತ್ರವಾಗಿದೆ. ಸ್ವಾತಂತ್ರ್ಯದ ಪ್ರಭಾತ ಭಾರತದ ಕಣಕಣಗಳಲ್ಲೂ ಆವರಿಸಿಕೊಂಡು ‘ನಮ್ಮ ದೇಶ, ನಮ್ಮ ರಾಜ್ಯ’ ಎಂದುಕೊಳ್ಳುವಂತಾಗಿದೆ. ನಮ್ಮ ಸರಕಾರ ದೇಶದಲ್ಲಿ ಶಿಕ್ಷಣ–ಪ್ರಸಾರಕ್ಕಾಗಿ ಪುಸ್ತಕಾಲಯಗಳ ಸಮೃದ್ಧ ವ್ಯವಸ್ಥೆ ಮಾಡುತ್ತಿದೆ. ಪುಸ್ತಕಾಲಯ ನಮ್ಮ ಉನ್ನತಿಯಲ್ಲಿ ಬಹುತೇಕವಾಗಿ ಪ್ರಮುಖ ಪಾತ್ರ ವಹಿಸುತ್ತದೆ. ಭವಿಷ್ಯದ ನವಪೀಳಿಗೆ ‘ಪುಸ್ತಕಾಲಯ’ದ ಮಾಧ್ಯಮದಿಂದ ಸುಸಂಸ್ಕೃತರಾಗುವಲ್ಲಿ, ರಾಷ್ಟ್ರೋನ್ನತಿಗಾಗಿ ಶ್ರಮಿಸುವ ಶಕ್ತಿ ಹೊಂದುವಲ್ಲಿ, ಗಮನಾರ್ಹ ಸಾಧನೆ ಮಾಡುವ ನಂಬಿಕೆ ಒಡಮೂಡುತ್ತದೆ.

ಯುನೆಸ್ಕೊ ಹಾಗೂ ಅಂತರರಾಷ್ಟ್ರೀಯ ಗ್ರಂಥವರ್ಷ'೭೨

● ಪ್ರೊ. ವಸಂತ ಗುಮಾಸ್ತೆ

ಯುದ್ಧ ಸಂತ್ರಸ್ತ ಜಗತ್ತು ಯುದ್ಧದ ಪುನರುಕ್ತಿ ಆಗಬಾರದೆಂದು ಸಂ. ರಾ. ಸಂಘವನ್ನು ಕಟ್ಟಿಕೊಂಡಿತು. ಆ ಸಂಸ್ಥೆ ಜನ್ಮತಾಳಿ ಇಂದಿಗೆ ಕಾಲು ಶತಮಾನ ಗತಿಸಿಹೋದರೂ ಜಾಗತಿಕ ಯುದ್ಧದ ಸತತ ಭೀತಿ ಪೂರ್ಣ ಅಳಿಸಿಹೋಗಿಲ್ಲ. ಹಾಗೂ ಚಿಕ್ಕಪುಟ್ಟ ಪ್ರಾದೇಶಿಕ ಯುದ್ಧಗಳು ಆಗಿವೆ, ಆಗುತ್ತಿವೆ. ಹಾಗಾದರೆ ಯುದ್ಧ ಮನುಷ್ಯನ ಸಹಜವೃತ್ತಿಯೆ? ಯುದ್ಧಗಳನ್ನು ಸಂಪೂರ್ಣವಾಗಿ ಕಿತ್ತೊಗೆಯಲು ಸಾಧ್ಯವಿಲ್ಲವೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದನ್ನು ಉತ್ತರಿಸುವ ಒಂದು ಸ್ಥೂಲ ಪ್ರಯತ್ನವನ್ನು ಇಂತು ಮಾಡಬಹುದು: ಯುದ್ಧದ ಮೂಲವೆಂದರೆ ಮನುಷ್ಯನ ಮನಸ್ಸು—ಅದೇ ಯುದ್ಧದ ಆದಿ ಮತ್ತು ಅಂತ್ಯ. ನಮಗೆ ಮನುಷ್ಯನ ಮನಸ್ಸಿನಿಂದ ಪೂರ್ವಾಗ್ರಹಗಳನ್ನು ಕಿತ್ತು, ತನ್ನ ನೆರೆಯವರನ್ನು ತಿಳಿದುಕೊಳ್ಳುವ ಲವಲವಿಕೆಯನ್ನು ಅವನಲ್ಲಿ ಮೂಡಿಸುವದು ಶಕ್ಯವಾದರೆ ಯುದ್ಧಗಳನ್ನು ನಿರ್ಮೂಲ ಮಾಡಬಹುದೆಂದು ಅನ್ನಿಸುತ್ತದೆ. ಮಾನವನ ಅರಿವೆಯ ಕ್ಷಿತಿಜವನ್ನು ವಿಸ್ತರಿಸಿದರೆ ಅವನ ಪೂರ್ವಾಗ್ರಹಗಳು ಅಳಿಸಿಹೋಗುವವು. ಸ್ವಲ್ಪದರಲ್ಲಿ ಹೇಳುವದೆಂದರೆ ಮನುಷ್ಯನ ಜ್ಞಾನ—ಅದು ಪ್ರಾಥಮಿಕವೇ ಇರಲಿ ತಾಂತ್ರಿಕವಿರಲಿ ಅಥವಾ ಸಾಂಸ್ಕೃತಿಕ ಮಟ್ಟದ್ದಿರಲಿ—ಹೆಚ್ಚಾಗಬೇಕು.

ಯುನೆಸ್ಕೊದ ಉಗಮ

ಈ ಉದ್ದಿಶ್ಯಗಳನ್ನು ಸಾಧಿಸಲೆಂದೇ ಸಂ.ರಾ. ಸಂಘದ ತಜ್ಞ ಘಟಕಗಳಲ್ಲೊಂದಾದ ಯುನೆಸ್ಕೊ ಜನ್ಮತಾಳಿತು. (ಸಂ. ರಾ. ಸಂಘದ ಶೈಕ್ಷಣಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಘಟನೆ). ಈ ಸಂಘಟನೆಯ ಸಂವಿಧಾನದ ಪ್ರಥಮ ವಾಕ್ಯ ಇಂತಿದೆ: "....ಮನುಷ್ಯನ ಮನಸ್ಸಿನಲ್ಲಿಯೇ ಯುದ್ಧಗಳು ಮೂಡುವದರಿಂದ, ಅವನ ಮನಸ್ಸಿನಲ್ಲಿ ಶಾಂತಿಯನ್ನು ವರ್ಧಿಸುವ ಪ್ರವೃತ್ತಿಯನ್ನು ಬೆಳೆಯಿಸಬೇಕು." ಯುದ್ಧ ವಿರೋಧೀ ಶಾಂತಿಯನ್ನು ವರ್ಧಿಸುವ ಪ್ರವೃತ್ತಿಯನ್ನು ಬೆಳೆಯಿಸುವ ಕಾರ್ಯವನ್ನು 'ಯುನೆಸ್ಕೊ' ಮೂರು ಬಗೆಗಳಿಂದ ಮಾಡಲೆತ್ನಿಸುತ್ತದೆ. ಅವುಗಳಲ್ಲಿ ಮೊದಲನೆಯದು ಶೈಕ್ಷಣಿಕ ಪ್ರಸಾರ.

ಶಿಕ್ಷಣದ ಮಹತ್ವ

ಎಚ್. ಜಿ. ವೆಲ್ಸರು "ಆಧುನಿಕ ಜಗತ್ತು ಶಿಕ್ಷಣ
ಮತ್ತು ಮಹದಾಪತ್ತುಗಳಲ್ಲಿಯ ಸ್ಪರ್ಧೆಯಲ್ಲಿ ಹೆಜ್ಜೆ
ಇಡುತ್ತಿದೆ" ಎಂದು ಬರೆದಿಟ್ಟಿದ್ದಾರೆ. ಶಾಶ್ವತ ಶಾಂತಿಗೆ
ಸಾಕ್ಷರತೆ, ಶಿಕ್ಷಣಗಳ ತಳಹದಿ ಹಾಕಬೇಕು. ಬಂಗಾರ
ವನ್ನು ಸುಟ್ಟರೆ ಅದು ಶುದ್ಧಗೊಳ್ಳುವಂತೆ ಮನುಷ್ಯನನ್ನು
ಸುಶಿಕ್ಷಿತನನ್ನಾಗಿ ಮಾಡಿದರೆ ಅವನು ಹೊಣೆಗಾರ ನಾಗರಿ
ಕನಾಗುವನು—ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ
ಪಾತಳಿಗಳಲ್ಲಿ. ಎಂತಲೇ ಯುನೆಸ್ಕೊ ಸಾಕಷ್ಟು ಹಣ
ವನ್ನು ಶಿಕ್ಷಣ ಪ್ರಸಾರದ ಮೇಲೆ ತನ್ನ ಸದಸ್ಯ ರಾಷ್ಟ್ರ
ಗಳಲ್ಲಿ—ವಿಶೇಷತಃ—ಹಿಂದುಳಿದ ದೇಶಗಳಲ್ಲಿ, ವಿನಿ
ಯೋಗಿಸುತ್ತದೆ. ಭಾರತದಂತೆ ಇನ್ನುಳಿದ ಎಷ್ಟೊ ಬಡ
ರಾಷ್ಟ್ರಗಳಲ್ಲಿ ನಿರಕ್ಷರತೆಯ ಕತ್ತಲೆ ಬಹು ದಟ್ಟವಾಗಿ ಪಸ
ರಿಸಿದೆ. ಅದನ್ನು ಸಂಪೂರ್ಣವಾಗಿ ತೊಲಗಿಸುವದೆಂದರೆ
ಂದು ಅಸಾಧ್ಯದ ಕೆಲಸವೆಂದೇ ಹೇಳಬಹುದು.
ಯುನೆಸ್ಕೊ ಹಾಗೂ ಆಯಾ ರಾಷ್ಟ್ರಗಳ ಪ್ರಯತ್ನ
ಳಿಂದ ನಿರಕ್ಷರತೆಯ ಸಂಖ್ಯೆ ಪ್ರತಿವರುಷ ಕಡಿಮೆಯಾ
ದೆ ಹೆಚ್ಚುತ್ತಿದೆ ಎಂದರೆ ನಂಬಲಾಗುವುದಿಲ್ಲ. ಇದಕ್ಕೆ
ಾರಣ ಸುಸ್ಪಷ್ಟವಿದೆ. ಇದೇ ಹಿಂದುಳಿದ ರಾಷ್ಟ್ರಗಳಲ್ಲಿ
ನಸಂಖ್ಯೆ ಸಹ ಬಹು ಪ್ರಚಂಡ ವೇಗದಿಂದ ಬೆಳೆಯು
ದೆ. ಕಾರಣ 'ಆಲೈಸ್ ಇನ್ ವಂಡರ್ ಲ್ಯಾಂಡ್'
ಂತೆ ಇದ್ದಲ್ಲಿಯೇ ಇರಲೂ ಹೆಚ್ಚು ವೇಗದಿಂದ ಓಡ
ೀಕಾದೀತೇನೋ. ಇಂದು ಹಿಂದುಳಿದ ರಾಷ್ಟ್ರಗಳಲ್ಲಿ
ುಮಾರು ೧೨ ಕೋಟಿ ಮಕ್ಕಳಿರುವರಾದರೆ ಇನ್ನು
ೇವಲ ಎಂಟು ವರುಷಗಳಲ್ಲಿ, ಅಂದರೆ ೧೯೮೦ರಲ್ಲಿ ಈ
ಂಖ್ಯೆ ೧೪ ಕೋಟಿಗೆ ಏರುವದು. ಈ ಹಿಂದುಳಿದ
ಾಷ್ಟ್ರಗಳಲ್ಲಿ ಶಾಲೆಗೆ ಹೋಗಬೇಕಾದವರು ಮಕ್ಕಳಷ್ಟೇ
ಲ್ಲ, ಪ್ರೌಢರೂ ವೃದ್ಧರೂ ಹೌದು. ಇಂತು ಶಿಕ್ಷಣ–
ಾಕ್ಷರತೆಯ ಪ್ರಯತ್ನವು ಮನುಷ್ಯನ ವಯೋಮಾನದ
ವಿಧ ಘಟ್ಟಗಳಲ್ಲಿ ಆಗುತ್ತಿದೆ. ಈವರೆಗೆ ಯುನೆಸ್ಕೊ
೬.೫ ಕೋಟಿ ಡಾಲರುಗಳನ್ನು ಶಿಕ್ಷಣಕ್ಕೆ ವಿನಿಯೋಗಿಸಿ
ದಾದರೆ, ಬರಲಿರುವ ಐದು ವರ್ಷಗಳಲ್ಲಿ ಅದು
ನ್ನೂ ೧೦೦ ಕೋಟಿ ಡಾಲರುಗಳನ್ನು ವಿನಿಯೋಗಿಸುವ
ಹತ್ವಾಕಾಂಕ್ಷೆಯ ಯೋಜನೆಯನ್ನು ಹಾಕಿಕೊಂಡಿದೆ
ಣವು ಕೇವಲ ಸಾಕ್ಷರತೆ ಅಥವಾ ಪದವೀದಾನ ಸಮಾ
ಭಗಳಿಗೆ ಮುಗಿಯದೆ, ಅದೊಂದು ಸಮಾಜ ಪರಿವರ್ತ
ನು, ಸಾಮಾಜಿಕ ಉತ್ಕ್ರಾಂತಿಯ ಬಹು ಪ್ರಭಾವೀ
ಸಾಧನವಾಗಿದೆ ಎಂಬುದನ್ನು ಯುನೆಸ್ಕೊ ಕೃತಿಯಲ್ಲಿ ಇಳಿಸಲು ಪ್ರಯತ್ನಿಸುತ್ತಿದೆ.

ವಿಜ್ಞಾನದ ಸ್ಥಾನ–ಮಾನ

ಜಗತ್ತಿನ ಹಿಂದುಳಿದ ಮತ್ತು ಮುಂದುವರಿದ ವರ್ಗಗಳನ್ನು ವಿಭಾಗಿಸುವ ರೇಷೆ, ವಿಜ್ಞಾನವಾಗಿದೆ ಎಂದರೆ ಅಡ್ಡಿ ಇಲ್ಲ. ಕೆಲವರಂತೂ ಜಗತ್ತನ್ನು "ವಿಜ್ಞಾನ ಹೊಂದಿದವರು" (Have-Science) ಮತ್ತು "ವಿಜ್ಞಾನ ವಂಚಿತರು" (Have-not-Science) ಎಂದು ವರ್ಗೀಕರಿಸುತ್ತಾರೆ. ಇಂದು ಒಂದು ದೇಶ ಅದೆಷ್ಟು ಸಂಪತ್ತನ್ನು ನಿರ್ಮಾಣ ಮಾಡಬಹುದೆಂಬುದು, ಆ ದೇಶದಲ್ಲಿ ವಿಜ್ಞಾನಿಗಳೆಷ್ಟು, ಮತ್ತು ಅವರ ಕಲ್ಪನೆ ಅದೆಷ್ಟು ಸುಫಲವಾಗಿದೆ—ಎಂಬುದನ್ನು ಅವಲಂಬಿಸಿದೆ. ಈ ಸಂದರ್ಭದಲ್ಲಿ ಹಿಂದುಳಿದ ರಾಷ್ಟ್ರಗಳು ಮುಂದುವರಿದ ರಾಷ್ಟ್ರಗಳಿಗಿಂತ ಹಿಂದೆ ಬೀಳುತ್ತಿವೆ. ಆರ್ಥಿಕ ಪ್ರಗತಿಯನ್ನು ಸಾಧಿಸಿ ತಮ್ಮ ಜನತೆಯ ಜೀವನ ಮಟ್ಟವನ್ನು ಕೊಂಚಮಟ್ಟಿಗಾದರೂ ಹೆಚ್ಚಿಸುವ ಆತುರತೆಯನ್ನು ಈ ಹಿಂದುಳಿದ ವರ್ಗಗಳವರು ಹೊಂದಿದ್ದರೆ, ಅವು ತಮ್ಮ ದೇಶಗಳಲ್ಲಿ ವೈಜ್ಞಾನಿಕ ಪ್ರಗತಿಯನ್ನು ಸಾಧಿಸುವದು ಅಗತ್ಯ. ಜೀವನದ ಪ್ರತಿ ಕ್ಷೇತ್ರದಲ್ಲೂ ವೈಜ್ಞಾನಿಕ ದೃಷ್ಟಿಕೋಣ ಹೊಂದಿದ ವಿನಾ ಗತ್ಯಂತರವಿಲ್ಲ. ಎಂತಲೇ ಯುನೆಸ್ಕೊ ಈ ರಾಷ್ಟ್ರಗಳಲ್ಲಿ ವಿಜ್ಞಾನದ ಪ್ರಗತಿಗಾಗಿ ಬಹು ದೊಡ್ಡ ಮೊತ್ತಗಳನ್ನು ಖರ್ಚುಮಾಡುತ್ತಿದೆ. ಶಾಲೆಯಲ್ಲಿ ವಿಜ್ಞಾನ, ಬೇಸಾಯದಲ್ಲಿ ವಿಜ್ಞಾನ, ಉದ್ಯೋಗದಲ್ಲಿ ವಿಜ್ಞಾನ, ಮತ್ಸ್ಯ ವ್ಯವಸಾಯದಲ್ಲಿ ವಿಜ್ಞಾನ.... ಹೀಗೆ ಎಲ್ಲೆಡೆಯಲ್ಲಿ ವೈಜ್ಞಾನಿಕ ಪದ್ಧತಿಯನ್ನು ಅಳವಡಿಸಿಕೊಳ್ಳುವುದಕ್ಕಾಗಿ ಯುನೆಸ್ಕೊ ಸಹಾಯ ಮಾಡುತ್ತಿದೆ.

ಸಂಸ್ಕೃತಿಯ ಪಾತ್ರ

ಕಾಲಾತೀತ ಹಾಗೂ ಭಾಷಾತೀತವಾದುದು ಸಂಸ್ಕೃತಿ ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಸಂಸ್ಕೃತಿ ಬಹು ದೊಡ್ಡ ಪಾತ್ರ ವಹಿಸುತ್ತದೆ. ಅವನ ಜೀವನದ ದೃಷ್ಟಿಕೋನ, ಅವನ ಸಹ ಜೀವನದ ವೈಖರಿ ಇವೆಲ್ಲ ಸಂಸ್ಕೃತಿಯನ್ನು ಅವಲಂಬಿಸಿದೆ. ಮನುಷ್ಯನ ಸುಪ್ತ ಚೈತನ್ಯವನ್ನು ವ್ಯಕ್ತಪಡಿಸುವ ಬಹಿರ್ಮಾರ್ಗ ಸಂಸ್ಕೃತಿಯಾಗಿದೆ. ಎಂತಲೇ ನಮ್ಮ ಸಂಸ್ಕೃತಿಯನ್ನು ಕಾಯ್ದುಕೊಳ್ಳುವದು ಆದ್ಯ ಕರ್ತವ್ಯ. ವೈಜ್ಞಾನಿಕ ಮತ್ತು ಆರ್ಥಿಕ

ಪ್ರಗತಿಗಳ ಬಿರುಗಾಳಿಗಳಲ್ಲಿ ಸಂಸ್ಕೃತಿ ಉಳಿಯುವದು ಕಠಿಣವೆಂದು ಕಾಣಿಸಿದಾಗ ಯುನೆಸ್ಕೊ ಮುಂದೆ ಬಂದು ಸಂಸ್ಕೃತಿಯ ಸಂಗೋಪನೆಗೆ, ಸಂವರ್ಧನೆಗೆ ಸಹಾಯ ಮಾಡಿದೆ. ಇದಕ್ಕೊಂದು ದೇದೀಪ್ಯಮಾನ ಉದಾಹರಣೆ ಎಂದರೆ ಈಜಿಪ್ತ-ಸುದಾನಗಳ ಗಡಿಯಲ್ಲಿರುವ ದೈತ್ಯಾಕಾರದ ನ್ಯುಬಿಯ ಮಂದಿರ. ಇಜಿಪ್ತದ ಅಸ್ವಾನ್ ಅಣೆಕಟ್ಟು ಕಟ್ಟಲ್ಪಡುತ್ತಿರುವಾಗ ಈ ಅದ್ವಿತೀಯ ಮಂದಿರ ಮುಳುಗಿ ಜಲ ಸಮಾಧಿಯಾಗುವದಿತ್ತು. ಆಗ ಯುನೆಸ್ಕೊ ಜಗತ್ತಿನ ಎಲ್ಲ ರಾಷ್ಟ್ರಗಳಿಗೆ ಮನವಿ ಮಾಡಿಕೊಂಡು ಹಣ ಕಲೆ ಹಾಕಿ ಆ ಮಂದಿರವನ್ನು ಅಲ್ಲಿಂದ ಸ್ಥಳಾಂತರಿಸಿ ಸುರಕ್ಷಿತ ಜಾಗಕ್ಕೆ ಸಾಗಿಸಿತು. ಅದೊಂದು ಆಧುನಿಕ ಇಂಜನಿಯರಿಂಗ್‌ನ ಅಸಾಮಾನ್ಯ ಕೃತಿಯಾಗಿ ಉಳಿಯುವದಿದೆ. ಸಾಹಿತ್ಯ, ಲಲಿತಕಲೆ, ಆಟಪಾಟಗಳು—ಇವೆಲ್ಲವುಗಳ ಮುಖಾಂತರ ಒಂದು ನಾಡಿನ ಸಂಸ್ಕೃತಿಯನ್ನು ಪರನಾಡುಗಳಿಗೆ ಮುಟ್ಟಿಸಿ ಮನುಷ್ಯನು ತನ್ನ ನೆರೆಯವನನ್ನು ಅರಿಯುವ ಪ್ರಕ್ರಿಯೆಯಲ್ಲಿ ಯುನೆಸ್ಕೊ ಬಹುಮೌಲ್ಯದ ಕಾರ್ಯ ಮಾಡುತ್ತಿದೆ. ಶಾಂತಿಯ ಬೀಜಗಳ ಬಿತ್ತನೆಯೇ ಇಲ್ಲಿದೆ.

ಅಗತ್ಯವಾದ ಮಾಧ್ಯಮ

ಶಿಕ್ಷಣ ಪ್ರಸಾರ, ವೈಜ್ಞಾನಿಕ ಪ್ರಗತಿ, ಸಂಸ್ಕೃತಿಯ ರಕ್ಷಣೆ ಇವು ಯುನೆಸ್ಕೋದ ಕಾರ್ಯಗಳಷ್ಟೇ! ಆದರೆ ಅವುಗಳನ್ನು ಮಾಡಲು ಮಾಧ್ಯಮ? ಇಂದಿನ ಆಧುನಿಕ ಇಲೆಕ್ಟ್ರಾನಿಕ್ ಯುಗದಲ್ಲಿ ಸಂಪರ್ಕ ಸಾಧನೆಗಳಲ್ಲಿ ಕ್ರಾಂತಿಕಾರಕ ಪ್ರಗತಿಯಾಗಿದೆ. ರೇಡಿಯೋ, ಟೆಲಿವಿಜನ್, ಟೇಪ್‌ರೆಕಾರ್ಡರ್, ಆಡಿಯೊವ್ಹಿಜುಅಲ್ ಏಡ್ಸ್ ಸಂಪರ್ಕ ಉಪಗ್ರಹಗಳು ಇತ್ಯಾದಿಗಳ ಬಳಕೆಯ ಈ ಜಗತ್ತಿನಲ್ಲಿ ಶಿಕ್ಷಣ, ವಿಜ್ಞಾನ, ಸಂಸ್ಕೃತಿಗಳ ಪ್ರಸಾರ ಅಷ್ಟೊಂದು ಕಠಿಣವಲ್ಲವೆಂದೆನ್ನಿಸುವದು. ಆದರೆ ಈ ಎಲ್ಲ ಅತ್ಯಾಧುನಿಕ ಸಾಧನಗಳು ಕೇವಲ ಸಿರಿವಂತರಿಗೆ ನಿಲುಕುವಂತಿವೆ. ಶಿಕ್ಷಣ, ವಿಜ್ಞಾನ ಮತ್ತು ಸಂಸ್ಕೃತಿಗಳ ಪ್ರಸಾರವು ಸಮಾಜದ ಅತಿ ಕನಿಷ್ಠ ಪಾತಳಿವರೆಗೂ ಮುಟ್ಟಿಸುವ ಒಂದೇ ಒಂದು ಸಾಧನವೆಂದರೆ ಗ್ರಂಥ ಅಥವಾ ಮುದ್ರಿತ ಶಬ್ದ. ಹಿಂದುಳಿದ ಬಡ ರಾಷ್ಟ್ರಗಳಲ್ಲಿ ದಾರಿದ್ರ್ಯ ಪೀಡಿತ ಜನರನ್ನು ಮುಟ್ಟುವ ಸಾಧನವೆಂದರೆ ಪುಸ್ತಕ; ಟೆಲಿವ್ಹಿಜನ್ ಅಲ್ಲ.

ಜಗತ್ತನ್ನಾಳುವ ಪುಸ್ತಕಗಳು

"ಪುಸ್ತಕಗಳು ಜಗತ್ತನ್ನಾಳುತ್ತವೆ"—ಎಂದು ವಾಲ್ಟೇರ್ ಹೇಳಿದ್ದು ಸುಳ್ಳಲ್ಲ. ಕಡಿಮೆ ಖರ್ಚು, ಎಲ್ಲಿ ಬೇಕಾದಲ್ಲಿ ಒಯ್ಯುವ ಸೌಲಭ್ಯಗಳಿಂದ ಕೂಡಿದ ಪುಸ್ತಕ ಇಂದಿಗೂ ವಿಕಾಸದ ಪ್ರಕ್ರಿಯೆಯ ಮೂಲದಲ್ಲಿದೆ. ಸಂಪರ್ಕ ಸಾಧನೆಗಳಲ್ಲಿ ಅದರಷ್ಟು ಸುಲಭ ಬೆಲೆಯ ಸಾಧನ ಇನ್ನಿಲ್ಲ. ಬಡವಬಲ್ಲಿದರನ್ನೂ ಮುಟ್ಟುವ ಅತಿ ಪ್ರಮುಖ ಮಾಧ್ಯಮ ಗ್ರಂಥ. ಎಂತಲೇ ಯುನೆಸ್ಕೊ ಪ್ರಚಲಿತ ವರ್ಷವನ್ನು "ಗ್ರಂಥ ವರ್ಷ"ವೆಂದು ಸಾರಿದೆ. ನ್ಯೂಯಾರ್ಕ್, ಪ್ಯಾರಿಸ್‌ಗಳಂತಹ ನಗರಗಳಲ್ಲಿ ಪುಸ್ತಕಗಳ ಅಂಗಡಿಗಳಿಗೆ ಭೆಟ್ಟಿ ಇತ್ತರೆ ಅಲ್ಲಿಯ ಪುಸ್ತಕಗಳ ವಿಷಯ ವೈವಿಧ್ಯ ದಂಗು ಬಡಿಯುವಂತಿದೆ. ನಮ್ಮ ಕಲ್ಪನೆಗೆ ನಿಲುಕುವ ಯಾವುದೇ ವಿಷಯದ ಮೇಲೂ ಅಲ್ಲಿ ಪುಸ್ತಕಗಳಿರುತ್ತವೆ. ರಾಶಿ ರಾಶಿಗಳಲ್ಲಿ ಪುಸ್ತಕಗಳು ಉಪಲಬ್ಧವಿವೆ. ಆದರೆ ಇದು ಮುಂದುವರಿದ ನಾಡಿನ ಮಾತಾಯಿತು. ಜಗತ್ತಿನಲ್ಲಿಯ ಕೇವಲ ಏಳು ಪ್ರಗತಿಪರ ರಾಷ್ಟ್ರಗಳೇ ಒಟ್ಟು ಜಾಗತಿಕ ಪುಸ್ತಕ ಉತ್ಪಾದನೆಯಲ್ಲಿಯ ಅರ್ಧ ಭಾಗವನ್ನು ಉತ್ಪಾದಿಸುತ್ತಿವೆ. ಇದರ ಅರ್ಥ ಜಗತ್ತಿನ ಶೇ. ೧೩ ಮಾತ್ರ ಜನಸಂಖ್ಯೆಯ ನಾಡುಗಳು ಶೇ. ೫೦ ಪುಸ್ತಕಗಳನ್ನು ಹೊರತರುತ್ತವೆ. ಉಳಿದರ್ಧ ಭಾಗವನ್ನು ಉಳಿದ ಎಲ್ಲ ದೇಶಗಳೂ ಕೂಡಿ ಉತ್ಪಾದಿಸುತ್ತಿವೆ. ಭಾರತದಲ್ಲಿ ಪ್ರತಿ ೧ ಲಕ್ಷ ಜನಸಂಖ್ಯೆಗೆ ೫ ಪುಸ್ತಕಗಳು ಮಾತ್ರ ಹೊರಬರುತ್ತಿವೆ. ಆಫ್ರಿಕೆಯಲ್ಲಂತೂ ಈ ಪ್ರಮಾಣ ೨.೫ ಇದೆ. [ಇತ್ತಲಾಗಿ ಕಲಕತ್ತೆಯಲ್ಲಿ ನಡೆದ ಪರೀಕ್ಷಣೆಯೊಂದರ ಪ್ರಕಾರ ಭಾರತದಲ್ಲಿ ಒಟ್ಟು ಪುಸ್ತಕಗಳಲ್ಲಿ ಅರ್ಧಕ್ಕಿಂತ ಹೆಚ್ಚು ಬರೀ ಕಥೆ, ಕಾದಂಬರಿಗಳಿರುತ್ತಿವೆ ಎಂದೂ, ವಿಜ್ಞಾನದಂತಹ ವಿಷಯಗಳ ಮೇಲೆ ಪುಸ್ತಕಗಳು ಒಟ್ಟನಲ್ಲಿ ಇಲ್ಲವೆಂದೂ ಕಂಡುಬಂದಿದೆ].

ಗ್ರಂಥವರ್ಷದ ಪ್ರಮುಖ ಕಾರ್ಯ

ಅಂತರರಾಷ್ಟ್ರೀಯ ಗ್ರಂಥವರ್ಷದ ಪ್ರಮುಖ ಕಾರ್ಯಕ್ರಮ ನಿರಕ್ಷರತೆಯನ್ನು ಕಡಿಮೆ ಮಾಡುವದಾಗಿದೆ. ನಿರಕ್ಷರತೆಯ ಮುಖ್ಯ ಕಾರಣ ಪುಸ್ತಕಗಳು ಉಪಲಬ್ಧವಿರದಿದ್ದುದು. ಆಫ್ರಿಕೆಯಲ್ಲಿಯ ಕೆಲ ಮಕ್ಕಳ ಶಾಲೆಗೆ ಹೋಗಿಯೂ ಓದು-ಬರಹ ಬರದವರಾಗಿದ್ದಾರೆಂದು ಕೇಳಿದರೆ ವಿಸ್ಮಯವಾಗುವದಲ್ಲವೆ? ಕಾರಣವೆಂದರೆ ಆ ಮಕ್ಕ

… ತಾವು ಕಲಿತದ್ದನ್ನು ನೆನಪಿಟ್ಟುಕೊಳ್ಳಲು ಓದಲು …ಸ್ತಕ ಅಥವಾ ಪತ್ರಿಕೆಗಳು ಸಿಗದಿರುವದು. ಇದೇ …ೀತು ನಮ್ಮ ದೇಶದಲ್ಲಿಯ ಪ್ರೌಢ ನಿರಕ್ಷರರ ವಿಷಯ …ದೆ. ಕಾರಣ ಇಂದು ಒಂದು ದೃಷ್ಟಿಯಲ್ಲಿ ಹಿಂದುಳಿದ …ಷ್ಟ್ರಗಳಲ್ಲಿ 'ಪುಸ್ತಕ–ಬರಗಾಲ' ಬಿದ್ದಿದೆ ಎಂದರೂ …ಪ್ಪಿಲ್ಲ. ನಾವು ಹೆಚ್ಚು ಹೆಚ್ಚು ಗ್ರಂಥಗಳನ್ನು ವಿವಿಧ …ಷಯಗಳಲ್ಲಿ ಹೊರತರುವದು ಈ ಬರಗಾಲ ಪರಿಹಾರ …ಕ್ಕೆ ಮುಂದಿಡುವ ಹೆಜ್ಜೆಯಾಗಬೇಕು.

ಎರಡನೆಯದಾಗಿ ಗ್ರಂಥಗಳು ಉಪಲಬ್ಧವಿದ್ದರೂ ಬಡ …ಶಗಳಲ್ಲಿ ವೈಯಕ್ತಿಕ ಉತ್ಪನ್ನ ತೀರ ಕಡಿಮೆಯಾದುದ …ದ ಪುಸ್ತಕಗಳ ಬೆಲೆಗಳು ಅವರ ಜೇಬುಗಳನ್ನು …ಚ್ಚುವಂತಿರದಿದ್ದರೆ ಏನು ಪ್ರಯೋಜನ? ಕಾರಣ …ಸ್ತಕಗಳು ಹೆಚ್ಚು ಹೆಚ್ಚು ಹೊರಬರಬೇಕಷ್ಟೇ ಅಲ್ಲದೆ, …ರಾ ಕಡಿಮೆ ಬೆಲೆಗಳಲ್ಲಿ ಹೊರಬರಬೇಕು. ಅಂದರೆ ಜನ …ಮಾನ್ಯರೂ ಅವುಗಳನ್ನು ಕೊಂಡು ಓದುವದು ಶಕ್ಯ …ಗುವದು. ಪುಸ್ತಕಗಳನ್ನು ಕೊಳ್ಳದೆ ಓದುವದು …ಕ್ಯವಾಗಲು ವಾಚನಾಲಯಗಳು ಬೇಕು. ಆಧುನಿಕ …ಚನಾಲಯಗಳನ್ನು ಜನತೆಯ ವಿಶ್ವವಿದ್ಯಾಲಯಗಳು …ಥವಾ ಅನೌಪಚಾರಕ ಶೈಕ್ಷಣಿಕ ಕೇಂದ್ರಗಳೆಂದು ಬಣ್ಣಿ…ದ್ದು ತೀರ ಯುಕ್ತವಾಗಿದೆ. ವಾಚನಾಲಯಗಳು …ನದ ಭಂಡಾರಗಳಿದ್ದು ಜನ ತಮ್ಮ ಜ್ಞಾನದ ಹಸಿವೆ…ನ್ನು ಅಲ್ಲಿ ತೀರಿಸಿಕೊಳ್ಳಬಹುದಾಗಿದೆ. ಕಾರಣ …ುನೆಸ್ಕೊ ವಾಚನಾಲಯಗಳನ್ನು ಬೆಳೆಸುವ ಕಾರ್ಯದಲ್ಲಿ …ಸ್ತುತ ವರ್ಷದಂದು ಹೆಚ್ಚಿನ ಆಸ್ಥೆ ವಹಿಸಿದೆ. ಇಂತು …ಯಕ್ತಿಕ ಪುಸ್ತಕಗಳು, ವಾಚನಾಲಯಗಳಲ್ಲಿ ಪುಸ್ತಕ…ು ಮೊದಲಾದವುಗಳಿಂದ ಯುನೆಸ್ಕೊ "ಎಲ್ಲರಿಗೂ …ಸ್ತಕಗಳು" ಎಂಬ ತನ್ನ ಘೋಷಣಾ ವಾಕ್ಯವನ್ನು …ರ್ಥಕ ಪಡಿಸಲು ಪ್ರಯತ್ನಿಸುತ್ತಿದೆ.

ಬಹಳ ಜನರ ಮನಸ್ಸಿನಲ್ಲಿ ಒಂದು ಪ್ರಶ್ನೆ ಉದ್ಭವಿಸು…ು ಸಹಜ. "ಪುಸ್ತಕ ವರ್ಷವನ್ನು ಅಂತರಾಷ್ಟ್ರೀಯ …ಂಥ ವರ್ಷವೆಂದೇಕೆ ಆರಿಸಲಾಗಿದೆ?" ಇದಕ್ಕೆ ಉತ್ತ…ಾಗಿ ಯುನೆಸ್ಕೊದ ಅಧಿಕಾರಿಗಳೊಬ್ಬರಾದ ಶ್ರೀ …ಬರ್ಟ್ ಮಥಾಯಸ್ ಹೀಗೆನ್ನುತ್ತಾರೆ. "ಪುಸ್ತಕ … ಉತ್ಪಾದನೆ ಮತ್ತು ವಿತರಣೆಯ ಪಾತ್ರಗಳಲ್ಲಿ ಇತ್ತೀ…ೆ ಬಹು ಪ್ರಗತಿಯನ್ನು ಸಾಧಿಸಲಾಗಿದೆ. ಅವುಗಳಿಂದ …ಮೆ ಬೆಲೆಯ, ಒಳ್ಳೆಯ ದರ್ಜೆಯ ಪುಸ್ತಕಗಳನ್ನು …ಡ್ಡ ಪ್ರಮಾಣದಲ್ಲಿ ಹೊರತರುವದು ಶಕ್ಯವಾಗಿದೆ. ಈ ತಂತ್ರಗಳಲ್ಲಿ ಮುಖ್ಯವಾದವು—ಫೋಟೊ ಕಂಪೊಜಿಶನ್ ಮತ್ತು ಆಫ್‌ಸೆಟ್ ಮುದ್ರಣಗಳು. ಕಾರಣ ತಾಂತ್ರಿಕ ಮತ್ತು ವಿದ್ವತ್ಪೂರ್ಣ ಗ್ರಂಥಗಳನ್ನು ಸುಲಭ ಭಾಷೆಯಲ್ಲಿ ಮತ್ತು ಶೀಘ್ರವಾಗಿ ಓದುಗರ ಮುಂದಿಡುವದು ಸಾಧ್ಯ."

ಯುನೆಸ್ಕೊ ಅಂತರರಾಷ್ಟ್ರೀಯ ಗ್ರಂಥ ವರ್ಷವನ್ನು ಈ ಕೆಳಗಿನ ಕಾರ್ಯಕ್ರಮಗಳೊಂದಿಗೆ ಆಚರಿಸುತ್ತಿದೆ:

೧. ಅಂತರಾಷ್ಟ್ರೀಯ ಪುಸ್ತಕ ಜಾತ್ರೆ.

೨. ಜನತೆಗಾಗಿ ಪುಸ್ತಕಗಳು; ಈ ವಿಷಯದಮೇಲೆ ಅಂತರರಾಷ್ಟ್ರೀಯ ವಿಚಾರ ಗೋಷ್ಠಿಗಳು.

೩. ಪ್ರಾದೇಶಿಕ ಪುಸ್ತಕ ಪ್ರದರ್ಶನಗಳು.

೪. ಉಗಿಬಂಡಿಗಳಲ್ಲಿ ಪ್ರವಾಸೀ ಪುಸ್ತಕ ಪ್ರದರ್ಶನಗಳು.

೫ ಪುಸ್ತಕ ವಿಮರ್ಶೆಯ ಬಗ್ಗೆ ಸಾಮಾನ್ಯರಿಗಾಗಿ ಸ್ಪರ್ಧೆಗಳು.

೬. ಮಕ್ಕಳಿಗಾಗಿ ಪುಸ್ತಕಗಳು.

ಅಂತರ ರಾಷ್ಟ್ರೀಯ ಪುಸ್ತಕ ಜಾತ್ರೆಯೊಂದನ್ನು ಇತ್ತಲಾಗಿ ದಿಲ್ಲಿಯಲ್ಲಿ ಆಯೋಜಿಸಲಾಗಿತ್ತು. ಅದಕ್ಕಾಗಿ ೫ ಲಕ್ಷ ರೂ.ಗಳನ್ನು ವಿನಿಯೋಗಿಸಲಾಯಿತು. ಅಂಚೆ ಮತ್ತು ತಂತಿ ವಿಭಾಗದವರು ಈ ಬಗ್ಗೆ ಅಂಚೆ ತಿಕೇಟನ್ನು ಹೊರತರುವವರಿರುವರು. ಇದಲ್ಲದೆ ಅಲ್ಲಲ್ಲಿ—ವಿಶೇಷತಃ ಗ್ರಾಮೀಣ ವಿಭಾಗಗಳಲ್ಲಿ ಚಲಚ್ಚಿತ್ರಗಳನ್ನು ತೋರಿಸಿ ಜನಸಾಮಾನ್ಯರಲ್ಲಿ ಪುಸ್ತಕಗಳ ಬಗ್ಗೆ ಆಸ್ಥೆ ನಿರ್ಮಾಣ ಮಾಡುವುದು, ನಿರಕ್ಷರ ಜನ ವಸತಿಗಳಲ್ಲಿ ಉತ್ತಮ ಮತ್ತು ಒಳ್ಳೆಯ ಅಭಿರುಚಿಗಳ ಪುಸ್ತಕಗಳನ್ನು ಓದುವದು, ಸಾಪ್ತಾಹಿಕ ಭಿತ್ತಿಪತ್ರಗಳನ್ನು ಹೊರಡಿಸುವದು ಮೊದಲಾದವುಗಳಿಂದ ಅಂತರರಾಷ್ಟ್ರೀಯ ಗ್ರಂಥವರ್ಷವನ್ನು ಜಗತ್ತಿನ ಮೂಲೆ ಮೂಲೆಯವರೆಗೂ ಹಬ್ಬಿಸುವ ಕೆಲಸ ನಡೆದಿದೆ.

ಸಾಗರದಾಚೆಯಿಂದ ಹಡಗುಗಳು ವಿವಿಧ ವಸ್ತುಗಳನ್ನು ನಮಗೆ ತಂದು ಮುಟ್ಟಿಸುವಂತೆ ಜಗತ್ತಿನ ಮೂಲೆ ಮೂಲೆಗಳಿಂದ ಜ್ಞಾನವನ್ನು ಪುಸ್ತಕಗಳು ನಮಗೆ ತಂದು ಮುಟ್ಟಿಸುತ್ತಿವೆ. "ಅರಿವೇ ಗುರು" ಎಂಬ ಕನ್ನಡ ಗಾದೆಯಿದೆ. ಆದರೆ "ಅರಿವು" ಮೂಡುವುದು ಗ್ರಂಥದ ವಾಚನದಿಂದ. ಕಾರಣ ಗ್ರಂಥವೇ ಒಂದು ದೃಷ್ಟಿಯಲ್ಲಿ ಗುರು ಅಲ್ಲವೆ?

ಕನ್ನಡ ಶೀಘ್ರಲಿಪಿ ಮತ್ತು ಟೈಪ್‌ರೈಟರುಗಳ ಹುಟ್ಟು ಮತ್ತು ಬೆಳವಣಿಗೆ

● ಎಸ್. ಆರ್. ಸಿದ್ಧರಾಜು

ಯಾವುದೇ ಒಂದು ಭಾಷೆಯು ಸರ್ವತೋಮುಖವಾಗಿ ಪ್ರಗತಿ ಹೊಂದಬೇಕಾದರೆ, ಅದು ಕೇವಲ ಗ್ರಂಥ, ಸಾಹಿತ್ಯ, ಮುದ್ರಣ, ಕಥೆ, ಅಥವಾ ಕಾದಂಬರಿ ಮುಂತಾದುವುಗಳಿಂದಲೇ ಆಗುವುದಿಲ್ಲ. ರಾಜ್ಯಸರ್ಕಾರದ ಹಾಗೂ ಸಾರ್ವಜನಿಕರ ವ್ಯವಹಾರವು ತಮ್ಮ ನಾಡ ನುಡಿಯಲ್ಲಿ ನಡೆಯಬೇಕು, ನಿಜ. ಈ ವ್ಯವಹಾರಗಳು ಸುಲಭವಾಗಿ ಮತ್ತು ಶೀಘ್ರವಾಗಿ ನಡೆಯಬೇಕಾದರೆ ಆಯಾಯ ಭಾಷೆಯ ಶೀಘ್ರಲಿಪಿ ಮತ್ತು ಟೈಪ್‌ರೈಟರುಗಳ ಆವಶ್ಯಕತೆ ಬಹಳವಾಗಿದೆ. ಒಂದು ದಿನದಲ್ಲಿ ಸುಮಾರು ೨೫ ಪತ್ರ ವ್ಯವಹಾರ ನಡೆಸುವಂತಹವರು ಶೀಘ್ರಲಿಪಿ ಮತ್ತು ಟೈಪ್‌ರೈಟಿಂಗ್ ವಿದ್ಯೆ ಬಲ್ಲವರಾಗಿದ್ದರೆ ಸುಮಾರು ೭೫ಕ್ಕೂ ಮಿಗಿಲಾದ ಪತ್ರ ವ್ಯವಹಾರಗಳನ್ನು ಸಮರ್ಪಕವಾಗಿ ಹಾಗೂ ಸುಲಲಿತವಾಗಿ ನಡೆಸಬಲ್ಲರು. ಈ ದೃಷ್ಟಿಯಿಂದ ಇತ್ತೀಚೆಗೆ ಸರ್ಕಾರಿ ಕಚೇರಿಗಳಲ್ಲಿಯೂ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿಯೂ ಶೀಘ್ರಲಿಪಿಗಾರರ ಸೇವೆಯನ್ನು ಹೆಚ್ಚಾಗಿ ಅಪೇಕ್ಷಿಸುತ್ತಾರೆ ಎಂಬುದು ಸರ್ವವಿದಿತ. ಆದುದರಿಂದ ಕನ್ನಡ ಶೀಘ್ರಲಿಪಿಯ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಅನೇಕ ಮಹನೀಯರುಗಳು ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಅವರಲ್ಲಿ ಮೊಟ್ಟಮೊದಲನೆಯವರು ಎಂದರೆ ವೆಲ್ಲೂರಿನ ದಿವಂಗತ ಶ್ರೀ ರಾವ್‌ಸಾಹೇಬ್, ಎಂ. ಶ್ರೀನಿವಾಸ್‌ರಾವ್ ರವರು, ೧೯೩೪ನೇ ಇಸವಿ ಅಕ್ಟೋಬರ್ ಮಾಹೆಯಲ್ಲಿಯೇ ಒಂದು ಕನ್ನಡ ಶೀಘ್ರಲಿಪಿಯ ಕೈಪಿಡಿಯನ್ನು ಶ್ರೀ ಪಿಟ್‌ಮನ್‌ರವರ ಆಂಗ್ಲ ಭಾಷೆಯ ಶೀಘ್ರಲಿಪಿ ಕ್ರಮವನ್ನು ಅನುಸರಿಸಿ ರಚಿಸಿದ್ದಾರೆ. ಆದರೆ ಆಗಿನ ಕಾಲದ ಆಂಗ್ಲ ಭಾಷಾವ್ಯಾಮೋಹದಿಂದಲೋ ಅಥವಾ ಆಗಿನ ಕಾಲದಲ್ಲಿ ಶೀಘ್ರಲಿಪಿಗೆ ಸಾಕಷ್ಟು ಉತ್ತೇಜನ ದೊರೆಯದೆ ಇದ್ದುದರಿಂದಲೋ, ಅವರು ರಚಿಸಿದ ಕನ್ನಡ ಶೀಘ್ರಲಿಪಿಯ ಕೈಪಿಡಿಯನ್ನು ನಮ್ಮ ಜನರು ಸದುಪಯೋಗಪಡಿಸಿಕೊಳ್ಳಲಾರದೆ ಹೋದರೂ ಸಹ ಕನ್ನಡ ಶೀಘ್ರಲಿಪಿಯ ಬೆಳವಣಿಗೆಗೆ ಶ್ರಮವಹಿಸಿದವರಲ್ಲಿ ಮೊಟ್ಟಮೊದಲನೆಯವರು ಎಂದರೆ ತಪ್ಪಾಗುವುದಿಲ್ಲ. ಅನಂತರ ೧೯೬೬ನೇ ಇಸವಿಯಲ್ಲಿ ಶ್ರೀ ದೇವರಾವ್ ಎಂಬುವರು ತಮ್ಮದೇ ಆದ ಒಂದು ರೀತಿಯಲ್ಲಿ ಅದಕ್ಕೆ ರೂಪರೇಷೆಗಳನ್ನು ಕೊಟ್ಟು ಕನ್ನಡ ಶೀಘ್ರಲಿಪಿಯ ಪುಸ್ತಕವನ್ನು ರಚಿಸಿದರು. ಅದು ಅವರು ಬದುಕಿದ್ದಷ್ಟು ಕಾಲ ಮಾತ್ರ ಆಚರಣೆಯಲ್ಲಿದ್ದು,

…ವಲ ನಾಲ್ಕಾರು ಜನರು ಮಾತ್ರ ಇದರ ಲಾಭವನ್ನು …ದರು. ಇದರ ವಿಕಾಸವನ್ನು ಅಥವಾ ಇದರ ಅಭಿವೃದ್ಧಿ…ನ್ನು ಸಾಧಿಸುವುದಕ್ಕೋಸ್ಕರವಾಗಿ ಅವರು ಪ್ರಯತ್ನ …ಡದೆ ಇದ್ದುದರಿಂದಲೋ ಅಥವಾ ಇಂಗ್ಲಿಷ್ ಶೀಘ್ರ…ಯ ಪ್ರಭಾವ ಹೆಚ್ಚಿದುದರಿಂದಲೋ ಈ ಶೀಘ್ರ…ಯೂ ತನ್ನಷ್ಟಕ್ಕೆ ತಾನೇ ಮಾಯವಾಯಿತು.

ಶ್ರೀ ಆರ್. ಜಿ. ಕೃಷ್ಣನ್‌ರವರು ಈ ಪುಸ್ತಕದ …ರೋಭಿವೃದ್ಧಿಯನ್ನು ಮಾಡಲೋಸುಗ ಸಾಕಷ್ಟು …ಕ್ತಿ ವಹಿಸಿದರಾದರೂ ಇದುವರೆಗೆ ಪುನರ್ ವಿಮರ್ಶಿತ …ಸ್ತಕವು ಬಾರದೆ ಇರುವುದರಿಂದ ಇದು ಮೂಲೆ…ಪಾಗಿ ಹೋಗಿದೆ. ಅನಂತರ ಇಂಗ್ಲಿಷ್ ಶೀಘ್ರಲಿಪಿ …ಸ್ತಕದ ಆಧಾರದ ಮೇಲೆ ಮೈಸೂರಿನ ಶ್ರೀ ಕೆ. …ತಾರಾಮ್‌ರವರು ೧೯೪೧ನೇ ಇಸವಿಯಲ್ಲಿ ಕನ್ನಡ …ಘ್ರಲಿಪಿಯ ಒಂದು ಕೈಪಿಡಿಯನ್ನು ರಚಿಸಿದನಂತರ …ನ್ನಡ ಶೀಘ್ರಲಿಪಿಗೆ ಸ್ವಲ್ಪ ಮುಕ್ತಿ ದೊರೆತು ಸುಮಾರು …ರಾರು ವಿದ್ಯಾರ್ಥಿಗಳು ಇದರಲ್ಲಿ ಪರಿಣತರಾಗಿ ಕನ್ನಡ …ಘ್ರಲಿಪಿಯನ್ನು ಜೀವಂತಗೊಳಿಸಿದರಾದರೂ ಸಹ …ಗ್ಲಿಷ್ ಭಾಷೆ ಬಾರದವರು ಇದನ್ನು ಕಲಿಯುವುದಕ್ಕೆ …ಧ್ಯವಾಗಲಿಲ್ಲ. ಆದುದರಿಂಗ ಇದು ಕೇವಲ ಮೈಸೂರು …ತ್ತು ಬೆಂಗಳೂರು ನಗರಗಳಲ್ಲಿ ಮಾತ್ರ ಪ್ರಚಾರ …ಯಿತೇ ಹೊರತು, ರಾಜ್ಯದ ಎಲ್ಲಾ ಕಡೆಯೂ ಹಬ್ಬು…ಕ್ಕೆ ಸಾಧ್ಯವಾಗಲಿಲ್ಲ.

ಈ ಕನ್ನಡ ಶೀಘ್ರಲಿಪಿಯನ್ನು ರಾಜ್ಯದ ಮೂಲೆ…ಲೆಗೂ ಹಬ್ಬಿಸಬೇಕು ಮತ್ತು ಆಸಕ್ತಿಯುಳ್ಳ ಪ್ರತಿ…ಬ್ಬ ಕನ್ನಡಿಗನೂ ಇದರ ಸದುಪಯೋಗವನ್ನು …ಯಬೇಕು, ಎಂಬ ಉದ್ದೇಶದಿಂದ ಪಿಟ್‌ಮನ್‌ರವರ …ಗ್ಲ ಶೀಘ್ರಲಿಪಿಯ ಆಧಾರದ ಮೇಲೆ ಮತ್ತು ಶ್ರೀ …ನ್‌ಸಾಹೇಬ್ ಶ್ರೀನಿವಾಸ್‌ರಾವ್‌ರವರು ಅಳವಡಿಸಿರುವ …ತ್ರ ಮತ್ತು ಉದ್ದೇಶಗಳನ್ನು ಅನುಸರಿಸಿ ಒಂದು …ಃ ಕಲಿಯುವ ಕನ್ನಡ ಶೀಘ್ರಲಿಪಿ ಪಠ್ಯ ಪುಸ್ತಕ…ನ್ನು ರಚಿಸಿ ದಿನಾಂಕ ೧೪–೧–೧೯೭೦ರಂದು ಪ್ರಕಟಿಸಿ…ನೆ. ಇದು ಪೂರ್ಣವಾಗಿ ಕನ್ನಡದಲ್ಲಿಯೇ ಇದ್ದು …ಃ ಕಲಿಯುವುದಕ್ಕೆ ಅವಕಾಶವಾಗಿರುವುದರಿಂದ ಈಗ …ರಾರು ಜನರು ಇದರ ಸದುಪಯೋಗವನ್ನು ಪಡೆಯು…ದ್ದು, ನಾಡ ನುಡಿಯು ಶೀಘ್ರವಾಗಿ ವ್ಯವಹಾರ ಭಾಷೆ…ಗಲು ತಮ್ಮ ಸೇವೆ ಸಲ್ಲಿಸಲು ಸಿದ್ಧರಾಗಿದ್ದಾರೆ.

ಇನ್ನು ಕನ್ನಡ ಟೈಪ್‌ರೈಟರಿನ ಬಗ್ಗೆ ಹೇಳುವುದಾದರೆ ಸುಮಾರು ೨೫ ಜನ ಮಹನೀಯರು ಈ ಕನ್ನಡ ಬೆರಳಚ್ಚುಗಳ ಫಲಕವನ್ನು ತಮಗೆ ತೋಚಿದಂತೆ ನಿರ್ಮಿಸಿದ್ದಾರೆಂದು ಕೇಳಿದ್ದೇನೆ. ಆದರೆ ಇವುಗಳ ಬಗ್ಗೆ ಜಿಜ್ಞಾಸೆ ಇದ್ದುದರಿಂದ ಸರ್ಕಾರದವರು ತಿ. ತಾ. ಶ್ರೀ ಮಾನ್ ಶರ್ಮರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ಸುವ್ಯವಸ್ಥಿತವಾದ ಒಂದು ಕನ್ನಡ ಬೆರಳಚ್ಚುಗಳ ಫಲಕವನ್ನು ರಚಿಸುವಂತೆ ಆದೇಶವಿತ್ತರು. ಆದರೆ ಈ ಸಮಿತಿಯವರ ಸತತ ಪ್ರಯತ್ನದಿಂದ ಒಂದು ಫಲಕವನ್ನು ಸೃಷ್ಟಿಸಿದರೂ ಸಹ ಕನ್ನಡ ಲಿಪಿಯ ಸುಧಾರಣೆ ಆದ ಹೊರತು ಸುವ್ಯವಸ್ಥಿತವಾದ ಕನ್ನಡ ಬೆರಳಚ್ಚುಯಂತ್ರ ಬರುವುದಕ್ಕೆ ಸಾಧ್ಯವಿಲ್ಲವೆಂದು ಒಂದು ವರದಿಯನ್ನು ಕೊಟ್ಟರೆಂದು ತಿಳಿದುಬಂದಿದೆ. ಈ ಮಧ್ಯೆ ದೈವವಶಾತ್ ಯಾವ ಲಿಪಿ ಸುಧಾರಣೆಯೂ ಇಲ್ಲದೆ ಒಂದು ಅತ್ಯುತ್ತಮವಾದ ಕನ್ನಡ ಬೆರಳಚ್ಚು ಫಲಕವನ್ನು ಶ್ರೀ ಕೆ. ಅನಂತಸುಬ್ಬರಾಯರು ನಿರ್ಮಿಸಿದುದನ್ನು ೧೯೫೮ನೇ ಇಸವಿಯಲ್ಲಿ ಸರ್ಕಾರವು ಅಂಗೀಕರಿಸಿತು. ಅನಂತರ ಸರ್ಕಾರೀ ಮುದ್ರಣಾಲಯದಲ್ಲಿ ಅನಂತ ಕೀಬೋರ್ಡಿನ ಒಂದು ಮಾದರಿ ಯಂತ್ರವನ್ನು ತಯಾರಿಸಿ ಇದನ್ನು ಪ್ರಾಯೋಗಿಕವಾಗಿ ಉಪಯೋಗಿಸಿ, ಅದು ಉತ್ತಮವಾಗಿ ಕಂಡುಬಂದದ್ದರಿಂದ ಮದ್ರಾಸಿನ ರಾಯಲ್ ಕಾರ್ಪೊರೇಷನ್‌ಗೆ ಅಪ್ಪಣೆ ಮಾಡಿ ಮೊಟ್ಟಮೊದಲನೆಯದಾಗಿ ಕನ್ನಡ ಹಾಲ್ಡ ಟೈಪ್‌ರೈಟರನ್ನು ೧೯೬೧ನೇ ಇಸವಿಯಲ್ಲಿ ತಯಾರಿಸಿ ತರಿಸಿದರು. ಇದಾದ ನಂತರ ೧೯೬೪ನೇ ಇಸವಿಯಲ್ಲಿ ರೆಮಿಂಗ್‌ಟನ್ ಕಂಪನಿಯವರೂ ಸಹ ಕನ್ನಡ ಟೈಪ್‌ರೈಟರುಗಳನ್ನು ತಯಾರಿಸಿದರು. ಆದರೆ ಇದನ್ನು ಕ್ರಮವಾಗಿ ಅಭ್ಯಾಸ ಮಾಡಲು ಬೇಕಾದ ಸಲಕರಣೆಗಳು ಮತ್ತು ಪುಸ್ತಕಗಳು ಇಲ್ಲದೆ ನಾಲ್ಕಾರು ವರ್ಷಗಳು ಅಜ್ಞಾತವಾಸದಲ್ಲಿರಬೇಕಾಯಿತು. ಈ ಅಜ್ಞಾತವಾಸವನ್ನು ಮುಕ್ತಿಗೊಳಿಸಬೇಕೆಂಬ ಉದ್ದೇಶದಿಂದ ೧೯೬೬ನೇ ಇಸವಿಯಲ್ಲಿ ಈ ಕನ್ನಡ ಟೈಪ್‌ರೈಟಿಂಗನ್ನು ಯಾವ ರೀತಿ ಅಭ್ಯಾಸ ಮಾಡಬೇಕು, ಹೇಗೆ ಅಭ್ಯಾಸ ಮಾಡಬೇಕು ಎಂಬ ಒಂದು ರೂಪರೇಷೆ ಕೊಡುವಂತಹ ಒಂದು ಕನ್ನಡ ಟೈಪ್‌ರೈಟಿಂಗ್ ಪಠ್ಯಪುಸ್ತಕವನ್ನು ರಚಿಸಿದೆನು. ಇದರ ಸಹಾಯದಿಂದ ಸಾವಿರಾರು ವಿದ್ಯಾರ್ಥಿಗಳು ಈಗ ಕನ್ನಡ ಟೈಪ್‌ರೈಟಿಂಗ್‌ನ್ನು ಕಲಿತು ಅದರಲ್ಲಿ ಪರಿಣಿತರಾಗಿರುವುದಲ್ಲದೆ ಅನೇಕ ಸರ್ಕಾರಿ ಕಛೇರಿಗಳಲ್ಲಿಯೂ ಸಹ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಈ ಕನ್ನಡ ಬೆರಳಚ್ಚು ಯಂತ್ರದ ಫಲಕದಲ್ಲಿ ಒಂದು ವಿಶೇಷತೆ ಏನಿದೆಯೆಂದರೆ ಇದರಲ್ಲಿ ಒಟ್ಟು ೪೬ ಬೆರಳಚ್ಚುಗಳು ಇದ್ದು ಇವುಗಳಲ್ಲಿ ೩ ಅಚಲಿತ ಕೀಗಳಾಗಿವೆ. ಈ ಅಚಲಿತ ಕೀಗಳನ್ನು ಒತ್ತಿದರೆ ಫಲಕವು ಮುಂದುವರಿಯದೆ ಹಿಂದಿನ ಅಕ್ಷರದ ಮೇಲೆಯೇ ಅಚಲಿತ ಬೆರಳಚ್ಚಿನಲ್ಲಿರುವ ಚಿಹ್ನೆಗಳು ಮುದ್ರಣವಾಗುತ್ತವೆ. ಮತ್ತು ಯ, ಷ, ಮ, ಇತ್ಯಾದಿ ಕೆಲವು ಅಕ್ಷರಗಳು ಸಂಪೂರ್ಣವಾಗಿ ಒಂದೇ ಅಚ್ಚಿನಲ್ಲಿ ಇರುವುದಿಲ್ಲ ಮೂರು ನಾಲ್ಕು ಅಚ್ಚುಗಳನ್ನು ಒತ್ತುವಿಕೆಯಿಂದ ಒಂದು ಪದವನ್ನು ಮಾಡಬೇಕಾಗುತ್ತವೆ. ಈ ಯಂತ್ರಕ್ಕೆ ಸಂಬಂಧಪಟ್ಟ ಇನ್ನುಳಿದ ಎಲ್ಲಾ ಭಾಗವೂ ಇಂಗ್ಲಿಷ್ ಟೈಪ್‌ರೈಟಿಂಗ ಯಂತ್ರದಂತೆಯೇ ಇದ್ದು ಸುಲಭವಾಗಿ ಈ ಕನ್ನಡ ಟೈಪ ರೈಟಿಂಗನ್ನು ಕೇವಲ ಅಲ್ಪ ಕಾಲದಲ್ಲಿಯೇ ಅಭ್ಯಾ ಮಾಡಲು ಸಹಕಾರಿಯಾಗಿದೆ. ಇಂದು ನಮ್ಮ ರಾಜ್ಯ ನಾಡ ನುಡಿಯಲ್ಲಿಯೇ ಎಲ್ಲಾ ಹಂತಗಳಲ್ಲಿಯೂ ವ್ಯ ಹಾರ ಮಾಡಬೇಕೆಂದು ಶೀರ್ಮಾನಿಸಿರುವುದರಿಂದ ಈ ಸಮಯದಲ್ಲಿ ಕನ್ನಡ ಶೀಘ್ರಲಿಪಿ ಮತ್ತು ಕನ್ನಡ ಬೆ ಳಚ್ಚುಗಾರರ ಅವಶ್ಯಕತೆ ಬಹಳವಾಗಿ ಇರುವುದರಿಂ ಇವುಗಳ ಕಡೆಗೆ ಕನ್ನಡಾಭಿಮಾನಿಗಳು ಆಸಕ್ತಿ ವಹಿಸ ವುದು ಸೂಕ್ತವಾಗಿದೆ.

ಪಿತೃಗಳ ಕೀರ್ತಿಯನ್ನು ಬೆಳಗಿಸುವ ಚಿರಂಜೀವಿ ಮಕ್ಕಳಂತೆ ಗ್ರಂಥ ಕರ್ತರ ಕೀರ್ತಿಯನ್ನು ಅವರ ಗ್ರಂಥಗಳು ಆಚಂದ್ರಾರ್ಕವಾಗಿ ಬೆಳಗಿಸುತ್ತವೆ.

—**ಪ್ಲೇಟೋ**

ಉತ್ತಮ ಗ್ರಂಥವು ಇಂದು ಮತ್ತು ಎಂದೆಂದಿಗೂ ಅತ್ಯುತ್ಕೃಷ್ಟ ಸ್ನೇಹಿತನಿದ್ದ ಹಾಗೆ.

—**ಮಾರ್ಟಿನ್ ಎಫ್. ಟುಪ್ಪರ್**

ಗ್ರಂಥಗಳು ಬಾಳನ್ನು ಬೆಳಗಿಸುವ ಅಮೃತ ಸಂಜೀವಿನಿ. ಜೀವಿಗಳಿಗೆ ಆಹಾರವಿದ್ದಂತೆ ಮನುಷ್ಯನಿಗೆ ಗ್ರಂಥಗಳು.

—**ಡಿ.ವಿ.ಜಿ.**

ಉತ್ತಮ ಗ್ರಂಥಗಳು ನಾಡಿನ ಸಂಸ್ಕೃತಿಯ ಪ್ರತೀಕ.

—**ನೆಹರು**

ಸದ್ಗ್ರಂಥವು ಒಂದು ನಾಡಿನ ಬೆಳಕು, ಬಾಳದಾರಿಯ ದೀವಿಗೆ.

—**ವಿ. ಸೀ.**

ನಮ್ಮಿಂದ ಕಣ್ಮರೆಯಾದ ಮಹಾನುಭಾವರು ಉಸುರಿದ ಮಾತುಗಳೇ ಸದ್‌ಗ್ರಂಥಗಳು.

—**ಕ್ಯಾನಿಂಗ್**

ಓದುಗ ಮತ್ತು ಅವನ ಕೆಲವು ಸಮಸ್ಯೆಗಳು

ಈ ವರ್ಷವನ್ನು ಪುಸ್ತಕ ವರ್ಷವನ್ನಾಗಿ ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. ಆದರೂ ಈ ಬಗ್ಗೆ ಯಾರಿಗಾಗಿ ಈ ಪುಸ್ತಕ ರಚಿತವಾಗುತ್ತಿದೆಯೋ ಆ ಓದುಗನನ್ನೇ ಮರೆ ತಂತಿದೆ. ಎಲ್ಲ ಪುಸ್ತಕಗಳ ಅಂತಿಮಗುರಿ ಜ್ಞಾನ ಪ್ರಸಾರ, ಪ್ರಚಾರ. ಎಲ್ಲ ಸಾಹಿತ್ಯ ಕೃತಿಗಳ ಪರಮೋದ್ದೇಶ. ಆಹ್ಲಾದ. ಹೀಗಾಗಿ ಓದುಗನ ನಿಟ್ಟನಿಂದ ನೋಡುವುದೂ ಬಹಳ ಮುಖ್ಯ. ಮುಂದೆ ಹೇಳುವ ಅಂಶಗಳು ಪ್ರಮುಖವಾಗಿ ಕನ್ನಡ ಓದುಗರು ಮತ್ತು ಕನ್ನಡ ಹೊತ್ತಿಗೆಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ನಿರೂಪಿತವಾಗಿವೆ. ಸಮಸ್ಯೆಯತ್ತ ಸಾಗುವ ಮೊದಲು ಪ್ರಾಸಂಗಿಕವಾಗಿ ಇದಕ್ಕೆ ಹೊಂದಿಕೊಂಡ ಕೆಲವು ಮಾತುಗಳನ್ನು ತಿಳಿಸಲಾಗಿದೆ.

ಗ್ರಂಥದ ಸಾರ್ಥಕತೆಯಿರುವುದು ಅದು ಹೇಗೆ ಅಚ್ಚಾಗಿದೆ. ಎಂಬಲ್ಲಿ ಅಲ್ಲ. ಅದು ಹೇಗೆ ಉಪಯೋಗವಾಗುತ್ತಿದೆ ಎಂಬುದೇ ಪ್ರಮುಖ. ಗ್ರಂಥಗಳಿರುವುದು ಗ್ರಂಥಗಳಿಗಾಗಿ ಅಲ್ಲ, ಓದುಗನಿಗಾಗಿ. ಯಾವ ನಾಡಿನಲ್ಲಿ ಓದುಗರ ಸಂಖ್ಯೆ ಹೆಚ್ಚಾಗಿದೆಯೋ ಆ ನಾಡು ಭಾಗ್ಯಶಾಲಿ. ಜನತೆಯಲ್ಲಿ ವಾಚನಾಭಿರುಚಿ ಹೆಚ್ಚಬೇಕು, ನಿಜ. ಅದಕ್ಕೆ ತಕ್ಕ ಸಂನಿವೇಶವೂ ಕಲ್ಪಿತವಾಗಬೇಕು. ಮಾನವನ ಬದುಕಿನಲ್ಲಿ ಪ್ರತಿಯೊಬ್ಬರಿಗೂ ಬಿಡುವು ಇದ್ದೇ ಇರುತ್ತದೆ. ಆ ಬಿಡುವಿನ ವೇಳೆಯನ್ನು ಸದ್ವಿನಿಯೋಗ ಮಾಡಿಕೊಳ್ಳಬೇಕು. ಬದುಕು ಬೇಸರದ ಕೊಂಪೆಯಾಗಬಾರದು. ಬಿಡುವಿನ ಸಮಯವನ್ನು ನಿಷ್ಪ್ರಯೋಜಕ ಹರಟೆಯಲ್ಲಿ ಕಳೆಯಬಾರದು.

ಅರಿವು ಅಪಾರ. ಕಲಿಕೆ ಕಡಮೆ. ಕಲಿಯಲಿರುವ ಕಾಲವಂತೂ ಇನ್ನೂ ಕಡಮೆ. ಹೀಗಿರುವಾಗ ಇರುವ ಇಲ್ಲವೇ ಸಿಗುವ ವಿರಾಮ ಸಮಯವನ್ನು ಕೆಲಸಕ್ಕೆ ಬಾರದ ಕೀಳು ಮಾತುಕತೆಗಳಲ್ಲಿ ಕಾಲಹರಣ ಮಾಡಿದರೆ ಆಗುವ ಅಪಾಯಗಳನ್ನು ಊಹಿಸುವುದೂ ಕಷ್ಟ. ಒಂದು ದೇಶದ ಪ್ರಗತಿಗೆ ಇರುವ ಗಂಡಾಂತರಗಳಲ್ಲಿ ಸೋಮಾರಿಗಳಿಂದ, ಅಲ್ಲಸಲ್ಲದ ಟೀಕೆಗಳಲ್ಲಿ ಪ್ರವೃತ್ತರಾಗುವವರಿಂದ ಆಗುವಂತಹ ಗಂಡಾಂತರವೇ ದೊಡ್ಡದು, ಘೋರವಾದುದು. ಪರಸ್ಪರ ದೂಷಣೆ, ಆಪಾದನೆ, ಪ್ರತ್ಯಾಪಾದನೆ, ಅವರು ಹಾಗೆ ಹೀಗೆ ಎಂಬ ಇದ್ದ ಇಲ್ಲದ ಆರೋಪಗಳನ್ನು ಹೇರುವುದು—ಇಂತಹ ಗೊಡ್ಡು ಸಂಭಾಷಣೆಗಳಲ್ಲಿ ಮನೆ, ಹೋಟೆಲು, ಸಿನಿಮಾ, ಉದ್ಯಾನವನಗಳಲ್ಲಿ, ಕಡೆಗೆ ಉದ್ಯೋಗ ಮಾಡುವ ಕಚೇರಿಗಳಲ್ಲಿಯೂ ಜನ ತೊಡಗುತ್ತಿರುವುದನ್ನು ಕಂಡಿದ್ದೇವೆ. ಎಂಥ ಭಯಾನಕ ನಿರಾಶೆಯ ಚಿತ್ರವದು!

ಬಸ್ಸಿಗೆ ಕ್ಯೂ ನಿಂತಾಗ, ವಾಹನಗಳಲ್ಲಿ ಪ್ರಯಾಣಿಸುವಾಗ ಜನರ ಕೈಯಲ್ಲೊಂದು ಪುಸ್ತಕ ಹಿಡಿದು ಓದುವವರ ಸಂಖ್ಯೆ ಶೂನ್ಯದ ಕಲ್ಪನೆ ತಂದುಕೊಡುತ್ತದೆ. ಮನೆಯಲ್ಲಿ ಗಂಡಸರು ಕಾರ್ಯಗೌರವ ನಿಮಿತ್ತವಾಗಿ ಹೊರಗೆ ಹೋದಾಗ ಹೆಂಗಸರು ಕೂಡ ಒಡವೆ ಉಡಿಗೆ ತೊಡಿಗೆಗಳಿಂದ ಹಿಡಿದು, ಅ ಕ್ಕ ಪ ಕ್ಕ ದ ಮನೆಯವರ ಬಿರುಕುಗಳನ್ನು ಎಣಿಸಿ ಗುರುತಿಸಿ ಉತ್ಪ್ರೇಕ್ಷಿಸುವಲ್ಲಿ ತೊಡಗಿ ಆಗದ ಹೋಗದ ಕೆಲಸದಲ್ಲಿ ಪರ್ಯವಸಾನವಾಗುವುದು ಅಪರೂಪವಲ್ಲ.

ಕಮಲಾ ಹಂಪನಾ

ನಗರಗಳಲ್ಲಿಯೂ ಕೂಡ ಮಹಿಳಾ ಸಮಾಜಗಳನ್ನು ಮಾಡಿಕೊಂಡರೂ ಆ ಸಮಾಜ ಸಂಪೂರ್ಣಾರ್ಥದಲ್ಲಿ ಸದ್ವಿನಿಯೋಗವಾಗುತ್ತಿಲ್ಲ. ಅಲ್ಲಿಯೂ ಅತ್ಯಾಧುನಿಕ ಫ್ಯಾಶನ್ನಿನ ಸಾಧಕ ಬಾಧಕಗಳ ವಿಶ್ಲೇಷಣೆಯೇ ಹೊರತು, ಇತ್ತೀಚೆಗೆ ಹೊರಬಂದ ಅತ್ಯುತ್ತಮ ಹೊತ್ತಗೆಯೊಂದರ ವಿವೇಚನೆ ನಡೆಯುವುದಿಲ್ಲ. ಯಾರೇ ಇಬ್ಬರು ವ್ಯಕ್ತಿಗಳು ಸೇರಿದರೂ, ಒಂದೆರಡು ನಿಮಿಷ ಯೋಗಕ್ಷೇಮದ ವಿಚಾರಕ್ಕೆ ಬಿಟ್ಟರೆ, ಉಳಿದ ಸಮಯವನ್ನೆಲ್ಲ ಅವರು ಒಟ್ಟಿಗೆ ಮಾತನಾಡುತ್ತಿರುವ ತನಕ ಗ್ರಂಥಗಳ ವಿಷಯ ಕುರಿತು ಮಾತನಾಡಲು ಮೀಸಲಿಡಬೇಕು. ಎಲ್ಲಿಯವರೆಗೆ ಜನತೆ ಇತ್ತ ಗಮನ ಹರಿಸುವುದಿಲ್ಲವೋ ಅಲ್ಲಿಯತನಕ ಲೇಖಕರ ಶ್ರಮವೆಲ್ಲ ಅಸಾರ್ಥಕ.

ಊರುಕೇರಿಗಳಲ್ಲೆಲ್ಲ ಇಂದು ನಮ್ಮ ನಾಡಿನಾದ್ಯಂತ ಹೊಟೆಲುಗಳೂ ಸಿನಿಮಾಗಳು ಬೀಡಿ ಸಿಗರೇಟು, ಅಂಗಡಿಗಳೂ, ಹೆಂಡಮಾರುವ ಬಾರುಗಳೂ ಪ್ರಾರಂಭವಾಗುತ್ತಿವೆ. ಇದು ದುರ್ದೈವ ಎನ್ನುವುದಕ್ಕಿಂತ ಎಲ್ಲ ಕೇರಿಗಳಲ್ಲೂ ಗ್ರಂಥ ಭಂಡಾರಗಳನ್ನು ತೆರೆಯದಿರುವುದು ದೊಡ್ಡ ದುರಾದೃಷ್ಟವೆನ್ನಬಹುದು. ಪಾಳಿಯಲ್ಲಿ ಗಂಟೆಗಟ್ಟಲೆ ನಿಂತು ಟಿಕೆಟ್ ಸಿಗದಿದ್ದರೆ ಕಡೆಗೆ ಕಾಳಸಂತೆಯಲ್ಲಿ ಹೆಚ್ಚು ದುಡ್ಡು ಕೊಟ್ಟಾದರೂ ಸಿನಿಮಾ ನೋಡುವ ಜನರಿದ್ದಾರೆ. ಅವರನ್ನೂ ಆ ದೃಶ್ಯವನ್ನೂ ಕಂಡಾಗಲೆಲ್ಲ ನನಗೆ ಗ್ರಂಥ ಭಂಡಾರಗಳಿಗೆ ಎಂದು ಜನ ಹೀಗೆ ಸಾಲಾಗಿ ನಿಂತು ಪ್ರವೇಶ ಪಡೆದು ಅಲ್ಲಿನ ಜ್ಞಾನದ ಪ್ರಯೋಜನ ಹೊಂದುವ, ಪುಸ್ತಕದಂಗಡಿ ಮುಂದೆ ನಿಂತು ನನಗೆ ತನಗೆಂದು ಪುಸ್ತಕಕೊಳ್ಳುವ ಭಾಗ್ಯದ ದಿನಗಳು ಬರುವುದೋ ಎಂಬ ಆಲೋಚನೆ ಬರುತ್ತಿರುತ್ತದೆ.

ಸರಕಾರವೂ ಈ ದಿಕ್ಕಿನಲ್ಲಿ ಓದುಗನಿಗೆ ಪ್ರೋತ್ಸಾಹ ಕೊಡಬಹುದು. ಉತ್ತಮ ಬೆಳೆ ಬೆಳೆದವರಿಗೆ, ಕೈತೋಟ ಮಾಡುವವರಿಗೆ ಬಹುಮಾನ ನೀಡಿ ಉತ್ತೇಜಿಸುತ್ತಿದ್ದಾರೆ. ಅದರಂತೆ ಉತ್ತಮ ಗ್ರಂಥ ಭಂಡಾರಗಳನ್ನು ಪಡೆದ ಮನೆಯವರಿಗೆ ಬಹುಮಾನಗಳನ್ನು ಕೊಡಬಹುದು. ಇದರಿಂದ ಇತರರಿಗೂ ಸ್ಫೂರ್ತಿ ಬರಲು ಅವಕಾಶವಿದೆಯಲ್ಲದೆ ಓದುವ ಕಡೆಗೆ ಜನತೆಯ ಗಮನ ಸೆಳೆದಂತಾಗುತ್ತದೆ. ಸರಕಾರ ಮನೆಕಟ್ಟಲು ವಾಹನಕೊಳ್ಳಲು ಸಾಲ ಕೊಡುತ್ತದೆ. ಅದೇ ರೀತಿ ಪುಸ್ತಕ ಕೊಳ್ಳಲು ಸಾಲ ಕೊಟ್ಟು ಓದುಗನಿಗೆ ಸಹಾಯ ಮಾಡಬಹುದು.

ಸರಕಾರ ಸಾಹಿತ್ಯ–ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ವತಿಯಿಂದ ಗದುಗಿನ ಭಾರತ ಜೈಮಿನಿ ಭಾರತ ಹರಿಶ್ಚಂದ್ರ ಕಾವ್ಯವನ್ನು ಕಡಿಮೆ ಬೆಲೆಯಲ್ಲಿ ಮುದ್ರಿಸಿ ಎಲ್ಲ ಓದುಗನಿಗೂ ದೊರೆಯುವಂತೆ ಮಾಡಿದ್ದು ಮೆಚ್ಚತಕ್ಕದ್ದು. ಇತ್ತೀಚೆಗೆ ಮಹಾಕವಿ ಕುವೆಂಪುರವರ ರಾಮಾಯಣ ದರ್ಶನಂ ಕಾವ್ಯವನ್ನು ಸುಲಭ ಬೆಲೆ ಆವೃತ್ತಿಯಲ್ಲಿ ಹೊರತಂದುದು ತುಂಬ ಸಂತೋಷ. ಪಂಪಭಾರತ ಗದಾಯುದ್ಧ ಶಾಂತಿಪುರಾಣ ಮೊದಲಾದ ಹಳಗನ್ನಡ ಕಾವ್ಯಗಳನ್ನೂ ಸುಲಭ ದರದಲ್ಲಿ ಓದುಗನಿಗೆ ಸಿಗುವಂತೆ ಮಾಡಬೇಕು. ಓದುಗನ ಹೊರೆ ಇಳಿದು ಓದುವ ಹಂಬಲ ಈಡೇರುತ್ತದೆ.

ದೇಶದಲ್ಲಿ ಎಲ್ಲೋ ಕೆಲವು ಜನ ವಿದ್ಯಾವಂತರಾದರೆ ಸಾಲದು. ಎಲ್ಲ ಜನರೂ ಓದು ಬಲ್ಲವರಾಗಬೇಕು. ಇದರಿಂದ ಎಲ್ಲರೂ ಉದ್ಯೋಗಕ್ಕೇ ಹೋಗಬೇಕೆಂದರ್ಥವಲ್ಲ. ನೇಗಿಲಯೋಗಿಯೂ ವಿದ್ಯಾವಂತನಾಗಬೇಕು. ಹೊಲದಲ್ಲಿ ಗೇದು ಮನೆಗೆ ಬಂದ ಒಕ್ಕಲಮಗ ತನ್ನ ದಣಿವನ್ನು ಒಂದು ಉತ್ತಮ ಹೊತ್ತಗೆಯನ್ನು ಓದಿ ನಿವಾರಿಸಿಕೊಂಡು ಆನಂದಿಸುವಂತಾಗಬೇಕು. ಸಿಹಿತಿಂಡಿ ತಿನಿಸುಗಳನ್ನು ಮಾಡಿ ಮನೆಯವರು ಹಬ್ಬದ ದಿನಗಳಲ್ಲಿ ಸಂತೋಷಿಸುವಂತೆ ಹೊಸ ಪುಸ್ತಕ ಕೊಂಡು ಸುಖಪಡಬೇಕು. ಕಡೆಗೆ ಜನತೆಯ ವಾಚನಾಭಿರುಚಿ ಎಷ್ಟು ಬೆಳೆಯಬೇಕೆಂದರೆ ಪ್ರತಿಯೊಂದು ಮನೆಮನೆಯೂ ಒಂದೊಂದು ಸಣ್ಣ ಗ್ರಂಥ ಭಂಡಾರಗಳನ್ನು ಹೊಂದಿರಬೇಕು.

ಯಾವ ಕನ್ನಡಿಗನ ಬಾಯಲ್ಲಿ ವಚನ, ಕೀರ್ತನೆ, ಕಾವ್ಯದ ಕೆಲವು ಪದ್ಯಗಳಾದರೂ ಬರುವುದಿಲ್ಲವೋ ಆತ ಕನ್ನಡಿಗನೆ? ಎಂದು ಸಂಶಯ ಪಡಬೇಕು. ಯಾವ ಕನ್ನಡಿಗನ ಮನೆಯಲ್ಲಿ ಕೆಲವಾದರೂ ಕನ್ನಡ ಕೃತಿಗಳಿಲ್ಲವೋ ಅದು ಕನ್ನಡಿಗನ ಮನೆಯೇ ಎಂದು ಪ್ರಶ್ನಿಸುವಂತಾಗಬೇಕು. ಒಳ್ಳೆಯ ಮನೆ ಕಟ್ಟಿಸಿ, ವಸ್ತ್ರ ಆಭರಣ ಕೊಂಡು ತೊಟ್ಟು ತೋರಿಸಿ ಪ್ರದರ್ಶಿಸಿ ಆನಂದಿಸುವಂತೆ ಒಳ್ಳೆಯ ಪುಸ್ತಕಗಳನ್ನು ಓದಿ, ಕೊಂಡು ಓದಿ ಮನೆಯಲ್ಲಿ ಶೇಖರಿಸಿ ಹರ್ಷಿಸುವಂತಾಗಬೇಕು.

ಮಾನವನ ಜನ್ಮ ಸಮಗ್ರವಾಗಿ ಸರಿಯಾಗಿ ರೂಪಗೊಳ್ಳಬೇಕಾದರೆ ಓದುವುದರ ಪಾತ್ರ ಹಿರಿದು. ಅಕ್ಷರಸ್ಥರ ಸಂಖ್ಯೆ ಹೆಚ್ಚಬೇಕು. ಸಾಕ್ಷರರು ಗ್ರಂಥಗಳನ್ನು ಪ್ರೀತಿಸಬೇಕು, ಓದಬೇಕು. ಓದುವ ಹವ್ಯಾಸ ಜನತೆಯಲ್ಲಿ ಹೆಚ್ಚಿದಷ್ಟೂ ರಾಷ್ಟ್ರಜೀವನದ ಆರೋಗ್ಯ ಅಭಿವೃದ್ಧಿಯಾಗುತ್ತದೆ.

ಇದೆಲ್ಲ ಸರಿಯೆ, ಓದುಗರು ಹೆಚ್ಚಬೇಕೆಂಬ ದಿಶೆಯಲ್ಲಿ ನೋಡಿದಾಗ. ಈಗ ಇರುವ ಓದುಗರೇಕೆ ಹೆಚ್ಚಿನ ಪ್ರಯೋಜನ ಪುಸ್ತಕಗಳಿಂದ ಪಡೆಯುತ್ತಿಲ್ಲ ಎಂಬ ಪ್ರಶ್ನೆಯಿದೆ. ಇದಕ್ಕೆ ಕನ್ನಡ ನಾಡಿನ ಚೌಕಟ್ಟಿಗೆ ಬದ್ಧ ಳಾಗಿ ಕೆಲವು ಕುಂದುಕೊರತೆಗಳನ್ನು ತಿಳಿಸಬಯಸು ತ್ತೇನೆ.

ಸಾರಸ್ವತ ಲೋಕದ ಸಮಸ್ಯೆಗಳು ಚತುಷ್ಕೋನಾತ್ಮಕ ವಾಗಿವೆ ; ಓದುಗ, ಬರೆಹಗಾರ, ಪ್ರಕಾಶಕ ಹಾಗೂ ಮಾರಾಟಗಾರ. ಇಲ್ಲಿ ಓದುಗನ ನಿಟ್ಟಿನ ವಿವೇಚನೆ ಯಷ್ಟೇ ಕೊಟ್ಟಿದೆ. ಆನಂದಕ್ಕಾಗಿ ಓದುವ ಉತ್ತಮ ಹವ್ಯಾಸವಿರುವ ಓದುಗನ ಕೆಲವು ಕಷ್ಟಗಳಿವೆ. ಓದುವ ಹವ್ಯಾಸ ಒಳ್ಳೆಯದು. ಕೊಂಡು ಓದುವ ಪದ್ಧತಿ ಇನ್ನೂ ಒಳ್ಳೆಯದು. ಗ್ರಂಥಾಲಯಗಳಿಗೆ ಹೋಗಿ ಓದುವ ಓದುಗ ನಿಗೆ ಅಲ್ಲಿ ತನಗೆ ಬೇಕಾದ ಗ್ರಂಥ ಸಿಗದಿರಬಹುದು. ಇದ್ದರೂ ಹೆಚ್ಚಿನ ಪ್ರತಿಗಳಿಲ್ಲದಿರಬಹುದು. ಪ್ರತಿ ಯೊಂದು ಗ್ರಂಥಾಲಯವೂ ಒಂದೊಂದು ಪುಸ್ತಕದ ಅಯ್ದಾರು ಪ್ರತಿಗಳನ್ನಾದರೂ ಹೊಂದಿರಬೇಕು. ಓದುಗ ನಿಗೆ ಆಗ ಬೇಕೆನ್ನಿಸಿದ ಪುಸ್ತಕ ದೊರೆತೀತು.

ಎಲ್ಲರೂ ಎಲ್ಲ ಕಾಲದಲ್ಲೂ ಪುಸ್ತಕ ಭಂಡಾರಗಳಿಗೇ ಹೋಗಿ ಓದಲು ಆಗದಿರಬಹುದು. ಅದಕ್ಕೆ ಬೇರೆ ವ್ಯವ ಸ್ಥೆಯೇ ಆಗಬೇಕು. ಪುಸ್ತಕದಂಗಡಿಗಳಲ್ಲೂ ಓದುಗನಿಗೆ ಕನ್ನಡದ ಎಲ್ಲ ಗ್ರಂಥಗಳೂ ಬೇಕೆಂದಾಗ, ಜೇಬಿನಲ್ಲಿ ಹಣವಿದ್ದಾಗ ಸಿಗುವ ವ್ಯವಸ್ಥೆಯಾಗಬೇಕು. ಇಂದು ಪುಸ್ತಕ ವ್ಯಾಪಾರಿ ತನಗೆ ಹೆಚ್ಚಿನ ರಿಯಾಯಿತಿ–ವಿನಾ ಯಿತಿಯನ್ನೂ ಯಾವ ಬಗೆಯ ಪುಸ್ತಕ ಗಿಟ್ಟಿಸಿ ಕೊಡು ವುದೋ ಅಂಥ ಅಗ್ಗದ ಮುಗ್ಗಿದ ಹೊತ್ತಗೆಗಳನ್ನೇ ಮಾರುವುದು ಅನೇಕ ಕಡೆ ಕಂಡುಬರುತ್ತಿದೆ. ಇದು ತಪ್ಪ ಬೇಕು. ಓದುಗನಿಗೆ ಪುಸ್ತಕದಂಗಡಿಯೂ ಮಾರ್ಗದರ್ಶನ ಮಾಡಬೇಕು. ಅಷ್ಟೇ ಅಲ್ಲದೆ ಪ್ರತಿಯೊಂದು ಪುಸ್ತಕ ದಂಗಡಿಯವರೂ ವಿದ್ಯಾವಂತರಾಗಿದ್ದು ಓದುಗನಿಗೆ ಉತ್ತಮ ಕೃತಿಗಳತ್ತ ದಾರಿ ತೋರುವವರಾಗಬೇಕು.

ಮನೆಯಲ್ಲೇ ಕೊಂಡು ತಂದು ಓದುವಂತಾಗಬೇಕು, ಸರಿಯೆ. ಅಂಥ ಪ್ರತಿಯೊಬ್ಬರೂ ಓದಬಹುದಾದ ತುಷ್ಟಿ ಪುಷ್ಟಿ ನೆಮ್ಮದಿ ಕೊಡಬಲ್ಲಂಥ ಉತ್ತಮ ಪುಸ್ತಕಗಳು ಹೆಚ್ಚಾಗಿ ರಚಿತವಾಗಬೇಕು. ಎಲ್ಲ ವಿಷಯಕ್ಕೂ ಸಂಬಂಧಿಸಿ ಬರೆದ ಬೇರೆ ಬೇರೆ ಗ್ರಂಥಗಳಿರಬೇಕು. ಇಂಥ ಪುಸ್ತಕ ಓದುಗನಿಗೆ ಒದಗಿಸುವ ಹೊಣೆ ಬರೆಹಗಾರನದು. ವಿಚಾರ ಸಂಪತ್ತಿನಿಂದ ಕೂಡಿದ ಗ್ರಂಥಗಳಿರಬಹುದೆನ್ನಿ ಅದರ ಪ್ರಚಾರವೂ ಆಗಬೇಕು. ಜನತೆಗೆ ಅಂತಹು ದೊಂದು ಪುಸ್ತಕವಿದೆಯೆಂಬುದು ಗೊತ್ತಾಗಬೇಕು. ಸಂಶೋಧನಾಂಗ, ಬೋಧನಾಂಗ, ಪ್ರಸಾರಾಂಗಗಳಂತೆ ಅವುಗಳಿಗೆ ಪೂರಕವಾದ ಪ್ರಚಾರಾಂಗವೂ ಆಗಬೇಕು. ಯಾವ ಪುಸ್ತಕಗಳು ಯೋಗ್ಯವಾದುವೆಂಬುದರ ತಿಳಿವಳಿಕೆ ಯನ್ನು ಪ್ರಚಾರಾಂಗ ಉಂಟುಮಾಡಿಕೊಡಬೇಕು.

ಈ ಸಮಸ್ಯೆಗೆ ಇನ್ನೊಂದು ಮುಖವೂ ಇದೆ. ಓದುಗ ನಿಗೆ ಕೆಲವು ಪುಸ್ತಕಗಳನ್ನು ಕೊಳ್ಳಲು ಮನಸ್ಸಿರುತ್ತದೆ. ಪುಸ್ತಕದ ಬೆಲೆ ಗಗನಗಾಮಿ ! ಬೆಲೆ ಆಕಾಶಕುಸುಮ ವಾಗಿದ್ದರೆ ದೇವರೇ ಗತಿ. ಇಂದು ಕನ್ನಡ ನಾಡಿನಲ್ಲಿ ದುಬಾರಿ ಬೆಲೆಯಿಡುವ ಕಾಯಿಲೆಯೊಂದು ಹರಡಿ ಕೊಂಡಿದೆ. ಒಂದು ರೂಪಾಯಿ ಬೆಲೆ ಬಾಳುವ ಇಲ್ಲವೇ ಇಡಬಹುದಾದ ಪುಸ್ತಕಕ್ಕೆ ನಾಲ್ಕೈದು ರೂಪಾಯಿ ಬೆಲೆ ಇಟ್ಟಿರುವ ಉದಾಹರಣೆಗಳು ಬೇಕಾದಷ್ಟು. ಯದ್ವಾ ತದ್ವಾ ಬೆಲೆಯಿಡುವ ಈ ಹಗಲು ದರೋಡೆಕಾರರನ್ನು ಸರ್ಕಾರ ನಿಯಂತ್ರಿಸಬೇಕು. ಐವತ್ತು ಪುಟದ ಪುಸ್ತಕಕ್ಕೆ ಐದು ರೂಪಾಯಿ ಬೆಲೆಯಿಡುವುದು ಓದುಗನನ್ನು ಲೂಟಿ ಮಾಡುವುದಕ್ಕಾಗಿಯೋ ? ಜನತೆಯ ಹಣ ಸುಲಿಗೆ ಮಾಡಲೊ ? ಕೇವಲ ಗ್ರಂಥ ಭಂಡಾರಗಳಿಗೆ ತಳ್ಳಿ ಹಣ ಕೊಳ್ಳೆ ಹೊಡೆಯುವ ಕಳ್ಳ ಸಂತೆಕೋರರ ವ್ಯಾಪಾರವಿದು.

ಸಾಂಸ್ಕೃತಿಕ ಸ್ವಾಸ್ಥ್ಯ ಜೀವನಕ್ಕೆ ವಾಚಕರ ಕೊರತೆ ಯೆಂಬುದು ರೋಗ ತಗಲಿದಂತೆ. ಆದರೆ ಈಗ ಹಾಲಿ ಇರುವ ವಾಚಕರದೇ ಅದ ಬನ್ನ ಬವಣೆಗಳನ್ನು ಇಲ್ಲಿ ಹೇಳುತ್ತಿರುವುದು. ಓದುಗನದು ನಿರ್ಮಲವಾದ ಮನಸ್ಸು, ಸಾಧಾರಣವಾಗಿ. ಅವನ ಮನಸ್ಸನ್ನು ಸರಿಯಾದ ದಾರಿ ಯಲ್ಲಿ ತಿದ್ದಿ ಮುನ್ನಡೆಸುವ ಹೊಣೆ ಬರೆಹಗಾರನದು, ಪ್ರಕಾಶನದು. ಅನೇಕ ವೇಳೆ ಲೇಖಕ–ಪ್ರಕಾಶಕರು ಸೇರಿ ಓದುಗನನ್ನೇ ದೂರುವುದೂ ದೂಷಿಸುವುದೂ ಉಂಟು : “ಓದುಗ ಕೊಳ್ಳುವುದಿಲ್ಲ, ಹಣ ಬೇರೆಯದಕ್ಕೆ ಸುರಿಯು ತ್ತಾನೆ, ನಾವು ಬರೆಯಬೇಕೇಕೆ ? ಓದುಗ ನಿರಭಿಮಾನಿ” ಇತ್ಯಾದಿ. ಆದರೆ ಓದುಗನೂ ಎಂಥ ನಿರಾಶೆಯ ಸುಳಿಯಲ್ಲಿ ತೊಳಲಾಡುತ್ತಿದ್ದಾನೆಂಬುದನ್ನೂ ಉಳಿದವರೂ ತಿಳಿಯ ಬೇಕು. ಓದುಗ “ನನ್ನನ್ನು ನೀವೆಲ್ಲ ಸೇರಿ ಪೋಷಣೆಯ ಬದಲು ದುಬಾರಿ ಬೆಲೆಯಿಟ್ಟು ಶೋಷಣೆ ಮಾಡುತ್ತಿ ದ್ದೀರಿ, ನಿರ್ಲಕ್ಷ್ಯ ತೋರಿದ್ದೀರಿ”—ಎಂದು ಪ್ರತ್ಯುತ್ತರ ಕೊಟ್ಟರೆ ಅಚ್ಚರಿಯಿಲ್ಲ.

ಇಂದಿನ ಕನ್ನಡ ಓದುಗ ಒಂದು ದೃಷ್ಟಿಯಲ್ಲಿ ಪಥ ಭ್ರಾಂತ, ಪಥಭ್ರಷ್ಟ. ಆಧುನಿಕ ಕಾವ್ಯದ ಒಂದು ಪಾಲು ಅವನಿಗೆ ಅರ್ಥವಾಗದೆ ಅಗಮ್ಯ ಏಳುಸುತ್ತಿನ ಕೋಟೆ ಯಾಗಿ ನಿಂತಿದೆ. ಅದರ ಮುಕ್ಕಾಲು ಭಾಗ ನಾರೀಕೇಳ ಪಾಕವೋ ಇಲ್ಲವೇ ಪಾಕವೇ ಅಲ್ಲವೋ – ಅದೂ ತಿಳಿಯ ದಾಗಿದೆ. "ನವ್ಯಕಾವ್ಯ ಅರ್ಥ ಮಾಡಿಕೊಳ್ಳಬಲ್ಲ ಬುದ್ಧಿ ವಂತ ಓದುಗರಿಗಾಗಿ ಮಾತ್ರ ರಚಿತವಾಗಿದೆ" ಎಂದು ಅದನ್ನು ಬರೆದವರ ವಿವರಣೆ. ಬುದ್ಧಿವಂತರನ್ನು ಕೇಳಿದರೆ, ಅವರಲ್ಲಿ ಕೆಲವರು ಹೀಟಿ ನಾಲಗೆಯ ನವ್ಯ ಕವಿಗಳ ಕೋಪಕ್ಕೆ ಪಕ್ಕಾಗಬಾರದೆಂಬ ಅಂದರಿಕೂ ಮಂಚಿವಾಡು ಅನಂತಯ್ಯ ಬುದ್ಧಿಯಿಂದ ತೆಪ್ಪಗಾಗುವರು. ಮತ್ತೆ ಕೆಲ ವರು 'ನಮಗೂ ಅರ್ಥವಾಗುವುದಿಲ್ಲ' ಎಂದು ತಲೆಯಾಡಿ ಸುವರು. ಪರಸ್ಪರ ಪ್ರಶಂಸೆಯ ಪರಾಕು ಹೇಳಿಕೊಂಡು ತಂತಮ್ಮ ಗೆಳೆಯರ ಬಳಗದ ಪತ್ರಿಕೆಗಳಲ್ಲಿ, ತಮ್ಮ ಮಾತು ನಡೆಯುವ ಪತ್ರಿಕೆಗಳಲ್ಲಿ ತಮ್ಮ ಕವನಗಳನ್ನು ಕೊಂಡಾಡಿಸಿಕೊಂಡಿರುವುದಷ್ಟೇ ಈಚೆಗೆ ನಡೆದಿರುವ ಸಂಗತಿ. ಇದರಿಂದ ಓದುಗನಿಗೆ ತುಂಬ ವಂಚನೆಯಾಗಿದೆ. ನವ್ಯ ಸಾಹಿತ್ಯ ಈಗ ಹಳೆಯ ಹಳಸಿದ ಮಾತು. ಅದು ಕಳೆದ ಮೂರು ದಶಕಗಳಿಂದ ರಚಿತವಾಗುತ್ತ ಬಂದಿದೆ. ಅದರ ಬಗೆಗೆ ಸಾಕಷ್ಟು ಚರ್ಚೆಯಾಗಿದೆ. ಇಷ್ಟೆಲ್ಲಾ ಆಗಿಯೂ ಮೇಲಿನ ಮಾತುಗಳನ್ನು ತೀರ ಅನಿವಾರ್ಯ ವಾಗಿ ಹೇಳಬೇಕಾಗಿದೆ, ಓದುಗರ ಪರಿಯಿಂದ. ಕಲಿತ ಓದುಗರಿಗೂ ಎದುರಾಗುವ ಅರ್ಥ ಮಾಡಿಕೊಂಡು ಆನಂದಿಸಲಾಗದ ಸಮಸ್ಯೆಯಿದು. ಈ ಸಮಸ್ಯೆಯ ಪರಿ ಹಾರಕ್ಕೂ ಅದಕ್ಕೆ ಸಂಬಂಧಿಸಿದ ಜನ ಶ್ರಮಿಸಿ ಓದುಗನ ನೆರವಿಗೆ ನಿಲ್ಲಬೇಕಲ್ಲವೆ?

ಇನ್ನು ಓದುಗ ಕೂಡ ಲೇಖಕ–ಪ್ರಕಾಶಕರಿಗೆ ಸಹಕರಿ ಸುವ ಒಂದೆರಡು ಮುಖ್ಯ ಮಾತಿವೆ. ಶಾಲಾ ಕಾಲೇಜು ಗಳಲ್ಲಿ ಬಹುಮಾನ ವಿತರಣೆಗೆ ಪುಸ್ತಕಗಳನ್ನೇ ಕಡ್ಡಾಯ ಕೊಡಬೇಕು. ಸಭೆ ಸಮಾರಂಭಗಳಲ್ಲಿ ಹಾರ ತುರಾಯಿ ಗಳ ಬದಲು ಪುಸ್ತಕ ಕೊಡಬೇಕು. ಮದುವೆ ಮುಂಜ ಮೊದಲಾದ ಕಡೆಗಳಲ್ಲಿ ಪುಸ್ತಕದ ಉಡುಗೊರೆ ನೀಡ ಬೇಕು. ಇದರಿಂದ ಆಗುವ ಪ್ರಯೋಜನಗಳು ವಿಪುಲ. ಶಾರದೆಯ ತೇರನ್ನು ಮನೆಮನೆಗೂ ಮುಟ್ಟಿಸುವಲ್ಲಿ ಲೇಖಕ ಪ್ರಕಾಶಕ ಪುಸ್ತಕ ಮಾರಾಟಗಾರರಷ್ಟೇ ಅಲ್ಲದೆ ಓದುಗನೂ ಮುಂದಾಗಬೇಕಾದುದು ಅಗತ್ಯ, ಅನಿ ವಾರ್ಯ.

ಪುಸ್ತಕಗಳು ನಮ್ಮ ವಿಚಾರಪರತೆಯನ್ನು ನಾಶಮಾಡುವ ಸಂಭವ ಉಂಟು.

—ಎಮರ್ಸನ್

*   *   *

ನಮ್ಮ ಅಂತರಂಗದ ಪುಸ್ತಕ ತೆರೆಯುವ ತನಕ ಉಳಿದೆಲ್ಲ ಪುಸ್ತಕಗಳು ಉಪಯೋಗಕ್ಕೆ ಬಾರವು.

—ಸ್ವಾಮಿ ವಿವೇಕಾನಂದ

*   *   *

ಒಂದು ವರ್ಷ ಹಳೆಯದಾಗದ ಪುಸ್ತಕ ಓದಬೇಡ; ಹೆಸರು ಗಳಿಸಿದ ಪುಸ್ತಕ ಓದಬೇಡ; ನಿನಗೆ ಇಷ್ಟವಿಲ್ಲದ ಪುಸ್ತಕ ಓದಬೇಡ.

—ಎಮರ್ಸನ್

ಭಾರತ ರಾಷ್ಟ್ರೀಯ ಗ್ರಂಥಸೂಚಿ : ವಿವಿಧ ಭಾಷೆಯ ಪುಸ್ತಕಗಳು
1958 - 70

	1958	1959	1960	1961	1962	1963	1964	1965	1966	1967	1968	1969	1970
ಅಸ್ಸಾಮಿ	—	105	70	182	179	94	38	80	68	113	236	284	118
ಬಂಗಾಳಿ	1082	1085	1022	1040	1233	1111	1084	883	916	1254	1193	1310	914
ಇಂಗ್ಲಿಷ್ (ಸಾಮಾನ್ಯ)	1845	1576	1689	1902	1773	1847	1810	1760	1840	2183	2239	2101	1909
ಇಂಗ್ಲಿಷ್ (ಸರಕಾರಿ ಪ್ರಕಟಣೆ)	1455	1668	1469	1978	1563	1789	1746	1579	1211	2046	2298	1787	1731
ಗುಜರಾತಿ	650	665	594	603	605	621	675	532	412	412	663	602	536
ಹಿಂದಿ	2048	1861	1578	1433	1903	2172	2056	1371	1499	1432	2158	2016	1836
ಕನ್ನಡ	324	400	297	318	549	472	354	174	284	307	721	663	705
ಮಲೆಯಾಳಂ	587	544	552	531	449	445	491	412	459	500	615	971	765
ಮರಾಠಿ	823	704	708	813	1030	1263	996	1016	1210	1359	1158	1217	1046
ಒರಿಯ	139	190	171	188	216	444	212	183	122	251	438	318	128
ಪಂಜಾಬಿ	248	125	174	365	244	126	198	148	123	148	308	102	295
ಸಂಸ್ಕೃತ	222	149	102	248	317	225	264	143	190	91	—	—	116
ತಮಿಳು	611	484	540	576	611	756	540	662	491	483	613	501	665
ತೆಲುಗು	716	485	436	647	589	827	694	512	395	723	922	612	623
ಉರ್ದು	264	262	243	311	188	192	262	143	389	113	121	168	163
ಒಟ್ಟು	11014	10303	9645	11135	11449	12384	11420	9598	9609	11415	13683	12652	11550

ಪುಸ್ತಕೋದ್ಯಮಕ್ಕೆ ಹಿಡಿದಿರುವ ಗ್ರಹಣ ಯಾವುದು?

ವೇದಗಳೆ ಜಗತ್ತಿನ ಆದಿಗ್ರಂಥಗಳಂತೆ. ಎಂದಮೇ
ಸಹಸ್ರ ಸಹಸ್ರ ವರ್ಷಗಳ ಇತಿಹಾಸ ನಮ್ಮ ಪುಸ್ತ
ಕೋದ್ಯಮಕ್ಕೆ ಇದೆ ಎಂದಹಾಗಾಯಿತು. ಆದರೆ ಆಗಿ
ಗ್ರಂಥಗಳು ಓಲೆಗರಿಗಳಲ್ಲಿರುತ್ತಿದ್ದುವು; ಇಲ್ಲವೆ ಶಿಲ
ಶಾಸನಗಳಾಗಿದ್ದುವು.

ಕಾಗದದ ಬಳಕೆಯು ಬಂದದ್ದು ಕ್ರಿ. ಶ. ೧೩ನೆಯ
ಶತಮಾನದಿಂದ ಈಚೆಗೆ. ಭಾರತದಲ್ಲಿ ಮುದ್ರ
ಪ್ರಾರಂಭವಾಗಿ ಸುಮಾರು ೪೦೦-೪೫೦ ವರ್ಷಗಳಾಗಿವ

ವರ್ಷದಿಂದ ವರ್ಷಕ್ಕೆ ಜಗತ್ತಿನಲ್ಲಿ ಈಗ ಪುಸ್ತಕೋ
ದ್ಯಮ ಅಗಾಧವಾಗಿ ಬೆಳೆಯುತ್ತ ಇದೆ. ಪ್ರಗ
ಸಾಧಿಸಿದೆ. ಪುಸ್ತಕಗಳು ಅಂದವಾಗಿ ಹೊರಬರಲ
ಕಾರಣವಾಗಿರುವ ಮುದ್ರಣ ವಿಧಾನದಲ್ಲಂತೂ ಜಗತ್ತು
ಹೊಸ ಹೊಸ ವಿಕ್ರಮವನ್ನು ಸಾಧಿಸುತ್ತ ಇದೆ. ಓದು
ಹವ್ಯಾಸವನ್ನು ಬೆಳೆಸುವ ಪತ್ರಿಕೆಗಳು ಪುಸ್ತಕಗ
ಪ್ರಸಾರ ಅಧಿಕಗೊಳ್ಳಲು ಬಹುಮಟ್ಟಿಗೆ ಕಾರ
ವಾಗಿವೆ.

ಆದರೂ ಒಂದೇ ಸಾವಿರ

ಇಷ್ಟಾದರೂ, ಪತ್ರಿಕೆಗಳ ಪ್ರಸಾರ ನಮ್ಮ ದೇಶದ
ಸಾಕಷ್ಟಿದ್ದರೂ, ಪುಸ್ತಕಗಳು ಮಾತ್ರ ಒಂದು ಸಾವಿ
ಪ್ರತಿಗಳಿಗೆ ಮೇಲೆ ಖರ್ಚಾಗುತ್ತ ಇಲ್ಲ. ಭಾರತೀಂ
ಭಾಷೆಗಳಲ್ಲಿ ಕೆಲವೊಂದರ ಪ್ರಗತಿ ವೇಗವಾಗಿರಬಹುದ
ಇಂಗ್ಲಿಷಿನ ಸ್ಥಾನ ಮಾನ ಬೇರೆ. ಹಿಂದಿ ರಾಷ್ಟ್ರಭಾಷೆ
ಅದರ ತಲೆಯ ಮೇಲೆ ಮುತ್ತಿನ ಕಿರೀಟ. ಕೇರ
ಬಂಗಾಳ, ಇತ್ಯಾದಿ ಕೆಲವೊಂದು ಪ್ರಾಂತ್ಯಗಳಲ್ಲಿ ನಮಗಿಂ
ವಿದ್ಯಾವಂತರು ಜಾಸ್ತಿ ಇರಬಹುದು. ಆದುದರಿಂ
ಅಲ್ಲಿನ ಪರಿಸ್ಥಿತಿ ನಮಗಿಂತ ಸ್ವಲ್ಪ ಉತ್ತಮವಿರಬಹುದ

ತುಂಬ ಜನಪ್ರಿಯರಾಗಿರುವ ಲೇಖಕರ ಪ್ರಶ್ನೆ ಬೇ
ಪಠ್ಯಪುಸ್ತಕಗಳ ಪಾಲಂತೂ ಕೆಲವರಿಗೆ ಮಾತ್ರ ಬತ್ತ
ಕಣಜ. ಇಲ್ಲಿ ಅದರ ಪ್ರಶ್ನೆಯೂ ಇಲ್ಲ, ಅದ
ಉತ್ತರವೂ ಇಲ್ಲ.

ಏನೇ ಹೇಳಿದರೂ ಸುತ್ತುಹಾಕಿ ಬಳಸಿಕೊಂ
ಬಂದರೂ ಬರಹದಿಂದಲೇ ಜೀವಿಸುವ ಲೇಖಕರನ

ಶೇಷನಾರಾಯಣ

ನ್ನಡನಾಡಿನಲ್ಲಿ ಮಾತ್ರವಲ್ಲ, ಇಡೀ ಭರತಖಂಡದಲ್ಲಿಯೇ ರಳೆಣಿಸಿ ಲೆಕ್ಕಹಾಕಿ ಹೇಳಿಬಿಡಬಹುದು.

ಮೂವತ್ತೆರಡು ಸಾವಿರ ಜನರಿಗೆ ಂದೇಪುಸ್ತಕ

೧೯೭೧ರ ಜನಗಣತಿಯಂತೆ ಭಾರತದ ಜನಸಂಖ್ಯೆ ತ್ತಿರ ಹತ್ತಿರ ಐವತ್ತೈದು ಕೋಟಿ. ಕಲ್ಕತ್ತಾದಲ್ಲಿರುವ ಷ್ಟ್ರೀಯ ಗ್ರಂಥಾಲಯದ ವರದಿಯ ಪ್ರಕಾರ ಕಳೆದ ರ್ಷ ಭಾರತದಲ್ಲಿ ಪ್ರಕಟವಾದ ಒಟ್ಟು ಪುಸ್ತಕಗಳ ಂಖ್ಯೆ ೧೭, ೩೨೦. ಈ ಪ್ರಕಾರ ಲೆಕ್ಕಹಾಕಿ ನೋಡಿ ರೆ ಮೂವತ್ತೆರಡು ಸಾವಿರ ಜನಕ್ಕೆ ಒಂದು ಪುಸ್ತಕ ಂದಹಾಗಾಯಿತು. ಎಂದಮೇಲೆ ಲೇಖಕರು ಬದುಕುವು ಲ್ಲಿ? ಪ್ರಕಾಶಕನ ಪಾಡೇನು? ಒಂದು ಸಾವಿರ ಪ್ರತಿ ಳು ಕೂಡ ಖರ್ಚಾಗುವುದಿಲ್ಲ ಎಂದು ಮಾತುಮಾತಿಗೂ ಣಗುವವರಿಗೆ ಈಗ ಉತ್ತರ ಸಿಕ್ಕಿತಲ್ಲ !

ವಿಶ್ವದ ಪ್ರಮುಖ ನಾಡುಗಳ ಪೈಕಿ ಭಾರತ ಪುಸ್ತಕ ್ರಕಟಣೆಯಲ್ಲಿ ತೀರಾ ಹಿಂದುಳಿದಿದೆಯಂತೆ. ಇದು ಜ್ಞರು ಹೇಳುವ ಮಾತು. ಬರೀ ಮಾತಲ್ಲ, ಅಂಕಿ ಂಶಗಳ ಆಧಾರದ ಮೇಲೆ.

ಭಾರತೀಯ ಭಾಷೆಗಳ ಸಮಾಚಾರ ಬಿಟ್ಟು ಈಗ ಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

ನಾವು ಎಂದರೆ ಕನ್ನಡಿಗರು ಮೂರು ಕೋಟಿ ನರಿದ್ದೇವೆ. ನಮ್ಮ ನಾಡಿನಲ್ಲಿ, ಕಳೆದ ವರ್ಷದಲ್ಲಿ, ಷ್ಟು ಪುಸ್ತಕಗಳು ಪ್ರಕಟವಾಗಿವೆ ಎನ್ನುತ್ತೀರಾ? ತ್ತು ಸಾವಿರ? ಐದು ಸಾವಿರ? ಅದು ಹೇಗೆ ಸಾಧ್ಯ? ಂದಿಯಂಥ ಅತ್ಯಧಿಕ ಜನ ಮಾತನಾಡುವ ಭಾಷೆ ಮಲ್ಲಿಯೇ ಕಳೆದ ವರ್ಷ ೨೯೪೫ ಪುಸ್ತಕಗಳು ಪ್ರಕಟ ಾಗಿದ್ದರೆ ಇನ್ನು ನಮ್ಮ ಪ್ರಶ್ನೆ ಎಲ್ಲಿಂದ ಬರಬೇಕು?

ಕಳೆದ ವರ್ಷ, ಕನ್ನಡದಲ್ಲಿ ೭೯೧ ಪುಸ್ತಕಗಳು ಮಾತ್ರ ್ರಕಟವಾಗಿವೆ. ಇದನ್ನೂ ಸರಾಸರಿ ಲೆಕ್ಕಹಾಕುತ್ತ ಲೆಕೆಡಿಸಿಕೊಳ್ಳುವುದು ಬೇಕಾಗಿಲ್ಲ.

ಹೀಗೇಕೆ? ಜಗತ್ತಿನಲ್ಲಿ ಆದಿಗ್ರಂಥವನ್ನು ಹೊರತಂದ ರು, ಪಾಶ್ಚಾತ್ಯರಿಗಿಂತ ಮೊದಲೇ ನಾವು ನಾಗರಿಕ ಾಗಿದ್ದೆವು ಎಂದು ಹೇಳಿಕೊಳ್ಳುವವರು, ಹರಪ್ಪಾ ೊಹೆಂಜದಾರೊ ಇತ್ಯಾದಿಗಳು ಇದ್ದೇ ಇವೆ ನಮ್ಮ ಂಸ್ಕೃತಿಯನ್ನು ಸಾರಲು, ಇಂಥ ಜನ, ನಾವು, ಜ್ಞಾನ ವನ್ನು ಬೆಳಗಬಲ್ಲ ಪುಸ್ತಕಗಳ ವಿಚಾರದಲ್ಲಿ ಮಾತ್ರ ತೀರ ಹಿಂದುಳಿದಿದ್ದೇವಲ್ಲ ! ಇದಕ್ಕೆ ಕಾರಣವೇನು ?

ಇದು ಕಾರಣ

ಕಾರಣ ಇಷ್ಟೇ. ನಮ್ಮ ದೇಶ ಬಡ ದೇಶ. ನಮ್ಮ ಸಂಸ್ಕೃತಿ ನಮ್ಮ ಧರ್ಮ ಎಲ್ಲ ದೊಡ್ಡದು ನಿಜ. ಆದರೆ ನಾವು ಬಡವರು. ನಮ್ಮ ಮಾಸಿಕ ವರಮಾನ ಸರಾಸರಿ ಕೇವಲ ಐವತ್ತು ರೂಪಾಯಿಗಳು ಮಾತ್ರ. ಇದು ಅಂತೆ ಕಂತೆ ಸಮಾಚಾರವಲ್ಲ. ತಜ್ಞರ ಲೆಕ್ಕಾಚಾರದ ಪ್ರಕಾರವೇ.

ಐವತ್ತು ರೂಪಾಯಿ ವರಮಾನ ಇರುವವನು ಇನ್ನು ಪುಸ್ತಕಗಳನ್ನು ಹೇಗೆ ಕೊಳ್ಳಬಲ್ಲ? ಅವನಿಗೆ ಅನ್ನ ಪ್ರಶ್ನೆಯೇ ಹೆಚ್ಚಿನದು. ಅದು ಹಗಲಿರಳೂ ಬೆಟ್ಟವಾಗಿ ಅವನ ಮುಂದೆ ನಿಲ್ಲುತ್ತದೆ. ಆಮೇಲೆ ವಸತಿ, ರೋಗ ರುಜಿನಕ್ಕೆ ಮದ್ದು, ಯಂತ್ರ ಮಂತ್ರಕ್ಕೆ ದುಡ್ಡು, ಆಮೇಲೆ ಸಾಲದ ಚಟ; ಸಾಲಗಾರರ ತಗಾದೆ. ಇನ್ನು ಅವನು ಪುಸ್ತಕ ಕೊಳ್ಳುವುದಕ್ಕೆ ಹಣವೆಲ್ಲಿ? ಬಿಡುವೆಲ್ಲಿ? ಮನಸ್ಸೆಲ್ಲಿ?

ಇದು ಭಾರಿ ಸಮಸ್ಯೆ, ಸಮಸ್ಯೆಯ ಒಂದು ಮುಖ.

ನಾಣ್ಯಕ್ಕೆ ಎರಡು ಮುಖಗಳಲ್ಲವೆ? ಈ ಬದಿ, ಆ ಬದಿ ಹೀಗೆ. ಇನ್ನೊಂದು ಭಾರಿ ಸಮಸ್ಯೆಯೂ ಇದೆ. ಇಷ್ಟೇ ತೊಡಕಿನದು. ಮೊದಲಿನದು ವರಮಾನದ ಪ್ರಶ್ನೆಯಾದರೆ ಎರಡನೆಯದು ವಿದ್ಯಾವಂತರ ಪ್ರಶ್ನೆ ;

ನಮ್ಮ ದೇಶದಲ್ಲಿ ವಿದ್ಯಾವಂತರ ಸಂಖ್ಯೆ ಶೇಕಡ ೨೪ ಮಾತ್ರ. ಇವರಲ್ಲಿ 'ರಾಮಣ್ಣ, ಸಿದ್ದಣ್ಣ, ಪುಟ್ಟರಾಜು' ಎಂದು ದಪ್ಪದಪ್ಪವಾಗಿ ಸಹಿ ಮಾಡುವವರಿಂದ ಹಿಡಿದು ಎಂ.ಎ., ಪಿಹೆಚ್.ಡಿ., ವರೆಗೆ ಎಲ್ಲರೂ ಸೇರುತ್ತಾರೆ! ಸಹಿ ಮಾಡಲು ಬರುವವನೂ ವಿದ್ಯಾವಂತರ ಸಾಲಿಗೇ ಸೇರುತ್ತಾನೆ. ವಿಶ್ವವಿದ್ಯಾನಿಲಯದ ಕುಲಪತಿಯೂ ಅದೇ ಸ್ಥಾನದಲ್ಲಿದ್ದಾನೆ;–ಎಂದರೆ ಸರಕಾರದ ಲೆಕ್ಕದ ಖಾತೆಗಳಲ್ಲಿ ; ಅಂಕಿ ಅಂಶಗಳ ಪುಟಪುಟಗಳಲ್ಲಿ.

ಇಂಥವರನ್ನೂ ಜೊಳ್ಳು ಪಳ್ಳು ಎಂದು ತೂರಿದರೆ ಆಗ ಉಳಿಯುವುದು ಹತ್ತೋ ಹದಿನೈದೋ !

ನಮ್ಮಲ್ಲಿ ಪುಸ್ತಕಗಳು ಯಾಕೆ ಖರ್ಚಾಗುವುದಿಲ್ಲ ಎನ್ನುವುದಕ್ಕೆ ಉತ್ತರ ಇಲ್ಲಿದೆ. ಇದು ನೈಜ ಚಿತ್ರಣ.

ಇನ್ನು ನಮ್ಮ ನಾಡಿನ ಸಿರಿವಂತರ ಪ್ರಶ್ನೆ. ತಮ್ಮ ನಾಯಿಗಾಗಿ ನಮ್ಮ ಸಿರಿವಂತರು ಬೇಕಾದಷ್ಟು ಖರ್ಚು

ಮಾಡಿಯಾರು. ಕಾಲು ಒರಸುವ ಫುಟ್‌ರಗ್ಗನ್ನು ಕಾಶ್ಮೀರದಿಂದಲೇ ತರಿಸಿಯಾರು. ತಮ್ಮ ಕಪಾಟಿನ ಬೊಂಬೆಗಳು ಜಪಾನ್, ಅಮೆರಿಕದವೇ ಆಗಬೇಕು. ಆದರೆ ಅವರ ಮನೆಯಲ್ಲಿ ಹತ್ತು ಒಳ್ಳೆಯ ಪುಸ್ತಕಗಳು ಇರುವುದಿಲ್ಲ. ಇದ್ದರೂ ಇಂಗ್ಲಿಷಿನಲ್ಲಿ ಅಷ್ಟು ಇರಬಹುದೇನೋ ? ಆದರೆ ಕನ್ನಡ ಪುಸ್ತಕಗಳನ್ನು ಓದುವುದೂ, ಶೇಖರಿಸುವುದೂ ಅವರಿಗೆ ಭಾರೀ ಅವಮಾನ.

ಭಾಷೆಗಳು ಜಾಸ್ತಿ, ಸರ್ಕಲ್ ಚಿಕ್ಕದು

ನಮ್ಮಲ್ಲಿ ವಿದ್ಯಾವಂತರು ಕಡಿಮೆ. ವರಮಾನ ಇಲ್ಲ ಎನ್ನುವುದು ಒಂದು ಪ್ರಶ್ನೆಯಾದರೆ–ನಮ್ಮ ದೇಶದಲ್ಲಿ ಭಾಷೆಗಳು ಜಾಸ್ತಿ, ನಮ್ಮ ಸರ್ಕಲ್ ಚಿಕ್ಕದು ಎಂದೂ ಹೇಳಬೇಕಾಗುತ್ತದೆ. ಹಿಂದಿ ಬಿಟ್ಟರೆ ಮಿಕ್ಕ ಭಾರತೀಯ ಭಾಷೆಗಳವರಾದ ನಾವು, ಮೂರು ನಾಲ್ಕು ಐದು ಕೋಟಿ ಹೀಗೆ ಪ್ರಜಾಸಂಖ್ಯೆಯುಳ್ಳವರಾಗಿದ್ದೇವೆ.

ಈ ವಾದ ಸರಿಯಲ್ಲ, ರಷ್ಯದಲ್ಲಿ ನಮಗಿಂತ ಹೆಚ್ಚಿನ ಭಾಷೆಗಳು ಇವೆ. ಅಲ್ಲಿನ ಪುಸ್ತಕ ಪ್ರಕಟಣೆಗಳ ವೇಗ ಅದ್ಭುತವಾಗಿದೆ ಎಂದು ಹೇಳುವವರೂ ಇದ್ದಾರೆ.

ನಿಜ. ಪುಸ್ತಕ ಪ್ರಕಟಣೆಯಲ್ಲಿ, ವಿಶ್ವದಲ್ಲಿ, ಮೊದಲನೆಯ ಸ್ಥಾನ ರಷ್ಯಕ್ಕೇ ಮೀಸಲು. ಎ ರ ಡ ನೆ ಯ ದು ಇಂಗ್ಲಿಷಿಗೆ.

ಸಂಖ್ಯೆಯಲ್ಲಿ ರಷ್ಯ ಮೊದಲನೆಯ ಸ್ಥಾನದಲ್ಲಿದ್ದರೂ, ವೈವಿಧ್ಯತೆಯಲ್ಲಿ ಇಂಗ್ಲಿಷಿಗೇ ಪ್ರಥಮ ಸ್ಥಾನ. ರಷ್ಯನ್ ಸಾಹಿತ್ಯದಲ್ಲಿ ಒಂದೇ ದಿಕ್ಕಿನದು ಒಂದೇ ಬಗೆಯದು ಇಂಥವೇ ಜಾಸ್ತಿ–ಗಾರ್ಕಿ ಟಾಲ್‌ಸ್ಟಾಯ್ ಇಂಥವರು ಆಗಿಹೋದಮೇಲೆ, ಕಮ್ಯೂನಿಸಂ ಬಂದಮೇಲೆ, ಅಭಿಪ್ರಾಯಕ್ಕೆ ವಿಚಾರಕ್ಕೆ ಅಲ್ಲಿ ಬೆಲೆ ಇಲ್ಲ ಎನ್ನುವವರೂ ಇದ್ದಾರೆ. ಇದು ಅಭಿಪ್ರಾಯದ ಮಾತು ; ರಾಜಕೀಯದ ಪ್ರಶ್ನೆ–ಈ ಲೇಖನಕ್ಕೆ ಅಂಥ ವಿಚಾರಗಳು ಅನವಶ್ಯಕ.

ಅನವಶ್ಯಕವಾದ ಆ ವಿಚಾರಗಳು ಹೇಗೇ ಇರಲಿ, ಇಷ್ಟಂತೂ ನಿಜ. ಅಲ್ಲಿ ನಮಗಿಂತ ವಿದ್ಯಾವಂತರು ಜಾಸ್ತಿ. ನಮ್ಮಲ್ಲಿ ಅದೂ ಕಡಿಮೆ ಇದೂ ಕಡಿಮೆ. ನಾವು ಶಂಖ ಜಾಗಟೆ ಹಿಡಿದಿರುವ ದಾಸಯ್ಯಗಳೇ.

ಮೊದಲು ಎಲ್ಲರಿಗೂ ಬೇಕಾಗಿರುವುದು ಅನ್ನ ಪ್ರಶ್ನೆ. ಅದು ಸರಿಹೋಗದಿದ್ದಮೇಲೆ ಪುಸ್ತಕಕ್ಕೆ ಸಂಬಂಧಿಸಿದ ಸಮಸ್ಯೆ ಎಲ್ಲಿ ಬಗೆಹರಿದೀತು ? ಹಸಿದಿರುವವನಿಗೆ ರೊಟ್ಟಿ ಬೇಕೋ ? ಪುಸ್ತಕ ಬೇಕೋ ?

ಇದು ವಾಸ್ತವವಾದ ವಿಚಾರ.

ಓಸಿಯೆವರೇ ಜಾಸ್ತಿ

ಇಷ್ಟೆಲ್ಲ ಪ್ರಶ್ನೆಗಳು ನಮಗೆ ಕಾಡುತ್ತಿರುವಾಗ, ಒಂ ಸಾವಿರ ಪ್ರತಿಗಳೇ ನಮಗೆ ದೊಡ್ಡ ನಿಧಿಯಾಗಿರುವಾ ಇನ್ನು ಓದುಬಲ್ಲವರನ್ನು ಭಾಗಮಾಡಿದರೆ ನಮ್ಮ ಸರಾಸರಿ ೭೫% ರಷ್ಟು ಓಸಿಯವರೇ ಜಾಸ್ತಿ.

ನಾವು ಒಂದು ಪತ್ರಿಕೆಯನ್ನು ಹಿಡಿದು, ಮನೆಯ ಪುರುಸೊತ್ತಿಲ್ಲ ಎಂದು ಬಸ್ ಸ್ಟಾಪಿನಲ್ಲಿ ನಿಂತರೆ [ನವ ಬಸ್ಸುಗಳೂ ನಮ್ಮ ಪುಸ್ತಕಗಳ ಹಾಗೆಯೇ ಅವು ವೇ ವಷ್ಟೆ] ನಮ್ಮ ಆ ಬದಿ ಈ ಬದಿಯಲ್ಲಿ ಇಬ್ಬರು ಶ್ರೀದೇ ಭೂದೇವಿಯಾಗಿ ನಿಲ್ಲುತ್ತಾರೆ. ತಲೆಹಾಕುತ್ತಾರೆ. ಬ ನೋಡುತ್ತಾರೆ. ಕೊನೆಗೆ ಅವರ ಕಾಟ ತಡೆಯಲಾರ ವಿಧಿ ಇಲ್ಲದೆ ನಾವೇ ಹಿಂದಕ್ಕೆ ಸರಿದು ಅವರಿಗೇ ಆ ಪತ್ರಿ ಯನ್ನು ಕೊಟ್ಟುಬಿಡಬೇಕಾಗುತ್ತದೆ.

ನಮ್ಮ ಜನ ಐದು ನಿಮಿಷಗಳಿಗೆ ಐದು ಬೀಡಿ ಎ ದಾರು, ಇಲ್ಲವೇ ಮೂರು ಸಿಗರೇಟಾದರೂ. ಒಂ ಗಂಟೆ ಕ್ಯೂನಿಂತು ಮೂರು ರೂಪಾಯಿ ತೆತ್ತು ಸಿನಿಮ ನೋಡಿಯಾರು. ಆದರೆ ಒಂದೂವರೆ ರೂಪಾಯಿ ಕೊಟ ಒಂದು ಪುಸ್ತಕ ಕೊಳ್ಳಲು ಅವರು ಸಿದ್ಧರಿಲ್ಲ.

ಅಷ್ಟು ಕೃಪಣರು !

ಇದು ಸಮಸ್ಯೆಯ ಮತ್ತೊಂದು ಮುಖ.

ರಾಹು ಕೇತುಗಳು

ಸೂರ್ಯ ಚಂದ್ರರಿಗೆ ಗ್ರಹಣ ಹಿಡಿಯುವುದು ರಾ ಕೇತು ಇವರಿಬ್ಬರಿಂದಲೇ ಅಲ್ಲವೆ ? ಆದರೆ ನಮ್ಮ ಪುಸ್ತ ಗಳಿಗೆ ಗ್ರಹಣ ಬಡಿದಿರುವುದು ಒಂದೆರಡು ಕಾರಣಗಳಿ ಅಲ್ಲ. ನಾನಾ ವಿಧದಿಂದ.

ಅವಿದ್ಯಾವಂತರು, ಬಡವರು-ಇಂಥ ಪ್ರಶ್ನೆಯಾಯಿತ ಹೋಗಲಿ, ಇರುವ ಪುಸ್ತಕಗಳಾದರೂ ಸರಿಯಾಗಿ ವಿತರ ಆಗುತ್ತಿವೆಯೇ ? ಇದಕ್ಕೆ ಅಡ್ಡಿಯಾಗಿರುವ ತೊಡಕುಗ ಯಾವುವು ? ಯಾರಿಂದ ?

ಲೇಖಕರು, ಪ್ರಕಾಶಕರು, ಮಾರಾಟಗಾರರು ಎಲ್ಲರ ಈ ತೊಡಕಿಗೆ ಕಾರಣರಾಗಿದ್ದಾರೆ.

ಅದು ಹೇಗೆ ?

ಅವಸರದ ಸಾಹಿತ್ಯ, ಕಳಪೆ ಸೃಷ್ಟಿ, ಅತ್ತೆಕಾಲ ನಿರೂಪಣೆ, ವಿಮರ್ಶೆಯಲ್ಲಿ ಅಪ್ರಾಮಾಣಿಕತೆ, ಮಾ

ದ್ದನ್ನೆ ಮಾಡುವ ಕೆಲಸ, ತಲೆ ಚಿಟ್ಟುಹಿಡಿಸುವ ಸಂಗ್ರಹಗಳು, ಲೇಖಕರಲ್ಲಿ ಗುಂಪುಗುಳಿತನ, ಅವರನ್ನೂ ಇವರನ್ನೂ, ಟೀಕಿಸುವ ಕೆಲಸ–ಇವು ಲೇಖಕರಿಂದ.

ಇದರಿಂದ ಓದುಗನಿಗೆ ನಿರಾಸೆಯಾಗುತ್ತದೆ. ಬೇಸರವಾಗುತ್ತದೆ. 'ಕನ್ನಡದಲ್ಲೇನಿದೆ. ಮಹಾ ?' ಎಂದು ಅವನು ಕೇಳುವಂತಾಗುತ್ತದೆ.

ಅಶ್ಲೀಲ ಕಳಪೆ ಸಾಹಿತ್ಯಗಳ ಪ್ರಕಟಣೆ, ಕತ್ತೆಯನ್ನೆ ಕುದುರೆ ಎಂದು ಹೇಳುವ ಎಕ್ಸ್‌ಚೇಂಜ್ ವ್ಯವಹಾರ, ಎರಡು ರೂಪಾಯಿನ ಪುಸ್ತಕಕ್ಕೆ ಹತ್ತು ರೂಪಾಯಿನ ಬೆಲೆ ಇಡುವ ಸಾಹಸ, ಗ್ರಂಥಾಧಿಕಾರಿಗಳಿಗೆ ಹತ್ತೋ ಹದಿನೈದೊ ಪರ್ಸಂಟ್ ಕೊಟ್ಟು ಸರಿಪಡಿಸಿಕೊಳ್ಳುವ ವಿಚಾರ–ಇವು ಪ್ರಕಾಶಕರಿಂದ.

ಏನು ಮಹಾ? ಹುಲ್ಲನ್ನು ಬೆಟ್ಟವಾಗಿ ಮಾಡುವುದು ! ಆರ್‌ಟಿಓ ಆಫೀಸ್, ಪಿಡಬ್ಲ್ಯುಡಿ, ಸಬ್‌ರಿಜಿಸ್ಟ್ರಾರ್ ಆಫೀಸ್, ಪೊಲೀಸು-ಇಲ್ಲಿ ನಡೆಯುವಷ್ಟು ದಗಾ ಗ್ರಂಥಾಲಯದಲ್ಲಿ ಎಲ್ಲಿ ನಡೆಯುತ್ತದೆ? ಎಂದು ಕೇಳುವವರೂ ಇದ್ದಾರೆ.

ಅದೂ ಒಂದು ವಿಧದಲ್ಲಿ ನಿಜವೇ.

ಪುಸ್ತಕಭಾಗ್ಯ

ಆದರೆ ಇಷ್ಟಕ್ಕೇ ನಾವು ನಿರಾಶರಾಗಬೇಕಾಗಿಲ್ಲ. ಒಳ್ಳೆಯ ಪುಸ್ತಕಕ್ಕೆ ಎಂದೂ ಬೆಲೆ ಇದ್ದೇ ಇದೆ. ಒಳ್ಳೆಯ ಪುಸ್ತಕ ಎಂದಮೇಲೆ ಅದನ್ನು ಬರೆದವನೂ ಪ್ರಕಟಿಸಿದ ಪ್ರಕಾಶಕನೂ ಅದೇ ಸಾಲಿಗೆ ಸೇರುತ್ತಾನಷ್ಟೆ. ಐದು ಸಾವಿರ ಪ್ರತಿಗಳು ಮುದ್ರಣಮಾಡಿ ಅದು ಖರ್ಚಾಗುವ ಹಾಗೆ ಮಾಡುವುದೇನೂ ಕನ್ನಡ ನಾಡಿನ ವಿಸ್ತಾರಕ್ಕೆ ದೊಡ್ಡ ಸಾಹಸವಾಗುವುದಿಲ್ಲ. ಆದರೆ ಇದಕ್ಕೆ ಸರಕಾರದ ನೆರವೂ ಬೇಕಾಗುತ್ತದೆ. ಸಾರ್ವಜನಿಕರಿಂದಲೂ ಸಹಕಾರ ಅತ್ಯಗತ್ಯವಿದೆ.

ಯಾವ ಸರಕಾರವೂ ಸಾಧಾರಣವಾಗಿ ಭಾಷೆ ಸಂಸ್ಕೃತಿ ಸಾಹಿತ್ಯ ಇತ್ಯಾದಿಗಳ ವಿಚಾರವಾಗಿ ಶ್ರದ್ಧೆ ವಹಿಸಿಯೇ ವಹಿಸುತ್ತದೆ. ಅದನ್ನು ಜನತೆ ಸರಿಯಾಗಿ ಉಪಯೋಗಿಸಿಕೊಳ್ಳಬೇಕಷ್ಟೆ. ಜನ ಎಚ್ಚರ ವಹಿಸಿದರೆ ಇದು ಸುಲಭವಾಗುತ್ತದೆ ; ಸಫಲವಾಗುತ್ತದೆ.

ಜನಪ್ರಿಯ ಲೇಖಕರು ಯಾರ ನೆರವೂ ಇಲ್ಲದೆ ತಮ್ಮ ಸ್ವಸಾಮರ್ಥ್ಯದಿಂದಲೆ ವಿಕ್ರಮ ಸಾಧಿಸುತ್ತಾರೆ ; ಸಾಧಿಸಿದ್ದಾರೆ. ಕನ್ನಡನಾಡಿನಲ್ಲೂ ಅಂಥವರು ಇದ್ದಾರೆ. ಭಾರತದ ಬೇರೆ ಪ್ರಾಂತ್ಯಗಳಲ್ಲಿಯೂ ಇದ್ದಾರೆ. ರಾಜಾಜಿಯವರ ಮಹಾಭಾರತ ಇದುವರೆವಿಗೆ ಏಳು ಲಕ್ಷ ಪ್ರತಿಗಳು ಮುದ್ರಣವಾಗಿದೆ. ಮಹಾಭಾರತ ಎಷ್ಟೊ ಜನ ಕೈಯಾಡಿಸಿದ್ದೇ. ಇವರದು ಯಾಕೆ ಇಷ್ಟು ಜನಪ್ರಿಯ ಆಗಬೇಕು ? ಇವರ ಕಥೆಯಲ್ಲಿ ಸೊಗಸಿದೆ. ಹೇಳುವ ರೀತಿಯಲ್ಲಿ ಕೌಶಲವಿದೆ. ಓದುಗನನ್ನು ಅವರ ಬರಹ ಮರುಳು ಮಾಡುತ್ತದೆ.

ಮಹಾಭಾರತ ಇಂಗ್ಲಿಷಿನಲ್ಲಿರುವುದರಿಂದ ಖರ್ಚಾಯಿತು ಎನ್ನಬಹುದು. ಆದರೆ ನಮ್ಮ 'ಮೈಸೂರು ಮಲ್ಲಿಗೆ' ಹತ್ತು ಹದಿನೈದು ಮುದ್ರಣ ಕಂಡಿದೆಯಲ್ಲ.

ಹೀಗೆ ಇನ್ನೂ ಅನೇಕ ಗ್ರಂಥಗಳು ನಮ್ಮಲ್ಲಿ ದೇಶಭಾಷೆಗಳಲ್ಲಿ ಜನಪ್ರಿಯ ಆಗಿವೆ; ಮತ್ತೆ ಮತ್ತೆ ಮುದ್ರಣಗಳನ್ನು ಕಂಡಿವೆ. ಯಾವ ದುಷ್ಟ ಶಕ್ತಿಯೂ ಇದಕ್ಕೆ ಅಡ್ಡಕಟ್ಟೆ ಹಾಕುವ ಹಾಗಿಲ್ಲ. ಕಾರಣ ಆ ಲೇಖಕನ ಅಂತಃಸ್ಸತ್ವ ಮತ್ತು ಬರವಣಿಗೆಯ ಪ್ರಭಾವದಿಂದ ಆ ಕೃತಿ ಮೇರುವಾಗಿ ಬೆಳೆದು ನಿಲ್ಲುತ್ತದೆ ; ಬೆಳೆದು ನಿಂತಿದೆ.

ಒಂದು ಭೂಮಿಯಲ್ಲಿ ಬೆಳೆ ತೆಗೆಯಬೇಕಾದರೆ ಅಷ್ಟೂ ಕಷ್ಟಪಡಬೇಕಾಗುತ್ತದೆ. ವ್ಯವಸಾಯ ಹದವಾಗಬೇಕು. ಒಳ್ಳೆಯ ಬೀಜ ಬಿತ್ತಬೇಕು ; ಅದು ಸಸಿಯಾಗಿ ಗಿಡವಾಗಿ ಫಲ ಕೊಟ್ಟಮೇಲೆ ಪ್ರಾಣಿಗಳ ಉಪಟಳ ಇದ್ದೇ ಇರುತ್ತದೆ. ಮಿಡಿಚೆಗಳೂ ಹಾರಿ ಬರುತ್ತವೆ; ತಂಡತಂಡವಾಗಿ.

ಆದರೆ ರೈತ ಹಾಗೆಂದು ಸೋಲನ್ನಪ್ಪಿಯಾನೆ ? ಎಲ್ಲ ವಿಘ್ನಗಳನ್ನೂ ಎದುರಿಸಿ ದಾಟಿ ಬೆಳೆ ತೆಗೆಯುತ್ತಾನೆ.

ಪುಸ್ತಕವೂ ಅಷ್ಟೆ. ಅದೂ ಒಂದು ಹುಲುಸಾದ ಬೆಳೆ. ರಾಗಿ ಜೋಳ ಬತ್ತ ದೈಹಿಕ ಹಸಿವನ್ನು ಇಂಗಿಸಿದರೆ, ಪುಸ್ತಕ ನಮ್ಮ ಜ್ಞಾನದ ಹಸಿವನ್ನು ಇಂಗಿಸುತ್ತದೆ. ಹಾಲುತುಂಬಿದ ಕಾಳಿಗೆ ಮಿಡಿಚೆ ಹಾರಿ ಬರದೆ ಮತ್ತೆಲ್ಲಿಗೆ ಅದು ಹೋದೀತು ? ಪುಸ್ತಕ ಯಾಕೆ ಯಾವ ಉದ್ಯಮಕ್ಕಾದರೂ ಒಂದೊಂದು ಬಗೆಯ ಗೋಳು ತಾಪತ್ರಯ ಇದ್ದೇ ಇರುತ್ತದೆ.

ಇವೆಲ್ಲವನ್ನೂ ಮೆಟ್ಟಿ ನಿಂತಾಗ ಮಾತ್ರ ಪುಸ್ತಕದಿಂದ ನಮಗೆ ಭಾಗ್ಯ ಲಭಿಸುತ್ತದೆ.

ಯುನೆಸ್ಕೋ – ಪುಸ್ತಕಗಳು ಮತ್ತು ಗ್ರಂಥಾಲಯಗಳು

ಇಂಗ್ಲಿಷ್ ಮೂಲ :
ಶ್ರೀಮತಿ ಆರ್. ಹುಸಮುದ್ದೀನ್
ಕನ್ನಡಕ್ಕೆ :
ಹಿ. ಮ. ಬಸವಯ್ಯ

ವಿಶ್ವದಲ್ಲಿ ಶಾಂತಿ ಮತ್ತು ಭದ್ರತೆಗಳನ್ನು ನೆಲೆಗೊಳಿಸುವ ಸದುದ್ದೇಶದಿಂದ ೧೯೪೫ರಲ್ಲಿ 'ಯುನೆಸ್ಕೋ' ಜನ್ಮ ತಾಳಿತು. ಶಿಕ್ಷಣ, ವಿಜ್ಞಾನ ಹಾಗೂ ಸಂಸ್ಕೃತಿಗಳ ಮಾಧ್ಯಮದಿಂದ ರಾಷ್ಟ್ರಗಳ ಮಧ್ಯೆ ಹೊಂದಾಣಿಕೆಯನ್ನು ಬೆಸೆಯುವ ಗುರಿ ಅದರದು. ದ್ವಿತೀಯ ಮಹಾಯುದ್ಧದ ನಂತರ, ಬಡ ರಾಷ್ಟ್ರಗಳಿಗೆ ಅಷ್ಟಿಷ್ಟು ಆಹಾರ ಮತ್ತು ಔಷಧಿಗಳನ್ನೊದಗಿಸುವುದರ ಮಾತ್ರದಿಂದ ಏನೂ ಆಗದು ಎಂದು ಸಂಯುಕ್ತ ರಾಷ್ಟ್ರಸಂಸ್ಥೆ ಆಲೋಚಿಸಿತು. ಶಾಂತಿಗಾಗಿ, ಎಲ್ಲೆಡೆ ಚೈತನ್ಯ ತುಂಬಲಿಕ್ಕಾಗಿ ಜನರನ್ನು ಪ್ರೋತ್ಸಾಹಿಸಬೇಕಿತ್ತು; ವಿಭಿನ್ನ ಸಂಸ್ಕೃತಿಗಳ ಜನರನ್ನು ಹತ್ತಿರ ತರುವ ಪ್ರಯತ್ನ ಮಾಡಬೇಕಿತ್ತು. ಆ ಚಿಂತನೆಗಳ ಪರಿಣಾಮವಾಗಿ ಯುನೆಸ್ಕೋ ರೂಪಿತಗೊಂಡಿತು.

ಯುನೆಸ್ಕೋದ ವಿಧಿ ನಿಯಮದಲ್ಲಿ ಒಂದು ವಾಕ್ಯ ಹೀಗಿದೆ—"ಜನತೆಯಲ್ಲಿ ಮಾನಸಿಕ ತುಮುಲಗಳು ಪ್ರಬಲಗೊಂಡಂತೆ, ಶಾಂತಿಯನ್ನು ಭದ್ರವಾಗಿ ನೆಲೆಗೊಳಿಸುವ ಆಲೋಚನೆ ಅವರಲ್ಲಿ ಮೂಡುತ್ತದೆ." ಆದ್ದರಿಂದ ಯುನೆಸ್ಕೋ ಮಾನವನ ಮಾನಸಿಕ ಅಭಿವೃದ್ಧಿಗಾಗಿ ಶಾಂತಿ ಮತ್ತು ಪರಸ್ಪರ ತಿಳಿವಳಿಕೆಗಳನ್ನುಂಟುಮಾಡುವುದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸುತ್ತದೆ.

ಅತ್ಯಗತ್ಯ ಸಂಸ್ಥೆ

ಯುನೆಸ್ಕೋದ ಸುಮಾರು ೧೫೫ ಸದಸ್ಯ ರಾಷ್ಟ್ರಗಳು ತಮ್ಮ ಪ್ರತಿನಿಧಿಯ ಅಥವಾ ನಿಯೋಗದ ಮೂಲಕ ಅಂತರಾಷ್ಟ್ರೀಯ ಕಾರ್ಯಾಚರಣೆ ನಡೆಸುವ ವ್ಯವಸ್ಥೆ ಕ್ರಮಬದ್ಧವಾಗಿದ್ದು, 'ಯುನೆಸ್ಕೋ' ಒಂದು ಅತ್ಯಗತ್ಯ ಸಂಸ್ಥೆ ಎನಿಸಿಕೊಂಡಿದೆ. ಸಾಮಾನ್ಯ ಸಮಸ್ಯೆಗಳನ್ನು ಚರ್ಚಿಸಲೋಸುಗ ಈ ಸಂಸ್ಥೆ ಒಂದು 'ಸಾರ್ವಜನಿಕ ಚರ್ಚಾಸ್ಥಳ'ವನ್ನು ಹೊಂದಿದೆ. ಶೈಕ್ಷಣಿಕ, ವೈಜ್ಞಾನಿಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಅದು ಪ್ರೋತ್ಸಾಹ ನೀಡುತ್ತದೆ. ಅದಕ್ಕಾಗಿ ಆಗಾಗ್ಗೆ ಅಂತರಾಷ್ಟ್ರೀಯ ಸಮ್ಮೇಳನಗಳನ್ನು ನಡೆಸುತ್ತದೆ. ಸದಸ್ಯ ರಾಷ್ಟ್ರಗಳಿಗೆ ಅಗತ್ಯವಾದ ಹಣ, ಸಾಮಗ್ರಿಗಳು, ಪುಸ್ತಕಗಳು–ಮುಂತಾದವುಗಳನ್ನೊದಗಿಸುವುದರ ಮೂಲಕ ಸಹಾಯ ಮಾಡುತ್ತದೆ.

ಮೊದಮೊದಲು ಈ ಸಂಸ್ಥೆ ಪ್ರಮುಖ ಕ್ಷೇತ್ರಗಳಲ್ಲಿ ಮಾತ್ರ ಕೈಯಾಡಿಸುತ್ತಿತ್ತು. ಆದರೆ ಈಗ ಅದು ಭೂಯೋಜನೆ ಮತ್ತು ಪುಸ್ತಕಗಳ ಪ್ರಕಟಣೆಯ ಜವಾಬ್ದಾರಿಯನ್ನೂ ಹೊತ್ತುಕೊಂಡಿದೆ.

ಅನಕ್ಷರತೆಯ ನಿರ್ಮೂಲನ

ಯುನೆಸ್ಕೋದ ಪ್ರಾಥಮಿಕ ಕರ್ತವ್ಯಗಳಲ್ಲೊಂದು ಎಂದರೆ ಅನಕ್ಷರತೆಯನ್ನು ಹೋಗಲಾಡಿಸಿ, ಕಡ್ಡಾಯ ಶಿಕ್ಷಣ ಮತ್ತು ಸಂಪೂರ್ಣ ಸ್ವಾತಂತ್ರ್ಯಗಳಿಗೆ ಉತ್ತೇಜನ ನೀಡುವುದು. ರಾಷ್ಟ್ರಗಳ ಮಧ್ಯೆ ಸ್ಥಿರತೆ ಮತ್ತು ಶಾಂತಿಗಳನ್ನುಂಟುಮಾಡಲು ಮತ್ತು ಅಭಿವೃದ್ಧಿ ಹೊಂದಿರುವ—ಹೊಂದುತ್ತಿರುವ ರಾಷ್ಟ್ರಗಳ ನಡುವಣ ಆರ್ಥಿಕ ಬಿಕ್ಕಟ್ಟನ್ನು ಸರಿಪಡಿಸಲು—ಶಿಕ್ಷಣ ಅತಿ ಮುಖ್ಯ

ವಾಗಿದೆ. ಇದರಿಂದ ಜನತೆ ವಿದೇಶಗಳಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ವಿಷಯಗಳಲ್ಲಿ ಹೆಚ್ಚಿನ ಅಧ್ಯಯನ ನಡೆಸಲು ಅವಕಾಶ ಒದಗಿ, ರಾಷ್ಟ್ರ ಅಭಿವೃದ್ಧಿಗೆ ಸಹಾಯಕವಾಗುತ್ತದೆ. ಮನುಷ್ಯನಲ್ಲಿ ವಿಶೇಷ ಬುದ್ಧಿಮತ್ತೆ ಹಾಗೂ ಮಾನಸಿಕ ಸ್ಥಿರತೆಗಳನ್ನು ಏರ್ಪಡಿಸಲು ಶಿಕ್ಷಣ ಅತ್ಯುತ್ತಮ ಮಾಧ್ಯಮವಾಗಿದೆ. ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ದೃಷ್ಟಿಯಿಂದಲೂ ಇದು ಅತ್ಯಂತ ಆವಶ್ಯಕ ಮಾಧ್ಯಮ.

ಶೈಕ್ಷಣಿಕ ಪರಾಮರ್ಶೆ ನಡೆದಾಗ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿನ ವಿದ್ಯಾಭ್ಯಾಸದ ಅನುಕೂಲತೆಗಳು ಯಾವುದಕ್ಕೂ ಸಾಲದು ಎಂಬ ವಿಷಯ ಗಮನಕ್ಕೆ ಬಂತು. ಪರಿಣಾಮವಾಗಿ ಯುನೆಸ್ಕೋ—ಇಪ್ಪತ್ತು ವರ್ಷಗಳ ಅವಧಿಯಲ್ಲಿ ವಿಶ್ವದಲ್ಲೆಲ್ಲ ಉಚಿತ ಶಿಕ್ಷಣ ಏರ್ಪಡಲು, ಅದು ಗುಣದಲ್ಲೂ ಗಾತ್ರದಲ್ಲೂ ವಿಕಾಸ ಹೊಂದಲು, ಪ್ರ ಯ ತ್ನಿ ಸು ವ — ನಿರ್ಧಾರ ಮಾಡಿತು.

ಕುರುಡು ಅನುಕರಣೆ ಸರಿಯಲ್ಲ

ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳನ್ನು ಕುರುಡಾಗಿ ಅನುಕರಿಸುವುದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಭವಿಷ್ಯದ ದೃಷ್ಟಿಯಿಂದ ಅಪಾಯಕರ ಎಂಬುದು ಗಮನಕ್ಕೆ ಬಂದ ಮತ್ತೊಂದು ವಿಷಯ. ವೈಯಕ್ತಿಕವಾಗಿ, ಸಾರ್ವಜನಿಕವಾಗಿ–ರಾಷ್ಟ್ರಗಳ ಮಧ್ಯೆ ಉತ್ತಮ ಸಂಬಂಧವನ್ನು ಏರ್ಪಡಿಸಲು 'ಶಿಕ್ಷಣ' ಒಳ್ಳೆಯ ಕೆಲಸ ಮಾಡಬಲ್ಲ ಕ್ಷೇತ್ರ ಎನಿಸಿತು. ಇದರ ಪ್ರಥಮ ಹಂತವಾಗಿ ಮಾಲಿ ಮತ್ತು ಇರಾನ್‌ಗಳಲ್ಲಿ 'ಪೈಲಟ್ ಯೋಜನೆ' ಪ್ರಾರಂಭವಾಯಿತು. ಸಾಹಿತ್ಯ ಸಂಬಂಧೀ ಕಾರ್ಯಾಚರಣೆ ನಡೆಸುವುದೇ ಅದರ ಉದ್ದೇಶ.

ಪ್ರತ್ಯೇಕ ದೇಶಕ್ಕೆ ಅಗತ್ಯವಾದ ಪರಿಣಾಮಕಾರೀ ಬೋಧನಾಕ್ರಮಗಳ ಸಮಗ್ರ ಪರಿಶೀಲನೆಯನ್ನು ಯುನೆಸ್ಕೋದ ಪರಿಣಿತರು ಮಾಡಿದರು. ೧೯೬೩ರಲ್ಲಿ 'ಶೈಕ್ಷಣಿಕ ಯೋಜನೆಯ ಅಂತರ್‍ರಾಷ್ಟ್ರೀಯ ಸಂಸ್ಥೆ'ಯನ್ನು ಯುನೆಸ್ಕೋ ಸ್ಥಾಪಿಸಿತು. ಶಿಕ್ಷಣ ಕ್ಷೇತ್ರವನ್ನು ಅಭಿವೃದ್ಧಿಪಡಿಸಲೋಸುಗ ಎಲ್ಲಾ ರಾಷ್ಟ್ರಗಳಿಗೆ ಸಹಾಯ ಮಾಡುವುದೇ ಈ ಸಂಸ್ಥೆಯ ಉದ್ದೇಶ. ದೇಶಗಳು ತಮ್ಮ ಕಾರ್ಯಕ್ಕಾಗಿ ಉಪಯೋಗಿಸಿಕೊಳ್ಳಲಿ ಎಂಬ ಯೋಚನೆಯಿಂದ ಐ.ಐ.ಇ.ಪಿ.ಯು 'ಗ್ರಂಥಗಳ ಪಟ್ಟಿ'ಯೊಂದನ್ನು ಪ್ರಕಟಿಸಿತು. ತರಬೇತಿ ಹಾಗೂ ಸಂಶೋಧನೆಗಳ ಸಮಗ್ರ ಸಮೀಕ್ಷೆಯನ್ನು ಇದರಲ್ಲಿ ಮಾಡಲಾಗಿದೆ.

ತರಬೇತಿಹೊಂದಿದ ಉಪಾಧ್ಯಾಯರ ಕೊರತೆ

ಯೋಜಿತ ಕಾರ್ಯಕ್ರಮಗಳನ್ನು ಜಾರಿಗೆ ತರುವುದರಲ್ಲಿ ರಾಷ್ಟ್ರಗಳಿಗೆ ಕಂಡು ಬಂದ ಪ್ರಮುಖ ಕೊರತೆಗಳೆಂದರೆ ತರಬೇತಿ ಹೊಂದಿದ ಉಪಾಧ್ಯಾಯರುಗಳು ಹಾಗೂ ಉಪಯುಕ್ತ ಪಠ್ಯಪುಸ್ತಕಗಳು. ಏಕೆಂದರೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ತಮ್ಮ ಆರ್ಥಿಕ ಸ್ಥಿತಿ ಸುಧಾರಣೆಗೆ ಮಾತ್ರ ಹೆಚ್ಚಿನ ಗಮನ ಕೊಡುತ್ತಿದ್ದವು. ಪರಿಣಾಮವಾಗಿ ಎಲ್ಲೆಡೆ ಆವಶ್ಯಕ ಗ್ರಂಥಗಳ ಅಭಾವ ಉಂಟಾಯಿತು. ಈ ಸಂದರ್ಭದಲ್ಲಿ ಯುನೆಸ್ಕೋ ಕಾರ್ಯೋನ್ಮುಖಗೊಂಡು, ಬೋಧನೆಗೆ ಅಗತ್ಯವಾದ ಸಾಮಗ್ರಿಯನ್ನು ನೀಡುವುದರ ಮೂಲಕ ತನ್ನ ಧ್ಯೇಯವನ್ನು ಸಾರಿತು.

ಇದರ ಪರಿಣಾಮವನ್ನು 'ವಿಜ್ಞಾನ ಬೋಧನೆಗೆ ಯುನೆಸ್ಕೋದ ಉಗಮ ಗ್ರಂಥ' ಎಂಬಂಥ ಪುಸ್ತಕಗಳಲ್ಲಿ ಕಾಣಬಹುದು. ೧೯೫೭ರಲ್ಲಿ ಪ್ರಕಟವಾದ ಈ ಪುಸ್ತಕವು ೨೮ ಭಾಷೆಗಳಿಗೆ ಭಾಷಾಂತರಿಸಲ್ಪಟ್ಟಿತು. ಹೆಚ್ಚು ವೆಚ್ಚವಿಲ್ಲದ ವೈಜ್ಞಾನಿಕ ಪ್ರಯೋಗಗಳಿಗೆ ಮಾರ್ಗ ತೋರಿಸುವ, ಬೋಧನೆಯಲ್ಲಿ ಸೊಗಡು ತುಂಬುವ, ಅದರ ಮೂಲಕ ರಾಷ್ಟ್ರೋನ್ನತಿಗಾಗಿ ಶ್ರಮಿಸಲು ಸಾಧ್ಯವಾಗುವ, ಅತ್ಯುಪಯುಕ್ತ 'ಸಂಶೋಧಕ ಗ್ರಂಥ'ವಿದು. ಶಿಕ್ಷಕನಿಗೆ ಉನ್ನತ ಮಟ್ಟದಲ್ಲಿ ಸಹಾಯ ನೀಡುವ ಇದೇ ನಮೂನೆಯ ಇತರ ವಿಷಯಗಳ ಮೇಲಿನ ಗ್ರಂಥಗಳೂ ಇವೆ.

ಅನಕ್ಷರತೆಯನ್ನು ಹೋಗಲಾಡಿಸಲು ೧೯೫೧ ರಿಂದೀಚೆ ಯುನೆಸ್ಕೋ ಅವಿರತವಾಗಿ ಶ್ರಮಿಸಿದೆ. ವಿದ್ಯಾವಂತರ ಸಂಖ್ಯೆ ಹೆಚ್ಚುತ್ತಿರುವುದಾದರೂ, ವಿಪರೀತ ಹೆಚ್ಚುವರಿ ಜನಸಂಖ್ಯೆಯಿಂದಾಗಿ ನಿರಕ್ಷರಸ್ಥರ ಸಂಖ್ಯೆಯೂ ಸಹ ಹೆಚ್ಚುತ್ತಿದೆ. ಅನಕ್ಷರತೆಯ ನಿರ್ನಾಮದ ಪ್ರಯತ್ನವಾಗಿ ಯುನೆಸ್ಕೋ ೧೯೬೫ರಲ್ಲಿ ಟೈವಾನ್‌ನಲ್ಲಿ 'ವಿಶ್ವಪ್ರತಿನಿಧಿಗಳ ಸಭೆ'ಯನ್ನು ನಡೆಸಿತು. ಅಂದಿನಿಂದೀಚೆಗೆ ಸೆಪ್ಟಂಬರ್ ೮ನೇ ತಾರೀಕನ್ನು 'ಅಂತರ್‍ರಾಷ್ಟ್ರೀಯ ಸಾಕ್ಷರತೆಯ ದಿನ'ವೆಂದು ಪರಿಗಣಿಸಲಾಗಿದೆ. ಈ ಸಂದರ್ಭದಲ್ಲಿ ಹಿಂದಿನ ವರ್ಷಗಳ ಕಾರ್ಯಾಚರಣೆಯ ವರದಿಯನ್ನು ಯುನೆಸ್ಕೋ ಪ್ರಕಟಿಸುವುದು. ಇದಲ್ಲದೆ,

‘ ಸಾಕ್ಷರತೆ ಸುದ್ದಿ ಪತ್ರ ’ ಎಂಬ ತ್ರೈಮಾಸಿಕದಲ್ಲಿ ಹೊಸ ಹೊಸ ಸುದ್ದಿಗಳನ್ನು ಪ್ರಕಟಿಸುವುದು. ಮೇರಿ ಬರ್ನೆಟ್ ಅವರ “ ದಿ ಎ.ಬಿ.ಸಿ. ಆಫ್ ಲಿಟರೆಸಿ ” ಎಂಬ ಪುಸ್ತಕದಲ್ಲಿ ಸಾಕ್ಷರತೆಯ ಸಮಸ್ಯೆಗಳನ್ನೂ ಅವುಗಳ ಪರಿಹಾರಕ್ಕಾಗಿ ಮಾಡಬೇಕಾದ ಕೆಲಸಗಳನ್ನೂ ಪ್ರಸ್ತಾಪಿಸಲಾಗಿದೆ.

ವಯಸ್ಕರಿಗಾಗಿಯೂ ಸಾಕ್ಷರತೆ ಕಾರ್ಯ

ಪ್ರಪಂಚದ ಮೂರನೇ ಒಂದು ಭಾಗದಷ್ಟು ವಯಸ್ಕರು ನಿರಕ್ಷರಸ್ಥರಾಗಿದ್ದಾರೆ ಎಂಬ ಅರಿವಿನ ಕಾರಣ, ಯುನೆಸ್ಕೋದ ಸಾಕ್ಷರತೆಯ ಕಾರ್ಯಕ್ರಮಗಳು ಮಕ್ಕಳಿಗೆ ಮಾತ್ರ ಸೀಮಿತವಾಗಿಲ್ಲ. ವಯಸ್ಕರಿಗೆ ಶಿಕ್ಷಣ ಕಲಿಸುವ ಕಾರ್ಯದಲ್ಲಿ ಯುನೆಸ್ಕೋ ಹಾಗೂ ಆಸಕ್ತ ಸರ್ಕಾರಗಳು ಸಾಕಷ್ಟು ಸಮಸ್ಯೆಗಳನ್ನೆದುರಿಸಬೇಕಾಯಿತು. ಮಕ್ಕಳಿಗಾಗಿ ಸೃಷ್ಟಿಯಾದ ಸಾಹಿತ್ಯ ಪ್ರಕಾರಗಳು ವಯಸ್ಕ ಜನತೆಗೆ ರುಚಿಸುವುದಿಲ್ಲ. ಏನೇ ಆದರೂ ಅವರನ್ನು ಶಿಕ್ಷಿತರನ್ನಾಗಿ ಮಾಡುವುದು ಕರ್ತವ್ಯ. ಈ ದೃಷ್ಟಿಯಿಂದ ಯುನೆಸ್ಕೋ ವಯಸ್ಕರಿಗಾಗಿ ‘ ವರ್ಣಮಾಲೆ ಪುಸ್ತಕ ’ ಇತ್ಯಾದಿಗಳನ್ನು ರಚಿಸಿತು.

ತಜ್ಞರು ಆಯಾ ಭಾಷೆಗಳಲ್ಲಿ ಆಯಾ ಜನತೆಗೆ ತಕ್ಕಂತೆ ಪತ್ರಿಕೆಗಳನ್ನು, ಪುಸ್ತಕಗಳನ್ನು, ಕ್ರಮವಾಗಿ ಹೊರತಂದರು. ಅದರಿಂದಾಗಿ, ಕಲಿಯುವವನು ಸಾಮಾನ್ಯ ಮಟ್ಟದಿಂದ ಉತ್ತಮ ಮಟ್ಟಕ್ಕೆ ಏರಲು ಸಹಾಯಕವಾಯಿತು. ಈ ಮಾಧ್ಯಮದಲ್ಲಿ ಅವನು ತನ್ನ ಪರಿಸರದ ಪರಿಚಯ ಮಾಡಿಕೊಂಡು, ಬುದ್ಧಿವಂತನಾಗಲು ಸಾಧ್ಯತೆ ಇದೆ. ಸಾಮಾಜಿಕ ಸ್ಥಿತಿಯನ್ನು ಉತ್ತಮ ಪಡಿಸಲೂ ಈ ನಮೂನೆಯ ‘ ಸಾಕ್ಷರತೆ ಯೋಜನೆ ’ ಅತ್ಯಂತ ಸಹಾಯಕ. ಯುನೆಸ್ಕೋ ತನ್ನ ಹನ್ನೆರಡು ಪೈಲಟ್ ಯೋಜನೆಗಳ ‘ ಪುರೋವೃದ್ಧಿ ವರದಿ ’ಯನ್ನು ‘ ಫಂಕ್ಷನಲ್ ಲಿಟರೆಸಿ ’ಯಲ್ಲಿ ಪ್ರಕಟಿಸುತ್ತದೆ.

ಪ್ರಾದೇಶಿಕ ಕೇಂದ್ರಗಳು

ಈ ಎಲ್ಲ ಪ್ರಕಾರದ ಯೋಜನೆಗಳ ಕ್ರಮಬದ್ಧ ಮುಂದುವರಿಕೆಗಾಗಿ, ಗ್ರಂಥಾಭಿವೃದ್ಧಿಗಾಗಿ–ಕರಾಚಿ, ಕ್ಯಾಮೆರೂನ್, ಅಸೀರಾ, ಮುಂತಾದ ಕಡೆ ‘ ಪ್ರಾದೇಶಿಕ ಕೇಂದ್ರ ’ಗಳನ್ನು ಯುನೆಸ್ಕೋ ಸ್ಥಾಪಿಸಿದೆ. ಏಶಿಯಾದ ಎಲ್ಲ ರಾಷ್ಟ್ರಗಳ ಅನುಕೂಲಕ್ಕಾಗಿ ಕರಾಚಿಯ ಕೇಂದ್ರ ೧೯೫೮ರಲ್ಲಿ ಪ್ರಾರಂಭವಾಯಿತು. ಪ್ರಾದೇಶಿಕ ಭಾಷೆಗಳಲ್ಲಿ ಗ್ರಂಥಗಳನ್ನು ಪ್ರಕಟಿಸಲು, ಇತರ ಭಾಷೆಗಳಿಂದ ಉತ್ತಮ ಗ್ರಂಥಗಳನ್ನು ಅನುವಾದಿಸಲು, ಈ ಕೇಂದ್ರ ಸಹಾಯ ಮಾಡುತ್ತದೆ. ಅಲ್ಲದೆ, ಪ್ರಾದೇಶಿಕ ಭಾಷೆಗಳಲ್ಲಿನ ಅತ್ಯುತ್ತಮ ಗ್ರಂಥಕರ್ತರಿಗೆ ಅವರ ಸೇವೆಗಾಗಿ ಪದಕಗಳನ್ನೂ ನಗದು ಬಹುಮಾನಗಳನ್ನೂ ನೀಡುತ್ತದೆ ಮತ್ತು ಅವರ ಗ್ರಂಥಗಳನ್ನು ತಾನೇ ಪ್ರಕಟಿಸುತ್ತದೆ.

೧೯೬೬ರಲ್ಲಿ ಟೋಕಿಯೋದಲ್ಲಿ ಯುನೆಸ್ಕೋ ‘ ಏಶಿಯಾದಲ್ಲಿ ಗ್ರಂಥಾಭಿವೃದ್ಧಿ ’ ಎಂಬ ವಿಷಯದ ಬಗ್ಗೆ ಚರ್ಚಿಸಲು ಸಭೆಯೊಂದನ್ನೇರ್ಪಡಿಸಿತು. ಆ ಸಭೆಯಲ್ಲಿ ಗ್ರಂಥಾಭಿವೃದ್ಧಿಗಾಗಿ ‘ ಸಮನ್ವಿತ ಯೋಜನೆ ’ ಯೊಂದನ್ನು ತಯಾರಿಸಲಾಯಿತು. ಆ ಯೋಜನೆಯಲ್ಲಿ ‘ ದೀರ್ಘಕಾಲದ ಕಡಿಮೆ ದರದ ಸಾಲವನ್ನು ಪ್ರಕಾಶನ ಸಂಸ್ಥೆಗಳಿಗೆ ನೀಡುವುದು, ’ ‘ ಗ್ರಂಥಗಳು ಹೆಚ್ಚಾಗಿ ಪ್ರಕಟವಾಗುವ ಪ್ರದೇಶಗಳ ಜನತೆಗೆ ತರಬೇತಿ ನೀಡುವುದು, ’ ‘ ಗ್ರಂಥ ತಯಾರಿಕೆ ಮತ್ತು ವಿತರಣೆ ಸಮಸ್ಯೆಗಳನ್ನು ಅಭ್ಯಸಿಸಿ ಅವುಗಳಿಗೆ ಪರಿಹಾರ ಕಂಡುಹಿಡಿಯುವುದು, ’ ಮುಂತಾದ ಪ್ರಮುಖ ಕಾರ್ಯಗಳು ರೂಪಿತಗೊಂಡಿದ್ದವು. ಮಕ್ಕಳಿಗಾಗಿ, ಚಿತ್ರಕಲೆಗಾರರಿಗಾಗಿ ಆವಶ್ಯಕವಾದ ಪುಸ್ತಕಗಳನ್ನು ಪ್ರಕಟಿಸಲು ಎಕೇಫ್, ಯೂನಿಸೇಫ್ ಮತ್ತು ಯು.ಎನ್.ಡಿ.ಪಿ. ಸಂಸ್ಥೆಗಳು ಧನಸಹಾಯ ಮಾಡುತ್ತಿವೆ.

ಲೇಖಕರಿಗೆ ಮಾರ್ಗದರ್ಶನ

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಲೇಖಕರಿಗೆ ಮಾರ್ಗದರ್ಶನ ನೀಡುವ ‘ ಪಠ್ಯ ಪುಸ್ತಕಗಳ ಹಸ್ತಪ್ರತಿ ತಯಾರಿಸುವಿಕೆ ’ ಎಂಬ ಗ್ರಂಥವನ್ನು ಯುನೆಸ್ಕೋ ಪ್ರಕಟಿಸಿದೆ.

ಇದುವರೆಗೆ ಪಠ್ಯಪುಸ್ತಕಗಳ ತಯಾರಿಕೆಯಲ್ಲಿ ಮುದ್ರಣ ಮತ್ತು ವಿತರಣೆಯ ಅಭಿವೃದ್ಧಿಗೆ ಹೆಚ್ಚಿನ ಗಮನ ಕೊಡಲಾಗುತ್ತಿತ್ತು. ಈಗ ಓದುವ ಹವ್ಯಾಸ, ಬೋಧನಾ ಕ್ರಮಗಳ ಬಗ್ಗೆ ಯುನೆಸ್ಕೋ ಹೆಚ್ಚಿನ ಆಸ್ಥೆ ವಹಿಸಿದೆ.

ಗ್ರಂಥಕರ್ತರ ಹಕ್ಕುಬಾಧ್ಯತೆ

ಗ್ರಂಥಕರ್ತನ ಹಕ್ಕುಬಾಧ್ಯತೆಗಳ ಬಗ್ಗೆ ಚರ್ಚಿಸ

ಲೋಸುಗ ೧೯೫೨ರಲ್ಲಿ ಜಿನಿವಾದಲ್ಲಿ ಸಮಾವೇಶವೊಂದು ಏರ್ಪಟ್ಟಿತು. ಅದರಲ್ಲಿ ಆದ ಒಪ್ಪಂದವು ೧೯೫೫ರಲ್ಲಿ ಜಾರಿಗೆ ಬಂದು ಶೀಘ್ರದಲ್ಲೇ ಅದು ಬಹಳಷ್ಟು ದೇಶಗಳಲ್ಲಿ ಹಬ್ಬಿತು. ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಗ್ರಂಥಕರ್ತನ ಹಕ್ಕು ಸಂಪಾದನೆಯ ಸಾಧ್ಯತೆ ಪ್ರಾಯೋಗಿಕವಾಗಿ ಯಶಸ್ವಿಯಾಯಿತು. ಇದರಿಂದ ಶಿಕ್ಷಣದಲ್ಲಿ ಪ್ರಗತಿ ಸಾಧಿಸಬೇಕಾಗಿರುವ ರಾಷ್ಟ್ರಗಳು ತಮ್ಮ ಭಾಷೆಗಳಲ್ಲಿ 'ಅಧಿಕೃತ ಪಠ್ಯಪುಸ್ತಕ'ಗಳನ್ನು ಬರೆಯಲು, ಇತರ ಭಾಷೆಗಳಿಂದ ಭಾಷಾಂತರ ಮಾಡಿಕೊಳ್ಳಲು ಹೆಚ್ಚಿನ ಸಹಾಯ ಒದಗಿತು. ೧೯೭೧ರ 'ಪ್ಯಾರಿಸ್ ಆ್ಯಕ್ಟ್'ನಿಂದ ಈ ವಿಧಾನ ಇನ್ನಷ್ಟು ಉತ್ತಮವಾಯಿತು. ಈ ಶಾಸನದ ಪ್ರಕಾರ ಏಳು ವರ್ಷಗಳಲ್ಲಿ ಅನುವಾದ ಮಾಡಬಹುದಾದ ಮೊತ್ತವನ್ನು ಒಂದೇ ವರ್ಷದಲ್ಲಿ ಮಾಡಿಬಿಡಬಹುದು. ಇಂಗ್ಲಿಷ್, ಫ್ರೆಂಚ್ ಮತ್ತಿತರ ಭಾಷೆಗಳಿಗೆ ಈ ಕಾಲಾವಧಿ ಮೂರು ವರ್ಷಗಳು.

ಅಮೇರಿಕ ಹಾಗೂ ಇಂಗ್ಲೆಂಡ್ ದೇಶಗಳ ಹಕ್ಕುಬಾಧ್ಯತೆ ಅಧಿಕಾರಿಗಳ ಸಹಾಯದಿಂದ 'ಗ್ರಂಥಕರ್ತನ ಹಕ್ಕುಬಾಧ್ಯತೆಯ ನಿಯಮಗಳು ಮತ್ತು ವಿಶ್ವದ ಒಡಂಬಡಿಕೆಗಳು' ಎಂಬ ಪುಸ್ತಕವನ್ನು ಯುನೆಸ್ಕೋ ಪ್ರಕಟಿಸಿದೆ. ಇದಲ್ಲದೆ, 'ಗ್ರಂಥಕರ್ತನ ಹಕ್ಕುಬಾಧ್ಯತೆ ಪತ್ರಿಕೆ' ಎಂಬ ವಾರ್ಷಿಕ ಸಂಚಿಕೆಯನ್ನೂ ಇದು ಪ್ರಕಟಿಸುತ್ತಿದೆ.

ತರುಣ ಜನಾಂಗಕ್ಕೆ ನೆರವು

ಜ್ಞಾನಾಭಿವೃದ್ಧಿಗೊಳಿಸಲು ತರುಣ ಜನಾಂಗಕ್ಕೆ 'ವಿದೇಶೀ ವಿದ್ಯಾಭ್ಯಾಸ,' 'ರಜೆಯಲ್ಲಿ ವಿದೇಶೀ ವಿದ್ಯಾಭ್ಯಾಸ' ಇತ್ಯಾದಿಗಳ ಸವಲತ್ತುಗಳಿಂದ ಯುನೆಸ್ಕೋ ಸಹಾಯ ಮಾಡುತ್ತದೆ. ವಿದ್ಯಾರ್ಥಿವೇತನಗಳನ್ನೂ ನೀಡುತ್ತದೆ.

ಅಂತರ್ರಾಷ್ಟ್ರೀಯ ಪುಸ್ತಕ ವರ್ಷಕ್ಕಾಗಿ ಶಿಕ್ಷಣದ ಮೇಲಿನ ನಾನಾ ರಾಷ್ಟ್ರಗಳ 'ಹೇಳಿಕೆ, ವರದಿ'ಗಳು ಬಂದಿವೆ. ೧೯೬೯ರಲ್ಲಿ ಯುನೆಸ್ಕೋದೊಂದಿಗೆ ಏಕೀಕೃತವಾದ 'ಅಂತರ್ರಾಷ್ಟ್ರೀಯ ಶಿಕ್ಷಣ ಸಂಸ್ಥೆ'ಯು ಈ 'ಹೇಳಿಕೆ, ವರದಿ'ಗಳ ಸಂಗ್ರಹವನ್ನು ಪ್ರಕಟಿಸಿದೆ. ಶಿಕ್ಷಣದ ಮೇಲಿನ ಗ್ರಂಥಾಲಯವನ್ನೂ ಸ್ಥಿರ ಪ್ರದರ್ಶನಾಲಯವನ್ನೂ ಇದು ಹೊಂದಿದೆ.

ಗ್ರಂಥಾಲಯಗಳ ಮಹತ್ವ

ಈ ಎಲ್ಲ ಶೈಕ್ಷಣಿಕ ಯೋಜನೆಗಳ ಯಶಸ್ಸಿಗೆ ಅತ್ಯಗತ್ಯ ಸಾಧನ ಎಂದರೆ ಉತ್ತಮ ಗ್ರಂಥಾಲಯ ವ್ಯವಸ್ಥೆ. ಉತ್ತಮ ದರ್ಜೆಯ ಶಿಕ್ಷಣಕ್ಕೆ ಮೂಲ ಎಂದರೆ ಉತ್ತಮ ಗ್ರಂಥಾಲಯ. ಗ್ರಂಥಾಲಯಗಳ ಅಭಾವದಿಂದಾಗಿ ಪ್ರಾಥಮಿಕ ಶಿಕ್ಷಣ ಹಾಗೂ ಸಾಕ್ಷರತೆ ಆಂದೋಲನಗಳು ವ್ಯರ್ಥ ಯೋಜನೆಗಳಾಗಿಬಿಡುತ್ತವೆ. ಸಾರ್ವಜನಿಕ ಗ್ರಂಥಾಲಯಗಳು ಉಪಯುಕ್ತ ಗ್ರಂಥಗಳನ್ನು ಪ್ರಸ್ತುತಪಡಿಸುವುದರಿಂದ 'ಸಾಕ್ಷರತೆ'ಯಂತಹ ಆಂದೋಲನಗಳಿಗೆ ಬೆಂಬಲ ಸಿಕ್ಕುತ್ತದೆ. ಅಲ್ಲದೆ, ಈ ಗ್ರಂಥಾಲಯಗಳು ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣದ ಆವಶ್ಯಕ ಗ್ರಂಥಗಳ ಬೇಡಿಕೆಗೂ ಮತ್ತು ಸಮಗ್ರ ಜೀವನದ ಸುತ್ತ ಹಬ್ಬಿರುವ ಮುಂದುವರಿದ ಶಿಕ್ಷಣಕ್ಕೂ ಮಧ್ಯೆ ಸೇತುವೆ ಹಾಕುವ ಸಾಮರ್ಥ್ಯ ಹೊಂದಿರುತ್ತವೆ. ಜನ ಸಾಮಾನ್ಯರಲ್ಲಿ ಸಾಂಸ್ಕೃತಿಕ ಪ್ರಜ್ಞೆಯನ್ನು ಬೆಳೆಸುವುದರಲ್ಲಿ,—ಉಳಿಸುವುದರಲ್ಲಿ ಗ್ರಂಥಾಲಯ ಪ್ರಮುಖ ಪಾತ್ರ ವಹಿಸುತ್ತದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹಿಂದೆ ಇದ್ದ ಶಿಕ್ಷಣ ಸ್ಥಿತಿಯಂತೆಯೇ ಗ್ರಂಥಾಲಯಗಳ ಸ್ಥಿತಿಯೂ ಇತ್ತು. ಆದರೆ ಯುನೆಸ್ಕೋ ಸ್ವಪ್ರಯತ್ನದಿಂದ ಗ್ರಂಥಾಲಯಗಳ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿ, ಶೈಕ್ಷಣಿಕ ಹಾಗೂ ರಾಷ್ಟ್ರೀಯ ಪುರೋವೃದ್ಧಿಗೆ ಕಾರಣವಾಯಿತು.

ಗ್ರಂಥಪಾಲಕರ ತರಬೇತಿಗಾಗಿ ಪ್ರಾದೇಶಿಕ ಕೇಂದ್ರಗಳು ಸ್ಥಾಪಿಸಲ್ಪಟ್ಟವು. ತರಬೇತಿ ಹೊಂದಿದ ಗ್ರಂಥಪಾಲಕರು ಉಚ್ಚತಮ ಮಟ್ಟದ ಸಂಶೋಧನೆ ನಡೆಸಲೂ ಯುನೆಸ್ಕೋ ಅವಕಾಶ ಕಲ್ಪಿಸಿತು.

ಗ್ರಂಥಾಲಯದ ಎಲ್ಲ ಪ್ರಕಾರಗಳನ್ನೊಳಗೊಂಡು ಪ್ರಕಟವಾಗುತ್ತಿರುವ 'ಗ್ರಂಥಾಲಯಗಳ ಯುನೆಸ್ಕೋ ಪತ್ರಿಕೆ' ಎಂಬ ಅಂತರ್ರಾಷ್ಟ್ರೀಯ ಪತ್ರಿಕೆಯು ೧೯೪೭ರಲ್ಲಿ ಪ್ರಾರಂಭವಾಯಿತು. ಯುನೆಸ್ಕೋದ 'ಗ್ರಂಥಾಲಯಗಳ ಮ್ಯಾನುಯಲ್ಸ್' ಮತ್ತು 'ಸಾರ್ವಜನಿಕ ಗ್ರಂಥಾಲಯ ಮ್ಯಾನುಯಲ್ಸ್'ಗಳು ಗ್ರಂಥಪಾಲಕರು ತರಬೇತಿ ಹೊಂದಲು ಸಾಕಷ್ಟು ಸಹಾಯ ಮಾಡುತ್ತವೆ.

ನೈಜೀರಿಯಾ ಮತ್ತು ಎನುಗುಗಳಲ್ಲಿನ "ಪ್ರಾಯೋಗಿಕ ಗ್ರಂಥಾಲಯ ಯೋಜನೆ", ಐವರಿ ಕೋಸ್ಟ್‌ನಲ್ಲಿಯ 'ಕೇಂದ್ರ ಗ್ರಂಥ ಭಂಡಾರ', ದೆಹಲಿಯಲ್ಲಿನ

'ಸಾರ್ವಜನಿಕ ಗ್ರಂಥಾಲಯ'—ಇವು ಆಯಾ ರಾಷ್ಟ್ರಗಳು ಯುನೆಸ್ಕೋದ ಸಹಾಯದಿಂದ ಸ್ಥಾಪಿಸಿದ ಬೃಹತ್ ಗ್ರಂಥಾಲಯಗಳು.

ವಿನಿಮಯ ವ್ಯವಸ್ಥೆ

ಈ ತರಹದ ಯುನೆಸ್ಕೋದ ಅಭಿವೃದ್ಧಿ ಕಾರ್ಯಗಳಲ್ಲಿ 'ಪ್ರಕಟಣೆಗಳ ವಿನಿಮಯ' ಯೋಜನೆ—ಪ್ರಮುಖವಾದುದು. ಯುದ್ಧದ ದಿನಗಳಲ್ಲಿ ಚೆಲ್ಲಾಪಿಲ್ಲಿಯಾಗಿದ್ದ ಗ್ರಂಥಾಲಯಗಳಿಗೆ ಸಹಾಯ ನೀಡುವುದಕ್ಕಾಗಿ ಈ ಯೋಜನೆ ಜಾರಿಗೆ ಬಂತು. 'ಗ್ರಂಥಾಲಯಗಳ ಯುನೆಸ್ಕೋ ಪತ್ರಿಕೆ'ಯು 'ಪುಸ್ತಕ ಬೇಕಾಗಿದೆ', 'ವಿನಿಮಯ', 'ಉಚಿತ ಪ್ರಸಾರ' ಮುಂತಾದ ಶೀರ್ಷಿಕೆಗಳಡಿಯಲ್ಲಿ ಗ್ರಂಥಪಟ್ಟಿಗಳನ್ನು ಪ್ರಕಟಿಸುತ್ತದೆ. 'ಪ್ರಕಟಣೆಗಳ ವಿನಿಮಯ'ಕ್ಕೆ ಸಂಬಂಧಪಟ್ಟ ಪ್ರಾಯೋಗಿಕ ವರ್ಣನೆಗಳು 'ಅಂತರ್‍ರಾಷ್ಟ್ರೀಯ ಪ್ರಕಟಣೆಗಳ ವಿನಿಮಯದ ಮೇಲಿನ ಕರಪುಸ್ತಕ'ದಲ್ಲಿ ಕಾಣಿಸುತ್ತವೆ.

ಪುಸ್ತಕ ಕೇಂದ್ರಗಳನ್ನು ಮತ್ತು 'ಸ್ಥಿರ ವಿನಿಮಯ ಪಾರುಪತ್ಯ'ಗಳನ್ನು ಸ್ಥಾಪಿಸುವಂತೆ ಯುನೆಸ್ಕೋ ಪ್ರತಿಯೊಂದು ರಾಷ್ಟ್ರವನ್ನೂ ಕೇಳಿಕೊಂಡಿತು. ೧೯೫೦ರ ಫ್ಲೋರೆನ್ಸ್ ಒಪ್ಪಂದದ ನಂತರ ಬಹುತೇಕ ಸದಸ್ಯ ರಾಷ್ಟ್ರಗಳು ಈ ನಮೂನೆಯ ಪಾರುಪತ್ಯದ ಉಪಯೋಗ ಮಾಡಿಕೊಂಡವು. ಈ ಒಪ್ಪಂದದಿಂದ ಇತರ ಉದ್ಯೋಗ ದಂಧೆಗಳೆಲ್ಲ ಪುಸ್ತಕಗಳ, ನಿಯತಕಾಲಿಕಗಳ, ಕಾಗದ ಪತ್ರಗಳ, ಚಿತ್ರರೂಪಕಗಳ ಹೊನಲಿನಲ್ಲಿ ಸಿಕ್ಕು ಹೋದವು.

ಕೂಪನ್ನುಗಳ ವ್ಯವಸ್ಥೆ

ಯುನೆಸ್ಕೋ ಏರ್ಪಡಿಸಿರುವ 'ಕೂಪನ್ ಯೋಜನೆ'ಯಿಂದ ಪ್ರತಿಯೊಂದು ರಾಷ್ಟ್ರ ವಿದೇಶೀ ವಿನಿಮಯ ಉಳಿಸಿಕೊಳ್ಳುವುದರ ಮೂಲಕ ಪುಸ್ತಕಗಳನ್ನು ಮತ್ತು ಸಾಮಗ್ರಿಗಳನ್ನು ಕೊಂಡುಕೊಳ್ಳುವ ಅವಕಾಶ ಒದಗಿದೆ. ಇದಲ್ಲದೆ, 'ಕೊಡುಗೆ ಕೂಪನ್ನುಗಳು' ಬೇರೆ ಇವೆ. ಇವುಗಳನ್ನು ಪಡೆದುಕೊಂಡವನು ಅತ್ಯಂತ ಆವಶ್ಯಕ ಸಂದರ್ಭದಲ್ಲಿ ಪ್ರಪಂಚದಲ್ಲಿ ಎಲ್ಲೇ ಆಗಲಿ, ಏನನ್ನಾದರೂ ಕೊಂಡುಕೊಳ್ಳಲು ಅವನ್ನು ಉಪಯೋಗಿಸಬಹುದು. ಇದೇ ನಮೂನೆಯ 'ಪ್ರವಾಸಿ ಕೂಪನ್ನು'ಗಳನ್ನೂ ಯುನೆಸ್ಕೋ ನೀಡುತ್ತದೆ. ಇವೆಲ್ಲವುಗಳಿಂದ ಸದಸ್ಯ ರಾಷ್ಟ್ರಗಳು ಅತ್ಯುತ್ತಮ ಪ್ರಯೋಜನ ಹೊಂದಲು ಸಹಾಯವಾಗುತ್ತದೆ.

ಗ್ರಂಥಾಲಯ ಕಾಯಿದೆ

ರಾಷ್ಟ್ರೀಯ ಗ್ರಂಥಾಲಯಗಳನ್ನು ಸ್ಥಾಪಿಸಲು ಮತ್ತು ರಾಜ್ಯಗಳಲ್ಲಿ 'ಗ್ರಂಥಾಲಯ ಕಾಯಿದೆ'ಯನ್ನು ಜಾರಿಗೆ ತರಲು ಯುನೆಸ್ಕೋ ಸಹಾಯ ಮಾಡುತ್ತದೆ. ಇದರಿಂದ ವ್ಯವಸ್ಥಿತ ಗ್ರಂಥಾಲಯಗಳ ಸ್ಥಾಪನೆಗೆ ಅವಕಾಶವೊದಗುತ್ತದೆ.

ಯುನೆಸ್ಕೋದ ಮತ್ತೊಂದು ಪ್ರಮುಖ ಕಾರ್ಯವೆಂದರೆ ಪ್ರಕಟಿತ ಗ್ರಂಥಗಳ ಪಟ್ಟಿಯನ್ನು ತಯಾರಿಸಿ, ಅದನ್ನು ಪ್ರಸಾರ ಮಾಡುವುದರಲ್ಲಿ ತಾನು ಅಂತರ್‍ರಾಷ್ಟ್ರೀಯ ಕೇಂದ್ರವಾಗಿ ಸೇವೆ ಸಲ್ಲಿಸುವುದು. ಈ ಉದ್ದೇಶದಿಂದ ೧೯೫೦ರಲ್ಲಿ ಸಮಾವೇಶವೊಂದನ್ನೇರ್ಪಡಿಸಿತು. ಆ ನಂತರ ಪ್ರಾದೇಶಿಕ ಹಾಗೂ ಇತರ ಭಾಷೆಗಳಲ್ಲಿ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸುವುದರತ್ತ ತನ್ನ ಗಮನ ಹರಿಸಿತು.

'ಯುನೆಸ್ಕೋದ ಗ್ರಂಥಾಲಯ ಪತ್ರಿಕೆ' ಹಾಗೂ 'ಗ್ರಂಥಪಟ್ಟಿ, ಕಾಗದಪತ್ರ, ಹಾಗೂ ಪರಿಭಾಷೆ'ಎಂಬ ಪತ್ರಿಕೆಗಳಲ್ಲಿ ಹೊಸಹೊಸ ಸಮಾಚಾರಗಳು ಪ್ರಕಟವಾಗುತ್ತವೆ. ಸಂಗ್ರಹವಾದ ಎಲ್ಲಾ ತರಹದ ವರದಿಗಳು 'ವಿಶ್ವದ ಗ್ರಂಥಪಟ್ಟಿಯ ನಿಯತಕಾಲಿಕ'ದಲ್ಲಿ ಪ್ರಕಟವಾಗುತ್ತವೆ.

ಗ್ರಂಥಗಳ ಪರಿಚಯ

೧೯೫೩ರಲ್ಲಿ 'ಗ್ರಂಥ ಸೂಚೀ ಕರಪುಸ್ತಕಗಳು'ಎಂಬ ಪ್ರಕಟಣೆಯನ್ನು ಯುನೆಸ್ಕೋ ಪ್ರಾರಂಭಿಸಿತು. ಗ್ರಂಥಗಳ ಪರಿಚಯ ಮಾಡಿಕೊಡುವಲ್ಲಿ ಸುಲಭ ಮಾಧ್ಯಮವಾಗಿರುವ ಈ ವ್ಯವಸ್ಥೆ 'ಮೂಲ ಶಿಕ್ಷಣ'ಕ್ಕೆ ಸಹಾಯಕಾರಿಯಾಗಿದೆ. ರಾಷ್ಟ್ರೀಯ ಹಾಗೂ ಅಂತರ್‍ರಾಷ್ಟ್ರೀಯ ಕಾರ್ಯಾಚರಣೆಗಳ ಬಗ್ಗೆ ಇದು ಸ್ಥೂಲ ಪರಿಚಯ ಮಾಡಿಕೊಡುತ್ತದೆ; ತನ್ಮೂಲಕ ರಾಷ್ಟ್ರಗಳ ಮಧ್ಯದ ಸಂಬಂಧ ಸಹಕಾರಗಳು ವೃದ್ಧಿಗೊಳ್ಳಲು ದಾರಿ ಮಾಡಿಕೊಡುತ್ತದೆ.

ಸಾಕಷ್ಟು ಗ್ರಂಥಗಳ ಆವಶ್ಯಕತೆಯಿರುವ ಅರಬ್ ರಾಷ್ಟ್ರಗಳಲ್ಲಿ 'ಇತ್ತೀಚೆಗೆ ಪ್ರಕಟವಾದ ನಿಯತಕಾಲಿಕಗಳ ಸೂಚಿ' ಎಂಬುದನ್ನು ಯುನೆಸ್ಕೊ ಪ್ರಕಟಿಸಿ,

ಜೊತೆಗೆ ಗ್ರಂಥಾಲಯಗಳು, ಪ್ರಾಚೀನ ಲೇಖರಕ್ಷಾಗಾರ ಮುಂತಾದವುಗಳನ್ನು ಸ್ಥಾಪಿಸಿತು. ಈ ಎಲ್ಲ ಗ್ರಂಥ ಸಂಬಂಧೀ ಕಾರ್ಯಾಚರಣೆಗಳ ಅಭಿವೃದ್ಧಿಗಾಗಿ 'ಯುನೆಸ್ಕೋ ಪ್ರಕಟಣೆ'ಗಳನ್ನು ಅರಬ್ ರಾಷ್ಟ್ರಗಳಲ್ಲೂ ಮುದ್ರಿಸಲಾಗುತ್ತಿದೆ.

ಏಶಿಯಾದ ರಾಷ್ಟ್ರೀಯ ಗ್ರಂಥ ಸಂಬಂಧೀ ಸಂಸ್ಥೆಗಳಿಗೆ ಯುನೆಸ್ಕೋ ಹಣದ ಹಾಗೂ ಪುಸ್ತಕ ಸಾಮಗ್ರಿಗಳ ಸಹಾಯ ಮಾಡಿದೆ. ಪಾಕೀಸ್ತಾನದ 'ಪ್ರಾಚೀನ ಗ್ರಂಥಗಳ ಸಂಗ್ರಹಾಲಯಕ್ಕೆ', ಶ್ರೀಲಂಕಾ (ಸಿಲೋನ್), ಇಂಡೋನೇಶಿಯಾ, ಮುಂತಾದ ರಾಷ್ಟ್ರಗಳಲ್ಲಿ ರಾಷ್ಟ್ರೀಯ ಗ್ರಂಥಾಲಯಗಳನ್ನು ಸ್ಥಾಪಿಸಲಿಕ್ಕೆ ಯುನೆಸ್ಕೋ ಸಹಾಯ ಮಾಡಿದೆ. ಏಶಿಯಾದಲ್ಲಿ ಪ್ರಕಟವಾಗುವ ಗ್ರಂಥಗಳ ಸೂಚಿಯನ್ನು ಪ್ರಕಟಿಸುವ ಜವಾಬ್ದಾರಿಯನ್ನೂ ಹೊತ್ತಿದೆ.

ಹಿಂದಿನ ಅಧ್ಯಯನಗಳು ಮತ್ತು ಅನುಭವಗಳನ್ನು ಆಮೂಲಾಗ್ರವಾಗಿ ಸಂಗ್ರಹಿಸಿ 'ನಾಮಾವಳಿ ಪಟ್ಟಿ'ಯ ಕೈಬರಹದ ಪ್ರತಿ ತಯಾರಿಸುವುದಕ್ಕಾಗಿ ಡಾ|| ಬ್ರೂಮಲ್ ಅವರನ್ನು ಯುನೆಸ್ಕೋ ನೇಮಿಸಿತು. ಡಾ|| ರಂಗನಾಥನ್ ಅವರು ಸಂಪಾದಿಸಿದ ದಕ್ಷಿಣ ಏಶಿಯಾದಲ್ಲಿನ ನಿಯತಕಾಲಿಕಗಳ ನಾಮಾವಳಿ ಪಟ್ಟಿ ತಯಾರಿಕೆಗೂ, ಇದೇ ತರಹದ ಇಂಡೋನೇಶಿಯಾ, ಜಾವಾ ಹಾಗೂ ಪಾಕೀಸ್ತಾನಗಳಲ್ಲಿನ ಕಾರ್ಯಚಟುವಟಿಕೆಗಳಿಗೂ ಯುನೆಸ್ಕೋ ಸಹಾಯ ಮಾಡಿತು. ಇದಲ್ಲದೆ, ದಕ್ಷಿಣ ಏಶಿಯಾದಲ್ಲಿನ ವೈಜ್ಞಾನಿಕ ಮತ್ತು ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದ ಪತ್ರಿಕೆಗಳ ಪಟ್ಟಿಯನ್ನೂ ಕೂಡ ಪ್ರಕಟಿಸಿತು.

ಇದೇ ಕಾರ್ಯಚಟುವಟಿಕೆಗಳಿಗಾಗಿ ಬಹುತೇಕ ಎಲ್ಲಾ ಸದಸ್ಯ ರಾಷ್ಟ್ರಗಳಲ್ಲೂ ಇಂಡಿಯಾದ ಇನ್ಸ್‌ಡಾಕ್ (Insdoc for India) ತರಹದ 'ಕೇಂದ್ರ'ಗಳನ್ನು ಯುನೆಸ್ಕೋ ಸ್ಥಾಪಿಸಿದೆ.

ಪ್ರಮುಖ ವರದಿಗಳ ಪ್ರಕಟಣೆ

ಪ್ರಮುಖವಾದ ಸಮಾರಂಭ, ಸಮ್ಮೇಳನಗಳ ವರದಿಗಳನ್ನು ಯುನೆಸ್ಕೋ ಪ್ರಕಟಿಸುತ್ತದೆ. ಅಗತ್ಯವಾದ ಚಿತ್ರಮಾಲಿಕೆಗಳನ್ನೂ ಪ್ರಕಟಿಸುತ್ತದೆ. ಪ್ರತಿಯೊಂದು ಭಾಷೆಗಳಲ್ಲಿ ತಾನು ಪ್ರಕಟಿಸುವ ಗ್ರಂಥಗಳನ್ನು ಪಟ್ಟಿ ಮಾಡಿ 'ವಾರ್ಷಿಕ ಸಂಚಿಕೆ'ಯಲ್ಲಿ ಪ್ರಕಟಿಸುತ್ತದೆ.

ಸ್ಮಾರಕಗಳ ರಕ್ಷಣೆ

ವಿಶ್ವದಲ್ಲಿನ ಎಲ್ಲಾ ಪುಸ್ತಕಗಳ ಬಾಧ್ಯತೆಯನ್ನು ರಕ್ಷಿಸುವ ಮತ್ತೊಂದು ಕಾರ್ಯ ಯುನೆಸ್ಕೋದ್ದು. ಈ ಕಾರ್ಯ ಗ್ರಂಥಗಳಿಗಷ್ಟೇ ಅಲ್ಲ, ಚಿತ್ರಕಲೆಗಳು, ಚಾರಿತ್ರಿಕ ಪ್ರಸಿದ್ಧ ಸ್ಮಾರಕಗಳು ಹಾಗೂ ಹಸ್ತಪ್ರತಿಗಳಿಗೂ ಸಂಬಂಧಿಸಿದ್ದಾಗಿದೆ. ಇದರಿಂದ ಭಿನ್ನಭಿನ್ನ ಸಂಸ್ಕೃತಿಗಳ ಜನರಲ್ಲಿ ಪರಸ್ಪರ ಸೌಹಾರ್ದತೆಯನ್ನು ಮೂಡಿಸಲು ಅನುಕೂಲವಾಗುತ್ತದೆ.

ಈ ಪ್ರಯತ್ನದ ಮೊದಲ ಹಂತವಾಗಿ ಅಸ್ವಾನ್ ನೀರಾವರಿ ಯೋಜನೆ (ಈಜಿಪ್ಟ್)ಯಿಂದಾಗಿ ಮುಳುಗಡೆಯಾಗಬಹುದಾಗಿದ್ದ ನ್ಯೂಬಿಯನ್ ದೇವಾಲಯಗಳನ್ನು ರಕ್ಷಿಸಿ, ಸ್ಥಳಾಂತರಗೊಳಿಸಿ, ಅದಕ್ಕೆ ಅಗತ್ಯವಾದ ಭದ್ರ ಕಟ್ಟಡಗಳನ್ನು ಯುನೆಸ್ಕೋ ರೂಪಿಸಿತು. ಹಾಳಾಗಿ ಹೋಗುತ್ತಿರುವ ಪುಸ್ತಕಗಳ ಎಲ್ಲಾ ಪುಟಗಳನ್ನೂ ಮೈಕ್ರೋಫಿಲ್ಮಿನಲ್ಲಿ ಸಂಗ್ರಹಿಸಿ ರಕ್ಷಿಸುವ ಉತ್ತಮ ಕಾರ್ಯವನ್ನು ಯುನೆಸ್ಕೋ ಮಾಡುತ್ತಿದೆ. ಇದಕ್ಕಾಗಿ ಒಂದು ಮೈಕ್ರೋಫಿಲ್ಮ್ ಗ್ರಂಥಾಲಯವನ್ನೂ ಹೊಂದಿದೆ. ಪ್ರಾಚೀನ ವಸ್ತು ಸಂಗ್ರಹಾಲಯಗಳನ್ನು ಹೊಂದಿರುವ ರಾಷ್ಟ್ರಗಳಿಗೆ ಆ ಕಾರ್ಯವನ್ನು ಅಭಿವೃದ್ಧಿಪಡಿಸಲು ಯುನೆಸ್ಕೋ ಸಹಾಯ ಮಾಡುತ್ತದೆ.

ಪುಸ್ತಕಗಳ ತರ್ಜುಮೆ

ಸಾಂಸ್ಕೃತಿಕ ವಿನಿಮಯಗಳ ಉನ್ನತ ಧ್ಯೇಯದೊಂದಿಗೆ ಯುನೆಸ್ಕೋ 'ಅನುವಾದ ಯೋಜನೆ'ಯನ್ನು ರೂಪಿಸಿದೆ. ಈವರೆಗೆ ಇದು ೪೦೦ಕ್ಕೂ ಹೆಚ್ಚು ಉದ್ಗ್ರಂಥಗಳನ್ನು ಅನುವಾದ ಮಾಡಿದೆ. ಪೂರ್ವದೇಶಗಳ ಭಾಷೆಗಳಿಂದ ಅನುವಾದವಾಗಿರುವ ಗ್ರಂಥಗಳು ಪಶ್ಚಿಮ ರಾಷ್ಟ್ರಗಳಲ್ಲಿ ದೊರೆಯುವಂತೆಯೂ, ಪಶ್ಚಿಮ ದೇಶಗಳ ಭಾಷೆಗಳಿಂದ ಅನುವಾದವಾಗಿರುವ ಗ್ರಂಥಗಳು ಪೂರ್ವ ರಾಷ್ಟ್ರಗಳಲ್ಲಿ ದೊರೆಯುವಂತೆಯೂ ಅವಕಾಶ ಕಲ್ಪಿಸಲಾಗಿದೆ. ಸಾಹಿತ್ಯಕ್ಕೆ ಸಂಬಂಧಿಸಿದ, ಸಂಬಂಧಿಸಿಲ್ಲದ ಎಲ್ಲ ಅನುವಾದ ಕೆಲಸಗಳನ್ನೂ ಪಟ್ಟಿಮಾಡಿ, 'ಅನುವಾದ ಸೂಚಕ' ಎಂಬ ವಾರ್ಷಿಕ ಸಂಚಿಕೆಯಲ್ಲಿ ಯುನೆಸ್ಕೋ ಪ್ರಕಟಿಸುತ್ತದೆ. ಇದರಿಂದ ಬೇರೆ ಬೇರೆ ಸಂಸ್ಕೃತಿಗಳ ಜನರ ಸಾಹಿತ್ಯ ಚಟುವಟಿಕೆಗಳನ್ನೂ ಜೀವನ ಮಾಧ್ಯಮವನ್ನೂ ಪರಸ್ಪರರು ಅರಿತುಕೊಳ್ಳಲು ಸಹಾಯವಾಗುತ್ತದೆ. ಇದೇ ಮಾತು ಚಿತ್ರಕಲೆಗೂ

ಕಲಾಪುಸ್ತಕಗಳ ಮುದ್ರಣಕ್ಕೂ, ಪೌರ್ವಾತ್ಯ ಆಫ್ರಿಕನ್ ಸಂಗೀತಗಳಿಗೂ ಅನ್ವಯಿಸುತ್ತದೆ.

ವಿದೇಶೀ ಚರಿತ್ರೆಗಳ ಅಧ್ಯಯನಕ್ಕಾಗಿ ವಿದ್ಯಾರ್ಥಿಗಳಿಗೆ ಸಹಾಯಮಾಡಲು "ಚರಿತ್ರೆಯ ಮೂಲಗಳ ಮಾರ್ಗದರ್ಶಿ" ಎಂಬ ಗ್ರಂಥ ಸೂಚಿಗಳನ್ನು ಯುನೆಸ್ಕೋ ಪ್ರಕಟಿಸಿದೆ. ಇವುಗಳಲ್ಲಿ ಆಫ್ರಿಕಾ, ಏಶಿಯಾ ಮತ್ತು ಲ್ಯಾಟಿನ್ ಅಮೇರಿಕಾದ ಸಂಪುಟಗಳು ಸಿದ್ಧವಾಗಿವೆ.

ಮಾನವ ಜನಾಂಗದ ಚರಿತ್ರೆ

ಸತ್ಯ ಸಂಗತಿಗಳನ್ನು ಮರೆಮಾಚುವ ಚಾರಿತ್ರಿಕ ಗ್ರಂಥಗಳು, ಊಹೆಯ ಮೇಲೆ ಬರೆದ ಪುಸ್ತಕಗಳು ಹೆಚ್ಚಾಗಿರುವುದರಿಂದ ಇದನ್ನು ತಪ್ಪಿಸಲು ಯುನೆಸ್ಕೋ ಆರು ಸಂಪುಟಗಳ 'ಮಾನವ ಜನಾಂಗದ ಚರಿತ್ರೆ' (History of Mankind)ಯನ್ನು ಪ್ರಕಟಿಸಿದೆ. ಇದರಲ್ಲಿ ಚರಿತ್ರೆ ಪೂರ್ವಯುಗದಿಂದ ಈಗಿನವರೆಗಿನ ಚಾರಿತ್ರಿಕ ಘಟನೆಗಳ ಸತ್ಯಾಂಶಗಳನ್ನು ಬರೆಯಲಾಗಿದೆ.

ಈ ಸಂಪುಟಗಳು ಏಳು ಭಾಷೆಗಳಲ್ಲಿದ್ದು, ರಾಷ್ಟ್ರಗಳ ನಡುವಣ, ಜನತೆಯ ನಡುವಣ ಭಿನ್ನತೆಯನ್ನು ಹೋಗಲಾಡಿಸಲು ಮಾಡಿದ ಪ್ರಯತ್ನಗಳಾಗಿವೆ. ಈ ಪ್ರಯತ್ನಗಳು ಮನುಷ್ಯನನ್ನು ಸಾಂಸ್ಕೃತಿಕವಾಗಿ, ವೈಜ್ಞಾನಿಕವಾಗಿ ಅಭಿವೃದ್ಧಿಗೊಳಿಸಿ, ಅವನು ತನ್ನ ಗುರಿ ಸಾಧಿಸಲು ನೆರವಾಗುತ್ತವೆ.

ಈ ಎಲ್ಲ ಸಮೃದ್ಧ ಪ್ರಯತ್ನಗಳ ಸಫಲತೆಗಾಗಿ, ರಾಷ್ಟ್ರಗಳ–ಜನತೆಯ ನಡುವಣ ಸೌಹಾರ್ದತೆಗಾಗಿ, 'ಎಲ್ಲರಿಗೂ ಪುಸ್ತಕಗಳು' (Books for all) ಸಂಕೇತದೊಂದಿಗೆ ಯುನೆಸ್ಕೋ ೧೯೭೨ನ್ನು 'ಅಂತರ್ರಾಷ್ಟ್ರೀಯ ಪುಸ್ತ ವರ್ಷ' ಎಂದು ಸಾರಿದೆ.

ಒಬ್ಬ ಮನುಷ್ಯನನ್ನು ಕೊಂದರೆ ದೇವರ ಪ್ರತಿಬಿಂಬವನ್ನು ನಾಶಮಾಡಿದಂತೆ. ಪುಸ್ತಕವನ್ನು ನಾಶ ಮಾಡಿದರೆ ಸಕಾರಣಜೀವಿಯ ಸಕಾರಣತೆಯನ್ನೇ ಕೊಂದಂತೆ.

—ಜಾನ್ ಮಿಲ್ಟನ್

ಸುಖವನ್ನು ಸಂಗ್ರಹಿಸಬೇಕಾದರೆ ಪುಸ್ತಕಗಳನ್ನು ಸಂಗ್ರಹಿಸು.

—ವಿ. ಸ್ಕಾರೆಟ್

ಶೀಲ–ಅಶ್ಲೀಲ ಎನ್ನುವಂಥ ಪುಸ್ತಕವಿಲ್ಲ; ಇರುವುದು ಒಳ್ಳೆಯ ಪುಸ್ತಕ–ಕೆಟ್ಟ ಪುಸ್ತಕ, ಅಷ್ಟೆ.

—ಆಸ್ಕರ್ ವೈಲ್ಡ್

ಅಮರತ್ವದ ತಿಳಿವು ಪುಸ್ತಕಗಳಿಂದ ಲಭ್ಯವಾದದ್ದು.

—ಎಮರ್ಸನ್

ತತ್ಕಾಲದ ಪುಸ್ತಕಗಳು, ಸದಾಕಾಲದ ಪುಸ್ತಕಗಳು—ಎಂದು ಎಲ್ಲಾ ಪುಸ್ತಕಗಳನ್ನು ಎರಡು ಗುಂಪಾಗಿ ವಿಂಗಡಿಸಬಹುದು.

—ಜಾನ್ ರಸ್ಕಿನ್

ಪತ್ರಿಕಾ ವಿಮರ್ಶೆಯಲ್ಲಿ ಪ್ರಾಮಾಣಿಕತೆ

ಂದು ಸಾಹಿತ್ಯಕೃತಿ ಎಷ್ಟೇ ಜನಪ್ರಿಯವಾಗಿದ್ದರೂ
ಆದರ ಮೌಲ್ಯಮಾಪನವಾಗಬೇಕಾದದ್ದು ವಿಮರ್ಶಕ
ಂದಲೇ. ವಿಮರ್ಶಕ ಕೃತಿಯನ್ನು ಓದಿ ಅರ್ಥಮಾಡಿ
ಂಡು ಓದುಗರಿಗೆ ತಿಳಿಸುವುದಲ್ಲದೆ, ಸಾಹಿತ್ಯಕ ದೃಷ್ಟಿ
ಂದ ಆ ಕೃತಿಯ ಬೆಲೆ ಕಟ್ಟಬೇಕಾಗುತ್ತದೆ. ಈ
ೃಷ್ಟಿಯಿಂದ ಪುರಾತನ ಕೃತಿಗಳ ವಿಮರ್ಶಕನಿಗಿಂತ
ಮಕಾಲೀನ ಕೃತಿಗಳ ವಿಮರ್ಶಕನ ಜವಾಬ್ದಾರಿ ಹೆಚ್ಚು.
ಾಹಿತ್ಯಕೃತಿಗಳ ಬೆಲೆಕಟ್ಟುವ ಕೆಲಸ ಕಾಲಕಾಲಕ್ಕೆ
ಡೆಯುತ್ತಲೇ ಇರುತ್ತದೆ. ಪುರಾತನ ಕೃತಿಗಳನ್ನೇ
ಮರ್ಶಿಸುವಾಗ ಇಂಥ ಉಪಲಬ್ಧ ವಿಮರ್ಶೆಗಳನ್ನು
ೃಷ್ಟಿಯಲ್ಲಿಟ್ಟುಕೊಂಡು ಸಮಕಾಲೀನ ದೃಷ್ಟಿಯಲ್ಲಿ
ುನರ್‌ಮೌಲ್ಯ ಮಾಡಬೇಕಾಗುತ್ತದೆ. ಸಮಕಾಲೀನ
ೃತಿಗಳ ಮೌಲ್ಯ ನಿರ್ಣಯ ಇಷ್ಟು ಸುಲಭದಲ್ಲಿ ಆಗುವು
ಲ್ಲ. ಇದಕ್ಕೆ ಹಲವಾರು ಕಾರಣಗಳುಂಟು. ಮುಖ್ಯ
ಾಗಿ ಕೃತಿಕಾರನ ಜೀವಿತಾವಧಿಯಲ್ಲಿಯೇ ವಿಮರ್ಶಕನೂ
ೀವಿಸಿರುವುದು. ಇದೊಂದೇ ಕಾರಣ ಉಳಿದ ಹಲವಾರು
ಾರಣಗಳಿಗೆ ಎಡೆಕೊಡುತ್ತದೆ. ಲೇಖಕ ಪಕ್ವ ಸ್ಥಿತಿ
ಯನ್ನು ಮುಟ್ಟಿಲ್ಲದ ಸಮಯದಲ್ಲೇ ಅವನ ಕೃತಿಗಳನ್ನೂ
ಒಟ್ಟು ದೃಷ್ಟಿಯಿಂದ ವಿಮರ್ಶಿಸುವುದು ಸಾಧ್ಯವಾಗ
ಲಾರದು !.

ಪ್ರಭಾವ ವಲಯ, ಪೂರ್ವಗ್ರಹ:

ಸಮಕಾಲೀನ ವಿಮರ್ಶಕ, ಲೇಖಕನ ಪ್ರಭಾವ
ವಲಯದಲ್ಲಿ ಸಿಲುಕಿರುವ ಅಪಾಯಗಳು ಉಂಟು. ಪಂಥ
ಪ್ರವೃತ್ತಿಯ ಪೂರ್ವಾಗ್ರಹದಿಂದ ಮೂಡಿಬರುವ ವಿಮರ್ಶೆ
ಪ್ರಾಮಾಣಿಕವಾಗಿರುವುದಕ್ಕಿಂತ ಪರಾಕು ಆಗುವುದೇ
ಹೆಚ್ಚು. ಇಂದಿನ ವಿಮರ್ಶೆಯಲ್ಲಿ ಅರ್ಥಕಳೆದುಕೊಳ್ಳು
ತ್ತಿರುವ ಪದಗಳಲ್ಲಿ ಪ್ರಾಮಾಣಿಕತೆಗೆ ಮೊದಲ ಪಟ್ಟ.
ಪ್ರಾಮಾಣಿಕ ಅನ್ನಿಸಿಕೆಗಳ ಹೆಸರಿನಲ್ಲಿ ಬರುತ್ತಿರುವ
ವಿಮರ್ಶೆಗಳು ದೊಡ್ಡ ತಮಾಷೆಗಳಾಗುತ್ತಿವೆ. ಒಬ್ಬೊ
ಬ್ಬರ ದೃಷ್ಟಿಯಲ್ಲಿ ಈ ಪ್ರಾಮಾಣಿಕತೆಗೆ ಒಂದೊಂದು
ಅರ್ಥ ಇರುವುದು ಇದಕ್ಕೆ ಕಾರಣ. ಒಬ್ಬ ವಿಮರ್ಶಕನಿಗೆ
ಪ್ರಾಮಾಣಿಕವಾಗಿ ಚೆನ್ನಾಗಿರುವ ಕೃತಿ ಇನ್ನೊಬ್ಬ
ವಿಮರ್ಶಕನಿಗೆ ಪ್ರಾಮಾಣಿಕವಾಗಿಯೆ ಚೆನ್ನಾಗಿಲ್ಲದಿರುವು
ದಕ್ಕೆ ಕೇವಲ ರುಚಿಭೇದವೊಂದೇ ಕಾರಣವಾಗಲಾರದು.

ಕೃತಿ, ಕೃತಿಯ ಬೆನ್ನಲ್ಲೆ ವಿಮರ್ಶೆ:

ಒಂದು ಕೃತಿ ಪ್ರಕಟವಾಗುತ್ತದೆ. ಅದರ ಬೆನ್ನಲ್ಲೇ
ಅದನ್ನು ಕುರಿತ ದೀರ್ಘ ವಿಮರ್ಶೆ ಹೊರಬರುತ್ತದೆ.
ಅದರಲ್ಲಿ ಈ ಕೆಲವು ಗುಣವಾಚಕಗಳಿರುತ್ತವೆ: "ಈ
ದಶಕದ ಮಹತ್ವದ ಕೃತಿ", 'ನಮ್ಮ ಸರೀಕರಲ್ಲಿ ಗಮ
ನಾರ್ಹ ಕವಿ'–ಇತ್ಯಾದಿ. ಇವನ್ನು ವಿಮರ್ಶೆ ಎನ್ನುವು
ದಕ್ಕಿಂತ ಪ್ರಶಂಸೆ ಎನ್ನುವುದು ವಾಸಿ. ಇದು ಆಯಾ
ಗುಂಪಿನ ಲೇಖಕರಿಗೆ ಮಾತ್ರ ಸೀಮಿತ. 'ಈತ'ನ
ಪುಸ್ತಕ ಬಂದಾಗ 'ಆತ' ವಿಮರ್ಶೆ ಬರೆಯುತ್ತಾನೆ;
'ಆತ'ನ ಪುಸ್ತಕ ಬಂದಾಗ 'ಈತ' ವಿಮರ್ಶೆ ಬರೆಯು
ತ್ತಾನೆ. ಇದು ಒಂದು ರೀತಿಯ ಒಳ ಒಪ್ಪಂದ.

ಗುಂಪಿನ ಪ್ರಸ್ತಾಪ ಬಂತು. ಒಂಟಿಯಾಗಿ ಏಗುವುದ
ಕ್ಕಿಂತ ಗುಂಪಾಗಿ ಹೋರಾಡುವುದು ಲಾಭಕರ. ಇದು
ಎಲ್ಲ ಕ್ಷೇತ್ರಗಳಲ್ಲೂ ಸತ್ಯ. ಸಾಹಿತ್ಯದಲ್ಲಿ ಹೊರತೇನಲ್ಲ.
ಮುಂದೆ ಬರುವ ಮಹತ್ವಾಕಾಂಕ್ಷೆ ಉಳ್ಳವರು ಗುಂಪು
ಕಟ್ಟಬೇಕು. ಗುಂಪಿನ ಮನೋವೃತ್ತಿಯ ಮುಖವಾಣಿ
ಯಾಗಿ ಒಂದು ಪತ್ರಿಕೆ ಸ್ಥಾಪಿಸಬೇಕು. ಅದರಲ್ಲಿ ಗುಂಪಿ
ನವರ ಕೃತಿಗಳ ವಿಮರ್ಶೆ–ಮೇಲಿಂದ ಮೇಲೆ ನಡೆಸಬೇಕು.
ಇದು ಈಗ ಸಿದ್ಧವಾಗಿರುವ ಮಾರ್ಗ. ಅಲ್ಲ, ಹಿಂದಿನಿಂದ
ನಡೆದು ಬಂದ ಮಾರ್ಗ. ಒಬ್ಬಿಬ್ಬರನ್ನು ಹೊರತುಪಡಿಸಿ
ದರೆ, ಯಾವ ಪ್ರಖ್ಯಾತ ಸಾಹಿತಿಯನ್ನೇ ನೋಡಿ–ಅವರ

ಹಿಂದೆ ಒಂದು ಪ್ರಶಂಸಕರ ಗುಂಪು ಇರುತ್ತದೆ. ಅವರು ಇದ್ದಾರೆಂದೇ ಇವರು ಪ್ರಖ್ಯಾತ. ಪಥ ನಿರ್ಮಾಪಕರ ರೀತಿಯೇ ಹೀಗೆ.

ಪತ್ರಿಕಾ ವಿಮರ್ಶೆಯ ಮಹತ್ವ:

ವಿಮರ್ಶೆ ಮೊದಲಿಗಿಂತ ಈಗ ಹೆಚ್ಚಿನ ಮೊತ್ತದಲ್ಲಿ ಬರುತ್ತಿದೆ. ಗುಣದಲ್ಲಿ?–ಎಂದಾಗ ಪ್ರಶ್ನೆಗಳೇಳುತ್ತವೆ. ಸೀರಿಯಸ್ಸಾಗಿ ವಿಮರ್ಶೆಯನ್ನೆ ವ್ರತ ಮಾಡಿಕೊಂಡವರಿಂದ ಹಿಡಿದು, ಕಥೆ-ಕವನ ರಚನೆಯಲ್ಲಿ ವಿಫಲರಾಗಿ ವಿಮರ್ಶಾ ಮಾಧ್ಯಮ ಹಿಡಿದವರ ವರೆಗೆ ಈಗ ವಿವಿಧ ಮಟ್ಟದ ವಿಮರ್ಶಕರಿದ್ದಾರೆ. ವಿಮರ್ಶೆಗೆ ಮೀಸಲಾದ ಪತ್ರಿಕೆಗಳು ಬೆರಳೆಣಿಕೆಯಲ್ಲೂ ನುಸುಳಿಕೊಂಡು ಹೋಗುವಷ್ಟು ಕಡಮೆ. ಅವನ್ನು ಬಿಟ್ಟರೆ ಉಳಿದ ಪತ್ರಿಕೆಗಳು ವಿಮರ್ಶೆಯ ಸ್ಥಿರ ಶೀರ್ಷಿಕೆಯನ್ನು ಇಟ್ಟುಕೊಂಡು ತಮ್ಮಲ್ಲಿಗೆ ಬಂದ ಪುಸ್ತಕಗಳನ್ನೂ ವಿಮರ್ಶಿಸುತ್ತವೆ. ವಿಮರ್ಶೆ ಪತ್ರಿಕೆಯಲ್ಲೆ ಬರುತ್ತದಾದರೂ ಅದು ವ್ಯಕ್ತಿಯ ಧೋರಣೆಯೇ ಆಗಿರುತ್ತದೆ.

ಪತ್ರಿಕಾ ವಿಮರ್ಶೆಯೆಲ್ಲಾ ಸಂಕಲನ ರೂಪದಲ್ಲಿ ಪುಸ್ತಕವಾಗಿ ಪ್ರಕಟವಾಗದೇ ಹೋಗಬಹುದು. ಒಂದು ವಾರದಲ್ಲೇ ಓದುಗರ ಮನಸ್ಸಿನಲ್ಲಿ ಮರೆಯಾಗಬಹುದು. ಈ ಕಾರಣದಿಂದ ಪತ್ರಿಕಾ ವಿಮರ್ಶೆಗೆ ಹೆಚ್ಚಿನ ಸ್ಥಾನ ಕೊಡಬೇಕಾಗಿಲ್ಲ ಎನ್ನುವವಾದ ಸರಿಯಲ್ಲ. ಪತ್ರಿಕೆ ಪಾದ್ರಿ ಹೂವಿನ ಹಾಗೆ ಮರುದಿನಕ್ಕೆ ಒಣಗಿ ಹೋಗುವುದಾದರೂ ಅದು ಮಾಸ್ ಮೀಡಿಯ–ಎಂಬ ಮಾತನ್ನು ಮರೆಯುವಂತಿಲ್ಲ. ಹಿಂದಿನ ರಾತ್ರೆ ಹನ್ನೆರಡು ಗಂಟೆಯಲ್ಲಿ ಅಚ್ಚಾಗುತ್ತಿದ್ದದ್ದು ಮರುಬೆಳಗ್ಗೆ ನಾಡಿನಾದ್ಯಂತ ಪ್ರಸಾರವಾಗಿ ಬಿಡುತ್ತದೆ. ಆದ್ದರಿಂದ ಅದರ ವ್ಯಾಪಕತೆ ಹೆಚ್ಚು. ಮುದ್ರಿತ ಪುಸ್ತಕದ ಒಂದು ಸಾವಿರ ಪ್ರತಿಗಳು ಖರ್ಚಾಗಲು ಮೂರು ವರ್ಷ ಹಿಡಿದರೆ ಕನ್ನಡದಲ್ಲಿ ದಿನ ಪತ್ರಿಕೆಗಳು ೭೦-೮೦ ಸಾವಿರ ಪ್ರತಿಗಳು ಖರ್ಚಾಗುತ್ತವೆ. ಸಾಪ್ತಾಹಿಕ ಸಂಚಿಕೆಗಳು ಇನ್ನೂ ಹೆಚ್ಚು ಪ್ರಸಾರವಾಗಬಹುದು. ಇದರಲ್ಲಿ ವಿಮರ್ಶಾ ವಿಭಾಗವನ್ನು ಶೇ. ೧೦ ಜನ ಓದುತ್ತಾರೆಂದರೂ ೮೦೦೦ ಜನ ಆಯಿತು. ಎಂದರೆ ಹಿಂದಿನ ರಾತ್ರೆ ಅಚ್ಚಾಗುತ್ತಿರುವ (ಒಂದು ಪುಸ್ತಕದ) ವಿಮರ್ಶೆಯನ್ನು ಮರು ಬೆಳಗ್ಗೆ ಎಂಟು ಸಾವಿರ ಜನ ಓದುತ್ತಾರೆ! ಇದು ಮಹತ್ವದ ಸಂಖ್ಯೆಯಲ್ಲವೆ? ಎಂದ ಮೇಲೆ ಪತ್ರಿಕಾ ವಿಮರ್ಶೆ ವಹಿಸುವ ಪಾತ್ರ ಕೂಡ ಮಹತ್ವದ್ದು ಎಂದಾಯಿತು.

ವಿಮರ್ಶಕನ ಜವಾಬ್ದಾರಿ:

ಯಾವ ಪತ್ರಿಕೆಯಲ್ಲಿ ವಿಮರ್ಶೆ ಬಂದರೂ ಅದನ
ಬರೆಯುವಾತ ವಿಮರ್ಶಕನಾದ್ದರಿಂದ ಅದು ಪತ್ರಿಕೆ
ಅಭಿಪ್ರಾಯವಾಗಿರದೆ ಆ ಬಿಡಿ ವಿಮರ್ಶಕನದ್ದಾಗಿ
ತ್ತದೆ. ಪತ್ರಿಕೆ ಅವನ ಅಭಿಪ್ರಾಯವನ್ನು ವ್ಯಾಪ
ವಾಗಿ ಪ್ರಸಾರ ಮಾಡುತ್ತದೆ ಅಷ್ಟೆ. ಇದರಿಂದ
ಪತ್ರಿಕಾವಿಮರ್ಶಕನ ಜವಾಬ್ದಾರಿ ಹೆಚ್ಚು ಎಂದದ
ಅಷ್ಟು ಜನರ ಕಣ್ಣಿಗೆ ಬೀಳುವ ಒಂದು ಅಭಿಪ್ರಾ
ಪ್ರಾಮಾಣಿಕವಾಗಿರಬೇಕು. ಸತ್ಯನಿಷ್ಟವಾಗಿರಬೇಕ
ಕೃತಿಯ ನಿಜವಾದ ಮೌಲ್ಯವನ್ನು ತಿಳಿಸಬೇಕು. ಕೃ
ಯನ್ನು ಗಮನಿಸದೆ ವ್ಯಕ್ತಿಯನ್ನು ದೃಷ್ಟಿಯಲ್ಲಿಟ
ಕೊಂಡು ಬರೆಯುವ ವಿಮರ್ಶೆ ಸಾಹಿತ್ಯದ ಬೆಳವಣಿಗೆ
ದೃಷ್ಟಿಯಿಂದ ಅನಾರೋಗ್ಯಕರ.

ಈಚಿನ ದಿನಗಳಲ್ಲಿ ಕನ್ನಡದಲ್ಲಿ ಪ್ರಕಟವಾಗುತ್ತಿರು
ಪುಸ್ತಕಗಳ ಸಂಖ್ಯೆ ಹೆಚ್ಚಿದೆ. ಪ್ರಕಟವಾದ ಪುಸ್ತ
ಗಳಲ್ಲಿ ಬಹುತೇಕ ವಿಮರ್ಶೆಗೆ ಬರುತ್ತವೆ. ಅವುಗಳನ
ಪ್ರಕಾರಗಳ ಅನ್ವಯ ವಿವಿಧ ವಿಮರ್ಶಕರಿಗೆ ಕಳುಹಿ
ವಿಮರ್ಶೆ ಬರೆಯಿಸಿ ಪ್ರಕಟಿಸುವುದೇ ದೊಡ್ಡ ಸಾಹಸ
ಪತ್ರಿಕೆಯವರಿಗೆ. ಸ್ವೀಕಾರವಾದ ಪುಸ್ತಕದ ವಿಮರ್
ಯನ್ನು ಮೂರು ತಿಂಗಳೊಳಗಾಗಿಯಾದರೂ ಕಾ
ಬೇಕೆಂದು ಲೇಖಕರ ಹಂಬಲ. ಅದು ಸಹಜವೇ. ಆದ
ವಿಮರ್ಶೆಗೆಂದು ಪುಸ್ತಕ ಪಡೆದ ವಿಮರ್ಶಕರು ಸಹ
ವಾಗಿಯೇ ಸೋಮಾರಿಗಳು. ಅಥವಾ ಬೇರೆ ಕೆಲ
ದಲ್ಲಿರುವ ಅವರಿಗೆ ಸಕಾಲದಲ್ಲಿ ಪುಸ್ತಕ ಓದಿ ವಿಮರ್
ಬರೆದು ಕೊಡಲಾಗುವುದಿಲ್ಲ. ವರ್ಷಗಳು ಉರುಳ
ತ್ತವೆ. ಲೇಖಕರು ಪತ್ರಿಕೆಯವರನ್ನು ಒತ್ತಾಯಿ
ಅವರು ವಿಮರ್ಶಕರಿಗೆ ಜ್ಞಾಪಕಪತ್ರ ಕಳುಹಿಸಿದ
ಮಾತ್ರ ವಿಮರ್ಶೆ ಹೊರಬರುವುದು. ಇದರಿಂದ ಬೇಸತ್ತ
ಸಂಪಾದಕ ಮಂಡಲಿಯವರು ಯಾವ ವಿಮರ್ಶಕ ಕಾ
ಕಾಲಕ್ಕೆ ವಿಮರ್ಶೆ ಮಾಡಿಕೊಡುತ್ತಾನೋ ಆತನಿ
ಹೆಚ್ಚುಹೆಚ್ಚಾಗಿ ಪುಸ್ತಕ ಕೊಡಲಾರಂಭಿಸುತ್ತಾ
(ಕೆಲವು ಪತ್ರಿಕೆಗಳವರು ವಿಮರ್ಶಕರಿಗೆ ಸಂಭಾವ
ಕೊಡುವುದೂ ಉಂಟು.) ಇದರಿಂದ ಸಕಾಲದಲ್ಲಿ ವಿಮರ್
ಬರೆದುಕೊಡುವುದೇ ವಿಮರ್ಶಕರ ಅರ್ಹತೆಯಾಗಿ ಬಿ
ತ್ತದೆ! ಇನ್ನು ಕೆಲವರು ಪುಸ್ತಕಗಳನ್ನು ಸಂಗ್ರಹಿಸು

ಷ್ಟಿಯಿಂದಲೇ ವಿಮರ್ಶೆ ಮಾಡಲು ತೊಡಗುವುದುಂಟು. ತ್ರಿಕಾಲಯದ ಸಂಪಾದಕ ಮಂಡಲಿಯವರೇ ಉತ್ತಮ ಸ್ತಕಗಳನ್ನು ಆರಿಸಿಕೊಂಡು ವಿಮರ್ಶೆ ಬರೆದು ಗಿಸುವುದೂ ಉಂಟು.

ಇದೆಲ್ಲದರಿಂದ ಪತ್ರಿಕಾ ವಿಮರ್ಶೆಯಲ್ಲಿ ನಂಬಿಕೆ ಟ್ಟಿಕೊಂಡ ಲೇಖಕರಿಗೆ ಅನ್ಯಾಯವಾಗುತ್ತದೆ. ನಿರಾಶೆ ಾಗುತ್ತದೆ. ಮೊದಲನೆಯದಾಗಿ ಪುಸ್ತಕ ಕಳುಹಿಸಿದ ಟ್ಟೋ ದಿನಗಳಾದರೂ ವಿಮರ್ಶೆ ಬರುವುದಿಲ್ಲ. ಆಮೇಲೆ ದರೂ ಯಾರೋ ಒಬ್ಬರು ಕಾಟಾಚಾರಕ್ಕೆ ಬರೆದ ಲ್ಕು ಸಾಲುಗಳಿರುತ್ತವೆ. ಇದರಲ್ಲೂ ಪಕ್ಷಪಾತ ಂಟು. ಬೇಕಾದವರ ಸಾಧಾರಣ ಪುಸ್ತಕಕ್ಕೆ ದೊಡ್ಡ ಮರ್ಶೆ ; ಬೇಡವಾದವರ ಉತ್ತಮ ಪುಸ್ತಕಕ್ಕೂ ನಾಲ್ಕೇ ಲುಗಳಲ್ಲಿ ಮುಕ್ತಾಯ ! ಇಂಥ ಪದ್ಧತಿ ನಿಲ್ಲಬೇಕು ದಿದ್ದರೆ ಪತ್ರಿಕಾ ವಿಮರ್ಶೆಗಳಿಗೆ ಬೆಲೆ ಬರುವುದೆಂತು?

ಬೆಳೆ, ಕಳೆ :

ಬೆಳೆ ಬಂದಾಗ ಇದು ಉತ್ತಮ ಬೆಳೆ ಎಂದು ತೋರಿಸುವ, ಕಳೆ ಬಂದಾಗ ಇದು ಅಪಾಯಕಾರಿ ಎಂದು ಕಿತ್ತೆಸೆಯುವ ಕೆಲಸವನ್ನು ವಿಮರ್ಶೆ ಮಾಡಬೇಕಾಗುತ್ತದೆ. ಸಾಮಾನ್ಯ ಓದುಗರಿಗೆ ಉತ್ತಮವಾದದ್ದು ಯಾವುದು ಎಂದು ಮಾರ್ಗದರ್ಶನ ಮಾಡುವ ಹೊಣೆ ಪತ್ರಿಕಾ ವಿಮರ್ಶೆಯದೇ ಎಂದರೆ ತಪ್ಪಲ್ಲ. ಪತ್ರಿಕಾ ವಿಮರ್ಶೆ ನೋಡಿಕೊಂಡು ಎಷ್ಟು ಜನ ಪುಸ್ತಕಗಳನ್ನು ಕೊಳ್ಳುತ್ತಾರೆ, ಓದುತ್ತಾರೆ ಎಂಬ ಪ್ರಶ್ನೆ ಏಳಬಹುದು. ಪತ್ರಿಕಾ ವಿಮರ್ಶೆ ಅಂಥ ಮಟ್ಟವನ್ನು ಮುಟ್ಟಿಲ್ಲವೆಂದೇ ಇದು ನಡೆಯುತ್ತಿಲ್ಲ. ಸರಿಯಾದ, ಪ್ರಾಮಾಣಿಕವಾದ ವಿಮರ್ಶೆ ಒಂದು ಪತ್ರಿಕೆಯಲ್ಲಿ ಬರುತ್ತಿದೆಯೆಂದರೆ ಅದು ಆ ಪತ್ರಿಕೆಗೂ ಗೌರವ, ಓದುಗರಿಗೂ ಉಪಕಾರ. ಇಂಥ ಉಪಕಾರವನ್ನು ನಮ್ಮಲ್ಲಿ ಎಷ್ಟು ಪತ್ರಿಕೆಗಳು ಮಾಡುತ್ತಿವೆ ?.

" ನಾವು ಓದುವ ಪುಸ್ತಕಗಳಿಂದ, ಅದರಲ್ಲಿಯೂ ಚಿಕ್ಕಂದಿನಲ್ಲಿ ಓದುವ ಪುಸ್ತಕಗಳಿಂದ, ನಮ್ಮ ಮಾನಸಿಕಸಿದ್ಧಿ ಎಷ್ಟರಮಟ್ಟಿಗಾಗುತ್ತದೆಂಬುದನ್ನು ನಾವು ಸಾಕಷ್ಟು ಅರ್ಥಮಾಡಿಕೊಳ್ಳುತ್ತಿಲ್ಲ. ನಮಗೆ, ಜ್ಞಾನ ಸಂಪಾದನೆಗಾಗಿ, ಅನೇಕ ಅನುಕೂಲಗಳಿವೆ ;—ಈಗ ರೇಡಿಯೋ, ಚಲನಚಿತ್ರ, ವೃತ್ತಪತ್ರಿಕೆಗಳಿವೆ ; ಟೆಲಿವಿಷನ್ ಕೂಡ ನಮಗೆ ಲಭ್ಯವಾಗಿದೆ ; ಆದರೆ, ಪುಸ್ತಕಾಭ್ಯಾಸ ಅತ್ಯಂತ ಪುರಾತನವಾದುದಷ್ಟೇ ಅಲ್ಲದೆ, ಅತ್ಯಂತ ಪರಿಣಾಮಕಾರಿಯಾದ ವಿಧಾನವೂ ಅಹುದು. ತಾಂತ್ರಿಕವಾಗಿ ತಿಳಿಸುವ ವಿಧಾನಕ್ಕಿಂತ, ಪುಸ್ತಕವನ್ನೋದುವುದು ಅತ್ಯಂತ ವಿಭಿನ್ನವಾದುದಾಗಿರುತ್ತದೆ. ಸ್ವಾಧ್ಯಾಯ ಅಥವಾ ಅಧ್ಯಾಯನವು ನಮ್ಮ ಮೇಲೆ ಪ್ರಚೋದಿತವಾಗಿದೆ. ನಮ್ಮ ಸಂಗಡ ಪುಸ್ತಕಗಳಿದ್ದರೆ, ನಾವೆಂದಿಗೂ ಒಬ್ಬಂಟಿಗರಾಗಿರುವುದಿಲ್ಲ ".

ಎಸ್. ರಾಧಾಕೃಷ್ಣನ್

ಓರಿಯಂಟಲ್ ಲೈಬ್ರರಿ ಮತ್ತು ಸಂಶೋಧನಾ ಕೇಂದ್ರ

● ಡಾ|| ಜಿ. ಮರುಳಸಿದ್ದಯ್ಯ

ಭಾರತೀಯ ಪ್ರಾಚೀನ ಸಾಹಿತ್ಯ, ಸಂಸ್ಕೃತಿ, ಶಾಸ್ತ್ರ, ಕಲೆ ಮತ್ತು ಸಂಪ್ರದಾಯ ಇವುಗಳ ರಕ್ಷಣೆ ಮತ್ತು ಪೋಷಣೆ ಮೈಸೂರು ನಗರದಲ್ಲಿ ಸಮೃದ್ಧಿಯಾಗಿರುವುದಕ್ಕೆ ಆಳಿದ ಶ್ರೀ ಚಾಮರಾಜ ಒಡೆಯರ ದೂರ ದೃಷ್ಟಿ ಕಾರಣ ಆದಕ್ಕಾಗಿ ನಾವೆಲ್ಲರೂ ಕೃತಜ್ಞರಾಗಿರಬೇಕಾಗಿದೆ. ಈಗ್ಗೆ ಎಂಭತ್ತು ವರ್ಷಗಳ ಹಿಂದೆ ಭಾರತ ಸರಕಾರದ ಕರೆಗನುಸಾರವಾಗಿ, ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ಕಲೆ ಮುಂತಾದುವುಗಳಿಗೆ ಸಂಬಂಧಿಸಿದ ಸಂಸ್ಕೃತ ಮತ್ತು ಕನ್ನಡದ ಹಸ್ತಪ್ರತಿಗಳ ಗ್ರಂಥರಾಶಿಯನ್ನು ಸಂಸ್ಥಾನದ ನಾನಾ ಭಾಗಗಳಿಂದ ಸಂಗ್ರಹಿಸಿ, ಸಂಪಾದಿಸಿ ಮುದ್ರಿಸಬೇಕೆಂಬ ಮಹತ್ತರವಾದ ಧ್ಯೇಯದಿಂದ ೧೮೯೧ನೇ ಇಸ್ವಿ ಅಕ್ಟೋಬರ್ ತಿಂಗಳಲ್ಲಿ "ಓರಿಯಂಟಲ್ ಲೈಬ್ರರಿ" ಸ್ಥಾಪನೆಗೆ ಶ್ರೀ ಚಾಮರಾಜ ಒಡೆಯರು ಅಪ್ಪಣೆ ಮಾಡಿದರು. ಅಲ್ಲದೆ ಆಗಿನ ಮೈಸೂರು ಸರಕಾರ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಕಾರ್ಯಾಸಕ್ತರಾಗಿದ್ದ ಶ್ರೀಯುತ ಎಂ. ಎಸ್. ಕೆ. ರಾವ್ ಅವರೂ, ಎಂ. ಹಿರಿಯಣ್ಣನವರೂ ಮತ್ತು ಈ ಸಂಸ್ಥೆಯ ಮೊದಲನೆಯ ಕ್ಯುರೇಟರೂ ಆದ ಎ. ಮಹದೇವಶಾಸ್ತ್ರಿಗಳ ಈ ಗ್ರಂಥಾಲಯದ ಪ್ರಾರಂಭ ಮತ್ತು ಅಭ್ಯುದಯ ಕಾರಣರಾದರು. ಇವರೆಲ್ಲರ ಅಮೋಘವಾದ ಪ್ರಯ ಗಳಿಂದ, ಈ ಸಂಸ್ಥೆ ಪಬ್ಲಿಕ್ ಲೈಬ್ರರಿ ಎಂದಾಗಿ ಈ "ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್" ಅಥ "ಪ್ರಾಚ್ಯ ವಿದ್ಯಾಸಂಶೋಧನಾಲಯ" ಎಂಬ ಹೆ ನಿಂದ, ಭಾರತಕ್ಕೆ ಭೇಟಿಯಿತ್ತ ಎಲಿಜಬತ್ ರಾಣಿಯ ಜ್ಞಾಪಕಾರ್ಥವಾಗಿ ನಿರ್ಮಾಣವಾದ, "ಜ್ಯೂಬಿ ಹಾಲ್" ಎಂಬ ಸೌಧದಲ್ಲಿಯೇ ಇಂದಿಗೂ ಇದ್ದು ಯದೆ ಬೆಳೆಯುತ್ತಿದೆ.

ಸಂಸ್ಥೆಯ ಪ್ರಾರಂಭ ಮತ್ತು ಬೆಳವಣಿಗೆ

ಓರಿಯಂಟಲ್ ಲೈಬ್ರರಿಯು ಪ್ರಾರಂಭವಾದ ಸಮ ದಲ್ಲಿ ಮೈಸೂರು ಸರಕಾರದ ವಿದ್ಯಾ ಇಲಾಖೆ (Department of Education) ವ್ಯಾಪ್ತಿಗೊಳಪ ಸ್ವತಂತ್ರವಾದ ಸಂಸ್ಥೆಯಾಗಿತ್ತು. ಶ್ರೀಯುತ ಎ. ಮ ದೇವಶಾಸ್ತ್ರಿಗಳು ಈ ಸಂಸ್ಥೆಗೆ ಮುಖ್ಯ ಅಧಿಕಾರಿಗಳ

ರು. ಗ್ರಂಥ ಸಂಕಲನ ಕಾರ್ಯಕ್ಕಾಗಿ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಗಳಲ್ಲಿ ಪಂಡಿತರಾದ ಶ್ರೀ ಎಸ್. ಜಿ. ನರಸಿಂಹಾಚಾರ್ಯರು ನೇಮಿಸಲ್ಪಟ್ಟರು. ಆಗಿನ ಘನ ಸರಕಾರದ ಉದಾರವಾದ ದ್ರವ್ಯಸಹಾಯದಿಂದ ಹಸ್ತ ಪ್ರತಿಗಳ ಸಂಗ್ರಹ ಕಾರ್ಯ ಪ್ರಾರಂಭವಾಯಿತು. ಮೈಸೂರು ಸರಕಾರದ ಪ್ರಾಚ್ಯವಸ್ತು ಸಂಗ್ರಹಾಲಯ ದವರೂ (Department of Archaeology) ಈ ಸಂಸ್ಥೆಯ ಕಟ್ಟಡದಲ್ಲಿಯೇ ಕೆಲಸ ಮಾಡುತ್ತಿದ್ದು, ಅವ ರಿಂದ ಸಂಗ್ರಹಿಸಲ್ಪಟ್ಟ ಹಸ್ತಪ್ರತಿಗಳೂ ಸಂಸ್ಥೆಯ ಗ್ರಂಥಾಲಯಕ್ಕೆ ಸೇರಿಸಲ್ಪಟ್ಟವು. ಈ ಸಂಸ್ಥೆಯಲ್ಲಿ ನಡೆ ಯುತ್ತಿದ್ದ ಸಂಶೋಧನಾ ಕಾರ್ಯಕ್ಕೆ ಉಪಯುಕ್ತವಾದ ಹಲವು ಮುದ್ರಿತ ಗ್ರಂಥಗಳು ವಿದ್ಯಾ ಇಲಾಖೆಯಿಂದ ವರ್ಗಾಯಿಸಲ್ಪಟ್ಟು, ಸಂಸ್ಥೆಯ ಮುದ್ರಿತ ಗ್ರಂಥಗಳ ವಿಭಾಗ ಅಂಕುರಿಸಿತು.

ಸಂಸ್ಥೆಯು ಮೊದಲನೆಯ ಸಾರ್ವತ್ರಿಕ ಗ್ರಂಥಾಲಯವಾದುದು

ಈ ರೀತಿ ಹಸ್ತಪ್ರತಿಗಳ ಸಂಗ್ರಹವೂ ಮತ್ತು ಮುದ್ರಿತ ಗ್ರಂಥಗಳ ಸಂಕಲನವೂ ಪ್ರಾರಂಭವಾಗಿ, ಹೆಚ್ಚು ಹೆಚ್ಚು ಗ್ರಂಥಗಳು ಸಂಸ್ಥೆಯ ಗ್ರಂಥಾಲಯಕ್ಕೆ ಬಂದು ಸೇರಿದವು. ಎಲ್ಲ ಸಂಶೋಧಕರಿಗೂ ಮತ್ತು ವಿದ್ಯಾಭಿಮಾನಿಗಳಿಗೂ ಗ್ರಂಥಾಲಯ ಉಪಯೋಗವಾಗು ವಂತೆ ಸಂಸ್ಥೆಯಲ್ಲಿ ಅನುಕೂಲಗಳು ಕಲ್ಪಿಸಲ್ಪಟ್ಟು, ಸಂಸ್ಥಾನದಲ್ಲಿಯೇ ಮೊದಲನೆಯ ಸಾರ್ವತ್ರಿಕ ಗ್ರಂಥಾ ಲಯವಾಯಿತು. ಈ ಸಂಸ್ಥೆಯಲ್ಲಿ ಗ್ರಂಥ ಸಂಶೋಧನೆ ಮತ್ತು ಸಂಪಾದನೆ ಮಾಡಲು ವಿಖ್ಯಾತ ವಿದ್ವನ್ಮಣಿಗಳಿಗೆ ಸ್ಥಾನ ಕೊಡಲಾಯಿತು. ಶ್ರೀಯುತರುಗಳಾದ ಕಸ್ತೂರಿ ರಂಗಾಚಾರ್ಯರು, ನರಹರಿಜ್ಯೋಯಿಸರು, ಆರ್. ರಾಘ ವೇಂದ್ರಾಚಾರ್ಯರು, ವಿ. ಶಾಮಾಚಾರ್ಯರು, ಡಿ. ಎಲ್. ನರಸಿಂಹಾಚಾರ್ಯರು, ಮತ್ತು ಟಿ.ಎನ್. ಶ್ರೀಕಂಠಯ್ಯ ನವರು ಮತ್ತು ಮಹಾಮಹೋಪಾಧ್ಯಾಯ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು ಇವರಲ್ಲಿ ಪ್ರಮುಖರಾದವರು. ಇವರೆಲ್ಲರ ಶ್ರಮದಿಂದ ಗ್ರಂಥಸಂಪಾದನಾ ಕಾರ್ಯ ಭರದಿಂದ ನಡೆದು, ಸಂಪಾದಿತ ಗ್ರಂಥಗಳನ್ನು ಬಿಬ್ಲಿ ಯೋಥಿಕ ಸಂಸ್ಕೃತಕ (Bibliotheca Samskritaka) ಮತ್ತು ಬಿಬ್ಲಿಯೋಥಿಕ ಕರ್ನಾಟಕ (Bibliotheca Carntika) ಎಂಬ ಎರಡು ಶ್ರೇಣಿಗಳಲ್ಲಿ ಪ್ರಕಟಿಸಲಾ ಯಿತು. ೧೮೯೩ರಲ್ಲಿ ಆಪಸ್ತಂಭ ಗೃಹ್ಯಸೂತ್ರವೂ (ಸುದರ್ಶನಾಚಾರ್ಯರ ವ್ಯಾಖ್ಯೆಯೊಡನೆ) ಮತ್ತು ೧೯೦೦ರಲ್ಲಿ ಪಂಪನ ಆದಿಪುರಾಣವೂ ಮೇಲೆ ಸೂಚಿಸಿರುವ ಎರಡು ಗ್ರಂಥ ಶ್ರೇಣಿಗಳ ಮೊದಲನೆಯ ಪುಷ್ಪವಾಗಿ ಪ್ರಕಟಿಸಲಾಯಿತು. ೧೯೧೬ರ ವೇಳೆಗಾಗಲೇ ಐವತ್ತು ಸಂಸ್ಕೃತ ಗ್ರಂಥಗಳೂ ಏಳು ಕನ್ನಡ ಗ್ರಂಥಗಳೂ ಈ ಶ್ರೇಣಿಗಳಲ್ಲಿ ಪ್ರಕಟಿತವಾದವು. ಇದೇ ಸಮಯದಲ್ಲಿಯೇ, ಅಂದರೆ ೧೯೦೯ರಲ್ಲಿ ಮೈಸೂರು ಸಂಸ್ಥಾನಕ್ಕೂ ಮತ್ತು ಭಾರತಕ್ಕೂ ಕೀರ್ತಿ ತಂದಿರುವ "ಕೌಟಿಲ್ಯನ ಅರ್ಥ ಶಾಸ್ತ್ರ"ವು ಈ ಗ್ರಂಥಾಲಯದಲ್ಲಿಯೇ ಕೆಲಸ ಮಾಡು ತ್ತಿದ್ದ ಶ್ರೀ ಆರ್. ಶಾಮಾಶಾಸ್ತ್ರಿಗಳವರಿಂದ ಸಂಶೋಧಿಸಿ ವಿಶ್ವದಲ್ಲಿಯೇ ಮೊದಲನೆಯ ಸಲ ಪ್ರಕಟಿಸಲಾಯಿತು. ಈ ಕಾರಣದಿಂದಲೇ ಈ ಸಂಸ್ಥೆಯಿರುವ ಸ್ಥಳ ಇಂದಿಗೂ "ಕೌಟಿಲ್ಯ ಸ್ಥಳ" ಎಂದು ಕರೆಯಲ್ಪಡುತ್ತಿದೆ.

ಮೈಸೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿ ಸಂಘಟನೆ (೧೯೧೬–೧೯೪೨)

೧೯೧೬ನೆಯ ಇಸವಿಯಲ್ಲಿ ಮೈಸೂರಿನ ವಿಶ್ವವಿದ್ಯಾ ನಿಲಯ ಸ್ಥಾಪಿತವಾದಾಗ ಓರಿಯಂಟಲ್ ಲೈಬ್ರರಿಯು ವಿಶ್ವವಿದ್ಯಾನಿಲಯದ ಆಡಳಿತಕ್ಕೊಳಗಾಯಿತು. ವಿಶ್ವ ವಿದ್ಯಾನಿಲಯದ ಉಪಕುಲಪತಿಗಳ ಅಧ್ಯಕ್ಷತೆಯಲ್ಲಿ, ಸಂಸ್ಥೆಯ ಪುರೋಭಿವೃದ್ಧಿಗಾಗಿ ಸೂಕ್ತ ಸಲಹೆಗಳನ್ನು ಕೊಡಲು ಶ್ರೀಯುತರಾದ ಸಿ. ಆರ್. ರೆಡ್ಡಿಯವರೂ, ಎಂ. ಹಿರಿಯಣ್ಣನವರೂ, ಬಿ. ಎಂ. ಶ್ರೀಕಂಠಯ್ಯನವರೂ ಮತ್ತು ನವೀನಂ ರಾಮಾನುಜಾಚಾರ್ಯರೂ ಸೇರಿದ ಒಂದು ಆಡಳಿತ ಸಭೆ(Committee of Management) ಏರ್ಪಾಡಾಯಿತು. ೧೯೧೬ರಲ್ಲಿ ಶ್ರೀ ಎ. ಮಹದೇವಶಾಸ್ತ್ರಿ ಗಳು ನಿವೃತ್ತರಾದನಂತರ ೧೯೧೮ರಲ್ಲಿ ಶ್ರೀ ಆರ್. ಶಾಮಾ ಶಾಸ್ತ್ರಿಗಳು ಸಂಸ್ಥೆಯ ಕ್ಯುರೇಟರ್ ಆಗಿ ಅಧಿಕಾರ ವಹಿಸಿ ಕೊಳ್ಳುವವರೆಗೂ ಪಂಡಿತ ಆರ್. ರಾಘವೇಂದ್ರಾ ಚಾರ್ಯರು ಸಂಸ್ಥೆಯ ಮುಖ್ಯಾಧಿಕಾರಿಗಳಾಗಿದ್ದರು. ಇವರ ಕಾಲದಲ್ಲಿ ಎರಡು ಸಂಸ್ಕೃತ ಗ್ರಂಥಗಳು ಸಂಶೋಧಿಸ ಲ್ಪಟ್ಟು ಪ್ರಕಟವಾದವು.

೧೯೧೮ರ ವೇಳೆಗಾಗಲೇ ಅನೇಕ ಹಸ್ತಪ್ರತಿಗಳು ಸಂಗ್ರಹವಾಗಿ ಅರವತ್ತು ಗ್ರಂಥಗಳು ಸಂಶೋಧನೆಯಾಗಿ

ಸಂಪಾದಿಸಲ್ಪಟ್ಟು ಮುದ್ರಿತವಾಗಿದ್ದವು. ಈ ಸಂಸ್ಥೆಯು ಆಫೀಸು ವಿಭಾಗ, ಹಸ್ತಪ್ರತಿಗಳ ಸಂಗ್ರಹಾಲಯ ಮತ್ತು ಪ್ರಕಟನಾಭಾಗ, ಮುದ್ರಿತ ಗ್ರಂಥಗಳ ವಿಭಾಗ ಮತ್ತು ಸಂಶೋಧನಾ ವಿಭಾಗ ಎಂದು ನಾಲ್ಕು ಭಾಗವಾಗಿ ವಿಂಗಡಿಸಲ್ಪಟ್ಟು, ಆಯಾ ಭಾಗಕ್ಕೆ ಸೂಕ್ತವಾದ ಕಾರ್ಯಗಳನ್ನು ಅಳವಡಿಸಲಾಯಿತು. ಆದರೆ ಈ ಏರ್ಪಾಡಿನಿಂದ ಕೆಲಸವು ಸಾಕಷ್ಟು ಪ್ರಮಾಣದಲ್ಲಿ ಆಗದೆ, ಅಲ್ಲಿಗೇ ನಿಲ್ಲಿಸಲಾಯಿತು.

ಇದಾದನಂತರ ಗ್ರಂಥಸಂಗ್ರಹ ಕಾರ್ಯಕ್ಕಾಗಿ ಹೆಚ್ಚು ಪಂಡಿತರುಗಳನ್ನು ನೇಮಿಸಲಾಯಿತು. ಸಂಸ್ಥೆಯಲ್ಲಿ ಸಂಗ್ರಹವಾಗಿದ್ದ ಗ್ರಂಥಗಳ ವಿವರಣಾತ್ಮಕ ಸೂಚಿಗಳನ್ನೂ (Descriptive Notes) ಮತ್ತು ಗ್ರಂಥ ಸೂಚಿಯೂ (Catalogue) ಹಾಗೂ ಗ್ರಂಥ ಸಂಶೋಧನೆ ಮತ್ತು ಸಂಶೋಧನಾ ಕಾರ್ಯವೂ ತೃಪ್ತಿಕರವಾದ ರೀತಿಯಲ್ಲಿ ನಡೆಯಿತು. ೧೯೨೯ರಲ್ಲಿ ಡಾ|| ಆರ್. ಶಾಮಾಶಾಸ್ತ್ರಿಗಳು ನಿವೃತ್ತರಾಗುವ ವೇಳೆಗೆ ಮೂರು ಭಾಗಗಳಿಂದ ಪೂರಿತವಾದ ಅರ್ಥಶಾಸ್ತ್ರದ ಪದಸೂಚಿಯೂ ಸೇರಿ ಹತ್ತೊಂಬತ್ತು ಸಂಸ್ಕೃತ ಗ್ರಂಥಗಳೂ ಮತ್ತು ಒಂಭತ್ತು ಕನ್ನಡ ಗ್ರಂಥಗಳೂ ಪ್ರಕಟವಾದವು.

ಸಂಸ್ಥೆಗೆ ಎಕ್ಸ್ ಅಫಿಷಿಯೋ ಕ್ಯುರೇಟರ್ ನೇಮಕ

೧೯೨೯ರಲ್ಲಿ ಮೈಸೂರಿನ ವಿಶ್ವವಿದ್ಯಾನಿಲಯದ ಸಂಸ್ಕೃತ ಪ್ರಾಧ್ಯಾಪಕರಾದ ಡಿ. ಶ್ರೀನಿವಾಸಾಚಾರ್ಯರು ಸಂಸ್ಥೆಯ ಎಕ್ಸ್ ಅಫಿಷಿಯೋ ಕ್ಯೂರೇಟರ್ ಆಗಿ ನೇಮಕರಾದರು. ಇವರಿಗೆ ಸಹಾಯಕರಾಗಿ ಒಬ್ಬ ಸಹಾಯಕ-ಕ್ಯೂರೇಟರ್ ಇದ್ದರು. ಈ ಕಾಲದಲ್ಲಿ ಐದು ಸಂಸ್ಕೃತ ಗ್ರಂಥಗಳೂ ಮೂರು ಕನ್ನಡ ಗ್ರಂಥಗಳೂ ಸಂಶೋಧಿತವಾಗಿ ಪ್ರಕಟಿತವಾದವು. ಆಡಳಿತ ಮಂಡಳಿಯ ಹೆಸರು 'ಓರಿಯಂಟಲ್ ಲೈಬ್ರರಿ ಕಮಿಟಿ' ಎಂದು ಬದಲಾಯಿಸಲ್ಪಟ್ಟಿತು. ವಿಶ್ವವಿದ್ಯಾನಿಲಯದ ಕನ್ನಡ ಮತ್ತು ಪರ್ಷಿಯನ್ ಪ್ರಾಧ್ಯಾಪಕರನ್ನು ಮಂಡಳಿಯ ಸದಸ್ಯರುಗಳನ್ನಾಗಿ ನೇಮಿಸಲಾಯಿತು.

ಈ ವಿಧವಾದ ಎಕ್ಸ್ ಅಫಿಷಿಯೋ ವ್ಯವಸ್ಥೆಯು ಸಂಸ್ಥೆಯ ಅಭ್ಯುದಯಕ್ಕೆ ಸಾಕಷ್ಟು ಉಪಯೋಗವಾಗಲಿಲ್ಲ. ಆದ್ದರಿಂದ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ ಡಿ. ಶ್ರೀನಿವಾಸಾಚಾರ್ಯರು ನಿವೃತ್ತರಾದ ಕೂಡಲೇ, ಸಹಾಯಕ ಕ್ಯೂರೇಟರ್ ಆಗಿದ್ದ ಶ್ರೀ ಎಂ. ಎಸ್. ಬಸ ಲಿಂಗಯ್ಯನವರನ್ನು ೧೯೩೬ರಲ್ಲಿ ಕ್ಯೂರೇಟರ್ ಆಗಿ ನಿ ಮಿಸಲಾಯಿತು. ೧೯೪೩ರ ವರೆಗೂ ಇವರು ಕ್ಯೂರೇಟ ಆಗಿದ್ದ ಅವಧಿಯಲ್ಲಿ ನಾಲ್ಕು ಸಂಸ್ಕೃತ ಗ್ರಂಥಗಳ ಮೂರು ಕನ್ನಡ ಗ್ರಂಥಗಳೂ ಮತ್ತು ವೇದಗಳ ಹ ಪ್ರತಿಗಳ ವಿವರಣಾತ್ಮಕವಾದ ಗ್ರಂಥಸೂಚಿಯೂ ಪ್ರ ಟಿತವಾದವು.

ಸಂಸ್ಥೆಯ ಹೆಸರು ಮತ್ತು ಇತರ ಬದಲಾವಣೆಗಳು

೧೯೪೩ರಲ್ಲಿ ಶ್ರೀ ಎಂ. ಎಸ್. ಬಸವಲಿಂಗಯ್ಯನವ ವಿಧಿವಶರಾದ್ದರಿಂದ ಸಂಸ್ಥೆಯಲ್ಲಿ ಅಸಿಸ್ಟೆಂಟ್ ಕ್ಯೂರೇಟ ಆಗಿದ್ದ ಶ್ರೀ ಹೆಚ್. ಆರ್. ರಂಗಸ್ವಾಮಿ ಅಯ್ಯಂಗಾ ಅವರು ಕ್ಯೂರೇಟರ್ ಆಗಿ ನೇಮಕರಾದರು. ಪ್ರೊ|| ಬ ಎಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ, ಸಂಸ್ಥೆಯನ ಎಲ್ಲಾ ಭಾಗಗಳಲ್ಲಿಯೂ ಸ್ವಯಂಪೂರಿತವಾದದ್ದನ್ನಾ ಮಾಡಲು ಸೂಕ್ತ ಸಲಹೆಗಳನ್ನು ಕೊಡಲು ಒಂ ಮಂಡಲಿ ಏರ್ಪಾಡಾಯಿತು. ಈ ಮಂಡಲಿಯು ವರ ಯಲ್ಲಿ ಸೂಚಿಸಿದ್ದ ಸಲಹೆಗಳನ್ನು ಸರಕಾರವು ಪರಿಶೀಲಿ ಒಪ್ಪಿಕೊಂಡು "ಓರಿಯಂಟಲ್ ಲೈಬ್ರರಿ" ಎಂ ಸಂಸ್ಥೆಯ ಹೆಸರನ್ನು "ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್" (Oriental Research Institut ಎಂದು ಬದಲಾಯಿಸಲು ಅನುಮತಿ ಕೊಟ್ಟು, ಸಂಸ್ಥೆ ಅಭಿವೃದ್ಧಿಯ ವಿಚಾರದಲ್ಲಿ ವಿವರವಾದ ಸಲಹೆಗಳನ ಕೊಡುವಂತೆ ತಿಳಿಸಿತು.

ಸರಕಾರದ ಈ ನಿರ್ದೇಶದಂತೆ ಮಂಡಲಿಯು ಒಂ ದೀರ್ಘವಾದ ವರದಿಯನ್ನು ಸರಕಾರಕ್ಕೆ ಒಪ್ಪಿಸಿತು. ವರದಿಯನ್ನು ಪರಿಶೀಲನೆ ಮಾಡಿ ಸರಕಾರವು ೧೯೪ ಜುಲೈ ತಿಂಗಳು ೧೯ನೇ ದಿನಾಂಕ, ಒಂದು ಆ ಯನ್ನಿತ್ತು ಸಂಸ್ಥೆಯು ತಾತ್ಕಾಲಿಕವಾಗಿ ವಿಶ್ವವಿದ್ಯಾನಿ ಯದ ಆಡಳಿತದಲ್ಲಿ ಮುಂದುವರಿಯಬೇಕೆಂದೂ, ಸಂ ಯಲ್ಲಿನ ಗ್ರಂಥಗಳ ಸೂಚಿಯೂ, ಆರಿಸಲ್ಪಟ್ಟ ಗ್ರಂಥಗ ಸಂಶೋಧನೆ ಮತ್ತು ಮುದ್ರಣ ಕಾರ್ಯಗಳೂ ಹೆಚ ಹೆಚ್ಚಾದ ದ್ರವ್ಯಾನುಕೂಲವಾಗಿ ಮತ್ತಷ್ಟು ಚೆನ್ನಾ ನಡೆಯಬೇಕೆಂದು ಅಭಿಪ್ರಾಯಪಟ್ಟಿತು. ಅಲ್ಲದೆ ಸಂಸ್ಥ ವಲ್ಲಿರುವ ವೇದಾಂತ, ಸ್ಮೃತಿ, ಆಯುರ್ವೇದ ಮತ ಇತರ ಕಲೆಗಳಿಗೆ ಸಂಬಂಧಿಸಿದ ಕೆಲವು ಉತ್ತಮ ಗ್ರಂ

ನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಿಗೆ ರ್ಗಮೆ ಮಾಡಬೇಕೆಂದೂ ಇಷ್ಟಪಟ್ಟಿತ್ತು. ಸಂಸ್ಥೆಗೆ ಬ್ಬ ನಿರ್ದೇಶಕರನ್ನು(Director) ನೇಮಿಸುವ ವಿಚಾರ ನ್ನು ಪ್ರಸ್ತಾಪಿಸಿ, ಬೇಕಾಗುವ ದ್ರವ್ಯಾನುಕೂಲದ ಗ ವಿವರವಾದ ವರದಿಯನ್ನು ಕಳುಹಿಸಿಕೊಡು ತೆಯೂ ಸರಕಾರ ಆಜ್ಞಾಪಿಸಿತ್ತು. ಅದೇ ಸಮಯ ಲ್ಲಿಯೇ 'ಕ್ಯೂರೇಟರ್' ಹುದ್ದೆಯನ್ನು 'ಸೂಪ ರಿಂಟೆಂಡೆಂಟ್' ಹುದ್ದೆಯಾಗಿ ಬದಲಾಯಿಸುವಂತೆ ಸರ ಕಾರ ಸೂಚಿಸಿತು.

ಈ ವಿಧವಾದ, ಸರಕಾರದಿಂದ ಬಂದ ಸೂಚನೆಗಳನ್ನು ಷ್ಟಿಯಲ್ಲಿಟ್ಟುಕೊಂಡು ಸಂಸ್ಥೆಯ ಸಂಘಟನಾ ಕಾರ್ಯಕ್ಕೆ ಕ್ತ ಸಲಹೆಗಳನ್ನು ಕೊಡಲು ೧೯೪೬ನೇ ಇಸವಿ ಪ್ಟೆಂಬರ್ ತಿಂಗಳಿನಲ್ಲಿ ಪ್ರೊ॥ ವಿ. ಎಲ್. ಡಿಸೌಜಾ ವರ ಅಧ್ಯಕ್ಷತೆಯಲ್ಲಿ ಒಂದು ಮಂಡಳಿಯು ನೇಮಕ ಯಿತು. ಈ ಮಂಡಲಿಯು ತನ್ನ ವರದಿಯಲ್ಲಿ ಸಂಸ್ಕೃತ, ನ್ನಡ ಮತ್ತು ಪರ್ಷಿಯನ್—ಈ ಮೂರು ವಿಭಾಗ ಳಿಗೂ ಬೇರೆಬೇರೆಯಾಗಿ ಉಪಪ್ರಾಧ್ಯಾಪಕ ವರ್ಗದ ತನದಲ್ಲಿ ಒಬ್ಬೊಬ್ಬ ಅಧಿಕಾರಿಯನ್ನು ನಿಯಾಮಕ ಮಾಡಬೇಕೆಂದು ಸಲಹೆ ಮಾಡಿತು. ಅಲ್ಲದೆ ಸಂಸ್ಥೆಯ ಪ್ರಮುಖ್ಯ ಮತ್ತು ಪ್ರಾಧಾನ್ಯದ ದೃಷ್ಟಿಯಿಂದ ಮತ್ತು ದೇಶದಲ್ಲಿರುವ ಇತರ ಸಂಶೋಧನಾ ಸಂಸ್ಥೆಗಳ ಮಟ್ಟಕ್ಕೆ ಈ ಸಂಸ್ಥೆಯನ್ನೂ ತರಲು ಅನುಕೂಲವಾಗುವಂತೆ, ಸಂಸ್ಥೆಯ ಮುಖ್ಯ ಅಧಿಕಾರಿಯ ಹುದ್ದೆಯನ್ನು ಡೈರೆ ಕ್ಟರ್ ಎಂಬುದಾಗಿ ಸೂಚಿಸಲ್ಪಟ್ಟು ಅವರ ವೇತನ ಇತ್ಯಾದಿಗಳು ವಿಶ್ವವಿದ್ಯಾನಿಲಯದ ಸಂಸ್ಕೃತ ಪ್ರಾಧ್ಯಾ ಪಕರ ವೇತನಕ್ಕೆ ಸಮಾನವಾಗಿರುವಂತೆ ಮಾಡಬೇಕೆಂದೂ ಸಲಹೆ ನೀಡಿತು.

ವಿಶ್ವವಿದ್ಯಾನಿಲಯದ ಆಯೋಗ ೧೯೪೭— ಡಾ॥ ರಾಧಾಕೃಷ್ಣನ್‌ರವರ ಸಲಹೆ

ಆಗ ಭಾರತಕ್ಕೆ ಸ್ವಾತಂತ್ರ್ಯ ಬಂದ ಸಮಯ. ಆದ್ದ ರಿಂದ ಸಂಸ್ಥೆಯ ಭವಿಷ್ಯವನ್ನು ನಿರ್ಧರಿಸಲು ಸ್ವಲ್ಪ ತಡ ವಾಯಿತು. ಆಗ ಡಾ॥ ಎಸ್. ರಾಧಾಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರಕಾರದ ವಿಶ್ವವಿದ್ಯಾನಿಲಯದ ಆಯೋಗವು (University Grants Commission) ಈ ಸಂಸ್ಥೆಗೆ ಭೇಟಿ ಇತ್ತು, ಮೈಸೂರು ಸಂಸ್ಥಾನದಲ್ಲಿ, ಈ ಸಂಸ್ಥೆಯು ಸಂಸ್ಕೃತಾಭ್ಯಾಸದ ಪ್ರಧಾನ ಸಂಸ್ಥೆಯಾಗ ಬೇಕೆಂದು ಅಭಿಪ್ರಾಯಪಟ್ಟರು. ಡಾ॥ ಸಿ. ಆರ್. ರೆಡ್ಡಿ ಯವರು ಸರಕಾರದ ವಿದ್ಯಾ ಇಲಾಖೆಯಲ್ಲಿ ಹಲವು ಮಾರ್ಪಾಡುಗಳನ್ನು ಕುರಿತ ತಮ್ಮ ವಿಶೇಷ ವರದಿಯಲ್ಲಿ, ಈ ಸಂಸ್ಥೆಯ ಕೆಲಸದಲ್ಲಿ, ಹಾಗೂ ವಿಶ್ವವಿದ್ಯಾನಿಲಯದ ಸಂಸ್ಕೃತ ಶಾಖೆ ಮತ್ತು ಮಹಾರಾಜ ಸಂಸ್ಕೃತ ಮಹಾ ಪಾಠಶಾಲೆ ಇವುಗಳ ಕೆಲಸದಲ್ಲಿಯೂ ಅಲ್ಪಸ್ವಲ್ಪ ಬದ ಲಾವಣೆ ಮಾಡಿ "ಇಂಡಾಲಜಿ" ಎಂಬ ಇಲಾಖೆಯನ್ನು ಸಂಘಟಿಸಬಹುದೆಂದೂ ಸೂಚಿಸಿದರು. ಅದೇ ಸಮಯ ದಲ್ಲಿಯೇ ಸರಕಾರವೂ ವಿಶ್ವವಿದ್ಯಾನಿಲಯದಲ್ಲಿ 'ಭಾರ ತೀಯ ಸಂಸ್ಕೃತಿಯ ಪೀಠವನ್ನು (Chair for Indian Culture) ಸ್ಥಾಪಿಸಬೇಕೆಂದು ಆಲೋಚಿಸುತ್ತಿತ್ತು. ಆದರೆ ಇವಾವುದೂ ಕಾರ್ಯಗತವಾಗದೆ, ಈ ಸಂಸ್ಥೆ ತನ್ನದೇ ಆದ ಮಾರ್ಗದಲ್ಲಿ ಬೆಳೆಯುತ್ತಾ ಬಂದಿದೆ.

೧೯೫೪ರಲ್ಲಿ ಈ ಸಂಸ್ಥೆಯ ಮುಖ್ಯಾಧಿಕಾರಿಯ ಹುದ್ದೆ ಯನ್ನು 'ಸೂಪರಿಂಟೆಂಡೆಂಟ್' ಎಂಬ ಹೆಸರಿನಿಂದ 'ಡೈರೆಕ್ಟರ್' ಎಂಬುದಾಗಿ ಬದಲಾಯಿಸಲಾಯಿತು. ೧೯೫೬ರಲ್ಲಿ ಶ್ರೀಮಾನ್ ಹೆಚ್. ದೇವೀರಪ್ಪನವರು ಮೊದ ಲನೆಯ ಡೈರೆಕ್ಟರ್ ಆಗಿ ಈ ಸಂಸ್ಥೆಗೆ ನೇಮಕವಾದರು. ಶ್ರೀ ಹೆಚ್. ಆರ್. ರಂಗಸ್ವಾಮಿ ಅಯ್ಯಂಗಾರ್ ಅವರು ಈ ಸಂಸ್ಥೆಯ ಮುಖ್ಯಾಧಿಕಾರಿಗಳಾಗಿದ್ದ ಅವಧಿಯಲ್ಲಿ (೧೯೪೩–೧೯೫೬) ಹನ್ನೊಂದು ಸಂಸ್ಕೃತ ಗ್ರಂಥಗಳೂ ಆರು ಕನ್ನಡ ಗ್ರಂಥಗಳೂ ಮತ್ತು ಸಂಸ್ಥೆಯಲ್ಲಿನ ಹಸ್ತ ಪ್ರತಿಗಳ ಮೂರು ಗ್ರಂಥಸೂಚಿಗಳೂ ಪ್ರಕಟವಾದವು. ೧೯೫೭ರಲ್ಲಿ ಈ ಸಂಸ್ಥೆಯಲ್ಲಿನ 'ಪಂಡಿತ' ಹುದ್ದೆಯನ್ನು "ರಿಸರ್ಚ್ ಅಸಿಸ್ಟೆಂಟ್" (Research Assistant) ಎಂಬುದಾಗಿ ಬದಲಾಯಿಸಲ್ಪಟ್ಟಿತು.

ಗ್ರಂಥಸಂಗ್ರಹ ಮತ್ತು ಸಂರಕ್ಷಣೆ

ಸಂಸ್ಥೆಯಲ್ಲಿ ಸಂಗ್ರಹವಾದ ಓಲೆ ಮತ್ತು ಕಾಗದದ ಹಸ್ತಪ್ರತಿಗಳನ್ನು ಸುರಕ್ಷಿತವಾಗಿಡಲು 'ಮೈಕ್ರೋ ಫಿಲ್ಮ್' (Microfilm) ಏರ್ಪಾಡನ್ನು ೧೯೫೪ರಲ್ಲಿ ಮಾಡಲಾಯಿತು. ಇದರಿಂದ ದೇಶದ ಬೇರೆ ಬೇರೆ ಸಂಶೋ ಧನಾ ಸಂಸ್ಥೆಗಳಲ್ಲಿರುವ ಅಮೂಲ್ಯವಾದ ಗ್ರಂಥಗಳನ್ನು ಸೂಕ್ಷ್ಮ ಛಾಯಾಚಿತ್ರಗಳನ್ನಾಗಿ ಮಾಡಿ ತಂದು ಸಂಸ್ಥೆ ಯಲ್ಲಿ ಸಂಗ್ರಹಿಸಲಾಗುತ್ತಿದೆ. ಈ ಛಾಯಾಚಿತ್ರ ಗಳನ್ನು ಸುಲಭವಾಗಿ ಓದಲು 'ಮೈಕ್ರೋ ಫಿಲ್ಮ್ ರೀಡರು'ಗಳನ್ನು ಸ್ಥಾಪಿಸಲಾಗಿದೆ. ಇಷ್ಟೇ ಅಲ್ಲದೆ

ಸಂಸ್ಥೆಯಲ್ಲಿಯೇ ಸಂಗ್ರಹವಾಗಿರುವ ಹಸ್ತಪ್ರತಿಗಳಲ್ಲಿ ನಶಿಸಿ ಹೋಗುತ್ತಿರುವುಗಳನ್ನು ಛಾಯಾಚಿತ್ರಗಳನ್ನಾಗಿ ಮಾಡಿ ರಕ್ಷಿಸಲೂ ಸಾಧ್ಯವಾಗಿದೆ. ಈಗ ಸುಮಾರು ೧,೪೦೦ ಹಸ್ತಪ್ರತಿಗಳ ಛಾಯಾಚಿತ್ರಗಳನ್ನು ಸಿದ್ಧಮಾಡಿಡಲಾಗಿದೆ. ಇಷ್ಟಲ್ಲದೆ ಈ ಮೈಕ್ರೋಫಿಲ್ಮ್ ವ್ಯವಸ್ಥೆಯಿಂದ ನಮ್ಮ ದೇಶದ ಮತ್ತು ಹೊರದೇಶದ ನಾನಾ ಸಂಶೋಧನಾ ಕೇಂದ್ರಗಳಿಗೂ ಮತ್ತು ಸಂಶೋಧನಾ ಕಾರ್ಯದಲ್ಲಿ ನಿರತರಾದ ವಿದ್ವಾಂಸರುಗಳಿಗೂ ಸಂಸ್ಥೆಯಲ್ಲಿ ಸಂಗ್ರಹವಾಗಿರುವ ಹಸ್ತಪ್ರತಿಗಳ ಛಾಯಾಚಿತ್ರಗಳನ್ನು ಅವರವರ ಅಪೇಕ್ಷೆಯಂತೆ ಒದಗಿಸಲೂ ಅನುಕೂಲವಾಗಿದೆ.

೧೯೬೬ರಲ್ಲಿ ಡಾ॥ ಪಣಿಕರ್ ಅವರ ಸಲಹೆಯಂತೆ ಸಂಸ್ಥೆಯ ವಿಭಾಗ

೧೯೬೩–೬೪ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದ ದಿವಂಗತ ಸರದಾರ್ ಕೆ. ಎಂ. ಪಣಿಕರ್ ಅವರು ಸಂಸ್ಥೆಯ ಪುರೋಭಿವೃದ್ಧಿಗಾಗಿ ಮಾಡಿದ ಅಮೂಲ್ಯವಾದ ಸಲಹೆಗೆ ನಾವು ತುಂಬಾ ಕೃತಜ್ಞರಾಗಿದ್ದೇವೆಂಬ ಅಂಶವನ್ನು ಇಲ್ಲಿ ಸೂಚಿಸಲು ಬಯಸುತ್ತೇನೆ. ಈ ಸಂಸ್ಥೆಯಲ್ಲಿ ಅಡಗಿರುವ ಅತ್ಯುತ್ತಮ ಹಸ್ತಪ್ರತಿಗಳ ಗ್ರಂಥರಾಶಿಯನ್ನು ಕಂಡು, ಈ ಸಂಸ್ಥೆಯನ್ನು ಸಂಸ್ಕೃತ, ಅರಾಬಿಕ್ ರಶಿಯನ್ ಭಾಷೆಗಳಲ್ಲಿನ ಗ್ರಂಥಗಳನ್ನೊಳಗೊಂಡ ಒಂದು ಭಾಗವಾಗಿಯೂ ಮತ್ತು ಕನ್ನಡ ಹಸ್ತಪ್ರತಿಗಳ ಸಂಶೋಧನೆಗಾಗಿ—ಕನ್ನಡ ಅಧ್ಯಯನ ಸಂಸ್ಥೆ–ಎಂಬ ಭಾಗವಾಗಿಯೂ ವಿಭಾಗಿಸುವಂತೆ ಅಪ್ಪಣೆ ಮಾಡಿದರು. ಈ ಕೆಲಸವನ್ನು ನಿರ್ವಹಿಸಲು ಎರಡು ಮಂಡಲಿಗಳನ್ನು ನೇಮಿಸಿದರು. ಇದರ ಪರಿಣಾಮವಾಗಿ ೧೯೬೬ನೇ ಫೆಬ್ರವರಿ ೨೦ನೇ ದಿನಾಂಕದಂದು ಈ ಸಂಸ್ಥೆ ಮೇಲೆ ಸೂಚಿಸಿರುವಂತೆ ಬೇರೆಯಾಯಿತು. ಇಲ್ಲಿಯವರೆಗೂ ಶ್ರೀಮಾನ್ ಹೆಚ್. ದೇವೀರಪ್ಪನವರು ಸಂಸ್ಥೆಯ ಡೈರೆಕ್ಟರಾಗಿ ಕೆಲಸ ಮಾಡಿದರು. ಇವರ ಕಾಲದಲ್ಲಿ ಹದಿನೇಳು ಸಂಸ್ಕೃತ ಗ್ರಂಥಗಳೂ, ಹನ್ನೆರಡು ಕನ್ನಡ ಗ್ರಂಥಗಳೂ, ನಾಲ್ಕು ಸಂಪುಟಗಳಲ್ಲಿ ಕನ್ನಡ ಹಸ್ತಪ್ರತಿಗಳ ವರ್ಣಾತ್ಮಕ ಪದಸೂಚಿಯೂ ಮತ್ತು ಕನ್ನಡ ಹಸ್ತಪ್ರತಿಗಳ ಅಕಾರಾದಿ ಸೂಚಿಯೂ, ಗ್ರಂಥಾಲಯದಲ್ಲಿನ ಇಂಗ್ಲಿಷ್ ಪುಸ್ತಕ ಸೂಚಿಯೂ, ಪ್ರಕಟವಾದವು.

ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಹೊಸ ಕ್ರಮ

೧೯೬೬ನೇ ಫೆಬ್ರವರಿ ೨೦ನೇ ದಿನಾಂಕದಿಂದ ಸಂಸ್ಕೃತ
ಅರಾಬಿಕ್ ಮತ್ತು ಪರ್ಷಿಯನ್ ವಿಭಾಗಗಳ ಕಾರ್ಯ
ಕ್ರಮಗಳು ವಿಶ್ವವಿದ್ಯಾನಿಲಯದ ಸ್ನಾತಕೋತ್ತ
ಸಂಸ್ಕೃತ ವಿಭಾಗದ ಪ್ರಾಧ್ಯಾಪಕರ ನಿರ್ದೇಶನದಲ್ಲಿಯೆ
ನಡೆಯುತ್ತಿವೆ. ೧೯೬೬ರಿಂದ ಎಂಟು ಸಂಸ್ಕೃತ ಗ್ರಂ
ಗಳು ಸಂಶೋಧನೆಯಾಗಿ ಪ್ರಕಟಿತವಾಗಿವೆ; ಮತ್ತು
ಎಂಟು ಸಂಸ್ಕೃತ ಗ್ರಂಥಗಳು ಮುದ್ರಣಕ್ಕೆ ಸಿದ್ಧಗೊಳಿಸ
ಲ್ಪಟ್ಟಿವೆ; ಹಾಗೂ ಹನ್ನೊಂದು ಸಂಸ್ಕೃತ ಗ್ರಂಥಗಳ
ಸಂಶೋಧನೆಯಲ್ಲಿವೆ.

ಅಲ್ಲದೆ ಸಂಶೋಧನಾ ಕಾರ್ಯಕ್ಕೆ ಮುಖ್ಯ ಅಂ
ವಾದ ಒಂದು ಷಾಣ್ಮಾಸಿಕ ಪತ್ರಿಕೆ "ಮೈಸೂರು ಓ
ಯಂಟಲಿಸ್ಟ್" ಎಂಬ ಶಿರೋನಾಮೆಯಲ್ಲಿ ೧೯೬೮ರಿಂ
ಹೊರಬರುತ್ತಿದೆ. ಇದುವರೆಗೆ ನಾಲ್ಕು ಸಂಪುಟಗಳ
ಪ್ರಕಟವಾಗಿವೆ.

೧೯೬೮ರ ವಿಚಾರಗೋಷ್ಠಿ

ಈ ಕಾರ್ಯಗಳಲ್ಲದೆ ೧೯೬೮ನೇ ಇಸ್ವಿ ಮೇ ತಿಂಗಳ
ದಿದಾಂಕ ೧, ೨, ೩ರಂದು 'Sanskrit Learnin
through the Ages" (ಕಾಲಪ್ರವಾಹದಲ್ಲಿ ಸಂಸ್ಕೃತ
ಎಂಬ ವಿಷಯದಲ್ಲಿ ಸಂಸ್ಕೃತ ಮತ್ತು ಇಂಗ್ಲಿಷ್‌ನ
ಅಮೋಘವಾದ ವಿದ್ವದ್ಗೋಷ್ಠಿಗಳು ನಡೆದವು. ಮೈಸೂರ
ವಿಶ್ವವಿದ್ಯಾನಿಲಯದ ಆಗಿನ ಉಪಕುಲಪತಿಗಳಾಗಿ
ಡಾ॥ ಶ್ರೀ ಮಾಲಿಯವರ ಅಧ್ಯಕ್ಷತೆಯಲ್ಲಿ ಈ ವಿಚಾ
ಗೋಷ್ಠಿ ವಿಖ್ಯಾತ ವಿದ್ವಾಂಸರಾದ ಡಾ॥ ವಿ. ರಾಘವನ
ಅವರಿಂದ ಉದ್ಘಾಟಿಸಲ್ಪಟ್ಟಿತು. ದೇಶದ ನಾನಾ ಸಂಶೋ
ಧನಾ ಸಂಸ್ಥೆಗಳಿಂದಲೂ ಮತ್ತು ಎಂಟು ವಿಶ್ವವಿದ್ಯಾ
ನಿಲಯಗಳಿಂದಲೂ ಅನೇಕ ವಿದ್ವಾಂಸರು ಇದರಲ್ಲಿ ಭಾ
ವಹಿಸಿ ವಿಚಾರಗೋಷ್ಠಿ ಬಹಳ ಯಶಸ್ವಿಯಾಗಿ ನ
ಯಿತು. ಈ ವಿಚಾರಗೋಷ್ಠಿಯಲ್ಲಿ ವಿಮರ್ಶಿಸಲ್ಪಟ್ಟ
ಲೇಖನಗಳನ್ನೊಳಗೊಂಡ ಒಂದು ಗ್ರಂಥವು (Sanskri
Learning through the Ages" ಎಂಬ ಶಿರೋನಾಮೆ
ಯಲ್ಲಿ ಪ್ರಕಟಗೊಳಿಸಲ್ಪಟ್ಟಿದೆ.

೧೯೬೬ರಿಂದ ಹಸ್ತಪ್ರತಿಗಳ ಮತ್ತು ಮುದ್ರಿತ ಗ್ರಂಥಗಳ ಸಂಗ್ರಹ ಕಾರ್ಯ

ಈ ಸಂಸ್ಥೆಯಲ್ಲಿಲ್ಲದ ಅಪೂರ್ವವಾದ ಹಸ್ತಪ್ರತಿಗ

ಸಂಗ್ರಹ ಕಾರ್ಯವೂ ಚೆನ್ನಾಗಿ ನಡೆಯುತ್ತಿದೆ. ದೇಶದ ನಾನಾ ಭಾಗಗಳಲ್ಲಿರುವ ಸಂಶೋಧನಾ ಸಂಸ್ಥೆಗಳನ್ನೂ, ವಿಶ್ವವಿದ್ಯಾನಿಲಯಗಳನ್ನೂ ಮತ್ತು ಖಾಸಗಿ ವಿದ್ವಾಂಸರುಗಳನ್ನೂ ಸಂದರ್ಶಿಸಿ, ಅವರಲ್ಲಿರುವ ಗ್ರಂಥಗಳನ್ನು ಪರೀಕ್ಷಿಸಿ ಇಲ್ಲಿಲ್ಲದಿರುವಂತಹ ಗ್ರಂಥಗಳನ್ನು ಸೂಕ್ಷ್ಮಛಾಯಾ ಚಿತ್ರಗಳನ್ನಾಗಿ ಮಾಡಿ ತಂದಿಡಲಾಗಿದೆ. ೧೯೭೧ರಲ್ಲಿ ಈ ವಿಧವಾದ ಗ್ರಂಥಗಳು — ಬಿಹಾರ್, ಹರಿಯಾಣ, ಕಲ್ಕತ್ತ, ಪಂಜಾಬ್ ಮುಂತಾದ ಪ್ರಾಂತ್ಯಗಳಿಂದ ಮುನ್ನೂರಕ್ಕೂ ಹೆಚ್ಚಾಗಿ ಸಂಗ್ರಹಿಸಲಾಗಿದೆ. ಅಲ್ಲದೆ ಈವರೆಗೆ, ೧೯೬೬ರಿಂದ ೩,೬೯೫ ಹಸ್ತಪ್ರತಿಗಳೂ, ೩,೬೩೫ ಮುದ್ರಿತ ಗ್ರಂಥಗಳೂ ಸಂಸ್ಥೆಯ ಗ್ರಂಥಾಲಯಕ್ಕೆ ಸೇರಿಸಲ್ಪಟ್ಟಿವೆ.

ಸಂಸ್ಥೆಯ ಪ್ರಾಧಾನ್ಯ ಮತ್ತು ಮಹತ್ವ

ಈವರೆಗೆ ಸಂಸ್ಥೆಯ ಚರಿತ್ರೆಯನ್ನು ಸಂಗ್ರಹಿಸಲಾಯಿತು. ಸಧ್ಯದ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಯಲ್ಲಿ ಇದರ ಮಹತ್ವ ಇನ್ನೂ ಚೆನ್ನಾಗಿ ಅರಿವಾಗಿಲ್ಲ. ಭಾರತೀಯ ತತ್ವಶಾಸ್ತ್ರ ಮತ್ತು ಸಂಸ್ಕೃತಿಯಲ್ಲಿ ಆಸಕ್ತಿಯುಳ್ಳ ದೇಶ ವಿದೇಶಗಳ ವಿದ್ವಾಂಸರುಗಳು ಇಲ್ಲಿರುವ ಗ್ರಂಥರಾಶಿಯ ಪ್ರಯೋಜನ ಪಡೆಯುತ್ತಿದ್ದಾರೆ. ಆದರೆ ಇಲ್ಲಿ ಅಡಗಿರುವ ಸುಮಾರು ಮೂವತ್ತು ಸಹಸ್ರ ಓಲೆಹಸ್ತಪ್ರತಿಗಳು ಮತ್ತು ಕಾಗದದ ಹಸ್ತಪ್ರತಿಗಳು ಮತ್ತು ಪ್ರಾಚೀನ ಗ್ರಂಥಗಳೂ ಪ್ರಾಯಶಃ ಇನ್ನೆಲ್ಲೂ ಇರಲಾರವು. ಸಂಸ್ಕೃತ ಸಾಹಿತ್ಯದ ಸುಮಾರು ಅರವತ್ತು ವಿಭಾಗಗಳಿಗೆ ಸಂಬಂಧಿಸಿದ ಅಮೂಲ್ಯಗ್ರಂಥರಾಶಿ ಇಲ್ಲಿ ಅಡಗಿದೆ.

"ಕಾಲಾಯ ತಸ್ಮೈ ನಮಃ"– ಕಾಲಾನುಗುಣವಾಗಿ ಏನೇ ಪರಿವರ್ತನೆಯಾಗಲಿ, ಭಾರತೀಯ ಸಂಸ್ಕೃತಿಗೆ ಆಧಾರವಾಗಿರುವ ಸಂಸ್ಕೃತ ಭಾಷೆ, ಸಾಹಿತ್ಯ, ಕಲೆ ಇತ್ಯಾದಿಗಳಿಗೆ ಸರಕಾರವಾಗಲಿ, ವಿಶ್ವವಿದ್ಯಾನಿಲಯವಾಗಲಿ ಹೆಚ್ಚಿನ ಸಹಾಯ ಸೌಲಭ್ಯಗಳನ್ನು ಕಲ್ಪಿಸದಿದ್ದಲ್ಲಿ ಈ ಸಂಸ್ಥೆ ಕ್ರಮೇಣ ಕೇವಲ ಸಂಗ್ರಹಾಲಯವಾಗುವುದು. ಈಗ ಇಲ್ಲಿ ಆಗುತ್ತಿರುವ ಗ್ರಂಥಸಂಪಾದನೆ, ಸಂಶೋಧನೆ, ವಿದ್ವದ್ಗೋಷ್ಠಿ, ಸಹಸಂಸ್ಥೆಗಳೊಡನೆ ವಿಚಾರ ವಿನಿಮಯ, ಹಸ್ತಪ್ರತಿಗಳ ಸಂಕಲನ, ಇತ್ಯಾದಿಗಳು ಸರ್ವದಾ ನಡೆಯುತ್ತಿಲ್ಲ. ವಿಶ್ವವಿದ್ಯಾನಿಲಯದವರು ಇಂತಹ ಸಂಸ್ಥೆಯನ್ನು ನಡೆಸುತ್ತಿರುವುದೇ ಒಂದು ವಿಶೇಷ. ಆದರೆ ಈ ಸಂಸ್ಥೆಯ ಮಹತ್ವವನ್ನು ಇನ್ನಾದರೂ ಅರಿತು, ವಿಶ್ವವಿದ್ಯಾನಿಲಯ ಘನ ರಾಜ್ಯಸರಕಾರ ಹಾಗೂ ಕೇಂದ್ರ ಸರಕಾರಗಳು ತಮ್ಮ ಕೃಪಾದೃಷ್ಟಿಯನ್ನು ಇತ್ತ ಹರಿಸಿದರೆ ಮಾತ್ರ, ಈ ಸಂಸ್ಥೆಯು ಜಗತ್ತಿನಲ್ಲಿಯೇ ಅದ್ವಿತೀಯ ಸಂಸ್ಥೆಯಾಗುವುದು. ಇಲ್ಲಿರುವ ಸಂಸ್ಕೃತ ಸಾಹಿತ್ಯದ ಎಲ್ಲ ವಿಭಾಗದ ಗ್ರಂಥಗಳಿಗೂ ವಿವರಣಾತ್ಮಕ ಗ್ರಂಥ ಸೂಚಿಗಳೂ, ಕನ್ನಡದಲ್ಲಿ ಎಲ್ಲಾ ಶಾಸ್ತ್ರಗಳಿಗೆ ಸಂಬಂಧಪಟ್ಟಂತೆ ಸಂಗ್ರಹಾತ್ಮಕವಾದ ಗ್ರಂಥಗಳೂ, ತರ್ಜುಮೆ, ಕಿರುಹೊತ್ತಿಗೆಗಳು ಮುಂತಾದುವನ್ನು ನಡೆಸುವುದು ಉತ್ತಮ. ನಿವೃತ್ತರಾದ ಶ್ರೇಷ್ಠ ವಿದ್ವಾಂಸರನ್ನು ಆಹ್ವಾನಿಸಿ ಅವರಿಗೆ ತಕ್ಕ ವೇತನವನ್ನು ಕಲ್ಪಿಸಿ ಗ್ರಂಥ ಸಂಶೋಧನೆ ಕೆಲಸ ನಡೆಸಬೇಕು. ಇವೆಲ್ಲವನ್ನೂ ಕೈಗೊಳ್ಳದಿದ್ದಲ್ಲಿ ಈ ಸಂಸ್ಥೆಯ ಅಸ್ತಿತ್ವಕ್ಕೆ ಸಾರ್ಥಕತೆ ಸಿಗದು.

ಈ ಸಂಸ್ಥೆಯನ್ನೂ ಸ್ನಾತಕೋತ್ತರ ಸಂಸ್ಕೃತ ವಿಭಾಗವನ್ನೂ ಸೇರಿಸಲು ಅನುಕೂಲವಾಗುವಂತೆ ಸರಿಯಾದ ಕಟ್ಟಡ ನಿರ್ಮಾಣ ಕಾರ್ಯಗತವಾಗುವಂತೆ ತ್ವರಿತವಾದ ಪ್ರಯತ್ನವಾಗಬೇಕು. ವಿಶ್ವವಿದ್ಯಾನಿಲಯದ ತತ್ವಶಾಸ್ತ್ರ ವಿಭಾಗ, ಭಾರತೀಯ ಶಾಸ್ತ್ರ, ಚರಿತ್ರೆ ಮತ್ತು ಭಾಷಾಶಾಸ್ತ್ರಗಳೂ ಪರಸ್ಪರ ಸಹಕರಿಸಿ ಇಲ್ಲಿ ಕೆಲಸ ಮಾಡಬೇಕು. ಅಂತಹ ಅಮೃತ ಯೋಗವನ್ನು ಕಾದು ನೋಡಬೇಕಾಗಿದೆ.

ಇಂತಹ ಸಂಸ್ಥೆ ಜರ್ಮನಿ, ಇಂಗ್ಲೆಂಡ್, ಅಮೆರಿಕದಲ್ಲಿದ್ದಿದ್ದರೆ ಅದು ಮೇಲೆ ಹೇಳಿದ ರೀತಿಯಲ್ಲಿ ಸುಸಂಘಟಿತವಾಗಿ, ಸುಸಜ್ಜಿತವಾಗಿ ವಿಶ್ವಕ್ಕೇ ಬೆಳಕು ಚೆಲ್ಲುತ್ತಿತ್ತು, ತಲೆಯೆತ್ತಿ ಮೆರೆಯುತ್ತಿತ್ತು. ಅಂಥ ಸುಯೋಗ ಈ ಸಂಸ್ಥೆಗೆ ಬರಲೆಂದು ರಾಷ್ಟ್ರ, ಪ್ರಾಂತ, ಸಹೃದಯರು ಸರಸ್ವತಿ ಸದನಗಳು ಇತ್ತ ತಮ್ಮ ದೃಷ್ಟಿ ಹರಿಸುವರೆಂದು ಹೃತ್ಪೂರ್ವಕವಾಗಿ ಹಾರೈಸುವ.

ಇವರ ಕಾಲದಲ್ಲಿ ಓರಿಯಂಟಲ್ ಲೈಬ್ರರಿಯ ಮುಖ್ಯಾಧಿಕಾರಿಗಳು ಮತ್ತು ಅವರ ಕಾಲದಲ್ಲಿ ಸಂಪಾದಿತ ಗ್ರಂಥಗಳು :

ಶ್ರೀ ಎ. ಮಹದೇವಶಾಸ್ತ್ರಿ, ಬಿ. ಎ., (ಕ್ಯುರೇಟರ್ ೧೮೯೧–೧೯೧೬)

ಸಂಸ್ಕೃತ :

೧. ಆಪಸ್ತಂಭಗೃಹ್ಯಸೂತ್ರ : ಸಂರ್ಶನಾಚಾರ್ಯನ ವ್ಯಾಖ್ಯಾಯುತ
೨. ಆಪಸ್ತಂಭ ಪರಿಭಾಷಾ ಸೂತ್ರ : ಹರದತ್ತ ಮತ್ತು ಕಪರ್ದಿಸ್ವಾಮಿ ವ್ಯಾಖ್ಯಾಯುತ
೩. ಮಾಧ್ವ ವಿಜಯಧಾತುವೃತ್ತಿ : ಸಂಪುಟ–೨, ಭಾಗ–೧ (ಅದಾದಿ, ದಿವಾದಿ, ಜುಹೋತ್ಯಾದಿ
೪. ತೈತ್ತರೀಯ ಸಂಹಿತಾ : ಭಟ್ಟಭಾಸ್ಕರವ್ಯಾಖ್ಯಾ, ಪದಪಾಠ, ಸ್ವರಪಾಠಸಹಿತ ಸಂಪುಟ–೧
೫. ತೈತ್ತರೀಯ ಸಂಹಿತಾ : ,, ಪದಪಾಠ ಸ್ವರಪಾಠಸಹಿತ ಸಂಪುಟ–೨
೬. ದಕ್ಷಿಣಾಮೂರ್ತಿ ಸ್ತೋತ್ರ : ಸುರೇಶ್ವರವ್ಯಾಖ್ಯಾಸಹಿತ
೭. ತೈತ್ತರೀಯ ಸಂಹಿತಾ : ಭಟ್ಟಭಾಸ್ಕರವ್ಯಾಖ್ಯಾ, ಪದಪಾಠ ಸ್ವರಪಾಠಸಹಿತ—ಸಂಪುಟ–೩
೮. ಭಗವದ್ಗೀತಾ : ಶಂಕರಾಚಾರ್ಯವ್ಯಾಖ್ಯಾಸಹಿತ
೯. ವೈತ್ತರೀಯ ಸಂಹಿತಾ : ಭಟ್ಟಭಾಸ್ಕರವ್ಯಾಖ್ಯಾ, ಪದಪಾಠ, ಸ್ವರಪಾಠಸಹಿತ–ಸಂಪುಟ–೪
೧೦. ಮಂಡಲ ಬ್ರಾಹ್ಮಣೋಪನಿಷತ್ : ವ್ಯಾಖ್ಯಾಸಹಿತ
೧೧. ಸೌಂದರ್ಯಲಹರಿ : ಲಕ್ಷ್ಮೀಧರವ್ಯಾಖ್ಯಾ, ಭವನೋಪನಿಷತ್, ವ್ಯಾಖ್ಯಾಸಹಿತ ಮತ್ತು ದೇವೀಪಂಚಸ್ತವೀ
೧೨. ತೈತ್ತರೀಯ ಸಂಹಿತಾ : ಭಟ್ಟಭಾಸ್ಕರವ್ಯಾಖ್ಯಾ, ಪದಪಾಠ, ಸ್ವರಪಾಠಸಹಿತ—ಸಂಪುಟ–೫
೧೩. ತೈತ್ತರೀಯ ಸಂಹಿತಾ : ,, ,, ,, ಸಂಪುಟ–೧೦
೧೪. ತೈತ್ತರೀಯ ಸಂಹಿತಾ : ,, ,, ,, ಸಂಪುಟ–೧೧
೧೫. ಆಪಸ್ತಂಭ ಧರ್ಮಸೂತ್ರ : ಉಜ್ವಲ ವ್ಯಾಖ್ಯಾಸಂಹಿತ
೧೬. ತೈತ್ತರೀಯ ಸಂಹಿತಾ : ಭಟ್ಟಭಾಸ್ಕರವ್ಯಾಖ್ಯಾ, ಪದಪಾಠ, ಸ್ವಗಪಾಠಸಹಿತ—ಸಂಪುಟ–೮
೧೭. ,, ,, ,, ,, ಸಂಪುಟ–೯
೧೮. ,, ,, ,, ,, ಸಂಪುಟ–೧೨
೧೯. ಶಂಕರಾಚಾರ್ಯರ ಇತರ ಕೃತಿಗಳು : ಸಂಪುಟ–೧
ವಿಷ್ಣುಸಹಸ್ರನಾಮ ಮತ್ತು ಸನತ್ಸುಜಾತೀಯ ವ್ಯಾಖ್ಯಾನಗಳು
೨೦. ಶಂಕರಾಚಾರ್ಯರ ಇತರ ಕೃತಿಗಳು : ಸಂಪುಟ–೨ ಅಪರೋಕ್ಷಾನುಭೂತಿ, ಶತಶ್ಲೋಕಿ,
ಹರಿಸ್ತುತಿ ಮತ್ತು ದಶಶ್ಲೋಕಿ—ವ್ಯಾಖ್ಯಾನಗಳು
೨೧. ಶಂಕರಾಚಾರ್ಯರ ಇತರ ಕೃತಿಗಳು : ಸಂಪುಟ–೩ ಉಪದೇಶ—ಸಹಸ್ರೀ—ವ್ಯಾಖ್ಯಾಸಹಿತ
೨೨. ಶಂಕರಾಚಾರ್ಯರ ಇತರ ಕೃತಿಗಳು : ಸಂಪುಟ-೪ ಆತ್ಮಬೋಧ, ವಿವೇಕ ಚೂಡಾಮಣಿ, ವಾಕ್ಯವೃತ್ತಿ,
ಸ್ವಾತ್ಮನಿರೂಪಣ, ಯೋಗತಾರಾವಲಿ, ಸ್ವರವೇದಾಂತ–ಸಿದ್ಧಾಂತ ಸಾರಸಂಗ್ರಹ
೨೩. ಮಾಧವೀಯಧಾತುವೃತ್ತಿ : ಸಂಪುಟ–೧ ಭಾಗ–೧ (ಭ್ವಾದಿ)
೨೪. ಮಾಧವೀಯ ಧಾತುವೃತ್ತಿ : ಸಂಪುಟ-೨ ಭಾಗ–೨ (ಭ್ವಾದಿ)
೨೫. ಗೋತ್ರಪ್ರವರ : ನಿಬಂಧಕ ದಂಬಕಮ್
೨೬. ತೈತ್ತರೀಯಾರಣ್ಯಕ, ಭಟ್ಟಭಾಸ್ಕರ ವ್ಯಾಖ್ಯಾ, ಸ್ವರಪಾಠಸಹಿತ—ಸಂಪುಟ–೧
೨೭. ,, ,, ,, ಸಂಪುಟ-೨
೨೮. ಏಕಾಗ್ನಿಕಾಂಡ : ಹರದತ್ತವ್ಯಾಖ್ಯಾ, ಸ್ವರಪಾಠಸಹಿತಾ

೨೯. ತೈತ್ತರೀಯಾರಣ್ಯಕ : ಭಟ್ಟಭಾಸ್ಕರ ವ್ಯಾಖ್ಯಾ, ಸ್ವರಪಾಠಸಹಿತ—ಸಂಪುಟ–೩
೩೦. ಬ್ರಹ್ಮಮಿಮಾಂಸ : ಶ್ರೀಕಂಠವ್ಯಾಖ್ಯಾಸಹಿತ
೩೧. ಮಾಧವೀಯ ಧಾತುವೃತ್ತಿ : ಸಂಪುಟ–೨, ಭಾಗ–೨ (ಸ್ವಾದಿ ಮತ್ತು ಚುರಾದಿ)
೩೨. ಬೋಧಾಯನ ಗೃಹ್ಯಸೂತ್ರ : ಪರಿಶಿಷ್ಟ ಸಹಿತ
೩೩. ತೈತ್ತರೀಯ ಪ್ರಾತಿಶಾಖ್ಯಾ : ವೈದಿಕಾಭರಣ, ತ್ರಿಭಾಷ್ಯರತ್ನ ಸಹಿತ
೩೪. ಬೋಧಾಯನ ಧರ್ಮಸೂತ್ರ : ವ್ಯಾಖ್ಯಾಸಹಿತ
೩೫. ಭಟ್ಟದೀಪಕಾ : ಸಂಪುಟ–೧
೩೬. ತೈತ್ತರೀಯ ಬ್ರಾಹ್ಮಣ : ಭಟ್ಟಭಾಸ್ಕರವ್ಯಾಖ್ಯಾ, ಸ್ವರಪಾಠ–ಅಷ್ಟಕ–೧
೩೭. ಕೌಟಿಲ್ಯ ಅರ್ಥಶಾಸ್ತ್ರ (ಮೊದಲನೆಯ ಪ್ರಕಟಣೆ)
೩೮. ತೈತ್ತರೀಯ ಬ್ರಾಹ್ಮಣ : ಭಟ್ಟಭಾಸ್ಕರವ್ಯಾಖ್ಯಾ, ಸ್ವರಪಾಠ–ಅಷ್ಟಕ–೩ ಭಾಗ–೧
೩೯. ಶ್ರೀಮದ್ ಬ್ರಹ್ಮಸೂತ್ರಭಾಷ್ಯೆ (ಆನಂದ ತೀರ್ಥೀಯ) ತಾತ್ಪರ್ಯ ಚಂದ್ರಿಕಾ ಸಹಿತ, ಮುಂತಾದವು ಸಂಪುಟ–೧
೪೦. ಭಟ್ಟದೀಪಿಕಾ : ಸಂಪುಟ–೨
೪೧. ಖಾದಿರ ಗೃಹ್ಯಸೂತ್ರ : ರುದ್ರಖಂಸ್ಕಂಡೀಯ ಸಹಿತ
೪೨. ತೈತ್ತರೀಯ ಬ್ರಾಹ್ಮಣ : ಭಟ್ಟಭಾಸ್ಕರ ವ್ಯಾಖ್ಯಾಸಹಿತ ಅಷ್ಟಕ-೩, ಭಾಗ–೧
೪೩. ಸ್ಮೃತಿ ಚಂದ್ರಿಕಾ : ಸಂಸ್ಕರ ಖಂಡ
೪೪. ಸ್ಮೃತಿ ಚಂದ್ರಿಕಾ : ಆಹ್ನಿಕ ಖಂಡ
೪೫. ಸ್ಮೃತಿಚಂದ್ರಿಕಾ : ವ್ಯವಹಾರ ಖಂಡ ಭಾಗ-೧
೪೬. ಭಟ್ಟದೀಪಿಕಾ : ಸಂಪುಟ–೩
೪೭. ಶ್ರೀಮದ್ ಬ್ರಹ್ಮಸೂತ್ರ ಭಾಷ್ಯೆ (ಆನಂದತೀರ್ಥೀಯ) ತಾತ್ಪರ್ಯ ಚಂದ್ರಿಕಾ, ಸಂಪುಟ-೨
೪೮. ಸ್ಮೃತಿಚಂದ್ರಿಕಾ : ವ್ಯವಹಾರ ಖಂಡ, ಭಾಗ-೨
೪೯. ಭಟ್ಟದೀಪಿಕಾ : ಭಾಗ–೪
೫೦. ಗೌತಮ ಧರ್ಮಸೂತ್ರ : ಮಸ್ಕರೀಯ ಸಹಿತ

ಕನ್ನಡ :

೧. ಆದಿಪುರಾಣ : ಪಂಪ
೨. ಜಗನ್ನಾಥ ವಿಜಯ :
೩. ಮಹಾಭಾರತ : ಪೌಲೋಮ ಮತ್ತು ಆಸ್ತಿಕ ಪರ್ವಗಳು
೪. ಮಹಾಭಾರತ : ಕುಮಾರವ್ಯಾಸ (ಸಂಭವ ಪರ್ವ)
೫. ಮಹಾಭಾರತ : ಕುಮಾರವ್ಯಾಸ (ಜಾತುಗೃಹ ಪರ್ವ)
೬. ಮಹಾಭಾರತ : ಕುಮಾರವ್ಯಾಸ (ಸಭಾಪರ್ವ)
೭. ಮಹಾಭಾರತ : ಕುಮಾರವ್ಯಾಸ (ಅರಣ್ಯ ಪರ್ವ)

ಇತರ ಕೃತಿಗಳು :

೧. ಯೋಗರತ್ನಾಕರ : ಕನ್ನಡ, ತೆಲುಗು, ಅನುವಾದ ಸಹಿತ ಭಾಗ–೧

ಶ್ರೀ ಎ. ಆರ್. ರಾಘುವೇಂದ್ರಾಚಾರ್ (೧೯೧೬–೧೯೧೮)

ಸಂಸ್ಕೃತ :

೫೧. ಅಲಂಕಾರ ಮಣಿಹಾರ : ಸಂಪುಟ–೧
೫೨. ಸ್ಮೃತಿಚಂದ್ರಿಕಾ : ಶ್ರದ್ಧಾಕಾಂಡ

ಶ್ರೀ ಆರ್. ಶಾಮಾಶಾಸ್ತ್ರೀ ಬಿ.ಎ., ಪಿ.ಹೆಚ್.ಡಿ., (೧೯೧೮-೧೯೨೯)

ಸಂಸ್ಕೃತ

೫೩. ಶ್ರೀಮದ್ ಬ್ರಹ್ಮಸೂತ್ರ ಭಾಷ್ಯೆ (ಆನಂದತೀರ್ಥೀಯ) ತಾತ್ಪರ್ಯ ಚಂದ್ರಿಕಾ, ಸಂಪುಟ–೩
೫೪. ಕೌಟಿಲ್ಯ ಅರ್ಥಶಾಸ್ತ್ರ (೨ನೇ ಪ್ರಕಟನೆ)
೫೫. ಬೋಧಾಯನ ಗೃಹ್ಯಸೂತ್ರ : ಪರಿಶಿಷ್ಟ ಸಹಿತ
೫೬. ಸ್ಮೃತಿಚಂದ್ರಿಕಾ : ಅಶೌಚಕಾಂಡ
೫೭. ತೈತ್ತರೀಯ ಬ್ರಾಹ್ಮಣ : ಭಟ್ಟಭಾಸ್ಕರ ವ್ಯಾಖ್ಯಾ, ಭಾಗಶಃ ಸಾಯನ ವ್ಯಾಖ್ಯಾ, ಭಾಗಶಃ ಅಷ್ಟಕ–೨
೫೮. ಅಲಂಕಾರ ಮಣಿಹಾರ : ಸಂಪುಟ–೨
೫೯. ಬ್ರಹ್ಮಸೂತ್ರ ಭಾಷ್ಯೆ (ಆನಂದ ತೀರ್ಥೀಯ) ತಾತ್ಪರ್ಯ ಚಂದ್ರಿಕಾ, ಮುಂತಾದವು ಸಂಪುಟ–೪
೬೦. ಕಾವ್ಯಪ್ರಕಾಶ : ಸಂಕೇತ ವ್ಯಾಖ್ಯಾ ಸಹಿತ
೬೧. ಆಯುರ್ವೇದ ಸೂತ್ರ : ಯೋಗನಂದನಾಥ ವ್ಯಾಖ್ಯಾ ಸಹಿತ
೬೨. ಅಲಂಕಾರ ಮಣಿಹಾರ : ಸಂಪುಟ–೩
೬೩. ವಿದ್ಯಾಮಾಧವೀಯ : ವಿದ್ಯಾಮಾಧವಾ, ವಿಷ್ಣುಶರ್ಮ ಮಹಾರ್ಪದೀಪಿಕಾ, ವ್ಯಾಖ್ಯಾಸಹಿತ ಸಂಪುಟ–೧
೬೪. ಕೌಟಿಲ್ಯ ಅರ್ಥಶಾಸ್ತ್ರ (೩ನೇ ಪ್ರಕಟನೆ)
೬೫. ಅರ್ಥಶಾಸ್ತ್ರ ಅಖಿಲಪದಸೂಚಿ : ಕೌಟಿಲ್ಯ ಸಂಪುಟ–೧
೬೬. ಅರ್ಥಶಾಸ್ತ್ರ ಅಖಿಲಪದಸೂಚಿ : ಕೌಟಿಲ್ಯ ಸಂಪುಟ–೨
೬೭. ವಿದ್ಯಾಮಾಧವರ, ವಿದ್ಯಾಮಾಧವೀಯ (ವಿಷ್ಣುಶರ್ಮ) ಮುಹೂರ್ತದೀಪಿಕಾ ವ್ಯಾಖ್ಯಾಸಹಿತ ಸಂಪುಟ-೨
೬೮. ಅರ್ಥಶಾಸ್ತ್ರ ಅಖಿಲಪದಸೂಚಿ : ಕೌಟಿಲ್ಯ ಸಂಪುಟ-೩
೬೯. ಅಬಾಲಷಿತಾರ್ಥ ಚಿಂತಾಮಣಿ : ಸಂಪುಟ–೧
೭೦. ವಿದ್ಯಾಮಾಧವೀಯ : ಸಂಪುಟ–೩
೭೧. ಸರಸ್ವತೀ ವಿಲಾಸ (ವ್ಯವಹಾರ ಕಾಂಡ)

ಕನ್ನಡ :

೮. ಮಹಾಭಾರತ : ಕುಮಾರವ್ಯಾಸ, ವಿರಾಟಪರ್ವ
೯. ಕೆಲದೀನಾಪವಿಜಯ : ಲಿಂಗಣ್ಣ
೧೦. ಉದ್ಭಟಕಾವ್ಯ : ಸೋಮರಾಜ
೧೧. ಜಗನ್ನಾಥವಿಜಯ : ರುದ್ರಭಟ್ಟ (೨ನೇ ಪ್ರಕಟಣೆ)
೧೨. ಮಹಾಭಾರತ : ಕುಮಾರವ್ಯಾಸ, ಉದ್ಯೋಗಪರ್ವ
೧೩. ಅಕ್ರೂರಚರಿತ್ರೆ : ಸೋಮನಾಥ

- ಧರ್ಮಾಮೃತ : ನ್ಯಾಯಸೇನ– ಸಂಪುಟ–೧
- ಕಂಠೀರವ ನರಸರಾಜ ವಿಜಯ
- ಧರ್ಮಾಮೃತ : ನ್ಯಾಯಸೇನ ಸಂಪುಟ–೨

ಪ್ರೊ|| ಡಿ. ಶ್ರೀನಿವಾಸಚಾರ್, ಎಂ.ಎ., (ಎಕ್ಸ್ ಅಫಿಷಿಯೋ ೧೯೨೯–೧೯೩೬)

ಸ್ಕೃತ :

- ಅಲಂಕಾರ ಮಣಿಹಾರ, ಸಂಪುಟ–೪
- ಆಪಸ್ತಂಭ ಕುಲ್ಪಸೂತ್ರ
- ತರ್ಕತಾಂಡವ : ನ್ಯಾಯದೀಪಸಹಿತ ಸಂಪುಟ–೧
- ಅದ್ವೈತಸಿದ್ಧಿ : ಗುರುಚಂದ್ರಿಕಾಯುತ ಸಂಪುಟ–೧
- ತತ್ವಮುಕ್ತಾಕಲಾಪ : ಸರ್ವಾರ್ಥಸಿದ್ಧಿ, ಭಾವಪ್ರಕಾಶ ಮತ್ತು ಆನಂದದಾಯಿನೀಸಹೀತ ಸಂಪುಟ–೧
- ತರ್ಕತಾಂಡವ : ಸಂಪುಟ–೨
- ಅದ್ವೈತಸಿದ್ಧಿ ; ಗುರುಚಂದ್ರಿಕಾಯುತ ಸಂಪುಟ–೨

ನ್ನಡ :

- ವೀರಭದ್ರ ವಿಜಯ
- ಅನಂತನಾಥಪುರಾಣ : ಜನ್ನ
- ಸಕಲ ವೈದ್ಯ ಸಂಹಿತಾಸರಾರ್ಣವ : ವೀರರಾಜೇಂದ್ರ
- ಮಹಾಭಾರತ : ಕುಮಾರ ವ್ಯಾಸ, (ಭೀಷ್ಮಪರ್ವ)
- ಮಹಾಭಾರತ : ಕುಮಾರವ್ಯಾಸ, (ದ್ರೋಣಪರ್ವ)

ಶ್ರೀ ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್., (ಕ್ಯುರೇಟರ್ ೧೯೩೬–೧೯೪೩)

ಸ್ಕೃತ :

- ತರ್ಕತಾಂಡವ, ಸಂಪುಟ–೩
- ಅದ್ವೈತಸಿದ್ಧಿ : ಗುರುಚಂದ್ರಿಕಾಯುತ ಸಂಪುಟ–೩
- ತತ್ವಮುಕ್ತಾಕಲಾಪ, ಸರ್ವಾರ್ಥಸಿದ್ಧಿ, ಭಾವಪ್ರಕಾಶ, ಆನಂದದಾಯಿನೀಸಹಿತ ಸಂಪುಟ–೨
- ತರ್ಕತಾಂಡವ : ಸಂಪುಟ-೪

ನ್ನಡ :

- ಕಾವ್ಯಾವಲೋಕನ : ನಾಗವರ್ಮ (೨ನೇ ಪ್ರಕಟಣೆ)
- ಮಹಾಭಾರತ : ಕುಮಾರವ್ಯಾಸ (ಕರ್ಣಪರ್ವ)
- ಮಹಾಭಾರತ : ಕುಮಾರವ್ಯಾಸ (ಶಲ್ಯ ಮತ್ತು ಗದಾಪರ್ವ)

ತರ ಕೃತಿಗಳು :

- ಅಖಿಲ ಗ್ರಂಥಸೂಚಿ : ಪ್ರಾಚ್ಯವಿದ್ಯಾಸಂಶೋಧನಾಲಯ, ಮೈಸೂರು–೫ ಸಂಪುಟ-೧ ವೇದ

ಶ್ರೀ ಹೆಚ್. ಆರ್. ರಂಗಸ್ವಾಮಿ ಅಯ್ಯಂಗಾರ್, ಎಂ.ಎ.,
(ಕ್ಯುರೇಟರ್ ೧೯೪೩–೪೬) (ಸೂಪರಿಂಟೆಂಡೆಂಟ್ ೧೯೪೬)

ಸಂಸ್ಕೃತ :

೮೩. ವಾಕ್ಯಾರ್ಥರತ್ನ : ಸುವರ್ಣಮುದ್ರಿತಾಯುತ

೮೪. ತತ್ವಾರ್ಥಸೂತ್ರ : ಉಮಾಸ್ವಾಮಿ, ಸುಖಬೋಧ, ಭಾಸ್ಕರಾನಾಂದ ಸಹಿತ

೮೫. ಸೌಂದರ್ಯಲಹರೀ : ಭಾವನೋಪನಿಷತ್, ದೇವೀಪಂಚಸ್ತನಿ

೮೬. ಯಾದವಾಭ್ಯುದಯ : ವೇದಾಂತಾಚಾರ್ಯ, ಅಪ್ಪಯ್ಯದೀಕ್ಷಿತ ವ್ಯಾಖ್ಯಾಸಹಿತ ಸಂಪುಟ–೧ (ಸರ್ಗಗಳು ೧೩–೧೮)

೮೭. ಆಪಸ್ತಂಭಶ್ರೌತಸೂತ್ರ : ರಾಮಾಗ್ನಿಚಿತ್‌ವೃತ್ತಿ ಮತ್ತು ಧೂರ್ತಸ್ವಾಮಿ ಭಾಷ್ಯಾಸಹಿತ ಸಂಪುಟ–೧ (ಪ್ರಾಶ್ನ್ಯ ೧–೫)

೮೮. ಪ್ರಮೇಯರತ್ನಾಲಂಕಾರ : ಚಾರುಕೀರ್ತಿಪಂಡಿತಾಚಾರ್ಯ

೮೯. ಯಾದವಾಭ್ಯುದಯ : ವೇದಾಂತಾಚಾರ್ಯ, ಅಪ್ಪಯ್ಯದೀಕ್ಷಿತ ವ್ಯಾಖ್ಯಾಸಹಿತ ಸಂಪುಟ–೨ (ಸರ್ಗ ೧೯–೨೪)

೯೦. ಶೈವಪರಿಭಾಷ : ಶಿವಾಗ್ರಯೋಗಿ

೯೧. ಸೌಂದರ್ಯಲಹರೀ ಭಾವನೋಪನಿಷತ್, ದೇವೀಪಂಚಸ್ತನಿ, ಮುಂತಾದುವು (೩ನೇ ಪ್ರಕಟಣೆ)

೯೨. ಪ್ರಾಕೃತಮಣಿದೀಪ : ಅಪ್ಪಯ್ಯದೀಕ್ಷಿತ, ಟಿ. ಟಿ. ಶ್ರೀನಿವಾಸಗೋಪಾಲಾಚಾರ್ಯ, ಪ್ರಕೃತಮಣಿದೀಪದೀಧಿತಿ ಸಹಿತ

೯೩. ಆಪಸ್ತಂಭ ಶ್ರೌತಸೂತ್ರ : ಧೂರ್ತಸ್ವಾಮಿಭಾಷ್ಯ ಮತ್ತು ರಾಮಾಗ್ನಿಚಿತ್ರವೃತ್ತಿಯುತ ಸಂಪುಟ–೨ (ಪಾಗಾಗಳು ೬–೮)

ಕನ್ನಡ :

೨೫. ಸೂಕ್ತಿಸುಧಾರ್ಣವ : ಮಲ್ಲಿಕಾರ್ಜುನ

೨೬. ಮಹಾಭಾರತ : ಕುಮಾರವ್ಯಾಸ (ಎರಡನೇ ಪರಿಷ್ಕರಣ)

೨೭. ಸಿಂಗಿರಾಜಪುರಾಣ : ಸಿಂಗರಾಜ

೨೮. ಮಹಾಭಾರತ : ಕುಮಾರವ್ಯಾಸ (ಎರಡನೇ ಪರಿಷ್ಕರಣ) ದ್ರೋಣಪರ್ವ

೨೯. ಮಹಾಭಾರತ : ಕುಮಾರವ್ಯಾಸ ಕರ್ಣಪರ್ವ (ಎರಡನೇ ಪರಿಷ್ಕರಣ)

೩೦. ನಲಚಂಪು : ಚೌಂಡರಾಜ

ಇತರ ಗ್ರಂಥಗಳು :

೧. ವಿವರಣಾತ್ಮಕ ಗ್ರಂಥಸೂಚಿ : ಹಸ್ತಪ್ರತಿಗಳು ಗ್ರಂಥಗಳು ಪ್ರಾಚ್ಯ ವಿದ್ಯಾ ಸಂಶೋಧನಾಲಯ (ಎರಡನೆಯ ಸಂಪುಟ)

೨. ಗ್ರಂಥಸೂಚಿ : ಮುದ್ರಿತ ಸಂಸ್ಕೃತ ಗ್ರಂಥಗಳ ಸೂಚಿ

೩. ಮುದ್ರಿತ ಕನ್ನಡ ಪುಸ್ತಕಗಳ ಸೂಚಿ

ಶ್ರೀಮಾನ್ ಹೆಚ್. ದೇವೀರಪ್ಪನವರು (೧೯೫೬–೧೯೬೬)

ಸಂಸ್ಕೃತ ಗ್ರಂಥಗಳು :

೯೪. ತತ್ವಮುಕ್ತಾಕಲಾಪ (ವ್ಯಾಖ್ಯೆಯೊಡನೆ) ಸಂಪುಟ–೩

೫. ಕ್ರಿಯಾಸಾರ, ಶ್ರೀ ನೀಲಕಂಠ ಶಿವಾಚಾರ್ಯ ವಿರಚಿತ ಸಂಪುಟ–೧ (೧–೪ ಉಪದೇಶಗಳು)
೬. ವೇದಾಂತ ತತ್ವವಿವೇಕ : ಶ್ರೀ ನೃಸಿಂಹಾಶ್ರಮಿ ವಿರಚಿತ (ವ್ಯಾಖ್ಯಾಸಮೇತ)
೭. ತತ್ವಮುಕ್ತಾಕಲಾಪ : ಸಂಪುಟ–೪
೮. ನೀತಿಸೂತ್ರಾಣಿ, ಬೃಹಸ್ಪತಿ, ಚಾಣಕ್ಯ ಮತ್ತು ಸೋಮದೇವ ಕೃತ
೯. ಕ್ರಿಯಾಸಾರ : ನೀಲಕಂಠ ಶಿವಾಚಾರ್ಯ ವಿರಚಿತ, ಸಂಪುಟ–೨ (ಉಪದೇಶ ೫–೧೪)
೧೦. ಕ್ರಿಯಾಸಾರ : ನೀಲಕಂಠ ಶಿವಾಚಾರ್ಯ ವಿರಚಿತ, ಸಂಪುಟ–೩ (ಉಪದೇಶ ೧೫–೩೯)
೧೧. ಸೇವಂತಿಕಾ ಪರಿಣಯ ನಾಟಕಂ : ಚೊಕ್ಕನಾಥ ವಿರಚಿತ
೧೨. ಶ್ರೀಮದ್ವಾಲ್ಮೀಕರಾಮಾಯಣಂ, ಶ್ರೀಮನ್ಮಾಧವಯೋಗೀ ವಿರಚಿತ
ಅಮೃತಕತಕ ವ್ಯಾಖ್ಯೆಯೊಡನೆ, ೨೧ನೇ ಸಂಪುಟ ಬಾಲಕಾಂಡ
೧೩. ಕೌಟಲೀಯಂ ಅರ್ಥಶಾಸ್ತ್ರಮ್ (ಪರಿಷ್ಕೃತ ಮುದ್ರಣ)
೧೪. ಆಪಸ್ತಂಭಶ್ರೌತಸೂತ್ರಂ : ಭಾಷ್ಯವೃತ್ತಿಯೊಡನೆ ಸಂಪುಟ-೩ ಪ್ರಶ್ನೆ ೯-೧೦
೧೫. ಶ್ರೀ ವಿಷ್ಣು ಸಹಸ್ರನಾಮಸ್ತೋತ್ರಂ, ನಾಮಾವಲಿ, ಶಾಂಕರ ಭಾಷ್ಯಾರ್ಥಸಂಗ್ರಹ,
ಮತ್ತು ಪದ್ಯ ಪ್ರಸೂನಾಂಜಲಿಯೊಡನೆ
೧೬. ಶ್ರೀ ವಿಷ್ಣು ಸಹಸ್ರನಾಮಸ್ತೋತ್ರಂ, ಶಂಕರಭಾಷ್ಯ ಮತ್ತು ಕಾರಕ ಬ್ರಹ್ಮಾನಂದ
ಸರಸ್ವತೀಯ ಕೃತ ವಿವೃತಿಯೊಡನೆ
೧೭. ಶ್ರೀಮದ್ವಾಲ್ಮೀಕಿ ರಾಮಾಯಣಂ, ಮಾಧವಯೋಗಿಕೃತ ಅಮೃತಕರಕವ್ಯಾಖ್ಯೆಯೊಡನೆ
ಅಯೋಧ್ಯಾಕಾಂಡ ಎರಡನೇ ಸಂಪುಟ
೧೮. ಶಿವತತ್ವರತ್ನಾಕರ, ಕೆಳದಿ ಬಸವಭೂಪಾಲ ವಿರಚಿತ ಸಂಪುಟ–೧
೧೯. ಸಿದ್ಧಾಂತ ಸಿದ್ಧಾಂಜನಂ, ಶ್ರೀಕೃಷ್ಣಾನಂದ ಸರಸ್ವತೀ ವಿರಚಿತ ಭಾಸ್ಕರದೀಕ್ಷ :
ವಿರಚಿತ ರತ್ನದೀಪಿಕೆಯ ವ್ಯಾಖ್ಯೆಯೊಡನೆ
೨೦. ಶ್ರೀಮದ್ವಾಲ್ಮೀಕಿ ರಾಮಾಯಣಂ, ಅರಣ್ಯಕಾಂಡ ಸಂಪುಟ–೪ (ಅಮೃತಕತಕ ವ್ಯಾಖ್ಯಾಸಮೇತ)

ನ್ನಡ ಗ್ರಂಥಗಳು :

೧. ಕುಮಾರವ್ಯಾಸನ ಭಾರತ : ಉದ್ಯೋಗಪರ್ವ
೨. ಭಾರತ ನಿಘಂಟು
೩. ಬಾಲಚಂದ್ರದೇವ ವಿರಚಿತ ತತ್ವರನ್ನಪ್ರದೀಪಿಕೆ
೪. ಕುಮಾರ ವಾಲ್ಮೀಕಿಯ ತೊರವೆ ರಾಮಾಯಣ ಸಂಪುಟ–೧
೫. ನಂಜುಂಡ ಕವಿಯ ರಾಮನಾಥಚರಿತೆ ಸಂಪುಟ–೨
೬. ಶಂಕರಾಚಾರ್ಯ ವಿರಚಿತ ಸೌಂದರ್ಯಲಹರೀ (ಜಕ್ಕಣಾಚಾರ್ಯ ವಿರಚಿತ ಕನ್ನಡ ಟೀಕು ಸಹಿತ)
೭. ಶ್ರೀಧರಾಚಾರ್ಯ ರಚಿತ ಜಾತಕತಿಲಕ
೮. ಕುಮಾರ ವಾಲ್ಮೀಕಿಯ ತೊರವೆ ರಾಮಾಯಣ, ಸಂಪುಟ–೨
೯. ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವಚಿಂತಾಮಣಿ
೧೦. ನಂಜುಂಡಕವಿಯ ರಾಮನಾಥಚರಿತೆ ಸಂಪುಟ–೩
೧೧. ಕಳಲೆ ವೀರರಾಜೇಂದ್ರನ ಸಕಲವೈದ್ಯ ಸಂಹಿತಾ ಸಾರಾರ್ಣವ ಸಂಪುಟ–೧
೧೨. ಲಾಸ್ಯರಂಜನಂ

ತರ ಗ್ರಂಥಗಳು :

೧. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ಭಾಗ (೧–೪)

೨. ಕನ್ನಡ ಹಸ್ತಪ್ರತಿಗಳ ಅಕಾರಾದಿ ಸೂಚಿ
೩. ಗ್ರಂಥಾಲಯ ಇಂಗ್ಲಿಷ್ ಪುಸ್ತಕಗಳ ವಿಷಯ ವಿಭಾಗಗಳನ್ನೊಳಗೊಂಡ ಸೂಚೀ

ಡಾ॥ ಜಿ. ಮರುಳಸಿದ್ದಯ್ಯನವರು, ನಿರ್ದೇಶಕರು (೧೯೬೬-)

ಸಂಸ್ಕೃತ ಗ್ರಂಥಗಳು :

೧೧೧. ಶ್ರೀಮದ್ವಾಲ್ಮೀಕಿ ರಾಮಾಯಣ : ಅಮೃತಕರಕ ವ್ಯಾಖ್ಯೆಯೊಡನೆ ಮೂರನೇ ಸಂಪುಟ ಅಯೋಧ್ಯಾಖಾಂಡ-೨
೧೧೨. ಶಿವತತ್ವರತ್ನಾಕರ ಸಂಪುಟ-೨
೧೧೩. ಅದ್ವಯ ಕಾರಕೋಪನಿಷತ್ (ಅಪ್ಪಯ್ಯ ಶಿವಾಚಾರ್ಯರ ಭಾಷ್ಯಸಮೇತ)
೧೧೪. ಸೌಂದರ್ಯಲಹರೀ (ಲಕ್ಷ್ಮೀಧರಾಚಾರ್ಯರ ವ್ಯಾಖ್ಯೆ ಮತ್ತು ಕನ್ನಡ ಸ್ತೋತ್ರಾನುವಾದದೊಡನೆ)
೧೧೫. ಮಂಡಲಬ್ರಾಹ್ಮಣೋಪನಿಷತ್ (ಶ್ರೀಕರಾಚಾರ್ಯ ವಿರಚಿತ ರಾಜಯೋಗಭಾಷ್ಯಾಸಮೇತ)
೧೧೬. ಜಯಂತಭಟ್ಟನ ನ್ಯಾಯಮಂಜರೀ ಭಾಗ-೧
೧೧೭. ಪಂಚದಶಾಂಗಯೋಗಪ್ರಕರಣಂ
೧೧೮. ದಕ್ಷಿಣಾಮೂರ್ತಿ ಸ್ತೋತ್ರ : ಮಾನಸೋಲ್ಲಾಸದೊಡನೆ

ಇತರ ಪ್ರಕಟಣೆಗಳು :

೧. ಮೈಸೂರು ಓರಿಯಂಟಲಿಸ್ಟ್ (ಷಾಣ್ಮಾಸಿಕ ಪತ್ರಿಕೆ ಸಂಪುಟಗಳು (೧-೪)
೨. Sanskrit Learling through the Ages,

ಪುಸ್ತಕಗಳು ಮನುಷ್ಯರು ಬರಲಿರುವ ಪೀಳಿಗೆಯವರಿಗೆ ಕೊಡುವ ಕಾಣಿಕೆ, ಬಿಡುವ ಆಸ್ತಿ.

—ಅಡಿಸನ್

ಬೂಡುಸನ್ನು ಕೊಳ್ಳಲು ಹಾತೊರೆಯುತ್ತೇವೆ. ಬುಕ್ಕುಗಳನ್ನು ಕೊಳ್ಳಲು ಏತಕ್ಕೆ ಆತಂಕಪಡುವುದಿಲ್ಲ ?

—ಎಸ್. ವಿ. ರಂಗಣ್ಣ

ಸ್ನೇಹಿತನನ್ನು ಆರಿಸಿಕೊಂಡಂತೆ ನಿಮ್ಮ ಲೇಖಕನನ್ನು ಆರಿಸಿಕೊಳ್ಳಿರಿ.

—ವೆಂಟ್‌ವರ್ತ್ ಡಿಲ್ಲಾನ್

ಜ್ಞಾನಸೂರ್ಯ

ಜೀವನದ ಸರ್ವಕಾಲೀನ ಸರ್ವಾಂಗೀಣ
ಸರ್ವಾನುಭವಸಾರ, ಸರ್ವಜ್ಞಾನಾಗಾರ,
ಆಕಾಶದತ್ತತ್ತ ಪಾತಾಳದಿತ್ತಿತ್ತ
ಎತ್ತರದ ಬಿತ್ತರದ ಗಾತ್ರ ಪಾತ್ರ ಅಪಾರ,
ಹಿಂದಿದ್ದ, ಇಂದಿರುವ, ಮುಂಬರುವದೆಲ್ಲದರ
ಜ್ಞಾನರಸದಿಂದ ಹೊಮ್ಮಿದ ದೀವಿಗೆಯ ಬೆಳಕ,
ಓದಬಲ್ಲಂಥವರ ಮನೆಮನೆಗೆ ಮನಮನಕೆ
ಹೊತ್ತೊಯ್ವ ಹೊತ್ತಗೆಯೆ ಜ್ಞಾನಸೂರ್ಯನಕಿರಣ;

ಜಗವೆಲ್ಲವನು ಸುತ್ತಿ ಜಗದ ಎಲ್ಲೆಯ ಮೀರಿ
ಹರಡಿದ ಅನಂತವೇ ಚುಳಕಾಗಿ ಬಂದಂತೆ,
ಜ್ಞಾನದ ವಿರಾಟ್‌ಪುರುಷ ಕೈಯಲ್ಲೆ ನಿಂದಂತೆ,
ಭಾನುವಿನ ಹೊಂಬೆಳಕು ಕೈದೀಪವಾದಂತೆ,
ಇದ್ದಲ್ಲೆ ಸರ್ವಸಾಕ್ಷಾತ್ಕಾರವಾದಂತೆ,
ಇದ್ದೆಡೆಗೆ ಸಾಗಿ ಬರುತಿದೆ ಪುಸ್ತಕದ ಭಾಗ್ಯ,
ಬಯಸಿದುದನೆಲ್ಲ ಎಲ್ಲೆಡೆ ಕೊಡುವ ಸೌಭಾಗ್ಯ,
ನಿತ್ಯನೂತನ ಚೇತನದ ಮನನಾರೋಗ್ಯ;

ಬೆಳಗುವಂತೆಲ್ಲಕಡೆ ಎಲ್ಲರಂತಃಕರಣ
ಬೆಳಕು ನೀಡಲಿ ನಮಗೆ ಜ್ಞಾನಸೂರ್ಯನ ಕಿರಣ.

●

ನ. ಮ. ಕೊ. ಸೋಗಿ

● ಸೋ. ಸುಬ್ರಹ್ಮಂ

ಕನ್ನಡ ರಾಜ್ಯೋತ್ಸವ ಮತ್ತು ಸಾಹಿತ್ಯಪ್ರಚಾರ

ಕನ್ನಡ ರಾಜ್ಯೋದಯವಾದುದು ೧೯೫೬ರ ನವೆಂಬರ್ ಒಂದರಂದು. ಅಂದಿನಿಂದ ಕನ್ನಡನಾಡು ಪ್ರತಿ ವರ್ಷ ಈ ಉತ್ಸವವನ್ನು ಸಭೆ ಸಮಾರಂಭಗಳನ್ನು ಏರ್ಪಡಿಸುವುದರ ಮೂಲಕ ಸಾಕಷ್ಟು ವಿಜೃಂಭಣೆಯಿಂದ ಆಚರಿಸುತ್ತಾ ಬಂದಿದೆ. ಕನ್ನಡ ನಾಡಿನ ಹಿರಿಯ ಕನಸಾಗಿದ್ದ ಕನ್ನಡರಾಜ್ಯವು ವೈವೆತ್ತು ಹನ್ನೆರಡು ವರ್ಷಗಳ ಕಾಲ ಆ ಸಂತೋಷವನ್ನು ಸೂಚಿಸುವ ಸಲುವಾಗಿ ರಾಜ್ಯೋತ್ಸವಗಳನ್ನು ಒಂದಿಲ್ಲೊಂದು ಬಗೆಯಾಗಿ ಆಚರಿಸುತ್ತ ಬಂದೆವಾದರೂ 'ಕನ್ನಡತನ'ದ ರಾಜ್ಯವು ಇನ್ನೂ ರೂಪಗೊಂಡಿರಲಿಲ್ಲ.

ಸಾಹಿತ್ಯ ಪ್ರಚಾರದ ಉಗಮ?

ವರ್ಷದಲ್ಲಿ ಒಂದು ದಿನ ಕನ್ನಡದ ನೆನಪಾಗಿ ಮರುದಿನವೇ ಆ ನೆನಪು ಹೊಗೆಯಾಗುವ ಉತ್ಸವಗಳಿಂದ ರಚನಾತ್ಮಕ ಕ್ರಿಯಾತ್ಮಕ ಸಾಧನೆ ಅಲ್ಪವೆಂದು ಅರಿತವರು ಡಾ॥ ರಂ. ಶ್ರೀ. ಮುಗಳಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಈಗಿನ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರು. ಸಂಘಸಂಸ್ಥೆಗಳ ಸಮಾರಂಭಗಳಿಂದ ಕನ್ನಡ ನಾಡು-ನುಡಿಗಳ ಹೆಮ್ಮೆ ಬೆಳೆಯುತ್ತ ಬಂದಿದೆಯೆನ್ನುವುದು ನಿರ್ವಿವಾದವಾದರೂ ಕನ್ನಡತನದ ಬೇರು ಭೂಮಿಯಲ್ಲಿ ಭದ್ರವಾಗಿ ಸೇರಿ, ಮೇಲೆ ನೂರಾರು ರೆಂಬೆಕೊಂಬೆಗಳಾಗಿ, ಬಿಳಲುಗಳಾಗಿ ಪಸರಿಸಿಕೊಂಡು ಹೆಮ್ಮರವಾಗಬೇಕೆಂಬ ಹೆಬ್ಬಯಕೆಯ ಕಣಸುಗಾರರೆಂದರೆ ಶ್ರೀ ಜಿ. ನಾರಾಯಣ ಅವರು. ತಮ್ಮ ಕಲ್ಪನೆಯ ಮುಗಿಲಲ್ಲಿ ಹನಿಗೂಡಿಸಿ ತಂಪಾಗಿಸಿ ಭೂತಳಕ್ಕೆ ಅದನ್ನೊಯ್ದು ಅಲ್ಲಿ ಕನ್ನಡ ಕ್ರಿಯೆಯನ್ನು ಚಿಗುರೊಡೆಸಿ ನೆಲ ಹಸಿರಾಗಿಸಿದ ಕೀರ್ತಿಗೆ ಅವರಿಂದು ಭಾಜನರು ಎಂದರೆ ಉತ್ಪ್ರೇಕ್ಷೆಯಾಗಲಾರದು.

ಕನ್ನಡದ ಕೆಲಸಕ್ಕೆ ಸಾಹಿತ್ಯದ ಲೇಪನ

ವಾಸ್ತವದಲ್ಲಿ, ಕನ್ನಡ ಕೆಲಸಕ್ಕೆ ಸಾಹಿತ್ಯದ ಲೇಪನ ಮಾಡಿ ಕನ್ನಡ ರಾಜ್ಯೋತ್ಸವವನ್ನು ಆಚರಿಸುವಲ್ಲಿ ವಿಶಿಷ್ಟತನ ತೋರಿದುದೆಂದರೆ ಕನ್ನಡ ರಾಜ್ಯೋತ್ಸವ ಸಾಹಿತ್ಯ ಪ್ರಚಾರ ಸಮಿತಿ. ಕನ್ನಡ ರಾಜ್ಯೋತ್ಸವವನ್ನು ಸಾಹಿತ್ಯ ಪ್ರಚಾರದ ಮೂಲಕ ನೆರವೇರಿಸುವುದೇ ಅದರ ಉದ್ದೇಶ. ಈ ವಿಶೇಷ ನಿರ್ಧಾರಕ್ಕೆ ಮೂಲ ಕಾರಣವೆಂದರೆ ಕನ್ನಡ ರಾಜ್ಯದಲ್ಲಿ ಕಂಡುಬಂದ 'ಕನ್ನಡತನ'ದ ಕೊರತೆ.

ಕನ್ನಡದಿಂದಲೇ ಕನ್ನಡಿಗರ ಉದ್ಧಾರ

ಕನ್ನಡತನದ ರಾಜ್ಯ ಸಾಧ್ಯವಾಗಬೇಕಾದರೆ 'ಕನ್ನಡದಿಂದಲೇ ಕನ್ನಡಿಗರ ಉದ್ಧಾರ' ಎಂಬ ತತ್ವಕ್ಕೆ ಮನ್ನಣೆ ದೊರೆಯಬೇಕು. ವಿದ್ಯಾಭ್ಯಾಸದಲ್ಲಿ, ಆಡಳಿತದಲ್ಲಿ, ಎಲ್ಲ ಚಟುವಟಿಕೆಗಳಲ್ಲಿ ಕನ್ನಡಕ್ಕೆ ಪ್ರಮುಖ ಸ್ಥಾನ ದೊರೆಯಬೇಕು. ಇದು ಸಾಧ್ಯವಾಗಬೇಕಾದರೆ ಕನ್ನಡ ಸಾಹಿತ್ಯ, ಸಂಸ್ಕೃತಿಗಳ ನಿಕಟ ಪರಿಚಯ ತುಂಬ ಅಗತ್ಯ. ಹೊರಗಿನ ಒತ್ತಾಯದಿಂದಲ್ಲದೆ ಒಳಗಿನ ಒತ್ತಾಸೆಯಿಂದ ಈ ಕನ್ನಡ ಹೆಮ್ಮೆ ಉಕ್ಕಿ ಬರಬೇಕು. ಭಾರತದ ಮುನ್ನಡೆಗೆ ಪೋಷಕವಾಗಿಯೇ ಕನ್ನಡ ನಾಡಿನ ಮುನ್ನಡೆಯಾಗಬೇಕು. ಕನ್ನಡವನ್ನು ಪ್ರೀತಿಸುವಂತೆ ಕನ್ನಡಿಗರು ಭಾರತದ ಎಲ್ಲ ಭಾಷೆಗಳನ್ನೂ ಮತ್ತು ಅವನ್ನಾಡುವ ಜನರನ್ನೂ ಪ್ರೀತಿಸಬೇಕು. ಅಂತೆಯೇ ಕನ್ನಡ ನಾಡಿನಲ್ಲಿರುವ ಇತರ ಭಾಷಾ ಬಂಧುಗಳು ಕನ್ನಡದ ಬಗ್ಗೆ ಅಷ್ಟೇ ಅಭಿಮಾನವನ್ನು ತಾಳಬೇಕು.

ಸಾಹಿತ್ಯ ಪ್ರಚಾರ ಸಮಿತಿಯ ಜನ್ಮ

ಇಷ್ಟು ಉದಾತ್ತವಾದ ಹಿರಿದಾದ ಹೊಣೆಗಾರಿಕೆಯನ್ನೂ ಆದರ್ಶವನ್ನೂ ತನ್ನ ಗುರಿಯಾಗಿಟ್ಟುಕೊಂಡು

೯೬೮ರ ಆಗಸ್ಟ್ ಸುಮಾರಿನಲ್ಲಿ ಕನ್ನಡ ರಾಜ್ಯೋತ್ಸವ ಸಾಹಿತ್ಯ ಪ್ರಚಾರ ಸಮಿತಿ ಜನ್ಮ ತಳೆಯಿತು. ಡಾ|| ರಂ. ಶ್ರೀ. ಮುಗಳಿ ಅವರು ಇದರ ಅಧ್ಯಕ್ಷರಾಗಿಯೂ, ಶ್ರೀ ಜಿ. ನಾರಾಯಣ ಅವರು ಕಾರ್ಯಾಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಲು ಒಪ್ಪಿದರು. ಕನ್ನಡದ ಹಿರಿಮೆಯನ್ನು ಹೆಚ್ಚಿಸುವ ಈ ಎಲ್ಲ ದೃಷ್ಟಿಯಿಂದ ಆ ವರ್ಷದ ಕನ್ನಡ ರಾಜ್ಯೋತ್ಸವವನ್ನು ರಚನಾತ್ಮಕವಾದ ರೀತಿಯಲ್ಲಿ ಆಚರಿಸಬೇಕೆಂದು ಕನ್ನಡ ರಾಜ್ಯೋತ್ಸವ ಸಾಹಿತ್ಯ ಪ್ರಚಾರ ಸಮಿತಿ ತೀರ್ಮಾನಿಸಿತು. ವಿನೂತನವೂ ವಿಶಿಷ್ಟವೂ ಆದ ಈ ಉತ್ಸವದ ಅಂಗವಾಗಿ ಕನ್ನಡ ಸಾಹಿತ್ಯ ಪ್ರದರ್ಶನವನ್ನು ಏರ್ಪಡಿಸುವುದು, ಕನ್ನಡ ಗ್ರಂಥಗಳನ್ನೂ ಪತ್ರಿಕೆಗಳನ್ನೂ ಕೊಂಡು ಓದುವಂತೆ ಜನಗಳನ್ನು ಪ್ರೇರಿಸುವುದು, ಕನ್ನಡ ಕಾರ್ಯಕರ್ತರನ್ನು ಒಂದುಗೂಡಿಸುವುದು—ಇವು ಈ ಸಮಿತಿಯ ಉದ್ದೇಶಗಳಾದುವು.

ನೂರು ಕಡೆಗಳಲ್ಲಿ ಪ್ರದರ್ಶನ

ಆ ವರ್ಷದ ನವೆಂಬರ್ ೧ರಿಂದ ೧೧ರವರೆಗೆ ನಡೆದ ಈ ಕಾರ್ಯಕ್ರಮದಲ್ಲಿ ಬೆಂಗಳೂರು ನಗರದ ನೂರುಕಡೆಗಳಲ್ಲಿ ಕನ್ನಡ ಗ್ರಂಥಗಳ ಪ್ರದರ್ಶನವನ್ನೇರ್ಪಡಿಸಲಾಗಿತ್ತು. ಅಲ್ಲದೆ ಕಡೆಯ ದಿನವಾದ ನವೆಂಬರ್ ೧೦ರಂದು ಮಲ್ಲೇಶ್ವರದಲ್ಲಿ ಮನೆಮನೆಗೆ ಸಾಹಿತಿಗಳೊಂದಿಗೆ ಹೋಗಿ ಕನ್ನಡ ಗ್ರಂಥಗಳ ಮಾರಾಟ ಮಾಡಲಾಯಿತು. ಹತ್ತು ದಿನಗಳಿಗೆ ಮಾತ್ರ ಈ ಕಾರ್ಯಕ್ರಮವು ಸೀಮಿತವಾಗಿದ್ದರೂ ಇದು ಕಾಲಕಾಲಕ್ಕೆ ನಡೆಯಬೇಕಾದ ಕೆಲಸವಾಗಿದ್ದು, ಬೆಂಗಳೂರು ನಗರದಲ್ಲಿ ಮಾತ್ರವಲ್ಲದೆ ಕನ್ನಡ ನಾಡಿನ ಎಲ್ಲ ಸಣ್ಣ ದೊಡ್ಡ ಊರುಗಳಲ್ಲಿ ಇದು ಹಬ್ಬವಾಗಬೇಕೆಂಬುದು ಸಮಿತಿಯ ಹೆಬ್ಬಯಕೆಯಾಗಿತ್ತು. ಅಂತೆಯೇ ಮುಂದಿನ ವರ್ಷಗಳಲ್ಲಿ ಈ ಕಾರ್ಯಕ್ರಮವನ್ನು ಮುಂದೆ ಭದ್ರಾವತಿ, ಹುಬ್ಬಳ್ಳಿ, ಮಂಗಳೂರು ಮೊದಲಾದ ಪಟ್ಟಣಗಳಲ್ಲಿ ಯಶಸ್ವಿಯಾಗಿ ಆಚರಿಸಲಾಯಿತು.

ಜನಪ್ರಿಯತೆಗೆ ಸಾಕ್ಷಿ

ಬೆಂಗಳೂರಿನ ಪ್ರಾರಂಭಿಕ ಉತ್ಸವದಲ್ಲಿ ನಗರದ ಎಲ್ಲ ವರ್ಗಗಳ ಎಲ್ಲ ಜನರೂ—ವಿಶೇಷವಾಗಿ ಸಾಹಿತಿಗಳು, ಪ್ರಕಾಶಕರು, ಪತ್ರಿಕಾಕರ್ತರು, ಅಧ್ಯಾಪಕರು, ಕನ್ನಡ ಕಾರ್ಯಕರ್ತರು, ಸಂಘಸಂಸ್ಥೆಗಳು, ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದುದು ಈ ಉತ್ಸವದ ಜನಪ್ರಿಯತೆಗೆ ಸಾಕ್ಷಿಯಾಯಿತು. ಉಳಿದೆಡೆಗಳಿಗೆ ಇದು ಮಾದರಿಯಾಯಿತು; ಅನುಕರಣ ಯೋಗ್ಯವೆನಿಸಿತು.

*　　*　　*

ಕನ್ನಡ ರಾಜ್ಯೋತ್ಸವಕ್ಕೆ ಕೂಡಿಕೊಂಡಂತೆ ಪ್ರಾರಂಭವಾದ ಕನ್ನಡ ಸಾಹಿತ್ಯ ಪ್ರಚಾರದ ಈ "ಬೆಂಗಳೂರು ಪ್ರಯೋಗ"ದ ವೈಖರಿ ವೈಭವ ವೈಶಿಷ್ಟ್ಯಗಳು ಅನುಕರಣೀಯ ಯೋಗ್ಯವೆನಿಸಿ ಜನಪ್ರಿಯವಾದುದು ನಿರ್ವಿವಾದವಾದ ಸಂಗತಿ. ಆದರೆ ಯಾವುದೇ ಪ್ರಚಾರ ನಿರ್ದಿಷ್ಟ ಕಾಲದಲ್ಲಿ ಮಾತ್ರ ನಡೆದು ಉಳಿದ ಕಾಲಗಳಲ್ಲಿ ನಿದ್ರಿಸುವುದು ಜಡತನದ ಸಂಕೇತ. ಆದುದರಿಂದಲೇ ಈ ದಿಸೆಯಲ್ಲಿ ನಿಶ್ಚಿತವಾದ ನಿರಂತರವಾದ ಯೋಜನೆಯ ಪ್ರಾಮಾಣಿಕ ಆಚರಣೆಯ ಅವಶ್ಯಕತೆಯಿದೆ.

ಸಾಹಿತ್ಯಪ್ರಚಾರದಲ್ಲಿ ಹಿನ್ನೆಲೆಯಾಗಿ ನಿಲ್ಲುವುದು ಪುಸ್ತಕಗಳ ಪ್ರಕಾಶನ ಮತ್ತು ಮಾರಾಟ ವ್ಯವಸ್ಥೆ. ಸರಕಾರ, ಸಂಘಸಂಸ್ಥೆಗಳು, ಪುಸ್ತಕ ಭಂಡಾರಗಳು ಮತ್ತು ಮುಖ್ಯವಾಗಿ ಸಾರ್ವಜನಿಕರು ಸಾಹಿತ್ಯ ಪ್ರಚಾರಕ್ಕೆ ಇಂಬು ಕೊಡಬಲ್ಲರು; ಅದರ ಬೆನ್ನಾಗಿ ನಿಲ್ಲಬಲ್ಲರು. ಸರಕಾರ ಮತ್ತು ಪಠ್ಯಪುಸ್ತಕಗಳು ಕೊಳ್ಳುವ ಬೃಹತ್ ಪ್ರಮಾಣದ ವ್ಯಾಪಾರಗಳಲ್ಲಿ, ಧನ ಸಹಾಯದ ವಿತರಣೆಗಳಲ್ಲಿ ಪಾವಿತ್ರ್ಯ ಹಾಗೂ ಪರಿಶುದ್ಧ ವಿಧಾನಗಳು ಇರಬೇಕು. ಈ ಸಂಸ್ಥೆಗಳು ಮಾಡುವ ಕೆಲಸಗಳು ಆಗಾಗ್ಗೆ ಸಾರ್ವಜನಿಕರಿಗೂ ತಿಳಿಯುವಂತೆ ಪ್ರಚಾರ ಮಾಧ್ಯಮಗಳಿರಬೇಕು. ಸರ್ಕಾರ ನೀಡುವ ಹಣ ಕೊಳ್ಳುವ ಪುಸ್ತಕಗಳು, ಇತ್ಯಾದಿ ವಿವರಣೆಗಳನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಪ್ರಕಟಿಸಬೇಕು.

ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ಯೋಗ್ಯವೆಂದು ಪರಿಗಣಿಸುವ ಪುಸ್ತಕಗಳು ಎಲ್ಲ ಶಾಲಾ ಕಾಲೇಜುಗಳ ಪುಸ್ತಕ ಭಂಡಾರದಲ್ಲಿಯೂ, ಸಾರ್ವಜನಿಕ ಪುಸ್ತಕ ಭಂಡಾರದಲ್ಲಿಯೂ ಸೇರ್ಪಡೆಯಾಗಬೇಕು. ಸಾಹಿತ್ಯ ಅಕಾಡೆಮಿ ನೀಡುವ ಬಹುಮಾನದ ಮೊತ್ತವು ಒಂದು ಪ್ರಕಾರದಲ್ಲಿ ಕನಿಷ್ಠ ಪಕ್ಷ ಹತ್ತು ಸಾವಿರ ರೂಪಾಯಿಗಳಾದರೂ ಆಗಬೇಕು. ಏಕೆಂದರೆ, ಸಾಹಿತ್ಯ ಪ್ರಚಾರ ಕೇವಲ ಘೋಷಣೆಯಿಂದಲೇ ಆಗುವುದಿಲ್ಲ; ಪೋಷಣೆಯೂ ಅದಕ್ಕೆ ಅಗತ್ಯ.

ನಮ್ಮ ವಿಶ್ವವಿದ್ಯಾನಿಲಯಗಳು ಪ್ರಕಟಣೆಗಳಲ್ಲಿ ವೈವಿಧ್ಯವನ್ನುಂಟುಮಾಡುವ ಸಲುವಾಗಿ ವರ್ಷಕ್ಕೊಮ್ಮೆ ಯಾದರೂ ಸಮಾಲೋಚನೆ ನಡೆಯಿಸಿ ಪುಸ್ತಕಗಳನ್ನು ಪೂರಕವಾಗುವಂತೆ ಪ್ರಕಟಿಸಬೇಕು. ಕೇವಲ ಪೈಪೋಟಿ ಯಿಂದ ಪ್ರಕಟಣೆಯ ಸಂಖ್ಯೆಗಳನ್ನು ಹೆಚ್ಚಿಸುವುದರಿಂದ ಹಣದ ಅಪವ್ಯಯವಷ್ಟೇ ಆಗುತ್ತದೆ. ಅವು ಪ್ರಕಟಿಸುವ ಪ್ರಚಾರ ಪುಸ್ತಕಮಾಲೆಗಳು, ಕಾಲಕ್ಕನುಗುಣವಾಗಿ, ಹೂರಣದಂತೆ ಹೊದಿಕೆಯಲ್ಲೂ ಶೋಭಿಸಬೇಕು. ಅವುಗಳ ಲೇಖಕರಿಗೆ ಇನ್ನೂ ಆಕರ್ಷಕವಾದ ಸಂಭಾವನೆ ದೊರಕಬೇಕು.

ನೆರವಾಗುವ ಕಾರ್ಯಕ್ರಮ

ಕನ್ನಡದಲ್ಲಿ ಸಾಹಿತ್ಯ ಪ್ರಸಾರವು ಉನ್ನತ ಮಟ್ಟವನ್ನು ಮುಟ್ಟಲು ನೆರವಾಗುವ ಇನ್ನಿತರ ಕಾರ್ಯಕ್ರಮಗಳೆಂದರೆ :

ಅ. ಪುಸ್ತಕಗಳಿಗೆ ಕಡಮೆ ಬೆಲೆಯಿಡುವುದು ಮತ್ತು ಅವುಗಳ ಮಾರಾಟ ವ್ಯವಸ್ಥೆ.

ಆ. 'ಹೋಂ ಲೈಬ್ರರಿ' ಪದ್ಧತಿಯ ಆಚರಣೆ.

ಇ. ಚರ್ಚಾಕೂಟಗಳು, ಅಧ್ಯಯನ ಗೋಷ್ಠಿಗಳು ಮತ್ತು ಅಧಿವೇಶನಗಳು.

ಈ. ಪುಸ್ತಕಗಳನ್ನು ಕುರಿತಾದ ಒಂದು ನಿಯತ ಕಾಲಿಕ ಪತ್ರಿಕೆ.

ಉ. ಸಂಶೋಧನೆ, ಸಮಾಚಾರ ಕೇಂದ್ರ ಮತ್ತು ಸಮೀಕ್ಷೆಗಳು.

ಇಂಥ ವೈವಿಧ್ಯಮಯ ಕಾರ್ಯಕ್ರಮಕ್ಕೆ ಸರಕಾರ, ಸಾಹಿತ್ಯ ಪರಿಷತ್ತು, ಸಾಹಿತ್ಯ ಅಕಾಡೆಮಿ ಮತ್ತು ವಿಶ್ವವಿದ್ಯಾನಿಲಯಗಳು ಒಮ್ಮುಖದಿಂದ ಸಮಾಲೋಚನೆ ನಡೆಯಿಸಿದಾಗ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಜನರಿಗೆ ಪುಸ್ತಕಗಳ ಪರಿಚಯವಾಗುವುದರಲ್ಲಿ ಸಂಶಯವಿಲ್ಲ. ಹಾಗೆಯೇ ಪ್ರಕಟಣೆ ಮತ್ತು ಮಾರಾಟಗಳಲ್ಲಿ ಹೊಸ ವೈಖರಿ ಮಾಡುವುದರಲ್ಲಿ ಎರಡು ಅಭಿಪ್ರಾಯವಿರದು.

ಕೇಂದ್ರ ಸರಕಾರದ ನೆರವು

ಕರ್ನಾಟಕ ರಾಜ್ಯದ ಮಟ್ಟದಲ್ಲಿಯೇ ಇಲ್ಲಿನ ಜನ ಧನ ಸಹಾಯದಿಂದ ಇಷ್ಟೆಲ್ಲ ಮಾಡಲು ಸಾಧ್ಯವಿದೆ ಯಾದರೂ ಕೇಂದ್ರ ಸರಕಾರದ ನೆರವನ್ನು ನಾವು ಉಪೇಕ್ಷಿಸುವಂತಿಲ್ಲ; ಉಪೇಕ್ಷಿಸಲೂ ಕೂಡದು. ಕೇಂದ್ರ ಸರ್ಕಾರ ನೀಡುವ ಎಲ್ಲ ಸೌಲಭ್ಯ ಸಹಾಯಗಳನ್ನೂ ವರಿಷ್ಠ ಮಟ್ಟದಲ್ಲಿ ಹೊಡೆದಾಡಿಯಾದರೂ ಪಡೆದು ಕನ್ನಡ ಸಾಹಿತ್ಯ ಪ್ರಚಾರಕ್ಕೆ ಪುಷ್ಟಿಯುಂಟುಮಾಡಬೇಕು. ನ್ಯಾಷನಲ್ ಬುಕ್ ಟ್ರಸ್ಟ್, ಕೇಂದ್ರ ಸಾಹಿತ್ಯ ಅಕಾಡೆಮಿ, ಕೇಂದ್ರ ಸರ್ಕಾರದ ವಿದ್ಯಾ ಖಾತೆ ಹಾಗೂ ವಾರ್ತಾ ಮತ್ತು ಪ್ರಸಾರ ಶಾಖೆ, ಆಕಾಶವಾಣಿ–ಇವುಗಳಲ್ಲಿ 'ಕನ್ನಡತನ'ದ ರಕ್ಷಣೆಯಾಗಬೇಕು. ಅಂದರೆ, ಈ ಸಂಸ್ಥೆಗಳು ಕನ್ನಡದ ವಿಷಯದಲ್ಲಿ ತಳೆಯುವ ತಾಮಸ ಪ್ರವೃತ್ತಿಯನ್ನು ತೊಲಗಿಸಿ ಅವು ಕನ್ನಡಕ್ಕೆ ಯಥೋಚಿತವಾದ ಮನ್ನಣೆ ನೀಡಲು ನಮ್ಮ ಸರಕಾರವೂ, ಹಿರಿಯ ಅಧಿಕಾರಿಗಳೂ ಪ್ರಯತ್ನಿಸಬೇಕು ; ಪಡೆಯಬೇಕು. ನಿರ್ದಾಕ್ಷಿಣ್ಯ ಪ್ರವೃತ್ತಿಯ ಧೀಮಂತ ಹಾಗೂ–ನಿಷ್ಠಾವಂತ ವ್ಯಕ್ತಿಗಳನ್ನು ಇಂಥ ಸಂಸ್ಥೆಗಳಿಗೆ ಸದಸ್ಯರಾಗಿ ಕಳುಹಿಸಿ ಕಾರ್ಯಸಾಧನೆಯಲ್ಲಿ ಯಶಸ್ಸನ್ನೂ, ಕನ್ನಡ ಸಾಹಿತ್ಯ ಪ್ರಚಾರಕ್ಕೆ ಅಗತ್ಯ ನೆರವನ್ನೂ ಹೊಂದುವಂತೆ ಏರ್ಪಡಿಸಬೇಕು.

ಕನ್ನಡ ರಾಜ್ಯೋತ್ಸವ ಕನ್ನಡಿಗರೆಲ್ಲರ ಮನೆಯಲ್ಲಿ ವರ್ಷವಿಡೀ ಕನ್ನಡ ಸಾಹಿತ್ಯಾರಾಧನೆ ಮತ್ತು ಪೋಷಣೆ ಯಿಂದ ಸಂಭ್ರಮದಿಂದ ಸಾಗಲು ನೆರವಾಗುವ ಎಲ್ಲ ಕಾರ್ಯಕ್ರಮಗಳಿಗೂ ಕನ್ನಡ ಜನತೆ ಸೋಮಾರಿತನ ಮತ್ತು ಸಂಕೋಚ ಪ್ರವೃತ್ತಿಗಳನ್ನು ಬಿಟ್ಟು ಸ್ವಾಭಿಮಾನ ದಿಂದ ಸಂತೋಷದಿಂದ ಸೇವೆ ಸಲ್ಲಿಸಲು ಸರ್ವಥಾ ಸಿದ್ಧವಿರಬೇಕು. ಆಗಲೇ ಕನ್ನಡ ಸಾಹಿತ್ಯ ಪ್ರಚಾರದ ಉಳಿವು ; ಆಗಲೇ ಕನ್ನಡ ನುಡಿಯ ಬೆಳೆವು.

ಸೈಸೂರು ರಾಜ್ಯದಲ್ಲಿ . . . .

(೨೪ನೇ ಪುಟದಿಂದ)

ೂಲಕ, ಮೂರು ಮಂದಿ ಪ್ರಥಮ ದರ್ಜೆಯ (ಡಿವಿ ನ್) ಗುಮಾಸ್ತರನ್ನು ಬದಲಾಯಿಸಬಹುದು. ೭೫–೪೫೦ ರೂ.ಗಳ ಅಂತಸ್ತಿನಲ್ಲಿ ಗ್ರಂಥಾಲಯ ಹಾಯಕ (ಗ್ರಂಥಾಲಯ ವಿಜ್ಞಾನದಲ್ಲಿ ಡಿಪ್ಲೊಮಾ ಡೆದ ಪದವೀಧರ)ರೊಬ್ಬರನ್ನು ನಿಯಮಿಸುವುದರ ೂಲಕ ದ್ವಿತೀಯ ದರ್ಜೆಯ ಗುಮಾಸ್ತೆಯನ್ನು ಬದ ಾಯಿಸಬಹುದು.

ಈಗ ದ್ವಿತೀಯ ವರ್ಗ (ಕ್ಲಾಸ್ II)ದಲ್ಲಿರುವ ಗ್ರಂಥ ಾಲಕರ ಹುದ್ದೆಯನ್ನು ಪ್ರಥಮ ವರ್ಗಕ್ಕೆ ಏರಿಸಬಹು ದೂ, ಶಾಲಾ ಪುಸ್ತಕಭಂಡಾರಗಳ ರಾಜ್ಯಮಟ್ಟದ ೇಲ್ವಿಚಾರಕರೆಂದು ಕರೆಯಬಹುದೆಂದೂ, ಅವರಿಗೆ ಾಜ್ಯಾದ್ಯಂತ ಶಾಲಾ ಪುಸ್ತಕ ಭಂಡಾರಗಳನ್ನು ವ್ಯವಸ್ಥೆ ೊಳಿಸುವ ಹಾಗೂ ಅಭಿವೃದ್ಧಿಗೊಳಿಸುವ ಹೆಚ್ಚಿನ ವಾಬ್ದಾರಿಯನ್ನು ವಹಿಸಬಹುದೆಂದೂ ಶಿಕ್ಷಣ ಇಲಾಖಾ ರ್ದೇಶಕರು (ಡೈರೆಕ್ಟರ್) ಶಿಫಾರ್ಸು ಮಾಡಿದ್ದಾರೆ. ಈ ಭಿಪ್ರಾಯಕ್ಕೆ ನನ್ನ ಸಂಪೂರ್ಣ ಒಪ್ಪಿಗೆ ಇದೆ. ಅವರ ಶಿಫಾರಸನ್ನು ಅಂಗೀಕರಿಸಬಹುದು. ಈ ಹುದ್ದೆ ುನ್ನು ಮೇಲಿನ ಅಂತಸ್ತಿಗೆ ಏರಿಸುವುದರಿಂದ ಆಗಬಹು ದ ಹೆಚ್ಚುವರಿ ವೆಚ್ಚ, ವರ್ಷವೊಂದಕ್ಕೆ ಕೇವಲ ೨೧೧ಲ ರೂಪಾಯಿಗಳಷ್ಟು ಮಾತ್ರ ! ಶಿಕ್ಷಣ ಇಲಾಖಾ ರ್ದೇಶಕರು ಸಲಹೆ ಮಾಡಿರುವ ಸಹಾಯಕ ಸಿಬ್ಬಂದಿ ುನ್ನು ಕೂಡ ಮಂಜೂರು ಮಾಡಬಹುದು.

ೈಸೂರು ರಾಜ್ಯದ ಾಲಾ ಪುಸ್ತಕ ಭಂಡಾರ ಸಮಿತಿ

ಶಾಲಾ ಪುಸ್ತಕಭಂಡಾರಗಳಿಗೆ ಸಂಬಂಧಿಸಿದ ಎಲ್ಲ ಚಾರಗಳಲ್ಲಿ ಸರಕಾರಕ್ಕೆ ಸಲಹೆಗಳನ್ನೀಯಲು, " ಶಾಲಾ ುಸ್ತಕಭಂಡಾರ ಸಲಹಾ ಮಂಡಳಿ "ಯೊಂದನ್ನು ರಾಜ್ಯ ರಕಾರವು ರಚಿಸಬಹುದೆಂದು, ಅಂತಿಮವಾಗಿ, ಶಿಫಾರ್ಸು ಾಡುತ್ತೇನೆ. ಈಗಿರುವ ರಾಜ್ಯ ಶೈಕ್ಷಣಿಕ ಗ್ರಂಥಾಲಯ ಡಳಿತ ಸಮಿತಿಯ ಬದಲು, ಈ ಸಲಹಾ ಮಂಡಲಿಯು ಸ್ತಿತ್ವಕ್ಕೆ ಬರಬಹುದು. ಈ ಮಂಡಳಿಯು, ಗ್ರಂಥಾಲ ುದ ಹಾಗೂ ಉದ್ದೇಶಿತವಾದ (ರಚಿಸಬೇಕೆಂದಿರುವ) ಶೈಕ್ಷಣಿಕ ಸಂಶೋಧನೆ, ವಿಸ್ತರಣೆ (ಎಕ್ಸ್‌ಟೆನ್‌ಷನ್) ಹಾಗೂ ತರಬೇತಿಗಳಿಗೆ ಸಂಬಂಧಿಸಿದ ರಾಜ್ಯ ಪರಿಷತ್ತಿನ(ಕೌನ್ಸಿಲ್)ನ ದಾಖಲೆ ಪತ್ರಾಗಾರದ (ಡಾಕುಮೆಂಟೇಷನ್ ಸೆಂಟರ್) ಕಾರ್ಯಕ್ರಮ ಸಲಹಾ ಮಂಡಲಿಯಾಗಿಯೂ ಕಾರ್ಯನಿರ್ವಹಣೆ ಮಾಡಬಹು ದಾಗಿದೆ. ಈ ಕೆಳಗೆ ಕಾಣಿಸುವ ಸದಸ್ಯರು, ಈ ಮಂಡಳಿ ಯಲ್ಲಿರಬಹುದು :

೧. ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು (ಅಧ್ಯಕ್ಷರು)
೨. ಕೇಂದ್ರ ಕಛೇರಿಯಲ್ಲಿರುವ ಸಂಯುಕ್ತ (ಜಾಯಿಂಟ್) ನಿರ್ದೇಶಕರು (ಶಾಲಾ ಶಿಕ್ಷಣ).
೩. ಶಿಕ್ಷಣ ಇಲಾಖೆಯ ಒಬ್ಬ ವಲಯ (ಡಿವಿಜನಲ್) ಸಂಯುಕ್ತ ನಿರ್ದೇಶಕರು.
೪. ವಿಶ್ವವಿದ್ಯಾಲಯವೊಂದರ ಒಬ್ಬ ಗ್ರಂಥಪಾಲಕ.
೫. ಬಿ. ಎಡ್. ಕಾಲೇಜಿನ ಒಬ್ಬ ಪ್ರಿನ್ಸಿಪಾಲ್.
೬. ರಾಜ್ಯದ ಗ್ರಂಥಪಾಲಕ.
೭. ಒಬ್ಬ ಜಿಲ್ಲಾ ಶಿಕ್ಷಣಾಧಿಕಾರಿ (ಡಿ.ಡಿ.ಪಿ.ಐ.)
೮. ಒಬ್ಬ ವಿಷಯ ಮೇಲ್ವಿಚಾರಕ (ಸಬ್ಜೆಕ್ಟ್ ಇನ್‌ಸ್ಪೆಕ್ಟರ್)
೯. ಹೈಸ್ಕೂಲುಗಳ (ಬಾಲಕ–ಬಾಲಿಕೆಯರ) ಇಬ್ಬರು ಮುಖ್ಯೋಪಾಧ್ಯಾ(ಯಿನಿ)ಯರು.
೧೦. ದಾಖಲೆ ಪತ್ರಾಗಾರ ಮತ್ತು ಸಂಶೋಧನಾ ತರಬೇತಿ ಕೇಂದ್ರದ ಒಬ್ಬ ಪ್ರತಿನಿಧಿ.
೧೧. ಒಬ್ಬ ಸಹಾಯಕ ಶಿಕ್ಷಣಾಧಿಕಾರಿ (ಎ.ಇ.ಓ).
೧೨. ಉಪಾಧ್ಯಾಯ ತರಬೇತಿ ಸಂಸ್ಥೆಯೊಂದರ ಮೇಲ್ವಿಚಾರಕ (ಸೂಪರಿಂಟೆಂಡೆಂಟ್).
೧೩. ಒಬ್ಬ ಶಾಲಾ ಪರೀಕ್ಷಕ (ಇನ್‌ಸ್ಪೆಕ್ಟರ್).
೧೪. ಹಿರಿಯ ಪ್ರಾಥಮಿಕ ಶಾಲೆಗಳ (ಬಾಲಕ ಬಾಲಿಕೆಯರ) ಮುಖ್ಯೋಪಾಧ್ಯಾಯರಿಬ್ಬರು.
೧೫. ಒಬ್ಬ ಪ್ರೌಢಶಾಲಾ (ಹೈಸ್ಕೂಲ್) ಗ್ರಂಥಪಾಲಕ [ಪೂರ್ಣ ಕಾಲಾವಧಿಯಲ್ಲಿ ಕೆಲಸ ಮಾಡುವ, ಹಾಗೂ ಗ್ರಂಥಾಲಯ ವಿಜ್ಞಾನ

ದಲ್ಲಿ ಡಿಪ್ಲೊಮಾ ಹೊಂದಿರುವ ಪದವೀಧರ ಅಥವಾ ಗ್ರಂಥಾಲಯ ವಿಜ್ಞಾನದಲ್ಲಿ ಪದವೀಧರ].

೧೬. ಮಕ್ಕಳ ಪುಸ್ತಕ ಭಂಡಾರದ ಒಬ್ಬ ಗ್ರಂಥ ಪಾಲಕ.

೧೭. ಮೈಸೂರು ಗ್ರಂಥಾಲಯ ಸಂಘ (ಲೈಬ್ರರಿ ಅಸೋಸಿಯೇಷನ್)ದ ಒಬ್ಬ ಪ್ರತಿನಿಧಿ.

೧೮. ಗ್ರಂಥಾಲಯಗಳಲ್ಲಿ ಆಸಕ್ತಿ ಇರುವ ಇಬ್ಬರು ಅಥವಾ ಮೂವರು ಖಾಸಗೀ ವ್ಯಕ್ತಿಗಳು. ಈ ಸಮಿತಿಯ ಕಾರ್ಯಕ್ಷೇತ್ರ ಈ ಕೆಳಗಿನಂತಿರುತ್ತದೆ.

೧. ರಾಜ್ಯದ ಶಾಲಾ ಪುಸ್ತಕ ಭಂಡಾರಗಳ ಪರಿಸ್ಥಿತಿಯನ್ನು ಪರಿಶೀಲಿಸುವುದು.

೨. ಶಾಲಾ ಪುಸ್ತಕ ಭಂಡಾರಗಳ, ಮಕ್ಕಳ ಪುಸ್ತಕ ಭಂಡಾರಗಳ, ಹಾಗೂ ಉಪಾಧ್ಯಾಯ ತರಬೇತಿ ಸಂಸ್ಥೆಗಳ ಪುಸ್ತಕ ಭಂಡಾರಗಳ ಸುಧಾರಣೆ ಬಗ್ಗೆ ಸರಕಾರಕ್ಕೆ ಸೂಕ್ತವಾದ ಶಿಫಾರ್ಸುಗಳನ್ನು ನೀಡುವುದು ;

೩. ಗ್ರಂಥಪಾಲಕರ ಹುದ್ದೆಗಳನ್ನು ಸೃಷ್ಟಿಸುವ ಬಗ್ಗೆ ಸಲಹೆ ಮಾಡುವುದು ಮತ್ತು ಗ್ರಂಥ ಪಾಲಕರ ಅರ್ಹತೆ (ಕ್ವಾಲಿಫಿಕೇಷನ್)ಯನ್ನು ನಿಗದಿಗೊಳಿಸುವುದು ;

೪. ಈ ಕೆಳಗೆ ಸೂಚಿಸುವ ಅಂಶಗಳಿಗೆ ವಿಧಾನಗಳನ್ನೂ ರೂಪಿಸುವುದು :—

ಅ. ವಿದ್ಯಾರ್ಥಿ ಸಂಖ್ಯೆಗನುಗುಣವಾದ ಸಿಬ್ಬಂದಿ.

ಆ. ಪುಸ್ತಕ ಭಂಡಾರ ಮತ್ತು ವಾಚನಾಲಯಗಳ ಶುಲ್ಕ.

ಇ. ಶಾಲಾ ಮತ್ತು ಕಾಲೇಜುಗಳ ಪುಸ್ತಕ ಭಂಡಾರಗಳಿಗೆ ಸರಕಾರದ ಸಹಾಯ ಧನ–ಪ್ರಾರಂಭಿಕ ಹಾಗೂ ಪುನರ್ವೆಚ್ಚ, (ಇನಿಷಿಯಲ್ ಅಂಡ್ ರೆಕರಿಂಗ್),

ಈ. ವಿದ್ಯಾರ್ಥಿ ಸಂಖ್ಯೆಗನುಗುಣವಾಗಿ ಪುಸ್ತಕಗಳ ಸಂಖ್ಯೆ ;

ಉ. ಪುಸ್ತಕಗಳು, ನಿಯತಕಾಲಿಕಗಳು, ಪುಸ್ತಕ ಹೊಲಿಗೆ (ಬೈಂಡಿಂಗ್)—ಮೊದಲಾದ ಅಂಶಗಳಿಗೆ ಮಾಡಬೇಕಾದ ಶೇಕಡಾವಾರು ವೆಚ್ಚ.

ಊ. ಪ್ರತಿ ವರ್ಷ, ಕಳೆದುಹೋದ ಬಾಬತ್ತಿಗಾಗಿ, ತೊಡೆದುಹಾಕಬೇಕಾದ ಶೇಕಡಾವಾರು ಪುಸ್ತಕಗಳ ಮೊತ್ತ.

ಋ. ಶಾಲಾ ಪುಸ್ತಕ ಭಂಡಾರಕ್ಕೆ ಅಗತ್ಯವಾದ ಜಾಗ ;

ೠ. ಗ್ರಂಥಪಾಲಕರ ಕೆಲಸದ ವೇಳೆ ;

೫. ಗ್ರಂಥಾಲಯ ತರಬೇತಿ ಶಿಕ್ಷಣದ ಸಂಬಂಧದಲ್ಲಿ ಇಲಾಖೆಗೆ ಸಲಹೆ ಮಾಡುವುದು ;

೬. ಪೂರ್ಣ ಕಾಲಾವಧಿಯ ಹಾಗೂ ಅಪೂರ್ಣ ಕಾಲಾವಧಿಯ ಗ್ರಂಥಪಾಲಕರಿಗೆ ಕೊಡಬೇಕಾದ ಭತ್ಯದ ಬಗ್ಗೆ ನಿಗದಿ ಮಾಡುವುದು ;

೭. ಶಾಲಾ ಪುಸ್ತಕ ಭಂಡಾರಗಳನ್ನು ಉಪಾಧ್ಯಾಯರೂ ವಿದ್ಯಾರ್ಥಿಗಳೂ ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ವಿಚಾರದಲ್ಲಿ ಕ್ರಮಗಳನ್ನು ಸೂಚಿಸುವುದು ;

೮. ಪುಸ್ತಕ ಭಂಡಾರಗಳನ್ನು ಸುಧಾರಣೆಗೊಳಿಸುವ ಹಾಗೂ ಅವುಗಳ ಪ್ರಯೋಜನವನ್ನು ಹೆಚ್ಚಿಸುವ ಸಂಬಂಧದಲ್ಲಿ ಸಮ್ಮೇಳನಗಳನ್ನೂ, ವಿಚಾರಗೋಷ್ಠಿಗಳನ್ನೂ, ಕಾರ್ಯಾಗಾರ (ವರ್ಕ್‌ಷಾಪ್)ಗಳನ್ನೂ ವ್ಯವಸ್ಥೆಗೊಳಿಸುವ ಬಗ್ಗೆ ಸಲಹೆ ಮಾಡುವುದು.

೯. ಶಾಲಾ ಶಿಕ್ಷಣದಲ್ಲಿ ಪುಸ್ತಕ ಭಂಡಾರಗಳು ವಹಿಸಬೇಕಾದ ಪಾತ್ರಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಸಂಶೋಧನೆ ನಡೆಸಲು ಪ್ರೋತ್ಸಾಹಿಸುವುದು.

ಪುಸ್ತಕಭಾಗ್ಯ

"ಪುಸ್ತಕದಿ ದೊರೆತರಿವು ಮುಸ್ತಕದಿ ತಳೆದ ಮಣಿ
ಚಿತ್ತದೊಳು ಬೆಳೆದರಿವು ತರು ತಳೆದ ಪುಷ್ಪ"

ದರು ಹಿರಿಯರು. ಪುಸ್ತಕಜ್ಞಾನವು ಬಹಿರಂಗ ಚುರವಾದುದು. ಚಿಂತನಜನ್ಯವಾದ ಜ್ಞಾನವು ಅಂತ ಗ ವ್ಯಾಪ್ತಿಯಾದುದು ಸರಿಯೆ. ಆದರೆ ಚಿಂತನಶೀಲತೆ ಯುವುದು ಪುಸ್ತಕಗಳ ಸಂಪರ್ಕದಿಂದ ತಾನೆ. ಆದುದ ದ ಪುಸ್ತಕಗಳ ಪ್ರಯೋಜನವು ಅಂತರಂಗ ಚೈತನ್ಯದ ಧನೆಗೆ ಮೊದಲ ಮೆಟ್ಟಲು ಎನ್ನಬಹುದು.

ಪುಸ್ತಕಗಳ ಸಾನ್ನಿಧ್ಯವೇ ಕೆಲವರಿಗೆ ಪರಮ ಪಾವನ ದ ದೇವಸನ್ನಿಧಿ. ದೇವಸಾನ್ನಿಧ್ಯದಲ್ಲಿರಬೇಕಾದ ರವ ಭಕ್ತಿ ಪರಮಾರ್ಥದೃಷ್ಟಿ—ಇವುಗಳ ಸಹಾಯ ದ ಅನೇಕ ಓದುಗರು ಪರಮಶ್ರೇಷ್ಠ ವ್ಯಕ್ತಿಗಳಾಗಿ ರಾಜಿಸಿದ್ದಾರೆ.

ಇದು ಕೇವಲ ಸಾನ್ನಿಧ್ಯವಲ್ಲ. ದೇವರನ್ನು ಒಲಿಸಿ ಳ್ಳುವ ರೀತಿಯಲ್ಲಿ ಪುಸ್ತಕಗಳನ್ನು ಒಲಿಸಿಕೊಳ್ಳ ಕು. ಏಕಾಂಗಿಯಾಗಿರುವಾಗ ಕಾಲಹರಣ ಸಾಧನ ದೆ, ಪುಸ್ತಕವು ಮನೋರಂಜನೆಗೂ ಸಹಾಯಕ. ನರ ಮಧ್ಯೆ ವ್ಯವಹಾರದಲ್ಲಿ ಓಡಾಡಬೇಕಾದಾಗ, ಭಾಷಣೆಯಲ್ಲಿ ಸೊಗಸನ್ನು ತರುವುದು ವಾಚನಶೀಲನಿಗೆ ತ್ರ ಸಾಧ್ಯ. ಅತ್ಯಪೂರ್ವವಾದ ವಿನೋದಪರತೆ, ಪ್ರಯೋಗ ಚಾತುರ್ಯ, ವಾಕ್ಯರಚನಾ ಕೌಶಲ್ಯ, ರ್ಷಕವಾದ ವಾಚಾಳಿಯ ಧಾರಾಳವಾದ ಭಾಷಾ ಯೋಗ ಮುಂತಾದ ಸಾಧಾರಣ ಗುಣಗಳಲ್ಲದೆ ಓಡ ಡಿಗಳ ಅಂತರಂಗವನ್ನು ಬೆಳಗುವ ಪ್ರಖರವಾದ ತನವನ್ನೂ ಓದುಗನು ಬೆಳಿಸಿಕೊಳ್ಳಬಹುದು. ುದರಿಂದಲೇ ಪುಸ್ತಕದಿಂದ ದೊರೆತ ಅರಿವೂ ಗ್ರಾಹ್ಯ ವಾದುದು. ಇದನ್ನೇ ಹಿಂದಿನವರು ವಿದ್ಯೆಯೆಂದು ಹೆಸರಿಸಿ ಅದನ್ನು ಜ್ಯೋತಿಗೆ ಹೋಲಿಸಿದ್ದಾರೆ. ಒಂದು ಜ್ಯೋತಿಯಿಂದ ಸಾವಿರ ಜ್ಯೋತಿಯನ್ನು ಬೆಳಗಬಹುದು. ಇತರರು ಕದಿಯಲಾರದ ಐಶ್ವರ್ಯ, ಸಂಸ್ಕೃತಿಯಂತೆ, ಗುಣಶೀಲಗಳಂತೆ ಈ ವಿದ್ಯೆಯೆನ್ನುವುದು ಕೊಟ್ಟಷ್ಟೂ ಹೆಚ್ಚುತ್ತದೆ.

ವಾಚನಶೀಲತೆಗೆ ಏಕಾಂಗಿಯಾಗಿರುವುದು ಅಗತ್ಯ. ಏಕಾಂಗಿಯಾಗಿರುವಾಗ ಬುದ್ಧಿಶಕ್ತಿಯೂ, ಜನಜಂಗುಳಿಯಲ್ಲಿ ಓಡಾಡುವಾಗ ಗುಣಗಳೂ ಅಭಿವೃದ್ಧಿಗೊಳ್ಳುತ್ತವೆಂದು ಕವಿ ಗಯಟೆ ತಿಳಿಸಿದ್ದಾನೆ. ಈ ಏಕಾಂಗಿತನದಲ್ಲಿಯೇ ವಿದ್ವತ್ತು ಅಭಿವೃದ್ಧಿಯಾಗುತ್ತದೆ. ವಿದ್ವತ್ತು, ಏಕಾಂಗಿತನ ಇವೆರಡೂ ಎಂದೂ ಅಗಲದ ಅಣ್ಣ ತಮ್ಮಂದಿರು. ಆದರೆ ಇಂದಿನ ಜನಜಂಗುಳಿಯ ಯುಗದಲ್ಲಿ ಏಕಾಂಗಿತನ ಸಾಧ್ಯವೇ? ಏಕಾಂಗಿತನವೆಂಬುದು ಎಲ್ಲರಿಂದ ದೂರವಿರುವುದೆಂದಲ್ಲ. ಗುಂಪಿನಲ್ಲಿದ್ದರೂ ಏಕಾಕಿಯಾಗಿರುವ ಸತ್ವವೊಂದಿದೆ. ಅದೇ ಏಕಾಂಗಿತನ. ಎಲ್ಲವನ್ನೂ ತನ್ನ ನಿಲುವಿನಲ್ಲಿ ಪರಿಶೀಲಿಸುವ ಶಕ್ತಿಯೇ ಏಕಾಂಗಿತನವನ್ನು ಒದಗಿಸಿ ಕೊಡುತ್ತದೆ. ಧ್ಯಾನಶೀಲರಿಗೆ ಈ ಏಕಾಂಗಿತನ ಬಹುಬೇಗ ಕೈಗೂಡುತ್ತದೆ.

ಧ್ಯಾನವೆನ್ನುವುದು ಪರಮಾತ್ಮ ಧ್ಯಾನವೇ ಅಲ್ಲ. ಯಾವುದೊಂದನ್ನು ಕುರಿತು ಅವಿಚಲಿತರಾಗಿ ಯೋಚಿಸುವುದೇ ಧ್ಯಾನ. ಪ್ರಕೃತಿಯ ಸಾನ್ನಿಧ್ಯದಲ್ಲಿ ಎಷ್ಟು ಸಲ ಜನ ಮಾರುಹೋಗಿ ಮೂಕರಾಗುವುದಿಲ್ಲ. ಕೋಟಿ ನಕ್ಷತ್ರರಂಜಿತವಾದ ಆಕಾಶ, ಅಪಾರವಾದ ಪಾರಾವಾರ, ಅತ್ಯುನ್ನತವಾದ ಪರ್ವತಶೃಂಗ, ತುಂಬು ಹೊಳೆ, ನಿಬಿಡಕಾನನ, ಹಸುರ ಬಯಲು, ಸೂರ್ಯೋದಯ ಸೂರ್ಯಾಸ್ತ, ಚಂದ್ರಕಿರಣ ಮುಂತಾದ ದೈವದತ್ತವಾದ ಅಷ್ಟೈಶ್ವರ್ಯಗಳನ್ನೂ, ನವನಿಧಿಗಳನ್ನೂ ಕಂಡಾಗ ನಮ್ಮನ್ನೇ ಮೀರಿದ ದಿವ್ಯಪರವಶತೆಯುಂಟಾಗುವುದಿಲ್ಲವೆ? ಈ ಪ್ರಕೃತಿ ವೀಕ್ಷಣೆಯೇ ಬಾಲ್ಯದಲ್ಲಿ ಮಾನವನನ್ನು ಚಿಂತನಶೀಲನನ್ನಾಗಿ ಧ್ಯಾನಮಗ್ನನನ್ನಾಗಿ ಮಾಡುವ ಸರ್ವಸಾಮಾನ್ಯ ಸಾಧನ.

My heart leaps up when I behold
A rainbow in the sky

ಎಂದ ಪಾಶ್ಚಾತ್ಯ ಕವಿ. ಈ ಆಶ್ಚರ್ಯಾನುಭವವು ಕೊನೆಯ

ಜಿ. ವೆಂಕಟಸುಬ್ಬಯ್ಯ

ತನಕ ಉಳಿಯಲಿ ಎಂದೂ ಉಳಿಯದಿದ್ದರೆ ತಾನೇ ಅಳಿಯುವಂತಾಗಲಿ ಎಂದೂ ಹಾರೈಸಿದ್ದಾನೆ. ಈ ಆಶ್ಚರ್ಯಾಸ್ವಾದನ ಶಕ್ತಿಯು ಬರುಬರುತ್ತಾ ವ್ಯಕ್ತಿತ್ವದ ಒಂದಂಗವಾಗಿ ಬಿಡುತ್ತದೆ. ಅಂಥವರಿಗೆ ವಾಚನಶೀಲತೆ ಸುಲಭವಾಗಿ ಲಭಿಸಿ ಬಿಡುತ್ತದೆ. ಯಾವುದಾದರೂ ಹೊಸದಾದರೆ ಸಾಕು ಅದನ್ನು ಸವಿನೋಡುವ, ಅದರ ಸತ್ವಪರಿಶೀಲನೆ ಮಾಡುವ ಆಸಕ್ತಿ ಎಂದೂ ಎಚ್ಚರವಾಗಿರುತ್ತದೆ. ಇಂಥವರೇ ನಿಜವಾದ ಓದುಗರು.

ನಮ್ಮಲ್ಲಿ ಮಧ್ಯವಯಸ್ಸಾದ ಮೇಲೆ ರಾಜರೂ ಕೂಡ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸುತ್ತಿದ್ದುದು ಈ ಕಾರಣಕ್ಕಾಗಿಯೇ ಎಂದು ಕಾಣುತ್ತದೆ. ಏಕಾಂಗಿತನ ಚಿಂತನಶೀಲತೆ ಎರಡೂ ಅಲ್ಲಿ ಸಾಧ್ಯವಾಗುತ್ತದೆಂದೇ ಇರಬಹುದು. ಅಂಥವರ ಚಿಂತನೆಯ ಫಲವಾಗಿ ನಮಗೆ ಎಂಥ ವೈಭವೋಪೇತವಾದ ಆರ್ಷದರ್ಶನ ಲಭ್ಯವಾಗಿದೆ !

' ಹೊತ್ತು ಹೋಗುವುದೆನಗೆ ಸತ್ತವರ ಸಂಗದಲಿ ' ಎಂಬ ಕವಿ ನಿಜವಾಗಿ ಧನ್ಯ. ಈ ಸತ್ತವರು ಅವನಿಗೆ ಎದುರಾಗಿ ಜೀವಂತರಾಗಿ ನಿಲ್ಲುತ್ತಾರೆ. ಅವರೊಡನೆ ಓದುಗ ಚರ್ಚೆ ಮಾಡುತ್ತಾನೆ. ತನ್ನ ಸ್ವಂತ ಜೀವನದಲ್ಲಿ ಬಂದ ಆನಂದಾದಿಗಳನ್ನು ಅವರೊಡನೆ ಹಂಚಿಕೊಳ್ಳುತ್ತಾನೆ; ದುಃಖವನ್ನು ಸಮಾಧಾನಪಡಿಸಿಕೊಳ್ಳುವುದನ್ನು ಅವರ ಉಪದೇಶದಿಂದ ಕಲಿಯುತ್ತಾನೆ. ತಾನೂ ಸತ್ತು ಬದುಕಿರುವ ಲೇಖಕರಂತೆ ತನ್ನದೂ ಒಂದು ಕಾಣಿಕೆಯನ್ನು ಬಿಟ್ಟುಹೋಗಲು ಹವಣಿಸುತ್ತಾನೆ.

ಇಂಥ ಅಭ್ಯಾಸಕ್ಕೆ ಯಾವಾಗಲೂ ವಿರಾಮವಿರಬೇಕೆಂದಿಲ್ಲ. ಕಬೀರನು ನೇಯುವಾಗಲೇ ತನ್ನ ದೋಹಗಳನ್ನು ರಚಿಸುತ್ತಿದ್ದ. ಪುರಂದರದಾಸರು ಭಿಕ್ಷೆ ಬೇಡು ವಾಗಲೇ ಪದಗಳನ್ನು ರಚಿಸುತ್ತಿದ್ದರು. ಜರ್ಮನಿಯ Boehme ಎಂಬ ಚಮ್ಮಾರನು ತನ್ನ ಕೆಲಸದಲ್ಲಿ ನಿರತ ನಾಗಿದ್ದಾಗಲೇ ಎಷ್ಟೋ ಕೃತಿರಚನೆ ಮಾಡಿದ್ದಾನೆ. ಆದುದರಿಂದ ವಿರಾಮವೆನ್ನುವುದು ಕೆಲಸವಿಲ್ಲದಿರು ವುದೆಂದಲ್ಲ. ಬೇರೆ ಕೆಲಸ ಮಾಡಲು ಮನಸ್ಸಿರುವುದು ಎಂದರ್ಥ. ಇಂಥವರ ಚಿಂತನೆ ಇಂದಿನವರಿಗೆ ವಚನ ಯೋಗ್ಯವಾಗಿರುವುದು, ಅವರ ಅಂತರಂಗ ಮಥನದ ದೆಸೆಯಿಂದ.

ಉದ್ಯಾನವನದಲ್ಲಿ ಕಾಡುಕಾಡಾಗಿ ಬೆಳೆದ ಮರಗಿಡ ಬಳ್ಳಿಗಳನ್ನು ಯಾವುದೋ ಒಂದು ಆಕಾರಕ್ಕೆ ಕತ್ತರಿಸುವು ದಿಲ್ಲವೇ? ಹಾಗೆಯೇ ಸ್ವಾಭಾವಿಕ ಶಕ್ತಿಯೊಂದು ಮಾನವ ನಿಗಿರುವಾಗ ಅದನ್ನು ಹತೋಟಿಗೆ ತಂದು ರಮ್ಯವೂ ಪ್ರಯೋಜಕವೂ ಆಲಂಕಾರಿಕವೂ ಆಗಿಸುವುದು ಓದಿನ ಕೆಲಸ ; ಪುಸ್ತಕಗಳಿಗಿರುವ ಭಾಗ್ಯದ ಕೆಲಸ.

ದೇಹಶಕ್ತಿಯನ್ನು ಎಲ್ಲ ಅಂಗಗಳಲ್ಲಿಯೂ ಪ್ರವಹಿಸು ವಂತೆ ಮಾಡಲು ನಾವು ವ್ಯಾಯಾಮ ಮಾಡುವಂತೆಯೇ ಈ ಓದು ಬುದ್ಧಿಶಕ್ತಿಯ ಎಲ್ಲ ಅಂಗಗಳನ್ನೂ ಪರಸ್ಪರ ಸುಸಂಬದ್ಧಗಳನ್ನಾಗಿ ಮಾಡುತ್ತದೆ. ಪುಸ್ತಕವಾಚನದಿಂದ ಮನಸ್ಸಿನ ಎಲ್ಲ ಕೊರತೆಗಳನ್ನೂ ಸರಿಪಡಿಸುವುದು ಸಾಧ್ಯ.

ಆದರೆ ಜನ ಓದಬೇಕಲ್ಲ ! ನಮ್ಮ ಕೈಲಾಗದ್ದನ್ನು ನಾವು ನಮ್ಮ ಹಣೆಯಲ್ಲಿ ಬರೆಯಲಿಲ್ಲ ಎಂದುಬಿಡು ತ್ತೇವೆ. ಆದರೆ ಪುಸ್ತಕ ಭಾಗ್ಯವನ್ನು ಮತ್ತೊಬ್ಬರು ತಮ್ಮ ಹಣೆಯಲ್ಲಿ ಬರೆದು ಬಿಡಬೇಕೆನ್ನುವುದು ತಪ್ಪು.

ಅಕ್ಷರವೆ ತಂದೆತಾಯ್ಗಳು–
ಮಕ್ಷರವೇ ಬಂಧು ಬಳಗ ಸಮಯದ ಧನಮುಂ
ಅಕ್ಷರವಾತ್ಮಕೆ ಹಿತಕರ
ವಕ್ಷರ ಸಗ್ಗಕೆ ಬೀಜ ಚಂದನತಿಲಕಾ.

ಓಲೆಗರಿ ಗ್ರಂಥಗಳು

● ಹಂಪ. ನಾಗರಾಜಯ್ಯ

ಇಂದಿನ ಶಾಲಾಕಾಲೇಜು ವಿಶ್ವವಿದ್ಯಾನಿಲಯಗಳ ಪಾತ್ರ ವನ್ನು ಹಿಂದೆ ಗುರುಮನೆ ಗುರುಮಠಗಳು ನಿರ್ವಹಿಸು ದ್ದುವು. ಪ್ರಾಚೀನ ಕಾಲದಲ್ಲಿ ವಿದ್ಯೆ ಶ್ರವ್ಯರೂಪ ತೆಯುತ್ತಿತ್ತು. ವೇದ ಉಪನಿಷತ್ತು ಆಗಮಗಳೆಲ್ಲ ಠಪಾಠವಾಗುತ್ತಿದ್ದುವು. ಗುರು ಶಿಷ್ಯ ಪರಂಪರೆ ಂದ ಬಾಯಿಂದ ಬಾಯಿಗೆ ಈ ವಿದ್ಯೆ ಹರಿದು ಬರು ತ್ತು. ಅನೇಕ ತಲೆಮಾರುಗಳ ತನಕ ಇದೇ ಕ್ರಮ ತ್ತು. ಬರವಣಿಗೆಯ ವಿಧಾನ ಕಂಡುಕೊಂಡ ಮೇಲೆ ಮ ಶ್ರವ್ಯರೂಪದಿಂದ ದೃಶ್ಯರೂಪಕ್ಕಿಳಿಯಿತು. ಲೇಖಕ ರ ಬೆಳೆಯತೊಡಗಿತು.

ಗುರುಮನೆಗಳು ಆಯಾ ಧರ್ಮದ ಗ್ರಂಥಗಳನ್ನು ದಲು ಕಲಿಸುತ್ತಿದ್ದುದು ನಿಜ. ಆದರ ಜೊತೆಗೆ ವಿಧ ಶಾಸ್ತ್ರಗಳನ್ನೂ ಬೋಧಿಸುತ್ತಿದ್ದರು. ಅರವತ್ತು ಲ್ಕು ಕಲೆಗಳ ವಿಚಾರ ಬರುತ್ತಿತ್ತು. ವ್ಯಾಕರಣ, ಂದಸ್ಸು, ನಿಘಂಟು, ನಿರುಕ್ತ, ಕಾವ್ಯಮೀಮಾಂಸೆ ೊದಲಾದವುಗಳಲ್ಲಿ ಪರಿಣತಗೊಳ್ಳುವಂತೆ ಗುರು 'ಶಿಕ್ಷೆ' ಡುತ್ತಿದ್ದರು.

ಬರವಣಿಗೆ ಬೆಳೆದು ಬಂದ ಇತಿಹಾಸವೂ ದೊಡ್ಡದು. ಬ್ಬಿಣ, ಚಿನ್ನ, ಬೆಳ್ಳಿ, ಹಿತ್ತಾಳೆ, ಕಂಚು, ತಾಮ್ರ ೊದಲಾದ ಲೋಹಗಳಿಂದಾದ ಸಾಧನ (ತಗಡು) ಗಳಲ್ಲಿ ರೆದಿಡುವ ಕ್ರಮವಿತ್ತು. ಮಣ್ಣು, ಮರ, ಚರ್ಮ, ಲ್ಲು, ಎಲೆ, ತಾಳಗರಿ, (ತಾಳಪತ್ರ) ಭೂರ್ಜಪತ್ರ, ಡತ (ಕಡಿತ), ಕಾಗದ ಮುಂತಾದ ಲೋಹೇತರ ಸ್ತುಗಳೂ ಲೇಖನಕ್ಕಾಗಿ ಉಪಯೋಗವಾಗುತ್ತಿದ್ದುವು. ಾಗದದ ಉಪಯೋಗ ತಿಳಿದ ಮೇಲೆ ಅದರ ಬಳಕೆ ಳಿದೆಲ್ಲ ವಸ್ತುಗಳ ಪ್ರಚಾರವನ್ನು ಹಿಂದೆ ಹಾಕಿತು. ನ್ನಡನಾಡಿನಲ್ಲಿ ೧೪ನೆಯ ಶತಮಾನದಿಂದೀಚೆಗೆ ಕಾಗದದ ಳಕೆ ಕಂಡುಬಂದಿದೆ. ಮೊದಲು ಕೈಯಲ್ಲಿ ತಯಾರು ಾಡಿದ ದಪ್ಪವೂ ಒರಟೂ ಆದ ಕೋರಿಕಾಗದ ರೂಢಿ ಲ್ಲಿತ್ತು.

ಬರೆಯುವುದಕ್ಕೆ ಮಸಿಯನ್ನುಪಯೋಗಿಸುವುದು ಂದಿನಿಂದ ಇದೆ. ಇದಕ್ಕೆ ಮಸೀ, ಮಷಿ, ಮಷೀ ಎಂಬ ೂಪಗಳಿವೆ. ಇದನ್ನು ಇಡುವ ಪಾತ್ರೆಗೆ ಮಷೀ ಪಾತ್ರ, ಷೀ ಭಾಂಡ, ಮಷೀ ಕೂಪಿಕಾ—ಎಂಬ ಹೆಸರು ದ್ದುವು. ಕನ್ನಡದಲ್ಲಿ ಮಸಿ ಕುಡಿಕೆ ಎಂಬ ಹೆಸರಿದೆ. ೂರ್ಜ ಪತ್ರ, ತಾಳಪತ್ರಗಳ ಮೇಲೂ ಮಷಿಯಿಂದ ಬರೆಯುತ್ತಿದ್ದರು. ಮಸಿಯಿಂದ ಬರೆಯಲು ಉಪಯೋಗಿ ಸುವ ಸಾಧನೆ ಲೆಕ್ಕಣಿಕೆ. ಹಿಂದೆ ಈ ಲೇಖಣಿ-ಲೆಕ್ಕಣಿಕೆ ಗಳನ್ನು ಲಾಳದ ಕಡ್ಡಿ, ಮುಳ್ಳುಹಂದಿಯ ಗಟ್ಟಿಯಾದ ಮುಳ್ಳು, ಬಿದಿರಿನ ಸೀಳು, ನವಿಲುಗರಿಯ ಕಾಂಡ ಮೊದ ಲಾದವುಗಳಿಂದ ಮಾಡುತ್ತಿದ್ದರು. ಇವುಗಳ ತುದಿಯನ್ನು ಚೂಪಾಗಿಯೂ ಚೆನ್ನಾಗಿಯೂ ಇರುವಂತೆ ಮಸಿಯಲ್ಲಿ ಅದ್ದಿಕೊಂಡು ಬರೆಯಲು ಅನುಕೂಲವಾಗುವಂತೆ ಹೆರೆಯುತ್ತಿದ್ದರು.

ಆದರೆ ಕನ್ನಡ ನಾಡಿನಲ್ಲಿ ಬಹಳ ಹಿಂದಿನಿಂದ ಬಂದಿರುವ ಗ್ರಂಥಗಳೆಲ್ಲ ಓಲೆಗರಿಗಳಾಗಿವೆ. ತಾಳೆಗರಿಗಳೆಂದೇ ಇವುಗಳಿಗೆ ಜನಪ್ರಿಯ ಹೆಸರು. ತಾಳೆಯ ಮರದ ಗರಿ ಗಳಿಂದ ಇವನ್ನು ಮಾಡುತ್ತಿದ್ದರು. ಇದರ ಅಗಲ ನಾಲ್ಕು ಅಂಗುಲಕ್ಕಿಂತ ಹೆಚ್ಚಿಲ್ಲ. ಆದರೆ ಉದ್ದ ನಾಲ್ಕು ಅಡಿಗಳ ವರೆಗೂ ಇರುತ್ತಿತ್ತು. ಇಂಥ ಗರಿಗಳನ್ನು ಹಸಿ ಯಿರುವಾಗಲೇ ಮೊದಲು ಕುದಿನೀರಿನಲ್ಲಿ ಬೇಯಿಸು ತ್ತಿದ್ದರು. ಆಮೇಲೆ ನೆರಳಿನಲ್ಲಿ ಒಣಗಿಸುತ್ತಿದ್ದರು

ತರುವಾಯ ನುಣುಪಾದ ಗಾರೆಯ ಕಲ್ಲಿನಿಂದ ಉಜ್ಜಿ ಮೃದುಗೊಳಿಸುತ್ತಿದ್ದರು. ಇದರಿಂದ ತಾಳೆಗರಿಯ ಎರಡೂ ಕಡೆ ಸಮತಲವಾಗಿ ಬರೆಹಕ್ಕೆ ತಕ್ಕುದಾಗುತ್ತಿತ್ತು.

ಈ ಓಲೆಗರಿಗಳನ್ನು ಇಷ್ಟೆಲ್ಲ ಸಂಸ್ಕಾರವಾದಮೇಲೆ ಬೇಕಾದಳತೆಗೆ ಕತ್ತರಿಸಿಕೊಳ್ಳುತ್ತಿದ್ದರು. ಇವುಗಳ ಮೇಲೆ ಕಂಟದಿಂದ ಬರೆಯುತ್ತಿದ್ದರು. ಕಂಟವೆಂಬುದೊಂದು ಮೊಳೆ. ಅದು ಈಗಿನ ದಬ್ಬಳದಂತೆ ಇರುತ್ತಿತ್ತು. ಅದರ ತುದಿ ಚೂಪು. 'ಕಂಟಮೊನೆ ಬಾಳ್ಮೊನೆಯಾಗಿರೆ' ಎಂದು ಒಬ್ಬ ಕವಿ ಬರೆದಿರುವ ಮಾತು ನೆನಪಾಗುತ್ತದೆ. ಈ ಕಂಟದಿಂದ ಓಲೆಗರಿಯ ಮೇಲೆ ಬರೆಯುವಾಗ ಕರಕರ ಸದ್ದಾಗುತ್ತದೆ. ಅದನ್ನೇ 'ಬಳಸಿ ಬರೆಯಲು ಕಂಟ ಪತ್ರದೊಳುಲುಹುಗೆಡದಗ್ಗಳಿಕೆ' ಎಂದಿರುವುದು.

ಹೀಗೆ ಬರೆದಾದ ಮೇಲೆ ಆ ಅಕ್ಷರಗಳು ಕಾಣುವುದಕ್ಕೆ ಬೇಕಾದ ಪ್ರಯತ್ನವೆಸಗುತ್ತಿದ್ದರು. ದೀಪದ ಕಾಡಿಗೆಯ ಮಸಿಯಿಂದ ಬರೆದಾದ ಓಲೆಯ ಮೇಲೆ ಒರೆಸುತ್ತಿದ್ದರು. ಇಲ್ಲವೇ ಇದ್ದಲಪುಡಿಯ ಕೆಸರನ್ನು ಬಳಿದು ಆಮೇಲೆ ಒರೆಸಿಬಿಡುತ್ತಿದ್ದರು. ಅಕ್ಷರಗಳು ಚೆನ್ನಾಗಿ ಕಾಣುವುದಕ್ಕಾಗಿ ಹೀಗೆ ಮಾಡುತ್ತಿದ್ದರು. ಈ ರೀತಿ ಬರೆದು ಸಿದ್ಧವಾದ ಓಲೆಗಳನ್ನು ಇಂದಿನ ಗ್ರಂಥಗಳಂತೆ ಓದಲು ಅನುಕೂಲವಾಗುವ ಹಾಗೆ ಒಂದು ರೀತಿಯಲ್ಲಿ ಪ್ರತಿಯೋಲೆಗೂ ಕ್ರಮಸಂಖ್ಯೆ ಹಾಕಿ ವ್ಯವಸ್ಥಿತವಾಗಿ ಜೋಡಿಸುತ್ತಿದ್ದರು. ಒಟ್ಟು ಕಟ್ಟಿನ ಓಲೆಗಳನ್ನೆಲ್ಲಾ ಜೋಡಿಸಿದ್ದಾದ ಮೇಲೆ ದಾರ ಪೋಣಿಸಿ ಕಟ್ಟುತ್ತಿದ್ದರು. ಇದಕ್ಕೆ ಅನುಕೂಲವಾಗುವಂತೆ ಮೊದಲೇ ಯೋಚಿಸಿಕೊಂಡು ಓಲೆಯ ನಡುವೆ, ಪಕ್ಕದಲ್ಲಿ ಇಲ್ಲವೇ ಎರಡೂ ಪಕ್ಕಗಳಲ್ಲಿ ರಂಧ್ರಗಳನ್ನು ಮಾಡಲು ಜಾಗ ಬಿಟ್ಟಿರುತ್ತಿದ್ದರು. ಈ ರಂಧ್ರದಲ್ಲಿ ದಾರದ ಹುರಿ ಪೋಣಿಸಿ ಕಟ್ಟನ್ನು ನಿರುಕಾಗಿಸುತ್ತಿದ್ದರು. ಅನಂತರ ಓಲೆಕಟ್ಟಿನ ಎರಡು ಬದಿಗಳಿಗೂ, ಅಂದರೆ ಮೇಲೆ ಮತ್ತು ಕೆಳ ಭಾಗಗಳಿಗೆ ಮರದ ತೆಳು ಹಲಗೆ ಚೂರುಗಳನ್ನು ಅದೇ ಅಳತೆಗೆ ಸರಿಯಾಗಿಟ್ಟು ಬೇರೆ ದಾರದಿಂದ ಕಟ್ಟಿಡುತ್ತಿದ್ದರು. ಇದು ಈಗಿನ ಮುದ್ರಿತ ಗ್ರಂಥಗಳಿಗೆ ದಪ್ಪನೆ ರಟ್ಟು ಹೊದಿಕೆ ಹಾಕಿದಂತಿರುತ್ತಿತ್ತು.

ಈ ಬಗೆಯ ಓಲೆಗ್ರಂಥ (ಓಲೆಕಟ್ಟು) ಗಳನ್ನು ಬಹಳ ಮುದ್ದಾಗಿ ದುಂಡಾಗಿ ಅಲಂಕಾರಮಯವಾಗಿ ಬರೆಯುವ ಲಿಪಿಕಾರರ ತಂಡವೇ ನಾಡಿನಾದ್ಯಂತ ಇತ್ತು. ಉಕ್ಕಿನ ಇಲ್ಲವೇ ಕಬ್ಬಿಣದ ಕಂಟದಿಂದ ಎಚ್ಚರ ವಹಿಸಿ ಕವಿಗಳ ಶಾಸ್ತ್ರಕಾರರ ಕೃತಿಗಳನ್ನು ಈ ಲಿಪಿಕಾರರು ಸಿದ್ಧಪಡಿಸಿ ಕೊಡುತ್ತಿದ್ದರು. ದಾನ ಚಿಂತಾಮಣಿ, ಅತ್ತಿಮಬ್ಬೆ, ಪೊನ್ನಕವಿಯ ಶಾಂತಿಪುರಾಣದ ಸಾವಿರ ಪ್ರತಿಗಳನ್ನು ಲಿಪಿಕಾರರಿಂದ ಬರೆಸಿದ ಸಂಗತಿ ನೆನಪಾಗುತ್ತದೆ. ಹೀಗೆ ಬರೆಯುವುದು ಸುಲಭವಲ್ಲ. ಶ್ರಮಸಾಧ್ಯವಾದ ತಾಳ್ಮೆ ಶ್ರದ್ಧೆಗಳ ಕೆಲಸವದು. ಕೆಲವರು ಓಲೆಗಳಲ್ಲಿ ನಡುವೆ ಚಿತ್ರಗಳನ್ನೂ ಬಿಡಿಸುತ್ತಿದ್ದರು, ಇಂದಿನ ಗ್ರಂಥಗಳಲ್ಲಿ ಚಿತ್ರಗಳಿದ್ದಂತೆ. ಅಭಯಚಂದ್ರ ಸೈದ್ಧಾಂತಿಕ ದೇವ, ಮಲ್ಲರಸ, ಅಕ್ಕನೂರ ಸಿಂಗಪ ಮೊದಲಾದ ನೂರಾರು ಜನ ಲಿಪಿಕಾರರ ಹೆಸರುಗಳು ಗೊತ್ತಾಗಿವೆ. ಅರಮನೆ ಗುರುಮನೆಗಳಲ್ಲಿ ಲಿಪಿಕಾರರಿರುತ್ತಿದ್ದರು. ಕೆಲವು ಲಿಪಿಕಾರರು ಗುರು, ದೈವ, ಶಾಸ್ತ್ರ ಭಕ್ತಿಗಳಿಂದ ಕಾಯಕವೆಸಗುತ್ತಿದ್ದರೇ ವಿನಾ ಕೇವಲ ಸಂಭಾವನೆಗಾಗಿ ಅಲ್ಲ. ಲಿಪಿಕಾರರು ತಾವು ಮುಖಪ್ರತಿಯನ್ನು ಹೇಗೆ ನೋಡಿದರೆ ಹಾಗೇ ಲಿಖಿಸುತ್ತಿದ್ದರು. ಕುಳಿತೂ ಕುಳಿತೂ ಬರೆದೂ ಬರೆದೂ ಅವರ ನಿತಂಬ ಕಟಿ ಕೊರಳು ಬೆರಳುಗಳು ಪದ ಹೇಳುವಂತಾಗುತ್ತಿದ್ದುವಲ್ಲದೆ ಬದ್ಧ ದೃಷ್ಟಿಯಿಂದ ಕಣ್ಣುಗಳು ನೋಯುತ್ತಿದ್ದುವು. ಹೀಗೆ ಕಷ್ಟದಿಂದ ಬರೆದ ಕೃತಿಯನ್ನು ಚೆನ್ನಾಗಿ ಪರಿಪಾಲಿಸುವಂತೆ ಪ್ರಾರ್ಥಿಸಿದ್ದಾರೆ. "ಕಡು ಜಡಮತಿಯಾದ ಲಿಪಿಕಾರ ತಪ್ಪು ಬರೆದಿದ್ದಾನೆಂದು ಬಯ್ಯಬೇಡಿ, ತಪ್ಪಿದ್ದರೆ ತಿದ್ದಿಕೊಳ್ಳಿ; ಕವಿ ಬರೆಹಕ್ಕೂಣೆಯವೆಂದ ನಿಂದಿಸಬೇಡಿ; ತುಪ್ಪ ತುಂಬಿದ ಪಾತ್ರೆಗೆ ಕಪ್ಪಿದ್ದರೆ ತೆಗೆದು ತುಪ್ಪವನ್ನುಣ್ಣುವಂತೆ ತಪ್ಪೆಂಬ ಕಪ್ಪನ್ನ ಬಿಟ್ಟು ಕಾವ್ಯವನ್ನು ಆಸ್ವಾದಿಸಿ" ಎಂದು ಲಿಪಿಕಾರರು ಕೋರಿದ್ದಾರೆ. ಆಲಸ್ಯ ತಪ್ಪುನೋಟ ಮರಹು ಮೊದಲಾದ ಮಾನವ ಸ್ವಭಾವಜನ್ಯ ದೋಷಗಳು ಕ್ಷಮ್ಯ. ಹಳಗನ್ನಡ ಸಾಹಿತ್ಯ ಈಗ ಇರುವಷ್ಟಾದರೂ ಉಳಿದು ಬಂದಿರುವುದಕ್ಕೆ ಈ ಲಿಪಿಕಾರರು ಕಾರಣರು. ಅಲ್ಲದೆ ಜೈನ, ವೀರಶೈವ ಮಠಗಳವರೂ ಗುರುಮನೆಗಳವರೂ ಈ ಓಲೆಗ್ರಂಥಗಳನ್ನು ಬಹಳ ಕಾಲದಿಂದ ಕಾಪಾಡಿಕೊಂಡು ಬಂದಿದ್ದಾರೆ. ಹುಂಚ, ಶ್ರವಣಬೆಳಗೊಳ, ಮೂಡಬಿದರೆ ಮೊದಲಾದ ಕಡೆಗಳ ಜೈನ ಗುರುಮನೆಗಳು ಸಾವಿರಾರು ವರ್ಷಗಳಿಂದ ಓಲೆಗರಿಗಳನ್ನು ರಕ್ಷಿಸಿದ್ದಾರೆ.

ಸಾಹಿತ್ಯ ಪ್ರಸಾರ ಯೋಜನೆ

ವಿಚಾರಗೋಷ್ಠಿಗಳು

ಜುಲೈ ೧೫, ೧೬, ೧೭—೧೯೭೨

ಪ್ರಸ್ತಾವನೆ

ಕನ್ನಡ ಸಾಹಿತ್ಯ ಪರಿಷತ್ತಿನ 'ಸಾಹಿತ್ಯ ಪ್ರಸಾರ ಯೋಜನೆ'ಯ ಅಂಗವಾಗಿ, ಸಾಹಿತ್ಯ ಕ್ಷೇತ್ರದ ಪ್ರಸಾರವರ್ಧನೆಗೆ ಪೂರಕವಾದ ವಿಚಾರಗೋಷ್ಠಿಗಳನ್ನು ನಡೆಸಲಾಯಿತು. ವಿಚಾರಮಂಥನದಿಂದಾಗಿ ಹೊರಹೊಮ್ಮಿದ ಅಭಿಪ್ರಾಯಗಳನ್ನು ಕನ್ನಡ ಜನತೆಯ ಮುಂದಿರಿಸಬೇಕೆಂಬ ಅಪೇಕ್ಷೆಯಿಂದ ಗೋಷ್ಠಿಗಳನ್ನು ವ್ಯವಸ್ಥೆಗೊಳಿಸಲಾಗಿತ್ತು. ಈ ಗೋಷ್ಠಿಗಳಲ್ಲಿ ಭಾಗವಹಿಸಿದ ಮಹನೀಯರನೇಕರು, ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಪ್ರಬಂಧರೂಪದಲ್ಲಿ, ಸಂಗ್ರಹಿಸಿ, ಈ ಮುಂದೆ ಕೊಡಲಾಗಿದೆ.

೧೯೭೨ರ ಜುಲೈ ೧೫, ೧೬, ಮತ್ತು ೧೭ರಂದು ನಡೆದ ಕಾರ್ಯಕ್ರಮ ಈ ರೀತಿ ಇದೆ. ೧೫ರಂದು ಬೆಳಗ್ಗೆ ಕರ್ನಾಟಕ ರಾಜ್ಯದ ಶಿಕ್ಷಣ ಸಚಿವ ಶ್ರೀ ಎ. ಆರ್. ಬದರೀನಾರಾಯಣ್ ಅವರ ಅಧ್ಯಕ್ಷತೆಯಲ್ಲಿ, ಗೋಷ್ಠಿ ಕಾರ್ಯಕ್ರಮಗಳನ್ನು ಯುವಜನ ಕಲ್ಯಾಣ ರಾಜ್ಯಸಚಿವ ಶ್ರೀ ವಿ. ಎಸ್. ಕೌಜಲಗಿಯವರು ಉದ್ಘಾಟಿಸಿದರು. ಅಂದು ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರು ಸ್ವಾಗತ ಭಾಷಣ ಮಾಡಿದರು. ಅದೇ ದಿನ ಮಧ್ಯಾಹ್ನ ಶ್ರೀ ಕೂಡಲಿ ಚಿದಂಬರಂ ಅವರ ಅಧ್ಯಕ್ಷತೆಯಲ್ಲಿ, "ಗ್ರಂಥ ಪ್ರಕಾಶನದ ಮತ್ತು ಮಾರಾಟದ ಸಮಸ್ಯೆಗಳು" ಎಂಬ ವಿಚಾರಗೋಷ್ಠಿ ನಡೆಯಿತು. ಶ್ರೀಗಳಾದ ಮಿರ್ಜಿ ಅಣ್ಣಾರಾವ್, ಎಂ. ಎಸ್. ಚಿಂತಾಮಣಿ, ಎಚ್. ಎಂ. ಶಂಕರನಾರಾಯಣರಾವ್, ಹೆಚ್. ಎಸ್. ದೊರೆಸ್ವಾಮಿ, ಮ. ಗೋವಿಂದರಾವ್–ಇವರುಗಳು ಭಾಗವಹಿಸಿದ್ದರು. ಶ್ರೀ ಜೀರಿಗೆ ಕಟ್ಟಿ ಬಸವಪ್ಪನವರು ಅತಿಥಿಗಳನ್ನು ಪರಿಚಯ ಮಾಡಿಕೊಟ್ಟರು. ಶ್ರೀ ಆದ್ಯ ರಂಗಾಚಾರ್ಯರ ಅಧ್ಯಕ್ಷತೆಯಲ್ಲಿ "ಗ್ರಂಥಪ್ರಕಾಶನಕ್ಕೆ ಸರ್ಕಾರ ಮತ್ತು ಇತರ ಸಂಸ್ಥೆಗಳ ನೆರವು" ಎಂಬ ವಿಚಾರದ ಗೋಷ್ಠಿ ನಡೆಯಿತು. ಶ್ರೀಗಳಾದ ಟಿ. ವಿ. ತಿಮ್ಮೇಗೌಡ, ಎನ್. ಎಸ್. ಅನಂತರಂಗಾಚಾರ್ ಮತ್ತು ತಿ. ತಾ. ಶರ್ಮ–ಇವರುಗಳು ಭಾಗವಹಿಸಿದ್ದರು.

ಮರುದಿನ ಅಂದರೆ ಜುಲೈ ೧೬ರಂದು ಶ್ರೀ ಕೆ. ಎಸ್. ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ನಡೆದ "ಜನತೆಯಲ್ಲಿ ವಾಚನಾಭಿರುಚಿಯನ್ನು ಬೆಳೆಸುವ ಕ್ರಮಗಳು" ಎಂಬ ವಿಷಯದ ವಿಚಾರಗೋಷ್ಠಿಯಲ್ಲಿ ಶ್ರೀಗಳಾದ ಅನಂತ ಪದ್ಮನಾಭರಾವ್, ಎಂ. ಚಿದಾನಂದಮೂರ್ತಿ, ಎಚ್. ಎಲ್. ನಾಗೇಗೌಡ ಮತ್ತು ಕೆ. ಎಸ್. ಮುನಿಸ್ವಾಮಿ ಅವರು ಭಾಗವಹಿಸಿದ್ದರು. ಅದೇ ದಿನ ಮಧ್ಯಾಹ್ನ ಶ್ರೀ ಕೆ. ಚೆಂದಯ್ಯನವರ ಅಧ್ಯಕ್ಷತೆಯಲ್ಲಿ "ಸಹಕಾರಿ ಸಂಸ್ಥೆಗಳ ಮೂಲಕ ಪ್ರಕಾಶನ" ಎಂಬ ವಿಚಾರವಾಗಿ ಗೋಷ್ಠಿ ನಡೆಯಿತು. ಶ್ರೀಗಳಾದ ಕೆ. ವಿ. ಸುಬ್ಬಣ್ಣ, ಕೃ. ನ. ಮೂರ್ತಿ ಮಾತನಾಡಿದರು. "ಮನೆಗೊಂದು ಪುಸ್ತಕ ಭಂಡಾರ" ಎಂಬ ವಿಚಾರವಾಗಿ, ಶ್ರೀ ಎ. ಸಿ. ದೇವೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆದ ಗೋಷ್ಠಿಯಲ್ಲಿ ಶ್ರೀಗಳಾದ ರಂ. ಶ್ರೀ. ಮುಗಳಿ, ಶಿ.ರಾ. ಗುಂಜಾಳ, ಮತ್ತು ಪಿ.ಎನ್. ಜವರಪ್ಪ ಗೌಡ ಅವರುಗಳು ಭಾಗವಹಿಸಿದ್ದರು.

ಜುಲೈ ೧೭ರ ಬೆಳಗ್ಗೆ "ಗ್ರಂಥಪ್ರಕಾಶನ ಮತ್ತು ಮಾರಾಟದ ವ್ಯವಸ್ಥೆ" ಎಂಬ ವಿಚಾರವಾಗಿ, ಶ್ರೀ ಕು. ಶಿ. ಹರಿದಾಸಭಟ್ಟರ ಅಧ್ಯಕ್ಷತೆಯಲ್ಲಿ ನಡೆದ ಗೋಷ್ಠಿಯಲ್ಲಿ ಶ್ರೀಗಳಾದ ಪ್ರಭುಶಂಕರ್ ಮತ್ತು ಎಂ. ಎಚ್. ಕೌಜಲಗಿಯವರು ಭಾಗವಹಿಸಿದ್ದರು. ಅದೇ ದಿನ ಮಧ್ಯಾಹ್ನ, ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ಮುಕ್ತಾಯ ಸಮಾರಂಭ ನಡೆಯಿತು. ಮುಕ್ತಾಯ ಭಾಷಣ ಮಾಡಿದ ಹಿರಿಯ ಸಂಶೋಧಕ–ಪತ್ರಿಕೋದ್ಯಮಿ ಶ್ರೀ ತಿ. ತಾ. ಶರ್ಮ ಅವರು "ಈ ವಿಚಾರಗೋಷ್ಠಿಗಳು ನಮ್ಮ ಸಂಕಲ್ಪ ಸಿದ್ಧಿಗೆ ಸಾಧನಗಳು" ಎಂದು ನುಡಿದರು. ಪ್ರಸಿದ್ಧ ಸಾಹಿತಿ ಶ್ರೀ ಬೀಚಿಯವರೂ ನಿಷ್ಠಾವಂತ ಕನ್ನಡ ಕಾರ್ಯಕರ್ತ ಶ್ರೀ ಚೆನ್ನಪ್ಪನವರೂ ಮಾತನಾಡಿದರು. ಸಾಹಿತ್ಯ ಪ್ರಸಾರ ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸಲು, ಶ್ರೀ ನಾರಾಯಣ ಅವರು ಕನ್ನಡಿಗರೆಲ್ಲರ ಸಹಕಾರಕ್ಕಾಗಿ ಪ್ರಾರ್ಥಿಸಿದರು.

—ಸಂಪಾದಕ

ವಿಚಾರಗೋಷ್ಠಿಗಳ ಉದ್ಘಾಟನಾ ಸಮಾರಂಭ



ಂದ ಎಡಕ್ಕೆ : ಉದ್ಘಾಟನೆ ಮಾಡುತ್ತಿರುವ ರಾಜ್ಯ ಸಚಿವ ಶ್ರೀ ವಿ. ಎಸ್. ಕೌಜಲಗಿ, ಅಧ್ಯಕ್ಷತೆವಹಿಸಿದ್ದ ಶಿಕ್ಷಣ ಸಚಿವ ಶ್ರೀ ಎ. ಆರ್. ಬದರೀನಾರಾಯಣ್, ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣ.

'ಕನ್ನಡ ಕೃತಿಗಳ ಪರಿಶೀಲನೆಗೆ ಪರಿಣತರ ಸಮಿತಿ ಅಗತ್ಯ'*

—ಎ. ಆರ್. ಬದರೀನಾರಾಯಣ್

ಉತ್ತಮ ಗ್ರಂಥಗಳಿಗೆ ಸಹಾಯ ನೀಡಲು ಸೂಕ್ತ ದ ಒಂದು ವ್ಯವಸ್ಥೆಯಾಗಬೇಕಾಗಿದೆ. ಕನ್ನಡ ಕೃತಿ ನ್ನು ಉತ್ತಮ ರೀತಿಯಲ್ಲಿ ವಿಮರ್ಶಿಸುವ ತಜ್ಞರ ತಿಯೊಂದನ್ನು ರಚಿಸುವುದು ಅವಶ್ಯಕವೆಂದು ಸುತ್ತೇನೆ. ಇಲ್ಲದಿದ್ದರೆ, ಯಾವ ಗ್ರಂಥಗಳಿಗೆ ನೆರವು ಬೇಕೆಂಬ ಬಗ್ಗೆ ನಿರ್ಧಾರ ಕೈಗೊಳ್ಳಲು ಸರಕಾರಕ್ಕೆ ವಾಗುತ್ತದೆ. ಆದ್ದರಿಂದ ಸರಕಾರಕ್ಕೆ ಸಲಹೆ ಡುವುದಕ್ಕಾಗಿ ಪರಿಣತರ ಸಮಿತಿಯೊಂದನ್ನು ಬೇಕಾದುದು ಅಗತ್ಯ.

ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಪ್ರಸಾರ ೕಜನೆಯು ಸ್ತುತ್ಯಾರ್ಹವಾದ ಕಾರ್ಯಕ್ರಮವಾಗಿದೆ. ತ್ಯದ ಸಂವರ್ಧನೆಗೆ, ಜನತೆಯಲ್ಲಿ ವಾಚನಾಭಿರುಚಿ ನ್ನು ಬೆಳೆಸುವುದಕ್ಕೆ ಇಂತಹ ಕಾರ್ಯಕ್ರಮ ಅಗತ್ಯ.

ಕನ್ನಡದ ಜನ ಕನ್ನಡದ ಗ್ರಂಥಗಳನ್ನು ಕೊಂಡು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ಪ್ರತಿಯೊಬ್ಬರೂ ತಮ್ಮ ಆದಾಯದ ಸ್ವಲ್ಪ ಭಾಗವನ್ನು ಮೀಸಲಾಗಿರಿಸಬೇಕು.

ಸಾಹಿತ್ಯ ಪರಿಷತ್ತಿನ ಎಲ್ಲ ಕಾರ್ಯ ಯೋಜನೆಗಳೂ ಸರಕಾರದ ಮೆಚ್ಚುಗೆ ಪಡೆದಿವೆಯೆಂಬುದು ಸಂತೋಷದ ಸಂಗತಿ. ಸಾಹಿತ್ಯ ಪ್ರಸಾರಕ್ಕೆ ಅಗತ್ಯವಾದ ಸಾಧ್ಯವಾದ ಎಲ್ಲ ನೆರವನ್ನು ನೀಡಲು ಸರಕಾರ ಹಿಂಜರಿಯುವುದಿಲ್ಲ ಎಂಬ ನಂಬಿಕೆ ನನಗಿದೆ. ಪರಿಷತ್ತಿನ ನಿರ್ಧಾರಗಳನ್ನು ಸರಕಾರದ ಮುಂದಿಟ್ಟರೆ, ಆ ಬಗ್ಗೆ ಪರಿಶೀಲಿಸಿ, ಸಾಧ್ಯವಾದ ಎಲ್ಲ ನೆರವು ನೀಡಲು ಅನುಕೂಲವಾಗುತ್ತದೆ.

---

* ವಿಚಾರ ಗೋಷ್ಠಿಗಳ ಉದ್ಘಾಟನಾ ಸಮಾರಂಭದಲ್ಲಿ ಮಾಡಿದ ಅಧ್ಯಕ್ಷ ಭಾಷಣದ ಸಾರಾಂಶ.

"ಗ್ರಂಥಪ್ರಕಾಶನ ಮತ್ತು ಮಾರಾಟದ ಸಮಸ್ಯೆ"ಗಳ ಗೋಷ್ಠಿ




ಎಡದಿಂದ ಬಲಕ್ಕೆ: ಶ್ರೀಗಳಾದ ಮಿರ್ಜಿ ಅಣ್ಣಾರಾವ್, ಎಂ. ಎಸ್. ಚಿಂತಾಮಣಿ, ಕೂಡಲಿ ಚಿದಂಬರಂ (ಅಧ್ಯಕ್ಷರು), ಹೆಚ್. ದೊರೆಸ್ವಾಮಿ, ಎಚ್. ಎಂ. ಶಂಕರನಾರಾಯಣರಾವ್, ಜಿ. ನಾರಾಯಣ.

"ಗ್ರಂಥಪ್ರಕಾಶನಕ್ಕೆ ಸರ್ಕಾರ ಮತ್ತು ಸಂಸ್ಥೆಗಳ ನೆರವು"–ಗೋಷ್ಠಿ



ಎಡದಿಂದ ಬಲಕ್ಕೆ: ಶ್ರೀಗಳಾದ ಟಿ. ವಿ. ತಿಮ್ಮೇಗೌಡ, ಆದ್ಯ ರಂಗಾಚಾರ್ (ಅಧ್ಯಕ್ಷರು), ತಿ. ತಾ. ಶರ್ಮ, ಎನ್. ಎಸ್. ಅನಂತರಂಗಾಚಾರ್.

" ಜನತೆಯಲ್ಲಿ ವಾಚನಾಭಿರುಚಿಯನ್ನು ಬೆಳೆಸುವ ಕ್ರಮಗಳು "–ಗೋಷ್ಠಿ




ದ ಬಲಕ್ಕೆ : ಶ್ರೀಗಳಾದ ಅನಂತಪದ್ಮನಾಭರಾವ್, ಎಂ. ಚಿದಾನಂದ ಮೂರ್ತಿ, ಕೆ. ಎಸ್. ದೇಶಪಾಂಡೆ (ಅಧ್ಯಕ್ಷರು)
ಎಚ್. ಎಲ್. ನಾಗೇಗೌಡ, ಶ್ರೀಮತಿ ರತ್ನಾ ಸ್ವಾಮಿರಾವ್.

" ಸಹಕಾರಿ ಸಂಸ್ಥೆಗಳ ಮೂಲಕ ಪ್ರಕಾಶನ "–ಗೋಷ್ಠಿ



ಎಡದಿಂದ ಬಲಕ್ಕೆ : ಶ್ರೀಗಳಾದ ಕೃ. ನ. ಮೂರ್ತಿ, ಕೆ. ವಿ. ಸುಬ್ಬಣ್ಣ, ಕೆ. ಚಿಂದಯ್ಯ (ಅಧ್ಯಕ್ಷರು),
ಜಿ. ನಾರಾಯಣ, ಹಿಂದುಗಡೆ ಕುಳಿತಿರುವವರು ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಸಾಂಗಲಿ.

" ಮನೆಗೊಂದು ಪುಸ್ತಕ ಭಂಡಾರ " ಗೋಷ್ಠಿ



ಎಡದಿಂದ ಬಲಕ್ಕೆ : ಶ್ರೀಗಳಾದ ರಂ. ಶ್ರೀ ಮುಗಳಿ, ಪಿ. ಎನ್. ಜವರಪ್ಪ ಗೌಡ, ಎ. ಸಿ. ದೇವೇಗೌಡ (ಅಧ್ಯಕ್ಷರು) ಶಿ. ರಾ. ಗುಂಜಾಳ, ಜಿ. ನಾರಾಯಣ.

" ಗ್ರಂಥಪ್ರಕಾಶನದ ಮತ್ತು ಮಾರಾಟದ ವ್ಯವಸ್ಥೆ"ಯ ಗೋಷ್ಠಿ



ಎಡದಿಂದ ಬಲಕ್ಕೆ : ಶ್ರೀಗಳಾದ ವೆಂಕಟೇಶ ಸಾಂಗಲಿ, ಎಂ. ಎಚ್. ಕೌಜಲಗಿ, ಕು. ಶಿ. ಹರಿದಾಸ ಭಟ್ಟ (ಅಧ್ಯಕ್ಷರು) ಪ್ರಭುಶಂಕರ್, ಜಿ. ನಾರಾಯಣ.

ಚಾರಗೋಷ್ಠಿಗಳ ಮಹತ್ವ*

ಜಿ. ನಾರಾಯಣ

ಕನ್ನಡ ಸಾಹಿತ್ಯಪರಿಷತ್ತಿನ ತ್ರೈವಾರ್ಷಿಕಯೋಜನೆಯ ಪ್ರಕಾರ ೧೯೭೦ರಲ್ಲಿ ಪ್ರಾರಂಭವಾದ ವಿವಿಧ ಕಾರ್ಯ ಳು ಈ ವೇಳೆಗೆ ಸಾಕಷ್ಟು ಪ್ರಗತಿಯನ್ನು ಸಾಧಿಸಿವೆ. ೋಜನೆಯ ಪ್ರಕಾರ ಕನ್ನಡಿಗರಲ್ಲಿ ವಾಚನಾಭಿರುಚಿ ುನ್ನು ಹುಟ್ಟಿಸಲು ಈ ವರ್ಷ ನಾವು ಸಾಹಿತ್ಯ ಪ್ರಸಾ ಕ್ಕೆ ಹೆಚ್ಚು ಗಮನ ಕೊಡಬೇಕಾಗಿದೆ. ಅಲ್ಲದೆ ಈ ವರ್ಷ ನ್ನು ಅಂತರರಾಷ್ಟ್ರೀಯ ಪುಸ್ತಕದ ವರ್ಷವನ್ನಾಗಿ ಚರಿಸಬೇಕೆಂದು "ಯುನೆಸ್ಕೊ" ಘೋಷಿಸಿದೆ. ಪರಿ ತ್ತು ಈ ವರ್ಷವನ್ನು ಸಾಹಿತ್ಯ ಪ್ರಸಾರಕ್ಕೆ ಮೀಸ ಗಿಡಲು ಮತ್ತೊಂದು ಕಾರಣವೂ ಇದೆ. ೭೨ನೇ ಆಗಸ್ಟ್ ೧೫ಕ್ಕೆ ಭಾರತಕ್ಕೆ ಸ್ವಾತಂತ್ರ್ಯ ದು ೨೫ ವರ್ಷಗಳಾಗುತ್ತವೆ. ಈ ವರ್ಷ ನಾವು ತಂತ್ರ್ಯದ ಬೆಳ್ಳಿಯಹಬ್ಬವನ್ನು ಆಚರಿಸುತ್ತೇವೆ. ಎಲ್ಲ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ೭೨ನೇ ಆಗಸ್ಟ್ ೧೫ರಿಂದ ೧೯೭೩ನೇ ಆಗಸ್ಟ್ ೧೫ರ ರೆಗೆ ಕನ್ನಡ ಸಾಹಿತ್ಯ ಪ್ರಸಾರದ ಮೂಲಕ ಭಾರತದ ರಜತ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿ ಕನ್ನಡ ಜನತೆಯಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸಿ ಕನ್ನಡದ ಬಗ್ಗೆ ಅವರಲ್ಲಿ ಕರ್ತವ್ಯಪ್ರಜ್ಞೆಯನ್ನು ಬೆಳೆಸಲು ಪರಿಷತ್ತು ಆಶಿಸಿದೆ.

ವಿಚಾರಗೋಷ್ಠಿಗಳು

ಸಾಹಿತ್ಯ ಪ್ರಸಾರ ಯೋಜನೆಯ ಪ್ರಕಾರ ಮೊದಲನೆಯ ಕಾರ್ಯವಾದ ವಿಚಾರಗೋಷ್ಠಿಗಳ ಕಾರ್ಯಕ್ರಮವನ್ನು ಇಂದು (೧೫–೭-೭೨) ನಾವು ಆರಂಭಿಸಿದ್ದೇವೆ. ಅಂದರೆ ಸ್ವಾತಂತ್ರ್ಯದ ರಜತ ಮಹೋತ್ಸವ ಕಾರ್ಯವನ್ನು ಪರಿಷತ್ತು ಒಂದು ತಿಂಗಳ ಮುಂಚಿತವಾಗಿಯೇ ಪ್ರಾರಂಭಮಾಡಿದೆ ಎನ್ನಬಹುದು.

ಸಾಹಿತ್ಯ ಪ್ರಸಾರ ಯೋಜನೆಯ ವಿವರಗಳನ್ನು ಪತ್ರಿಕೆಗಳ ಮೂಲಕ ಎಲ್ಲರೂ ಈಗಾಗಲೆ ಓದಿ ತಿಳಿದಿದ್ದಾರೆಂದು ನಾನು ನಂಬುತ್ತೇನೆ. ಸ್ವಾತಂತ್ರ್ಯಾನಂತರ ವಿವಿಧ ಪ್ರಕಾರಗಳಲ್ಲಿ ಕನ್ನಡ ಸಾಹಿತ್ಯದ ಸಾಧನೆಯನ್ನು ಅವಲೋಕಿಸಿ ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ ಜನತೆಗೆ ನೀಡುವುದು, ಅನಂತರ ಅದನ್ನು ಸಂಗ್ರಹಿಸಿ ಇತರೆ ಭಾಷೆಯವರಿಗೂ ಪರಿಚಯವಾಗುವಂತೆ ಅನುವಾದ ಮಾಡಿಸುವುದು, ಉದಯೋನ್ಮುಖ ಬರಹಗಾರರಿಗೆ ಉತ್ತೇಜನ ನೀಡುವುದು, ವಿಚಾರಗೋಷ್ಠಿಗಳನ್ನು ಏರ್ಪಡಿಸಿ ಲೇಖ

ಪುಸ್ತಕೋದ್ಯಮದ ಸಂಬಂಧದಲ್ಲಿ ಜುಲೈ ೧೫ರಿಂದ ಮೂರು ದಿನಗಳು ನಡೆದ ವಿಚಾರಗೋಷ್ಠಿಗಳ ಉದ್ಘಾಟನಾ ಸಮಾರಂಭದಲ್ಲಿ ಮಾಡಿದ ಸ್ವಾಗತ ಭಾಷಣದ ಸಾರಾಂಶ.

ಕರು, ಪ್ರ ಕಾ ಶ ಕ ರು, ಮುದ್ರಣಕಾರರು, ಪುಸ್ತಕ ಮಾರಾಟಗಾರರು, ಹಾಗೂ ಓದುಗರಿಗಿರುವ ತೊಂದರೆಗಳನ್ನು ಚರ್ಚಿಸಿ ಪರಿಹಾರೋಪಾಯಗಳನ್ನು ಕಂಡುಹಿಡಿಯುವುದು, ಬೆಂಗಳೂರು ನಗರದಲ್ಲಿ ಕನ್ನಡ ಪುಸ್ತಕಗಳ ಖಾಯಂ ಪ್ರದರ್ಶನವೊಂದನ್ನು ಏರ್ಪಡಿಸುವುದು, ಈ ವರ್ಷ, ಬೆಂಗಳೂರು ನಗರ ಮತ್ತು ರಾಜ್ಯದ ೧೯ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಪ್ರಮುಖ ತಾಲ್ಲೂಕು ಕೇಂದ್ರಗಳಲ್ಲಿ ಪುಸ್ತಕ ಮಾರಾಟ ಕಾರ್ಯಕ್ರಮ ಏರ್ಪಡಿಸುವುದು, ಮನೆಗೊಂದು ಪುಸ್ತಕ ಭಂಡಾರ ಯೋಜನೆ ಕಾರ್ಯರೂಪಕ್ಕೆ ತರಲು ಪ್ರಚಾರ ಕೈಗೊಳ್ಳುವುದು, ಪರಿಷತ್ತಿನ ಪ್ರತಿ ಜಿಲ್ಲಾ ಸಮಿತಿಗೂ ಒಂದು ಪುಸ್ತಕಭಂಡಾರವಿರುವಂತೆ ಕ್ರಮ ಕೈಗೊಳ್ಳುವುದು, ವಿದ್ಯಾರ್ಥಿಗಳಲ್ಲಿ, ಕಾರ್ಮಿಕರಲ್ಲಿ, ಮಹಿಳೆಯರಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸಲು ಸಭೆ, ಸ್ಪರ್ಧೆ, ಚಿತ್ರಪ್ರದರ್ಶನ ಇತ್ಯಾದಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು, ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಲು ಸಹಾಯಕವಾಗುವಂಥ ಲೇಖನಗಳನ್ನೊಳಗೊಂಡ "ಪುಸ್ತಕ ಭಾಗ್ಯ" ಎಂಬ ಹೆಸರಿನ ನೆನಪಿನ ಸಂಚಿಕೆಯನ್ನು ಪ್ರಕಟಿಸುವುದು ಇತ್ಯಾದಿ ಕಾರ್ಯಕ್ರಮಗಳು ಪರಿಷತ್ತಿನ ಸಾಹಿತ್ಯ ಪ್ರಸಾರ ಯೋಜನೆಯಲ್ಲಿ ಅಡಗಿವೆ.

ಸಹಕಾರಕ್ಕಾಗಿ ಕೋರಿಕೆ

ಈ ಯೋಜನೆ ಯಶಸ್ವಿಯಾಗಲು ರಾಜ್ಯ ಸರ್ಕಾರ, ಕೇಂದ್ರ ಸಾ ಹಿ ತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ವಿಶ್ವವಿದ್ಯಾನಿಲಯಗಳು, ರಾಜ್ಯ ಸಾಹಿತ್ಯ ಅಕಾಡೆಮಿ, ಕೇಂದ್ರ ಪುಸ್ತಕಭಂಡಾರ, ಸಂಸ್ಕೃತಿ ಪ್ರಚಾರ ಇಲಾಖೆ, ಭಾರತ ಸರ್ಕಾರದ ಕ್ಷೇತ್ರ ಪ್ರಚಾರ ಶಾಖೆ, ವಯಸ್ಕರ ಶಿಕ್ಷಣ ಸಮಿತಿ, ಎಲ್ಲ ಲೇಖಕರು, ಪ್ರಕಾಶಕರು, ಮುದ್ರಣಕಾರರು ಮತ್ತು ಮಾ ರಾ ಟ ಗಾ ರ ರ ಸಹಾಯ ಸಹಕಾರಗಳನ್ನು ಕೋರಲಾಗಿದೆ. ಒಂದು ವರ್ಷ ಕಾಲ ನಡೆಯುವ ಈ ಸಾಹಿತ್ಯ ಪ್ರಸಾರ ಯೋಜನೆಗೆ ಸುಮಾರು ಎ ರ ಡೂ ವ ರೆ ಲಕ್ಷ ರೂಪಾಯಿಗಳು ಖರ್ಚಾಗಬಹುದೆಂದು ಅಂದಾಜು ಮಾಡಲಾಗಿದೆ.

ಈ ಬಗೆಯ ಕಾರ್ಯಕ್ರಮ ಬೇರೆ ಯಾವ ಭಾಷೆಯ ಸಾಹಿತ್ಯ ಅಕಾಡೆಮಿಗಳಿಂದಲೂ ಈವರೆಗೆ ನಡೆದಿರುವುದಿಲ್ಲ. ಈ ಕಾರ್ಯಕ್ರಮ ಯಶಸ್ವಿಯಾದಲ್ಲಿ ೧೫ ಅಧಿಕೃತ ಭಾಷೆಗಳಲ್ಲಿ ಒಂದಾದ ಕನ್ನಡದ ಘನತೆ ಮತ್ತು ಕನ್ನಡ ನಾಡಿನ ಕೀರ್ತಿ ಮತ್ತಷ್ಟು ಬೆಳಗುವುದರ
ಯಾವ ಸಂಶಯವೂ ಇಲ್ಲ.

ಪ್ರಸ್ತುತ ಇಂದಿನಿಂದ ಮೂರು ದಿನಗಳ ಕಾಲ ನ
ಯುವ ಗೋಷ್ಠಿ ಕಾರ್ಯಕ್ರಮಗಳಲ್ಲಿ ಪುಸ್ತಕಗಳ
ಸಂಬಂಧಿಸಿದ ಅನೇಕ ಪ್ರಮುಖ ವಿಷಯಗಳು ಚರ್ಚೆ
ಬರುವುವು. ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗ
ಇತಿಹಾಸವಿದ್ದು, ಓದು-ಬರಹ ಬಲ್ಲವರ ಸಂಖ್ಯೆ ಹಿಂ
ಗಿಂತ ಹೆಚ್ಚಾಗಿದ್ದು, ಲೇಖಕರ ಸಂಖ್ಯೆಯೂ ಬೆಳೆದಿದ್ದ
ಮುದ್ರಣ ಸೌಲಭ್ಯಗಳು ಮೊದಲಿಗಿಂತಲೂ ಉತ್ತ
ವಾಗಿದ್ದು ಕೂಡ ಕನ್ನಡದಲ್ಲಿ ಕೆಲವು ಒಳ್ಳೆಯ ಪುಸ್ತ
ಗಳ ಒಂದೆರಡು ಸಾವಿರ ಪ್ರತಿಗಳು ಮಾರಾಟವಾಗಬೇಕ
ದರೆ ೩–೪ ವರ್ಷಗಳು, ಕೆಲವು ಸಂದರ್ಭಗಳಲ್ಲಿ ೬–
ವರ್ಷಗಳು ಬೇಕಾಗುತ್ತವೆ. ಎಲ್ಲ ಲೇಖಕರು ತಾವ
ಸ್ವತಃ ಪ್ರಕಾಶಕರೂ ಮಾರಾಟಗಾರರೂ ಆಗುವುದ
ಸಾಧ್ಯವಿಲ್ಲ. ನೂರರಲ್ಲಿ ತೊಂಭತ್ತೊಂಬತ್ತರಷ್ಟು ಲೇಖ
ಕರು ಬೇರೆ ಪ್ರಕಾಶಕರ ಮೊರೆಹೋಗಬೇಕಾಗುತ್ತದೆ
ಬೆರಳಿನಲ್ಲಿ ಎಣಿಸಬಹುದಾದಂಥ ಕೆಲವು ಲೇಖಕರನ್ನು
ಬಿಟ್ಟರೆ ಉ ಳಿ ದ ಲೇಖಕರು, ಪ್ರಕಾಶಕರು ಗೊತ್ತು
ಮಾಡುವ ನಿಯಮಗಳಿಗೆ ತಲೆ ಬಾಗುತ್ತಾರೆ. ಇದರಿಂ
ಕೆಲವು ಸಂದರ್ಭಗಳಲ್ಲಿ ಪ್ರಕಾಶಕನ ಇಚ್ಛೆಗೆ ಅನುಗುಣ
ವಾಗಿ ಲೇಖಕ ತನ್ನ ಲೇಖನವನ್ನು ಮಾರ್ಪಡಿಸಬೇಕಾ
ಗುತ್ತದೆ. ಪ್ರಕಾಶಕನ ಕೊಟ್ಟಷ್ಟು ರಾಯಲ್ಟಿಗೆ ಒ
ಒಡ್ಡಬೇಕಾಗುತ್ತದೆ. ಅಚ್ಚು ಮಾಡುವುದು ಸಾವಿ
ಪ್ರತಿಗಳೆಂದು ಹೇಳಿ ಆತ ನಾಲ್ಕು ಸಾವಿರ ಪ್ರತಿಗಳನ್ನು
ಅಚ್ಚು ಮಾಡಿದರೂ ಲೇಖಕ ಕಾಣದವನಂತೆ ಸುಮ
ನಾಗಬೇಕಾಗುತ್ತದೆ. ತನ್ನ ಪುಸ್ತಕದ ಬೆಲೆ ಕಡಿಮೆ
ಇಟ್ಟು ಹೆಚ್ಚು ಜನ ಪುಸ್ತಕ ಓದುವಂತಾಗಬೇಕೆಂ
ಇಚ್ಛೆ ಲೇಖಕನಿಗಿದ್ದರೂ ಪ್ರಕಾಶಕ ಅದನ್ನು ಲೆಕ್ಕಿಸ
ತನಗೆ ಹೆಚ್ಚು ಲಾಭ ಬರಬೇಕೆಂಬ ದೃಷ್ಟಿಯನ್ನೇ ಗಮನ
ದಲ್ಲಿಟ್ಟುಕೊಂಡು ಪುಸ್ತಕದ ಬೆಲೆಯನ್ನು ಒಂದಕ್ಕೆ ಹತ್ತ
ರಷ್ಟು ಹೆಚ್ಚಿಸಿ ಅದನ್ನು ಕೊಂಡುಕೊಳ್ಳಲು ಸಿದ್ಧರಾ
ರುವ ಗ್ರಂಥಾಲಯದ ಅಧಿಕಾರಿಗಳನ್ನೋ ಕೆಲವು ಶಾಲಾ
ಕಾಲೇಜುಗಳ ಮುಖ್ಯಸ್ಥರನ್ನೋ ಹಿಡಿದು ಆ ಪುಸ್ತ
ಗಳನ್ನು ಅವರಿಗೆ ಗಂಟು ಹಾಕಿ ತನ್ನ ಗಂಟನ್ನು ಗಿಟ್ಟಿ
ಕೊಳ್ಳುತ್ತಾನೆ. ತನಗೆ ಬರುವ ಲಾಭ ಬಹಳವಾಗಿದ್ದು
ಲೇಖಕನಿಗೆ ಕೊಡುವ ರಾಯಲ್ಟಿ ಕಡಿಮೆಯಾಗಿದ್ದರೂ
ಅಲ್ಪ ಹಣವನ್ನು ಪಡೆಯಬೇಕಾದರೆ ಲೇಖಕ ಅವ

ಲಿಗೆ ಹತ್ತಾರು ಬಾರಿ ಸುತ್ತಬೇಕಾಗುತ್ತದೆ. ಇದರಿಂದ ಕನಿಗೆ ಜಿಗುಪ್ಸೆ ಬಂದು ಸಾಹಿತ್ಯ ರಚನೆಯಲ್ಲಿ ತ್ತಿ ಕಳೆದುಕೊಳ್ಳುತ್ತಾನೆ. ಇನ್ನೂ ಕೆಲವು ಜನ ನ ಲೇಖಕರು ಹೇಗಾದರು ತಮ್ಮ ಒಂದೆರಡು ಪುಸ್ತಕ ದರೂ ಹೊರ ಬರಬೇಕೆಂಬ ಆಶೆಯಿಂದ ತಾವೇ ಾಶಕನಿಗೆ ಹಣಕೊಟ್ಟು ಪುಸ್ತಕ ಪ್ರಕಟಿಸುತ್ತಾರೆ. ಹೊಸ ಲೇಖಕರೂ ಇಂಥವರಲ್ಲವೆಂಬುದೂ ಪ್ರಕಾ ಲ್ಲಿಯೂ ಕೆಲವರು ಮೇಲ್ಕಂಡ ಅಪವಾದಗಳಿಗೆ ದೂರ ದ್ದಾರೆಂಬುದೂ ಸಮಾಧಾನದ ವಿಷಯ.

ಲವು ಜನ ಹೆಸರುಗಳಿಸಿದ ಸಾಹಿತಿಗಳಾದರೂ ತಮ್ಮ ಕಗಳನ್ನು ತಾವೇ ಅಚ್ಚು ಮಾಡಿಸಿ ಹಣದ ಮೇಲಿನ ಆಶೆಯಿಂದ ಆ ಪುಸ್ತಕಗಳಿಗೆ ಹೆಚ್ಚು ಬೆಲೆ ಇಡು . ಅವರು ಪ್ರಕಟಿಸಿದ ಕೆಲವು ಪುಸ್ತಕಗಳ ಬೆಲೆ ್ನ ನೋಡಿದರೆ ಪುಸ್ತಕವನ್ನು ಕೈಯಲ್ಲಿ ಮುಟ್ಟಲು ಭಯವಾಗುತ್ತದೆ. ಕೆಲವರ ಪುಸ್ತಕಗಳಿಗೆ ಸರ್ಕಾ ನ ಸಬ್ಸಿಡಿ ದೊರೆತರೂ ಬೆಲೆ ಮಾತ್ರ ಕಡಿಮೆ ಗುವುದಿಲ್ಲ.

ಪ್ರಕಾಶಕರಲ್ಲಿಯೂ ಅಪವಾದಕ್ಕೆ ದೂರವಾದವರು ರಾದರೂ ಇದ್ದಾರೆಂಬ ವಿಷಯವನ್ನು ಹಿಂದೆಯೇ ನೆನಪ್ಪೆ. ಇಂಥವರ ಸಹಾಯವಿಲ್ಲದಿದ್ದರೆ ಕನ್ನಡ ಕ ಪ್ರಕಾಶನ ಕಾರ್ಯ ಮುಂದೆ ಬರುತ್ತಿರಲಿಲ್ಲ. ಲ್ಲಿಯೂ ಕೆಲವರು ನಷ್ಟ ಮಾಡಿಕೊಂಡು ಪ್ರಕಾಶನ ಯನ್ನೇ ಬಿಟ್ಟವರಿದ್ದಾರೆ. ಇಂಥವರ ಕಷ್ಟ-ಸುಖ ್ನ ಅರಿತು ಅವರಿಗೆ ಯಾವ ರೀತಿಯಲ್ಲಾದರೂ ತ್ಸಾಹ ನೀಡುವುದು ಅಗತ್ಯವಾಗಿದೆ. ಪ್ರಕಾಶನ ರ್ಯವನ್ನು ಕೈಗೊಂಡ ಕೆಲವು ಸಹಕಾರ ಸಂಸ್ಥೆಗಳ ಹೀಗೇ ಆಗಿದೆ. ಇದನ್ನೆಲ್ಲಾ ಗಮನಿಸಿ ಸರ್ಕಾರ ಶನ ಸಂಸ್ಥೆಗಳನ್ನು ಮೇಲಕ್ಕೆತ್ತಲು ಮುಂದೆ ಬರ .

ಸ್ತಕ ವ್ಯಾಪಾರಿಗಳ ಜೀವನವೂ ಆರ್ಥಿಕವಾಗಿ ನೂ ಉತ್ತಮವಾಗಿಲ್ಲ. ಇಡೀ ನಾಡಿನಲ್ಲಿ ೮-೧೦ ಯನ್ನು ಬಿಟ್ಟರೆ ಉಳಿದವರು ಆ ವೃತ್ತಿಯನ್ನೇ ಸಿದ್ಧವಾಗಿದ್ದಾರೆಂದರೆ ಅತಿಶಯೋಕ್ತಿಯಾಗ ು.

ಬೆಲೆಯ ಪರಿಣಾಮ

ನೆಲ್ಲವುಗಳ ಪರಿಣಾಮವಾಗಿ ಲೇಖಕ, ಪ್ರಕಾಶಕ ಮತ್ತು ಮಾರಾಟಗಾರರ ದೃಷ್ಟಿ ಹೆಚ್ಚು ಬಂಡವಾಳ ಹಾಕಿ ಹೆಚ್ಚು ಪುಸ್ತಕಗಳನ್ನು ಅಚ್ಚು ಮಾಡಿ, ಹಾಕಿದ ಹಣ ಸಾವಕಾಶವಾಗಿ ಪಡೆಯುವ ಬದಲು ಕಡಿಮೆ ಸಂಖ್ಯೆ ಪ್ರತಿಗಳನ್ನು ಅಚ್ಚು ಹಾಕಿ ಅವುಗಳ ಬೆಲೆ ಹೆಚ್ಚಿಸಿ ಕೆಲವೇ ಪ್ರತಿಗಳು ಖರ್ಚಾದರೂ ಸಾಕು ತಮ್ಮ ಹಣ ಲಾಭದೊಡನೆ ಬೇಗ ವಾಪಸ್ಸು ಬರುತ್ತದೆ ಎಂಬುದರ ಕಡೆ ಇರುತ್ತದೆ. ಇದರ ಪರಿಣಾಮ ವಾಚಕನ ಮೇಲೆ ಬೀಳುತ್ತದೆ. ಮೊದಲೇ ನಮ್ಮ ದೇಶ ಬಡತನದ ದೇಶ. ವಿದ್ಯಾವಂತರ ಸಂಖ್ಯೆ ಕಡಿಮೆ. ಪುಸ್ತಕಗಳನ್ನು ಓದುವವರ ಸಂಖ್ಯೆ ಇನ್ನೂ ಕಡಿಮೆ. ಸ್ವಲ್ಪ ಓದಿ ನೋಡೋಣ ಎನ್ನುವ ಕೆಲವರಾದರೂ ಪುಸ್ತಕ ಕೊಳ್ಳೋಣವೆಂದು ಪುಸ್ತಕದ ಅಂಗಡಿಗೆ ಹೋದರೆ ಆ ದುಬಾರಿ ಬೆಲೆ ಕಣ್ಣು ಕೋರೈಸುತ್ತದೆ. ಜನ ಪುಸ್ತಕ ಓದದಿರಲು ಇನ್ನೂ ಬೇರೆ ಬೇರೆ ಕಾರಣಗಳಿರಬಹುದು. ಅವುಗಳಲ್ಲೆಲ್ಲಾ ಪ್ರಧಾನವಾದುದು ಕೈಗೆ ನಿಲುಕದ ಬೆಲೆ, ಅತಿ ಮುಖ್ಯ ಕಾರಣವೆಂಬುದನ್ನು ಮರೆಯುವಂತಿಲ್ಲ. ಶಾಲೆ-ಕಾಲೇಜುಗಳಲ್ಲಿ ಸಾವಿರಾರು ಪುಸ್ತಕ ಭಂಡಾರಗಳು, ನಾಡಿನಲ್ಲಿ ನೂರಾರು ಸರ್ಕಾರದ ಗ್ರಂಥಾಲಯಗಳು ಇದ್ದ ಮಾತ್ರಕ್ಕೆ ಜನರು ಅಲ್ಲಿಯೇ ಓದುತ್ತಾರೆ ಎನ್ನುವುದು ಮುಖ್ಯವಲ್ಲ. ಜನ ಕೊಂಡು ಓದುವಂತೆ ಮಾಡಿ ಪ್ರತಿ ಮನೆ ಒಂದು ಪುಸ್ತಕ ಭಂಡಾರವಾಗುವಂತೆ ಮಾಡಬೇಕಾದ್ದು ಇಂದು ಅತ್ಯಗತ್ಯ. ಇದರಿಂದ ಜನರಲ್ಲಿ ವಾಚನಾಭಿರುಚಿ ಹೆಚ್ಚಿ ಜನ ಜಾಗೃತಿಯುಂಟಾಗಿ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ.

ಲೈಬ್ರರಿ ಸೆಸ್

ಇಂದು ರಾಜ್ಯ ಸರ್ಕಾರ ಲೈಬ್ರರಿ ಸೆಸ್ ಮೂಲಕ ವರ್ಷಕ್ಕೆ ೫೦-೬೦ ಲಕ್ಷ ರೂಪಾಯಿಗಳನ್ನು ಸಂಗ್ರಹಿಸುತ್ತಿದೆ. ಬೆಂಗಳೂರು ನಗರ ಒಂದರಲ್ಲೇ ೧೨ ಲಕ್ಷ ರೂಪಾಯಿಗಳಿಗೆ ಮೀರಿ ವಸೂಲಾಗುತ್ತಿದೆ. ಸರ್ಕಾರ, ಆಯವ್ಯಯ ಪಟ್ಟಿಯಲ್ಲಿ ಆಗಾಗ ಖೋತಾ ಬೀಳುತ್ತಿದ್ದರೂ, ಶಿಕ್ಷಣ ಖಾತೆಗೆ ವರ್ಷಕ್ಕೆ ೬೦-೬೫ ಕೋಟಿ ಹಣ ಒದಗಿಸುತ್ತಿದೆ. ಈ ಹಣದಲ್ಲಿ ಪುಸ್ತಕ ಭಂಡಾರ, ಸಾಹಿತ್ಯ ಪ್ರೋತ್ಸಾಹ, ಸಾಹಿತ್ಯ ಪ್ರಸಾರ ಇತ್ಯಾದಿ ಕಾರ್ಯಕ್ರಮಗಳಿಗೆ ಹೆಚ್ಚು ಹಣ ತೆಗೆದಿಟ್ಟು ಜನರಲ್ಲಿ ವಾಚನಾಭಿರುಚಿಯನ್ನು ಬೆಳೆಸಲು ಸರ್ಕಾರ ತಕ್ಕ ಯೋಜನೆ ತಯಾರಿಸಬೇಕು. ಈಗ ಜಾರಿಯಲ್ಲಿರುವ

ಪದ್ಧತಿಗಳಲ್ಲಿ ದೋಷಗಳೇನೆಂಬುದನ್ನು ಪರಿಣತರ ಸಹಾಯದಿಂದ ಕಂಡುಹಿಡಿಯಬೇಕು.

ಪುಸ್ತಕದರದ ನಿಗದಿ ಅಗತ್ಯ

ಇಂತಿಷ್ಟು ಪುಟಗಳಿರುವ ಪುಸ್ತಕದ ಬೆಲೆ ಇಷ್ಟೇ ಇರಬೇಕೆಂದು ಒಂದು ಸಾರ್ವತ್ರಿಕ ದರ ಗೊತ್ತಾಗಬೇಕು. ಒಳ್ಳೆಯ ಪುಸ್ತಕವಾಗಿದ್ದು ಅದಕ್ಕಾಗಿ ವಿಶೇಷ ಶ್ರಮ, ಒಳ್ಳೆಯ ಕಾಗದ, ಪಡಿಯಚ್ಚುಗಳಿಗಾಗಿ ವಿಶೇಷ ಹಣ, ಖರ್ಚಾಗುವ ಪಕ್ಷಕ್ಕೆ ಅಂಥ ಪುಸ್ತಕಗಳನ್ನು ತಜ್ಞರಿಂದ ಪರಿಶೀಲಿಸಿ ಸರ್ಕಾರದಿಂದ ಸಬ್ಸಿಡಿ ಕೊಟ್ಟು ಅದರ ಬೆಲೆಯನ್ನೂ ಇತರೇ ಪುಸ್ತಕಗಳ ಬೆಲೆಗೆ ಸರಿಹೊಂದುವಂತೆ ಇಳಿಸಬೇಕು. ಈ ರೀತಿಯ ಬೆಲೆಯುಳ್ಳ ಪುಸ್ತಕಗಳ ೫೦೦ ಪ್ರತಿಗಳನ್ನು ಸರ್ಕಾರ ಕೂಡಲೆ ಕೊಳ್ಳಬೇಕು. ಇದರಿಂದ ಲೇಖಕ, ಪ್ರಕಾಶಕನ ಮೊರೆ ಹೊಗುವ ಬದಲು ನೇರವಾಗಿ ತಾನೇ ಪ್ರಕಟಿಸುತ್ತಾನೆ. ಬರುವ ಲಾಭವೆಲ್ಲಾ ತನಗೇ ಬರುತ್ತದೆ. ಲೇಖಕ ಉದ್ಧಾರವಾಗುತ್ತಾನೆ. ಸರ್ಕಾರದ ಸಹಾಯ ಸಾರ್ಥಕವಾಗುತ್ತದೆ. ಓದುಗನಿಗೆ ಕಡಿಮೆ ಬೆಲೆಯಲ್ಲಿ ಪುಸ್ತಕ ದೊರೆಯುತ್ತದೆ. ಓದುಗರ ಸಂಖ್ಯೆ ಬೆಳೆಯುತ್ತದೆ. ಓದುವ ಅಭಿರುಚಿ ಜನರಲ್ಲಿ ತಾನೇತಾನಾಗಿ ಉಂಟಾಗುತ್ತದೆ.

ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಸೀಲಿಂಗ್ ಜಾರಿಗೆ ತರು ವಂತೆ ಪುಸ್ತಕಗಳ ಬೆಲೆಯ ಮೇಲೂ ಕೆಲವು ವರ್ಷಗಳ ಮಟ್ಟಿಗೆ ಸರ್ಕಾರ ಸೀಲಿಂಗ್ ತಂದರೆ ಅದನ್ನು ಆಕ್ಷೇಪಿಸು ವವರು ಕೆಲವರಿರುವುದಾದರೆ ಅದನ್ನು ಸ್ವಾಗತಿಸುವವರು ಸಾವಿರಾರು ಮಂದಿ ಇರುತ್ತಾರೆ.

ಮಾದರಿ ಕಾರ್ಯಕ್ರಮ

ಈ ಸಾಹಿತ್ಯ ಪ್ರಸಾರ ಯೋಜನೆ ಬರೀ ಪ್ರಚಾರದ ಯೋಜನೆಯಲ್ಲ. ವಾಸ್ತವಾಂಶಗಳನ್ನು ಅರಿತು ಕೆಲಸ ಮಾಡುವ ಯೋಜನೆ. ಈ ಯೋಜನೆಗೆ ಸರ್ಕಾರದ ನಾನಾ ಇಲಾಖೆಯ ಅಧಿಕಾರಿಗಳ ಸಹಕಾರ, ಸರಕಾರ ದಿಂದ ಆರ್ಥಿಕ ನೆರವು ಬೇಕಾಗುತ್ತದೆ. ಈ ವರ್ಷ ರಾಜ್ಯ ದಲ್ಲಿರುವ ಎಲ್ಲಾ ಶಾಲೆ ಕಾಲೇಜುಗಳವರು ಪರಿಷತ್ತಿನ ಈ ಪುಸ್ತಕ ಪ್ರಸಾರ ಯೋಜನೆಯ ಮೂಲಕವೇ ತಮ್ಮ ಪುಸ್ತಕ ಭಂಡಾಗಗಳಿಗೆ ಬೇಕಾದ ಒಳ್ಳೆಯ ಪುಸ್ತಕ ಗಳನ್ನು ಕೊಳ್ಳಬೇಕೆಂದು ಸರ್ಕಾರ ಆಜ್ಞೆ ಹೊರಡಿಸಿದರೂ ಎಷ್ಟೋ ಉಪಕಾರವಾಗುತ್ತದೆ. ಈ ಮೊದಲೇ ಹೇಳಿ ದಂತೆ ಈ ಸಾಹಿತ್ಯ ಪ್ರಸಾರ ಕಾರ್ಯ ಬೇರೆ ಯಾವ ಭಾಷೆಯವರಿಂದಲೂ ನಡೆದಿಲ್ಲ. ಇದೊಂದು ಮಾದರಿ ಕಾರ್ಯಕ್ರಮ.

ಮಕ್ಕಳಿಗೆ ತಂದೆ ಬಾಲ್ಯದೊ
ಳಕ್ಕರ ವಿದ್ಯೆಗಳನರಿಪದಿರ್ದೊಡೆ ಕೊಂದಂ
ಲಕ್ಕಧನಮಿರಲು ಕೆಡುಗುಂ
ಚಿಕ್ಕಂದಿನ ವಿದ್ಯೆ ಪೊರೆಗು ಚೂಡಾರತ್ನ!

ಮಯೋಚಿತ ಕಾರ್ಯಯೋಜನೆ*

ವಿ. ಎಸ್. ಕೌಜಲಗಿ

ರತದಲ್ಲಾಗಲಿ, ಕನ್ನಡ ನಾಡಿನಲ್ಲಾಗಲಿ, ಅಕ್ಷ ಸ್ಥರ ಸಂಖ್ಯೆ ತುಂಬಾ ಕಡಿಮೆ. ಭಾರತಕ್ಕೆ ತಂತ್ರ್ಯ ಬಂದ ಮೇಲೆ ಈ ಕ್ಷೇತ್ರದಲ್ಲಿ ಕೆಲಸ ನಡೆ ಅಕ್ಷರಸ್ಥರ ಸಂಖ್ಯೆ ಅಂಥ ಪ್ರಗತಿದಾಯಕವಾಗಿರು ಕಂಡುಬಂದಿಲ್ಲ. ಶಾಲಾ ಕಾಲೇಜುಗಳಲ್ಲಿ ನಿಯ ವಾದ ಸ್ಥಳಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿ ಓದಲು ಮುಂದುಬರುತ್ತಿದ್ದರೂ, ರಾಜ್ಯ ಸರ್ಕಾರ ಹೊಸದಾಗಿ ಶಾಲೆಗಳನ್ನು ತೆರೆಯಲು ಸಹಾಯ ತ್ತಿದ್ದರೂ, ವಯಸ್ಕರ ಶಿಕ್ಷಣ ಸಮಿತಿಯವರು ಮೀರಿ ವಿದ್ಯಾಪ್ರಸಾರ ಮಾಡುತ್ತಿದ್ದರೂ ಅಕ್ಷರ ಸಂಖ್ಯೆಯಲ್ಲಿ ಹೇಳಿಕೊಳ್ಳುವಷ್ಟು ಪ್ರಗತಿ ಸಾಧಿತ ಲ್ಲ. ಇದಕ್ಕೆ ಬಹುಶಃ ನನಗೆ ತೋರುವ ಕಾರಣ ರೆ ಜನರು ಓದಿನಿಂದ ಲಭಿಸುವ ಭಾಗ್ಯ ಏನೆಂದು ಕೊಳ್ಳದೇ ಇರುವುದು. ಮನುಷ್ಯ ಅನುಭವವನ್ನು ನದಿಂದ ನೇರವಾಗಿ ಕಂಡು ಪಡೆಯುವುದಕ್ಕಿಂತ ನ ಮಟ್ಟದಲ್ಲಿ ಪುಸ್ತಕಗಳನ್ನು ಓದುವುದರಿಂದ ಪಡೆಯುತ್ತಾನೆ ಎಂಬ ಸತ್ಯಾಂಶ ಬಹುಜನರಿಗೆ ಇನ್ನೂ ತಿಳಿದಿಲ್ಲ ಎಂದು ಹೇಳಬೇಕಾಗುತ್ತದೆ. ಪುಸ್ತಕದ ಬೆಲೆಯನ್ನು ಅರಿಯಬೇಕಾದರೆ ಅದನ್ನು ಓದಿಯೇ ತಿಳಿಯಬೇಕು.

ಅಕ್ಷರ ಜ್ಞಾನ, ಪುಸ್ತಕ ಓದುವುದಕ್ಕೆ ಮೊದಲ ಮೆಟ್ಟಲು. ಆದರೆ ಓದುವ ಆಸಕ್ತಿಯನ್ನೂ ನಾವು ಇಂದು ಪ್ರಸಾರ ಕಾರ್ಯದಿಂದಲೇ ಮಾಡಬೇಕಾಗಿದೆ. ಇದಕ್ಕೆ ಸರ್ಕಾರ ಬೇರೊಂದು ಇಲಾಖೆಯನ್ನೇ ತೆರೆಯಬೇಕೋ ಏನೋ!

ಕನ್ನಡ ಆಡಳಿತ ಭಾಷೆ ಆಗಿರುವ ಈ ಸಂದರ್ಭದಲ್ಲಿ ಭಾಷೆಯನ್ನು ಪರಿಪೂರ್ಣತೆಯೆಡೆಗೆ ಬೆಳೆಸುವುದರಲ್ಲಿ ವಿವಿಧ ರೀತಿಯ ಪುಸ್ತಕಗಳ ಪ್ರಕಟಣೆ, ಅವುಗಳ ಪಠಣ ಅತ್ಯಗತ್ಯವಾಗಿ ಆಗಬೇಕಾದ ಕೆಲಸ.

ಪುಸ್ತಕ ಬರೆಯುವುದು, ಬರೆದು ಪ್ರಕಟಿಸುವುದು, ಪ್ರಕಟವಾದ ಪುಸ್ತಕಗಳನ್ನು ಕೊಂಡು ಓದುವುದು, ಕೊಳ್ಳಲಾರದ ಜನಕ್ಕೆ ಸಾರ್ವಜನಿಕ ಪುಸ್ತಕ ಭಂಡಾರಗಳ ಮೂಲಕ ಒದಗಿಸುವುದು ಈ ಎಲ್ಲ ವಿಚಾರಗಳಲ್ಲೂ ಸಮಸ್ಯೆಗಳಿವೆ ಎಂಬುದು ನಮ್ಮ ಇಂದಿನ ಸಾಮಾಜಿಕ, ರಾಜಕೀಯ ಪರಿಸ್ಥಿತಿಗಳನ್ನು ಮನಗಂಡವರಿಗೆ ಅರ್ಥವಾಗದೆ ಇರದು.

ಇಂಥ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು, ಅದರ

ವಿಚಾರ ಗೋಷ್ಠಿಗಳ ಕಾರ್ಯಕ್ರಮವನ್ನು ಉದ್ಘಾಟಿಸಿದ ರಾಜ್ಯ ಸಚಿವ ಶ್ರೀ ವಿ. ಎಸ್. ಕೌಜಲಗಿಯವರು ಮಾಡಿದ ಭಾಷಣದ ಸಾರಾಂಶ.

ಬಗ್ಗೆ ಪರಿಹಾರಗಳನ್ನು ಕಂಡುಹಿಡಿಯಲು ಪರಿಷತ್ತಿನವರು ಈ ಒಂದು ಹೊಸ ಕಾರ್ಯಕ್ರಮವನ್ನು ಏರ್ಪಡಿಸಿರುವುದು ತುಂಬಾ ಸಮಯೋಜಿತವಾದ ಮತ್ತು ಮೆಚ್ಚಿಗೆಯ ಕಾರ್ಯ. ಪರಿಷತ್ತಿನವರು ಕೈಕೊಂಡಿರುವ ಸಾಹಿತ್ಯ ಪ್ರಸಾರ ಯೋಜನೆಯಲ್ಲಿ ಇಂಥ ಕಾರ್ಯಕ್ರಮಗಳು ಪ್ರತಿಯೊಂದು ಜಿಲ್ಲೆಯಲ್ಲೂ ನಡೆದು ಕರ್ನಾಟಕದ ಎಲ್ಲ ಜನರಿಗೆ ಈ ಸಮಸ್ಯೆಗಳ ಸ್ವರೂಪ, ಅವು ಅವರ ಮೇಲೆ ಹೇಗೆ ಪ್ರಭಾವ ಬೀರುತ್ತಿವೆ ಎಂಬುದು ಮನದಟ್ಟಾಗುವಂತೆ ಆಗಬೇಕು. ಇಂಥ ಕಾರ್ಯಕ್ರಮಗಳಿಗೆ ಹಣ ಬಹಳವಾಗಿ ವೆಚ್ಚವಾಗುತ್ತದೆ ಎಂಬುದು ನಿಸ್ಸಂದೇಹ. ಸರ್ಕಾರ ಪರಿಷತ್ತಿನ ಕೆಲಸದಲ್ಲಿ ಆರ್ಥಿಕವಾಗಿ ಮತ್ತು ಶಿಕ್ಷಣ ಇಲಾಖೆಯಿಂದ ಸೇವಾರೂಪವಾಗಿ ಸಹಕರಿಸಲು ಹಿಂಜರಿಯುವುದಿಲ್ಲ ಎಂದು ಭರವಸೆ ಕೊಡುತ್ತೇನೆ.

ಸಾಹಿತ್ಯ ಪ್ರಸಾರ ಯೋಜನೆಯ ಅವಧಿ, ಅದರ ವ್ಯಾಪಕತೆ, ಪುಸ್ತಕಗಳ ಪ್ರದರ್ಶನ, ಮಾರಾಟ, ಈ ಎಲ್ಲ ಕಾರ್ಯಕ್ರಮಗಳನ್ನು ಹಾಕಿಕೊಂಡು ಇಂಥ ಒಂದು ದೊಡ್ಡ ಕೆಲಸವನ್ನು ಕೈಗೊಂಡಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಯೋಜನೆ ನಿಜದಲ್ಲಿ ಸಾಹಸದ ಮಾತು ಮತ್ತು ಸಾಹಸದ ಕಾರ್ಯ.

೧೯೭೨ನೆಯ ವರ್ಷ ಭಾರತಕ್ಕೆ ಸ್ವಾತಂತ್ರ್ಯ ಬಂದ ೨೫ನೆಯ ವರ್ಷ. ಇದನ್ನು "ಅಂತರ ರಾಷ್ಟ್ರೀಯ ಪುಸ್ತಕ ವರ್ಷ" ಎಂದು "ಯುನೆಸ್ಕೊ" ಕರೆದಿರುವುದೂ ಸ್ವಾತಂತ್ರ್ಯದ ಬೆಳ್ಳಿಹಬ್ಬವನ್ನು ಪರಿಷತ್ತು ತನ್ನ ಮೂಲೋದ್ದೇಶದ ಸಾಧನೆಗಾಗಿ ಪುಸ್ತಕ ವರ್ಷವಾಗಿ ಇಡೀ ವರ್ಷ ಈ ಹಬ್ಬವನ್ನು ಆಚರಿಸುತ್ತಿರುವುದೂ ಹೆಮ್ಮೆಯ ವಿಷಯ. ಕನ್ನಡಿಗನ ಭಾಗ್ಯೋದಯ. ಅಕ್ಷರಜ್ಞರಿಗೆ ರಸದೂಟ. ಓದುಗರಿಗೆ ಔತಣ.

ಸಾಹಿತ್ಯ ಪ್ರಸಾರ ಯೋಜನೆಯ ಕಾರ್ಯಕ್ರಮ ಆಗಸ್ಟ್ ೧೫ರಿಂದ ಆರಂಭವೆಂದರೂ ತಿಂಗಳಿಗೆ ಮುಂಚೆಯೇ ಇಂದು ಈ ಗೋಷ್ಠಿಯ ಕಾರ್ಯಕ್ರಮ ನಾಂದಿಯಾಗಿ ಪ್ರಾರಂಭವಾಗಿದೆ. ಇಂಥ ಶುಭ ಕಾರ್ಯವನ್ನು ಉದ್ಘಾಟಿಸಲು ನನಗೆ ಹೆಮ್ಮೆಯೂ ಸಂತೋಷವೂ ಆಗುತ್ತದೆ. ಈ ಕಾರ್ಯ ಎಲ್ಲರ ಸಹಕಾರದಿಂದ, ಸರ್ಕಾರದ ಬೆಂಬಲದಿಂದ, ವಿದ್ಯಾಸಚಿವರ ಆಶೀರ್ವಾದದಿಂದ ಸಂಪೂರ್ಣ ಯಶಸ್ಸನ್ನು ಸಾಧಿಸಲಿ ಎಂದು ಬಯಸುತ್ತೇನೆ.

ಪರಿಷತ್ತು ಬೆಂಗಳೂರಿನಲ್ಲಿ ಖಾಯಂ ಪುಸ್ತಕ ಪ್ರದರ್ಶನವೊಂದನ್ನು ತೆರೆವುದಾಗಿ ಭರವಸೆ ನೀಡಿದೆ. ಇದಕ್ಕೆ ಕನ್ನಡ ನಾಡಿನ ಗ್ರಂಥ ಪ್ರಕಾಶಕರು, (ಸಂಸ್ಥೆಯಾಗಲಿ, ವ್ಯಕ್ತಿಯಾಗಲಿ) ಹಾಗೂ ಗ್ರಂಥಕರ್ತರು ತಮ್ಮ ಪುಸ್ತಕದ ಎರಡೆರಡು ಪ್ರತಿಗಳನ್ನು ತಪ್ಪದೆ ಕಳಿಸಿಕೊಡುವಂತಾಗಬೇಕು. ಇದಕ್ಕೆ ಕಡ್ಡಾಯವಾದ ಒಂದು ಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಪ್ರತಿ ಪ್ರಕಾಶಕನೂ ಪ್ರತಿ ಲೇಖಕನೂ ತಮ್ಮಿಂದ ಪುಸ್ತಕ ಪ್ರಕಟವಾದ ಕೂಡಲೆ ಎರಡು ಪ್ರತಿಗಳನ್ನು ಪರಿಷತ್ತಿಗೆ ಕಳುಹಿಸಿ ಕೊಡತಕ್ಕ ಏರ್ಪಾಡು ಮಾಡಬೇಕು. ಈ ವಿಚಾರದಲ್ಲಿ ಮಾನ್ಯ ವಿದ್ಯಾಸಚಿವರು ಆಸಕ್ತಿವಹಿಸಿ ಕನ್ನಡ ಸಾಹಿತ್ಯ ಪರಿಷತ್ತು ಕೈಕೊಂಡಿರುವ ಕಾರ್ಯಕ್ಕೆ ಸರ್ಕಾರದ ಬೆಂಬಲ, ಸಹಕಾರಗಳನ್ನು ನೀಡುವಂತೆ ಸಹಾಯ ಮಾಡಬೇಕೆಂದು ನಾನು ಅವರನ್ನೂ ಪ್ರಾರ್ಥಿಸುತ್ತೇನೆ.

ಪರಿಷತ್ತಿನ ಈ ದೊಡ್ಡ ಯೋಜನೆಯಲ್ಲಿ ಪರಿಷತ್ತಿನ ಜಿಲ್ಲಾ ಸಮಿತಿಯ ಸದಸ್ಯರು ಭಾಗವಹಿಸಿ ತಮ್ಮ ಸಹಕಾರವನ್ನು ನೀಡುವರೆಂಬ ಭರವಸೆ ನಮಗಿದೆ. "ಪುಸ್ತಕ ಭಾಗ್ಯ" ಇವರ ಮೂಲಕ ಕನ್ನಡ ನಾಡಿನ ಮನೆಮನೆಗಳಿಗೆ ದೊರೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕರ್ನಾಟಕವನ್ನೆಲ್ಲ ವಾಚನಾಲಯಗಳ ಜಾಳಿಗೆಯಿಂದ ತುಂಬಿಬಿಡಬೇಕು. ವಾಚನಾಲಯಗಳೆಂದರೆ ಕರ್ನಾಟಕತ್ವದ ವಿದ್ಯುಚ್ಛಕ್ತಿಯನ್ನೊಯ್ಯುವ ತಂತಿ ಕಂಬಗಳು.

—ಶ್ರೀ ಆಲೂರು ವೆಂಕಟರಾಯರು

ಪುಸ್ತಕ ಪರಿಚಯದ ಪತ್ರಿಕೆ ಅಗತ್ಯ*

● ಕೂಡಲಿ ಚಿದಂಬರಂ

ಲೇಖಕ, ಪ್ರಕಾಶಕ, ಮುದ್ರಕ, ಮಾರಾಟಗಾರ— ಇವರೆಲ್ಲರಲ್ಲಿ ಹೆಚ್ಚು ಕಷ್ಟಗಳಿಗೊಳಗಾಗುವವನೆಂದರೆ ಮಾರಾಟಗಾರ. ಗ್ರಂಥಕರ್ತನಿಗೆ ಯಾರೂ ಮೋಸ ಮಾಡುವುದಿಲ್ಲ. ಪ್ರಕಾಶಕನಿಂದ ಗ್ರಂಥಕರ್ತನಿಗೆ ಬರುವ ಹಣ ಕಡಿಮೆ ಎಂದರೆ ಅದು ಪ್ರಕಾಶಕನ ತಪ್ಪಲ್ಲ. ಕಾಗದ, ಪಡಿಯಚ್ಚು, ಮಾರಾಟದ ರಿಯಾಯಿತಿ, ಇತ್ಯಾದಿಗಳನ್ನು ನೆನೆಸಿಕೊಂಡರೆ–ಪ್ರಕಾಶಕ ಅಷ್ಟಿಷ್ಟು ಗ್ರಂಥಗಳನ್ನು ಪ್ರಕಟಿಸುವುದೇ ಸಾಹಸ ಎನ್ನಬಹುದು.

ಇನ್ನು ಅವರಿವರ ದೂರು ಎಂದರೆ ಗ್ರಂಥಗಳ ಬೆಲೆ ಹೆಚ್ಚು ಎಂಬುದು. ಕೆಲವು ವಿಮರ್ಶಕರು–ತಮ್ಮ ವಿಮರ್ಶೆಗಳಲ್ಲಿ ಈ ವಿಚಾರವನ್ನು ಎತ್ತುತ್ತಾರೆ. ಆದರೆ ಸಾಹಿತ್ಯ ಮೌಲ್ಯವನ್ನು ಅಳೆಯುವ ವಿಮರ್ಶಕನಿಗೆ ಗ್ರಂಥ ಪ್ರಕಟನೆಯ ಕಾರ್ಯಭಾರದ ಸಂಕಟಗಳು ಹೇಗೆ ಗೊತ್ತಾಗುತ್ತದೆ? ಮುಖ್ಯವಾಗಿ, ಗ್ರಂಥದ ಬೆಲೆಯ ಮೇಲೆ ಟೀಕೆ ಮಾಡಲು ವಿಮರ್ಶಕನಿಗೆ ಅಧಿಕಾರವೇ ಇಲ್ಲ. ಗ್ರಂಥಕರ್ತನಿಗೆ ಕೊಡುವ ರಾಯಲ್ಟಿ ಕಡಿಮೆ ಎಂದರೆ— 'ಅವರಿಗೆ ಎಷ್ಟು ಕೊಟ್ಟರೂ ಸಾಲದು' ಎಂದು ನಾನನ್ನುತ್ತೇನೆ. ಇದ್ದದ್ದರಲ್ಲೇ ಅವರು ತೃಪ್ತರಾಗುವ ಮನೋಭಾವವನ್ನು ರೂಢಿಸಿಕೊಳ್ಳಬೇಕು.

ಯಾವುದೇ ಪುಸಕ್ತ ಹೆಸರು ಗಳಿಸಬೇಕೆಂದರೆ, ಲಾಭ ಗಳಿಸಬೇಕೆಂದರೆ ಅದಕ್ಕೆ ಅದೃಷ್ಟ ಬೇಕು. ಈ ಹೆಸರು, ಲಾಭ, ಲೇಖಕನನ್ನಾಗಲೀ, ಪ್ರಕಾಶಕನನ್ನಾಗಲೀ ಅವಲಂಬಿಸಿರುವುದಿಲ್ಲ. ಎಲ್ಲರಿಗಿಂತ ಹೆಚ್ಚು ಕಷ್ಟಗಳನ್ನನುಭವಿಸುವವನೆಂದರೆ ಮಾರಾಟಗಾರ. ಯಾವುದೋ ಅಂಗಡಿಯಲ್ಲಿ ಎಲ್ಲಾ ಪುಸ್ತಕಗಳಿರುತ್ತವೆ. ಆ ಪುಸ್ತಕಗಳು ಯಾರಿಗೆ ಬೇಕೋ ಅವರು ದೂರದ ಯಾವುದೋ ಊರಿನಲ್ಲಿರುತ್ತಾರೆ. ತಮಗೆ ಬೇಕಾದ ಪುಸ್ತಕಗಳು ಆ ಅಂಗಡಿಯಲ್ಲಿವೆ ಎಂದು ಅವರಿಗೆ ಗೊತ್ತಾಗುವುದಿಲ್ಲ. ಹೀಗಾಗಿ ಅಗತ್ಯವಿರುವ ಗ್ರಂಥಗಳೂ ಸಹ ಅಂಗಡಿಯಲ್ಲಿ ಕೊಳೆಯಬೇಕಾಗುತ್ತದೆ. ಈ ಸಮಸ್ಯೆಗೆ ಪರಿಹಾರ ಎಂದರೆ– ಪ್ರತಿ ತಿಂಗಳು ಪ್ರಕಟವಾಗುವ ಕನ್ನಡ ಗ್ರಂಥಗಳ ಪರಿಚಯ ಮಾಡಿಕೊಡುವ 'ಪತ್ರಿಕೆ'ಯೊಂದು ಕನ್ನಡದಲ್ಲಿ ಬರಬೇಕು.

ಇನ್ನು ಪ್ರಾಚೀನ ಗ್ರಂಥಗಳ ವಿಷಯ. ನಮ್ಮಲ್ಲಿ ಪಂಪನಂತಹ ಮಹಾಕವಿಗಳು 'ಮಹಾನ್ ಕಾವ್ಯ'ಗಳನ್ನು ರಚಿಸಿ, ಆಗಿಹೋಗಿದ್ದಾರೆ. ಅಂಥವರ ಕೃತಿಗಳನ್ನು ಸರಳಗನ್ನಡದಲ್ಲಿ ಭಾವಾನುವಾದ ಮಾಡಿ ಜನಸಾಮಾನ್ಯರಿಗೆ ಅರ್ಥವಾಗುವಂತೆ ಮಾಡಬೇಕು. ಲೇಖಕರು, ಮಾರಾಟಗಾರರು, ಪ್ರಕಾಶಕರು–ತಮ್ಮ ತಮ್ಮ 'ಸಂಸ್ಥೆಗಳ'ನ್ನು ರೂಪಿಸಿಕೊಂಡರೆ – ಎಲ್ಲರ ಸಮಸ್ಯೆಗಳನ್ನೂ ಅವುಗಳ ಮೂಲಕ ಪರಿಹರಿಸಿಕೊಳ್ಳಲು ಸಾಧ್ಯ ಎಂದು ನನಗನ್ನಿಸುತ್ತದೆ.

* ಶ್ರೀ ಕೂಡಲಿ ಚಿದಂಬರಂ ಅವರು ಮಾಡಿದ ಅಧ್ಯಕ್ಷ ಭಾಷಣದ ಕೆಲವೇ ಅಂಶಗಳನ್ನು ಸಂಗ್ರಹಿಸಿ, ಇಲ್ಲಿ, ಕೊಡಲಾಗಿದೆ.

ಲೇಖಕರ ಸಮಸ್ಯೆಗಳು

● ಮಿರ್ಜಿ ಅಣ್ಣಾರಾವ್

ಕನ್ನಡ ಸಾಹಿತ್ಯ ಪರಿಷತ್ತಿನ ತ್ರೈವಾರ್ಷಿಕ ಯೋಜನೆಯಲ್ಲಿ ಸಾಹಿತ್ಯ ಪ್ರಸಾರದ ವರ್ಷವಿದು. ಇದು ಭಾರತ ಸ್ವಾತಂತ್ರ್ಯದ ಬೆಳ್ಳಿಹಬ್ಬದೊಡನೆ ಸೇರಿದುದು. ಇನ್ನಿಷ್ಟು ಸಯುಕ್ತಕವೆನಿಸಿದೆ. ಸ್ವಾತಂತ್ರ್ಯದ ಸ್ಥಿರತೆ, ಸ್ವರಾಜ್ಯದ ಕಲ್ಪನೆ, ಸುರಾಜ್ಯದ ವಿಚಾರ, ಪ್ರಜಾ ಪ್ರಭುತ್ವದ ಹೊಣೆ, ಹಕ್ಕು–ಬಾಧ್ಯತೆಗಳ ತಿಳುವಳಿಕೆಗಳೆಲ್ಲ ಸಾಹಿತ್ಯದಿಂದಲೇ ಜನತೆಗೆ ಲಭಿಸುತ್ತವೆ. ಅದಕ್ಕಾಗಿ ರಾಷ್ಟ್ರದ ಸ್ವಾತಂತ್ರ್ಯದ ಬೆಳ್ಳಿಯ ಹಬ್ಬವನ್ನು ಸಾಹಿತ್ಯ ಪ್ರಸಾರದ ಮೂಲಕ ಆಚರಿಸುವುದು ಅತ್ಯಂತ ಮಹತ್ವದ ಯೋಜನೆಯಾಗಿದೆ. ಜನತೆಯಲ್ಲಿ ತಿಳುವಳಿಕೆಯನ್ನುಂಟುಮಾಡುವುದೇ ರಾಷ್ಟ್ರೀಯ ಭಾವನೆಯ ತಳಹದಿಯಾಗಿದೆ. ದೇಶದ ಎಲ್ಲ ಯೋಜನೆಗಳ ಸಫಲತೆಗೂ ಅರಿತು ಆಚರಿಸುವ ಸಮಾಜವು ರೂಪುಗೊಳ್ಳಲಿಕ್ಕೆ ಬೇಕು. ಇಂಥ ಅರಿವನ್ನುಂಟುಮಾಡುವುದು ಸಾಹಿತ್ಯದ ಪ್ರಧಾನ ಉದ್ದೇಶವಾಗಿದೆ. ಆದರಿಂದ ಸಾಹಿತ್ಯ ಪ್ರಸಾರ ಯೋಜನೆಯು ದೇಶದ ಏಳಿಗೆಗೂ ಬೆಳವಣಿಗೆಗೂ ಪ್ರಾಣಸ್ವರೂಪವಾಗಿದೆ. ಆದರಿಂದ ಸಾಹಿತ್ಯ ಪ್ರಸಾರ ಯೋಜನೆಯನ್ನು ಸಫಲಗೊಳಿಸುವುದರಲ್ಲಿಯೇ ಸ್ವಾತಂತ್ರ್ಯದ ರಜತ ಮಹೋತ್ಸವದ ಸಾರ್ಥಕತೆಯಿದೆ. ಈ ಸಾರ್ಥಕತೆಯನ್ನು ಸಾಧಿಸುವಲ್ಲಿ ಕನ್ನಡ ಸಾಹಿತ್ಯ ಪರಿಷತ್ತೂ, ಕನ್ನಡ

ಜನಾಂಗಗಳೂ ಇಂದು ಮೊದಲ ಹೆಜ್ಜೆಯನ್ನೂ ಇಡು
ತ್ತಿವೆ.

ಯಾವ ಯೋಜನೆಯ ಯಶಸ್ಸಿಗೂ ಕೂಡ ಆರ್ಥಿಕ
ವ್ಯವಸ್ಥೆಯು ಮುಖ್ಯವೆನಿಸುತ್ತದೆ. ಆರ್ಥಿಕ ಸ್ಥಿತಿ–ಗ
ಗಳನ್ನು ಅವಲಂಬಿಸಿ ಕಾರ್ಯದ ಪ್ರಗತಿಯು ನಿಂತಿರು
ತ್ತದೆ. ಇದು ಎಷ್ಟು ನಿಜವೋ ಅಷ್ಟೇ ಯೋಜಕರ
ಕೈಯಲ್ಲಿ ಹಣದ ಚೀಲವನ್ನು ಕಟ್ಟಿ ಯಾರೂ ಕೊಡುವ
ದಿಲ್ಲ ಎಂಬುದೂ ನಿಜ. ಅದಕ್ಕಾಗಿ ಯೋಜಕರೇ ಅಥವಾ
ಯೋಜನೆಯೇ ತನಗೆ ಬೇಕಾಗುವ ಹಣವನ್ನು ತಾನೇ
ಉತ್ಪಾದಿಸುತ್ತ ಮುಂದರಿಯುವ ರೀತಿಯಲ್ಲಿ ಇರಬೇಕಾ
ಗಿದೆ. ಇದು ಸಾಹಿತ್ಯ ಪ್ರಚಾರಕ್ಕಂತೂ ತೀರ ಅವಶ್ಯಕ
ವಾದ ವಿಚಾರವಾಗಿದೆ. ಇದಕ್ಕೆ ಸಂಬಂಧಿಸಿದ ವಿಚಾರ
ಗಳನ್ನು ನಾವು ಜನತೆಯ ಸಹಕಾರದಿಂದ ಕಾರ್ಯರೂಪ
ದಲ್ಲಿ ತರುವದಿದೆ. ವಿಚಾರವೇ ಆಚಾರಕ್ಕೆ ಮೂಲವಾ
ದುದರಿಂದ ನಮ್ಮ ಸಾಹಿತ್ಯ ಪ್ರಸಾರ ಯೋಜನೆಗೆ ಇಲ್ಲಿ
ತಳಹದಿಯನ್ನು ರೂಪಿಸಿಕೊಳ್ಳುತ್ತಿದ್ದೇವೆಂದರೆ ತಪ್ಪಲ್ಲ.

ಇನ್ನು "ಗ್ರಂಥ ಪ್ರಕಾಶನ ಮತ್ತು ಮಾರಾಟದ
ಸಮಸ್ಯೆಗಳು" ಎಂಬ ವಿಚಾರವನ್ನು ಪರಿಶೀಲಿಸುವಾಗ
"ಲೇಖಕರ ಸಮಸ್ಯೆಗಳು" ಎಂಬ ವಿಷಯವು ಅತ್ಯಂತ
ಮಹತ್ವದ ಸ್ಥಾನವನ್ನು ಪಡೆಯುತ್ತದೆ. ಈ ಎಲ್ಲ ಸಮ

ಗಳಿಗೆ ಲೇಖಕನೇ ಮೂಲ ಕಾರಣನು. ಲೇಖಕನು ಥಗಳನ್ನು ರಚಿಸದೆ ಇದ್ದರೆ, ಪುಸ್ತಕಗಳನ್ನು ಬರೆಯದೆ ರೆ ಪ್ರಕಾಶನದ ಹಾಗೂ ಮಾರಾಟದ ಸಮಸ್ಯೆಗಳೇ ನ್ಭವಿಸುತ್ತಿರಲಿಲ್ಲ. ಅವನು ಗ್ರಂಥ ರಚಿಸುತ್ತಿರುವುದ ನಲೇ ಈ ಎಲ್ಲ ಸಮಸ್ಯೆಗಳು !

ಮಸ್ಯೆಯ ಎರಡು ಮುಖ

ಲೇಖಕರಿಗಿರುವ ಸಮಸ್ಯೆಗಳನ್ನು ಮುಖ್ಯವಾಗಿ ಎರಡು ದಲ್ಲಿ ವಿಂಗಡಿಸಬಹುದಾಗಿದೆ. (೧) ಗ್ರಂಥರಚನೆಯ ಯಕ್ಕೆ ಸಂಬಂಧಿಸಿದ ಸಮಸ್ಯೆಗಳು. (೨) ಗ್ರಂಥ ಕಾಶನಕ್ಕೆ ಸಂಬಂಧಪಟ್ಟ ಸಮಸ್ಯೆಗಳು. ಲೇಖಕರು ಥ ರಚಿಸುವೆವೆಂದು ಇಂದು ಏನಾದರೊಂದು ಬರೆದರೆ ದು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸಾಕಷ್ಟು ಮಟ್ಟದಲ್ಲಿ ನಿಲ್ಲದ ಕೃತಿಗೆ ಬೆಲೆಯೇ ಇಲ್ಲ. ಅದ ಗಿ ಯಾವ ವಿಷಯದಲ್ಲಿಯೇ ಆಗಲಿ, ಗ್ರಂಥ ರಚ ಕೈಯಿಕ್ಕಬೇಕಾದರೆ ಆ ವಿಷಯದ ಸಂಪೂರ್ಣ ಭ್ಯಾಸದ ಆವಶ್ಯಕತೆಯು ಲೇಖಕನಿಗೆ ಇರುತ್ತದೆ. ದೆ ಆ ಕ್ಷೇತ್ರದಲ್ಲಿ ಈವರೆಗೆ ಬಂದಿರುವ ಕೃತಿಗಳ ಅವ ಕನ ತೀರ ಅವಶ್ಯಕ. ಮೊದಲು ಬಂದಿರುವ ಗ್ರಂಥ ಗಿಂತ ಹೆಚ್ಚಿನ ವಿಷಯವನ್ನು ತಾನು ಒದಗಿಸುವಂತೆ ರೆ ಮಾತ್ರ ಕೃತಿರಚನೆಗೆ ಕೈಯಿಕ್ಕಬೇಕಾಗುವುದು. ದಿದ್ದರೆ ' ಹಾಡಿದ್ದನ್ನೇ ಹಾಡುವ ಕಿಸವಾಯಿದಾಸ 'ನ ಲಿನಲ್ಲಿ ಕೂಡಬೇಕಾಗುತ್ತದೆ. ಇದು ವಿಚಾರ ಸಾಹಿತ್ಯ ರ್ಜಿಸುವ ಲೇಖಕನ ಮುಂದಿರುವ ದೊಡ್ಡ ಸಮಸ್ಯೆ ಗಿದೆ. ಈ ಸಮಸ್ಯೆಯು ದೂರಗೊಳ್ಳಬೇಕಾದರೆ ಆ ಖಕರಿಗೆ ಅಭ್ಯಾಸಕ್ಕೆ ಅವಶ್ಯಕವೆನಿಸುವಂಥ ಗ್ರಂಥ ಸತ್ತಿಯುಳ್ಳ ಗ್ರಂಥಾಲಯದ ಆವಶ್ಯಕತೆಯು ಇರು ದೆ. ಇನ್ನೂ ಅಭ್ಯಾಸ ಮಾಡಿ, ಪೂರ್ಣ ತಿಳಿದು ಂಡು ಬರೆಯಬೇಕೆನ್ನುವ ನಿಷ್ಠೆಯಂತೂ ಲೇಖಕನಲ್ಲಿ ಬೇಬೇಕೆಂಬುದು ಬೇರೆ ವಿಷಯ. ಅದು ಅವನ ಮಾನ ಸಿದ್ಧತೆಗೆ ಸಂಬಂಧಪಟ್ಟ ಸಂಗತಿಯಾಗಿದೆ. ಆ ತೆಯಿಲ್ಲದ ಲೇಖಕನಿಗೆ ಸಮಸ್ಯೆಗಳೇ ಇಲ್ಲ. ಆದರೆ ಥ ಲೇಖಕನೇ ಒಬ್ಬನು ಸಾಹಿತ್ಯ ಕ್ಷೇತ್ರದಲ್ಲಿ ಸಮಸ್ಯೆ ಾಗಿ ಉಳಿಯುತ್ತಾನೆ. ಅವನಿಂದ ಭಾಷೆ, ಸಾಹಿತ್ಯ ಗೆ ವಿಶೇಷ ಕೊಡುಗೆಯೆಂಬುದೇನೂ ಸಲ್ಲದು. ಇಷ್ಟೇ , ಅಂಥ ಕೃತಿಗಳ ಪ್ರಕಾಶನ, ಮಾರಾಟಗಳಲ್ಲಿ ತೊಡ ನರ ಕಾಲ ಹಾಳು, ಶ್ರಮ ವ್ಯರ್ಥ, ಹಣ ಅಪವ್ಯಯ. ವಾಚಕರ ಅವಸ್ಥೆಯೂ ಸಹ ಹಾಗೆಯೇ. ಅದರಿಂದ ಇಂಥ ಕೃತಿ ರಚನೆಯಿಂದ ಲೇಖಕನು ಯಾವ ಪುರುಷಾರ್ಥವನ್ನೂ ಸಾಧಿಸಿದಂತೆ ಆಗುವುದಿಲ್ಲ.

ಆಳವಾದ ಅಭ್ಯಾಸ ಅಗತ್ಯ

ಇನ್ನು ಲೇಖಕನು ಇಂಥ ದೋಷಕ್ಕೆ ಪಕ್ಕಾಗಬಾರದೆಂದಾಗ ಆಳವಾದ ಅಭ್ಯಾಸಕ್ಕೆ ಆತ ತೊಡಗುವನು. ಈ ಅಭ್ಯಾಸ ಕೇವಲ ಶ್ರಮಸಾಧ್ಯವಲ್ಲ. ಅದಕ್ಕೆ ತಕ್ಕಷ್ಟು ಖರ್ಚು-ವೆಚ್ಚಗಳೂ ಇವೆ. ಒಮ್ಮೆ ಪ್ರಸಿದ್ಧ ಪತ್ರಿಕೆಯೊಂದರ ಮಾನ್ಯ ಸಂಪಾದಕರು ಒಂದು ವಿಷಯವನ್ನು ಕೊಟ್ಟು, ಸಾಕಷ್ಟು ಕಾಲಾವಕಾಶವನ್ನೂ ಇತ್ತು, ಒಂದು ಲೇಖನವನ್ನು ಬರೆದುಕೊಡಲು ಕೇಳಿದರು. ನನಗೂ ತುಂಬ ಉತ್ಸಾಹವಿತ್ತು. ಅಂಥ ದೊಡ್ಡವರು ಲೇಖನ ಕೇಳಿದ್ದಾರಲ್ಲ ನನ್ನ!—ಎಂಬ ಹೆಮ್ಮೆಯೂ ಮನದಲ್ಲಿ ಮೂಡಿತು. ಬರೆಯಲು ಒಪ್ಪಿ ಪತ್ರ ಬರೆದುಬಿಟ್ಟೆ. ನಾಲ್ಕಾರು ದಿನಗಳಲ್ಲಿ ಲೇಖನ ಆರಂಭಿಸಬೇಕೆಂದು ಸಿದ್ಧತೆಯನ್ನು ಮಾಡಿಕೊಳ್ಳುವಾಗ ನನ್ನ ತಿಳುವಳಿಕೆಯ ಹಾಗೂ ಸಾಧನ ಸಲಕರಣೆಗಳ ಕೊರತೆಯ ಅರಿವು ನನಗುಂಟಾಯಿತು. ಆಮೇಲೆ ವಿಷಯ ಸಂಗ್ರಹಿಸುವುದಕ್ಕೂ ಲೇಖನದ ಪೂರ್ವಸಿದ್ಧತೆಗೂ ತೊಡಗಿದೆ. ಸಮೀಪದ ಒಂದೆರಡು ಕಾಲೇಜುಗಳ ಗ್ರಂಥಾಲಯಗಳಿಗೆ ಶರಣು ಹೋದೆ. ವಿಷಯ ಸಂಗ್ರಹ ಸಾಕಷ್ಟು ಆಗಲಿಲ್ಲ. ಕೊನೆಗೆ ನೂರಾರು ರೂಪಾಯಿಗಳ ಪುಸ್ತಕಗಳನ್ನು ಕೊಂಡು ತರಿಸಬೇಕಾಯಿತು. ನಮ್ಮ ಮನೆಯ ಲೈಬ್ರರಿಗೆ ಇರಲೆಂದು ತರಿಸಿಕೊಂಡೆ. ಮುಂದೆ ತಿಂಗಳೊಪ್ಪತ್ತು ಶ್ರಮಪಟ್ಟು ಲೇಖನ ಸಿದ್ಧಗೊಳಿಸಿದೆ. ಕಳಿಸಿದೆ. ಲೇಖನವೇನೋ ಪ್ರಕಟವಾಯಿತು. ವಿದ್ವಾಂಸರಿಂದ ಒಳ್ಳೆಯ ಲೇಖನ, ಅಭ್ಯಾಸಪೂರ್ಣ ಬರಹ ಎಂದು ಮನ್ನಣೆಯನ್ನೂ ಪಡೆಯಿತು. ಜನರ ಮೆಚ್ಚಿಕೆಯನ್ನು ಗಳಿಸಿತು. ನನಗೂ ಸಮಾಧಾನವಾಯಿತು. ಆದರೆ ನನಗೆ ಬಂದ ಪ್ರತಿಫಲವೇನು ? ಮಾನಸಿಕ ಸಮಾಧಾನದ ಹೊರತಾಗಿ ಪ್ರಕಟವಾದ ನನ್ನ ಲೇಖನದ ಪತ್ರಿಕೆಯ ವಿಶೇಷ ಸಂಚಿಕೆಯೊಂದು ಮಾತ್ರ ! ಈ ಅನುಭವದಿಂದ, ಮುಂದೆ ಮತ್ತೊಬ್ಬರು ತಮ್ಮ ಪತ್ರಿಕೆಯ ದೀಪಾವಳಿ ಸಂಚಿಕೆಗೆ ಲೇಖನ ಕೇಳಿದಾಗ ಸಹಜ ಮನಸ್ಸಿಗೆ ಹೊಳೆದಷ್ಟು ಬರೆದು ಕಳಿಸುವ ಮನಸ್ಸಾಯಿತು. ಹಾಗೇ ಮಾಡಿದೆ. ಆಗ ಹಲವರಿಂದ ನೇರವಾಗಿ ಪತ್ರಗಳು

ಬಂದುವು : ' ನನ್ನ ಹೆಸರನ್ನು ನಿಮ್ಮ ಲೇಖನದಲ್ಲಿ ಉಲ್ಲೇಖಿಸಿಲ್ಲ. ನನ್ನ ಒಳ್ಳೆಯ ಕೃತಿಯ ಹೆಸರನ್ನು ಎತ್ತಿ ಹೇಳಿಲ್ಲ.' ' ಕನ್ನಡ ಕಾದಂಬರಿಗಳು ' ಎಂಬ ವಿಷಯವದು. ' ಈ ಲೇಖಕರಿಗೆ ಕಾದಂಬರಿ ಕ್ಷೇತ್ರದ ಪರಿಚಯವೇ ಇಲ್ಲ.' ಇಷ್ಟಕ್ಕೇ ಅದು ನಿಲ್ಲಲಿಲ್ಲ. ಇನ್ನೂ ಮುಂದೆ ಹೋಗಿ, ' ನೀವು ಇಂಥ ಗುಂಪಿಗೆ ಸೇರಿದ್ದೀರಿ. ನಿಮ್ಮವರ ಹೆಸರುಗಳನ್ನಷ್ಟೇ ಎತ್ತಿ ಹೇಳಿದ್ದೀರಿ ' ಎಂಬ ಆರೋಪಗಳಿಗೂ ತುತ್ತಾಗಬೇಕಾಯಿತು. ಇವೆಲ್ಲ ವಿಚಾರ ಸಾಹಿತ್ಯವನ್ನು ನಿರ್ಮಿಸುವ ಲೇಖಕನಿಗೆ ಇರುವ ಸಮಸ್ಯೆಗಳೇ ಅಲ್ಲವೆ ?

ಲಲಿತ ಸಾಹಿತ್ಯಕ್ಕೆ ಪ್ರತಿಭೆಯೊಂದೇ ಸಾಲದು

ಇನ್ನು ಲಲಿತ ಸಾಹಿತ್ಯ ಕೃತಿಗಳನ್ನು ರಚಿಸುವವರಿಗೆ ಇಂಥ ಸಮಸ್ಯೆಗಳೇನಿವೆ? ಕಾಗದ, ಪೆನ್ನುಗಳಿದ್ದರೆ ತೀರಿತು. ತಮ್ಮ ಪ್ರತಿಭೆಯ ಬಲದಿಂದ ಕವನವನ್ನೋ, ಕಥೆಯನ್ನೋ, ನಾಟಕ–ಕಾದಂಬರಿಗಳನ್ನೋ ಸಹಜ ಬರೆದುಬಿಡಬಹುದು, ಎಂದು ಹೇಳಿಬಿಡುತ್ತಾರೆ. ಆದರೆ ಅದೂ ಅಷ್ಟು ಸುಲಭದ ಕೆಲಸವಲ್ಲ. ಲಲಿತ ಸಾಹಿತ್ಯ ಕೃತಿಯನ್ನು ಯಾರೇ ನಿರ್ಮಿಸಲಿ, ಸಾಹಿತ್ಯದ ಯಾವ ವಿಭಾಗದಲ್ಲಿಯೇ ಕೃತಿರಚನೆ ಮಾಡಲಿ, ಆ ಕೃತಿಯೊಂದು ಆ ಭಾಷೆಗೆ, ಆ ಸಾಹಿತ್ಯಕ್ಕೆ ನೂತನ ಕೊಡುಗೆ ಎಂದು ಎನ್ನಿಸಬೇಕಾದರೆ ಲೇಖಕನ ಹೊಣೆಯೇನೂ ಕಡಿಮೆಯಾಗುವುದಿಲ್ಲ. ತಾನು ರಚಿಸಲಿರುವ ಸಾಹಿತ್ಯ ವಿಭಾಗದ ಹಿಂದಿನ ವಿಕಾಸವೆಲ್ಲ ಅವನಿಗೆ ಗೊತ್ತಿರಬೇಕು. ಇಷ್ಟೇ ಅಲ್ಲ, ನೆರೆ ಹೊರೆಯ ಭಾಷೆಗಳ ಶ್ರೇಷ್ಠ ಕೃತಿಗಳ ಪರಿಚಯ ಬೇಕು. ಸಾಹಿತ್ಯದ ಆ ಅಂಗವು ಜಾಗತಿಕ ದೃಷ್ಟಿಯಿಂದ ಎಷ್ಟು ಪುಷ್ಟಗೊಂಡಿದೆ, ಎಂಥೆಂಥ ಕೃತಿಗಳು ಬಂದಿವೆ, ಅಲ್ಲಿ ಯಾವ ಯಾವ ವಿಶಿಷ್ಟ ತಂತ್ರಗಳು ರೂಪುಗೊಂಡಿವೆ, ಪ್ರತಿಮೆ, ಸಂಕೇತ, ಪ್ರತಿಭೆಗಳು ಹೇಗೆ ವ್ಯಕ್ತವಾಗಿವೆ, ಜೀವನ ದೃಷ್ಟಿ ಹೇಗೆ ಮೂಡಿದೆ— ಈ ಎಲ್ಲ ಸಂಗತಿಗಳನ್ನು ಅರಿತುಕೊಳ್ಳಲಿಕ್ಕೆ ಬೇಡವೆ? ಅಂಥ ಶ್ರೇಷ್ಠ ಕೃತಿಗಳ ಸಾಲಿನಲ್ಲಿ, ಒಂದು ಹೆಜ್ಜೆ ಮುಂದೆ ನಿಲ್ಲುವಂಥ ಕೃತಿ ರಚಿಸಬೇಕಲ್ಲವೆ? ಅಂಥ ಕೃತಿ ರಚನೆ ಮಾಡುವಾಗ ಅಭ್ಯಾಸ, ಅನುಭವಗಳ ವಿಪುಲ ಸಾಮಗ್ರಿಗಳ ಆವಶ್ಯಕತೆಯು ಲೇಖಕನಿಗೆ ಇದ್ದೇ ಇರುತ್ತದೆ. ಅದಕ್ಕಾಗಿ ಲಲಿತ ಸಾಹಿತ್ಯ ನಿರ್ಮಿಸುವವರ ಹೊಣೆಗಾರಿಕೆಯೇನೂ ಕಡಿಮೆಯದೆಂದು ಹೇಳಲಿಕ್ಕೆ

ಆಗುವದಿಲ್ಲ. ಇಂಥ ಗುರುತರ ಹೊಣೆಯನ್ನು
ಕೃತಿರಚನೆಯನ್ನು ಮಾಡಲು ಅವಕಾಶ, ಅನು
ಗಳು ಎಲ್ಲಿವೆ, ಕನ್ನಡ ನಾಡಿನಲ್ಲಿ ? ಅಂಥ ಮೇಧಾ
ತಮ್ಮ ಸಾಹಿತ್ಯ ನಿರ್ಮಿತಿಯಲ್ಲಿ ತಾವು ತನ್ಮಯರಾ
ಋಷಿಸದೃಶ ಜೀವನವನ್ನು ಕಳೆಯಲು ಅ
ವಿದೆಯೇ ನಮ್ಮಲ್ಲಿ ? ನಮ್ಮ ನಾಡಿನಲ್ಲಿ ಲೇಖನ
ವ್ಯವಸಾಯವೆನಿಸುವಂಥ ಸ್ಥಿತಿಯನ್ನು ಪಡೆದಿಲ್ಲ.
ಸ್ಸಿನ ಸಮಾಧಾನಕ್ಕಾಗಿ, ಸಂತೋಷಕ್ಕಾಗಿ ಸಾ
ಸೇವೆಯನ್ನು ಮಾಡುವವರೇ ಬಹುಜನರು. ಹೊ
ಪಾಡಿಗಾಗಿ ಒಂದು ಉದ್ಯೋಗವನ್ನೂ ಅವಲ
ಉಳಿದ ಅಲ್ಪ ಸ್ವಲ್ಪ ಕಾಲದಲ್ಲಿ ಗ್ರಂಥರಚನೆ
ಮಾಡುವ ಲೇಖಕರೇ ಕನ್ನಡ ನಾಡಿನಲ್ಲಿ ಬಹು
ದ್ದಾರೆ. ಇಂಥವರಿಂದ ವಿಶ್ವ ಸಾಹಿತ್ಯಕ್ಕೆ ಅ
ಸಾಹಿತ್ಯ ಕೃತಿಯ ಕೊಡುಗೆ ಸಲ್ಲುವ ಬಗೆ
' ನೀವು ಓದಿರಿ, ಅಭ್ಯಾಸ ಮಾಡಿರಿ, ವಿಚಾರಿಸಿರಿ
ರಚನೆ ಮಾಡಿರಿ ; ನಿಮ್ಮನ್ನು ನಿಮ್ಮ ಸಂಸಾ
ನಾವು ನೋಡಿಕೊಳ್ಳುತ್ತೇವೆ. ಅದರ ಚಿಂತೆ
ಬೇಡ, ' ಎನ್ನುವ ಸಂಸ್ಥೆಯಾಗಲಿ, ವಿಶ್ವವಿದ್ಯಾ
ಗಳಾಗಲಿ, ಸರಕಾರವಾಗಲಿ, ಗ್ರಂಥ ಪ್ರಕಾಶನ
ಗಳಾಗಲಿ ಇವೆಯೆ ? ಇಲ್ಲ. ಅಂದಮೇಲೆ ಯಾವ
ರದ ಮೇಲೆ ಇಂದಿನ ಅರ್ಥಪ್ರಧಾನ ಯುಗದಲ್ಲಿ
ಕನು ಕೃತಿರಚನೆಯಲ್ಲಿ ಸಂಪೂರ್ಣ ಶ್ರದ್ಧೆ ಶಕ್ತಿ
ಉಪಯೋಗಿಸಿ ದುಡಿಯಬೇಕು ? ಇಂಥ ಹಲ
ಸಮಸ್ಯೆಗಳು ಲೇಖಕನಿಗೆ ಪ್ರಾರಂಭದಲ್ಲಿಯೇ ಎದು
ವವು. ಇವು ಗ್ರಂಥರಚನೆಗೆ ಸಂಬಂಧಪಟ್ಟ
ಸಮಸ್ಯೆಗಳಾದುವು.

ಗ್ರಂಥರಚನೆಯಾದಮೇಲೆ

ಇನ್ನು ಲೇಖಕನು ಗ್ರಂಥ ರಚಿಸಿದ ಮೇಲೆ ಅ
ಮುದ್ರಿಸಿ, ಪ್ರಕಟಿಸಿ, ಮಾರಾಟ ಮಾಡುವವರೆಗೆ
ವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.
ನಾಡಿನಲ್ಲಿ ಯಾವ ಪ್ರಕಾಶಕನೂ " ಇಂಥ ವಿ
ಮೇಲೆ ಗ್ರಂಥ ಬರೆದು ಕೊಡಿರಿ ; ಪ್ರಕಟಿಸುತ್ತೇ
ಇಂತಿಷ್ಟು ಪ್ರತಿಫಲ ಸಲ್ಲಿಸುತ್ತೇವೆ, "—ಎಂದು ಲ
ರನ್ನೂ ಕೇಳುತ್ತ ಬರುವುದಂತೂ ಇಲ್ಲವೇ ಇಲ್ಲ.
ಕರೇ ತಮ್ಮ ಕೃತಿಗೆ ಪ್ರಕಾಶಕರನ್ನು ಹುಡು
ಪ್ರಾರ್ಥಿಸುತ್ತ ಅವರ ದುಂಬಾಲು ಬಿದ್ದು, ಮನೆ

ಸಂದರ್ಭಗಳೇ ಇವೆ. ಇಂಥ ಪ್ರಸಂಗದಲ್ಲಿ ಮಕ್ಕೆ ಪ್ರತಿಫಲವನ್ನಾಗಲಿ, ಗೌರವಧನವನ್ನಾ ಕನು ಬಯಸುವ ವಿಷಯವಂತೂ ದೂರವೇ ; ತನ್ನ ಗುರು-ಹಿರಿಯರಿಗೂ ಸ್ನೇಹಿತರಿಗೂ ಾಗಿ ಕೊಡಲು ಕಾಂಪ್ಲಿಮೆಂಟರಿ ಪ್ರತಿಗಳಿಗಾ ಾಚಿಸಬೇಕಾಗುತ್ತದೆ. ಈ ಸ್ಥಿತಿಯು ಲೇಖಕ ವುದರಿಂದ ಬರಹಗಾರನಾಗಿ ಜೀವನ ಸಾಗಿಸುತ್ತೇ ೂರಡುವುದು ಎಂಥ ವಿದ್ಯಾವಂತನಿಗೂ ಕನ್ನಡ ಸಾಧ್ಯ ಕಾಣದು. ಅದರಿಂದ ನಮ್ಮಲ್ಲಿಯ ಬಹು ಜನರು ಯಾವುದಾದರೊಂದು ದಲ್ಲಿ ಇದ್ದು, ವಿರಾಮ ಕಾಲದಲ್ಲಿ ಗ್ರಂಥ ರಚಿ ್ಯಾಸದಲ್ಲಿ ಇರುವರು. ಅದರಿಂದ ತುಂಬ ಪರಿ ಸಿ, ಸಂಪೂರ್ಣ ಶಕ್ತಿಯನ್ನು ಕ್ರೋಢೀಕರಿಸಿ ಸಲು ಅವರಿಗೆ ಸಾಧ್ಯವಾಗುವುದಿಲ್ಲ. ಆದಕ್ಕಾಗಿ ುಟ್ಟದ ಕೃತಿಗಳ ನಿರ್ಮಿತಿ ಕಡಿಮೆಯಾಗು ಹಿತ್ಯದ ಮಟ್ಟ ಕೆಳಗಿಳಿಯುತ್ತದೆ.

ರ ಸ್ವಭಾವ

ನ ಉದ್ಯಮವನ್ನು ಕೈಕೊಂಡವರು, ಸ್ವಲ್ಪ ಅಲ್ಪ ಬಂಡವಾಳ ತೊಡಗಿಸಿ, ತುಸು ದಿನ ಹೆಚ್ಚು ಲಾಭ ಗಳಿಸುವ ದೃಷ್ಟಿಯನ್ನು ಇಟ್ಟು ುದು ಸ್ವಾಭಾವಿಕ. ಯಾವ ಉದ್ಯೋಗ ದೂ ಈ ದೃಷ್ಟಿಯು ಇದ್ದೇ ಇರುತ್ತದೆ. ಅದ ಕಾಶವಾಗಿ, ಬಹುದಿನಗಳವರೆಗೆ ಮಾರಾಟ ಚಾರ ಸಾಹಿತ್ಯ ಕೃತಿಗಳಿಗೆ ಪ್ರಕಾಶಕರು ಲಭಿ ಷ್ಟಸಾಧ್ಯ. ಲಲಿತ ಸಾಹಿತ್ಯದ ಪ್ರಕಾಶಕರೇ ಅದರಲ್ಲಿಯೂ ಕಾದಂಬರಿಗಳಿಗೇ ಗಿರಾಕಿಗಳು ಅವುಗಳನ್ನೇ ಪ್ರಕಟಿಸಲು ಮುಂದಾಗುತ್ತಾರೆ. ಬಹು ಪರಿಶ್ರಮವಹಿಸಿ, ಅನೇಕ ವರ್ಷಗಳ ಯಿಂದ ಅಭ್ಯಾಸಮಾಡಿ, ವಿಚಾರ ಸಾಹಿತ್ಯದ ತಿಯೊಂದದ್ದು ಲೇಖಕನು ನಿರ್ಮಿಸಿದನೆನ್ನುವ. ಮೌಲ್ಯವನ್ನು ಪ್ರಕಾಶಕನು ಅರಿತುಕೊಳ್ಳು ಕನು ತನ್ನ ಕೃತಿಯು ಸುಂದರವಾಗಿ ಪ್ರಕಟ ತಪ್ಪಿಲ್ಲದಂತೆ ಮುದ್ರಣವಾಗಬೇಕು, ವಿದ್ವಾಂ ಕೃತಿಯು ಹೋಗಬೇಕು ಅಲ್ಲದೆ ಅದಷ್ಟು ಟವಾಗಬೇಕು — ಎಂದು ಅಪೇಕ್ಷಿಸುವುದು . ಲೇಖಕನ ಇಂಥ ಭಾವನೆಯ ಲಾಭವನ್ನು ಚತುರನಾದ ಪ್ರಕಾಶಕನು ಪಡೆಯದೆ ಇರುತ್ತಾನೆಯೇ? ಕಿರ ತುಸು ಗೌರವ ಧನವನ್ನು ಕೊಟ್ಟು, ಗ್ರಂಥವನ್ನು ಮುದ್ರಣಕ್ಕೆಂದು ಸ್ವೀಕರಿಸುವನು. ಅದರಿಂದ ತಾನು ತುಂಬ ಲಾಭ ಗಳಿ ಸುವನು. ಲೇಖಕನಾದವನಿಗೆ ನೂರಕ್ಕೆ ಐದೋ ಹತ್ತೋ ರೂಪಾಯಿಗಳನ್ನು ಸಲ್ಲಿಸುವ ಉದಾರತೆಯನ್ನು ತೋರಿ ಸುವನು. ಅದೂ ಕಂತುಗಳ ಮೇಲೆ. ಇಲ್ಲದಿದ್ದರೆ ನೂರಿನ್ನೂರು ರೂಪಾಯಿಗಳನ್ನು ಸಲ್ಲಿಸಿ ಹಸ್ತಪ್ರತಿ ಯನ್ನೂ ಸ್ವೀಕರಿಸುವನು. ಅದೇ ಗ್ರಂಥ ಮಾರಾಟ ಮಾಡುವ ಅಂಗಡಿಕಾರನಿಗೆ ಮಾತ್ರ ಗ್ರಂಥದ ಮುಖ ಬೆಲೆಯ ಮೇಲೆ ನೂರಕ್ಕೆ ಮೂವತ್ತು ನಲವತ್ತರಷ್ಟು ಕಮಿಷನ್ನು ದೊರೆಯುವುದು. ಅದರಿಂದ ಲೇಖಕನಾಗು ವದಕ್ಕಿಂತ ಮಾರಾಟಗಾರನಾಗುವುದು ಹೆಚ್ಚು ಲಾಭಕರ ವೆಂದು ಭಾವಿಸಿದರೆ ತಪ್ಪೇನಿಲ್ಲ. ಹತ್ತು ರೂಪಾಯಿ ಬೆಲೆಯ ಒಂದು ಪುಸ್ತಕವನ್ನು ಬರೆದ ಲೇಖಕನಿಗೆ ಒಂದು ಪ್ರತಿಗೆ ಒಂದು ರೂಪಾಯಿ ದೊರೆತರೆ ಅವನ ಪುಣ್ಯ. ಆದರೆ ಒಂದು ಪ್ರತಿಯನ್ನು ಮಾರಿದರೆ ವ್ಯಾಪಾರಿಗೆ ಮೂರೋ ನಾಲ್ಕೋ ರೂಪಾಯಿಗಳು ದೊರೆಯುವುದು ನಿಶ್ಚಿತ. ಕನ್ನಡ ಸಾಹಿತ್ಯ ಪ್ರಪಂಚ ಇಷ್ಟು ವಿಸ್ತಾರ ವಾಗಿದ್ದರೂ ಈ ದುರವಸ್ಥೆಯು ಲೇಖಕನಿಗೆ ಇನ್ನೂ ಇದ್ದೇ ಇದೆ.

ಸ್ವಯಂ ಪ್ರಕಾಶನ—ಪರಿಣಾಮ

ಈ ಸ್ಥಿತಿಯನ್ನು ಕಂಡು, ಅನುಭವಿಸಿದ ಅನೇಕ ಜನ ಲೇಖಕರು ತಮ್ಮ ಕೃತಿಗಳನ್ನು ತಾವೇ ಪ್ರಕಟಿಸಲು ಮುಂದೆ ಬರುತ್ತಾರೆ. ಸಾಕಷ್ಟು ದುಡ್ಡು ಹಾಕುತ್ತಾರೆ. ಮುದ್ರಣಾಲಯಗಳಿಗೆ ಎಡತಾಕುತ್ತಾರೆ. ಅಚ್ಚಿನ ಕರಡು ಗಳನ್ನು ತಿದ್ದುತ್ತಾರೆ. ಸುಂದರವಾಗಿ ಮುದ್ರಿಸಿ ಸಿದ್ಧ ಗೊಳಿಸುತ್ತಾರೆ. ತಾವು ಮುದ್ರಿಸಿದ ಪುಸ್ತಕಗಳನ್ನು ಮನೆಯಲ್ಲಿ ತಂದು ಒಟ್ಟಿ ಇಡುತ್ತಾರೆ. ಮುದ್ರಣಾಲಯ ದಲ್ಲಿ ಹೆಚ್ಚು ದಿನ ಇಟ್ಟರೆ ಅವರು ಸ್ಥಳಕ್ಕೆ ಬಾಡಿಗೆ ಕೇಳು ತ್ತಾರೆ. ಬ್ಯಾಂಕಿನವರಂತೂ ಪುಸ್ತಕಗಳನ್ನು ಅಡವು ಇಟ್ಟುಕೊಂಡು ಸಾಲ ಕೊಡುವುದಿಲ್ಲ. ಬಿಳಿಯ ಹಾಳೆ ಗಳಿದ್ದರೆ ತನ್ನಿ, ಇಟ್ಟುಕೊಳ್ಳುತ್ತೇವೆ, ಎನ್ನುವರು. ಮುದ್ರಿಸಿ ಬಂಗಾರದಂಥ ಹಾಳೆಗಳನ್ನು ಕೆಡಿಸಿದ್ದೀರಿ, ಅವು ಗಳಿಗೆ ಯಾರು ಸಾಲ ಕೊಟ್ಟಾರು ಎಂದು ಕೇಳುವರು. ಆಗ ಪ್ರಕಾಶಕನಾದ ಲೇಖಕ ಕಕ್ಕಾಬಿಕ್ಕಿಯಾಗುವನು.

ಕಾಂಪ್ಲಿಮೆಂಟರಿ ಪ್ರತಿಗಳನ್ನು ಎಷ್ಟು ಕೊಟ್ಟಿರುವನೋ ಅಷ್ಟೇ ಪ್ರತಿಗಳು ಖರ್ಚಾಗಿರುತ್ತವೆ. ಕೊನೆಗೆ ಬೇಸತ್ತು ಪುಸ್ತಕ ವ್ಯಾಪಾರಿಗೋ, ವ್ಯಾಪಾರ-ಪ್ರಕಾಶನಗಳೆರಡನ್ನೂ ಸಾಧಿಸಿಕೊಂಡ ಪ್ರಕಾಶಕರಿಗೋ ಲೇಖಕನು ತನ್ನ ಪುಸ್ತಕ ಮಾರಾಟ ಮಾಡಿಕೊಡಲು ಗಂಟುಬೀಳುವನು. ಆಗ ಆ ಪ್ರಕಾಶಕನು ಮನದಲ್ಲಿಯೇ ನಗುವನು. ಅರ್ಧ ಬೆಲೆಯಲ್ಲಿ ಎಲ್ಲ ಪುಸ್ತಕ ಕೊಳ್ಳಲು ಸಿದ್ಧನಾಗುವನು. ಹಣ ಮಾತ್ರ ಪುಸ್ತಕಗಳು ಮಾರಾಟವಾದಂತೆ ಸಲ್ಲಿಸುವದಾಗಿ ಹೇಳುವನು. ಆಗ ತನ್ನ ಪುಸ್ತಕವನ್ನು ಪ್ರಕಟಿಸಿದ ಲೇಖಕನ ಬಾಯಿ ಬೆಳ್ಳಗಾಗುವುದು. ಮನೆಯಲ್ಲಿ ಸ್ಥಳಾವಕಾಶವಿಲ್ಲದ ಲೇಖಕ ತಾನೇ ಬಂಡಿಯ ಬಾಡಿಗೆ ಕೊಟ್ಟು, ಆ ಪುಸ್ತಕಗಳನ್ನೆಲ್ಲ ಒಯ್ದು ಮಾರಾಟ ಮಾಡಲು ಒಪ್ಪಿಸಿ ಬರುವನು. ಒಮ್ಮೆ ಈ ಭಾರ ಇಳಿದರೆ ಸಾಕೆನ್ನುವನು. ವ್ಯಾಪಾರಿಯು ಅನಾಯಾಸವಾಗಿ ಈ ಸಂಪತ್ತಿಗೆ ಒಡೆಯನಾಗುವನು. ತರುವಾಯ ಲೇಖಕನು ತನ್ನ ಗೆಳೆಯರಿಗೋ ಮತ್ತಾರಿಗಾದರೋ ಕಾಣಿಕೆಯಾಗಿ ಒಂದು ಪ್ರತಿಯನ್ನು ಕೊಡಲು ಅಪೇಕ್ಷಿಸಿದಲ್ಲಿ ಅದೇ ವ್ಯಾಪಾರಿಯ ಹತ್ತಿರ ತನ್ನ ಪುಸ್ತಕವನ್ನು ತಾನೇ ಕೊಂಡುಕೊಳ್ಳಬೇಕಾಗುವುದು. ಆಗ ಲೇಖಕನು ಪೂರ್ಣ ಬೆಲೆಯನ್ನು ಸಲ್ಲಿಸಬೇಕಾಗುವುದು. ಇವನು ತನ್ನ ಪುಸ್ತವನ್ನು ತಿರುಗಿ ಕೊಳ್ಳುವಾಗ ಮಾತ್ರ ಕಮಿಷನ್ನು ದೊರೆಯದು. ಇದು ಲೇಖಕನು ಪ್ರಕಾಶನ ಕ್ಷೇತ್ರದಲ್ಲಿ ಹೆಜ್ಜೆಯನ್ನು ಇಟ್ಟಾಗ ಅನುಭವಿಸಬೇಕಾದ ಸಮಸ್ಯೆಗಳಲ್ಲಿ ಒಂದಾಗಿದೆ. ಲೇಖಕನ ಹಣವೂ ಹೋಯಿತು, ಗುಣವೂ ಹೋಯಿತು ಎನ್ನುವ ಸ್ಥಿತಿಯಿದು.

ಬರವಣಿಗೆ ಉದ್ಯೋಗವಲ್ಲ

ಯಾವ ಸಾಹಿತಿಯೂ ತಾನು ಬರವಣಿಗೆಯನ್ನು ಒಂದು ಉದ್ಯೋಗವನ್ನಾಗಿ ಮಾಡಿಕೊಳ್ಳಬೇಕೆಂದು ಯೋಜನೆಯನ್ನು ಹಾಕಿಕೊಂಡು ಸಾಹಿತಿಯಾಗಲಿ, ಲೇಖಕನಾಗಲಿ ಆಗಿರುವುದಿಲ್ಲ. ಸಾಹಿತಿಯಾಗುವುದಕ್ಕೆ ಒಂದು ವಿಶಿಷ್ಟ ತರದ ಮನೋಧರ್ಮವೇ ಬೇಕಾಗುತ್ತದೆ. ಆ ಮನೋಧರ್ಮದ ಲಕ್ಷಣಗಳನ್ನು ಇಲ್ಲಿ ವಿವರಿಸುವುದಕ್ಕೆ ಇಲ್ಲಿ ಅವಕಾಶವಿಲ್ಲ. ಆ ವಿಷಯವೇ ಬೇರೆ. ಇಲ್ಲಿಯ ವಿಷಯ ಬೇರೆ. ನಿಜವಾದ ಸಾಹಿತಿಯು ಪ್ರಾರಂಭದಲ್ಲಿ ಪ್ರತಿಫಲದ ಅಪೇಕ್ಷೆಯನ್ನೇ ಇಟ್ಟುಕೊಂಡಿರುವುದಿಲ್ಲ. ಆದರೆ ಬರಬರುತ್ತ ಇದು ಒಂದು ಹಣದ ವ್ಯವಹಾರವುಳ್ಳ ಕ್ರಿಯೆ ಎಂಬುದನ್ನು ಅರಿಯು ತ್ತಾನೆ. ಆಗ ತನ್ನ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಅಪೇಕ್ಷಿಸಲು ತೊಡಗುತ್ತಾನೆ. ಆದರೆ ಆ ಹಣಕ್ಕೆಂದೇ ಅವನು ಕೃತಿರಚನೆಯನ್ನು ಮಾಡಿರುವುದಿಲ್ಲ. ಈಗ ಹಣಕ್ಕಾಗಿಯೇ ದಿನಾಲು ಇಷ್ಟು ಪುಟಗಳನ್ನು ಬರೆಯು ವುದೆಂದು ನಿಯಮ-ನಿಬಂಧಗಳನ್ನು ಹಾಕಿಕೊಂಡ ಲೇಖಕರ ವಿಷಯವೇ ಬೇರೆ. ಸಾಹಿತ್ಯ ಆತ್ಮದ ಉಸಿರಾಗಿ, ಅನುಭವದ ಸಾರವಾಗಿ ಪ್ರತಿಫಲಿಸಬೇಕೆಂಬ ಮಾತು ಅಂಥವರಿಗೆ ಅನ್ವಯಿಸುವುದಿಲ್ಲ. ವ್ಯವಹಾರವನ್ನೇ ಹೂಡಿದ ಈ ಬರಹಗಾರರು ಸಹ ಪ್ರಕಾಶಕರ ಜೊತೆಗೆ ವ್ಯವಹರಿಸುವಾಗ ಸಹಜ ಮೋಸ ಹೋಗುವುದುಂಟು. ಒಂದು ಸಾವಿರ ಪ್ರತಿಗಳಿಗೆಂದು ಗೌರವಧನವನ್ನು ಕೊಟ್ಟು, ಎರಡೋ ಮೂರೋ ಸಾವಿರ ಪ್ರತಿಗಳನ್ನು ಮುದ್ರಿಸುವ ಪ್ರಕಾಶಕರಿಗೇನೂ ಕೊರತೆಯಿಲ್ಲ. ಒಂದು ಸಾವಿರ ಪ್ರತಿಗಳನ್ನು ಮುದ್ರಿಸಿದ್ದೇನೆನ್ನುವ ಪ್ರಕಾಶಕನು ಮೊದಲ ಆವೃತ್ತಿಯು ಪ್ರಕಟವಾಗಿ ಹತ್ತು ವರ್ಷ ಕಳೆದ ಮೇಲೂ ಇನ್ನೂ ಒಂಬತ್ತುನೂರೋ ಒಂಬತ್ತು ನೂರ ಐವತ್ತೋ ಪ್ರತಿಗಳು ಇವೆಯೆಂದು ಲೇಖಕನಿಗೆ ತಿಳಿಸುವುದುಂಟು. ಲೇಖಕನಿಗೆ ಇದು ಒಂದು ಸಮಸ್ಯೆಯೇ ಅಲ್ಲವೆ?

ಕೃತಿ ಮೂಲೆಗುಂಪಾಗುವ ಸ್ಥಿತಿ

ಇನ್ನೊಂದು ಸಂದರ್ಭದಲ್ಲಿ ಪ್ರಕಾಶಕನು ಐವತ್ತೋ, ನೂರೋ ರೂಪಾಯಿಗಳನ್ನು ಲೇಖಕನಿಗೆ ಸಲ್ಲಿಸಿ ಹಸ್ತಪ್ರತಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಾನೆ. ಮುಂದೆ ಹತ್ತಾರು ವರ್ಷಗಳಾದರೂ ಆ ಕೃತಿಯನ್ನು ಮುದ್ರಿಸಿ ಪ್ರಕಟಿಸುವುದೇ ಇಲ್ಲ. ಲೇಖಕ ಗ್ರಂಥ ಮುದ್ರಣಕ್ಕಾಗಿ ಪ್ರಕಾಶಕರ ಬಾಗಿಲಿಗೆ ಎಡತಾಕ ಹತ್ತುವನು. ಆಗ ಪ್ರಕಾಶಕರು ತಮಗಿರುವ ಆರ್ಥಿಕ ತೊಂದರೆಗಳನ್ನು ಮುಂದೊಡ್ಡುವರು. ಲೇಖಕರಿಗೆ ತಮ್ಮ ಕೃತಿ ಬೇಗ ಪ್ರಕಟವಾಗಬೇಕೆಂದು ಅಪೇಕ್ಷೆ. ಇಂಥ ಸಂದರ್ಭದಲ್ಲಿ ಪ್ರತಿಫಲದ ಅಪೇಕ್ಷೆಯಂತೂ ದೂರವೇ ಉಳಿಯಿತು. ತನ್ನ ಗ್ರಂಥ ಮುದ್ರಣಕ್ಕಾಗಿ ಪ್ರಕಾಶಕರಿಗೆ ಲೇಖಕರೇ ಹಣವನ್ನು ಒದಗಿಸಲು ಮುಂದಾಗುವ ಸಂದರ್ಭಗಳೂ ಇಲ್ಲದೆ ಇಲ್ಲ.

ಹೊಸಬರ ಬವಣೆ

ಲೇಖಕನು ಇಂಥ ಹತ್ತಾರು ಸಮಸ್ಯೆಗಳನ್ನು ಎದುರಿಸಿ,

ವನ್ನು ಮುದ್ರಿಸಿ ಪ್ರಕಟಿಸುತ್ತಾನೆ. ನಾಡಿನ ಜನ
ಸಾಹಿತಿಗಳೆಂಬವರಿಗೆ ನೂರಾರು ಪ್ರತಿಗಳನ್ನು
ಯಾಗಿ. ಓದಿ ಅಭಿಪ್ರಾಯ ತಿಳಿಸಲಿ
ದರ್ಶನ ಮಾಡಲಿ ಎಂದು ಕಳಿಸುತ್ತಾನೆ;
ಗಳಿಗೂ ವಿಮರ್ಶೆಗೆಂದು ಪ್ರತಿಗಳನ್ನು ಕಳಿಸು
ಆದರೆ ನಾಡಿನ ಈ ಎಲ್ಲ ಜನರೂ ಮೌನವನ್ನೇ
ತ್ತಾರೆ. ಯಾವ ಕಡೆಯಿಂದಲೂ ಪ್ರತಿ
ಯೇ ಇಲ್ಲ. ಆಗ ಆ ಲೇಖಕನು ತನ್ನಿಂದ ತಾನೇ
ನುಗೊಳ್ಳುತ್ತಾನೆ. ನಿರುತ್ಸಾಹಿಯೂ ಆಗು
ದೊಡ್ಡವರು ಪುಸ್ತಕವನ್ನು ಓದಿ ನೋಡಲು
ಕೆಲವೊಂದು ಹಣವನ್ನು ಅಪೇಕ್ಷಿಸುತ್ತಾರೆಂಬ
ಪಾಪ ಆ ಹೊಸಬನಾದ ಲೇಖಕನಿಗೇನು ಗೊತ್ತು?
ಅವನು ಪ್ರಾರಂಭದಲ್ಲಿಯೇ ದಿಙ್ಮೂಢನಾಗು
ಮುಂದೆ ದಾರಿಗಾಣದವನಾಗುತ್ತಾನೆ.

ಖಕನೇ ಪ್ರಕಾಶಕನಾಗಲು ಹವಣಿಸಿದಾಗ
ದು ತೊಡಕು ಸಂಭವಿಸುವ ಸಂದರ್ಭವಿದೆ. ಈ
ನಿಗೆ ಮಾರಾಟದ ವ್ಯವಸ್ಥೆಯಂತೂ ಇರುವುದಿಲ್ಲ.
ಣದ ಅನುಭವವೂ ಅಷ್ಟಕ್ಕಷ್ಟೇ. ಏನೋ
ಪಟ್ಟು ಗ್ರಂಥವನ್ನು ರಚಿಸಿರುತ್ತಾನೆ. ಮುದ್ರ
ಕಾಗುವ ಹಣವನ್ನು ಹೊಂದಿಸಿಕೊಂಡಿರುತ್ತಾನೆ.
ಮುಂದಿನ ಅನುವು ಆಪತ್ತುಗಳ ಕಲ್ಪನೆಯು ಇವ
ನಿಗೆ ಇರುವುದಿಲ್ಲ. ಗ್ರಂಥ ಮುದ್ರಿಸಿಯಾದ ಮೇಲೆ
ಕೆಲವೊಂದು ಪ್ರತಿಗಳನ್ನು ಕೈಯಲ್ಲಿ ಹಿಡಿದುಕೊಂಡು,
ಅಂಗಡಿಗಳಿಗೆ ಮಾರಾಟಕ್ಕೆಂದು ಕೊಡಲು ಅಲೆಯು
ತ್ತಾನೆ. ಅಷ್ಟರಲ್ಲಿ ಯಾವ ಮಾಯೆಯಿಂದಲೋ ಆ
ಪುಸ್ತಕದ ಪ್ರತಿಗಳು ಅಂಗಡಿಕಾರನಿಗೆ ಲಭಿಸಿರುತ್ತವೆ!
ಇವನು ತನ್ನ ಆತ್ಮೀಯ ಸ್ನೇಹಿತರಿಗೂ ಹಣ ಸಹಾಯ
ಮಾಡಿದವರಿಗೂ ಮಾರಿಸಿ ಕೊಡಲೆಂದು ಕೆಲವೊಂದು
ಪ್ರತಿಗಳನ್ನು ಹಂಚಿರುತ್ತಾನಷ್ಟೆ. ಅದರಿಂದ ಯಾರಿಂದ
ಪ್ರತಿಗಳು ಪೇಟೆಗೆ ಬಂದವೆಂಬುದೇ ತಿಳಿಯುವುದಿಲ್ಲ.
ಪ್ರೆಸ್ಸಿನಿಂದ ಪರಭಾರೆ ಬಂದುವೋ, ಸ್ನೇಹಿತರು ತಂದು
ಕೊಟ್ಟರೋ ಯಾವುದೂ ತಿಳಿಯದೆ ಹೋಗುತ್ತದೆ.
ಇಂಥ ಕಳ್ಳ ಪೇಟೆಯ ವ್ಯವಹಾರವನ್ನು ಅಡಗಿಸಲೆಂದು
ಈ ಲೇಖಕ ಪ್ರಕಾಶಕನಿಂದಲೂ ಕೆಲಪ್ರತಿಗಳನ್ನು
ಉದ್ದರಿಯಾಗಿ ಮಾರಲು ಇಟ್ಟುಕೊಂಡು, ಅವುಗಳ
ಆಶ್ರಯದಲ್ಲಿ ತಮ್ಮಲ್ಲಿದ್ದ ಪ್ರತಿಗಳನ್ನು ಮಾರಲು
ಸುಗಮ ದಾರಿಯನ್ನು ಮಾಡಿಕೊಳ್ಳುವ ಸಂಭವವೂ
ಇದೆ.

ಇಂಥ ಹಲವು ಸಮಸ್ಯೆಗಳನ್ನು ಎದುರಿಸಿ ಲೇಖಕನು
ಇಂದು ಬದುಕಿ ಬಾಳಬೇಕಾಗಿದೆ. ಬೆಳೆಯಬೇಕಾಗಿದೆ.
ಆದರೂ ಈಗೀಗ ಇಂಥ ಸಮಸ್ಯೆಗಳೆಲ್ಲ ಸ್ವಲ್ಪ ಮಟ್ಟಿಗೆ
ದೂರಾಗತ್ತಲಿವೆ. ಇದು ಕನ್ನಡದ ಶುಭೋದಯವಾಗಿದೆ.

ಪುಸ್ತಕಗಳು

ಪುಸ್ತಕಗಳು, ಸಂತನಿರುವ ಅಥವಾ ಇದ್ದಾನೆಂದು ನಂಬಲಾದ ದೇವ
ಮಂದಿರಗಳು.

—ಫ್ರಾನ್ಸಿಸ್ ಬೇಕನ್

ಪುಸ್ತಕಗಳು ಮನಸ್ಸಿಗೆ ಮತ್ತುಹಿಡಿಸುವ ದಿವ್ಯ ಔಷಧಿಗಳು

—ರಾಬರ್ಟ್ ಛೇಂಬರ್ಸ್

ವಾಚನಾಯೋಗ್ಯವೆಂಬುದೇ ಪುಸ್ತಕದ ಲಕ್ಷಣ.

—ಎಮರ್ಸನ್

ಪ್ರಕಾಶಕರ ಸಮಸ್ಯೆಗಳು

● ಎಚ್. ಎಂ. ಶಂಕರನಾರಾಯಣರಾವ್

ಪುನಾ ಭಂಡಾರ್‌ಕರ್ ರಿಸರ್ಚ್ ಇನ್‌ಸ್ಟಿಟ್ಯೂಟಿನ ಆಶ್ರಯದಲ್ಲಿ ಪ್ರಕಟವಾದ ಸಂಸ್ಕೃತ ಮಹಾಭಾರತವನ್ನು ಪರಿಷ್ಕರಿಸಿದ ಡಾ. ಸುಕ್ತಂಕರ್ ಅವರು ಒಮ್ಮೆ 'ಒಳ್ಳೆಯ ಸಂಪಾದಕ, ಕಾಗದ, ಮುದ್ರಣ ಬೇಕಾದರೆ ಹೆಚ್ಚು ಹಣವನ್ನು ಕೊಡಬೇಕಾದುದು ಅನಿವಾರ್ಯ' ಎಂದು ನುಡಿದ ಮಾತು ಇಂದಿಗೂ ಸತ್ಯ. ನಾಲ್ಕು ಕಾಲ ನಿಲ್ಲತಕ್ಕ ಒಳ್ಳೆಯ ಪುಸ್ತಕವನ್ನು ಪ್ರಕಾಶಕನು ಲೇಖಕರ, ಕಾಗದದ, ಮುದ್ರಣದ, ಮಾರಾಟದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ನಾಲ್ಕು ಅಂಶಗಳಲ್ಲಿ ಅವನ ಸಮಸ್ಯೆಗಳೆಲ್ಲ ಅಡಕವಾಗಿವೆ.

ಪ್ರಕಟವಾಗುತ್ತಿವೆ—ಆದರೆ

ಪ್ರಕಾಶಕರೆಂದರೆ ನಾನು ಸರ್ಕಾರವನ್ನಾಗಲೀ ವಿಶ್ವವಿದ್ಯಾನಿಲಯಗಳನ್ನಾಗಲೀ ಗಣನೆಗೆ ತೆಗೆದುಕೊಳ್ಳುತ್ತಿಲ್ಲ; ಸಂಸ್ಕೃತಿ ಅಭಿವೃದ್ಧಿಯೂ ಇಲಾಖೆಯು ನನ್ನ ಗಮನದಲ್ಲಿಲ್ಲ. ಕನ್ನಡ ಪ್ರಕಟನೆಯ ವಿಷಯದಲ್ಲಿ ನಮ್ಮ ವಿಶ್ವವಿದ್ಯಾಲಯಗಳು ಅಮೂಲ್ಯವಾದ ಕೆಲಸಮಾಡಿವೆ; ಮಾಡುತ್ತಿವೆ. ಈ ಸಂಸ್ಥೆಗಳಿಗೆ ಒಂದು ಅನುಕೂಲವುಂಟು. ಸ್ವಂತ ಅಚ್ಚುಕೂಟ, ವರ್ಷವರ್ಷ ನಿಗದಿಯಾದ ಹಣವಿರುವಲ್ಲಿ ಏನು ಯೋಚನೆ? ಸರ್ಕಾರ, ವಿಶ್ವವಿದ್ಯಾಲಯ ಎಂದ ಮೇಲೆ ಲೇಖಕರು ಮುಂದೆ ಬರುವುದರಲ್ಲಿ ಆಶ್ಚರ್ಯವೇನು? ಪುಸ್ತಕ ಮಾರಾಟವಾಗದಿದ್ದರೂ ಅವರಿಗೆ ನಷ್ಟವಿಲ್ಲ. ಆಕ್ಷೇಪಣೆಗಾಗಿ ಈ ಮಾತು ಹೇಳುತ್ತಿಲ್ಲ. ಅನುಭವದಿಂದ ನೊಂದು ಬಂದ ಮಾತು ಇದು. ಸಂಸ್ಕೃತಿ ಇಲಾಖೆಯ ಪ್ರಕಟನೆಗಳು ಎಲ್ಲಿ ದೊರಕುವುವೋ ನನಗೆ ತಿಳಿಯದು. ಪ್ರತಿಯೊಬ್ಬರೂ ಅವುಗಳನ್ನು ಹುಡುಕಿಕೊಂಡು ಬೆಂಗಳೂರಿಗೆ ಬರಲಾರರು.

ಇನ್ನೊಂದು ವಿಷಯ. ಮೂವ್ವತ್ತು ವರ್ಷಗಳ ಹಿ
ಪ್ರಕಟವಾದ ಸಚಿತ್ರ ಅಗ್ಗದ ನಾಲ್ವಡಿ ಕೃಷ್ಣರ
ಒಡೆಯರ ಚರಿತ್ರೆ ಸರ್ಕಾರಿ ಡಿಪೋದಲ್ಲಿ ಇನ್ನೂ ಕೆ
ಯುತ್ತ ಬಿದ್ದಿದೆ. ವಿಶ್ವವಿದ್ಯಾನಿಲಯಗಳ ವ್ಯವಹ
ಇದಕ್ಕಿಂತ ಸಾವಿರ ಪಾಲು ಲೇಸು. ಹೀಗಿರುವಲ್ಲಿ
ಪ್ರಕಾಶಕ ಸಂಸ್ಥೆಗಳು ಲಾಭ ನಷ್ಟಗಳನ್ನು ಗಣಿಸ
ಈಗ ನನ್ನ ಗಮನ ತಾತ್ಕಾಲಿಕವಾಗಿ ಪಠ್ಯಪುಸ್ತಕವ
ಪ್ರಕಟಿಸುವ ಪ್ರಕಾಶಕರನ್ನು ಕುರಿತಾಗಲೀ, ಜ
ಮನಸ್ಸನ್ನು ಕಲುಷಿತಗೊಳಿಸಿ ಹಣಮಾಡಿಕೊಳ್ಳ
ಪ್ರಕಾಶಕರನ್ನಾಗಲೀ ಕುರಿತದ್ದಲ್ಲ. ಚಿರಕಾಲ ಬಾಳ
ಸಾಹಿತ್ಯವನ್ನು ಪ್ರಕಟಿಸತಕ್ಕ ಖಾಸಗೀ ಪ್ರಕಾಶಕರ
ಕುರಿತದ್ದು.

ಬೆರಳುಮಡಿಸುವಷ್ಟು—ಅಷ್ಟೆ

ಇಂಥ ಪ್ರಕಾಶನಗಳು ನಮ್ಮ ನಾಡಿನಲ್ಲಿ ಇರತಕ್
ಬೆರಳುಮಡಿಸುವಷ್ಟು. ಪುಸ್ತಕ ಪ್ರಕಾಶನ ಇ
ಉದ್ಯಮಗಳಂತೆ ಬಂಡವಾಳವನ್ನು ಬಯಸತಕ್ಕದ
ಆದರೆ ಕ್ಷಿಪ್ರಫಲ ಪ್ರದಾಯಕವಾದುದಲ್ಲ. ಪ್ರಕಾಶಕ
ಹಾಕುವುದು ಇಡಿಗಂಟು; ಆಮೇಲೆ ಅವನು ಪಡೆ
ವುದು ಪುಡಿಗಂಟು. ಕಾಗದ, ಪಡಿಯಚ್ಚು, ಮುದ್ರ
ಸಂಭಾವನೆಗಳಿಗಾಗಿ ಅವನು ಹಣವನ್ನು ಹೂಡಬೇ
ಸಂಭಾವನೆಯೊಂದನ್ನು ಬಿಟ್ಟರೆ—ಅದರ ವಿಷಯ ಮು
ಒಂದೆರಡು ಮಾತುಗಳನ್ನು ಹೇಳುತ್ತೇನೆ—ಮಿಕ್ಕೆಲ್ಲಕ
ಪ್ರಕಾಶಕನು ಮುಂಗಡವಾಗಿ ಹಣಕೊಡಬೇ
ಸರ್ಕಾರದ ನೀತಿಯಿಂದಾಗಿ ಕಾಗದದ ಬೆಲೆ ಸೇಕಡ
ರಷ್ಟು ಹೆಚ್ಚಿತು. ಕಾಗದದ ಕಾರ್ಖಾನೆಯಿಂದ ನೇರವ
ಕಾಗದವನ್ನು ಪಡೆಯುವ ಸೌಲಭ್ಯ ಪ್ರಕಾಶಕನಿಗೆ ತ
ಅವನು ವ್ಯಾಪಾರಸ್ಥರು ಹೇಳಿದ ಬೆಲೆಯನ್ನು ನಗ
ಕೊಟ್ಟು ಆ ಕಾರ್ಯವನ್ನು ನಿರ್ವಹಿಸಬೇಕಾಗುತ್ತ
ಕೆಲವು ವೇಳೆ ಹಣವಿದ್ದರೂ ಕಾಗದಕ್ಕೆ ಪರದಾಡಬೇ
ಗುತ್ತದೆ. ಒಂದು ಪುಸ್ತಕದಲ್ಲಿ ಅನೇಕ ಬಣ್ಣದ ಕಾ
ಗಳು ಈ ಅಂಶವನ್ನು ಸ್ಫುಟಗೊಳಿಸುತ್ತವೆ. ಹೋಗ
ಕಾಗದವನ್ನು ಮುಂಗಡವಾಗಿ ತೆಗೆದು ಇಡಬಹುದೆಂ
ಎಷ್ಟು ತೆಗೆದಿಡುವುದು? ಅದಕ್ಕೆ ಹಣ? ಇಡಲು ಸ್ಥ
ಬ್ಯಾಂಕಿನಲ್ಲಿ ಬಿಳಿಯ ಕಾಗದಕ್ಕೆ ಬೆಲೆ. ಅಚ್ಚಾ
ಕೂಡಲೇ ಆ ಕಾಗದ ತನ್ನ ಬೆಲೆಯನ್ನು ಕಳೆದುಕೊ
ತ್ತದೆ. ಇನ್ನೊಂದು ಅಂಶ ಮುದ್ರಣಾಲಯದಲ್ಲಿ ಅ
ನಿಧಾನವಾಗಿ ವರ್ಷಗಟ್ಟಲೆ ಎಳೆದರೆ ಬ್ಯಾಂಕಿನಲ್ಲಿ ಇಲ್ಲ

ಕಡೆ ಸಾಲ ತಂದ ಹಣದ ಬಡ್ಡಿಯೇನಾಯಿತು? ೇ ಪುಸ್ತಕಗಳು ತಿಂಗಳುಗಟ್ಟಲೆ ವರ್ಷಗಟ್ಟಲೆ ದೋ ಘಟ್ಟದಲ್ಲಿ ನಿಂತು ಹೋಗುವ ಪ್ರಸಂಗಗಳು ಶಕರ ಅನುಭವಕ್ಕೆ ಬಂದಿರಲು ಸಾಕು. ನನಗಂತೂ ೆ.

ಕೂಟಗಳ ಪರಿಸ್ಥಿತಿ

ಾದ ವಿಚಾರದಲ್ಲಿ ಪ್ರಕಾಶಕನಿಗೆ ಅಚ್ಚುಕೂಟವೂ ಶಾಗಿಲ್ಲ. ಕನ್ನಡದ ಕೆಲವು ಪ್ರಕಟನೆಗಳನ್ನು ದರೆ ನಮ್ಮಲ್ಲಿ ಅಚ್ಚುಕೂಟಗಳ ಪ್ರಭಾವ ಎದ್ದು ತ್ತದೆ. ಕೆಲವು ಅಚ್ಚುಕೂಟಗಳ ಹೆಸರುಗಳನ್ನು ದೂರದಿಂದಲೇ ಕೈಮುಗಿಯಬೇಕು ಪ್ರಕಾಶಕ. ಳಲ್ಲಿ ಅಚ್ಚಿನ ಕೆಲಸದ ಬೆಲೆ ಅಧಿಕ. ಮಂಗಳೂರಿ ನ ಅಚ್ಚುಕೂಟಗಳಲ್ಲಿ ಅಚ್ಚಿಡುವ ಬೆಲೆ ಅಧಿಕ ಕೇಳಿದ್ದೇನೆ. ಬೆಂಗಳೂರಲ್ಲಿ ಹೇಗೋ ತಿಳಿಯದು. ರು ಈ ವಿಷಯದಲ್ಲಿ ಬಹುಪಾಲು ಮೇಲು. ೂ ಈಗ ಅಚ್ಚಿನ ಬೆಲೆ ಶೇಕಡ ೪೦ರಷ್ಟು ಹೆಚ್ಚಿದೆ. ಅಚ್ಚಾದೊಡನೆ ಅವರು ಪ್ರಕಾಶಕನಿಂದ ಪೂರ್ತಿ ನ್ನು ನಿರೀಕ್ಷಿಸಿದರೆ ಅದೇನು ತಪ್ಪಲ್ಲ. ಸ್ನೇಹಭಾವ ಅವರು ಒಂದೆರಡು ತಿಂಗಳುಗಳ ಕಂತುಗಳಲ್ಲಿ ಹಣ ತೆಗೆದುಕೊಳ್ಳಬಹುದು. ತಿಂಗಳ ಯಾವುದೋ ್ತದ ದಿನ ಅವರು ಕೆಲಸಗಾರರಿಗೆ ಸಂಬಳಕೊಡ ಕೆಲಸಗಾರರು ಸಾಹುಕಾರರನ್ನು ಅವಲಂಬಿಸಿ ರೆ. ಸಾಹುಕಾರರು ತಮ್ಮ ಗಿರಾಕಿಗಳನ್ನು. ಆದ್ದ ಪ್ರಕಾಶಕನು ಪುಸ್ತಕ ಮಾರಾಟವಾಗಲಿ ಆಗದಿರಲಿ ತಿಂಗಳು ಸಾಲಮಾಡಿಯಾದರೂ ಅಚ್ಚುಕೂಟದ ಯನ್ನು ನಿರ್ವಹಿಸಬೇಕಾಗುತ್ತದೆ

ಶಕರ ಮತ್ತೊಂದು ಬವಣೆ

ಗದ ತಂದುಕೊಟ್ಟು, ಹಣ ಮುಂಗಡವಾಗಿ ರೂ ಪ್ರಕಾಶಕನಿಗೆ ಅಚ್ಚುಕೂಟದವರಿಂದ ಕೆಲಸ ವುದೆಂಬ ನಿರೀಕ್ಷೆ ಇಲ್ಲ. ಮಿಕ್ಕ ಕಡೆ ತಟ್ಟುತ್ತಿರುವ ತಿ ಇಲ್ಲಿಯೂ ಇದೆ. ಅಲ್ಲದೆ ಪ್ರಕಾಶಕನಿಗೆ ವಿದ್ಯಾ ಲೆಯಿಂದ ವಿಶ್ವವಿದ್ಯಾಲಯಗಳಿಂದ ಸಾಕಷ್ಟು ಪ್ರತಿ ಬರುತ್ತಿದೆ. ಸ್ವಂತ ಅಚ್ಚುಕೂಟಗಳಿದ್ದರೂ ತಮ್ಮ ಅಚ್ಚುಕೂಟಕ್ಕೆ ದಾಳಿಯಿಡುತ್ತವೆ. ವಿದ್ಯಾ ಲೆ ಪಠ್ಯಪುಸ್ತಕದ ಲಕ್ಷಪ್ರತಿಗಳನ್ನು ಅಚ್ಚಿಡಬೇಕು. ವಿಶ್ವವಿದ್ಯಾಲಯದ ಯು. ಜಿ. ಸಿ.ಯ ಲಕ್ಷಾಂತರ ರೂಪಾಯಿಗಳನ್ನು ಗೊತ್ತಾದ ಅವಧಿಯಲ್ಲಿ ಮುಗಿಸಬೇಕು. ಹೀಗಾಗಿ ಅವು ಮೈಸೂರಿನ ಎಲ್ಲ ಮುದ್ರಣಾಲಯ ಗಳನ್ನು ಆಕ್ರಮಿಸಿಕೊಂಡಿವೆ. ಬೆಂಗಳೂರು ಧಾರವಾಡ ಗಳಲ್ಲಿಯೂ ಇದೆಯೆಂದು ಭಾವಿಸುತ್ತೇನೆ. ಆಕರ್ಷಕ ದರ ಶೀಘ್ರ ಹಣ ಸಿದ್ಧಿ ಪ್ರಭಾವಗಳಿಗೆ ಮಣಿಯದವ ರಾರು? ಹಳೆಯ ಗಿರಾಕಿಗಳೆಂದು ನಮ್ಮ ಅಚ್ಚುಕೂಟ ದವರಿಂದ ಪುರಸ್ಕೃತರಾಗಿರುವುದರಿಂದ ನಾವು ಕೆಲವು ಪ್ರಕಾಶಕರು ಬದುಕಿಕೊಂಡಿದ್ದೇವೆ.

ಪ್ರಕಾಶಕನು ತನ್ನ ಉದ್ಯಮ ಮುಂದುವರಿಯಬೇಕಾ ದರೆ, ಹಳೆಯ ಪ್ರಕಟನೆಗಳು ಖರ್ಚಾಗುತ್ತಿರಬೇಕಾದರೆ ಹೊಸ ಪುಸ್ತಕಗಳನ್ನು ತರುತ್ತಿರಬೇಕಾದ ಕಾರಣ ಒಂದೇ ಮುದ್ರಣಾಲಯವನ್ನು ಅವಲಂಬಿಸಿರುವ ಹಾಗಿಲ್ಲ. ನಾಲ್ಕಾರು ಮುದ್ರಣಾಲಯವನ್ನು ಅವಲಂಬಿಸಿರಬೇಕು. ಇವೆಲ್ಲಕ್ಕೂ ಪ್ರಕಾಶಕನು ತಿಂಗಳು ತಿಂಗಳು ಹಣ ಒದ ಗಿಸ ಬೇಕಾದರೆ ಅವನು ತತ್ತರಿಸಿ ಹೋಗುತ್ತಾನೆ. ಇದು ಸಣ್ಣ ಗಾತ್ರದ ಪುಸ್ತಕಗಳ ಕಾಲವಲ್ಲ. ದೊಡ್ಡ ಗಾತ್ರದ ಪುಸ್ತಕಗಳ ಕಾಲ. ದೊಡ್ಡ ಪುಸ್ತಕಗಳನ್ನು ಹೊರ ತರಲು ಎಷ್ಟು ಖರ್ಚಾಗುತ್ತದೆ ಎಂಬುದಕ್ಕೆ ಒಂದು ಉದಾಹರಣೆ. ೫೦೦ ಪುಟಗಳಿರುವ ವಚನಭಾರತದ ೩೦೦೦ ಪ್ರತಿಗಳಿಗೆ ಮೈಸೂರಿನ ಒಂದು ಉತ್ತಮ ಪ್ರೆಸ್ಸಿ ನಲ್ಲಿ ತಗುಲಿರುವ ವೆಚ್ಚ ೧೮,೦೦೦ ರೂ. ಅಷ್ಟೆ ಪುಟಗಳ ಕಾವ್ಯಪ್ರಕಾಶನಕ್ಕೆ ೮,೫೦೦ ರೂಗಳು. ಹೀಗೆಯೇ, ಭಾಷಣಗಳು ಮತ್ತು ಪೀಠಿಕೆಗಳು, ಭಗವದ್ಗೀತಾ ತಾತ್ಪರ್ಯ, ಶ್ರೀನಿವಾಸ ಮುಂತಾದ ಬೃಹದ್ಗ್ರಂಥಗಳ ವೆಚ್ಚವನ್ನು ಊಹಿಸಿಕೊಳ್ಳಿ. ಒಬ್ಬ ಪ್ರಕಾಶಕ ವರ್ಷ ದಲ್ಲಿ ಗಾತ್ರವಾದ ನಾಲ್ಕು ಪುಸ್ತಕಗಳನ್ನು ಹೊರತಂದರೆ ಅವನ ಕೈ ಬರಿದಾದಂತೆ. ನನ್ನ ಸ್ನೇಹಿತರೊಬ್ಬರು ಹೇಳಿದಂತೆ ಪ್ರಕಟಣೆಗೆ ಭಂಡಾರವಿದ್ದರೂ ಸಾಲದು. ಆದರೆ ಅದನ್ನು ಎಲ್ಲಿಂದ ತರಬೇಕು?.

ಮಾರಾಟದ ತೊಂದರೆ

ಕಾಗದ ತಂದು, ಒಳ್ಳೆಯ ಪುಸ್ತಕ ಅಚ್ಚಿಟ್ಟರೂ ಪ್ರಕಾಶಕನ ಸಮಸ್ಯೆ ಬಗೆಹರಿಯುವುದಿಲ್ಲ. ಅಚ್ಚಿಟ್ಟ ಪುಸ್ತಕ ಮಾರಾಟವಾಗಬೇಕು. ಇದೇನೂ ದಿನನಿತ್ಯದ ಬಳಕೆಯ ಪದಾರ್ಥವಲ್ಲ. ಅನೇಕ ವೇಳೆ ಸಾವಿರ ಪ್ರತಿ ಗಳು ಮಾರಾಟವಾಗಬೇಕಾದರೆ ಹತ್ತು ಹನ್ನೆರಡು ವರ್ಷ

ಕಾಯಬೇಕು. ೧೯೫೭ರಲ್ಲಿ ಅಚ್ಚಾದ ಪದ್ಯಗ್ರಂಥ ೪೦೦ ಪ್ರತಿ ಇನ್ನೂ ನನ್ನಲ್ಲಿ ಇವೆ. ನಮ್ಮಲ್ಲಿರುವ ಒಂದು ಕೊರತೆ ಎಂದರೆ ಪುಸ್ತಕಗಳನ್ನು ಕೊಳ್ಳುವ ಪ್ರಧಾನ ಸಂಸ್ಥೆ ಇಲ್ಲದಿರುವುದು. ಅಲ್ಲದೆ ಪ್ರತಿ ಜಿಲ್ಲೆಯ ಮುಖ್ಯ ಸ್ಥಳಗಳಲ್ಲಿ ತಾಲ್ಲೋಕು ಸ್ಥಳಗಳಲ್ಲಿ ಯಾವ ಪುಸ್ತಕ ವ್ಯಾಪಾರಿಯೂ ಪುಸ್ತಕಗಳನ್ನು ತರಿಸಿಕೊಳ್ಳುವುದಿಲ್ಲ. ತರಿಸಿಕೊಂಡರೋ ಒಂದೆರಡು ಪ್ರತಿಗಳನ್ನು ಮಾತ್ರ. ಇದು ಪುಸ್ತಕ ವ್ಯಾಪಾರಿಗಳ ತಪ್ಪಲ್ಲ. ಖರ್ಚಾಗದಿದ್ದರೆ ಅವರು ತಾನೇ ಏನುಮಾಡಿಯಾರು? ಅಲ್ಲದೆ ಸ್ವಲ್ಪ ಹೆಚ್ಚು ಪ್ರತಿಗಳನ್ನು ತರಿಸಿಕೊಂಡರೆ ಶೇಕಡ ೩೩ರಿಂದ ೪೦ರವರೆಗೆ ದಳ್ಳಾಳಿ ಕೇಳುತ್ತಾರೆ. ಇದಕ್ಕಾಗಿ ಮಾರಾಟಗಾರರನ್ನು ಆಕ್ಷೇಪಿಸುವಂತಿಲ್ಲ. ಕಾರಣ ಅವರು ಅಂಚೆ ವೆಚ್ಚ, ತರಿಸುವ ವೆಚ್ಚಗಳನ್ನು ಭರಿಸಬೇಕು. ಸಂಸ್ಥೆಗಳಿಗೆ ಅವುಗಳನ್ನು ಮಾರಾಟ ಮಾಡಿದರೆ ಅಲ್ಲಿನವರಿಗೆ ದಕ್ಷಿಣೆಕೊಟ್ಟು ಹಣ ಬರುವವರೆಗೆ ಕಾಯಬೇಕು. ಪ್ರಕಾಶಕನಿಗೆ ಇಂಥವರಿಂದ ವಿಶೇಷ ಸಹಾಯವಿಲ್ಲ. ಪಠ್ಯಪುಸ್ತಕವಾದರೆ ಪ್ರಕಾಶಕನಿಗೆ ಅನುಕೂಲವಿದೆಯೆಂಬ ಒಂದು ವಾದ ಉಂಟು. ಈ ವಾದದಲ್ಲಿ ಸ್ವಲ್ಪ ಸತ್ಯಾಂಶವುಂಟು. ಆದರೆ ಅಚ್ಚಾಗುವ ಪ್ರತಿಗಳಿಗೆ ತಕ್ಕಂತೆ ಲೇಖಕನಿಗೆ ಶೇಕಡ ೨೫ರಿಂದ ೪೦ರ ವರೆಗೆ ಸಂಭಾವನೆ ಕೊಡಬೇಕು. ಮಾರಾಟವಾಗದೆ ಪುಸ್ತಕಗಳು ಉಳಿದರೆ ದೇವರೇ ಗತಿ! ಇತ್ತೀಚಿನ ವಿದ್ಯಾಭ್ಯಾಸದ ಬದಲಾವಣೆಗಳಿಂದ, ಸಕಾಲದಲ್ಲಿ ಅಚ್ಚುಕೂಟಗಳಿಂದ ಪುಸ್ತಕಗಳು ಬಾರದಿರುವುದರಿಂದ ಸಾವಿರಾರು ಪಠ್ಯಪುಸ್ತಕ ಪ್ರತಿಗಳು ನಿಂತು ಹೋಗಿರುವುದು ಪ್ರಕಾಶಕರ ಅನುಭವ. ಇನ್ನೊಂದು ವಿಷಯ. ಪಠ್ಯಪುಸ್ತಕವಾದಾಗ ಲೇಖಕನ ಹಂಗಿಗೆ ಒಳಗಾಗಿ ಖರ್ಚಾಗುವ ಖರ್ಚಾಗದ ಅವನ ಇನ್ನೊಂದೋ ಎರಡು ಪುಸ್ತಕಗಳನ್ನು ಅಚ್ಚಿಡಬೇಕು. ಪ್ರತಿನಿಧಿಯನ್ನು ಗೊತ್ತುಮಾಡಿ ಊರೂರು ತಿರುಗಿಸೋಣವೆಂದರೆ ಪುಸ್ತಕಗಳನ್ನು ಕಳೆದುಕೊಂಡು ಹಣವನ್ನೂ ಪಡೆಯದ ಕಟು ಅನುಭವ ಪ್ರಕಾಶಕನಿಗುಂಟು. ವ್ಯಾಪಾರಿಗಳಲ್ಲಿ ಮಾರಾಟಕ್ಕಿಟ್ಟರೆ ಹಣ ಬಂದರೂ ಬರಬಹುದು; ಬಾರದೆಯೂ ಹೋಗಬಹುದು. ಪುಸ್ತಕಗಳು ಹಿಂದಿರುಗಿ ಬಂದರೆ ಮಾಸಲಾಗಿ ಬರುತ್ತವೆ. ಇನ್ನು ಪ್ರಕಾಶಕನಿಗೆ ಇರುವ ಆಶ್ರಯ ವಿದ್ಯಾಸಂಸ್ಥೆಗಳು; ವಿದ್ಯಾಕಚೇರಿಗಳು. ಅಲ್ಲಿಯೂ ಅವರು ಸರ್ಕಾರಕ್ಕೆ ನ್ಯಾಯವಾಗಿ ಕೊಡಬೇಕಾಗಿರುವ ದಳ್ಳಾಳಿಯಲ್ಲದೆ, ಪುಸ್ತಕ ವ್ಯಾಪಾರಿಗಳಿಗೆ ಕೊಡುವ ದಳ್ಳಾಳಿ ಕೇಳುತ್ತಾರೆ. ಪುಸ್ತಕಗಳನ್ನು

ಎಣಿಸಿಕೊಂಡು ತಮ್ಮ ವಶಕ್ಕೆ ತೆಗೆದುಕೊಳ್ಳುವುದಕ
ಅವರು ಹಣ ಕೇಳುತ್ತಾರೆ. ಹೀಗಾಗಿ ಸ್ಪರ್ಧೆಯ
ಯುಗದಲ್ಲಿ ಪ್ರಕಾಶಕನು ನಿಸ್ಸಹಾಯಕನಾಗತ್ತಾ
ಕಾಗದ ಮುದ್ರಣಗಳಿಗೆ ಹಣತೆತ್ತು, ಸಂಭಾವನೆ ಕೊಟ್ಟು
ವಿಶೇಷ ದಲ್ಲಾಳಿ ನೀಡಿ, ಮಳೆ, ಹೆಗ್ಗಣ, ಕ್ರಿಮಿಕೀ
ಗಳಿಂದ ಪುಸ್ತಕಗಳನ್ನು ರಕ್ಷಿಸಿಕೊಂಡು, ಕಟ್ಟಡಗಳ
ಬಾಡಿಗೆ ಕೊಟ್ಟು, ಸಾಲಕ್ಕೆ ಬಡ್ಡಿ ಕಟ್ಟಿ, ವರ್ಷಗಟ್ಟ
ಕಾದ ಪ್ರಕಾಶಕನ ಲಾಭವನ್ನು ಸಹೃದಯರು ಊಹಿ
ಕೊಳ್ಳಬೇಕು.

ವಿಶ್ವವಿದ್ಯಾಲಯದ ಪ್ರೋತ್ಸಾಹ

ಹೀಗೆಂದ ಮಾತ್ರಕ್ಕೆ ಪ್ರಕಾಶಕರು ನಿಸ್ಸಹಾಯ
ರಾಗಿದ್ದಾರೆ, ಅವರಿಗೆ ಸಹಾಯವೇ ದೊರೆತಿಲ್ಲ ಎಂದ
ನಾನು ಹೇಳುತ್ತಿಲ್ಲ. ಮೈಸೂರಿನ ಪ್ರಕಾಶಕರಿಗೆ ವಿ
ವರಿಗೂ ಕೂಡ ಎಂದು ತಿಳಿದಿದ್ದೇನೆ–ಗುಣೈಕಪಕ್ಷಪಾ
ಗಳಾದ ನಮ್ಮ ಮೂರು ವಿಶ್ವವಿದ್ಯಾನಿಲಯಗಳು ಅ
ರಲ್ಲಿಯೂ ಮೈಸೂರು ವಿಶ್ವವಿದ್ಯಾನಿಲಯ ಪ್ರಕಾಶಕ
ಕೆಲಸವನ್ನು ಗಮನಿಸಿ ಲೇಖಕರನ್ನೂ ಪ್ರಕಾಶಕರನ್ನೂ
ಪ್ರೋತ್ಸಾಹಿಸಿದೆ. ಸರ್ಕಾರ ವಿದ್ಯಾ ಇಲಾಖೆಯ
ಮೂಲಕ ಪುಸ್ತಕಗಳನ್ನು ಕೊಂಡು, ಲೇಖಕರಿಗೆ ಪ್ರಕ
ಶಕರಿಗೆ ಮುದ್ರಣದ ವೆಚ್ಚದ ಭಾಗವನ್ನೋ ಕೊಟ್ಟು
ಪ್ರೋತ್ಸಾಹಿಸುತ್ತಿದೆ. ಸಾರ್ವಜನಿಕ ಪುಸ್ತಕ ಭಂಡಾ
ದಿಂದ ಇನ್ನೂ ಪ್ರೋತ್ಸಾಹ ದೊರಕಬೇಕಾಗಿದೆ. ಪ್ರ
ವರ್ಷವೂ ಸಾಹಿತ್ಯ ಪರಿಷತ್ತು ಪ್ರಕಾಶಕರಿಂದ ಪುಸ್ತ
ಗಳನ್ನು ತರಿಸಿಕೊಂಡು ಮಾರಾಟ ಮಾಡಿಕೊಡುವ ವ್ಯ
ಸ್ಥೆಯನ್ನು ಪ್ರಕಾಶಕರು ಎಷ್ಟು ನೆನೆದರೂ ಸಾಲದು.

ಮಾಡಬೇಕಾದ ಕೆಲಸ

ಇದಾವುದರಿಂದಲೂ ಪ್ರಕಾಶಕನ ಸಮಸ್ಯೆ ಪರಿಹಾ
ವಾಗಲಾರದು, ಇದಕ್ಕಿರುವ ಏಕೈಕ ಮದ್ದು
ಒಂದು ಒಳ್ಳೆಯ ಪುಸ್ತಕ ಹೊರಬಿದ್ದಕೂಡಲೇ ಅದು
ಸಾರ್ವಜನಿಕರ ಗಮನಕ್ಕೆ ಬಂದು ಅದರ ಮುನ್ನೂರು
ನಾನ್ನೂರು ಪ್ರತಿಗಳು ಮಾರಾಟವಾಗಬೇಕು. ಎಲ್ಲ
ಪ್ರಕಾಶಕರೂ ತಾವು ಒಳ್ಳೆಯ ಪುಸ್ತಕಗಳನ್ನು
ಪ್ರಕಾಶಪಡಿಸುತ್ತೇವೆ ಎಂದಿರುವಾಗ ಪುಸ್ತಕಗಳ
ಗುಣಮಟ್ಟ ಯೋಗ್ಯತೆಯನ್ನು ನಿರ್ಣಯಿಸುವವ
ರಾರು? ಪರಿಷತ್ತು ಈ ಕೆಲಸ ಮಾಡಬೇಕು. ಪ್ರತಿ
ಯೊಬ್ಬ ಪ್ರಕಾಶಕನೂ ತನ್ನ ಪ್ರಕಟನೆಯ ಎರಡೆರಡು

ಪ್ರತಿಗಳನ್ನು ಪರಿಷತ್ತಿಗೆ ಕಳುಹಿಸಿಕೊಟ್ಟಲ್ಲಿ ತಜ್ಞರಿಂದ ವುಗಳ ಬೆಲೆಯನ್ನು ಕಟ್ಟಲು ಸಾಧ್ಯವಾಗುತ್ತದೆ. ಡಲ್ ಹೈಸ್ಕೂಲುಗಳ ಕಾಲೇಜುಗಳ ಸಾರ್ವಜನಿಕರ ಯಸ್ಕರ ಪುಸ್ತಕ ಭಂಡಾರಗಳು ಹತ್ತುಸಾವಿರಕ್ಕೂ ಕ್ಕು ಇರಬೇಕು. ದೇಶದಲ್ಲಿ ತಜ್ಞರಿಂದ ಆಯ್ಕೆಯಾದ ಂತಸ್ತಿಗೆ ತಕ್ಕಂತಹ ಪುಸ್ತಕಗಳನ್ನು ಕೊಳ್ಳಬೇಕೆಂಬ ಡ್ಡಾಯವಾದ ಸುತ್ತೋಲೆ ಹೋದರೆ ಪ್ರಕಾಶಕರು ದುಕಿಕೊಂಡಾರು. ಪ್ರಕಾಶಕನು ಅಚ್ಚಿಟ್ಟ ಸಾವಿರ ಪ್ರತಿಯ ಪುಸ್ತಕ ಮೂರು ವರ್ಷಗಳಲ್ಲಿ ಖರ್ಚಾದರೆ ಪ್ರಕಾಶಕ ಬದುಕಿಕೊಂಡಾನು! ಇನ್ನೊಂದು ವಿಷಯ. ರ್ಕಾರದಿಂದ ಸಹಾಯ ಪಡೆದ ಪುಸ್ತಕ ವ್ಯಾಪಾರದ ಳಿಗೆಗಳು ಪ್ರತಿ ಜಿಲ್ಲಾ ಕೇಂದ್ರದಲ್ಲಿಯೂ ತೆರೆಯು ಂತಾದರೆ ಪ್ರಕಾಶಕರಿಗೂ ಅನುಕೂಲ, ಸಾರ್ವಜನಿಕ ಗೂ ವಿದ್ವಾಂಸರಿಗೂ ಅನುಕೂಲ.

ಪುಸ್ತಕದ ಬೆಲೆಗಳ ಹೆಚ್ಚಳವೇಕೆ?

ಇನ್ನು ಬೆಲೆಯ ವಿಚಾರ. ಪುಸ್ತಕಗಳ ಬೆಲೆ ಹೆಚ್ಚೆಂಬ ಾಗು ಕೇಳಿಬರುತ್ತಿದೆ. ಇದು ಸತ್ಯಕ್ಕೆ ದೂರ. ಒಂದಕ್ಕೆ ರಡು ಬೆಲೆಯಿಟ್ಟು ಕೇವಲ ಲೋಕ ಕಾರುಣ್ಯ ದೃಷ್ಟಿ ಂದ ಕೃಷ್ಣ ಶಾಸ್ತ್ರಿಗಳು ಕೇವಲ ೫ ರೂಪಾಯಿಗಳಿಗೆ ಟ್ಟರು. ೨೨ ವರ್ಷಗಳಲ್ಲಿ ಅದು ಹದಿನೈದಾಗಿದೆ. ಗುಣ ಟ್ಟ ಕಾಯಲು ಇದು ಅನಿವಾರ್ಯ. ಸರ್ಕಾರ ಸಹಾಯ ನ ಕೊಟ್ಟರೆ ಆ ಗ್ರಂಥವನ್ನು ೫ ರೂಗೆ ಮಾರುವ ಆಸೆ ದೆ. ಆದರೆ ಹಣ ಕೊಡುವವರು ಯಾರು? ಪುಸ್ತಕದ ಕಟನೆಗೆ ಒಂದು ರೂಪಾಯಿ ಖರ್ಚು. ಪ್ರಕಾಶಕನು ೂರು ರೂಪಾಯಿ ಇಟ್ಟರೆ ಅವನು ಪಡೆಯುವ ಲಾಭ ನು? ಮೂರರಲ್ಲೊಂದು ಭಾಗ ಕಾಗದ ಮುದ್ರಣಾ ಯಗಳಿಗೆ, ಇನ್ನೊಂದು ಭಾಗ ದಳ್ಳಾಳಿಗೆ, ಉಳಿದೊಂದು ಗದಲ್ಲಿ ಸಂಭಾವನೆ ಶೇಕಡ ಹದಿನೈದು. ಉಳಿದ ಎಲ್ಲ ರ್ಚು ಹೋಗಿ ಪ್ರಕಾಶಕನಿಗೆ ಶೇಕಡ ೧೨ರ ಲಾಭ ಂದರೆ ಅದೇ ಹೆಚ್ಚು. ಅಷ್ಟು ಲಾಭ ಪಡೆದರೆ ಅದು ನಿವಾರ್ಯ. ಏಕೆಂದರೆ ಅವನು ನಡೆಸುತ್ತಿರುವುದು ಕಾಶನ ಸಂಸ್ಥೆ. ಧರ್ಮಸತ್ರವಲ್ಲ. ಮೇಲಾಗಿ ಾರಾಟವಾಗಲು ಹತ್ತು ಹತ್ತು ವರ್ಷ ಕಾಯಬೇಕಾದ ಂಥಗಳಿಗೆ ಸ್ವಲ್ಪ ಬೆಲೆಯಿಡಬೇಕಾಗುವುದು ಅನಿವಾರ್ಯ. ನ್ನೆರಡು ಆಣೆ ಬೆಲೆಯ ಸಂಸ್ಕೃತ ನಾಟಕದಂಥ ಪುಸ್ತಕ ರ್ಚಾಗಲು ಹತ್ತು ವರ್ಷ ಬೇಕಾಯಿತು. ನಮ್ಮ ವಿಶ್ವ ವಿದ್ಯಾನಿಲಯ ಪ್ರಕಟಿಸಿದ ಪಂಪ ಭಾರತದ ದೀಪಿಕೆ ಹೆಚ್ಚಾಯಿತು ಎಂದಾಗ, ಎಲ್ಲ ಅಂಶಗಳನ್ನು ತೂಗಿ ನೋಡಿ ಬೆಲೆ ಇಟ್ಟಿದೆ ಎಂದರು ಸಂಬಂಧಪಟ್ಟವರು. ವಿಶ್ವವಿದ್ಯಾನಿಲಯದ ಪಾಡೇ ಹೀಗಾದ ಮೇಲೆ ಮಿಕ್ಕ ಪ್ರಕಾಶಕರ ಪಾಡೇನು?

ಲೇಖಕ–ಪ್ರಕಾಶಕ ಸಂಬಂಧ

ಲೇಖಕ ಪ್ರಕಾಶಕ ಸಂಬಂಧದಲ್ಲಿ ಒಂದು ಮಾತು. ಲೇಖಕರು ಪ್ರಕಾಶಕರಿಗೆ ಸಮಸ್ಯೆಯಾಗಬಾರದು. ಪ್ರಕಾಶಕರು ಲೇಖಕರನ್ನು ಸರಿಯಾಗಿ ನಡೆಯಿಸಿಕೊಳ್ಳುತ್ತಿಲ್ಲ, ಸರಿಯಾಗಿ ಸಂಭಾವನೆ ಸಲ್ಲಿಸುವುದಿಲ್ಲ, ಹೆಚ್ಚು ಪ್ರತಿಗಳನ್ನು ಅಚ್ಚುಹಾಕಿಸಿಕೊಳ್ಳುತ್ತಾರೆ, ಕಿರಿಯ ಲೇಖಕರನ್ನು ಕಡೆಗಣಿಸುತ್ತಾರೆ ಇತ್ಯಾದಿ ಇತ್ಯಾದಿ. ಒಳ್ಳೆಯ ಲೇಖಕರೇ ಪ್ರಕಾಶನ ಸಂಸ್ಥೆಯ ಅಡಿಗಲ್ಲು. ಅವರಿಂದಲೇ ಪ್ರಕಾಶನ ಸಂಸ್ಥೆಗೆ ಕೀರ್ತಿ ಎಂಬುದನ್ನು ಮತ್ತೆ ಪುನರುಚ್ಚರಿಸುತ್ತೇನೆ. ಹಿಂದೆ ಏನಾಯಿತೋ ಯಾರು ಯಾರಿಗೆ ಮೋಸ ಮಾಡಿದರೋ ನನಗೆ ತಿಳಿಯದು. ಈಗ ನನ್ನಿಂದ ಮೊದಲ್ಗೊಂಡು ನನಗೆ ತಿಳಿದಿರುವ ಪ್ರಕಾಶಕರು ಶೇಕಡ ೧೫ರಂತೆ ಸಂಭಾವನೆ ಕೊಡುತ್ತಾರೆ. ೨೫ ಪ್ರತಿ ಕೊಡುತ್ತಾರೆ. ಸಂಭಾವನೆಯ ಹಣವನ್ನು ಹೇಗೆ ಕೊಡಬೇಕೆಂದೇ ಸಮಸ್ಯೆ. ಪ್ರಕಟನೆಗೆ ಮೊದಲೇ ಕೆಲವು ಸಂದರ್ಭದಲ್ಲಿ ಪ್ರಕಾಶಕನು ಹಣ ಕೊಡಬೇಕಾಗುತ್ತದೆ. ಹಾಗೆ ಕೊಟ್ಟರೂ ಹಸ್ತಪ್ರತಿ ಬರದ ಸಂದರ್ಭಗಳುಂಟು. ನನಗೆ ಇಬ್ಬರು ಪ್ರಸಿದ್ಧ ಲೇಖಕರು ೧೫ ವರುಷಗಳಾದರೂ ಹಸ್ತಪ್ರತಿ ಕೊಟ್ಟಿಲ್ಲ. ಸ್ವಲ್ಪ ತಡವಾದರೂ ಯಾವ ಲೇಖಕನೂ ಪ್ರಕಾಶಕನಿಂದ ನಷ್ಟಗೊಂಡಿಲ್ಲ. ಪಠ್ಯಪುಸ್ತಕವಾದರೆ ಶೇ. ೪೦ರ ವರೆಗೆ ಸಂಭಾವನೆ ಪಡೆಯುತ್ತಾರೆ. ಪ್ರಕಾಶಕನು ಕಿರಿಯ ಲೇಖಕರನ್ನು ಪ್ರೋತ್ಸಾಹಿಸುತ್ತಿಲ್ಲ ಎಂಬ ಮಾತೂ ಸತ್ಯಕ್ಕೆ ದೂರ. ಪ್ರಕಾಶಕನೂ ಲೇಖಕರನ್ನು ಆಯ್ಕೆ ಮಾಡಬೇಕಾಗುತ್ತದೆ. ಎಲ್ಲ ಲೇಖಕರನ್ನು ಅವನು ಪ್ರೋತ್ಸಾಹಿಸಲು ಅವನೇನೂ ಕುಬೇರನಲ್ಲ. ಆದರೆ ಒಮ್ಮೆ ಒಬ್ಬ ಲೇಖಕ ಪ್ರಕಾಶಕನ ಪದರಕ್ಕೆ ಬಂದುಬಿದ್ದರೆ, ವ್ಯವಹಾರದಲ್ಲಿ ಅವನು ಎಲ್ಲರಿಗೂ ಸಮ. ಒಟ್ಟಿನಲ್ಲಿ ಲೇಖಕನು ಪ್ರಕಾಶಕನ ಕಷ್ಟವನ್ನು ಅರಿತುಕೊಳ್ಳಬೇಕು. ಪ್ರಕಾಶಕರೂ ಲೇಖಕರನ್ನು ಗೌರವದಿಂದ ನಡೆಸಿಕೊಳ್ಳಬೇಕು.

ಜನ ಎಚ್ಚೆತ್ತರೆ ಪ್ರಕಾಶಕನ ಉದ್ಧಾರ

ಕಾಗದ, ಲೇಖಕ, ಅಚ್ಚುಕೂಟ–ಇವುಗಳು ಪ್ರಕಾಶಕನಿಗೆ ಹೆಚ್ಚಿನ ಸಮಸ್ಯೆಯಲ್ಲ. ಅವನ ಸಮಸ್ಯೆಯೆಲ್ಲ ಮಾರಾಟದ್ದು. ಎಚ್ಚೆತ್ತ ಜನತೆ ಪುಸ್ತಕ ಕೊಳ್ಳಲು ಮನಸ್ಸು ಮಾಡಿದರೆ ಅವನು ಬದುಕುತ್ತಾನೆ. ಎರಡು ಮೂರು ವರ್ಷಗಳಲ್ಲಿ ಜನತೆಯ ದಯೆಯಿಂದ ಒಳ್ಳೆಯ ಒಂದು ಪುಸ್ತಕ ಮಾರಾಟವಾದರೆ ಬೆಲೆ ತಗ್ಗಿಸಬಹುದು. ಹೆಚ್ಚು ಜ್ಞಾನದಾಯಕವಾದ ಪುಸ್ತಕಗಳನ್ನು ಹೊರತರಬಹುದು. ಸರಕಾರದ ಸಹಾಯ ಹೊಯ್ ಹಾಲಿನಂತೆ. ಜನತೆಯದು ಎದೆ ಹಾಲಿನಂತೆ. ಈಗಿನ ಪರಿಸ್ಥಿತಿಯಲ್ಲಿ ನಮ್ಮ ಜನ ತಿಂಗಳಿಗೆ ಎಷ್ಟು ರೂಪಾಯಿಗಳ ಪುಸ್ತಕ ಕೊಂಡಾರು? ಅವುಗಳಲ್ಲಿ ವೃತ್ತಪತ್ರಿಕೆಗಳಿಗೆ ಮಾಸಪತ್ರಿಕೆಗಳಿಗೆ ಎಷ್ಟು ಹಣ? ಇಂಗ್ಲಿಷ್ ಪುಸ್ತಕಗಳಿಗೆ? ಕಥೆ ಕಾದಂಬರಿಗಳಿಗೆ? ಇದು ಯೋಚಿಸಬೇಕಾದ ವಿಷಯ. ಪರಿಸ್ಥಿತಿ ಬದಲಾಗುವವರೆಗೆ ಪ್ರಕಾಶಕ ಹಲವು ಕಡೆಗೆ ಕೈಚಾಚುತ್ತಿರಬೇಕು. ಹಲವು ರೀತಿಯಲ್ಲಿ ಹಲರನ್ನು ತೃಪ್ತಿಪಡಿಸಬೇಕು.

ಪುಸ್ತಕಗಳೆಂದರೆ ಕೇವಲ ಸತ್ತ ಸಂಗತಿಗಳಲ್ಲ. ಜೀವನದ ಸತ್ವವೇ ಅವುಗಳಲ್ಲಿ ತುಂಬಿದೆ.

—ಜಾನ್ ಮಿಲ್ಟನ್

ಇಂದಿನ ದಿನಗಳಲ್ಲಿ ಒಳ್ಳೆಯ ಪುಸ್ತಕಗಳ ಸಂಗ್ರಹವೇ ಒಂದು ವಿಶ್ವವಿದ್ಯಾನಿಲಯ.

—ಥಾಮಸ್ ಕಾರ್ಲೈಲ್

ನಾನು ಪುಸ್ತಕಗಳನ್ನು ರೂಪಿಸಿರುವುದಕ್ಕಿಂತ ಪುಸ್ತಕಗಳು ನನ್ನನ್ನು ರೂಪಿಸಿರುವುದೇ ಹೆಚ್ಚು.

—ಮಾಂಟೆಯ್ನ್

ಕೆಲವು ಪುಸ್ತಕಗಳನ್ನು ರುಚಿ ನೋಡಬೇಕು. ಕೆಲವನ್ನು ನುಂಗಬೇಕು. ಮತ್ತೆ ಕೆಲವನ್ನು ಚೀಪಿ ಅರಗಿಸಿಕೊಳ್ಳಬೇಕು.

—ಫ್ರಾನ್ಸಿಸ್ ಬೇಕನ್

ಕೆಲವರಿಗೆ ಜೀವನವೇ ಮುಖ್ಯ; ಆದರೆ ನನಗೆ ವಾಚನವು ಅದಕ್ಕಿಂತ ಮುಖ್ಯ.

—ಲೋಗನ್ ಪಿಯರ್‌ಸಾಲ್ ಸ್ಮಿತ್

ಪುಸ್ತಕಗಳೇ ವಾಚಕನಲ್ಲಿ ಮನಶ್ಶಾಂತಿಯನ್ನೂ ಪುಷ್ಟಿಯನ್ನೂ ಹೆಚ್ಚಿಸುವುದಕ್ಕೆ ಯೋಗ್ಯವಾದುವು. ಪುಸ್ತಕಗಳೇ ಸಮಾಜದ ಏಳಿಗೆಗೆ ಮೂಲ ಕಾರಣವು.

—ಶ್ರೀ ಕರ್ಪೂರ ಶ್ರೀನಿವಾಸರಾಯರು

ಪುಸ್ತಕ ವ್ಯಾಪಾರಿಗಳ ಸಮಸ್ಯೆಗಳು

● ಹೆಚ್. ಎಸ್. ದೊರೆಸ್ವಾಮಿ

ಪುಸ್ತಕ ಪ್ರಪಂಚದಲ್ಲಿ ಅನ್ಯಾಯ ಅಧರ್ಮ ಯೋಚಿಸಲೂ ಸಾಧ್ಯವಿಲ್ಲ. ಇಲ್ಲಿ ಬರುವ ಲಾಭ ಎಣಿಸಿದ ಕಜ್ಜಾಯ. ಪುಸ್ತಕದ ಬೆಲೆ ಏರಿಸಿ, ಬೆಲೆ ತಿದ್ದಿ ಮಾರುವುದು ಸಾಧ್ಯವಿಲ್ಲ. ಪುಸ್ತಕ ಮಾರಾಟದಲ್ಲಿ ಕಲಬೆರಕೆ ಸಾಧ್ಯವಿಲ್ಲ. ಎಲ್ಲಕ್ಕೂ ನಿಗದಿಯಾದ ಖರ್ಚು. ಲಾಭ ಹೆಚ್ಚಾಗಿಡುವ ಹಾಗಿಲ್ಲ. ಕಾಳಸಂತೆಯಂತೂ ಸಾಧ್ಯವೇ ಇಲ್ಲ. ಇದು ಅಲ್ಪ ತೃಪ್ತರ ಉದ್ಯೋಗ. ಸುಸಂಸ್ಕೃತರಾದ ಹೊಟ್ಟೆ ತುಂಬಿದವರು, ಅಲ್ಪ ಆದಾಯದಲ್ಲಿ ತೃಪ್ತಿಪಟ್ಟುಕೊಳ್ಳುವ ಸಜ್ಜನರು ಅವಲಂಬಿಸಬೇಕಾದ ಉದ್ಯಮವಿದು. ಇಂಥ ಉದ್ಯಮದಲ್ಲೂ ಇಂದು ಅನೀತಿ, ಲಾಭಕೋರತನ, ಲಂಚಗುಳಿತನ, ಭ್ರಷ್ಟಾಚಾರ ತಲೆಹಾಕಿದೆ ಎಂದಮೇಲೆ ಸಮಾಜ ಎಷ್ಟು ಕಲುಷಿತಗೊಂಡಿದೆ ಎಂಬುದನ್ನು ಈ ಮೂಲಕ ಕಾಣಬಹುದು. ಈ ಕಾರಣದಿಂದಲೇ ಪುಸ್ತಕ ವ್ಯಾಪಾರದ ಉದ್ಯಮದಲ್ಲಿ ಹೊಸ ಸಮಸ್ಯೆಗಳು ಉದ್ಭವಿಸಿರುವುದು.

ಮಾರಾಟಗಾರರಲ್ಲಿ ಎರಡು ವಿಧ

ಪುಸ್ತಕ ಮಾರಾಟಗಾರರಲ್ಲಿ ಎರಡು ವಿಧ. ಪುಸ್ತಕ ಮಾರಾಟವನ್ನು ಮಾತ್ರ ಇಟ್ಟುಕೊಂಡಿರುವವರು; ಪುಸ್ತಕ ಪ್ರಕಾಶನ ಹಾಗೂ ಮಾರಾಟ ಎರಡರಲ್ಲೂ ತೊಡಗಿರುವವರು. ಇವರಿಬ್ಬರನ್ನೂ ಕುರಿತು ನಮ್ಮ ಈ ವಿವೇಚನೆ. ಪುಸ್ತಕ ಮಾರಾಟ ಒಂದು ಕಲೆ, ಸಾಂಸ್ಕೃತಿಕ ಕಲೆ. ಇವರು ಸಂಸ್ಕೃತಿಯ ವಾಹಕರಾಗಬೇಕು, ವಾಚನಾಭಿರುಚಿ ಹೆಚ್ಚಿಸಬೇಕು. ಉತ್ತಮವಾದದ್ದನ್ನೇ ತಂದಿಟ್ಟು, ಉತ್ತಮೋತ್ತಮವಾದದ್ದನ್ನೇ ಓದುಗ ಕೊಳ್ಳಲು ಪ್ರೇರಣೆ ನೀಡಬೇಕು. ಆದರೆ ಇಂದು ನಮ್ಮ ಪುಸ್ತಕ ಮಾರಾಟಗಾರರಲ್ಲಿ ಕೆಲವರಲ್ಲಂತೂ ಈ ಮನೋವೃತ್ತಿ, ಈ ದಿಸೆಯಲ್ಲಿ ಚಿಂತನೆ ಇದ್ದಂತೆ ಕಾಣುವುದಿಲ್ಲ. 'ಮನುಷ್ಯ ಹೆಂಡ ಕುಡಿಯಲು ಬಯಸುತ್ತಾನೆ. ಬೀದಿಬೀದಿಗೂ ಆ ಅಂಗಡಿಯನ್ನೇ ಇಡೋಣ, ವ್ಯಾಪಾರ ಚೆನ್ನಾಗಿ ಆಗುತ್ತದೆ. ಬೀಡಿ ಸೇದಲು ಬಯಸುತ್ತಾನೆ, ಆ ಅಂಗಡಿಯನ್ನೇ ಇಡೋಣ. ಆದರಂತೆ ಅಶ್ಲೀಲ ಸಾಹಿತ್ಯವನ್ನೇ ಬಯಸುತ್ತಾನೆ. ಆದನ್ನೇ ಅವನಿಗೆ ಒದಗಿಸೋಣ' ಇದು ಇಂದಿನ ಕೆಲವು ಪ್ರಕಾಶಕರ, ಪುಸ್ತಕ ವ್ಯಾಪಾರಿಗಳ ಮನೋಧರ್ಮ. ಬಹಳ ಉದಾರ ಯೋಚನೆ ಮಾಡುವವರೂ ಉಂಟು. ಅವರು ಒಳ್ಳೆಯ ಸಾಹಿತ್ಯವನ್ನು ಇದರೊಂದಿಗೆ ಇಡೋಣ, ಗಿರಾಕಿ ಯಾವುದು ಕೋರುತ್ತಾನೋ ಅದನ್ನು ಕೊಡೋಣ ಎಂದು ಯೋಚನೆ ಮಾಡುವುದೂ ಉಂಟು. ಒಟ್ಟಿನಲ್ಲಿ ಪುಸ್ತಕ ವ್ಯಾಪಾರಿಯ ದೃಷ್ಟಿ ಲಾಭಗಳಿಸುವಿಕೆ. ಅವನಿಗೆ ಸಮಾಜಕ್ಕೆ ತನ್ನದೊಂದು ಕರ್ತವ್ಯ ಉಂಟು ಎಂಬ ಕಡೆ ಲಕ್ಷ್ಯವೇ ಇಲ್ಲ. ಅಂಥವರದೇ ಸಾರ್ವಭೌಮತ್ವ ಇಂದು ನಮ್ಮಲ್ಲಿ ನಡೆಯುತ್ತಿರುವುದು.

ಬೆಲೆ ಹೆಚ್ಚಳ ಮತ್ತೊಂದು ಸಮಸ್ಯೆ

ಪುಸ್ತಕಗಳ ಬೆಲೆ ದಿನೇದಿನೇ ಹೆಚ್ಚುತ್ತಿರುವುದು ಪುಸ್ತಕ ವ್ಯಾಪಾರಿಯ ಮತ್ತೊಂದು ಸಮಸ್ಯೆ. ಪ್ರಜಾಪ್ರಭುತ್ವದ ಯಶಸ್ಸು, ಸಾಕ್ಷರತೆ, ಉತ್ತಮ ವಿಚಾರಗಳ ಮನನದಿಂದ ಮಾತ್ರ ಸಾಧ್ಯ. ಉತ್ತಮ ವಿಚಾರಗಳ ಅಭ್ಯಾಸಕ್ಕೆ ಉತ್ತಮ ಪುಸ್ತಕಗಳ ವಿತರಣೆ ಒಂದು ಮಾಧ್ಯಮ. ಅದರಂತೆಯೇ ಪುಸ್ತಕದ ಬೆಲೆ ಕೂಡ ತುಂಬ ದುಬಾರಿಯಾಗಬಾರದು. ಆದರೆ ದುರ್ದೈವದಿಂದ ಕೆಲ ಪ್ರಕಾಶಕರು ತಮ್ಮ ಪುಸ್ತಕಗಳಿಗೆ ದುಬಾರಿ ಬೆಲೆ ಇಡುತ್ತಿದ್ದಾರೆ.

ಅವರ ವಿಚಾರ ಹೀಗಿರಬಹುದು. ನಾನು ಅಚ್ಚು ಮಾಡುವ ಪುಸ್ತಕದಲ್ಲಿ ಮೂರನೆ ಒಂದು ಭಾಗ ಹೇಗೂ ಒಟ್ಟು ಮಾರಾಟದಲ್ಲಿ (ಬಲ್ಕ್ ಪರ್ಚೇಸ್) ಅಥವಾ ರಾಜ್ಯ ಪುಸ್ತಕಭಂಡಾರಗಳಿಗೆ ತಳ್ಳುತ್ತೇನೆ. ಉಳಿದದ್ದರಲ್ಲಿ ಮೂರನೆ ಒಂದರಷ್ಟನ್ನು ಇತರ ಪ್ರಕಾಶನಗಳಿಗೆ ವಿನಿಮಯ ಮಾಡುತ್ತೇನೆ. ಉಳಿದ ಮೂರನೆ ಒಂದು ಭಾಗ ತಾನೇ ಪುಸ್ತಕ ಮಾರಾಟಗಾರನ ಕೈಸೇರುವುದು? ಅವನು ಮಾರಾಟ ಮಾಡಿದರೆ ಮಾಡಲಿ, ಇಲ್ಲವಾದರೆ ಆ ಪುಸ್ತಕಗಳು ನನ್ನ ಉಗ್ರಾಣದಲ್ಲೇ! ಇರಲಿ, ಅದರಿಂದ ನನಗಾಗುವ ನಷ್ಟವಾದರೂ ಏನು? ಪ್ರಕಾಶಕರು ವಿನಿಮಯ ಪದ್ಧತಿಯಲ್ಲಿ ಪುಸ್ತಕಗಳನ್ನು ಅದಲುಬದಲು ಮಾಡಿಕೊಳ್ಳುವುದರಲ್ಲಿ ಒಂದು ಸಂಹಿತೆ ಇತ್ತು. ಈಗ ವಿನಿಮಯಕ್ಕೋಸ್ಕರವೇ ಬೆಲೆಗಳನ್ನು ಏರಿಸುವ ಪರಿಪಾಠ ಆರಂಭವಾಗಿದೆ. ಕೆಲವು ಪ್ರಕಾಶಕರು ತಮ್ಮ ಪುಸ್ತಕಗಳಿಗೆ ಬದಲು ಪಡೆದ ಪುಸ್ತಕಗಳನ್ನು ಶೇಕಡ ೪೦ರಿಂದ ಹಿಡಿದು ೬೦ರ ವರೆಗಿನ ಬೆಲೆ ಇಳಿಸಿ ಸೋಡಿಕೊಟ್ಟು– ಮಾರಾಟ ಮಾಡುವುದನ್ನೇ ಮುಖ್ಯ ಉದ್ಯಮವಾಗಿ ಇಟ್ಟುಕೊಂಡಿದ್ದಾರೆ. ಸರ್ಕಾರಕ್ಕೆ, ಇಲಾಖೆಗಳಿಗೆ ಸಗಟು ಮಾರಾಟದಲ್ಲಿ ಪುಸ್ತಕಗಳನ್ನು ಸರಬರಾಜು ಮಾಡುವ ಒಂದು ತಂಡವೇ ಇದೆ. ಅವರು ಶೇ. ೪೦ರಿಂದ ೬೦ರ ವರೆಗೆ ಸೋಡಿ ಸಿಗುವ ಪುಸ್ತಕಗಳನ್ನೇ ಹುಡುಕಿಕೊಂಡು ಪ್ರಕಾಶಕರ ಹತ್ತಿರ ಹೋಗುತ್ತಾರೆ. ಪುಸ್ತಕದ ಯೋಗ್ಯತೆ ಏನು, ಅದು ಲೈಬ್ರರಿಗೆ ಕೊಡಲು ಯೋಗ್ಯವಾದದ್ದೇ ಇದರ ವಿಚಾರ ಅವರ ತಲೆಯಲ್ಲಿಲ್ಲ. ಹೆಚ್ಚಿನ ಲಾಭಗಳಿಕೆಯೊಂದೇ ಅವರ ಪರಮೋದ್ದೇಶ. ತುಂಬಾ ಖರ್ಚು ಬರುತ್ತಾದ್ದರಿಂದ ಇದಕ್ಕೆ ಕಡಿಮೆ ಕಮಿಷನ್ನಿನ ಪುಸ್ತಕ ಕೊಂಡರೆ ಗಿಟ್ಟುವುದಿಲ್ಲ; ಇದು ಅವರ ಪಲ್ಲವಿ. ಬೆಂಗಳೂರಿನ ಸಾರ್ವಜನಿಕ ಲೈಬ್ರರಿಗಳಲ್ಲಿ ಇರುವ ಪುಸ್ತಕಗಳ ಅವಲೋಕನ ಮಾಡಬೇಕು. ಅವುಗಳಲ್ಲಿ ಇಡಬಹುದಾದದ್ದೆಷ್ಟು, ಪುಸ್ತಕಭಂಡಾರದಲ್ಲಿ ಇಡಬಾರದ್ದೆಷ್ಟು ಎಂಬುದರ ಸಮೀಕ್ಷೆ ಕೂಡ ಆಗಬೇಕು.

ವಿಕೇಂದ್ರ ಪದ್ಧತಿ ಅಗತ್ಯ

ಸಗಟು ವ್ಯಾಪಾರ ಅನ್ಯಾಯ ಪರಂಪರೆಗೆ ಆಗರ. ಆದ್ದರಿಂದ ಆಯಾ ತಾಲ್ಲೂಕಿನ ಅಗತ್ಯತೆಗಳನ್ನೂ ಆಯಾ ತಾಲ್ಲೂಕಿನಲ್ಲೇ ಪೂರೈಸಿಕೊಳ್ಳುವ ಕಾರ್ಯ ಆಗಬೇಕು. ಎಲ್ಲದರಲ್ಲೂ ವಿಕೇಂದ್ರೀಕರಣ ತತ್ವ ಒಪ್ಪುವ ನಾವು ಇದರಲ್ಲೂ ವಿಕೇಂದ್ರಿತ ಪದ್ಧತಿ ಜಾರಿಗೆ ತರಬೇಕು. ಇದರಿಂದ ಎರಡು ವಿಧದ ಲಾಭ ಉಂಟು. ಮೊದಲನೆಯದಾಗಿ ತಾಲ್ಲೂಕು ತಾಲ್ಲೂಕಿನಲ್ಲೂ ಉತ್ತಮ ಪುಸ್ತಕಗಳ ಮಾರಾಟ ಮಳಿಗೆಗಳು ಹುಟ್ಟಿಕೊಳ್ಳುತ್ತವೆ. ಅವರಿಗೆ ಇಂತಹ ರೀತಿಯಲ್ಲಿ ಸರ್ಕಾರದ ಉತ್ತೇಜನವಿದೆ ಎಂದು ಮನವರಿಕೆಯಾದರೆ, ಭರವಸೆ ದೊರೆತರೆ ಅವರು ಉತ್ತಮ ಪುಸ್ತಕಗಳನ್ನು ಸಂಗ್ರಹಿಸಿಡಲು ತೊಡಗುತ್ತಾರೆ. ಎರಡನೆಯದಾಗಿ ಉತ್ತಮ ಪುಸ್ತಕಗಳು ತಮ್ಮದೇ ಊರಿನಲ್ಲಿ ಸಿಗುತ್ತದೆಂದಾದರೆ ಅದನ್ನು ಕೊಳ್ಳುವ ಗಿರಾಕಿಗಳೂ ಹುಟ್ಟಿಕೊಳ್ಳುತ್ತಾರೆ. ಸಾರ್ವಜನಿಕರಲ್ಲಿ ಓದಿನ ಗೀಳೂ, ಉತ್ತಮ ಸಾಹಿತ್ಯವನ್ನು ಸಂಗ್ರಹಿಸುವ ಮನೋವೃತ್ತಿಯೂ ತಾನೇತಾನಾಗಿ ಬೆಳೆಯುತ್ತದೆ. ಆಗ ಸಹಜವಾಗಿ ತಾಲ್ಲೂಕು ಮಟ್ಟದ ಪುಸ್ತಕ ವ್ಯಾಪಾರಿ ತಾನೂ ಬದುಕಲಾದೀತು– ಸಗಟು ವ್ಯಾಪಾರದಲ್ಲಿ ಕೊಳ್ಳುವವರು ಎಂಬ ಭರವಸೆ ಹೊಂದುತ್ತಾನೆ. ತಾಲ್ಲೂಕು ಮಟ್ಟದಲ್ಲೂ – ಎಲ್ಲ ಪ್ರಕಾಶಕರ ಎಲ್ಲ ಪುಸ್ತಕಗಳನ್ನೂ ಒಂದೊಂದು ಪ್ರತಿ ತರಿಸಿಕೊಳ್ಳಬೇಕು. ವಿಚಾರವಂತರ ಸಮಿತಿ ಈ ಎಲ್ಲ ಪುಸ್ತಕಗಳನ್ನೂ ಪರಾಮರ್ಶಿಸಿ ಅವುಗಳನ್ನು ಕೊಳ್ಳಲು ಶಿಫಾರಸು ಮಾಡಬೇಕು. ಆಯಾ ವರ್ಷದಲ್ಲಿ ಅಚ್ಚಾಗಿ, ಹೀಗೆ ಶಿಫಾರಸಾದ ಎಲ್ಲ ಪುಸ್ತಕಗಳನ್ನೂ—ಎಷ್ಟು ಪ್ರತಿ ಕೊಳ್ಳುತ್ತಾರೆ. ಎಂಬುವುದು ಅಷ್ಟು ಮುಖ್ಯವಲ್ಲ – ಆ ವರ್ಷದಲ್ಲಿ ಕೊಳ್ಳುವುದಾಗಬೇಕು. ಸ್ಥಳೀಯ ಪುಸ್ತಕ ವ್ಯಾಪಾರಿ ಅಥವಾ ವ್ಯಾಪಾರಿ ಮುಖಾಂತರವೇ ಈ ಕೊಳ್ಳುವ ವ್ಯವಸ್ಥೆಯಾಗಬೇಕು.

ಸಂಹಿತೆ ತಯಾರಿಕೆ ಅಗತ್ಯ

ಪುಸ್ತಕ ಪ್ರಕಾಶಕ ಹಾಗೂ ವ್ಯಾಪಾರಿಗಳ ಒಂದು ಸಂಹಿತೆ ತಯಾರಾಗಬೇಕು. ಅನೀತಿಯ ಯಾವುದೇ ವ್ಯವಹಾರದಲ್ಲಿ ಅವರು ತೊಡಗುವುದನ್ನು ತಡೆಗಟ್ಟಬೇಕು. ಹಾಗೆ ತೊಡಗುವವರಿಗೆ ಯಾವುದೇ ಸಹಕಾರ, ಸಹಾಯಗಳನ್ನು ಸರ್ಕಾರಗಳು ಹಾಗೂ ಇತರ ಪ್ರಕಾಶಕರು ಪುಸ್ತಕ ಮಾರಾಟಗಾರರು ಕೊಡಬಾರದು.

ಪುಸ್ತಕಗಳ ಬೆಲೆ ಇಳಿದಲ್ಲದೆ ಓದಿನ ಅಭಿರುಚಿ ಬೆಳೆಯುವುದಿಲ್ಲ. ಈಗಂತೂ ಕಾಗದದ ಬೆಲೆ ಅಚ್ಚಿನ ವೆಚ್ಚ ತುಂಬಾ ಹೆಚ್ಚಿದೆ. ಅಂಚೆವೆಚ್ಚ ಲಾರಿ ಬಾಡಿಗೆ ಕೂಡ ಜಾಸ್ತಿಯಾಗಿದೆ. ಇದರ ಜೊತೆಜೊತೆಗೇ ದುರ್ವ್ಯವಹಾರಗಳು ಹೆಚ್ಚಿ ಅಧಿಕ ಲಾಭ ಸಂಪಾದನೆಗೆ ಸಗಟು ವ್ಯಾಪಾರ

ಂತಾದ ಅನೀತಿಯ ಅವಕಾಶಗಳೂ ಲಭಿಸಿ ಪ್ರಕಾಶಕ ಮನ ಬಂದಂತೆ ಬೆಲೆ ಇಡುತ್ತಾನೆ. ಈ ಅನಿಷ್ಟ ರಕ ವಾತಾವರಣ ತೊಲಗಬೇಕು. ಸರ್ಕಾರ ಪ್ರಕಾಶ ಗೆ ಸುಲಭ ಬೆಲೆಯಲ್ಲಿ ಕಾಗದ ದೊರಕಿಸಿ ಕೊಡಬೇಕು. ಚೆ ದರ ಲಾರಿ ಬಾಡಿಗೆ ದರ ಇಳಿಸಬೇಕು. ಯಾವುದೇ ತಕಕ್ಕೆ ಪ್ರಕಾಶನದ ಖರ್ಚು ೩ ಅಥವಾ ೪ ಪಟ್ಟ ಹೆಚ್ಚಿಗೆ ಬೆಲೆ ಇಡದಿರಲು ಪ್ರಕಾಶಕರು ಒಪ್ಪ ಕು. ಸಗಟಾಗಿ ಕೊಳ್ಳುವಾಗ ಅದಕ್ಕಿಂತ ಹೆಚ್ಚು ಬೆಲೆ ಪುಸ್ತಕಗಳನ್ನೂ ಕೊಳ್ಳಬಾರದು; ಇಲ್ಲವೇ ಇಳಿಸಿದ ಯೋಜಿತ ಬೆಲೆಗೆ ಕೊಟ್ಟರೆ ಮಾತ್ರ ತೆಗೆದುಕೊಳ್ಳು ಾಗಿ ಘೋಷಣೆ ಮಾಡಬೇಕು.

ೀಲ ಪುಸ್ತಕಗಳು

ಅಶ್ಲೀಲ ಪುಸ್ತಕಗಳ ಬಗ್ಗೆ ಒಂದು ಮಾತು. ಅಶ್ಲೀಲ ಕಗಳ ಮಾರಾಟಕ್ಕೆ ಸುಲಭವಾಗಿ ಲಾಭ ಸಂಪಾ ಹುದೆಂಬುದೊಂದೇ ಪ್ರಚೋದನೆ. ಆದ್ದರಿಂದ ದೃಢ ಯದಿಂದ ಸರ್ಕಾರ ಈ ಅನೀತಿಯುತ ವ್ಯಾಪಾರ ತಡೆ ಬೇಕು. ಪೋಲೀಸರು ಅಂಗಡಿಯವರ ಮೇಲೆ ಧಾಳಿ ಡುತ್ತಾರೆ. ಅವರನ್ನು ಹಿಡಿದು ದಂಡ ಹಾಕುತ್ತಾರೆ. ಸಾಲದು. ಈ ಪುಸ್ತಕಗಳು ಊರಿಂದ ಸರಬರಾಜಾ ಪ್ರಕಾಶಕರ್‍ಯಾರು ಇದನ್ನು ಪರಿಶೀಲಿಸಬೇಕು. ಯೊಬ್ಬ ಪುಸ್ತಕ ವ್ಯಾಪಾರಿಯೂ ಇಂತಹ ಪುಸ್ತಕ ವರಿಂದ ಬಿಲ್ ಪಡೆದು ತನಿಖೆ ಕಾಲದಲ್ಲಿ ಅದನ್ನು ರ್ಪಡಿಸಬೇಕೆಂದು ನಿರ್ಬಂಧ ಹೇರಬೇಕು. ಪುಸ್ತಕ ರಾಟಗಾರನ ಜತೆಗೆ ಅದನ್ನು ಸರಬರಾಜು ಮಾಡಿದ ಹಾಗೂ ಪ್ರಕಾಶಕರಿಗೂ ಇಬ್ಬರಿಗೂ ಶಿಕ್ಷೆಯಾಗ .

ುಸ್ತಕ ವ್ಯಾಪಾರಿಗೆ ಇರುವ ಮತ್ತೊಂದು ದೊಡ್ಡ ಸ್ಯೆಯೆಂದರೆ ಕರ್ನಾಟಕದಲ್ಲಿ ಪ್ರಕಟವಾಗುವ ಎಲ್ಲ ಮ ಪುಸ್ತಕಗಳನ್ನೂ ಒದಗಿಸುವುದು ಅವನಿಗೆ ್ಯವಾಗದಿರುವುದು. ಒಟ್ಟು ವ್ಯಾಪಾರಿಗಳು ತಮ್ಮ ಟಣೆಗಳನ್ನೂ ತಳ್ಳುವುದರಲ್ಲೂ, ಬಹಳೆಂದರೆ ಸುಲಭ ಖರ್ಚಾಗುವ ಕಥೆ ಕಾದಂಬರಿಗಳನ್ನು ಸಂಗ್ರ ಿಸ್ಸಿಕೊಳ್ಳುವುದರಲ್ಲೂ ತೊಡಗಿರುತ್ತಾರೆ. ಹೀಗಾಗಿ ದೇಶದಾದ್ಯಂತ ಅಚ್ಚಾಗುವ ಉತ್ತಮ ನಾಟಕಗಳು, ಕವನ ಸಂಗ್ರಹಗಳು, ವಿಚಾರಸಾಹಿತ್ಯ, ಹರಟೆ, ವಿಜ್ಞಾನ ಪ್ರಬಂಧಗಳು, ತಾತ್ವಿಕ ಗ್ರಂಥಗಳು ಒಂದೆಡೆ ಸಿಗುವುದು ದುರ್ಲಭವಾಗಿದೆ. ಪುಸ್ತಕ ವ್ಯಾಪಾರಿ, ಈ ಪ್ರಕಾಶಕ ರಲ್ಲನೇಕರ ವ್ಯವಹಾರ ಮಾಡಿ, ಒಂದು ಎರಡು ಪ್ರತಿ ಗಳನ್ನು ತರಿಸಿ ಮಾರಲು ಸಾಧ್ಯವಿಲ್ಲ. ಆದ್ದರಿಂದ ಕನ್ನಡ ಸಾಹಿತ್ಯ ಪರಿಷತ್ತು ಮುಖ್ಯವಾಗಿ ಇಂಥ ಪುಸ್ತಕಗಳ ಒಟ್ಟು ವ್ಯಾಪಾರ ವ್ಯವಸ್ಥೆಯನ್ನು ಮಾಡಬೇಕು. ಹಾಗೆ ತಾವು ತರಿಸಿಕೊಂಡ ಪುಸ್ತಕಗಳ ಪಟ್ಟಿಮಾಡಿ, ಪುಸ್ತಕ ವ್ಯಾಪಾರಿಗಳಿಗೆ ಕಾಲಕಾಲಕ್ಕೆ ಕಳಿಸಿಕೊಡಬೇಕು.

ಪ್ರತಿಸ್ಪರ್ಧಿಯಾಗಬಾರದು

ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳಲು ಬಯಸುತ್ತೇನೆ. ಕನ್ನಡ ಸಾಹಿತ್ಯ ಪರಿಷತ್ತು ಪುಸ್ತಕ ಮಾರಾಟಗಾರರಿಗೆ ಪ್ರತಿಸ್ಪರ್ಧಿಯಾಗಿ ನಿಲ್ಲಬಾರದು. ಸರ್ಕಾರದ ಸಗಟು ವ್ಯಾಪಾರದ (ಬಲ್ಕ್ ಪರ್ಚೇಸ್) ಆರ್ಡರ್ ತನಗೆ ಬರುವಂತೆ ಅದು ಪ್ರಯತ್ನ ಮಾಡಬಾರದು. ಲಾಭವಿಲ್ಲ ನಷ್ಟವಿಲ್ಲ–ಎಂಬ ಆಧಾರದ ಮೇಲೆಯೇ ಪುಸ್ತಕ ಪ್ರದರ್ಶನಗಳನ್ನು ಏರ್ಪಡಿಸುವುದು; ಪುಸ್ತಕ ಪ್ರಚಾರ ಕಾರ್ಯ ಕೈಗೊಳ್ಳುವುದನ್ನು ಮಾಡ ಬೇಕೇ ವಿನಾ ಪುಸ್ತಕ ವ್ಯಾಪಾರಿಗಳ ಹೊಟ್ಟೆಯ ಮೇಲೆ ಹೊಡೆಯುವ ಉದ್ಯಮದಲ್ಲಿ ಅದು ತೊಡಗಬಾರದು.

ಬೇರೆ ಬೇರೆ ವಿಶ್ವವಿದ್ಯಾನಿಲಯದವರು ಮುಖ್ಯವಾಗಿ ಮದರಾಸ್, ಪೂನಾ, ಕೇರಳಗಳಲ್ಲಿ ಕನ್ನಡ ನಾಡಿಗೆ, ನುಡಿಗೆ, ಸಂಬಂಧಪಟ್ಟಂತೆ ಪುಸ್ತಕಗಳನ್ನು ಪ್ರಕಟಣೆ ಮಾಡುವ ಸಾಧ್ಯತೆ ಇದೆ. ಮಾಡಿಯೂ ಇದ್ದಾರೆ. ಈ ಪುಸ್ತಕಗಳು ನಮ್ಮ ನಾಡಿನಲ್ಲಿ ದೊರೆಯುತ್ತಿಲ್ಲ. ದೊರೆ ತರೂ ಶೇ. ೨–೩ಕ್ಕಿಂತ, ಅದರಮೇಲೆ ಹೆಚ್ಚಿನ ಕಮಿಷನ್ ದೊರೆಯುವ ಸಂಭವವಿಲ್ಲ. ಅಲ್ಲದೆ ಅವರ ನಿಯಮಗಳೂ ವ್ಯವಹಾರಕ್ಕೆ ಸಾಧ್ಯವಿಲ್ಲದ್ದು. ಆದ್ದರಿಂದ ಪರಿಷತ್ತು ಆ ಸಂಸ್ಥೆಗಳೊಂದಿಗೆ ವ್ಯವಹಾರಮಾಡಿ, ಪುಸ್ತಕ ವ್ಯಾಪಾರಿಗೆ ನ್ಯಾಯೋಚಿತ ಕಮಿಷನ್ ದೊರೆಯುವ ರೀತಿ ಪರಿಷತ್ತಿ ನಲ್ಲಿ ಆ ಪುಸ್ತಕಗಳು ಯಾವತ್ತೂ ಕಾಲ ದೊರೆಯುವಂತೆ ಮಾಡಬೇಕು. ಇದೊಂದು ವಿನಂತಿ.

ಇತಿಹಾಸವನ್ನೇ ಬದಲಿಸುವ ಪುಸ್ತಕ ಪ್ರಭಾವ

○ ಕೆ. ಎಸ್. ದೇಶಪಾಂಡೆ

ಸಂಸಾರ ವಿಷವೃಕ್ಷಸ್ಯ ದ್ವೇ ಫಲೇ ಅಮೃತೋಪಮೇ
ಕಾವ್ಯಾಮೃತ ರಸಾಸ್ವಾದಃ ಸಲ್ಲಾಪಸ್ಸಜ್ಜನೈಃ ಸಹ.

“ಜೀವನದ ವಿಷವೃಕ್ಷದಲ್ಲಿ ಎರಡು ಅಮೃತದ ಫಲಗಳಿವೆ: ಒಂದು ಕಾವ್ಯದ ಓದು; ಇನ್ನೊಂದು ಸಜ್ಜನರೊಡನೆ ಸಲ್ಲಾಪ”

ಗ್ರಂಥಪಾಲಕರ ಜೀವನದಲ್ಲಿ ಈ ಎರಡು ಫಲಗಳು ಸುಲಭದಲ್ಲಿ ದೊರಕುವಂತಹವು. ಅಂತರರಾಷ್ಟ್ರೀಯ ಪುಸ್ತಕ ವರ್ಷದ ಆಚರಣೆಯ ನಿಮಿತ್ತ ಕನ್ನಡ ಸಾಹಿತ್ಯ ಪರಿಷತ್ತು ರೂಪಿಸಿಕೊಂಡ ಈ ವಿಚಾರ ಸಂಕಿರಣ ಜನಸಾಮಾನ್ಯರಲ್ಲಿ ಓದುವಿಕೆಯನ್ನು ವೃದ್ಧಿಗೊಳಿಸುವ ಸಂಬಂಧವಾಗಿದೆ. ಗ್ರಂಥಗಳು ಮತ್ತು ಅವುಗಳ ವ್ಯಾಸಂಗ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಒಂದಿಲ್ಲದಿದ್ದರೆ, ಇನ್ನೊಂದಿಲ್ಲ. ಇಂತಾಗಿ ನಾನು ನನ್ನ ನಾಲ್ಕು ಮಾತುಗಳಲ್ಲಿ ಗ್ರಂಥಗಳ ಮಹತಿ, ಅವುಗಳ ವ್ಯಾಸಂಗದಿಂದಾಗುವ ಲಾಭ ಹಾಗೂ ಗ್ರಂಥಗಳ ಕೊರತೆಯ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸುತ್ತೇನೆ.

ಗ್ರಂಥಗಳ ಮಹತಿ ಹಾಗೂ ಸ್ಥಾನನಿರ್ಮಿತ

ಈ ಇಡೀ ವರುಷ “ಅಂತರ ರಾಷ್ಟ್ರೀಯ ಗ್ರಂಥ ವರುಷ”ವೆಂದು ಯುನೆಸ್ಕೋದವರಿಂದ ತೀರ್ಮಾನಿತವಾಗಿದೆ. ಇದರ ಫಲವಾಗಿ ಜಗತ್ತಿನ ಮೂಲೆಮೂಲೆಗಳಲ್ಲಿ ಗ್ರಂಥೋತ್ಸವಗಳು ಜರುಗುತ್ತಿವೆ. ಈ ಎಲ್ಲ ಕಾರ್ಯಕ್ರಮಗಳ ಉದ್ದೇಶ: ಗ್ರಂಥಗಳ ಮಹತಿಯನ್ನು ಗುರುತಿಸಿ, ಗಣನೆಗೆ ತಂದುಕೊಂಡು ಅವುಗಳಿಗೆ ನಮ್ಮ ವೈಯಕ್ತಿಕ ಹಾಗೂ ಸಾಮೂಹಿಕ ಜೀವನದಲ್ಲಿ ಸರಿಯಾ ಹಾಗೂ ಶ್ರೇಷ್ಠವಾದ ಸ್ಥಾನವನ್ನು ನಿರ್ಮಿಸಿ ಕೊಡ ವದು.

ಗ್ರಂಥಗಳ ಮಹತಿಯನ್ನು ಕುರಿತು ಬಾರ್ಥೋಲಿನ ಎಂಬ ೧೭ನೆಯ ಶತಮಾನದ ಗ್ರಂಥಪಾಲಕ, ಈ ರೀ ಸಾರಿ ಹೇಳಿದ:

“ಗ್ರಂಥಗಳಿಲ್ಲದಿದ್ದಲ್ಲಿ ದೇವರೇ, ಮೂಕನಾಗಿಬಿಡ ತ್ತಾನೆ; ನ್ಯಾಯದೇವತೆ ನಿದ್ರಿಸುತ್ತಾಳೆ; ವಿಜ್ಞಾ ಸ್ಥಗಿತಗೊಳ್ಳುತ್ತದೆ. ತತ್ತ್ವಜ್ಞಾನ ಕುಂಟುತ್ತದೆ ಸಾಹಿತ್ಯ ಮಂದವಾಗುತ್ತದೆ; ಉಳಿದುದೆಲ್ಲವೂ ಅಂಧಃಕಾ ದಲ್ಲಿ ಅಡಗಿ ಬಿಡುತ್ತದೆ.” ಎಂದು. ಪ್ರಪಂಚದ ಇಂದು ಈ ಮೇಲಿನ ಮಾತನ್ನು ಗಮನದಲ್ಲಿಟ್ಟುಕೊಂಡ ಯಾವ ದೇಶಗಳು ಗ್ರಂಥಗಳಿಗೆ ಸರಿಯಾದ ಮನ್ನ ಕೊಟ್ಟಿದೆಯೋ ಅವೆಲ್ಲ ಪ್ರಗತಿಪಥದಲ್ಲಿವೆ; ಮುಂದುವರಿ ರಾಷ್ಟ್ರಗಳೆಂದು ಗಣಿಸಲ್ಪಡುತ್ತಿವೆ. ಗ್ರಂಥಗಳ ಬೆ ಯನ್ನೂ ಅವುಗಳಲ್ಲಿ ಹುದುಗಿದ ಅಂತಃಶಕ್ತಿಯನ್ನೂ ಅರಿಯದ ದೇಶಗಳೆಲ್ಲ ಇಂದು ಬಹಳ ಹಿಂದುಳಿದ ದೇ ಗಳಾಗಿವೆ.

ಕ್ಯೂಬಾದಲ್ಲಿ ಸಾಧನೆ

ಒಂದೆರಡು ವರುಷಗಳ ಹಿಂದೆ ಯುನೆಸ್ಕೋದ ಅಧಿ ಕಾರಿಯಾಗಿದ್ದ ಶ್ರೀ ಮಾಲ್ಕಮ್ ಆದಿಶೇಷಯ್ಯನವರು ಕ್ಯೂಬಾ ದೇಶಕ್ಕೆ ಭೆಟ್ಟಿ ಇತ್ತಿದ್ದರು. ಆ ದೇಶದ ರಾಜ ಧಾನಿಯಾದ ಹವಾನಾದಲ್ಲಿ ಅವರು ಗಮನಿಸಿದ ವಿಶೇಷ ಸಂಗತಿಯೆಂದರೆ ಪುಸ್ತಕದ ಅಂಗಡಿಗಳಲ್ಲಿ ಎಲ್ಲ ವಿಷಯ ಗಳ ಬಗ್ಗೆಯೂ ಹೊಚ್ಚ ಹೊಸದಾದ, ಅತಿ ಸುಲಭ ಬೆಲೆ ಯಲ್ಲಿ ದೊರೆಯುವ ಗ್ರಂಥಗಳ ಅನೇಕ ಪ್ರತಿಗಳಿದ್ದವು. ಮರುದಿನ ಶ್ರೀ ಆದಿಶೇಷಯ್ಯನವರು, ಕ್ಯೂಬಾದ ಅಧ್ಯಕ್ಷರಾದ ಫಾಯಿಡಲ್ ಕ್ಯಾಸ್ಟ್ರೋ ಅವರಿಗೆ ಈ ಬಗ್ಗೆ ಪ್ರಸ್ತಾಪ ಮಾಡಿದಾಗ, ಕ್ಯಾಸ್ಟ್ರೋ ಅವರು ಉತ್ತರ ರೂಪವಾಗಿ ಹೀಗೆ ಹೇಳಿದರಂತೆ:

“ನಾನು ಅಧಿಕಾರ ವಹಿಸಿಕೊಂಡ ಸಮಯದಲ್ಲಿ ಕ್ಯೂಬಾ ದೇಶದಲ್ಲಿ ೧೦೦ಕ್ಕೆ ೬೦ರಷ್ಟು ಜನ ಅಕ್ಷರ ಶತ್ರು ಗಳಿದ್ದರು. ದೇಶದ ಪ್ರಗತಿ ತ್ವರಿತಗೊಳ್ಳಬೇಕಾದಲ್ಲಿ ಇವರೆಲ್ಲ ಸಾಕ್ಷರರು ಹಾಗೂ ಸುಶಿಕ್ಷಿತರಾಗಲೇಬೇಕಾದದ್ದು ಅಗತ್ಯ ಎಂಬುದನ್ನು ಕಂಡುಕೊಂಡೆ. ಎರಡೇ ವರುಷ ಗಳಲ್ಲಿ ಈ ಗುರಿಯನ್ನು ಸಾಧಿಸಿದೆ. ಆನಂತರ ದೇಶಾಭಿ ವೃದ್ಧಿಗೋಸ್ಕರ ಇವರಿಗೆಲ್ಲ ಹೊಸ ವಿಚಾರ ಪ್ರಣಾಳಿ

ಳ್ಳಿ, ನವೀನ ಸಂಶೋಧನೆಗಳ ವಿವರಗಳನ್ನೊಳ
ಡ ಹೊಸ ಹೊಸ ಗ್ರಂಥಗಳು ಕಡಿಮೆ ಕಿಮ್ಮತ್ತಿಗೆ
ಕುವಂತೆ ಮಾಡಿದೆ. ಇದೀಗ ನೀರಿನಷ್ಟೇ ಸುಲಭ
ಪುಕ್ಕಟೆಯಾಗಿ ಗ್ರಂಥಗಳು ಜನಸಾಮಾನ್ಯರಿಗೆ
ಬಾದಲ್ಲಿ ದೊರೆಯುವಂತಾಗಿದೆ. ”

ನಳಿಯಲು ಕಾರಣ

ಶಿಯ, ಚೀನ, ಹಾಗೂ ಇನ್ನಿತರ ಕಮ್ಯುನಿಸ್ಟ್
ಗಳಲ್ಲಿ ಗ್ರಂಥಗಳು ಅತಿ ಸುಲಭ ಬೆಲೆಯಲ್ಲಿ
ಮಾನ್ಯನಿಗೆ ತನ್ನ ಜ್ಞಾನ ದಾಹವನ್ನಾರಿಸಿಕೊಳ್ಳ
ದೊರಕುತ್ತವೆ.

ರತದ ಪ್ರಥಮ ಪಂಚವಾರ್ಷಿಕ ಯೋಜನೆಯ
ಕೊರತೆಯೆಂದರೆ : ಒಕ್ಕಲುತನ ಹಾಗೂ ಶಿಕ್ಷಣ
ಡು ಮಹತ್ವದ ವಿಷಯಗಳಿಗೆ ಪ್ರಾಶಸ್ತ್ಯ ಕೊಡದೆ
ದು. ಸ್ವಾತಂತ್ರ್ಯದ ಈ ೨೫ ವರ್ಷಗಳಲ್ಲಿ ಮುಂದು
ರಾಷ್ಟ್ರವಾಗಬೇಕಾಗಿದ್ದ ನಾವು ಈ ಕಾರಣದಿಂದ
ಮುಂದುವರಿಯುವ ರಾಷ್ಟ್ರಗಳ ಮಾಲಿಕೆಯಲ್ಲಿ
ದ್ದೇವೆ. ಕ್ಯೂಬಾದ ನಿದರ್ಶನಕ್ಕೆ ವ್ಯತಿರಿಕ್ತವಾದ
ಹರಣೆಯೊಂದನ್ನು ಇಲ್ಲಿ ಕೊಟ್ಟು, ಗ್ರಂಥಗಳ
ಾ ಅವುಗಳ ವ್ಯಾಸಂಗದ ಸಚೇತನ ಸ್ವರೂಪದ
ಯ ಮಾಡಿಕೊಡಬಯಸುತ್ತೇನೆ.

ರ್ಮನಿಯ ಸರ್ವಾಧಿಕಾರಿಯಾಗಿ ಮೆರೆಯುತ್ತಿದ್ದ,
ನುತ್ತಿದ್ದ ಅಡೋಲ್ಫ ಹಿಟ್ಲರನ ನಾಯಕತ್ವದಲ್ಲಿ
ಗಳು ಬರ್ಲಿನ್ ಮಹಾನಗರದಲ್ಲಿ (೧೯೩೩ರ ಮೇ
ದು) ೨೫ ಸಾವಿರ ಮಹಾನ್ ಗ್ರಂಥಗಳನ್ನು ಕಲೆ
ಅವಕ್ಕೆ ಕೊಳ್ಳಿ ಇಟ್ಟು ಕೇಕೆ ಹಾಕಿದರು.
ಾನ್ಯಜನರ ಸ್ವಾತಂತ್ರ್ಯಹರಣ ಮಾಡುವ ಎಲ್ಲ
ತ್ನಗಳಿಗೆ ಗ್ರಂಥಗಳು ಮಾರಕಾಸ್ತ್ರಗಳೆಂಬುದನ್ನ
ಾಝಿಗಳು, ವಿಶ್ವವನ್ನು ತಮ್ಮ ಕಪಿಮುಷ್ಟಿಯಲ್ಲಿ
ಸಿ ಹಿಡಿದಿಡಬೇಕಾದರೆ ವಿಚಾರವಂತ ಗ್ರಂಥಗಳನ್ನು
ಮಾಡುವದು ಮೊದಲನೆಯ ಹೆಜ್ಜೆಯೆಂದು ಬಗೆದು
ಮ ಕೈಗೊಂಡಿದ್ದರು.

ಥಗಳಿಂದ ಇತಿಹಾಸವೇ ಬದಲು

ಂತು ಗ್ರಂಥಗಳು ವ್ಯಕ್ತಿಗಳ, ಜನಾಂಗಗಳ ಇತಿ
ಸವನ್ನೇ ಬದಲು ಮಾಡುತ್ತ ಬಂದಿವೆ. ಗ್ರಂಥಗಳು
ವವಾಗಿದ್ದರೆ, ನಿಃಸತ್ವವಾಗಿದ್ದರೆ, ನಿರುಪಯುಕ್ತ
ವಾಗಿದ್ದರೆ ಅವುಗಳನ್ನಾರು ಬಹಿಷ್ಕರಿಸುತ್ತಿದ್ದರು ? ಗಡೀ
ಪಾರು ಮಾಡುತ್ತಿದ್ದರು ? ಸುಡುತ್ತಿದ್ದರು ?

ಹಂಗರಿ ದೇಶದಲ್ಲಿ ಇಂದಿಗೂ ಪ್ರಚಲಿತವಾದ ಜಾನ ಪದ ಕಥೆಯೊಂದಿದೆ. ಅದರ ತಾತ್ಪರ್ಯ : ಯಾವನೊಬ್ಬ ವ್ಯಕ್ತಿ ತನ್ನ ಜೀವನವನ್ನು ಸಾರ್ಥಕವಾಡಿಕೊಳ್ಳಬೇಕಾ ದರೆ ತನ್ನ ಜೀವಮಾನದಲ್ಲಿ ಒಂದು ಒಳ್ಳೆಯ ಗ್ರಂಥವನ್ನು ಬರೆಯಬೇಕು, ಅಥವಾ ಒಬ್ಬ ಒಳ್ಳೆಯ ಮಗನನ್ನು ಪಡೆಯಬೇಕು, ಕೊನೆಯ ಪಕ್ಷ ೧೦೦ ಫಲವೃಕ್ಷಗಳನ್ನಾ ದರೂ ನೆಟ್ಟು ಬೆಳೆಸಬೇಕು. (ಹಿಡ್‌ಮೆಗ್ಗನ ಕಥೆ)

ಒಳ್ಳೆಯ ಪುಸ್ತಕಗಳ ಫಲ

ಆದರೆ ಗ್ರಂಥ ಬರೆಯುವ ಸಾಮರ್ಥ್ಯ ನಮ್ಮಲ್ಲಿ ಎಲ್ಲ ರಿಗೂ ಹೇಗೆ ಬರಲು ಸಾಧ್ಯ ? ಗ್ರಂಥರಚನೆಯ ಶಕ್ತಿ ಇಲ್ಲದವರು ಒಳ್ಳೆಯ ಗ್ರಂಥಗಳನ್ನು ಓದಿ ತಮ್ಮ ಜೀವನ ವನ್ನು ಸಾರ್ಥಕ ಮಾಡಿಕೊಳ್ಳುವ ಹವ್ಯಾಸವನ್ನಾದರೂ ಇಟ್ಟುಕೊಳ್ಳಬೇಕು. ಒಳ್ಳೆಯ ಗ್ರಂಥಗಳನ್ನೋದಿ ತಮ್ಮ ಜೀವನವನ್ನು ಮಾರ್ಪಡಿಸಿಕೊಂಡವರು, ಮುಂದೆ ಬಂದ ವರು ಅನೇಕ ಜನರಿದ್ದಾರೆ. ಮೈಕೆಲ್ ಫ್ಯಾರಡೇ ಇಂಗ್ಲೆಂಡ್ ದೇಶದ ಪ್ರಸಿದ್ಧ ರಸಾಯನ ಹಾಗೂ ಭೌತ ಶಾಸ್ತ್ರಜ್ಞನಾಗಿ ಹೋದ. ಇವನ ತಂದೆ ಒಬ್ಬ ಬಡ ಕಮ್ಮಾರ. ಫೆರಾಡೇ ಚಿಕ್ಕವನಿದ್ದಾಗ ರೀಬಾ ಎಂಬವನ ಪುಸ್ತಕದ ಅಂಗಡಿಯಲ್ಲಿ ರಟ್ಟುಕಟ್ಟುವವನಿಗೆ ಸಹಾಯಕ ನಾಗಿದ್ದ. ಹೀಗೆ ರಟ್ಟುಕಟ್ಟಲಿಕ್ಕೆ ಬಂದ ಅನೇಕ ಗ್ರಂಥ ಗಳಲ್ಲಿನ ವೈಜ್ಞಾನಿಕ ಗ್ರಂಥಗಳಲ್ಲಿ ಫಾರಡೇ ಆಸಕ್ತಿ ತೋರಿಸಿದ. ಸಮಯ ಸಿಕ್ಕಾಗೆಲ್ಲ ಅವುಗಳ ಆಳ ಅಧ್ಯ ಯನ ಮಾಡಿದ. ಮುಂದೆ ದೊಡ್ಡ ವಿಜ್ಞಾನಿಯಾಗಿ ಅರಳಿದ. ರೂಸ್ಸೋ, ಗಾರ್ಕಿ, ರವೀಂದ್ರನಾಥ ಠಾಕೂರ, ಮಹಾತ್ಮಾಗಾಂಧಿ ಇವರೆಲ್ಲರೂ ಒಳ್ಳೆಯ ಪುಸ್ತಕಗಳ ಪ್ರಭಾವಕ್ಕೊಳಗಾದರು. ಪ್ರಸಿದ್ಧ ಮಾನವಶಾಸ್ತ್ರಜ್ಞ ನಾದ ಮ್ಯಾಲಿನೋಸ್ಕಿ ತರುಣನಿದ್ದಾಗ ಗಣಿತ ಶಾಸ್ತ್ರ, ಭೌತಶಾಸ್ತ್ರಗಳಲ್ಲಿ ಪರಿಣತಿಹೊಂದಿ ಕ್ರ್ಯಾಕೋ ವಿಶ್ವ ವಿದ್ಯಾಲಯದ ಪಿ.ಎಚ್‌ಡಿ, ಪ್ರಶಸ್ತಿ ಪಡೆದಿದ್ದ. ಕಾರ ಣಾಂತರದಿಂದ ಈತ ಮುಂದೆ ಫ್ರೆಝರನರ " ಗೋಲ್ಡನ್ ಬೋ " ಗ್ರಂಥದ ಪರಿಚಯ ಮಾಡಿಕೊಂಡ. ಈ ಗ್ರಂಥದ ಕೊನೆಯ ಸಂಪುಟವನ್ನು ಓದಿ ಮುಗಿಸುವ ಮುನ್ನವೇ ಮ್ಯಾಲಿನೋಸ್ಕಿ ಭೌತ ಹಾಗೂ ರಸಾಯನ ಶಾಸ್ತ್ರಗಳಿಗೆ ಶರಣು ಹೊಡೆದಿದ್ದ.

ಗ್ರಂಥಗಳ ವ್ಯಾಸಂಗದಿಂದ ನಮ್ಮ ಜೀವನ ಎಲ್ಲ ರೀತಿಯಿಂದಲೂ ಪರಿಪೂರ್ಣವಾಗುತ್ತದೆ. ಅದಕ್ಕಾಗಿ ನಾವು ಒಳ್ಳೆಯ ಗ್ರಂಥಗಳ ವ್ಯಾಸಂಗ ಕಲೆಯನ್ನು ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಳ್ಳಬೇಕು.

ಕೇವಲ ಮನರಂಜನೆಗಾಗಿಯಾದರೂ ಓದುವ ಕಲೆಯನ್ನು ನಾವು ಕರಗತ ಮಾಡಿಕೊಂಡಿದ್ದರೆ ಅದರಿಂದ ಲಾಭ ಉಂಟು.

ಲೇಖನ ಕಲೆ ಬಹಳ ಕಠಿಣವಾದ ಕಲೆ ಎಂದು ಈ ಮೊದಲಿಗೆ ಹೇಳಿದೆ. ಎಲ್ಲರಿಗೂ ಎಟಕುವಂತಹ ಕಲೆಯಲ್ಲ ಇದು. ದೇವರೇ ಮೊಟ್ಟಮೊದಲಿನ ಲೇಖಕ ಎಂಬ ಮಾತನ್ನು ನಾವು ನೆನೆದಾಗ ಲೇಖಕರ ಸ್ಥಾನಮಾನ, ಲೇಖನಕಲೆಯ ಮಹತಿ ನಮಗೆ ಮನದಟ್ಟಾಗುವದು; ಇಷ್ಟು ಪರಿಶ್ರಮದಿಂದ ಬರೆದ ಗ್ರಂಥಗಳನ್ನು ಓದಲು ಜನ ಬೇಡವೇ? ಜನ್ನಕವಿ ಹೇಳಿದಂತೆ, "ಮಾಲೆಗಾರನ ಪೊಸ ಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದೇ ?"

ನಮ್ಮ ದೇಶದಲ್ಲಿ ಸಾಕ್ಷರಿಗಳ ಸಂಖ್ಯೆ ಹೆಚ್ಚಾಗುತ್ತ ನಡೆದಿದೆ. ಶಾಲೆಗೆ, ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆ. (ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆ ಇದೀಗ ೩೦ ಲಕ್ಷಕ್ಕೂ ಮೀರಿದೆ)

ಯುನೆಸ್ಕೋ ಯೋಜನೆ

ಯುನೆಸ್ಕೋದವರು "ಬುಕ್ ಡೆವಲೆಪ್‌ಮೆಂಟ್ ಇನ್ ದಿ ಸರ್ವಿಸ್ ಆಫ್ ಎಜ್ಯುಕೇಶನ್" ಎಂಬ ಯೋಜನೆಯೊಂದನ್ನು ಈ ವರ್ಷದಲ್ಲಿ ರೂಪಿಸಿಕೊಂಡಿದ್ದಾರೆ. ಇದರ ಲೆಕ್ಕಾಚಾರಗಳ ಪ್ರಕಾರ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಮುಂದಿನ ೨ ದಶಕಗಳಲ್ಲಿ ಶಿಕ್ಷಣದ ಪ್ರಾಥಮಿಕ ಹಂತದಲ್ಲಿ ಪ್ರತಿ ವಿದ್ಯಾರ್ಥಿಗೆ ತಲಾ ೨೫ರಂತೆ, ಶಿಕ್ಷಕನಿಗೆ ೫೦೦ರಂತೆ, ಇನ್‌ಸ್ಪೆಕ್ಟರರುಗಳಿಗೆ ೭೦೦ರಂತೆ ಗ್ರಂಥಗಳನ್ನು ಒದಗಿಸಬೇಕಾಗುತ್ತದೆ; ಮಾಧ್ಯಮಿಕ ಹಂತದಲ್ಲಿ ವಿದ್ಯಾರ್ಥಿಗಳಿಗೆ ತಲಾ ೭೨ರಂತೆ, ತಾಂತ್ರಿಕ ಶಿಕ್ಷಣಕ್ಕೆ ೫೩ರಿಂದ ೭೭ರಂತೆ, ಗ್ರಂಥಗಳು ಅವಶ್ಯವಾಗುತ್ತವೆ. ಉಚ್ಚ ಶಿಕ್ಷಣದ ಹಂತದಲ್ಲೆ ವಿದ್ಯಾರ್ಥಿಗಳಿಗೆ ತಲಾ ೧೨೫ ಗ್ರಂಥಗಳು ಶಿಕ್ಷಕರಿಗೆ ತಲಾ ೯೦೦ ಗ್ರಂಥಗಳು ಬೇಕಾಗುತ್ತವೆ.

ಗ್ರಂಥಾಲಯಗಳ ಅಭಾವ–ಪುಸ್ತಕಗಳ ಕೊರತೆ

ವಾಚನಾಭಿರುಚಿಯುಳ್ಳ ಶ್ರೀ ಸಾಮಾನ್ಯರ ಸಂಖ್ಯೆಯೂ ಬೆಳೆಯುತ್ತ ನಡೆದಿದೆ. ಆದರೆ ಇವರೆಲ್ಲರಿಗೂ ಅವರ ಜ್ಞಾನತೃಷೆಯನ್ನು ತಣಿಸಿಕೊಳ್ಳುವ ಸಾಧನಗಳಾದ ಗ್ರಂಥಗಳ, ಗ್ರಂಥಾಲಯಗಳ ಅಭಾವ ಮಾತ್ರ ದಿನೇ ದಿನೇ ಹೆಚ್ಚುತ್ತ ನಡೆದಿದೆ.

ಇಡೀ ದಕ್ಷಿಣ ಏಶಿಯಾದಲ್ಲಿಯೇ ಪ್ರಪ್ರಥಮವಾದ ಆದರ್ಶವಾದ ಸಾರ್ವಜನಿಕ ಗ್ರಂಥಾಲಯವೆಂದು, ದಿಲ್ಲಿಯ ಸಾರ್ವಜನಿಕ ಗ್ರಂಥಾಲಯ ಯುನೆಸ್ಕೋದ ನೆರವಿನಿಂದ ೧೯೫೧ರಲ್ಲಿ ಸ್ಥಾಪಿತವಾಯಿತು. ದಿಲ್ಲಿಯ ಶ್ರೀಸಾಮಾನ್ಯನಿಗೆ ಇದರಿಂದ ಅಮಿತಾನಂದವಾಯಿತು. ಗ್ರಂಥಾಲಯದಲ್ಲಿ ಹಿಂದೀ, ಉರ್ದು, ಪಂಜಾಬೀ ಹಾಗೂ ಇನ್ನಿತರ ದೇಶೀಭಾಷೆಗಳಲ್ಲಿನ ಪುಸ್ತಕ ಸಂಗ್ರಹಕ್ಕೆ ಆದ್ಯತೆ ಕೊಡಲಾಗಿದ್ದಿತು. ಆದರೆ ಗ್ರಂಥಾಲಯ ಪ್ರಾರಂಭವಾದ ೫–೬ ವರುಷಗಳಲ್ಲಿಯೇ ಅದರ ಓದುಗರು ಅಲ್ಲಿದ್ದ ಗ್ರಂಥಗಳನ್ನೆಲ್ಲ ಓದಿ ಹೊಸ ಗ್ರಂಥಗಳಿಗಾಗಿ ಚಾತಕ ಪಕ್ಷಿಯಂತೆ ಕಾಯುತ್ತ ಕುಳಿತುಕೊಳ್ಳಬೇಕಾಯಿತು. ದೇಶೀ ಭಾಷೆಗಳಲ್ಲಿನ ಗ್ರಂಥಗಳಿಗೆ ಬೇಡಿಕೆ ಹೆಚ್ಚಾಗಿ, ಓದುಗರಿಗೆ ಅವುಗಳ ಅಭಾವದಿಂದ ನಿರಾಶೆಯಾಯಿತು.

ಕಳೆದ ಕೆಲವು ವರುಷಗಳಲ್ಲಿ ಈ ದಿಶೆಯಲ್ಲಿ ಸಾಹಿತ್ಯ ಅಕಾಡಮಿ, ನ್ಯಾಷನಲ್ ಬುಕ್ ಟ್ರಸ್ಟ್, ದಕ್ಷಿಣ ಭಾರತ ಭಾಷಾಸಮಿತಿ, ವಿಶ್ವವಿದ್ಯಾಲಯಗಳು, ಇತ್ಯಾದಿ ಅನೇಕ ಸಂಘ ಸಂಸ್ಥೆಗಳ ಚಟುವಟಿಕೆಗಳ ಮೂಲಕ ಭಾರತದಲ್ಲಿ ಪ್ರಕಟವಾಗುವ ಗ್ರಂಥಗಳ ಸಂಖ್ಯೆ ಇತ್ತೀಚೆಗೆ ಹೆಚ್ಚಾಗಿದೆ. ಆದರೆ ಪ್ರಪಂಚದಲ್ಲಿನ ಇನ್ನುಳಿದ ದೇಶಗಳೊಳಗಿನ ಪುಸ್ತಕ ಪ್ರಕಟನೆಯ ಗತಿಯನ್ನು ಹಾಗೂ ಗಾತ್ರವನ್ನು ಗಮನಕ್ಕೆ ತಂದುಕೊಂಡಾಗ ನಾವು ಈ ದಿಶೆಯಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಬೇಕಾದುದು ನಮಗೆ ಸುಸ್ಪಷ್ಟವಾಗಿ ಕಂಡುಬರುತ್ತದೆ. ಇದಕ್ಕೆ ನಿದರ್ಶನವಾಗಿ ಕೆಳಗಿನ ಅಂಕಿ ಸಂಖ್ಯೆಗಳನ್ನು ಗಮನಿಸಬಹುದು. (ಅನುಬಂಧಗಳನ್ನು ನೋಡಬೇಕು)

ಈ ಅಂಕಿ ಸಂಖ್ಯೆಗಳಿಂದ ಭಾರತ ಗ್ರಂಥೋದ್ಯಮದಲ್ಲಿ ಇನ್ನಷ್ಟು ಮುಂದುವರೆಯಬೇಕಾಗಿದೆಯೆಂಬುದು ಖಚಿತವಾಗುತ್ತದೆ. ನಮ್ಮ ದೇಶದಲ್ಲಿ ಪ್ರತಿ ವರುಷ ೧೧ ಸಾವಿರಕ್ಕೂ ಮೇಲ್ಪಟ್ಟು ಗ್ರಂಥಗಳು ಪ್ರಕಟವಾಗುತ್ತಿವೆ. ಇವುಗಳಲ್ಲಿ ಪಠ್ಯಪುಸ್ತಕಗಳೆಷ್ಟು, ವಿಷಯ ಪ್ರಾತಿನಿಧ್ಯ ಹೇಗೆ; ಸಾಮಾನ್ಯ ಜನರ ಕುತೂಹಲವನ್ನು ಕೆರಳಿಸುವ

ಥಗಳು ಎಷ್ಟು; ಯಾವ ಯಾವ ವಿಷಯಗಳಲ್ಲಿ ಥಗಳ ಅಭಾವವಿದೆ ಎಂಬ ಬಗ್ಗೆ ಸಮೀಕ್ಷೆಯೊಂದು ಯುವುದು ಅತ್ಯಗತ್ಯ. ಅದರಲ್ಲೂ ಇಂದಿನ ವೈಜ್ಞಾ ಯುಗದಲ್ಲಿ ವೈಜ್ಞಾನಿಕ ಗ್ರಂಥಗಳಿಗೆ ಬೇಡಿಕೆ ಹೆಚ್ಚಿ ಗ ಇಂಥ ಗ್ರಂಥಗಳ ರಚನೆ ಹಾಗೂ ಪ್ರಕಟನೆ ಾಧಾನಕರ ರೀತಿಯಲ್ಲಿ ನಡೆದು ಬಂದಿದೆಯೇ ಎಂಬು ್ನು ವಿಚಾರಿಸುವದತ್ಯಗತ್ಯ. (ಶೇ. ೧೦ರಿಂದ ೨೦ ್ಟು ವಿಜ್ಞಾನದ ಪುಸ್ತಕಗಳು)

ಕನ್ನಡದ ಮಟ್ಟಿಗೆ ಹೇಳಬೇಕಾದರೆ ಮೈಸೂರು ವಿಶ್ವ ್ಯಾನಿಲಯದ ಸಾಹಸದಿಂದಾಗಿ ಕನ್ನಡದಲ್ಲಿ ಇಲ್ಲಿಯ ಗೆ ಪ್ರಕಟವಾದ ಹಾಗೂ ಸದ್ಯ ಪ್ರಕಟವಾಗುತ್ತಿರುವ ಥಗಳ ಪಟ್ಟಿ ಮತ್ತು ವಿಮರ್ಶಾತ್ಮಕ ಸಮೀಕ್ಷೆ ಇವು ಯೋಜನೆ ಹಂತ ಹಂತವಾಗಿ ಕಾರ್ಯಗತವಾಗುತ್ತ .

್ನಡದಲ್ಲಿ ವಿಜ್ಞಾನ ಗ್ರಂಥಗಳು

ವಿಜ್ಞಾನಕ್ಷೇತ್ರದಲ್ಲಿ ಒಟ್ಟಾರೆ ೨,೦೦೦ದಷ್ಟು ಗ್ರಂಥ ೧೯೬೭ರವರೆಗೆ ಪ್ರಕಟವಾಗಿದ್ದಿರಲಿಕ್ಕೆ ಸಾಕು. ಗಳ ಪೈಕಿ ೧೫೦೦ ಗ್ರಂಥಗಳ ಸೂಚಿ ಈಗಾಗಲೇ ಟವಾಗಿದೆ. ವಿಜ್ಞಾನ ಪ್ರಪಂಚದ ಅನೇಕ ಅತ್ಯಾ ಕ ಶಾಖೆಗಳಲ್ಲೂ ಕನ್ನಡದಲ್ಲಿ ಗ್ರಂಥಗಳು ಪ್ರಕಟ ವೆಯೆಂಬುದನ್ನು ನೆನೆದಾಗ ಮನಸ್ಸಿಗೆ ನೆಮ್ಮದಿ ಗುತ್ತದಾದರೂ, "ವಾತಾವರಣ ಕಲ್ಮಷ" ಲೇಜರ ಗಳು, ಜಂಬೋವಿಮಾನಗಳು, ಓ ಸಿ ಯ ನ್ ರ, ಮುಂತಾದ ಪ್ರಸ್ತುತ ಪ್ರಚಾರದಲ್ಲಿರುವ ವಿಷ ಳ ಬಗ್ಗೆ ಗ್ರಂಥಗಳಿಲ್ಲದಿರುವದು ಮನಸ್ಸಿಗೆ ನೋವ ಟುಮಾಡುತ್ತದೆ. ಇಂಥ ವಿಷಯಗಳ ಬಗ್ಗೆ ಜನ ಆಸಕ್ತಿ ಬಹಳ. ಅವುಗಳ ಮೇಲೆ ಕನ್ನಡದಲ್ಲಿ ಗ್ರಂಥ ಯಾಗುವದು ಅತ್ಯವಶ್ಯ.

ದರಂತೆ ಇನ್ನುಳಿದ ವಿಷಯಗಳಲ್ಲಿನ ಗ್ರಂಥಗಳ ಸಮೀ ನ್ನು, ಯಾವ ಯಾವ ವಿಷಯಗಳಲ್ಲಿ ಕನ್ನಡದಲ್ಲಿ ಥಗಳಿಲ್ಲವೋ ಅವುಗಳನ್ನು ಗುರುತಿಸಿಕೊಂಡು ಗ್ರಂಥ ಗೆ ಹಾಗೂ ಪ್ರಕಟನೆಗೆ ಲೇಖಕರು ಕೈಹಾಕುವದು ವಶ್ಯ.

ಸೂಂತರಗಳಲ್ಲಿ

ಪ್ರಕಟವಾದ ಗ್ರಂಥಗಳನ್ನು ಕೊಂಡುಕೊಂಡು ಅವುಗಳನ್ನು ಓದುಗರಿಗೆ ಸಮರ್ಪಕವಾದ ರೀತಿಯಲ್ಲಿ ಒದಗಿಸುವಲ್ಲಿ ನಮ್ಮ ಗ್ರಂಥಾಲಯ ಸೇವೆಯು ಬಹು ಮಟ್ಟಿಗೆ ಪ್ರಗತಿ ಸಾಧಿಸಬೇಕಾಗಿದೆ. ಪ್ರತಿ ಶತ ೮೦ ರಷ್ಟು ಜನ ನಮ್ಮ ದೇಶದ ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ಇವರಲ್ಲಿ ಸಾಕ್ಷರರಾದ ಪ್ರತಿ ಶತ ೩೦ರಷ್ಟು ಜನರಿಗೆ ಸಮರ್ಪಕವಾದ ಗ್ರಂಥಾಲಯ ಸೇವೆ ಲಭ್ಯವಿಲ್ಲ.

ಪಟ್ಟಣ ಪ್ರದೇಶಗಳಲ್ಲಿ

ಮಹಾನಗರಗಳನ್ನೂ ಹಾಗೂ ವಿಶ್ವವಿದ್ಯಾಲಯ ಕೇಂದ್ರಗಳನ್ನೂ ಬಿಟ್ಟು ಇನ್ನುಳಿದ ನಗರಗಳಲ್ಲಿ ಹಾಗೂ ಪಟ್ಟಣಗಳಲ್ಲಿ ಗ್ರಂಥಾಲಯ ಸೇವೆಯು ದೊರೆಯುವದಿಲ್ಲ. ಸುದೈವದಿಂದ ಮೈಸೂರು ರಾಜ್ಯದಲ್ಲಿ ೧೯೬೫ರಿಂದ ಸಾರ್ವಜನಿಕ ಗ್ರಂಥಾಲಯ ಕಾಯ್ದೆ ಜಾರಿಗೆ ಬಂದು ರಾಜ್ಯದಲ್ಲಿನ ಓದುಗರಿಗೆ ಬೇಕಾದ ಪುಸ್ತಕಗಳು ಸುಲಭ ವಾಗಿ ದೊರೆಯುವ ದಿನಗಳು ಸನ್ನಿಹಿತವಾಗಿವೆ. ರಾಜ್ಯ ಸರಕಾರ ರಾಜ್ಯದ ತುಂಬ ಸಾರ್ವಜನಿಕ ಗ್ರಂಥಾಲಯ ಗಳ ತೋರಣವನ್ನು ತೂಗುವ ಎತ್ತುಗಡೆಯಲ್ಲಿದೆ. ಇದೆಲ್ಲ ಒಳ್ಳೆಯ ಭವಿಷ್ಯವನ್ನು ಸೂಚಿಸುತ್ತದೆ.

ವ್ಯಾಸಂಗಪ್ರಿಯ ಕನ್ನಡಿಗರು

ಕನ್ನಡ ನಾಡಿನ ಜನ ವ್ಯಾಸಂಗಪ್ರಿಯರು. ಗ್ರಂಥಪ್ರಿಯರು. ಅವರಿಗೆ ಈಗ ಬೇಕಾದುದು ವಿಧವಿಧವಾದ, ಸಿರಿವಂತವಾದ ಗ್ರಂಥಗಳ ಸಮೃದ್ಧಿ. ಈ ದಿಶೆಯಲ್ಲಿ ಎಲ್ಲ ಬರಹಗಾರರು ಶ್ರಮಿಸಬೇಕಾದುದು ಅತ್ಯವಶ್ಯ. ಈ ಮಾತಿಗೆ ನಿದರ್ಶನವಾಗಿ ಶ್ರೀ ವಿಜಯಕೃತ "ಕವಿರಾಜಮಾರ್ಗ" ದಲ್ಲಿನ ಕೆಳಗಿನ ಉದ್ಧರಣೆಯನ್ನು ನಾವು ಜ್ಞಾಪಕಕ್ಕೆ ತಂದುಕೊಳ್ಳಬಹುದು :

ಪದನರಿದು ನುಡಿಯಲುಂ ನುಡಿ
ದುದನರಿದಾರಯಲು ಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತೋ
ದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್.

ಓದಿ, ಹೆಚ್ಚಿನ ಸಿರಿವಂತವಾದ ಬಾಳನ್ನು ಬಾಳ ಬೇಕು.

ಅನುಬಂಧಗಳು

ಭಾರತದಲ್ಲಿ ಗ್ರಂಥಗಳ ಕೊರತೆ

ಪ್ರಪಂಚದಲ್ಲಿ ೧೯೬೯-೭೦ರಲ್ಲಿ ಪ್ರಕಟವಾದ ಗ್ರಂಥಗಳ ಸಂಖ್ಯೆ : ೫,೦೦,೦೦೦

ಯುರೋಪಖಂಡದಲ್ಲಿ (ರಶಿಯವನ್ನುಳಿದು) ೨,೨೫,೦೦೦ [ಶೇ. ೪೫ ಗ್ರಂಥಗಳು. ಜನಸಂಖ್ಯೆ ಶೇ. ೧೩ ಮಾತ್ರ ಪ್ರತಿನಿಧಿಸುತ್ತವೆ.]

ಮುಂದುವರಿಯುತ್ತಿರುವ ರಾಷ್ಟ್ರಗಳು :

ಲ್ಯಾಟಿನ್ ಅಮೆರಿಕ, ಆಫ್ರಿಕ, ಏಷ್ಯ (ಜಪಾನು ಬಿಟ್ಟು ಮತ್ತು ಚೀಣಾ ಸೇರಿ). ವಿಶ್ವದ ಪುಸ್ತಕಗಳಲ್ಲಿ ಶೇ. ೧೯.

ಏಷ್ಯ : ಶೇ. ೨೦ (ವಿಶ್ವ ಜನಸಂಖ್ಯೆಯ ಶೇ. ೫೬ ರಷ್ಟು).

೧೯೭೦ರಲ್ಲಿ ಪುಸ್ತಕೋತ್ಪನ್ನ—ದೇಶಾವಾರು

ಭಾರತ : ೧೧,೪೧೩
ಅಮೆರಿಕ : ೫೯,೦೦೦
ಜಪಾನ್ : ೩೧,೦೦೦
ಬ್ರಿಟನ್ : ೩೧,೦೦೦
ರಷ್ಯ : ೭೫,೦೦೦

೧೦ ಲಕ್ಷ ಜನಸಂಖ್ಯೆಗನುಗುಣವಾಗಿ ಪ್ರಕಟವಾದ ಶೀರ್ಷಿಕೆಗಳ ಸಂಖ್ಯೆ :

ಇಡೀ ವಿಶ್ವಕ್ಕೆ ೧೪೦
ಏಷ್ಯ ೫೧
ಭಾರತ ೨೦ಕ್ಕಿಂತ ಕಡಮೆ.

ಗ್ರಂಥ ಸ್ಫೋಟ

ಕ್ರಿ.ಶ. ೧೫೦೦ರಲ್ಲಿ ಯುರೋಪಿನಲ್ಲಿದ್ದ ಪುಸ್ತಕಗಳ ಸಂಖ್ಯೆ : ೩೦,೦೦೦
೧೬ನೇ ಶತಮಾನ ೨,೫೦,೦೦೦
೧೯ನೇ ಶತಮಾನ ೭೦,೦೦,೦೦೦
೨೦ನೇ ಶತಮಾನ (ವಿಶ್ವದಲ್ಲಿ) ೨,೫೦,೦೦,೦೦೦

ಕೆ.ಜಿ. ಲೆಕ್ಕದಲ್ಲಿ ಒಬ್ಬ ವ್ಯಕ್ತಿ, ಒಂದು ವರ್ಷದಲ್ಲಿ ಬಳಸುವ (ಮುದ್ರಣ, ಬರಹ) ಕಾಗದ.

ಪ್ರದೇಶ	೧೯೫೦-೧೯೫೪	೧೯೬೭	ಶೇಕಡಾವಾರು ವ್ಯತ್ಯಾಸ
ಅಪಾರ ಬಳಕೆಯ ಪ್ರದೇಶ :			
ಯುರೋಪ್	೬.೮	೧೬.೯	+ ೧೪೮
ಜಪಾನ್	೪.೦	೧೨.೨	+ ೨೦೫
ಉತ್ತರ ಅಮೆರಿಕ (ಕೆನಡಾ ಸೇರಿ)	೨೬.೫	೪೩.೫	+ ೬೪
ಓಸೀನಿಯ	೭.೧	೧೦.೩	+ ೪೫
ರಷ್ಯ	೨.೧	೪.೨	+ ೧೦೦
ಕಡಮೆ ಬಳಕೆ ಪ್ರದೇಶ :			
ಆಫ್ರಿಕ	೦.೪	೦.೮	+ ೧೦೦
ಏಷ್ಯ (ಜಪಾನ್, ಚೀಣಾ ಬಿಟ್ಟು)	೦.೩	೦.೯	+ ೨೦೦
ಭಾರತ		೦.೭	
ಲ್ಯಾಟಿನ್ ಅಮೆರಿಕ	೧.೭	೨.೪	+ ೪೧

ಪುರಾತನ ಗ್ರಂಥಗಳನ್ನು ಸಂಗ್ರಹಿಸಿದ ಸದುದ್ದೇಶವನ್ನು ಮರೆತು ಪುಸ್ತಕಗಳನ್ನು ಹುಳುತಿನ್ನಲಿಕ್ಕೆ ಬಿಡುವುದೊಳ್ಳೆಯದಲ್ಲ. ಈ ವಿಷಯದಲ್ಲಿ ನಾವು ಜಾಗ್ರತೆಯನ್ನು ಕಳೆದುಕೊಂಡು ಸುಷುಪ್ತಿಯಲ್ಲಿರುವುದು ಯುಕ್ತವಲ್ಲ.

—ಶ್ರೀ ತಾತಾಚಾರ್ಯರು

...ದ್ಯಾರ್ಥಿಗಳಲ್ಲಿ ...ಾಚನಾಭಿರುಚಿ*

ಅನಂತಪದ್ಮನಾಭರಾವ್

...ದ್ಯಾರ್ಥಿಗಳಲ್ಲಿ ವಾಚನಾಭಿರುಚಿ ದಿನೇ ದಿನೇ ಕಡಿಮೆ ...ಯಾಗುತ್ತಿದೆ ಎಂಬ ಆರೋಪ ಈಗೀಗ ಕೇಳಿಬರು... ಅನೇಕ ಹಿರಿಯರು ತಮ್ಮ ಕಾಲದ ವಿದ್ಯಾಭ್ಯಾಸ ...ನ್ನೂ, ಇಂದಿನ ವಿದ್ಯಾರ್ಥಿಗಳ ಮನೋಭಾವವನ್ನೂ, ...ನೋಡಿ ಇಂದಿನವರನ್ನು ಹಳಿಯುವುದೂ ಉಂಟು. ...್ಯಾರ್ಥಿಗಳಲ್ಲಿ ವಾಚನಾಭಿರುಚಿ ಕಡಿಮೆಯಾಗುತ್ತಿದೆ ...ನೋ ನಿಜ. ಆದರೆ ಇದಕ್ಕೆ ಕಾರಣಗಳೇನು? ...ಕ್ಕೆ ವಿದ್ಯಾರ್ಥಿಯೇ ಸಂಪೂರ್ಣ ಜವಾಬ್ದಾರನೋ ...? ಎಂಬುದರ ಬಗ್ಗೆ ವಿವೇಚಿಸಬೇಕಾದುದು ಆಗತ್ಯ.

...ಣಗಳು

೧. ವಿದ್ಯಾರ್ಥಿಗಳಲ್ಲಿ ವಾಚನಾಭಿರುಚಿ ಕಡಿಮೆಯಾಗಿರುವುದಕ್ಕೆ ಪ್ರಮುಖವಾಗಿ ಇಂದಿನ ವಿದ್ಯಾಭ್ಯಾಸದ ಪದ್ಧತಿಯೇ ಕಾರಣ. ವಿದ್ಯಾರ್ಥಿಯನ್ನು ಅವನ ಸ್ವಂತ ಪರಿಶ್ರಮ, ಪರಿಜ್ಞಾನ, ತಿಳುವಳಿಕೆಗಳ ಮೇಲೆ ಅಳೆಯದೆ ವಾರ್ಷಿಕ ಪರೀಕ್ಷೆಗಳ ಫಲಿತಾಂಶದ ಮೇಲೆ ಅಳೆಯಲಾಗುತ್ತಿದೆ. ಒಬ್ಬ ವಿದ್ಯಾರ್ಥಿಯು ಯೋಗ್ಯನಿರಲಿ, ಅಯೋಗ್ಯನಿರಲಿ, ದಡ್ಡನಿರಲಿ, ಬುದ್ಧಿವಂತನಿರಲಿ, ಅವನು ಪರೀಕ್ಷೆಯಲ್ಲಿ ಹೇಗೆ ಬರೆಯುತ್ತಾನೆಂಬುದರ ಮೇಲೆ ಅವನ ಯೋಗ್ಯತೆಯನ್ನು ನಿರ್ಣಯಿಸಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ ವಾಚನ, ಅಭ್ಯಾಸಗಳು ಇಂದು ಮಾಯವಾಗಿ ಬರಿಯ ಪರೀಕ್ಷಾ ದೃಷ್ಟಿಯೇ ಬೆಳೆಯುತ್ತಿದೆ. ವಿದ್ಯೆಯಿರುವುದು ತಿಳಿವಳಿಕೆಗಾಗಿ, ಜ್ಞಾನಾರ್ಜನೆಗಾಗಿ ಎಂಬ ತತ್ವವೇ ದೂರವಾಗಿ ವಿದ್ಯೆಯಿರುವುದು ಡಿಗ್ರಿಗಾಗಿ, ಡಿಗ್ರಿ ಪಡೆವುದು ಸಂಬಳದ ಕೆಲಸಕ್ಕಾಗಿ ಎಂಬ ಭಾವನೆ ಬೆಳೆದು ಬರುತ್ತಿದೆ. ಆದ್ದರಿಂದ ಇಂದಿನ ವಿದ್ಯಾರ್ಥಿಯು ಯಾವಾಗಲೂ ಪಠ್ಯ ವಿಷಯಗಳ ಬಗ್ಗೆ ಚಿಂತಿಸುತ್ತಾನೆಯೇ ವಿನಾ ಪಠ್ಯೇತರ ವಿಷಯಗಳ ಬಗ್ಗೆ ಅಲ್ಲ.

೨. ಕೆಲವೊಂದು ಶಾಲಾ ಕಾಲೇಜುಗಳು ವಿದ್ಯಾರ್ಥಿಗಳನ್ನು ಪರೀಕ್ಷೆಗಾಗಿಯೇ ತಯ್ಯಾರು ಮಾಡುವ ತರಪೇತಿ ಕೇಂದ್ರಗಳೇ ಅಗಿವೆ. ವಿದ್ಯಾರ್ಥಿಗಳಿಗೆ ಪಠ್ಯೇತರ ವಿಷಯಗಳಲ್ಲಿ ನಿರಾಸಕ್ತಿ ಉಂಟು ಮಾಡಲು, ಅವರನ್ನು ಕುಡುಮಿಗಳನ್ನಾಗಿ ಮಾಡಲು ಅಲ್ಲಿನ ಅಧ್ಯಾಪಕರೇ ಕಾರಣರಾಗಿರುತ್ತಾರೆಂದರೆ ಅಚ್ಚರಿಪಡಬೇಕಿಲ್ಲ. ಈ ಅಧ್ಯಾಪಕರು ತುಂಬಾ ಬುದ್ಧಿವಂತರು, ತಿಳುವಳಿಕಸ್ಥರು, ನಿಜ. ಆದರೆ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ತಯಾರು ಮಾಡುವುದಷ್ಟೇ ಇವರ ಉದ್ದೇಶವಾದ್ದರಿಂದ–ಇದು ಸದ್ಭಾವನೆಯೇ ಆದರೂ–ಸಂಕುಚಿತ ಪ್ರವೃತ್ತಿ ಎನ್ನದೆ ಗತ್ಯಂತರವಿಲ್ಲ. ಕೆಲವು ವಿದ್ಯಾರ್ಥಿಗಳು ಪಠ್ಯ ಪುಸ್ತಕಗಳನ್ನು ಕೂಡ ಓದದೆ ತಮ್ಮ ಅಧ್ಯಾಪಕರು ಕೊಡುವ ನೋಟ್ಸಿನಿಂದಲೇ ತೃಪ್ತರಾಗುತ್ತಾರೆ. ಕೆಲವೊಮ್ಮೆ ಅಧ್ಯಾಪಕರು 'ಇಷ್ಟನ್ನು ನೋಡಿಕೊಳ್ಳಿ ಬೇಕಾದಷ್ಟಾಯಿತು' ಎಂದು ಮುಂದೆ ಅಭ್ಯಸಿಸಬೇಕು ಎಂದು ಇದ್ದ ವಿದ್ಯಾರ್ಥಿಯ ಮನಸ್ಸಿಗೂ ಮಟ್ಟುಗೋಲು ಹಾಕುವುದುಂಟು; ನಾನು ಇಲ್ಲಿ ಯಾರನ್ನೂ ಆರೋಪಿಸಬೇಕೆಂಬ ಹಂಬಲವುಳ್ಳವನಲ್ಲ. ಪರೀಕ್ಷಾ ದೃಷ್ಟಿ ಕೇವಲ ವಿದ್ಯಾರ್ಥಿಗಳಲ್ಲಿ ಅಷ್ಟೇ ಅಲ್ಲ, ಅಧ್ಯಾಪಕರಲ್ಲಿಯೂ ಬಲವತ್ತರವಾಗಿ ಬೇರೂರಿದೆ ಎಂಬುದನ್ನು ಒತ್ತಿ ಹೇಳುತ್ತಿದ್ದೇನೆ ಅಷ್ಟೆ.

ವಿಜ್ಞಾನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾದ ನನ್ನ ಸ್ನೇಹಿತನೊಬ್ಬನನ್ನು ನಾನು ಅಭಿನಂದಿಸಿ ಅವನ

* ...ಜನತೆಯಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸುವ ಬಗ್ಗೆ ...ನಡೆದ ಗೋಷ್ಠಿಯಲ್ಲಿ ವಿದ್ಯಾರ್ಥಿ ಪ್ರತಿನಿಧಿಯಾಗಿ ಮಾಡಿದ ಭಾಷಣದ ಸಾರಾಂಶ.

ಅಭ್ಯಾಸದ ಬಗೆಗೆ ಪ್ರಶ್ನಿಸಿದಾಗ ಅವನು ಪಠ್ಯಪುಸ್ತಕಗಳನ್ನು ಕಣ್ಣಾರೆ ಕೂಡ ನೋಡಿಲ್ಲ ಎಂದು ಹೇಳಿದ. ಅಧ್ಯಾಪಕರು ಕೊಟ್ಟ ನೋಟ್ಸೇ ಅವನ ಶ್ರೇಯಸ್ಸಿಗೆ ಕಾರಣವಂತೆ.

೩. ನಮ್ಮಲ್ಲಿ ವಾಚನಶೀಲತೆಯನ್ನು ಬೆಳೆಸಿಕೊಂಡಿರುವ ಅಧ್ಯಾಪಕರ ಸಂಖ್ಯೆ ಬಹಳ ಕಡಿಮೆ. ದಿನಕ್ಕೆ ಇಂತಿಷ್ಟು ಓದಿಯೇ ವಿದ್ಯಾರ್ಥಿಗಳಿಗೆ ಹೊಸ ವಿಷಯಗಳಲ್ಲಿ ಆಸಕ್ತಿ ಹುಟ್ಟಿಸುತ್ತೇನೆ ಎಂಬ ಅಧ್ಯಾಪಕರ ಸಂಖ್ಯೆ ಇಂದು ವಿರಳ. ವಿಜ್ಞಾನದ ವಿಷಯದಲ್ಲಿಯಂತೂ ಅಧ್ಯಾಪಕರು ತಾವು ವಿದ್ಯಾರ್ಥಿಯಾಗಿದ್ದಾಗ ತಮ್ಮ ಅಧ್ಯಾಪಕರು ಕೊಟ್ಟಿದ್ದ ನೋಟ್ಸನ್ನೇ ವಿದ್ಯಾರ್ಥಿಗಳಿಗೂ ಬರೆಸುತ್ತಾರಂತೆ ! ಅಷ್ಟೇ ಅಲ್ಲದೆ "ಇದು ನಮ್ಮ ಗುರುಗಳಾದ ..... ಇಂಥವರು ಕೊಟ್ಟ ನೋಟ್ಸು ಏನೇ ಪ್ರಶ್ನೆ ಬಂದರೂ ಇಷ್ಟರೊಳಗೇ ಬರಬೇಕು." ಎಂದು ಕೂಡ ಹೇಳುವವರು ಇದ್ದಾರೆಂದು ಕೇಳಿದ್ದೇನೆ. ಸದ್ಯ, ಸಾಹಿತ್ಯದ ವಿದ್ಯಾರ್ಥಿಗಳಿಗೆ ಇಂಥ ಪಾಡು ಇನ್ನೂ ಬಾರದೆ ಇರುವುದು ತೃಪ್ತಿಕರವಾದ ಸಂಗತಿ.

೪. ಇಂದು ವಿದ್ಯಾರ್ಥಿಯ ಕಾರ್ಯಕ್ಷೇತ್ರ ತುಂಬಾ ವಿಶಾಲವಾಗಿದೆ. ಸಾಮಾಜಿಕ, ರಾಜಕೀಯ, ಇನ್ನಿತರ ಆಸಕ್ತಿಗಳು ಈತನಲ್ಲಿ ಹೆಚ್ಚುತ್ತಿರುವುದರಿಂದ ತನ್ನ ವಿರಾಮದ ವೇಳೆಯನ್ನು ವಿದ್ಯಾರ್ಥಿಯು ಇವುಗಳಲ್ಲಿ ತೊಡಗಿಸುತ್ತಾನೆ. ಇನ್ನು ಮನರಂಜನೆಗಾಗಿಯಾದರೂ ಸಾಹಿತ್ಯವನ್ನು ಓದುತ್ತಾರೇನೋ ಅಂದರೆ ಸಾಹಿತ್ಯವನ್ನು ಓದಿಯೇ ಮನರಂಜನೆಯನ್ನು ಪಡೆಯಬೇಕೆಂದೇನೂ ಇಲ್ಲ. ಮನರಂಜನೆಗೆ ಹೋಟಲ್ ಸಿನಿಮಾ, ಸರ್ಕಸ್, ಮುಂತಾದ ಅನೇಕ ಮಾರ್ಗಗಳಿವೆ – ಅನೇಕ ಆಕರ್ಷಣೆಗಳಿವೆ. ಎಳೆಯ ಮನಸ್ಸು ಆ ಕಡೆ ಹರಿದರೆ ಅದು ಸಹಜವೇ.

೫. ಅನೇಕ ಕಾಲೇಜುಗಳಲ್ಲಿ ಗ್ರಂಥಭಂಡಾರಗಳ ವ್ಯವಸ್ಥೆ ಸಮರ್ಪಕವಾಗಿಲ್ಲ. ಒಂದು ಪುಸ್ತಕ ತೆಗೆದುಕೊಳ್ಳಬೇಕಾದರೆ ಕನಿಷ್ಟ ಅರ್ಧ ಗಂಟೆಯಾದರೂ ಸರದಿಯಲ್ಲಿ ನಿಂತು ಪುಸ್ತಕ ಎರವಲು ಪಡೆಯಬೇಕಾದ ಪರಿಸ್ಥಿತಿ ಅನೇ ಕಾಲೇಜುಗಳಲ್ಲಿದೆ. ಇನ್ನು ಲೈಬ್ರರಿಯಲ್ಲಿ ಕೂತು ಓದುವುದಂತೂ ಇಂದಿನ ವಿದ್ಯಾರ್ಥಿಗ ಪಾಲಿಗೆ ಕನಸೇ.

೬. ವಿಜ್ಞಾನದ ಅಧ್ಯಾಪಕರನೇಕರಿಗೆ ಕನ್ನಡ ಬಗೆಗಿನ ಮಲತಾಯಿ ಧೋರಣೆ ಇನ್ ಹೋಗಿಲ್ಲವೆಂದರೆ ಆಶ್ಚರ್ಯವಿಲ್ಲ. ತಮಗೆ ತಿ ವಳಿಕೆ ಇಲ್ಲದಿರುವುದರಿಂದ ಬೇರೆಯವರು ಕನ್ ಡದ ಬಗ್ಗೆ ಏಕೆ ತಿಳುವಳಿಕೆ ಪಡೆಯಬೇಕು ಎಂಬ ಬುದ್ಧಿಯಿಂದ ಕನ್ನಡದ ಬಗೆಗೆ ಕನ್ನಡ ಅಧ್ಯಾಪಕರ ಬಗೆಗೆ ಲಘುವಾಗಿ ಮಾತನಾಡಿ ವಿದ್ಯಾರ್ಥಿಗಳಲ್ಲಿ ಅನಾಸಕ್ತಿಯುಂಟುಮಾಡಲ ಕಾರಣರಾಗಿದ್ದಾರೆ.

೭. ಹಿಂದಿನ ಗುರುಶಿಷ್ಯರ ಸಂಬಂಧ ಈಗ ಖಂಡಿತ ಇಲ್ಲ. ಈ ಬಾಂಧವ್ಯ ಯಾವ ಮಟ್ಟಕ್ಕೆ ಬಂದಿದೆಯೆಂದರೆ ಪಾಠಗಳನ್ನು ಧ್ವನಿ ಮುದ್ರಿಸಿ ಕೊಂಡು ಅದನ್ನೇ ಕೇಳಿ ಪರೀಕ್ಷೆಗೆ ಕೂಡುವ ವಿದ್ಯಾರ್ಥಿಗಳು ಕೂಡ ಇದ್ದಾರೆ. ಇತ್ತೀಚೆಗೆ ರೇಡಿಯೋ ಗುರುವಿನ ಸ್ಥಾನವನ್ನು ಆಕ್ರ ಮಿಸಿದೆ. ಸದ್ಯ ಟೆಲಿವಿಷನ್ ನಮ್ಮಲ್ಲಿ ಬಂದಿಲ್ಲ. ಅದು ಬಂದರಂತೂ ಗುರುಶಿಷ್ಯರ ಸಂಬಂಧ ಸಂಪೂರ್ಣ ಸೊನ್ನೆಯಾಗುತ್ತದೆ. ಈಗ ಕೊನೆಯ ಪಕ್ಷ ನೋಟ್ಸ್ ಓದುವ ವಾಚನಾಭಿ ರುಚಿಯಾದರೂ ವಿದ್ಯಾರ್ಥಿಗಳಲ್ಲಿ ಇದೆ. ಟೆಲಿ ಕಮ್ಯೂನಿಕೇಷನ್ ಶಿಕ್ಷಣ ಬಂದರೆ ಇದಕ್ಕೂ ಊನವಾದೀತು !

೮. ಕೆಲವು ವಿದ್ಯಾರ್ಥಿಗಳಲ್ಲಿ ವಾಚನಾಭಿರುಚಿ ಇದೆಯಾದರೂ ಈ ಅಭಿರುಚಿ ಸಂಕುಚಿತ ಹಾದಿಯನ್ನು ಹಿಡಿದಿದೆ. ಸಾಹಿತ್ಯದ ಯಾವುದೋ ಒಂದು ಪ್ರಕಾರವನ್ನೇ ಓದಿ ಉಳಿದುದನ್ನು ಅಲಕ್ಷಿಸುವ ಪ್ರವೃತ್ತಿ ಅತಿ ಯಾಗಿದೆ. ಅದರಲ್ಲೂ ಪ್ರಾಚೀನ ಗ್ರಂಥ ಗಳಂತೂ ಇಂದಿನವರ ಪಾಲಿಗೆ ಅಸ್ಪೃಶ್ಯವೇ !

೯. ನಮ್ಮ ಹಿಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ವಿದ್ಯಾರ್ಥಿಯು ಕಲಿಯುತ್ತಿದ್ದ ವಿಷಯಗಳ ಸಂಖ್ಯೆಗೂ ಇಂದಿನ ಪಠ್ಯ ಹಾಗೂ ಪಠ್ಯೇತರ ಅಭ್ಯಾಸಗಳಿಗೂ ಹೋಲಿಸಿ ನೋಡಿದರೆ ವಾಚ

ನಾಭಿರುಚಿಯು ಎಷ್ಟು ಕೆಳಗಿಳಿದಿದೆ ಎಂಬುದನ್ನು ಊಹಿಸಬಹುದು. ವಡ್ಡಾರಾಧನೆಯ ಪ್ರಕಾರ ಒಬ್ಬ ಅಧ್ಯಾಪಕ ವಿದ್ಯಾರ್ಥಿಗೆ ಕಲಿಸಿದ ವಿದ್ಯೆಗಳ ಪಟ್ಟಿ ಹೀಗಿದೆ. ಸೂರ್ಯಮಿತ್ರನೆಂಬ ಗುರು ತನ್ನ ಶಿಷ್ಯರನ್ನು “ಇರಳುಂ ಪಗಲುಂ ನಿರಂತರಂ ನಿರ್ಬಂಧದಿಂದೋದಿಸಿ ಏಟಿತೆಂಟು ವರುಷದಿಂದೊಳಗೆ ನಾಲ್ಕು ವೇದಮುಂ, ಆರು ಅಂಗಮುಂ, ಪದಿನೆಂಟು ಧರ್ಮಶಾಸ್ತ್ರಂಗಳುಂ, ಮೀಮಾಂಸಾ, ನ್ಯಾಯವಿಸ್ತರಂ ವ್ಯಾಕರಣಂ, ಪ್ರಮಾಣಂ, ಛಂದಂ, ಅಲಂಕಾರಂ, ನಿಘಂಟು, ಕಾವ್ಯ ನಾಟಕಗಳುಂ, ಚಾಣಕ್ಯಂ, ಸಾಮುದ್ರಿಕಂ ಶಾಲಿಹೋತ್ರಂ ಪಾಳಕಾವ್ಯಂ ಹಾನೀತಂ ಚರಕಂ ಅಶ್ವಿನೀಸುತಂ ಬಾಹಲಂ ಸುಸ್ರುತಂ ಕ್ಷಾರಪಾನೀಯ ಮೊದಲಾಗೊಡೆಯ ನರವೈದ್ಯಂಗಳುಂ ಜ್ಯೋತಿಷಂ ಮಂತ್ರವಾದಂ ಮೊದಲಾಗೊಡೆಯ ಶಾಸ್ತ್ರಗಳೆಲ್ಲಮಂ” ಕಲಿಸಿದನಂತೆ. ಈಗ ಇಷ್ಟನ್ನು ಕಲಿಸುವ ಗುರುಗಳೂ ಇಲ್ಲ. ಅಭ್ಯಾಸದ ತಾಳ್ಮೆಯಂತೂ ವಿದ್ಯಾರ್ಥಿಗಳಿಗೆ ಖಂಡಿತಾ ಇಲ್ಲ. ಏಕ ವಿಷಯ ಪ್ರಾವೀಣ್ಯ (Specialisation) ನಮ್ಮ ಇಂದಿನವರ ಮನವೊಲಿದಿರುವುದು ಇತರ ವಿಷಯಗಳ ವಾಚನಾಭಿರುಚಿಗೆ ಆತಂಕವಾಗಿದೆ.

...ಡಬೇಕಾದ ಕೆಲಸ

...ನ್ನು ವಿದ್ಯಾರ್ಥಿಗಳಲ್ಲಿ ವಾಚನಾಭಿರುಚಿ ಬೆಳೆಸಲು ...ಮಾಡಬೇಕು ? ಇಂದಿನ ವೈಜ್ಞಾನಿಕ, ಸಾಮಾಜಿಕ, ...ಣಿಗೆಯಿಂದ ವ್ಯಾಪ್ತಿಗೊಂಡಿರುವ ಇಂದಿನ ವಿದ್ಯಾ...ಳ ಕಾರ್ಯರಂಗವನ್ನು ಕಡಿಮೆಮಾಡಲಂತೂ ಸಾಧ್ಯ... ಅದಕ್ಕೆ ಪರ್ಯಾಯವಾಗಿ ಬೇರೆಯ ಸಲಹೆಗಳನ್ನು ...ಬಹುದು.

ವಿಶ್ವ ವಿದ್ಯಾನಿಲಯಗಳ ವಿದ್ಯಾರ್ಥಿ ಸಂಘಗಳು, ಅಧ್ಯಾಪಕರ ಪರಿಷತ್ತು, ಮುಂತಾದ ಸಂಸ್ಥೆಗಳು ನೋಟ್ಸ್ ಕೊಡುವ ವಿದ್ಯಾಭ್ಯಾಸದ ಪದ್ಧತಿಯನ್ನು ರದ್ದುಮಾಡಲು ಒತ್ತಾಯಮಾಡಬೇಕು. ವಿದ್ಯಾರ್ಥಿಗೆ ಗ್ರಂಥಸೂಚಿಯನ್ನು ಒದಗಿಸಿ ಅವನೇ ಓದುವಂತೆ ಮಾಡಬೇಕು.

೨. ವಿಶ್ವವಿದ್ಯಾನಿಲಯಗಳು ಹೊಸ ಕಾಲೇಜುಗಳಿಗೆ ಮನ್ನಣೆ ಕೊಡುವಾಗ ಆ ಕಾಲೇಜಿನಲ್ಲಿ ಸರಿಯಾದ ಗ್ರಂಥಾಲಯದ ವ್ಯವಸ್ಥೆ ಇದೆಯೇ ಇಲ್ಲವೇ ಎಂದು ಪರಿಶೀಲಿಸಿ ಮನ್ನಣೆ ಕೊಡಬೇಕು. ಕಾಲೇಜು ಗ್ರಂಥಾಲಯಲ್ಲಿ ‘ರೆಫರೆನ್ಸ್ ವಿಭಾಗ’ದ ಕಡೆಗೆ ಗಮನ ಕೊಡಬೇಕು.

೩. ಒಂದು ಕಾಲೇಜಿನ ಆಯಾ ತರಗತಿಗಳಲ್ಲಿ ಪಠ್ಯೇತರ ಪುಸ್ತಕಗಳ ಬಗ್ಗೆ ವಾರಕ್ಕೊಮ್ಮೆ ವಿಚಾರಗೋಷ್ಠಿಯನ್ನು ಏರ್ಪಡಿಸಿ ಪ್ರತಿಯೊಬ್ಬರೂ ಭಾಗವಹಿಸುವಂತೆ ಮಾಡಬೇಕು. ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಆಗ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಆಧಾರ ಗ್ರಂಥಗಳನ್ನು ಓದಿ ಒದಗಿಸುವಂತಾಗುತ್ತದೆ. ಒಟ್ಟಿನಲ್ಲಿ ವಿದ್ಯಾರ್ಥಿ ಅಧ್ಯಾಪಕರಲ್ಲಿ ಬೇರೂರಿರುವ ಪರೀಕ್ಷಾದೃಷ್ಟಿ, ನೋಟ್ಸ್ ಕೊಡುವ ‘ಸ್ಪೂನ್ ಫೀಡಿಂಗ್’ ಕಡಿಮೆಯಾಗಲೆಂದು ನನ್ನ ಆಶಯ.

೪. ನಮ್ಮ ಅನೇಕ ಕಾಲೇಜುಗಳಲ್ಲಿ ಕನ್ನಡ ಸಂಘಗಳು ಇವೆ. ನವೆಂಬರಿನಲ್ಲಿ ಉದ್ಘಾಟನೆ, ಜನವರಿಯಲ್ಲಿ ಮುಕ್ತಾಯ. ಇಷ್ಟರಲ್ಲೇ ಪರ್ಯವಸಾನವಾಗುವುದರ ಬದಲು ಕಾಲೇಜಿನ ಕನ್ನಡ ಸಂಘಗಳು ಕನ್ನಡದ ಅಧ್ಯಯನ ಕೇಂದ್ರಗಳೇ ಆಗಬೇಕು. ಪ್ರಾಚೀನ ಅರ್ವಾಚೀನ ಕೃತಿಗಳ ಅಧ್ಯಯನ, ಚರ್ಚೆ, ವಿಚಾರಗೋಷ್ಠಿಗಳು ಅಧ್ಯಾಪಕರ ಮಾರ್ಗದರ್ಶನದಲ್ಲಿ ನಡೆಯಬೇಕು. ಕೆಲವಾದರೂ ಕಾಲೇಜುಗಳಲ್ಲಿ ಈ ಕಾರ್ಯ ನಡೆಯುತ್ತಿರುವುದು ಸಂತೋಷದ ಸಂಗತಿ.

೫. ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗಾಗಿಯೇ ಮೀಸಲಾದ ಪತ್ರಿಕೆಗಳಿರಬೇಕು. ವಿದ್ಯಾರ್ಥಿಯು ತಾನು ಬರೆದುದದನ್ನು ನಾಲ್ಕು ಜನ ಓದುತ್ತಾರೆ ಎಂಬ ಭಯದಿಂದಲಾದರೂ ಸಾಕಷ್ಟು ಸಾಧಾರಣವಾಗಿಯೇ ಬರೆಯು

ತ್ತಾನೆ. ಪ್ರಕಟಣೆಗೆ ಮುನ್ನ ತನ್ನ ಸ್ನೇಹಿತರಲ್ಲಿಯೋ ಅಧ್ಯಾಪಕರಲ್ಲಿಯೋ ಚರ್ಚಿಸುತ್ತಾನೆ. ತಾನು ಓದಿದ ಕೃತಿಗಳನ್ನು ಅವರೂ ಓದುವಂತೆ ಮಾಡುತ್ತಾನೆ. ಹೀಗೆ ವಾಚನಾಭಿರುಚಿಯು ಬೆಳೆಯುತ್ತದೆ. ಇನ್ನೊಬ್ಬರ ಕೃತಿಯ ಬಗ್ಗೆ ಪ್ರತಿಕ್ರಿಯೆ ತೋರಿಸುವಾಗ ಇಂಥ ಸಂದರ್ಭದಲ್ಲಿ "ಕುರಿತೋದದೆಯುಂ 'ವಿಮರ್ಶಾ' ಪ್ರಯೋಗ ಪರಿಣತಮತಿ" ಯಾಗುವುದಂತೂ ಸಾಧ್ಯವಿಲ್ಲ.

ವಾಚನಶೀಲತೆಯುಳ್ಳ ಅಧ್ಯಾಪಕರು ನಿಜವಾಗಿಯ
ವಿದ್ಯಾರ್ಥಿಗಳಲ್ಲಿ ವಾಚನಾಭಿರುಚಿಯನ್ನು ಬೆಳೆಸಬಲ್ಲ
ವಿದ್ಯಾರ್ಥಿಯದು ಎಳೆಯ ವಯಸ್ಸು,—ಕಲಿಯ
ಮನಸ್ಸು. ವಾಚನಾಭಿರುಚಿ ಕಡಿಮೆಯಾಗಿದೆ ಎಂ
ವೃಥಾ ದೂರುವುದರ ಬದಲು ಸರಿಯಾದ ಮಾರ್ಗದಶ
ಕೊಟ್ಟಲ್ಲಿ ಆತ ಖಂಡಿತಾ ವಾಚನಶೀಲನಾಗಬಲ್ಲ. ಇಂ
ಕೆಲವರಾದರೂ ವಾಚನಶೀಲ ವಿದ್ಯಾರ್ಥಿಗಳಿದ್ದರೆ ಅದ
ನಿಷ್ಠಾವಂತ ಅಧ್ಯಾಪಕರೇ ಕಾರಣ.

ನಡೆದುದೆ ಮಾರ್ಗಂ ಪದವಿಡೆ
ತೊಡರಿಸಿದುದೆ ಭಂಗಿ ಕೇಶವಂಗಿದಿರುಂಟೇ
ತೊಡಗಿದ ಕೃತಿಗಳೊಳಾನೆಯ
ನಡು ಬಡವೇ? ತಾನೆ ಲೋಕದೋಳ್ ಲಾಕ್ಷಣಿಕಂ.

"ಕವಿವಾಣಿಯು 'ನಿಯತಿ ಕೃತ ನಿಯಮ ರಹಿತವೂ ಅನನ್ಯ ಪರತಂತ್ರವೂ' ಆದ ನವ ಕಾವ್ಯಸೃಷ್ಟಿಯನ್ನು ನಿರ್ಮಿಸುವ ಸ್ವತಂತ್ರತೆಯುಳ್ಳುದಾದರೂ, ಆ ನವಕಾವ್ಯ ಸೃಷ್ಟಿಯು ಆಹ್ಲಾದೈಕಮಯವೂ ನವರಸ ರುಚಿರವೂ ಆಗಬೇಕಾದರೆ, ಅದಕ್ಕೆ ಶಬ್ದ ಶಾಸ್ತ್ರದ ಮತ್ತು ಅಲಂಕಾರಾದಿಗಳ ಅವಶ್ಯಕತೆಯು ಬೇಕೇ ಬೇಕು. ಸ್ವಾತಂತ್ರ್ಯವೆಂಬ ಮಾತಿನರ್ಥವು ನಿಯಮೋಲ್ಲಂಘನವಲ್ಲ; ಪರಿಸ್ಥಿತಿಗನುಸರಿಸಿ ನಿಯಮಗಳನ್ನು ಮಾಡಿಕೊಳ್ಳುವ ಸ್ವಾಧಿಕಾರ."

—ವೈ. ನಾಗೇಶಶಾಸ್ತ್ರೀ

ನಮ್ಮ ಹಿರಿಯರು ಸದ್ವಿವೇಕೋದಯಕ್ಕೆ ಸಾಧನೀಭೂತಂಗಳನ್ನಾಗಿ ನಮ್ಮ ಭಾಷಾಗ್ರಂಥಗಳನ್ನು ಸ್ವಾರ್ಥಪರತೆಯಿಲ್ಲದೆ ಲೋಕೋಪಕಾರಾರ್ಥವಾಗಿ ಬರೆದಿಟ್ಟರು. ಅವುಗಳನ್ನು ಓದಿಕೊಳ್ಳದೆ ನಾವು ಕೃತಘ್ನರೆನಿಸುವೆವು. ಆದುದರಿಂದ ನಮ್ಮ ಸ್ವದೇಶ ಭಾಷಾ ಗ್ರಂಥಗಳನ್ನು ವಿಶೇಷ ಪ್ರವಚನ—ಪ್ರಚಾರಕ್ಕೆ ತಂದುಕೊಳ್ಳುವುದು ನಮ್ಮ ಮುಖ್ಯ ಕರ್ತವ್ಯವಾಗಿರುವುದು.

—ಶಿವಶಂಕರ ಶಾಸ್ತ್ರಿಗಳು

...ದ್ಯಾರ್ಥಿಗಳಲ್ಲಿ ...ಚನಾಭಿರುಚಿ*

...ಡಾ|| ಎಂ. ಚಿದಾನಂದಮೂರ್ತಿ

...ಸುವಿನ ಬಗ್ಗೆ ಹೀಗೆ ಹೇಳುತ್ತಾರೆ : ಆರಂಭದಲ್ಲಿ ...ಓದುವುದನ್ನು ಕಲಿಯುತ್ತದೆ; ಬಳಿಕ ಕಲಿಯಲು ...ದೆ ('learns to read,'; 'reads to ...') ಕಲಿಕೆ ಮನುಷ್ಯನ ವಿಶಿಷ್ಟ ಗುಣ. ಎತ್ತರ, ...ತಿನ್ನುವುದು, ಅಳುವುದು, ನಡೆಯುವುದು ಇತ್ಯಾದಿ ...ನಾವು ಆನುವಂಶಿಕವಾಗಿ ಪಡೆಯುತ್ತೇವೆ. ಆದರೆ ...ಡುವುದು, ಮನೆ ಕಟ್ಟುವುದು, ಉಳುವುದು, ...ಸಮಯದ ಶಿಷ್ಟಾಚಾರಗಳು, ಎತ್ತಿನ ಬಂಡಿ ...ೀ ವಿಮಾನದಲ್ಲೋ ಪ್ರಯಾಣಮಾಡುವುದು, ...ಮನುಷ್ಯ ತನ್ನ ಅನುಕೂಲಕ್ಕಾಗಿ ಕಲ್ಪಿಸಿಕೊಂಡ ...ಳು. ಇವೆಲ್ಲ 'ಸಂಸ್ಕೃತಿ' ಎನ್ನಿಸಿಕೊಳ್ಳುತ್ತವೆ. ...ಯ ಮೂಲದಲ್ಲಿ ಕಲಿಕೆ (learning) ಇದೆ. ...ತನಗಿಂತ ಹಿಂದಿನವರಿಂದ ಕಲಿಯುತ್ತಾನೆ; ಕಲಿ... ಉಳಿಸಿ ಬೆಳಸುತ್ತಾನೆ. ಈ ದೃಷ್ಟಿಯಿಂದ ಮನು... ...ಜ್ಞಾನವೆಲ್ಲ ಸಂಚಿತ ('cumulative'), ಎನ್ನ... ಮನೆ ಕಟ್ಟುವಂತಹ ಸಂಗತಿಯನ್ನೇ ತೆಗೆದು ...ರೆ, ಹಕ್ಕಿಗಳು ಈ ಅನೇಕ ಸಹಸ್ರ ವರ್ಷಗಳಲ್ಲಿ ಹೊಸದಾಗಿ ಕಲಿತಿಲ್ಲ. ಆದರೆ ಮನುಷ್ಯ ಅದನ್ನು ಉತ್ತಮಪಡಿಸಿಕೊಳ್ಳುತ್ತ ಬಂದಿದ್ದಾನೆ. ಈ ಮಾತು ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುತ್ತದೆ. ಆದ್ದರಿಂದಲೇ ಮನುಷ್ಯನಿಗೆ ಮಾತ್ರ 'ಸಂಸ್ಕೃತಿ' ಇದೆ ಎಂದು ಸಮಾಜಶಾಸ್ತ್ರಜ್ಞರು ಹೇಳುವುದು.

ಲಿಪಿಬದ್ಧವಾದ ಭಾಷೆ

ಮನುಷ್ಯ ತನಗಿಂತ ಹಿಂದಿನವರ ಮತ್ತು ತನ್ನ ಜ್ಞಾನ, ಅನುಭವ, ವಿವೇಕಗಳನ್ನು ಉಳಿಸುವ, ಪ್ರಸರಿಸುವ ಮಾಧ್ಯಮಗಳಲ್ಲಿ 'ಭಾಷೆಯೂ ಒಂದು. ಇದರ ಜೊತೆಗೆ 'ಲಿಪಿ'ಯೂ ಸೇರುತ್ತದೆ. ಭಾಷೆಯು ದೇಶ, ಕಾಲಗಳ ದೃಷ್ಟಿಯಿಂದ ಮಿತಿಗಳನ್ನು ಪಡೆದಿದೆ. ಅದು ದೂರಕ್ಕೆ ಕೇಳಿಸುವುದಿಲ್ಲ; ಆದ್ದರಿಂದ ದೂರದಲ್ಲಿರುವವನಿಗೆ ಭಾಷೆಯ ಮೂಲಕ ಸಂದೇಶ ಕಳುಹಿಸಲು ಸಾಧ್ಯವಿಲ್ಲ. ಮತ್ತು ಅದು ತಾತ್ಕಾಲೀನತೆಯನ್ನು ಪಡೆದಿದೆ; ಈಗ ಆಡಿದ್ದು ಹಾಗೇ ಹೋಗಿಬಿಡುತ್ತದೆ. ಅದೇ ಭಾಷೆಯನ್ನು ಬರಹಕ್ಕೆ ಮಾರ್ಪಡಿಸಿದಾಗ, ಸಂದೇಶವನ್ನು ದೂರಕ್ಕೆ ಕಳುಹಿಸಬಹುದು ಮತ್ತು ಕಾಲದ ದೃಷ್ಟಿಯಿಂದಲೂ ಆ ಸಂದೇಶವನ್ನು ಸುರಕ್ಷಿತವಾಗಿಸಬಹುದು. ಜ್ಞಾನ, ಅನುಭವ, ವಿವೇಕಗಳನ್ನು ಉಳಿಸುವಲ್ಲಿ ಲಿಪಿ ಹೀಗೆ ಅತ್ಯಂತ ಪ್ರಧಾನಪಾತ್ರವನ್ನು ವಹಿಸಿದೆ. ಪುಸ್ತಕ ಒಂದು ರೀತಿಯಲ್ಲಿ ಲಿಪಿಬದ್ಧವಾದ ಭಾಷೆ ಎನ್ನಬಹುದು.

ಜ್ಞಾನಾನುಭವಗಳ ಸಂಗ್ರಹಶಾಲೆ

ಉತ್ತಮ ಗ್ರಂಥ ಮಹಾ ಚೇತನವೊಂದರ ಜ್ಞಾನಾನುಭವಗಳ ಸಂಗ್ರಹ ಶಾಲೆ. ಒಳ್ಳೆಯ ಪುಸ್ತಕವನ್ನು ಓದಿದಾಗ ನಾವು ಮಾನಸಿಕವಾಗಿ ಶ್ರೇಷ್ಠರ ಜೊತೆ ಸಂಪರ್ಕವನ್ನು ಪಡೆಯುತ್ತೇವೆ. ಒಬ್ಬ ವ್ಯಕ್ತಿ ಒಂದು ಗ್ರಂಥವನ್ನು ಬರೆದರೆ, ಆವನು ಬರೆಯುತ್ತ ಹೋದಂತೆ ಅವನ ಆಲೋಚನೆ ಸ್ಪಷ್ಟವಾಗುತ್ತಾ ಹೋಗುತ್ತದೆ. ಬರಹ ಎನ್ನುವುದು ಲೇಖಕ ತನ್ನನ್ನು ತಾನು ಅರ್ಥಮಾಡಿಕೊಳ್ಳುವ ಪ್ರಯತ್ನ ಎಂಬಲ್ಲಿ ಯಾವ ಅಲಂಕಾರವೂ ಇಲ್ಲ. ಹಾಗೆಯೇ ನಾವು ಉತ್ತಮ ಗ್ರಂಥಗಳ ಮೂಲಕ ಏನೆಲ್ಲವನ್ನೂ ತಿಳಿಯಬಹುದು.

ಓದುವ ಪ್ರಶ್ನೆ ಬಂದಾಗ, ವೃತ್ತಪತ್ರಿಕೆ, ಲಘುವಾದ ಕತೆ ಕಾದಂಬರಿ ಇವುಗಳನ್ನು ಸಾಮಾನ್ಯವಾಗಿ ಎಲ್ಲರೂ ಓದುತ್ತಾರೆ. ಉಳಿದಂತೆ ಆಯಾ ಕ್ಷೇತ್ರದವರು ತಮ್ಮ ತಮ್ಮ ವಲಯಗಳಿಗೆ ಸಂಬಂಧಿಸಿದಂತೆ ಓದನ್ನು ಮಿತಗೊಳಿಸಿಕೊಳ್ಳುತ್ತಾರೆ. ಆದರಲ್ಲಂತೂ ಈಗ ಜ್ಞಾನ-

---

...ಚನಾಭಿರುಚಿ ಹೆಚ್ಚಿಸುವ ಬಗ್ಗೆ ನಡೆದ ಗೋಷ್ಠಿಯಲ್ಲಿ ...ಧ್ಯಾಪಕ ವರ್ಗದ ಪ್ರತಿನಿಧಿಯಾಗಿ ಮಾಡಿದ ಭಾಷಣ ...ರಾಂಶ.

ತೀವ್ರ ವೇಗವಾಗಿ ಬೆಳೆಯುತ್ತಿದೆ. ದಿನ ಬೆಳಗಾದರೆ ಹೊಸ ಲೇಖನ, ಗ್ರಂಥಗಳು ಹೊರಬರುತ್ತಿವೆ. ಯಾವುದಾದರೂ ದೊಡ್ಡ ಪುಸ್ತಕದ ಅಂಗಡಿಗೋ ಪುಸ್ತಕ ಭಂಡಾರದ ಪ್ರೋಸೆಸಿಂಗ್ ವಿಭಾಗಕ್ಕೋ ಹೋದರೆ ಹೊರಬರುತ್ತಿರುವ ಗ್ರಂಥಬಾಹುಳ್ಯ ಹೆದರಿಕೆ ಹುಟ್ಟಿಸುವಂತಿರುತ್ತದೆ. ಇದರಿಂದ, ಯಾವುದೇ ಕ್ಷೇತ್ರದಲ್ಲಿ ಹೊಸದಾಗಿ ಏನು ಬಂದಿದೆ ಎಂಬುದನ್ನು ತಿಳಿಯಲೂ ದುಸ್ತರವಾಗುತ್ತಿದೆ. ಇದರಿಂದಾಗಿ ಅಧ್ಯಾಪಕನ, ಅದರಲ್ಲಿಯೂ ಉನ್ನತ ತರಗತಿಗೆ ಪಾಠ ಹೇಳುವ ಅಧ್ಯಾಪಕನ ಹೊಣೆ ಇನ್ನೂ ಜಾಸ್ತಿಯಾಗಿದೆ. ಅವನು ಕಲ್ಲುಗಳ ಮುಂದೋ ಮರಗಳ ಮುಂದೋ ನಿಂತು ಪಾಠ ಮಾಡುವ ಹಾಗಿದ್ದರೆ ಆಗ ಪ್ರಶ್ನೆಯೇ ಇಲ್ಲ. ಅವನ ಮುಂದಿರುವ ವಸ್ತುಗಳಿಗೆ ಜೀವವುಂಟು, ಮನಸ್ಸು ಉಂಟು; ಅವನಿಗಿಂತ ಹೆಚ್ಚು ಆಲೋಚಿಸುವ ಬುದ್ಧಿ ಶಕ್ತಿಯುಳ್ಳವೂ ಅಲ್ಲಿ ಇರಬಹುದು, ಇರುತ್ತವೆ. ಅವನು ದಿನದಿನವೂ ಓದಿನ ಹುಚ್ಚನ್ನು ಹಚ್ಚಿಕೊಂಡು ತನ್ನ ಜ್ಞಾನವನ್ನು ನಿರಂತರವಾಗಿ ಬೆಳೆಸಿಕೊಳ್ಳದಿದ್ದರೆ, ಅವನು ತನ್ನ ವಿದ್ಯಾರ್ಥಿಗಳಿಗೂ ಏನೂ ಕೊಡಲಾರ; ತನ್ನ ವೃತ್ತಿಯನ್ನೂ ಸಾರ್ಥಕಪಡಿಸಿಕೊಳ್ಳಲಾರ.

ಇದನ್ನು ನಾನು ಒತ್ತಿ ಹೇಳಲಿಕ್ಕೆ ಕಾರಣ ಉಂಟು. ನಾವು ದಿನಬೆಳಗಾದರೆ ಪರದೇಶಗಳಿಂದ ಜ್ಞಾನವನ್ನು ಆಮದು ಕೊಳ್ಳುತ್ತೇವೆ; ರಫ್ತು ಮಾಡುತ್ತಿಲ್ಲ. ಆಹಾರ ಕ್ಷೇತ್ರದಲ್ಲಿ 'ಹಸಿರು ಕ್ರಾಂತಿ'ಯನ್ನು ಸಾಧಿಸುವುದರ ಮೂಲಕ ಆಹಾರವನ್ನು ಪರದೇಶಗಳಿಂದ ಆಮದುಮಾಡಿಕೊಳ್ಳುವುದನ್ನು ನಿಲ್ಲಿಸಿದೆ ಎಂದು ನಮ್ಮ ಸರ್ಕಾರ ಹೇಳಿಕೊಳ್ಳುತ್ತಿದೆ. ನಾವು ಆಹಾರವನ್ನು ರಫ್ತು ಮಾಡುವ ಸ್ಥಿತಿಯಲ್ಲಿಯೂ ಇದ್ದೇವೆಯಂತೆ. ಇದು ಸಂತೋಷದ ವಿಷಯವೇ. ಜ್ಞಾನಕ್ಷೇತ್ರದಲ್ಲಿ ರಫ್ತು ಮಾಡಬೇಕಾದರೆ ಆಮದು ಮಾಡಿಕೊಳ್ಳಲೇಬೇಕು. ಆದರೆ ಆಮದು ಮಾಡಿಕೊಂಡರೆ ರಫ್ತು ಮಾಡಿಯೇ ಮಾಡಬೇಕೆಂಬ ಕಡ್ಡಾಯವೇನೂ ಇಲ್ಲ. ಒಂದು ದೇಶ ಇನ್ನೊಂದು ದೇಶದಿಂದ ಕಲಿತು, ಅಲ್ಲಿಗೆ ಏನನ್ನೂ ಕಲಿಸದೇ ಹೋಗಬಹುದು. ಯಾವುದೇ ಒಂದು ದೇಶ ಅಂತಹ ಸ್ಥಿತಿಯಲ್ಲಿರುವುದು ಖಂಡಿತವಾಗಿ ಶುಭ ಚಿಹ್ನೆಯಲ್ಲ. ಸ್ವತಂತ್ರ ಆಲೋಚನೆ, ಸಂಶೋಧನೆಗಳು ನಡೆದು ಜ್ಞಾನ ಕ್ಷೇತ್ರಕ್ಕೆ ನಿರಂತರ ನವೀನ ಕಾಣಿಕೆ ಸಲ್ಲುವುದು ಒಂದು ದೇಶ ಮಾನಸಿಕವಾಗಿ ಬದುಕಿದೆ ಎಂಬುದರ ಸಂಕೇತ.

ದಾಸರಾಗಿ ಉಳಿಯಬಾರದು

ಹೀಗಲ್ಲದೆ, ಪರದೇಶದಿಂದ ನಾವು ಕಲಿಯುತ್ತ
ಇದ್ದರೆ, ಆಗ ಜ್ಞಾನಪ್ರಪಂಚದಲ್ಲಿ ನಾವು ಎಂದೆಂದಿ
ದಾಸರಾಗಿಯೇ ಉಳಿದುಬಿಡುತ್ತೇವೆ. ವಿಜ್ಞಾನ
ಮೌಲಿಕ ಪ್ರಬಂಧಗಳನ್ನು ಪ್ರಕಟಿಸಿರುವ ದೇಶಗಳ ಪ
ಯಲ್ಲಿ ಭಾರತ ಪಾಕಿಸ್ತಾನದಂತಹ ಕೆಲವು ದೇಶಗಳಿಗಿ
ಮೇಲಿದೆ ಎಂದು ತೃಪ್ತಿಪಟ್ಟುಕೊಳ್ಳಬಹುದೇ ಹೊ
ಒಟ್ಟು ಸಾಧನೆಯ ದೃಷ್ಟಿಯಿಂದ ನಿರಾಶಾದಾಯಕ
'Original' ಅನ್ನಿಸಿಕೊಳ್ಳುವ ಆಲೋಚನೆ, ಸಂಶೋ
ಧನೆಗಳಿಗೆ ನಾವು ಗಮನ ಕೊಡಲೇಬೇಕಾಗಿದೆ. ಒಂ
ಕ್ಷೇತ್ರದಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಕೆ
ಮಾಡಬೇಕಾದರೂ ಅಲ್ಲಿ ಈಗಾಗಲೇ ಏನು ನಡೆ
ಯೆಂಬುದರ ಪೂರ್ಣ ಅರಿವು ಅತ್ಯಗತ್ಯವಾಗುತ್ತ
ಆದರೆ ಇಂಗ್ಲಿಷಿನಲ್ಲಿ ಹತ್ತಾರು ಪುಸ್ತಕ ಓದಿ, ಅಲ್ಲಿರು
ದನ್ನೇ ಟಿಪ್ಪಣಿ ಮಾಡಿಕೊಂಡು ಅದೇ ಭಾಷೆಯಲ್ಲಿಯೆ
ಅಥವಾ ಕನ್ನಡದಲ್ಲಿಯೋ ಒಂದು ಪಠ್ಯಪುಸ್ತಕ ಬರೆ
ವುದು ದೊಡ್ಡ ಸಾಧನೆ ಎಂಬ ಭ್ರಾಂತಿ ನಮ್ಮ
ಆದಷ್ಟು ಮರೆಯಾಗುವುದು ಒಳ್ಳೆಯದು. ಇದು ಪ
ಪುಸ್ತಕಗಳಿಗೆ ವಿರೋಧವಾಗುವ ಮಾತಲ್ಲ. ಇಂಗ್ಲಿ
ನಲ್ಲಿಯೇ ಮೌಲಿಕ ಪ್ರಬಂಧಗಳನ್ನು ಓದಿ ತಿಳಿದುಕೊ
ವವರ ಸಂಖ್ಯೆ ಕಡಮೆ. ಎಲ್ಲರಿಂದಲೂ ಆ ಕೆಲಸವನ್ನ
ನಿರೀಕ್ಷಿಸುವುದು ತಪ್ಪು ಹೌದು. ಆದ್ದರಿಂದಲೇ ಯಾ
ದರೂ ಅಂತಹ ಗ್ರಂಥ, ಲೇಖನಗಳನ್ನು ಓದಿ, ಅವುಗ
ಸಾರವನ್ನು ಒಳಗೊಂಡ ಪಠ್ಯಪುಸ್ತಕಗಳನ್ನು ತಯಾ
ಬೇಕಾಗುತ್ತದೆ. ಆದರೆ ಪಠ್ಯಪುಸ್ತಕ ಎಷ್ಟೇ ಉಪಯು
ವಾದದ್ದಾದರೂ ಅದರ ಲೇಖಕನಿಗೆ ಸಂಶೋಧಕನೊ
ನಿಗೆ ದೊರಕುವ ಸ್ಥಾನ ದೊರಕಲಾರದು. ಅವ
'scientist ಅಲ್ಲ, text-book writer' ಎಂಬಂತ
ಮಾತಿನ ಹಿಂದಿನ ವ್ಯಂಗ್ಯವನ್ನು ಗುರುತಿಸಬೇಕು. ಕನ್ನ
ಮಾಧ್ಯಮದ ಪ್ರಶ್ನೆ ಬಂದಾಗ, ಪಠ್ಯಪುಸ್ತಕಗಳ ಸ್ಥಾ
ತೀರ ಮುಖ್ಯವಾಗುತ್ತದೆ. ಆದರೆ ಆ ಒಟ್ಟು ಚಟುವಟಿ
ಗೌಣ ಪ್ರಾಧಾನ್ಯವುಳ್ಳದ್ದು. ಮೌಲಿಕ ಆಲೋಚ
ಅಭಿಪ್ರಾಯ, ಭಾವನೆಗಳಿಗೆ ಬೆಂಬಲ ಬರದಿದ್ದರೆ, ದ
ನೆಯ ಪಠ್ಯ ಸ್ವರೂಪದ ಗ್ರಂಥಗಳಿಗಿಂತ, ಗಾತ್ರದ
ದೊಡ್ಡದಲ್ಲದಿದ್ದರೂ ಸ್ವಂತಿಕೆಯಿರುವ ಗ್ರಂಥ ಅಥ
ಲೇಖನಗಳಿಗೆ ಪ್ರಾಮುಖ್ಯ ಸಲ್ಲದಿದ್ದರೆ ನಾವು ಬಹು
ಎಂದೆಂದಿಗೂ ಜ್ಞಾನವನ್ನು ಆಮದು ಮಾಡಿಕೊಳ್ಳುವ

...ಯೇ ಉಳಿದುಬಿಡುತ್ತೇವೆ.

...ವಿದ್ಯಾನಿಲಯಗಳಲ್ಲಿ ಅನುಕೂಲ

...ನಾನು ಇದನ್ನು ಇಷ್ಟು ದೀರ್ಘವಾಗಿ ಪ್ರಸ್ತಾಪಿಸಲು ...ರಣವುಂಟು. ಸಂಶೋಧನೆಯನ್ನು ಸಣ್ಣ ಊರುಗಳಲ್ಲಿ, ...ೇಜುಗಳಲ್ಲಿ ಮಾಡಲು ಸಾಧ್ಯವಿಲ್ಲವೆಂದಲ್ಲ; ಆದರೆ ... ಅನುಕೂಲಗಳು ಕಡಮೆ. ಬುದ್ಧಿವಂತರೂ ಕೂಡ ...ತಹ ಕಡೆ ನಿಸ್ಸಹಾಯಕರಾಗುತ್ತಾರೆ. ಆದರೆ ವಿಶ್ವ ...ದ್ಯಾನಿಲಯದ ಕೇಂದ್ರಗಳಲ್ಲಿರುವ ಅಧ್ಯಾಪಕರಿಗೆ ಅನು...ಲಗಳು ಹೆಚ್ಚು. ತಮಗೆ ಸಂಬಳ ಕಡಮೆಯೆಂದು ...ರು ಗೊಣಗುವಂತಿಲ್ಲ. ಇತರ ಸಂಸ್ಥೆಗಳ ಅಧ್ಯಾಪಕ... ಹೋಲಿಸಿ ನೋಡಿದರೆ, ಪಾಠ ಹೇಳುವ ಭಾರವೂ ...ಷ್ಟು ಹೆಚ್ಚಲ್ಲ. ವರ್ಗಾವರ್ಗಿಯ ಭಯವೂ ಅವರನ್ನು ...ಡಿಸದು. ಅವರ ಸಂಶೋಧನ ಕಾರ್ಯಗಳಿಗೆ ಇತರ ...ಗಳಿಗಿಂತ ಹೆಚ್ಚಿನ ಧನಾನುಕೂಲವೂ ಉಂಟು. ...ಮ್ಮದು ಬಡದೇಶ ಎಂಬುದನ್ನು ನೆನಪಿಡಬೇಕು ಮತ್ತು ...ಮ್ಮನ್ನು ಅಮೆರಿಕನ್ನರ ಜೊತೆ ಹೋಲಿಸಿಕೊಂಡು ಅವ... ದೊರಕುವ ಅನುಕೂಲಗಳನ್ನು ನಾವು ಪಡೆಯುತ್ತಿಲ್ಲ ...ಬ ಬಗ್ಗೆ ದುಃಖಿಸಿ ಪ್ರಯೋಜನವಿಲ್ಲ. ಎಲ್ಲವೂ ಸರಿ...ಾಗಿದೆ ಎಂದು ನಾನು ಹೇಳುತ್ತಿಲ್ಲ. ಆದರೆ ಇದ್ದ ಅವ...ಕಗಳನ್ನೂ ನಾವು ಸರಿಯಾಗಿ ಉಪಯೋಗಿಸಿಕೊಳ್ಳ...ರೆ ಆಗ ನಾವು ದೇಶಕ್ಕೆ ಎಂಬ ಮಾತಿರಲಿ, ನಮಗೆ ...ನೇ ಅನ್ಯಾಯ ಮಾಡಿಕೊಳ್ಳುತ್ತೇವೆ. ಈ ದೃಷ್ಟಿ...ಂದ ಹಿರಿಯ ವಿದ್ಯಾರ್ಥಿಯೆಂದು ಹಿಂದೆ ಕರೆದ ಅಧ್ಯಾ... ವಾಚನಾಭಿರುಚಿಯನ್ನು ಬೆಳೆಸಿಕೊಳ್ಳುವ ಅಗತ್ಯ... ತನ್ನ ವಿದ್ಯಾರ್ಥಿಗಳು ಕಷ್ಟ ಪಡುವವರಂತಾಗಲು, ...ಡಲು ಒಂದೇ ಮಾರ್ಗ, ತಾನೂ ಕಷ್ಟಪಟ್ಟು ಕೆಲಸ ...ಡುವುದು. ಬಿಡುವಿನ ಆದಷ್ಟು ಸಮಯವನ್ನು ...ಸಂಗದಲ್ಲಿ ಮತ್ತು ಪ್ರಯೋಗಾಲಯಗಳಲ್ಲಿ ಕಳೆಯು...ು; ತನ್ನ ವಿಷಯದ ಬಗ್ಗೆ ಇತರರೊಡನೆ ಚಿಂತಿಸು...ು—ಇದು ಉನ್ನತ ಸಂಸ್ಥೆಗಳಲ್ಲಿನ ಅಧ್ಯಾಪಕರ ...ರ್ತವ್ಯವಾಗಿದೆ.

...ಪಾಧ್ಯಾಯರ ಸೋಮಾರಿತನದ ...ಣಾಮ

...ಉಪಾಧ್ಯಾಯ ಸೋಮಾರಿಯಾದರೆ, ಅವನ ...ದ್ಯಾರ್ಥಿಗಳ ಮೇಲೆ ಎಂತಹ ದುಷ್ಪರಿಣಾಮವಾಗುತ್ತದೆ ಎಂಬುದಕ್ಕೆ ನನ್ನ ಏಳು ವರ್ಷದ ಮಗನ ಮಾತೊಂದು ನಿದರ್ಶನವಾಗುತ್ತದೆ. ಅವನಿಗೆ ಪಾಠ ಬರೆದುಕೊಂಡು ಬರಲು ಅವನ ಉಪಾಧ್ಯಾಯರು ಹೇಳಿದ್ದರು. ಅವನು ಪಾಠದ ಆರಂಭದ ಎರಡು ಮೂರು ವಾಕ್ಯ, ಮಧ್ಯೆ ಅಲ್ಲಲ್ಲಿ ವಾಕ್ಯಗಳು, ಕೊನೆಯ ಮೂರು ನಾಲ್ಕು ವಾಕ್ಯ ಬರೆದು ಬಿಟ್ಟು, ತನ್ನ ಚಿಕ್ಕ ಅಕ್ಕನಿಗೂ ಹಾಗೇ ಮಾಡುವಂತೆ ಬುದ್ಧಿವಾದ ಹೇಳುತ್ತಿದ್ದ. ಏನೆಂದು ಕೇಳಿದ್ದಕ್ಕೆ, ತನ್ನ ಟೀಚರ್ ಪಾಠದ ಕೊನೆಯ ಭಾಗ ನೋಡಿ ರುಜು ಹಾಕುತ್ತಾರೆ ಎಂದು ಉತ್ತರ ಕೊಟ್ಟ. ಇದು ಜಾಣತನ !

ನಿಜ, ನಮ್ಮಲ್ಲಿ ಜಾಣತನ ಹೆಚ್ಚಾಗಿ, ಮಿತಿಮೀರಿ ಬೆಳೆಯುತ್ತಿದೆ. ಆದರೆ, ಅದಕ್ಕೆ ಸರಿಸಮನಾದ ಶ್ರಮ–ಪ್ರೀತಿ ಬೆಳೆಯುತ್ತಿಲ್ಲ. ಜಾಣತನ ಎಷ್ಟಿದ್ದರೂ ಆ ಕ್ಷಣದ ಲಾಭವನ್ನು ಮಾತ್ರ ತಂದುಕೊಡಬಲ್ಲುದು ಎಂಬ ಸರಳ, ಆದರೆ ಬಹು ಮುಖ್ಯವಾದ, ಪಾಠವನ್ನು ಬಹಳ ಜನ ಅರಿತಂತಿಲ್ಲ.

ಪುಸ್ತಕಪ್ರೇಮದ ಫಲ

ಯಾವನು ನಿಜವಾದ ಪುಸ್ತಕಪ್ರೇಮವನ್ನು ಬೆಳಸಿಕೊಂಡಿರುವನೋ ಅವನು ಅನೇಕ ಆಪ್ತರನ್ನೂ ಬೆಳಸಿಕೊಂಡಂತಿರುತ್ತದೆ. ಅವನಿಗೆ ಜೀವನದಲ್ಲಿ ಬೇಸರವೆಂಬುದಿಲ್ಲ. ಕಾಲ ಕಳೆಯುವುದು ಹೇಗೆಂಬ ಸಮಸ್ಯೆ ಭೂತವಾಗಿ ಕಾಣದು. ಹಣ, ಅಧಿಕಾರ, ಹೆಸರುಗಳು ಅವನಿಗೆ ಬೇಕಾದರೂ ಅವುಗಳ ಸ್ಥಾನವೇನೆಂಬುದರ ಅರಿವು ಅವನಿಗಿರುತ್ತದೆ. ಅವುಗಳಿಗಾಗಿ ಅವನು ಹಾತೊರೆಯುವುದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅವನು ಕಾಡುಹರಟೆಯಿಂದ ಮುಕ್ತ. ತನ್ನ ಕೆಲಸಗಳ ಬಳಿಕ ಉಳಿಯುವ ಸಮಯದಲ್ಲಿ ಅವನು ಓದಬೇಕಾಗಿರುವ ಪುಸ್ತಕಗಳು, ಚಿಂತನೆ, ಬರವಣಿಗೆ ಸಾಕಷ್ಟಿರುವಾಗ, ಇತರರ ಬಗ್ಗೆ ಹೀನವಾಗಿ ಮಾತನಾಡಲು ಅವನು ಸಮಯವನ್ನೆಲ್ಲಿಂದ ತರಬೇಕು ? ನಮ್ಮ ಅನೇಕ ಸಮಸ್ಯೆಗಳ ಮೂಲದಲ್ಲಿ ಪಂಟು (Gossip) ಇದೆ. ನನಗೆ ಅನೇಕ ಸಾರಿ ಅನ್ನಿಸಿದೆ—ನಮ್ಮಲ್ಲಿ ಎರಡು ಬಗೆಯ ನಿರುದ್ಯೋಗಿಗಳಿದ್ದಾರೆ. ಒಂದು ಬಗೆಯವರು ನಿಜವಾದ ನಿರುದ್ಯೋಗಿಗಳು : ಉದ್ಯೋಗಕ್ಕಾಗಿ ತಿರುಗಾಡುತ್ತಿರುವವರು. ಆದ್ದರಿಂದ ಅವರು ಹರಟುವುದರಲ್ಲಿ ನನಗೆ ಆಶ್ಚರ್ಯವೇನೂ ಕಾಣಿಸುವುದಿಲ್ಲ. ಆದರೆ— ಇನ್ನೊಂದು ಬಗೆಯವರು ಕಚೇರಿಯ

ವೇಳೆಗಳಲ್ಲಿ ಯಥಾಶಕ್ತಿ ಉದ್ಯೋಗಿಗಳಾಗಿದ್ದು, ಸಂಬಳ ತೆಗೆದುಕೊಳ್ಳುತ್ತಿರುವವರು. ಉಳಿದ ಸಮಯದಲ್ಲೆಲ್ಲ ಇವರು 'ನಿರುದ್ಯೋಗಿಗಳು'–ಇವರು ವ್ಯಾಸಂಗದಂತಹ ಉಪಯುಕ್ತ 'ಹವ್ಯಾಸ'ಗಳನ್ನು ಹೊಂದಿದ್ದರೆ ನಮ್ಮ ಅನೇಕ ಸಮಸ್ಯೆಗಳು ಬಹುಶಃ ಇಷ್ಟು ಉಲ್ಬಣವಾಗುತ್ತಿರಲಿಲ್ಲ. ಒಬ್ಬ ನಿಜವಾದ ಅಧ್ಯಾಪಕ ತನ್ನ ಕಾಲೇಜ್ ವೇಳೆಯಲ್ಲಿ ಮಾತ್ರವಲ್ಲದೆ, ಎಂದಿಗೂ ಎಲ್ಲಾ ಸಮಯದಲ್ಲಿಯೂ ಉದ್ಯೋಗಿಯೇ. ಅವನು ಮೇಲಿನ ಎರಡನೆಯ ಅರ್ಥದಲ್ಲಿ 'ನಿರುದ್ಯೋಗಿ'ಯಾಗುವುದು ಅಕ್ಷಮ್ಯವೆಂದೇ ಹೇಳಬೇಕು.

ವಾಚನಾಭಿರುಚಿಯುಳ್ಳವರು ಸ್ವಂತ ಪುಸ್ತಕಭಂಡಾರವನ್ನು ಇಟ್ಟುಕೊಳ್ಳುವುದು ಅಪೇಕ್ಷಣೀಯವಾದರೂ, ಅದು ಎಲ್ಲರಿಂದಲೂ ಸಾಧ್ಯವಾಗದಿರಬಹುದು. ಆ ದೃಷ್ಟಿಯಿಂದ ಗ್ರಂಥಭಂಡಾರಗಳ ಪಾತ್ರ ಅತ್ಯಂತ ಮಹತ್ವದ್ದು. ಜನತೆಯಲ್ಲಿ, ವಿದ್ಯಾರ್ಥಿಗಳಲ್ಲಿ, ಅಧ್ಯಾಪಕರಲ್ಲಿ ವಾಚನಾಭಿರುಚಿಯನ್ನು ಬೆಳೆಸುವಲ್ಲಿ ಗ್ರಂಥಪಾಲಕರ ಹೊಣೆ ದೊಡ್ಡದು.

ವಿದ್ಯಕ್ಕೆ ಕಡೆಯಿಲ್ಲ ಬುದ್ಧಿಗೆ ಬೆಲೆಯಿಲ್ಲ
ನಿದ್ರಿಸುವವನಿಗೆ–ಗತಿಯಿಲ್ಲ ಮರಣಕ್ಕೆ
ಮದ್ದುಗಳೆ ಇಲ್ಲ ಸರ್ವಜ್ಞ ||

ವಿದ್ಯವುಳ್ಳನ ಮುಖವು ಮುದ್ದು ಬರುವಂತಿಕ್ಕು
ವಿದ್ಯವಿಲ್ಲದನಾ–ಬರಿಮುಖವು ಹಾಳೂರ
ಹದ್ದಿನಂತಿಕ್ಕು–ಸರ್ವಜ್ಞ ||

ವಿದ್ಯವೇ ತಾಯ್ತಂದೆ ಬುದ್ಧಿಯೇ ಸೋದರನು
ಅಧ್ಯಾನಕಾದರವನೆಂಟ ಸುಖದಿ ತಾ
ನಿದ್ದುದೇ ರಾಜ್ಯ ಸರ್ವಜ್ಞ ||

ಮಾತಿನಿಂ ನಗೆ ನುಡಿಯು ಮಾತಿನಿಂ ಹಗೆ ಕೊಲೆಯು
ಮಾತಿನಿಂ ಸರ್ವಸಂಪದವು ಲೋಕಕ್ಕೆ
ಮಾತೆ ಮಾಣಿಕವು ಸರ್ವಜ್ಞ ||

ಹೊತ್ತಿಗೊದಗಿದ ಮಾತು ಸತ್ತವನು ಎದ್ದಂತೆ
ಹೊತ್ತಾಗಿ ನುಡಿದು ಮಾತು ಕೈಜಾರಿದಾ
ಮುತ್ತಿನಂತಿಹುದು ಸರ್ವಜ್ಞ ||

ಮಹಿಳೆಯರಲ್ಲಿ ವಾಚನಾಭಿರುಚಿ

ರತ್ನಾ ಸ್ವಾಮಿರಾವ್

ಮಾನವನ ಜ್ಞಾನಭಂಡಾರವನ್ನು ಶ್ರೀಮಂತಗೊಳಿ
ಸುವುದಕ್ಕೆ, ಅವನ ವ್ಯಕ್ತಿತ್ವದ ಪರಿಪಕ್ವತೆಗೆ, ಬೇಸತ್ತ
ನಸ್ಸಿಗೆ ಪುನಶ್ಚೇತನ ನೀಡುವುದಕ್ಕೆ, ವಾಚನ–ಶ್ರವಣ
ಕ್ಷಣ–ಈ ಮೂರರಲ್ಲಿ ಓದುವುದು ಅತಿ ಸುಗಮ್ಯವಾದ
ತ್ತು ಶಾಶ್ವತವಾದ ಪರಿಣಾಮ ಬೀರಬಲ್ಲ ಸಾಧನ
ಗಿದೆ.

ಭಾರತದ ಪ್ರಜೆಗಳಲ್ಲಿ ಅನಕ್ಷರಸ್ಥರ ಸಂಖ್ಯೆ ಶೇಕಡ
ತ್ತರಷ್ಟಿದೆಯೆಂಬುದನ್ನು ಗಮನಿಸಿದರೆ, ನಮ್ಮ ರಾಷ್ಟ್ರ
ನ ನಿರಕ್ಷರತೆಯ ಭಯಾನಕ ಸ್ವರೂಪದ ಅರಿವಾದೀತು.
ಬೃಹದಾಕಾರವಾದ ಭೂತವನ್ನು ಹೊಡೆದಟ್ಟಿ,
ರತೆಯ ಪ್ರಮಾಣವನ್ನು ಹೆಚ್ಚಿಸಿದ ಹೊರತು, ಜನ
ಮಾನ್ಯರಲ್ಲಿ ವಾಚನಾಭಿರುಚಿ ಬೆಳೆಸುವ ಸಾಹಸಕ್ಕೆ
ಕ್ಷಿತ ಯಶಸ್ಸು ದೊರೆಯಲಾರದು. ವಯಸ್ಕರ
ಣ ಮತ್ತು ಸಾಕ್ಷರತೆಗೆ ಕನ್ನಡ ಸಾಹಿತ್ಯ ಪರಿಷತ್ತು
ಯೋಜನೆಯಲ್ಲಿ ಪ್ರಾಶಸ್ತ್ಯ ನೀಡಿರುವುದು ಸ್ವಾಗ
ರ್ಹ. ಇದಕ್ಕೆ ವಯಸ್ಕರ ಶಿಕ್ಷಣ ಸಮಿತಿಯ,
ಡಾಭಿಮಾನಿಗಳ, ಸಂಘ-ಸಂಸ್ಥೆಗಳ ಸಹಕಾರ
ಪೂರ್ಣವಾಗಿ ದೊರೆಯಬೇಕಾಗಿದೆ. ಗ್ರಾಮಾಂತರ
ಶಗಳಲ್ಲಿ ಸಾಕ್ಷರತೆ ಹೆಚ್ಚಿದಂತೆ, ಆ ಜನ-ಜೀವನಕ್ಕೆ
ಂಧಪಟ್ಟ ಮತ್ತು ಅವರಿಗೆ ಸುಲಭವಾಗಿ ರುಚಿಸ
ದಾದ ಸರಳ ಸಾಹಿತ್ಯವನ್ನು ಹೊರತಂದು ಜನ
ಪ್ರಿಯಗೊಳಿಸುವುದಾದರೆ, ಅವರಲ್ಲಿಯೂ ವಾಚನಾಭಿರುಚಿಯನ್ನು ಬೆಳೆಸುವುದು ಅಸಾಧ್ಯವೇನಲ್ಲ. ಮಹಿಳೆಯರಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸುವುದು, ವಿಶೇಷವಾಗಿ ವರ್ತಮಾನ ಪರಿಸ್ಥಿತಿಯಲ್ಲಂತೂ, ಅತಿ ಮಹತ್ವಪೂರ್ಣವಾದದ್ದಾಗಿದೆ. ಇಂದು ಮಹಿಳೆಯರು ತಮ್ಮ ಕಾರ್ಯರಂಗವನ್ನು ಕೇವಲ ಗೃಹಕೃತ್ಯಕ್ಕೆ ಮಾತ್ರ ಸೀಮಿತಗೊಳಿಸದೆ, ಎಲ್ಲಾ ಕ್ಷೇತ್ರಗಳಲ್ಲಿಯೂ ಪ್ರಗತಿ ಸಾಧಿಸಿ, ಪುರುಷರಿಗೆ ಸರಿಸಮಾನರಾಗಿ ರಾಷ್ಟ್ರದ ಆಗು-ಹೋಗುಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಹೀಗಾಗಿ ಕುಟುಂಬದಲ್ಲಿ, ಸಮಾಜದಲ್ಲಿ, ರಾಜಕೀಯ ಕ್ಷೇತ್ರದಲ್ಲಿ ಅವರು ವಿಶೇಷವಾದ ಹೊಣೆಗಾರಿಕೆಯನ್ನು ನಿರ್ವಹಿಸಬೇಕಾಗಿದೆ. ನಮ್ಮ ರಾಜಕೀಯ ಭವಿಷ್ಯದ ನಿರ್ಮಾಪಕರನ್ನು ಆರಿಸುವ ಪ್ರಜೆಗಳ ಸಂಖ್ಯೆಯಲ್ಲಿ ಅರ್ಧದಷ್ಟು ಮಂದಿ ಮಹಿಳೆಯರೇ ಆಗಿದ್ದಾರೆ. ಈ ಎಲ್ಲಾ ಜವಾಬ್ದಾರಿಯನ್ನೂ ವಿವೇಕದಿಂದ ನಿರ್ವಹಿಸಬೇಕಾದರೆ, ಅವರು ವಿಶ್ವದ ಎಲ್ಲೆಡೆಯ ಪ್ರಮುಖ ಘಟನೆಗಳು, ಅವುಗಳ ಮಹತ್ವ ಮತ್ತು ಬೆಳವಣಿಗೆಗಳನ್ನೆಲ್ಲಾ ಗಮನಿಸುತ್ತಾ, ಪ್ರಪಂಚ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದೇ ಅಲ್ಲದೆ, ವಿಶಾಲವಾದ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕಾಗಿದೆ. ಇದಕ್ಕಾಗಿ ವರ್ತಮಾನ ಪತ್ರಿಕೆಗಳು ಮತ್ತು ಪ್ರಚಲಿತ ಸಾಹಿತ್ಯ ಮುಂತಾದುವನ್ನು ಓದುವುದರಲ್ಲಿ ಆಸಕ್ತಿವಹಿಸುವುದು ಅತಿ ಮುಖ್ಯವಾಗಿದೆ.

ಅನುದಿನದ ಸಮಸ್ಯೆಗಳು

ಇಂದು ಸಂಸಾರದಲ್ಲಿ, ಸಮಾಜದಲ್ಲಿ, ಸಾರ್ವಜನಿಕ ಕ್ಷೇತ್ರದಲ್ಲಿ ನಮ್ಮನ್ನು ಅನುದಿನ ಕಾಡುತ್ತಿರುವ ಸಮಸ್ಯೆಗಳಿಗೆ ಲೆಕ್ಕವಿಲ್ಲ. ತರುಣ ಜನಾಂಗದ ಹೊಸ ವಿಚಾರ ಧಾರೆಯನ್ನು ಹೊಂದಾಣಿಕೆಯಿಂದ ಸ್ವೀಕರಿಸುವ ಮನೋಸಿದ್ಧತೆಯ ಅಭಾವದಿಂದಾಗಿ ಅಸುಖಿಗಳಾಗಿರುವ ಹಿರಿಯರು, ದೀರ್ಘಕಾಲದಿಂದ ನಡೆದು ಬಂದಿರುವ ಸಂಪ್ರದಾಯಶೀಲತೆಯಲ್ಲಿನ ಅಚಲವಾದ ನಂಬಿಕೆಯ ಹಿಂದೆ ಹಿರಿಯರ ಹೃದಯಾಂತರಾಳದಲ್ಲಿ ಅಡಗಿರುವ ಪ್ರೀತಿ ವಾತ್ಸಲ್ಯಗಳನ್ನು ಅರಿತುಕೊಂಡು, ಅವರೊಂದಿಗೆ ಸಂತೋಷವಾಗಿ ಬಾಳಲಾರದ ಕಿರಿಯರು, ಆರ್ಥಿಕ ಕೊರತೆ ಪೂರೈಸುವುದಕ್ಕಾಗಿ ದುಡಿಯುವ ಗೃಹಿಣಿಯರು, ಪರಿತ್ಯಜಿಸಲ್ಪಟ್ಟ ಮತ್ತು ಪತಿಯ ಇಚ್ಛೆಯನ್ನನುಸರಿಸಿ ಸಹಬಾಳ್ವೆ ನಡೆಸಲು ಅಸಮರ್ಥರಾದ ಪತ್ನಿಯರು, ಶಿಕ್ಷಕರ-ಪೋಷಕರ ಅಂಕೆಗೆ ಸಿಲುಕದೆ ಸ್ವೇಚ್ಛಾವರ್ತಿಗಳಾಗಿ ತಮ್ಮ ಭವಿಷ್ಯವನ್ನೇ ಬರಡುಮಾಡಿಕೊಳ್ಳುತ್ತಿರುವ ವಿದ್ಯಾರ್ಥಿಗಳು, ಅಸಹಾಯಕ ಪರಿಸ್ಥಿತಿಗಳಿಂದಾಗಿ ಅನೈತಿಕ ಮಾರ್ಗಕ್ಕೆ ದೂಡಲ್ಪಟ್ಟ ಹೆಣ್ಣುಮಕ್ಕಳು, ಜಾತಿ-ಮತ-ನಾಡುಗಳ ಅಭಿಮಾನದ ಸೋಗಿನಲ್ಲಿ ಸ್ವಹಿತ ಸಾಧಿಸಲು, ಭಾವೈಕ್ಯತೆಗೆ ಭಂಗತರುವಂತಹ ರಾಷ್ಟ್ರ ವಿರೋಧಿ ಚಟುವಟಿಕೆಗಳನ್ನು ಪ್ರಚೋದಿಸುತ್ತಿರುವ ಸ್ವಾರ್ಥಿಗಳು–ಇಂತಹ ಹಲವಾರು ಬಹುಮುಖ ಸಮಸ್ಯೆಗಳ ವಿರುದ್ಧ ಪರಿಣಾಮಕಾರಿಯಾಗಿ ಹೋರಾಡಿ, ಸುಖೀ ಕುಟುಂಬ, ಸುವ್ಯವಸ್ಥಿತವಾದ ಸಮಾಜ, ಸುಭದ್ರವಾದ ಸರ್ಕಾರ, ಪರಿಶುದ್ಧವಾದ ಪರಿಸರ, ಇವುಗಳ ಮೂಲಕ ರಾಷ್ಟ್ರದ ಕಲ್ಯಾಣವನ್ನು ಸಾಧಿಸುವ ಪ್ರಯತ್ನದಲ್ಲಿ ಮಹಿಳೆಯರ ಪಾತ್ರ ಬಹು ಹಿರಿದಾಗಿದೆ. ಇದಕ್ಕೆ ಅಗತ್ಯವಾದ ತ್ಯಾಗಬುದ್ಧಿ, ಸೇವಾಮನೋಭಾವ, ಸಹನಶೀಲತೆ ಅವರಲ್ಲಿ ಅಂತರ್ಗತವಾಗಿ ಬೆಳೆದು ಬಂದಿವೆ. ಈ ಗುಣಗಳನ್ನು ಜಾಗೃತಗೊಳಿಸಿ, ಕರ್ತವ್ಯನಿಷ್ಠೆಗೆ ಸ್ಫೂರ್ತಿ ನೀಡಲು ಪೋಷಕವಾದ ಮತ್ತು ಸಮಯೋಚಿತ ಮಾರ್ಗದರ್ಶನ ನೀಡಬಲ್ಲ ಸಾಹಿತ್ಯ ಇಂದು ಹೆಚ್ಚುಹೆಚ್ಚಾಗಿ ಬರಬೇಕಾಗಿದೆ. ಈ ಸಮಸ್ಯೆಗಳು ಮಹಿಳೆಯರ ದೈನಂದಿನ ಜೀವನಕ್ಕೆ ನಿಕಟಸಂಪರ್ಕ ಹೊಂದಿರುವುದರಿಂದ, ಇದಕ್ಕೆ ಸಂಬಂಧಪಟ್ಟ ವಿಚಾರಪೂರಿತ ಮತ್ತು ವಿಮರ್ಶನಾತ್ಮಕ ಲೇಖನಗಳು ಸಹಜವಾಗಿಯೇ ಅವರಲ್ಲಿ ಆಸಕ್ತಿಯನ್ನು ಕೆರಳಿಸುವುದೇ ಅಲ್ಲದೆ ವಾಚನಾಭಿರುಚಿಯನ್ನು ಬೆಳೆಸಿ, ಬಲಿಸಲು ಸಹಕಾರಿಯಾಗಬಲ್ಲವು. ಈ ಪ್ರಕಟವಾಗುತ್ತಿರುವ ನಿಯತಕಾಲಿಕೆಗಳಲ್ಲಿ, ವಿಶೇಷಾಂ ಗಳಲ್ಲಿ ಮಹಿಳೆಯರಿಗಾಗಿ ಮೀಸಲಾದ ಪುಟಗಳು ಇ ವೆಂದಲ್ಲ ; ಆದರೆ ಅವುಗಳ ಸಂಖ್ಯೆ, ಪ್ರಮಾಣ ಏನೇನು ಸಾಲದು. ವಿಶಿಷ್ಟವಾಗಿ ಮಹಿಳೆಯರಿಗೆ ಉದ್ದೇಶಿತವಾ ರುವ ಪತ್ರಿಕೆಗಳು ಹೆಚ್ಚು ಹೆಚ್ಚಾಗಿ ಬರಬೇಕು. ಅ ಗಳಲ್ಲಿ ಮಹಿಳೆಯರ ಸಮಸ್ಯೆಗಳು ಮತ್ತು ಅವರ ಆಸಕ್ತಿಮೂಡಿಸಬಹುದಾದ, ಗೃಹನಿರ್ವಹಣೆ, ಶಿಶು ಪೋಷಣೆ, ಹೊಲಿಗೆ, ಕಸೂತಿ, ರಂಗವಲ್ಲಿ, ಚಿತ್ರಕಲೆ ಕೇಶಾಲಂಕಾರ, ಹೂಗಳ ಜೋಡಣೆ, ಹೊಸ ಬಗೆಯ ಅಡಿಗೆ-ತಿಂಡಿಗಳ ತಯಾರಿಕೆ, ಗೃಹಶೃಂಗಾರ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಮತ್ತು ಮಹಿಳಾ ಲೇಖ ಯರಿಂದಲೇ ಬರುವ ಆಕರ್ಷಕ ಮತ್ತು ಉಪಯುಕ್ತ ಲೇಖನಗಳಿಗೆ ಆದ್ಯ ಪ್ರಾಮುಖ್ಯತೆ ಇದ್ದು, ಚಿಕ್ಕ-ಚೊಕ್ಕ ಲಘು ಬರಹಗಳನ್ನು ವಿಶೇಷವಾಗಿ ಪ್ರೋತ್ಸಾಹಿಸುವುದು, ಮಹಿಳೆಯರಲ್ಲಿ ವಾಚನಾಭಿರುಚಿ ಬೆಳೆಸಲು ಹೆಚ್ಚು ಸಹ ಕಾರಿಯಾಗಬಲ್ಲುದು. ವಾಚನಾಭಿರುಚಿಯನ್ನು ಬೆಳೆಸು ವುದರಲ್ಲಿ ಮಹಿಳೆಯರ ಸಂಘ-ಸಂಸ್ಥೆಗಳ ಹೊಣೆಗಾರಿ ಕೆಯೂ ಕಡಮೆಯೇನಿಲ್ಲ. ಇಂತಹ ಪ್ರತಿಯೊಂದು ಸಂಘ-ಸಂಸ್ಥೆಯಲ್ಲೂ ಉತ್ತಮವಾದ ಪುಸ್ತಕ ಭಂಡಾರ ಮತ್ತು ವಾಚನಾಲಯಗಳನ್ನು ನಡೆಸುವುದು ಬಹಳ ಒಳ್ಳೆಯದು. ಇದಕ್ಕಾಗಿ ವಿಧಿಸುವ ಶುಲ್ಕವೂ ಹಗುರವಾಗಿದ್ದರೆ ಸಾಮಾನ್ಯ ಮತ್ತು ಬಡವರ್ಗದ ಮಹಿಳೆಯರಿಗೆ ವಿಶೇಷವಾಗಿ ಪ್ರಯೋಜನಕಾರಿ ಯಾಗಬಹುದು. ಇಂತಹ ಪುಸ್ತಕ ಭಂಡಾರಗಳಿರುವ ನಗರ ಪ್ರದೇಶಗಳಲ್ಲಿ ಎಲ್ಲಾ ವಯಸ್ಸಿನ ಮತ್ತು ವರ್ಗ ಗಳ ಮಹಿಳೆಯರು ಬಹು ಉತ್ಸಾಹದಿಂದ ಭಾಗವಹಿಸು ವುದು ಕಂಡುಬಂದಿದೆ. ಇವುಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಶ್ರೇಷ್ಠ ದರ್ಜೆಯ ಪುಸ್ತಕಗಳನ್ನು ಒದಗಿಸುವುದಕ್ಕೆ ಸರ್ಕಾರವೂ ಕನ್ನಡಾಭಿಮಾನಿ ಸಂಘ-ಸಂಸ್ಥೆಗಳೂ ಇನ್ನೂ ಅಧಿಕ ಪ್ರಮಾಣದಲ್ಲಿ ನೆರವು ನೀಡಲು ಮುಂದಾಗಬೇಕು. ಅಲ್ಲದೆ ಪ್ರಾಜ್ಞವರ್ಗದ ಮಹಿಳೆಯರ ಸಂಖ್ಯೆ ಹೆಚ್ಚಾಗಿರುವ ಕಡೆಗಳಲ್ಲಿ, ಆಗಿಂದಾಗ ಹೊರ ಬರುವ ಉತ್ತಮ ಕೃತಿಗಳ ಬಗ್ಗೆ ವಿಮರ್ಶನಾತ್ಮಕ ಲೇಖನಗಳ, ಪ್ರಬಂಧಗಳ ಸ್ಪರ್ಧೆಗಳನ್ನು ಏರ್ಪಡಿಸು ವುದು ವಾಚನಾಭಿರುಚಿಯನ್ನು ಬೆಳೆಸಲು ಪ್ರೋತ್ಸಾಹ ದಾಯಕವಾಗಬಹುದು.

ಲ ಬರವಣಿಗೆ ವಿಷಾದಕರ

ೀಚಿಗೆ ಪ್ರಕಟವಾಗುತ್ತಿರುವ ನಿಯತಕಾಲಿಕೆ ವಿಶೇಷಾಂಕಗಳಲ್ಲಿ, ಅಶ್ಲೀಲವಾದ ಚಿತ್ರಗಳಿಗೆ, ುಟ್ಟದ ಬರಹಗಳಿಗೆ ಪ್ರಾಮುಖ್ಯತೆ ಕೊಡುತ್ತಿರು ಹು ಶೋಚನೀಯವಾದ ಸಂಗತಿ. ಜನಸಾಮಾ ಲವು, ಬೇಡಿಕೆಗಳನ್ನನುಸರಿಸಿ, ಪ್ರಸಾರ ಸಂಖ್ಯೆ ಹೆಚ್ಚಿಸಲು ಇದು ಅನಿವಾರ್ಯವೆಂದು ಪತ್ರಿಕೋ ಗಳ ವಾದ! ರಾಷ್ಟ್ರದ, ಜನತೆಯ, ಕಲ್ಯಾಣ ಕ್ಕರ ಯಾವ ನೈತಿಕ ಮೌಲ್ಯಗಳನ್ನೂ ಉಳಿಸಿ ವುದಕ್ಕೆ ನಾವು ಆದ್ಯಪ್ರಾಶಸ್ತ್ಯ ನೀಡಬೇಕಾಗಿ , ಅಂತಹ ಮೌಲ್ಯಗಳನ್ನು ಕಡೆಗಣಿಸಿ, ಕೇವಲ ಸಂಖ್ಯೆಯ ಹೆಚ್ಚಳವನ್ನೇ ಮುಖ್ಯ ಗುರಿ ಟ್ಟುಕೊಂಡು, ಮಾನವನ ದುರ್ಬಲ ಮನೋಭಿ ಕ್ಷಣಿಕ ತೃಪ್ತಿ ನೀಡುವ ಕ್ಷುಲ್ಲಕವಾದ ಸಾಹಿತ್ಯ ಪ್ರಸಾರ ಮಾಡುವುದು ಅಕ್ಷಮ್ಯವಾದ ಅವಿವೇಕ ತು! ನೈತಿಕ ಅಧಃಪತನಕ್ಕೆ ಕಾರಣವಾಗುವ ುಟ್ಟದ ಅಭಿರುಚಿಯನ್ನು ಮೊಳೆಯುವ ಮೊದಲೇ ಹಾಕಬೇಕೇ ಹೊರತು, ಅದನ್ನು ಪೋಷಿಸಿ ವಾಗಿ ಬೆಳೆಸಿದಲ್ಲಿ, ಫಲ ಉಣ್ಣುವಾಗ ಪಶ್ಚಾ ತಪ್ಪಿದ್ದಲ್ಲ. ಇಂತಹ ಸಾಹಿತ್ಯವನ್ನು ತಿರಸ್ಕರಿಸಿ, ಪ್ರಸಾರದ ವಿರುದ್ಧ ಪ್ರತಿಭಟಿಸುವುದಕ್ಕೆ ಮಹಿಳೆ ಸರ್ವಪ್ರಯತ್ನ ಮಾಡಬೇಕು.

ಚನಾಭಿರುಚಿಯನ್ನು ಬೆಳೆಸಿಕೊಳ್ಳುವುದು ಎಷ್ಟು ಮುಖ್ಯವೋ, ಯಾವ ರೀತಿಯ ಸಾಹಿತ್ಯದಲ್ಲಿ ಅಭಿರುಚಿ ಬೆಳೆಸಿಕೊಳ್ಳುತ್ತೇವೆಂಬುದೂ ಅಷ್ಟೇ ಮುಖ್ಯ. ಯಾವ ಸಾಹಿತ್ಯವು ಬಾಳನ್ನು ಹಸನುಮಾಡಿಕೊಳ್ಳಲು ಅನುವಾಗ ಬಲ್ಲುದೋ, ಆತ್ಮದ ವಿಕಾಸಕ್ಕೆ ಮತ್ತು ಮಾನವೀಯ ಗುಣಗಳನ್ನು ಸ್ಫುಟಗೊಳಿಸುವುದಕ್ಕೆ ನೆರವಾಗಬಲ್ಲುದೋ ಮಾನವನಲ್ಲಿ ಜಾಗೃತಿ ಮೂಡಿಸಿ, ಅವನನ್ನು ಪರಿಪೂರ್ಣ ತೆಯತ್ತ ನಡೆಸಬಲ್ಲುದೋ, ಅಂತಹ ಶ್ರೇಷ್ಠವಾದ ಸಾಹಿ ತ್ಯದ ಕೃತಿಗಳನ್ನು ದುಡ್ಡು ಕೊಟ್ಟು ಕೊಳ್ಳಬೇಕು. ಕೊಂಡು, ಆಸಕ್ತಿಯಿಂದ ಓದಬೇಕು, ಓದಿ ಅದರ ಸೌಂದರ್ಯವನ್ನು ಮೆಚ್ಚಬೇಕು. ಆಸಕ್ತಿಯಿದ್ದರೂ ಕೊಂಡುಕೊಳ್ಳಲು ಆರ್ಥಿಕ ಅನುಕೂಲ ಇಲ್ಲದವರಿಗೆ ಓದಲು ಕೊಡಬೇಕು. ಪ್ರತಿಯೊಬ್ಬ ಮಹಿಳೆಯೂ ತಿಂಗಳ ಗೃಹನಿರ್ವಹಣೆಯ ವೆಚ್ಚದಲ್ಲಿ ಒಂದು ನಿರ್ದಿಷ್ಟ ಭಾಗವನ್ನು ಉತ್ತಮವಾದ ಪುಸ್ತಕಗಳನ್ನು ಕೊಳ್ಳುವು ದಕ್ಕೂ, ದಿನದ ಕೆಲಸಕಾರ್ಯಗಳ ಮಧ್ಯೆ ಸ್ವಲ್ಪ ಸಮಯ ವನ್ನಾದರೂ ಓದುವುದಕ್ಕೂ ಕಡ್ಡಾಯವಾಗಿ ಮೀಸಲಾಗಿ ಡುವುದು ಬಹು ಒಳ್ಳೆಯ ಕ್ರಮ. ವೈಚಾರಿಕತೆಯನ್ನು ಪರಿಪಕ್ವಗೊಳಿಸಿ, ಕರ್ತವ್ಯನಿರ್ವಹಣೆಗೆ ಮಾರ್ಗದರ್ಶನ ನೀಡಬಲ್ಲ ಉತ್ಕೃಷ್ಟ ಸಾಹಿತ್ಯವನ್ನು ಈ ರೀತಿಯಲ್ಲಿ ಪುರಸ್ಕರಿಸುವ ಪ್ರವೃತ್ತಿಯನ್ನು ಅನುಗೊಳಿಸಿಕೊಳ್ಳುವು ದಾದರೆ, ಇದಕ್ಕಿಂತ ಸುಸಂಸ್ಕೃತವಾದ ಹವ್ಯಾಸ ಸಾಹಿತ್ಯ ಸರಸ್ವತಿಗೆ ಸೇವೆ ಸಲ್ಲಿಸುವ ಸುಲಭಮಾರ್ಗ ಇನ್ನೊಂದಿರ ಲಾರದು.

ಒಳ್ಳೆಯ ಪುಸ್ತಕವು ಒಂದು ಸಲದ ಓದಿನಿಂದ ಸಿಪ್ಪೆಯಾಗಿ ಹೋಗತಕ್ಕುದಲ್ಲ. ಪದೇಪದೇ ನೋಡುವುದರಿಂದಲೇ ಅದರ ಗುಣವನ್ನರಿಯಲಾಗುವುದು. ಇದಕ್ಕಾಗಿಯೇ ಅದು ನಮ್ಮ ಬಳಿಯಿರಬೇಕು. ಪ್ರತಿಯೊಂದು ಮನೆಗೂ ದೀಪವು ಹೇಗೆಯೋ ಪುಸ್ತಕವು ಹಾಗೆಯೇ ಅವಶ್ಯ ವಸ್ತುವೆಂಬುದನ್ನು ನಮ್ಮವರು ಗ್ರಹಿಸಬೇಕಾಗಿದೆ.

—ಡಿ. ವಿ. ಜಿ.

ಕಾರ್ಮಿಕರಲ್ಲಿ ವಾಚನಾಭಿರುಚಿ

ಎಚ್. ಎಲ್. ನಾಗೇಗೌಡ

ವಿಚಾರಗೋಷ್ಠಿಯ ಸಂಬಂಧದಲ್ಲಿ 'ಕಾರ್ಮಿಕ' ಎಂಬ ಪದವನ್ನು ಯಾವ ಅರ್ಥದಲ್ಲಿ ಹೇಳಿದೆಯೋ ಕಾಣೆ. ಬಹುಶಃ ಅದನ್ನು ಬಳಸುವ ಸಾಮಾನ್ಯ ಅರ್ಥದಲ್ಲಿ ಅಂದರೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕೆಲಸಗಾರ ಅಥವಾ ಕಾರ್ಮಿಕ ಎಂಬ ಅರ್ಥದಲ್ಲಿ ಹೇಳಿರಬೇಕು. ಹೀಗೆ ಹೇಳುವುದು ತಪ್ಪಲ್ಲದಿದ್ದರೂ ಕಾನೂನು ಕಟ್ಟಲೆಗಳ ಅರ್ಥದಲ್ಲಿ ಅವನಷ್ಟೇ ಕಾರ್ಮಿಕ ಅಲ್ಲ. ಹೊಲಗದ್ದೆಗಳಲ್ಲಿ, ಅಂಗಡಿ ಮುಂಗಟ್ಟುಗಳಲ್ಲಿ, ಸಿನೆಮಾ ನಾಟಕಗಳಲ್ಲಿ, ಹೊಟೇಲು ಕ್ಲಬ್ಬುಗಳಲ್ಲಿ, ಸಾರಿಗೆ ಸುಂಕಗಳಲ್ಲಿ ರೈಲು ಬಸ್ಸುಗಳಲ್ಲಿ, ಗಣಿ ಗಡಂಗುಗಳಲ್ಲಿ ಕೆಲಸ ಮಾಡುವವರೆಲ್ಲಾ ಕಾರ್ಮಿಕರೇ. ಯಾರು ದಿನಗೂಲಿಗೋ ತಿಂಗಳುಗೂಲಿಗೋ ಕೆಲಸ ಮಾಡುತ್ತಾನೋ ಅವನು ಕಾರ್ಮಿಕ.

ಕಾರ್ಮಿಕರ ಸಂಖ್ಯೆ

ಕಾರ್ಮಿಕರಲ್ಲಿ ವಾಚನಾಭಿರುಚಿಯನ್ನು ಬೆಳೆಸುವ ಪ್ರಶ್ನೆ ಬಂದಾಗ ನಾವು ಆತನೊಬ್ಬನನ್ನೇ ಅಲ್ಲದೆ ಅವನ ಕುಟುಂಬವನ್ನೂ ಗಮನಿಸಬೇಕಾಗುತ್ತದೆ. ಈ ಕಾರ್ಮಿಕ ಕುಟುಂಬಗಳ ಸಂಖ್ಯೆ ಒಟ್ಟು ಪ್ರಜಾಸಂಖ್ಯೆಯ ಅರ್ಧದಷ್ಟು ಎಂದು ಇಟ್ಟುಕೊಳ್ಳಬಹುದು. ನಮ್ಮ ದೇಶದ ಇತ್ತೀಚಿನ ಜನಸಂಖ್ಯೆ ೫೬ ಕೋಟಿಗಳು. ಅಂದರೆ ಕಾರ್ಮಿಕ ಕುಟುಂಬಗಳ ಸಂಖ್ಯೆ ೨೮ ಕೋಟಿಗಳು. ಈ ಕಾರ್ಮಿಕರು ತಮ್ಮ ಹಕ್ಕುಬಾಧ್ಯತೆಗಳ ರಕ್ಷಣೆಗಾಗಿ ಸಂಘಗಳನ್ನು ಮಾಡಿಕೊಳ್ಳಬಹುದಷ್ಟೆ. ಹೀಗೆ ಮಾಡಿಕೊಂಡ ಸಂಘಗಳ ಸಂಖ್ಯೆ ಸುಮಾರು ೧೧,೦೦೦. ಈ ಸಂಘಗಳಿಗೆ ಸೇರಿರುವ ಸದಸ್ಯರ ಸಂಖ್ಯೆ ಸುಮಾರು ೫೫ ಲಕ್ಷಗಳು. ಅಂದಮೇಲೆ ಬಹುಮಂದಿ ಕಾರ್ಮಿಕರು ಸಂಘಟಿತರಾಗಿಲ್ಲ ಎಂದು ಹೇಳಬೇಕು. ಹೀಗೆ ಸಂಘಟಿತರಾಗದ ಕಾರ್ಮಿಕರೆಂದರೆ ಗ್ರಾಮಾಂತರ ಪ್ರದೇಶದಲ್ಲಿ ಕೂಲಿನಾಲಿಯಿಂದ ಜೀವಿಸುವ ಕೃಷಿ ಕಾರ್ಮಿಕರು ಮತ್ತು ಪಟ್ಟಣಗಳಲ್ಲಿ ಅಸಂಖ್ಯಾತ ಸಣ್ಣಪುಟ್ಟ ಉದ್ದಿಮೆಗಳು, ಅಂಗಡಿ ಮುಂಗಟ್ಟುಗಳು ಇವುಗಳಲ್ಲಿ ಕೆಲಸ ಮಾಡಿಕೊಂಡಿರುವ ಜನರು.

ನಮ್ಮ ಯೋಜನೆ ಸದ್ಯಕ್ಕೆ ಪಟ್ಟಣದ ಕಾರ್ಮಿಕರನ್ನು, ಅದರಲ್ಲಿಯೂ ಸಂಘಟಿತ ಕಾರ್ಮಿಕರನ್ನು, ಕುರಿತದ್ದಾಗಬೇಕಾಗುತ್ತದೆ. ಮೈಸೂರು ರಾಜ್ಯದಲ್ಲಿ ಕಾರ್ಮಿಕರು ಹೆಚ್ಚಾಗಿರುವ ಊರುಗಳೆಂದರೆ ಬೆಂಗಳೂರು, ಕೋಲಾರ ಚಿನ್ನದ ಗಣಿ, ಭದ್ರಾವತಿ, ಮತ್ತು ಉಳಿದೆಲ್ಲಾ ಜಿಲ್ಲಾ ಕೇಂದ್ರಗಳು.

ಮಾಧ್ಯಮಗಳು

ವಾಚನಾಭಿರುಚಿ ಎಂದರೆ ಓದುವ ಅಭ್ಯಾಸ ಅಥವಾ ಆಸಕ್ತಿ. ಈ ಅಭ್ಯಾಸ ಅಥವಾ ಆಸಕ್ತಿ ಕಾರ್ಮಿಕರಲ್ಲಿ ಮಾತ್ರ ಇಲ್ಲವೆ? ಅಥವಾ ಬೇರೆಯವರಲ್ಲಿಯೂ ಇಲ್ಲವೇ? ಕಾರ್ಮಿಕರಲ್ಲಿ ಅಷ್ಟೇ, ಅಲ್ಲ. ಇಡೀ ಜನತೆಯಲ್ಲಿ ವಾಚನಾಭಿರುಚಿಯ ಮಟ್ಟ ತೀರ ಕನಿಷ್ಟ ಸ್ಥಿತಿಗೆ ಇಳಿದಿದೆ. ಸುಮಾರು ೪೦-೫೦ ವರ್ಷಗಳ ಹಿಂದೆ ಹೆಚ್ಚಾಗಿ ಪುಸ್ತಕಗಳೇ ಪ್ರಸಾರ ಮಾಧ್ಯಮವಾಗಿತ್ತು: ಪತ್ರಿಕೆಗಳು ಮತ್ತು ಮ್ಯಾಗಜಿನ್‌ಗಳು ಇದ್ದರೂ ಅವು ಪುಸ್ತಕಗಳನ್ನು ಮರೆಸುವಷ್ಟು ಆಕರ್ಷಕವಾಗಿರಲಿಲ್ಲ. ಆದರೆ ಈಚೆಗೆ ಪತ್ರಿಕೆಗಳೂ ಮ್ಯಾಗಜೀನ್‌ಗಳೂ ಎಷ್ಟು ಆಕರ್ಷಕವಾಗಿವೆಯೆಂದರೆ ಅವನ್ನು ಕೊಳ್ಳುವುದು, ನೋಡುವುದು ಮತ್ತು ಓದುವುದರಲ್ಲಿಯೇ ನಾವು ಖರ್ಚು ಮಾಡಬಹುದಾದ ದುಡ್ಡು, ಮತ್ತು ಇರುವ ಕಾಲ ವ್ಯಯವಾಗಿಬಿಡುತ್ತದೆ. ಇವುಗಳಲ್ಲದೆ, ಸಿನೆಮಾ, ನಾಟಕಗಳು, ರೇಡಿಯೋ ಟೆಲಿವಿಜನ್‌ಗಳು, ಭಿತ್ತಿಪತ್ರ, ಕರಪತ್ರಗಳು—ಇವೂ ಜನತೆಯ ಜೀವನದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡುಬಿಟ್ಟಿವೆ. ಸಣ್ಣ ಸಣ್ಣ ಟ್ರಾನ್ಸಿಸ್ಟರುಗಳು ಬಂದಮೇಲಂತೂ ಅವು ಜನರ ಸತತ

ಗಾತಿಗಳಾಗಿಬಿಟ್ಟಿವೆ. ಕಾರು ಸೈಕಲ್ಲುಗಳ ಮೇಲೆ ೇಗುವಾಗ, ನಿಂತಾಗ, ನಡೆಯುವಾಗ, ಮಲಗಿದಾಗ ಡ್ಡಾಗ, ಉಣ್ಣುವಾಗ–ತಿನ್ನುವಾಗ ಈ ಟ್ರಾನ್ಸಿಸ್ಟರು ು ನಮ್ಮ ಜೊತೆಯೇ ಇರುತ್ತವೆ. ಈಗಂತೂ ಹಳ್ಳಿಯ ಾಲೆಮೂಲೆಗಳಲ್ಲಿ, ಪಟ್ಟಣದ ಕೊಳಕು ಕೊಂಪೆ ಲ್ಲಿ, ಬಡವನ ಹುಲ್ಲುಗುಡಿಸಲಿನಲ್ಲಿಯೂ ಕಾಣಿಸಿ ಂಡಿವೆ. ಕೆಲವರಂತೂ, ಅದರಲ್ಲಿಯೂ ಏಕಾಂಗಿಯಾಗಿ ತ್ರಿ ಕಳೆಯಬೇಕಾದವರು, ಅವುಗಳನ್ನು ಮಲಗಿಸಿ ಂಡೇ ಮಲಗಿಕೊಳ್ಳುತ್ತಾರೆ!

ಂದೆ ಹೇಗೆ?

ಮೇಲೆ ಹೇಳಿದ ಎಲ್ಲಾ ಪ್ರಸಾರ ಮಾಧ್ಯಮಗಳೂ ್ತಕದ ಜಾಗವನ್ನು ಆಕ್ರಮಿಸಿಕೊಂಡಿವೆ. ಟೆಲಿವಿಜನ್ ು ಬಂದ ಮೇಲಂತೂ ಪುಸ್ತಕಗಳ ಗತಿ ಏನಾಗುತ್ತೆ ದು ಹೇಳುವಂತಿಲ್ಲ. ಇಷ್ಟೆಲ್ಲಾ ಮಾಧ್ಯಮಗಳು ್ಮನ್ನು ಮಧ್ಯೆ ಸಿಕ್ಕಿಸಿಕೊಂಡಿರುವಾಗ ನಮಗೆ ಪುಸ್ತಕ ುವುದರ ಕಡೆ ಮನಸ್ಸು ಬರುವುದು ಸಾಧ್ಯವೆ? ಸಾಧ್ಯ . ಅಲ್ಲದೆ ಮಾಧ್ಯಮಗಳು ಪುಸ್ತಕಗಳು ಮಾಡುವ ಸವನ್ನು ಮಾಡುತ್ತವೆ ಎಂಬ ವಿಷಯವನ್ನು ಇಲ್ಲಿ ರಿಯಬಾರದು. ಎಷ್ಟೋ ವೃತ್ತಪತ್ರಿಕೆಗಳು ಅವುಗಳ ದ ವಾರ್ಷಿಕ ಪುರವಣಿಗಳ ಮೂಲಕ, ರೇಡಿಯೋ ಅವುಗಳ ವಿಶೇಷ ಕಾರ್ಯಕ್ರಮಗಳ ಮೂಲಕ ್ತಕಗಳು ಮಾಡಬಹುದಾದ ಕೆಲಸವನ್ನು ಮಾಡು ೆ. ಹೀಗಾಗಿ ಈಗಿನ ಜನತೆ ಎಷ್ಟೋ ಪ್ರಚಲಿತ ಯಗಳನ್ನು ಹಿಂದಿನವರಿಗಿಂತ ಹೆಚ್ಚಾಗಿ ತಿಳಿದುಕೊಂಡಿ ್ತದೆ. ಎಂಬುದರಲ್ಲಿ ಸಂದೇಹವಿಲ್ಲ. ಈಗಿನವನು ತನಗೆ ್ಟಿ ಸಾಕೆಂದು ಭಾವಿಸಿದರೆ ತಪ್ಪಲ್ಲ. ಏಕೆಂದರೆ, ಪ್ರಚ ವಿಷಯಗಳನ್ನು ತಿಳಿದುಕೊಂಡು, ತನ್ನ ಜೀವನಕ್ಕೆ ದು ದಾರಿ ಮಾಡಿಕೊಂಡರೆ ಅವನ ಯೋಚನೆ ್ತು. ಉಳಿದ ವಿಚಾರಗಳ ಬಗ್ಗೆ ಆಲೋಚನೆ ಅನಾ ್ಕ ಎಂಬ ಭಾವನೆ ಬಂದಿದೆ ಅವನಿಗೆ.

ಶ್ವತ ಸಂಪತ್ತು—ಪುಸ್ತಕ

ಇಷ್ಟಾದರೂ ಪುಸ್ತಕಗಳನ್ನು ಕೈಬಿಡುವಂತಿಲ್ಲ. ್ವತವಾದ, ಆಳವಾದ ಜ್ಞಾನವನ್ನಾಗಲೀ ತಿಳುವಳಿಕೆ ನ್ನಾಗಲೀ ಪಡೆಯುವಂಥ ವಿಧಾನವೆಂದರೆ ಪುಸ್ತಕ . ರೇಡಿಯೋದಲ್ಲಿ ಕೇಳಿದ ಮಾತು, ಮ್ಯಾಗಜಿನ್‌ಗಳಲ್ಲಿ ಓದಿದ ವಿಷಯ ಮರೆತುಹೋಗುತ್ತವೆ ಮತ್ತು ಮ್ಯಾಗ್ ಜಿನ್‌ಗಳನ್ನು ಪುಸ್ತಕಗಳನ್ನು ಇಟ್ಟಂತೆ ಶಾಶ್ವತವಾಗಿ ಇಡಲು ಸಾಧ್ಯವಿಲ್ಲ. ಅಲ್ಲದೆ ಅವುಗಳಲ್ಲಿ (ಮ್ಯಾಗಜೀನ್ ಗಳಲ್ಲಿ) ಬರುವ ವಿಷಯಗಳನ್ನು ಓದಿದ ಮೇಲೆ ಸರಿ ಯಾದ ಓದುಗನಿಗೆ ಮನಸ್ಸು ಬಂದೇಬರುತ್ತದೆ, ಮೂಲ ವನ್ನು ಪುಸ್ತಕದಲ್ಲಿ ಓದಿ ಅದರ ರಸಾಸ್ವಾದನೆಯನ್ನೋ ವಿಷಯದ ಪೂರ್ಣಪರಿಚಯವನ್ನೋ ಪಡೆದುಕೊಳ್ಳ ಬೇಕೆಂದು. ಆದ್ದರಿಂದ ಪುಸ್ತಕಗಳ ಮೂಲಕ ವಾಚನಾಭಿ ರುಚಿಯನ್ನು ಬೆಳೆಸುವ ಮಾರ್ಗವನ್ನು ಕೈಬಿಡದೆ ನಡೆಸಿ ಕೊಂಡು ಬರಲೇಬೇಕಾಗುತ್ತದೆ.

ಕಾರ್ಮಿಕರಲ್ಲಿ

ಕಾರ್ಮಿಕರಲ್ಲಿ ವಾಚನಾಭಿರುಚಿಯನ್ನು ಬೆಳೆಸುವ ಯೋಚನೆ ಮಾಡುವಾಗ ಅವರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನೂ, ಅವರ ವಿದ್ಯಾಭ್ಯಾಸದ ಮಟ್ಟ ವನ್ನೂ ಗಮನಿಸಬೇಕಾಗುತ್ತದೆ. ಇತ್ತೀಚಿನ ವರೆಗೆ, ಸ್ವಲ್ಪ ಮಟ್ಟಿಗೆ ಈಗಲೂ, ಪಟ್ಟಣಗಳಲ್ಲಿ ಇದ್ದ ಕಾರ್ಮಿಕ ವರ್ಗವೆಂದರೆ ಹಳ್ಳಿಯಿಂದ ಕೂಲಿಗಾಗಿ ಬಂದ ಜನರು. ಇವರೇ ಕಾರ್ಮಿಕ ವರ್ಗವನ್ನು ಮೊಟ್ಟಮೊದಲಿಗೆ ಸೃಷ್ಟಿ ಮಾಡಿದವರು. ಇವರೆಲ್ಲಾ ಬಹುತೇಕ ಅವಿದ್ಯಾವಂತರು. ಅಂದರೆ ಓದುಬರೆಹ ಬರದ ಮತ್ತು ಯಾವ ಪರೀಕ್ಷೆ ಗಳನ್ನೂ ಪಾಸು ಮಾಡದವರು. ಆದರೆ ಇವರ ಕಾಲ ಮುಗಿಯುತ್ತಾ ಬಂದು, ಇವರ ಮಕ್ಕಳ ಮತ್ತು ಬೇರೆ ಯವರ ಕಾಲ ಆರಂಭವಾಗಿದೆ. ಈ ಹೊಸ ತಲೆಮಾರಿನ ಕಾರ್ಮಿಕರು ಕನಿಷ್ಟಪಕ್ಷ ಒಂದು ಎಸ್.ಎಸ್.ಎಲ್.ಸಿ ಯನ್ನಾದರೂ ಓದಿದವರು. ಇಂಥವರು ಕಾರ್ಖಾನೆಗಳಲ್ಲಿ ದ್ದಾರೆ, ಹೋಟಲುಗಳಲ್ಲಿದ್ದಾರೆ, ಅಂಗಡಿಗಳಲ್ಲಿದ್ದಾರೆ, ಕೊನೆಗೆ ಮುನಿಸಿಪಾಲಿಟಿಗಳಲ್ಲಿ ಕಸ ಗುಡಿಸುವ ಕೆಲಸ ದಲ್ಲೂ ಇದ್ದಾರೆ. ಈ ತಲೆಮಾರಿನವರ ತಿಳಿವಳಿಕೆ, ಬುದ್ಧಿವಂತಿಕೆ ಹಾಗೂ ನಡೆನುಡಿಗಳಿಗೂ ಹಿಂದಿನವರ ತಿಳಿವಳಿಕೆ ಇತ್ಯಾದಿಗಳಿಗೂ ತುಂಬಾ ವ್ಯತ್ಯಾಸವಿದೆ. ಈಗಿ ನವರಿಗೆ ತಿಳಿದಿರುವ ವಿಷಯಗಳು ಹಿಂದಿನವರಿಗೆ ತಿಳಿ ದಿರಲಿಲ್ಲ; ಹಿಂದಿನವರಿಗೆ ತಿಳಿದಿದ್ದವುಗಳು ಈಗಿನವರಿಗೆ ತಿಳಿದಿಲ್ಲ. ರೇಡಿಯೋ ಟ್ರಾನ್ಸಿಸ್ಟರುಗಳನ್ನು ಕಣ್ಣಲ್ಲಿ ಕಾಣದ, ಕಿವಿಯಲ್ಲಿ ಕೇಳದ ಹಿಂದಿನವರಿಗೆ ಅವು ಏನು ಎಂದು ಮನದಟ್ಟು ಮಾಡಿಕೊಡಲು ಸಾಧ್ಯವೇ ಇರಲಿಲ್ಲ. ಆದರೆ ಈಗ ಮೂರು ವರ್ಷದ ಮಗುವಿಗೆ ರೇಡಿಯೋ

ಅಂದರೆ ಏನು, ಟ್ರಾನ್ಸಿಸ್ಟರ್ ಅಂದರೆ ಏನು, ಎಂದು ಅರ್ಥವಾಗುತ್ತದೆ. ಅಷ್ಟೇ ಅಲ್ಲ, ಅಷ್ಟು ಚಿಕ್ಕ ವಯಸ್ಸಿನ ಹುಡುಗ ಅವನ್ನು 'ಟ್ಯೂನ್' ಮಾಡಲು ಬಲ್ಲ. ಇಷ್ಟಾದರೂ ಈಗಿನವರದು ಆಳವಿಲ್ಲದ ಪ್ರಚಲಿತ ಜ್ಞಾನ–[superficial current knowledge.] ಇಷ್ಟೇ ನಮಗೆ ಸಾಕಿದ್ದರೆ ಆಗಬಹುದಿತ್ತು. ಆದರೆ ಸಾಕಾಗುವುದಿಲ್ಲ.

ನಮಗೆ ಇನ್ನೂ ಆಳವಾದ, ವಿಶಾಲವಾದ ಬುದ್ಧಿ ಹಾಗೂ ಮನಸ್ಸುಗಳನ್ನು ಶಾಂತ ಹಾಗೂ ಸಮಾಧಾನ ಸ್ಥಿತಿಗೆ ತರುವ, ಮತ್ತು ಆ ಮೂಲಕ ದೇಹಕ್ಕೂ ಆರೋಗ್ಯವನ್ನು ನೀಡುವ ಜ್ಞಾನ ಬೇಕಾಗಿದೆ. ನಮ್ಮ ಈಗಿನ ಹೊಸ ಪೀಳಿಗೆಗೆ ರಾಮಾಯಣ ಮಹಾಭಾರತಗಳು ಗೊತ್ತಿಲ್ಲ; ಅವು ಹೋಗಲಿ, ನಮ್ಮ ಸುತ್ತಮುತ್ತಣ ಜೀವನದ ಅರಿವೇ ಇಲ್ಲ. ಅವರಿಗೆ ನಮ್ಮ ದೇಶದ ಹಳ್ಳಿಗಳ ಬಾಳಿನ ವಿಚಾರ ಎಷ್ಟು ಜನ ಪಟ್ಟಣಿಗರಿಗೆ ಗೊತ್ತು? ದೂರ ಹೋಗಬೇಕಾಗಿಲ್ಲ, ನಮ್ಮ ನಮ್ಮ ಮನೆಗಳಲ್ಲಿ ನಮಗೂ ನಮ್ಮ ಮಕ್ಕಳಿಗೂ ಇರುವ ಅಂತರವನ್ನು ನಾವು ಗಮನಿಸಿದರೆ ಸಾಕು, ಹಿಂದಿನ ಪೀಳಿಗೆಗೂ ಈಗಿನ ಪೀಳಿಗೆಗೂ ಇರುವ ಅಂತರ ಎಷ್ಟು ಎಂಬುದನ್ನು ಅರಿಯಲು. ಈಗಿನ ಯುವಕನಿಗೆ ನಡೆದರೆ ತೃಪ್ತಿಯೇ ಇಲ್ಲ; ಹಾರಬೇಕೆನಿಸುತ್ತಿದೆ ಆತನಿಗೆ. ಆದರೆ ರೆಕ್ಕೆಪುಕ್ಕಗಳಿಲ್ಲ. ಈ ಕಾರಣವೇ ಈಗಿನ ಯುವಕ ಯುವತಿಯರಲ್ಲಿ ಕಾಣುವ ವೇಷಭೂಷಣ ಹಾಗೂ ಮಾತುಕತೆಗಳ ವಿಪರ್ಯಾಸ. ಇದು ನಮಗೆ ವಕ್ರವಾಗಿ ಕಾಣಬಹುದು. ಆದರೆ ಇದಕ್ಕೆ ಕಾರಣವನ್ನು ಹುಡುಕಬೇಕಾಗುತ್ತದೆ. ಹುಡುಕಿದಾಗ ಕೊನೆಗೆ ಬರುವುದು ಒಳ್ಳೆಯ ಪುಸ್ತಕಗಳ ಮೂಲಕ ಸರಿಯಾದ ವಿದ್ಯಾಭ್ಯಾಸ ಮಾಡಿಸಬೇಕೆಂಬ ತೀರ್ಮಾನ.

ಬುದ್ಧಿಮಟ್ಟಕ್ಕೆ ಪುಸ್ತಕ

ಈ ಮಾತುಗಳನ್ನು ಏತಕ್ಕೆ ಹೇಳಿದೆ ಎಂದರೆ ಈಗಿನ ಕಾರ್ಮಿಕನಲ್ಲಿ ವಾಚನಾಭಿರುಚಿಯನ್ನು ಬೆಳೆಸಲು ಯೋಚಿಸುವಾಗ ದೊಡ್ಡವರಾದ ನಾವು–ಹಳ್ಳಿದಿಳ್ಳಿಗಳೆರಡನ್ನೂ ಕಂಡ ನಾವು ದಿಳ್ಳಿಯೊಂದನ್ನೇ ಕಂಡವನಿಗೆ ಹೇಳಬೇಕಾದ ರೀತಿ, ವಿಷಯ ಮುಂತಾದವುಗಳು ಬೇರೆ ಉಂಟು ಎಂಬುದನ್ನು ತಿಳಿಸಲು. ಅಲ್ಲದೆ, ಈಗಿನ ಎಸ್. ಎಸ್. ಎಲ್. ಸಿಯ ವಿದ್ಯಾಮಟ್ಟವನ್ನು ನಾವು ಘಗುನಿಸಬೇಕು. ನಾವು ಈ ಎಸ್.ಎಸ್.ಎಲ್.ಸಿಯವ

ರಿಗೆ ಮೊದಲಿನಿಂದ ಶ್ರೀಓನಾಮ ಶುರುಮಾಡಬೇಕೆಂ
ತೋರುತ್ತದೆ. ಹೀಗಿರುವಾಗ ನಾವು ಜನಸಾಮಾನ್ಯರಿ
ಅದರಲ್ಲಿಯೂ ಕಾರ್ಮಿಕರಿಗೆ ಬರೆಯುವ ಪುಸ್ತಕಗ
ಬಹಳ ಸರಳವಾಗಿರಬೇಕಾಗುತ್ತದೆ–ಬಾಲಬೋಧೆಯಂ
ಹಾಗಲ್ಲದೆ, ಕಠಿಣವಾದ ಪದಗಳನ್ನೂ ಬಳಸಿ ಬರ
ಪುಸ್ತಕಗಳನ್ನೂ ಒತ್ತಾಯಮಾಡಿ ಕೊಟ್ಟರೂ ಅವನ
ಓದುವ ಕಾರ್ಮಿಕರು ಇರುವುದಿಲ್ಲ. ಆದ್ದರಿಂದ ವಾ
ನಾಭಿರುಚಿಯ ಕಾರ್ಯಕ್ರಮದಲ್ಲಿ ಮುಖ್ಯವಾಗಿ ಗಮನಿ
ಬೇಕಾದ್ದು ಸರಳ ಭಾಷೆಯ ಕನ್ನಡ ಪುಸ್ತಕಗಳ ಸೃಷ್ಟಿ
ಭಾಷೆ ಸರಳವಾಗಿರುವುದರ ಜೊತೆಗೆ ಪುಸ್ತಕಗಳ ಬೆಲೆಯ
ಕಡಿಮೆ ಇರಬೇಕು. ಬೆಲೆಯಿಂದ ಓದುಗ ಹೆದರಬಾರದು

ಅಗ್ಗದ ಮನರಂಜನೆ

ಮೇಲಾಗಿ, ಕಾರ್ಮಿಕನ ಆರ್ಥಿಕ ಸ್ಥಿತಿಯನ್ನೂ ಗ
ನಿಸಬೇಕು. ದಿನಬೆಳಗೆದ್ದರೆ ಉಪ್ಪುಮೆಣಸಿಗೆ ಪರದಾಡು
ಕೂಲಿಯವ ಪುಸ್ತಕಗಳನ್ನಾಗಲೀ, ದಿನಪತ್ರಿಕೆ ವಾ
ಪತ್ರಿಕೆಗಳನ್ನಾಗಲೀ ಕೊಂಡುಕೊಂಡು ಓದುತ್ತಾನೆಂಬು
ಸರಿಯಲ್ಲ. ಹೀಗಿರುವಾಗ ಅವನಿಗೆ ಸಿನೆಮಕ್ಕೂ ಕುದು
ಜೂಜಿಗೂ ದುಡ್ಡೆಲ್ಲಿ ಬಂತು ಎಂದು ಕೇಳಬಹುದ
ಅಹುದು, ಕಾರ್ಮಿಕ ಹೊಟ್ಟೆಗಿಲ್ಲದಿದ್ದರೂ, ಹೆಂಡ
ಮಕ್ಕಳು ಹೊತ್ತಿನ ಊಟಕ್ಕೆ ಪರದಾಡುತ್ತಿದ್ದರೂ
ಸಿನೇಮಕ್ಕೆ ಹೇಗೋ ಹೋಗುತ್ತಾನೆ; ಕುದುರೆ ಜೂಜಿ
ದುಡ್ಡು ಹಾಕುತ್ತಾನೆ. ಮನುಷ್ಯನಿಗೆ ಮನರಂಜ
ಬೇಕು. ಈ ಮನರಂಜನೆಗಳು ನಾನಾ ತರಹ ಇ
ಜನಸಾಮಾನ್ಯರಿಗೆ ಬೇಕಾದ್ದು ಸಾಮಾನ್ಯ ಮನರಂಜನ
ಅಂದರೆ ಅಗ್ಗದ ಮನರಂಜನೆ. ಮೂರು ಗಂಟೆ ಸಿನೇಮ
ನೋಡಿ ಪಡೆಯುವ ಅಗ್ಗದ ಮನರಂಜನೆಯನ್ನು ಮೂ
ತಿಂಗಳು ಓದಿದ ಪುಸ್ತಕ ಒದಗಿಸಬಲ್ಲುದೆ? ಅಶೋ
ಹೋಟೆಲಿಗೆ ಹೋಗಲು ಎಲ್ಲರಿಗೂ ಸಾಧ್ಯವಿಲ್ಲ. ಆದ
ಆ ಹೋಟೆಲಿನ ಹೊರ ಒಳ ಭಾಗಗಳನ್ನು ಉಪಯೋಗಿ
ಕೊಂಡು ತೋರಿಸುವ ಬಂಗಾರದ ಮನುಷ್ಯನನ್ನು ನೋ
ಏನೆಲ್ಲ ಆನಂದ ಪಡೆಯಬಹುದು? ಇನ್ನು ಕುದು
ಜೂಜು. ಜೂಜಿನ ಮಜಾ ಗೊತ್ತಿಲ್ಲದವರಿಗೆ ಕುದುರೆ
ನಾಗಾಲೋಟವಷ್ಟೇ ಆನಂದ ನೀಡುವುದು. ಆದರೆ ಹ
ಕಟ್ಟಿ ಜೂಜಾಡುವವರಿಗೆ ಒದಗುವ ಅನಂತರೀತಿ
'ಆನಂದ'ಗಳನ್ನು ನೋಡಬೇಕಾದರೆ ಮನಶ್ಶಾಸ್ತ್ರಜ್ಞ
ಬೇಕಾಗುತ್ತದೆ. ಹೀಗೆ ಈ ಅಗ್ಗದ ಆನಂದಗಳಿಗೆ ಬ

ರು ಬಲಿಯಾಗಿ ಅವರ ಸಂಸಾರಗಳನ್ನು ಸಂಕಟದಲ್ಲಿ ಸುತ್ತಾರೆ. ಆದರೆ ಸಮಾಜದ ಜನತೆಯ ು ಹೋಗುಗಳಲ್ಲಿ ಆಸಕ್ತಿಯುಳ್ಳವರು, ಈ ಪರಿಸ್ಥಿತಿ ಂದುವರಿಯಲು ಬಿಡಬಾರದು. ಸಮಾಜ ಹೊಲ ಗುವ ಮುನ್ನ ನಮ್ಮ ಕೆಲಸ ಆರಂಭಿಸಬೇಕು. ಜನರ ನಸ್ಸನ್ನು ಈ ಹೊಲಸು ಮನರಂಜನೆಗಳಿಂದ ತಿರುಗಿಸ ಕು. ಪುಸ್ತಕಗಳಲ್ಲಿ ಆದಷ್ಟು ಮಟ್ಟಿನ ತೃಪ್ತಿ ಹಾಗೂ ಂದಗಳನ್ನು ಪಡೆಯುವ ಮಾರ್ಗಗಳನ್ನು ಹುಡುಕ ಕು. ಆಗಲೇ ಹೇಳಿದಂತೆ ನಮ್ಮ ಪುಸ್ತಕಗಳು ಸರಳ ಗಿರಬೇಕು. ಹೇಳುವುದನ್ನು ದಪ್ಪ ದಪ್ಪ ಮಾತು ಲ್ಲಿ ಹೇಳದೆ ತಿಳಿಯಾದ ಭಾಷೆಯಲ್ಲಿ ಪುಟ್ಟ ಪುಟ್ಟ ತುಗಳಲ್ಲಿ ಹೇಳಬೇಕು.

ನರಿಗಿಷ್ಟವಾದ ಪುಸ್ತಕಗಳು

ಯಾವ ತರದ ಪುಸ್ತಕಗಳು ಜನರಿಗೆ ಒಪ್ಪಿಗೆ ಎಂಬ ಶ್ನೆ ಹುಟ್ಟುತ್ತದೆ. ಸಾಮಾನ್ಯವಾಗಿ ಕಥೆ ಮತ್ತು ನಂಬರಿಗಳು ಜನರಿಗೆ ಪ್ರಿಯ ಎಂಬ ಮಾತನ್ನು ಒಪ್ಪ ಕು. ಈ ಮಾತಿಗೆ ನನ್ನ ಸ್ವಂತ ಅನುಭವದ ಆಧಾರ ಡಲು ಅಪೇಕ್ಷೆಪಡುತ್ತೇನೆ. ಕಾರ್ಮಿಕ ಇಲಾಖೆ ರ್ಮಿಕರ ಕಲ್ಯಾಣಕ್ಕಾಗಿ ರಾಜ್ಯದಲ್ಲಿ ೨೧ ಕಾರ್ಮಿಕ ್ಯಾಣ ಕೇಂದ್ರಗಳನ್ನು ನಡೆಸುತ್ತಿದೆ. ಈ ಕೇಂದ್ರ ಲ್ಲಿ ಸಾಕಷ್ಟು ಪುಸ್ತಕಗಳಿರಲಿಲ್ಲ. ಮೂರು ವರ್ಷದ ದೆ ಕಾದಂಬರಿಗಳನ್ನು ಬಿಟ್ಟು ಬೇರೆ ತರಹ ವಿಚಾರ ಹಿತ್ಯಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಒದಗಿಸಿದೆ. ೆರಡು ವರ್ಷಗಳು ಕಳೆದ ನಂತರ ಹೋಗಿ ವಿಚಾರಿಸಿ ಗ ಉತ್ತರ ಬಂತು, 'ಈ ಪುಸ್ತಕಗಳು ಬೇಡ ಸಾರ್. ನಂಬರಿಗಳನ್ನು ಕೊಡಿ ಎಂದು'. ಇದನ್ನು ಕೇಳಿದ ನು ಅನಿವಾರ್ಯವಾಗಿ ಒಳ್ಳೊಳ್ಳೆಯ ಕಾದಂಬರಿ ನ್ನು ಒದಗಿಸುವ ಯೋಚನೆ ಮಾಡಿದೆ. ಮತ್ತು ನಂಬರಿಗಳ ಜೊತೆಗೆ ಮಕ್ಕಳಿಗೆ ಹಿಡಿಸುವ ಪುಸ್ತಕ ನ್ನೂ ಒದಗಿಸಿದೆ.

ಕಗುಣ, ಬೆಲೆ ಕಡಿಮೆ–ಅಗತ್ಯ

ೀಗೆ ನಾವು ಕಾರ್ಮಿಕರಿಗೆ ಈ ತರಹ ಪುಸ್ತಕಗಳನ್ನು ಗಿಸುವುದರ ಜೊತೆಗೆ ವಿಚಾರ ಸಾಹಿತ್ಯವನ್ನೂ ಸರಳ ೆ ಭಾಷೆಯಲ್ಲಿ ಬರೆದು ಒದಗಿಸಬೇಕು. ಸರಳ ವಣಿಗೆ ಒಂದು ಕಲೆ. ಎಲ್ಲರಿಗೂ ಅದು ಬರಲಾರದು. ಅಂಥವರನ್ನು ಹುಡುಕಿ, ಅವರಿಗೆ ಪ್ರೋತ್ಸಾಹ ಕೊಟ್ಟು ಸರಳ ಭಾಷೆಯಲ್ಲಿ ಬರೆದ ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಒದಗಿಸುವುದು ಅತ್ಯಾವಶ್ಯಕ. ಅಂತಹ ಸಾಹಿತ್ಯವಿಲ್ಲದೆ ಜನತೆಯ ಮನಸ್ಸನ್ನು ತಿದ್ದುವುದು ಕಷ್ಟವಾದ ಕೆಲಸ. ಅಲ್ಲದೆ, ಜನರೇ ಪುಸ್ತಕಗಳನ್ನು ಕೊಂಡು ಓದಲು ಆಸಕ್ತಿ ಹುಟ್ಟಿಸುವುದಕ್ಕಾಗಿ ಅವನ್ನು ಆದಷ್ಟು ಕಡಿಮೆ ಬೆಲೆಗೆ ಮಾರಾಟಮಾಡಬೇಕು. ಕಾರ್ಮಿಕರು ಐವತ್ತು ಪೈಸೆಯಿಂದ ಮೂರು ರೂಪಾಯಿನೊಳಗೆ ಇರುವ ಪುಸ್ತಕಗಳನ್ನು ಕೊಂಡುಕೊಳ್ಳಲು ಸಾಧ್ಯವೇ ಹೊರತು, ಅದಕ್ಕಿಂತ ಹೆಚ್ಚಿನ ಬೆಲೆಯ ಪುಸ್ತಕಗಳನ್ನಲ್ಲ. ಹಾಗಿದ್ದರೆ, ಬೆಲೆ ಕಡಿಮೆ, ಹೆಚ್ಚು ಗುಣವುಳ್ಳ ಪುಸ್ತಕಗಳನ್ನು ತರುವುದು ಹೇಗೆ? ಸಾಧ್ಯವಾಗಬಹುದು–ಕಾರ್ಮಿಕರ ಕಲ್ಯಾಣದಲ್ಲಿ ಆಸಕ್ತಿಯುಳ್ಳವರೆಲ್ಲ ಮನಸ್ಸು ಮಾಡಿದರೆ ಬೆಂಗಳೂರು ನಗರವೊಂದನ್ನೇ ಗಮನಿಸೋಣ. ಇಲ್ಲಿ ಹೆಚ್.ಎಂ.ಟಿ., ಹೆಚ್.ಎ.ಎಲ್., ಐ.ಟಿ.ಐ., ಬಿ.ಇ.ಎಲ್. ಮುಂತಾದ ದೊಡ್ಡ ಸರ್ಕಾರೀ ಕೈಗಾರಿಕೆಗಳಿವೆ. ಒಂದೊಂದು ಕಾರ್ಖಾನೆಯಲ್ಲಿ ೧೦ ಸಾವಿರದಿಂದ ೨೦ ಸಾವಿರದವರೆಗೆ ಕಾರ್ಮಿಕರಿದ್ದಾರೆ. ಈ ಕಾರ್ಮಿಕರಲ್ಲಿ ಸ್ವಲ್ಪ ಮಂದಿ ಆಯಾ ಕಾರ್ಖಾನೆಯವರು ನಿರ್ಮಿಸಿರುವ ಕಾಲೊನಿಗಳಲ್ಲಿಯೂ ಬಹುಭಾಗ ಬೆಂಗಳೂರು ನಗರದಲ್ಲಿಯೂ ವಾಸಮಾಡುತ್ತಾರೆ. ಕಾಲೊನಿಗಳಲ್ಲಿ ಕಾರ್ಮಿಕರೇ ಸೇರಿ ಮಾಡಿಕೊಂಡ ಕನ್ನಡ ಸಂಘಗಳೂ, ಪುಸ್ತಕ ಭಂಡಾರಗಳೂ ವಾಚನಾಲಯಗಳೂ ಉಂಟು. ಅವಕ್ಕೆ ಆಡಳಿತ ಮಂಡಲಿಯವರು ಹಣ ಸಹಾಯವನ್ನೂ, ಬೇರೆ ರೀತಿಯ ಸೌಕರ್ಯಗಳನ್ನೂ ಒದಗಿಸುತ್ತಿದ್ದಾರೆ. ಆದರೆ ಬಹುಮಂದಿ ವಾಸಮಾಡುವ ನಗರ ಪ್ರದೇಶಗಳಲ್ಲಿ ಅವರಿಗೆ ಕಾರ್ಖಾನೆಯವರು ಯಾವ ಸೌಕರ್ಯಗಳನ್ನು ಒದಗಿಸುತ್ತಿಲ್ಲ. 'ಒಳ್ಳೆಯ ಕಾರ್ಮಿಕ ಒಳ್ಳೆಯ ಕೆಲಸಗಾರ' ಎಂಬ ಮಾತನ್ನು ಆಡಳಿತ ಮಂಡಲಿಯವರು ಅರಿತಿಲ್ಲವೆಂದಲ್ಲ. ಅರಿತಿದ್ದಾರೆ. ಆದರೆ ಒಳ್ಳೆಯ ಕಾರ್ಮಿಕನನ್ನು ಮಾಡುವ ಬಗ್ಗೆ ಆಡಳಿತ ಮಂಡಲಿಯವರೂ, ಸರ್ಕಾರವೂ ಹಾಗೂ ಸಮಾಜವೂ ಹೆಚ್ಚು ಗಮನ ಕೊಟ್ಟಂತೆ ಕಾಣುವುದಿಲ್ಲ. ಕಾರ್ಮಿಕನನ್ನು ಒಳ್ಳೆಯ ಪುಸ್ತಕಗಳ ಮೂಲಕ ಹಾಗೂ ಬೇರೆ ಸಾಧನಗಳ ಮೂಲಕ ಒಳ್ಳೆಯವನನ್ನಾಗಿ ಮಾಡಬಹುದು. ಎಲ್ಲರನ್ನು ಒಳ್ಳೆಯವರನ್ನಾಗಿ ಮಾಡಲು ಸಾಧ್ಯವಿಲ್ಲದಿದ್ದರೂ ಬಹು

ಮಂದಿಯನ್ನು ಮಾಡಬಹುದು. ಬಹುಮಂದಿ ಕಾರ್ಮಿಕರು ವಾಸಿಸುವ ನಗರದ ಪ್ರದೇಶಗಳನ್ನು ಕನ್ನಡ ಸಾಹಿತ್ಯ ಪರಿಷತ್ತು, ಪ್ರವೇಶಿಸಬೇಕಾಗುತ್ತದೆ. ನಮ್ಮಲ್ಲಿ ಒಳ್ಳೆಯ ಪುಸ್ತಕಗಳನ್ನು ಸರಳವಾದ ಭಾಷೆಯಲ್ಲಿ ಆರಿಸಿದ ವಿಷಯಗಳ ಮೇಲೆ ಬರೆಯಬಲ್ಲ ಲೇಖಕರಿಗೆ ಕೊರತೆ ಇಲ್ಲ ಎಂದು ಭಾವಿಸಿದ್ದೇನೆ. ಇಂಥವರಿಂದ ಪುಸ್ತಕಗಳನ್ನು ಬರೆಸಬೇಕು. ಮತ್ತು ಆದಷ್ಟು ಕಡಿಮೆ ಬೆಲೆಗೆ ಆ ಪುಸ್ತಕಗಳನ್ನು ಮಾರಬೇಕು. ಒಬ್ಬರು ಮಾಡುವ ಕೆಲಸವಲ್ಲ ಇದು. ಕಾರ್ಖಾನೆಗಳ ಆಡಳಿತ ಮಂಡಲಿಗಳು, ಕಾರ್ಮಿಕರ ಸಂಘಗಳು ಮತ್ತು ಸರ್ಕಾರ– ಈ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಸಾಹಿತ್ಯ ಹಾಗೂ ಭಾಷಾ ಪ್ರಸಾರದಲ್ಲಿ ಆಸಕ್ತಿ ಇರುವ ಕನ್ನಡ ಸಾಹಿತ್ಯ ಪರಿಷತ್ತು ಮುಂದೆ ನಿಂತು ಈ ಮೂರು ಸಂಘ ಸಂಸ್ಥೆಗಳನ್ನು ಒಟ್ಟುಗೂಡಿಸಿ ಪುಸ್ತಕ ರಚನೆಯ ಕೆಲಸವನ್ನು ಕೈಗೊಳ್ಳಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಭಾರತ ಸರ್ಕಾರ ನಡೆಸುತ್ತಿರುವ, ಮೂರು ಕಾರ್ಮಿಕ ಕಲ್ಯಾಣ ಕೇಂದ್ರಗಳಿವೆ. (Workers' Education Centres). ಇವು ಹಾಲಿ ಬೆಂಗಳೂರು, ಮಂಗಳೂರು ಮತ್ತು ಹುಬ್ಬಳ್ಳಿಗಳಲ್ಲಿವೆ. ಇವು ಕಾರ್ಮಿಕರಿಗೆ ಅವರ ಹಕ್ಕು ಬಾಧ್ಯತೆ, ಕರ್ತವ್ಯ ನಿಷ್ಠೆ ಮುಂತಾದವುಗಳನ್ನು ಹೇಳಿಕೊಟ್ಟು, ಒಳ್ಳೆಯ ಕಾರ್ಮಿಕರನ್ನಾಗಿ ಮಾಡುವ ಉದ್ದೇಶ ಹೊಂದಿವೆ. ಆದರೆ ಈ ಉದ್ದೇಶ ಹೆಚ್ಚಿನ ರೀತಿಯಲ್ಲಿ ಸಾಧಿಸಲ್ಪಟ್ಟಿದೆ ಎಂದು ಹೇಳುವಂತಿಲ್ಲ. ಕಾರಣ, ಇದಕ್ಕೆ ಮೇಲೆ ಹೇಳಿದ ಸಂಘ ಸಂಸ್ಥೆಗಳ ಸಹಕಾರ ಸಾಕಷ್ಟಿಲ್ಲ. ಸಾಹಿತ್ಯ ಪರಿಷತ್ತು ಮೇಲೆ ಹೇಳಿದ ಕೆಲಸದ ಸೂತ್ರವನ್ನು ವಹಿಸಿಕೊಂಡಲ್ಲಿ ಈ ಕೇಂದ್ರಗಳನ್ನು ಉಪಯೋಗಿಸಿಕೊಂಡು ಒಳ್ಳೆಯ ಪುಸ್ತಕಗಳ ರಚನೆಯಲ್ಲಿ ದಾರಿ ತೋರಿಸಬಹುದು.

ಹಣದ ಅನುಕೂಲ ಹೇಗೆ?

ಇನ್ನು ಹಣ. ಅಗ್ಗದ ಬೆಲೆಯಲ್ಲಿ ಪುಸ್ತಕಗಳನ್ನು ಒದಗಿಸಲು ಹಣವೆಲ್ಲಿ ಬರಬೇಕು? ಮೈಸೂರು ಸರ್ಕಾರವೂ ಬೇರೆ ಕೆಲವು ರಾಜ್ಯ ಸರ್ಕಾರಗಳೂ 'ಕಾರ್ಮಿಕರ ಕಲ್ಯಾಣ ನಿಧಿ' ಎಂಬ ನಿಧಿಯನ್ನೂ ಅದನ್ನು ನಿರ್ವಹಿಸಲು ಒಂದು ಆಡಳಿತ ಮಂಡಲಿಯನ್ನೂ ನಿಯಮಿಸಿವೆ. ಕಾರ್ಮಿಕರಿಗೆ ವಿಧಿಸಿದ ಜುಲ್ಮಾನೆ ಅವರು ತೆಗೆದುಕೊಳ್ಳದೆ ಬಿಟ್ಟ ಕೂಲಿ ನಾಲಿ ಮುಂತಾದುವು ಈ ನಿಧಿಗೆ ಸೇರುತ್ತವೆ. ಆದರೆ ಈ ರೀತಿ ಬರುವ ಹಣ ಬಹ ಕಡಿಮೆ. ಅದರಿಂದ ಸಾಧಿಸಬಹುದಾದ ಕೆಲಸ ಅಷ್ಟಕ್ಕಷ್ಟ ಕಾರ್ಮಿಕರ ಕಲ್ಯಾಣಕ್ಕಾಗಿ ಆಗುತ್ತಿರುವ ಕೆಲಸ ಕಡಿಮ ಎಂದು ಮನಗಂಡ ನ್ಯಾಷನಲ್ ಲೇಬರ್ ಕಮಿಷನ ಅದನ್ನು ತ್ವರಿತಗೊಳಿಸಬೇಕೆಂದು ಸಲಹೆ ಮಾಡಿದೆ. ಸಲಹೆಯನ್ನು ಕಾರ್ಯಗತಮಾಡಲು ಭಾರತ ಸರ್ಕಾ ಒಂದು ಯೋಜನೆಯನ್ನು ತಯಾರಿಸಿದೆ. ಅದರ ಪ್ರಕಾ ಪ್ರತಿ ತಿಂಗಳು ಕಾರ್ಮಿಕ ಒಂದು ರೂಪಾಯಿ, ಕಾರ್ಖಾ ಆಡಳಿತ ಒಂದು ರೂಪಾಯಿ, ಸರ್ಕಾರ ಒಂದು ರೂಪಾ ಹೀಗೆ ವಂತಿಕೆ ನೀಡಿ ಒಂದು ನಿಧಿಯನ್ನು ಏರ್ಪಡಿಸಬೇಕ ಈ ಸಲಹೆಯಿಂದ ಒಬ್ಬ ಕಾರ್ಮಿಕನಿಗೆ ತಿಂಗಳಿಗೆ ಮೂ ರೂಪಾಯಿನಂತೆ ನಿಧಿ ಸೇರಿದಂತಾಗುತ್ತದೆ. ಬೆಂಗಳೂ ಒಂದರಲ್ಲೇ ಲಕ್ಷಕ್ಕೂ ಹೆಚ್ಚು ಮಂದಿ ಕಾರ್ಮಿಕರಿದ್ದಾ ಇವರೆಲ್ಲರೂ ನಿಧಿಯನ್ನು ಕೊಡಲು ಒಪ್ಪಿದರೆ ತಿಂಗಳ ಮೂರು ಲಕ್ಷ, ಅಥವಾ ವರ್ಷಕ್ಕೆ ಮೂವತ್ತಾರು ಲ ನಿಧಿ ಸೇರಿದಂತಾಗುತ್ತದೆ. ಈ ಹಣದಲ್ಲಿ ಹನ್ನೆರಡನ ಒಂದು ಭಾಗದಷ್ಟನ್ನಾದರೂ ಅಂದರೆ ಮೂರು ಲಕ್ಷವನ ಅಗ್ಗದ ಪುಸ್ತಕಗಳನ್ನು ಒದಗಿಸುವುದಕ್ಕೆ ಉಪಯೋಗಿ ಕೊಂಡರೆ ಎಷ್ಟೋ ಪುಸ್ತಕಗಳನ್ನು ಕಾರ್ಮಿಕರಿ ಒದಗಿಸಬಹುದು.

ಪುಸ್ತಕಭಂಡಾರಗಳ ಬಹುಮಾನ

ಇನ್ನೊಂದು ಸಲಹೆ. ಪ್ರತಿ ಕಾರ್ಖಾನೆಯೂ ವಾರ್ಷಿ ಉತ್ಸವ ನಡೆಸುತ್ತವೆ. ಆ ಸಂದರ್ಭದಲ್ಲಿ, ಶ್ರೀ ನಾ ಯಣರ 'ಮನೆಗೊಂದು ಪುಸ್ತಕ ಭಂಡಾರ' ಯೋಜ ಯನ್ನು ಅನುಷ್ಠಾನಕ್ಕೆ ತರಲು ಆಲೋಚಿಸಬಹುದು ಕಾರ್ಖಾನೆಯ ಆಡಳಿತವು ಅದರ ಅತ್ಯುತ್ತಮ ಕೆಲ ಗಾರರಿಗೆ ಹಾಗೂ ವಾಚನಾಭಿರುಚಿಯುಳ್ಳ ಕಾರ್ಮಿಕರಿ ವರ್ಷಕ್ಕೆ ನೂರರಲ್ಲಿ ಒಬ್ಬನಂತೆ ಪುಸ್ತಕ ಭಂಡಾರಗಳನ ಒದಗಿಸಬಹುದು. ಹೆಚ್.ಎ.ಎಲ್.ನಂಥ ಕಾಖಾ ನೆಯು ಅದರ ೧೫,೦೦೦ ಕಾರ್ಮಿಕರಲ್ಲಿ ವರ್ಷಕ್ಕೆ ೧೫ ಕಾರ್ಮಿಕರಿಗೆ ಪುಟ್ಟ ಪುಸ್ತಕ ಭಂಡಾರಗಳನ್ನು ಬಹ ಮಾನವಾಗಿ ಕೊಡಬೇಕಾಗುತ್ತದೆ. ಒಂದೊಂದು ಭಂಡ ರದ ಬೆಲೆ ೧೦೦ ರೂಪಾಯಿ ಎಂದು ಇಟ್ಟುಕೊಂಡರೆ ೧೫ ಭಂಡಾರಗಳ ಬೆಲೆ ವರ್ಷಕ್ಕೆ ೧೫,೦೦೦ ರೂಪಾಯಿ ಗಳಷ್ಟಾಗುತ್ತದೆ. ದೊಡ್ಡ ವಹಿವಾಟಿನ ವಿಮಾನ ಕಾಖಾ ನೆಗೆ ಈ ಹಣ ದೊಡ್ಡ ವೆಚ್ಚವಲ್ಲ.

ಷ್ಟೇ ಅಲ್ಲ. ಈಗ ಹಾಲಿ ಇರುವ ಕಾರ್ಮಿಕ ಣ ಕೇಂದ್ರಗಳ ಸಂಖ್ಯೆ ಸಾಲದು. ಒಂದು ಸಾವಿರ ರ್ಮಿಕ ಕುಟುಂಬಗಳಿಗೆ ಒಂದರಂತಾದರೂ ಕಲ್ಯಾಣ ದ್ರಗಳು ಆಗಬೇಕು. ಈಗ ಇರುವ ೨೧ ಕಲ್ಯಾಣ ದ್ರಗಳೂ ಸೇರಿ ಕನಿಷ್ಠಪಕ್ಷ ೧೦೦ ಕೇಂದ್ರಗಳನ್ನು ಸಬೇಕು. ಇಂಥ ಕಲ್ಯಾಣ ಕೇಂದ್ರಗಳಲ್ಲಿ ಸಾಹಿತ್ಯ ತ್ತು ತನ್ನ ಪುಸ್ತಕ ಪ್ರಚಾರದ ಪ್ರಭಾವವನ್ನು ಬೀರ ದು. ಪ್ರತಿಯೊಂದು ಕೇಂದ್ರದಲ್ಲಿಯೂ ಸುಸಜ್ಜಿತ ಕ ಭಂಡಾರವಿರಬೇಕು. ಇದಕ್ಕೆ ಸೂಕ್ತ ಮಾರ್ಗ ನವನ್ನು ಸಾಹಿತ್ಯ ಪರಿಷತ್ತು ನೀಡಬಹುದು. ರ್ಮಿಕರು ಕನ್ನಡ ಸಂಘಗಳನ್ನು ಹೆಚ್ಚು ಹೆಚ್ಚು ಸಂಖ್ಯೆ ಸ್ಥಾಪಿಸುವಂತೆಯೂ, ಇಂಥ ಸಂಘಗಳಿಗೆ ಸೂಕ್ತ ಹಾಯ ಕೊಡಿಸುವುದಕ್ಕೂ ಸಾಹಿತ್ಯ ಪರಿಷತ್ತು ಚಿಸಬೇಕು. ಕಲೆ, ಸಂಗೀತ ಹಾಗೂ ಸಾಹಿತ್ಯ ರವಲ್ಲದೆ ಬೇರೆ ಯಾವ ಕೆಲಸಗಳಿಗೂ ಈ ಸಂಘ ಗಮನಕೊಡದಂತೆ ನೋಡಿಕೊಳ್ಳಬೇಕು. ಸಾಹಿತ್ಯ ತ್ತಿನ ಅಧ್ಯಕ್ಷರು ರಾಜ್ಯದ ಎಲ್ಲಾ ಕಾರ್ಮಿಕ ಂಡರುಗಳನ್ನು ಕರೆಸಿ ಮಾತಾಡಿ ಈ ದಿಶೆಯಲ್ಲಿ ರ್ಯ ಆರಂಭ ಮಾಡಬಹುದು.

ತ್ತಿನ ನೆರವು

ನ್ನೊಂದು ಸಲಹೆ. ಈಗ ಕಾರ್ಮಿಕ ಕಾನೂನುಗಳು ಇಂಗ್ಲಿಷಿನಲ್ಲಿವೆ. ಅವುಗಳನ್ನು ಕನ್ನಡದಲ್ಲಿ ಬರೆಸಲು ಸರ್ಕಾರ ಒಪ್ಪಿಕೊಂಡಿದೆ. ಆದರೆ 'ಸರ್ಕಾರಿ ಕನ್ನಡ' ಹೇಗೆ ಎಂಬುದು ಗೊತ್ತೇ ಇದೆ. ಪರಿಷತ್ತು ಸರ್ಕಾರಕ್ಕೆ ಹೇಳಬೇಕು, ಕನ್ನಡದಲ್ಲಿ ಕಾನೂನುಗಳನ್ನು ಬರೆಸಲು ತಾನು ಸಹಕರಿಸುವುದು ಎಂದು. ಸಹಕಾರ ಎಂದರೆ ಇಷ್ಟೆ : ಸರಿಯಾಗಿ ಬರೆಯಲು ಬಲ್ಲವರ ಒಂದು ಪಟ್ಟಿ ಮಾಡಿ ಅವರ ಸೇವೆಯನ್ನು ಸರ್ಕಾರಕ್ಕೆ ಒದಗಿಸುವುದು. ಈ ಕೆಲಸ ಮಾಡಲು ಒಪ್ಪುವವರಿಗೆ ಸರ್ಕಾರ ಸೂಕ್ತ ಸಂಭಾವನೆ ನೀಡುವುದರಲ್ಲಿ ಸಂದೇಹವಿಲ್ಲ. ಹೀಗೆ ಸರಿಯಾದ ಕನ್ನಡದಲ್ಲಿ ಬರೆದ ಕಾನೂನು ಕಟ್ಟಲೆಗಳನ್ನು ಓದುವಾಗಲೇ ಕಾರ್ಮಿಕರಿಗೆ ವಾಚನಾಭಿರುಚಿ ಬೆಳೆಯುತ್ತದೆ. ಅಲ್ಲದೆ, ಇಂಗ್ಲಿಷಿನಲ್ಲಿರುವ ಕಾನೂನುಗಳನ್ನು ದುರುಪಯೋಗಪಡಿಸಿಕೊಂಡು ಕಾರ್ಮಿಕರನ್ನು ಶೋಷಣೆ ಮಾಡುವುದೂ ತಪ್ಪುತ್ತದೆ. ಇದರ ಜೊತೆಗೆ, ಕಾರ್ಖಾನೆಯ ಆಡಳಿತದವರು ಹೊರಡಿಸುವ ನೋಟೀಸುಗಳು, ತಿಳುವಳಿಕೆ ಪತ್ರಗಳು ವಿಚಾರವಿನಿಮಯಗಳು ಕನ್ನಡದಲ್ಲಿಯೇ ಇರುವಂತೆ ನೋಡಿಕೊಳ್ಳಬೇಕು. ಒಟ್ಟಿನಲ್ಲಿ ಕಾರ್ಮಿಕರಿಗೆ ಹಿಡಿದಿರುವ ಮಲೇರಿಯಾ ಜ್ವರವನ್ನು ಬಿಡಿಸಬೇಕು.

ವಿದ್ಯೆಯೆ ಮಾತಾಪಿತರರ್
ಬುದ್ಧಿಯೆ ಸೋದರರು ವಿನಯ ವಚನಮೆ ನಂಟಂ
ಅಧ್ವಾನವಿಲ್ಲದುದೆ ಸುಖ
ಮಿರ್ದುದೆ ತನ್ನೂರು ಸುಕವಿಕರ್ಣಾಭರಣಾ ॥

● ಜಿ. ಎಸ್. ಬಿರಾದಾರ

ಗ್ರಾಮಾಂತರ ಜನರಲ್ಲಿ ವಾಚನಾಭಿರುಚಿ

ಜ್ಞಾನಪ್ರಸಾರಕ್ಕೆ ಕಾಲ, ದೇಶಗಳ ಮಿತಿಯಿಲ್ಲ. ಅದು ಸರ್ವಕಾಲಿಕವಾದುದು. ಇಂದು ಜ್ಞಾನ ಸ್ಫೋಟನೆಯಾಗುತ್ತಿದೆ. ಶಿಕ್ಷಣ ಕ್ಷೇತ್ರ ವಿಶಾಲವಾಗುತ್ತಿದೆ. ಜೊತೆಗೆ ಶಿಕ್ಷಣ ಆಜೀವ ಪರ್ಯಂತ ನಡೆಯುವ ಚಟುವಟಿಕೆ ಎಂಬ ಭಾವನೆ ಬಲವಾಗುತ್ತಿದೆ. ಶಿಕ್ಷಣ ನೀಡುವ ಮಾಧ್ಯಮಗಳು ಹಲವು. ಅವುಗಳಲ್ಲಿ ಪ್ರಾಮುಖ್ಯವಾದುದು ಅಚ್ಚಾದ ಸಾಹಿತ್ಯ. ಅಚ್ಚಾದ ಸಾಹಿತ್ಯ, ಪುಸ್ತಕ ಭಂಡಾರಗಳಲ್ಲಿ ಇಂದು ಹೇರಳವಾಗಿ ಶೇಖರಣೆಯಾಗುತ್ತಿದೆ. ಆದರೆ ಜನತೆ ಅವುಗಳನ್ನು ಎಷ್ಟರಮಟ್ಟಿಗೆ ಉಪಯೋಗ ಮಾಡುತ್ತಿದ್ದಾರೆ? ಇಂಗ್ಲೆಂಡ್, ಜರ್ಮನಿ, ಅಮೆರಿಕ, ಡೆನ್ಮಾರ್ಕ್ ಮುಂತಾದವು ಪ್ರಗತಿಶೀಲ ರಾಷ್ಟ್ರಗಳು. ಆ ರಾಷ್ಟ್ರಗಳಲ್ಲಿ ಪುಸ್ತಕಗಳ ಬಳಕೆ ಹೇಗಿದೆ ಎಂಬುದನ್ನು ಪರಿಶೀಲಿಸೋಣ. ಇಂಗ್ಲೆಂಡ್ ದೇಶದಲ್ಲಿ ಶೇಕಡ ೨೬ ಮಂದಿ, ಡೆನ್ಮಾರ್ಕಿನಲ್ಲಿ ಶೇಕಡ ೨೫ ಮಂದಿ, ನಾರ್ವೆಯಲ್ಲಿ ಶೇಕಡ ೧೫, ಸ್ವೀಡನ್ನಿನಲ್ಲಿ ಶೇಕಡ ೧೨, ಜರ್ಮನಿಯಲ್ಲಿ ಶೇಕಡ ೫ ಮಂದಿ– ಈ ರೀತಿ ಪುಸ್ತಕ ಭಂಡಾರಗಳ ಉಪಯೋಗ ಮಾಡುತ್ತಿದ್ದಾರೆ. ಭಾರತ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರ. ಪ್ರಗತಿ ಪಥದಲ್ಲಿದೆ. ಇಲ್ಲಿ ಹತ್ತು ಸಾವಿರಕ್ಕೆ ಒಬ್ಬ ಪುಸ್ತಕಭಂಡಾರ ಉಪಯೋಗಿಸುವನೆ? ಕೇವಲ ಓದು ಬರಹ ಬಲ್ಲವರನ್ನು ಲೆಕ್ಕ ಹಾಕಿಕೊಂಡರೂ ಸಹ ಶೇಕಡ ೨ ಮಂದಿ ಪುಸ್ತಕಭಂಡಾರ ಉಪಯೋಗಿಸಬಹುದೇನೋ?

ಶೋಚನೀಯ ಪರಿಸ್ಥಿತಿಗೆ ಕಾರಣ

ಭಾರತದ ಈ ಶೋಚನೀಯ ಪರಿಸ್ಥಿತಿಗೆ ಕಾರಣವೇನು? ಇದನ್ನು ವಿಶ್ಲೇಷಿಸುವುದು ಒಳಿತು. ಭಾರತದಲ್ಲಿ ಪೂರ್ಣ ಸಾಕ್ಷರತೆಯಿಲ್ಲ. ೧೯೭೧ರ ಜನಗಣತಿ ಪ್ರಕಾರ ಶೇಕಡ ೨೯.೩೫. ೧೯೬೧ರ ಜನಗಣತಿಯ ರೀತ್ಯಾ ವಿವಿಧ ಮಟ್ಟದ ಸಾಕ್ಷರತೆಯುಳ್ಳವರು ಈ ರೀತಿ ಇರುವರು :

ಸಾಕ್ಷರತೆಯ ಕನಿಷ್ಠ ಮಟ್ಟದವರು	ಶೇ. ೬೨.೯
ಪ್ರಾಥಮಿಕ ಶಾಲಾ ಮಟ್ಟದವರು	ಶೇ. ೨೯.೪
ಮೆಟ್ರಿಕ್ಯುಲೇಷನ್ ಮತ್ತು ಮೇಲ್ಮಟ್ಟದವರು	ಶೇ. ೭.೮

ಆದ್ದರಿಂದ ಸಾಕ್ಷರಸ್ಥರ ಪೈಕಿ ಓದಬಲ್ಲ ಶಕ್ತಿಯನ್ನು ಹೊಂದಿರುವವರು ಶೇಕಡ ೩೭.೨ ಮಾತ್ರ. ಉಳಿದ ೬೨.೯ ಮಂದಿಗೆ ವ್ಯವಹರಿಸಲು ಸಾಧ್ಯವಿಲ್ಲದ್ದಾಗಿದೆ. ಅವರು ತಮ್ಮ ಓದುಗಾರಿಕೆಯನ್ನು ಉಪಯೋಗಿಸಿಕೊಳ್ಳಲಾರರು. ಅವರು ಕಣ್ಣಿದ್ದೂ ಕುರುಡರಂತೆ.

ಗ್ರಾಮಾಂತರಗಳಲ್ಲಿ

ಗ್ರಾಮಾಂತರ ಪ್ರದೇಶಗಳಲ್ಲಿ ಅನಕ್ಷರತೆ ಹೆಚ್ಚು. ಓದುಬಲ್ಲ ಅಕ್ಷರಸ್ಥರ ಸಂಖ್ಯೆ ಕಡಿಮೆ. ಇಂಗ್ಲೆಂಡಿನ ಒಂದು ಗ್ರಾಮ ಪುಸ್ತಕ ಭಂಡಾರದ ಲೆಕ್ಕಾಚಾರದ ಪ್ರಕಾರ ತಲಾ ಒಬ್ಬ ಓದುಗ ವರ್ಷಕ್ಕೆ ೮ ಪುಸ್ತಕಗಳನ್ನು ಪಡೆಯುವನು. ಅಮೇರಿಕದಲ್ಲಿ ತಲಾ ಹಂಚಿಕೆ ೫.೮ ಪುಸ್ತಕಗಳು. ಪುಸ್ತಕ ಭಂಡಾರದ ಯೋಜನೆಯನ್ನು ಮೊಟ್ಟಮೊದಲಾಗಿ ಪ್ರಾರಂಭಿಸಿದ ಬರೋಡದಲ್ಲಿ ತಲಾ ೦.೪ ಪುಸ್ತಕ. ಈ ಅಂಕಿಅಂಶಗಳು ಸುಮಾರು ೮–೧೦ ವರ್ಷಗಳ ಹಿಂದಿನದು. ಆದರೂ ಇಂದು ಪರಿಸ್ಥಿತಿ ಗಮನಾರ್ಹವಾಗಿ ಸುಧಾರಿಸಿಲ್ಲ ಎಂದು ಹೇಳಬಹುದು.

ಕ್ಷರಸ್ಥರ ಸಮಸ್ಯೆಯೇ ಇಲ್ಲದಿರುವ ಮುಂದುವರಿದ ಳಲ್ಲಿ ವರ್ಷಕ್ಕೆ ಸರಾಸರಿ ತಲಾ ೭ರಿಂದ ೮ ಪುಸ್ತಕ ಮಾತ್ರ ಓದುಗರು ಒಯ್ಯುವರು. ಕೇವಲ ಶೇ. ಮಂದಿ ಓದಬಲ್ಲ ಜನರಿರುವ ಭಾರತದ ಪರಿಸ್ಥಿತಿ ನೋಡಿದಲ್ಲಿ ಮನಸ್ಸಿಗೆ ವೇದನೆಯೂ ಮತ್ತು ಯೂ ಸಹ ಆಗುವುದು.

ಸ್ಯೆಯ ಬಹುಮುಖ

ರತದಲ್ಲಿ ಅನಕ್ಷರಸ್ಥರ ಸಂಖ್ಯೆ ಹೆಚ್ಚು. ಅವರ ಪೈಕಿ ಜನರ ಸಂಖ್ಯೆ ಕಡಿಮೆ; ಒಪ್ಪಿಕೊಳ್ಳೋಣ. ನಮ್ಮ ಮುಂದೆ ಇನ್ನೂ ಹಲವಾರು ಪ್ರಶ್ನೆಗಳು ದು ಸಹಜ. ಓದಬಲ್ಲ ಜನರಿಗೆ ಸಾಕಷ್ಟು ಸಂಖ್ಯೆ ಪುಸ್ತಕಗಳಿವೆಯೆ? ಸೂಕ್ತವಾದ ವಿಷಯಗಳ ಪುಸ್ತಕಗಳಿವೆಯೆ? ಪುಸ್ತಕಗಳ ಬೆಲೆ ಜನತೆಗೆ ವುದೇ? ಈ ಅಂಶಗಳನ್ನು ದೀರ್ಘವಾಗಿ ವಿಚಾರ ದಲ್ಲಿ ಸಮಸ್ಯೆಯ ಚಿತ್ರದ ಅರಿವು ಸ್ಪಷ್ಟವಾಗು

ಾಯಿತಿ ಸದಸ್ಯರ ಆಸಕ್ತಿ

ತ್ರದುರ್ಗ ತಾಲ್ಲೂಕು ಹಿರಿಯೂರಿನಲ್ಲಿ ಈಚೆಗೆ ಸಮ್ಮೇಳನ ನಡೆಯಿತು. ಸಮ್ಮೇಳನಕ್ಕೆ ಗ್ರಾಮ ಯಿತಿ ಸದಸ್ಯರು ಮತ್ತು ತಾಲ್ಲೂಕು ಬೋರ್ಡು ರು ಸೇರಿದ್ದರು. ಸಮ್ಮೇಳನಕ್ಕೆ ಹಾಜರಿದ್ದ ರು ಆಗತಾನೆ ನಡೆದ ಗ್ರಾಮ ಪಂಚಾಯಿತಿ ಮತ್ತು ಕು ಬೋರ್ಡು ಚುನಾವಣೆಗಳಲ್ಲಿ ಆರಿಸಿ ಬಂದಿದ್ದ ಆದ್ದರಿಂದ ಸ್ವಾಭಾವಿಕವಾಗಿ ತಾಲ್ಲೂಕು ಬೋರ್ಡು ಗ್ರಾಮಪಂಚಾಯಿತಿಯ ಬಗ್ಗೆ ತಿಳಿಯಲು ಅವರು ರಾಗಿರಲೇಬೇಕು. ವಯಸ್ಕರ ಶಿಕ್ಷಣ ಸಮಿತಿ ಆಗ 'ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ರ್ಡು' ಎಂಬ ಬಗ್ಗೆ ಒಂದು ಪುಸ್ತಕ ಪ್ರಕಟಿಸಿತ್ತು. ರ್ಗ ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿ ಆ ಪುಸ್ತಕ ಸಮ್ಮೇಳನದಲ್ಲಿ ಮಾರಾಟಕ್ಕೆ ಇಟ್ಟಿತ್ತು. ಧ್ವನಿ ಯಂತ್ರದ ಮೂಲಕ ಅಲ್ಲಿ ನೆರೆದಿದ್ದ ಸದಸ್ಯರಿಗೆ ದ ಬಗ್ಗೆ ಪ್ರಚುರಪಡಿಸಿದರು. ಕೇವಲ ಕೆಲವು ದಲ್ಲಿ ೨೦೦ ಪುಸ್ತಕಗಳು ಖರ್ಚಾದವು. ಬೆಲೆಯೂ ಡಿಮೆ ಇತ್ತು. ಕಣ್ಣು ಕಾಣದ ಮುದುಕಿ, ಓದು ಅಜ್ಜ ಸಹ ಪುಸ್ತಕಗಳನ್ನು ಕೊಂಡರು. ಕಾರಣ ಾಗಿ, ಮನೆಯಲ್ಲಿ ಹುಡುಗರಿಂದ ಓದಿಸಿ ತಿಳಿದು ಕೊಳ್ಳುವುದಾಗಿ ಹೇಳಿದರು. ಅವರು ಗ್ರಾಮ ಪಂಚಾಯಿತಿ ಸದಸ್ಯರಾಗಿ ಹೊಸದಾಗಿ ಚುನಾಯಿತರಾಗಿದ್ದರು.

ಸುಲಭ ಬೆಲೆಯ ಪುಸ್ತಕಗಳು

ಹಾಸನ ಜಿಲ್ಲೆಯಲ್ಲಿ ಬೇಲೂರು, ಹಳೇಬೀಡು ಮತ್ತು ಶ್ರವಣಬೆಳಗೊಳ ನೋಡಲೇಬೇಕಾದ ಸ್ಥಳಗಳು. ಬೇಲೂರಿನ ಶಿಲ್ಪಕಲೆ ಪ್ರಪಂಚದಲ್ಲೇ ಹೆಸರುವಾಸಿಯಾಗಿದೆ ಎಂಬುದು ಯಾರಿಗೆ ತಿಳಿದಿಲ್ಲ! ಅಂತೆಯೇ ಶ್ರವಣಬೆಳಗೊಳದಲ್ಲಿ ಗೊಮ್ಮಟನ ವಿಗ್ರಹ ೫೭ ಅಡಿ. ಇಂತಹ ಭವ್ಯವಾದ ವಿಗ್ರಹ ಬೇರೆಲ್ಲಿಯೂ ಇಲ್ಲ. ಅನೇಕ ವಿಹಾರಾರ್ಥಿಗಳು ಈ ಸ್ಥಳಗಳಿಗೆ ಭೇಟಿ ಕೊಡುವುದು ಸೂಕ್ತವಾಗಿಯೇ ಇದೆ. ಬರುವ ಮಹನೀಯರು ವಯಸ್ಕರ ಶಿಕ್ಷಣ ಸಮಿತಿ ಪ್ರಕಟಿಸಿರುವ ಬೇಲೂರು, ಹಳೇಬೀಡು ಮತ್ತು ಶ್ರವಣಬೆಳಗೊಳದ ಪ್ರತಿಗಳನ್ನು ಕೊಳ್ಳುವರು. ಬೇರೆಯ ಪ್ರಕಟಣೆಗಳಿಗಿಂತಲೂ ಈ ಪುಸ್ತಕಗಳಿಗೆ ಗಿರಾಕಿ ಹೆಚ್ಚು. ಓದುಗರಿಗೆ ಬೇಕಾದ ಪುಸ್ತಕಗಳು ಅವು. ಎರಡನೆಯದಾಗಿ, ಅವುಗಳ ಬೆಲೆಯೂ ಕಡಿಮೆ. ಭಾರತದಲ್ಲಿ ಸರಾಸರಿ ತಲಾ ಒಬ್ಬನ ಆದಾಯ ಸುಮಾರು ೩೭ ಪೈಸೆ. ಈ ಹಣದಲ್ಲಿ ಆತನು ಜೀವನ ಮಾಡಬೇಕು. ಇನ್ನು ಪುಸ್ತಕಗಳನ್ನು ಕೊಳ್ಳಲು ಉಳಿಯುವುದೇನು? ಕೆಲವು ಸಂಸ್ಥೆಗಳ ಪ್ರಕಟಣೆಗಳನ್ನು ಬಿಟ್ಟರೆ ಇತರೇ ಪ್ರಕಟಣೆಗಳ ಬೆಲೆ ಸಾಮಾನ್ಯ ಜನರಿಗೆ ಎಟುಕದ ಬೆಲೆ. ಆದ್ದರಿಂದ ಪುಸ್ತಕಗಳನ್ನು ಸುಲಭ ಬೆಲೆಯಲ್ಲಿ ಪ್ರಕಟಿಸಿದಲ್ಲಿ, ಜನ ಪುಸ್ತಕಗಳನ್ನು ಕೊಳ್ಳಲು ಪ್ರಾಯಶಃ ಹಿಂಜರಿಯಲಾರರು.

ಓದುಗರ ದರ್ಜೆಗೆ ತಕ್ಕ ರಚನೆ

ಓದುಗರಲ್ಲಿ ಆಸಕ್ತಿಯನ್ನು ಹುಟ್ಟಿಸುವಂತಹ ಪುಸ್ತಕಗಳು ಅವಶ್ಯಕ ಎಂಬುದು ಇನ್ನೊಂದು ಅಂಶ. ಸಾಮಾನ್ಯವಾಗಿ ಪುಸ್ತಕಗಳನ್ನು ಕೊಳ್ಳುವುದು ಮನರಂಜನೆಗಾಗಿ ಇಲ್ಲವೇ ಲಾಭ ಪಡೆಯಲು. ಮನರಂಜನೆಯೂ ಸಹ ಒಂದು ರೀತಿಯ ಮಾನಸಿಕ ಲಾಭವೆ! ಆದರೆ, ಇಲ್ಲಿ ಲಾಭದ ಅರ್ಥವ್ಯಾಪ್ತಿ ಬೇರೆ. ಜನತೆಯ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ಅನುಕೂಲವಾಗುವಂತಹ ವಿಷಯಗಳನ್ನು ಒಳಗೊಂಡು ಪುಸ್ತಕಗಳು ಲಾಭಕರವಾದವು. ಪಂಚವಾರ್ಷಿಕ ಯೋಜನೆಯ ಉದ್ದೇಶ, ಜನರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸುವುದು.

ಆದ್ದರಿಂದ ಜನತೆ ಅತ್ಯಗತ್ಯವಾಗಿ ತಿಳಿದುಕೊಳ್ಳಬೇಕಾದ ವಿಚಾರ ಅದು. ಈ ವಿಷಯದ ಬಗ್ಗೆ ಬೇಕಾದಷ್ಟು ಸಾಹಿತ್ಯ ಹಂಚಲಾಗಿದೆ. ಆದರೆ ಗ್ರಾಮಾಂತರ ಜನಗಳಲ್ಲಿ ಪಂಚವಾರ್ಷಿಕ ಯೋಜನೆಯ ಬಗ್ಗೆ ಸಾಕಾದಷ್ಟು ಅರಿವಿಲ್ಲ ಎಂದು ಹೇಳಿದರೆ ತಾವು ನಂಬದಿರಬಹುದು. ಆದರೆ ಅದು ಸಂಶೋಧನೆಯಿಂದ ಕಂಡುಬಂದ ಸತ್ಯ. ಆದ್ದರಿಂದ, ಪಂಚವಾರ್ಷಿಕ ಯೋಜನೆಯ ವಿಷಯವಾಗಿ ಜನರಿಗೆ ತಿಳಿಯುವಂತೆ ಪುಸ್ತಕಗಳನ್ನು ಬರೆಸುವ ಅಗತ್ಯವಿದೆ. ಸಾಮಾನ್ಯ ಜನರಿಗೆ ಬರೆಯುವ ಧಾಟಿಯೇ ಬೇರೆ. ಹೊಸದಾಗಿ ಅಕ್ಷರಸ್ಥರಾದ ವಯಸ್ಕರಿಗೆ ಬರೆಯುವ ಧಾಟಿಯೇ ಬೇರೆ. ಸಾಮಾನ್ಯವಾಗಿ ತಜ್ಞರಿಂದ ರಚಿತವಾದ ಸಾಹಿತ್ಯ ಪ್ರೌಢವಾಗಿದ್ದು, ಅರ್ಥವಾಗದು. ಅದಕ್ಕೆ ಬದಲಾಗಿ ವಯಸ್ಕರ ಶಿಕ್ಷಣ ಸಾಹಿತ್ಯ ರಚನೆಯಲ್ಲಿ ಅರಿತು—ನುರಿತವರಿಂದ ರಚಿಸಿದ ಸಾಹಿತ್ಯ ಸುಲಭವಾಗಿ ಅರ್ಥವಾಗಬಲ್ಲದು ಎಂಬ ಅಂಶ ೧೯೬೦ರಲ್ಲಿ ಬಾಂಗ್‌ಕಾಕ್‌ನಲ್ಲಿ ತಜ್ಞರು ನಡೆಸಿದ ಸಮೀಕ್ಷೆಯಿಂದ ಗೊತ್ತಾಗಿದೆ. ವಯಸ್ಕರಿಗೆ ಬೇಕಾದ ವಿಷಯಗಳ ಮೇಲೆ ಸಾಹಿತ್ಯ ರಚನೆಯಾಗಬೇಕು. ಅದನ್ನು ಓದುಗರ ದರ್ಜೆಯನ್ನರಿತು ರಚಿಸಬೇಕು. ಆಗ ಮಾತ್ರ ಅದು ಪರಿಣಾಮಕಾರಿಯಾದೀತು.

ಹಾಗಾದರೆ ವಯಸ್ಕರಿಗೆ ಯಾವ ವಿಷಯಗಳನ್ನು ತಿಳಿಯಲು ಆಸಕ್ತಿಯಿದೆ ? ಈ ಬಗ್ಗೆ ಭಾರತದಲ್ಲಿ ಸಾಕಷ್ಟು ಸಂಶೋಧನೆಗಳು ನಡೆದಿಲ್ಲವೆಂದರೆ ಪ್ರಾಯಶಃ ತಪ್ಪಾಗದು.

ಪಾಶ್ಚಾತ್ಯ ದೇಶಗಳಲ್ಲಿ ಈ ವಿಷಯದಲ್ಲಿ ಸಾಕಷ್ಟು ಸಂಶೋಧನೆಗಳು ನಡೆದಿವೆ. ವೃತ್ತಪತ್ರಿಕೆಯಲ್ಲಿ ಯಾವ ವಿಷಯಗಳು ಓದುಗರಿಗೆ ರುಚಿಸುತ್ತವೆ, ಬಳಸಿರುವ ಭಾಷೆ ಓದುಗರ ಮಟ್ಟಕ್ಕಿದೆಯೇ ಎಂಬ ಹಲವಾರು ಅಂಶಗಳ ಬಗ್ಗೆ ಸಂಶೋಧನೆಗಳು ನಡೆದಿವೆ.

ಸಂಶೋಧನೆಯ ಫಲ

ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಭಾರತ ಸರಕಾರದ ನೆರವಿನಿಂದ ಒಂದು ಸಂಶೋಧನೆಯನ್ನು ನಡೆಸಿದೆ. ಹ… ದಾಗಿ ಅಕ್ಷರ ಕಲಿತ ವಯಸ್ಕರು ಯಾವ ವಿಷಯಗಳ… ಓದಲು ಹೆಚ್ಚಾಗಿ ಇಷ್ಟಪಡುವರು ; ಯಾವ ವಿಷಯಗ… ಅವರಿಗೆ ತಿಳಿದಿಲ್ಲ ; ಈ ಅಂಶಗಳನ್ನು ಸಂಶೋಧನೆಯಿ… ಕಂಡುಹಿಡಿಯಲಾಗಿದೆ. ಅದರಿಂದ ಕೆಲವು ಗಮನಾ… ವಾದ ಅಂಶಗಳು ಹೊರಬಿದ್ದಿವೆ.

ವಯಸ್ಕರು ತಮ್ಮ ಕಸುಬಿನ ಬಗ್ಗೆ ತಿಳಿಯಲು ಕಾ… ಪಡುವರು. ಪುರಾಣ ಗ್ರಂಥಗಳನ್ನು ಓದಲು ಅವ… ಇಷ್ಟ. ಕಥೆ ಮತ್ತು ಕಾದಂಬರಿಗಳನ್ನು ಓದಲು ಹೆಚ್ಚ… ಪ್ರೀತಿ ಅವರಿಗಿದೆ. ಆದ್ದರಿಂದ ವೈಜ್ಞಾನಿಕವಾದ … ಯಗಳನ್ನೂ ಸಹ ಓದುಗರ ಮನಸ್ಸಿಗೆ ನಾಟುವ ಧಾ… ಯಲ್ಲಿ ರಚಿಸಿದಲ್ಲಿ, ಆಗ ಆ ಸಾಹಿತ್ಯ ಅವರ ಗಮನವ… ಸೆಳೆಯಬಲ್ಲದು.

ಹೊಸದಾಗಿ ಅಕ್ಷರಸ್ಥರಾದ ವಯಸ್ಕರಿಗೆ ಪುಸ್ತ… ಗಳನ್ನು ರಚಿಸುವುದು ಒಂದು ಕಲೆ. ಈ ಕಲೆ ಸಾಧ… ಯಿಂದ ಮಾತ್ರ ಸಾಧ್ಯ. ಈ ಸಾಧನೆ ಮೊದಲು ಗು… ಮುಖೇಣ ಆಗುವುದು ಒಳ್ಳೆಯದು. ಈ ದೃಷ್ಟಿಯಿ… ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಸಾಹಿತ್ಯ ರಚನಾಲ… ಗಳ ಮೂಲಕ ಬರಹಗಾರರಿಗೆ ವಯಸ್ಕರ ಸಾಹಿತ್ಯ ರ… ಸುವ ಬಗ್ಗೆ ಪ್ರತ್ಯಕ್ಷ ಪರಿಚಯ ಮಾಡಿಕೊಡುತ್ತಲಿದೆ.

ಅಗಾಧವಾದ ಕಾರ್ಯ

ವಯಸ್ಕರಿಗೆ ಸಾಹಿತ್ಯ ರಚನೆ ಅಗಾಧವಾದ ಕಾರ… ಈ ಕಾರ್ಯದಲ್ಲಿ ಹಣ, ನುರಿತ ಬರಹಗಾರರ ಮತ… ಶ್ರದ್ಧೆಯಿಂದ ಶ್ರಮಿಸುವ ಸಂಸ್ಥೆಗಳ ಅಗತ್ಯವಿ… ಸಾಹಿತ್ಯ ಪರಿಷತ್ತು ಮತ್ತು ಸಮಿತಿ ಮೊದಲಿನಿಂದಲ… ಒಂದುಗೂಡಿ ಕೆಲಸಮಾಡುತ್ತಲಿವೆ. ಸಾಹಿತ್ಯ ಪ್ರಪ… ಚಕ್ಕೆ ಈ ಎರಡು ಸಂಸ್ಥೆಗಳೂ ಎರಡು ಕಣ್ಣುಗಳಿದ್ದಂ… ಇವೆರಡರ ಪ್ರಯತ್ನದ ಫಲವಾಗಿ ಸಾಹಿತ್ಯ ರಚನ… ಕಾರ್ಯ ಯಶಸ್ವಿಯಾಗಿ ನಡೆದು ಅಭಿವೃದ್ಧಿಯಾಗಲೆಂಬುದ… ನನ್ನ ಆಸೆ.

ಸ್ತಕ ವಿತರಣಕ್ಕೊಂದು ಸಹಕಾರ ಸಂಸ್ಥೆ

ವಿ. ಸುಬ್ಬಣ್ಣ

ದಲ್ಲಿ ಪುಸ್ತಕ ಪ್ರಕಾಶನ ಸಮರ್ಥ ಆಧುನಿಕ
ವಾಗಿ ಬೆಳೆಯಬೇಕಾಗಿದೆ. ಅದು ಈ ತನಕ
ಈ ಹಿಂದುಳಿದ ದೇಶದಲ್ಲಿ ಅನೇಕ ಉದ್ಯಮ
ಮವಾಗಿ ಬೆಳೆಯುತ್ತ ಬರುತ್ತಿರುವುದು ಕಂಡರೂ
ನೋದ್ಯಮ ಬೆಳೆಯಲಿಲ್ಲ. ಈಚೆಗೆ ನಮ್ಮಲ್ಲಿ
ಗಣನೀಯ ಉದ್ಯಮವಾಗಿ ಬೆಳೆದಿದೆ. ಪತ್ರಿಕೆ
ದಿನನಿತ್ಯದ ಅಗತ್ಯವಾಗಿ ಕಾಣುವ ಹಾಗೆ ಪುಸ್ತಕ
ದಿಲ್ಲ. ಹೀಗಾಗಿ ಪುಸ್ತಕ ಪ್ರಕಾಶನ ಒಳ್ಳೇ
ವಾಗಿ ತಾನಾಗಿಯೇ ಸದ್ಯ ಬೆಳೆದೀತು ಎಂಬ
ಕೂಡ ಕಾಣುವುದಿಲ್ಲ. ಅಂದರೆ ಲಾಭದ
ಗಳನ್ನು ಕಾಣಿಸಿ ಉದ್ಯಮಿಗಳನ್ನು ಆಕರ್ಷಿಸುವ
ದಕ್ಕಿಲ್ಲ. ಇಂಥ ಸಂದರ್ಭದಲ್ಲಿ, ಪ್ರಕಾಶನದಲ್ಲಿ
ರುವ ಲೇಖಕರು ಪ್ರಕಾಶಕರು ಮಾರಾಟ
ಓದುಗರು ಈ ವರ್ಗಗಳ ಜನ ತಾವೇ ಕೂಡಿ
ವಿಶೇಷ ಪ್ರಯತ್ನ ಮಾಡಬೇಕಾದ್ದು ಅಗತ್ಯ
ದೆ. ಸಹಕಾರ ಸಂಸ್ಥೆಯ ಮೂಲಕ ಇಂಥ
ಪ್ರಯತ್ನವನ್ನು ಯಶಸ್ವಿಯಾಗಿ ಕೈಕೊಳ್ಳ
ದು ನನ್ನ ಅಭಿಪ್ರಾಯ.

ಲ್ಲಿ

ದಲ್ಲಿ ಸಹಕಾರ ಸಂಸ್ಥೆಯ ಮೂಲಕ ಪ್ರಕಾಶನ
ಟು ಅಪೂರ್ವ ಯಶಸ್ಸು ಗಳಿಸಿರುವುದನ್ನು

ನಾವೆಲ್ಲ ಕೇಳಿದ್ದೇವೆ. ನಮ್ಮ ಸಹಕಾರಿ ಪ್ರಯತ್ನಕ್ಕೆ ಅದು ದೊಡ್ಡ ಭರವಸೆಯಾಗಬಲ್ಲುದು. ಹಾಗೆಂದು, ಅಲ್ಲಿನದನ್ನು ನಾವಿಲ್ಲಿ ನಕಲು ಮಾಡುತ್ತೇವೆಂದರೆ ಅದರಿಂದ ದೊಡ್ಡ ಪ್ರಯೋಜನ ಸಿಕ್ಕಲಾರದು. ಮುಖ್ಯ ಈ ಪ್ರಕಾಶನ ಕ್ಷೇತ್ರದಲ್ಲಿ ನಮ್ಮಲ್ಲಿ ಪ್ರಸ್ತುತ ಇರುವ ಮುಖ್ಯ ಸಮಸ್ಯೆಗಳು ಯಾವುವು ಎನ್ನುವುದನ್ನು ಸ್ಪಷ್ಟಗೊಳಿಸಿಕೊಂಡು ಅದರಲ್ಲಿ ಮುಖ್ಯವಾದ್ದನ್ನು ಸಮರ್ಥವಾಗಿ ಎದುರಿಸುವುದಕ್ಕೆ ನಮ್ಮ ಪ್ರಯತ್ನ ಮೀಸಲಾಗಬೇಕು.

ಉಳಿಯುವ ಭಾಗ ಹೆಚ್ಚು

ಪುಸ್ತಕಗಳ ಪ್ರಕಾಶನ ಒಂದು ಭಾಗ, ಅವುಗಳ ವಿತರಣೆ ಮತ್ತು ಮಾರಾಟ ಇನ್ನೊಂದು ಭಾಗ. ಬೇರೆ ದೇಶಗಳಿಗೆ ಹೋಲಿಸಿದಾಗ, ಯಾಕೆ ನಮ್ಮಲ್ಲೇ ಇತರ ಹಲವು ಭಾಷೆಗಳಿಗೆ ಹೋಲಿಸಿದರೂ, ಪ್ರಕಟವಾಗುವ ಪುಸ್ತಕಗಳ ಸಂಖ್ಯೆ ಕಡಿಮೆಯೇ. ಆದರೆ ಹೀಗೆ ಕಡಿಮೆ ಸಂಖ್ಯೆಯಲ್ಲಿ ಪ್ರಕಟವಾದರೂ ಅವುಗಳಲ್ಲಿ ದೊಡ್ಡ ಭಾಗ ವಿತರಣೆಯಾಗದೆ ಮಾರಾಟವಾಗದೆ ಉಳಿದುಕೊಳ್ಳುತ್ತದೆ. ಅತ್ಯುಪಯುಕ್ತವಾದ್ದನ್ನೇ ಪ್ರಕಟಿಸುತ್ತೇವೆ ಎನ್ನುವ ನಮ್ಮ ವಿಶ್ವವಿದ್ಯಾಲಯಗಳು ಕೂಡ, ತಾವು ಪ್ರಕಟಿಸುವ ಪುಸ್ತಕಗಳಲ್ಲಿ ದೊಡ್ಡ ಪಾಲನ್ನು ಉಗ್ರಾಣದಲ್ಲಿ ಪೇರಿಸಿಟ್ಟುಕೊಳ್ಳಬೇಕಾಗುತ್ತದೆ; ಅವು ವಿತರಣೆಯಾಗದೆ

ಉಳಿಯುತ್ತವೆ. ಪರಿಸ್ಥಿತಿಯನ್ನು ಸಮಗ್ರವಾಗಿ ವಿಚಾರಿಸಿ ನೋಡಿದರೆ, ನಮ್ಮ ಇವತ್ತಿನ ಬಹುಮುಖ್ಯ ಸಮಸ್ಯೆ ಪುಸ್ತಕ ವಿತರಣೆ ಮತ್ತು ಮಾರಾಟಕ್ಕೆ ಸಂಬಂಧಿಸಿದ್ದು ಎನ್ನುವುದು ಸ್ಪಷ್ಟ ತಿಳಿಯುತ್ತದೆ. ನಮ್ಮ ಇತರ ಅನೇಕ ಇತಿಮಿತಿಗಳ ದೃಷ್ಟಿಯಿಂದ ಹೇಳುವುದಾದರೆ, ಪುಸ್ತಕಗಳೇನೋ ಸಾಕಷ್ಟು ಪ್ರಕಟವಾಗುತ್ತವೆ; ಆದರೆ ಪ್ರಕಟವಾದವು ವಿತರಣೆಯಿಲ್ಲದೆ ನಿರುಪಯೋಗಿ ಆಗುತ್ತವೆ.

ನಾವೀಗ ಪುಸ್ತಕ ವಿತರಣೆ ಮತ್ತು ಮಾರಾಟ–ಈ ಒಂದು ಮುಖ್ಯ ಸಮಸ್ಯೆಯ ಬಗ್ಗೆ ಮಾತ್ರವೇ ಬೃಹತ್ತಾದ ಪರಿಣಾಮಕಾರಿಯಾದ ಒಕ್ಕೈ ಪ್ರಯತ್ನ ಮಾಡಬೇಕಾದ್ದು ಅಗತ್ಯ ಎನಿಸುತ್ತದೆ. ಸಮಸ್ಯೆಗಳು ಇನ್ನೂ ಅನೇಕ ಇವೆ ಎನ್ನುವುದು ಸುಳ್ಳಲ್ಲ. ಆದರೆ, ದೇಶದಲ್ಲಿ ಅಕ್ಷರಸ್ಥರ ಸಂಖ್ಯೆಯನ್ನು ಹೆಚ್ಚಿಸಬೇಕಾದಂಥ ವಿಶಾಲ ವ್ಯಾಪ್ತಿಯ ಸಮಸ್ಯೆಗಳಿವೆ. ನಮ್ಮ ಹೊಸ ಪ್ರಯತ್ನ ಅಂಥ ವಿಶಾಲ ಸಮಸ್ಯೆಗಳನ್ನು ಎದುರಿಸಿ ಯಶಸ್ವಿಯಾಗಲಾರದು. ಅದೇ ರೀತಿ, ಬೇರೆ ಕೆಲವು ಸಮಸ್ಯೆಗಳನ್ನು ಸಾಮೂಹಿಕ ಸಂಕಲ್ಪ ಪ್ರಯತ್ನಗಳಿಂದ ನಿವಾರಿಸಲಿಕ್ಕೇ ಆಗುವುದಿಲ್ಲ. ಬದಲು, ಸಮಸ್ಯೆಗಳ ಜಾಗದಲ್ಲಿ ಮತ್ತೂ ಸಮಸ್ಯೆಗಳು ಹುಟ್ಟಿಕೊಳ್ಳುವ ಹಾಗಾದೀತು. ಅದಕ್ಕೇ ಪುಸ್ತಕ ವಿತರಣೆ ಮತ್ತು ಮಾರಾಟ ಈ ಒಂದೇ ಅಂಶವನ್ನು ಮುಖ್ಯವಾಗಿಟ್ಟುಕೊಂಡು ಈಗ ಮೊದಲಿಗೆ ನಮ್ಮ ಪ್ರಯತ್ನ ರೂಪಿಸಬೇಕು ಎಂದು ನನ್ನ ಅಭಿಪ್ರಾಯ. ಆದಷ್ಟರಿಂದಲೇ ಇವತ್ತಿನ ನಮ್ಮ ಪುಸ್ತಕ ಪ್ರಕಟನೆಯಲ್ಲಿ ಒಂದು ಗಣನೀಯ ನೆಗೆತ ಆಗಬಲ್ಲದು ಎಂದು ನನ್ನ ನಂಬಿಕೆ.

ಹೊಸದೇನೂ ಅಲ್ಲ

ಪ್ರಕಾಶನದ ಬಗ್ಗೆ ಸಹಕಾರಿ ಮಾರ್ಗಗಳನ್ನು ಯೋಜಿಸಿಕೊಳ್ಳುತ್ತಿರುವುದು ನಮ್ಮಲ್ಲಾದರೂ ಹೊಸದಲ್ಲ. ಕೇರಳದಲ್ಲಾದ ಪ್ರಯತ್ನಗಳ ಜತೆಜತೆಗೇ ನಮ್ಮಲ್ಲೂ ಪ್ರಯತ್ನಗಳು ನಡೆದಿದ್ದವು. ಈಗ ಕೂಡ ಸಾಕಷ್ಟು ದೊಡ್ಡ ಎರಡು ಸಹಕಾರಿ ಪ್ರಕಾಶನ ಸಂಸ್ಥೆಗಳು ನಮ್ಮಲ್ಲಿ (ಒಂದು ಬೆಂಗಳೂರಲ್ಲಿ ಮತ್ತೊಂದು ಧಾರವಾಡದಲ್ಲಿ) ಕೆಲಸ ಮಾಡುತ್ತಿವೆ. ಬೆಂಗಳೂರಿನ ಕರ್ಣಾಟಕ ಸಹಕಾರಿ ಪ್ರಕಾಶನ 'ಜ್ಞಾನಗಂಗೋತ್ರಿ' ಯಂಥ ಬೃಹತ್ ಯೋಜನೆ ಕೈಗೊಂಡಿರುವುದು ಪ್ರಶಂಸನೀಯವಾದರೂ ನಮ್ಮ ಪ್ರಕಾಶನಪ್ರಪಂಚದ ಮುಖ್ಯ ಸಮಸ್ಯೆಗೆ ಈ ಪ್ರಯತ್ನಗಳಿಂದ ಯಾವ ಪರಿಹಾರ ಸಿಕ್ಕಲಾರದು.

ವಿವರಣೆ ಸರಿಯಿಲ್ಲ

ಈಗಾಗಲೇ ಹೇಳಿದ ಹಾಗೆ ನಮ್ಮಲ್ಲಿ ಅನೇಕ ಸ
ಗಳು ವ್ಯಕ್ತಿಗಳು ಪುಸ್ತಕ ಪ್ರಕಟಿಸುತ್ತಿದ್ದಾರೆ. ಎಷ
ಲೇಖಕರು ತಮ್ಮ ಪುಸ್ತಕ ತಾವೇ ಪ್ರಕಟಿಸಿಕೊ
ತ್ತಿದ್ದಾರೆ. ದೊಡ್ಡ ತೊಂದರೆ ಆ ಪುಸ್ತಕಗಳು ಖ
ಗದೆ ಉಳಿದು ಹೋಗುವುದು. ಪ್ರಕಟವಾದ ಒ
ಪುಸ್ತಕ, ಪ್ರಕಟವಾದ ಮೊದಲ ಆರು ತಿಂಗಳೊ
ಆಯಾ ಪುಸ್ತಕದ ಸ್ವರೂಪಕ್ಕನುಗುಣವಾಗಿ ಸುಮಾ
ಆರೆಂಟು ನೂರರಿಂದ ನಾಲ್ಕೈದು ಸಾವಿರಗಳಷ್ಟು ಪ್ರ
ಮಾರಿ ಹೋಗಬಲ್ಲುದಾದರೆ ನಮ್ಮ ಎಲ್ಲ ಪ್ರಕಾಶಕ
ನಷ್ಟವಿಲ್ಲದೆ ಪುಸ್ತಕ ಪ್ರಕಟಿಸುತ್ತ ಹೋಗಬಹು
ಕ್ರಮೇಣ ಲಾಭ ಕೂಡ ಪಡೆಯಬಹುದು. ಇಲ್ಲ
ಅಕ್ಷರಸ್ಥರ ಸಂಖ್ಯೆಯನ್ನೇ ನೆನಪಿಟ್ಟುಕೊಂಡು ಕನ್ನ
ಜನಸಂಖ್ಯೆಯನ್ನು ಪರಿಗಣಿಸಿದರೆ, ನಮ್ಮ ಅಕ್ಷರಸ
ಪುಸ್ತಕದ ಆಸಕ್ತಿಯ ಮಿತಿಯಲ್ಲೂ ಮೇಲಿನ ಸಂಖ್ಯೆ
ಪುಸ್ತಕಗಳು ಹೋಗಲೇಬೇಕು. ಆದರೆ ಈಗ ಯಾ
ಹೋಗುತ್ತಿಲ್ಲ? ವಿತರಣೆ ಸರಿಯಿಲ್ಲ. ಪುಸ್ತಕ ಪ್ರಕ
ವಾದ್ದು ಕನ್ನಡದ ಎಲ್ಲ ಭಾಗಗಳಲ್ಲೂ ಸುಲಭವಾ
ಸಿಕ್ಕುವ ಹಾಗೆ ಆಗಬೇಕು. ಪುಸ್ತಕ ಪ್ರಕಟವಾದ
ಗೊತ್ತಾಗಬೇಕು, ಮೇಲೆ ಮೇಲೆ ಕಣ್ಣಿಗೆ ಬೀಳಬೇಕ
ಆದರಿಂದ ಕೊಳ್ಳುವ ಉಮೇದು ಹುಟ್ಟಬೇಕು, ಅವಕಾ
ಸಿಕ್ಕುಕೊಳ್ಳುವ ಮನಸ್ಸಾದಾಗ ಅದು ಕೈನಿಲುಕ
ಸಿಕ್ಕುವ ಹಾಗಿರಬೇಕು. ಇಂಥ ವ್ಯವ
ಯಿದ್ದರೆ ಮೇಲೆ ಹೇಳಿದ ಸಂಖ್ಯೆಯ ಪುಸ್ತಕಗ
ಖರ್ಚಾಗುವುದು ದೊಡ್ಡ ಕಷ್ಟವಲ್ಲ. ಈಚಿನ ಒಂದೆರ
ವರ್ಷಗಳಲ್ಲಿ ಬೆಂಗಳೂರು ರಾಜ್ಯೋತ್ಸವ ಸಮಿತಿಯವ
ನಡೆಸುವ ಪುಸ್ತಕ ಮಾರಾಟಗಳಲ್ಲಿ ಮತ್ತು ಕಳೆದ ವಷ
ಅಲ್ಲಲ್ಲಿ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನಗ
ಪುಸ್ತಕದಂಗಡಿಗಳಲ್ಲಿ ಮಾರಾಟವಾದ ಪುಸ್ತಕಗಳನ
ಪರಿಗಣಿಸಿದರೆ ಮೇಲಿನ ಅಭಿಪ್ರಾಯಕ್ಕೆ ಸಮರ್ಥನ
ಸಿಕ್ಕುತ್ತದೆ.

ನಿರಾಸಕ್ತಿಗೆ ಕಾರಣ

ಇವತ್ತು ಒಬ್ಬ ಒಂದು ಪುಸ್ತಕ ಪ್ರಕಟಿಸಿದರೆ ಅದನ್ನ
ಮಾರುವುದಕ್ಕೆ ಆತ ನಾಡಿನ ತುಂಬ ಇರುವ ನೂರಾರು

ಸ್ತಕದಂಗಡಿಗಳನ್ನು ಹುಡುಕಿ ಒಂದೊಂದರ ಸಂಪರ್ಕ ನ್ನು ಪಡೆದುಕೊಳ್ಳಬೇಕು. ಅವರಿಂದ ಬೇಡಿಕೆ ಪಡೆದು ಸ್ತಕ ಕೊಡಬೇಕು. ಆಮೇಲೆ ಹಣ ವಸೂಲು ಮಾಡಿ ಳ್ಳಬೇಕು. ಪುಸ್ತಕ ಹೊತ್ತುಕೊಂಡು, ಅಶ್ವಮೇಧದ ಗೆ, ಊರು ಸುತ್ತಿ ಗೆಲ್ಲುವುದು ಎಂಥವನಿಗೂ ಕಷ್ಟದ ತು. ಪುಸ್ತಕ ವ್ಯಾಪಾರಿಗಳ ದೃಷ್ಟಿಯಿಂದ ಹೇಳುವು ದರೆ, ಇದು ಹೆಚ್ಚು ಲಾಭ ತರುವಂಥದಲ್ಲವಾದ್ದರಿಂದ ರಲ್ಲಿ ಅವರು ವಿಶೇಷ ಆಸಕ್ತಿ ತೋರಿಸಲು ಅವಕಾಶ ರಿಸಲು ಅವಕಾಶವಿಲ್ಲ. ಎಲ್ಲೆಲ್ಲಿ ಯಾಯಾವ ಪುಸ್ತಕ ಟವಾಗುತ್ತಿದೆ, ಹೊಸದು ಯಾವುದು, ಯಾವುದನ್ನು ದಿಟ್ಟು ಮಾರಿಯೇನು–ಎಂಬ ಬಗ್ಗೆ ಆತನಿಗೆ ಮಾಹಿತಿ ಡುವವರೇ ಇಲ್ಲ. ಗಿರಾಕಿಗಳೇ ಇಂಥ ಪುಸ್ತಕ ಉಂಟೇ ನು ಕೇಳಿದಾಗಲೂ, ಅದನ್ನು ಎಲ್ಲಿಂದ ತರಿಸಬೇಕು ಕಾಶಕರು ಯಾರು ಇತ್ಯಾದಿ ಆತನಿಗೆ ತಿಳಿಯದು. ಮಾಡಿ ಒಂದೆರಡು ಪ್ರತಿಗಳನ್ನು ತರಿಸಿದರೆ, ಅದರಿಂದ ಭವಿರಲಿ, ನಷ್ಟವೇ ಆದೀತು. ಇದು ಸ್ಥಿತಿ.

ಪುಸ್ತಕ ಪ್ರಕಟನೆ ಚಿಕ್ಕಚಿಕ್ಕ ಘಟಕಗಳಿಂದ ಸಾಧ್ಯ, ವುದೇ ಮೂಲೆಯಿಂದಾದರೂ ಸಾಧ್ಯ. ಈ ರೀತಿಯ ೇಂದ್ರೀಕೃತ ಪ್ರಕಾಶನ ವ್ಯವಸ್ಥೆ ಅನೇಕ ರೀತಿಗಳಿಂದ ೀಕ್ಷಣೀಯವೂ ಹೌದು. ಆದರೆ ವಿತರಣೆ ಹಾಗಲ್ಲ. ಇಡೀ ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲೂ ಶಾಖೆಯನ್ನು ಸಿಕೊಂಡ, ರಾಜ್ಯದ ಕೇಂದ್ರದಲ್ಲೇ ತನ್ನ ಕೇಂದ್ರ ನ್ನು ಹೊಂದಿರುವ ಬೃಹತ್ ಹಾಗೂ ದಕ್ಷ ಸಂಸ್ಥೆ ಗಿರಬೇಕಾಗುತ್ತದೆ.

ಇದೆಲ್ಲವನ್ನೂ ಮನಸ್ಸಲ್ಲಿಟ್ಟುಕೊಂಡು ನಾನು ಸೂಚಿ ರುವುದು, ಪುಸ್ತಕಗಳ ವಿತರಣೆ ಮತ್ತು ಮಾರಾಟ ೀ ಮುಖ್ಯ ಲಕ್ಷ್ಯವಾಗಿಟ್ಟುಕೊಂಡಿರುವ ಇಡೀ ರ್ನಾಟಕದ ವ್ಯಾಪ್ತಿಯುಳ್ಳ ಸಹಕಾರಿ ಸಂಸ್ಥೆಯೊಂದನ್ನು ಗಳೂರಲ್ಲಿ ಸ್ಥಾಪಿಸಬೇಕು ಎನ್ನುವುದು.

ಲ ರೇಖೆಗಳು

ಈ ಸಂಸ್ಥೆಯ ಬಗ್ಗೆ ನನ್ನ ಕಲ್ಪನೆಯ ಸ್ಥೂಲ ರೇಖೆ ನ್ನು ಇಲ್ಲಿ ಕೊಡುತ್ತಿದ್ದೇನೆ :

ಈ ಸಂಸ್ಥೆಗೆ ಸದಸ್ಯರು : ಲೇಖಕ, ಪ್ರಕಾಶಕ, ದ್ರಕ, ಮಾರಾಟಗಾರ ಮತ್ತು ಓದುಗ–ಈ ವರ್ಗ ್ಕೆ ಬರುವ ವ್ಯಕ್ತಿಗಳು ಹಾಗೂ ಸಂಸ್ಥೆಗಳು. ಜೊತೆಗೆ ಕಾರಿ ಸಂಸ್ಥೆಗಳು ವಿದ್ಯಾಸಂಸ್ಥೆಗಳು ಮತ್ತು ಸಾಂಸ್ಕೃತಿಕ ಸಂಸ್ಥೆಗಳು ಕೂಡ ಸದಸ್ಯರಾಗಬಹುದು.

ಬಂಡವಾಳ : ಮೊತ್ತಮೊದಲಿಗೆ ಷೇರುಗಳ ರೂಪದಲ್ಲಿ, ಹತ್ತು ಲಕ್ಷ ರೂ.ಗಳಿಗೆ ಕಡಿಮೆ ಇಲ್ಲದೆ, ಸುಮಾರು ಇಪ್ಪತ್ತು ಲಕ್ಷದ ವರೆಗೆ ಸಂಗ್ರಹಿಸಿಕೊಳ್ಳುವುದು.

ಕಾರ್ಯಕ್ರಮ : ಸಂಸ್ಥೆಯು ಮೊತ್ತಮೊದಲ ಕೆಲಸ ಪ್ರಕಾಶಕರಿಂದ ಪುಸ್ತಕಗಳನ್ನು ಮಾರಾಟಕ್ಕೆ ಪಡೆದು ಕೊಳ್ಳುವುದು ಮತ್ತು ಕನಿಷ್ಠ ಜಿಲ್ಲಾ ಕೇಂದ್ರಗಳಲ್ಲೊಂದ ರಂತೆ ಸುಮಾರು ೨೫ ಪುಸ್ತಕದ ಅಂಗಡಿಗಳನ್ನು ತೆರೆಯು ವುದು. ಈ ಅಂಗಡಿಗಳಲ್ಲದೆ ಬೇರೆ ಖಾಸಗಿ ಪುಸ್ತಕ ಮಾರಾಟಗಾರರನ್ನು ಸಂಸ್ಥೆಯ ಪರವಾಗಿ ಮಾರುವ ಏಜಂಟರುಗಳಾಗಿ ನೇಮಿಸಿಕೊಳ್ಳುವುದು. ಕನಿಷ್ಠ ಐದು, ವಾಹನಗಳಲ್ಲಿ ಯೋಚಿಸಿದ, ಸಂಚಾರಿ ಪುಸ್ತಕದಂಗಡಿ ಗಳನ್ನು ನಡೆಸುವುದು. ಪುಸ್ತಕಗಳ ಬಗ್ಗೆ ಅತ್ಯಂತ ವಿಶಾಲವ್ಯಾಪ್ತಿಯ ಹಾಗೂ ವಿವಿಧ ರೀತಿಯ ಪ್ರಚಾರ ಗಳನ್ನು ಕೈಗೊಳ್ಳುವುದು.

ಕೊಳ್ಳುವುದು ಮಾರುವುದು : ಪುಸ್ತಕಗಳನ್ನು ಪ್ರಕಾಶಕರಿಂದ 'ಮಾರಿ ಹಣ ಕೊಡುವ' ನಿಯಮದ ಮೇಲೆ ಪಡೆದುಕೊಳ್ಳಬಹುದು. ಮೂರು ತಿಂಗಳಿಗೊಮ್ಮೆ ಲೆಕ್ಕ ಮಾಡಿ, ಮಾರಿದ ಪುಸ್ತಕಗಳ ಹಣ ಅವರಿಗೆ ತಲು ಪಿಸಬಹುದು. ಕ್ರಮೇಣ, ಪ್ರಕಾಶಕರಿಗೆ ಅವರವರ ಪುಸ್ತಕಗಳ ಹಿಂದಿನ ಮಾರಾಟದ ಆಧಾರದ ಮೇಲೆ ಮತ್ತು ಇತರ ಆಧಾರಗಳ ಮೇಲೆ ಮುಂಗಡ (advance) ಕೊಡುವುದನ್ನು ಜಾರಿಗೆ ತರಬಹುದು. ಮಾರಾಟದ ಸೋಡಿ ಒಂದೇ ರೀತಿ ಇರಬೇಕಲ್ಲ. ಸೋಡಿಯ ಬಗ್ಗೆ ಸಂಸ್ಥೆ ೩–೪ ಶೇಕಡಾ ದರಗಳನ್ನು ನಿಗದಿಗೊಳಿಸ ಬಹುದು. ಅದರಲ್ಲಿ ಪ್ರಕಾಶಕ ಯಾವುದೇ ದರವನ್ನು ಆಯ್ದುಕೊಳ್ಳಲು ಸ್ವತಂತ್ರನಿರುತ್ತಾನೆ. ಮಾರಾಟ ಮಾಡುವ ಏಜೆಂಟರುಗಳಿಗೆ ಪ್ರಕಾಶಕ ಕೊಡುವ ಸೋಡಿ ಯಲ್ಲಿ ಒಂದು ನಿಶ್ಚಿತ ಅಂಶ ಕಳೆದು, ಉಳಿದದ್ದನ್ನು ಸೋಡಿಯಾಗಿ ಕೊಡಬಹುದು. ಹೆಚ್ಚು ಮಾರಿದ ಏಜೆಂಟರುಗಳಿಗೆ ವರ್ಷದ ಕೊನೆಗೆ ವಿಶೇಷ ಸೋಡಿ ಕೊಡ ಬಹುದು. ಸಂಸ್ಥೆಯೇ ನಡೆಸುವ ಪುಸ್ತಕ ಭಂಡಾರಗಳ ಬಗ್ಗೆ ಮಾತ್ರ ಲಾಭ ನಷ್ಟ ಎಣಿಸದೆ, ಅವುಗಳ ಆಡಳಿತ ವನ್ನು ಸಾಧ್ಯವಾದಷ್ಟು ದಕ್ಷಗೊಳಿಸುತ್ತ ನಡೆಸಿಕೊಳ್ಳು ತ್ತಲೇ ಹೋಗಬೇಕು. ಸಂಸ್ಥೆಯಿಂದ ಖಾಯಂ ಆಗಿ ಪುಸ್ತಕ ಪಡೆಯುವ ಓದುಗರಿಗೆ ಕೂಡ ಸೋಡಿಯ ಸೌಲಭ್ಯ ಕೊಡಬಹುದು.

ಪ್ರಚಾರ : ಪ್ರಕಟವಾಗಿರುವ ಅಷ್ಟೇ ಪ್ರಕಟವಾಗುತ್ತಿರುವ ಹಾಗೂ ಮುಂದೆ ಪ್ರಕಟವಾಗಲಿರುವ ಪುಸ್ತಕಗಳ ಬಗ್ಗೆ ಸಾಧ್ಯವಾದಷ್ಟೂ ಹೆಚ್ಚು ಜನಕ್ಕೆ ಸುಲಭವಾಗಿ ಮಾಹಿತಿ ಸಿಕ್ಕುವಂತೆ ವಿವಿಧ ಪ್ರಚಾರಗಳನ್ನು ಮಾಡಬೇಕು. ಇಂಥ ಮಾಹಿತಿ ಕೊಡುವ ಮಾಸಪತ್ರಿಕೆಯೊಂದನ್ನು ಪ್ರಕಟಿಸಬೇಕು. ಪುಸ್ತಕಗಳ ಬಗ್ಗೆ ಕೇಳಿದವರಿಗೆ ಬೇಕಾದ ಎಲ್ಲ ಮಾಹಿತಿಗಳನ್ನು ಒದಗಿಸಿ ಕೊಡುವ ಬಗ್ಗೆ ವ್ಯವಸ್ಥೆ ಇರಬೇಕು.

ಇದು ತೀರ ಸ್ಥೂಲವಾದ ಚಿತ್ರ. ರೂಪುರೇಷೆಗಳ ಬಗ್ಗೆ ಇಲ್ಲಿ ವಿವರಕ್ಕೆ ಹೋಗುತ್ತಿಲ್ಲ.

ಜಿಲ್ಲೆಗೊಂದು ಸಹಕಾರಿ ಸಂಸ್ಥೆ

ಇನ್ನು ಜಿಲ್ಲೆಗೊಂದರಂತೆ ಸಹಕಾರ ಸಂಸ್ಥೆ ಸ್ಥಾಪಿಸುವುದು, ಅವು ಕೇಂದ್ರ ಸಂಸ್ಥೆಯೊಂದರ ಆಶ್ರಯದಲ್ಲಿದ್ದು ಪುಸ್ತಕಗಳ ಪ್ರಕಾಶನದಲ್ಲಿ ತೊಡಗುವುದು ಮುಂತಾದ ಯೋಜನೆಗಳಿವೆ. ಅವೂ ಅಗತ್ಯವೇ. ಆದರೆ ಪುಸ್ತಕ ವಿತರಣೆಯನ್ನು ಮುಖ್ಯ ಲಕ್ಷ್ಯವಾಗಿಟ್ಟುಕೊಂಡಿರುವಾಗ ಅಂಥವು ವಿಶೇಷ ಪ್ರಯೋಜನಕಾರಿಯಾಗಲಾರವು. ಎಲ್ಲೆಲ್ಲಿ ಸ್ಥಳೀಯ ಉತ್ಸಾಹಿಯುಂಟೋ ಅಲ್ಲಲ್ಲಿ ಪ್ರಕಟನೆ, ಮುದ್ರಣ, ಮಾರಾಟ ಇತ್ಯಾದಿ ಗುರಿಗಳನ್ನಿಟ್ಟುಕೊಂಡು ಸ್ಥಳೀಯ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳಬಹುದು. ಅವು ಕೇಂದ್ರ ವಿತರಣ ಸಹಕಾರ ಸಂಸ್ಥೆಯ ಅಂಗಸಂಸ್ಥೆಗಳಾಗಿ ಸೇರಿಕೊಳ್ಳಬಹುದು. ಅದಕ್ಕೆ ಅವಕಾಶ ಇದ್ದೇ ಇರುತ್ತದೆ. ಹೇಗೂ ವಿತರಣೆಯ ಕೆಲಸ ಮಾತ್ರ ಅತ್ಯಂತ ದಕ್ಷವಾದ ಏಕೈಕ ಬೃಹತ್ ಸಂಸ್ಥೆಯಿಂದಲೇ ಸಾಧ್ಯ.

ಪುಸ್ತಕ ಯೌವನದಲ್ಲಿ ಮಾರ್ಗದರ್ಶಿ, ವೃದ್ಧಾಪ್ಯದಲ್ಲಿ ಮನರಂಜಕ.

—ಜೆರಿಮಿ ಕಾಲಿಯರ್

ಅತ್ಯುತ್ತಮ ಪುಸ್ತಕಗಳು ಉತ್ತಮ ಸಂಗಾತಿಗಳು.

—ಥಿಯೋಡಾರ್ ಪಾರ್ಕರ್

ಕೆಲವೇ ಉತ್ತಮ ಪುಸ್ತಕಗಳು, ಮಿತ್ರರು ಇರಬೇಕು.

—ಒಂದು ಸ್ಪೇನಿನ ಗಾದೆ

ಸಹಕಾರಿ ಪ್ರಕಾಶನ

–ಒಂದು ಯೋಜನೆ

ಮ್ಮ ನಾಡಿನಲ್ಲಿ ಸಾಹಿತ್ಯ ಪ್ರಚಾರ ಆಗಬೇಕಾದಷ್ಟು ಟ್ಟಿಗೆ ಆಗಿಲ್ಲ. ಮುಕ್ಕೋಟಿ ಕನ್ನಡಿಗರಿರುವ ಈ ನಲ್ಲಿ ಕನ್ನಡ ಪುಸ್ತಕಗಳನ್ನು ಕೊಂಡು ಓದುವ ತ್ತಿ ಸಾಕಷ್ಟು ಬೆಳೆದಿಲ್ಲ. ಪ್ರಕಟವಾದ ಪುಸ್ತಕ ಒಂದು ಸಾವಿರ ಪ್ರತಿಗಳು ಖರ್ಚಾಗಬೇಕಾದರೆ ಗಳು ಉರುಳಿ ಹೋಗುತ್ತವೆ. ಹೀಗಾದರೆ ನಮ್ಮ ತ್ಯ ಬೆಳೆಯುವುದು ಹೇಗೆ? ನಮ್ಮ ಲೇಖಕರು ಕುವುದು ಹೇಗೆ? ಈ ವ್ಯವಸಾಯಕ್ಕೆ ಹೊಂದಿ ಡಿರುವ ಪ್ರಕಾಶಕರಿಗೆ ಕಾಣುವ ಆಶಾಕಿರಣ ವುದು? ಎಂಬುದು ಕನ್ನಡ ಜನತೆಯ ಮುಂದಿಡ ದ ಸಮಸ್ಯೆ ಆದರೂ, ಅತಿ ಸಮೀಪದಿಂದ ಲೇಖಕ ಪ್ರಕಾಶಕರನ್ನು ಕಾಡುವ ಪಿಡುಗಾಗಿದೆ.

ವರಲ್ಲೂ ಉದಯೋನ್ಮುಖ ಲೇಖಕರಿಗೆ ಕನ್ನಡದ ಲ್ಲಿ ಬೆಳೆಯುವ ಅವಕಾಶ ವಾತಾವರಣ ಸಾಲದಾ ಅವರಿಗೆ ನಿರಾಶೆಯ ಕತ್ತಲು ಕವಿದಿದೆ.

ಕರ ಪರಿಸ್ಥಿತಿ

ಸ ಪೀಳಿಗೆಯ ಈ ಲೇಖಕರಲ್ಲಿ ಎಷ್ಟೇ ಪ್ರತಿಭೆ ದ್ದರೂ ಅದನ್ನು ಗುರುತಿಸುವ ಪ್ರಕಾಶಕರಿಲ್ಲ. ಲೇಖಕನೇ ಪ್ರಕಟಿಸಲಿ ಎನ್ನುವುದಾದಲ್ಲಿ ಅನೇಕರಿಗೆ ಆರ್ಥಿಕ ಸೌಲಭ್ಯವಿಲ್ಲ. ಹಾಗೊಮ್ಮೆ ಅವರೇ ಸಾಹಸ ಮಾಡಿ ತಮ್ಮ ಕೃತಿಯನ್ನು ಪ್ರಕಟಿಸಿದರು ಎಂದರೆ ಅದನ್ನು ಕೊಂಡು ಓದುವ ಓದುಗರಿಲ್ಲ. ತಂದೆ, ತಾಯಿ, ಬಂಧು ಬಳಗವಿಲ್ಲದ ಭಿಕಾರಿಯಾಗಿದ್ದಾನೆ ಇಂದಿನ ಕನ್ನಡ ನಾಡಿನ ಉದಯೋನ್ಮುಖ ಲೇಖಕ. ಇಷ್ಟಾದರೂ ಹೊಸ ಬರಹಗಾರರಿಗೆ ತುಸು ಆಸೆ ಉಳಿದುಕೊಂಡಿದೆ ಎನ್ನುವುದಾದರೆ ಅದು ಪತ್ರಿಕೆಗಳಿಂದ. ಈ ಭಾಗ್ಯವೂ ಇಲ್ಲವಾಗಿದ್ದರೆ ನಮ್ಮ ಯುವಜನರ ಪ್ರತಿಭೆ ಬೇರೆ ಭಾಷೆಗಳ ಜೀತಕ್ಕೆ ಅನುವಾಗುತ್ತಿದ್ದಿತೇನೋ! ಆದರೆ ಈಗಲೂ ನಾವು ಈ ಭಯದಿಂದ ಪಾರಾಗಿದ್ದೇವೆ ಎಂದು ನಾನು ಭಾವಿಸಿಲ್ಲ. ಇದೇ ಪರಿಸ್ಥಿತಿ ನಮ್ಮ ನಾಡಿನಲ್ಲಿ ಮುಂದುವರೆದಲ್ಲಿ ನಮ್ಮ ತರುಣ ಲೇಖಕರ ಪ್ರತಿಭೆ ಹೊರಹೊಮ್ಮಲು ಬೇರೆ ದಾರಿಯನ್ನು ಕಂಡುಕೊಳ್ಳಬೇಕಾಗುತ್ತದೆ. ಆಗ ನಮ್ಮವರೇ ನಮ್ಮ ಭಾಷೆಗೆ 'ಮಿತ್ರಾದರು' ಎಂದು ಯಾರಾದರೂ ಅನ್ನುವ ಕಾಲ ಬಂದರೆ 'ನಿಮ್ಮ ಮಕ್ಕಳ ಕತ್ತು ಹಿಚುಕಿದವರು ಯಾರು?' ಎಂದು ಕನ್ನಡ ಜನತೆಯನ್ನೇ ಪ್ರಶ್ನಿಸುವ ಕಾಲ ಬರುತ್ತದೆ. ಆಗ ಕನ್ನಡ ಕುಲವೇ ತಲೆತಗ್ಗಿಸಬೇಕಾಗಿ ಬಂದರೆ ಆಶ್ಚರ್ಯವಿಲ್ಲ.

ಇಂಥ ದುರ್ದೆಶೆ ನಮಗೆ ಬಾರದಿರಲಿ. ಅದಕ್ಕಾಗಿ ನಾವಿಂದು ವಿಚಾರವಂತರಾಗಬೇಕಾಗಿದೆ. ಈ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಅದನ್ನು ಬೇರು ಸಹಿತ ಕಿತ್ತೊಗೆಯಲು ನಾವೆಲ್ಲ ಏಕೀಭವಿಸಿ ಕೆಲಸ ಮಾಡಬೇಕಾಗಿದೆ. ಅದರಲ್ಲೂ ಮುಖ್ಯವಾಗಿ ಬರಹಗಾರರು ಪ್ರಕಾಶಕ ಮತ್ತು ಓದುಗರ ನಡುವೆ ಮಧುರ ಸಹಕಾರ ಭಾವನೆ ಬೆಳೆಯಬೇಕಾದರೆ ನಮಗೆ ತೋರುವ ಏಕೈಕ ಮಾರ್ಗ 'ಲೇಖಕರ ಸಹಕಾರ ಪ್ರಕಾಶನ'ವನ್ನು ಪ್ರಾರಂಭಿಸುವುದೇ ಆಗಿದೆ. ಇದನ್ನು ನಾವು ಸಾಧಿಸುವುದಾದರೆ ಲೇಖಕನಿಗೆ ಯೋಗ್ಯ ಸಂಭಾವನೆ ಓದುಗರಿಗೆ ಸುಲಭ ಬೆಲೆಯಲ್ಲಿ ಪುಸ್ತಕ ನೀಡಲು ಸಾಧ್ಯವಾಗಿ ಪ್ರಕಟಿಸಲಾದ ಕೃತಿಗಳನ್ನು ತ್ವರಿತವಾಗಿ ಮಾರಾಟ ಮಾಡಲು ವ್ಯವಸ್ಥೆ ದೊರೆತಂತಾಗುತ್ತದೆ.

ಸಹಕಾರ ಪ್ರಕಾಶನ

ಈ ಪ್ರಕಾಶನ ಮಾಧ್ಯಮ ನಮ್ಮ ನಾಡಿನಲ್ಲಿ ಪ್ರಾರಂಭವಾಗಿ ಬಹುಕಾಲವಾಗಬೇಕಾಗಿತ್ತು. ನೆರೆ ರಾಜ್ಯವಾದ ಕೇರಳದ ಲೇಖಕ ಬಂಧುಗಳು ಪ್ರಾರಂಭಿಸಿದ ಕೆಲವೇ ದಿನದಲ್ಲಿ ಬೆಂಗಳೂರಿನಲ್ಲೂ ಪ್ರಾರಂಭಿಸಬೇಕೆಂಬ ಉದ್ದೇಶ

ದಿಂದ ಶ್ರೀ ನಿರಂಜನ, ಶ್ರೀ ಬಾಲೂರಾವ್, ಶ್ರೀ ಎಂ. ಎಸ್. ಭಾರದ್ವಾಜ್ ಇವರುಗಳು ತಮ್ಮ ಪ್ರಾಮಾಣಿಕ ಪ್ರಯತ್ನ ಮಾಡಿದರಾದರೂ ಕಾರ್ಯಮುಖವಾಗಲಿಲ್ಲ. ಆದರೆ ಅಂದು ಬಂದ ಈ ಭಾವನೆ–ಹಾಗೂ ಹೊಸ ಲೇಖಕರಿಗೆ ಉಂಟಾಗಿದ್ದ ನಿರುತ್ಸಾಹದ ಪರಿಸ್ಥಿತಿ–ನಂದದೇ ಬೆಳೆದುಬಂದು ಇತ್ತೀಚೆಗೆ ಕೆಲವು ಲೇಖಕ ಮಿತ್ರರು ಒಂದಾಗಿ ಸಹಕಾರಿ ಪ್ರಕಾಶನವನ್ನು ನಡೆಸುತ್ತಿರುವುದು ಶ್ಲಾಘನೀಯವಾದ ಸಂಗತಿಯಾಗಿದೆ. ಈ ದಿಶೆಯಲ್ಲಿ ಕಳೆದ ಒಂದು ವರ್ಷದಿಂದ ಕೆಲಸ ಮಾಡಿರುವ ಬೆಂಗಳೂರಿನ ಲೇಖಕರ ಸಹಕಾರಿ ಪ್ರಕಾಶನ ಮತ್ತು ಕರ್ಣಾಟಕ ಸಹಕಾರಿ ಪ್ರಕಾಶನ ಸಂಸ್ಥೆ (ನಿಯಮಿತ), ಮಾನಸ ಗಂಗೋತ್ರಿಯ ಜಾನಪದ ಬಳಗ–ಇವುಗಳನ್ನು ಹೆಸರಿಸಬಹುದಾಗಿದೆ.

ನನ್ನ ಕಲ್ಪನೆಯ ಪ್ರಕಾರ ಇಂಥ ಸಹಕಾರಿ ಪ್ರಕಾಶನ ನಾಡಿಗೆಲ್ಲಾ ಒಂದೇ ಇದ್ದರೆ ಒಳ್ಳೆಯದಲ್ಲವೆ? ಎಂಬ ಭಾವನೆ ಬರುವುದಾದರೂ ಮತ್ತೆ ಈ ಸಂಸ್ಥೆಯೂ ಪ್ರಸಿದ್ಧಿ ಪಡೆದ ಲೇಖಕರ ಸ್ವತ್ತಾಗಬಹುದು ಎಂಬ ಸಂದೇಹ ತರುಣ ಬರಹಗಾರರಿಗೆ ಬರುವುದು ಸಹಜ. ಆದ್ದರಿಂದ ಪ್ರತಿಯೊಂದು ಜಿಲ್ಲಾ ಮಟ್ಟದಲ್ಲೂ ಒಂದೊಂದು ಲೇಖಕರ ಸಹಕಾರ ಪ್ರಕಾಶನಗಳನ್ನು ಸ್ಥಾಪಿಸುವುದು ಆದರಣೀಯವಾಗುತ್ತದಲ್ಲದೆ ನಮ್ಮ ಕಾರ್ಯ ಸುಗಮವಾಗಲು ಸಹಾಯಕವಾಗುತ್ತದೆ.

ಕೇಂದ್ರ ಸಂಸ್ಥೆಯ ಕರ್ತವ್ಯ

ಎಲ್ಲ ಜಿಲ್ಲಾ ಸಹಕಾರಿ ಪ್ರಕಾಶನಗಳಲ್ಲೂ ಪುಸ್ತಕಗಳನ್ನು ನಿರ್ದಿಷ್ಟ ಸಂಖ್ಯೆಯಲ್ಲಿ ಹೊರತರುವಂತೆ ಹತೋಟಿ ಇಟ್ಟುಕೊಳ್ಳುವುದು, ಪ್ರತಿಕೃತಿಗೂ ಬೆಲೆ ನಿಗದಿ ಮಾಡುವುದು (ಏನೇ ಕಾರಣ ಯಾವುದೇ ಕೃತಿಯಾದರೂ ಪುಟ ೧ಕ್ಕೆ ೧ ಪೈಸೆ ಮೀರದಂತೆ ದರ ನಿಗದಿಗೊಳಿಸುವುದು)

ಪ್ರತಿ ಪ್ರಕಾಶನಕ್ಕೂ ನಿರ್ದಿಷ್ಟ ಕಾಲದಲ್ಲಿ ಅವುಗಳು ಹೊರತರುವ ಕೃತಿಗಳನ್ನು ಅಚ್ಚು ಮಾಡಿಸಿಕೊಡುವುದು.

ಲೇಖಕರಿಗೆ ಸೂಕ್ತ ಸಂಭಾವನೆ ದೊರೆತಿದೆಯೆ ಇಲ್ಲವೆ ಎನ್ನುವುದರ ಬಗೆಗೆ ಎಚ್ಚರಿಕೆ ವಹಿಸುವುದು.

ಪ್ರತಿ ಕೃತಿಯ ಐದು ಸಾವಿರ ಪ್ರತಿಗಳನ್ನು ಕೇಂದ್ರ ಸಂಸ್ಥೆ ಕೊಂಡು ಕೊಂಡು ಅದರ ಮಾರಾಟದ ವ್ಯವಸ್ಥೆ ಮಾಡುವುದು.

ಇದಕ್ಕಾಗಿ ಕೇಂದ್ರ ಸಂಸ್ಥೆ ಪ್ರತಿ ಪುಸ್ತಕದ ಬೆಲೆಯ ಮೇಲೆ ಶೇ ೨೫ರಂತೆ ಕಮಿಷನ್ ಪಡೆಯುವುದು.

ಜಿಲ್ಲಾ ಸಹಕಾರಿ ಪ್ರಕಾಶನದ ಕರ್ತವ್ಯ

ತನ್ನ ಜಿಲ್ಲೆಯ ಲೇಖಕರ ಉತ್ತಮ ಕೃತಿಗಳನ್ನು ಪ್ರಕಟಿಸುವುದು ಮಾತ್ರ ಪ್ರತಿ ಜಿಲ್ಲೆಯ ಸಹಕಾ[ರಿ] ಪ್ರಕಾಶನದ ಕರ್ತವ್ಯವಾಗಿರಬೇಕು.

ಪ್ರತಿ ಲೇಖಕನಿಗೂ ಶೇ ೫೦ರಂತೆ ಸಂಭಾವನೆ ಕಡ್ಡಾಯವಾಗಿ ಕೊಡಬೇಕು.

ಪ್ರತಿ ಕೃತಿಯನ್ನು ೫ ಸಾವಿರ ಪ್ರತಿಗಳಿಗೆ ಕಡಿಮೆ ಇಲ್ಲದಂತೆ ಪ್ರಕಟಿಸಬೇಕು.

ವರ್ಷಕ್ಕೆ ೪ ಕೃತಿಗಳಿಗಿಂತ ಹೆಚ್ಚಾಗಿ ಪ್ರಕಟಿಸ ಬೇಕಾದಲ್ಲಿ ಕೇಂದ್ರ ಸಂಸ್ಥೆಯ ಅನುಮತಿ ಪಡೆದುಕೊಳ್ಳಬೇಕು.

ತನ್ನ ಜಿಲ್ಲೆಯಲ್ಲಿ ೫ ವರ್ಷಗಳ ಯೋಜನೆ ರೂಪಿಸಿಕೊಂಡು ಆ ಕಾಲದಲ್ಲಿ ಕಡಿಮೆ ಎಂದರೆ ೫೦೦ ಜನ "ಮನೆಗೊಂದು ಪುಸ್ತಕ ಭಂಡಾರ" ಹೊಂದುವ ಸದಸ್ಯರನ್ನು ಮಾಡಬೇಕು. ಜಿಲ್ಲೆಯಲ್ಲಿರುವ ಪ್ರತಿ ಲೇಖಕನನ್ನು ಸಂಸ್ಥೆಗೆ ಷೇರುದಾರನನ್ನಾಗಿ ಮಾಡಲೇಬೇಕು.

ಪ್ರತಿ ಷೇರು ಮೊಬಲಗು ೧೦೦ ರೂಗಳಿದ್ದು ಓರ್ವ ಲೇಖಕ ಎಷ್ಟು ಷೇರುಗಳನ್ನು ಬೇಕಾದರೂ ಪಡೆಯುವ ಸೌಲಭ್ಯವಿರಬೇಕು.

ನೂರು ರೂಗಳನ್ನು ಒಟ್ಟಾಗಿ ಕೊಡಲು ಶಕ್ತಿ ಇಲ್ಲದವರಿಗೆ ನಾಲ್ಕು ಕಂತುಗಳಲ್ಲಿ ಕೊಡಲು ಅವಕಾಶವಿರಬೇಕು.

ಜಿಲ್ಲಾ ಸಹಕಾರಿ ಪ್ರಕಾಶನ ಸಂಗ್ರಹಿಸುವ ಷೇರು ಬಂಡವಾಳ ಮತ್ತು "ಮನೆಗೊಂದು ಪುಸ್ತಕ ಭಂಡಾರ"ದ ಯೋಜನೆಯ ಸದಸ್ಯರ ಹಣ ನೇರವಾಗಿ ಕೇಂದ್ರ ಸಂಸ್ಥೆಗೆ ಸಲ್ಲಿಸಿ ತಮ್ಮ ವಾರ್ಷಿಕ ಯೋಜನೆಗೆ ಅನುಗುಣವಾಗಿ ಆರ್ಥಿಕ ನೆರವನ್ನು ಪಡೆದುಕೊಳ್ಳಬಹುದು.

ಒಂದು ಪಕ್ಷ ಲೇಖಕ ವರ್ಗದಲ್ಲಿ ಸಾಕಷ್ಟು ಸಂಖ್ಯೆ[ಯ]ತರು ಷೇರುದಾರರಾಗಲು ಸಾಧ್ಯವಿಲ್ಲದಿರುವ ಎಡೆಗಳಲ್ಲಿ ಸಾಹಿತ್ಯಾಭಿಮಾನಿಗಳನ್ನು ಷೇರುದಾರರನ್ನಾಗಿ ಪಡೆಯ[ಲು] ಬಹುದು.

ಇದೆಲ್ಲಕ್ಕಿಂತ ಹೆಚ್ಚಾಗಿ ಪ್ರತಿ ಜಿಲ್ಲೆಯಲ್ಲಿರುವ ಪ್ರೌಢ ಶಾಲೆಗಳವರೂ ಅವರಲ್ಲಿ ಉಳಿದಿರುವ ಸಂಚಿತ ನಿಧಿ (ಅಕ್ಯುಮ್ಯುಲೇಟೆಡ್ ಫಂಡ್)ಯಿಂದ ೧೦೦ ರೂ.ಗ

ರರಾಗಲು ಅವಕಾಶವಿರಬೇಕು.

ವ್ಯವಸ್ಥೆ

ಜಿಲ್ಲೆಯ ಸಹಕಾರಿ ಪ್ರಕಾಶನಕ್ಕೂ ೧೦೦ ರೂ. ತೆ ಕೊಡುವ ೧೦೦ ಜನ ಸದಸ್ಯರೂ, ಮನೆ ಪುಸ್ತಕ ಭಂಡಾರ ಯೋಜನೆ ಸಿಗುವ ೫೦೦ ಸ್ಯರೂ ನಮಗೆ ದೊರೆತರೆ ನಮ್ಮ ಆರ್ಥಿಕ ಸಮ ್ನ ಪರಿಣಾಮಕಾರಿಯಾಗಿ ಎದುರಿಸಬಹುದು. ಬಗೆ ಳ್ಳಬಹುದು.

ಕರಾಗಿರುವವರು (೧೦೦ ರೂ. ಷೇರುಧನ) ೨೦ ಸಾಹಿತ್ಯ ಪ್ರೋತ್ಸಾಹಕ ವರ್ಗದಿಂದ ೨೦ ಅಕ್ಯುಮ್ಯುಲೇಟೆಡ್‌ನಿಂದ ೧೦೦ ರೂ. ಷೇರು ನ ೬೦ ಶಾಲೆಗಳೂ ದೊರೆತರೆ ಸಾಕು.

ಜಿಲ್ಲೆಯಲ್ಲೂ ನೂರಾರು ಪ್ರೌಢಶಾಲೆಗಳಿದ್ದು, ಲೆಯಲ್ಲೂ ಸಂಚಿತ ನಿಧಿ ಸಾಕಷ್ಟಿರುತ್ತದೆ. ಇಲಾಖೆ, ಇಂಥ ಸಂಚಿತ ನಿಧಿಯಿಂದ, ಪುಸ್ತಕ ಫೋಟೋಗಳು, ಹಾಗೂ ಶಾಲೆಗೆ ಬೇಕಾದ ವಸ್ತುಗಳನ್ನು ಕೊಳ್ಳಲು ವಿಶೇಷ ಅಧಿಕಾರವನ್ನು ನೀಡುತ್ತಿರುತ್ತದೆ. ಈ ನಿಧಿಯಿಂದ ಆಯಾ ಲೇಖಕ ಸಹಕಾರಿ ಪ್ರಕಾಶನಕ್ಕೆ ೧೦೦ ರೂ.ಗಳ ಕೊಡಲೇಬೇಕು ಎಂದು ಒಂದು ಆದೇಶವನ್ನು ಷೇರು ಸಂಗ್ರಹಿಸಲು ಕಷ್ಟವಾಗುವುದಿಲ್ಲ. ಗಿ ೬೦ ಶಾಲೆಗಳೂ ಗರಿಷ್ಟವಾಗಿ ಎಷ್ಟು ಶಾಲೆ ಕಾದರೂ ಈ ಷೇರುದಾರರಾಗಲು ಅವಕಾಶ ಜಿಲ್ಲಾ ಸಹಕಾರಿ ಪ್ರಕಾಶನಕ್ಕೆ ಶಕ್ತಿ ಬರುತ್ತದೆ. ಶೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಮವಹಿಸಿದರೆ ಈ ಕೆಲಸ ಕಷ್ಟವಾಗುವುದಿಲ್ಲ. ಯೇ ಇದರಿಂದ ಶಾಲೆಗಳಿಗಾದರೂ ಪ್ರತಿ ವರ್ಷದ ಜಿಲ್ಲಾ ಸಹಕಾರಿ ಪ್ರಕಾಶನದಿಂದ ಪ್ರಕಟ ಗ್ರಂಥಗಳು ಶಾಲೆಯ ಪುಸ್ತಕ ಭಂಡಾರಕ್ಕೆ ವುದರಿಂದ, ಷೇರು ಮೊಬಲಗು ದಂಡವಾಗುವು ವಿದ್ಯಾ ಇಲಾಖೆ ಈ ಬಗೆಗೆ ಹೆಚ್ಚು ಚಿಂತಿಸದೇ ಸಹಕಾರ ನೀಡಲು ಸಾಧ್ಯವಿದೆ. ಇದು ಇಡೀ ನುಡಿ ಏಳ್ಗೆಗೆ ಸಹಾಯ. ಸರ್ಕಾರವಾದರೂ ಲಾಖೆಗೆ ಸೂಕ್ತ ನಿರ್ದೇಶನ ಕೊಡಲು ಅವಕಾಶ

ಇದರೊಂದಿಗೆ ಪ್ರತಿ ಜಿಲ್ಲೆಯೂ ಮನೆಗೊಂದು ಪುಸ್ತಕ ಭಂಡಾರದ ಯೋಜನೆಯನ್ನು ರೂಪಿಸಿಕೊಳ್ಳುವುದು ಅತ್ಯಗತ್ಯವಾಗಿದೆ.

ಅದಕ್ಕಾಗಿ ಪ್ರತಿ ಜಿಲ್ಲೆಯಲ್ಲಿರುವ ಎಲ್ಲಾ ಪಂಚಾಯ್ತಿ ಗಳಲ್ಲೂ ಪುಸ್ತಕ ಭಂಡಾರ ಯೋಜನೆ ಇರುವುದರಿಂದ, ತಿಂಗಳಿಗೆ ೧೦ ರೂ ಗಳನ್ನು ೧೦ ತಿಂಗಳಲ್ಲಿ ೧೦೦ ರೂ. ಗಳನ್ನು ಕೊಡುವ ಇಲ್ಲವೇ ಒಟ್ಟಾಗಿ ಕೊಡುವ ಯೋಜನೆ ಮಾಡಬೇಕು.

ಇದರೊಂದಿಗೆ ವಯಸ್ಕರ ಶಿಕ್ಷಣ ಸಮಿತಿ ಪುಸ್ತಕ ಭಂಡಾರಗಳೂ ರಾಜ್ಯಾದ್ಯಂತ ಇವೆ. ಅವುಗಳಿಗೂ ಈ ಯೋಜನೆಯಲ್ಲಿ ಪುಸ್ತಕ ಸರಬರಾಜು ಮಾಡುವ ವ್ಯವಸ್ಥೆ ಆದರೆ ಅನುಕೂಲ ಹೆಚ್ಚು.

ಪ್ರತಿ ತಿಂಗಳು ೧೦ ರೂ.ಗಳನ್ನು ಕೊಟ್ಟು ೧೦ ತಿಂಗ ಳಲ್ಲಿ ೧೦೦ ರೂ ಗಳನ್ನು ಕೊಡಬಲ್ಲ ಸಾಹಿತ್ಯಾಭಿಮಾನಿ ಗಳನ್ನು ಪ್ರತಿ ಜಿಲ್ಲಾ ಸಹಕಾರಿ ಪ್ರಕಾಶನ ಸಂಗ್ರಹಿಸ ಬೇಕು. ಅಂಥವರನ್ನು ಹಾಗೂ ಮೇಲ್ಕಂಡ ಪಂಚಾಯಿತಿ, ವಯಸ್ಕರ ಶಿಕ್ಷಣ ಸಮಿತಿ ಇವರುಗಳನ್ನು ಈ ಯೋಜ ನೆಗೆ ಅಳವಡಿಸಿಕೊಳ್ಳಬಹುದು.

ಅಂಕಿ ಅಂಶಗಳು

ಪ್ರತಿ ಜಿಲ್ಲೆಯಲ್ಲೂ ೧೦೦ ರೂ.ಗಳ ೧೦೦ ಷೇರು ದಾರರನ್ನಾದರೂ ಮಾಡಿದರೆ, ಅದರಿಂದ ೧೦,೦೦೦ ರೂ. ಗಳ ಷೇರು ಬಂಡವಾಳ ಸಂಗ್ರಹವಾಗುತ್ತದೆ. ಈ ಷೇರು ಬಂಡವಾಳಕ್ಕೆ ೧೦ರಷ್ಟು, ಸಹಕಾರ ಸಂಘಗಳ ಕಾಯಿದೆ ಪ್ರಕಾರ, ಸರ್ಕಾರ ಸಾಲ ಸೌಲಭ್ಯ ನೀಡಲು ಅವಕಾಶ ಇದೆ.

ಅಂದರೆ ಪ್ರತಿ ಜಿಲ್ಲೆಗೂ ೧ ಲಕ್ಷ ೧೦,೦೦೦ ರೂ.ಗಳು, ನಿರ್ವಹಣಾ ವೆಚ್ಚಕ್ಕೆ ದೊರೆಯುವಂತಾಗುತ್ತದೆ.

ಅಂದರೆ ಕೇವಲ ಷೇರು ಬಂಡವಾಳವೊಂದರಿಂದಲೇ ೧೯ ಜಿಲ್ಲೆಗಳಿಂದ ೧೯-೨೦ ಲಕ್ಷ ರೂಗಳನ್ನು ಸಹಕಾರ ಪ್ರಕಾಶನ ಕೇಂದ್ರ ಸಂಸ್ಥೆ ತನ್ನ ಪ್ರಾರಂಭಿಕ ಬಂಡವಾಳ ವಾಗಿ ಹೊಂದಲು ಸಾಧ್ಯವಿದೆ.

ಈ ೨೦ ಲಕ್ಷ ರೂ.ಗಳ ಬಂಡವಾಳದಲ್ಲಿ ಕೇಂದ್ರ ಮುದ್ರಣಾಲಯಕ್ಕೆ ೧೦ ಲಕ್ಷ ರೂ.ಗಳನ್ನು, ನಿರ್ವಹಣಾ ಬಂಡವಾಳವಾಗಿ ೧೦ ಲಕ್ಷ ರೂ.ಗಳನ್ನು, ಹೊಂದಿ ಕಾರ್ಯ ಕ್ರಮ ಪ್ರಾರಂಭಿಸಬಹುದು.

ಕೇಂದ್ರ ಸಹಕಾರಿ ಮುದ್ರಣಾಲಯ

ಎಲ್ಲ ಜಿಲ್ಲೆಗಳ ಸಹಕಾರ ಪ್ರಕಾಶನದ ಪರವಾಗಿ ಸಕಾಲಕ್ಕೆ ಮುದ್ರಣ ಮಾಡಿಕೊಡಲು ಒಂದು ಕೇಂದ್ರ ಮುದ್ರಣಾಲಯವನ್ನು ಪ್ರಾರಂಭಿಸಬೇಕು. ಅದರ ಕೆಲಸ ಕೇವಲ ಸಹಕಾರಿ ಪ್ರಕಾಶನಗಳ ಕೃತಿಗಳನ್ನು ಅಚ್ಚುಮಾಡಿಕೊಡುವುದು ಮಾತ್ರ.

ಇದಕ್ಕೆ ಮೂಲ ಬಂಡವಾಳವಾಗಿ ೧೯ ಜಿಲ್ಲೆಗಳಿಂದ ಸಂಗ್ರಹಿತವಾಗುವ ಷೇರು ಮೊಬಲಗಿನ ಶೇಕಡ ಅರ್ಧದಷ್ಟನ್ನು ಬಳಸಿಕೊಳ್ಳಬೇಕು. ಈ ಮೂಲಕ ಅತ್ಯಂತ ಆಧುನಿಕವಾದ ಮುದ್ರಣಾಲಯವನ್ನು ವ್ಯವಸ್ಥೆ ಮಾಡಬಹುದಾಗಿದೆ.

ಮುದ್ರಣಾಲಯವನ್ನು ನಡೆಸಲು

ಓರ್ವ ಮೇಲ್ವಿಚಾರಕನಿಗೆ ತಿಂಗಳಿಗೆ	ರೂ. ೫೦೦
ಓರ್ವ ಲೆಕ್ಕಿಗ ಹಾಗೂ ಖಜಾಂಚಿ	೩೦೦
ಓರ್ವ ಗುಮಾಸ್ತೆ	೧೫೦
೩ ಜನ ಕರಡು ತಿದ್ದುವವರು	
ತಿಂಗಳಿಗೆ ೨೦೦ ರೂ.ಗಳಂತೆ	೬೦೦
ಒಬ್ಬ ಜವಾನ	೧೨೦
೧೦ ಜನ ಕಂಪೋಸಿಟರುಗಳು	
(ತಲಾ ಸರಾಸರಿ ೧೫೦ ರೂ.ನಂತೆ)	೧,೫೦೦
೨ ಪ್ರಿಂಟರ್ಸ್ ೨೦೦ ರೂ.ನಂತೆ	೪೦೦
೨ ಜನ ಬೈಂಡರ್ಸ್ ೧೫೦ರಂತೆ	೩೦೦
೨ ಸಹಾಯಕರು ೮೦ ರಂತೆ	೧೬೦
ಬಾಡಿಗೆ ಹಾಗೂ ಇತರೇ ವ್ಯವಸ್ಥೆಗಳಿಗಾಗಿ	೯೭೦
ಒಟ್ಟು ತಿಂಗಳ ವೆಚ್ಚ	೫,೦೦೦

ಕಾರ್ಯವಿಧಾನ

೩೬೫ ದಿನದಲ್ಲಿ ಭಾನುವಾರದ ರಜೆ (೫೨) ಹಬ್ಬಹರಿದಿನಗಳ ರಜೆ (೧೫) ಪ್ರತಿ ತಿಂಗಳು ಪಡೆಯುವ ರಜಾ ಹಾಗೂ ಅನಾರೋಗ್ಯದಿಂದ ಆಗುವ ಗೈರುಹಾಜರಿ ಇವುಗಳಿಂದಾಗಿ ವರ್ಷದಲ್ಲಿ ಒಟ್ಟಿನಲ್ಲಿ ಕೆಲಸವಿಲ್ಲದ ದಿನ ೧೦೦ ಎಂದು ಭಾವಿಸಿದರೂ ಉಳಿದ ೨೬೫ ದಿನಗಳಲ್ಲಿ ದಿನ ೧ಕ್ಕೆ ಓರ್ವ ಕಂಪೋಸಿಟರ್ ೮ ಪುಟಗಳನ್ನು ಕಂಪೋಸ್ ಮಾಡಿದರೆ ಒಂದು ವರ್ಷದಲ್ಲಿ ೨೧,೨೦೦ ಪುಟಗಳು ಕಂಪೋಸ್ ಆಗುತ್ತದೆ.

ಮುದ್ರಣದ ಕೊರತೆ ಮತ್ತಿತರ ಕೊರತೆಗಳಿಂ
೧,೨೦೦ ಪುಟಗಳನ್ನು ಕಳೆದರೂ, ೨೦ ಸಾವಿರ
ಗಳನ್ನು ಕಂಪೋಸ್ ಮಾಡಬಹುದು.

ಇಬ್ಬರು ಪ್ರಿಂಟರ್‌ಗಳು ಗಂಟೆಗೆ ೪,೦೦೦ ವೇಗ
೧೬ ಪುಟದ ೫ ಫಾರಂ ೫,೦೦೦ ಪ್ರತಿಗಳನ್ನು ಮು
ಸಲು ೬-೧೫ ಗಂಟೆ ಸಾಕು. ಬೇಡ, ೮ ಗಂಟೆ ಪೂರ್ತಿಯ
ಕೊಟ್ಟರೂ ೧ ದಿನಕ್ಕೆ ಕಂಪೋಸಾದ ೮೦ ಪುಟ
ಅಚ್ಚಾಗಬಲ್ಲದು. ಅಂದರೆ ೧ ವರ್ಷದಲ್ಲಿ ೨೦೦ ಪುಟ
೧೦೦ ಪುಸ್ತಕಗಳನ್ನು ಮುದ್ರಣಾಲಯ ಹೊರ ಕೊ
ಸಾಧ್ಯತೆ ಇದೆ.

ಈ ಆಧಾರದ ಮೇಲೆ ೨೦೦ ಪುಟದ ೧೦೦ ಪು
ಗಳನ್ನು ಒಂದು ವರ್ಷದಲ್ಲಿ ಅಚ್ಚು ಮಾಡಿದರೆ–

೧ ಪುಟಕ್ಕೆ ೫,೦೦೦ ಪ್ರತಿಗೆ ೪ ರೂ.ನಂತೆ	
ಮುದ್ರಣದಿಂದ ೨೦,೦೦೦ ಪುಟಕ್ಕೆ	ರೂ. ೮೦,೦
ಮುದ್ರಣಾಲಯಕ್ಕೆ ಬೇಕಾದ	
ಕಾಗದವನ್ನು ಒಟ್ಟಾಗಿ ಕೊಳ್ಳುವುದರಿಂದ	
(ಅಂದರೆ ಸುಮಾರು ೮,೦೦೦	
ರೀಮುಗಳನ್ನು) ಗನ್ನಿ ಬ್ಯಾಗಿನಿಂದ	
(೧,೬೦೦ ಗನ್ನಿಬ್ಯಾಗ್ ಒಂದಕ್ಕೆ	
೪೦ ಪೈಸೆ)	೬
ಬೈಂಡಿಂಗ್ ವಿಭಾಗದಿಂದ ೧ ಪುಸ್ತಕದ	
೫,೦೦೦ ಪ್ರತಿಗೆ ೨೫೦ ರೂ.ನಂತೆ	
೧೦೦ ಪುಸ್ತಕಕ್ಕೆ	೨೫,೦
ಮುಖಪುಟ ಮುದ್ರಣಕ್ಕೆ ಪುಸ್ತಕ	
ಒಂದಕ್ಕೆ ೧೦೦ ರೂ.ನಂತೆ	೧೦,೦
ಒಟ್ಟು ಆದಾಯ	೧,೧೫,೬
ಇದರಲ್ಲಿ ತಿಂಗಳಿಗೆ	೫,೦೦೦ ಖರ್ಚ
ವರ್ಷಕ್ಕೆ	೬೦,೦೦೦ ರೂ.
ಮುದ್ರಣ ವಿಭಾಗದಿಂದ	
ವಾರ್ಷಿಕ ವರಮಾನ	೧,೧೫,೬
ಖರ್ಚು	೬೦,೦
ನಿವ್ವಳ ಆದಾಯ	೫೫,೬

ಅಂದರೆ ಪ್ರತಿ ತಿಂಗಳಿಗೆ ೪,೫೦೦ ರೂ.ಗಳ ಆದಾ
ಪಡೆಯಬಹುದು.

ಕೆಲಸ ಪೂರ್ಣವಾಗಿ ಇರುವುದರಿಂದ ಯಾವು
ಕಾರಣಕ್ಕಾಗಿ ನಷ್ಟ ಸಂಭವಿಸುವ ಸಾಧ್ಯತೆ ಇಲ್ಲ.

ಒಂದು ಪುಟಕ್ಕೆ ಕೇವಲ ಒಂದು ಪೈಸೆಯಂತೆ

ಲೆ ನಿಗದಿ ಮಾಡಬಹುದು.

ತೆ

ರ್ರಿನ್ ಅಷ್ಟದಳಾಕೃತಿ
ಗದ ೫,೧೦೦ ಪ್ರತಿಗೆ
ವ ಕಾಗದ (ವೇಸ್ಟೇಜ್ ಸೇರಿ)
ರೀಮ್ ಬೆಲೆ ರೀಮಿಗೆ

ತ್ತೆ ರೂ. ೨,೩೨೭
ಸಿಂಗ್ ಮತ್ತು ಪ್ರಿಂಟಿಂಗ್
೩ ಪುಟಕ್ಕೆ ೪ ರೂ. ನಂತೆ ೮೦೦
ಗ್ ೨೫೦
ಪುಟ ಮುದ್ರಣಕ್ಕೆ ೧೦೦
ಪುಟದ ಕಾಗದಕ್ಕೆ ೨೮೪
ರ್‌ಗೆ ೪ ರೂ. ನಂತೆ
ಜನ್‌ಗೆ) ೨೮೪
ರೂ. ೨,೬೬೧
ಕೇವಲ ೫,೦೦೦ ಪ್ರತಿಗಳ ಲೆಕ್ಕ
ಗ ೧ ಪ್ರತಿಗೆ ಉತ್ಪಾದನಾ ವೆಚ್ಚ ೩೪ ಪೈಸೆ
ನಿಗೆ ಶೇ. ೨೦ರಂತೆ ಸಂಭಾವನೆ
ಗೆ) ೪೦
ಸಂಸ್ಥೆಗೆ ವ್ಯಾಪಾರ ಸೋಡಿ
ರಂತೆ ೫೦
ರಂತೆ ಇತರೆ ಸಣ್ಣ ಖರ್ಚುಗಳಿಗೆ ೬
ನ ಸಂಸ್ಥೆಗೆ ಲಾಭ ಶೇ. ೧೫ ೩೦
ಒಂದು ಪುಸ್ತಕದ ಬೆಲೆ ರೂ. ೨

ವ್ಯವಸ್ಥೆಯಿಂದ ಉತ್ತಮ ಮುದ್ರಣ ವ್ಯವಸ್ಥೆ—ದ ವಿನ್ಯಾಸ ಸುಲಭವಾದ ದರದಲ್ಲಿ ಓದುಗರಿಗೆ , ಸಂಭಾವನೆ ಇದಿಷ್ಟನ್ನು ಸಾಧಿಸಬಹುದಾಗಿದೆ. ಮುಖ್ಯವಾದ ಮಾರಾಟ ವ್ಯವಸ್ಥೆ ಏನು ಎಂಬ ಚಾರ ಮಾಡಿದರೆ ನನ್ನ ಕರ್ತವ್ಯ ಮುಗಿದಂತಾಗು

ಟ ವ್ಯವಸ್ಥೆ

ನು ವರ್ಷಕ್ಕೆ ೧೯ ಜಿಲ್ಲಾ ಲೇಖಕರ ಸಹಕಾರಿ ನದಿಂದ ಹೊರಬರುವ ಒಟ್ಟು ಕೃತಿಗಳು ೧೦೦. ಕೃತಿಯ ಮುದ್ರಣ ಸಂಖ್ಯೆ ೫,೧೦೦ ಪ್ರತಿಗಳು.

೪ ವರ್ಷದ ಯೋಜನೆಯೊಂದನ್ನು ನಾವು ರೂಪಿಸಿಕೊಂಡಾಗ ೪ ವರ್ಷದಲ್ಲಿ ಒಟ್ಟು ಮುದ್ರಣವಾಗುವ ೪೦೦ ಪುಸ್ತಕಗಳ ಒಟ್ಟು ಪ್ರತಿ ೨೦,೪೦,೦೦೦.

ಇದರಲ್ಲಿ ಪ್ರತಿ ಕೃತಿಯ ಲೇಖಕರಿಗೂ ೧೦ ಉಚಿತ ಪ್ರತಿಗಳನ್ನು ಕೊಡುವುದಕ್ಕಾಗಿ ಬೇಕಾಗುವ ಪ್ರತಿಗಳು ೪,೦೦೦

ಪತ್ರಿಕೆಗಳಿಗೆ ವಿಮರ್ಶೆಗೆ ಇತ್ಯಾದಿ ಉಚಿತ
ಪ್ರತಿ. ಪ್ರತಿ ಒಂದಕ್ಕೆ ೧೦ ಪ್ರತಿಗಳು. ೪,೦೦೦

ಮುದ್ರಣ ಕಾಯಿದೆ ಪ್ರಕಾರ ಕೊಡ
ಬೇಕಾದ ಉಚಿತ ಪ್ರತಿ ೪,೦೦೦

ಪ್ರತಿ ಪ್ರಕಾಶನದಲ್ಲೂ ಕಾಯ್ದಿರಿಸಬೇಕಾದ
ಅದರ ಪ್ರಕಟಿತ ಕೃತಿ ೫ ಪ್ರತಿಯಂತೆ ೨,೦೦೦

ಒಟ್ಟು ಪ್ರತಿಗಳು ಉಚಿತವಾಗಿ ಹಂಚ
ಬೇಕಾದುದು ೧೪,೦೦೦

ಒಟ್ಟು ಮುದ್ರಣವಾಗುವ ೨೦,೪೦,೦೦೦ ಪುಸ್ತಕದಲ್ಲಿ ಇದನ್ನು ಕಳೆದಾಗ ಉಳಿಯುವ ಸಂಖ್ಯೆ ೨೦,೨೬,೦೦೦ ಪ್ರತಿಗಳು.

ಇದರಲ್ಲಿ ಪ್ರತಿ ಜಿಲ್ಲೆಯಲ್ಲೂ ಇರುವ ೧೦೦ ಜನ ಷೇರುದಾರರಿಗೆ ಅಂದರೆ ೧,೯೦೦ ಜನರಿಗೆ ಕೊಡಬೇಕಾಗುವ ಪ್ರತಿಗಳು ಪ್ರತಿ ವರ್ಷಕ್ಕೆ ೮ ಕೃತಿಗಳಂತೆ ೪ ವರ್ಷ ಕೊಡಬೇಕಾಗುವುದು. ೬೦,೮೦೦

ಇದನ್ನು ಕಳೆದಾಗ ನಮಗೆ ನೇರವಾಗಿ
ಮಾರಾಟಕ್ಕೆ ಸಿಗುವ ಪ್ರತಿಗಳು ಎಂದರೆ ೧೯,೬೫,೨೦೦

ಪ್ರತಿ ಪ್ರತಿಯ ಮುಖ ಬೆಲೆ
೨ ರೂ. ನಂತೆ ೧೯,೬೫,೨೦೦ ಪ್ರತಿಗಳ
ಬೆಲೆ ರೂ. ೩೯,೩೦,೪೦೦

ಇದರಲ್ಲಿ ಉತ್ಪಾದನಾ ವೆಚ್ಚ
(ಪ್ರತಿ ಕೃತಿಯ ೫,೧೦೦ ಪ್ರತಿಗೆ)
೪೦೦ ಕೃತಿಗಳಿಗೆ ರೂ. ೧೪,೭೨,೮೦೦

ಲೇಖಕರ ಸಂಭಾವನೆಗೆ
(ಶೇ. ೨೦ರಂತೆ) ರೂ. ೮,೦೦,೦೦೦

ವ್ಯಾಪಾರಿ ಕಮಿಷನ್
(ಶೇ. ೨೫ರಂತೆ) ರೂ. ೯,೮೭,೬೦೦

೧೯ ಪ್ರಕಾಶಕರ ಒಟ್ಟು ಲಾಭ ರೂ. ೬,೭೫,೦೦೦

ನಾಲ್ಕು ವರ್ಷಗಳ ಯೋಜನೆ ಪೂರ್ಣಗೊಂಡಾಗ ಪ್ರತಿ ಸಹಕಾರಿ ಪ್ರಕಾಶನ ವಿಭಾಗಕ್ಕೂ ಉಳಿವ ನಿವ್ವಳ

ನಫೆ ೩೫,೫೫೫ ರೂ.ಗಳು.

೪ ವರ್ಷಗಳಲ್ಲಿ ೧೯ ಜಿಲ್ಲೆಗಳಿಂದ ಮಾರಾಟವಾಗ ಬೇಕಾದ ಹೊಣೆಗಾರಿಕೆ ಇರುವ ಪ್ರತಿಗಳು ೧೯,೬೫,೨೦೦.

ಇವುಗಳನ್ನು ೪ ವರ್ಷಗಳಲ್ಲಿ ಮನೆಗೊಂದು ಪುಸ್ತಕ ಭಂಡಾರದ ಯೋಜನೆಯಲ್ಲಿ ಮಾರಾಟ ಮಾಡಬಹುದು.

ಇದಕ್ಕಾಗಿ ಪ್ರತಿ ಜಿಲ್ಲೆಯಲ್ಲೂ ೧೦೦ ರೂ.ಗಳ ೫೦ ಪುಸ್ತಕಗಳನ್ನು ಮನೆಗೊಂದು ಪುಸ್ತಕ ಭಂಡಾರದ ಯೋಜನೆಯಲ್ಲಿ ಪಡೆಯುವ ೫೨೫ ಜನ ಸದಸ್ಯರನ್ನು ಪ್ರತಿ ವರ್ಷ ಮಾಡಬೇಕು. ವರ್ಷದಲ್ಲಿ ಕಡೇಪಕ್ಷ ೫೦೦ ಜನರು ಈ ಯೋಜನೆಗೆ ದೊರೆತಲ್ಲಿ ನಾಲ್ಕು ವರ್ಷದಲ್ಲಿ ೨,೦೦೦ ಜನ ಸದಸ್ಯರಾಗಿ ಜಿಲ್ಲೆಯೊಂದರಿಂದ ಒಂದು ಲಕ್ಷ ರೂ. ಪುಸ್ತಕಗಳು ಮಾರಾಟವಾಗುತ್ತವೆ. ಅಂದರೆ ೧೯ ಲಕ್ಷ ರೂ. ಪುಸ್ತಕಗಳು ವಿತರಣೆಯಾಗಿ ಉಳಿದ ೬೫,೨೦೦ ಪ್ರತಿಗಳ ಮಾರಾಟಕ್ಕೆ, ಸರ್ಕಾರ (ಒಟ್ಟು ಕೊಳ್ಳುವ ವ್ಯವಸ್ಥೆ ಮೂಲಕ) ಕೇಂದ್ರ ಗ್ರಂಥಾಲಯಗಳು ಇವುಗಳ ನೆರವನ್ನು ಪಡೆಯಬಹುದು.

ಮನೆಗೊಂದು ಪುಸ್ತಕ ಭಂಡಾರದ ಈ ಯೋಜನೆಯನ್ನು ನಾನಿಲ್ಲಿ ದೀರ್ಘವಾಗಿ ಲಂಬಿಸಲು ಅವ[ಕಾಶ]ವಿಲ್ಲದ್ದರಿಂದ ಸೂಕ್ಷ್ಮವಾಗಿ ಹೇಳುವುದಾದರೆ, ೧೦ ... ಗಳನ್ನು ೧೦ ತಿಂಗಳಲ್ಲಿ ಕೊಡುವ ೫೦೦ ಜನ ಸದಸ್ಯ... ಗಳನ್ನು ಪ್ರತಿ ವರ್ಷ ಕೂಡಿಸಬೇಕು. ಇದಕ್ಕಾಗಿ ... ಜಿಲ್ಲೆಯ ಪಂಚಾಯಿತಿಗಳು, ವಯಸ್ಕರ ಶಿಕ್ಷಣ ಸ... ಪುಸ್ತಕ ಭಂಡಾರಗಳು, ಯುವಕ ರೈತ ಮಂಡಲಿ ಪು... ಭಂಡಾರಗಳು, ಹಾಗೂ ಸಾಹಿತ್ಯಾಭಿಮಾನಿಗಳ... ಸದಸ್ಯರನ್ನಾಗಿ ಮಾಡಿಕೊಳ್ಳಬಹುದು.

ಈ ಸದಸ್ಯತ್ವ ವರ್ಷದ ಮೊದಲ ಆರು ತಿಂಗಳಿನ... ಸಂಗ್ರಹಿಸುವ ವ್ಯವಸ್ಥೆ ಮಾಡಿಕೊಂಡರೆ, ೧೫ ತಿಂಗಳ... ನಮಗೆ ಎಲ್ಲ ಸದಸ್ಯರಿಂದಲೂ ಪೂರ್ಣ ಹಣ ಸಂದಾ... ವಾಗುವಂತಾಗುತ್ತದೆ.

ಈ ನಾಲ್ಕು ವರ್ಷದ ಯೋಜನೆ ಪೂರ್ಣವಾಗಿ ಕಾ... ಗತ ಮಾಡಿದರೆ ನಮ್ಮ ರಾಜ್ಯದಲ್ಲಿನ ವಿದ್ಯಾವಂ... ಸಂಖ್ಯೆ ಶೇ. ೧೦ ಎಂದು ಭಾವಿಸಿದರೂ, ಮೂರ... ಒಂದು ಭಾಗದಷ್ಟು ಜನರಿಗೆ ಪುಸ್ತಕಗಳನ್ನು ತಲುಪಿ... ದಂತಾಗುತ್ತದೆ.

ಓದಿನೊಳಲ್ಲದೆಯಿಹಪರ
ಸಾಧನ ಸಂಪತ್ತುಮಾಗದದು ಕಾರಣದಿಂ
ಓದುವುದು ಸಕಲಶ್ರುತಮಂ
ಭೇದಿಸಲಳವಪ್ಪುದಲ್ತೆ ಚೂಡಾರತ್ನ.

ಮನೆಗೊಂದು ಪುಸ್ತಕ ಭಂಡಾರ ಯೋಜನೆಯಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ಪಾತ್ರ

● ಪಿ. ಎನ್. ಜವರಪ್ಪಗೌಡ

ನೈ ಇಲ್ಲದವನು ಪಶುವಿಗೆ ಸಮಾನ ಎಂಬ ಲೋಕೋಕ್ತಿಯಿದೆ. ಪ್ರಾಣಿ ವರ್ಗಕ್ಕಿಂತ ಮನುಷ್ಯವರ್ಗಕ್ಕೆ ಶ್ರೇಷ್ಠತೆ ಇರುವುದು ಅವನಿಗಿರುವ ಜ್ಞಾನದಿಂದ. "ನಹಿ ಜ್ಞಾನೇನ ಸದೃಶಂ" ಎಂದರೆ ಜ್ಞಾನಕ್ಕೆ ಸಮನಾದದ್ದು ಇನ್ನೊಂದಿಲ್ಲ. ಜ್ಞಾನವೇ ಎಲ್ಲಕ್ಕೂ ಮೂಲ. ಜ್ಞಾನ, ನು ಅಪಹರಿಸದ ಧನ. ಐಶ್ವರ್ಯ, ಕಳ್ಳನ ಪಾಲಾಗ ದು. ಇಲ್ಲವೇ ಐಶ್ವರ್ಯವಂತನು ತನ್ನಲ್ಲಿರುವ ರ್ಯವನ್ನು ಅವಿವೇಕದಿಂದ ಹಾಳು ಮಾಡಿಕೊಳ್ಳ ದು. ಒಮ್ಮೆ ಸರಸ್ವತಿಗೂ ಮತ್ತು ಲಕ್ಷ್ಮಿಗೂ ವಾದ ಏರ್ಪಟ್ಟಾಗ ಸರಸ್ವತಿಯ ಕೈ ಮೇಲಾದು ಕೇಳಿದ್ದೇನೆ.

ದ್ದರಿಂದ ಜ್ಞಾನ ಅಕ್ಷಯಪಾತ್ರೆಯಿದ್ದಂತೆ. ಜ್ಞಾನ ಮಾಡಿದ ಹಾಗೆ ಜ್ಞಾನದ ಅಕ್ಷಯಪಾತ್ರೆ ಭರ್ತಿ ಗುತ್ತಾ ಹೋಗುವುದು. ಜ್ಞಾನ ವೃದ್ಧಿಯಾಗುವುದು. ಂದ ಜ್ಞಾನ ಕ್ಷಯಿಸುವ ವಸ್ತುವಲ್ಲ. ಒಂದು ಜ್ಞಾನ ಗೆಯಿಂದ ಅನಂತವಾಗಿ ಅನೇಕ ದೀವಿಗೆಗಳನ್ನು ಬಹುದು.

ನಭಂಡಾರದ ಶೇಖರಣೆ

ಜ್ಞಾನ ಕ್ಷಯಿಸುವ ವಸ್ತುವಲ್ಲವಾದ ಕಾರಣ, ಅದನ್ನು ಲಾಂತರಗಳವರೆವಿಗೂ ಶೇಖರಿಸಬಹುದು. ಜ್ಞಾನ ಶೇಖರಿಸುವ ಸಾಧನೆಗಳಾವುವು ಎಂಬುದನ್ನು ವಿವರಿ ಅಗತ್ಯವಿಲ್ಲ. ಹಿಂದಿನ ಕಾಲಕ್ಕೆ ಶಿಲಾಶಾಸನಗಳು, ರ್ಜ ಪತ್ರಗಳು, ಮಣ್ಣಿನ ಹೆಂಚುಗಳು, ಜ್ಞಾನ ಶೇಖರಣಾ ಸಾಧನಗಳಾಗಿದ್ದುವು. ಕಾಗದ ಮತ್ತು ಅಚ್ಚಿನ ಸೌಕರ್ಯ ಬಂದಮೇಲೆ ಜ್ಞಾನಭಂಡಾರವನ್ನು ಪುಸ್ತಕಗಳ ರೂಪದಲ್ಲಿ ಶೇಖರಿಸುವುದು ಸುಲಭವಾಯಿತು.

೧೯ ಮತ್ತು ೨೦ನೇ ಶತಮಾನಗಳು ಜ್ಞಾನ ಸ್ಫೋಟನಾ ಯುಗಗಳು. ಒಂದು ಕಾಲಕ್ಕೆ ಕೇವಲ ಕೆಲವರು ಮಾತ್ರ ವಿದ್ಯಾವಂತರಾಗುತ್ತಿದ್ದರು. ಅವರೇ ಜ್ಞಾನ ನಿಧಿಗಳಾಗುತ್ತಿದ್ದರು. ಇಂದು ಎಲ್ಲರೂ ವಿದ್ಯಾವಂತರಾಗಲೇಬೇಕು ಎಂಬ ಭಾವನೆ ಬೆಳೆದು ಬಲವಾಗುತ್ತಿದೆ. ಆದ ಕಾರಣ ಶಿಕ್ಷಣ ಕ್ಷೇತ್ರ ವಿಸ್ತಾರವಾಗುತ್ತಿದೆ. ಪುಸ್ತಕ ಭಂಡಾರದ ಸೌಕರ್ಯಗಳು ಹೆಚ್ಚುತ್ತಿವೆ. ವಿಶ್ವದಲ್ಲಿ ನಾನಾ ರಾಷ್ಟ್ರಗಳಲ್ಲಿ ಪುಸ್ತಕ ಭಂಡಾರಗಳ ಸೌಕರ್ಯದ ಬಗ್ಗೆ ಒಂದು ಪಕ್ಷಿನೋಟವನ್ನು ನೋಡೋಣ. ನಾರ್ವೆಯಲ್ಲಿ ಸರಾಸರಿ ತಲಾ ಒಬ್ಬನಿಗೆ 1.3 ಪುಸ್ತಕಗಳು, ಸ್ವೀಡನ್ ಮತ್ತು ಅಮೇರಿಕಾದಲ್ಲಿ ತಲಾ ಸರಾಸರಿ 1.5 ಪುಸ್ತಕಗಳು, ಇಂಗ್ಲೆಂಡಿನಲ್ಲಿ ತಲಾ ಸರಾಸರಿ 1.5 ಕ್ಕೂ ಕಡಿಮೆ ಪುಸ್ತಕಗಳು, ಜರ್ಮನಿಯಲ್ಲಿ 0.3 ಪುಸ್ತಕಗಳು ಇವೆ. ಆದರೆ ಭಾರತದ ಪರಿಸ್ಥಿತಿ ಹೇಗಿದೆ? ಅದು ಲೆಕ್ಕ ಹಾಕಲು ಬರದು. ಹಾಗೂ ಲೆಕ್ಕಾಚಾರದ ಪ್ರಕಾರ ತಲಾ ಸರಾಸರಿ $\frac{1}{50}$ ಭಾಗ ಪುಸ್ತಕದೊರಕುವುದು. ಇದು 8–10 ವರ್ಷಗಳ ಪರಿಸ್ಥಿತಿ. ಇಂದು ಸ್ವಲ್ಪಮಟ್ಟಿಗೆ ಪರಿಸ್ಥಿತಿ ಸುಧಾರಿಸಿರಬಹುದು. ಆದರೂ ಜನತೆಗೆ ಬೇಕಾದ ಪುಸ್ತಕಗಳು ಪ್ರಕಟವಾಗುತ್ತಿಲ್ಲ. ಈ ದಿಸೆಯಲ್ಲಿ ವಯಸ್ಕರ ಶಿಕ್ಷಣ ಸಂಸ್ಥೆಗಳು ಯಥಾಶಕ್ತಿ ಸೇವೆಯನ್ನು ಸಲ್ಲಿಸುತ್ತಿವೆ.

ಅಜಗಜಾಂತರ ವ್ಯತ್ಯಾಸ

ಸರಕಾರಗಳು ಪುಸ್ತಕ ಭಂಡಾರದ ಬೆಳವಣಿಗೆಗೆ ಬಹುಮಟ್ಟಿಗೆ ಸಹಾಯ ಮಾಡುತ್ತಿವೆ. ಇಂಗ್ಲೆಂಡಿನಲ್ಲಿ ಸರಾಸರಿ ತಲಾ ೪ ರೂ. ವರ್ಷಕ್ಕೆ ಖರ್ಚಾಗುವುದು. ಅಮೆರಿಕದಲ್ಲಿ ತಲಾ ಸರಾಸರಿ ೭ ರೂ. ಭಾರತದಲ್ಲಿ ಪ್ರಾಯಶಃ ೦. ೫ ರೂ.ಗಿಂತಲೂ ಕಡಿಮೆ ಖರ್ಚಾಗುತ್ತಿರಬಹುದು. ನಮ್ಮ ದೇಶಕ್ಕೂ ಮತ್ತು ಇತರ ದೇಶಗಳಿಗೂ ಎಷ್ಟರಮಟ್ಟಿಗೆ ಅಜಗಜಾಂತರ ವ್ಯತ್ಯಾಸ ವಿದೆ ಎಂಬುದನ್ನು ಈ ಅಂಕಿಅಂಶಗಳು ಸೂಚಿಸುವುವು.

ಜನತೆಯು ಕೈಯಲ್ಲಿ ಪ್ರಭುತ್ವ

ಭಾರತ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿದೆ. ಇಡೀ ಪ್ರಪಂಚದಲ್ಲಿ ಅತಿ ದೊಡ್ಡದಾದ ಪ್ರಜಾಪ್ರಭುತ್ವವನ್ನು ಹೊಂದಿದೆ. ರಾಜ ಮಹಾರಾಜರು ಆಳಿದರು. ಆದರೆ ರಾಜನ ಅಂಶ ಸಾಮಾನ್ಯ ಜನತೆಯಲ್ಲಿ ಹಂಚಲ್ಪಟ್ಟಿದೆ. ಆದಕಾರಣ ವಯಸ್ಕರು ತಮ್ಮ ಪಾತ್ರವನ್ನು ದಕ್ಷತೆಯಿಂದ ನಿರ್ವಹಿಸಲು ವಿದ್ಯಾವಂತರಾಗಬೇಕು.

ಭಾರತದಲ್ಲಿ 1971ರ ಜನಗಣತಿ ಪ್ರಕಾರ ಶೇಕಡಾ 29.35 ಮಂದಿ ಅಕ್ಷರಸ್ಥರು. ಇವರಲ್ಲಿ ಸಾಕ್ಷರತೆಯ ಮಟ್ಟವನ್ನು ನಿರ್ಧರಿಸಲು ಸಾಕಷ್ಟು ಅಂಕಿ ಅಂಶಗಳು ಸದ್ಯಕ್ಕೆ ಹೊರಬಿದ್ದಿಲ್ಲ ಆದರೆ 1961ರ ಜನಗಣತಿ ಪ್ರಕಾರ ಸಾಕ್ಷರತೆಯ ಮಟ್ಟ ಕೆಳಗೆ ಕಂಡಂತೆ ಇದೆ :

ಗೊತ್ತಾದ ಸಾಕ್ಷರತೆಯ ಮಟ್ಟ	
ಇಲ್ಲದವರು	ಶೇಕಡ 62.9
ಪ್ರಾಥಮಿಕ ಶಾಲಾ ಮಟ್ಟದವರು	ಶೇಕಡ 29.4
ಮೆಟ್ರಿಕ್ಯುಲೇಷನ್ ಮತ್ತು ಮೇಲ್ಪಟ್ಟವರು	ಶೇಕಡ 7.8

ಈ ಅಂಕಿ ಅಂಶಗಳು ಭಂಡಾರದ ಯೋಜನೆಯ ದೃಷ್ಟಿಯಿಂದ ಆಗತ್ಯವಾಗಿವೆ.

ಭಾರತದ ಜನತೆಯಲ್ಲಿ ಅಗಾಧ ಪ್ರಮಾಣದಲ್ಲಿ ಇರುವ ಅನಕ್ಷರತೆ ಮತ್ತು ಅಜ್ಞಾನವನ್ನು ನೀಗಿಸಲು ಶಿಕ್ಷಣ ಕಾರ್ಯ ನಡೆಯುತ್ತಿದೆ. ಈ ಕಾರ್ಯ ಎರಡು ಮುಖವಾಗಿ ನಡೆಯುತ್ತಿದೆ. ಒಂದು ಪ್ರಾಥಮಿಕ ಶಿಕ್ಷಣ, ಎರಡನೆಯದು ವಯಸ್ಕರ ಶಿಕ್ಷಣ. ವಯಸ್ಕರ ಶಿಕ್ಷಣದ ಪ್ರಾಮುಖ್ಯವಾದ ಭಾಗ ನಿರಕ್ಷರತಾ ನಿವಾರಣೆ. ಈ ಕಾರ್ಯವನ್ನು ಭಾರತದಲ್ಲಿ ಸ್ವಾತಂತ್ರ್ಯಕ್ಕೆ ಮುನ್ನ ರಾಜಕೀಯ ದೃಷ್ಟಿಯಿಂದ ಕೈಗೊಂಡರು. ಸ್ವಾತಂತ್ರ್ಯಾನಂತರ ಜನರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಸಾಕ್ಷರತಾ ಕಾರ್ಯಕ್ರಮಗಳು ಪ್ರಾರಂಭವಾದವು. ಈ ಸನ್ನಿವೇಶದ ಹಿನ್ನೆಲೆಯಲ್ಲಿ ಮೈಸೂರು ರಾಜ್ಯದಲ್ಲೂ ಸಹ ವಯಸ್ಕರಲ್ಲಿ ಸಾಕ್ಷರತಾ ಪ್ರಚಾರ ಕಾರ್ಯ ಪ್ರಾರಂಭವಾಯಿತು.

ವಯಸ್ಕರ ಶಿಕ್ಷಣ ಸಮಿತಿ ಕಾರ್ಯ

ಇಂದು ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಅಕ್ಷರ ಪ್ರಚಾರ ಕಾರ್ಯಕ್ರಮದ ಜೊತೆಗೆ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ—ವಿದ್ಯಾಮಂದಿರ, ಪುಸ್ತಕ ಭಂಡಾರ, ಪ್ರಕಟಣೆಗಳು, ಚಲನಚಿತ್ರ ಪ್ರದರ್ಶನ ಮತ್ತು ವಿದ್ಯಾಪೀಠಗಳು. ಆದರೆ ಈ ಎಲ್ಲ ಕಾರ್ಯಕ್ರಮಗಳನ್ನೂ ಸಮಿತಿ ಒಟ್ಟಿಗೆ ಒಂದೇ ಬಾರಿಗೆ ಯೋಜಿತ ರೀತ್ಯಾ ಪ್ರಾರಂಭಿಸಲಿಲ್ಲ. ಮೊದಲಾಗಿ ಈ ಎಲ್ಲ ಕಾರ್ಯಕ್ರಮಗಳ ಯೋಜನೆ ತಯಾರಾಗಿರಲಿಲ್ಲ. ಪರಿಸ್ಥಿತಿಯ ದೆಸೆಯಿಂದ, ಸನ್ನಿವೇಶಗಳ ಒತ್ತಡದಿಂದ ಒಂದಾದ ಮೇಲೊಂದು ಕಾರ್ಯಕ್ರಮಗಳು ಹುಟ್ಟಿಕೊಂಡವು.

ಮೊದಲು ಪ್ರಾರಂಭವಾದದ್ದು ಅಕ್ಷರ ಪ್ರಚಾರ. ಅದೂ ಸಣ್ಣ ಪ್ರಮಾಣದಲ್ಲಿ, ಮೈಸೂರು ನಗರದಲ್ಲಿ. ಮೈಸೂರು ಅರಮನೆ ಇಲಾಖೆಯಲ್ಲಿ ಒಂದೆರಡು ತರಗತಿಗಳು ನಡೆದಿದ್ದವು. ಆದರೆ ವಿದ್ಯಾರ್ಥಿಗಳ ಒತ್ತಡದಿಂದ ಅಲ್ಲಿ ನಾಲ್ಕನೆ ದರ್ಜೆಯ ನೌಕರರಿಗೆ ಪುನಹ ತರಗತಿ ಪ್ರಾರಂಭವಾಯಿತು. ಒಂದು ಬಾರಿ ಸಮಿತಿಯ ತನಿಖಾಧಿಕಾರಿಗಳು ಆ ಶಾಲೆಗೆ ಭೇಟಿ ಕೊಟ್ಟರು. ಶಾಲೆಯ ಕೆಲವು ವಿದ್ಯಾರ್ಥಿಗಳು ಹಿಂದಿನ ತರಗತಿಗಳಲ್ಲಿ ಓದಿದವರಾಗಿ ಕಂಡುಬಂದರು. ಕಾರಣವನ್ನು ವಿಚಾರಿಸಲಾಯಿತು. ಅವರು ಹಿಂದೆ ನಡೆದ ತರಗತಿಗಳಲ್ಲಿ ಓದಿದ್ದು ನಿಜ. ಆದರೆ, ಎಲ್ಲವನ್ನೂ ಮರೆತಿದ್ದರು. ಸಂಸ್ಥೆಯ ಚಾಲಕರಿಗೆ ಯೋಚನೆಗಿಟ್ಟುಕೊಂಡಿತು. ತರಗತಿಗಳಲ್ಲಿ ಕಲಿತ ಓದನ್ನು ಮರೆಯದಂತೆ ಒಂದು ಏರ್ಪಾಡನ್ನು ಮಾಡಲು ಯೋಚಿಸಿದರು. ವಯಸ್ಕರಿಗಾಗಿಯೇ ಪ್ರತ್ಯೇಕ ಪುಸ್ತಕಗಳನ್ನು ಬರೆಸಲು ಉದ್ದೇಶ ಮಾಡಿದರು. ವಯಸ್ಕರ ಆಸಕ್ತಿಯನ್ನು ಕೆರಳಿಸುವಂತಹ ವಿಷಯಗಳ ಮೇಲೆ ಸುಲಭ ಮತ್ತು ಸರಳವಾದಂಥ ಭಾಷೆಯಲ್ಲಿ ಪುಸ್ತಕಗಳನ್ನು ಬರೆಸಿ ಅಚ್ಚು ಮಾಡಿಸಿದರು. ಪ್ರತಿಯೊಂದು ತರಗತಿಯು ಮುಗಿದ ನಂತರ ಇಂತಹ ವಿದ್ಯಾಮಂದಿರದ ಪುಸ್ತಕಗಳನ್ನು ತರಗತಿಗಳ ವಿದ್ಯಾರ್ಥಿಗಳಿಗೆ ಹಂಚಲು ಏರ್ಪಾಟು ಮಾಡಿದರು.

ಾತೆಗೆ ಅವರಿಗಾಗಿಯೇ ಪ್ರತ್ಯೇಕವಾದ ಪತ್ರಿಕೆಯನ್ನು ಕಟಿಸಿದರು. ವಿದ್ಯಾರ್ಥಿಗಳಲ್ಲಿ ಪುಸ್ತಕಗಳನ್ನು ಸುವ ಕುತೂಹಲ ಕೆರಳಿತು. ಅವರ ಕುತೂಹಲಕ್ಕೆ ಕ್ಕಂತೆ ಹೆಚ್ಚಿನ ಪುಸ್ತಕಗಳನ್ನು ಒದಗಿಸುವ ಯೋಜನೆ ಸಾರಾಯಿತು. ಇದೇ ಪುಸ್ತಕ ಭಂಡಾರ ಯೋಜನೆ.

ೊದಲ ಪುಸ್ತಕ ಭಂಡಾರ

ಮೊಟ್ಟಮೊದಲ ಪುಸ್ತಕ ಭಂಡಾರ ಪ್ರಾರಂಭ ದುದು ಮಂಡ್ಯಜಿಲ್ಲೆ, ಕೃಷ್ಣರಾಜಪೇಟೆ ತಾಲ್ಲೂಕು, ಥಲಯ ಗ್ರಾಮದಲ್ಲಿ. ಗ್ರಾಮಸ್ಥರು ಉತ್ಸಾಹದಿಂದ ್ನು ಭಾಗದ ವಂತಿಕೆಯನ್ನು ಪುಸ್ತಕ ಭಂಡಾರ ಸ್ಥಾಪಿ ು ಕೊಟ್ಟರು. ಗ್ರಾಮಸ್ಥರ ಉತ್ಸಾಹಕ್ಕೆ ಅನುಗುಣ ಗಿ ಹೊಸ ಹೊಸ ಪುಸ್ತಕ ಭಂಡಾಗಳನ್ನು ವಯ ರ ಶಿಕ್ಷಣ ಸಮಿತಿ ಪ್ರಾರಂಭಿಸಿತು. ಪ್ರತಿಯೊಂದು ಸ್ತಕ ಭಂಡಾರದ ವ್ಯವಸ್ಥೆಯನ್ನು ನೋಡಲು ೀಯವಾಗಿ ಒಂದು ಸಮಿತಿಯನ್ನು ರಚಿಸಲಾಗಿದೆ. ಮಾನ್ಯವಾಗಿ ಪಂಚಾಯಿತಿಯ ಅಧ್ಯಕ್ಷರೇ ಗ್ರಾಮ ಸ್ತಕ ಭಂಡಾರದ ಸಮಿತಿಯ ಅಧ್ಯಕ್ಷರೂ ಹೌದು.

ಳಿಯುವ ಸಂಸ್ಥೆ

ಪುಸ್ತಕ ಭಂಡಾರ ಬೆಳೆಯುವ ಸಂಸ್ಥೆ. ಪ್ರತಿ ರ್ಷವೂ ಭಂಡಾರದಲ್ಲಿ ಪುಸ್ತಕಗಳು ಹೆಚ್ಚಬೇಕು. ದರೆ ಗ್ರಾಮ ಪುಸ್ತಕ ಭಂಡಾರಗಳು ತಮಗಿರುವ ಇತಿ ಿಯಲ್ಲಿ ಕನ್ನಡದಲ್ಲಿರುವ ಎಲ್ಲ ಪುಸ್ತಕಗಳನ್ನು ಭಂಡಾ ್ಕೆ ಸೇರಿಸಲು ಸಾಧ್ಯವಿಲ್ಲ. ಆದ್ದರಿಂದ ಜಿಲ್ಲಾ ಕೇಂದ್ರ ಲ್ಲಿ ಕೇಂದ್ರ ಪುಸ್ತಕ ಭಂಡಾರಗಳನ್ನು ತೆರೆಯಲಾಗಿದೆ. ್ರಮ ಪುಸ್ತಕ ಭಂಡಾರಗಳು ಕೇಂದ್ರ ಪುಸ್ತಕಭಂಡಾರ ದ ಬೇಕಾದ ಪುಸ್ತಕಗಳನ್ನು ಎರವಲಾಗಿ ಪಡೆ ುವುವು ಪುಸ್ತಕಗಳನ್ನು ಓದಿದ ನಂತರ ಅವುಗಳನ್ನು ಪಸ್ಸು ಮಾಡಿ ಬೇರೆ ಪುಸ್ತಕಗಳನ್ನು ಪಡೆಯಲಾಗು ದು. ಕೆಲವು ಕ್ಷೇತ್ರಗಳಲ್ಲಿ ಗ್ರಾಮಸ್ಥರು ಹೆಚ್ಚಿನ ತ್ಸಾಹವನ್ನು ತೋರಿಸುವರು. ತಾವೇ ತಮ್ಮ ಕ್ಷೇತ್ರ ್ಲಿ ಒಂದು ಕೇಂದ್ರ ಪುಸ್ತಕ ಭಂಡಾರವನ್ನು ಇಟ್ಟು ಳ್ಳಲು ಬಯಸುವರು. ಅಂತಹವರ ಆಸೆಯನ್ನು ನೇರಿಸಲು ಕ್ಷೇತ್ರೀಯ ಪುಸ್ತಕಭಂಡಾರಗಳ ಯೋಜನೆ ನ್ನು ಜಾರಿಗೆ ತರಲಾಗಿದೆ.

ಕೈಗೊಂಡಿರುವ ಕಾರ್ಯಕ್ರಮ

ಇದುವರೆವಿಗೆ ವಯಸ್ಕರ ಶಿಕ್ಷಣ ಸಮಿತಿ ಗ್ರಾಮಾಂತರ ಗಳಲ್ಲಿ ಏರ್ಪಡಿಸಿರುವ ಪುಸ್ತಕ ಭಂಡಾರಗಳ ಸೌಕರ್ಯ ವನ್ನು ಇಲ್ಲಿ ಪ್ರಸ್ತಾಪಿಸಲಾಯಿತು. ಪುಸ್ತಕ ಭಂಡಾರದ ಸೌಕರ್ಯವನ್ನು ಒದಗಿಸಿದರೇ ಸಾಲದು. ಅದರ ಉಪ ಯೋಗ ಜನತೆಗೆ ಆಗಬೇಕು. ಈ ಬಗ್ಗೆ ನಾವು ಏನು ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ ಎಂಬುದನ್ನು ವಿವ ರಿಸುವುದು ಸೂಕ್ತ.

ಕುದುರೆಯನ್ನು ನೀರಿನವರೆವಿಗು ತೆಗೆದುಕೊಂಡು ಹೋಗ ಬಹುದೇ ಹೊರತು ಅದಕ್ಕೆ ನೀರನ್ನು ಕುಡಿಸುವುದು ನಮ್ಮ ಕೈಲಿಲ್ಲ ಎಂಬ ನಾಣ್ಣುಡಿ ಕೇಳಿದ್ದೇವೆ. ಆದರೆ ಇದರಲ್ಲಿ ಒಂದಂಶವನ್ನು ಗಮನಿಸಬೇಕಾದದ್ದು ಅಗತ್ಯ. ಬಾಯಾ ರಿಕೆ ಇಲ್ಲದ ಕುದುರೆಯನ್ನು ನೀರಿಗೆ ತೆಗೆದುಕೊಂಡು ಹೋದರೆ ಏನು ಪ್ರಯೋಜನ? ಹಾಗೆಯೇ ಜನರಲ್ಲಿ ಓದುವ ಆಸಕ್ತಿಯನ್ನು ಕೆರಳಿಸಬೇಕು. ಈ ದೃಷ್ಟಿಯಿಂದ ಕೆಲವು ಕಡೆಗಳಲ್ಲಿ ಪುಸ್ತಕ ಭಂಡಾರದ ಅಧಿಕಾರಿಗಳು ಸಂಜೆಯ ವೇಳೆ ಭಂಡಾರದಲ್ಲಿರುವ ಪುಸ್ತಕಗಳನ್ನು ಗ್ರಾಮದ ಜನಗಳಿಗೆ ಓದಿ ಹೇಳುವರು. ಗ್ರಾಮದ ಜನ ಗಳು ಒಂದೆಡೆ ಇದಕ್ಕಾಗಿ ಸೇರುವರು. ಈ ಪ್ರಯತ್ನ ರಷ್ಯಾ ದೇಶದಲ್ಲಿ ಯಶಸ್ವಿಯಾಗಿ ನಡೆಯಿತೆಂದು ತಿಳಿದು ಬಂದಿದೆ. ಓದುವ ತರಗತಿಗಳಿಗೆ ಬರುತ್ತಿದ್ದ ಅನೇಕ ಅನಕ್ಷ ರಸ್ಥ ವಯಸ್ಕರು ಪ್ರೋತ್ಸಾಹಿತರಾಗಿ ವಯಸ್ಕರ ಶಾಲೆ ಗಳಿಗೆ ಸೇರಿ ಓದುಬರಹ ಕಲಿತರು.

ವಾರ್ಷಿಕೋತ್ಸವಗಳು

ಗ್ರಾಮದ ಜನತೆಯಲ್ಲಿ ಪುಸ್ತಕ ಭಂಡಾರದ ಬಗ್ಗೆ ಪ್ರಚಾರ ಮಾಡಲು ಭಂಡಾರದ ವಾರ್ಷಿಕೋತ್ಸವಗಳನ್ನು ನೆರವೇರಿಸಲಾಗುವುದು. ಗ್ರಾಮಸ್ಥರು ಅಂತಹ ಸಮಾ ರಂಭದಲ್ಲಿ ಭಾಗವಹಿಸಿ, ತಮ್ಮ ಕೈಲಾದ ಕಾಣಿಕೆಯನ್ನು ಪುಸ್ತಕ ಭಂಡಾರದ ನಿಧಿಗೆ ಕೊಡುವರು. ಅನೇಕರು ತಮ್ಮಲ್ಲಿರುವ ಪುಸ್ತಕಗಳನ್ನು ಭಂಡಾರಕ್ಕೆ ದಾನ ಮಾಡುವರು. ವಾರ್ಷಿಕೋತ್ಸವ ಸಮಾರಂಭದಲ್ಲಿ ಪುಸ್ತಕ ಪ್ರದರ್ಶನ ಏರ್ಪಾಡು ಮಾಡಲಾಗುವುದು.

ಸಮಿತಿಯ ಚಲನಚಿತ್ರ ಶಾಖೆಯವರು ಸಮಿತಿಯ ಪ್ರಕಟಣೆಗಳನ್ನು ಹಳ್ಳಿಗಳಲ್ಲಿ ಪ್ರದರ್ಶನ ಮಾಡುವರು. ಜೊತೆಗೆ ಇಷ್ಟವುಳ್ಳ ಗ್ರಾಮಸ್ಥರಿಗೆ ಪುಸ್ತಕಗಳನ್ನು ಮಾರುವರು.

ಭಂಡಾರಕ್ಕೆ ದತ್ತಿಗಳು

ಒಂದು ಕಾಲದಲ್ಲಿ ನಮ್ಮ ಹಿರಿಯರು ಮಠ ಮತ್ತು ದೇವಸ್ಥಾನಗಳಿಗೆ ತಮ್ಮಲ್ಲಿದ್ದುದನ್ನು ದತ್ತಿಯಾಗಿ ಕೊಡುತ್ತಿದ್ದರು. ಈ ಒಂದು ಒಳ್ಳೆಯ ಕಾರ್ಯ ಜ್ಞಾನಭಂಡಾರಗಳ ಅಭಿವೃದ್ಧಿಗಾಗಿ ಆಗಬೇಕು. ಗ್ರಾಮ ಪುಸ್ತಕ ಭಂಡಾರದ ಅಭಿವೃದ್ಧಿಗಾಗಿ ಗ್ರಾಮದ ಜನ ಜಮೀನನ್ನು ಮತ್ತು ಭಂಡಾರವನ್ನಿಡಲು ಕಟ್ಟಡವನ್ನು ಬಿಟ್ಟುಕೊಟ್ಟಿರುವುದನ್ನು ಕೇಳಿದಲ್ಲಿ ಯಾರಿಗಾದರೂ ಆಶ್ಚರ್ಯವಾಗಬಹುದು. ಇದು ಭಂಡಾರದ ಚಳುವಳಿ ಅಭಿವೃದ್ಧಿಯಾಗುವುದರ ಶುಭಸೂಚನೆ. ಇಂತಹ ದತ್ತಿಗಳು ಸಾವಿರಾರು ಸಂಖ್ಯೆಯಲ್ಲಿ ಬರುವ ಕಾಲ ಒದಗಬಹುದು.

ಜನತೆ ತಿಳಿವಳಿಕೆಯುಳ್ಳವರಾಗಬೇಕು. ತಿಳಿವಳಿಕೆಯನ್ನುಂಟುಮಾಡಲು ಪುಸ್ತಕ ಭಂಡಾರಗಳು ಯಥಾಶಕ್ತಿ ಸೇವೆಯನ್ನು ಸಲ್ಲಿಸುತ್ತಿವೆ. ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಜನರಲ್ಲಿ ಜ್ಞಾನದಾಹವನ್ನುಂಟುಮಾಡಿದೆ ಮತ್ತು ಮಾಡುತ್ತಿದೆ. ನಾವು ಮಾಡಿರುವುದು ಅತ್ಯಲ್ಪ. ಮಾಡಬೇಕಾಗಿರುವುದು ಅಗಾಧ. ಇಂದು ದೇಶದಲ್ಲಿ ಕೇವಲ ೨೬೫೦ ಪುಸ್ತಕ ಭಂಡಾರಗಳಿವೆ. ಇವು ಇಮ್ಮಡಿಯಾಗಿ, ನೂರ್ಮಡಿಯಾಗಿ ಪ್ರತಿಯೊಂದು ಮನೆಯೂ ಸಹ ಒಂದೊಂದು ಭಂಡಾರವನ್ನು ಹೊಂದುವಂತಹ ಕಾಲ ಬರಲಿ ಎಂದು ಆಶಿಸುವ.

ಓದುಬರಹ ಕಲಿತರೆ ಸಾಲದು

ವಯಸ್ಕ ಅನಕ್ಷರಸ್ಥರಿಗೆ ಓದು ಬರಹ ಕಲಿಸಿದರೆ ಸಾಲದು. ಅವರು ತಮ್ಮ ಓದನ್ನು ಮುಂದುವರಿಸಿಕೊಂಡು ಹೋಗುವಂತೆ ಅವರಲ್ಲಿ ಕುತೂಹಲವನ್ನು ಕೆರಳಿಸಬೇಕು. ಅವರ ದರ್ಜೆಗೆ ಮತ್ತು ಅಭಿರುಚಿಗೆ ತಕ್ಕುದಾದ ಪುಸ್ತಕಗಳನ್ನು ಪ್ರಕಟಿಸಬೇಕು. ಮಾರುಕಟ್ಟೆಯಲ್ಲಿ ದೊರೆಯುವ ಪುಸ್ತಕಗಳೆಲ್ಲವೂ ಪುಸ್ತಕ ಭಂಡಾರದಲ್ಲಿ ಇಡಲು ಯೋಗ್ಯವಲ್ಲ. ಈ ದೃಷ್ಟಿಯಿಂದ ವಯಸ್ಕರ ಶಿಕ್ಷಣ ಸಮಿತಿ ಪುಸ್ತಕ ಭಂಡಾರ ಮಾಲೆಯಲ್ಲಿ ಈಗಾಗಲೇ ಕೆಲವು ಪುಸ್ತಕಗಳನ್ನು ಪ್ರಕಟಿಸಿದೆ. ಅವುಗಳಲ್ಲಿ ಕೆಲವು ಜನಪ್ರಿಯವಾಗಿ ೩ ಮತ್ತು ೪ ಮುದ್ರಣಗಳನ್ನು ಕಂಡಿವೆ. ಈ ಪ್ರಕಟಣಾ ಕಾರ್ಯವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕೈಗೊಳ್ಳಬೇಕು.

ಗ್ರಾಮಗಳಲ್ಲಿ ಈಗಾಗಲೇ ಪ್ರಾಥಮಿಕ ಶಾಲೆಯಲ್ಲಿ ಓದಿ ವಿದ್ಯಾಭ್ಯಾಸ ಮುಗಿಸಿದವರೂ ಇರುವರು. ಅವರಿಗೂ ಸಹ ಉಪಯುಕ್ತವಾಗುವಂತಹ ಪುಸ್ತಕಗಳು ಸಿಗುವಂತೆ ಭಂಡಾರಗಳಿಗೆ ಪುಸ್ತಕಗಳನ್ನು ಒದಗಿಸಲಾಗುತ್ತಿದೆ. ಹಿಂದಿನ ಕಾಲದಲ್ಲಿ ಸಂಜೆಯ ವೇಳೆ ಜೈಮಿನಿ ಭಾರತ, ರಾಮಾಯಣ, ಮುಂತಾದ ಗ್ರಂಥಗಳನ್ನು ಓದುವ ಪರಿಪಾಠವಿತ್ತು. ಈಗಲೂ ಸಹ ಕಾಲಕ್ಕೆ ತಕ್ಕಂತಹ ಪುಸ್ತಕಗಳನ್ನು ಆಯ್ಕೆ ಮಾಡಿ ಅವುಗಳನ್ನು ಓದುವ ಪರಿಪಾಠ ಪ್ರಾರಂಭವಾಗಬೇಕು. ಗ್ರಾಮದಲ್ಲಿ ಎಲ್ಲರೂ ಅಂದರೆ ಓದು ಬರಹ ಬಂದವರೂ ಮತ್ತು ಬಾರದವರೂ ಸಹ ಅಂತಹ ಪ್ರವಚನಗಳಿಗೆ ಹಾಜರಾಗುವಂತೆ ಏರ್ಪಾಡು ಮಾಡಬೇಕು.

ಇದರಿಂದ ಜನಗಳಿಗೆ ಸುಲಭವಾಗಿ ಜ್ಞಾನಾರ್ಜನೆ ಉಂಟಾಗುವುದು. ಅಲ್ಲದೆ, ಓದುವುದರಲ್ಲಿ ಆಸಕ್ತಿ ಮೂಡಲು ಅನುಕೂಲವಾಗುವುದು.

ದೇಶದ ಮುಂದಾಳುಗಳ ಜಯಂತಿಯನ್ನು ಆಚರಿಸುವ ಸಂದರ್ಭದಲ್ಲಿ ಆ ವ್ಯಕ್ತಿಗಳಿಗೆ ಸಂಬಂಧಪಟ್ಟ ಪುಸ್ತಕಗಳ ಪ್ರದರ್ಶನ ಮಾಡಬೇಕು.

ಜನತೆಯಲ್ಲಿ ಪುಸ್ತಕದ ಬಗ್ಗೆ ಆಸಕ್ತಿ ಹುಟ್ಟಿಸಲು ಅನೇಕ ಮಾರ್ಗಗಳಿವೆ. ಆದರೆ ಅವುಗಳಲ್ಲಿ ಯಾವುದಾದರು ಒಂದೆರಡು ವಿಧಾನಗಳನ್ನು ತೀವ್ರತರನಾಗಿ ಅನುಸರಿಸುವುದು ಒಳ್ಳೆಯದು.

ಸಂಸಾರವೆಂಬ ವಿಷವೃಕ್ಷದಲ್ಲಿ, ಅಮೃತಫಲಗಳೆರಡು. ಅವೆಂದರೆ, ಸಾಹಿತ್ಯದ ಅಧ್ಯಯನ ಹಾಗೂ ಸಜ್ಜನರ ಸಹವಾಸ. ಮಾನವನಲ್ಲಿ ಸಹಜವಾಗಿ ಜ್ಞಾನ ತೃಷೆಯನ್ನು ಪರಿಹರಿಸಿ ಜ್ಞಾನ ಜ್ಯೋತಿಯತ್ತ ಕರೆದೊಯ್ಯುವ ಮಹತ್ವ ಸಾಧನಕ್ಕೆ ಹೆದ್ದಾರಿ ಪುಸ್ತಕ ಭಂಡಾರಗಳು.

...ಂಥಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆ

...ಪ್ರೊ. ಕು. ಶಿ. ಹರಿದಾಸ ಭಟ್ಟ

...ಕ ವ್ಯಾಪಾರದ ದೃಷ್ಟಿಯಿಂದ ಪುಸ್ತಕ ಪ್ರದರ್ಶನ ... ಬಹಳ ಮುಖ್ಯ. ಇವುಗಳು ಆಕರ್ಷಣೀಯವಾ...ದರೆ ಕೆಲವು ಅಂಶಗಳನ್ನು ಗಮನಿಸಬೇಕಾಗು... ಈಗಾಗಲೆ ಸೂಚಿತವಾಗಿರುವ ಸಲಹೆಗಳ ಪಾಲನೆ ...ವ್ಯಾಪಾರವರ್ಧನೆ ಆಗುವುದಾದರೆ ಎಲ್ಲ ಅಂಗಡಿ ... ಅನುಸರಿಸಿಯಾರು; ಆದರೆ ನಮ್ಮಲ್ಲಿ ನೋಡುವ ...ಹೆಚ್ಚು, ಕೊಳ್ಳುವ ಕುಳ ಕಡಿಮೆ. ಆದರೆ ...ನ ಹತ್ತರಲ್ಲಿ ಒಬ್ಬನಾದರೂ ಹೃದಯಪರಿವರ್ತನೆ ...ಂಡು ಕೊಳ್ಳುವ ಗಿರಾಕಿಯಾದರೆ ಅದೇ ಪುಸ್ತಕ ...ನಿಸೀತು.

...ಮುದ್ರಣಕಾರರಿಗೂ ಮಾರಾಟಗಾರರಿಗೂ ಕನಿಷ್ಠ ಪಕ್ಷ ...ಬಂಧವಾದರೂ ಇರಲೇಬೇಕು. ಪ್ರಕಾಶಕ ... ಮಾರಾಟಗಾರ — ಪ್ರಕಾಶಕನ ಗೋಳು ...ನ ಮೇಲೂ ಹಲವು ಬಾರಿ ಪ್ರಭಾವ ಬೀರುವು...

...ಡೆಗೇ ಬೆರಳು

... ಪುಸ್ತಕಗಳ ಮಾರಾಟದ ವ್ಯವಸ್ಥೆ ಅಥವಾ ಅವ್ಯವಸ್ಥೆಗೆ ಮೂಲಕಾರಣವನ್ನು ಶೋಧಿಸಲು ಹೊರಟರೆ ಬೆರಳು ನಮ್ಮ ಕಡೆಗೇ ತಿರುಗುತ್ತದೆ. ನಮ್ಮ ಅಭಿಮಾನ ಶೂನ್ಯತೆಯನ್ನು ತೋರಿಸುತ್ತದೆ. ಕೇರಳೀಯರಿಗಿಂತಲೂ, ತಮಿಳರಿಗಿಂತಲೂ ನಾವು ಈ ವಿಷಯದಲ್ಲಿ ಎಷ್ಟು ಹಿಂದೆ ಬಿದ್ದಿದ್ದೇವೆನ್ನುವುದನ್ನು ಅರಿಕೆ ಮಾಡುತ್ತದೆ. ಇಂಗ್ಲಿಷು ಕಲಿತ ಮಂದಿ, ಆರ್ಥಿಕ ಸಂಪನ್ನವರ್ಗ, ಕೈತುಂಬ ಸಂಬಳವಿದ್ದರೂ ಪುಡಿಕಾಸನ್ನಾದರೂ ಕನ್ನಡ ಗ್ರಂಥಗಳಿಗೆ (ಇಂಗ್ಲಿಷ್ ಗ್ರಂಥಗಳಿಗೂ ಅಷ್ಟೆ—ಪತ್ತೇದಾರಿಗಳನ್ನು ಬಿಟ್ಟರೆ) ಒಗೆಯಲಾರದ ಜನ ಮೊದಲಾಗಿ ನಮ್ಮ ಕಣ್ಣಿಗೆ ಬೀಳುತ್ತಾರೆ. ಇವರೇ ಜನ ನಾಯಕರು, ಸಾರ್ವಜನಿಕ ಅಭಿಪ್ರಾಯವನ್ನು ರೂಢಿಸುವವರಾಗಿರುವುದರಿಂದ ಇಂಥವರ ಆದರ್ಶದಿಂದ ಕನ್ನಡ ಗ್ರಂಥಗಳಿಗೆ ಒಳ್ಳೆಯ ಕಾಲ ಬರುವುದಿಲ್ಲ. ಕನ್ನಡಿಗರಾದ ಇವರ ಹೆಂಡಂದಿರಾದರೂ ವಿರಾಮವೇಳೆಯಲ್ಲಿ ಕಥೆ ಕಾದಂಬರಿಗಳನ್ನೋದುವ ಪರಿಪಾಟ ಇಟ್ಟುಕೊಂಡಿರುವುದು ಒಂದು ಶುಭ. ಆದರೆ ಅವರ ಬೇಡಿಕೆಗೆ ಗ್ರಂಥಾಲಯಗಳಿವೆ; ಸ್ವಂತ ಮನೆಯಲ್ಲಿ ಲೈಬ್ರರಿ ಕಟ್ಟುವ ಯೋಚನೆ ಅವರಿಗೂ ಇಲ್ಲ. ಹೊಸ ಮನೆಯ ಅಂದದ ಬೀರುಗಳಲ್ಲಿ ಗೊಂಬೆ, ವಿದೇಶ ಪ್ರವಾಸದ ಸರಕುಗಳೇ ಮುಂತಾದ ವ್ಯರ್ಥ ಜೀವನದ ಸಂಕೇತಗಳು ತುಂಬಿತುಳುಕುತ್ತವೆಯೇ ಹೊರತು ಕನ್ನಡ ಗ್ರಂಥಗಳು ಅಲ್ಲಿಗೆ ಏರಲಾರವು.

ಕನ್ನಡ ರಾಜಧಾನಿಯ ಸ್ವರೂಪ

ಯಾವುದಾದರೂ ಒಂದು ಭಾಷೆಗೆ ಆ ರಾಜ್ಯದ ರಾಜಧಾನಿ ಒಂದು ಸ್ಫೂರ್ತಿ ಕೇಂದ್ರವಾಗಿ ನಿಲ್ಲಬೇಕು. ಆರ್ಥಿಕ ದೃಷ್ಟಿಯಿಂದಲೂ ಎಲ್ಲ ವ್ಯಾಪಾರಗಳೂ ಇಲ್ಲಿ ಸುಸೂತ್ರವಾಗಿ ಸಾಗಬೇಕು. ದೊಡ್ಡ ವಹಿವಾಟಿನ ಜತೆ ಪುಸ್ತಕ ವ್ಯಾಪಾರದಂಥ ಚಿಲ್ಲರೆ ವಹಿವಾಟಿಗೂ ಅಲ್ಲಿ ಆದ್ಯ ಸ್ಥಾನ ಲಭಿಸಬೇಕು. ಆದರೆ ಕನ್ನಡಿಗರ ರಾಜಧಾನಿಯ ಸ್ವರೂಪವೇ ಬೇರೆ. ಇಲ್ಲಿರುವ ಕನ್ನಡಿಗರ ಸಂಘಟನಾಶಕ್ತಿಯೂ ಕಡಮೆ, ಅವರಲ್ಲಿ ಕನ್ನಡದ ಕುರಿತ ಆಸಕ್ತಿಯೂ ಕಡಮೆ. ಅಭಿಮಾನಿಗಳು ಸಾಕಷ್ಟಿರಬಹುದು. ಆದರೆ ಇಲ್ಲಿನ ಜನಸಂಖ್ಯೆಯ ಪ್ರಮಾಣದಿಂದಾಗಲಿ, ಅಥವಾ ಆರ್ಥಿಕ ಪ್ರಾಬಲ್ಯದ ಪ್ರಮಾಣದಿಂದಾಗಲಿ ಗ್ರಂಥ ಮಾರಾಟದ ಪ್ರಮಾಣವನ್ನು ಅಳೆದರೆ ತೀರಾ ನಿರಾಶೆಯಾಗುತ್ತದೆ. ಇಲ್ಲಿ ಅಥವಾ ಇಂಥಾ ವಿದ್ಯಾರ್ಹತೆ ಇರುವಂಥ ಸ್ಥಾನಗಳಲ್ಲಿ, ಅದೇಕೆ, ವಿಶ್ವವಿದ್ಯಾನಿಲಯದ

ಸುಸಂಸ್ಕೃತರೆನಿಸಿದ ವರ್ತುಲಗಳಲ್ಲಿಯೂ, ಕನ್ನಡಕ್ಕೆ ಗಿರಾಕಿ ಇಲ್ಲ. ಸಂಬಳ ಸಾವಿರವಾದರೂ ಕನ್ನಡಕ್ಕಾಗಿ ಚಿಕ್ಕಾಸು ವ್ಯಯ ಮಾಡಕೂಡದೆಂಬುದೇ ಇಲ್ಲಿನ ಸಾಮಾನ್ಯ ನಿರ್ಧಾರ. ಕನ್ನಡದಲ್ಲೇನಿದೆ ? ಎಂಬ ತಾತ್ಸಾರ ಬುದ್ಧಿ. ತಮ್ಮ ವಿದ್ಯೆಯನ್ನು ಕೇವಲ ಜೀವನೋಪಾಯಕ್ಕಾಗಿ ಬಳಸಿ, ಸಂಸ್ಕೃತಿಯು ಕೆಳಮೆಟ್ಟಲಿನಲ್ಲೇ! ಇರಬಯಸುವ ಡಾಂಭಿಕತೆ (Sriobbery) ರಾಜಧಾನಿಯ ವಿಶಿಷ್ಟ ಕಾಯಿಲೆ, ಅದೂ ಸಾಂಕ್ರಾಮಿಕ.

ರಾಜಧಾನಿಯ ಮಾರುಕಟ್ಟೆ ಒಂದು ಲಭಿಸಿದರೆ ನಮ್ಮ ಗ್ರಂಥ ಪ್ರಕಾಶಕರ ಹೀನಸ್ಥಿತಿ ಮಾಯವಾಗುವುದೆಂಬ ವಿಶ್ವಾಸವುಳ್ಳವನು ನಾನು. ಹತ್ತು ಸಾವಿರ ಜನ ಶ್ರೀಮಂತರಿರುವ ಊರಿನಲ್ಲಿ ಒಂದೈನೂರು ಜನರಾದರೂ ಕನ್ನಡದ ಗಿರಾಕಿಗಳಾದರೆ ಪ್ರಕಾಶಕರ ಶೇಕಡಾ ೫೦ ಸಮಸ್ಯೆ ಪರಿಹಾರವಾಗುತ್ತದೆಂಬ ನಂಬಿಕೆ ನನ್ನದು. ನಿಜವಾಗಿ 'ಮನೆ ಮನೆಗೆ ಸರಸ್ವತಿ' ಹೋಗಬೇಕಾದ್ದೇ ಇಲ್ಲ. ಆದರೆ ಲಕ್ಷ್ಮಿಗೂ ಸರಸ್ವತಿಗೂ ಇರತಕ್ಕ ವೈರದಿಂದಾಗಿ ದ್ವಾರಪ್ರವೇಶವೇ ಕಷ್ಟವಾಗಿಬಿಟ್ಟಿದೆ.

ಹೀಗಾಗಿ ನಮ್ಮ ಪುಸ್ತಕಗಳಿಗೆ ಗಿರಾಕಿ ಇರುವುದು ರಾಜ್ಯದ ಮೂಲೆಮೂಲೆಯ ಹಳ್ಳಿಗಳಲ್ಲಿ. ಎಸ್.ಎಸ್.ಎಲ್.ಸಿ. ಓದಿ ಅಭ್ಯಾಸ ನಿಲ್ಲಿಸಿದವರು, ಅಲ್ಲಿಯವರೆಗೂ ಓದದವರು, ಬೇಸಾಯಗಾರರು, ಬಡ ಉಪಾಧ್ಯಾಯರು, ಗುಮಾಸ್ತರು—ಚದರಿಹೋಗಿರುವ ಇಂಥ ಜನ ತಮ್ಮ ಅಭಿರುಚಿಯ ಗ್ರಂಥಗಳಿಗಾಗಿ ಕಾಯುತ್ತಾರೆ, ಕಾತರಿಸುತ್ತಾರೆ, ದುಡ್ಡು ಕೊಟ್ಟು ತರಿಸುತ್ತಾರೆ. ತಮ್ಮ ಅಲ್ಪ ಆದಾಯದ ಸ್ವಲ್ಪ ಅಂಶವನ್ನು ಕಷ್ಟದಿಂದ ತ್ಯಾಗಮಾಡುತ್ತಾರೆ. ಹೊಟ್ಟೆ ಕಟ್ಟಿ ಪುಸ್ತಕ ಕೊಳ್ಳುತ್ತಾರೆ. ಇಂಥವರೇ ತಮ್ಮ ಕಾದಂಬರಿಗಳ ಗಿರಾಕಿಗಳೆಂದೂ, ಅವರಿಂದಲೇ ತಮ್ಮ ಗ್ರಂಥ ಮಾರಾಟಕ್ಕೆ ಪ್ರೋತ್ಸಾಹವೆಂದೂ ಶಿವರಾಮ ಕಾರಂತರು ಒಂದು ಸಂಬಂಧದಲ್ಲಿ ನನ್ನೊಡನೆ ಪ್ರಸ್ತಾಪಿಸಿದ್ದಾರೆ. ಡಿ.ವಿ.ಜಿ. ಅವರು ಭಗವದ್ಗೀತಾ ತಾತ್ಪರ್ಯ–ಜೀವನ ಧರ್ಮಯೋಗ ಬರೆದಾಗಲೂ ಇಂಥ ಜನ ಸಾಮಾನ್ಯರೆ ತಮ್ಮ ಗ್ರಂಥವನ್ನು ಮೆಚ್ಚಿಕೊಂಡವರು ಎಂದಿದ್ದಾರೆ. ಹೀಗೆಯೇ ಪೇಟೆ–ಪಟ್ಟಣಗಳಲ್ಲಿರುವ ನಮ್ಮ ಮಧ್ಯಮ ವರ್ಗವೂ ವಾಸ್ತವವಾದ ಸಾಂಸ್ಕೃತಿಕ ಜೀವನಕ್ಕೆ ಹಾತೊರೆಯುತ್ತಿರುವುದುಂಟು. ಆದರೆ ಓದುಬರಹ ಬಲ್ಲ, ನಿಜವಾದ ಆಸಕ್ತಿ ಅಭಿಮಾನಿಗಳುಳ್ಳ ಇವರು ಆರ್ಥಿಕ ದೃಷ್ಟಿಯಿಂದ ಸುಧಾಮರಾಗಿರುವುದರಿಂದ ಇವರ ಬೇಡಿಕೆಯಿಂದ ಪ್ರಕಾಶಕನ ಭಾರ ಇಳಿಯುವುದಿ
ಮಾರಾಟಗಾರ ಸಂತೋಷಪಡುವ ಸಂದರ್ಭ ಒದ
ವುದಿಲ್ಲ.

ಪಠ್ಯಪುಸ್ತಕ ರಂಗ

ಇಲ್ಲಿ ನಾನು ಪಠ್ಯಪುಸ್ತಕದ ವಿಭಾಗವನ್ನೇ ಮರೆ
ದ್ದೇನೆ—ಉದ್ದೇಶಪೂರ್ವಕವಾಗಿ ಬಿಟ್ಟಿದ್ದೇನೆ. ಇದ
ಕಡ್ಡಾಯಕ್ಕೆ ಎಲ್ಲರೂ ಮುಗಿಬೀಳುತ್ತಾರೆ ; ಈ ರಂಗದ
ಮಾರಾಟದ ಪ್ರಶ್ನೆಯೇ ಇಲ್ಲ. ಆದರೆ ಪಠ್ಯಗಳ ಸರ್ಕಾರಿ
ಕರಣದಿಂದ, ಗುತ್ತಿಗೆಯ ವಹಿವಾಟಿನಿಂದ ಇತರ ಲಲಿ
ಗ್ರಂಥಗಳ ಪ್ರಕಟನೆಗೆ ಕೊಡಲಿಯೇಟು ಬಿದ್ದಿರುವುದನ
ಹೆಚ್ಚಿನವರು ಗಮನಿಸಿಲ್ಲವಾದ್ದರಿಂದ ಆ ಬಗ್ಗೆ ಎರಡ
ಮಾತು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ (ದಕ್ಷಿ
ಕನ್ನಡ) ಹಿಂದೆ ಹತ್ತಾರು ಜನ ಕನ್ನಡ ಮತ್ತು ವಿಜ್ಞಾ
ಪಠ್ಯಪುಸ್ತಕಗಳ ಪ್ರಕಾಶಕರು ಇರುತ್ತಿದ್ದರು. ಅವ
ಲೇಖಕರು ಏನಾದರೂ ಸೃಜನಶೀಲಸಾಹಿತ್ಯ ನಿರ್ಮಾ
ಮಾಡಿದರೆ ತಮ್ಮ ಪಠ್ಯಕರ್ತರು ಎಂಬ ಭಿಡೆಯಿಂದಲೋ,
ಸ್ನೇಹಾಚಾರಕ್ಕಾಗಿಯೋ ಅಥವಾ ನಿಜವಾದ ಸಾಹಿತ್ಯ
ಸಕ್ತಿಯಿಂದಲೋ ನಾಲ್ಕು ಕಥೆ, ಕವಿತೆ, ನಾಟಕದ
ಪುಸ್ತಕಗಳನ್ನು ಹೊರಡಿಸುತ್ತಿದ್ದರು. ಇವು ಮಾರಾಟ
ವಾಗಲು ಬಹಳ ದಿನ ಹಿಡಿದರೂ, ಪಠ್ಯ ಗ್ರಂಥಗಳ
ಮಾರಾಟ ಈ 'ಕಡ'ವನ್ನು ತುಂಬಿಸಿಕೊಡುತ್ತಿತ್ತು.
ಎಂದಿಗೆ ಪಠ್ಯಗಳ ರಾಷ್ಟ್ರೀಕರಣವಾಯಿತೋ ಅಂದಿಗೆ ಈ
ಪ್ರಕಾಶಕರೆಲ್ಲ ವಿಶ್ರಾಂತರಾಗಬೇಕಾಯಿತು. ಅವ
ಲೇಖಕರ ಸಾಹಿತ್ಯ ಮೂಲೆಪಾಲಾಯಿತು. ಲಾಭದ
ಉದ್ಯಮ ಸರ್ಕಾರ ಮಾಡಬೇಕು, ಬಂಡವಾಳ ಹೂ
ಲಾಭಕ್ಕಾಗಿ ಹತ್ತು ವರ್ಷ ಕಾಯುವ ಉದ್ಯಮ
ಖಾಸಗೀ ಪ್ರಕಾಶಕ ಮಾಡಬೇಕು ಎಂದರೆ ಎಷ್ಟು ದಿನ
ನಡೆದೀತು ? ಪಠ್ಯಗಳು ಸರಕಾರದ ಕೈಗೆ ಹೋದಮೇಲ
ಖಾಸಗೀ ವಲಯ ಸೊರಗಿಹೋಗಿದೆ. ಎಲ್ಲೋ ಕಾವ್ಯಾ
ಲಯದಂಥ ಒಬ್ಬ ಸಾಹಸಿ ವಿವೇಚನೆಯಿಂದ ಗ್ರಂಥಪ್ರ
ಟನೆ, ಮಾರಾಟ ನಡೆಸಿ, ಕಷ್ಟ ಜೀವನ ನಡೆಸಬಹುದು
ಅಥವಾ 'ಸಾಹಿತ್ಯ ಭಂಡಾರ'ದಂಥ ಕೇವಲ ಪಠ್ಯವಲ್ಲದ
ಸಾಹಿತ್ಯ ಗ್ರಂಥಗಳ ಮಾರಾಟಗಾರ ಉಳಿದಿರಬಹುದು
ಉಳಿದ ಪ್ರಕಾಶಕರೆಲ್ಲ ಪ್ರಭಾವಶಾಲಿಗಳ ಕಾಲುಹಿಡಿದ
ವಿಶ್ವವಿದ್ಯಾನಿಲಯ, ಪಠ್ಯಪುಸ್ತಕ ಮಂಡಳಿಗಳ ಕೃಪಾ
ದೃಷ್ಟಿಗಾಗಿ ಕಾಯುವ ಭಕ್ತರಾಗಿದ್ದಾರೆ. ಮಾರಾ

ಲ್ಲ ಕಿರಾಣಿ ಅಂಗಡಿ ಇಡಬೇಕಾಗಿದೆ. (ಕಿರಾಣಿ ಯಲ್ಲಿ ಗ್ರಂಥಗಳನ್ನು ಏಕಿಡಬಾರದು ?—ಅಮೇ DRUG STOREನ ಹಾಗೆ? ಎಂದು ಕೇಳಲೂ ದು.

ಖ್ಯ ಕಾರಣಗಳು

ನ್ಮ ಮಾರಾಟದ ಬಡತನಕ್ಕೆ ನಾಲ್ಕು ಮುಖ್ಯ ಣಗಳನ್ನು ಕೊಡಬಹುದು :

. ಮಾನಸಿಕ : ನಮ್ಮ ವಿದ್ಯಾವಂತ ಗುಂಪಿನ ಸಾಮಾನ್ಯತಃ ಗ್ರಂಥ ವಿಮುಖತೆ, ವಿಶೇಷ ವಾಗಿ ಕನ್ನಡ ಗ್ರಂಥಗಳ ಕುರಿತ ಅನಾದರ.

. ಸಾಮಾಜಿಕ : ಓದುವ ಜನರೆಲ್ಲ ಚೆಲ್ಲಾಪಿಲ್ಲಿ ಗ್ರಾಮಾಂತರಗಳಿಗೆ ಹರಡಿರುವ ಸನ್ನಿವೇಶ. ಮೇಲಂತಸ್ತಿನವರ ಇತರ ಹವ್ಯಾಸಗಳು.

. ಆರ್ಥಿಕ : ೧೯೫೬ನೆ ಇಸವಿಯಿಂದ ಈಚೆಗೆ ಹಣದ ಅತಿ ಪ್ರಸರಣದಿಂದ ನುಗ್ಗಾದ ಬಡ ಮಧ್ಯಮ ವರ್ಗ– ಆಸಕ್ತಿ ಇದ್ದರೂ ಹಣ ತೆರ ಲಾರದಂಥ ವಿಷಮ ಪರಿಸ್ಥಿತಿಗೆ ಸಿಲುಕಿರುವುದ ರಿಂದ ಪುಸ್ತಕಗಳಿಗೆ ಗಿರಾಕಿ ಇಲ್ಲ.

. ನಮ್ಮ ಶಿಕ್ಷಣ ಪದ್ಧತಿ : ಪರೀಕ್ಷೆಯೆ ವಿದ್ಯಾರ್ಥಿ ಜೀವನದ ಗುರಿಯಾಗಿರುವುದರಿಂದ ಪಠ್ಯೇತರ ಪುಸ್ತಕಗಳ ಕಡೆಗೆ ವಿದ್ಯಾರ್ಥಿಯ ಗಮನ ಹರಿಯುವುದಿಲ್ಲ. ನಮ್ಮ ಶಾಲಾ ಕಾಲೇಜುಗಳ ಗ್ರಂಥಾಲಯ ವಾಚನಾಲಯಗಳ ದುಸ್ಥಿತಿ ಯಂತೂ ಶೋಚನೀಯ. ಎಲ್ಲಿ ಯಾವ ವಯಸ್ಸಿನಲ್ಲಿ ವಾಚನಾಭಿರುಚಿ ಬೆಳೆಯ ಬೇಕೋ ಅಲ್ಲಿ ಮುರುಕಲು ಕಪಾಟು ಒಂದೊ ಎರಡೋ ಹರಕಲು ಪುಸ್ತಕಗಳಿಗೆ ಆಶ್ರಯ. ಬೀಗಮುದ್ರೆಯಲ್ಲಿರುವ ಈ ಗ್ರಂಥಗಳಲ್ಲಿ ಹೆಚ್ಚಿ ನವು ಸಂಖ್ಯೆಯ ದೃಷ್ಟಿಯಿಂದ ಕೊಂಡವು. ಸಂಖ್ಯಾಪ್ರಸಾರವೊಂದರಿಂದಲೇ ತೃಪ್ತರಾಗುವ ಸರ್ಕಾರಿ ನಿಯಾಮಕರಿಗೆ ವಾಚನಾಲಯಕ್ಕೆ ಹೆಚ್ಚು ಹಣ ಕೊಡುವುದು ಅನಗತ್ಯವೆನಿಸಿದೆ. ಬುದ್ಧಿ ಬಲಿತ ಹುಡುಗ ಹಾಗೆ ಕಾಲೇಜಿಗೆ ಬಂದರೂ ನೂರಕ್ಕೆ ಹತ್ತರಷ್ಟು ಪಠ್ಯೇತರ ಗ್ರಂಥಗಳ ಕಡೆಗೆ ಆಕರ್ಷಿತರಾಗುವವರು. ಉಳಿ ದವರು ಪಠ್ಯಕೀಟಗಳಾಗಿ, ಡಿಗ್ರಿ ಸಂಪಾದನೆ ಮಾಡಿ ಯಾವುದಾದರೂ ಉದ್ಯೋಗಾನ್ವೇಷ ಣೆಗೆ ಹೊರಡುವ ಸಂಕುಚಿತ ಮನೋಭಾವ ದವರಾಗಿ ಹೊರಬೀಳುತ್ತಾರೆ. ಇವರು ಪುಸ್ತಕ ಪ್ರೇಮಿಗಳಾಗಲಾರರು.

ಕೇರಳದಲ್ಲಿ ಸಾಹಿತ್ಯೋದ್ಯಮ

ಪುಸ್ತಕ ಮಾರಾಟದ ಭರಾಟೆಯಲ್ಲಿರುವ ಕೇರಳದ ಪುಸ್ತಕದಂಗಡಿಗಳನ್ನು ನೋಡಿದರೆ ಸಂತೋಷವಾಗುತ್ತದೆ. ನಮ್ಮ ಬಗ್ಗೆ ನಾಚುಗೆಯೂ ಆಗುತ್ತದೆ. ಮುಖ್ಯ ಲೇಖ ಕರ ಕೃತಿಗಳೆಲ್ಲ ಅಲ್ಲಿ (Colected works) ಸಂಕಲನ, ೧, ೨, ೩ ಹೀಗೆ ಸಾನುಕ್ರಮ ಹೊರಬಿದ್ದಿವೆ. ಅಲ್ಲಿನ ಸಹಕಾರಿ ಪ್ರಕಾಶನ ಸಂಸ್ಥೆ ಒಂದು ವ್ಯಾಪಾರಿ ಸಂಸ್ಥೆ ಯಂತೆ ದಿನವಿಡೀ ಪುಸ್ತಕದ ವಿತರಣೆಯಲ್ಲಿ ನಿರತರಾಗಿರು ವುದನ್ನು ನೋಡಿ ನಿರಂಜನರು ಆಶ್ಚರ್ಯ ವ್ಯಕ್ತಪಡಿಸಿ ದ್ದಾರೆ. ಅಲ್ಲಿ ವಿಶ್ವಕೋಶ ಸಿದ್ಧಪಡಿಸುತ್ತೇವೆ ಎಂಬ ಪ್ರಕಟನೆಗೆ ಉತ್ತರರೂಪವಾಗಿ ೬ ಲಕ್ಷ ರೂಪಾಯಿ ಚಂದಾ ಹಣ ಒಂದು ವರ್ಷದೊಳಗೆ ಜಮೆ ಆಯಿತಂತೆ. ಇಂಥ ಮಂಗಳ ಕನ್ನಡಿಗರಿಗೆ ಎಂದು ಕಾದಿದೆಯೋ ತಿಳಿ ಯದು.

ನಾನು ಈ ಹಿಂದೆ ಹೇಳಿದ ನಾಲ್ಕು ಆತಂಕಗಳನ್ನು ಮೀರಿ ಕೇರಳೀಯರೋ, ತಮಿಳರೋ ಗ್ರಂಥಗಳನ್ನು ಕೊಳ್ಳುವ ಪಕ್ಷದಲ್ಲಿ ನಮ್ಮಲ್ಲಿಯೂ ಏಕಾಗಬಾರದು ? ಈ ಪ್ರಶ್ನೆಗೆ ಈ ವಿಚಾರಗೋಷ್ಠಿಯಲ್ಲಿ ಹಲವು ಪರಿಹಾರ ಸೂಚನೆಗಳು ಬಂದಿವೆ. ಯಥಾಕಾಲ ಇವು ಕೆಲವಾದರೂ ಕಾರ್ಯಗತವಾಗಬೇಕು. ಪರಿಷತ್ತು ಕೂಡಲೆ ೧೯ ಜಿಲ್ಲಾ ಕೇಂದ್ರಗಳಲ್ಲಿ ಪುಸ್ತಕದಂಗಡಿ ತೆರೆಯಬೇಕು. ಎಂ.ಎಸ್. ಆರ್.ಟಿ.ಸಿ.ಯ ಗ್ರಂಥದ ಸಾಲನ್ನು ಸರ್ಕಾರ ಪರಿಷತ್ತಿಗೆ ಮೀಸಲಾಗಿ ಬಾಡಿಗೆ ಇಲ್ಲದೆ ಕೊಡಬೇಕು. ಅಲ್ಲಿನ ಸಿಬ್ಬಂದಿವೆಚ್ಚವನ್ನು ಸರ್ಕಾರ ಕೊಡಲಿ. ಪರಿಷತ್ತು ಆಯಾ ಊರಿನಲ್ಲಿ ಇದುವರೆಗೆ ಕನಿಷ್ಠ ಹತ್ತು ವರ್ಷವಾ ದರೂ ಪುಸ್ತಕ ವ್ಯಾಪಾರ ಮಾಡುವವನನ್ನೇ ಈ ಕೆಲಸಕ್ಕೆ ಆರಿಸಬೇಕು. ಈ ನಷ್ಟದ ಉದ್ದಿಮೆದಾರರನ್ನು ಮೊದ ಲಾಗಿ ಆಯಬೇಕು. ಎಲ್ಲ ಲೇಖಕರ ಐದೈದು ಪ್ರತಿ ಹತ್ತೊಂಬತ್ತು ಅಂಗಡಿಗಳಲ್ಲಿ ಶೋಭಿಸಬೇಕು. ಇದೆಲ್ಲ ಸಂಘಟನೆಯ ಕೆಲಸ. ಪರಿಷತ್ತು ಮತ್ತು ಜಿಲ್ಲಾ ಸಮಿತಿ ಯವರು ಇದಿಷ್ಟನ್ನೇ ಈ ವರ್ಷದ ಕಾರ್ಯಕ್ರಮವೆಂದು ತಿಳಿದರೂ ಸಾರ್ಥಕವಾದ ಕೆಲಸಮಾಡಿದಂತಾಗುತ್ತದೆ.

ಪುಸ್ತಕಪ್ರದರ್ಶನಗಳು

● ಡಾ|| ಪ್ರಭುಶಂಕರ

ಶ್ರೀಮಾನ್ ಜಿ. ಪಿ. ರಾಜರತ್ನಂ ಅವರಿಗೆ ತುಂಬಾ ಪ್ರಿಯವಾದ ಉಪಮೆ ಇದು : 'ಮನೆಯ ಯಜಮಾನ ಔತಣಕ್ಕೆ ಬೇಕಾದ ಸಾಮಗ್ರಿಗಳನ್ನೆಲ್ಲಾ ತಂದುಹಾಕಿದ್ದಾನೆ. ಸೊಗಸಾದ ಅಡಿಗೆಯೂ ಸಿದ್ಧವಾಗಿದೆ. ಹಸಿದವರು ಸಾಲಾಗಿ ಕಾದು ಕುಳಿತಿದ್ದಾರೆ. ಆದರೆ ಬಡಿಸುವುದಕ್ಕೆ ಮಾತ್ರ ಸರಿಯಾದ ಜನ ಇಲ್ಲ. ಹೀಗಾಗಿ ಮಾಡಿದ ಸೊಗಸಾದ ಅಡಿಗೆಯೆಲ್ಲಾ ಹಾಗೇ ತಣ್ಣಗಾಗುತ್ತಿದೆ'. ಕನ್ನಡ ಪುಸ್ತಕಗಳಿಗೆ ಇದು ವಾಸ್ತವವಾಗಿ ಅನ್ವಯಿಸುತ್ತದೆ. ಕಳೆದ ದಶಕಕ್ಕೆ ಹೋಲಿಸಿದರೆ ಈಗ ಪ್ರತಿ ವರ್ಷವೂ ನೂರಾರು ಹೊಸ ಒಳ್ಳೆಯ ಗ್ರಂಥಗಳು ಪ್ರಕಟವಾಗುತ್ತಿವೆ. ಕನ್ನಡ ಸಾಹಿತ್ಯ ಪರಿಷತ್ತು, ನಾಲ್ಕು ವಿಶ್ವವಿದ್ಯಾನಿಲಯಗಳು, ಸಾಹಿತ್ಯ ಅಕಾಡೆಮಿ ಮತ್ತು ಅನೇಕ ಜನ ಸಾಹಸಿಗಳಾದ ಪ್ರಕಾಶಕರು ಇವರೆಲ್ಲರ ಉತ್ಸಾಹದ ಪ್ರಯತ್ನದ ಫಲ ಇಷ್ಟೊಂದು ಒಳ್ಳೆಯ ಪುಸ್ತಕಗಳ ಪ್ರಕಟಣೆ. ಗಾತ್ರ, ಮುದ್ರಣ, ವಿನ್ಯಾಸ, ವಿಷಯ ವೈವಿಧ್ಯ ಈ ಎಲ್ಲ ದೃಷ್ಟಿಗಳಿಂದಲೂ ಬೇರೆ ಯಾವ ದೇಶ ಭಾಷೆಯೂ ತನ್ನ ಸಾಧನೆಯ ಬಗ್ಗೆ ಬಹುಶಃ ಹೆಮ್ಮೆಪಟ್ಟುಕೊಳ್ಳಲು ಸಾಧ್ಯವಿಲ್ಲದಷ್ಟು ಮುಂದಿದೆ ಕನ್ನಡ. ಆದರೆ ಪುಸ್ತಕಗಳ ಮಾರಾಟದ ದೃಷ್ಟಿಯಿಂದ ನಮ್ಮಷ್ಟು ಹಿಂದಿರುವ ಪ್ರಾಂತಗಳು ಭಾರತದಲ್ಲಿ ಬಹಳ ಇರಲಾರವು. ಪ್ರಕಾಶಕರ ಕಡೆಯಿಂದ ಈ ದೋಷ ನಿವಾರಣೆ ಸಾಧ್ಯವೇ ಎಂಬುದನ್ನೂ ಪುಸ್ತಕ ಪ್ರದರ್ಶನಗಳು ಈ ವಿಷಯದಲ್ಲಿ ಎಷ್ಟರಮ[...] ಸಹಾಯಕ ಆಗಬಹುದು ಎಂಬುದನ್ನೂ ಪರಿಶೀಲಿಸು[...] ಮಾತ್ರ ಈ ಬರಹದ ಉದ್ದೇಶ.

ಕನ್ನಡ ಜನರಲ್ಲಿ ಇಂದು ಓದಿನ ಅಭಿರುಚಿಯನ[...] ಪುಸ್ತಕವನ್ನು ಕೊಳ್ಳುವ ಹವ್ಯಾಸವನ್ನೂ ಹೆಚ್ಚಿಸಬೇ[...]ಗಿದೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆ[...] ಇದನ್ನು ಮಾಡುವುದು ಹೇಗೆ ?

ಚಟದ ಪ್ರಭಾವ

ನಾವು ಚಿಕ್ಕವರಾಗಿದ್ದಾಗ ಲಿಪ್ಟನ್ ಕಂಪೆನಿಯವರ[...] ಅಥವಾ ಬ್ರೂಕ್ ಬಾಂಡ್ ಕಂಪೆನಿಯವರೋ ಪ್ರತಿ [...] ಮಧ್ಯಾಹ್ನ ಬೆಂಗಳೂರಿನ ಒಂದು ಮೊಹಲ್ಲಾದಲ್ಲಿ [...] ತಾನೇ ಟೀಯನ್ನು ತಯಾರಿಸಿ ಮನೆಮನೆಗೂ ಹಂ[...]ತ್ತಿದ್ದರು. ಮನೆಯಲ್ಲಿ ಎಷ್ಟು ಜನ ಇದ್ದಾರೆ ಅ[...] ಕಪ್ಪು ಚಹ ಒಂದು ದಿನವೂ ತಪ್ಪದಂತೆ ಉಚಿತವ[...] ದೊರೆಯುತ್ತಿತ್ತು. ಆರು ತಿಂಗಳು ಹೀಗೆ ಒಂ[...] ಮೊಹಲ್ಲಾದಲ್ಲಿ ಚಹಾ ಹಂಚಿದ ಮೇಲೆ ಹಂಚುವವ[...] ಮುಂದಿನ ಮೊಹಲ್ಲಾಕ್ಕೆ ಹೋಗುತ್ತಿದ್ದರು. ಆ ವೇ[...] ಅವರ ಉದ್ದೇಶ ನೆರವೇರಿರುತ್ತಿತ್ತು. ಅದು ಈ ಮೊ[...]ಲ್ಲಾದವರಿಗೆ ಚಹದ ಚಟವನ್ನು ಅಂಟಿಸುವುದ[...] ಸುಮಾರು ಆರು ತಿಂಗಳು ಬಿಟ್ಟು ಚಹ ಕುಡಿದ ಮೇ[...] ಏಳನೆಯ ತಿಂಗಳು ಚಹಾಪುಡಿಯನ್ನು ಖರೀ[...] ಮಾಡಿಯೇ ತೀರಬೇಕಾಗಿತ್ತು.

ಪುಸ್ತಕಗಳ ವಿಷಯಕ್ಕೆ ಈ ಚಟ ಹಿಡಿಸುವ ಅಗ[...] ಈಗ ಬಹಳವಾಗಿದೆ. ಈ ದಿಕ್ಕಿನಲ್ಲಿ ಪುಸ್ತಕ ಪ್ರದರ್ಶ[...]ಗಳು ಮಹತ್ವದ ಪಾತ್ರ ವಹಿಸಬಲ್ಲುವು.

ಪುಸ್ತಕಪ್ರದರ್ಶನ ಹೇಗಿರಬೇಕು ?

ಮೊದಲನೆಯದಾಗಿ ಪುಸ್ತಕಗಳನ್ನು ಕಣ್ಣಿಗೆ ಹ[...]ವಾಗುವಂತೆ ಪ್ರದರ್ಶನ ಮಾಡಬೇಕು. ದಿನಕ್ಕೆ ಒಂದ[...] ಎರಡು ಹೊಸ ಹೊಸ ರೀತಿಯ ಪುಸ್ತಕಗಳು ಬರುತ್ತಿರು[...] ಈ ಕಾಲದಲ್ಲಿ ಯಾವ ಪುಸ್ತಕ ಬಂದಿದೆ ಎನ್ನುವು[...] ಕಣ್ಣಿಗೆ ಬೀಳಬೇಕು. ನನ್ನ ಗುರಿ ಜನ ಪುಸ್ತಕವನ[...] ಕೊಂಡುಕೊಳ್ಳದಿದ್ದರೆ ಹೋಗಲಿ ಅವುಗಳನ್ನು ಕಣ್ಣಿ[...] ನೋಡಬೇಕು. ಅವುಗಳನ್ನು ಮುಟ್ಟಬೇಕು. ಪುಸ್ತ[...]ಸ್ಪರ್ಶದಿಂದ ರೋಮಾಂಚಗೊಳ್ಳುವಂತೆ ಜನಗ[...] ಇಂದ್ರಿಯವನ್ನು ಚುರುಗೊಳಿಸುವುದು ನಮ್ಮ ದೊ[...] ಆಸೆ. ಅನೇಕ ಮನಶ್ಶಾಸ್ತ್ರೀಯವಾದ ಪ್ರಯೋಗಗಳನ[...] ಆಧರಿಸಿದ ವಿಧಾನಗಳನ್ನು ನಾವು ಅವಲಂಬಿಸಬೇಕಾಗಿದ[...]

ರ್ಶನಕ್ಕೆ ಮುನ್ನ

ಯಾವುದೋ ಒಂದು ಊರಿನಲ್ಲಿ ಪುಸ್ತಕ ಪ್ರದರ್ಶನ -ಡಿಸಬೇಕಾಗಿದೆ ಎಂದಿಟ್ಟುಕೊಳ್ಳೋಣ. ಒಂದು ಸ ಚಲನಚಿತ್ರವೋ, ನಾಟಕವೋ, ನೃತ್ಯವೋ ಯಾವುದೋ ಮನರಂಜನೆಯ ಕಾರ್ಯಕ್ರಮವೋ ಗೆ ಬರುವ ಮುನ್ನ ಎಷ್ಟು ವಿಧವಾಗಿ ಪ್ರಚಾರ ಡುತ್ತಾರೆ, ನೆನಪು ಮಾಡಿಕೊಡುತ್ತಾರೆ. ಹಾಗೆಯೇ ಕ ಪ್ರದರ್ಶನ ನಡೆಯುವುದಕ್ಕೆ ಬಹಳ ಮುಂಚಿ ಲೇ ಯಾವುದೋ ಅದ್ಭುತವಾದ ಘಟನೆ ನಡೆಯಲಿದೆ ಂತೆ ಪ್ರಚಾರವನ್ನು ತೀವ್ರವಾಗಿ ನಡೆಸಬೇಕು. , ಮನಸ್ಸು, ಬುದ್ಧಿ ಇಡೀ ಚೇತನ ಇವುಗಳಿಗೆಲ್ಲಾ ವವನ್ನು ತರುವಂತಹ, ಹಿಂದೆ ನಡೆದಿಲ್ಲದ ಮುಂದೆ ಶಃ ನಡೆಯಲಾರದ ಘಟನೆ ನಡೆಯುತ್ತದೆ ಎಂಬಂತೆ ಾರ ಮಾಡಬೇಕು. ಪುಸ್ತಕಗಳು ಒಂದು ಕುಟುಂಬದ ಸ್ಕೃತಿಕ ಮಟ್ಟವನ್ನು ಬಹುಮಟ್ಟಿಗೆ ಮೇಲೇರಿಸು ಮುಂದಿನ ತಲೆಮಾರಿನ ಭವಿಷ್ಯವನ್ನೇ ಬದ ಿಸುತ್ತವೆ ಎಂಬರ್ಥದ ಪ್ರಚಾರ ಸೂತ್ರಗಳನ್ನು ಅವು ಪದೇ ಪದೇ ಕಣ್ಣಿಗೆ ಕಾಣುವಂತೆ, ಕಿವಿಯ ೆ ಬೀಳುವಂತೆ ಮಾಡಬೇಕು. ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗುವುದರ ಜೊತೆಗೆ ಊರಿನ ಮುಖ್ಯ ಕಡೆಗಳಲ್ಲೆಲ್ಲಾ ದಪ್ಪಕ್ಷರದ ಬಣ್ಣಬಣ್ಣದ ಪೋಸ್ಟ ು ಈ ವಿಷಯವನ್ನು ಪದೇ ಪದೇ ಜ್ಞಾಪಿಸುತ್ತಿರ . ಜೊತೆಗೆ ಸಿನಿಮಾ ಮಂದಿರಗಳಲ್ಲೂ ಪ್ರದರ್ಶನಕ್ಕೆ ಂಧಿಸಿದ ಸ್ಲೈಡುಗಳನ್ನು ತೋರಿಸುತ್ತಿರಬೇಕು. ನಲ್ಲಿ ನಡೆಯಲಿರುವ ಪುಸ್ತಕ ಪ್ರದರ್ಶನವನ್ನು ಡದೆ ಹೋದರೆ ತನಗೆ ಮನುಷ್ಯತ್ವವೇ ಹೋಗಿ ಬಿಡು ಎಂಬ ಭಾವನೆ ಜನರಿಗೆ ಬರುವಂತೆ ಮಾಡಬೇಕು.

ಬಹುದಾದ ಪರಿಣಾಮ

ೀಗೆ ವ್ಯಾಪಕವಾಗಿ ಜಾಹೀರಾತು ಮಾಡುವುದರಿಂದ ಕವನ್ನು ಕಣ್ಣಿನಿಂದಲಾದರೂ ನೋಡಿ ಭಾಗ್ಯಶಾಲಿ ಗಬೇಕು ಎಂಬ ಭಾವನೆ ಜನರಿಗೆ ಬಂದು, ನೋಡು ಸಂಖ್ಯೆ ಹೆಚ್ಚಾಗುತ್ತದೆ. ಅಲ್ಲದೆ ಪ್ರದರ್ಶನ ನಡೆ ಪುಸ್ತಕ ಕೊಳ್ಳಲೇಬೇಕೆಂಬ ಆಸೆಯಿಂದ ಮುಂಚಿತ ನಾಲ್ಕು ಕಾಸು ಕೂಡಿಡಲೂಬಹುದು. ಇದು ು ಊಹೆಯಲ್ಲ. ಈ ಹೇಳಿಕೆಗೆ ಸ್ವಲ್ಪಮಟ್ಟಿನ ವೂ ಇದೆ. ಮೈಸೂರಿನವರಿಗೆ ಗೊತ್ತು—ಪ್ರತಿ ವರ್ಷವೂ ನಡೆಯುವ ವಸ್ತುಪ್ರದರ್ಶನದಲ್ಲಿ ಅದು ಕೊಳ್ಳ ಬೇಕು ಇದು ಕೊಳ್ಳಬೇಕು ಎಂದು ಸ್ವಲ್ಪ ಸ್ವಲ್ಪವೇ ಹಣ ಕೂಡಿಡುತ್ತಿದ್ದ ವಿಷಯ. ಪುಸ್ತಕಪ್ರದರ್ಶನಕ್ಕೆ ಮುಂಚೆ ಇಂಥದೇ ಭಾವನೆ ಜನರಲ್ಲಿ ಮೂಡಿ ಹಣ ಕೂಡಿಡಬೇಕು.

ಬೇಕಾಬಿಟ್ಟಿಯಾಗಬಾರದು

ಇನ್ನು ವಸ್ತುಪ್ರದರ್ಶನದ ವಿಷಯಕ್ಕೆ ಬರೋಣ. ಇಷ್ಟು ಆಶೋತ್ತರಗಳನ್ನು ಕೆರಳಿಸಿ ಜನರನ್ನು ನಿರಾಶೆ ಗೊಳಿಸುವಂತಿರಬಾರದು ನಾವು ನಡೆಸುವ ಪ್ರದರ್ಶನ. ತುಂಬ ಬೇಕಾಬಿಟ್ಟಿಯಾಗಿ ಜೋಡಿಸಿರುವ ಪುಸ್ತಕಗಳ ಮಳಿಗೆಗಳನ್ನೇ ನಾವು ಹೆಚ್ಚಾಗಿ ನೋಡುವುದು. ಆ ಮಳಿಗೆಗಳನ್ನು ನೋಡಿದರೆ ಪುಸ್ತಕ ಕೊಳ್ಳುವುದಿರಲಿ, ಅಲ್ಲಿಗೆ ಇನ್ನೊಂದು ಸಲ ಭೇಟಿಕೊಡುವ ಮನಸ್ಸೂ ಆಗು ವುದಿಲ್ಲ. ತುಂಬ ಆಕರ್ಷಕವಾಗಿ ಬಣ್ಣಬಣ್ಣದ ಬಂಟಿಂಗ್, ಬೆಲೂನು, ದೀಪ ಇವುಗಳಿಂದ ಮಳಿಗೆಯನ್ನು ಅಲಂಕರಿಸ ಬೇಕು. ಕಣ್ಣುಮನಸ್ಸುಗಳನ್ನು ಸೆಳೆಯುವಂತೆ ಕಲಾ ತ್ಮಕವಾಗಿ ಪುಸ್ತಕಗಳನ್ನು ಜೋಡಿಸಬೇಕು. ಪುಸ್ತಕ ಗಳನ್ನು ಸಾಮಾನ್ಯವಾಗಿ ಅವುಗಳ ಗಾತ್ರಕ್ಕೆ ತಕ್ಕ ಹಾಗೆ ಶಾಲೆಯಲ್ಲಿ ಸಮವಸ್ತ್ರ ಧರಿಸಿದ ಮಕ್ಕಳನ್ನು ಎತ್ತರಕ್ಕೆ ತಕ್ಕಂತೆ ಕವಾಯತಿಗೆ ನಿಲ್ಲಿಸಿದ ಹಾಗೆ ಇರಬಾರದು. ವಿಷಯಕ್ಕೆ ಸಂಬಂಧಪಟ್ಟ ಹಾಗೆ ಅವುಗಳನ್ನು ಜೋಡಿಸು ವುದು ಉತ್ತಮ. ಇದು ಪುರಾಣಗಳ ಕಾಲವಲ್ಲ. ತಮಗೆ ಬೇಕಾದುದನ್ನು ಪಡೆಯಲು ಹತ್ತಾರು ಸಾವಿರ ವರ್ಷ ತಪಸ್ಸು ಮಾಡಲು ಜನ ಈಗ ಸಿದ್ಧವಾಗಿಲ್ಲ. ಗೊಬ್ಬರದ ವಿಷಯವಾಗಿ ಒಂದು ಪುಸ್ತಕ ಬೇಕಾದರೆ ರಸಾಯನ ಶಾಸ್ತ್ರ ಕರುಳಿನ ಬೇನೆಗಳು ಇತ್ಯಾದಿ ನೂರಾರು ಪುಸ್ತಕ ಗಳನ್ನು ಧಾಟಿಕೊಂಡು ಅವನ ಕಣ್ಣು ಬಳಲಿ ಮನಸ್ಸು ಬೇಸರವಾಗಿ ಹೊರಟು ಹೋಗುವಂತಿರಬಾರದು. ಒಂದು ಮಟ್ಟದ ಜನಕ್ಕಾದರೂ, ತಮಗೆ ಇಂಥ ವಿಷಯದ ಮೇಲೆ ಪುಸ್ತಕ ಬೇಕು, ಅದು ಇಲ್ಲಿದೆಯೆ ಇಲ್ಲವೆ ಎಂಬುದನ್ನು ತಕ್ಷಣ ಕಂಡುಹಿಡಿಯುವ ಆಸೆಯಿರುತ್ತದೆ. ಅವರ ಅಗತ್ಯವನ್ನು ಪೂರೈಸುವಂತಿರಬೇಕು, ನಮ್ಮ ಜೋಡಣೆ.

ಪ್ರದರ್ಶನ ಸಿಬ್ಬಂದಿಯ ಮನೋಧರ್ಮ

ಪ್ರದರ್ಶನದ ಮಳಿಗೆಯನ್ನು ನೋಡಿಕೊಳ್ಳುವುದಕ್ಕಾಗಿ ಒಬ್ಬಿಬ್ಬರು ಅಲ್ಲಿರುತ್ತಾರೆ. ನಾವು ಪ್ರದರ್ಶನದ ಮಳಿಗೆಗೆ ಹೋದರೆ ನಮಗಾಗುವ ಅನುಭವ ಇದು: ಎರಡೋ

ನಾಲ್ಕೋ ಜೊತೆ ಕಣ್ಣುಗಳು ನಾವು ಪ್ರಸಿದ್ಧ ಕೇಡಿ
ಗಳೋ, ನಮ್ಮ ಚಲನವಲನಗಳ ಮೇಲೆ ಕಣ್ಣನ್ನು
ಇಟ್ಟಿರಲೇ ಬೇಕು ಎಂಬಂತೆ ಪೋಲೀಸರಿಂದ ಸೂಚನೆ
ದೊರೆತಿದೆ ಎಂಬಂತೆ ನಮ್ಮನ್ನು ಹಿಂಬಾಲಿಸುತ್ತಿರುತ್ತವೆ.
ಪುಸ್ತಕವನ್ನು ನೋಡೋಣ ಎಂದು ಕೈಗೆ ತೆಗೆದುಕೊಳ್ಳುವ
ವೇಳೆಗೆ 'ರೀ, ಮುಟ್ಟಬೇಡ್ರೀ' ಎಂಬ ಕೂಗು ಕೇಳಿಸು
ತ್ತದೆ. ನಮ್ಮ ಉದ್ದೇಶವೇ ಭಂಗವಾಗಿ ಮನಸ್ಸು
ಕುಗ್ಗಿ ಹೋಗುತ್ತದೆ. ಪುಸ್ತಕವನ್ನು ಕೊಳ್ಳುವ
ಯೋಚನೆಯನ್ನು ಕೈಬಿಟ್ಟು ಇದಕ್ಕಾಗಿ ಉಳಿಸಿದ ಹಣ
ದಲ್ಲಿ ಸೋಪು ಪುಡಿಯನ್ನೋ ಪೇಸ್ಟನ್ನೋ ಕೊನೆಗೆ
ಹುರಿಗಾಳು ಚುರಮುರಿಗಳನ್ನೋ ತೆಗೆದುಕೊಂಡು
ಹೊರಟು ಹೋಗುತ್ತಾನೆ. ನೋಡಲು ಬಂದಿರುವವರೆಲ್ಲ
ಪುಸ್ತಕಗಳನ್ನು ಲಪಟಾಯಿಸುವುದಕ್ಕೆ ಬಂದಿದ್ದಾರೆ ಎಂಬ
ಭಾವನೆ ಅಲ್ಲಿರುವ ಸಹಾಯಕರಿಗೆ ಇರಬಾರದು.

ಸಹಾಯಕರು ಎಂಥವರು ಎಂಬುದು ಬಹು ಮುಖ್ಯ.
ಮೊದಲನೆಯದಾಗಿ ಅವರಿಗೆ ಅಪಾರವಾದ ತಾಳ್ಮೆಯಿರ
ಬೇಕು. ಸೀರೆ ಅಂಗಡಿಯಲ್ಲಿ ಸಹಾಯಕನಿಗೆ ಇರುವ
ತಾಳ್ಮೆ ಅತ್ಯದ್ಭುತ. ಪೂರ್ವದ ಕವಿಗಳಿಗೆ ಇದು ಗೊತ್ತಿ
ದ್ದಿದ್ದರೆ ಅವರು ತಾಳ್ಮೆಯಲ್ಲಿ ಭೂಮಿಯಂತೆ ಎನ್ನುವು
ದನ್ನು ಬಿಟ್ಟು 'ಸೀರೆಯಂಗಡಿಯ ಸಹಾಯಕರಂತೆ'
ಎಂದು ಖಂಡಿತ ವರ್ಣಿಸುತ್ತಿದ್ದರು. ನೂರಾರು ಸೀರೆ
ಗಳನ್ನು ತೆಗೆಸಿ, ಎಲ್ಲವನ್ನೂ ಹಿರಿದು, ಹರಡಿ, ಹಿಂಜಿ,
ಎಳೆಎಳೆಯನ್ನು ಪರೀಕ್ಷಿಸಿ, ಸಾವಿರ ಪ್ರಶ್ನೆಹಾಕಿ ಅವನಿಗೆ
ಉಬ್ಬಸ ಬರಿಸಿ ಏನನ್ನೂ ಕೊಳ್ಳದ್ಕೆಹೋಗುವ ಗಿರಾಕಿಣಿ
ಯರೇ ಹೆಚ್ಚು. ಅವರು ಹೋದಮೇಲೆ ಆ ಸೀರೆಗಳ
ಬೆಟ್ಟದ ಮುಂದೆ ಅವನು ಅಸಹಾಯಕನಾಗಿ ಕುಸಿಯು
ತ್ತಾನೆ. ಆದರೆ ಮುಂದಿನ ಗಿರಾಕಿಣಿ ಪ್ರತ್ಯಕ್ಷವಾದ
ಕೂಡಲೇ ಅವನ ಮುಖದಲ್ಲಿ ಮಿಂಚಿನಂಥ ನಗೆಯು
ಮತ್ತೆ ಪ್ರತ್ಯಕ್ಷವಾಗುತ್ತದೆ. ಹೀಗಿರಬೇಕು ನಮ್ಮ ಪುಸ್ತಕ
ಮಳಿಗೆಯ ಸಹಾಯಕ. ಜನಗಳು ತನ್ನ ಮಳಿಗೆಗೆ ಬಂದಿ
ರುವುದೇ ಮಹಾ ಭಾಗ್ಯದ ವಿಷಯ ಎಂಬ ಭಾವನೆ ಅವ
ನಿಗಿರಬೇಕು. ಅಲ್ಲದೆ ಬರುವವರು ಹಾಕುವ ಪ್ರಶ್ನೆಗಳ
ಸುರಿಮಳೆಯಿಂದ ಚಕಿತಗೊಳ್ಳಬಾರದು, ಬೇಸರ ಪಡ
ಬಾರದು. ತಮಿಳಿನಿಂದ ಕನ್ನಡಕ್ಕೆ ಅನುವಾದವಾದ
'ಹಾಲೂ ಹೆಣ್ಣೂ' ಎಂಬ ಕಾದಂಬರಿಯಲ್ಲಿ ಒಂದು
ಪ್ರಸಂಗ ಬರುತ್ತದೆ. ಅಲ್ಲಿನ ನಾಯಕ ಕನಕಲಿಂಗಂ
ಪುಸ್ತಕದಂಗಡಿಯ ಸಹಾಯಕ. ಒಂದು ಕಡೆ ಪ್ರದರ್ಶನ
ಏರ್ಪಡಿಸಿದ್ದಾನೆ. ಪುಸ್ತಕಗಳನ್ನು ಹರಡಿಕೊಂಡು ಕ
ತಿದ್ದಾನೆ. ಜಾತ್ರೆಗೆ ಬಂದ ಜನರ ನೂಕುನುಗ್ಗಲಿ
ಒಬ್ಬ ಪ್ರತ್ಯಕ್ಷನಾಗುತ್ತಾನೆ. ಹರಡಿದ ಪುಸ್ತಕಗ
ಮೇಲೆ ಹದ್ದಿನ ಕಣ್ಣು ಹಾಯಿಸುತ್ತಾ ಅರ್ಧಗಂಟೆ ನಿಂ
ಕೊನೆಗೆ ಕೇಳುತ್ತಾನೆ: "ಪಂಚಾಂಗ ಇದೆಯೇನ್ರೀ ?
ಕನಕಲಿಂಗಂ ಶಾಂತಚಿತ್ತನಾಗಿ "ಇಲ್ಲ" ಎಂದು ಕಳುಹಿ
ತ್ತಾನೆ. ಸ್ವಲ್ಪ ಹೊತ್ತಿಗೇ ಭಾರೀ ಸಾಹುಕಾರನಂತಿ
ಒಬ್ಬ ದಢೂತಿ ಆಸಾಮಿ ಜರಿಪೇಟ, ಕಿವಿಗೆ ಹತ್ತುಕಡಕ
ಇವುಗಳಿಂದ ರಾರಾಜಿಸುತ್ತಾ ಅಲ್ಲಿ ಬಂದು ನಿಲ್ಲುತ್ತಾನ
ಸ್ವಲ್ಪಹೊತ್ತು ಆಚೆ ಈಚೆ ನೋಡಿ, ಪುಸ್ತಕಗಳನ್ನು ಕ್ರೂ
ದೃಷ್ಟಿಯಿಂದ ತಿವಿಯುತ್ತಾ ಕೇಳುತ್ತಾನೆ: "ಪ್ರೇಮರಹಸ
ಇದೆಯೆ ?" ಕನಕಲಿಂಗಂಗೆ ನಗು ತಡೆಯಲು ಸಾಧ್ಯವ
ಆಗದೆ "ಅದರಲ್ಲಿ ರಹಸ್ಯ ಏನ್ರಿ ಇದೆ?" ಎಂದ
ಉತ್ತರ ಕೊಡುತ್ತಾನೆ. ಗಿರಾಕಿ ಸ್ವಲ್ಪ ಮೊಂಡು
"ಅದೆಲ್ಲ ನನಗೆ ಗೊತ್ತಿಲ್ಲ, ಪ್ರೇಮರಹಸ್ಯ ಇದೆಯೊ
ಇಲ್ಲವೋ ?" "ಇಲ್ಲ" ಎಂದು ಹೇಳಿ ಹಣೆ ಚಚ್ಚಿಕೊ
ಳ್ಳುತ್ತಾನೆ ಕನಕಲಿಂಗಂ. ಕಾಲುಗಂಟೆ ಕಳೆದ ಮೇಲ
ಚಡ್ಡಿ ಷರಟು ಹಾಕಿಕೊಂಡು, ಕೈಯಲ್ಲಿ ಗಾಡಿ ಚಾವಟಿ
ಹಿಡಿದುಕೊಂಡು, ತನ್ನ ಮೈಯ ಪರಿಮಳದಿಂದಲೇ ತಾನ
ಕವಾಡಿಗ (ಹಾಲು ಮಾರುವವ)ನೆಂದು ಅರ್ಧ ಮೈಲಿ
ಯಿಂದಲೂ ಸಾರುತ್ತಾ ಒಬ್ಬ ವ್ಯಕ್ತಿ ಹಾಜರಾಗುತ್ತಾನೆ
ಬಂದದ್ದೇ ಕುಕ್ಕರಗಾಲಲ್ಲಿ ಕುಳಿತು ಹರಡಿದ್ದ ಪುಸ್ತಕಗ
ಪೈಕಿ ಒಂದನ್ನು ಹಿಡಿದು ಪರಪರನೆ ತಿರುವಿಹಾಕುತ್ತಾನೆ
ಅತ್ತ ಎಸೆಯುತ್ತಾನೆ. ಇನ್ನೊಂದು ತೆಗೆದು ಹಾಗೆ ತಿರುವಿ
ಹಾಕುತ್ತಾನೆ, ಎಸೆಯುತ್ತಾನೆ. ಈ ಕಾರ್ಯಚಟುವಟಿಕೆ
ಯನ್ನು ತೀವ್ರ ಆಸಕ್ತಿಯಿಂದ ಗಮನಿಸುತ್ತಿದ್ದ ಕನಕ
ಲಿಂಗಂ ಮುಂದಿನ ಘಟನೆಯನ್ನು ಕಾತರದಿಂದ ಎದುರ
ನೋಡುತ್ತಿದ್ದಾನೆ. ಹೆಚ್ಚು ಕಡಮೆ ಎಲ್ಲಾ ಪುಸ್ತಕ
ಗಳನ್ನೂ ತಿರುವಿ, ಬೀಸಿಹಾಕಿದ ಮೇಲೆ ವ್ಯಕ್ತಿಯ ಪ್ರಶ್ನೆ
"ಇಲ್ಲಿ ಕಾಲಿಪುಸ್ಕ ಇಲ್ವಾ ?" ಕನಕಲಿಂಗಂಗೆ ಕುತೂ
ಹಲ ! "ಏಕೆ ?" ಎನ್ನುತ್ತಾನೆ. "ಹಾಲಿನ ಲೆಕ್ಕ
ಬರಕೊಳ್ಳೋಕೆ !" "ಅಯ್ಯೋ ನನ್ನ ತಮಿಳು ಬಾಂಧ
ವನೇ" ಎಂದು ನಿಟ್ಟುಸಿರು ಬಿಡುತ್ತಾನೆ ಕನಕಲಿಂಗಂ

ಅಪಾರವಾದ ಜ್ಞಾನ ಅಗತ್ಯ

ನಮ್ಮ ಕನ್ನಡ ಓದುಗರಿಂದ ಇಂಥ ಪ್ರಶ್ನೆಗಳ ಬಾ
ಗಳು ಬಂದರೆ ಆಶ್ಚರ್ಯಪಡಬೇಕಾಗಿಲ್ಲ. ಇದಕ್ಕೆ

ದ ರಕ್ಷೆಯನ್ನು ಧರಿಸಿಯೇ ಸಹಾಯಕರು ಕುಳಿತಿರ ಗುತ್ತದೆ. ಅಲ್ಲದೆ ಸಹಾಯಕನಿಗೆ ನಿಜವಾಗಿ ಕಗಳ ವಿಷಯಕ್ಕೆ ಅಪಾರವಾದ ಜ್ಞಾನ ಇರಬೇಕು. ನ್ಯವಾಗಿ ನಮಗೆ ದೊರಕುವ ಉತ್ತರಗಳು ಎರಡು : ” ಮತ್ತು “ ಗೊತ್ತಿಲ್ಲ ”. ಜಗತ್ತಿನ ಎಲ್ಲ ಸಮಸ್ಯೆ ನ್ನು ಈ ಎರಡೂ ಮಾತುಗಳಿಂದ ಪರಿಹರಿಸುವ ಇವರು. ಕೆಲವು ಅಂತರರಾಷ್ಟ್ರೀಯ ಖ್ಯಾತಿಯ ವ್ಯಾಪಾರಿಗಳ ಮಳಿಗೆಗಳಲ್ಲೂ ನಾನು ಪಡೆದಿರುವ ಅನೇಕ ಸಲ ಇದಕ್ಕಿಂತ ಬೇರೆಯಾಗಿಲ್ಲ. ಸಹಾ ಓದುಗರು ಕೇಳುವ ವಿಷಯದ ಮೇಲೆ ಲ್ಲಿ ಪುಸ್ತಕ ಇದೆಯೇ ಇಲ್ಲವೇ, ಇಲ್ಲದಿದ್ದರೆ ಅದು ಜಾಗಿ ಎಲ್ಲಿ ಸಿಕ್ಕುತ್ತದೆ ಎಂಬುದನ್ನು ತಿಳಿಸುವಂತಿರ ಇದಕ್ಕೆ ಹೀಗೆ ಸಹಾಯಕರಾಗಿರುವವರಿಗೆ ಪೂರ್ವ ಅಗತ್ಯ.

ಕ ಕೊಳ್ಳಲು ಸಾಲ ದೊರೆಯಬೇಕು

ಸ್ತಕ ಪ್ರದರ್ಶನಗಳು ಒಂದು ಊರಿನಲ್ಲಿ ಒಂದು ದರೂ ನಡೆಯಬೇಕು. ಜನರಿಂದ ಜನರಿಗೆ ಸುದ್ದಿ ನೋಡಿದವರು ತಾವು ಕೊಳ್ಳಬೇಕೆಂದು ತೀರ್ಮಾ ಪುಸ್ತಕವನ್ನು ಹಣ ಒದಗಿಸಿಕೊಂಡು ಮತ್ತೊಮ್ಮೆ ಕೊಳ್ಳುವ ಅವಕಾಶ ಇರಬೇಕು. ಇದೇ ಸಂದರ್ಭ ಂದು ಮುಖ್ಯವಾದ ಸಲಹೆಯನ್ನು ನೀಡಲೇಬೇಕಾಗಿದೆ. ರೈತರಿಗೆ ಟ್ರಾಕ್ಟರ್, ಬೀಜ, ಗೊಬ್ಬರ ಮುಂತಾದುವನ್ನು ಕೊಳ್ಳಲು ಬ್ಯಾಂಕುಗಳು ಸುಲಭ ಕಂತಿನ ಸಾಲ ಕೊಡುವಂತೆ ಪುಸ್ತಕಗಳನ್ನು ಕೊಳ್ಳಲೂ ಅವು ಸಾಲ ಕೊಡಬೇಕು. ಉದಾಹರಣೆಗೆ ಕನ್ನಡ ವಿಶ್ವಕೋಶವನ್ನು ಕೊಳ್ಳಲು ಪ್ರಕಟಣಪೂರ್ವ ಚಂದಾ ೩೫೦ ರೂಪಾಯಿ ಆಗುತ್ತದೆ. ತಿಂಗಳಿಗೆ ಹತ್ತು ರೂಪಾಯಿನಂತೆ ಕಟ್ಟಿ ಅದನ್ನು ಕೊಳ್ಳಲು ಇಚ್ಛಿಸುವ ಜನ ವಿಶಾಲ ಕರ್ನಾಟಕದಲ್ಲಿ ಹತ್ತಿಪ್ಪತ್ತು ಮಂದಿಯಾದರೂ ಇದ್ದಾರು. ಹಾಗೆಯೇ ನಾಲ್ಕು ಸಂಪುಟಗಳಲ್ಲಿ ಪ್ರಕಟವಾಗುತ್ತಿರುವ ‘ಯುಗಯಾತ್ರೀ ಭಾರತೀ ಸಂಸ್ಕೃತಿ’ಯ ಒಟ್ಟು ಬೆಲೆ ಸುಮಾರು ೧೫೦ ರೂಪಾಯಿ. ಪ್ರತಿ ಮನೆಯಲ್ಲೂ ಇರಲೇಬೇಕಾದ ಈ ಕೃತಿರಾಶಿಯನ್ನು ಸುಲಭ ಕಂತಿನಲ್ಲಿ ಜನ ಕೊಳ್ಳಬಹುದು, ಬ್ಯಾಂಕಿನವರು ಸಾಲ ಕೊಟ್ಟರೆ.

ಹಾಗೆಯೇ ಇನ್ನೂ ಒಂದು ಸಲಹೆ. ಪಾಶ್ಚಾತ್ಯ ದೇಶಗಳಲ್ಲಿ ಪುಸ್ತಕದಂಗಡಿಯಲ್ಲಿ ಜನರು ಬಂದು ಕುಳಿತು ಕೊಂಡು ಓದಿ ಹೋಗುವ ವ್ಯವಸ್ಥೆ ಇರುತ್ತದೆ ಎಂದು ಕೇಳಿದ್ದೇನೆ. ಅಂಥ ವ್ಯವಸ್ಥೆಯ ಅಗತ್ಯ ಬಡದೇಶವಾದ ಭಾರತದಲ್ಲಿ ಇನ್ನೂ ಹೆಚ್ಚು. ಏಕೆಂದರೆ ಅವರು ಪುಸ್ತಕ ಭಂಡಾರಗಳಲ್ಲಿ ಓದಲಿ ಎಂದು ಹೇಳುವಂತಿಲ್ಲ. ಅನೇಕ ಪುಸ್ತಕ ಭಂಡಾರಗಳೇ–ಶಾಲಾ ಕಾಲೇಜುಗಳದೂ ಸೇರಿ-ದುಸ್ಥಿತಿಯಲ್ಲಿರುತ್ತವೆ. ಆದ್ದರಿಂದ ಈ ವ್ಯವಸ್ಥೆ ತುಂಬಾ ಅಗತ್ಯ.

ನರಕಕ್ಕಿಳಿಸಿ,
ನಾಲ್ಗೆ ಸೀಳ್ಸಿ
ಬಾಯ್ ಒಲ್ಸಾಕಿದ್ರೂನು
ಮೂಗೀಲ್ ಕನ್ನಡ್
ಪದವಾಡ್ತೇನಿ
ನನ್ ಮನಸ್ ನೀ ಕಾಣೆ.

—ರತ್ನ

ಪುಸ್ತಕ ಮಾರಾಟ ವ್ಯವಸ್ಥೆ

● ಎಂ. ಎಚ್. ಕೌಜಲಗಿ

ಪುಸ್ತಕೋದ್ಯಮವು ಇಂದಿನ ನಮ್ಮ ಸಮಾಜದಲ್ಲಿ ಒಂದು ಮಹತ್ವದ ಉದ್ಯಮ. ಒಂದು ದೇಶದ ಅಥವಾ ಸಮಾಜದ ಶಿಕ್ಷಣ ಮಟ್ಟ, ಸಂಸ್ಕೃತಿ, ಔದ್ಯೋಗಿಕ ಪ್ರಗತಿ ಇದನ್ನು ಅಳೆಯಬೇಕಾದರೆ ಆ ದೇಶದ ಅಥವಾ ಆ ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ಎಷ್ಟು ಕಾಗದ ಬಳಸುತ್ತಾನೆ ಎಂಬುದನ್ನು ನೋಡುತ್ತಾರೆ. ಪುಸ್ತಕೋದ್ಯಮವು ನಮ್ಮ ಸಂಸ್ಕೃತಿ ಹಾಗೂ ಪ್ರಗತಿಯ ದಿಕ್ಸೂಚಿ ಎಂದು ಹೇಳಿದರೆ ತಪ್ಪಾಗಲಾರದು.

ಇನ್ನೂ ಶೈಶವಾವಸ್ಥೆ

ಭಾರತದ ಜನಸಂಖ್ಯೆಯ ಪ್ರಮಾಣ ನೋಡಿದರೆ, ಹಾಗೂ ಅದನ್ನು ಇತರ ದೇಶಗಳ ಜೊತೆಗೆ ಹೋಲಿಸಿದರೆ ಪುಸ್ತಕೋದ್ಯಮವು ನಮ್ಮಲ್ಲಿ ಇನ್ನೂ ಶೈಶವಾವಸ್ಥೆಯಲ್ಲಿಯೇ ಇದೆ. ಇದಕ್ಕೆ ಸಮಸ್ಯೆಗಳನೇಕ ಇರಬಹುದು. ಆದರೆ ನಮ್ಮ ಸಂಸ್ಕೃತಿ ಹಾಗೂ ಪ್ರಗತಿಯ ಬೆಳವಣಿಗೆಯು ಈ ಉದ್ಯಮವನ್ನು ಅವಲಂಬಿಸಿರುವುದರಿಂದ ನಮ್ಮ ಸಮಾಜ ಹಾಗೂ ಸರಕಾರವು ಈ ಉದ್ಯಮಕ್ಕೆ ಆದ್ಯ ಗಮನ ಕೊಟ್ಟು ಅದು ಬೆಳೆಯುವ ದಾರಿಯನ್ನು ಕಂಡುಹಿಡಿಯಲೇಬೇಕು.

ಪುಸ್ತಕೋದ್ಯಮದ ಅಂಗವಾಗಿ ಅಡಕವಾದ ಲೇಖಕರ ಸಮಸ್ಯೆ ಮುದ್ರಣಕಾರರ ಸಮಸ್ಯೆ ಪ್ರಕಾಶಕರ ಸಮಸ್ಯೆ ಪುಸ್ತಕ ಮಾರಾಟಗಾರರ ಸಮಸ್ಯೆ ವಾಚಕರ ಸಮಸ್ಯೆ ಇವುಗಳ ಬಗ್ಗೆ ಈಗಾಗಲೇ ಪ್ರಸ್ತಾಪಿಸಲಾಗಿದೆ.

ಮಾರಾಟದ ಮೇಲೆ ಯಶಸ್ಸಿನ ಅವಲಂಬನೆ

ಯಾವುದೇ ಉದ್ಯಮದ ಯಶಸ್ಸು ಅದರ ಹುಟ್ಟುವಳಿಯ ಮಾರಾಟದ ಮೇಲೆ ಅವಲಂಬಿಸಿರುವಂತೆ ಪುಸ್ತಕೋದ್ಯಮದ ಯಶಸ್ಸು ಕೂಡ ಅದರ ಮಾರಾಟದ ಮೇಲೆ ಅವಲಂಬಿಸಿರುತ್ತದೆ. ನಮ್ಮ ಪುಸ್ತಕ ಮಾರಾಟಗಾರರ ಸಮಸ್ಯೆಗಳಂತೂ ಅನೇಕ; ಅದರಲ್ಲಿ ಬೇಡಿಕೆ, ಇಲ್ಲವೆಂಬುದು ಮುಖ್ಯ ಸಮಸ್ಯೆ. ಮಾರಾಟವಾಗದ ಪುಸ್ತಕಗಳನ್ನು ವಾಪಸು ತಕ್ಕೊಳ್ಳುವ ಕರಾರಿನ ಮೇಲೆ ಯಾರೂ ತಮಗೆ ಪುಸ್ತಕಗಳನ್ನು ಕೊಡುವುದಿಲ್ಲ ಎಂಬುದು ಇನ್ನೊಂದು ಮುಖ್ಯ ಸಮಸ್ಯೆ. ಇವೆರಡನ್ನು ಮುಖ್ಯವಾಗಿಟ್ಟುಕೊಂಡು ನಾವು ಸಂಸ್ಥೆಯ ಯೋಜನೆ ಮಾಡಬೇಕು. ಇದರಲ್ಲಿ 'ಬೇಡಿಕೆ ಇಲ್ಲ' ಈ ಸಮಸ್ಯೆಗೆ ನಮ್ಮ ಉತ್ತರ ಇಲ್ಲ. 'ನಾನು ಎಷ್ಟೊಂದು ಸೇವೆ ಮಾಡಿದರೂ ದೇವರು ನನಗೆ ಒಲಿಯಲಿಲ್ಲ' ಎಂದು ಯಾರಾದರೂ ಹೇಳಿದರೆ— ಅದಕ್ಕೆ ನಾನು 'ಅವನು ಒಲಿಯುವಂತೆ ಒಲಿಯುವವರೆಗೆ ನೀನು ಸೇವೆ ಮಾಡು.' ಎಂದು ಹೇಗೆ ಹೇಳುವೆವೋ ಹಾಗೆ ಹೇಳಬೇಕಾಗುವುದು. ಈ ಸಮಸ್ಯೆಗೆ ಉತ್ತರ ರೂಪವಾಗಿ, ವಿದ್ಯಾರ್ಥಿಗಳಲ್ಲಿ ವಾಚನಾಭಿರುಚಿ, ಮಹಿಳೆಯರಲ್ಲಿ ವಾಚನಾಭಿರುಚಿ, ಕಾರ್ಮಿಕರಲ್ಲಿ ವಾಚನಾಭಿರುಚಿ, ಗ್ರಾಮಾಂತರ ಜನರಲ್ಲಿ ವಾಚನಾಭಿರುಚಿ, ಈ ವಿಷಯಗಳ ಮೇಲೆ ಚರ್ಚೆ ನಡೆದಿದೆ. ವಾಚಕ ದೇವರು ಹೇಗೆ ಒಲಿಯುವಂತೆ ಮಾಡಬೇಕೆಂದು ಅವರು ಹೇಳಿದರು. ಹಾಗೆ ಅಭಿರುಚಿಯನ್ನು ಕುದುರಿಸಿ ಬೆಳೆಸಿದ ಪಕ್ಷದಲ್ಲಿ ಅದಕ್ಕೆ ತಕ್ಕಂತೆ ಹಾಗೂ ನಮ್ಮ ಮಕ್ಕಳಲ್ಲಿ ಮಹಿಳೆಯರಲ್ಲಿ ಗ್ರಾಮಾಂತರ ಜನರಲ್ಲಿ ಸಹಜವಾಗಿಯೇ ಸದ್ಯಕ್ಕಿರುವ ಅಭಿರುಚಿಗೆ ತಕ್ಕಂತೆ ಪುಸ್ತಕಗಳು ದೊರೆಯುವ ಏರ್ಪಾಡು ಇದೆಯೇ? ಇಲ್ಲದಿದ್ದರೆ ಅದಕ್ಕೆ ಏನು ಮಾಡಬೇಕು ಈ ವಿಷಯವನ್ನು ಪುಸ್ತಕ ಮಾರಾಟಗಾರರು ಗಮನಿಸಬೇಕು.

ಪುಸ್ತಕ ಮಾರಾಟ ಪರಿಪೂರ್ಣ ಉದ್ಯಮ

ಪುಸ್ತಕ ಮಾರಾಟವು ಒಂದು ಸ್ವತಂತ್ರವಾದ ಮತ್ತು ಸ್ವಯಂ ಪರಿಪೂರ್ಣವಾದ ಒಂದು ಉದ್ಯಮ ಎಂಬ ಭಾವನೆ ನಮ್ಮಲ್ಲಿ ಬೆಳೆದಿಲ್ಲ. ಸಾಮಾನ್ಯವಾಗಿ ಪುಸ್ತಕಗಳ ಮುದ್ರಣ, ಪ್ರಕಾಶನ ಮತ್ತು ಮಾರಾಟ ಇವು ಮೂರೂ ಸೇರಿ ಒಂದು ಉದ್ಯಮ ಎಂದು ಭಾವಿಸುವ ಪರಿಪಾಠ ರೂಢವಾಗಿದೆ. ಪುಸ್ತಕೋದ್ಯಮ ಇನ್ನೂ ಎಳೆಯದಿದ್ದಾಗ ಇದು ನಿಜವಿರಬಹುದು. ಇವು ಮೂರೂ

ರ ಪೂರಕಗಳೆಂಬುದನ್ನು ನಾನು ಒಪ್ಪುತ್ತೇನೆ. ಇವು ಒಂದೊಂದೂ ಈಗ ಯಾರೊಬ್ಬರ ಪರಿಪೂರ್ಣ ು ಹಾಗೂ ಶಕ್ತಿಗಳನ್ನು ಬೇಡುವಷ್ಟು ಬೃಹತ್ತಾಗಿ ೆ. ನಮ್ಮಲ್ಲಿ ಸಾಮಾನ್ಯವಾಗಿ ಪುಸ್ತಕ ಮಾರಾಟ ಪ್ರಾರಂಭಿಸಿದವರು ಕ್ರಮೇಣ ಪ್ರಕಾಶನ ಮತ್ತು ಣ ಕ್ಷೇತ್ರಗಳಿಗೆ ಇಳಿಯದೆ ಉಳಿಯುವುದೇ ಇಲ್ಲ. ು ಕ್ಷೇತ್ರಗಳಲ್ಲಿಯ ಲಾಭವನ್ನು ತಾನೊಬ್ಬನೇ ವ ಆಶೆ ಇದಕ್ಕೆ ಕಾರಣವಾಗುತ್ತದೆ. ಆದರೆ ನ "ಜಾಕ್ ಆಫ್ ಆಲ್ ಟ್ರೇಡ್ಸ್ ಬಟ್ ರ್ ಆಫ್ ನನ್" ಎಂಬಂತೆ ನಾವು ಯಾವ ಕ್ಷೇತ್ರ ೂ ಮುಂದುವರಿಯುವುದಿಲ್ಲ. ಆ ಮೂರೂ ಕ್ಷೇತ್ರ ೂಡಬೇಕಾದ ಲಾಭವನ್ನು ನಮಗೆ ಕೊಡುವುದಿಲ್ಲ. ಮುದ್ರಣ ಮತ್ತು ಪ್ರಕಾಶನಗಳಲ್ಲಿ ತಲೆಹಾಕದೆ ಮಾರಾಟದ ಕಡೆಗೇ ನಮ್ಮ ಗಮನವನ್ನು ೇಕರಿಸಬೇಕು. ಇಂದು ಸ್ವತಂತ್ರ ಉದ್ಯಮದ ಬೆಳ ಅಗತ್ಯವಿರುವ ಜ್ಞಾನ, ಕುಶಲತೆ, ಸಾಹಸ, ಬಂಡವಲು ಎಲ್ಲವನ್ನೂ ಅದು ಬೇಡುತ್ತದೆ ಇವುಗಳನ್ನೆಲ್ಲ ಸಮನ್ವಯದ ಪ್ರಮಾಣದಲ್ಲಿ ಸಿದರೆ ಸಾಕಷ್ಟು ಲಾಭವೂ ಸಾಧ್ಯ. ಈ ಅರಿವು ಲ್ಲಿ ಇನ್ನೂ ಮೂಡಬೇಕಾಗಿದೆ. ಈ ಅರಿವಿನ ದಿಂದಾಗಿಯೇ ಪುಸ್ತಕ ಮಾರಾಟದ ಕ್ಷೇತ್ರದಲ್ಲಿ ಸಮಸ್ಯೆಗಳು ಹುಟ್ಟಿಕೊಂಡಿವೆ. ಈಗ ನಾವು ಈ ಗಳನ್ನು ಸ್ಥೂಲವಾಗಿ ವಿಶ್ಲೇಷಿಸೋಣ.

ಸ್ಥಾಪನೆ—ನಿಬಂಧನೆ

ಕ ಮಾರಾಟದ ವಿಷಯದಲ್ಲಿ ಮುಖ್ಯವಾದ ಸಮ ದರೆ ಓದುಗರೊಡನೆ ಸಂಪರ್ಕವನ್ನು ಸಾಧಿಸು ಾಗೂ ಓದುಗರ ಅಭಿರುಚಿಗಳಿಗೆ ತಕ್ಕಂತೆ, ಮಾರಾ ೆ ಉಳಿದ ಪುಸ್ತಕಗಳನ್ನು ಮರಳಿ ತಕ್ಕೊಳ್ಳುವ ಂದ ಪ್ರಕಾಶಕರಿಂದ ಪುಸ್ತಕಗಳನ್ನು ಪಡೆಯು ಈ ಎರಡೂ ಸಮಸ್ಯೆಗಳನ್ನು ಪುಸ್ತಕ ಮಾರಾಟ ವೈಯಕ್ತಿಕ ಎದುರಿಸಲಾರ. ಅದಕ್ಕೆ ಅವನು ಸಂಸ್ಥೆಗಳನ್ನು ಕಟ್ಟಿಕೊಳ್ಳಬೇಕು. ಅಂಥ ಸಂಘ- ಗೆ ಸರಕಾರವಾಗಲಿ ಸಾಹಿತ್ಯ ಪರಿಷತ್ತು, ವಿಶ್ವ ಲಯಗಳು, ಸಾಹಿತ್ಯ ಅಕಾಡೆಮಿ, ನ್ಯಾಶನಲ್ ಸ್ಟ್, ಪ್ರಕಾಶಕರ ಸಂಸ್ಥೆಗಳು ನೆರವಾಗಬೇಕು. ಇವರೆಲ್ಲರ ಸಹಕಾರ ಬೆಂಬಲದ ಪ್ರೋತ್ಸಾಹಗಳಿಂದ ಪುಸ್ತಕ ಮಾರಾಟಗಾರರು ಸಂಘ ಅಥವಾ ಅಸೋಸಿಯೇಶನ್‌ಗಳನ್ನು ಕಟ್ಟಿಕೊಳ್ಳಬೇಕು. ಇಂಥ ಸಂಘಗಳು ಹೆಚ್ಚೆಚ್ಚು ಸಂಖ್ಯೆಯಲ್ಲಿ ಬಂದಷ್ಟು ಒಳ್ಳೇದು. ಆದರೆ ಹಾಗೆ ರಚಿತವಾದ ಸಂಘಗಳು ನಿಶ್ಚಿತವಾದ ನಿಯಮ ನಿಬಂಧನೆಗಳನ್ನು ಹೊಂದಿರಬೇಕು. ಇಂಥ ಸಂಘಗಳು ವ್ಯವಸ್ಥಿತ ನಿಯಮಾವಳಿಗಳಿಂದ ತನ್ನ ಸದಸ್ಯ ಪುಸ್ತಕ ಮಾರಾಟಗಾರರನ್ನು ಸಂಘಟಿಸಿದರೆ ಹಾಗೂ ಲೆಕ್ಕ ಪತ್ರ ಹಣಕಾಸುಗಳನ್ನು ನಿಯಂತ್ರಿಸಿದರೆ ಆ ಸದಸ್ಯ ಪುಸ್ತಕ ಮಾರಾಟಗಾರರಿಗೆ ಬದಲಿ ಹಾಗೂ ವಾಪಸ್ ಪಡೆಯುವ ಕರಾರಿನ ಮೇಲೆ ಪುಸ್ತಕಗಳನ್ನು ಒದಗಿಸುವದಕ್ಕೆ, ಹಾಗೂ ಕಡಿಮೆ ವೆಚ್ಚದಲ್ಲಿ ಬೇಕಾದ ಪುಸ್ತಕಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸುವದಕ್ಕೆ, ಹಾಗೂ ವಾಚಕರೊಡನೆ ಸಂಪರ್ಕ ಬೆಳೆಸಿಕೊಳ್ಳಲು ಸಾಂಘಿಕವಾಗಿ, ಕ್ಯಾಟಲಾಗ್ ಹಾಗೂ, ಜಾಹಿರಾತು ಪ್ರಕಟನೆ ಪ್ರದರ್ಶನ ಮುಂತಾದ ಸಾಧನಗಳನ್ನು ಕೈಕೊಳ್ಳಲು ಅನುಕೂಲವಾಗುವುದು.

ಈಗ ಮೈಸೂರು ರಾಜ್ಯ ಬುಕ್ ಸೆಲರ್ಸ್ ಅಸೋಸಿಯೇಶನ್ ಇದ್ದರೂ ಕೂಡ ಅದರಿಂದ ಪುಸ್ತಕ ಮಾರಾಟಗಾರರ ಮುಖ್ಯ ಸಮಸ್ಯೆಗಳನ್ನು ಪರಿಹರಿಸುವದಕ್ಕಾಗಿಲ್ಲ. ಅದಕ್ಕೆ ಮುಖ್ಯ ಕಾರಣವೆಂದರೆ ಸದ್ಯಕ್ಕಿರುವ ಸ್ವರೂಪದಲ್ಲಿ ಅದಕ್ಕೆ ಪುಸ್ತಕಗಳನ್ನು ಪ್ರಕಾಶಕರಿಂದ ಸಂಪಾದಿಸಿಕೊಂಡು ತನ್ನ ಎಲ್ಲ ಸದಸ್ಯರಿಗೆ ಬದಲಿ ಹಾಗೂ ಪರತ ತಕ್ಕೊಳ್ಳುವ ಕರಾರಿನ ಮೇಲೆ ಪುಸ್ತಕಗಳನ್ನು ಒದಗಿಸುವ ಏರ್ಪಾಡಾಗಲಿ ಅಥವಾ ಸದಸ್ಯರ ಪರವಾಗಿ ಗ್ರಂಥಗಳ ಪಟ್ಟಿ ಅಥವಾ ಪ್ರಚಾರ ಸಾಧನವನ್ನಾಗಲಿ ಕೈಕೊಳ್ಳುವ ಏರ್ಪಾಡುಗಳಿಲ್ಲ. ಆದ್ದರಿಂದ ಸದ್ಯಕ್ಕಂತೂ ಆ ಸಂಸ್ಥೆಯಿಂದ ಈ ಕೆಲಸವನ್ನು ಅಪೇಕ್ಷಿಸಲು ಸಾಧ್ಯವಿಲ್ಲ.

ಈ ರೀತಿ ೧೦-೨೦ ಪುಸ್ತಕ ಮಾರಾಟಗಾರರ ಸಂಘಗಳು ಪುನಃ ಸಂಘಟಿಸಿಕೊಂಡು ರಾಜ್ಯ ಮಟ್ಟದ ಸಂಘಗಳನ್ನು ಕಟ್ಟಿಕೊಳ್ಳಬೇಕು. ಅದರಲ್ಲಿ ಪ್ರಕಾಶಕರ ಪ್ರತಿನಿಧಿತ್ವವು ಇರಬೇಕು. ಇದೇ ರೀತಿ ಪ್ರಕಾಶಕರ ಸಂಘವಾದರೆ ಅದರಲ್ಲಿ ಪುಸ್ತಕ ಮಾರಾಟಗಾರರ ಪ್ರತಿನಿಧಿತ್ವ ಇರಬೇಕು. ರಾಜ್ಯ ಸರಕಾರದವರು, ಹಾಗೂ ಕೇಂದ್ರ ಸರಕಾರದವರು ಪುಸ್ತಕೋದ್ಯಮದ ಬೆಳವಣಿಗೆಯ ದೃಷ್ಟಿ

ಯಿಂದ ಏನಾದರೂ ಸಹಾಯ-ಸಲಹೆ ಉತ್ತೇಜನ ಕೊಡುವದಾದರೆ, ಇಂಥ ಕೇಂದ್ರ ಸಂಸ್ಥೆಯ ಮೂಲಕ ಮಾಡಿದರೆ ಅದರ ಸದುಪಯೋಗವಾಗುವದು. ಈ ಕೇಂದ್ರ ಸಂಘದಿಂದ ಯಾವದೇ ರೀತಿಯ ಪಕ್ಷಪಾತವಾಗಲಿ ಅಧಿಕಾರ ಹಾಗೂ ಹಣದ ದುರುಪಯೋಗವಾಗದಂತೆ ಅದರ ಘಟನೆಯಲ್ಲಿ ಸಾಕಷ್ಟು ಮುಂಜಾಗ್ರತೆ ವಹಿಸಬೇಕು. ಆದರೂ ಏನಾದರೂ ಕುಂದುಕೊರತೆಗಳು ಬಂದಲ್ಲಿ ಅದರ ಘಟನೆಯಲ್ಲಿ ಸೂಕ್ತ ಬದಲಾವಣೆ ಮಾಡುವ ಅನುಕೂಲತೆಯಾಗಲಿ ಅಥವಾ ಅದೇ ಮಾದರಿಯ ಬೇರೆ ಕೇಂದ್ರ ಸಂಸ್ಥೆಗಳನ್ನು ತೆಗೆಯುವದಕ್ಕಾಗಲಿ ಸ್ವಾತಂತ್ರ್ಯವಿರಬೇಕು. ಮತ್ತು ಇಂಥ ಸಂಸ್ಥೆ ಅಥವಾ ಸಂಸ್ಥೆಗಳನ್ನು ನಿಯಂತ್ರಿಸುವದಕ್ಕೆ ರಾಜ್ಯಮಟ್ಟದಲ್ಲಿ ಸರಕಾರವು ಒಂದು ವ್ಯವಸ್ಥೆಯನ್ನು ಮಾಡಬಹುದು, ಕೇರಳದಲ್ಲಿ ಕೋ-ಆಪರೇಟಿವ್ ಸೊಸೈಟಿಯ ಮುಖಾಂತರ ಈ ರೀತಿ ಒಂದು ಸಂಸ್ಥೆ ಬಹಳ ಚನ್ನಾಗಿ ಕೆಲಸಮಾಡಿದೆ. ಈಗ ಅದರ ಬಗ್ಗೆ ಮಾಹಿತಿ ನನಗಿಲ್ಲ. ಅದರಂತೆ ಹಿಗಿನ್ ಬೊಥಾಮ್ಸ್, ವ್ಹಿಲರ್ಸ್, ಸಪ್ನಾ ಸಾಹಿತ್ಯ ನ್ಯೂ ಸೆಂಟರ ಬುಕ್ ಹೌಸ್, ಇಂಡಿಯಾ ಬುಕ್ ಹೌಸ್ ಮುಂತಾದ ಕೆಲವು ಸಂಸ್ಥೆಗಳು ಸುಬದ್ಧಿತವಾದ ವ್ಯವಸ್ಥೆಯಿಂದ ಪುಸ್ತಕ ಮಾರಾಟದ ಕೆಲಸ ಕೈಕೊಳ್ಳುತ್ತಿರುವದು ಎಲ್ಲರಿಗೂ ಗೊತ್ತಿದ್ದ ವಿಷಯ. ಇವರು ಮಾಡಿದ ಹಾಗೂ ಮಾಡುತ್ತಿರುವ ಕೆಲಸದಿಂದಲೇ ನಾವು ಸ್ಫೂರ್ತಿ ಪಡೆದು ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಹಾಗೂ ಗ್ರಾಮಾಂತರ ಪುಸ್ತಕ ಮಾರಾಟಗಾರರನ್ನು ಸೇರಿಸಿಕೊಳ್ಳಬಲ್ಲ ಸಂಸ್ಥೆಗಳನ್ನು ರೂಪಿಸುವದು ಪುಸ್ತಕೋದ್ಯಮದ ದೃಷ್ಟಿಯಿಂದ ಅತ್ಯಂತ ಅವಶ್ಯವೆಂದು ಅಂಥ ಸಂಘಗಳಿಗೆ ಉತ್ತೇಜನ ಕೊಡುವದಕ್ಕಾಗಿ ಸರಕಾರವು, ಪ್ರಕಾಶಕರು, ಬ್ಯಾಂಕುಗಳು ಒಂದೊಂದು ರೀತಿಯಲ್ಲಿ ಮುಂದು ಬರಬೇಕೆಂದು ನನ್ನ ಸೂಚನೆ.

ಇಂಥ ಸಂಘಗಳನ್ನು ಕಟ್ಟುವ ಪ್ರಾರಂಭದಲ್ಲಿ ಅನೇಕ ತಪ್ಪು ತಡೆಗಳಾಗಬಹುದು. ಪ್ರಾರಂಭದಲ್ಲಿ ಕೆಲವು ಕಡೆಗೆ ಹಣದ ನಷ್ಟ ಅಥವಾ ದುರುಪಯೋಗ ಕೂಡ ಆಗಬಹುದು. ನಾನು ಇದಾವುದನ್ನು ಸಮರ್ಥಿಸದಿದ್ದರೂ ಅನಿವಾರ್ಯವಾಗಿ ನಮ್ಮ ಪ್ರಯತ್ನದಲ್ಲಿ ಹಾಗೇನಾದರೂ ಆದಲ್ಲಿ ಅಂಥ ನಷ್ಟಗಳನ್ನು ಈ ಸಂಘಗಳು ಪ್ರಾರಂಭದಲ್ಲಿ ಸರಕಾರ ಹಾಗೂ ಸಾಹಿತ್ಯ ಪರಿಷತ್ತು ಅಕಾಡೆಮಿ ಬುಕ್ ಟ್ರಸ್ಟ್‌ಗಳ ಮುಖಾಂತರ, ಹಾಗೂ ಸದಸ್ಯರ ವಂತಿಗೆ ಹಾಗೂ ಅವರ ಪುಸ್ತಕ ಮಾರಾಟದ ಕಮೀಶ
ಒಂದು ಭಾಗದಿಂದ, ತುಂಬಿಕೊಳ್ಳಬೇಕು. ಇಂಥ ಸಂ
ಗಳ ಸಹಾಯವು ನಿಜವಾದ ಪುಸ್ತಕ ಮಾರಾಟಗಾರ
ಅನೇಕ ಬಗೆಯಾಗಿ ಆಗಿ ಅದರಿಂದ ಅವರಿಗೆ ಕೊನೆಯ
ಲಾಭವೇ ಆಗುವದರಿಂದ ಪುಸ್ತಕ ಮಾರಾಟಗಾರ
ಇಂಥ ಸಂಘಗಳಿಗೆ ವಿಧೇಯರಾಗಿದ್ದುಕೊಂಡು ಅದ
ಸೇವೆಯ ಸದುಪಯೋಗ ಮಾಡಿಕೊಳ್ಳುವರೆಂದು ನಾ
ದೃಢವಾಗಿ ನಂಬಿದ್ದೇನೆ. ಯಾರು ನಿಜವಾದ ಪುಸ್ತ
ಮಾರಾಟಗಾರರಲ್ಲರೊ, ಯಾರು ನೀತಿಗೆಟ್ಟು ಇಂ
ಸಂಘಗಳ ಸವಲತ್ತಿನ ದುರುಪಯೋಗ ಮಾಡಿಕೊಳ
ವರೊ ಅವರು ಯೋಗ್ಯ ಕ್ರಮಕ್ಕೆ ಗುರಿಯಾಗುವರು
ಸಂಘದಿಂದ ಹೊರಗೂ ಹೋಗುವರು. ಮತ್ತು ಸಂಘ
ಸಹಾಯವಿಲ್ಲದೆ ವೈಯಕ್ತಿಕವಾಗಿ ಪುಸ್ತಕ ಮಾರಾ
ನಡೆಸಲಾರದೆ ಆ ಉದ್ಯಮವನ್ನು ಬಿಟ್ಟುಬಿಡಬೇಕಾಗ
ವದು. ಸಂಘದ ನಿಯಮಗಳು ಹಾಗೂ ಸಂಘ-ಸಂಘ
ಗಳೊಳಗಿನ ಸಂಬಂಧವು, ಸರಕಾರದ ನಿಯಂತ್ರಣವ
ಎಷ್ಟು ಚನ್ನಾಗಿರುವವೋ ಅಷ್ಟು ಚನ್ನಾಗಿ ಸದಸ್ಯರ
ಶಿಸ್ತನ್ನು ಕಾಪಾಡಿಕೊಳ್ಳಲು ಬರುವದು.

ಇದೆಲ್ಲ ಹೇಳಲಿಕ್ಕೆ ಸುಲಭ. ಆದರೆ ಆಚರಣೆಗೆ ತರು
ವದು ಕಷ್ಟ ಎಂದು ಕೆಲವರು ಆಕ್ಷೇಪಿಸಬಹುದು. ಆದರ
ಅದು ನಮ್ಮಲ್ಲಿಯ ನಿರಾಶಾವಾದ ಅಥವಾ ನಿಷ್ಕ್ರಿಯ
ಮನೋಭಾವ. ಪುಸ್ತಕೋದ್ಯಮದ ಬೆಳವಣಿಗೆಯಾಗ
ಬೇಕು. ಇಂದಿನ ಪರಿಸ್ಥಿತಿಯಲ್ಲಿ ವೈಯಕ್ತಿಕವಾ
ಪುಸ್ತಕ ಮಾರಾಟಗಾರರು ತಮ್ಮ ಸಮಸ್ಯೆಗಳನ್ನು ಎದು
ರಿಸಲಾರರು. ಇತರ ಉದ್ದಿಮೆದಾರರು ಸಂಘಸಂಸ್ಥೆಗಳನ್ನು
ಕಟ್ಟಿಕೊಂಡು ಮುಂದೆ ಬಂದಿದ್ದಾರೆ. ಅಂಥ ಸಂಘ
ಸಂಸ್ಥೆಗಳನ್ನು ಕಟ್ಟಿಕೊಂಡರೆ ನಿಜವಾಗಿ ಪುಸ್ತಕ ಮಾರಾ
ಟಗಾರರಿಗೆ ಲಾಭವಿದೆ ಎಂದು ನಮಗೆ ತೋರಿಬಂದರ
ನಾವು ನಿರಾಶೆ ನಿಷ್ಕ್ರಿಯತೆ ಅಥವಾ ಬೇರಾವ ಸಂಕ
ಚಿತ ದೃಷ್ಟಿದೋಷಕ್ಕೆ ಗುರಿಯಾಗಿ ಅಂಥ ಪ್ರಯೋಗ
ಗಳಿಗೆ ಕೈಹಾಕುವದನ್ನೇ ಬಿಡಬೇಕೆ? ಅಥವಾ ಯಾವ
ಹೊಸ ಪ್ರಯೋಗ ಕೈಕೊಳ್ಳುವಾಗಲೂ ಅಡಚಣೆ
ವಿರೋಧ, ಒಳಜಗಳ ಬಂದೇ ಬರುವವೆಂದೂ ಅವ
ಗಳನ್ನು ಎದುರಿಸಿ ನಮ್ಮ ನಮ್ಮ ಗುರಿಯನ್ನು ಸಾಧಿಸಿ
ಕೊಳ್ಳುವದೇ ನಮ್ಮ ಕರ್ತವ್ಯವೆಂದು ಭಾವಿಸಿ ಇಂಥ ಕೆಲ
ಸದಲ್ಲಿ ಕೈಹಾಕಬೇಕೇ—ಇದನ್ನು ಪುಸ್ತಕ ಮಾರಾಟ
ಗಾರರೇ ನಿರ್ಧರಿಸಬೇಕು.

ಹುದಾದ ನೆರವು

ಪುಸ್ತಕ ಮಾರಾಟಗಾರರಲ್ಲಿ ಈ ದಿಶೆಯಲ್ಲಿ ರನ್ನಾಗಿ ಮಾಡಲು ಸರಕಾರದವರೂ ಸಾಹಿತ್ಯ ನಂತಹ ಕೆಲವು ಸಂಸ್ಥೆಯವರೂ ಕೆಲವೊಂದು ಗಗಳನ್ನು ಮಾಡಬಹುದು.

ಾಹರಣೆಗಾಗಿ ಕನಿಷ್ಠ ೧೦ ಪುಸ್ತಕ ಮಾರಾಟಗಾ ಘವನ್ನು ನಿರ್ಮಿಸಿಕೊಂಡು ಕೆಲವೊಂದು ನಿಯಮ ೆಗಳಂತೆ ನಡೆದರೆ ಸರಕಾರವಾಗಲಿ ಅಥವಾ ನವರಾಗಲಿ ರಚಿಸಿದ ಕೇಂದ್ರ ಸಂಸ್ಥೆಯವರು ಸಾವಿರದಷ್ಟು ಬೆಲೆಯ ಪುಸ್ತಕಗಳನ್ನು ಬದಲಿ ವಾಪಸ್ ತಕ್ಕೊಳ್ಳುವ ಕರಾರಿನ ಮೇಲೆ ಆ ಪುಸ್ತಕ ಒದಗಿಸಲು ಜಾಮೀನು ಆಗಬಹುದು. ಸಂಘಗಳ ಸದಸ್ಯರಿಗೆ ಸಾಲ ಅಥವಾ ದಾನ ಗಿ ಸೆಲ್ಫ್, ಕಪಾಟುಗಳನ್ನೂ ಲೆಕ್ಕಪತ್ರ ಇಡುವ ಯನ್ನೂ ಕೊಡುವ ವ್ಯವಸ್ಥೆ ಮಾಡಬಹುದು. ವ್ಯಾನಿನಿಂದ, ಅವರಿಗೆ ಬೇಕಾಗುವ ಪುಸ್ತಕ ಒದಗಿಸುವದು ಬೇಡಾದ ಪುಸ್ತಕಗಳನ್ನು ವಾಪಸು ಡು ಅವನ್ನು ಬೇಕಾದವರಿಗೆ ಒದಗಿಸುವದು ಈ ನ್ನು ಪುಕ್ಕಟೆಯಾಗಿ ಅಥವಾ ರಿಯಾಯಿತಿಯಲ್ಲಿ ವದು, ಪ್ರಕಾಶಕರು ಇಂಥ ಸಂಘದ ಸದಸ್ಯರಿಗೆ ೇದ ಯಾವ ನಿರ್ಬಂಧವಿಲ್ಲದೆ ಹೆಚ್ಚಿನ ಕಮೀಶನ ಡುವದು, ಅವರಿಗೆ ಬದಲಿ ಅಥವಾ ವಾಪಸ್ ್ಳುವ ಮುಂತಾದ ಸವಲತ್ತು ಕೊಡಬಹುದು. ಸಂಘಗಳ ಸದಸ್ಯರಲ್ಲಿ ದೊರೆಯುವ ಪುಸ್ತಕಗಳ ಪನ್ನು ಮುದ್ರಿಸಿ ಸದಸ್ಯರಿಗೆ ಪ್ರಚಾರಾರ್ಥ ದು. ಶಾಲೆ ಕಾಲೇಜ್ ಟಡಿಬಿ ಗ್ರಂಥಾಲಯ ಇಂಥ ಸದಸ್ಯರ ಮುಖಾಂತರ ಪುಸ್ತಕ ತಕ್ಕೊಳ್ಳ ನಿಯಮ ಮಾಡಿಸುವದು.

ಅವರ ವ್ಯಾಪಾರವನ್ನು ವರ್ಧಿಸುವದಕ್ಕೆ ಸಹಾ ಬಲ್ಲ ಅನೇಕ ಸೌಕರ್ಯಗಳನ್ನು ಮಾಡಿಕೊಟ್ಟರೆ ಇಂಥ ಸಂಘಗಳನ್ನು ಕಟ್ಟಲು ಮುಂದೆ ಬರಬ

ಪ್ರಾರಂಭದಲ್ಲಿ ಸರಕಾರದವರು ಸಾಹಿತ್ಯ ಪರಿ ರು ಇದಕ್ಕೆ ಉತ್ತೇಜನ ಕೊಡುವದು ಅತ್ಯಂತ ಾಗಿದೆ.

ಶಕರಲ್ಲಿ ಎಷ್ಟೋ ಜನ ನನ್ನ ಮಿತ್ರರಿದ್ದಾರೆ. ಳು ಸರಿಯಾಗಿ, ಬೇಗನೆ ಮಾರಾಟವಾಗದೆ ಹೊಸ ಪುಸ್ತಕ ಪ್ರಕಾಶನಕ್ಕೆ ಕೈ ಹಾಕುವ ಧೈರ್ಯವಿಲ್ಲದೆ ಅನೇಕ ಕಷ್ಟ ನಷ್ಟಗಳನ್ನು ಅನುಭವಿಸುತ್ತಿದ್ದಾರೆ. ನಮ್ಮ ಮೈಸೂರು ಬೆಂಗಳೂರು ಧಾರವಾಡ ವಿಶ್ವವಿದ್ಯಾಲಯದವರೂ ಸಾಹಿತ್ಯ ಹಾಗೂ ಸಂಸ್ಕೃತಿ ಪ್ರಚಾರ ಶಾಖೆಯವರೂ, ಸರಕಾರದವರೂ ಅನೇಕ ಉಪಯುಕ್ತ ಗ್ರಂಥಗಳನ್ನು ಪ್ರಕಟಿಸಿ ಮಾರಾಟದ ಸರಿಯಾದ ವ್ಯವಸ್ಥೆ ಇಲ್ಲದೆ ಚಡಪಡಿಸುತ್ತಿದ್ದಾರೆಂದು ನನ್ನ ಕೆಲವು ಮಿತ್ರರು ಹೇಳುತ್ತಾರೆ. ಸಾಹಿತ್ಯ ಪರಿಷತ್ತಿನವರೂ ಅದೇ ಉಪಾಯದ ಶೋಧನೆಯಲ್ಲಿದ್ದಾರೆಂದು ಕೇಳಿದ್ದೇನೆ. ಇಷ್ಟೆಲ್ಲ ಪ್ರಮುಖರ ಅನುಭವವೂ ಅಭಿಪ್ರಾಯವೂ ಒಂದೇ ಇರುವಾಗ, ಮತ್ತು ಇವರೆಲ್ಲರಿಗೂ ಸರಕಾರದ ಬೆಂಬಲವು ಸುಲಭವಾಗಿ ದೊರೆಯುವದು ಸಾಧ್ಯವಿರುವಾಗ ಪುಸ್ತಕ ಮಾರಾಟದ ಬೆಳವಣಿಗೆಗಾಗಿ ಒಂದು ಹೊಸ ಪ್ರಯೋಗವನ್ನು ಕೈಕೊಳ್ಳಬಾರದೇಕೆ? ಪುಸ್ತಕ ಮಾರಾಟದ ವ್ಯವಸ್ಥೆ ಚನ್ನಾಗಿ ಆದರೆ ಲೇಖಕರು ಪ್ರಕಾಶಕರು ನನ್ನಂಥರು ತಾವಾಗಿಯೇ ಬೆಳೆಯುತ್ತಾರೆ. ಪುಸ್ತಕೋದ್ಯಮದ ವಿವಿಧ ಅಂಗಗಳಲ್ಲಿ ಮಾರಾಟಗಾರನ ಪಾತ್ರವು ಅತ್ಯಂತ ಮಹತ್ವವಾದದ್ದು. ಆದರೂ ಸರಕಾರದವರು ಸಾಹಿತ್ಯ ಸಂಸ್ಥೆಯವರು ಲೇಖಕರನ್ನು ಪ್ರಕಾಶಕರನ್ನು ಅನೇಕ ಬಗೆಯಾಗಿ ಪ್ರೋತ್ಸಾಹಿಸುತ್ತಿದ್ದಾರೆ. ನ್ಯಾಶನಲ್ ಬುಕ್ ಟ್ರಸ್ಟನವರು ಲೇಖಕರನ್ನು ಶೋಧಿಸಿ ಗ್ರಂಥಗಳನ್ನು ಬರೆಸಿ ಮುದ್ರಿಸುತ್ತಿದ್ದಾರೆಯೇ ಹೊರತು ಪುಸ್ತಕ ಮಾರಾಟಗಾರರನ್ನು ಸಂಘಟಿಸಲು ಯಾವ ಕ್ರಮುವನ್ನೂ ಕೈಕೊಂಡಿಲ್ಲ. ಕೆಲವೊಂದು ವರ್ಷಗಳ ಹಿಂದೆ ಫೋರ್ಡ ಫೌಂಡೇಶನ್‌ನವರ ಸಹಾಯದಿಂದ ಸದರ್ನ ಲಾಂಗ್ವೇಜ ಬುಕ್ ಟ್ರಸ್ಟ್ ಎಂಬ ಸಂಸ್ಥೆಯೊಂದು ಮದ್ರಾಸಿನಲ್ಲಿ ಸ್ಥಾಪಿತವಾಗಿ, ಅದರ ಅಂಗವಾಗಿ ಬುಕ್ ಇಂಡಸ್ಟ್ರಿ ಕೌನ್ಸಿಲ್ ಆಫ್ ಸೌತ್ ಇಂಡಿಯಾ ಎಂಬ ಸಂಸ್ಥೆಯು ಪುಸ್ತಕ ಮಾರಾಟಗಾರರಿಗೆ ಉತ್ತೇಜನ ಕೊಡಲು ಪ್ರಾರಂಭ ಮಾಡಿ ನಾನು ಪ್ರಾರಂಭದ ಎರಡು ವರ್ಷ ಅದರ ಸದಸ್ಯನಾಗಿ ಕೆಲಸ ಮಾಡಿದೆ. ಅದರ ಫಲವಾಗಿ ತಮಿಳು, ತೆಲುಗು, ಮಲಯಾಳಿ ಪ್ರಕಾಶಕರ ಹಾಗೂ ಪುಸ್ತಕ ಮಾರಾಟಗಾರರ ಸಂಪರ್ಕದ ಲಾಭ ಹಾಗೂ ಅನುಭವ ಪಡೆದೆ. ಕೆಲವೊಂದು ಸಂಕುಚಿತ ದೃಷ್ಟಿ ಈ ಸಂಸ್ಥೆಯ ಚಟುವಟಿಕೆ ಹಾಗೂ ಧ್ಯೇಯ ಸಾಧನೆಯನ್ನು ಮೊಟಕುಗೊಳಿಸಿತೆಂದು ನನ್ನ ಅಭಿಪ್ರಾಯ. ಈಗ ನನಗೆ ಅದರ ಸಂಪರ್ಕದ ಆಸ್ಪದವಿಲ್ಲದ್ದರಿಂದ ಅದು ಈಗ ಹೇಗಿದೆ.

ಎಂಬುದು ನನಗೆ ಗೊತ್ತಿಲ್ಲ; ಆದರೆ ಲೇಖಕ ಪ್ರಕಾಶಕ ಹಾಗೂ ಪುಸ್ತಕ ಮಾರಾಟಗಾರರ ಸಂಘಟನೆಯ ಜಾಗೃತಿಯನ್ನು ಆ ಸಂಸ್ಥೆಯು ಚನ್ನಾಗಿ ಮಾಡಿತು.

ಮಾರಾಟಗಾರರ ಮಹತ್ವ

ಪುಸ್ತಕ ಮಾರಾಟಗಾರರ ಸಂಘಟನೆಯ ಅವಶ್ಯಕತೆಯ ಕಡೆಗೆ ನಾವು ಇನ್ನೊಂದು ದೃಷ್ಟಿಯಿಂದ ನೋಡಬಹುದು. ಪುಸ್ತಕ ಮಾರಾಟಗಾರನು ಲೇಖಕನ ವಿಚಾರಗಳನ್ನು ಓದುಗರಿಗೆ ಮುಟ್ಟಿಸುವ ಮುಖ್ಯ ಘಟಕ. ಓದುಗರೊಡನೆ ಪ್ರತ್ಯಕ್ಷ ಸಂಪರ್ಕವಿದ್ದವನು. ನಮ್ಮ ಓದುಗರಾದ–ಮಕ್ಕಳು ಮಹಿಳೆಯರು ಗ್ರಾಮಾಂತರದವರು ತಮ್ಮ ಬೌದ್ಧಿಕ ಹಸಿವೆಗಾಗಿ ಅವನನ್ನೇ ಅವಲಂಬಿಸಿರುವರು. ಇಂಥ ಮಹತ್ವದ ಕಾರ್ಯವನ್ನು ಅಸಂಘಟಿತರಾದ ಮಾರಾಟಗಾರರ ಮೇಲೆ ಬಿಟ್ಟರೆ ಅವರು ತಮಗೆ ಸುಲಭವಾಗಿ ಸಿಗುವ ಪುಸ್ತಕಗಳನ್ನೇ ವಾಚಕರಿಗೆ ಮುಟ್ಟಿಸುವರು. ಅದರಿಂದ ವಾಚಕರಾದ ಎಳೆಯ ಮಕ್ಕಳು ಮಹಿಳೆಯರು ಅಶಿಕ್ಷಿತ ಗ್ರಾಮಾಂತರ ಜನರು ಓದಬಾರದ್ದನ್ನು, ನಿರುಪಯೋಗವಾದದ್ದನ್ನು ಓದಿ ತಮ್ಮ ವೇಳೆಯನ್ನು ಹಣವನ್ನು ಹಾಳು ಮಾಡಿಕೊಳ್ಳುವರಲ್ಲದೆ ತಮ್ಮ ವಿಚಾರಶಕ್ತಿಯನ್ನು ಕೆಡಿಸಿಕೊಳ್ಳುವರು. ಇದೇ ಮಾರಾಟಗಾರರನ್ನು ಚೆನ್ನಾಗಿ ಸಂಘಟಿಸಿ ಅವರ ಮುಖಾಂತರ ಉತ್ತಮ ಹಾಗೂ ಉಪಯುಕ್ತ ಸಾಹಿತ್ಯವನ್ನು ನಾವು ಓದುಗರಿಗೆ ಮುಟ್ಟಿಸುವ ವ್ಯವಸ್ಥೆ ಮಾಡಿದರೆ ಅವರ ವೈಚಾರಿಕ ಶಕ್ತಿ ಬೆಳೆದು ಇಡೀ ನಾಡೇ ಪ್ರಗತಿ ಹೊಂದುವದು. ಈ ದೃಷ್ಟಿಯಿಂದಲಾದರೂ ಸರಕಾರವು ಈ ಅವಶ್ಯಕತೆಯನ್ನು ಗಮನಿಸಿ ಪುಸ್ತಕ ಮಾರಾಟಗಾರರ ಸಂಘಗಳ ಸ್ಥಾಪನೆಗೆ ಉತ್ತೇಜನ ಕೊಡಬೇಕು. ಬೇಕಾದ ಕನ್ನಡ ಚಿತ್ರಪಟಗಳಿಗೆ ಪ್ರತಿಯೊಂದಕ್ಕೆ ರೂ. ೫೦,೦೦೦ ಸಹಾಯಧನ ಕೊಡುವ ನಮ್ಮ ಸರಕಾರವು ಉತ್ತಮ ಸಾಹಿತ್ಯದ ಬೆಳವಣಿಗೆಗೆ ಅವಶ್ಯಕವಾಗಿರುವ ಪುಸ್ತಕ ಮಾರಾಟಗಾರರ ಸಂಘಟನೆಯನ್ನು ಅಷ್ಟೇ ಉದಾರತೆಯಿಂದ ನೋಡಬೇಕು.

ಕೇವಲ ಹೊಟ್ಟೆಪಾಡಿನದಲ್ಲ

ಪುಸ್ತಕ ಮಾರಾಟವೆಂದರೆ ಕೇವಲ ಹೊಟ್ಟೆ ಹೊರಕೊಳ್ಳಲು ನಡೆಸುವ ಉದ್ಯಮವಲ್ಲ. ಜ್ಞಾನ ಪ್ರಸರ ಯಜ್ಞದಲ್ಲಿ ಅದೊಂದು ಅವಶ್ಯಕ ಭಾಗ. ಅದು ಸಮಾಜದ ಆರ್ಥಿಕ ವ್ಯವಸ್ಥೆಯ ಚೌಕಟ್ಟಿನಲ್ಲೂ ಸೇರಿಕೊಳ್ಳು

ತ್ತದೆ. ಖಾದಿ ಗ್ರಾಮೋದ್ಯೋಗ ವಸ್ತುಗಳು, ಕೆಲ ವಿ
ರೀತಿಯ ಬಟ್ಟೆಬರೆಗಳು ಮೊದಲಾದವುಗಳ ಮಾರಾ
ಸರಕಾರ ಮುಚ್ಚುಮರೆಯಿಲ್ಲದೆ ನೆರವು ನೀಡುತ್ತ
ಪುಸ್ತಕ ಪ್ರಸಾರ ಮತ್ತು ಪ್ರಚಾರ ಅದಕ್ಕಿಂತ
ಷ್ಟವೆ? ಈ ಕ್ಷೇತ್ರದ ಸಂಘಟನೆ ಹೇಗಿರಬೇಕೆಂಬ
ಸರಕಾರ ಏಕೆ ಗಮನ ಕೊಡಬಾರದು? ಇದನ್ನು ಸ
ಟಿಸುವುದಕ್ಕೆ ತನ್ನ ಶಕ್ತಿಯನ್ನು ಏಕೆ ವಿನಿಯೋ
ಬಾರದು? ಇದು ಹೆಚ್ಚು ಸಮರ್ಥವೂ ಸುವ್ಯವಸ್ಥಿತ
ಆಗುವಂತೆ ಏಕೆ ನೆರವು ನೀಡಬಾರದು? ಜನತೆಯ ಕ
ಣದ ಗುರಿಯನ್ನೇ ಮುಖ್ಯವಾಗಿಟ್ಟುಕೊಂಡ ನ
ಕೇಂದ್ರ ಹಾಗೂ ರಾಜ್ಯ ಸರಕಾರಗಳು ಇನ್ನಾದ
ಇದಕ್ಕೆ ಗಮನ ಕೊಡುವರೆಂದು ನಾವು ನಂಬಿದ್ದೇವೆ.

ಮತ್ತೊಂದು ಸಲಹೆ

ಈ ಸಂಘ ಸಂಸ್ಥೆಗಳ ಸಂಘಟನೆಗೆ ಉತ್ತೇಜನವ
ಲೆಂಬ ಉದ್ದೇಶದಿಂದ ನಾನು ಇನ್ನೊಂದು ವಿಚಾರವ
ಆಗಾಗ್ಗೆ ನನ್ನ ಮಿತ್ರರ ಮುಂದೆ ಹೇಳುವದನ್ನೆ
ಪುನಃ ಹೇಳುತ್ತೇನೆ. ನಮ್ಮ ನಾಲ್ಕು ವಿಶ್ವವಿದ್ಯಾಲ
ದವರು, ಸಾಹಿತ್ಯ ಪರಿಷತ್ತಿನವರು, ಅಕಾಡೆಮಿಯವ
ಮೈಸೂರು ರಾಜ್ಯ ಪುಸ್ತಕ ಮಾರಾಟಗಾರರ ಸಂ
ವರು ಪ್ರಕಾಶಕ ಸಂಘದವರು ಸೇರಿ ಪುಸ್ತಕ ಮಾರಾ
ಒಂದು ಬೃಹತ್ ಯೋಜನೆಯನ್ನು ಕೈಗೊಳ್ಳಬೇ
ಅದು ಬೇಕಾದರೆ ಸೊಸಾಯಿಟಿ, ಅಥವಾ ಟ್ರಸ
ಅಥವಾ ಜಾಯಿಂಟ್ ಸ್ಟಾಕ್ ಕಂಪನಿಯಾಗಿಯೇ ಕೆ
ಮಾಡಲಿ. ಇವರು ಬೆಂಗಳೂರು, ಮೈಸೂರು, ಮ
ಳೂರು, ಧಾರವಾಡ, ಗುಲ್ಬರ್ಗ—ಈ ಪ್ರಮುಖ ನ
ಗಳಲ್ಲಿ ಒಂದೊಂದು ದೊಡ್ಡ ಅಂಗಡಿಯನ್ನು ತೆಗೆ
ಬೇಕು. ಆಯಾ ಭಾಗದ ಪುಸ್ತಕದ ಅಂಗಡಿಯವರು ಬ
ಹಾಗೂ ವಾಪಸ್ ಕೊಡುವ ಕರಾರಿನ ಮೇಲೆ ಅವರಿ
ಪುಸ್ತಕ ಪಡೆದುಕೊಳ್ಳಲು ಇಚ್ಛಿಸಿದರೆ ಅವರ ನಿಯ
ವನ್ನು ಒಪ್ಪಿಕೊಂಡು ಸದಸ್ಯರಾಗಬಹುದು. ಈ ಸಂ
ಯವರು ತಪಾಸಿಗರನ್ನು ನಿಯಮಿಸಿ ಸದಸ್ಯ ಪುಸ್ತ
ಮಾರಾಟಗಾರರು ತಮ್ಮ ಹಣವನ್ನು ಸರಿಯಾಗಿ ಕೊ
ವದನ್ನು ಉಳಿದ ಮಾಲನ್ನು ಸರಿಯಾಗಿ ಇಟ್ಟಿರುವದನ್
ಅವರ ನಿಯಮದಂತೆ ಲೆಕ್ಕಪತ್ರಗಳನ್ನಿಡುವದನ್ನು ನೋ
ಕೊಳ್ಳುವರು. ಈ ಸಂಸ್ಥೆಯವರ ಸಂಚಾರಿ ವಾಹನಗ
ಸದಸ್ಯ ಪುಸ್ತಕ ಮಾರಾಟಗಾರರಿಗೆ ಪುಸ್ತಕಗಳನ್ನು

ಽದಲ್ಲದೆ ಹೊಸ ಹೊಸ ಮಾರಾಟಗಾರರನ್ನು ನಿಯ
ವದು; ಸಂಚಾರಿ ಅಂಗಡಿ ನಡೆಸಿ ಪುಸ್ತಕ ಮಾರಾಟ
ಳ್ಳುವುದು ಮುಂತಾದ ಕೆಲಸವನ್ನು ನಡೆಸುವವು.
ಂತೆ ಕಾಲಕಾಲಕ್ಕೆ ಪುಸ್ತಕ ಪ್ರದರ್ಶನ ಏರ್ಪಡಿಸು
ಪ್ರಚಾರ ಕಾರ್ಯ ಮಾಡುವದು, ವಾಚಕರ ಅಭಿ
ತಿಳಿದು ಪ್ರಕಾಶಕರಿಗೆ ಸಲಹೆ ಕೊಡುವದು, ಪ್ರಕಾ
ಗೆ ಸಾಧ್ಯವಿದ್ದರೆ ಮುಂಗಡ ಧನ ಸಹಾಯ ಮಾಡು
ಇವೇ ಮುಂತಾದ ಉದ್ದೇಶಗಳನ್ನು ಈ ಸಂಸ್ಥೆ
ದ ನಡೆಸಬೇಕು. ಈ ಸಂಸ್ಥೆಗೆ ಸರಕಾರವೂ ಸಹಾಯ
ಬೇಕು. ಇಂಥ ಒಂದು ಸಂಸ್ಥೆಯನ್ನು ಪ್ರಾರಂಭದಲ್ಲಿ
ರೆ ಪುಸ್ತಕ ಮಾರಾಟಗಾರರು ಜಾಗೃತರಾಗಿ ತಾವಾ
ಇಂಥ ಅನೇಕ ಸಂಸ್ಥೆಗಳನ್ನು ತೆಗೆಯಲು ಮುಂದೆ
ವರು. ಹಾಗೆ ಸ್ಥಾಪಿತವಾಗುವ ಸಂಸ್ಥೆಗಳು ಈ
ಸಂಸ್ಥೆಗೆ ವಿರೋಧವಾಗುವದೆಂದು ಭಾವಿಸದೆ ಈ
ಯವರು ತಮ್ಮ ಉದ್ದೇಶ್ಯ ನೆರವೇರಿತೆಂದು ಭಾವಿಸ
. ಪ್ರಾರಂಭದಲ್ಲಿ ಇಂಥ ಸಂಸ್ಥೆಯು ತನ್ನ ಕಾರ್ಯ
ಹಣೆಯಲ್ಲಿ ಏನಾದರೂ ಹಾನಿಯನ್ನು ಅನುಭವಿಸಿ
ಅದನ್ನು ಸರಕಾರವು ಉದಾರ ಮನಸ್ಸಿನಿಂದ ತುಂಬಿ
ಕೊಡಬೇಕು.

ಒಟ್ಟಿನ ಮೇಲೆ ಹೇಳುವದಾದರೆ ಪುಸ್ತಕ ಮಾರಾಟಗಾರರು ಇಂದಿನ ನಮ್ಮ ಸಮಸ್ಯೆಗಳನ್ನು ಎದುರಿಸಲು ಸಂಘಗಳನ್ನು ಕಟ್ಟಿಕೊಳ್ಳಲೇಬೇಕು. ಅವುಗಳ ಅವಶ್ಯಕತೆಯು ಅವರಿಗಷ್ಟೇ ಇರದೆ ಲೇಖಕರಿಗೆ, ಪ್ರಕಾಶಕರಿಗೆ ಓದುಗರಿಗೆ–ಇಡೀ ನಮ್ಮ ಸಮಾಜಕ್ಕೆ ಇರುವದರಿಂದ ಅವರ ಆ ಪ್ರಯತ್ನಕ್ಕೆ ನಮ್ಮ ಸರಕಾರವೂ, ಸಂಬಂಧಪಟ್ಟ ಇತರ ಸಂಘ ಸಂಸ್ಥೆಗಳೂ ತನುಮನ ಧನದಿಂದ ಪುಸ್ತಕ ಮಾರಾಟಗಾರರ ಅಂಥ ಪ್ರಯತ್ನಕ್ಕೆ ಸಹಾಯ ಸಹಕಾರವನ್ನು ಕೊಡಬೇಕು. ಆದರೂ ಅವರಿಂದ ಸಾಕಷ್ಟು ಸಮಾಧಾನಕರವಾದ ಪ್ರತಿಕ್ರಿಯೆ ಬರದಿದ್ದರೆ, ನಾನು ಹೇಳಿದಂತೆ ವಿಶ್ವವಿದ್ಯಾಲಯ, ಸಾಹಿತ್ಯ ಪರಿಷತ್ತು ಮುಂತಾದವರು ಸೇರಿ ಪ್ರಾರಂಭದಲ್ಲಿ ಒಂದು ಮಾದರಿಯ ಕೇಂದ್ರ ಸಂಘವನ್ನು ಸ್ಥಾಪಿಸಿ ಮಾರಾಟಗಾರರಿಗೆ ಅವಶ್ಯಕವಾದ ಸಹಾಯವನ್ನು ಸಲ್ಲಿಸಿ ಅವರಲ್ಲಿ ಜಾಗೃತಿ ಉಂಟುಮಾಡಿ ಇನ್ನು ಅನೇಕ ಸಂಘಗಳನ್ನು ಅವರು ನಿರ್ಮಿಸಿಕೊಂಡು ಬೆಳೆಯುವಂತೆ ಪ್ರೋತ್ಸಾಹಿಸಬೇಕು.

ನುಡಿದರೆ ಮುತ್ತಿನಹಾರದಂತಿರಬೇಕು,
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,
ನುಡಿದರೆ ಸ್ಫಟಿಕದ ಶಲಾಕದಂತಿರಬೇಕು.

....

ಮಾತೇ ಜ್ಯೋತಿರ್ಲಿಂಗ;

....

ಮೃದುವಚನಗಳೆ ಸಕಲ ಜಪಂಗಳು.


—ಬಸವೇಶ್ವರ

ಕರ್ನಾಟಕ ಗಡಿನಾಡು ಪ್ರತಿನಿಧಿಗಳ ಸಮ್ಮೇಳನ—ಬೆಂಗಳೂರು



ಎಡದಿಂದ ಬಲಕ್ಕೆ—ಶ್ರೀಗಳಾದ ಬಿ. ಶಿವಮೂರ್ತಿ ಶಾಸ್ತ್ರಿ, ದೇ. ಜವರೇಗೌಡ, ಕಡಿದಾಳ್ ಮಂಜಪ್ಪ (ಅಧ್ಯಕ್ಷರು), ನಿಟ್ಟೂರು ಶ್ರೀನಿವಾಸರಾವ್ (ಉದ್ಘಾಟಕರು), ಜಿ. ನಾರಾಯಣ, ಶ್ರೀರಂಗ, ಎಸ್. ಎಸ್. ಮಳೀಮಠ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆದ ಅಖಿಲ ಕರ್ನಾಟಕ ಗಮಕ ಸಮ್ಮೇಳನ



ಎಡದಿಂದ ಬಲಕ್ಕೆ—ಶ್ರೀ ಜಿ. ನಾರಾಯಣ, ಡಾ॥ ಡಿ. ವಿ. ಗುಂಡಪ್ಪ (ಉದ್ಘಾಟಕರು), ಶ್ರೀ ಜೋಳದರಾಶಿ ದೊಡ್ಡನಗೌಡ (ಅಧ್ಯಕ್ಷರು)

ಗಮಕ ಸಮ್ಮೇಳನದ ಉದ್ಘಾಟನೆಯನ್ನು ಡಾ|| ಡಿ. ವಿ. ಜಿ. ಅವರು ನೆರವೇರಿಸಿದಾಗ



ಎಡದಿಂದ ಬಲಕ್ಕೆ—ಶ್ರೀ ಜಿ. ನಾರಾಯಣ, ಡಾ|| ಡಿ. ವಿ. ಜಿ., ಶ್ರೀ ಜೋಳದರಾಶಿ ದೊಡ್ಡನಗೌಡ, ಸಮ್ಮೇಳನದ ಸಂಯೋಜಕರಾದ ಶ್ರೀ ಹೆಚ್. ಎಂ. ರಾಮಾರಾಧ್ಯ

...ಟಕದಲ್ಲಿ
...ದ್ರಣಕಾರ್ಯ

ಆರಂಭ ಕಾಲ

ಪುಸ್ತಕ ಪರೋಪಜೀವಿ! ಅದರ ಹುಟ್ಟು-ಬದುಕು, ಉಳಿವು ಏಳಿಗೆಗಳು ಹಲವಾರು ವ್ಯಕ್ತಿಗಳನ್ನು ಅವಲಂಬಿಸಿವೆ. ಲೇಖಕ, ಮುದ್ರಕ, ಪ್ರಕಾಶಕ, ಭಂಡಾರಿಗ, ವಿಮರ್ಶಕ, ಓದುಗ ಇತ್ಯಾದಿ. ಇವರಲ್ಲಿ ಮುದ್ರಣಕಾರನ ಪಾತ್ರವು ಇಲ್ಲಿ ಪ್ರಸ್ತುತವಾದುದು. ಲೇಖನಿಯಿಂದ ಹೊರಬಂದ ಪುಸ್ತಕವು ಮುದ್ರಣಾಲಯವೆಂಬ ಗರ್ಭದಲ್ಲಿ ಕೆಲವು ತಿಂಗಳು ಕಳೆದ ಮೇಲೆಯೇ ಅದಕ್ಕೆ ಜನ್ಮಪ್ರಾಪ್ತಿ! ಜನಕ್ಕೆ ಆ ಪುಸ್ತಕದ ಅಸ್ತಿತ್ವವು ಗೊತ್ತಾಗುವುದು, ಮುದ್ರಣಾಲಯದಿಂದ ಹೊರಬಿದ್ದ ಮೇಲೆಯೇ. ಕನ್ನಡ ಪುಸ್ತಕಗಳಿಗೆ ಸಂಬಂಧಿಸಿದಂತೆ ಮುದ್ರಣಾಲಯಗಳ ವಿಕಾಸ, ಅದರಿಂದ ಗ್ರಂಥೋದ್ಯಮವು ನಾಡಿನಲ್ಲಿ ಪ್ರಸಾರಗೊಂಡ ಬಗೆ-ಇವನ್ನು ಈ ಲೇಖನದಲ್ಲಿ ವಿವೇಚಿಸ ಬಯಸಿದೆ.

ಇಂದಿಗೆ ೧೫೫ ವರ್ಷಗಳ ಹಿಂದೆ, ಕನ್ನಡ ಪುಸ್ತಕವು ಮೊತ್ತಮೊದಲು ಅಚ್ಚಿನ ಮನೆಯನ್ನು ಸೇರಿತು (೧೮೧೭). ಕರ್ನಾಟಕದಲ್ಲಿ ಅಲ್ಲ, ದೂರದ ಕಲ್ಕತ್ತೆಯ ಬಳಿ ಇರುವ ಶ್ರೀರಾಮಪುರ ಪ್ರೆಸ್‌ನಲ್ಲಿ. ಅಲ್ಲಿಂದ ಹೊರಬಂದ, ಆದ್ಯ ಮುದ್ರಿತ ಕನ್ನಡ ಪುಸ್ತಕವೆಂದರೆ ವಿಲಿಯಂ ಕೇರಿ ವಿರಚಿತ Grammar of the Kurnata language, ಅವನೇ ಅದರ ಮುದ್ರಕನು. ಮೂರು ವರ್ಷಗಳಾದ ಮೇಲೆ ಮದ್ರಾಸಿನ ಫೋರ್ಟ್ ಸೆಂಟ್ ಜಾರ್ಜ ಕಾಲೇಜಿನ ಪ್ರೆಸ್ಸಿನಲ್ಲಿ ಇನ್ನೊಂದು ಕನ್ನಡ ವ್ಯಾಕರಣ ಪುಸ್ತಕವು ಮುದ್ರಣಗೊಂಡಿತು. (A Grammar of the Carnataca language). ಇವೆರಡೂ ಪುಸ್ತಕಗಳಲ್ಲಿ ಉದಾಹರಣೆಗಳಷ್ಟೇ ಕನ್ನಡದಲ್ಲಿವೆ. ಮುಂದೆ ಮದ್ರಾಸದಲ್ಲಿಯೇ ಎರಡು 'ಭಯಂಕರ' ಗಾತ್ರದ ಶಬ್ದಕೋಶಗಳು (ಇಂಗ್ಲಿಷ್-ಕನ್ನಡ ಮತ್ತು ಕನ್ನಡ-ಇಂಗ್ಲಿಷ್) ಪ್ರಕಟವಾದುವು. ಒಂದೊಂದೂ ಡೆಮಿ $\frac{1}{4}$ ಆಕಾರದ ೧೨೦೦ ಪುಟಗಳುಳ್ಳವು. ಇವುಗಳಲ್ಲಿ ಉಪಯೋಗಿಸಲಾದ ಮೊಳೆಗಳ ದೊಡ್ಡ ಆಕಾರವೇ ಈ ಗಾತ್ರಕ್ಕೆ ಕಾರಣವಾಯ್ತು. ಶ್ರೀರಾಮಪುರ ಮತ್ತು ಮದ್ರಾಸಗಳಲ್ಲಿ ಹೀಗೆ ಕನ್ನಡ ಮುದ್ರಣ

ಡಾ॥ ಶ್ರೀನಿವಾಸ ಹಾವನೂರ

ಆರಂಭವಾದರೂ, ಅಲ್ಲಿ ಅದು ಮುಂದುವರಿಯಲಿಲ್ಲ. ಒಳನಾಡಿನಲ್ಲಿಯೇ ಮುದ್ರಾಯಂತ್ರವು ಮೊದಲು ನೆಲೆಯೂರಿದುದು ಬಳ್ಳಾರಿಯಲ್ಲಿ.* ನಮ್ಮ ನಾಡಿನಲ್ಲಿ ಧರ್ಮ ವಿದ್ಯಾ ಪ್ರಚಾರಕ್ಕೆ ಅದು ಅತ್ಯಗತ್ಯ ಸಾಧನವೆಂಬುದನ್ನು ಮೊದಲಿಗೆ ಮನಗಂಡವನು ಲಂಡನ್ ಮಿಶನ್ ಸಂಸ್ಥೆಯ ಜಾನ್ ಹ್ಯಾಂಡ್ಸ್ ಎಂಬುವನು.

ಬಳ್ಳಾರಿ

ಜಾನ್ ಹ್ಯಾಂಡ್ಸ್ ಬಳ್ಳಾರಿಗೆ ಬಂದ ೨-೩ ವರ್ಷಗಳಲ್ಲಿಯೆ ಕನ್ನಡ ವ್ಯಾಕರಣ, ಕೋಶ ಮತ್ತು ಬೈಬಲಿನ ಅನುವಾದ—ಇವು ಮೂರರ ಹಸ್ತಪ್ರತಿಗಳನ್ನು ಸಿದ್ಧಗೊಳಿಸಿದ್ದನು. ಆದರೆ ಮುದ್ರಣದ ಅನುಕೂಲವಿರಲಿಲ್ಲ. ಅದ್ದರಿಂದ ಓರ್ವ ಶಾಲಾ ಮಾಸ್ತರನನ್ನು ಸಂಬಳಕ್ಕಿಟ್ಟುಕೊಂಡು ಅವನಿಂದ ಪ್ರತಿಮಾಡಿಸಿ, ಅವನ್ನು ಹಂಚುತ್ತಲಿದ್ದನು. ಪ್ರಚಾರಾರ್ಥವಾಗಿ ಸಾವಿರಾರು ಪ್ರತಿಗಳು ಬೇಕಾದಾಗ ಇದೆಂತು ಸಾಕಾದೀತು? ೧೮೧೬ರಂದು ಅವನು ಒಂದು ಮುದ್ರಾಯಂತ್ರ ಸ್ಥಾಪನೆಗಾಗಿ ಈಸ್ಟ್ ಇಂಡಿಯಾ ಕಂಪೆನಿಯ ಅನುಮತಿಯನ್ನು ಬೇಡಿದುದಾಗಿ ತಿಳಿದು ಬರುತ್ತಿದೆ. ಆದರೆ ಅದಕ್ಕೆ ಇಂಬು ದೊರೆಯಲಿಲ್ಲ. ಹ್ಯಾಂಡ್ಸ್ ಕಲಕತ್ತೆಯಲ್ಲಿದ್ದ ಬೈಬಲ್ ಸೊಸೈಟಿಯವರಿಗೆ ತನ್ನ ಹಸ್ತಪ್ರತಿಯನ್ನು ಕಳಿಸಿ ಅವರ ಆರ್ಥಿಕ ನೆರವನ್ನು ಕೋರಿದನು. ಸೊಸೈಟಿಯವರು ಅವನಿಗೆ ಒಂದು ಸಾವಿರ ರೂ.ಗಳನ್ನು ಕೊಟ್ಟು, ಮದ್ರಾಸಿನಲ್ಲಿ ಖಾಸಗಿಯಾಗಿ ಮುದ್ರಿಸಬಹುದೆಂಬ ಸೂಚನೆ ಮಾಡಿದರು. ಆಗ ಮದ್ರಾಸದಲ್ಲಿದ್ದ ಲವ್‌ಲೆಸ್ ಎಂಬವನ ಸಹಾಯ ಪಡೆದು ಹ್ಯಾಂಡ್ಸ್ ಕಮರ್ಶಿಯಲ್ ಪ್ರೆಸ್ ಎಂಬಲ್ಲಿ ಹೊಸ ಒಡಂಬಡಿಕೆಯ ಪೂರ್ವಾರ್ಧವನ್ನು ಮುದ್ರಿಸಲು ಅಣಿಯಾದನು. ೧೮೨೦ರಲ್ಲಿ ಮುದ್ರಣ ಮುಗಿದು ಹೊರಬಂದ ಈ ಕೃತಿಯು ಸಂಪೂರ್ಣವಾಗಿ ಕನ್ನಡ ಭಾಷೆ ಮತ್ತು ಲಿಪಿಯಲ್ಲಿರುವ ಆದ್ಯ ಮುದ್ರಿತ ಗ್ರಂಥವಾಗಿದೆ.

ನಮ್ಮ ಜನಕ್ಕೆ ಈ ಗ್ರಂಥ ಸ್ವರೂಪವು ಅತ್ಯಂತ ಹೊಸದು. ಅಲ್ಲದೆ ಪುಕ್ಕಟೆಯಾಗಿ, ಸುಲಭವಾಗಿ ಸಿಗುವ ಪ್ರಮೇಯವು ಅವರ ಸಂಭ್ರಮವನ್ನು ಹೆಚ್ಚಿಸಿತು. ಪುಸ್ತಕಗಳಲ್ಲಿಯ ವಿಷಯ, ಭಾಷೆಗಳು ವಿಚಿತ್ರ ಹಾ ಅಪರಿಚಿತವಾಗಿ ಕಂಡರೂ ಅವನ್ನು ಓದುವಲ್ಲಿ ಅ ಉತ್ಸಾಹವನ್ನು ತೋರಿದರು.

ಕಮರ್ಶಿಯಲ್ ಪ್ರೆಸ್ಸಿನ ಮೊಳೆಗಳು ಮೆ ನೋಟಕ್ಕೆ ತೆಲುಗಿನವೆಂದು ಕಂಡರೂ, ಅವು ಕನ್ನಡದ ಆಗಿವೆ. ಈ ಪ್ರೆಸ್ ವಿಲಿಯಮ್ ಅರ್ಕ್‌ಹಾ ಎಂಬ ಖಾಸಗೀ ವ್ಯಕ್ತಿಗೆ ಸೇರಿದುದಾಗಿತ್ತು. ಆ ಮು ಈ ಪ್ರೆಸ್ಸಿನಲ್ಲಿ ತೆಲುಗಿನ ಬೈಬಲನ್ನು ಮುದ್ರಿಸಲಾಗಿದ್ದ ಹ್ಯಾಂಡ್ಸನ ಕನ್ನಡ ಬೈಬಲಿನ ಹಸ್ತಪ್ರತಿಯು ಮುದ್ರ ಕ್ಕೆಂದು ಬಂದಾಗ, ಅರ್ಕ್‌ಹಾರ್ಟನು ಸ್ವಧರ್ಮ ಯಿಂದ ಪ್ರೇರಿತನಾಗಿ, ಕನ್ನಡದ ಮೊಳೆಗಳನ್ನು ಪ್ರತ್ಯೆ ವಾಗಿ ಎರಕ ಹೊಯ್ಸಿದನಂತೆ. ಕನ್ನಡ ಮೊಳೆ ತಯಾರಿಕೆಯಲ್ಲಿ ಇದು ಮೂರನೆಯ ಬಿಡಿ ಪ್ರಯ ವಾಗಿದೆ.

ಆ ಮುಂದೆ ಹ್ಯಾಂಡ್ಸ್ ಇದೇ ಪ್ರೆಸ್ಸಿನಲ್ಲಿ ಬೈಬಲ್ ಸಂಬಂಧಿಸಿದ ಒಂದೆರಡು ಸಣ್ಣ ಪುಸ್ತಕಗಳನ್ನು ಹೊ ತಂದನು. ಆದರೆ ಬಳ್ಳಾರಿ, ಮದ್ರಾಸಗಳ ನಡುವ ಈ ನಿರಂತರ ಓಡಾಟವು ತೊಂದರೆದಾಯಕವಾಗಿದ್ದ ಬಳ್ಳಾರಿಯಲ್ಲಿಯೆ ಮುದ್ರಾಯಂತ್ರವನ್ನು ನೆಲೆಗೊಳಿಸ ಅವನು ಮತ್ತೆ ಉದ್ಯುಕ್ತನಾದನು. ದಿ. ೧೮-೭-೧೮ ರಂದು ಅವನು, ಲಂಡನ್ನಿನಲ್ಲಿರುವ ತನ್ನ ಕೇಂದ್ರ ಕಚೇರಿ ಬರೆದ ಪತ್ರದಲ್ಲಿ[1] ಒಂದು ಪ್ರೆಸ್ ಹಾಗೂ ಓ ಮುದ್ರಕನನ್ನು ಕಳಿಸಬೇಕೆಂದು ಕೇಳಿಕೊಂಡನು. ಕೊ ಗೊಮ್ಮೆ ೧೮೨೬ರಲ್ಲಿ ಮುದ್ರಾಯಂತ್ರವೊಂದು ಬಳ್ಳಾ ಯನ್ನು ತಲುಪಿತು. ಅದು ಕಾರ್ಯಗತವಾದ ೧೮ ನೆಯ ವರ್ಷವು ಐತಿಹಾಸಿಕವಾಗಿ ಮಹತ್ವವುಳ್ಳದ ಏಕೆಂದರೆ ಕನ್ನಡ ಗ್ರಂಥಗಳ ನಿಯಮಿತವಾದ ಮುದ್ರಣ ಮೊದಲಾದುದು ಆ ವರ್ಷದಿಂದಲೇ.

ಬಳ್ಳಾರಿಯಲ್ಲಿ ೧೮೧೨ರಷ್ಟು ಹಿಂದೆಯೇ ಮುದ್ರಣ ಮೊದಲಾಯಿತೆಂದು ಕೆಲವೆಡೆ ಉಲ್ಲೇಖವಿದೆ.[2] ಆ ೧೮೧೨ರಿಂದ ೧೮೨೦ರ ವರಗೆ ಹ್ಯಾಂಡ್ಸ್ ಮುದ್ರಿ ಇನ್ನಾವುದೇ ಪುಸ್ತಕದಲ್ಲಾಗಲೀ, ಅವುಗಳ ಮುದ್ರ ನಡೆದ ಬಗ್ಗೆ ಉಲ್ಲೇಖವಾಗಲೀ ಅವನ ಹಾಗೂ ಲಂಡ ಕಚೇರಿಯ ನಡುವಿನ ಪತ್ರವ್ಯವಹಾರದಲ್ಲಿ ತೋ ಬಂದಿಲ್ಲ. ಬಳ್ಳಾರಿಯಲ್ಲಿ ೧೮೧೨ರಿಂದ ಮುದ್ರಾಯಂ

* ಜಗತ್ತು ಮತ್ತು ಭಾರತಗಳಲ್ಲಿಯ ಮುದ್ರಣದ ಇತಿಹಾಸವನ್ನು ಕುರಿತು, ಪ್ರಜಾವಾಣಿಯ ೧೯೬೩ನೆಯ ವರ್ಷದ ಮೇ-ಆಗಸ್ಟ ಸಾಪ್ತಾಹಿಕ ಪುರವಣಿಗಳನ್ನೂ 'ಕನ್ನಡದಲ್ಲಿ ಮುದ್ರಣದ ಅಭಿಯೋಗ'ವನ್ನು ಕುರಿತು, ಪ್ರಜಾವಾಣಿಯ ೧೯೬೬ರ ದೀಪಾವಳಿಯ ಸಂಚಿಕೆಯನ್ನೂ ನೋಡಬಹುದು—ಲೇಖಕ.

ಯಾಗಿದ್ದೀ ಆದರೆ, ೧೮೧೮ರ ಸುಮಾರಿಗೆ ಆರಂಭ
ೂಸ ಒಡಂಬಡಿಕೆಯ ಮುದ್ರಣಕ್ಕಾಗಿ ಹ್ಯಾಂಡ್ಸ್
ಗೆ ಎಡಕಾಕುವ ಪ್ರಸಂಗವೇ ಬರುತ್ತಿರಲಿಲ್ಲ.*
ರಿಯ ಮಿಶನ್ ಪ್ರೆಸ್ಸಿನಲ್ಲಿ ಕನ್ನಡ, ತೆಲುಗು
ಲ್ಲಿ ಪುಸ್ತಕಗಳ ಮುದ್ರಣ ನಡೆದಿದ್ದಿತು. ಆದರೆ
ಮೊಳೆಗಳು ಪ್ರತ್ಯೇಕವಾಗಿ ಇರಲಿಲ್ಲವಾದ್ದರಿಂದ,
ಲಿಪಿಯಲ್ಲಿಯೇ ಅವನ್ನು ಮುದ್ರಿಸಲಾಗುತ್ತಿತ್ತು!
ಲ್ಲಿ ಹ್ಯಾಂಡ್ಸ್ ಲಂಡನ್ನಿನಿಂದ, ಕನ್ನಡ ಮೊಳೆ
ಮಾಡಿಸಿ ತಂದನು. ಜೊತೆಗೆ ಪೇನ್ ಎಂಬ
ನೂ ಬಂದನು. ಹ್ಯಾಂಡ್ಸನ ಉತ್ತರಾಧಿಕಾರಿ
ಜಾನ್ ರೀಡ್ ಮತ್ತು ಪೇನ್ ಇವರ ನೇತೃತ್ವ
ದ್ರಣ ಕಾರ್ಯವು ಭರದಿಂದ ಮುಂದುವರಿಯಿತು.
ಯ ಪ್ರೆಸ್ ೧೮೪೦ರ ವರೆಗೆ ಏಕನೇವಾದ್ವಿತೀಯ
ರೆಯಿತು. ಪೇನ್ ಕಾಲೆರಾದಿಂದ ಮಡಿದಮೇಲೆ
) ಆದರ ಪ್ರಗತಿಯು ಕ್ರಮೇಣ ಕುಂಠಿತಗೊಂಡು
ಸುಮಾರಿಗೆ ನಿಂತುಹೋಯಿತು.[೩]

ೂರು

ಂಕ್ಕೆ ಮುಂಚೆ ಬೆಂಗಳೂರಲ್ಲಿ ಯಾವ ಕನ್ನಡ
ಾಲಯವೂ ಇರಲಿಲ್ಲ. ತಮಿಳು, ತೆಲುಗು
ಗಳು ದಂಡಿನ ಪ್ರದೇಶದಲ್ಲಿ ಕಣ್ಣಿಗೆ ಬೀಳುತ್ತಿದ್ದವು.
ಯಲ್ಲಿದ್ದ ಪ್ರೆಸ್ಸು ಲಂಡನ್ ಮಿಶನ್ನಿನವರಿಗೆ
ದ್ದರಿಂದ, ವೆಸ್ಲೆಯನ್ನರು ಮತಪ್ರಸಾರ, ಶಿಕ್ಷಣ
ದ ಸ್ವಕಾರ್ಯಗಳಿಗೆಂದು ಪ್ರತ್ಯೇಕ ಮುದ್ರಣಾಲ
ಸ್ಥಾಪಿಸಿಕೊಂಡರು (ನವೆಂಬರ್ ೧೮೪೦).
ಮೊದಲಿಗೆ ಪ್ರಕಟವಾದ ಕೃತಿ 'ಪ್ರಶ್ನೋತ್ತರ
ಪುಸ್ತಕ' ಎಂಬುದು.
ಳೆಗಳ ಸುಧಾರಣೆಗೆ ವೆಸ್ಲೆಯನ್ನರು ವಿಶೇಷ
ಗಮನವಿತ್ತರು. ಆರಂಭಕ್ಕೆ ಮದ್ರಾಸಿನಿಂದ ತಂದ
ಮೊಳೆಗಳಲ್ಲಿ ಒಟ್ಟಿಗೆ ಏಳು ನೂರು ಸಂಜ್ಞೆಗಳನ್ನು
ಒಳಗೊಂಡಿದ್ದುವು. ಈ ಸಂಖ್ಯೆಯನ್ನು ಬಹುವಾಗಿ
ತಗ್ಗಿಸಲು ಥಾಮಸ್ ಹಾಡ್ಸನ್ ಪಣತೊಟ್ಟನು. ಹೊಸ
ಸಂಜ್ಞೆಗಳ ಎರಕವನ್ನು ಸ್ಥಳಿಕವಾಗಿ ಹೊಯ್ಯಿಸಿದನು.
ಆದರೆ ಅವು ಚೆನ್ನಾಗಿರಲಿಲ್ಲ. ೧೮೪೩ರಲ್ಲಿ ಹಾಡ್ಸನ್
ಲಂಡನ್‌ನಿಂದ ಹಿಂತಿರುಗುವಾಗ ಕನ್ನಡ ಮೊಳೆಗಳನ್ನು
ಪ್ರತ್ಯೇಕವಾಗಿ ಮಾಡಿಸಿ ತಂದನು. ವ್ಯಾಟ್ಸ್ ಮತ್ತು
ಗ್ಯಾರೆಟ್, ಜೊತೆಗೆ ಬಿ. ರಂಗಯ್ಯನೆಂಬ ದೇಶೀಯನು,
ವೆಸ್ಲೆಯನ್ ಮುದ್ರಣದ ಪ್ರಗತಿಗೆ ಮುಖ್ಯ ಕಾರಣರು.
ನಾಲ್ಕೂ ಬಗೆಯ ಗಾತ್ರಗಳುಳ್ಳ ಅಕ್ಷರಗಳು ಆ
ಕಾಲಕ್ಕಿದ್ದು, ಅವುಗಳ ಉಪಯೋಗವು ಗ್ಯಾರೆಟ್ಟನ
ಬಹು ಭಾಷಾನ್ವಯದ ಭಗವದ್ಗೀತೆಯ ಮುದ್ರಣದಲ್ಲಿ
ಆಯಿತು (೧೮೪೬–೪೮). ಅನಂತರ ಡಿ. ಸ್ಯಾಂಡರ್ಸನ್
ಇವನು ಅಕ್ಷರಗಳ ಸುಧಾರಣೆಗೆ ಮನಸ್ಸುಗೊಟ್ಟನು.
ಪರಿಷ್ಕೃತ ಬೈಬಲಿನ, ಹಾಗೂ ರೀವ್ಹನ ಕನ್ನಡ ಇಂಗ್ಲಿಶ್
ಕೋಶದ ಸುಧಾರಿತ ಆವೃತ್ತಿಯ ಪ್ರಕಟನೆ ಇವುಗಳಿಗಾಗಿ
ಬೇರೆ ಮೊಳೆಗಳನ್ನು ಸಿದ್ಧಪಡಿಸುವ ಅಗತ್ಯ ತೋರಿತು.
ವಿಶೇಷತಃ, ರೀವ್ಹನ ಶಬ್ದಕೋಶದ ಗಾತ್ರವನ್ನು ತಗ್ಗಿಸು
ವುದಕ್ಕಾಗಿಯೆ ೧೦ ಪ್ರೊಯಿಂಟಿನ ಮೊಳೆಗಳನ್ನು
ತಯಾರಿಸಲಾಯಿತು. ಪರಿಣಾಮವಾಗಿ ೧೮೬೮ ಪುಟಗಳ
ರೀವ್ಹ್ ಶಬ್ದಕೋಶವು ಆಕಾರದಲ್ಲಿ ಅರ್ಧಕ್ಕಿಳಿದುದಲ್ಲದೆ
ಒಂದು ಸಾವಿರ ಪುಟಗಳಿಗೆ ಸೀಮಿತವಾಯಿತು (೧೮೫೮).
ಇತ್ತ ಬೈಬಲ್ ಪರಿಷ್ಕರಣದ ಕೆಲಸ ಮುಗಿದಿದ್ದಿತಾಗಿ,
ಆದಕ್ಕೆ ಬೇಕಾಗುವ ಮೊಳೆಗಳನ್ನು ಪ್ರತ್ಯೇಕವಾಗಿ
ಬೆಂಗಳೂರಲ್ಲಿ ಎರಕಹೊಯ್ಯಲಾಯಿತು. ೧೮೬೫ರಲ್ಲಿ
ಹೊರಬಂದ ಸಮಗ್ರ ಬೈಬಲಿನ ಮುದ್ರಣವು ಇಂದಿಗೂ
ಸುಂದರವಾಗಿ ತೋರುತ್ತದೆ.

೧೮೫೦–೧೮೭೦ರ ಅವಧಿಯಲ್ಲಿ ವೆಸ್ಲೆಯನ್ ಮಿಶನ್
ಪ್ರೆಸ್ ಉಚ್ಛ್ರಾಯ ಸ್ಥಿತಿಯಲ್ಲಿದ್ದು ದಕ್ಷಿಣ ಭಾರತ
ದಲ್ಲಿಯ ಶ್ರೇಷ್ಠ ಮುದ್ರಣಾಲಯವೆಂಬ ಖ್ಯಾತಿಯನ್ನು
ಹೊಂದಿದ್ದಿತು. ಸರಕಾರಗಳು ವಿದ್ಯಾರ್ಥಿಗಳು, ಸಾರ್ವ
ಜನಿಕರು–ಇವರೆಲ್ಲ ವೆಸ್ಲೆಯನ್ ಪುಸ್ತಕಗಳನ್ನು ಬಳಸ
ಬೇಕಾಗಿ ಬಂದದ್ದರ ಫಲವಾಗಿ, ವರುಷಕ್ಕೆ ೫೦ ಸಾವಿರ
ರೂ.ಗಳಿಗೆ ಮೇಲ್ಪಟ್ಟು ಮಾರಾಟದ ಹಣ ಬರುತ್ತಿತ್ತು.
ಹೀಗೆ ಮುದ್ರಣಾಲಯವು ಪ್ರಬುದ್ಧ ಸ್ಥಿತಿಯಲ್ಲಿದ್ದುದಾಗಿ
ತೋರಿದರೂ, ಲಾಭಾಂಶವಿಲ್ಲವೆಂಬ ಕಾರಣದಿಂದ ವೆಸ್ಲೆ

ತಪ್ಪು ಅಭಿಪ್ರಾಯವು 'ಭಾರತೀಯ ಪತ್ರಿಕೋದ್ಯಮ'
ಂದಿದೆ. ೧೮೧೨ರಲ್ಲಿ ಜರ್ಮನ್ ಮಿಶನರಿಗಳಿಗಾಗಿ
ಸಮಾಚಾರ'ವೆಂಬ ಪತ್ರಿಕೆಯು ಬಳ್ಳಾರಿಯಲ್ಲಿ
ತೆಂದೂ ಅದು ಕಾರಣ ಅವರೇ ಮೊತ್ತಮೊದಲು
ಮೊಳೆಗಳನ್ನು ತಯಾರಿಸಿರಬೇಕೆಂದೂ ಅದರಲ್ಲಿ ಹೇಳ
ಆದರೆ 'ಕಂನಡ ಸಮಾಚಾರ'ದ ಪ್ರಕಟನೆಯು ೧೮೪೪
ಾಗಿ ಆ ಪತ್ರಿಕೆಯ ಪ್ರಥಮ ಸಂಚಿಕೆಯಿಂದ ಸ್ವಯಂ
ಗುವಂತಿದೆ. ಅಲ್ಲದೆ ಜರ್ಮನ್ ಮಿಶನರಿಗಳು ಭಾರ
ದುದೇ ೧೮೩೪ರಲ್ಲಿ.

ಯನ್ನರು ೧೮೭೨ರಲ್ಲಿ ಓರ್ವ ಖಾಸಗೀ ವ್ಯಕ್ತಿಗೆ ಅದನ್ನು ಮಾರಾಟ ಮಾಡಿಬಿಟ್ಟರು. ಇದರಿಂದ ಕನ್ನಡ ಗ್ರಂಥೋದ್ಯಮವು ಇನ್ನಷ್ಟು ವ್ಯಾಪಕವಾಗಿ ಹೊರಹೊಮ್ಮುವ ಅವಕಾಶ ತಪ್ಪಿತೆಂದು ಹೇಳಬಹುದು. ಮುಂದೆ ೧೮೯೦ರ ಸುಮಾರಿಗೆ ಹೆನ್ರಿ ಹೇಗ್ ಇವನ ನೇತೃತ್ವದಲ್ಲಿ ವೆಸ್ಲೆಯನ್ ಮುದ್ರಣವು ಮೈಸೂರು ನಗರದಲ್ಲಿ ತಲೆದೋರಿತು. ಸ್ವಮತೀಯ ಪುಸ್ತಕಗಳಲ್ಲದೆ ಹಳಗನ್ನಡ ಕಾವ್ಯಗಳು, ಹಾಗೂ ಹೊಸಗನ್ನಡ ಗ್ರಂಥಗಳು ಈ ಅಚ್ಚುಕೂಟದಿಂದ ಹೊರಬಂದಿವೆ. ಇಪ್ಪತ್ತನೆಯ ಶತಮಾನದಲ್ಲಿ ಈ ಪ್ರೆಸ್ಸಿನ ಉತ್ತಮಿಕೆಯು ಸುಪರಿಚಿತವಾದದ್ದೇ ಆಗಿದೆ.

ಬೆಂಗಳೂರಲ್ಲಿ ಸದ್ದಿಲ್ಲದೆ ಕನ್ನಡ ಮುದ್ರಣವನ್ನು ಕೈಗೊಂಡಿದ್ದ ಇನ್ನೊಂದು ಮಿಶನರಿ ಪ್ರೆಸ್ಸ್ ಕೆಥೊಲಿಕರಿಗೆ ಸೇರಿದುದಾಗಿತ್ತು. ಪ್ರೊಟೆಸ್ಟಂಟರಂತೆಯೇ, ಮತ ಪ್ರಸಾರದ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುತ್ತಿದ್ದ ಇವರಿಗೆ ತಮ್ಮದೇ ಮುದ್ರಣಾಲಯದ ಅಗತ್ಯವೆನಿಸಿ ೧೮೫೨ರ ಸುಮಾರಿಗೆ ಅದನ್ನು ಸ್ಥಾಪಿಸಿದರು. ಹಾಗೆ ಸ್ಥಾಪಿಸಿ ಹಲವಾರು ಗ್ರಂಥಗಳನ್ನು ಹೊರತಂದ ಶ್ರೇಯಸ್ಸು ಚಾಬೋನಾ ಮತ್ತು ಬೌತವೊ – ಇವರಿಗೆ ಸಲ್ಲುತ್ತದೆ.

ಮಂಗಳೂರು

ಕನ್ನಡ ಮುದ್ರಣ ವಿಚಾರದಲ್ಲಿ ಮಂಗಳೂರ ಬಾಸೆಲ್ ಮಿಶನ್ನಿನ ಹೆಸರು ಅಜರಾಮರವಾದುದು. ಈ ಮಿಶನ್ನಿನ ಜಿ. ಎಚ್. ವೈಗಲ್ ಎಂಬುವನು ಒಂದು ಇಂಗ್ಲಿಶ್ ಪುಸ್ತಿಕೆಯನ್ನು ಮುದ್ರಿಸಿಕೊಂಡು ಬರಲೆಂದು ಮುಂಬಯಿಗೆ ಹೋಗಿದ್ದನು. ಮರಳಿ ಬರುವಾಗ ಆ ಮುದ್ರಾಯಂತ್ರವನ್ನೇ ದಾನವಾಗಿ ತಂದನು. (ಫೆಬ್ರುವರಿ ೧೮೪೧). 'ಜರ್ಮನ್ ಇವ್ಯಾಂಜೆಲಿಕಲ್ ಮಿಶನ್ ಪ್ರೆಸ್' ಎಂಬ ಅಭಿದಾನದಿಂದ ಮುಂದುವರಿದ ಈ ಪ್ರೆಸ್ಸಿನಲ್ಲಿ ವೈಗಲ್ ಮುದ್ರಿಸಿದ ಮೊದಲ ಪುಸ್ತಕವೆಂದರೆ 'ತುಳು ಕೀರ್ತನೆಗಳು'. ಸುರುವಿಗೆ ಇಲ್ಲಿಯ ಮುದ್ರಣವೆಲ್ಲ ಕಲ್ಲಚ್ಚಿನಿಂದ ನಡೆಯುತ್ತಿದ್ದಿತು. ಆಗ ಸಣ್ಣ ಪುಟ್ಟ ಮತಪುಸ್ತಕಗಳು ಹೊರಬಂದವು. ಮುಂದೆ, ಕುಮಾರವ್ಯಾಸ ಭಾರತ, ಬಸವ ಪುರಾಣ, ಚೆನ್ನಬಸವ ಪುರಾಣ, ಜೈಮಿನಿ ಭಾರತಗಳಂತಹ ದೊಡ್ಡ ಗಾತ್ರದ – ಬಹು ಪುಟಸಂಖ್ಯೆಯ ಪುಸ್ತಕಗಳು ಕಲ್ಲಚ್ಚಿನಲ್ಲಿಯೇ ಹೊರಬಂದುವು. ಅಲ್ಲದೆ ಒಂದೇ ಆಕಾರದಲ್ಲಿ ಅತ್ಯಂತ ದುಂಡಗಾಗಿ ಮೂಡಿಸಿದ್ದರಲ್ಲಿ

ಅವರ ದಕ್ಷತೆ, ಪರಿಶ್ರಮಗಳು ಒಡೆದು ತೋರು
ಮುಂದಿನ ಮಹತ್ವದ ಹೆಜ್ಜೆಯೆಂದರೆ ೧೮೫೧ರಲ್ಲಿ
ಮೊಳೆಗಳಿಂದ ಮುದ್ರಣವನ್ನು ಕೈಗೊಂಡುದು.
ದಲ್ಲಿಯೆ ಅವನ್ನು ತಯಾರಿಸಿಕೊಂಡು ದೊಡ್ಡ
ಯಂತ್ರದೊಡನೆ ಪ್ಲೆಬ್‌ಸ್ತ್ ಮಂಗಳೂರಿಗೆ ಬಂದ
ಈ ಅಚ್ಚುಕೂಟವು ಭರದಿಂದ ಬೆಳೆಯಿತು.

ಮುದ್ರಣದ ಯಾವ ಅಂಶವನ್ನು ತೆಗೆದುಕೊ
ಬಾಸೆಲ್ ಮಿಶನ್ನಿನವರ ಕಾರ್ಯವು ಮಹೋ
ವಾಗಿದೆ. ೧೯ನೇ ಶತಮಾನದ ಉತ್ತರಾರ್ಧದಲ್ಲಿ
ಕರ್ನಾಟಕದಲ್ಲಿಯ ಯಾವುದೇ ಪ್ರೆಸ್‌ಗಿಂತ ದೊಡ್ಡ
ಕನ್ನಡ, ತಮಿಳು, ಮಲೆಯಾಳೀ, ದೇವನ
ರೋಮನ್, ಜರ್ಮನ್—ಈ ಆರು ಲಿಪಿಗಳ ಮುದ್ರ
ಅಲ್ಲಿ ನಡೆಯುತ್ತಿದ್ದಿತು. ಅಚ್ಚಾದ ಪುಸ್ತಕಗಳ
ನೋಟದ ಚೆಲುವು ಅನುಪಮವಾದುದು. '
Bosel Mission Press at Manga
whose Canerese printing is
equelled for beauty by any o
press in India' ಎಂಬ ಅಖಿಲ ಭಾರತ ಪ
ಯನ್ನು ಅಂದಿನ ಮದ್ರಾಸ ಸರಕಾರವು ಸಲ್ಲಿಸಿ
ಯಥಾರ್ಥವಾದದ್ದೇ.[4] ಅಂತೆಯೇ ಮುಂಬಯಿ, ಮ
ಸರಕಾರಗಳು ತಮ್ಮ ಕ್ರಮಿಕ ಪುಸ್ತಕಗಳನ್ನು
ಣಕ್ಕಾಗಿ ಇಲ್ಲಿಗೆ ಕಳಿಸುತ್ತಿದ್ದರು. ದಕ್ಷಿಣ ಕನ್ನಡ
ಯಲ್ಲಂತೂ ಸುಮಾರು ಅರ್ಧ ಶತಮಾನದವರೆಗೆ (
ಯಾಳಬೈಲ ಪ್ರೆಸ್ ಒಂದನ್ನು ಬಿಟ್ಟರೆ) ಇದುವೆ
ಮುದ್ರಣಾಲಯವಾಗಿದ್ದಿತು. ಜಿಲ್ಲೆಯಲ್ಲಿ ಅ
ಸ್ಥಾಪಿತವಾದ ಅಚ್ಚುಕೂಟಗಳಾದರೂ ಇಲ್ಲಿ ಕೆಲಸ
ಅನುಭವ ಪಡೆದಿದ್ದವರ ನೆರವನ್ನೆ ಹೆಚ್ಚಾಗಿ ಪಡೆದು

ಇಲ್ಲಿಯ ಮುದ್ರಿತ ಕೃತಿಗಳ ವೈವಿಧ್ಯವೂ ವಿ
ಜನಕವಾಗಿದೆ;ಹಲವಾರು ಅಂಶಗಳಲ್ಲಿ ಹೊಸ ಕ್ರಮ
ರೂಢಿಸಿದಂತಾಗಿದೆ. ಪಠ್ಯಪುಸ್ತಕ ಹಾಗು
ಧರ್ಮದ ಪುಸ್ತಕಗಳಂತೂ ಸರಿಯೇ, ಅನೇಕ
ಹಾರಿಕ ಪುಸ್ತಕಗಳು ಪ್ರಥಮತಃ ಇಲ್ಲಿ ಅಚ್ಚಾ
ಕರಪತ್ರ, ಪಂಚಾಂಗ, ರೇಲ್ವೆ ವೇಳಾಪತ್ರಿಕೆ, ಕೊ
ಇವುಗಳು ಮೊದಲಿಗೆ ಇಲ್ಲಿಂದಲೇ ಹೊರಬಂ
ಬರ್ನೆಲನ ದಕ್ಷಿಣ ಭಾರತ ಲಿಪಿಶಾಸ್ತ್ರದಂಥ ಸಂಶೋ
ಗ್ರಂಥಗಳನ್ನೂ ಇಲ್ಲಿ ಮುದ್ರಿಸಲಾಗಿದೆ. ಈ

ನವರು ಪಡಿಯಚ್ಚುಗಳನ್ನು ತಯಾರಿಸಿ ಬಣ್ಣದಿಂದ ಮುದ್ರಿಸುವುದನ್ನು ಮೊದಲಿನಿಂದಲೂ ಬಳಕೆಯಲ್ಲಿ ತಂದಿದ್ದರು. ಭಾರತ ನಕಾಶದ ೩೮೦೦ ಪ್ರತಿಗಳನ್ನು ಬಣ್ಣದಿಂದ ಮುದ್ರಿಸಿದ್ದಾಗಿ ೧೮೫೫ರ ಮಿಶನ್ನಿನ ವಾರ್ಷಿಕ ವರದಿಯಲ್ಲಿ ಕಾಣಿಸಲಾಗಿದೆ. ೧೭ × ೧೨ ಇಂಚು ಉದ್ದಗಲವಿರುವ ಈ ನಕಾಶವು ಕನ್ನಡದಲ್ಲಿ ಹೊರಬಂದ ನಕಾಶಗಳಲ್ಲಿ ಮೊದಲಿನದಾಗಿರುವ ಸಂಭವವಿದೆ.

೧೮೬೫ರಲ್ಲಿ ವೆಸ್ಲೆಯನ್ ಪ್ರೆಸ್ಸಿನವರು ಸಮಗ್ರ ಬೈಬಲನ್ನು ಹೊರತಂದಿದ್ದರಷ್ಟೆ. ಹತ್ತು ವರ್ಷಗಳಾದ ಮೇಲೆ ಬಾಸೆಲ್ ಮಿಶನ್ನಿನವರು ಇದಕ್ಕೆಂದೇ ವಿಶಿಷ್ಟವಾದ ಚಿಕ್ಕ ಗಾತ್ರದ ಮೊಳೆಗಳನ್ನು ತಯಾರಿಸಿ ಬೈಬಲನ್ನು ಪುನರ್ಮುದ್ರಿಸಿದರು. ಆದರಿಂದ ಬೈಬಲಿನ ಮಾರಾಟವು ಎಣಿಕೆ ಮೀರಿ ಹೆಚ್ಚಿತು. ಆದರಂತೆ ಕಿಟೆಲ್ ಕೋಶಕ್ಕೆ ಬೇಕಾಗಿದ್ದ ವಿವಿಧ ಬಗೆಯ ಮೊಳೆಗಳನ್ನು ಹೀಗೆಯೇ ಸಿದ್ಧಪಡಿಸಲಾಯಿತು. ಆ ಮಹಾನ್ ಕೋಶವು ಗಾತ್ರದಲ್ಲಿ ಇಷ್ಟರ ಮಟ್ಟಿಗೆ ಉಳಿದುಕೊಂಡದ್ದಕ್ಕೆ ಇಂಥ ಸಣ್ಣಕ್ಷರಗಳ ಬಳಕೆಯೇ ಕಾರಣ. ಅದರಲ್ಲಿ ಯುಕ್ತವಾಗಿ ಬಳಸಲಾದ ವಿವಿಧ ಬಗೆಯ ಮೊಳೆಗಳಿಂದಾಗಿ ಅದರ ವಾಚನವು ಎಷ್ಟೊಂದು ಸುಭಗವೂ ಸ್ಪಷ್ಟವೂ ಆಗಿದೆಯೆಂಬುದನ್ನು ಗಮನಿಸಬೇಕು.

ಈ ಮಿಶನ್ನಿನವರು ಮಾಡಿದ ಇನ್ನೊಂದು ಮಹತ್ಕಾರ್ಯವೆಂದರೆ ಕನ್ನಡ ಲಿಪಿ ಸುಧಾರಣೆ. ಈ = ಇೀ ; ಕೂ = ಕುೀ ; ಅಕ್ಕ = ಅಕ್‌ಕ ; ಸೂರ್ಯ = ಸೂರ್‌ಯ; ಸ್ವಾತಂತ್ರ್ಯ = ಸ್‌ವಾತಂತ್‌ರ್‌ಯ ; ಇತ್ಯಾದಿ. ಇವುಗಳಲ್ಲಿ ಒತ್ತಕ್ಷರಗಳನ್ನು ಕೆಳಗೆ ಬರೆಯದೇ ಒಂದೇ ಸಾಲಿನಲ್ಲಿ ಬರೆಯುವುದು ಎದ್ದುತೋರುವ ಸುಧಾರಣೆಯಾಗಿತ್ತು. ಮೊಗ್ಲಿಂಗ್ ಸಂಪಾದಿಸಿದ 'ರಾಜೇಂದರ್ ನಾಮೆ'ಯಲ್ಲಿ ಈ ಕ್ರಾಂತಿಕಾರಕ ಬದಲಾವಣೆ ಮೊದಲಿಗೆ ಬಂದಿದ್ದು, ಮೊಗ್ಲಿಂಗ್ ಅದನ್ನು ಈ ರೀತಿಯಾಗಿ ಸಮರ್ಥಿಸಿದ್ದಾನೆ:

'ಸದ್ಯ ಒತ್ತಕ್ಷರಗಳಿಗೂ ಪ್ರತ್ಯೇಕವಾದ ಅಚ್ಚುಮೊಳೆಗಳಿವೆ. ಅವನ್ನು ಬಿಟ್ಟುಕೊಟ್ಟಾಗ ಮೊಳೆಗಳ ಸಂಖ್ಯೆಯು ಎಷ್ಟು ಕಡಿಮೆಯಾಗುವುದು. ಮೊಳೆ ಜೋಡಿಸುವ ಕೆಲಸದಲ್ಲಿ ವೇಳೆಯ ಉಳಿತಾಯುವಾಗುವುದು. ಒತ್ತಕ್ಷರಗಳಿಗಾಗಿ ಎರಡು ಸಾಲುಗಳ ನಡುವೆ ಹೆಚ್ಚು ಜಾಗವನ್ನು ಬಿಡಬೇಕಾಗುವುದಷ್ಟೆ. ಒಂದೇ ಪಂಕ್ತಿಯಲ್ಲಿ ಬರೆದುದಾದರೆ ಕಾಗದದ ಉಳಿತಾಯವೂ ಆಗುವುದು. ಹೀಗೆ ಇದರಿಂದ ಮೂಬಗೆಯ ಪ್ರಯೋಜನವಿದೆ.'

ಈ ಲಿಪಿ ಸುಧಾರಣೆಗಾಗಿ ಮದ್ರಾಸ ಸರಕಾರದ ಅಧಿಕೃತ ಸಮ್ಮತಿಯನ್ನೂ ಪಡೆಯಲಾಗಿದ್ದಿತು. ಆದರೆ ಜನಕ್ಕೆ ಸ್ವೀಕೃತವಾಗಲಿಲ್ಲವೆಂಬ ಕಾರಣದಿಂದ ೨–೩ ವರ್ಷಗಳಲ್ಲಿ ಬಿಟ್ಟುಕೊಡಲಾಯಿತು. ಇದೇ ಲಿಪಿ ಸುಧಾರಣೆಯನ್ನು ೮೦ ವರ್ಷಗಳ ಅನಂತರ ಬಿ. ಎಂ. ಶ್ರೀಕಂಠಯ್ಯ, ಮಧ್ವರಾವ ಕಬ್ಬೂರ ಮುಂತಾದವರು ಅನುಷ್ಠಾನದಲ್ಲಿ ತರಬಯಸಿದಾಗ ಕೂಡ ಅದು ಯಶಸ್ವಿಯಾಗಲಿಲ್ಲ.

ಮಂಗಳೂರಲ್ಲಿಯ ಇನ್ನೊಂದು ಪ್ರಸಿದ್ಧ ಕ್ರೈಸ್ತ ಮುದ್ರಣಾಲಯವೆಂದರೆ ಕೊಡಿಯಾಲ ಬೈಲ್ ಪ್ರೆಸ್. ಇದು ರೋಮನ್ ಕೆಥೊಲಿಕರಿಗೆ ಸೇರಿದುದು. ಬಾಸೆಲ್ ಮಿಶನ್ನಿನ (ಪ್ರೊಟೆಸ್ಟಂಟ್) ಅನುಯಾಯಿಗಳ ಮಾತೃಭಾಷೆ ತುಳು ಕನ್ನಡವಾಗಿದ್ದರೆ ಇವರದು ಹೆಚ್ಚಾಗಿ ಕೊಂಕಣಿ. ೧೮೭೮ರಲ್ಲಿ ಈ ಪಂಥದ ಸೊಸೈಟಿ ಆಫ್ ಜೀಸಸ್ ಸಂಘದವರು ಮಂಗಳೂರಿನಲ್ಲಿ ಬಿಡಾರ ಹೂಡಿದಾಗ ಅವರಿಗೆ ತಮ್ಮ ಪ್ರವಚನ ಪುಸ್ತಕ, ಪತ್ರಗಳಿಗಾಗಿ ಮುದ್ರಾಯಂತ್ರದ ಅಗತ್ಯ ಬಿದ್ದಿತು. ಸ್ಥಳಿಕವಾದ ಬಾಸೆಲ್ ಮಿಶನ್ ಪ್ರೆಸ್ಸಿನ ದರಗಳು ಇವರಿಗೆ ಹೆಚ್ಚೆಂದು ಕಂಡುಬಂದುವಲ್ಲದೆ, ಕೆಲವೊಂದು ಕೆಥೊಲಿಕ್ ವಿಚಾರಗಳನ್ನು ಮುದ್ರಿಸಲು ಬಾಸೆಲ್‌ದವರು ನಿರಾಕರಿಸಿದರೆಂದೂ ತಿಳಿಯುತ್ತದೆ. ಇದು ನಿಮಿತ್ತವಾಗಿ, ಎಸ್. ಜೆ. ಸಂಘದವರು ಪ್ರತ್ಯೇಕವಾದ ಮುದ್ರಣಾಲಯವನ್ನು ಸ್ಥಾಪಿಸಲುದ್ಯುಕ್ತರಾದರು. ೧೮೮೨ರಂದು ಪ್ಯಾರಿಸ್‌ನಿಂದ ಒಂದು ಕೈಯಚ್ಚಿನ ಯಂತ್ರವನ್ನೂ ರೋಮನ್ ಲಿಪಿಗಳನ್ನೂ ತರಿಸಿದರು. ಮರುವರ್ಷ ಬೆಂಗಳೂರಿನಿಂದ ಕನ್ನಡ ಮೊಳೆಗಳು ಬಂದುವು. ಅಲ್ವೊಸಿಸ್ ಕಾಲೇಜಿನ ಮುನ್ನಿನ ಕಟ್ಟಡದಲ್ಲಿ ನಾಲ್ಕು ಜನ ಕೆಲಸಗಾರರೊಂದಿಗೆ ಮುದ್ರಣ ಕಾರ್ಯವು ಆರಂಭವಾಯಿತು. ಇದರ ಮೇಲ್ವಿಚಾರಕರಾಗಿ ಪರಿಶ್ರಮಿಸಿದ ದೊನೆದಾ ಮತ್ತು ಸೋರ್ಸ್ ಈ ಅಚ್ಚುಕೂಟವನ್ನು ಅಭಿವೃದ್ಧಿಗೊಳಿಸಿದರು. ಮುಂಬಯಿ ಸರಕಾರದ ಕೆಲವು ಕ್ರಮಿಕ ಪುಸ್ತಕಗಳೂ ಈ ಪ್ರೆಸ್ಸಿನಲ್ಲಿ ದೊಡ್ಡ ಮೊತ್ತದಲ್ಲಿ ಅಚ್ಚಾದದ್ದಿದೆ. ಕೊಡಿಯಾಲಬೈಲ ಮುದ್ರಣಾಲಯದ ಒಂದು ಪ್ರಾಶಸ್ತ್ಯವೆಂದರೆ–ತಮ್ಮ ಕೊಂಕಣಿ ಭಾಷೆಯ ಪುಸ್ತಕಗಳನ್ನು

ಕನ್ನಡ ಲಿಪಿಯಲ್ಲಿ ಮುದ್ರಿಸತೊಡಗಿದುದು. ಕರ್ನಾಟಕದಲ್ಲಿ ಈ ಕ್ರಮವನ್ನು ಮೊದಲಿಗೆ ರೂಢಿಸಿದವರು ಇವರೇ ಇದ್ದಿರಬೇಕು.

ಲಿಪಿಸೌಷ್ಠವದ ದೃಷ್ಟಿಯಿಂದ ಇಲ್ಲಿಯ ಮೊಳೆಗಳು ಬಾಸೆಲ್ ಮಿಶನ್ನಿಗೆ ಸರಿಮಿಗಿಲೆನಿಸಿವೆ. ೧೮೫೦ರ ಸುಮಾರಿಗೆ ತಮ್ಮದೇ ಆದ ಮೊಳೆ ತಯಾರಿಕೆಯ ವಿಭಾಗವನ್ನು ಆರಂಭಿಸಿದಾಗ, ಸುಪ್ರಸಿದ್ಧ ಅಕ್ಷರಶಿಲ್ಪಿಯೆನಿಸಿದ ಅತ್ತಾವರ ಅನಂತಾಚಾರಿಯು ಕೆಲವು ವರ್ಷ ಕೆಲಸ ಮಾಡಿ, ವಿವಿಧ ಗಾತ್ರಗಳ ಹಾಗೂ ಮೇಲ್ಮಟ್ಟದ ಮೊಳೆಗಳನ್ನು ತಯಾರಿಸಿದನಲ್ಲದೆ, ಇತರರನ್ನು ಈ ವಿದ್ಯೆಯಲ್ಲಿ ತರಬೇತುಗೊಳಿಸಿದನು. ಆ ಮುಂದೆ ಮುಂಬಯಿಗೆ ಹೋಗಿ, ಅಲ್ಲಿಯ ನಿರ್ಣಯಸಾಗರದ ಪ್ರೆಸ್ಸಿನಲ್ಲಿ ಕನ್ನಡ ಮೊಳೆಗಳನ್ನೂ ಗುಜರಾಥ ಟೈಪ ಫೌಂಡ್ರಿಯವರಿಗೆ ದೇವನಾಗರೀ ಲಿಪಿಯ ಮೊಳೆಗಳನ್ನೂ ವಿವಿಧ ಗಾತ್ರಗಳಲ್ಲಿ ಸಿದ್ಧಪಡಿಸಿದನು. 'ಅನಂತ ಶೇಡೆಡ್' ಎಂಬುದಾಗಿ ಇವನ ಹೆಸರನ್ನೆ ಹೊಂದುವಷ್ಟು ಆ ದೇವನಾಗರೀ ಮೊಳೆಗಳು ವೈಶಿಷ್ಟ್ಯಪೂರ್ಣವಾಗಿವೆ. ತನ್ನ ನಿವೃತ್ತಿ ಕಾಲದಲ್ಲಿ, ಎಂದರೆ ೨೦ನೆಯ ಶತಮಾನದ ಆರಂಭಕ್ಕೆ ಮಂಗಳೂರಿಗೆ ಬಂದಮೇಲೆಯೂ ಅವನು ಸ್ಥಳೀಯ ಪ್ರೆಸ್ಸುಗಳಿಗೂ ಧಾರವಾಡದ ಒಂದು ಮುದ್ರಣಾಲಯಕ್ಕೂ ಹೊಸ ಹೊಸ ಮೊಳೆಗಳನ್ನೂ ಸಿದ್ಧಗೊಳಿಸಿಕೊಟ್ಟನೆಂದು ತಿಳಿಯುತ್ತದೆ. ಇಂದು ಎಲ್ಲೆಡೆ ಕಾಣುವ ಕನ್ನಡ ಮೊಳೆಗಳಿಗೆ ಅನಂತಾಚಾರಿಯ ಕೈವಾಡವೇ ಹಿನ್ನೆಲೆಯಾಗಿದೆಯೆಂದು ಹೇಳುವುದುಂಟು.[೬] ಅನಂತಾಚಾರಿ ಹಾಗೂ ಮಿಶನರಿ ಪ್ರೆಸ್‌ಗಳು ಇವುಗಳಿಂದಾಗಿ ಮಂಗಳೂರು ಮುದ್ರಣ ಕಾರ್ಯಗಳಲ್ಲಿ ಅಖಿಲ ಕರ್ನಾಟಕದಲ್ಲಿಯೇ ಉಚ್ಚತಮ ಸ್ಥಾನವನ್ನು ಹೊಂದಿದ್ದಿತು.

ಸರಕಾರಿ ಅಚ್ಚುಕೂಟಗಳು

ಸರಕಾರಿ ಮುದ್ರಣ ಕಾರ್ಯವು ಮಿಶನರಿಗಳ ಈ ಉದ್ಯಮದ ಜೊತೆಗೇ ನಡೆದು ಬಂದಿತು. ಕರ್ನಾಟಕದಲ್ಲಿಯ ಮದ್ರಾಸ, ಮುಂಬಯಿ ಮತ್ತು ಮೈಸೂರು –ಈ ಮೂರು ಆಧಿಪತ್ಯಗಳಲ್ಲಿ ಆಡಳಿತಕ್ಕಾಗಿಯೂ, ಶೈಕ್ಷಣಿಕ ಕಾರ್ಯಕ್ಕಾಗಿಯೂ ಮುದ್ರಣವು ಅನಿವಾರ್ಯವೇ ಆಗಿದ್ದಿತು. ಅದಕ್ಕೂ ಹಿಂದೆ ಮುದ್ರಣ ಪರಂಪರೆ ಇರಲಿಲ್ಲವಾದುದರಿಂದ ಆ ಸರಕಾರಗಳು ಮೊಳೆಗಳ ತಯಾರಿಕೆಯಿಂದ ಮೊದಲ್ಗೊಂಡು ಈ ದಿಶೆಯಲ್ಲಿ ಪ್ರಯತ್ನಿಸಬೇಕಾಗಿ ಬಂತು. ಮದ್ರಾಸ ಸರಕಾರವೇ ಮೊದಲು ಮುಂದಡಿ ಇಟ್ಟಿತು. ಫೋರ್ಟ ಸೇಂಟ್ ಜಾರ್ಜ ಕಾಲೇಜಿನಲ್ಲಿ ಕನ್ನಡ ಮುದ್ರಣ ನಡೆದ ಬಗೆಯನ್ನು ಈ ಹಿಂದೆ ನೋಡಿದ್ದೇವೆ. ಆಮೇಲೆ ಸ್ಥಾಪಿತವಾದ ಗವರ್ನಮೆಂಟ್ ಗಝೆಟ್ ಪ್ರೆಸ್ಸಿನಲ್ಲಿ ಒಂದೆರಡು ಕನ್ನಡ ಪುಸ್ತಕಗಳು ಅಚ್ಚಾಗಿವೆ. ಆ ಮುಂದೆ ಮಾತ್ರ ಪಠ್ಯ ಪುಸ್ತಕಾದಿಗಳನ್ನು ಮದ್ರಾಸ ಸರಕಾರವು ಮಂಗಳೂರಿನ ಮಿಶನ್ ಪ್ರೆಸ್‌ಗಳಲ್ಲಿಯೇ ಮುದ್ರಿಸಿಕೊಳ್ಳತೊಡಗಿತು.

ಇತ್ತ ಮುಂಬಯಿ ಪ್ರಾಂತದಲ್ಲಿ ೧೮೨೪ರಷ್ಟು ಹಿಂದೆಯೇ ಒಂದು ಕಲ್ಲಚ್ಚಿನ ಮುದ್ರಾಯಂತ್ರವನ್ನು ಆರಂಭಿಸಲಾಗಿದ್ದಿತು. ಅದಕ್ಕೆ ಬೇಕಾಗುವ ಕಲ್ಲಿನ ಹಲಿಗೆಗಳನ್ನು ಕರ್ನೂಲಿನಿಂದ ತರಿಸುತ್ತಿದ್ದರು. ಮೊದಲಿಗೆ ಈ ಪ್ರೆಸ್ಸಿನಲ್ಲಿ ಮರಾಠೀ ಮುದ್ರಣ ನಡೆಯಿತು. ಇಲ್ಲಿ ಅಚ್ಚಾಗಿ, ನಮಗೆ ದೊರೆತ ಮೊದಲ ಕನ್ನಡ ಪುಸ್ತಕವೆಂದರೆ 'ಸಂಣ ಹಿತೋಪದೇಶ' ಎಂಬುದು (೧೮೩೬). ತತ್ಪೂರ್ವದಲ್ಲಿ ಬೇಕಾಗಿದ್ದ ಮೂರು ಪ್ರಾಥಮಿಕ ಪುಸ್ತಕಗಳನ್ನು ಬಳ್ಳಾರಿಯ ಮಿಶನ್ ಪ್ರೆಸ್ಸಿನಲ್ಲಿ ಮುದ್ರಿಸಿ ತರಿಸಿಕೊಂಡಿದ್ದರು.

ಸರಕಾರೀ ಅಂಗಸಂಸ್ಥೆಯಾಗಿದ್ದ 'ಬಾಂಬೆ ಎಜ್ಯುಕೇಶನ್ ಸೊಸೈಟಿ'ಯವರು ಬಾಯಖಳಾ ಉಪನಗರದಲ್ಲಿ ಒಂದು ಪ್ರೆಸ್ ನಡೆಸುತ್ತಿದ್ದರು (೧೮೪೮). ಇಲ್ಲಿ ಗುಜರಾತೀ, ಮರಾಠೀ ಪುಸ್ತಕಗಳ ಜೊತೆಗೆ ಕನ್ನಡದವೂ ಅಚ್ಚಾಗಿವೆ. ವೆಂಕಟ ರಂಗೋ ಕಟ್ಟಿಯವರ ಅರೇಬಿಯನ್ ನೈಟ್ಸ್ (೧೮೬೩), ಶಾಕುಂತಲದ ಮೊತ್ತಮೊದಲಿನ ಕನ್ನಡಾನುವಾದವೆನಿಸಿದ ಚುರಮುರಿ ಶೇಷಗಿರಿರಾಯರ ನಾಟಕ (೧೮೭೦)–ಇವು, ಇಲ್ಲಿ ಅಚ್ಚಾದ ಮಹತ್ವದ ಪುಸ್ತಕಗಳಾಗಿವೆ.

ಆದರೆ ಇವೆರಡು ಪ್ರದೇಶಗಳಲ್ಲಿ ಕನ್ನಡಕ್ಕೆ ಪ್ರಾಮುಖ್ಯವಿರಲಿಲ್ಲ. ಇತರ ಭಾಷೆಗಳದೇ ಮೇಲುಗೈ ಇದ್ದಾಗ ಕನ್ನಡ ಪುಸ್ತಕ ಪ್ರಕಟನೆಯು ಬಿಡದ ಕರ್ಮವೆಂದಂತೆ–ಹಿಂಬಾಲಿಸಿ ಬಂದಿತು. ಮುಂಬಯಿ ಸರಕಾರವಾದರೂ ದಶಸಹಸ್ರ ಸಂಖ್ಯೆಯಲ್ಲಿ ಕ್ರಮಿಕ ಪುಸ್ತಕಗಳ ಪ್ರಕಟನೆಯ ಸಂದರ್ಭ ಬಿದ್ದಾಗ ತಮ್ಮ ಅಚ್ಚುಕೂಟವನ್ನು ವಿಸ್ತರಿಸಲೊಲ್ಲದೆ ಮಂಗಳೂರು ಧಾರವಾಡ, ಸ್ವಲ್ಪಮಟ್ಟಿಗೆ ಬೆಂಗಳೂರುಗಳತ್ತ ಹೊರಳಿದರು.

ಇತ್ತ ಬೆಂಗಳೂರು ನಗರದಲ್ಲಿ ಓರ್ವ ಮ್ಯಾಜಿಸ್ಟ್ರೇಟನು

…ರದ ವತಿಯಿಂದ ೧೮೪೧–೪೨ರಲ್ಲಿ ಕಲ್ಲಚ್ಚಿನ
…ದ್ರಣವನ್ನು ಆರಂಭಿಸಿದ್ದುದು ಒಂದು ಮಹತ್ವದ ಹೆಜ್ಜೆ
…ಗಿದೆ. ಮುಂದಿನ ಎರಡು ವರ್ಷಗಳಲ್ಲಿ ಪ್ರಕಟ
… ಕೆಲವು ಗ್ರಂಥಗಳ ಹೆಸರುಗಳು 'ಮಂಗಳೂರು
…ಚಾರ' ಎಂಬ ಕನ್ನಡದ ಪ್ರಪ್ರಥಮ ಪತ್ರಿಕೆಯಲ್ಲಿ
…ಕ ೧, ಸಂಖ್ಯೆ ೫, ಪುಟ ೩೫, ೧೯೪೩) ಉಲ್ಲೇಖ
…ರುವುದರಿಂದ ಆ ಅಚ್ಚುಕೂಟದಿಂದ ಹೊರಬಂದ
…ಕಗಳ ಸ್ವರೂಪವನ್ನು ಅರಿಯಬಹುದಾಗಿದೆ :

…ಬೆಂಗಳೂರು ಸದರು ಮುನಶಿಪರು ಹೋದ ವರ್ಷ
…ವೊಂದು ಮೊಳೆ ಛಾಪಖಾನೆ ಯಾನೆ ವರ್ಣಯಂತ್ರ
… ಅದರಲ್ಲಿ ಕೆಲಉ ಕನಡು ಪುಸ್ತಕಗಳಂನು ಸರ್ವರ
…ಾರಕ್ಕಾಗಿ ಛಾಪಿಸಲಿಕ್ಕೆ ಆರಂಭ ಮಾಡಿದ್ದಾರೆ.
… ಬಹಳ ವುತ್ತಮವಾದ ಕೆಲಸ. ಯಾತಕ್ಕೆಂದರೆ
… ಜನರಲ್ಲಿ ವೊಬ್ಬನ ಹತ್ತರ ವೊಂದು ವಿಧದ
…ಕಯಿದ್ದರೆ ಮತ್ತೊಬ್ಬನಲ್ಲಿ ಯಿಂನೊಂದು ಪ್ರಕಾರದ
…ಕಯಿರುತ್ತದೆ. ಹೀಗಾಗಿ ಬೇಕಾದ ಪುಸ್ತಕಗಳು
…ನೆ ಕಡೆಯಲ್ಲಿ ಯಿಲ್ಲದೆ ಅವುಗಳು ಸತ್ಯವೊ ಸುಳ್ಳೊ
…ಬುದು ವಿಚಾರಿಸಲಿಕ್ಕೆ ಅನುಕೂಲವಿಲ್ಲವಾಗಿದೆ.
… ಮೇರಿಗೆ ಯಾರಾದರೂ ಛಾಪಕಾನೆ ಯಿಟ್ಟು
… ಶಾಸ್ತ್ರವಂನು ಛಾಪಿಸಿದರೆ ಬೇಕಾದ ಪುಸ್ತಕಗಳು
…ರ ಕೈಯಲೂ ಸೇರಬಹುದಾಗಿರುತ್ತದೆ. ಪೂರ್ವ
… ಪುರಂದರದಾಸ ಮುಂತಾದವರು ಮಾಡಿದ ಪದ
… ಯಾ ಅಚ್ಚು ಕನಡ ಕಾವ್ಯಗಳೂ ದಿವಸ
…ದ್ದಷ್ಟು ಕಡಿಮೆಯಾಗಿ ಕಡೆಗೆ ಪೂರ್ಣವಾಗಿ ಕಾಣದೆ
…ಾವು. ಆದ ಕಾರಣ ಆವರು ಯಿಂನು ಮುಂದೆ
… ವೊಳ್ಳೆ ಪುಸ್ತಕಗಳು ಛಾಪಸ್ಯಾರು ಯೆಂದು ತಿಳಿದು
…ತ್ತೇವೆ. ಮತ್ತು ಯಾವರೆಗೆ ನಂಮ ಹತ್ತಿರ
… ಪುಸ್ತಕಗಳ ಹೆಸರುಗಳಂನು ಯಿ ಕೆಳಗೆ ಬರ
…ದೆ.

… ಜಗದುತ್ಪತ್ತಿ ಸ್ಥಿತಿಲಯಗಳ ವಿವರಣ, ಮೈಸೂರು ಸಂಸ್ಥಾನದ ವಿವರವು

… ಅನುಭವಾಮೃತವೆಂಬ ಗ್ರಂಥವು

… ಬಾಲಶೀಕ್ಷೆ ಅಂಶಲೆಖ್ಖ ಸಂಕಲಿಕ ನಕಲಿಕ ಗುಣಕ ಭಾಗಹರಣ ಸಹಾ.

… ಠಗರೆಂಬುವ ಫಾಶೀಕಾರರ ಚರಿತ್ರೆಯು.

೫ ವಿದುರನೀತಿಯೆಂಬುವ ಗ್ರಂಥವು ಟೀಕು ಸಹ.

೬ ಪಾಠಶಾಲೆಯಲ್ಲಿ ವೋದುವ ವಿದ್ಯಾರ್ಥಿಗಳ ವುಪಯೋಗದ ಬಾಲಬೋಧೆ.

೭ ರಾಜಸೇವೆಯ ಲಕ್ಷಣವು.

೮ ಆಸ್ಥಾನ ಜೋತಿಯೆಂಬ ಪದ್ಯಗಳು." [6]

ಹೀಗೆ ಈ ಅಚ್ಚುಕೂಟದಲ್ಲಿ ಹಿಂದೂ ಪರಂಪರೆಯ ಮತ್ತು ಶಾಲೆಗಳಿಗೆ ಉಪಯೋಗಬೀಳುವಂತಹ ಪುಸ್ತಕಗಳನ್ನು ಮುದ್ರಿಸುತ್ತಿದ್ದರೆನ್ನಬಹುದು. 'ವರ್ಣಯಂತ್ರ'ದ ಪ್ರಸ್ತಾಪವನ್ನು ನೋಡಿದರೆ ಬಣ್ಣದ ಇಲ್ಲವೆ ಚಿತ್ರಗಳ ಮುದ್ರಣ ಇಲ್ಲಿ ನಡೆಯುತ್ತಿದ್ದಿತೆಂದು ಅನಿಸುವುದು. ಆದರೆ ಛಾಪಖಾನೆಗೇ ವರ್ಣಯಂತ್ರವೆಂದು ಕರೆಯುತ್ತಿದ್ದಿರಬೇಕು.

ಇತ್ತ ಬೆಂಗಳೂರಲ್ಲಿ ೧೮೫೦ರ ಸುಮಾರಿಗೆ ಜಾನ್ ಗ್ಯಾರೆಟ್‌ನ ನೇತೃತ್ವದಲ್ಲಿ ಸರಕಾರೀ ಮುದ್ರಣಾಲಯವು ಅಧಿಕೃತವಾಗಿ ಅಸ್ತಿತ್ವದಲ್ಲಿ ಬಂದಿತು. ಬಿ. ಎಲ್. ರೈಸನು ಅದನ್ನು ಕನ್ನಡ ಶಾಸನಗಳ, ಹಳೆಯ ಕಾವ್ಯಗಳ ಮುದ್ರಣಕ್ಕೂ ಅಣಿಗೊಳಿಸಿದುದು ಒಂದು ವಿಶೇಷ. ಸರಕಾರೀ ಕೆಲಸವಲ್ಲದೆ ಹೊರಗಿನವರ ಪುಸ್ತಕಗಳೂ ಇಲ್ಲಿ ಅಚ್ಚಾಗಿವೆ. 'ಹಿತಬೋಧಿನೀ' ಎಂಬ ಸುಪ್ರಸಿದ್ಧ ಪತ್ರಿಕೆಯು ಸರಕಾರೀ ಅಚ್ಚುಕೂಟದಿಂದಲೇ ಹೊರಬಂದಿತು. ೧೮೯೦ರ ಸುಮಾರಿಗೆ ಮೈಸೂರು ನಗರದಲ್ಲಿ ಸರಕಾರೀ ಮುದ್ರಣಾಲಯದ ಶಾಖೆಯನ್ನು ತೆರೆಯಲಾಯಿತು.

೧೮೪೧–೪೨ರ ಸುಮಾರಿಗೆ ಸರಕಾರೀ ಪ್ರೆಸ್ಸಿನ ಸ್ಥಾಪನೆಯ ಜೊತೆಗೆ, ಮೈಸೂರಿನ ಅಂಬಾ ವಿಲಾಸ ಅರಮನೆಯಲ್ಲಿಯೂ ಅಂಥದೊಂದು ಅಚ್ಚುಕೂಟವು ಮುಮ್ಮಡಿ ಕೃಷ್ಣರಾಜರ ಸಮ್ಮುಖದಲ್ಲಿಯೇ ಪ್ರಾರಂಭವಾಯಿತು. ಆದರಲ್ಲಿ ಮಹಾರಾಜರ ಅನೇಕ ಕೃತಿಗಳು ಚಿತ್ರಸಹಿತ ಮುದ್ರಣಗೊಂಡಿವೆ. ಬಣ್ಣದ ಮುದ್ರಣವೂ ನಡೆಯುತ್ತಿದ್ದುದಾಗಿ ತಿಳಿದುಬಂದಿದೆ. ಅಲ್ಲಿಂದ ಹೊರಬಿದ್ದ ಗ್ರಂಥಗಳಲ್ಲಿ ಮುಮ್ಮಡಿಯವರ 'ಸಂಖ್ಯಾರತ್ನಕೋಶ' ಎಂಬ ಮರಾಠೀ ಪುಸ್ತಕವೂ (೧೮೫೨), ಅರ್ಧ ಫೂಲ್‌ಸ್ಕೆಪ್‌ನ ೧೨೨೦ ಪುಟಗಳ 'ಸೌಗಂಧಿಕಾ ಪರಿಣಯ' ಕಾದಂಬರಿಯೂ (ಸು. ೧೮೬೦) ಉಲ್ಲೇಖನೀಯವಾಗಿವೆ. ಎರಡೂ ಚಿತ್ರಗಳಿಂದ ನಿಬಿಡವಾಗಿವೆ. ಶಿಲಾ ಮುದ್ರಣವು ಪ್ರಬುದ್ಧವಾಗಿದ್ದುದರ ನಿದರ್ಶನವಿದು. ಇವುಗಳ ಹಿಂದಿನ ಪರಿಶ್ರಮವು ಶ್ಲಾಘ್ಯವಾದುದು.

ವೈಯಕ್ತಿಕ ಮುದ್ರಣ ಪ್ರಯತ್ನಗಳು

ಮಿಶನರಿ ವಲಯದ ಮತ್ತು ಸರಕಾರೀ ಮುದ್ರಣ ಚಟುವಟಿಕೆಗಳನ್ನು ಕಂಡು ಖಾಸಗೀ ವ್ಯಕ್ತಿಗಳಿಗೂ ಅದರಲ್ಲಿ ಆಸಕ್ತಿ ಹುಟ್ಟಿತು. ಇದೊಂದು ಲಾಭದಾಯಕ ಉದ್ಯಮವೆನ್ನುವಂತೆ ನಡೆಯಿಸುವುದು ಸಾಧ್ಯ ಎಂಬು ದಾಗಿ ತೋರಿತು. ಇಂಥ ಮನೋಧರ್ಮವು ವ್ಯಕ್ತ ವಾದುದು ಮುಂಬಯಿ ಕರ್ನಾಟಕದವರಲ್ಲಿ. ಆ ವೇಳೆಗೆ ಅನೇಕ ಹಳ್ಳಿಗಳಲ್ಲಿ ಸಹ ಪ್ರಾಥಮಿಕ ಶಾಲೆಗಳು ವ್ಯವ ಸ್ಥಿತವಾಗಿ ನೆಲೆಗೊಂಡಿದ್ದುವು. ಸಾಕ್ಷರತೆಯು ಕ್ರಮೇಣ ಹೆಚ್ಚುತ್ತ ನಡೆದಿದ್ದಿತು. ಸರಕಾರವು ಪಠ್ಯಪುಸ್ತಕಗಳನ್ನು ಒದಗಿಸುವ ವಿಚಾರದಲ್ಲಿ ಆಸ್ಥೆಯನ್ನು ತಾಳಿದ್ದರೂ ಅದು ಪೂರ್ಣವಾಗಿ ಕೈಗೂಡಿರಲಿಲ್ಲ. ಇತ್ತ ನವೀನ ಅಕ್ಷರಸ್ಥರ ಲಘು ವಾಚನಕ್ಕಾಗಿಯೂ ಪುಸ್ತಕಗಳು ಬೇಕೆನಿಸಿದ್ದುವು. ಜನಸಾಮಾನ್ಯರ ಬಾಯಿಯಲ್ಲಿ ನಲಿಯುತ್ತಿದ್ದ ಸರ್ವಜ್ಞನ ವಚನಗಳು ಮತ್ತು ಲಾವಣಿ, ದುಂದುಮೆ ಪದಗಳು, ಅದರಂತೆ ಜೈಮಿನಿ ಭಾರತ, ರಾಜಶೇಖರ ವಿಳಾಸ, ಕುಮಾರವ್ಯಾಸ ಭಾರತ ಮೊದಲಾದ ರಸಭರಿತ ಕಾವ್ಯ ಗಳು, ಧಾರ್ಮಿಕ ಗ್ರಂಥ, ಸ್ತೋತ್ರಗಳು, ಅಲ್ಲದೆ ಶೃಂಗಾರದ ಹಾಗೂ ನೀತಿಬೋಧಕವಾದ ಕಥಾಪುಸ್ತಕ ಗಳು–ಇವನ್ನು ಮುದ್ರಿಸಿದರೆ ವ್ಯಾವಹಾರಿಕ ಪ್ರಯೋಜನ ವುಂಟೆಂಬ ಪ್ರಜ್ಞೆಯೇ ಇಂಥ ವೈಯಕ್ತಿಕ ಪ್ರಯತ್ನಗಳ ಪ್ರೇರಣೆಯಾಗಿದೆ. ಅಲ್ಲದೆ, ನೆರೆಯ ಮಹಾರಾಷ್ಟ್ರದಲ್ಲಿ ಈ ಬಗೆಯ ಕೆಲಸವು ಈಗಾಗಲೇ ನಡೆದಿದ್ದುದರ ಅರಿವೂ ಸಂಬಂಧಪಟ್ಟವರಿಗೆ ಇದ್ದಿತು.

'ಸುಬುದ್ಧಿ ಪ್ರಕಾಶ'ವೆಂಬ ಕನ್ನಡ ಪತ್ರಿಕೆಯು ೧೮೪೯ ರಂದು ಬೆಳಗಾಂವಿಯಲ್ಲಿ ಆರಂಭವಾಯಿತು. ಆ ವರ್ಷಕ್ಕೆ ಮುಂಚೆ, ಯಾವ ದೇಶೀಯನೂ, ಖಾಸಗಿಯಾಗಿ ಕನ್ನಡ ಪುಸ್ತಕ ಅಥವಾ ಪತ್ರಿಕೆಯನ್ನು ಛಾಪಿಸಿದುದಿಲ್ಲ. ಕಾರಣ ವೈಯಕ್ತಿಕ ಮುದ್ರಣ ಕಾರ್ಯವು(ಕಲ್ಲಚ್ಚಿನದು) ಬೆಳಗಾಂವಿ ಯಲ್ಲಿ ಮೊದಲಿಗೆ ಕಂಡುಬಂದಿತೆಂದು ನಿರ್ಧರಿಸಬಹುದು. ಇಲ್ಲಿ ಕನ್ನಡ, ಮರಾಠೀ ಎರಡೂ ಭಾಷೆಗಳಲ್ಲಿ ಮುದ್ರಣ, ಗ್ರಂಥ ಪ್ರಕಟನೆಗಳು ಮುಂದುವರಿದುವು.

ಮುಂದೆ ಕೆಲವೇ ವರ್ಷಗಳ ಅಂತರದಲ್ಲಿ ಧಾರವಾಡ ಜಿಲ್ಲೆಯ ಸವಣೂರ ಗ್ರಾಮದಲ್ಲಿ ಮುದ್ರಣೋದ್ಯಮವು ಮೊದಲಾದುದು ಸೋಜಿಗದ ಸಂಗತಿಯಾಗಿದೆ. ಆ ಊರಲ್ಲಿ ೧೮೬೦ಕ್ಕೆ ತುಸು ಮುಂಚೆ ಆರಂಭವಾದ ಸವಣೂರ ಪ್ರೆಸ್ ಮತ್ತು ಜ್ಞಾನಬೋಧಕ ಪ್ರೆಸ್–ಇವು ವ್ಯಕ್ತಿಗತ ವಾದ ಮುದ್ರಣ ಸಂಸ್ಥೆಗಳು. ಸವಣೂರ ಪ್ರೆಸ್‌ನಲ್ಲಿ ಅಲ್ಲಿಯ ಮುಸ್ಲಿಂ ಸಂಸ್ಥಾನಿಕನ ಆಡಳಿತದ ಬೇಡಿಕೆಯನ್ನು ಗಮನಿಸಿ, ಪರ್ಶಿಯನ್ ಮುದ್ರಣವೂ ನಡೆಯುತ್ತಿದ್ದಿತು. ಜ್ಞಾನಬೋಧಕ ಪ್ರೆಸ್‌ನಿಂದ ೧೮೬೦–೬೫ರ ಅವಧಿಯಲ್ಲಿ ಹೊರಬಂದ 'ಕೃಷ್ಣ ಪಾರಿಜಾತ' ಮತ್ತು ದುಂದುಮೆ ಹಾಡಿನ ಪುಸ್ತಕಗಳು ಜೈಮಿನಿ ಭಾರತ, ಸರ್ವಜ್ಞ ತ್ರಿಪದಿ, ಬಸವಪುರಾಣ ಮೊದಲಾದ ಹಳೆಯ ಕೃತಿಗಳು ಮತ್ತು ಕೆಲವು ಶತಕಗಳು–ಇವನ್ನೆಲ್ಲ ಗಮನಿಸಿದಾಗ ಆ ಅಚ್ಚುಕೂಟದವರಲ್ಲಿ ಮೇಲೆ ಹೇಳಿದ ಜನ ಸಾಮಾನ್ಯ ದೃಷ್ಟಿ ಎಷ್ಟರ ಮಟ್ಟಿಗೆ ಇತ್ತೆಂಬುದು ವೇದ್ಯವಾಗುತ್ತದೆ. ಈ ಮುದ್ರಣಾಲಯದಲ್ಲಿಯ ನಾಗವರ್ಮನ ಛಂದೋಂಬು ಧಿಯು ೧೮೬೨ರಂದು–ಎಂದರೆ ಕಿಟೆಲ್ ಆವೃತ್ತಿ(೧೮೭೫) ಗಿಂತ ಪೂರ್ವದಲ್ಲಿಯೇ, ಅಚ್ಚಾಯಿತು. ಇಲ್ಲಿ ಮುದ್ರಣ ಗೊಂಡ ಕೆಲವು ಕೃತಿಗಳ ಲೇಖಕನೆಂದು ಬಸವಲಿಂಗಯ್ಯ ಮಡಿವಾಳಯ್ಯ ಕುಂದಗೋಳ–ಎಂಬವನ ಹೆಸರು ಇರು ವುದರಿಂದ ಅವನು ಈ ಪ್ರೆಸ್‌ಗೆ ವಿಶೇಷವಾಗಿ ಸಂಬಂಧಿಸಿ ದವನಾಗಿರಬೇಕು.

ಜ್ಞಾನಬೋಧಕ ಮುದ್ರಣಾಲಯವು ಮುಂದೆ ೧೮೬೫ರ ಸುಮಾರಿಗೆ ಧಾರವಾಡಕ್ಕೆ ಸ್ಥಳಾಂತರ ಹೊಂದಿತು. ಆಗಿನ ಮುದ್ರಕ–ಪ್ರಕಾಶಕನೆಂದು 'ದುರ್ಗಾ ಪ್ರಸಾದ ಮಿಸರ' ಎಂಬವನ ಹೆಸರು ಇಲ್ಲಿ ಮುದ್ರಿತವಾದ ಪುಸ್ತಕ ಗಳಲ್ಲಿ ಉಲ್ಲೇಖಗೊಂಡಿದೆ. ಧಾರವಾಡಕ್ಕೆ ಸ್ಥಾನಾಂತರ ಹೊಂದಿದ್ದಾಗ ಹಿಂದಿನವುಗಳನ್ನೇ ಪುನರ್ಮುದ್ರಿಸಿದ್ದುದು ಕಂಡುಬರುತ್ತದೆ. ೧೮೬೦–೧೮೬೨ರ ಅವಧಿಯಲ್ಲಿ ಧಾರ ವಾಡದೊಳಗೆ 'ಸನ್ಮಾರ್ಗದರ್ಶನ', 'ಜ್ಞಾನಸಾಗರ' ಹಾಗೂ 'ಜ್ಞಾನವರ್ಧಕ' ಎಂಬ ಹೆಸರಿನ ಇತರ ಅಚ್ಚು ಕೂಟಗಳೂ ಇದ್ದುವು. ಇವೆಲ್ಲವೂ ಕಲ್ಲಚ್ಚನ್ನೆ ನೆಚ್ಚಿದವು ಗಳು ಮತ್ತು ತಮ್ಮ ತಮ್ಮಲ್ಲಿ ತುಂಬಾ ಸಹಕಾರದಿಂದ ಕೆಲಸ ನಡೆಸಿದುವು. ಗೋವಿಂದ ಪ್ರಭಾಕರ ಜೋಶಿ ಎಂಬವನು ಸನ್ಮಾರ್ಗದರ್ಶಕ ಪ್ರೆಸ್ಸಿನ ಒಡೆಯನು. ಅಲ್ಲಿ ಮರಾಠೀ ಪುಸ್ತಕಗಳೂ ಅಚ್ಚಾಗಿವೆ. ಅಚ್ಚಾದ ಪುಸ್ತಕ ಗಳು ಹೆಚ್ಚಾಗಿ ಪಠ್ಯಗಳು. ಮುಂಬಯಿ ಕರ್ನಾಟಕದ ದ್ವಿತೀಯ ಕನ್ನಡ ಪತ್ರಿಕೆಯೆನಿಸಿದ 'ಕಂನಡ ಜ್ಞಾನ ಬೋಧಕ'ವು (೧೮೬೧) ಸುರುವಿಗೆ ಇಲ್ಲಿಯೇ ಮುದ್ರಣ ಗೊಂಡಿತು. 'ಜ್ಞಾನಸಾಗರ ಪ್ರೆಸ್' ಸುಜಾನಸಿಂಗ್ ಎಂಬವನ ಒಡೆತನದಲ್ಲಿದ್ದಿತು. ಹಿಂದೂ ಪಂಚಾಂಗವು

ಮೊದಲು ಪ್ರಸಿದ್ಧವಾದುದು ಈ ಮುದ್ರಣಾಲಯ . ಇವುಗಳಿಗಿಂತ ಹೆಚ್ಚು ಪ್ರಸಿದ್ಧಿಯನ್ನು ಜ್ಞಾನವರ್ಧಕ ಪ್ರೆಸ್. ೧೮೬೫ರಂದು ಚೆನ್ನಬಸಪ್ಪನ ಪ್ರೋತ್ಸಾಹ, ಸಹಾಯಗಳನ್ನು ಕಲ್ಯಾಣಪ್ಪ ಮಾದನಶೆಟ್ಟಿ ಎಂಬುವನು ಇದನ್ನು ಪಿದನು. ಇಪ್ಪತ್ತನೆಯ ಶತಮಾನದ ಆರಂಭದ ಅಸ್ತಿತ್ವದಲ್ಲಿದ್ದ ಆ ಅಚ್ಚುಕೂಟದಲ್ಲಿ ಯಥಾ ಕ್ರಮಿಕ ಪುಸ್ತಕಗಳೂ ಜನಸಾಮಾನ್ಯರಿಗೆ ನಂಥ ಪುಸ್ತಕಗಳೂ ಮುದ್ರಿತವಾಗಿವೆ.

ಂನೆಯ ದಶಕದಲ್ಲಿ ಬೆಳಗಾಂವಿ ನಗರದಲ್ಲಿ ಇನ್ನು ಅಚ್ಚುಕೂಟಗಳು ಅಸ್ತಿತ್ವದಲ್ಲಿದ್ದುವು. ಕನ್ನಡ ಮರಾಠೀ–ಎರಡೂ ಭಾಷೆಗಳಲ್ಲಿಯ ಸಮಾನ ವು ಬೆಳಗಾಂವಿಯ ವೈಶಿಷ್ಟ್ಯವಾಗಿದ್ದು, ಉದಾ ಗಿ 'ದೇಶಬಾಂಧವ ಪ್ರೆಸ್' ಮತ್ತು 'ಸಮಾ ಸ್' ಇವನ್ನು ಹೆಸರಿಸಬಹುದು. ಕೊನೆಯದು ವ ಸಮಾಚಾರ' ಎಂಬ ಪತ್ರಿಕೆಯ ಹೆಸರನ್ನೇ ಂಡು ಹಲವು ದಶಕಗಳ ವರೆಗೆ ಬಾಳಿತು, ನ್ನಾರು ಪುಸ್ತಕಗಳ ಪ್ರಕಟನೆಗೆ ಕಾರಣವಾಯಿತು. ಗಳೆಲ್ಲ ಕಲ್ಲಚ್ಚನ್ನೇ ನಂಬಿದ್ದಂಥ ಅಚ್ಚುಕೂಟಗಳು. ಯ ದಶಕದಲ್ಲಿ ಮೊಳೆಗಳನ್ನು ಉಪಯೋಗಿಸಿ ರೀತಿಯಲ್ಲಿ ಅಚ್ಚು ಹಾಕಿಸಬೇಕೆನ್ನುವ ಎತ್ತು ನಡೆಯಿತು. (೧೮೬೭) ಮುಂಬಯಿ ಕರ್ನಾ ಶಿಕ್ಷಣಾಧಿಕಾರಿಯಾಗಿದ್ದ ವಿಲಿಯಮ್ ರಸೆಲ್ ಸಹಾಯಾಧಿಕಾರಿ ವೆಂಕಟ ರಂಗೋ ಕಟ್ಟಿ–ಇವ ಅದರ ಪ್ರವರ್ತಕರು. ಕ್ರಮಿಕ ಪುಸ್ತಕಗಳನ್ನು ರಲ್ಲಿ ಮುದ್ರಿಸಿ ಪಡೆಯುವಲ್ಲಿನ ಓಡಾಟ, ಮೊದಲಾದ ತೊಂದರೆಗಳನ್ನು ತಪ್ಪಿಸಲು ರಸೆಲ್ ಮೊಳೆಗಳನ್ನು ತರಿಸಿಕೊಂಡು, ಧಾರವಾಡ, ವಿಗಳಲ್ಲಿಯೇ ಪಠ್ಯಪುಸ್ತಕಗಳನ್ನು ಸಿದ್ಧಗೊಳಿಸ ು ಯೋಜಿಸಿದನು. ಮೊಳೆಗಳು ಎಲ್ಲಿ ದೊರೆಯ ನ್ನುವುದರ ಕುರಿತು ಬೆಂಗಳೂರಿನ ಸರಕಾರಿ ಮುದ್ರ ಮತ್ತು ವಿವಿಧ ಮಿಶನ್ ಸಂಸ್ಥೆಗಳೊಂದಿಗೆ ವಹಾರ ಮಾಡಿದಾಗ ಭಾರತದಲ್ಲಿ ಎಲ್ಲಿಯೂ ಮೊಳೆಗಳು ಮಾರಾಟಕ್ಕೆ ದೊರೆಯದೆಂಬುದು ಯಿತು. ಈ ಬಗ್ಗೆ ವೆಸ್ಲೆಯನ್ ಮಿಶನ್ನಿನ ಯಂಡರ್ಸನ್ ಇವನ ಮುಖಾಂತರ ಲಂಡನ್ನಿ ೂ ರಸೆಲ್ ಪ್ರಯತ್ನಿಸಿದನು[7].

ಆದರೆ ಈ ಪ್ರಯತ್ನವು ಫಲಿಸಲಿಲ್ಲ. ಜರ್ಮನಿಯಲ್ಲಿಯೂ ಪ್ರಯತ್ನಿಸಿದಾಗ ಮಿಶನರಿಗಳು ಮೊಳೆಗಳ ಮೇಲಿನ ತಮ್ಮ ಏಕಸ್ವಾಮ್ಯವನ್ನು ಬಿಟ್ಟುಕೊಡಲು ಸಿದ್ಧರಿಲ್ಲವೆಂದು ತಿಳಿಯಬಂತು. ಆಗ ವೆಂಕಟ ರಂಗೋ ಕಟ್ಟಿಯವರು ಓರ್ವ ಕಂಚುಗಾರನ ಸಹಾಯದಿಂದ ಬೆಳಗಾಂವಿಯಲ್ಲಿ, ೧೮೭೦ರ ಸುಮಾರಿಗೆ, ತಮ್ಮ ಕೈಯಾರೆ, ಮೊಳೆಗಳ ಮಾತೃಕೆಗಳನ್ನು ತಯಾರಿಸಿದರು. ಅವು ಒರಟಾಗಿ ಸದ್ದು–ಮುದ್ದಾಗಿದ್ದುವಾದ್ದರಿಂದ ಅದನ್ನು ನಯಗೊಳಿಸುವುದಕ್ಕಾಗಿ ಓರ್ವ ಕುಶಲಕರ್ಮಿಯನ್ನು ಮುಂಬಯಿಗೆ ತರಬೇತಿಗಾಗಿ ಕಳಿಸಲಾಯಿತು. ೬–೭ ತಿಂಗಳವರೆಗೆ ಆ ಕರ್ಮಚಾರಿಯು ಅನುಭವವನ್ನು ಪಡೆದು ಹಿಂತಿರುಗಿದ ಮೇಲೆ, 'ಬೆಳಗಾಂವ ಲಿಥೊಗ್ರಾಫಿಕ್ ಪ್ರೆಸ್'ನವರು ಮೊಳೆಗಳ ತಯಾರಿಕಾ ಕೇಂದ್ರವನ್ನು ಸ್ಥಾಪಿಸ ಬಯಸಿದರು. ಈ ಎತ್ತುಗಡೆಯಿಂದ ಪ್ರೀತನಾದ ರಸೆಲ್ ಒಂದು ಟೈಪ್ ಫೌಂಡ್ರಿಯ ಸ್ಥಾಪನೆಗೆಂದು ಮುಂಬಯಿ ಸರಕಾರದಿಂದ ಎರಡು ಸಾವಿರ ರೂ. ಗಳ ಸಾಲವನ್ನು ಕೊಡಿಸಿದನಲ್ಲದೆ ತಾನು ಸ್ವತಃ ಇನ್ನೆರಡು ಸಾವಿರದ ಮೊತ್ತವನ್ನು ಸೇರಿಸಿದನು. ರಸೆಲ್‌ನ ಈ ಔದಾರ್ಯವು ಅತ್ಯಂತ ಸ್ಮರಣೀಯವಾದುದು. ಹೀಗೆ ೧೮೭೦ರ ದಶಕದಲ್ಲಿ ಕನ್ನಡ ಮೊಳೆಗಳು ಸಿದ್ಧವಾಗಿ, ಪ್ರೆಸ್ ನಡೆಸಬೇಕೆನ್ನುವ ಯಾರಿಗೇ ಆಗಲಿ ಅವು ಮಾರಾಟಕ್ಕೆ ಬೇಕಾದಷ್ಟು ದೊರೆಯುವಂತಾಗಿ ಮುದ್ರಣ ಕಾರ್ಯವು ಮುಂಬಯಿ ಕರ್ನಾಟಕದಲ್ಲಿ ಭರದಿಂದ ವಿಕಾಸಗೊಂಡಿತು.

ಇನ್ನೀಗ ದೇಶೀಯರ ಮುದ್ರಣದ ಎರಡನೆಯ ಘಟ್ಟಕ್ಕೆ ಬರುತ್ತೇವೆ. ಬೆಳಗಾಂವಿಯಲ್ಲಿ ಮೊಳೆಗಳ ಉತ್ಪಾದನಾ ಕೇಂದ್ರದ ಸ್ಥಾಪನೆಯಾದಂತೆ ಆ ಸಮಯಕ್ಕೆ ಮದ್ರಾಸು ಬೆಂಗಳೂರುಗಳಲ್ಲಿಯೂ ಇಂಥ ಕೇಂದ್ರಗಳು ಹುಟ್ಟಿದುವು. ಮಂಗಳೂರಿನಲ್ಲಿದ್ದುವುಗಳನ್ನು ಈ ಮೊದಲು ಪ್ರಸ್ತಾಪಿಸಲಾಗಿದೆ. ಇಂತು ೧೮೭೦ರ ಅನಂತರ ನಾಡಿನ ಬೇರೆ ಬೇರೆ ಊರುಗಳಲ್ಲಿ ಮುದ್ರಣಾಲಯಗಳು ಕಾಣಿಸಿಕೊಳ್ಳತೊಡಗಿದುವು. ಮುಂದಿನ ೨೦ ವರ್ಷಗಳಲ್ಲಿ ಕರ್ನಾಟಕದ ತಾಲೂಕು ತಹಶೀಲು ಮಟ್ಟದ ಎಲ್ಲ ಊರುಗಳಲ್ಲಿಯೂ ಹಬ್ಬಿದುವು. ಬಳ್ಳಾರಿಯ ಮಿಶನ್ ಪ್ರೆಸ್ ನಿಂತು ಹೋಗಿದ್ದರೂ ೧೮೮೦ರ ಸುಮಾರಿಗೆ ಕೋನೇರಿ ಶೆಟ್ರು ಆದಿನಾರಾಯಣ ಶೆಟ್ರು–ಇವರೇ ಮೊದಲಾದವರು ಆ ಊರಲ್ಲಿ ಪುಸ್ತಕ ವ್ಯವಹಾರದಲ್ಲಿ ನಿರತರಾದರು. ಮದ್ರಾಸ ಪ್ರಾಂತದಲ್ಲಿ ಕನ್ನಡ ಸೀಮೆಗಳಲ್ಲದ ಪುಂಗನೂರು

ಹಾಗೂ ಕುಂಬಕೋಣಂಗಳಲ್ಲಿ ಕೆಲವು ಕನ್ನಡ ಟೀಕಾ ಗ್ರಂಥಗಳು ಪ್ರಕಟವಾಗಿವೆ. ಮಾಧ್ವ ಸಾಹಿತ್ಯವನ್ನು ಕುರಿತಾದ ಈ ಪುಸ್ತಕಗಳ ಲಿಪಿ ತೆಲುಗು. ಮದ್ರಾಸ ನಗರದಲ್ಲಿ ೧೮೬೦ನೆಯ ದಶಕದಿಂದಲೇ 'ಹಿಂದೂ ಭಾಷಾ ಸಂಜೀವಿನೀ' ಮುಂತಾದ ಅಚ್ಚುಕೂಟಗಳು ಕಾರ್ಯನಿರತವಾಗಿದ್ದುವು. ಮದ್ರಾಸದಲ್ಲಿ ಇದ್ದರೂ ಅವುಗಳಲ್ಲಿ ಹೆಚ್ಚಾಗಿ ಕನ್ನಡ ಲಿಪಿಯನ್ನು ಬಳಸುತ್ತಿದ್ದರು; ತೆಲುಗು ಅಲ್ಲ.

ಈ ದ್ವಿತೀಯ ಘಟ್ಟದ ಕಾಲದಲ್ಲಿ ದೇಶೀ ಮುದ್ರಣಾಲಯಗಳು ಹೆಚ್ಚಾಗಿ ಬೆಂಗಳೂರು, ಮೈಸೂರು ನಗರಗಳಲ್ಲಿದ್ದುವು. ಬೆಂಗಳೂರಲ್ಲಿ ೧೯೬೩ರಂದು 'ವಿಚಾರ ದರ್ಪಣ ಮುದ್ರಾಕ್ಷರ ಶಾಲೆ'ಯು ಆರಂಭವಾಯಿತು. ಮೈಸೂರು ಸಂಸ್ಥಾನದಲ್ಲಿ ಇದುವೆ ಮೊದಲ ದೇಶೀ ಮುದ್ರಣಾಲಯವಾಗಿ ತೋರುತ್ತದೆ[೮]. ಅನಂತರ ಹರಿ ರಾಮ ಮಿಸರ(ಮಿಶ್ರ)ನ 'ಟೌನ್ ಪ್ರೆಸ್', ಎಂ. ರುದ್ರಪ್ಪ ಎಂಡ್ ಸನ್ಸ್ ಅವರ ಚಾಮುಂಡೇಶ್ವರೀ ಪ್ರೆಸ್–ಇವು ಸಾಕಷ್ಟು ಹೆಸರುಗಳಿಸಿದುವು. 'ಮೈಸೂರು ಬುಕ್ ಡಿಪೋ'ದ ಮಾಲಕನಾದ ವೆಲನಾಡು ಬಿ. ಸುಬ್ಬಯ್ಯ, 'ಬೆಂಗಳೂರು ಬುಕ್ ಡಿಪೋ'ದ ವಾಜಪೇಯಿ ಕೃಷ್ಣಯ್ಯ –ಈ ಪುಸ್ತಕೋದ್ಯಮಿಗಳು ತಮ್ಮದೇ ಆದ ಪ್ರೆಸ್‌ಗಳನ್ನು ನಡಸುತ್ತಿದ್ದರು. 'ವಾಗೀಶ್ವರೀ ಪ್ರೆಸ್' ಆಗಿನ ಕಾಲದ ಇನ್ನೊಂದು ದೊಡ್ಡ ಅಚ್ಚುಕೂಟವಾಗಿದ್ದಿತು. ಯೋಗ ವಾಸಿಷ್ಠ, ರಾಮಾಯಣಗಳಲ್ಲದೆ ಹಲವು ವೀರಶೈವ ಗ್ರಂಥಗಳು ಇಲ್ಲಿ ಅಚ್ಚಾಗಿವೆ. 'ಕ್ಯಾಲ್ಸ್‌ಟನ್', 'ಅಲ್ಬಿಯನ್' ಎಂಬ ವಿದೇಶೀ ಹೆಸರಿನ ಪ್ರೆಸ್‌ಗಳಲ್ಲಿ ಆಧುನಿಕರ ಕೃತಿಗಳು ಹೆಚ್ಚಾಗಿ ಹೊರಬಂದುವು. 'ಭಾರತೀ ಭವನ ಪ್ರೆಸ್'ನಲ್ಲಿ ಜೈನ ಕೃತಿಗಳ ಮುದ್ರಣಕ್ಕೆ, 'ಸತ್ಸಂಪ್ರದಾಯ ಕಲಾನಿಧಿ ಪ್ರೆಸ್'ನಲ್ಲಿ ಶ್ರೀವೈಷ್ಣವ ಗ್ರಂಥಗಳ ಮುದ್ರಣಕ್ಕೆ ಪ್ರಾಶಸ್ತ್ಯವಿದ್ದಿತು.

ಮೈಸೂರ ನಗರದಲ್ಲಿ ದೇಶೀಯರ ಮುದ್ರಣಕಾರ್ಯವು ತಡವಾಗಿ ಆರಂಭವಾದರೂ ಆ ಮುಂದೆ ಬೆಂಗಳೂರಿಗೆ ಸಮಾನವಾದ ಸ್ಥಾನವನ್ನೇ ಪಡೆದಿದ್ದಿತು. ಮುಮ್ಮಡಿ ಕೃಷ್ಣರಾಜಾಂಕಿತ ಗದ್ಯಗ್ರಂಥಗಳೂ (ಕೃಷ್ಣರಾಜ ವಾಣೀ ವಿಲಾಸ ಇ.) ಹಳಗನ್ನಡ ಕಾವ್ಯಗಳೂ ಬಹ್ವಂಶವಾಗಿ ಆ ನಗರದ ಅಚ್ಚುಕೂಟಗಳಿಂದಲೇ ಹೊರಬಂದಿವೆ. ಕರ್ನಾಟಕ ಕಾವ್ಯಮಂಜರಿ, ಕಾವ್ಯ ಕಲಾನಿಧಿ–ಈ ಮಾಲೆಯ ಹಳಗನ್ನಡ ಪುಷ್ಪಗಳು ಸದ್ವಿದ್ಯಾಮಂದಿರ ಮತ್ತು ಸ್ಟಾರ್ ಪ್ರೆಸ್‌ಗಳಲ್ಲಿ ಅರಳಿದುವು. ಸುಪ್ರಸಿದ್ಧ 'ಕರ್ನಾಟಕ ಗ್ರಂಥಮಾಲೆ'ಯವರ ಕೃತಿಗಳು ಗ್ರ್ಯಾಜುಯೇಟ್ ಟ್ರೇಡಿಂಗ್ ಅಸೋಸಿಯೇಶನ್ (ಜಿ. ಟಿ. ಎ.) ಪ್ರೆಸ್‌ನಲ್ಲಿ ಮೈದಾಳಿದುವು. 'ಜಗನ್ಮೋಹಿನಿ ಪ್ರೆಸ್'ನಲ್ಲಿ ವೀರಶೈವ ಗ್ರಂಥಗಳ ಮುದ್ರಣವು ಪ್ರಾಶಸ್ತ್ಯವನ್ನು ಪಡೆಯಿತು. ಹಾಗೆಯೇ ಸಂಸ್ಕೃತದ ಅನೇಕ ಸಣ್ಣ ದೊಡ್ಡ ಗ್ರಂಥಗಳು ಹೊರಬಂದುದು ಮೈಸೂರು ಮುದ್ರಣಾಲಯಗಳ ಕಾರ್ಯಫಲವಾಗಿದೆ.

ಮುದ್ರಣ ಪ್ರಸರಣದಲ್ಲಿ ಮಂಗಳೂರು ದೀಪಸ್ತಂಭದಂತಿದ್ದರೂ ದೀಪದ ಕೆಳಗೆ ಕತ್ತಲೆಯೆಂಬಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಿಶನರಿ ಜನರ ಮುದ್ರಣವನ್ನು ಬಿಟ್ಟು ದೇಶೀ ಮುದ್ರಣವು ಬೇಗ ವಿಕಾಸಗೊಳ್ಳಲಿಲ್ಲ. ೧೮೮೦ನೆಯ ದಶಕದಲ್ಲಿ ಉಡುಪಿಯಲ್ಲಿ 'ಹಿಂದೂ ಮುದ್ರಣಾಲಯ'ವು ಆರಂಭವಾಯಿತು. ಆಮೇಲೆ ಬೇರೆ ಊರುಗಳಲ್ಲಿ ಒಂದೊಂದಾಗಿ ಪ್ರೆಸ್‌ಗಳು ತಲೆಯೆತ್ತಿದುವು.

ಮುಂಬಯಿ

೧೮೮೯ರಸುಮಾರಿಗೆ ಶಾಮರಾವ ವಿಠ್ಠಲ ಕೈಕಿಣಿಯವರ ಪ್ರೋತ್ಸಾಹದಿಂದ ಮತ್ತು ಸೂರಿ ವೆಂಕಟರಮಣಶಾಸ್ತ್ರಿ ಇವರ ಪರಿಶ್ರಮದಿಂದ ಕರ್ನಾಟಕ ಪ್ರೆಸ್ ಮತ್ತು ಭಾರತೀ ಪ್ರೆಸ್-ಇವು ಕನ್ನಡ ಮುದ್ರಣದಲ್ಲಿ ನಿರತವಾದುವು. 'ಕನ್ನಡ ಸುವಾರ್ತೆ' 'ಹವ್ಯಕ ಸುಬೋಧ' ಎಂಬ ಸಾಪ್ತಾಹಿಕಗಳು, ವೆಂಕಟಾಧ್ವರಿಯ ಕಾವ್ಯದ ಹಾಗೂ ಮನುಸ್ಮೃತಿಯ ಅನುವಾದಗಳಂಥ ಮಹತ್ವದ ಪ್ರಕಟನೆಗಳನ್ನು ಈ ಅಚ್ಚುಕೂಟಗಳು ನೀಡಿವೆ. ಕನ್ನಡದ ಮೊಳೆಗಳನ್ನು ಮಾರಾಟ ಮಾಡುತ್ತಿದ್ದ ಮುಂಬಯಿಯ ನಿರ್ಣಯಸಾಗರ ಪ್ರೆಸ್ಸಿನವರೂ ಆಗೀಗ ಕನ್ನಡ ಪುಸ್ತಕಗಳನ್ನು ಅಚ್ಚು ಹಾಕಿಸಿದುದಿದೆ.

ನವೀನ ಸಾಹಿತ್ಯ ನಿರ್ಮಿತಿಯಲ್ಲಿ ಮುದ್ರಣವು ಅದೆಷ್ಟು ಬಲವಾದ ಪ್ರೇರಣೆಯನ್ನು ನೀಡಿತೆಂಬುದು ಮೇಲಣ ವಿವೇಚನೆಯಿಂದ ಸ್ಪಷ್ಟವಾಗದಿರದು. ಕೈಯಲ್ಲಿ ಒಂದಷ್ಟು ಹಣವಿದ್ದರೆ ಇಂದಿನ ಕಾಲದಲ್ಲಿ ಯಾರೂ ಪ್ರೆಸ್‌ಗೆ ಹೋಗಿ, ಸುಲಭವಾಗಿ ಪುಸ್ತಕವನ್ನು ಹೊರಹಾಕಬಹುದು. ಹಿಂದಿನ ಕಾಲದಲ್ಲಿ ಎಂದರೆ ನೂರು ವರ್ಷಗಳ ಹಿಂದೆ ಆ ಸ್ಥಿತಿ ಇರಲಿಲ್ಲ. ಮುದ್ರಣ ಕಾರ್ಯವನ್ನು ಒಂದು ಪ್ರೌಢ ಮಟ್ಟಕ್ಕೆ ತರಲು ಆಗಿನ ಅನೇಕ ಮಹನೀಯರು ಶ್ರಮಿಸಿದ್ದಾರೆ. ಅವರೆಲ್ಲರ ಪರಿಶ್ರಮವನ್ನು ನೆನೆಯುವುದು ನಮ್ಮ ಕರ್ತವ್ಯವಾಗಿದೆ.

ಸಂದರ್ಭ ಸೂಚಿ

1. London Missionary Society Records. (Mss.), South India, Kanerese, Box. 1. Letter dt. 14-7-1823.
2. Indian Journalism, by Nadig Krishna Murthy, pp. 290-91.
3. Proceedings South India Missionary Conference, 1858. p. 106.
4. Manual of the Administration of the Madras Presidency. Vol. I ಪು. ೫೫೦.
5. ತೆಂಕನಾಡು : ದಾಮೋದರ ಬಾಳಿಗರ ಲೇಖ.
6. ಕಸ್ತೂರಿ, ಮೇ ೧೯೬೮ : ಶ್ರೀನಿವಾಸ ಹಾವನೂರ.
7. W. A. Russell, esq. by V. R. Katti. ಪು. ೨೦-೨೧.
8. Mysore Gazetteer. vol. 4. ಪು. ೬೪೫.

ಎರವಲು ಕೊಟ್ಟ ಪುಸ್ತಕಗಳ ದುರ್ದೈವ–ಕಳೆದು ಹೋಗುತ್ತವೆ ಇಲ್ಲವೆ ಕೊಳೆಯಾಗುತ್ತವೆ.

—ಸೋಡಿಯರ್

ಕವಿಗಳು ಬಡವರಾದುದರಿಂದ ಪದಗಳನ್ನು ಮಿತವಾಗಿ ಖರ್ಚು ಮಾಡಬೇಕು.

—ವಿಲಿಯಂ ಗ್ರಿಫಿತ್

ಇಂದಿನ ನಿಜವಾದ ವಿಶ್ವವಿದ್ಯಾಲಯವೆಂದರೆ ಪುಸ್ತಕ ಸಂಗ್ರಹ.

—ಕಾರ್ಲೈಲ್

ಸೋಮಾರಿತನ ಉಳಿದವರಿಗೆ ಶಾಪ, ಕವಿಗಳಿಗೆ ವರ.

—ಡಿ' ಆರ್ಕಿ

ಮನುಷ್ಯರಿಗಿಂತ ಪುಸ್ತಕಗಳನ್ನು ನಾನು ಅಧ್ಯಯನ ಮಾಡುವುದೇ ಹೆಚ್ಚು.

—ಫ್ರಾನ್ಸಿಸ್ ಬೇಕನ್

ಸಾಹಿತ್ಯ ಪರಿಷತ್ತಿನ ಸರಸ್ವತೀಭಂಡಾರ

—ಒಂದು ಕಿರುಪರಿಚ

ಪರಿಷತ್ತಿನ ಪುಸ್ತಕ ಭಂಡಾರಕ್ಕಿರುವ ಸಾರ್ಥಕ ಅನ್ವರ್ಥಕ ಅಭಿಧಾನ ಸರಸ್ವತೀ ಭಂಡಾರ ಎಂದು. ಇದರ ಜೊತೆಗೇ ಹೊಂದಿಕೊಂಡು ಉಚಿತ ವಾಚನಾಲಯವೂ ಇದೆ. ಪರಿಷತ್ತಿನ ಕಾರ್ಯಕಲಾಪಗಳಲ್ಲಿ ಇವು ಮುಖ್ಯವಾದ ಅಂಗಗಳಂತೆ ಪಾತ್ರವಹಿಸುತ್ತಿವೆ. ೧೯೨೭ನೆಯ ಇಸವಿಯಲ್ಲಿ ಈ ಭಂಡಾರದಲ್ಲಿ ೧೨೨೦ ಕನ್ನಡ ಪುಸ್ತಕಗಳಲ್ಲದೆ ೩೫೦ ಇಂಗ್ಲಿಷು, ೧೧೦ ಸಂಸ್ಕೃತ, ೨೨ ತೆಲುಗು, ೨೪ ಮರಾಠಿ, ೮ ಬಂಗಾಲಿ ಭಾಷೆಯ ಪುಸ್ತಕಗಳೂ ಇದ್ದುವು. ಅವುಗಳಲ್ಲಿ ಅನೇಕ ಗ್ರಂಥಗಳು ಮೈಸೂರು ಸರಕಾರದಿಂದ ಮುಫತ್ತಾಗಿ ಬಂದಿದ್ದವು. ಅದರಂತೆ ಪರಿಷತ್ತಿನ ಹಣದಿಂದಲೂ ಕೆಲವು ಕೃತಿಗಳನ್ನು ಕೊಳ್ಳಲಾಗಿತ್ತು. ಸುಮಾರು ೧೫ ಕೈಬರೆಹದ ಹೊತ್ತಗೆಗಳೂ ಇದ್ದುವು.

ಕನ್ನಡದಲ್ಲಿ ಪ್ರಕಟವಾಗಿರುವ ಎಲ್ಲ ಹೊತ್ತಗೆಗಳನ್ನು ಈ ಸರಸ್ವತೀ ಭಂಡಾರದಲ್ಲಿಡಬೇಕೆಂಬುದು ಇದರ ಮೂಲೋದ್ದೇಶವಾಗಿದೆ. ಆದರೆ ಇದು ಇಂದಿನ ತನಕ ಸಾಧಿಸಬೇಕಾದ ಆದರ್ಶವಾಗಿಯೇ ಉಳಿದಿದೆ. ಹಿಂದೆ ಕೆಲವು ಸಲ ವಸಂತ ಸಾಹಿತ್ಯೋತ್ಸವ ನಡಸುವ ಸಂದರ್ಭದಲ್ಲಿಯೇ ಗ್ರಂಥಪ್ರದರ್ಶನವನ್ನು ಏರ್ಪಾಡು ಮಾಡಿದ್ದು ಬರೆಹಗಾರರಿಗೂ ಪ್ರಕಾಶಕರಿಗೂ 'ಈ ಸರಸ್ವತಿ ಭಂಡಾರಕ್ಕೆ ಉಚಿತವಾಗಿ ಇಲ್ಲವೇ ರಿಯಾಯಿತಿ ಬೆಲೆಯಲ್ಲಿ ಪುಸ್ತಕಗಳನ್ನು ಕೊಡಬೇಕು' ಎಂದು ವಿಶೇಷ ವಿನಂತಿ ಮಾಡಿಕೊಳ್ಳಲಾಯಿತು ಅದರ ಪರಿಣಾಮವಾಗಿ ಸುಮಾರು ಸಾವಿರದೈವತ್ತು ಕನ್ನಡ ಪುಸ್ತಕಗಳು ಈ ಪುಸ್ತಕ ಭಂಡಾರಕ್ಕೆ ಸೇರ್ಪಡೆಯಾದುವು.

ಸರಸ್ವತೀ ಭಂಡಾರಕ್ಕೆ ನಾನಾ ಸಂಘ ಸಂಸ್ಥೆ ಅರ
ಗುರುಮನೆ ಸರಕಾರ ಪ್ರೋತ್ಸಾಹ ಕೊಟ್ಟಿರುವುದ
ಕೃತಜ್ಞತೆಯಿಂದ ಉಲ್ಲೇಖಿಸಬೇಕು. ಮೈಸೂರು ವಿ
ಭ್ಯಾಸ ಇಲಾಖೆಯ ವತಿಯಿಂದ ಸುಮಾರು ಒ
ಸಾವಿರ ಕನ್ನಡ ಪುಸ್ತಕಗಳು ಉಚಿತ ಕೊಡುಗೆಯ
ಬಂದಿವೆ. ಅರಮನೆಯ ಪ್ರಕಟನೆಗಳೆಲ್ಲದರ ಎರಡೆ
ಪ್ರತಿಗಳು ದಾನವಾಗಿ ಬಂದಿವೆ. ಮೈಸೂರು ಸರ
ಹಾಗೂ ವಿಶ್ವವಿದ್ಯಾನಿಲಯದಿಂದಲೂ ಹಿಂದೆ ಗ್ರಂಥ
ಬಂದಿದ್ದುಂಟು. ಪ್ರಾ|| ಬಿ. ಕೃಷ್ಣಪ್ಪನವರ ಹಾ
ಆಸ್ಥಾನ ವಿದ್ವಾನ್ ತಿ. ಶ್ರೀನಿವಾಸ ರಾಘವಾಚಾರ್ಯ
ಸ್ವಂತ ಪುಸ್ತಕ ಭಂಡಾರಗಳು ಕೂಡ ಈ ಭಂಡಾ
ಉದಾರವಾಗಿ ಸೇರಿದುವು.

ಈ ಭಂಡಾರ ಮುಖ್ಯವಾಗಿ ಬೆಳೆದು ಬಂದಿರುವುದ
ಇನ್ನೊಂದು ಕಾರಣವಿದೆ. 'ಪರಿಷತ್ ಪತ್ರಿಕೆ' ಹಾ
'ಕನ್ನಡ ನುಡಿ'ಗಳಿಗೆ ಈ ಶ್ರೇಯಸ್ಸು ಸಲ್ಲುತ್ತದೆ.
ಎರಡು ಪತ್ರಿಕೆಗಳಿಗೆ ಪುಸ್ತಕ ವಿಮರ್ಶೆಗಾಗಿ ಬಂದ ಪುಸ್ತ
ಗಳ ಪ್ರತಿಗಳು ಸರಸ್ವತೀ ಭಂಡಾರಕ್ಕೆ ಸೇರುತ್ತಿದ್ದು
ಇದರಿಂದ ಭಂಡಾರದ ಶಕ್ತಿ ಸತ್ವ ಹೆಚ್ಚಲು ಸಾ
ವಾಯಿತು. ಅಲ್ಲದೆ ಆಗಾಗ್ಗೆ ಪರಿಷತ್ತು ಕೂಡ ಕೊ
ಗ್ರಂಥಸಂಗ್ರಹ ಸಾಕಷ್ಟಿದೆ. ಕಳೆದ ೧೫ ವರ್ಷಗಳಿ
ಸಾಹಿತ್ಯ ಪರಿಷತ್ತಿನ ಪ್ರಮುಖ ಶಾಖೆಯಾದ ನಿಘಂ
ಕಚೇರಿ ಕೂಡ ಸಹಸ್ರಾರು ರೂಪಾಯಿ ಮೊತ್ತದ ಕನ್ನ
ಇಂಗ್ಲಿಷ್ ಗ್ರಂಥಗಳನ್ನು ಸರಕಾರ ಕೊಟ್ಟ ಹಣದ
ಕೊಂಡಿದೆ. ಕಡೆಯಲ್ಲಿ ಅವೆಲ್ಲ ಪರಿಷತ್ತಿನ ಸರಸ್ವ
ಭಂಡಾರದಲ್ಲಿ ಸೇರ್ಪಡೆಯಾಗುತ್ತವೆಯೆಂಬುದನ್ನು ನೆ

ಂಡಾಗ ಹೆಮ್ಮೆಯಾಗುತ್ತದೆ. ಅಲ್ಲದೆ ಈಗ ತಾತ್ಕಾ ವಾಗಿ ಈ ಭಂಡಾರದ ನೂರಾರು ಗ್ರಂಥಗಳು ನಿಘಂಟು ೀರಿಯಲ್ಲಿವೆ. ಇದು ಅನಿವಾರ್ಯ, ನಿಘಂಟಿಗೆ ಾದ ಶಬ್ದಸಂಗ್ರಹಾದಿ ಕೆಲಸಗಳಿಗೆ. ಹೀಗಾಗಿ ಸ್ವತೀ ಭಂಡಾರದ ಹೆಚ್ಚಿನ ಪ್ರಮಾಣದ ಸದುಪ ೀಗ ಇಲ್ಲಿ ನಡೆಯುತ್ತಿದೆ.

೧೯೫೬ರ ಹೊತ್ತಿಗೆ ಸರಸ್ವತೀ ಭಂಡಾರದಲ್ಲಿ ಸುಮಾರು ರಡು ಸಾವಿರ ಗ್ರಂಥಗಳಿದ್ದುವು. ೧೯೬೨ರ ಲೈ ತಿಂಗಳ ಲೆಕ್ಕದಂತೆ ಈಗ ಸುಮಾರು ಇಪ್ಪತ್ತು ಾರು ಸಾವಿರ ಪುಸ್ತಕಗಳಿವೆ. ಇದು ನಿಜಕ್ಕೂ ಷ್ಯ ಪ್ರಮಾಣವೇ ಆದರೂ ಕನ್ನಡದಲ್ಲಿ ಅಚ್ಚಾಗಿರುವ ಗ್ರಂಥಗಳೂ ಇಲ್ಲಿಲ್ಲವೆಂಬ ಕೊರಗೂ ಇನ್ನೂ ಕರಗ ಾಗಿದೆ. ಸಾಹಿತ್ಯ ಪರಿಷತ್ತು ಅಖಿಲ ಕರ್ನಾಟಕದ ಾನ್ ಮಾತೃಸಂಸ್ಥೆಯಾಗಿದೆ. ಇಲ್ಲಿ ಎಲ್ಲ ಕನ್ನಡ ಥಗಳೂ ಕಾಣಸಿಗಬೇಕಾದುದು ನ್ಯಾಯ, ಅತ್ಯಾ ಕ. ಅದು ತೀರದ, ದೂರದ ಕನಸಾಗಿ ಉಳಿಯದೆ ಸಾಗಿ ಕೈಗೂಡುವ ಹೊನ್ನಿನ ದಿನಗಳು ಸಮೀಪಿಸು ೆ. ಇದೀಗ ಪರಿಷತ್ತು ತನ್ನ ಹೊನ್ನಹಬ್ಬದ ಹೊಂಗಿ ದಲ್ಲಿ ಮಿಂದು ಹೊಸ ಹುರುಪು ಹೆಚ್ಚಿ ಬಹು ಸೊಗ ಿ ಹಬ್ಬುತ್ತಿದೆ. ಕನ್ನಡದ ಎಲ್ಲ ಗ್ರಂಥಸಂಪತ್ತಿನ ಯಂ ಪ್ರದರ್ಶನ ಈಗ ಭವ್ಯವಾಗಿ ಸಿದ್ಧವಾಗುತ್ತಿರುವ ಸ ಕಟ್ಟಡದಲ್ಲಿ ಏರ್ಪಡಲಿರುವುದು ಶುಭ ಸಂಗತಿ ಾಗಿದೆ.

ಈ ಭಂಡಾರದ ಭಾಗವಾಗಿ ಕೆಲವು ಓಲೆಗರಿ ಗ್ರಂಥ ಿ ಇವೆ. ಅವುಗಳನ್ನು ಹೆಚ್ಚಿಸುವ ಇಲ್ಲವೇ ಪರಿ ಧಿಸುವ ಕಡೆಗೆ ಗಮನ ಮೊದಲಿನಿಂದಲೂ ಹರಿಸಿಲ್ಲ ವೆಂಬುದು ನಿಜವಾದರೂ ಇನ್ನುಮುಂದೆ ಆ ಕಡೆ ಕೂಡ ನೋಡಬಹುದಾಗಿದೆ.

ಪರಿಷತ್ತು ಸ್ಥಾಪಿತವಾದಂದಿನಿಂದ ಒಂದೇಸಮನೆ ನಡೆದುಕೊಂಡು ಬರುತ್ತಿರುವ ಇನ್ನೊಂದು ಭಂಡಾರದಂಗವೆಂದರೆ ಧರ್ಮ ವಾಚನಾಲಯ. ಇದರ ಬೆಳವಣಿಗೆಯಲ್ಲಿ ಮೊದಲು ಪಾತ್ರವಹಿಸಿದ ಸಹಾಯಕ ಶಕ್ತಿ ಸರಕಾರ. ರಾಜ್ಯ ಸರಕಾರ ಹಿಂದೆ ಹಲವು ವರ್ಷ ಮಾಹೆಯಾನ ಮುವ್ವತ್ತು ರೂಪಾಯಿಯಂತೆ ಸಹಾಯ ದ್ರವ್ಯವಿತ್ತು ಪ್ರೋತ್ಸಾಹಿಸಿತು. ಕಳೆದ ಎರಡೂವರೆ ದಶಕಗಳಿಂದ ಬೆಂಗಳೂರು ನಗರ ಸಭೆಯವರು ತಿಂಗಳಿಗೆ ೨೫ ರೂ. ಅಂತೆ ಸಹಾಯ ಕೊಡುತ್ತಿದ್ದಾರೆ. ಈ ಉಚಿತವಾಚನಾಲಯದ ಯಶಸ್ಸಿಗೆ ಕೂಡ ಕನ್ನಡ ನುಡಿ, ಪರಿಷತ್ ಪತ್ರಿಕೆಗಳ ಪಾತ್ರವಿದ್ದೇ ಇದೆ. ಏಕೆಂದರೆ ಈ ಎರಡೂ ಪತ್ರಿಕೆಗಳಿಗೆ ವಿನಿಮಯವಾಗಿ ಬರುವ ಹತ್ತಾರು ಪತ್ರಿಕೆಗಳನ್ನು ಇಲ್ಲಿಯೇ ಓದುಗರ ಅನುಕೂಲಕ್ಕಾಗಿಡಲಾಗುತ್ತಿದೆ. ಪರಿಷತ್ತು ತಾನೇ ಚಂದಾ ಹಣ ಕೊಟ್ಟು ತರಿಸುವ ಪತ್ರಿಕೆಗಳೂ ಇವೆ. ಈಗ ಹಾಲಿ ಈ ಉಚಿತ ವಾಚನಾಲಯದಲ್ಲಿ ೧೫ ದಿನಪತ್ರಿಕೆ, ೫೫ ವಾರಪತ್ರಿಕೆ, ೫೨ ಮಾಸಪತ್ರಿಕೆ ಇವೆ. ಪ್ರತಿ ನಿತ್ಯ ಸರಾಸರಿ ನೂರು ಜನ ಇವುಗಳ ಮತ್ತು ಗ್ರಂಥಭಂಡಾರದ ಪ್ರಯೋಜನ ಪಡೆಯುತ್ತಿದ್ದಾರೆ.

ಸಾಹಿತಿಗಳಿಗೂ, ವಿದ್ಯಾರ್ಥಿಗಳಿಗೂ, ಸಂಶೋಧಕರಿಗೂ ತಕ್ಕ ಅನುಕೂಲಗಳನ್ನೊದಗಿಸುವಂತೆ ಈ ಭಂಡಾರವನ್ನು ಬೆಳೆಸುವ ಯೋಜನೆಯಿದೆ. ಒಳ್ಳೆಯ ಭವಿಷ್ಯ ಹೊತ್ತ ಈ ಭಂಡಾರ ದಿನೇ ದಿನೇ ವರ್ಧಿಷ್ಣುವಾಗಲೆಂದು ಹೃತ್ಪೂರ್ವಕವಾಗಿ ಹಾರೈಸೋಣ.

ಲೌಕಿಕ ರಸಗಳ ಯಥಾರೂಪಾನುಕರಣವು ಸಾಹಿತ್ಯ ಧರ್ಮವಲ್ಲ. ಲೋಕದ ಡೊಂಕನ್ನು ತಿದ್ದುವ ಪ್ರತಿಜ್ಞೆ ತೊಟ್ಟು ತಾನೆ ಡೊಂಕಾಗುವುದು ಸಾಹಿತ್ಯಕರ್ಮವಲ್ಲ. ಸತ್ಯ–ಪ್ರಿಯ–ಹಿತಕರವೆನಿಸಿರುವ ವಾಕ್‌ಸಂಪತ್ತಿನ ಸಾಧನೆ, ಸತ್ಯಾಭ್ಯಾಸ ಪರಾಯಣತೆ–ಇವು ವಾಙ್ಮಯ ತಪಸ್ಸಿನ ತಿರುಳು.

—ಕಡೆಂಗೋಡ್ಲು ಶಂಕರಭಟ್ಟರು

ಗೋಖಲೆ ಸಂಸ್ಥೆ ಮತ್ತು ಅದರ ಪುಸ್ತಕ ಭಂಡಾರ

● ಡಿ. ಆರ್. ವೆಂಕಟರಮಣನ್
ಬಿ. ಎನ್. ಸುಬ್ಬರಾಯು

ಬೆಂಗಳೂರಿನಲ್ಲಿರುವ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಪ್ರಾರಂಭವಾದದ್ದು 1945ರಲ್ಲಿ. ಪ್ರಜಾರಾಜ್ಯದಲ್ಲ ಪ್ರಜಾಜನರು ನೆರವೇರಿಸಬೇಕಾದ ಕರ್ತವ್ಯಗಳು ಕೆಲವಿರುತ್ತವೆ. ಅವರು ಸಾಧಿಸಿಕೊಳ್ಳಬೇಕಾದ ಹಕ್ಕುಗಳೂ ಕೆಲವಿರುತ್ತವೆ. ಈ ಕರ್ತವ್ಯಗಳನ್ನೂ ಅಧಿಕಾರಗಳನ್ನೂ ಅವರು ಚೆನ್ನಾಗಿ ತಿಳಿದುಕೊಂಡು ರಾಷ್ಟ್ರಜೀವನಕ್ಕೆ ಸಹಾಯವಾಗುವುದೇ ರಾಷ್ಟ್ರಕಧರ್ಮ. ಅದು ಚೆನ್ನಾಗಿ ನಡೆದಲ್ಲದೆ ಪ್ರಜಾರಾಜ್ಯವು ತೃಪ್ತಿಕರವಾಗಿ ನಡೆಯದು. ಈ ಮಹತ್ತರವಾದ ಧರ್ಮದ ಆಚರಣೆಗೆ ಅವಶ್ಯವಾದ ಪರಿಜ್ಞಾನವನ್ನೂ ಅಭ್ಯಾಸವನ್ನೂ ಜನತೆಯಲ್ಲಿ ಪ್ರಚಾರಪಡಿಸುವುದು ಈ ಸಂಸ್ಥೆಯ ಮುಖ್ಯೋದ್ದೇಶ. ಈ ಸಂಸ್ಥೆ ಯಾವ ರಾಜಕೀಯ ಕಕ್ಷಿಗಾಗಲಿ, ಯಾವ ಮತ ಜಾತಿ ವರ್ಗಕ್ಕಾಗಲಿ, ಯಾವ ಒಂದು ಕೋಮಿಗಾಗಲಿ ಒಳಪಟ್ಟಿದ್ದಲ್ಲ.

ಗೋಪಾಲಕೃಷ್ಣ ಗೋಖಲೆಯವರನ್ನು ಮಹಾತ್ಮಾ ಗಾಂಧಿಯವರು ತಮ್ಮ ಗುರುವೆಂದು ಭಾವಿಸಿದ್ದರು. ಆ ದೇಶಭಕ್ತರ ಧ್ಯೇಯಗಳನ್ನೂ ತತ್ತ್ವಗಳನ್ನೂ ನೆನಪಿನಲ್ಲಿರಿಸಿಕೊಂಡು, ದೇಶವಿಚಾರವನ್ನು ಶಾಸ್ತ್ರಕ್ರಮದಲ್ಲಿ ವ್ಯಾಸಂಗ ಮಾಡಿ, ನಿಷ್ಪಕ್ಷಪಾತವೂ ವಿಚಾರಶುದ್ಧವೂ ಆದ ಜನಾಭಿಪ್ರಾಯವು ವ್ಯಕ್ತಪಡುವಂತೆಯೂ, ಪ್ರಜೆಯಲ್ಲಿ ಸರ್ವಹಿತ ಮನೋಭಾವ ರೂಢಿಯಾಗುವಂತೆಯೂ

ವಿವಿಧ ಕಾರ್ಯಭಾರಗಳನ್ನು ಈ ಸಂಸ್ಥೆ ಕೈಗೊ
ತ್ತದೆ. ಈ ಸಂಸ್ಥೆಗೆ ಅಂಗವಾಗಿ ತರುಣ ಜನರ ವ್ಯಾ
ಕ್ಕಾಗಿಯೂ ಕಾರ್ಯಾಭ್ಯಾಸಕ್ಕಾಗಿಯೂ ಒಂದು ವ್ಯಾ
ಗೋಷ್ಠಿ ಏರ್ಪಟ್ಟಿದೆ. ಸಂಸ್ಥೆ ನಡೆಸುತ್ತಿರುವ ಕಾ
ಗಳಲ್ಲಿ ಮುಖ್ಯವಾದವು ಇವು :

1. ಉಪನ್ಯಾಸ
2. ಗ್ರಂಥಪ್ರಕಟನೆ
3. ವಾಚನಾಲಯ
4. ಪುಸ್ತಕ ಭಂಡಾರ
5. ಚರ್ಚಾಕೂಟಗಳು
6. ಪ್ರತಿ ಭಾನುವಾರ ಒಂದು ಸಂಸ್ಕೃತ ಮ
   ಒಂದು ಇಂಗ್ಲಿಷ್ ಗ್ರಂಥಪಾಠ
7. ಶ್ರೀಮದ್ರಾಮಾಯಣ ಕಾವ್ಯವಾಚನ
8. ವ್ಯಾಸಪೂರ್ಣಿಮೆ—ವೇದಪಾರಾಯಣ
9. ಸಂಸ್ಕೃತಿಗೆ ಸಂಬಂಧಪಟ್ಟ ಸಂಗೀತ ಸಾ
   ಕಾರ್ಯಗಳು
10. ಪೌರ ಪರಿಸ್ಥಿತಿಯ ಪರಿಶೀಲನೆ.

ಸಂಸ್ಥೆ ತಿಂಗಳಿಗೊಂದು ಸಾರಿ "ಪಬ್ಲಿಕ್ ಅಫೇ
(ಸಾರ್ವಜನಿಕ) ಎಂಬ ಇಂಗ್ಲಿಷ್ ಪತ್ರಿಕೆಯನ್ನು
ಟಿಸುತ್ತದೆ.

ಸಂಸ್ಥೆಯ ಸ್ವಂತ ಕಟ್ಟಡ ಬೆಂಗಳೂರಿನಲ್ಲಿ ಬಸ
ಗುಡಿಯಲ್ಲಿರುವ ಬುಲ್ ಟೆಂಪಲ್ ರೋಡಿನಲ್ಲಿ
ಸಂಸ್ಥೆಯ ಕಟ್ಟಡದಲ್ಲಿ ವಾಚನಾಲಯವೂ ಪು
ಭಂಡಾರವೂ ಇವೆ. ಅದರ ಸಭಾಮಂದಿರದಲ್ಲಿ
ಸೇವಕರ ಭಾವಚಿತ್ರಗಳನ್ನೂ ಕವಿತಾತ್ತ್ವಕರ ಭ
ಚಿತ್ರಗಳನ್ನೂ ವಾಲ್ಮೀಕಿ ವ್ಯಾಸರುಗಳ ಪ್ರತಿಮೆಗಳ
ನೋಡಿ ಸಂತೋಷ ಪಡಬಹುದು.

ಈ ಸಂಸ್ಥೆಯ ಮುಖ್ಯೋದ್ದೇಶವಾದ ಶಾಸ್ತ್ರವ್ಯಾಸಂ
ಅನುಕೂಲಕ್ಕಾಗಿ ಒಂದು ಪುಸ್ತಕ ಭಂಡಾರವ
!5-8-1948ರಲ್ಲಿ ಪ್ರಾರಂಭಿಸಲಾಯಿತು. ಈ ಪುಸ್ತ
ಭಂಡಾರಕ್ಕೆ ಭಾರತರತ್ನ ಮೋಕ್ಷಗುಂಡಂ ವಿಶ್ವೇಶ್ವರ
ನವರು, ರಾಮಕೃಷ್ಣ ಆಶ್ರಮ, ಮೊದಲಿಯಾರ್ ಸಂ
ಬಳ್ಳಾರಿಯ ವಕೀಲರಾದ ಬೆಲ್ಲೋಣಿ ಭೀಮರಾಯ
ಮಿರ್ಜಾ ಇಸ್ಮಾಯಿಲ್ ಅವರು, ಸಿ. ಹಯವ
ರಾಯರು, ಡಾ|| ಸಿ. ಬಿ. ರಾಮರಾಯರು, ತುಮಕೂ

ದ್ದ ಶ್ರೀ ಕೆ. ರಂಗಾಚಾರ್ಯರು, ಕೆ. ನಿವಾಸ ಅಯ್ಯಂಗಾರ್ಯರು, ಎ. ಆರ್. ಗಳು, ಜಿ. ಪಿ. ರಾಜರತ್ನಂ ಅವರು, ಡಿ. ವಿ. ಪು, ಕೆ. ಸಂಪದ್ಗಿರಿರಾಯರು, ನಿಟ್ಟೂರು ರಾಯರು ಮುಂತಾದ ಅನೇಕ ಮಹನೀಯರ ದಾನವಾಗಿ ಬಂದಿವೆ.

ಸ್ಥೆಯ ಪುಸ್ತಕ ಭಂಡಾರದಲ್ಲಿರುವ ಕನ್ನಡ, ಇಂಗ್ಲಿಷ್, ತಮಿಳು, ತೆಲುಗು ಮತ್ತು ಹಿಂದೀ ಪುಸ್ತಕಗಳ ಸಂಖ್ಯೆ ಸುಮಾರು 30,000.

ಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಜೀವನ ತ್ತ್ವಶಾಸ್ತ್ರ, ಯೂರೋಪ್, ಅಮೆರಿಕಾ ಗಳ ದೇಶಚರಿತ್ರೆ, ರಾಜ್ಯ ನಿಬಂಧನೆ, ವಿಜ್ಞಾನಗಳಿಗೆ ಸಂಬಂಧಪಟ್ಟ ಗ್ರಂಥಗಳು ಭಂಡಾರದಲ್ಲಿವೆ ಮತ್ತು ಈ ಪುಸ್ತಕಭಂಡಾರದ ಂದರೆ—

'ಗಂಧ ಕುಟಿ' ಎಂದು ಕರೆದಿರುವ ಕನ್ನಡ ಗ್ರಂಥಶಾಖೆ (ರೆಫರೆನ್ಸ್ ಸೆಕ್‌ಷನ್). ಇಲ್ಲಿ ದ, ಮುಖ್ಯವಾದ, ಹಳಗನ್ನಡ ಕಾವ್ಯ, ಅಲಂಕಾರ ಗ್ರಂಥಗಳೂ, ಶಾಸನ ಸಂಪುಟ ಅವುಗಳನ್ನು ಕುರಿತ ಸಂಕ್ಷೇಪ ವರದಿಗಳೂ ವು ಪ್ರಾಚೀನ ವಿರಳ ಗ್ರಂಥಗಳನ್ನು ಸಾಲದ ರ ವಿನಾಯಿಸಿ ಕಾಪಾಡಿದೆ.

ಕೆಳಗೆ ಹೇಳಿರುವ ಕನ್ನಡ–ಇಂಗ್ಲಿಷ್ ಭಾಷಾ ಂದಿನ ಸಂಚಿಕೆಗಳ ಸಂಪುಟಗಳು ಇಲ್ಲಿವೆ.

ದ 1898ರ ವರೆಗೆ ಪ್ರಕಟವಾಗುತ್ತಿದ್ದ ಬೋಧಿನಿ' ಮತ್ತು 'ಕರ್ನಾಟಕ ಪ್ರಕಾಶಿಕೆ'.

ದ 1938ರ ವರೆಗಿನ 'ವೃತ್ತಾಂತ ಪತ್ರಿಕೆ'.

ದ ಪ್ರಕಟವಾದ ಮದರಾಸಿನ 'ಹಿಂದೂ'

ದ ಪ್ರಕಟವಾದ 'ಪ್ರಜಾವಾಣಿ'.

ಕರ್ನಾಟಕ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ರಂಗಭೂಮಿ, ಜಯಕರ್ನಾಟಕ, ಜೀವನ ಸಂಪುಟಗಳು, ಮಾಡರ್ನ್ ರೆವ್ಯೂ, ಇಂಡಿ ವ್ಯೂ, ತ್ರಿವೇಣಿ (ಇಂಗ್ಲಿಷ್), ಮಿಥಿಕ್ ಪತ್ರಿಕೆ, ಹಾರ್ವರ್ಡ್ ಲಾ ರೆವ್ಯೂ, ಪಾರ್ಲಿ ಫೇರ್ಸ್ ಪತ್ರಿಕೆಗಳ ಸಂಪುಟಗಳು.

3. 1876ರಿಂದ ಪ್ರಕಟವಾದ ಮೈಸೂರು ರಾಜ್ಯ ಸರಕಾರದ ಆಡಳಿತ ವರದಿಗಳು.

4. ಇಂಡಿಯಾ ಸರಕಾರದ ವಿವಿಧ ಮಂತ್ರಿ ಖಾತೆಗಳ ವರದಿಗಳು.

5. ಲೋಕಸಭೆ ರಾಜ್ಯಸಭೆ ಮೈಸೂರು ಶಾಸನ ಸಭೆಗಳ ವರದಿಗಳು.

6. ರಾಜ್ಯ ನಿಬಂಧನೆ, ಹಣಕಾಸು, ವ್ಯಾಪಾರ ಕೃಷಿ ಮೊದಲಾದುವಕ್ಕೆ ಸಂಬಂಧಪಟ್ಟ ವರದಿಗಳು.

7. ಮೈಸೂರು ರಾಜ್ಯದ ಗೆಜೆಟ್.

8. ಅಂತರ ರಾಷ್ಟ್ರೀಯ ಕಾನೂನು (ಇಂಟರ್ ನ್ಯಾಷನಲ್ ಲಾ).

9. ತಾಳೆಯೋಲೆಯ ಪುಸ್ತಕಗಳು.

ಪುಸ್ತಕಗಳ ಸೂಚಿ (ಕ್ಯಾಟಲಾಗ್) ತಯಾರಾಗುತ್ತಿದೆ.

ಸಂಸ್ಥೆಗೆ ಸದಸ್ಯರಾಗಬಹುದು. ಎರಡು ಬಗೆಯ ಸದಸ್ಯತ್ವಗಳಿವೆ.

ಗೋಖಲೆ ಸಂಸ್ಥೆಯ ಆಜೀವ ಸದಸ್ಯತ್ವದ ಚಂದಾ ರೂ. 200–00

ಗೋಖಲೆ ಸಂಸ್ಥೆಯ ವಾರ್ಷಿಕ ಸದಸ್ಯತ್ವದ ಚಂದಾ ರೂ. 6–00

ವ್ಯಾಸಂಗ ಗೋಷ್ಠಿಯ ಆಜೀವ ಸದಸ್ಯತ್ವದ ಚಂದಾ ರೂ. 50–00

ವ್ಯಾಸಂಗ ಗೋಷ್ಠಿಯ ವಾರ್ಷಿಕ ಸದಸ್ಯತ್ವದ ಚಂದಾ ರೂ. 3–00

ಸದಸ್ಯರು 4 ರೂ. ಗಳಿಗೊಂದು ಪುಸ್ತಕವನ್ನು ಎರವಲು ಪಡೆಯಬಹುದು—ಹದಿನೈದು ದಿನಗಳ ಅವಧಿಯ ವರೆಗೆ.

ನಮ್ಮ ಅನುಭವದಲ್ಲಿ ವಾಚಕರಿಗೆ ಕಥೆ ಕಾದಂಬರಿಗಳ ಮೇಲೆ ಇರುವಷ್ಟು ಒಲವು ಶಾಸ್ತ್ರಗ್ರಂಥಗಳಲ್ಲಿ ಕಾಣ ಬರುತ್ತಿಲ್ಲ. ನಮ್ಮ ಜನಜೀವನ ಮೇಲ್ಮಟ್ಟಕ್ಕೆ ಬರ ಬೇಕಾದರೆ ಜನದಲ್ಲಿ ಗಂಭೀರ ವಿಷಯಗಳಲ್ಲಿ ಕುತೂ ಹಲವೂ ಸಂಗತಿಗಳ ಪೂರ್ವಾಪರ ವಿಮರ್ಶೆಯ ಅಭ್ಯಾಸವೂ ಬೆಳೆಯಬೇಕು. ಕಾಲಕ್ರಮದಲ್ಲಿ ಜನದ ಬುದ್ಧಿವೃತ್ತಿ ಆಳವೂ ಗಹನವೂ ಆದ ವಿಚಾರಗಳ ಕಡೆಗೆ ಹರಿದೀತೆಂದೂ

ಶಾಸ್ತ್ರಸಾಹಿತ್ಯ ಗ್ರಂಥಗಳ ವಿಷಯದಲ್ಲಿ ಅವರ ಕುತೂಹಲ ಹೆಚ್ಚೀತೆಂದೂ ಈ ಸಂಸ್ಥೆ ನಂಬಿಕೊಂಡಿದೆ.

ಮಹಾಜನರಲ್ಲಿ ಇನ್ನೊಂದು ಪ್ರಾರ್ಥನೆ. ಬಹು ಕಾಲದ ಹಿಂದೆ ಪ್ರಕಟವಾದ ಉಪಯುಕ್ತ ಗ್ರಂಥಗಳು ನಮಗೆ ಇನ್ನೂ ದೊರೆಯದೆ ಇವೆ. ಹಳೆಯ ಪತ್ರಿಕೆಗಳು, ಹಳೆಯ ಪುಸ್ತಕಗಳು, ತಾಳೆಗರಿಯ ಪುಸ್ತಕಗಳು ಯಾರಲ್ಲಿ ಯಾವುವಿದ್ದರೂ ಅವನ್ನು ನಮ್ಮ ಗ್ರಂಥಭಂಡಾರಕ್ಕಾಗಿ ಕೃತಜ್ಞತೆಯಿಂದ ತೆಗೆದುಕೊಳ್ಳುತ್ತೇವೆ. ಅಂಥ ಗ್ರಂಥ ಪತ್ರಿಕೆಗಳು ಯಾರಲ್ಲಿವೆಯೋ ಅವರು ಆ ಸಂಗತಿಯನ್ನಾ ದರೂ ನಮಗೆ ತಿಳಿಯಪಡಿಸಿದಲ್ಲಿ ನಾವು ಕೃತಜ್ಞ ರಾಗಿರುವೆವು.

ನಿರೂಪಿಸಿದ ವಿಷಯದಿಂದಷ್ಟೇ ಅಲ್ಲ, ನಿರೂಪಿಸುವ ರೀತಿಯಿಂದಲೂ ಓದುಗರಿಗೆ ಸಂತೋಷ ನೀಡಬಲ್ಲುದೇ ನಿಜವಾದ ಸಾಹಿತ್ಯ.

—ಸ್ಟಾಪ್ ಫೋರ್ಡ್ ಎ. ಬ್ರೂಕ್

ಉದಾರಿಯಾಗುವುದು ದೈವಕೃಪೆ. ಆದರೆ ಓದು, ಬರಹ ಸಹಜವಾಗಿ ಬರುತ್ತದೆ.

—ಷೇಕ್ಸ್‌ಪಿಯರ್

ವಿಮರ್ಶಕರು ಯಾರೆಂದು ನಿಮಗೆ ಗೊತ್ತೆ? ಕಲೆ, ಸಾಹಿತ್ಯಗಳಲ್ಲಿ ವಿಫಲರಾದವರು.

—ಬೆಂಜಮಿನ್ ಡಿಸ್ರೇಲ್

ವಿಮರ್ಶಕನೆಂದರೆ ಓದಲು ಕಲಿಸುವ ಹೆಳವ.

—ಚಾನಿಂಗ್ ಪೊಲಾಕ್

ಎಲ್ಲ ಪುಸ್ತಕಗಳನ್ನೂ ಎರಡು ಪಂಗಡಗಳಾಗಿ ವಿಭಾಗಿಸಬಹುದು ; ಅಂದಂದಿನ ಪುಸ್ತಕಗಳು ಮತ್ತು ಸಾರ್ವಕಾಲಿಕ ಪುಸ್ತಕಗಳು.

—ರಸ್ಕಿನ್

ಹಳೆಯ ಕೋಟು ಧರಿಸಿ ; ಹೊಸ ಪುಸ್ತಕ ಕೊಳ್ಳಿ.

—ಆಸ್ಟಿನ್ ಫೆಲ್ಪ್ಸ್

ರಾಜ್ಯದ ವಿಶ್ವವಿದ್ಯಾನಿಲಯಗಳು

ಪ್ರಕಟಣೆಗಳು

ಅಧ್ಯಯನ ಕೇಂದ್ರಗಳು

ಪುಸ್ತಕ ಭಂಡಾರಗಳು

ಉನ್ನತ ಶಿಕ್ಷಣದ ಪ್ರಸಾರ ವಿಶ್ವವಿದ್ಯಾನಿಲಯಗಳ ಗುರಿ.
ಈ ಶಿಕ್ಷಣ ಕೇವಲ ವಿದ್ಯಾರ್ಥಿಗಳಿಗೆ ಸೀಮಿತವಾದದ್ದಲ್ಲ;
ವಿಶ್ವವಿದ್ಯಾನಿಲಯದಲ್ಲಿ ಸಂಗ್ರಹವಾಗುವ ಜ್ಞಾನ ದೇಶದ
ನಾಡಿನಾಡಿಯಲ್ಲೆಲ್ಲ ಪ್ರವಹಿಸುವಂತಾಗಬೇಕು. ಆಗ ಮಾತ್ರ
ವಿಶ್ವವಿದ್ಯಾಲಯದ ಅಸ್ತಿತ್ವ ಸಾರ್ಥಕವಾಗುತ್ತದೆ.

—ದೇಜಗೌ

ಶಿಕ್ಷಣ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯಗಳ ಕಾರ್ಯ ಅತಿ ಮಹತ್ವದ್ದು.
ಜ್ಞಾನದಾನ ಮತ್ತು ಪ್ರಸಾರ, ಸಾಹಿತ್ಯ ಸಂಸ್ಕೃತಿಯ ಪೋಷಣೆ, ಅತ್ಯುತ್ತಮ
ಶಿಕ್ಷಣ-ತರಬೇತಿ ಪಡೆದ ಯುವಜನ ನಿರ್ಮಾಣ, ಜೀವನದ ನೆಮ್ಮದಿಗಾಗಿ
ವಿವಿಧ ರಂಗಗಳಲ್ಲಿ ಕಾರ್ಯವೆಸಗಲು ಯೋಗ್ಯ ನಾಯಕರನ್ನು ರೂಪಿಸುವ
ಹೊಣೆ-ಒಟ್ಟಾರೆ ವೈಯಕ್ತಿಕ ಬಾಳನ್ನು ಸುಖಮಯವಾಗಿಸುವುದು
ವಿಶ್ವವಿದ್ಯಾಲಯಗಳ ಪವಿತ್ರ ಕರ್ತವ್ಯ.

—ಟಿ. ಕೆ. ತುಕೋಳ

…ಳೂರು ವಿಶ್ವವಿದ್ಯಾಲಯದ …ಕಭಾಗ್ಯ

… ಸಿ. ಶಿವಪ್ಪ

… ಪುಸ್ತಕ ಪ್ರಕಾಶನ ಕ್ಷೇತ್ರದಲ್ಲಿ ರಾಜ್ಯದ ವಿಶ್ವ …ನಿಲಯಗಳ ಪಾತ್ರ ಸಕ್ರಿಯ ಹಾಗೂ ಗಣ …ನ್ನಬಹುದು. ೧೯೩೧ರಲ್ಲಿ ಮೈಸೂರು ವಿಶ್ವ …ಲಯ ಕನ್ನಡದಲ್ಲಿ ಕೃತಿ ರಚನೆ–ಪ್ರಕಟಣ …ವನ್ನು ಪ್ರಾರಂಭಿಸಿತು. ಈ ಸತ್ಸಂಪ್ರದಾಯ … ಕರ್ನಾಟಕ ವಿಶ್ವವಿದ್ಯಾನಿಲಯ ೧೯೫೭ರಲ್ಲಿ …ಿತು. ಈ ಅವಧಿಯಲ್ಲಿ ಇವೆರಡು ವಿಶ್ವವಿದ್ಯಾ …ಳು ಕ್ರಮಶಃ ಸುಮಾರು ೭೫೦ ಮತ್ತು ೩೫೦ …ಳನ್ನು ಹೊರತಂದು ಕನ್ನಡಿಗರ ಅಭಿಮಾನ …ಗಳಿಗೆ ಪಾತ್ರವಾಗಿವೆ. ಕೃಷಿ ವಿಶ್ವವಿದ್ಯಾನಿಲಯ …ಹ ಈಗ ಪುಸ್ತಕಗಳು ಪ್ರಕಟವಾಗತೊಡಗಿವೆ.

…ಳೂರು ವಿಶ್ವವಿದ್ಯಾಲಯದಲ್ಲಿ ಪ್ರಕಟಣ ಕಾರ್ಯ …ವಾದದ್ದು ೧೯೬೮ರಲ್ಲಿ. ಈ ನಾಲ್ಕು ವರ್ಷ …ವಿಶ್ವವಿದ್ಯಾಲಯದ ಪ್ರಕಟಣ ಮತ್ತು ಪ್ರಚಾ- …ಾಸ ವಿಭಾಗ ಒಟ್ಟು ೧೦೦ ಪುಸ್ತಕಗಳನ್ನು (ಆಗಸ್ಟ್ ೭೨ರಲ್ಲಿ ಬೆಳಕು ಕಾಣಲಿರುವ ಹೊತ್ತಿಗೆಗಳೂ ಸೇರಿ) ಪ್ರಕಟಿಸಿದೆ; ಇನ್ನು ೧೫ ಪುಸ್ತಕಗಳು ಅಚ್ಚಿನಲ್ಲಿವೆ. ವಿಶ್ವವಿದ್ಯಾಲಯವು ವಿಸ್ತೃತ ಯೋಜನೆಯೊಂದನ್ನು ರೂಪಿಸಿಕೊಂಡು ಹೆಚ್ಚು ಕೃತಿಗಳನ್ನು ಹೊರತರುವ ದಿಸೆಯಲ್ಲಿ ಇದೀಗ ಮುನ್ನಡೆದಿದೆ.

ಉನ್ನತ ವ್ಯಾಸಂಗ ಮಟ್ಟದಲ್ಲಿ ಪ್ರಾದೇಶಿಕ ಭಾಷೆ ಸಹ ಶಿಕ್ಷಣ ಮಾಧ್ಯಮವಾಗುತ್ತಿರುವ ಈ ಪರ್ವಕಾಲದಲ್ಲಿ ಅಗತ್ಯವಾದ ಕನ್ನಡ ಪಠ್ಯಪುಸ್ತಕ ಮತ್ತು ಪೂರಕ ಗ್ರಂಥಗಳನ್ನು ರಚಿಸುವ, ಮುದ್ರಿಸುವ ಹೊಣೆ ಅಪಾರವಾದದ್ದು; ಗುರುತರವಾದದ್ದು. ಈ ದಿಕ್ಕಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ಈವರೆಗೆ ಪಿ. ಯು. ಸಿ. ಮತ್ತು ಪದವಿ ತರಗತಿಗಳಿಗಾಗಿ ವಿವಿಧ ವಿಷಯಗಳ ಮೇಲೆ ೫೦ ಪಠ್ಯ ಪುಸ್ತಕಗಳನ್ನು ಪ್ರಕಟಿಸಿದೆ. ಸುಮಾರು ನೂರು ಪುಸ್ತಕಗಳ ಬರವಣಿಗೆಯ ಕೆಲಸವನ್ನು ಬೋಧಕ–ಲೇಖಕರಿಗೆ ವಹಿಸಲಾಗಿದ್ದು, ಹಸ್ತಪ್ರತಿಗಳು ಸಿದ್ಧವಾಗುತ್ತಿವೆ. ಅನುಭವಿ ಅಧ್ಯಾಪಕರು, ಪರಿಣತ ಭಾಷಾತಜ್ಞರು, ಆಯಾ ವಿಷಯಗಳ ಸಂಪಾದಕ ಸಮಿತಿ ಮತ್ತು ಪಠ್ಯ ಪುಸ್ತಕ ಸಮಿತಿಯವರು – ಇವರೆಲ್ಲರ ಸಹಾಯ ಸಹಕಾರದಿಂದ ಸಾಧ್ಯವಾದಷ್ಟು ಸಂಪೂರ್ಣವೂ ನಿರ್ದುಷ್ಟವೂ ಆದ ಪಠ್ಯ-ಪಠ್ಯೇತರ ಪುಸ್ತಕಗಳು ಹೊರಬರುವುದು ಸಾಧ್ಯವಾಗಿದೆ.

ಉತ್ತಮ ಇಂಗ್ಲಿಷ್ ಪಠ್ಯಪುಸ್ತಕಗಳು ಹಾಗೂ ಆಧಾರಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿ, ಪ್ರಕಟಿಸುವ ಯೋಜನೆ ಆದಷ್ಟು ಶೀಘ್ರದಲ್ಲಿ ಕಾರ್ಯಗತವಾಗಲಿದೆ. ಎರಡು ವರ್ಷಗಳ ಪ್ರೀಯೂನಿವರ್ಸಿಟಿ ಶಿಕ್ಷಣ ವ್ಯವಸ್ಥೆ ಜಾರಿಗೆ ಬಂದುದರ ಫಲವಾಗಿ, ಅದಕ್ಕನುಗುಣವಾದ ಮೂರು ವರ್ಷಗಳ ಪದವಿ ತರಗತಿಗಳ ಪೂರೈಕೆಗಾಗಿ ಪಠ್ಯಪುಸ್ತಕಗಳನ್ನು ಯೋಜಿಸಿ, ರಚಿಸಿ, ಪ್ರಕಟಿಸುವುದು ಈಗ ಅನಿವಾರ್ಯದ ಕಾರ್ಯಗಳಲ್ಲೊಂದು. ಭಾರತ ಸರಕಾರದ ಆರ್ಥಿಕ ನೆರವಿನಿಂದ, ಸಾಕಷ್ಟು ಸಿಬ್ಬಂದಿ ಸೌಕರ್ಯ ದೊರೆತನಂತರ, ಕನ್ನಡ ಪಠ್ಯಪುಸ್ತಕ ರಚನೆ-ಪ್ರಕಾಶನ ಇನ್ನಷ್ಟು ತೀವ್ರಗತಿಯಿಂದ ಸಾಗಲಿದೆ.

ಕನ್ನಡ ಮಾಧ್ಯಮದ ಆವಶ್ಯಕತೆಯನ್ನು ಸರಿದೂಗಿಸಲು ಪ್ರಕಟಿಸುವ ಪಠ್ಯಪುಸ್ತಕಗಳ ಜೊತೆಗೆ, ವಿಶ್ವವಿದ್ಯಾಲಯವು ಹಲವಾರು ಮಹತ್ವದ ಕನ್ನಡ ಕೃತಿಗಳನ್ನು ಪ್ರಕಟಿಸತೊಡಗಿದೆ. ಪ್ರಾಚೀನ ಕಾವ್ಯ-ಗ್ರಂಥಗಳ ಪುನರ್ಮುದ್ರಣ ಯೋಜನೆಯ ಅಂಗವಾಗಿ ಪೂರ್ವ

ಪುರಾಣ, ಉತ್ತರಪುರಾಣ, ಶಾಸನ ಪದ್ಯಮಂಜರಿ ಮುಂತಾದವು ಮತ್ತೆ ಬೆಳಕು ಕಾಣಲಿವೆ. ಇಂಗ್ಲಿಷ್ ಸಾಹಿತ್ಯ ಚರಿತ್ರೆ, ಕರ್ನಾಟಕ ಸಂಗೀತದ ಇತಿಹಾಸ, ವೈದ್ಯಕ ಪದಗಳ ಹುಟ್ಟು-ರಚನೆ, ಮೂರ್ತಿಶಿಲ್ಪ ಮತ್ತಿ ತರ ವಿಷಯಗಳಿಗೆ ಸಂಬಂಧಿಸಿದ ವಿದ್ವತ್ಪೂರ್ಣ ಕೃತಿ ಗಳನ್ನು ವಿಶ್ವವಿದ್ಯಾಲಯವು ಪ್ರಕಟಿಸಲಿದೆ. ಅಂತೆಯೇ ಭಾರತೀಯ ಇತಿಹಾಸ, ಧರ್ಮ, ದರ್ಶನವನ್ನು ಕುರಿತ ಇಪ್ಪತ್ತು ಪುಸ್ತಕಗಳ ಅನುವಾದದ ಜೊತೆಗೆ, ಪ್ಯಾರ ಡೈಸ್ ಲಾಸ್ಟ್, ಡಿವೈನ್ ಕಾಮೆಡಿ, ವರ್ಜಿಲ್, ಮಣಿ ಮೇಖಲೈ, ಶಿಲಪ್ಪದಿಕ್ಕಾರಂ, ಪೆರಿಯ ಪುರಾಣಂ ಮುಂತಾದ ಕಾವ್ಯಗಳ ಅನುವಾದ ಕಾರ್ಯವನ್ನೂ ವಿಶ್ವ ವಿದ್ಯಾಲಯ ಕೈಗೆತ್ತಿಕೊಂಡಿದೆ.

ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳು ಕೈಗೊಳ್ಳುವ ವೈಯಕ್ತಿಕ-ಸಾಮೂಹಿಕ ಸಂಶೋಧನಾ ತ್ಮಕ ವ್ಯವಸಾಯ ಮತ್ತು ಬೌದ್ಧಿಕ ಸಾಧನೆಗೆ ಕೃತಿ ರೂಪದಲ್ಲಿ ಅಭಿವ್ಯಕ್ತಿ ನೀಡುವುದರತ್ತ ವಿಶ್ವವಿದ್ಯಾಲಯ ಕಳೆದ ವರ್ಷದಿಂದ ಗಮನ ಹರಿಸಿದೆ. ಈ ಸರಣಿಯಲ್ಲಿ ಕನ್ನಡ ಅಧ್ಯಯನ ಕೇಂದ್ರದ ಮಾಲೆಯಲ್ಲಿ ಎಂಟು ಕೃತಿಗಳು ಈಗಾಗಲೇ ಹೊರಬಂದಿವೆ. ಹೀಗೆಯೇ ಇನ್ನಿತರ ವಿಭಾಗಗಳೂ ಪುಸ್ತಕಗಳನ್ನು ಸಿದ್ಧಪಡಿಸುವ ನಿರೀಕ್ಷೆಯಿದೆ.

'ಸಾಧನೆ' ವಿಶ್ವವಿದ್ಯಾಲಯದ ಕನ್ನಡ ತ್ರೈಮಾಸಿಕ ಪತ್ರಿಕೆ. ಸೃಜನಾತ್ಮಕ ಹಾಗೂ ಸಂಶೋಧನಾತ್ಮಕ ಬರಹಗಳಿಗೆ ಮೀಸಲಾದ, ಸಾಹಿತ್ಯಕ-ಮಾನವಿಕ-ವೈಜ್ಞಾನಿಕ ವಿಷಯಗಳನ್ನೊಳಗೊಂಡ ಈ ಪತ್ರಿಕೆ ಈ ವರ್ಷದ ಆರಂಭದಿಂದ ಪ್ರಕಟವಾಗುತ್ತಿದೆ. ಕಾಲಕ್ರಮ ದಲ್ಲಿ ಸಾಹಿತ್ಯ, ಮಾನವಿಕ ಶಾಸ್ತ್ರ ಹಾಗೂ ವಿಜ್ಞಾನಕ್ಕೇ ಸೀಮಿತವಾದ ಪ್ರತ್ಯೇಕ ನಿಯತಕಾಲಿಕಗಳು ರೂಪು ಗೊಳ್ಳಲಿವೆ. ಸಾಮಾಜಿಕವಿಜ್ಞಾನ ಮತ್ತು ವಿಜ್ಞಾನ ವನ್ನು ಕುರಿತ ಸಂಶೋಧನಾತ್ಮಕ ಇಂಗ್ಲಿಷ್ ನಿಯತ ಕಾಲಿಕಗಳನ್ನು ಕ್ರಮವಾಗಿ ಹೊರತರುವ ಯೋಜನೆ ಯನ್ನೂ ವಿಶ್ವವಿದ್ಯಾಲಯವು ಹಮ್ಮಿಕೊಂಡಿದೆ.

ಪಾಠ ಪ್ರವಚನದಷ್ಟೇ, 'ವಿಜ್ಞಾನ ಸಹಿತವಾದ ಜ್ಞಾನ'ದ ಪ್ರಸಾರವೂ ಮುಖ್ಯ ಎನ್ನುವ ದೃಷ್ಟಿಯಿಂದ ವಿಶ್ವವಿದ್ಯಾಲಯವು ಜನತಾ ಶಿಕ್ಷಣದತ್ತ ದೃಷ್ಟಿ ಹರಿಸಿದೆ. ಬೆಂಗಳೂರು ನಗರದ ಸಂಘ ಸಂಸ್ಥೆಗಳಲ್ಲಿ, ಶಾ ಕಾಲೇಜುಗಳಲ್ಲಿ, ಕಾರ್ಖಾನೆ ಕಾರ್ಮಿಕಕೂಟಗ ಮತ್ತು ಸಮೀಪದ ಹಳ್ಳಿಗಳಲ್ಲಿ ತಜ್ಞರಿಂದ ಪ್ರ ತಿಂಗಳೂ ಅನೇಕ ಪ್ರಚಾರೋಪನ್ಯಾಸಗಳನ್ನು ಏರ್ಪ ಸುವ ವ್ಯವಸ್ಥೆಯಿದೆ. ಇಂತಹ ಜನಪ್ರಿಯ ಉಪನ್ಯಾ ಗಳ ಸಂಗ್ರಹವನ್ನು ಕಿರುಹೊತ್ತಿಗೆಗಳ ರೂಪದಲ್ಲಿ ನಂ ಪ್ರಕಟಿಸಲಾಗುತ್ತದೆ. ಆಧುನಿಕ ಜ್ಞಾನ ಜನಸಾಮಾ ರಿಗೆ ಸುಲಭ ಬೆಲೆಯಲ್ಲಿ ಸಿಗಲೆಂಬ ದೃಷ್ಟಿ ಈ ಕಿ ಹೊತ್ತಿಗೆಗಳ ಪ್ರಕಾಶನದ ಗುರಿಯಾಗಿದೆ.

ವಿಶ್ವವಿದ್ಯಾಲಯದ ಆಶ್ರಯದಲ್ಲಿ ಜರುಗಿದ ವಿಶೇ ಉಪನ್ಯಾಸಗಳೂ ಪುಸ್ತಕಾಕಾರದಲ್ಲಿ ಅಚ್ಚಾಗುತ್ತ ಡಾ॥ ಕೆ. ಕೃಷ್ಣಮೂರ್ತಿ, ಡಾ॥ ಕೆ. ವಿ. ರಮೇ ಡಾ॥ ಎಸ್. ಎಲ್. ಭಾಟಿಯಾ, ಪ್ರೊ॥ ಎಸ್. ರಾಮಚಂದ್ರರಾವ್, ಪ್ರೊ॥ ಎ. ಟಿ. ಮಾರ್ಕೋಸ ಮತ್ತು ಪ್ರೊ॥ ಆರ್. ಎನ್. ದಂಡೇಕರ್ ಮುಂತಾದ ವಿಶೇಷೋಪನ್ಯಾಸಗಳ ಆಧಾರಿತ ಕೃತಿಗಳನ್ನು ಇ ಹೆಸರಿಸಬಹುದು. ಶ್ರೀ ನಿಜಲಿಂಗಪ್ಪ ದತ್ತಿ, ಮಾ ರಾಮಸ್ವಾಮಿ ತಿರುಮಲಮ್ಮ ದತ್ತಿ ಹಾಗೂ IAEC ದ ಗಳ ಅಂಗವಾಗಿ ಪ್ರತಿ ವರ್ಷ ನಡೆಯುವ ಉಪನ್ಯಾ ಗಳನ್ನೂ ಪುಸ್ತಕ ರೂಪದಲ್ಲಿ ಹೊರತರಲಾಗಿದೆ. ವಿಚಾ ಪೂರ್ಣ ದತ್ತಿ ಉಪನ್ಯಾಸ-ಕೃತಿಗಳ ಪೈಕಿ ಪ್ರೊ ಸುನೀತಿ ಕುಮಾರ ಚಟರ್ಜಿ, ಡಾ॥ ಎಸ್. ಭಗವಂ ಶ್ರೀ ಕೋಕ ಸುಬ್ಬರಾವ್, ಡಾ॥ ಪಿ. ಬಿ. ಗಜೇಂ ಗಡ್ಕರ್, ಡಾ॥ ಡಿ. ವಿ. ಗುಂಡಪ್ಪ ಮತ್ತು ಪ್ರೊ॥ ಸೀತಾರಾಮಯ್ಯ ಅವರ ಪುಸ್ತಕಗಳು ಮುಖ್ಯವಾದವು.

ಪುಸ್ತಕಗಳ ಮುದ್ರಣ, ಅಂದಚೆಂದ ಮತ್ತು ವಿನ್ಯಾ ದಲ್ಲಿ ವಿಶ್ವವಿದ್ಯಾಲಯವು ವಿಶೇಷ ಆಸಕ್ತಿ, ಆಸ್ಥೆ ವಹಿ ತ್ತಿದೆ. ಸಂಖ್ಯೆ-ಗಾತ್ರದೊಡನೆ ಗುಣವನ್ನು ಮೈದು ಕೊಂಡು ವಿಶ್ವವಿದ್ಯಾಲಯದ ಪ್ರಕಟಣೆಗಳು ಸ ಕಾಲೀನ ವೈಚಾರಿಕ ಪ್ರಗತಿಯನ್ನು ಪ್ರತಿಫಲಿಸುತ್ತಿ ವುದು ಸಂತಸದ ಸಂಗತಿಯಾಗಿದೆ. ಕನ್ನಡ ಸಾರಸ್ವ ಲೋಕದ ಸಿರಿವಂತಿಕೆಯನ್ನು ರೂಢಿಸುವ ದಿಸೆಯ ಬೆಂಗಳೂರು ವಿಶ್ವವಿದ್ಯಾಲಯವು ನಿರೀಕ್ಷಿತ ಸಫ ಪಡೆವ ಹಾದಿಯಲ್ಲಿ ನಡೆದಿದೆ; ಮುನ್ನಡೆವ ಭರವ ಸಂಕಲ್ಪ ಹೊತ್ತು ಕಾರ್ಯಪ್ರವೃತ್ತವಾಗಿದೆ.

ರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ
ರ್ಯವಿಧಾನ: ಪ್ರಕಟನೆಗಳು

ಚನ್ನವೀರ ಕಣವಿ

ರ್ಥಿಗಳಿಗೆ ಉಚ್ಚ ಶಿಕ್ಷಣ ನೀಡುವುದರ ಜೊತೆಗೆ ಪ್ರದೇಶದ ಜನತೆಯ ಆವಶ್ಯಕತೆಗಳನ್ನು ಪೂರೈ ಹಾಗೂ ಅದರ ಸಂಸ್ಕೃತಿಯ ಸಂವರ್ಧನೆಯಲ್ಲಿ ಗೊಳ್ಳುವದು ಇಂದಿನ ಪ್ರಾದೇಶಿಕ ವಿಶ್ವವಿದ್ಯಾ ಗಳ ಗುರಿಯಾಗಿದೆ. ಕರ್ನಾಟಕ ವಿಶ್ವವಿದ್ಯಾಲಯ ದಲ್ಲಿ ಬಂದ ಮೂರು ವರ್ಷಗಳಲ್ಲಿಯೇ (೧೯೫೨) ಜನತಾ ಶಿಕ್ಷಣ ಯೋಜನೆಯ ಹೊಳಹನ್ನು ಹಾಕಿ ತು. ಇದಕ್ಕಾಗಿ ವ್ಯಾಸಂಗ ವಿಸ್ತರಣ ಹಾಗೂ ನ ಸಮಿತಿಗಳನ್ನು ರಚಿಸಿಕೊಂಡು ಅವುಗಳ ದರ್ಶನದಲ್ಲಿ ಕಾರ್ಯಪ್ರವೃತ್ತವಾಯಿತು.

ಗ್ರಾಮಾಂತರ ಪ್ರದೇಶಗಳಲ್ಲಿ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಿ, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರಿಂದ ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ಶಾಸ್ತ್ರ ಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯಕ್ಕೆ ತಿಳಿಯುವ ಶೈಲಿಯಲ್ಲಿ ಉಪನ್ಯಾಸಗಳನ್ನು ಕೊಡಿಸುವದು.

ಆ ಉಪನ್ಯಾಸಗಳನ್ನು ಚಿಕ್ಕ ಪುಸ್ತಕ ರೂಪದಲ್ಲಿ ಪ್ರಕಟಿಸಿ ಸುಲಭ ಬೆಲೆಯಲ್ಲಿ ಜನತೆಗೆ ಒದಗಿಸುವದು.

೩. ಮಹತ್ವದ ಪ್ರಾಚೀನ ಕನ್ನಡ ಗ್ರಂಥಗಳನ್ನು ಸಮರ್ಪಕವಾದ ರೀತಿಯಲ್ಲಿ ಸಂಪಾದಿಸಿ ಪ್ರಕಟಿಸುವದು.

೪. ಸಂಶೋಧನಾತ್ಮಕ ಗ್ರಂಥಗಳ ಪ್ರಕಟನೆಗೆ ಗ್ರಂಥಕಾರರಿಗೆ ಧನಸಹಾಯ ಮಾಡುವದು.

ಇತ್ಯಾದಿ ಯೋಜನೆಗಳನ್ನು ಕೂಡಲೆ ಕಾರ್ಯರೂಪಕ್ಕೆ ತರಲಾಯಿತು. ಮುಂದೆ ೧೯೫೭ರಲ್ಲಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ನೆರವಿನಿಂದ ವ್ಯಾಸಂಗ ವಿಸ್ತರಣ ಮತ್ತು ಪ್ರಕಟಣ ಶಾಖೆಯು ನಿರ್ದೇಶಕ ಹಾಗೂ ಸಹಾಯಕ ನಿರ್ದೇಶಕರ ಹುದ್ದೆಯೊಂದಿಗೆ ಪ್ರತ್ಯೇಕ ವಿಭಾಗವಾಗಿ ರೂಪುಗೊಂಡಿತಲ್ಲದೆ ಸಂಶೋಧನ ಪತ್ರಿಕೆಗಳ ಪ್ರಕಟನೆ, ಬೇರೆ ಬೇರೆ ವಿಷಯದ ಗ್ರಂಥಮಾಲೆಗಳು, ವಿಶೇಷೋಪನ್ಯಾಸ ಶಿಬಿರಗಳು, ಸಂಚಾರಿ ವಾಚನಾಲಯ ಮೊದಲಾದ ಹಲವಾರು ಹೊಸ ಯೋಜನೆಗಳೊಂದಿಗೆ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತಾರಗೊಳಿಸಿಕೊಂಡಿತು. ೧೯೫೮ರಲ್ಲಿ ಗುಲ್ಬರ್ಗಾ, ರಾಯಚೂರು, ಬೀದರ ಜಿಲ್ಲೆಗಳು ಹಾಗೂ ೧೯೬೭ರಲ್ಲಿ ಬಳ್ಳಾರಿ ಜಿಲ್ಲೆಯೂ ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರಕ್ಕೆ ಒಳಪಟ್ಟಂದಿ

ನಿಂದ ಆ ಜಿಲ್ಲೆಗಳಲ್ಲಿಯೂ ವ್ಯಾಸಂಗ ವಿಸ್ತರಣ ಯೋಜನೆಗಳನ್ನು ಪ್ರಾರಂಭಿಸಲಾಯಿತು.

ವ್ಯಾಸಂಗ ವಿಸ್ತರಣ ಯೋಜನೆಗಳು : ಕಾರ್ಯವಿಧಾನ

ವಿಶ್ವವಿದ್ಯಾಲಯದ ಜ್ಞಾನಭಂಡಾರವನ್ನು ಅಲ್ಲಿ ಕಲಿಯಲು ಬಂದ ವಿದ್ಯಾರ್ಥಿಗಳಿಗೆ ಮಾತ್ರ ಮೀಸಲಾಗಿಡದೆ ಅದರ ಅಲ್ಪಾಂಶವನ್ನಾದರೂ ಶ್ರೀಸಾಮಾನ್ಯನ ಮನೆ ಬಾಗಿಲಿಗೆ ಒಯ್ದು ಮುಟ್ಟಿಸುವ ಕಾರ್ಯ ಪ್ರತಿ ತಿಂಗಳು ಏರ್ಪಡಿಸುವ ಉಪನ್ಯಾಸ ಶಿಬಿರ ಹಾಗೂ ಉಪನ್ಯಾಸ ಗ್ರಂಥ ಮಾಲೆಯ ಮೂಲಕ ಮುನ್ನಡೆಯುತ್ತ ಬಂದಿದೆ. ಪ್ರತಿಯೊಂದು ಶಿಬಿರವೂ ಎರಡು ದಿನದ ಅವಧಿಯದಿದ್ದು ಪ್ರತಿ ದಿನ ಇಬ್ಬರು ವಿದ್ವಾಂಸರು ಬೇರೆ ಬೇರೆ ವಿಷಯಗಳ ಬಗೆಗೆ ಉಪನ್ಯಾಸವೀಯುತ್ತಾರೆ. ಅನಂತರ ಸಂದರ್ಭಾನುಸಾರ ಚರ್ಚೆ ನಡೆಯುವದುಂಟು. ಆಯಾ ಊರಿನ ಗ್ರಾಮ ಪಂಚಾಯತಿಯೋ, ಸಂಘಸಂಸ್ಥೆಗಳೋ ತಮ್ಮ ಊರುಗಳಲ್ಲಿ ಈ ಶಿಬಿರಗಳನ್ನು ನಡೆಸಲು ವಿಶ್ವವಿದ್ಯಾಲಯಕ್ಕೆ ಬಿನ್ನವಿಸಿಕೊಳ್ಳುತ್ತಾರೆ. ವ್ಯಾಸಂಗ ವಿಸ್ತರಣ ವಿಭಾಗದ ನಿರ್ದೇಶಕರು ಇಲ್ಲದೆ ಸಹಾಯಕ ನಿರ್ದೇಶಕರು ಆ ಸಂಘಸಂಸ್ಥೆಗಳ ಸಹಕಾರದೊಂದಿಗೆ ಅಲ್ಲಿ ಅವುಗಳ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾರೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರವಾದ ಎಂಟು ಜಿಲ್ಲೆಗಳಲ್ಲಿ ಇದುವರೆಗೆ ಮುನ್ನೂರಕ್ಕೂ ಮಿಕ್ಕಿ ಇಂಥ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗಿದ್ದು, ಒಂದು ಸಾವಿರಕ್ಕೂ ಮೇಲ್ಪಟ್ಟು ಪ್ರಾಧ್ಯಾಪಕರ ಇನ್ನಿತರು ವಿದ್ವಾಂಸರೂ ಇವುಗಳಲ್ಲಿ ಭಾಗವಹಿಸಿದ್ದಾರೆ.

ಈ ಯೋಜನೆ ಪ್ರಾರಂಭವಾದ ತರುಣದಲ್ಲಿಯೇ ಅದರ ಚಟುವಟಿಕೆಗಳನ್ನು ಗಮನಿಸಿ The Times of India ಪತ್ರಿಕೆ (೧೯–೨–೧೯೫೩) ಹೀಗೆ ಬರೆಯಿತು: "The Extra-mural Board of the University has jumped into activity in right earnest. Its series of extension lectures, organised in different places, are attracting vide attention and are serving to promote public interest and enthusiasm in the work of the University....Designed to develop contact between the public and the University, to spread essential knowledge on popular subjects among common peop and to develop corporate life amon lecturers themselves the scheme has servin the purpose admirably."

ಉಪನ್ಯಾಸ ಗ್ರಂಥಮಾಲೆ

ಈ ಮಾಲೆಯಲ್ಲಿ ೧೫೦ ಕಿರುಹೊತ್ತಿಗೆಗಳು ಪ್ರಕಟವಾಗಿದ್ದು ಇವುಗಳಲ್ಲಿ ಹಲವಾರು ಮೂರು-ನಾಲ್ಕು ಆವೃತ್ತಿಗಳನ್ನು ಪಡೆದಿವೆ. ಸಾಹಿತ್ಯ, ವಿಜ್ಞಾನ, ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಕೃಷಿ ವಿಜ್ಞಾನ, ಭಾಷಾಶಾಸ್ತ್ರ, ಭೂಗೋಳಶಾಸ್ತ್ರ, ಜಾನಪದ, ತತ್ವಶಾಸ್ತ್ರ, ಶಿಕ್ಷಣ, ಶಾಸನ ಸಾಹಿತ್ಯ—ಹೀಗೆ ಅನೇಕ ವಿಷಯಗಳನ್ನು ಕುರಿತ ಈ ಮಾಲೆಯು ಪುಸ್ತಕಗ ನಾಲ್ಕು ಲಕ್ಷಕ್ಕೂ ಮಿಕ್ಕಿ ಪ್ರತಿಗಳು ಮಾರಾಟವಾಗಿವೆ. ಈಗ್ಗೆ ಎರಡು ವರ್ಷಗಳ ಹಿಂದೆ ಈ ಮಾಲೆಯ ನೂರೊಂದನೆಯ ಪುಸ್ತಕ ಪ್ರಕಟವಾಗುವ ಸಂದರ್ಭದಲ್ಲಿ ಡಾ। ಹಾ. ಮಾ. ನಾಯಕರು ಹೀಗೆ ಬರೆದರು : ['ಕನ್ನಡ ಪ್ರಭ' ೨೭–೭–೧೯೭೦] "ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನಶಾಖೆ ಡಾ॥ ಪುಟ್ಟಪ್ಪನವರ ಕಲ್ಪನೆಯ ಪ್ರಸಾರಾಂಗದ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಿದೆ ಯೆಂಬುದನ್ನು ಉಪನ್ಯಾಸ ಮಾಲೆಯ ನೂರೊಂದು ಗ್ರಂಥಗಳು ದೃಢಪಡಿಸುತ್ತವೆ. ಈ ಗ್ರಂಥಗಳಿಂದ ಕನ್ನಡದ ಪಾರಿಭಾಷಿಕ ಅಭಿವ್ಯಕ್ತಿಗೆ ಶಕ್ತಿ ಕೂಡಿದೆ; ಸೊಗಸು ತುಂಬಿದೆ. ಕನ್ನಡದಲ್ಲಿ ಆಧುನಿಕಶಾಸ್ತ್ರ ವಿಷಯಗಳನ್ನು ಕುರಿತು ಬರೆಯಲು, ಆಡಲು ಅಳುಕುತ್ತಿದ್ದ ಅನೇಕರನ್ನು ಮಾಲೆ ಆಕರ್ಷಿಸಿದೆ. ಅವರಿಗೆ ಹೊಸ ಆಶೆ, ಭರವಸೆಗಳನ್ನು ನೀಡಿದೆ. ಕನ್ನಡದ ಕೆಲಸಕ್ಕೆ ಪ್ರೇರಣೆ, ಪ್ರೋತ್ಸಾಹಗಳನ್ನೊದಗಿಸಿದೆ."

ಸಮಗ್ರ ವಾಙ್ಮಯ ಪ್ರಸಾರೋಪನ್ಯಾಸ ಶಿಬಿರಗಳು ಹಾಗೂ ಗ್ರಂಥಮಾಲೆ

ಪೂರ್ಣ ವಿದ್ಯಾಪರಿಣತರಲ್ಲದಿದ್ದರೂ ವಿದ್ಯಾವ್ಯಾಸಂಗಿಗಳ ಸಂಖ್ಯೆ ನಮ್ಮ ನಾಡಿನಲ್ಲಿ ಸಾಕಷ್ಟು ಪ್ರಮಾಣದಲ್ಲಿದೆ. ಇಂಥವರ ಜ್ಞಾನಾರ್ಜನೆಗೆ ಸಹಾಯವಾಗುವಂತೆ ಯೋಜನೆಯೊಂದನ್ನು ರೂಪಿಸಿ ವಿಶೇಷ ವಾಙ್ಮಯ ಪ್ರಸಾರೋಪನ್ಯಾಸ ಶಿಬಿರಗಳನ್ನು ೧೯೬೬ರಿಂದ ನಡೆಸುತ್ತ ಬಂದಿದ್ದು ಈ ಶಿಬಿರಗಳಿಗೆ ದೊಡ್ಡ ಊರುಗಳನ್ನೇ ಆರಿಸಿ

ಲಾಗುತ್ತಿದೆ. ಪ್ರತಿಯೊಂದು ಶಿಬಿರವು ಮೂರು ಅವಧಿಯದಿದ್ದು ಆರು ಜನ ಉಪನ್ಯಾಸಕರು ಇದ ಾಗವಹಿಸುತ್ತಾರೆ. ಉಪನ್ಯಾಸಗಳನ್ನು ಆದಷ್ಟು ಿತವಾಗಿಯೆ ಅಚ್ಚುಗೊಳಿಸಿ ಸಭಿಕರಲ್ಲಿ ಹಂಚ ತ್ತದೆ. ಆಯಾ ವಿಷಯದ ಬಗೆಗಿನ ಚರ್ಚೆ ದಗಳಿಗೆ ಇಲ್ಲಿ ಹೆಚ್ಚಿನ ಅವಕಾಶವನ್ನು ಕಲ್ಪಿಸಿ ಲಾಗುತ್ತಿದೆ.

ತ್ತೀಚೆಗೆ ಹೊರನಾಡ ಕನ್ನಡಿಗರಿಗಾಗಿಯೂ ಇಂಥ ಶಿಬಿರಗಳನ್ನು ಏರ್ಪಡಿಸುವ ಯೋಜನೆಯನ್ನು ಂಡಿದ್ದು, ಸೊಲ್ಲಾಪುರದಲ್ಲಿ ಕಳೆದ ವರ್ಷ(೧೯೭೧) ರಾಮ ಸಾಹಿತ್ಯ ಸಮೀಕ್ಷೆ'ಯನ್ನು ಕುರಿತು ಆರು ್ಯಸಗಳನ್ನು ನಡೆಸಲಾಯಿತು. ಈ ಕಾರ್ಯಕ್ರಮ ಸ್ಥಳೀಯ ಮರಾಠಿಗರೂ ಸ್ವಾಗತಿಸಿದರಲ್ಲದೆ ಈ ್ಯಾಸ ಸಂಗ್ರಹವನ್ನು ಮರಾಠಿಯಲ್ಲೂ ಅನುವಾದಿಸಿ ಸಲು ವಿಶ್ವವಿದ್ಯಾನಿಲಯವನ್ನು ಬಿನ್ನವಿಸಿಕೊಂಡಿ ಆ ಕಾರ್ಯವೂ ಈಗ ನಡೆದಿದೆ. ಇದೇ ವರ್ಷ ಹಬ್ಬದ ಸಂದರ್ಭದಲ್ಲಿ ಆಂಧ್ರ ಪ್ರದೇ ಿದವಾನಿಯಲ್ಲಿ 'ಕರ್ನಾಟಕಾಂಧ್ರ ಸಾಹಿತ್ಯ ವ್ಯ'ವನ್ನು ಕುರಿತು ಉಪನ್ಯಾಸ ಮಾಲೆಯನ್ನು ಸಲಾಗಿದೆ

ಮಾಲೆಯಲ್ಲಿ ಈಗಾಗಲೆ ನಿಜಗುಣ ಶಿವಯೋಗಿ, ರನ್ನ, ಬಸವಣ್ಣ, ಸಿದ್ಧರಾಮ, ಸರ್ವಜ್ಞ, ೧–ಇವರ ಜೀವನ ಹಾಗೂ ಕೃತಿಗಳ ಬಗೆಗೂ, ವಿಮರ್ಶೆ, ಗಾಂಧೀ ತತ್ತ್ವವಿಶ್ಲೇಷಣೆ, ದಾಸ ದ ದ್ವಿತೀಯ ಘಟ್ಟ, ಮೊದಲಾದ ವಿಷಯ ಕುರಿತೂ ಗ್ರಂಥಗಳು ಪ್ರಕಟಗೊಂಡಿವೆ.

ೋಪನ್ಯಾಸಗಳು ಹಾಗೂ ಗ್ರಂಥಮಾಲೆ

ವಿದ್ಯಾಲಯದ ಕೇಂದ್ರ ಸ್ಥಳವಾದ ಧಾರವಾಡದಲ್ಲಿ ರ್ಷವೂ ಸುಪ್ರಸಿದ್ಧ ವಿದ್ವಾಂಸರಿಂದ ಕನ್ನಡ ,ಇಂಗ್ಲಿಷಿನಲ್ಲಿಯೂ ಉಪನ್ಯಾಸಗಳನ್ನು ಏರ್ಪಡಿ ತ್ತಿದೆ. ಈ ಗ್ರಂಥ ಮಾಲೆಯಲ್ಲಿ ಶ್ರೀಗಳಾದ ಕಾರಂತ, ಆದ್ಯ ರಂಗಾಚಾರ್ಯ, ಮುಗಳಿ, ಬಿ. ಶಿವಮೂರ್ತಿಶಾಸ್ತ್ರೀ ಮೊದಲಾದ ವರ ಉಪನ್ಯಾಸಗಳು ಗ್ರಂಥ ರೂಪದಲ್ಲಿ ಪ್ರಕಟ ಇದೇ ರೀತಿಯಲ್ಲಿ ಸ್ನಾತಕೋತ್ತರ ವಿಭಾಗಗಳು ಸುವ ಇಂಗ್ಲಿಷ್ ಉಪನ್ಯಾಸಗಳನ್ನು ಗ್ರಂಥರೂಪ ದಲ್ಲಿ ತರಲಾಗುತ್ತಿದೆ. ಈಗಾಗಲೆ ಆರ್. ಡಿ. ರಾನಡೆ, ಪಿ.ಬಿ. ಗಜೇಂದ್ರ ಗಡಕರ, ಬಿ. ಎ. ಸಾಲೆತೊರೆ, ಆರ್. ಡಿ. ಕರಮರಕರ, ಆರ್. ವಿ. ಬಿಡಪ್ ಮೊದಲಾದವರ ಉಪನ್ಯಾಸಗಳು ಪ್ರಕಟವಾಗಿವೆ.

ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದಲ್ಲಿ ನಡೆ ಸುವ ವಿಶೇಷೋಪನ್ಯಾಸಗಳನ್ನು Economics Series ನಲ್ಲಿ ಪ್ರಕಟಿಸಲಾಗುತ್ತಿದೆ. ಅರ್ಥಶಾಸ್ತ್ರದಲ್ಲಿ ಬಲ್ಲಿದರಾದ, ಎಂ. ಎಚ್. ಗೋಪಾಲ, ವ್ಹಿ.ಎಲ್. ಡಿಸೋಜಾ, ವ್ಹಿ. ಎನ್. ದಾಂಡೇಕರ, ಆರ್. ಬಾಲಕೃಷ್ಣ, ವ್ಹಿ. ಎಸ್. ವ್ಯಾಸ ಮೊದಲಾದವರ ಗ್ರಂಥಗಳು ಈ ಮಾಲೆಯಲ್ಲಿ ಹೊರಬಂದಿವೆ. ಇದಲ್ಲದೆ ಈ ವಿಭಾಗದ ಪ್ರಾಧ್ಯಾಪಕರ ಸಂಶೋಧನಾತ್ಮಕ ಗ್ರಂಥಗಳೂ ಇದರಲ್ಲಿ ಬಂದಿವೆ. ಡಾ|| ವೈದ್ಯನಾಥ ಸರಸ್ವತಿಯವರ ಉಪನ್ಯಾಸ ಗ್ರಂಥದೊಂದಿಗೆ ಮಾನವಶಾಸ್ತ್ರ ವಿಭಾಗದ ಗ್ರಂಥಮಾಲೆಯೊಂದನ್ನು ಇತ್ತೀಚೆಗೆ ಪ್ರಾರಂಭಿಸಲಾಗಿದೆ.

ಸಂಶೋಧನ ಗ್ರಂಥಮಾಲೆ

ಡಾಕ್ಟರೇಟ್ ಪ್ರಬಂಧಗಳನ್ನೂ ಇನ್ನುಳಿದ ಮಹತ್ವದ ಸಂಶೋಧನಾತ್ಮಕ ಕೃತಿಗಳನ್ನೂ ಈ ಮಾಲೆ ಒಳಗೊಂಡಿದೆ. ಸಾಹಿತ್ಯ ಭಾಷಾ ವಿಜ್ಞಾನ, ಭೂಗರ್ಭಶಾಸ್ತ್ರ, ತತ್ವಜ್ಞಾನ, ಇತಿಹಾಸ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ಹದಿನೈದು ಗ್ರಂಥಗಳು ಈ ಮಾಲೆಯಲ್ಲಿ ಪ್ರಕಟಗೊಂಡಿವೆ. 'ಕನ್ನಡ ಜನಪದ ಗೀತೆಗಳು' ಹಾಗೂ 'ಕನ್ನಡ ಸಾಹಿತ್ಯದಲ್ಲಿ ಹಾಸ್ಯ' ಈ ಗ್ರಂಥಗಳು ಪುನ ಮುದ್ರಣಗೊಂಡಿದ್ದು ಎರಡನೆಯ ಗ್ರಂಥಕ್ಕೆ ಉತ್ಕೃಷ್ಟ ಮುದ್ರಣ ಹಾಗೂ ವಿನ್ಯಾಸಕ್ಕಾಗಿ ಕೇಂದ್ರ ಸರಕಾರದ ವಾರ್ತಾ ಇಲಾಖೆಯಿಂದ ೧೯೬೬ರಲ್ಲಿ ಪ್ರಥಮ ಪ್ರಶಸ್ತಿ ದೊರೆತಿದೆ. ನಾಲ್ಕು ಡಾಕ್ಟರೇಟ್ ಪ್ರಬಂಧಗಳು ಸದ್ಯಕ್ಕೆ ಅಚ್ಚಿನಲ್ಲಿವೆ. ಈ ಮಾಲೆಯ ಪ್ರಕಟನೆಗಳಿಗೆ ಯು.ಜಿ.ಸಿ. ಯಿಂದ ಧನಸಹಾಯವನ್ನು ಪಡೆಯಲಾಗಿದೆ.

ಕನ್ನಡ ಕಾವ್ಯಮಾಲೆ

ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಸಂಪಾದಿಸ ಲಾಗುತ್ತಿರುವ ಜೈನ, ವೀರಶೈವ, ಬ್ರಾಹ್ಮಣ ಸಾಹಿತ್ಯದ ಪ್ರಾಚೀನ ಕನ್ನಡ ಕಾವ್ಯಗಳ ಪರಿಷ್ಕೃತ ಮುದ್ರಣಗಳನ್ನು ಈ ಮಾಲೆಯಲ್ಲಿ ಪ್ರಕಟಿಸಲಾಗುತ್ತಿದೆ. 'ರಾಜಶೇಖರ ವಿಳಾಸ', 'ಸೋಮನಾಥ ಚರಿತ್ರೆ', 'ಭೈರವೇಶ್ವರ

ಕಾವ್ಯದ ಕಥಾಮಣಿಸೂತ್ರ ರತ್ನಾಕರ', 'ಬಸವರಾಜ ವಿಜಯಂ', 'ನೇಮಿನಾಥ ಪುರಾಣ', 'ಅಕ್ರೂರ ಚರಿತ್ರೆ', 'ಜೀವಂಧರ ಚರಿತೆ' ಮೊದಲಾದ ಹನ್ನೆರಡು ಗ್ರಂಥಗಳು ಇದುವರೆಗೆ ಪ್ರಕಟವಾಗಿದ್ದು 'ದೀಕ್ಷಾ ಬೋಧೆ', 'ಲೋಭದತ್ತ ಚರಿತೆ', 'ಹರಿಹರದೇವ ಕೃತ ಪುರಾತನ ರಗಳೆಗಳು', 'ಐರಾವತ ನೋಂಪಿ', 'ಮೋಹನ ತರಂಗಿಣಿ'—ಈ ಕೃತಿಗಳು ಅಚ್ಚಿನಲ್ಲಿವೆ.

ಜನಪದ ಸಾಹಿತ್ಯಮಾಲೆ

ಕನ್ನಡದಲ್ಲಿ ಜನಪದ ಸಾಹಿತ್ಯ ವಿಪುಲವಾಗಿದೆ. ಅದನ್ನು ಸಂಗ್ರಹಿಸಿ ಪ್ರಕಟಿಸುವ ಕಾರ್ಯ ಕಳೆದ ಮೂರು ನಾಲ್ಕು ದಶಕಗಳಿಂದ ನಡೆದಿದೆಯಾದರೂ ವೈಜ್ಞಾನಿಕ ರೀತಿಯಲ್ಲಿ ಅದರ ಸಂಗ್ರಹ ಹಾಗೂ ಪ್ರಕಟಣೆಯ ವ್ಯವಸ್ಥೆಯಾಗಬೇಕಾದುದು ಅತ್ಯವಶ್ಯವಿದೆ. ರಾಜ್ಯದಲ್ಲಿಯ ಮೂರೂ ವಿಶ್ವವಿದ್ಯಾನಿಲಯಗಳ ಕನ್ನಡ ವಿಭಾಗದ ವಿದ್ಯಾರ್ಥಿಗಳಿಗೆ ಜನಪದ ಸಾಹಿತ್ಯದ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಪ್ರಕಟನ ವಿಭಾಗ ಕಳೆದ ವರ್ಷದಿಂದ (೧೯೬೧) 'ಜನಪದ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿದ್ದು ಈಗಾಗಲೆ ಮೂರು ಜನಪದ ಕಾವ್ಯ ಸಂಗ್ರಹಗಳು 'ಜೀವನ ಜೋಕಾಲಿ' ಎಂಬ ಹೆಸರಿನಲ್ಲಿ [೧. ಚೌಪದನಗಳು, ೨. ಸರಸ ವಿರಸ, ೩. ಗರತಿಯರ ಗರಿಮೆ] ಬೆಳಕು ಕಂಡಿವೆ. ಈಗ ಅಚ್ಚಿನಲ್ಲಿರುವ 'ಪರಮೇಶ್ವರಿಯ ಪದಗಳು' ಮಾಲೆಯ ನಾಲ್ಕನೆಯ ಸಂಗ್ರಹವಾಗಿ ಇಷ್ಟರಲ್ಲಿಯೇ ಬರಲಿದೆ.

ಪಠ್ಯ ಪುಸ್ತಕಗಳು

ಕಾಲೇಜು ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ಕನ್ನಡ ಮತ್ತು ಸಂಸ್ಕೃತದಲ್ಲಿ ಆಯಾ ಅಭ್ಯಾಸ ಮಂಡಳಿಗಳ ಯೋಜನೆಯಂತೆ ಹನ್ನೆರಡು ಗದ್ಯಪದ್ಯ ಸಂಗ್ರಹಗಳನ್ನು ಪ್ರಕಟಿಸಲಾಗಿದೆ. ವಿಶ್ವವಿದ್ಯಾಲಯದ ಪಠ್ಯಪುಸ್ತಕ ನಿರ್ದೇಶನಾಲಯದಿಂದ ಯೋಜಿತವಾದ ಗ್ರಂಥಗಳ ಮುದ್ರಣ ಹಾಗೂ ಮಾರಾಟದ ವ್ಯವಸ್ಥೆಯನ್ನು ಪ್ರಕಟನ ವಿಭಾಗವೇ ವಹಿಸಿಕೊಂಡಿದೆ. ಕನ್ನಡ ಪಠ್ಯಪುಸ್ತಕ ಮಾಲೆಯಲ್ಲಿ ಪಿ.ಯು.ಸಿ. ಮತ್ತು ಕೆಲವು ಪದವೀ ಪರೀಕ್ಷೆಗಳ ಪಠ್ಯಕ್ರಮಕ್ಕನುಸರಿಸಿ, 'ಮಾಪಕ ಸಾಹಿತ್ಯ'ವನ್ನೊಳಗೊಂಡು ಐವತ್ತು ಗ್ರಂಥಗಳು ಪ್ರಕಟಗೊಂಡಿವೆ.

ವಚನವಾಙ್ಮಯ ಸಂಶೋಧನೆ—ಪ್ರಕಾಶನ

ವಿಶ್ವವಿದ್ಯಾಲಯದ ಧನ ಸಹಾಯ ಆಯೋಗ ನೆರವಿನಿಂದ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಕೈಕೊ ಡಿರುವ ಸಮಗ್ರ ವಚನ ವಾಙ್ಮಯ ಸಂಶೋಧನ-ಸಂಸ್ಕ ರಣ—ಪ್ರಕಟನ ಯೋಜನೆಗನ್ವಯಿಸಿ ಇದುವರೆಗೆ ಹ ನ್ನೆರಡು ಗ್ರಂಥಗಳು ಪ್ರಕಟವಾಗಿವೆ. ಬಸವಣ್ಣ, ಜೆನ್ನ ಬಸವಣ್ಣ, ಸಿದ್ಧರಾಮ, ಮಹದೇವಿಯಕ್ಕ, ನೀಲಮ್ಮ ಮೊದಲಾದವರ ವಚನಗಳನ್ನಲ್ಲದೆ 'ವಿಶೇಷಾನುಭವ ಷಟ್ಸ್ಥಲ', 'ವೀರಶೈವ ಚಿಂತಾಮಣಿ', ಮುಕ್ತಿ ಕಂಠಾಭರಣ' ದಂಥ ವಚನ ಸಂಕಲನಗಳನ್ನು ವಿಸ್ತಾ ವಾದ ಪ್ರಸ್ತಾವನೆಯೊಂದಿಗೆ ಬೆಳಕು ಕಂಡಿವೆ, 'ಬ್ರಹ್ಮಾ ದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ', 'ಲಿಂಗಚಿದಾ ಮೃತ ಬೋಧೆ', 'ಸಕಲ ಪುರಾತನರ ವಚನಗಳು' 'ಭಾಗ-೧', 'ಬಾಲಸಂಗಯ್ಯನ ವಚನಗಳು'—ಈ ಗ್ರಂಥಗಳ ಮುದ್ರಣ ಮುಗಿದಿದ್ದು ಇಷ್ಟರಲ್ಲಿಯೇ ಪ್ರಕಾಶನಗೊಳ್ಳಲಿವೆ.

ವೀರಶೈವ ತತ್ತ್ವಜ್ಞಾನದ ಸಾರಸತ್ವವನ್ನೊಳಗೊಂಡ 'ಶೂನ್ಯ ಸಂಪಾದನೆ'ಯ ಇಂಗ್ಲಿಷ್ ಭಾಷಾಂತರ ಐದು ಸಂಪುಟಗಳಲ್ಲಿ ಪ್ರಕಟಗೊಂಡಿದೆ. ಈ ಸಂಪುಟಗಳಲ್ಲಿ ಭಾಷಾಂತರದೊಂದಿಗೆ ಅಭ್ಯಾಸಪೂರ್ಣವಾದ ಟೀಕೆ- ಟಿಪ್ಪಣಿಗಳನ್ನು ಒದಗಿಸಲಾಗಿದೆ. ಸಿದ್ಧರಾಮನ ವಚನ ಗಳ ಇಂಗ್ಲಿಷ್ ಭಾಷಾಂತರವು ಈಗ ಮುದ್ರಣದಲ್ಲಿದೆ.

ಇತರ ಪ್ರಕಟನೆಗಳು

ಮೇಲೆ ಕಾಣಿಸಿದ ಗ್ರಂಥಮಾಲೆಗಳಲ್ಲಿ ಅಲ್ಲದೆ ಇಂಗ್ಲಿ ಷಿನಲ್ಲಿ ಬಿಡಿಯಾಗಿ ಹದಿನೆಂಟು ಗ್ರಂಥಗಳು ಪ್ರಕಟವಾ ಗಿದ್ದು ಕಾಯದೆಜ್ಞಾನ, ಭೂಗೋಲಶಾಸ್ತ್ರ, ಸಂಸ್ಕೃತ ಮತ್ತು ಇಂಗ್ಲಿಷ್ ಸಾಹಿತ್ಯ, ಭಾಷಾವಿಜ್ಞಾನ, ರಾಜ್ಯ ಶಾಸ್ತ್ರ, ವೃದ್ಧಾಪ್ಯಶಾಸ್ತ್ರ (Gerontology) ಮೊದಲಾದ ವಿಷಯಗಳನ್ನು ಅವು ಒಳಗೊಂಡಿವೆ. ಇವೆಲ್ಲ ಗ್ರಂಥ ಗಳೂ ಸಂಶೋಧನೆಯ ಕಡೆಗೇ ಒಲಿದಂಥವಾಗಿವೆ.

ನಿಯತಕಾಲಿಕಗಳು

ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳ ಹಾಗೂ ಕಾಲೇಜುಗಳ ಪ್ರಾಧ್ಯಾಪಕರೂ, ವಿದ್ಯಾರ್ಥಿ ಗಳೂ ಕೈಕೊಂಡಿರುವ ಸಂಶೋಧನೆಯ ಫಲವನ್ನು ಹಾಗೂ ವಿಮರ್ಶಾತ್ಮಕ ಬರೆವಣಿಗೆಯನ್ನು ಪ್ರಕಟಿಸಲು

…ಹಾಗೂ ಕನ್ನಡದಲ್ಲಿ ನಿಯತಕಾಲಿಕಗಳನ್ನು …ಡಿಸಲಾಗುತ್ತಿದೆ. 'Science' ಮತ್ತು …nities' ಪತ್ರಿಕೆಗಳು ೧೯೫೬ರಿಂದಲೇ ಪ್ರಕಟ…ದ್ದು 'Social Sciences' ಪತ್ರಿಕೆ ೧೯೬೪ …ಪ್ರಾರಂಭವಾಗಿದೆ. ಇವು ಮೂರೂ ವಾರ್ಷಿಕ…ಳಾಗಿದ್ದು ಪ್ರತಿಯೊಂದರ ಚಂದಾ ೫ರೂ. ಇದೆ. …ಕೆಗಳನ್ನು ಭಾರತದ ಎಲ್ಲ ವಿಶ್ವವಿದ್ಯಾಲಯ… ಹಾಗೂ ಕೆಲವು ವಿದೇಶೀ ವಿಶ್ವವಿದ್ಯಾಲಯ… ವಿನಿಮಯಕ್ಕಾಗಿ ಕಳಿಸಲಾಗುತ್ತಿದೆ.
…ಡದಲ್ಲಿ ಸೃಜನ, ವಿಮರ್ಶನ ಹಾಗೂ ಸಂಶೋಧನ…ದ ಅಭಿವೃದ್ಧಿಗಾಗಿ 'ಕರ್ನಾಟಕ ಭಾರತಿ' …ಸಿಕವನ್ನು ೧೯೬೮ರಿಂದ ಪ್ರಾರಂಭಿಸಲಾಗಿದೆ. …ವಿಷಯಗಳಿಗೆ ಮೀಸಲಾದ ಅಯನ ಪತ್ರಿಕೆ …ನ ಭಾರತಿ'ಯ ಪ್ರಥಮ ಸಂಚಿಕೆ ಕಳೆದ … ತಿಂಗಳಲ್ಲಿಯೆ ಪ್ರಕಟವಾಗಿದೆ. ಇವೆರಡರ ಅನುಕ್ರಮವಾಗಿ ರೂ. ೮ ಹಾಗೂ ರೂ. ೪ ಇದೆ. …ಾಣಿಸಿದ ಎಲ್ಲ ಪತ್ರಿಕೆಗಳನ್ನು ವಿದ್ಯಾರ್ಥಿಗಳಿಗೆ …ಲೆಯ ರಿಯಾಯಿತಿಯಲ್ಲಿ ಕೊಡಲಾಗುತ್ತಿದೆ. …ಪತ್ರಿಕೆಗೆ ಪ್ರತ್ಯೇಕವಾದ ಸಂಪಾದಕ ಮಂಡಳಿ …ಪ್ರಕಟನ ವಿಭಾಗದ ನಿರ್ದೇಶಕರು ಆ ಎಲ್ಲ ಸಮಿತಿ…ಸ್ಯ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಾರೆ. …ದ್ಯಾಲಯ ತನ್ನದೇ ಆದ ಮುದ್ರಣಾಲಯವನ್ನು …ರಡು ವರ್ಷಗಳಿಂದ ಪ್ರಾರಂಭಿಸಿದೆ.

…ಪ್ರದರ್ಶನ

…ಕಗಳನ್ನು ಜನತೆಯ ಕಣ್ಣೆದುರಿಗೆ ಒಯ್ದು ಅವು…ವರ ಆಸಕ್ತಿಯನ್ನು ಹೆಚ್ಚಿಸುವ ಕಾರ್ಯ ಆಕರ್ಷಕ …ಂಥಪ್ರದರ್ಶನಗಳಿಂದ ಕೆಲಮಟ್ಟಿಗೆ ಸಾಧ್ಯವಾಗ… ವ್ಯಾಸಂಗ ವಿಸ್ತರಣ ವಿಭಾಗ ಬೇರೆ ಬೇರೆ… ಉಪನ್ಯಾಸ ಶಿಬಿರಗಳನ್ನು ನಡೆಸುವಾಗ …ಕೆಲವು ವಿಶೇಷ ಸಂದರ್ಭಗಳಲ್ಲಿ ವಿಶ್ವವಿದ್ಯಾಲಯ…ಕಟವಾದ ಗ್ರಂಥಗಳ ಪ್ರದರ್ಶನವನ್ನು ಏರ್ಪ…ತ್ತಿದೆ. 'ಅಂತರ ರಾಷ್ಟ್ರೀಯ ಪುಸ್ತಕ ವರ್ಷ'ದ… ಕಳೆದ ಮಾರ್ಚ್ ತಿಂಗಳಲ್ಲಿ (೧೯೭೨) ಪುಸ್ತಕ…ವನ್ನು ಆಚರಿಸಿ ವಿಶ್ವವಿದ್ಯಾಲಯದ ಎಲ್ಲ ಪ್ರಕ…ನ್ನು ರಿಯಾಯಿತಿ ದರದಲ್ಲಿ – ಅಂದರೆ ಮೂಲ ಬೆಲೆಯ ಮುಕ್ಕಾಲು ಬೆಲೆಗೆ ಮಾರಲಾಯಿತು. ಧಾರವಾಡ, ಮೈಸೂರು, ಗುಲ್ಬರ್ಗಾಗಳಲ್ಲಿ ವಿಶ್ವವಿದ್ಯಾಲಯದ ಗ್ರಂಥಗಳ ಅಧಿಕೃತ ಮಾರಾಟಗಾರರನ್ನೂ ನಿಯಮಿಸಲಾಗಿದೆ.

ನಾಡಿನ ಸಾಮಾನ್ಯ ಜನತೆ, ವಿದ್ಯಾರ್ಥಿವೃಂದ ಹಾಗೂ ವಿದ್ವನ್ಮಂಡಳಿ—ಹೀಗೆ ಮೂರು ವರ್ಗದವರಿಗೂ ಉಪಯುಕ್ತವೆನಿಸುವ ಮತ್ತು ಪರಸ್ಪರ ಪೋಷಕವಾಗಬಲ್ಲ ಹಲವಾರು ಯೋಜನೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವಿಶ್ವವಿದ್ಯಾಲಯ ತನ್ನ ವ್ಯಾಸಂಗ ವಿಸ್ತರಣ–ಪ್ರಕಟನ ವಿಭಾಗದ ಮೂಲಕ ಜ್ಞಾನಸಂವರ್ಧನೆ ಹಾಗೂ ಪ್ರಸಾರದ ಕಾರ್ಯ ಮಾಡುತ್ತಿದೆ. ವಿದ್ವಾಂಸರ ಹಾಗೂ ಜನತೆಯ ಸಹಕಾರ, ಬೆಂಬಲಗಳೊಂದಿಗೆ ಅದು ತನ್ನ ಕಾರ್ಯಕ್ಷೇತ್ರವನ್ನು ವಿಸ್ತಾರಗೊಳಿಸುತ್ತ ಮುನ್ನಡೆದಿದೆ.

ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವೀ ಪ್ರಧಾನ ಸಮಾರಂಭದ ಭಾಷಣದಲ್ಲಿ ಡಾ|| ಕೆ. ವಿ. ಪುಟ್ಟಪ್ಪನವರು ಹೇಳಿದ ಕೆಲವು ಮಾತುಗಳನ್ನು ಇಲ್ಲಿ ಉದ್ಧರಿಸುವದು ಹೆಚ್ಚು ಸಂದರ್ಭೋಚಿತವಾಗಿದೆ :

"ವಿಶ್ವವಿದ್ಯಾಲಯದ ಸಂಶೋಧನಾಂಗ ಮತ್ತು ಬೋಧನಾಂಗಗಳಿಗೆ ಯಾವ ವಿಧದಲ್ಲಿಯೂ ದ್ವಿತೀಯವಲ್ಲದ ಸ್ಥಾನ ಆದರ ಪ್ರಸಾರಾಂಗಕ್ಕೆ ಸಲ್ಲುತ್ತದೆ. ಅಷ್ಟೇ ಅಲ್ಲ, ಪ್ರಜಾಸತ್ತೆಯನ್ನೇ ತನ್ನ ರಾಜಕೀಯಕ್ಕೆ ತತ್ವದ ಅಡಿಗಲ್ಲನ್ನಾಗಿ ಮಾಡಿಕೊಂಡಿರುವ ನಮ್ಮ ಗಣರಾಜ್ಯದ ಅಭ್ಯುದಯವನ್ನು ಗಮನಿಸುವುದಾದರೆ ಪ್ರಸಾರಾಂಗಕ್ಕೆ ಬಹು ಮುಖ್ಯ ಸ್ಥಾನವನ್ನೇ ನೀಡಬೇಕಾದುದು ಅನಿವಾರ್ಯವಾಗುತ್ತದೆ. ಹಾಗಲ್ಲದೆ ನಮ್ಮ ಜನತಾ ಪ್ರಜಾಸತ್ತೆ ಯಶಸ್ವಿಯಾಗುವುದಿಲ್ಲ ; ಸರ್ವೋದಯಕ್ಕೆ ಎಂದಿಗೂ ಜಯ ಲಭಿಸುವುದಿಲ್ಲ........

"ಮನುಜಮತ, ವಿಶ್ವಪಥ, ವಿಜ್ಞಾನದೃಷ್ಟಿ, ವಿಚಾರ ಬುದ್ಧಿ—ಇವು ನಮ್ಮ ಜನಹೃದಯದ ನಿತ್ಯಮಂತ್ರಗಳಾಗುವಂತೆಯೂ ನಮ್ಮ ಜನಮನದ ಧ್ಯೇಯೋಕ್ತಿಗಳಾಗುವಂತೆಯೂ ಮಾಡುವ ಕರ್ತವ್ಯ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಪಾಲಿಗೆ ಸೇರಿದ್ದು. ವಿಜ್ಞಾನ, ಸಾಹಿತ್ಯ, ಇತಿಹಾಸ, ರಾಜ್ಯಶಾಸ್ತ್ರ, ಮನಶ್ಶಾಸ್ತ್ರ, ತತ್ವಶಾಸ್ತ್ರ, ಸಮಾಜಶಾಸ್ತ್ರ ಮೊದಲಾದ ಎಲ್ಲ ಶಾಸ್ತ್ರ ವಿಷಯದ ಅಧ್ಯಾಪಕರೂ ಈ ನಿಟ್ಟಿನಲ್ಲಿ ದುಡಿಯಬೇಕಾಗಿದೆ...."

ಮೈಸೂರು ವಿಶ್ವವಿದ್ಯಾನಿಲಯ : ಕನ್ನಡ ಅಧ್ಯಯನ ಸಂಸ್ಥೆ

● ಡಾ|| ಹಾ. ಮಾ. ನಾಯಕ

ಕನ್ನಡ ಭಾಷೆ, ಸಾಹಿತ್ಯಗಳ ಸರ್ವಾಂಗೀಣ ಪ್ರಗತಿಯನ್ನು ಸಾಧಿಸುವ ದೃಷ್ಟಿಯಿಂದ ಹಾಗೂ ವಿಶ್ವವಿದ್ಯಾನಿಲಯದ ಎಲ್ಲ ಬಗೆಯ ಕನ್ನಡ ಚಟುವಟಿಕೆಗಳನ್ನು ಕೇಂದ್ರೀಕರಿಸುವ ದೃಷ್ಟಿಯಿಂದ ೧೯೬೬ರ ಕೊನೆಯಲ್ಲಿ (ಡಿಸೆಂಬರ್ ೮) ಕನ್ನಡ ಅಧ್ಯಯನ ಸಂಸ್ಥೆ ಅಸ್ತಿತ್ವಕ್ಕೆ ಬಂತು. ಅಧ್ಯಯನ ಸಂಸ್ಥೆಯಲ್ಲಿ ಶಿಕ್ಷಣ, ಸಂಶೋಧನೆ ಹಾಗೂ ಪ್ರಕಟಣೆ—ಈ ಮೂರು ವಿಭಾಗಗಳಿವೆ. ಶಿಕ್ಷಣ ವಿಭಾಗದಲ್ಲಿ ಕನ್ನಡ, ಭಾಷಾವಿಜ್ಞಾನ ಮತ್ತು ದಕ್ಷಿಣ ಭಾರತ ಅಧ್ಯಯನಗಳಲ್ಲಿ ಎಂ.ಎ., ಭಾಷಾಂತರ ಭಾರತೀಯ ಸಾಹಿತ್ಯ ಮತ್ತು ಜಾನಪದಗಳಲ್ಲಿ ಡಿಪ್ಲೊಮಾ ಹಾಗೂ ಕನ್ನಡೇತರರಿಗಾಗಿ ಕನ್ನಡ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ – ಈ ಶಿಕ್ಷಣಗಳಿಗಾಗಿ ವ್ಯವಸ್ಥೆಯಿದೆ. ವಿದೇಶೀಯರಿಗೆ ಕನ್ನಡ ಕಲಿಸಲು ಪ್ರತ್ಯೇಕ ತರಗತಿಗಳನ್ನು ಕೂಡ ನಡೆಸಲಾಗುತ್ತಿದೆ. ಸಂಶೋಧನೆಗೆ ಸಂಬಂಧಿಸಿದಂತೆ ಪ್ರಾಚೀನ ಗ್ರಂಥಗಳ ಸಂಪಾದನೆ, ಹರಿದಾಸ ಸಾಹಿತ್ಯವನ್ನು ಶಾಸ್ತ್ರೀಯವಾಗಿ ಸಂಪಾದಿಸಿ, ಸಂಗ್ರಹಿಸಿ ಪ್ರಕಟಿಸುವುದು, ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟಗಳನ್ನು ಪರಿಷ್ಕರಿಸಿ ಪುನರ್ ಮುದ್ರಿಸುವುದು, ಜಾನಪದ ವಸ್ತುಸಂಗ್ರಹಾಲಯವನ್ನು ವ್ಯವಸ್ಥೆಗೊಳಿಸಿ ಬೆಳೆಸುವುದು ಮೊದಲಾದ ಕಾರ್ಯಕ್ರಮಗಳಿವೆ. ಪ್ರಕಟಣ ವಿಭಾಗವೂ ಸಂಸ್ಥೆಯ ಕಾರ್ಯ ಚಟುವಟಿಕೆ[...] ಬಹು ದೊಡ್ಡ ಪಾತ್ರವನ್ನು ವಹಿಸಿದೆ. ವಿಶ್ವಕೋ[...] ಪಠ್ಯಪುಸ್ತಕಗಳ ಹಾಗೂ ಭಾಷಾಂತರ ಪ್ರಕ[...] ಪ್ರಾಚೀನ ಗ್ರಂಥಗಳ ಪ್ರಕಟಣೆ ಮೊದಲಾದ ನಾ[...] ಕಾರ್ಯಕ್ರಮಗಳು ಈ ವಿಭಾಗದ ಚಟುವಟಿಕೆಗ[...] ಸೇರಿವೆ.

ಕನ್ನಡ ಅಧ್ಯಯನ ಸಂಸ್ಥೆಯ ಪ್ರಕಟಣ ವಿಭಾ[...] ಪ್ರಗತಿಯನ್ನು ಕುರಿತು ಕೆಲವು ಮಾತುಗಳನ್ನು [...] ಬಹುದು. ಎಪಿಗ್ರಾಫಿಯಾ ಕರ್ನಾಟಿಕಾ ಹಾ[...] ವಿಶ್ವಕೋಶಗಳ ಪ್ರಕಟಣೆಗಳಲ್ಲದೆ, ನಾಲ್ಕು ಪ್ರತ್ಯೇ[...] ಮಾಲೆಗಳಲ್ಲಿ ಗ್ರಂಥಗಳು ಪ್ರಕಟವಾಗುತ್ತ[...] ಸಾಮಾನ್ಯ, ಪಠ್ಯಪುಸ್ತಕ, ಜಾನಪದ ಹಾಗೂ ಪ್ರಾಚೀ[...] ಎಂಬಿವೇ ಆ ನಾಲ್ಕು ಮಾಲೆಗಳು. ೧೯೬೮ರಲ್ಲಿ [...] ಸಂಸ್ಥೆಯ ಪ್ರಕಟಣೆಗಳು ಮೊದಲ ಬಾರಿಗೆ ಹೊರಬಂದ[...] ಇಲ್ಲಿಯುವರೆಗೆ ೧೧೦ಕ್ಕೂ ಹೆಚ್ಚು ಪುಸ್ತಕಗಳು ಪ್ರ[...] ವಾಗಿವೆ. ಸುಮಾರು ೫೦ ಪುಸ್ತಕಗಳು ಈಗ ಅಚ್ಚಿನಲ್ಲಿ[...] ಸುಮಾರು ೨೫೦ ಪುಸ್ತಕಗಳು ಸಿದ್ಧತೆಯ ವಿವಿಧ ಹ[...] ಗಳಲ್ಲಿವೆ. ಈವರೆಗೆ ಪ್ರಕಟವಾದ ಗ್ರಂಥಗಳಲ್ಲಿ ಪ[...] ಪುಸ್ತಕ ಮಾಲೆಯಲ್ಲಿ ೬೯ ಪುಸ್ತಕಗಳೂ, ಪ್ರಾಚೀ[...] ಕಾವ್ಯ ಮಾಲೆಯಲ್ಲಿ ೨೨ ಪುಸ್ತಕಗಳೂ, ಜಾನಪ[...] ಮಾಲೆಯಲ್ಲಿ ೧೦ ಪುಸ್ತಕಗಳೂ, ಸಾಮಾನ್ಯ ಮಾ[...] ಯಲ್ಲಿ ೯ ಪುಸ್ತಕಗಳೂ ಪ್ರಕಟವಾಗಿವೆ. ಪಠ್ಯಪುಸ್ತ[...] ಮಾಲೆಯಲ್ಲಿ ಪ್ರಕಟವಾಗಿರುವ ಪುಸ್ತಕಗಳು ಸ್ನಾತ[...] ಸ್ನಾತಕಪೂರ್ವ ಹಾಗೂ ಸ್ನಾತಕೋತ್ತರ ತರಗತಿಗ[...] ಉಪಯೋಗವಾಗುವಂಥವು. ಇವುಗಳಲ್ಲಿ ಕೆಲವು ನಿರ್ದಿಷ್[...] ವಾದ ಪಠ್ಯಕ್ರಮವನ್ನನುಸರಿಸಿ ಸಿದ್ಧವಾಗಿದ್ದರೆ ಇನ[...] ಕೆಲವು ಸಹಾಯಕ ಗ್ರಂಥಗಳಾಗಿವೆ: ಕೆಲವು ಆಕ[...] ಗ್ರಂಥಗಳು, ಕೆಲವು ಅನುವಾದಗಳೂ ಸೇರಿವೆ. ಪ್ರಾಚೀ[...] ಕಾವ್ಯ ಮಾಲೆಯ ಪುಸ್ತಕಗಳು ಪ್ರಾಚೀನ ಸಾಹಿತ್ಯದಿ[...] ಆಯ್ದ ಗ್ರಂಥಗಳಾಗಿವೆ. ಪ್ರಕಟವಾಗಿರುವ ಗ್ರಂಥಗಳ[...] ಅನೇಕ ಪುಸ್ತಕಗಳು ಸಂಸ್ಥೆಯ ಗ್ರಂಥಾಲಯದಲ್ಲಿರು[...] ಹಸ್ತಪ್ರತಿಗಳನ್ನು ಬಳಸಿಕೊಂಡು ಸಿದ್ಧವಾಗಿವೆ. ಕೆಲ[...] ಗ್ರಂಥಗಳಂತೂ ಇದೇ ಮೊದಲ ಬಾರಿಗೆ ಬೆಳಕಿಗೆ ಬಂ[...] ವಾಗಿವೆ. ಜಾನಪದ ಮಾಲೆಯ ಗ್ರಂಥಗಳು ಕರ್ನಾಟಕ[...] ವಿವಿಧ ಭಾಗಗಳಿಂದ ಆಯ್ದ ಜಾನಪದ ಸಾಹಿತ್ಯದ ಬ[...] ಬಗೆಯ ಸಂಗ್ರಹವಾಗಿವೆ. ಸಂಸ್ಥೆಯು ಕಾಲಕಾಲಕ್ಕೆ ನ[...] ಸಿದ ವಿಚಾರ ಗೋಷ್ಠಿಗಳ ಕಾರ್ಯಕಲಾಪಗಳು ಗ್ರಂ[...] ರೂಪದಲ್ಲಿ ಪ್ರಕಟವಾಗಿವೆ. ಅವು ಸಾಮಾನ್ಯ ಮಾ[...]

ರಿವೆ. ಶ್ರೀ ಕುವೆಂಪುರವರ 'ಶ್ರೀ ರಾಮಾಯಣ
ಮಹಾ ಕಾವ್ಯದ ಸುಲಭ ಆವೃತ್ತಿಯನ್ನು
ರುವ ಕೀರ್ತಿಯೂ ಸಂಸ್ಥೆಯದಾಗಿದೆ.
ಅಧ್ಯಯನ ಸಂಸ್ಥೆ ಅಸ್ತಿತ್ವಕ್ಕೆ ಬಂದ ಕೆಲವೇ
ಲ್ಲಿ ಬಹು ದೊಡ್ಡ ಸಂಖ್ಯೆಯ ಗ್ರಂಥಗಳನ್ನು
ವೆ. ಅದರ ಪ್ರಕಟಣೆಗಳು ನಾನಾ ಪ್ರಶಸ್ತಿ,
ನಗಳನ್ನು ಗಳಿಸಿವೆ. ಇದರಿಂದ ಕನ್ನಡ
ಪ್ರಕಟಣೆಯ ಪ್ರಪಂಚದಲ್ಲಿ ಅದು ತನ್ನದೇ ಆದ ಒಂದು ಸ್ಥಾನವನ್ನು ಕಾಯ್ದುಕೊಂಡಿದೆ. ವಿಶ್ವವಿದ್ಯಾನಿಲಯದ ವಿವಿಧ ಪ್ರಾಧ್ಯಾಪಕರ, ಲೇಖಕರ ಅಚ್ಚುಕೂಟದವರ ಸಹಕಾರದಿಂದ ಸಂಸ್ಥೆಗೆ ಇಷ್ಟು ವ್ಯಾಪಕವಾದ ಕೆಲಸ ಮಾಡುವುದು ಸಾಧ್ಯವಾಯಿತು ಎಂದರೆ ಅತಿಶಯೋಕ್ತಿಯಾಗಲಾರದು.

ಇಂದು ಸಾಹಿತ್ಯವೊಂದಕ್ಕೇ ಅಲ್ಲದೆ ಎಲ್ಲಾ ಲೌಕಿಕ ಕಾರ್ಯಗಳಿಗೂ ಮಾತು ಒದಗಬೇಕು, ಒಗ್ಗಬೇಕು. ಮಾತಿಗೆ ಖನಿ, ವೀರ್ಯ, ವಿಲಾಸ, ನಯಗಳು ಬರಬೇಕು.

—ಡೀ.ಸೀ.

ಸಾಹಿತ್ಯ ಮತ್ತು ಬದುಕು ಹತ್ತಿರ ಹತ್ತಿರ: ಅವು ಅವಳಿ ಜವಳಿ; ಒಂದರ ಉಸಿರು ಇನ್ನೊಂದರ ಉಸಿರು; ಒಂದರ ಜೀವ ಇನ್ನೊಂದರ ಜೀವ. ಬದುಕು ಪ್ರೇರಿಸದ ಸಾಹಿತ್ಯ ಬೊಬ್ಬಾಟ. ಬದುಕಿನಿಂದ, ಬದುಕಿನ ಅನುಭವದಿಂದ ಸ್ಫೂರ್ತಿ ಸೊಗಸು ಶಕ್ತಿಗಳನ್ನು ಗಳಿಸದೆಯೇ ಸುರಿಸುವ ಮಾತಿನ ಮಳೆ, ಜನತೆಯ ಕಿವಿಕಣ್ಣುಗಳಿಗೆ ಕೊಡುವ ಕರೆಕರೆ.

—ಶಿವರಾಮ ಕಾರಂತ

ಸಾಹಿತಿಯಾದವನು ತನ್ನ ಬುದ್ಧಿ ಭಾವಮಯವಾದ ಚಿತ್ಕೋಶವನ್ನು ಅಧ್ಯಯನದಿಂದ, ವಿದ್ವಜ್ಜನ ಸಂಪರ್ಕದಿಂದ, ಲೋಕಾನುಭವದಿಂದ, ಸ್ವಂತ ಚಿಂತನ ಧ್ಯಾನ ಸಾಧನಾದಿಗಳಿಂದ ಸುಪುಷ್ಟವನ್ನಾಗಿ, ಸುವಿಸ್ತೃತವನ್ನಾಗಿ, ಶ್ರೀಮಂತವನ್ನಾಗಿ ಮಾಡಿಕೊಳ್ಳಬೇಕು.

—ಕುವೆಂಪು

ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರ

● ಡಾ|| ಜಿ. ಎಸ್. ಶಿವರುದ್ರಪ್ಪ

ಬೆಂಗಳೂರಿನ ಸೆಂಟ್ರಲ್ ಕಾಲೇಜು ಪ್ರಾರಂಭವಾದಾಗಿನಿಂದ ಬಹುತೇಕ ವಿಜ್ಞಾನದ ವಿಷಯಗಳಿಗೇ ಪ್ರಾಧಾನ್ಯವನ್ನಿತ್ತಿದ್ದ ಒಂದು ಪ್ರಸಿದ್ಧ ವಿದ್ಯಾಕೇಂದ್ರ. ಆದರೂ ಅಲ್ಲಿ ಶ್ರೀಗಳಾದ ಬಿ. ಎಂ. ಶ್ರೀಕಂಠಯ್ಯ, ಟಿ. ಎಸ್. ವೆಂಕಣ್ಣಯ್ಯ, ಎ. ಆರ್. ಕೃಷ್ಣಶಾಸ್ತ್ರೀ, ಕೆ.ವಿ. ಪುಟ್ಟಪ್ಪ, ವಿ. ಸೀತಾರಾಮಯ್ಯ, ಜಿ. ಪಿ. ರಾಜರತ್ನಂ ಮೊದಲಾದ ಮಹನೀಯರು ಅಧ್ಯಾಪಕರಾಗಿ ಪಾಠಹೇಳಿ, ವಿದ್ಯಾರ್ಥಿಗಳಿಂದ ಲೇಖನಗಳನ್ನು ಬರೆಯಿಸಿ, ಉತ್ತೇಜನ ನೀಡಿ, ಅನೇಕ ಗ್ರಂಥಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಆ ಕಾಲೇಜಿಗೆ ಒಂದು ಸ್ಥಾನವನ್ನು ದೊರಕಿಸಿಕೊಟ್ಟಿದ್ದಾರೆ. ಇಂದು ಶ್ರೇಷ್ಠ ಪತ್ರಿಕೆಯಾಗಿ ಬೆಳೆದಿರುವ ಪ್ರಬುದ್ಧ ಕರ್ಣಾಟಕವು ಆರಂಭವಾದದ್ದು ಇಲ್ಲಿಯೇ. ಇಲ್ಲಿನ ಕರ್ನಾಟಕ ಸಂಘವು ಕರ್ನಾಟಕದ ಯಾವುದೇ ಇತರ ಕಾಲೇಜಿನ ಅಂತಹ ಸಂಘಗಳಿಗಿಂತ, ಅಥವಾ ಆ ಹೆಸರಿನ ಯಾವುದೇ ಇತರ ಸಂಘಕ್ಕಿಂತ ಹೆಚ್ಚಿನ ಕೆಲಸವನ್ನು ಮಾಡಿದೆ. ಅದು ೬೦ಕ್ಕೆ ಮೇಲ್ಪಟ್ಟು ಗ್ರಂಥಗಳನ್ನು ಬರೆಯಿಸಿ ಪ್ರಕಟಿಸಿದೆ. ಇವುಗಳಲ್ಲಿ ಅನೇಕವು ವಿದ್ಯಾರ್ಥಿಗಳ ಬರಹಗಳ ಸಂಗ್ರಹಗಳೆಂಬುದು ಹೆಮ್ಮೆಯ ವಿಷಯ. ಈ ಕರ್ನಾಟಕ ಸಂಘವನ್ನು ಕಟ್ಟಿ ಬೆಳೆಯಿಸಿದ ಕೀರ್ತಿಯಲ್ಲಿ ಬಹುಭಾಗ ಶ್ರೀ ಜಿ. ಪಿ. ರಾಜರತ್ನಂ ಅವರಿಗೆ ಸಲ್ಲಬೇಕು.

ರಾಜಧಾನಿ ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜಿನಂ[ತಹ] ದೊಡ್ಡ ಸಂಸ್ಥೆಯನ್ನು ಕೇಂದ್ರವಾಗಿಟ್ಟುಕೊಂಡು ಒಂ[ದು] ವಿಶ್ವವಿದ್ಯಾಲಯವನ್ನು ಕಟ್ಟುವ ಆವಶ್ಯಕತೆಯನ್ನು [ಮನ]ಗಂಡು, ೧೯೬೪ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವ[ನ್ನು] ಆರಂಭಿಸಲಾಯ್ತು. ೧೯೬೬ರಲ್ಲಿ ಕನ್ನಡ ಆನ[ರ್ಸ್] ಆರಂಭವಾಯ್ತು; ೧೯೬೮ರಲ್ಲಿ ಕನ್ನಡ ಎಂ.ಎ. ಆರ[ಂಭ]ವಾಯ್ತು. ೧೯೭೧ನೇ ನವಂಬರ್‌ರಲ್ಲಿ ಕನ್ನಡ ವಿಭಾ[ಗ] ಕನ್ನಡ ಅಧ್ಯಯನ ಕೇಂದ್ರವೆಂದು ನಾಮಕರಣ ಮಾ[ಡ]ಲಾಯಿತು.

ಕನ್ನಡ ಅಧ್ಯಯನ ಕೇಂದ್ರದಲ್ಲಿ ಹಲವು ವಿಭಾಗಗಳ[ಿವೆ:] ಹಸ್ತಪ್ರತಿ ವಿಭಾಗ, ಜಾನಪದ ವಿಭಾಗ, ಭಾ[ಷಾ] ವಿಜ್ಞಾನ ವಿಭಾಗ ಮತ್ತು ಶಾಸನಶಾಸ್ತ್ರ ವಿಭಾಗ. ಈ[ಗಾ]ಗಲೇ ಏಳುನೂರಕ್ಕೆ ಮೇಲ್ಪಟ್ಟು ಹಸ್ತಪ್ರತಿಗಳನ್ನು ಸಂ[ಗ್ರ]ಹಿಸಿ, ಗ್ರಂಥ ಸಂಪಾದನೆಯ ಕೆಲಸವನ್ನೂ ಆರಂಭಿಸ[ಲಾ]ಗಿದೆ. ಜಾನಪದ ವಿಭಾಗದಲ್ಲಿ ಮತ್ತು ಭಾಷಾ ವಿಜ್ಞಾ[ನ] ವಿಭಾಗಗಳಲ್ಲಿ ಜಾನಪದ ಪರಿಭಾಷೆ ಮತ್ತು ಕನ್ನ[ಡ] ಉಪ ಭಾಷೆಗಳು ಇವುಗಳಿಗೆ ಸಂಬಂಧಿಸಿದ ಕೋಶ[ಗಳ] ಸಿದ್ಧತೆಗೆ ಕೆಲಸಗಳು ನಡೆಯುತ್ತಿವೆ. ಇದಲ್ಲದೆ ಕಾ[ವ್ಯ] ಮೀಮಾಂಸೆಯ ಇತಿಹಾಸಕ್ಕೆ ಸಂಬಂಧಿಸಿದಂತೆ ಕೆ[ಲಸ] ನಡೆಯುತ್ತಿದೆ. ಕನ್ನಡ ಸರ್ಟಿಫಿಕೇಟ್ ಮತ್ತು ಡಿಪ್ಲೊ[ಮಾ] ತರಗತಿಗಳನ್ನು ಕೇಂದ್ರದಲ್ಲಿ ತೆರೆಯಲಾಗಿದೆ.

ಈಗಾಗಲೇ ಗಣ್ಯ ಪ್ರಮಾಣದಲ್ಲಿ ಎರಡು ವಿಚಾ[ರ] ಗೋಷ್ಠಿಗಳನ್ನು ನಡೆಯಿಸಲಾಯ್ತು. ಪ್ರತಿ ವರ್ಷ ಕನ್ನ[ಡ]ದಲ್ಲಿ ಬರುವ ಸಾಹಿತ್ಯಿಕ ಕೃತಿಗಳ ಪರಿಚಯ ಮತ್ತು ಮೌಲ್ಯ ವಿವೇಚನೆಗಾಗಿ 'ಸಾಹಿತ್ಯ ವಾರ್ಷಿಕ' ಎಂ[ಬ] ಹೆಸರಿನಲ್ಲಿ ಪ್ರತಿ ವರ್ಷ ಒಂದು ಗ್ರಂಥವನ್ನು ಹೊರತರು[ವ] ಯೋಜನೆಯಲ್ಲಿ ಕೆಲಸ ಸಾಗುತ್ತಿದೆ. ಈಗಾಗಲೇ ಅ[ಧ್ಯ]ಯನ ಕೇಂದ್ರವು ತನ್ನ ಹೆಸರಿನಲ್ಲಿ ೮ ಪುಸ್ತಕಗಳನ್ನು ಪ್ರಕಟಿಸಿದೆ. ವಿಶ್ವವಿದ್ಯಾಲಯದ ಪತ್ರಿಕೆ 'ಸಾಧನೆ'ಯ ಯೋಜನೆ, ಕಾರ್ಯಾರಂಭ ಮೊದಲು ಶುರುವಾದದ್ದು ಇಲ್ಲಿಯೇ. ಬೆಂಗಳೂರು ವಿಶ್ವವಿದ್ಯಾಲಯದ ಅತ್ಯಂ[ತ] ಚಟುವಟಿಕೆಯ ಶಾಖೆಗಳಲ್ಲಿ ಇದೂ ಒಂದು ಎಂಬ ಹೆ[ಸ]ರನ್ನು ಕೇಂದ್ರವು ಗಳಿಸಿದೆ. ಇಲ್ಲಿ ಖ್ಯಾತ ಕವಿಗಳು, ವಿಮರ್ಶಕರು, ಸಂಶೋಧಕರು, ನಾಟಕಕಾರರು ಅಧ್ಯಾಪಕರಾಗಿ ಕೆಲಸಮಾಡುತ್ತಿದ್ದಾರೆ.

ರ್ನಾಟಕ ವಿಶ್ವವಿದ್ಯಾಲಯದ
ನ್ನಡ ಅಧ್ಯಯನ ಸಂಸ್ಥೆ

ಡಾ|| ಆರ್. ಸಿ. ಹಿರೇಮಠ್

ರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಸ್ಥೆಯ ಪಾತ್ರ ಹಿರಿದಾದುದು. ಅದರ ಮುಖ್ಯ ಶ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಅಧ್ಯ ಅಧ್ಯಾಪನ, ಸಂಶೋಧನ, ಪ್ರಕಾಶನ ಮುಂತಾದ ಗಳನ್ನು ಸುವ್ಯವಸ್ಥಿತ ಹಾಗೂ ವ್ಯಾಪಕ ದೃಷ್ಟಿ ನೆರವೇರಿಸುವುದು. ಈ ಉದ್ದೇಶದ ಸಫಲತೆಗಾಗಿ ನಡೆಯಬೇಕಾದ ಕಾರ್ಯಕಲಾಪಗಳ ರೂಪರೇಷೆ ಂತಿವೆ.

ನ್ನಡದಲ್ಲಿ ಎಂ.ಎ., ಭಾಷಾಶಾಸ್ತ್ರದಲ್ಲಿ ಎಂ.ಎ., ೀಯ ಸಾಹಿತ್ಯದಲ್ಲಿ ಎಂ.ಲಿಟ್., ಕನ್ನಡ ಸಾಹಿತ್ಯ ಂ.ಲಿಟ್., ಮತ್ತು ಭಾಷಾಶಾಸ್ತ್ರ, ಭಾಷಾಂತರ, ಾತ್ಮಕ ಧರ್ಮಗಳ ಅಧ್ಯಯನಗಳಲ್ಲಿ ಡಿಪ್ಲೊಮಾ ಕನ್ನಡದಲ್ಲಿ ಸರ್ಟಿಫಿಕೇಟ್‌ಕೋರ್ಸ್, ಅಲ್ಲದೆ ಭಾಷೆ, ಸಾಹಿತ್ಯ, ಸಂಸ್ಕೃತಿ-ಭಾಷಾಶಾಸ್ತ್ರ ಾದವುಗಳಲ್ಲಿ ಪಿ.ಹೆಚ್‌ಡಿ. ಅಭ್ಯಾಸಕ್ರಮವನ್ನು ಿಸಲಾಗಿದೆ.

ದ್ಯಾರ್ಥಿಗಳ ದೃಷ್ಟಿಕೋನವನ್ನು ವಿಸ್ತೃತಗೊಳಿಸ ಗ ಅವರಿಗೆ ಜಾಗತಿಕ ಸಾಹಿತ್ಯ, ಜಾಗತಿಕ ತೌಲನಿಕ ಸಾಹಿತ್ಯ, ಭಾಷಾಶಾಸ್ತ್ರ, ಜನಪದ ತ್ಯ, ಶಾಸನ ಸಾಹಿತ್ಯ ಮುಂತಾದವುಗಳನ್ನು ಕಲಿಸುವುದು. ಸಾಹಿತ್ಯ ಸಮಾಜಶಾಸ್ತ್ರ, ಮಾನವ ಶಾಸ್ತ್ರಗಳ ಅಧ್ಯಯನ, ಸಂಶೋಧನೆಗಳಿಗೆ ಪೋಷಕವೂ ಅವಶ್ಯಕವೂ ಆಗಿರುವ ಭಾಷಾಶಾಸ್ತ್ರದ ಸ್ಥೂಲ ಸೂಕ್ಷ್ಮಗಳನ್ನು ತಿಳಿಸುವುದು, ಭಾರತೀಯ ಸಾಹಿತ್ಯಗಳ ಬಗೆಗೆ ಸಮಗ್ರ ಹಾಗೂ ತೌಲನಿಕ ತಿಳುವಳಿಕೆಯನ್ನು ಮಾಡಿಕೊಡುವುದು. ವಿಜ್ಞಾನವೇ ಮೊದಲಾದ ಇತರ ವಿಷಯಗಳ ಪದವೀಧರರಿಗೆ ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಗಳ ಪರಿಜ್ಞಾನವನ್ನುಂಟುಮಾಡಿಕೊಡುವುದು. ದೇಶ ಭಾಷೆಗಳ ಹಿರಿಮೆ - ಗರಿಮೆಗಳನ್ನು ಪರಭಾಷೆಯಲ್ಲಿ ವ್ಯಕ್ತಪಡಿಸುವುದು, ಆ ಭಾಷೆಗಳ ಸತ್ವ ಸೊಗಸುಗಳನ್ನು ನಮ್ಮ ಭಾಷೆಗೆ ಭಟ್ಟಿ ಇಳಿಸುವುದಕ್ಕೋಸ್ಕರ ಶಾಸ್ತ್ರೀಯ ಹಾಗೂ ಸುವ್ಯವಸ್ಥಿತ ರೀತಿಯ ಭಾಷಾಂತರ ತರಬೇತಿಯನ್ನು ಕೊಡುವುದು. ಕನ್ನಡ ಸಾಹಿತ್ಯ, ಸಂಸ್ಕೃತಿಗಳನ್ನು ಪೋಷಿಸಿದ ಜೈನ - ವೀರಶೈವ - ವೈದಿಕ ಧರ್ಮಗಳ ತತ್ವಗಳನ್ನು ಜಾಗತಿಕ ಧರ್ಮಗಳ ಹಿನ್ನೆಲೆಯಲ್ಲಿ ಅಭ್ಯಸಿಸುವುದು. ಕನ್ನಡ ಭಾಷೇತರರಿಗೆ ಶೀಘ್ರಕಾಲದಲ್ಲಿ ಭಾಷಾಶಾಸ್ತ್ರ ತತ್ವಕ್ಕನುಸರಿಸಿ ಕನ್ನಡವನ್ನು ಕಲಿಸುವುದು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಭಾಷಾಶಾಸ್ತ್ರ ಮುಂತಾದವುಗಳಲ್ಲಿ ಪಿ.ಹೆಚ್‌ಡಿ. ಅಧ್ಯಯನ ನೀಡುವುದು–ಇವು ಮೇಲ್ಕಾಣಿಸಿದ ಅಭ್ಯಾಸಕ್ರಮದ ಪರಮ ಉದ್ದೇಶಗಳಾಗಿವೆ.

ಮುಂದಿನ ಗುರಿ

ಇವಲ್ಲದೆ ಅಧ್ಯಯನಸಂಸ್ಥೆ ಬೆಳೆದಂತೆಲ್ಲ ತೌಲನಿಕ ಸಾಹಿತ್ಯದಲ್ಲಿ ಎಂ.ಎ., ದಕ್ಷಿಣ ಭಾರತದ ಸಾಂಸ್ಕೃತಿಕ ಅಧ್ಯಯನದಲ್ಲಿ ಎಂ.ಎ., ಜನಪದ ಸಾಹಿತ್ಯದಲ್ಲಿ ಎಂ.ಎ., ಪತ್ರಿಕಾ ವ್ಯವಸಾಯದಲ್ಲಿ ಡಿಪ್ಲೊಮಾ, ಮುದ್ರಣ, ಶೀಘ್ರಲಿಪಿ, ಗ್ರಂಥಪ್ರಕಾಶನ ಮುಂತಾದ ವೃತ್ತಿ ಶಿಕ್ಷಣಗಳಲ್ಲಿ ಸರ್ಟಿಫಿಕೇಟ್ ಕೋರ್ಸ್–ಇತ್ಯಾದಿ ಹೊಸ ಹೊಸ ಶಿಕ್ಷಣ ಕ್ರಮಗಳನ್ನು ಪ್ರಾರಂಭಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ.

ಸಂಶೋಧನೆಗೆ ಮಹತ್ವಸ್ಥಾನ

ಈ ಸಂಸ್ಥೆಯ ಬೃಹತ್ ವಿಭಾಗವೆಂದರೆ ಸಂಶೋಧನೆಗೆ ಸಂಬಂಧಿಸಿದ್ದು. ಸಾಹಿತ್ಯ, ಸಂಸ್ಕೃತಿ ಹಾಗೂ ಭಾಷೆಗಳಲ್ಲಿ ವ್ಯಾಪಕವಾದ ಸಂಶೋಧನೆ ನಡೆಸುವ ದೃಷ್ಟಿಯಿಂದ ಅದರಲ್ಲಿ ಸಾಹಿತ್ಯ – ಸಂಸ್ಕೃತಿ – ಭಾಷೆ ಎಂಬ ಮೂರು ಉಪವಿಭಾಗಗಳನ್ನು ಕಲ್ಪಿಸಿಕೊಳ್ಳಲಾಗಿದೆ.

೧

ಕನ್ನಡದಲ್ಲಿ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಹಾಗೂ ಜನಪದ ಸಾಹಿತ್ಯಗಳ ಅಪಾರ ಭಂಡಾರವಿದೆ. ಈ ಸಾಹಿತ್ಯ ವಿಭಾಗಗಳಲ್ಲಿ ಸುವ್ಯವಸ್ಥಿತವಾದ ಸಂಶೋಧನೆ ನಡೆಸುವುದರ ಸಲುವಾಗಿ. ಜೊತೆಗೆ ವೈಜ್ಞಾನಿಕ ಸಾಹಿತ್ಯದ ಬೆಳೆಯನ್ನು ಬೆಳೆಸುವುದರ ಪ್ರಯುಕ್ತ ಸಾಹಿತ್ಯ ಸಂಶೋಧನಾ ಶಾಖೆಯನ್ನು ರೂಪಿಸಲಾಗಿದೆ. ಕನ್ನಡ ಅಧ್ಯಯನ ಸಂಸ್ಥೆಗಳಲ್ಲಿ ನಡೆಯಬೇಕಾದ ಸಂಶೋಧನ ಶಾಖೆಗಳಲ್ಲಿ ಇದಕ್ಕೆ ಅಗ್ರಪೀಠ ಸಲ್ಲುತ್ತದೆ. ೧೫೦೦ ವರುಷಗಳ ಕನ್ನಡ ಸಾಹಿತ್ಯದಲ್ಲಿ ಹಳಗನ್ನಡ, ನಡುಗನ್ನಡ ಅಪ್ರಕಟಿತ ಗ್ರಂಥರಾಶಿ ಅಪಾರ. ಅವುಗಳನ್ನು ಸಂಶೋಧಿಸಿ, ಶಾಸ್ತ್ರೀಯವಾಗಿ ಪರಿಷ್ಕರಿಸಿ ಪ್ರಕಟಿಸುವುದು ಅವಶ್ಯ. ಈ ದಿಶೆಯಲ್ಲಿ ಈಗಾಗಲೇ ಕಾರ್ಯ ನಡೆದು ಕೆಲವು ಉತ್ತಮ ಗ್ರಂಥಗಳು ಅಚ್ಚಾಗಿವೆ. ಇನ್ನುಮುಂದೆ ಈ ಕಾರ್ಯ ಬೃಹತ್ ಪ್ರಮಾಣದಲ್ಲಿ ನಡೆದು ಉತ್ತಮೋತ್ತಮ ಕೃತಿರತ್ನಗಳನ್ನು ಕವಿಕಾವ್ಯ ಮಾಲೆ ಎಂಬ ಶೀರ್ಷಿಕೆಯಲ್ಲಿ ಬೆಳಕಿಗೆ ತರಬೇಕಾಗಿದೆ.

ವಚನ ಸಾಹಿತ್ಯ

ಸಾಹಿತ್ಯ ಸಂಶೋಧನೆಯಲ್ಲಿ ದ್ವಿತೀಯಸ್ಥಾನ ವಚನ ಸಾಹಿತ್ಯ ಸಂಶೋಧನೆಗೆ ಸಲ್ಲುತ್ತದೆ. ವಿಶ್ವಸಾಹಿತ್ಯಕ್ಕೆ ಕನ್ನಡದ ಉನ್ನತ ಕಾಣಿಕೆಯನ್ನಿತ್ತ ಈ ಸಾಹಿತ್ಯದ ಬಹುಭಾಗ ಇನ್ನೂ ಬೆಳಕು ಕಾಣದೇ ಅಜ್ಞಾತವಾಸದಲ್ಲಿದ್ದು ಹುಳು ಹುಪ್ಪಡಿಗಳ ಬಾಯಿಗೆ ತುತ್ತಾಗ ತೊಡಗಿದೆ. ಕಾರಣ ಸಮಗ್ರ ವಚನವಾಙ್ಮಯ ಸಂಶೋಧನ, ಸಂಸ್ಕರಣ ಪ್ರಕಟಣ ಶಾಖೆಯೊಂದನ್ನು ಈ ಸಂಸ್ಥೆಯಲ್ಲಿ ಈಗಾಗಲೇ ಪ್ರಾರಂಭಿಸಿ ಅಲ್ಪಾವಧಿಯಲ್ಲಿಯೇ ಸು. ೫೦೦೦ ಹಸ್ತಪ್ರತಿಗಳನ್ನು ಸಂಗ್ರಹಿಸಿ ಕೆಲವು ಮಹತ್ವದ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸಲಾಗಿದೆ. ಅಲ್ಲದೆ ಇನ್ನುಮುಂದೆ ಈ ಕಾರ್ಯಕ್ಷೇತ್ರವನ್ನು ವಿಸ್ತಾರಗೊಳಿಸಿ ವಚನಗ್ರಂಥಗಳ ನೂತನ ಸಂಸ್ಕರಣಗಳನ್ನು ಪ್ರಕಟಿಸುವುದರ ಜೊತೆಗೆ ಆ ವಚನಗಳನ್ನು ಕುರಿತು ಬರೆದ ಪ್ರಾಚೀನ ವ್ಯಾಖ್ಯಾನಗಳನ್ನೂ ಪ್ರಕಟಿಸುವುದು. ಮತ್ತೆ ಇಂದು ಸುಲಭವಾದ ರೀತಿಯಲ್ಲಿ ವ್ಯಾಖ್ಯಾನ ಬರೆಯುವುದು. ಮಾಡಬೇಕಾದ ಕಾರ್ಯದ ಜೊತೆಗೆ ವಚನಗಳ ಪದವಾಕ್ಯ ಸಮುಚ್ಚಯಕೋಶ, ಪಾರಿಭಾಷಿಕ ಶಬ್ದಕೋಶ ಮುಂತಾದವುಗಳನ್ನು ನಿರ್ಮಿಸುವ, ಭಾರತೀಯ ಹಾಗೂ ಇತರ ಭಾಷೆಗಳಿಗೆ ವಚನಗಳನ್ನು ಭಾಷಾಂತರಿಸುವ ಕಾರ್ಯವು ಅಗತ್ಯವಾಗಿ ನಡೆಯಬೇಕಾಗಿದೆ.

ಶಿವಶರಣರ ವಚನಗಳಂತೆ ಹರಿದಾಸರ ಕೀರ್ತನೆ, ಸುಳಾದಿ ಉಗಾಭೋಗಗಳಿಂದ ಕನ್ನಡ ಸಾಹಿತ್ಯ ಸಂಪತ್ತು ವೃದ್ಧಿಗೊಂಡಿದೆ. ದಾಸ ಸಾಹಿತ್ಯದ ಬಹುಭಾಗ ಶಾಸ್ತ್ರೀಯವಾಗಿ ಪರಿಷ್ಕರಣ ಹೊಂದಿ ಪ್ರಕಟವಾಗಿಲ್ಲ. ಬೃಹತ್ ಪ್ರಮಾಣದಲ್ಲಿ ಸಂಗ್ರಹವಾಗಿಲ್ಲ. ಕಾರಣ ಈ ಸಂಸ್ಥೆಯಲ್ಲಿ ದಾಸಸಾಹಿತ್ಯದ ಶಾಖೆಯೊಂದನ್ನು ನಿರ್ಮಿಸಿ ಆ ಸಾಹಿತ್ಯದ ಸಂಗ್ರಹ ಪರಿಷ್ಕರಣ ಹಾಗೂ ಪ್ರಕಟಣ ವಿಭಾಗದ ಕಾರ್ಯವನ್ನು ನಡೆಸಲಾಗಿದೆ.

ಮೇಲ್ಕಾಣಿಸಿದ ವಿವಿಧ ಶಾಖೆಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳನ್ನು ಸಂಗ್ರಹಿಸಲು ಹಸ್ತಪ್ರತಿ ಭಂಡಾರವೊಂದನ್ನು ತೆರೆಯಲಾಗಿದೆ. ಈಗಾಗಲೇ ಆದರಲ್ಲಿ ಸಂಗ್ರಹಿಸಿಟ್ಟ ಹಸ್ತಪ್ರತಿಗಳ ಸಂಖ್ಯೆ ಸುಮಾರು ೫,೦೦೦ಕ್ಕೂ ಮಿಗಿಲು. ಈ ಭಂಡಾರ ನಮ್ಮ ವಿಶ್ವವಿದ್ಯಾಲಯದ ಅಮೂಲ್ಯ ಸೊತ್ತಾಗಿದೆ. ಇದನ್ನು ಇನ್ನೂ ವಿಸ್ತಾರಗೊಳಿಸಿ ಪ್ರತಿಗಳ ವರ್ಗೀಕರಣ ಮಾಡಿ ವರ್ಣನಾತ್ಮಕ ಸೂಚಿ ಗ್ರಂಥಗಳನ್ನು ಪ್ರಕಟಿಸುವ ಕಾರ್ಯವನ್ನು ಕೈಕೊಳ್ಳಬೇಕಾಗಿದೆ.

ನಿತ್ಯ ಪರಿವರ್ತನಶೀಲವಾದ ಕನ್ನಡ ಸಾಹಿತ್ಯ ತನ್ನ ಹಳೆಯ ಪರೆಯನ್ನು ಕಳಚಿ ಕಳೆದ ಅರ್ಧ ಶತಮಾನದಲ್ಲಿ ವಿವಿಧ ಮುಖವಾಗಿ ಬೆಳೆಯುತ್ತ ಬಂದಿದೆ. ಪಾಶ್ಚಾತ್ಯ ಸಾಹಿತ್ಯದ ಸಂಪರ್ಕದಿಂದ ಹೊಸ ಹೊಸ ಸಾಹಿತ್ಯ ಪ್ರಕಾರಗಳನ್ನು ನಿರ್ಮಿಸಿಕೊಂಡಿದೆ. ಕಾವ್ಯ, ಕಥೆ, ಕಾದಂಬರಿ, ನಾಟಕ ಮುಂತಾದ ಕ್ಷೇತ್ರಗಳಲ್ಲಿ ಕೃಷಿ ಅಧಿಕ ಪ್ರಮಾಣದಲ್ಲಿ ನಡೆಯತೊಡಗಿದೆ. ಅಲ್ಲದೆ ಪಾಶ್ಚಾತ್ಯ ಪದ್ಧತಿಯ ವಿಮರ್ಶೆಯೂ ಇಲ್ಲಿ ಮೈದೋರಿದೆ. ಹೀಗೆ ಸೃಷ್ಟಿಗೊಳ್ಳುತ್ತಿರುವ ಹೊಸ ಸಾಹಿತ್ಯಕ್ಕೆ ವಿಶ್ವವಿದ್ಯಾಲಯ ಸರಿಯಾದ ಮಾರ್ಗದರ್ಶನ ಮಾಡಿ ಆ ಸಾಹಿತ್ಯದ ಅಧ್ಯಯನಕ್ಕೆ ಶಿಕ್ಷಣ ಕ್ರಮದಲ್ಲಿ ಅನುವು ಮಾಡಿಕೊಡಬೇಕೆಂದು ಅದರ ವಿವೇಚನೆಯ ಬಗೆಗೆ ಕಾರ್ಯ ನಡೆಸಬೇಕು ; ವಿಮರ್ಶೆ ತತ್ವಗಳ ಅಧ್ಯಯನ ನಡೆಸಬೇಕು.

ವಿಮರ್ಶೆಯ ಮಹತ್ವ

ವಿಮರ್ಶೆಯು ಮೌಲಿಕ ತತ್ವಗಳ ದೃಷ್ಟಿಯಿಂದ ಭರತಖಂಡ ಜಗತ್ತಿಗೆ ಅಪೂರ್ವವಾದ ಕಾಣಿಕೆಯನ್ನು ಸಲ್ಲಿ

ಆದರಂತೆ ಪಾಶ್ಚಾತ್ಯ ದೇಶಗಳಲ್ಲಿಯೂ ವಿಮರ್ಶಾ ಪರಂಪರೆ ಬಹು ಕಾಲದಿಂದಲೂ ನಡೆದುಬಂದಿದೆ. ...ಗಳೆಲ್ಲ ಕನ್ನಡದಲ್ಲಿ ನಿರೂಪಿತವಾಗಬೇಕು. ಅಲ್ಲದೆ ...ಳ ತೌಲನಿಕ ಅಧ್ಯಯನ ನಡೆದು ಪರಸ್ಪರ ಸಂಬಂಧ ...ಯ ಕಾರ್ಯ ನಡೆಯಬೇಕು. ಇದರಿಂದ ವಿಮ... ಕ್ಷೇತ್ರಕ್ಕೆ ವಿನೂತನ ಕಾಣಿಕೆ ಸಲ್ಲಿಸಿದಂತಾಗು... ಕನ್ನಡದಲ್ಲಿ ವಿಮರ್ಶಾತತ್ವವನ್ನು ಕುರಿತ ಸಾಹಿತ್ಯ ...ರಳ. ಆದುದರಿಂದ ಈ ಕಾರ್ಯವನ್ನು ಕನ್ನಡ ...ಯನ ಸಂಸ್ಥೆಯಲ್ಲಿ ವ್ಯವಸ್ಥಿತವಾಗಿ ಕೈಗೊಳ್ಳಬೇಕಾ...

...ನವನ ಸಾಂಸ್ಕೃತಿಕ ವಿಕಾಸನನ್ನು ತಿಳಿಯಪಡಿಸುವ ... ಸಾಮಗ್ರಿಗಳಲ್ಲಿ ಜನಪದ ಸಾಹಿತ್ಯವು ಮಹತ್ತರ ಸ್ಥಾನವನ್ನು ಪಡೆದಿದೆ. ಇದರ ಮಹತ್ತನ್ನರಿತ ...ತ್ಯ ವಿಶ್ವವಿದ್ಯಾಲಯಗಳು ಜನಪದದ ಸಮಗ್ರ ...ಯನ ನಡೆಸುತ್ತಲಿವೆ. ಕರ್ನಾಟಕ ವಿಶ್ವವಿದ್ಯಾಲಯ ...ಯೂ ಈಗಾಗಲೇ ಜನಪದ ಸಾಹಿತ್ಯದ ಅಧ್ಯಯನವು ... ಮಟ್ಟದಲ್ಲಿ ನಡೆದಿದೆ. ಈಗ ಅದು ಕೇವಲ ಎರಡು ...ಗಳಿಗೆ ಮಾತ್ರ ಸೀಮಿತವಾಗಿದ್ದುದು ಇನ್ನು ... ವಿಸ್ತರಗೊಳ್ಳುವದು ಅವಶ್ಯವಿದೆ.

...ದ ಸಾಹಿತ್ಯ

...ಲವಾದ ಜನಪದ ಸಾಹಿತ್ಯದ ಸಂಗ್ರಹ ಕಾರ್ಯ ...ರೆಗೆ ನಡೆದುದು ಅತ್ಯಲ್ಪ. ನಾಗರಿಕತೆಯ ...ವ, ಪರಿಣಾಮದ ತೀವ್ರತೆಗೊಳಗಾಗಿ ಇಂದು ಹಳ್ಳಿ ...ರೊಂದು ದಿಸೆಯತ್ತ ಸಾಗತೊಡಗಿವೆ. ಅದಕ್ಕಾಗಿ ... ಬಗೆಯ ಜನಪದ ಹಾಡುಗಳು ಕೇಳದಾಗಿವೆ. ... ನಮ್ಮ ಸಂಸ್ಕೃತಿಯ ಈ ಅಮೂಲ್ಯ ಸೊತ್ತು ಜನ ... ಸ್ಮೃತಿಯಿಂದ ಅಳಿದು ಹೋಗುವ ಮೊದಲೇ ...ನ್ನು ಧ್ವನಿಮುದ್ರಿಸಿಕೊಂಡು, ಬರೆದುಕೊಂಡು ...ಕೊಳ್ಳುವುದು ಆದ್ಯ ಕರ್ತವ್ಯ. ಅದಕ್ಕಾಗಿ ... ಅಧ್ಯಯನ ಸಂಸ್ಥೆಯಲ್ಲಿ ಜನಪದ ಶಾಖೆ ...ನ್ನು ನಿರ್ಮಿಸಿ ಅದರ ಮುಖಾಂತರ ಜನಪದ ಕಥೆ, ... ಯಕ್ಷಗಾನ ಬಯಲಾಟ ಇತ್ಯಾದಿ ವಿವಿಧ ...ಗಳನ್ನೆಲ್ಲ ಸಂಗ್ರಹಿಸಿ, ಪರಿಷ್ಕರಿಸಿ, ಪ್ರಕಟಿಸುವ ...ವನ್ನು ತೀವ್ರಗತಿಯಿಂದ ಕೈಗೊಳ್ಳಲಾಗಿದೆ. ಅದರ ... ಜಾನಪದ ಸಾಮಗ್ರಿಗಳನ್ನು ಸಂಗ್ರಹಿಸುವುದರ ...ಗಿ ಜನಪದ ವಸ್ತುಭಾಂಡಾರವನ್ನು ತೆರೆದು ವೈಶಿಷ್ಟ್ಯಪೂರ್ಣವಾದ ವಸ್ತುಗಳನ್ನು ಸಂಗ್ರಹಿಸುವ ಕಾರ್ಯವನ್ನು ಕೈಕೊಂಡಿದೆ.

ವೈಜ್ಞಾನಿಕ ಸಾಹಿತ್ಯ ನಿರ್ಮಿತಿಯ ಅಗತ್ಯ

ಕನ್ನಡ ಭಾಷೆ ಜಗತ್ತಿನ ಹಿರಿಯ ಭಾಷೆಗಳ ಸಾಲಿನಲ್ಲಿ ನಿಲ್ಲಲು ಅರ್ಹತೆ ಪಡೆಯಬೇಕಾದರೆ ಅದರಲ್ಲಿ ವೈಜ್ಞಾನಿಕ ಸಾಹಿತ್ಯ ನಿರ್ಮಿತಿ ಅತ್ಯಗತ್ಯ. ಆ ಕಾರ್ಯ ಮೌಲಿಕ ವೈಜ್ಞಾನಿಕ ಗ್ರಂಥಗಳ ಭಾಷಾಂತರ, ಸ್ವತಂತ್ರ ಕೃತಿಗಳ ರಚನೆ, ಪರಿಭಾಷಾ ನಿರ್ಮಿತಿ ಈ ದಿಶೆಯಲ್ಲಿ ನಡೆಯಬೇಕು. ಭೌತಶಾಸ್ತ್ರ, ರಸಾಯನ ಶಾಸ್ತ್ರ, ಪ್ರಾಣಿಶಾಸ್ತ್ರ ಮುಂತಾದ ಸ್ವಾಭಾವಿಕಶಾಸ್ತ್ರ, ಅರ್ಥಶಾಸ್ತ್ರ, ರಸಾಯನ ಶಾಸ್ತ್ರ, ಸಮಾಜ ಶಾಸ್ತ್ರ, ರಾಜ್ಯಶಾಸ್ತ್ರ ಮುಂತಾದ ಸಾಮಾಜಿಕ ಶಾಸ್ತ್ರ ತಾಂತ್ರಿಕ ಶಾಸ್ತ್ರ ಇತ್ಯಾದಿ ಶಾಸ್ತ್ರ ಕ್ಷೇತ್ರಗಳಲ್ಲಿ ಮೌಲಿಕ ಕೃತಿಗಳು ಇಂಗ್ಲಿಷ್ ಮೊದಲಾದ ವಿದೇಶ ಭಾಷೆಗಳಲ್ಲಿ ಹೇರಳವಾಗಿ ನಿರ್ಮಾಣವಾಗಿವೆ. ಅವು ಕನ್ನಡಕ್ಕೆ ಪರಿವರ್ತನಗೊಳ್ಳದಿದ್ದರೆ ನಮ್ಮ ಭಾಷೆಯಲ್ಲಿ ಈ ಶಾಸ್ತ್ರಗಳ ಅಭಿವೃದ್ಧಿಯಾಗಲಾರದು. ಆದುದರಿಂದ ಅವುಗಳ ಭಾಷಾಂತರ ಕಾರ್ಯ ಮೊದಲು ನಡೆಯಬೇಕು. ಅದಕ್ಕೆ ಪೋಷಕವಾದ ವಿಜ್ಞಾನ ವಿಶ್ವಕೋಶ, ವಿಜ್ಞಾನಿಗಳ ಚರಿತ್ರ ಕೋಶ ಕನ್ನಡದಲ್ಲಿ ರಚನೆಗೊಳ್ಳಬೇಕು. ಭಾಷಾಂತರವಲ್ಲದೆ ವೈಜ್ಞಾನಿಕ ಸ್ವತಂತ್ರ ಗ್ರಂಥಗಳು ನಿರ್ಮಾಣಗೊಳ್ಳಬೇಕು. ಅದರ ಅಭಿವ್ಯಕ್ತಿಗೆ ಸಮರ್ಥವಾಗುವಂತೆ ಕನ್ನಡ ಭಾಷೆ ಹದಗೊಳ್ಳಬೇಕು. ಶಾಲೆ ಕಾಲೇಜುಗಳಲ್ಲಿ ವೈಜ್ಞಾನಿಕ ವಿಷಯ ಬೋಧನೆ ಕನ್ನಡದಲ್ಲಿಯೇ ನಡೆಯಬೇಕು. ಅದಕ್ಕಾಗಿ ಸಮರ್ಥರಾದ ಅಧ್ಯಾಪಕರನ್ನು ಸಿದ್ಧಗೊಳಿಸಬೇಕು. ಇಂಗ್ಲಿಷ್ ಮಾಧ್ಯಮದಿಂದ ಕನ್ನಡ ಮಾಧ್ಯಮಕ್ಕೆ ಪರಿವರ್ತನೆ ಹೊಂದಲು ಅವಶ್ಯಕವಾದ ಸಾಹಿತ್ಯರಚನೆಯನ್ನೂ, ಭಾಷಾಭಿವೃದ್ಧಿಯನ್ನೂ ಪೂರೈಸಬೇಕು. ಈ ಎಲ್ಲ ಕಾರ್ಯಗಳನ್ನು ನೆರವೇರಿಸಲು ವೈಜ್ಞಾನಿಕ ಸಾಹಿತ್ಯ ಶಾಖೆಯೊಂದನ್ನು ಕಲ್ಪಿಸಲಾಗಿದೆ.

ಕನ್ನಡದಲ್ಲಿ ಪಠ್ಯಪುಸ್ತಕಗಳು

ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಅಭಿವೃದ್ಧಿಗಾಗಿ ವಿವಿಧ ತರಗತಿಗಳಿಗೆ ಬೇಕಾಗುವ ಪಠ್ಯಪುಸ್ತಕಗಳನ್ನು ಸಿದ್ಧಪಡಿಸಲು ಈ ಸಂಸ್ಥೆಯ ಆಶ್ರಯದಲ್ಲಿ ಪಠ್ಯಪುಸ್ತಕ ನಿರ್ದೇಶನಾಲಯ ಒಂದನ್ನು ಸ್ಥಾಪಿಸಿ ಈಗಾಗಲೇ

ಪಿ.ಯು.ಸಿ. ಬಿ. ಎ. ಭಾಗ–೧ ವರ್ಗಗಳಿಗೆ ಬೇಕಾಗುವ ಎಲ್ಲ ಸಾಹಿತ್ಯ–ಕಲೆ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಪಠ್ಯಪುಸ್ತಕಗಳನ್ನು ಪ್ರಕಟಿಸಲಾಗಿದೆ. ಅಲ್ಲದೆ ಪದವೀ ತರಗತಿಗಳಿಗೆ ಬೇಕಾಗುವ ಪಠ್ಯಗಳ ರಚನಾಕಾರ್ಯವೂ ಮುಕ್ತಾಯ ಹಂತದಲ್ಲಿದೆ.

ಬೇರೆ ಭಾಷೆಗಳಿಗೆ ತರ್ಜುಮೆಯಾಗಬೇಕು

ಕನ್ನಡ ಸಾಹಿತ್ಯದಲ್ಲಿ ವಿಶ್ವಸಮ್ಮತವಾದ ವಿಚಾರಗಳು ಹೇರಳವಾಗಿದೆ. ಅದಕ್ಕಾಗಿ ನಮ್ಮ ಸಾಹಿತ್ಯದಲ್ಲಿರುವ ಉನ್ನತೋನ್ನತ ಕೃತಿಗಳನ್ನು ಇಂಗ್ಲಿಷ್, ಫ್ರೆಂಚ್, ರಶಿಯನ್, ಜರ್ಮನ್, ಮೊದಲಾದ ವಿದೇಶಿ ಭಾಷೆಗಳಿಗೂ, ಹಿಂದಿ, ಬಂಗಾಲಿ, ತಮಿಳು ಮುಂತಾದ ದೇಶಭಾಷೆಗಳಿಗೂ ತರ್ಜುಮೆಮಾಡುವುದು ಅತ್ಯವಶ್ಯವಿದೆ. ಇದರಿಂದ ಕನ್ನಡ ಸಾಹಿತ್ಯದ ಘನತೆ, ಸತ್ವ ಅನ್ಯಭಾಷೆಯ ಜನಕ್ಕೆ ವಿದಿತವಾಗುತ್ತದೆ. ಈ ದಿಶೆಯಲ್ಲಿ ಶೂನ್ಯ ಸಂಪಾದನೆ ಹಾಗೂ ಶರಣರ ವಚನಗಳ ಭಾಷಾಂತರ ಕಾರ್ಯ ನಡೆದಿದೆ. ಅದು ಇನ್ನೂ ವಿಸ್ತೃತಗೊಳ್ಳಬೇಕು. ಕನ್ನಡ ತನ್ನ ಕಾಣಿಕೆಯನ್ನು ಜಗತ್ತಿನ ಭಾಷೆಗಳಿಗೆ ಕೊಡುವುದರ ಜೊತೆಗೆ ಇತರ ಭಾಷೆಗಳಿಂದಲೂ ಜ್ಞಾನವನ್ನು ಸ್ವೀಕರಿಸುವುದು ಅಗತ್ಯ. ಇದಕ್ಕಾಗಿ ಪ್ರಪಂಚದ ಹೆಸರಾಂತ ಕವಿಗಳ, ತತ್ವವೇತ್ತರ ಕೃತಿಗಳನ್ನು ಕನ್ನಡದಲ್ಲಿ ಭಾಷಾಂತರಿಸಬೇಕು. ದ್ವಿಗುಣಿತವಾದ ಈ ಕಾರ್ಯಕ್ಕಾಗಿ ಭಾಷಾಂತರದ ಶಾಶ್ವತ ಶಾಖೆಯೊಂದನ್ನು ನಿರ್ಮಿಸುವ ಗುರಿಯನ್ನು ಈ ಸಂಸ್ಥೆ ಇಟ್ಟುಕೊಂಡಿದೆ.

೨

ಅಧ್ಯಯನ ಸಂಸ್ಥೆಯಲ್ಲಿ ನಡೆಯುವ ಅಧ್ಯಾಪನ, ಸಂಶೋಧನಗಳ ಗುರಿ ಸಂಸ್ಕೃತಿಯ ಪ್ರಸಾರ. ಕನ್ನಡ ನೆಲದಲ್ಲಿ ಸಮುದ್ಭವಿಸಿದ ಸಂಸ್ಕೃತಿಯ ಪದರು ಪದರುಗಳನ್ನು ಅರಿದು. ಒರೆದು ನೋಡುವುದು ಈ ಸಂಸ್ಥೆಯ ಒಂದು ಮುಖ್ಯ ಕಾರ್ಯ. ಈ ದೃಷ್ಟಿಯಿಂದ ಕನ್ನಡ ಸಂಸ್ಕೃತಿಯ ಮೂರು ಪ್ರಮುಖ ಶಾಖೆಗಳೆಂದೆನಿಸಿದ ಜೈನ-ವೀರಶೈವ–ಹಾಗೂ ವೈದಿಕ ಧರ್ಮಗಳ ಸಂಶೋಧನೆ, ವಿವೇಚನೆಗಳಿಗಾಗಿ ಒಂದೊಂದು ಸ್ವತಂತ್ರ ವಿಭಾಗಗಳನ್ನು ನಿರ್ಮಿಸಿ ಆಯಾ ವಿಭಾಗಗಳ ಅಡಿಯಲ್ಲಿ ಆ ಧರ್ಮಗಳ ಸಮಗ್ರ ಉತ್ತಮೋತ್ತಮ ಕೃತಿಗಳ ಸಂಗ್ರಹ, ಸಂಶೋಧನ, ಸಂಪಾದನ, ಪ್ರಕಟನ ಕಾರ್ಯ ಕೈಕೊಳ್ಳುವುದು ಆ ಧರ್ಮಗಳ ತತ್ವ ತಿರುಳನ್ನು ಎತ್ತಿ ತೋರಿಸುವುದು ಆಯಾ ಧರ್ಮಗಳ ಪಾರಿಭಾಷಿಕ ವಿಶ್ವಕೋಶಗಳನ್ನು ರಚಿಸುವುದು, ಆ ಧರ್ಮಗಳಲ್ಲಿ ರಚನೆಗಳಿಂದ ಪುರಾಣ ಶಾಸ್ತ್ರ ಮಹಾಕಾವ್ಯಗಳ ಬಗ್ಗೆ ವಿಶೇಷ ಅಧ್ಯಯನ ನಡೆ ಧರ್ಮತತ್ವಗಳನ್ನು ಪ್ರಕಟಪಡಿಸುವುದು, ಆಯಾ ಧರ್ಮಗಳ ಮೇಲೆ ಹೊಸ ಬೆಳಕನ್ನು ಬೀರುವುದು, ಈ ಸ್ವತಂತ್ರ ವಿಭಾಗಗಳ ಮುಖ್ಯ ಉದ್ದೇಶ. ಈಗಾಗಲೆ ಆ ಕಾರ್ಯ ತ್ವರಿತಗತಿಯಲ್ಲಿ ಈ ಸಂಸ್ಥೆಯಲ್ಲಿ ನಡೆದಿದೆ.

ಶಾಸನ ಸಾಹಿತ್ಯ

ಕರ್ನಾಟಕ ಸಂಸ್ಕೃತಿಯ ಸೊಬಗು, ಸೌಂದರ್ಯ ಸತ್ಯಾಂಶಗಳನ್ನು ಎತ್ತಿ ತೋರಿಸುವ ಪರಮ ಸಾಧನಗಳೆಂದರೆ ಶಾಸನಗಳು. ಜೊತೆಗೆ ಕಾವ್ಯ, ಪ್ರವಾಸಿಗಳ ವರದಿ, ಕೈಫಿಯತ್, ಸ್ಥಳಪುರಾಣ, ಜನಪದ ಸಾಹಿತ್ಯ ಇತ್ಯಾದಿಗಳು. ಅದಕ್ಕಾಗಿ ಇವುಗಳನ್ನು ಶೋಧಿಸಿ ಸಂಗ್ರಹಿಸುವುದು, ಅಭ್ಯಸಿಸಿ ಅರಿತುಕೊಳ್ಳುವುದು ನಮ್ಮ ಆದ್ಯ ಕರ್ತವ್ಯ. ಕನ್ನಡ ಶಾಸನಗಳ ಪರಿವೀಕ್ಷಣೆ ಮತ್ತು ಪ್ರಕಟನೆ, ಕನ್ನಡ ಶಾಸನಗಳ ಪದಕೋಶ, ಪದ ಪ್ರಯೋಗಕೋಶ, ಪಾರಿಭಾಷಿಕ ಪದಕೋಶ, ಕನ್ನಡ ಶಾಸನಗಳ ಸೂಚಿ, ಸ್ಥಳನಾಮಸೂಚಿ, ಕಾಲಕ್ರಮ ಸೂಚಿ, ಅರಸು ಮನೆತನ ಸೂಚಿಗಳನ್ನು ತಯಾರಿಸುವುದು. ಕೈಫಿಯತ್ತು, ಪ್ರವಾಸಿಗಳ ವರದಿ, ಸ್ಥಳ ಪುರಾಣಗಳನ್ನು ಸಂಗ್ರಹಿಸುವದು, ಮತ್ತು ಪ್ರಕಟಿಸುವುದು. ಕನ್ನಡ ಮಹಾ ಕಾವ್ಯಗಳ ಪದಪ್ರಯೋಗ ಕೋಶಗಳನ್ನು ರಚಿಸಿ ಪ್ರಕಟಿಸುವುದು. ಕಾವ್ಯ ಮತ್ತು ಶಾಸನಗಳಲ್ಲಿ ಹರಡಿನಿಂತ ಸಾಹಿತ್ಯವನ್ನು ಅಭ್ಯಸಿಸಿ ಸಮಗ್ರ ಮತ್ತು ಸಪ್ರಮಾಣ ಸಾಹಿತ್ಯ ಚರಿತ್ರೆಯನ್ನು ರಚಿಸುವುದು. ಆಮೇಲೆ ಆ ಕಾಲದ ಸಾಮಾಜಿಕ ಸ್ಥಿತಿ ಗತಿಗಳ ಹಿನ್ನೆಲೆಯಲ್ಲಿ ಕವಿ ಚರಿತ್ರೆ, ಕಾವ್ಯ ವಿಮರ್ಶೆಗಳನ್ನು ಸಂಗಮಗೊಳಿಸುತ್ತ ಒಟ್ಟು ಸಾಹಿತ್ಯ ಪ್ರವಾಹದ ಒಲವು ನಿಲವುಗಳನ್ನು ನಿರ್ಧರಿಸಿಕೊಡುವುದು. ಈ ಬೃಹತ್ ಯೋಜನೆಯನ್ನು ಹಮ್ಮಿಕೊಂಡು ಕನ್ನಡ ಸಾಹಿತ್ಯೇತಿಹಾಸವನ್ನು ಹಲವು ಸಂಪುಟಗಳಲ್ಲಿ ಹೊರ ತರುವುದು. ಅಲ್ಲದೆ ಕನ್ನಡ ಲಿಪಿಯ ಉಗಮ ವಿಕಾಸಗಳ ಬಗೆಗೆ ಸಂಶೋಧನೆ ನಡೆಸುವುದು. ಈ ಎಲ್ಲ ಕಾರ್ಯಗಳನ್ನು ನೆರವೇರಿಸಲು ಕನ್ನಡ ಅಧ್ಯಯನ

ಲ್ಲಿ ತಕ್ಕ ಏರ್ಪಾಟು ಮಾಡಬೇಕಾಗಿದೆ.

ಳಿಂದ ಹೊಸ ಬೆಳಕು

ಬದುಕಬೇಕೆಂದು ಸಾಹಿತ್ಯ ನಿರ್ಮಿಸ ಹೊರಟ ತಮ್ಮ ಕಾವ್ಯಗಳಲ್ಲಿ ಪ್ರತ್ಯಕ್ಷ ಇಲ್ಲವೆ ಪರೋಕ್ಷ ಕಾಲೀನ ಧಾರ್ಮಿಕ, ಸಾಮಾಜಿಕ, ರಾಜ ಸ್ಥಿತಿ–ಗತಿಗಳನ್ನು, ಆ ಕಾಲದ ಜನತೆಯ ವಿಚಾರ, ರೀತಿ–ನೀತಿ, ಅಭಿರುಚಿ–ಆದರ್ಶ ವ್ಯಕ್ತಪಡಿಸಿರುತ್ತಾರೆ. ಈ ಕಾರಣಕ್ಕಾಗಿ ಕೃತಿಗಳ ಸಾಂಸ್ಕೃತಿಕ ಅಧ್ಯಯನ ನಡೆಸಿ ಸಂಗತಿಗಳನ್ನು ಸಂಗ್ರಹಿಸಿ ಅಭ್ಯಸಿಸುವದು, ಸ್ಕೃತಿಯ ಮೇಲೆ ಹೊಸ ಬೆಳಕು ಬೀರುವದು ಕಾರ್ಯಗಳಲ್ಲೊಂದಾಗಿದೆ.

೩

ಅಧ್ಯಯನ ಸಂಸ್ಥೆಯ ಪ್ರಮುಖ ವಿಭಾಗ ಭಾಷಾವಿಭಾಗ ಮೂರನೆಯದು. ಸಾಹಿತ್ಯಾ ದೊರೆತ ಹೆಚ್ಚಿನ ಮಹತ್ವ ಇಂದು ಭಾಷಾಭ್ಯಾ ದೊರೆತಿದೆ. ಕನ್ನಡದ ಸರ್ವತೋಮುಖಪ್ರಗತಿ ಗುರಿಯಾಗಿಟ್ಟುಕೊಂಡಿರುವ ಈ ಸಂಸ್ಥೆಯಲ್ಲಿ ಜ್ಞಾನದ ಸೈದ್ಧಾಂತಿಕ ಹಾಗೂ ಅನ್ವಯಿಕ ಗಳು ವಿಶೇಷವಾಗಿ ಕನ್ನಡದಲ್ಲಿ ನಡೆಯುವದು ಗಿದೆ. ಜಗತ್ತಿನ ಅನೇಕ ವಿಶ್ವವಿದ್ಯಾಲಯಗಳಲ್ಲಿ ಸ್ತ್ರಾಭ್ಯಾಸಕ್ಕೆ ಯೋಗ್ಯಸ್ಥಾನ ದೊರಕಿವೆ. ಭಾಷಾ ವೈವಿಧ್ಯವನ್ನು ಹೊಂದಿ ಜಗತ್ತಿನ ಭಾಷಾ ಗಳ ಕಣ್ಮನಗಳನ್ನು ಸೆಳೆದಿದೆ. ಆದರಂತೆ ಕವೂ ಕೂಡ. ಅದಕ್ಕಾಗಿ ಈ ಸಂಸ್ಥೆಯ ಆಶ್ರಯ ಷಾಶಾಸ್ತ್ರದ ಶಾಖೆಯೊಂದನ್ನು ನಿರ್ಮಿಸಲಾಗಿದೆ. ಟುವಟಿಕೆಗಳು ಪ್ರಮುಖವಾಗಿ ಅಧ್ಯಾಪನ ಸಂಶೋಧನ. ಅಧ್ಯಾಪನ ಕ್ಷೇತ್ರದಲ್ಲಿ ಭಾಷಾ ಎಂ. ಎ. ಡಿಪ್ಲೊಮಾ ಇತ್ಯಾದಿ ಶಿಕ್ಷಣ ಕ್ರಮ ಅಧ್ಯಾಪನ ಮತ್ತು ಸಂಶೋಧನ ಕ್ಷೇತ್ರಗಳೆರಡ ದ್ರಾವಿಡ ಭಾಷಾವಿಭಾಗ, ಸಾಮಾನ್ಯಭಾಷಾ ವಿಭಾಗ, ತೌಲನಿಕ ಭಾಷಾ ವಿಜ್ಞಾನ ವಿಭಾಗ, ಸವಿಭಾಗ, ಆಫ್ರಿಕನ್ ಭಾಷಾಭ್ಯಾಸ ವಿಭಾಗ ಎಂಬ ಐದು ವಿಭಾಗಗಳನ್ನು ಮಾಡಲಾಗಿದೆ.

ತುಲನಾತ್ಮಕಾಭ್ಯಾಸ

ದ್ರಾವಿಡ ಭಾಷಾವಿಜ್ಞಾನದಲ್ಲಿ ದ್ರಾವಿಡ ಭಾಷಾ ಪರಿವಾರದ ಸುವ್ಯವಸ್ಥಿತ ಅಭ್ಯಾಸಕ್ಕೆ ಅನುವು ಮಾಡಿಕೊಡುವುದು. ಸಾಮಾನ್ಯ ಭಾಷಾ ವಿಭಾಗದಲ್ಲಿ ಅಧ್ಯಾಪನವನ್ನಲ್ಲದೆ ಸಂಶೋಧನ ಕಾರ್ಯವನ್ನು ಕನ್ನಡ ಭಾಷಾ ಪರಿವೀಕ್ಷಣೆ, ಜನಪದ ಶಬ್ದಕೋಶ ನಿರ್ಮಾಣದ ಜೊತೆಗೆ ಮಾಡುವುದು, ತೌಲನಿಕ ಭಾಷಾವಿಜ್ಞಾನ ವಿಭಾಗದಲ್ಲಿ ಸಂಸ್ಕೃತ–ಪ್ರಾಕೃತ ಭಾಷೆಗಳೊಡನೆ ದ್ರಾವಿಡ ಭಾಷೆಗಳ ಅದರಲ್ಲಿಯೂ ಕನ್ನಡ ಭಾಷೆಯ ಸಂಬಂಧವನ್ನು ತೌಲನಿಕವಾಗಿ ಅಭ್ಯಸಿಸುವುದು. ದ್ವಿಭಾಷಾ ವಿಭಾಗದಲ್ಲಿ ಭಾಷೆ ಭಾಷೆಗಳ ನಡುವೆ ಇರುವ ಪರಸ್ಪರ ಸಂಪರ್ಕ ಪ್ರಭಾವಗಳನ್ನು ಅಭ್ಯಸಿಸುವುದು. ಸ್ವಿಚ್ ಶಾಖೆಯಲ್ಲಿ ಭಾರತದ ಎಲ್ಲ ಭಾಷೆಗಳನ್ನು ಅಲ್ಪಾವಧಿಯಲ್ಲಿ ಕಲಿಸುವ ಏರ್ಪಾಟು ಮಾಡುವುದು ಅವಶ್ಯವಾದ ಕೆಲಸವಾಗಿದೆ.

ಭಾಷೆಗಳ ಸಮರ್ಥ ಅಧ್ಯಾಪನಕ್ಕಾಗಿ ಸಾಮಗ್ರಿಯ ನಿರ್ಮಾಣದ ಅಗತ್ಯವಿದೆ. ಅತಿ ಸಮರ್ಥ ಅಧ್ಯಾಪನ ಸಾಮಗ್ರಿಯೆಂದರೆ ದ್ವಿಭಾಷಾ ವ್ಯಾಕರಣಗಳ ನಿರ್ಮಾಣ. ಕನ್ನಡವನ್ನು ಮುಖ್ಯ ಭಾಷೆಯನ್ನಾಗಿಟ್ಟುಕೊಂಡು ಇತರ ಭಾರತೀಯ ಭಾಷೆಗಳ ಸಂಬಂಧವಾಗಿ ದ್ವಿಭಾಷಾ ವ್ಯಾಕರಣಗಳನ್ನು ಸಿದ್ಧಪಡಿಸಬೇಕು. ಕೇಂದ್ರೀಯ ಇಂಗ್ಲಿಷ್ ಸಂಸ್ಥೆ ಮುಂತಾದ ಕಡೆಗಳಲ್ಲಿ ಈ ರೀತಿಯ ಅಭ್ಯಾಸ ಈಗಾಗಲೇ ನಡೆದಿದೆ. ಅದನ್ನು ನಮ್ಮ ವಿಶ್ವವಿದ್ಯಾಲಯದಲ್ಲಿಯೂ ಜಾರಿಗೆ ತರುವ ಉದ್ದೇಶದಿಂದ ಕನ್ನಡ ಅಧ್ಯಯನ ಸಂಸ್ಥೆಯ ಭಾಷಾಶಾಸ್ತ್ರ ವಿಭಾಗದಲ್ಲಿ ಅದಕ್ಕೆ ವ್ಯವಸ್ಥೆ ಮಾಡಲಾಗಿದೆ. ಅದರಿಂದ ಕನ್ನಡ ಸಂಸ್ಥೆಯ ಪ್ರತಿಷ್ಠೆ ಹೆಚ್ಚುವದರಲ್ಲಿ ಸಂದೇಹವಿಲ್ಲ.

ಯಾವುದೇ ಭಾಷೆಯನ್ನು ಕೇವಲ ಆರು ವಾರಗಳಲ್ಲಿ ಭಾಷಾಶಾಸ್ತ್ರದ ದೃಷ್ಟಿಯಿಂದ ಕಲಿಸಲು ಭಾಷಾ ಪ್ರಯೋಗ ಶಾಲೆಯನ್ನು ಸ್ಥಾಪಿಸುವ ಬಗ್ಗೆ ೧೯೬೬ರಲ್ಲಿ ನಿಯಮಿಸಲ್ಪಟ್ಟ ಕೊಠಾರಿ ಆಯೋಗ ನೀಡಿದ ಸಲಹೆಯನ್ನು ಈಗಾಗಲೇ ಬಳಕೆಯಲ್ಲಿ ತಂದಿದೆ.

ಇತ್ತೀಚಿಗೆ ಸ್ವತಂತ್ರವಾದ ಆಫ್ರಿಕೆಯ ದೇಶಗಳು ಜನತೆಯ ಜೀವನದ ಮಟ್ಟವನ್ನು ಎತ್ತರಿಸಲು ತೀವ್ರ ಪ್ರಯತ್ನ ಮಾಡುತ್ತಲಿವೆ. ಇಂಥ ಪ್ರಯತ್ನಗಳಲ್ಲಿ

ಪ್ರಮುಖ ಸ್ಥಾನ ಶಿಕ್ಷಣಕ್ಕಿದೆ. ಈ ದಿಶೆಯಲ್ಲಿ ಆಫ್ರಿಕಾ ಹಾಗೂ ಭಾರತದ ಸಮಸ್ಯೆಗಳು ಸಮಾನವಾಗಿವೆ. ಆದುದರಿಂದ ಆಫ್ರಿಕೆಯ ಭಾಷೆ, ಸಂಸ್ಕೃತಿ, ಇತಿಹಾಸ ಮುಂತಾದ ವಿಷಯಗಳನ್ನು ಅಭ್ಯಸಿಸಲು ಆಫ್ರಿಕನ್ ಅಭ್ಯಾಸ ವಿಭಾಗ ಅತ್ಯಂತ ಸಕಾಲಿಕವೆನಿಸುತ್ತದೆ. ಈ ಎಲ್ಲ ಕಾರ್ಯಗಳು ಭಾಷಾ ವಿಭಾಗದಲ್ಲಿ ನಡೆಯಬೇಕಾಗಿವೆ; ನಡೆಯುತ್ತ ಬಂದಿವೆ.

ಮೇಲೆ ವಿವರಿಸಿದ ವರ್ತಮಾನ ಹಾಗೂ ಭವಿಷ್ಯದ ಯೋಜನೆಗಳನ್ನು ಈ ಸಂಸ್ಥೆ ಹಮ್ಮಿಕೊಂಡು ಮುನ್ನಡೆದಿದೆ. ಅವು ಕಾರ್ಯರೂಪಕ್ಕಿಳಿದರೆ ಭಾಷಾಭ್ಯಾಸಕ್ಕೆ ಅತ್ಯಂತ ಚಾಲನೆ ಸಿಕ್ಕಂತಾಗುತ್ತದೆ. ಇದರ ಮೂಲಕ ಒಟ್ಟು ಜ್ಞಾನಕ್ಕೆ ಗಣನೀಯ ಪ್ರಮಾಣದ ಜ್ಞಾನವೂ ಸಂದಂತಾಗುತ್ತದೆ.

"ಸಾಹಿತ್ಯವು ಸಮಾಜ ನಿರಪೇಕ್ಷವಲ್ಲ. ವಾಲ್ಮೀಕಿ, ವ್ಯಾಸ, ಕಾಳಿದಾಸ, ಷೇಕ್ಸ್‌ಪಿಯರ್, ಹೋಮರ್, ಗಯಟೆ, ಪಂಪ, ಹರಿಹರ, ಕುಮಾರವ್ಯಾಸ, ರತ್ನಾಕರ, ಪುರಂದರ ದಾಸರು ಹಾಳು ಸಮಾಜದಲ್ಲಿ ಹುಟ್ಟಲಾರರು. ಸಾಮಾಜಿಕ ಮನಃಸ್ಥಿತಿ ಪರಿಸ್ಥಿತಿಗಳಲ್ಲಿ ಜೀವಂತ ಬದಲಾವಣೆ ನಡೆಯುವಾಗಲೇ ಸಾಹಿತ್ಯವು ಜೀವಂತವಾಗುವುದು.

—ದ. ರಾ. ಬೇಂದ್ರೆ

ಸಮಸ್ತ ಕಾರ್ಯಕ್ಷೇತ್ರಗಳಲ್ಲಿಯೂ ಕನ್ನಡ ನಾಡಿಗೆ ಮುನ್ನಡೆಯಿರುವಂತೆ ಅಭ್ಯುದಯ ಸಾಧನೆಮಾಡಿ, ಪ್ರೇಯಸ್ಸು ಶ್ರೇಯಸ್ಸುಗಳೆರಡೂ ಸಮ್ಮಿಳಿತವಾಗಿ ಸೇರಿರುವಂತೆ ಕಾರ್ಯರಂಗವನ್ನು ರೂಪಿಸಿ, ಕಾಲಕ್ರಮದಲ್ಲಿ ಕನ್ನಡ ನಾಡು ಪ್ರಪಂಚಕ್ಕೇ ಆದರ್ಶವಾಗಲನುಕೂಲಿಸುವಂತೆ ನಿರ್ವಂಚನೆಯಿಂದ ನಮ್ಮ ಕರ್ತವ್ಯಗಳನ್ನು ಪಾಲಿಸಿ ಧನ್ಯರಾಗೋಣ! ಮಾನವ ಪೌರುಷ ಭಗವತ್ಪ್ರಸಾದಗಳ ಸಾಮರಸ್ಯದ ಸಿರಿಬೀಡಾದ ಭಾರತೀಯ ನಾಗರಿಕತೆಯು ಮಾನವ ಪೌರುಷ ಪ್ರಧಾನವಾದ ಪಾಶ್ಚಾತ್ಯ ನಾಗರಿಕತೆಗಿಂತಲೂ ಶ್ರೇಷ್ಠವೆಂದು ತೋರಿಸಿ, ಭಾರತಮಾತೆಯು ಅಖಂಡ ಪ್ರಪಂಚಕ್ಕೇ ಶಾಂತಿಭಿಕ್ಷವನ್ನು ಕರುಣಿಸುವುದಕ್ಕೆ ಸಾಧಕವಾಗುವಂತೆ ಈಗಿನಿಂದಲೇ ಯಥಾಶಕ್ತಿಯಾಗಿ ನಮ್ಮ ಭಾಗದ ಸೇವೆಯನ್ನು ಸಮರ್ಪಿಸಿ ಆನಂದಿಸೋಣ!

—ಸಿ. ಕೆ. ವೆಂಕಟರಾಮಯ್ಯ

ಾನಸಗಂಗೋತ್ರಿಯ ಗ್ರಂಥಾಲಯ

ಪಿ. ಕೆ. ಪಾಟೀಲ

ಲಿ

ಸ್ಕೃತಿ, ಕಲೆ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಸೃಜನ
ೀಲ ಚಟುವಟಿಕೆಗಳಿಗೆ ಮೈಸೂರು ರಾಜ್ಯ ಅದ್ವಿ
ು ಸ್ಥಾನ ಪಡೆದಿದೆ. ಕಾಲೇಜುಶಿಕ್ಷಣ ದುರ್ಲಭ
ದ್ದ ಒಂದು ಕಾಲದಲ್ಲಿ ಮೈಸೂರಿನ ಮಹಾರಾಜಾ
ೀಜು (೧೮೩೩) ಮತ್ತು ಬೆಂಗಳೂರಿನ ಸೆಂಟ್ರಲ್
ಲೇಜು (೧೮೫೮)ಗಳು ಸ್ಥಾಪನೆಗೊಂಡು
ನ ವಿದ್ಯಾಸಕ್ತ ತರುಣ ಪೀಳಿಗೆ ಪ್ರಯೋಜನ
ಯುವಂತಾಯಿತು. ಮದ್ರಾಸು ವಿಶ್ವ
್ಯನಿಲಯದ ಅಂಗ ಸಂಸ್ಥೆಗಳಾಗಿದ್ದ ಈ ಎರಡು
ೀಜುಗಳೂ ಬಹುಬೇಗ ಜನಮೆಚ್ಚುಗೆಯನ್ನು ಪಡೆ
ವಿದ್ಯಾರ್ಥಿಗಳಿಗೆ ಯೋಗ್ಯ ಶಿಕ್ಷಣವನ್ನಿತ್ತು ಅನೇಕ
ಭಾವಂತ ವಿದ್ಯಾರ್ಥಿಗಳನ್ನು ಸೃಷ್ಟಿಸುವುದರಲ್ಲಿ
ಂತೆಯನ್ನು ಹೊಂದಿ ದಕ್ಷಿಣ ಭಾರತದಲ್ಲೇ ಉತ್ತಮ
ೀಜುಗಳಾಗಿ ಕೀರ್ತಿವೆತ್ತು ಮೆರೆದವು. ಮೈಸೂರಿ
ದು ವಿಶ್ವವಿದ್ಯಾನಿಲಯದ ಕೊರತೆ ಎಲ್ಲರನ್ನು ಕಾಡು
ವಾಗಲೇ ಆಗ ಮೈಸೂರರಸರಾಗಿದ್ದ ಪೂಜ್ಯ ಶ್ರೀ
ರಾಜ ಒಡೆಯರು, ದಿವಾನರಾಗಿದ್ದ ಕೀರ್ತಿಶೇಷ
ವಿಶ್ವೇಶ್ವರಯ್ಯನವರು ಮೊದಲಾದ ಮಹನೀಯರು
ತೋತ್ಸಾಹದಿಂದ ಕೆಲಸ ಮಾಡಿ ಮೈಸೂರಿಗೊಂದು
ವಿದ್ಯಾನಿಲಯವನ್ನು ದೊರಕಿಸಿಕೊಟ್ಟ ಪುಣ್ಯಶಾಲಿ
ಗಳಾದರು. ನಾಡಿನ ಅನೇಕ ಶಿಕ್ಷಣ ತಜ್ಞರನ್ನು ಕಲೆ ಹಾಕಿ ಅಮೇರಿಕಾ, ಜಪಾನ್ ಮೊದಲಾದ ಮುಂದುವರಿದ ರಾಷ್ಟ್ರಗಳಲ್ಲಿ ವಿಶ್ವವಿದ್ಯಾನಿಲಯಗಳು ಕೆಲಸಮಾಡುವ ರೀತಿ, ಶಿಕ್ಷಣ ಕ್ರಮಗಳನ್ನು ತಿಳಿದುಕೊಂಡು ಬರಲು ಕಳುಹಿಸಿಕೊಡಲಾಯಿತು. ಭಾರತದಲ್ಲಿ ಆ ವೇಳೆಗಾಗಲೇ ಹೆಸರುವಾಸಿಯಾಗಿದ್ದ ಕೆಲವು ವಿಶ್ವವಿದ್ಯಾನಿಲಯಗಳಿಂದಲೂ, ಕೇಂದ್ರ ಸರ್ಕಾರದಿಂದಲೂ ಅನುಭವಿಗಳನ್ನು ಕರೆಸಿ ಹೊಸ ವಿಶ್ವವಿದ್ಯಾನಿಲಯದ ರೂಪ ರೇಷೆಗಳನ್ನು ಸಿದ್ಧಗೊಳಿಸಲಾಯಿತು. ೧೯೧೬ ಜುಲೈ ತಿಂಗಳ ೧೭ರಂದು ಮೈಸೂರು ಶಾಸನ ಮಂಡಲಿಯಲ್ಲಿ ವಿಶ್ವವಿದ್ಯಾನಿಲಯದ ಸ್ಥಾಪನೆಯ ಮಸೂದೆಯು ಅನುಮೋದನೆಗೊಂಡು ಮುಂದೆ ಒಂದು ವಾರದೊಳಗೆ ಮಸೂದೆಗೆ ಮಹಾರಾಜರ ಅಂಕಿತವೂ ಬಿತ್ತು (೧). ಅಂದು ಕೇವಲ ಎರಡು ಕಾಲೇಜುಗಳು ಅಂಗ ಸಂಸ್ಥೆಗಳಾಗಿದ್ದುಕೊಂಡು ವಸತಿ ವಿಶ್ವವಿದ್ಯಾನಿಲಯದ ಮಾದರಿಯಲ್ಲಿ ಪ್ರಾರಂಭಗೊಂಡು, ಮೈಸೂರು ವಿಶ್ವವಿದ್ಯಾನಿಲಯವು ಈಗ ಒಂದು ನೂರ ಹದಿನೈದು ಕಾಲೇಜುಗಳನ್ನೂ, ಇಪ್ಪತ್ತಾರು ಸ್ನಾತಕೋತ್ತರ ವಿಭಾಗಗಳನ್ನೂ, ಒಟ್ಟು ೪,೦೧೦ ಅಧ್ಯಾಪಕರನ್ನೂ ೭೬,೯೬೨ ವಿದ್ಯಾರ್ಥಿಗಳನ್ನೂ ಹೊಂದಿದ್ದು ಒಂದು ಮಹಾ ವಿಶ್ವವಿದ್ಯಾನಿಲಯವೆಂದು ಹೆಸರುವಾಸಿಯಾಗಿದೆ. (೨)

ಎರಡು ದಶಕಗಳಿಂದೀಚೆಗೆ ಕರ್ಣಾಟಕ ವಿಶ್ವವಿದ್ಯಾನಿಲಯ (೧೯೫೦), ಕೃಷಿ ವಿಶ್ವವಿದ್ಯಾನಿಲಯ (೧೯೬೦) ಬೆಂಗಳೂರು ವಿಶ್ವವಿದ್ಯಾನಿಲಯಗಳು (೧೯೬೪) ತೆರೆಯಲ್ಪಟ್ಟವು.

ಗ್ರಂಥಭಂಡಾರ

ವಿಶ್ವವಿದ್ಯಾನಿಲಯದ ಜೀವನಾಡಿಯಾದ ಗ್ರಂಥಾಲಯವು ೧೯೧೮ರಲ್ಲಿ ಕೆಲಸ ಪ್ರಾರಂಭಿಸಿದಾಗ ಒಟ್ಟು ೨,೩೧೧ ಪುಸ್ತಕಗಳಿದ್ದು ಮೊದಲು ಪ್ರಾಚ್ಯ ಮತ್ತು ಸಂಸ್ಕೃತ ಗ್ರಂಥಭಂಡಾರವಿದ್ದ ನಿವೇಶನದಲ್ಲಿ ಪ್ರಾರಂಭವಾಯಿತು. ಆ ವರ್ಷ ಗ್ರಂಥಾಲಯಕ್ಕಾಗಿ ಕೊಂಡ ಪುಸ್ತಕಗಳು ೩.೨೦. ಇನ್ನುಳಿದ ಹೆಚ್ಚಿನ ಪುಸ್ತಕಗಳು ಮಹಾರಾಜಾ ಕಾಲೇಜು ಮತ್ತು ಸರ್ಕಾರದ ಪ್ರಾಚ್ಯ ಮತ್ತು ಸಂಸ್ಕೃತ ಗ್ರಂಥಭಂಡಾರಗಳಿಂದ ವರ್ಗಾಯಿಸಲ್ಪಟ್ಟವು. ಆಗ ಮಹಾರಾಜಾ ಕಾಲೇಜಿನ ಗ್ರಂಥಭಂಡಾರದಲ್ಲಿ ೯,೧೫೦ ಪುಸ್ತಕಗಳೂ, ಸಂಸ್ಕೃತ ಹಾಗೂ ಪ್ರಾಚ್ಯ ಗ್ರಂಥಾಲಯದಲ್ಲಿ ೧೦,೧೯೭ ಪುಸ್ತಕಗಳೂ ಇದ್ದು ಉತ್ತಮವಾಗಿದ್ದವು. ವಿಶ್ವವಿದ್ಯಾನಿಲಯದ ಆವರಣದೊಳಗಿದ್ದ ಈ ಮೂರು ಗ್ರಂಥಭಂಡಾರಗಳು ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಅಧ್ಯಯನ ಮತ್ತು ಅಧ್ಯಾಪನೆಗಳಿಗೆ ಪೂರಕವಾದ ಸಾಧನಗಳಾಗಿದ್ದವು.

ಗ್ರಂಥಾಲಯ ಸಮಿತಿ

ಜ್ಞಾನ ಭಂಡಾರದ ಕೇಂದ್ರ ಬಿಂದುವಾದ ಗ್ರಂಥಾಲಯದ ಕೆಲಸಗಳಲ್ಲಿ ಚ್ಯುತಿ ಬಾರದಂತೆ ಯೋಗ್ಯ ನಿರ್ದೇಶನವನ್ನೀಯಲು, ನಾನಾ ವಿಷಯಗಳಲ್ಲಿ ಪುಸ್ತಕಗಳನ್ನು ಕೊಳ್ಳಲು ಬೇಕಾದ ಆರ್ಥಿಕ ನೆರವನ್ನು ಆಯಾಯ ವಿಭಾಗಗಳಿಗೆ ವಿಧಿಸಲು, ಮತ್ತು ಗ್ರಂಥಭಂಡಾರದಲ್ಲಿ ಪಾಲಿಸಬೇಕಾದ ನಿಯಮಾವಳಿಯನ್ನು ರಚಿಸಲು ಶ್ರೀಗಳಾದ ಡನ್‌ಹ್ಯಾಮ್, ಎನ್. ಎಸ್. ಸುಬ್ಬರಾವ್ ಮತ್ತು ಡಾ|| ರಾಧಾಕುಮುದ್ ಮುಖರ್ಜಿ ಇವರನ್ನೊಳಗೊಂಡ ತ್ರಿಸದಸ್ಯ ಸಮಿತಿಯನ್ನು ನೇಮಿಸಲಾಯಿತು. ಹೀಗೆ ಗೊತ್ತಾದ ಸಮಿತಿಯು ಬಹಳ ದಕ್ಷತೆಯಿಂದ ಕೆಲಸ ಮಾಡಿದುದರ ಫಲವಾಗಿ ಅನೇಕ ಪ್ರೌಢ ನಿಯತ ಕಾಲಿಕೆಗಳು, ಪುಸ್ತಕಗಳು ಗ್ರಂಥಾಲಯಕ್ಕೆ ಬರುವಂತಾಯಿತು. ೧೯೧೮ ಆಗಸ್ಟ್ ತಿಂಗಳ ೮ನೇ ತಾರೀಖಿನಂದು ನಿಯತ ಕಾಲಿಕೆಗಳನ್ನು ಓದುವ ಪ್ರತ್ಯೇಕ ವಾಚನಾಲಯವನ್ನು ತೆರೆಯಲಾಯಿತು. ಇಂದಿಗೂ ಗ್ರಂಥಾಲಯದಲ್ಲಿ ಸಂಶೋಧನಾ ಕಾರ್ಯಗಳಿಗೆ ಉಪಯುಕ್ತವಾಗುವ ಅನೇಕ ನಿಯತಕಾಲಿಕೆಗಳ ಹಳೆಯ ಸಂಪುಟಗಳಿವೆ.

ಗ್ರಂಥಪಾಲಕರ ನೇಮಕ

ಗ್ರಂಥಾಲಯ ಪ್ರಾರಂಭವಾದಾಗಿನಿಂದಲೇ ಅದಕ್ಕೊಬ್ಬ ಗ್ರಂಥಪಾಲಕನನ್ನು ವಿಶ್ವವಿದ್ಯಾಲಯವು ನೇಮಕ ಮಾಡಿರುವುದು ಗ್ರಂಥಾಲಯದ ಪ್ರಗತಿಯ ದೃಷ್ಟಿಯಿಂದ ಪ್ರಶಂಸನೀಯವಾದ ಹೆಜ್ಜೆಯೆನ್ನಬೇಕು. ಶ್ರೀಯುತ ಎನ್. ನಾಗಪ್ಪ ಬಿ.ಎ.ಎಲ್.ಎಲ್.ಬಿ. ಅವರನ್ನು ೧೯೧೬ರ ಫೆಬ್ರವರಿ ೨೯ರಂದು ಪೂರ್ಣಾವಧಿಯ ಗ್ರಂಥಪಾಲಕರಾಗಿ ವಿಶ್ವವಿದ್ಯಾನಿಲಯ ನೇಮಕ ಮಾಡಿತು. (೩) ಶ್ರೀಯುತರನ್ನು ಮದ್ರಾಸ್, ಕಲ್ಕತ್ತ, ಬರೋಡಗಳ ಗ್ರಂಥಾಲಯಗಳನ್ನು ಸಂದರ್ಶಿಸಿ ಅನುಭವವನ್ನು ಪಡೆದುಬರಲು ವಿಶ್ವವಿದ್ಯಾನಿಲಯದ ಖರ್ಚಿನಲ್ಲಿ ಕಳಹಿಸಿತಲ್ಲದೇ ೧೯೧೮ ಜನವರಿ ತಿಂಗಳಲ್ಲಿ ಜರುಗಿದ ಭಾರತೀಯ ಗ್ರಂಥಪಾಲಕರ ಸಮ್ಮೇಳನದಲ್ಲಿ ಭಾಗವಹಿಸಲು ಪ್ರತಿನಿಧಿಯನ್ನಾಗಿ ಕಳಹಿಸಿತು. ಇದೇ ಸಂದರ್ಭ ಶ್ರೀಯುತರು ಬೊಂಬಾಯಿ, ಡೆಲ್ಲಿ, ಲಾಹೋರ್ ಮೊದಲಾದ ಕಡೆಗೂ ಹೋಗಿ ಗ್ರಂಥಾಲಯಗಳನ್ನು ಸಂದರ್ಶಿಸಿ ತಮ್ಮ ಅನುಭವಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯದ ಸೇವೆಯಲ್ಲಿ ವಿನಿಯೋಗಿಸಿದರು. ಇವರ ನಂತರ ಶ್ರೀ ನರಸಿಂಹಮೂರ್ತಿಯವರು ಮುಂದೆ ೧೫ ವರ್ಷಗಳ ದೀರ್ಘಕಾಲ ಗ್ರಂಥಪಾಲಕರಾಗಿ ಅಮೂಲ್ಯ ಸೇವೆ ಸಲ್ಲಿಸಿದರು. ಇವರು ತಮ್ಮ ಸೇವಾವಧಿಯಲ್ಲಿ ಗ್ರಂಥಾಲಯಕ್ಕೆ ಹೆಚ್ಚು ಸಂಖ್ಯೆಯಲ್ಲಿ ಗ್ರಂಥಗಳೂ, ನಿಯತಕಾಲಿಕೆಗಳೂ ಬರುವಂತೆ ಮಾಡಿದರು. ಹೀಗೆ ಒಬ್ಬರ ನಂತರ ಒಬ್ಬರಾಗಿ ಕೆಲವು ಘನತೆವೆತ್ತ ಗ್ರಂಥಪಾಲಕರು ಈ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡಿದ್ದಾರೆ. ಇವರೆಲ್ಲರ ದಕ್ಷತೆ ಹಾಗೂ ಪ್ರಾಮಾಣಿಕ ಸೇವೆಯ ಫಲವಾಗಿ ವಿಶ್ವವಿದ್ಯಾನಿಲಯದ ಗ್ರಂಥಾಲಯವು ದಿನೇದಿನೇ ಪ್ರಗತಿಯತ್ತ ಸಾಗಿತು.

* ಶ್ರೀಯುತ ನಾಗಪ್ಪ (೧೯೧೬) ಎನ್. ನರಸಿಂಹಮೂರ್ತಿ(೧೯೧೮-೧೯೩೩), ಡಾ|| ಎನ್. ನರಸಿಂಹಯ್ಯ

---

* ಬೇರೆ ಬೇರೆ ದಾಖಲೆಗಳಿಂದ ತಿಳಿದು ಬಂದ ಮೇರೆಗೆ ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಈವರೆಗೆ ಸುಮಾರು ೯ ಜನ ಗ್ರಂಥಪಾಲಕರು ನೇಮಕಗೊಂಡಿದ್ದಾರೆ.

(೧೯೩೪–೧೯೪೧), ಜಿ. ಹನುಮಂತರಾವ್ (೧೯೪೨-೧೯೫೨). ಕೆ. ಎಸ್. ಮೂರ್ತಿ (೧೯೫೩–೧೯೫೯), ತ. ಸು. ಶಾಮರಾವ್ (೧೯೬೦–೧೯೬೧) ಎಚ್. ಎಸ್. ಅಣ್ಣಯ್ಯಗೌಡ (೧೯೬೨-೬೩)ಕೆ. ಬಾಲಸುಂದರ ಗುಪ್ತ (೧೯೬೪-೬೫), ಕೆ. ಎಸ್. ದೇಶಪಾಂಡೆ (೧೯೬೫ ಅಕ್ಟೋಬರದಿಂದ ೧೯೬೭ರ ವರೆಗೆ) ಮುಂತಾದ ಮಹನೀಯರುಗಳು ಗ್ರಂಥಪಾಲಕರಾಗಿ ದುಡಿದು ಗ್ರಂಥಾಲಯದ ಪ್ರಗತಿಗೆ ಕಾರಣರಾಗಿದ್ದಾರೆ. ೧೯೬೭ ಅಕ್ಟೋಬರ್ ತಿಂಗಳಿಂದ ಶ್ರೀ ಪಿ. ಕೆ. ಪಾಟೀಲರು ಗ್ರಂಥಪಾಲಕರಾಗಿ ನೇಮಕವಾಗಿದ್ದಾರೆ.

ನೂತನ ಕಟ್ಟಡ

ಗ್ರಂಥಾಲಯವು ತ್ವರಿತವಾಗಿ ಬೆಳೆಯುತ್ತಿದ್ದಂತೆ ನಿಯತಕಾಲಿಕೆಗಳು, ಪಠ್ಯಪುಸ್ತಕಗಳು, ಪರಾಮರ್ಶನ ಗ್ರಂಥಗಳು ಮುಂತಾದವುಗಳನ್ನು ಉಪಯುಕ್ತರೀತಿಯಲ್ಲಿ ಜೋಡಿಸಲು, ಮತ್ತು ಅವುಗಳನ್ನು ಓದಲು ಉತ್ತಮ ಸೌಲಭ್ಯವುಳ್ಳ ವಾಚನಾಲಯಗಳು ಮೊದಲಾದುವುಗಳಿಗೆ ಸ್ಥಳಾಭಾವ ತೀವ್ರವಾಗುತ್ತಿತ್ತು. ವಿಶ್ವವಿದ್ಯಾನಿಲಯ ಅನುದಾನ ಆಯೋಗ, ಸರಕಾರ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಆರ್ಥಿಕ ನೆರವಿನಿಂದ ಸುಮಾರು ಹದಿನಾಲ್ಕು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಆಧುನಿಕ ಸೌಕರ್ಯಗಳುಳ್ಳ ಭವ್ಯವಾದ ನಿವೇಶನವನ್ನು ವಿಶ್ವವಿದ್ಯಾನಿಲಯದ ಹೊಸ ಆವರಣದ ಮಾನಸಗಂಗೊತ್ರಿಯಲ್ಲಿ ಕಟ್ಟಿಸಲು ನಿರ್ಧರಿಸಲಾಯಿತು. ೧೯೬೦ ಜುಲೈ ೧೧ರಂದು ಯು.ಜಿ.ಸಿ. ಅಧ್ಯಕ್ಷರಾಗಿದ್ದ ಶ್ರೀ ಸಿ. ಡಿ. ದೇಶಮುಖ್ ಅವರು ಕಟ್ಟಡದ ಶಿಲಾನ್ಯಾಸ ಮಾಡಿದರು. ಮುಂದೆ ೧೯೬೫ರ ಹೊತ್ತಿಗೆ ಕಟ್ಟಡದ ಕೆಲಸ ಪೂರ್ಣಗೊಂಡು ಡಿಸೆಂಬರ್ ಏಳರಂದು ರಾಷ್ಟ್ರಾಧ್ಯಕ್ಷ ಡಾ. ರಾಧಾಕೃಷ್ಣನ್ ಅವರಿಂದ ಕಟ್ಟಡದ ಪ್ರವೇಶೋತ್ಸವವೂ ನೆರವೇರಿತು. ೬೭,೪೫೦ ಚದರ ಅಡಿ ವಿಸ್ತೀರ್ಣದ ಮೇಲುಪಾಯವುಳ್ಳ ಈ ಬೃಹತ್ ಕಟ್ಟಡದಲ್ಲಿ ಸುಮಾರು ೨,೩೬,೦೦೦ ಪುಸ್ತಕಗಳನ್ನು ಜೋಡಿಸಿಡಬಹುದಾಗಿದೆ. ಸುಮಾರು ೪೨೦ ಜನ ಓದುಗರೂ, ೨೪ ಮಂದಿ ಸಂಶೋಧಕರೂ ಅಭ್ಯಾಸ ನಡೆಸಲು ಸ್ಥಳಾವಕಾಶವನ್ನೊದಗಿಸಲಾಗಿದೆ. ಕಟ್ಟಡದ ಪೀಠೋಪಕರಣಗಳಿಗಾಗಿ ಸುಮಾರು ೫,೪೫,೦೦೦ ರೂಪಾಯಿಗಳನ್ನು ವೆಚ್ಚಮಾಡಲಾಗಿದೆ. ಕಟ್ಟಡವು ತುಂಬ ಸೊಗಸಾಗಿದ್ದು ವಿದ್ಯಾಸಕ್ತ ಜನರಿಗೆ ಅಭ್ಯಾಸ ನಡೆಸಲು ಅನುಕೂಲ ವಾತಾವರಣವಿದೆ. ಗೋಡೆಗಳಲ್ಲಿ ತೂಗುಹಾಕಿದ ಸುಂದರ ಕಲಾಚಿತ್ರಗಳು ಕಟ್ಟಡದ ಒಳಗಿನ ಸೌಂದರ್ಯಕ್ಕೆ ಮತ್ತಷ್ಟು ಮೆರಗು ಕೊಡುತ್ತವೆ. ಕಳಿಂಗ ಯುದ್ಧಾನಂತರ ಸಾಮ್ರಾಟ್ ಅಶೋಕನ ಮನಃಪರಿವರ್ತನೆಗೊಳ್ಳುವ ಸನ್ನಿವೇಶ, ಭಾರತೀಯ ನಾಗರಿಕತೆಯ ಚರಿತ್ರೆಯ ಹಿನ್ನೆಲೆ ಇವನ್ನು ಕಮನೀಯವಾಗಿ ಬರೆದಿರುವ ಪದ್ಮಶ್ರೀ ಕೆ. ಕೆ. ಹೆಬ್ಬಾರರ ಎರಡು ಚಿತ್ರಗಳಂತೂ ಗ್ರಂಥಾಲಯಕ್ಕೆ ಬರುವ ಎಲ್ಲ ಓದುಗರನ್ನೂ, ಸಂದರ್ಶಕರನ್ನೂ ಆಕರ್ಷಿಸುತ್ತಿವೆ.

ಆಡಳಿತ ಯಂತ್ರರಚನೆ

ಜ್ಞಾನದ ವಿವಿಧ ಪ್ರಕಾರಗಳ ಗ್ರಂಥಗಳನ್ನು ಕ್ರಮವಾಗಿ ಜೋಡಿಸಲು; ಗ್ರಂಥ ಸೂಚಿ, ವರ್ಗೀಕರಣ ಇತ್ಯಾದಿ ತಾಂತ್ರಿಕ ಕೆಲಸಗಳನ್ನು ನಿರ್ವಹಿಸಲು ೧. ಸಾಮಾಜಿಕ ಶಾಸ್ತ್ರ ವಿಭಾಗ, ೨. ಮಾನಸಿಕ ಶಾಸ್ತ್ರ ವಿಭಾಗ, ೩. ಪ್ರಕೃತಿ ವಿಜ್ಞಾನ ವಿಭಾಗ ಮತ್ತು, ೪. ಕನ್ನಡ ವಿಭಾಗ ವೆಂಬುದಾಗಿ ನಾಲ್ಕು ಪ್ರತ್ಯೇಕ ಪುಸ್ತಕ ವಿಭಾಗಗಳನ್ನು ತೆರೆಯಲಾಗಿದೆ. ಪ್ರತಿಯೊಂದು ವಿಭಾಗಗಳಲ್ಲೂ ಇಬ್ಬರು ಗ್ರಂಥಾಲಯ ಶಾಸ್ತ್ರದಲ್ಲಿ ಪದವಿ ಪಡೆದಿರುವ ಸಹಾಯ ಗ್ರಂಥಪಾಲಕರುಗಳಿದ್ದಾರೆ. ಕನ್ನಡ ವಿಭಾಗದಲ್ಲಿ ಮಾತ್ರ ಒಬ್ಬ ಸಹಾಯಕ ಗ್ರಂಥಪಾಲಕರಿದ್ದು ತಾಂತ್ರಿಕ ಕೆಲಸಗಳಲ್ಲಿ ಉಪಗ್ರಂಥಪಾಲಕರೊಬ್ಬರು ಇವರೊಂದಿಗೆ ಸಹಕರಿಸುತ್ತಿದ್ದಾರೆ. ಪ್ರತಿಯೊಂದು ವಿಭಾಗಗಳ ಕೆಲಸಗಳಲ್ಲಿ ಇವರಿಗೆ ಸಹಾಯಕರಾಗಿ ಇತರ ನೌಕರ ವರ್ಗದವರು ನೆರವಾಗುತ್ತಿದ್ದಾರೆ. ಈ ಕೆಳಗಿನ ವಿಷಯ ಸೂಚಕ ಪಟ್ಟಿಯು ವಿಶ್ವವಿದ್ಯಾನಿಲಯದ ವಿವಿಧ ಆಡಳಿತ ವಿಭಾಗಗಳ ರಚನಾ ಸ್ವರೂಪವನ್ನು ತೋರಿಸುತ್ತದೆ.

ಆಡಳಿತ ರಚನಾವಿಧಾನದ ವಿಷಯಸೂಚಕ ಪಟ್ಟಿ

ಪ್ರಧಾನ ಗ್ರಂಥಪಾಲಕ

ಪದವಿ ಪೂರ್ವ ಗ್ರಂಥಾಲಯ — ಕೇಂದ್ರ ಗ್ರಂಥಾಲಯ — ಸ್ನಾತಕೋತ್ತರ ಶಿಕ್ಷಣ ಕೇಂದ್ರ ಗ್ರಂಥಾಲಯ ಮಂಗಳೂರು

ಓದುಗರ ಸೇವೆ — ಗ್ರಂಥ ಸಂಗ್ರಹ ವಿಭಾಗ — ತಾಂತ್ರಿಕ ವಿಭಾಗ — ಕನ್ನಡ ವಿಭಾಗ — ನಿಯತ ಕಾಲಿಕೆಗಳ ವಿಭಾಗ — ಕಚೇರಿ

ಗ್ರಂಥವಿತರಣೆ — ಪ್ರಲೇಖ ಮತ್ತು ಪರಾಮರ್ಶನ — ಗ್ರಂಥಸಂರಕ್ಷಣ — ಪಠ್ಯಪುಸ್ತಕ ವಾಚನಾಲಯ

ಓದುಗರ ಸೇವೆ

ಓದುಗರ ತೃಪ್ತಿಯೇ ನಮ್ಮ ಧ್ಯೇಯ. ಗ್ರಂಥಾಲಯಕ್ಕೆ ಬರುವ ಎಲ್ಲ ಓದುಗರಿಗೂ ಅವರು ಓದಲು, ನೋಡಲು ಬಯಸುವ ಪುಸ್ತಕಗಳು ಅತ್ಯಲ್ಪ ಸಮಯದಲ್ಲೇ ಅವರ ಕೈಸೇರಬೇಕು. ಪುಸ್ತಕಗಳ ಇರುವಿಕೆಯನ್ನು ಗ್ರಂಥಪಟ್ಟಿಯಲ್ಲಿ ಹುಡುಕುವ ಕ್ರಮ ; ಪುಸ್ತಕ ವಿಭಾಗಗಳಲ್ಲಿ ಗ್ರಂಥಗಳನ್ನು ಜೋಡಿಸಿಟ್ಟಿರುವ ವಿಧಾನ; ಪುಸ್ತಕಗಳನ್ನು ಎರವಲು ಪಡೆಯುವ ವಿಧಾನ ; ನಾನಾ ವಿಷಯಗಳಲ್ಲಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸೂಕ್ತ ಮಾರ್ಗದರ್ಶನ ; ಸಂಶೋಧಕರಿಗೆ, ಅಧ್ಯಾಪಕರಿಗೆ ಅವರು ಬಯಸುವ (ಅಥವಾ ಅದಕ್ಕೂ ಮೊದಲು) ಯಾವುದೇ ವಿಷಯದ ಮೇಲೆ ಪ್ರಕಟವಾಗಿರುವ ಪುಸ್ತಕಗಳು, ಲೇಖನಗಳು ಮುಂತಾದವುಗಳನ್ನು ಹುಡುಕಿ ತೆಗೆದು ವಾಙ್ಮಯ ದರ್ಶಕಗಳನ್ನು ತಯಾರಿಸಿ ಸಂಶೋಧನಾ ಕಾರ್ಯದಲ್ಲಿ ನೆರವಾಗುವುದು ಈ ವಿಭಾಗದ ಪ್ರಾಮುಖ್ಯ ಕೆಲಸಗಳು. ಪ್ರತಿ ವರ್ಷವೂ ಓದುಗರ ಸಂಖ್ಯೆ, ಗ್ರಂಥಾಲಯಕ್ಕೆ ಪುಸ್ತಕಗಳಿಗಾಗಿ ಬರುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ೧೯೬೫-೬೬ರಲ್ಲಿ ಗ್ರಂಥಾಲಯಕ್ಕೆ ಬಂದ ಸದಸ್ಯರ ಮತ್ತು ಸಂದರ್ಶಕರ ಒಟ್ಟು ಸಂಖ್ಯೆ ೩೧, ೮೮೬ ಇದ್ದರೆ ೭೧-೭೨ರ ಸಾಲಿನಲ್ಲಿ ೧, ೧೪, ೬೯೭ ಮಂದಿ ಗ್ರಂಥಾಲಯವನ್ನು ಸಂದರ್ಶಿಸಿ ಅಪಾರ ಗ್ರಂಥಸಂಪತ್ತಿನ ಪ್ರಯೋಜನ ಪಡೆದಿದ್ದಾರೆ. ಪರಿಶಿಷ್ಟದಲ್ಲಿ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ೧೯೬೫ರಿಂದ ಈ ಏಳು ವರ್ಷಗಳ ಅವಧಿಯಲ್ಲಿ ಗ್ರಂಥಾಲಯವನ್ನು ಸಂದರ್ಶಿಸಿದ ಓದುಗರ ಸಂಖ್ಯೆ ಗಣನೀಯವಾಗಿ ಏರುತ್ತಿರುವುದನ್ನು ತಿಳಿಯಬಹುದು. ಪರಿಶಿಷ್ಟ ೧. ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು, ಪದವಿ ಪೂರ್ವ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ಎಲ್ಲ ಅಂಗ ಸಂಸ್ಥೆಗಳ ಅಧ್ಯಾಪಕರು ರಿಜಿಸ್ಟರ್ಡ್ ಪದವೀಧರರು ಗ್ರಂಥಾಲಯದ ಸದಸ್ಯತ್ವವನ್ನು ಪಡೆಯುತ್ತಾರೆ. ವರ್ಷ ವರ್ಷ ಈ ಸಂಖ್ಯೆ ಹೆಚ್ಚುತ್ತಲೇ ಇದೆ. ೧೯೬೫ರಿಂದ ೧೯೭೨ರ ವರೆಗಿನ ಗ್ರಂಥಾಲಯದ ಸದಸ್ಯಬಲವನ್ನೂ ಪರಿಶಿಷ್ಟದ ಕೊಡಲಾಗಿದೆ (ಪರಿಶಿಷ್ಟ ೨) ಗ್ರಂಥಾಲಯದ ಯಾವ ಸದಸ್ಯರನ್ನೂ ಕಡೆಗಣಿಸದೆ ಎಲ್ಲರಿಗೂ ಸಮರ್ಪಕ ಸೇವಾ ಸೌಲಭ್ಯವನ್ನೊದಗಿಸಲು ಗ್ರಂಥಾಲಯದ ನೌಕರವರ್ಗದವರು ಆಸಕ್ತಿವಹಿಸುತ್ತಾರೆ.

ಗ್ರಂಥಸಂಗ್ರಹ ವಿಭಾಗ

ವಿಶ್ವವಿದ್ಯಾನಿಲಯದ ಗ್ರಂಥಾಲಯವು ಹುಟ್ಟಿದಂದಿನಿಂದ ಪುಸ್ತಕಗಳನ್ನೂ, ಪತ್ರಿಕೆಗಳನ್ನೂ ಪೀಠೋಪಕರಣಗಳನ್ನು ಕೊಳ್ಳಲು ಸಾಕಷ್ಟು ಆರ್ಥಿಕ ನೆರವು ಸಿಗುತ್ತಿದೆ. ಪ್ರಥಮ ವರ್ಷದಲ್ಲೇ ೨೦,೦೦೦ ರೂಪಾಯಿಗಳ ಮಾಮೂಲು ಆರ್ಥಿಕ ನೆರವಲ್ಲದೆ ಪೀಠೋಪಕರಣಗಳನ್ನು ಕೊಳ್ಳುವುದಕ್ಕಾಗಿ ೧೩,೦೦೦ ರೂಪಾಯಿಗಳ ವಿಶೇಷ ನೆರವನ್ನು ನೀಡಿತ್ತು (೫) ಮಾನಸಗಂಗೋತ್ರಿಯ ಪುಸ್ತಕ ಭಂಡಾರದಲ್ಲಿ ೧೯೭೦ - ೭೧ರ ವರ್ಷಾವಧಿಯಲ್ಲಿ ೨, ೩೦, ೫೭೩ ಗ್ರಂಥಗಳ ಸಂಗ್ರಹವಿದ್ದು ಈ ವರ್ಷ ಎರಡೂವರೆ ಲಕ್ಷಕ್ಕೂ ಮೀರಬಹುದೆಂದು ನಿರೀಕ್ಷಿಸಲಾಗಿದೆ. ವಿಶ್ವವಿದ್ಯಾನಿಲಯದ ನಾನಾ ವಿಭಾಗಗಳಿಗೆ ಬೋಧನೆ ಹಾಗೂ ಸಂಶೋಧನೆಗಳಿಗೆ ಅಗತ್ಯವಿರುವ ಗ್ರಂಥಗಳನ್ನು ಗ್ರಂಥಾ

ಲಯಕ್ಕೆ ಕೊಳ್ಳಲಾಗುತ್ತದೆ. ವಿಶ್ವವಿದ್ಯಾನಿಲಯ, ಸರ್ಕಾರ ಹಾಗೂ ವಿಶ್ವವಿದ್ಯಾನಿಲಯ ಅನುದಾನ ಆಯೋಗ (ಯು.ಜಿ.ಸಿ.)ಗಳಿಂದ ಬರುವ ಆರ್ಥಿಕ ನೆರವುಗಳಿಂದ ವರ್ಷ ವರ್ಷವೂ ಸುಮಾರು ೧೫,೦೦೦ಕ್ಕೂ ಮೇಲ್ಪಟ್ಟು ಪುಸ್ತಕಗಳನ್ನು ಕೊಳ್ಳಲಾಗುತ್ತಿದೆ. ೧೯೭೦ ೭೧ರ ಸಾಲಿನಲ್ಲಿ ಈ ಪ್ರಮಾಣ ಇನ್ನೂ ಹೆಚ್ಚು ಆಗಿರುವುದನ್ನು ಪರಿಶಿಷ್ಟೆಯಲ್ಲಿ ತಿಳಿದುಕೊಳ್ಳಬಹುದು (ಪರಿಶಿಷ್ಟೆ ೩). ಇವಲ್ಲದೆ ಅನೇಕ ಸಂಘ ಸಂಸ್ಥೆಗಳಿಂದ, ಉದಾರ ಮಹನೀಯರುಗಳಿಂದ, ಪ್ರಕಾಶಕರಿಂದ ಉತ್ತಾರವಾಗಿ ಬರುವ ಪುಸ್ತಕಗಳ ಸಂಖ್ಯೆಯೂ ಗಮನಾರ್ಹವಾಗಿದೆ. ೧೯೬೫ರಲ್ಲಿ ೧, ೪೭, ೫೧೪ ಪುಸ್ತಕಗಳೂ ಹಾಗೂ ನಿಯತ ಕಾಲಿಕೆಗಳ ಹಳೇ ಸಂಪುಟಗಳ ಸಂಗ್ರಹವಿದ್ದು ಕೇವಲ ಆರೇ ವರ್ಷಗಳಲ್ಲಿ ಶೇಕಡ ೫೬ರಷ್ಟು ಹೆಚ್ಚಾಗಿರುವುದು ಗ್ರಂಥಾಲಯದ ಬೆಳವಣಿಗೆಗೆ ಸಾಕ್ಷಿಯಾಗಿದೆ (ಪರಿಶಿಷ್ಟ ೪). ಪುಸ್ತಕಗಳ ಸಂಗ್ರಹದಲ್ಲಿ ಅಭಿವೃದ್ಧಿಯಾದರೆ ಮಾತ್ರ ಸಾಲದು. ಅವನ್ನು ಉಪಯೋಗಿಸುವ ಓದುಗರೂ ಹೆಚ್ಚಾಗಬೇಕು. ೧೯೬೫ರಿಂದ ೧೯೭೨ರ ಹೊತ್ತಿಗೆ ಗ್ರಂಥಾಲಯದ ಗ್ರಂಥಗಳ ಉಪಯೋಗವು ಶೇಕಡ ೧೧೫೦ರಷ್ಟು ಹೆಚ್ಚಿರುವುದು ತುಂಬಾ ಅಭಿಮಾನದ ಸಂಗತಿ (ಪರಿಶಿಷ್ಟ ೫). ಜ್ಞಾನದ ಬೆಳೆ ದಿನವೂ ಅಖಂಡವಾಗುತ್ತಿರುವ ಈ ಕಾಲದಲ್ಲಿ ಯಾವ ಗ್ರಂಥಾಲಯವೂ ತನ್ನ ಸಂಗ್ರಹವನ್ನು ಪರಿಪೂರ್ಣವೆಂದು ಭಾವಿಸಲಾಗದು. ಬರ್ನಾಡೆ ಟೋನಿಯವರು ಹೇಳುವಂತೆ ಹೆಚ್ಚಿನ ಗ್ರಂಥಾಲಯಗಳಲ್ಲಿ ಕಂಡುಬರುವ ಮುಖ್ಯ ದೋಷವೆಂದರೆ ಗ್ರಂಥಾಲಯಗಳು ಪರಸ್ಪರ ಹೊಂದಾಣಿಕೆಯಿಂದ ತಮ್ಮ ಗ್ರಂಥಸಂಗ್ರಹವನ್ನು ಹೆಚ್ಚಿಸಿಕೊಳ್ಳುವ ಮನೋಭಾವವನ್ನು ತಳೆದಿರುವುದು ಪರಿಣಾಮವಾಗಿ ನಮ್ಮ ಹೆಚ್ಚಿನ ಗ್ರಂಥಾಲಯಗಳಲ್ಲಿ ಕೆಲವೊಂದು ವಿಷಯಗಳಲ್ಲಿ ಮಾತ್ರ ಉತ್ತಮ ಸಂಗ್ರಹಗಳಿದ್ದು ಮಿಕ್ಕ ವಿಷಯಗಳಲ್ಲಿ ಸಾಕಷ್ಟು ಗ್ರಂಥ ಸಂಗ್ರಹವಿರುವುದಿಲ್ಲ. ಟೋನಿಯವರ ಅಭಿಪ್ರಾಯದಂತೆ ಗ್ರಂಥಾಲಯಗಳು ತಮ್ಮ ಸ್ವಂತ ಗ್ರಂಥಸಂಗ್ರಹದಲ್ಲಿರುವ ಕುಂದುಕೊರತೆಗಳನ್ನು ನಿಯಮಿತ ಅವಧಿಗೊಮ್ಮೆಯಾದರೂ ಪರಿಶೀಲಿಸಬೇಕು. ಪುಸ್ತಕ ಸಂಗ್ರಹ ಕಡಿಮೆ ಇದ್ದ ವಿಭಾಗಗಳಿಗೆ ಇನ್ನಷ್ಟು ಪುಸ್ತಕಗಳನ್ನು ಕೊಳ್ಳಲು ವಿಶ್ವವಿದ್ಯಾನಿಲಯಗಳು ಆಗಾಗ್ಗೆ ವಿಶೇಷ ಆರ್ಥಿಕ ನೆರವು (ಅಡಿಷನಲ್ ಗ್ರಾಂಟ್ಸ್) ಗಳನ್ನೀಯಬೇಕು (೬).

ತಾಂತ್ರಿಕ ವಿಭಾಗ

ಪುಸ್ತಕಗಳು ಹಾಗೂ ಇನ್ನಿತರ ವಾಚನ ಸಾಮಗ್ರಿಗಳು ಗ್ರಂಥಾಲಯಕ್ಕೆ ಬಂದೊಡನೆ ಅವನ್ನು ಡ್ಯೂಯಿ ದಶಮಾನ ಪದ್ಧತಿಯ ಪ್ರಕಾರ ವಿಂಗಡಿಸಿ ವರ್ಗೀಕರಣಾಂಕವನ್ನು ಪುಸ್ತಕಗಳ ಮೇಲೆ ಕಾಣಿಸಿ ಪ್ರತಿಯೊಂದು ಪುಸ್ತಕಗಳಿಗೂ ದರ್ಶಕ ಪತ್ರಗಳನ್ನು ರಚಿಸಬೇಕು. ಈ ಕೆಲಸಗಳು ಗ್ರಂಥಾಲಯ ವಿಜ್ಞಾನದಲ್ಲಿ ತರಬೇತು ಪಡೆದ ಅನುಭವಿಗಳಿಂದ ಮಾಡಲ್ಪಡಬೇಕಾಗುತ್ತದೆ. ಗ್ರಂಥಾಲಯದ ಈ ವಿಭಾಗದಲ್ಲಿ ಇಬ್ಬರು ಸಹಾಯಕ ಗ್ರಂಥಪಾಲಕರಲ್ಲದೆ ಈ ಕೆಲಸಗಳಲ್ಲಿ ಇವರೊಡನೆ ಸಹಕರಿಸಲು ಸಾಕಷ್ಟು ನೌಕರವರ್ಗದವರೂ ಇದ್ದಾರೆ. ೧೯೬೮ರಿಂದ ಈಗಿನವರೆಗೆ ಪ್ರತಿ ವರ್ಷ ಈ ವಿಭಾಗದಲ್ಲಿ ಎಷ್ಟು ಪುಸ್ತಕಗಳು ವರ್ಗೀಕರಿಸಲ್ಪಟ್ಟವೆ ಮತ್ತು ಎಷ್ಟು ಪುಸ್ತಕಗಳಿವೆ ದರ್ಶಕ ಪತ್ರಗಳನ್ನು ತಯಾರಿಸಲಾಗಿದೆ ಎಂಬುದನ್ನು ಪರಿಶಿಷ್ಟದ ಮೂಲಕ ಕಾಣಿಸಿದೆ (ಪರಿಶಿಷ್ಟ ೬).

ಕನ್ನಡ ವಿಭಾಗ

ಮೈಸೂರು ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವ ಭಾಷಣದಲ್ಲಿ ಶ್ರೀ ಕೃಷ್ಣರಾಜ ಒಡೆಯರು ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯಬೇಕು, ಆ ದಿಸೆಯಲ್ಲಿ ಮಹತ್ತರ ಕೆಲಸಗಳಾಗಬೇಕಾದುದು ಅವಶ್ಯವೆಂದಿದ್ದಾರೆ. (7) ಕಳೆದ ೫೦ ವರ್ಷಗಳಲ್ಲಿ ಕನ್ನಡ ಸಾರಸ್ವತ ಲೋಕಕ್ಕೆ ಶ್ರೀಗಳಾದ ಬಿ. ಎಂ. ಶ್ರೀ ಶ್ರೀಕಂಠಯ್ಯ, ತೀ. ನಂ. ಶ್ರೀಕಂಠಯ್ಯ, ಕು.ವೆಂ.ಪು. ಮೊದಲಾದ ಮಹಾನುಭಾವರು ತಮ್ಮ ವಿದ್ವತ್ಪೂರ್ಣ ಕೃತಿಗಳ ಮೂಲಕ ಅಮೂಲ್ಯ ಕೊಡುಗೆಗಳನ್ನಿತ್ತಿದ್ದಾರೆ. ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಕನ್ನಡ ಭಾಷೆಯಲ್ಲಿ ಪ್ರಕಟವಾದ ಎಲ್ಲ ಪುಸ್ತಕಗಳನ್ನು ಸಂಗ್ರಹಿಸುವ ಪ್ರಯತ್ನ ನಡೆಯುತ್ತಿದೆ. ೧೯೭೦–೭೧ರ ವರ್ಷಾಂತ್ಯದಲ್ಲಿ ೨೨,೦೦೦ ಕನ್ನಡ ಪುಸ್ತಕಗಳು ಸಂಗ್ರಹವಾಗಿದ್ದವು. (8). ಇವಲ್ಲದೆ ಮಹಾರಾಜಾ ಕಾಲೇಜಿನ ಪದವಿ ಪೂರ್ವ ಗ್ರಂಥಾಲಯದಲ್ಲಿ ೧೦,೦೦೦ಕ್ಕೂ ಹೆಚ್ಚು ಕನ್ನಡ ಗ್ರಂಥಗಳಿವೆ. ಮಾನಸಗಂಗೋತ್ರಿಯ ಪುಸ್ತಕ ಭಂಡಾರದಲ್ಲಿ ೧೯೬೭ ಅಕ್ಟೋಬರ್‌ದಿಂದ ಪ್ರತ್ಯೇಕವಾದ ಕನ್ನಡ ವಿಭಾ

ಗವನ್ನೇ ತೆರೆಯಲಾಗಿದೆ. ೧೯೬೮ರಿಂದ ೧೯೭೨ರ ವರೆಗೆ ಕನ್ನಡ ವಿಭಾಗದಲ್ಲಿ ಗ್ರಂಥ ಸಂಗ್ರಹಣ. ಓದುಗರ ಸಂಖ್ಯೆ, ಪುಸ್ತಕ ವಿತರಣೆಗಳಲ್ಲಾದ ಪ್ರಗತಿಯ ಅಂಕಿ ಅಂಶಗಳನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ. ೧೯೭೧–೭೨ರ ಸಾಲಿನಲ್ಲಿ ೨೭,೦೯೪ ಓದುಗರು ಈ ವಿಭಾಗದ ಪ್ರಯೋಜನ ಪಡೆದಿದ್ದಾರೆ.* ಈ ವಿಭಾಗದಲ್ಲಿ ಕಳೆದ ವರ್ಷಾಂತ್ಯಕ್ಕೆ ೨೩,೭೨೦ ಪುಸ್ತಕಗಳ ಸಂಗ್ರಹವಿತ್ತು. ಕನ್ನಡ ವಿಭಾಗದಲ್ಲಿ ಪ್ರಲೇಖ ಹಾಗೂ ಪರಾಮರ್ಶನಸೇವಾ ಸೌಲಭ್ಯಗಳನ್ನೊದಗಿಸಲಾಗಿದೆ. ಕಳೆದ ವರ್ಷ ೪೦ ಸಂಶೋಧನಾ ಮಟ್ಟದ ಪರಾಮರ್ಶನ ಪ್ರಶ್ನೆಗಳನ್ನುತ್ತರಿಸಲಾಗಿದೆ. ಕಾದಂಬರಿ ಸಾರ್ವಭೌಮ ದಿ ವಂ ಗ ತ ಅ.ನ.ಕೃ. ಮತ್ತು ನಾಡಿನ ಹಿರಿಯ ಪತ್ರಿಕೋದ್ಯಮಿ ಶ್ರೀ ತಿ.ತಾ. ಶರ್ಮ ಇವರುಗಳ ಕೃತಿ, ವಿಮರ್ಶಾ ಲೇಖನಗಳು ಭಾಷಣ ಇತ್ಯಾದಿಗಳ ವಾಙ್ಮಯ ದರ್ಶಕವನ್ನು ಈ ವಿಭಾಗ ತಯಾರಿಸಿದೆ. ಕನ್ನಡದಲ್ಲಿ ಇದುವರೆಗೆ ಅಚ್ಚಾಗಿರುವ ಸುಮಾರು ೪೦ ಅಭಿನಂದನ ಗ್ರಂಥಗಳಲ್ಲಿನ ಲೇಖನಗಳ ಸೂಚಿಯನ್ನು ಸಂಶೋಧಕರಿಗೆ ಉಪಯುಕ್ತವಾಗುವ ರೀತಿಯಲ್ಲಿ ತಯಾರಿಸಿ ಪ್ರಕಟಿಸಿದೆ. ೧೮೧೭ರಿಂದ ಇದುವರೆಗೆ ಕನ್ನಡದಲ್ಲಿ ಪ್ರಕಟವಾಗಿರುವ ಗ್ರಂಥಗಳ ವಿವರಣಾತ್ಮಕ ಸೂಚಿಯನ್ನು ಪ್ರಕಟಿಸುವ ಕಾರ್ಯವನ್ನು ವಿಶ್ವವಿದ್ಯಾನಿಲಯವು ಕೈಗೊಂಡಿದ್ದು ಈಗಾಗಲೇ ಶುದ್ಧವಿಜ್ಞಾನಗಳ ಕನ್ನಡ ಗ್ರಂಥಸೂಚಿಯು ಪ್ರಕಟವಾಗಿದೆ. ಆರು ಸಂಪುಟಗಳಲ್ಲಿ ಪ್ರಕಟವಾಗಲಿರುವ ಈ ಬೃಹದ್ಗ್ರಂಥವು ಸಂಪೂರ್ಣಗೊಂಡಾಗ ಕನ್ನಡದಲ್ಲಿ ಪ್ರಾಮುಖ್ಯ ಗ್ರಂಥಗಳನ್ನು ಸಂಗ್ರಹಿಸಲು, ಅಪೂರ್ವ ಗ್ರಂಥಗಳನ್ನು ಗುರುತಿಸಲು ವಿಶೇಷ ಆಧಾರ ಗ್ರಂಥ ಸೂಚಿಯಾಗುವುದರಲ್ಲಿ ಸಂದೇಹವಿಲ್ಲ.

ನಿಯತ ಕಾಲಿಕೆಗಳ ವಿಭಾಗ

ವಿಶ್ವವಿದ್ಯಾನಿಲಯದ ನಾನಾ ವಿಭಾಗಗಳಲ್ಲಿ ಬೋಧನೆ ಹಾಗೂ ಸಂಶೋಧನೆಗಳಿಗೆ ಅವಶ್ಯಕವಾದ ನಿಯತ ಕಾಲಿಕೆಗಳನ್ನು ಗ್ರಂಥಾಲಯಕ್ಕೆ ತರಿಸಿಕೊಳ್ಳಲಾಗುತ್ತಿದೆ. ವಿಜ್ಞಾನ, ಮಾನವಿಕ ಹಾಗೂ ಸಾಮಾಜಿಕ ಶಾಸ್ತ್ರ,
ಲಲಿತಕಲೆಗಳು, ಸಮಕಾಲೀನ ಸಾಹಿತ್ಯ ಮತ್ತು
ತಿಗಳಲ್ಲಿ ಪರಿಜ್ಞಾನವೀಯುವ ಸುಮಾರು ೧೭೧೦
ಕಾಲಿಕೆಗಳು ಗ್ರಂಥಾಲಯಕ್ಕೆ ಪ್ರತಿ ತಿಂಗಳೂ ಬರು
೧೯೬೫ರಲ್ಲಿ ಗ್ರಂಥಾಲಯಕ್ಕೆ ೧೦೧೩ ನಿಯತ
ಗಳು ಬರುತ್ತಿದ್ದು ಪ್ರತಿ ವರ್ಷ ಇನ್ನೂ ಹೆಚ್ಚು
ಕಾಲಿಕೆಗಳನ್ನು ತರಿಸುತ್ತಿದೆ. (ಪರಿಶಿಷ್ಟ ನೋಡಿ)ವಿ
ಗಳ:, ಅಧ್ಯಾಪಕರು, ಸಂಶೋಧಕರು ಅಧಿಕ
ಯಲ್ಲಿ ಬಂದು ಗ್ರಂಥಾಲಯದ ಈ ವಿಭಾಗದ ಪ್ರ
ಜನವನ್ನು ಪಡೆಯುತ್ತಿದ್ದಾರೆ. ಕಳೆದ ವರ್ಷ ೭
ಮಂದಿ ನಿಯತ ಕಾಲಿಕೆ ವಿಭಾಗಕ್ಕೆ ಬಂದು
ಉಪಯೋಗವನ್ನು ಪಡೆದಿದ್ದಾರೆ. ದಿನಪತ್ರಿಕೆಗಳು
ನಿಯತ ಕಾಲಿಕೆಗಳ ಹಳೆಯ ಸಂಪುಟವನ್ನು ಅಂ
ಕಟ್ಟುಹಾಕಿಸಿದ್ದು ಬೇಕೆನಿಸಿದಾಗ ಎಲ್ಲರೂ ಅವು
ಉಪಯೋಗಿಸಬಹುದಾಗಿದೆ. ನಮ್ಮ ಸಂಗ್ರಹ
ಸಮಗ್ರ ನಿಯತಕಾಲಿಕೆಗಳ ಸೂಚಿಯೊಂದನ್ನು
ರಲ್ಲಿ ತಯಾರಿಸಿದ್ದು ಇತ್ತೀಚೆಗೆ ಅದನ್ನು ಪುನಃ
ರಿಸಿ ಪ್ರಕಟಿಸಲಾಗಿದೆ. ಹಿಂದಿನ ಗ್ರಂಥಪಾ
ಶ್ರೀಮಾನ್ ದೇಶಪಾಂಡೆಯವರು ಮಾನವಿಕ
ಸಾಮಾಜಿಕ ಶಾಸ್ತ್ರಗಳಲ್ಲಿ ಮೈಸೂರು ಪಟ್ಟಣ
ಗ್ರಂಥಾಲಯಗಳಲ್ಲಿರುವ ನಿಯತ ಕಾಲಿಕೆಗಳ ಸ
ಸೂಚಿಯನ್ನು ಸಂಕಲಿಸಿ ಹೊರ ತಂದಿದ್ದಾರೆ.
ಲಯಗಳು ಪರಸ್ಪರ ಸಹಕಾರದಿಂದ ಕೆಲಸ ಮಾ
ಸೂಚಿ ನೆರವಾಗುತ್ತದೆ.

ಪ್ರಲೇಖ ಮತ್ತು ಪರಾಮರ್ಶನ ವಿಭಾಗ

ಓದುಗರೊಡನೆ ನೇರ ಸಂಪರ್ಕವಿರಿಸಿಕೊಳ
ವಿಭಾಗದಲ್ಲಿ ಪೂರ್ಣಾವಧಿಯ ಪ್ರಲೇಖ ಮತ
ಮರ್ಶನ ಸೇವಾಧಿಕಾರಿಯೊಬ್ಬರು ಕೆಲಸ ನಿವ
ದ್ದಾರೆ. ವರ್ಷವೂ ಓದುಗರು ಕೇಳುವ
ದೀರ್ಘಕಾಲಿಕ ಮತ್ತು ಶೀಘ್ರ ಪರಾಮರ್ಶನ ಪ್ರ
ಉತ್ತರಿಸುವುದು; ಹೊಸ ಸದಸ್ಯರಿಗೆ ಗ್ರಂಥ
ವಿವಿಧ ಭಾಗಗಳ ಸ್ಥೂಲಪರಿಚಯ ಮಾಡಿ
ಜ್ಞಾನಾನ್ವೇಷಣೆಯಲ್ಲಿ ಸರಿಯಾದ ಮಾರ್ಗದರ್ಶ
ವುದು; ಸಂಶೋಧಕರಿಗೆ ಆಯಾ ವಿಷಯಗ
ವಿವಿಧ ಪ್ರಕಟನ ಮೂಲಗಳನ್ನು ಹುಡುಕಿ ಅವ
ಯನ್ನು ತಯಾರಿಸುವುದು ಮುಂತಾದ ಕೆಲಸ
ವಿಭಾಗ ನಿರ್ವಹಿಸುತ್ತಿದೆ. ಇ.ಯಂ. ವೈ

---

* ಗ್ರಂಥಾಲಯದ ಕಳೆದ ವರ್ಷದ ದಾಖಲೆಗಳನ್ನು ಪರಿಶೀಲಿಸಿದಾಗ ಎಲ್ಲಾ ವಿಭಾಗಗಳಿಗಿಂತಲೂ ಹೆಚ್ಚುಮಂದಿ ಓದುಗರು ಈ ವಿಭಾಗದ ಪ್ರಯೋಜನ ಪಡೆದಿರುವುದು ಕಂಡುಬರುತ್ತದೆ.

ರ್ನಾಟಕದ ಚರಿತ್ರೆ, ಸ್ವಾತಂತ್ರ್ಯ ಚಳುವಳಿ ಮತ್ತು ಹೋರಾಟಗಾರರು ; ಆಸ್ಟ್ರೇಲಿಯದ ಸಾಹಿತ್ಯ ; ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ಪಠ್ಯಕ್ರಮ ಸುಧಾರಣೆ ಮೊದಲಾದ ವಿಷಯಗಳ ಮೇಲೆ ಲೇಖನ ಹಾಗೂ ಗ್ರಂಥಗಳ ವಾಙ್ಮಯದರ್ಶಕಗಳನ್ನು ತಯಾರಿಸಿದೆ. ಮಾತ್ರವಲ್ಲದೆ ಬೇರೆ ಬೇರೆ ವಿಷಯಗಳಲ್ಲಾಗುತ್ತಿರುವ ಬೆಳವಣಿಗೆ ಮತ್ತು ವಿದ್ಯಮಾನಗಳನ್ನು ಸಂಶೋಧಕರ ಗಮನಕ್ಕೆ ತರುತ್ತದೆ. ಬೇಕೆಂದಾಗ ಲೇಖನಗಳ, ಸಂಶೋಧನ ಪ್ರಬಂಧಗಳ ಮೈಕ್ರೋಫಿಲ್ಮ್, ಫೋಟೊಸ್ಟಾಟ್ ಪ್ರತಿಗಳನ್ನು ತರಿಸಿಕೊಡಲಾಗುವುದು. ಪ್ರತಿ ಮೂರು ತಿಂಗಳಿಗೊಮ್ಮೆ " ಕನ್ನಡದ ನಿಯತ ಕಾಲಿಕೆಗಳ ಸೂಚಿ " ಯನ್ನು ಪ್ರಕಟಿಸುತ್ತಿದೆ. ಭಾರತೀಯ ಭಾಷೆಗಳಲ್ಲೇ ಮೊದಲ ಬಾರಿಗೆ ಕನ್ನಡ ಭಾಷೆಯಲ್ಲಿ ನಿಯತ ಕಾಲಿಕೆಗಳ ಸೂಚಿ ಪ್ರಕಟವಾಗುತ್ತಿರುವುದು ಹೆಮ್ಮೆಯ ವಿಷಯ. ಪ್ರತಿ ತಿಂಗಳು ಗ್ರಂಥಾಲಯಕ್ಕೆ ಕೊಂಡು ಕೊಂಡ ಹೊಸ ಪುಸ್ತಕಗಳ ಪರಿಗ್ರಹಣ ಪಟ್ಟಿ (ಲಿಸ್ಟ್ ಆಫ್ ನ್ಯೂ ಆಡಿಷನ್ಸ್)ಯನ್ನು ತಯಾರಿಸಿ ವಿಶ್ವವಿದ್ಯಾನಿಲಯದ ಎಲ್ಲ ಅಂಗಸಂಸ್ಥೆಗಳಿಗೂ, ಸ್ನಾತಕೋತ್ತರ ವಿಭಾಗಗಳಿಗೂ ಮತ್ತು ದೇಶದ ಪ್ರಮುಖ ವಿಶ್ವವಿದ್ಯಾನಿಲಯಗಳ ಗ್ರಂಥಭಂಡಾರಗಳಿಗೂ ಅಂಚೆ ಮೂಲಕ ಕಳುಹಿಸಲಾಗುತ್ತಿದೆ.

ಲೇಖನ, ರೇಖಾಪಟ ಮೊದಲಾದುವುಗಳ ಛಾಯಾ ಪ್ರತಿಗಳನ್ನು ಕ್ಷಿಪ್ರದಲ್ಲಿ ತಯಾರಿಸಿಕೊಡುವ ಮೇಜಾಕ್ಸ್-೧೨೧ ಎಂಬ ಯಂತ್ರ ಸಾಧನವನ್ನು ೩೫,೦೦೦ ರೂಪಾಯಿಗಳ ವೆಚ್ಚದಲ್ಲಿ ಗ್ರಂಥಾಲಯ ಕೊಂಡುಕೊಂಡಿದೆ. ಸಂಶೋಧಕರಾಗಲಿ, ಅಧ್ಯಾಪಕರಾಗಲಿ, ಇತರ ಓದುಗರಾಗಲಿ ಅಂತಹ ಪ್ರತಿಗಳನ್ನು ಬಯಸಿದಾಗ ತಯಾರಿಸಿ ಕೊಡಲಾಗುತ್ತಿದೆ. ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ಮೊದಲಬಾರಿಗೆ ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯವು ಮೇಜೋಕ್ಸ್‌ನಂತಹ ಯಂತ್ರಸಾಧನೆಗಳನ್ನು ಪಡೆದಿರುವುದು ನಿಜಕ್ಕೂ ಹೆಮ್ಮೆಯ ವಿಷಯವಾಗಿದೆ.

ಪಠ್ಯಪುಸ್ತಕ ವಿತರಣೆ

ಸ್ನಾತಕೋತ್ತರ ವಿಭಾಗ, ಪದವಿ ಪೂರ್ವ ವಿಭಾಗಗಳ ಯೋಗ್ಯ ಹಾಗೂ ಬಡ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಒಂದು ವರ್ಷದ ದೀರ್ಘಾವಧಿ ಕಾಲ ಎರವಲು ಕೊಡುತ್ತಿದೆ. ಕಳೆದ ವರ್ಷ ಪಠ್ಯಪುಸ್ತಕಗಳನ್ನು ಕೊಳ್ಳಲು ೫೦,೦೦೦ ರೂಪಾಯಿಗಳ ಆರ್ಥಿಕ ನೆರವೂ ವಿಶ್ವವಿದ್ಯಾನಿಲಯದಿಂದ ಬಂದಿದೆ. ಈ ಯೋಜನೆಯ ಸೌಲಭ್ಯವನ್ನು ಅನೇಕ ಮಂದಿ ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ.

ಗ್ರಂಥ ವಿತರಣಾ ವಿಭಾಗ

ಓದುಗರ ಅನುಕೂಲಕ್ಕಾಗಿ ಗ್ರಂಥಾಲಯವು ಬೆಳಗ್ಗೆ ೮ ಘಂಟೆಯಿಂದ ರಾತ್ರಿ ೮ ಘಂಟೆಯವರೆಗೂ ತೆರೆದಿರುತ್ತದೆ. ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳಿಗಾಗಿ ರಾತ್ರಿ ೧೦ ಘಂಟೆಯವರೆಗೂ ತೆರೆದಿಡಲಾಗುತ್ತದೆ. ವರ್ಷದಲ್ಲಿ ಕೇವಲ ಆರು ದಿವಸಗಳ ಹೊರತು ಮತ್ತೆಲ್ಲಾ ದಿವಸಗಳಲ್ಲೂ ಗ್ರಂಥಾಲಯವು ಕೆಲಸ ಮಾಡುತ್ತಿದೆ. ಈ ಎಲ್ಲಾ ದಿವಸಗಳಲ್ಲಿಯೂ ಸದಸ್ಯರು ಪುಸ್ತಕಗಳನ್ನು ಎರವಲಾಗಿ ಪಡೆಯಬಹುದಾಗಿದೆ. ಓದುಗರಿಗಾಗಿ ಎರವಲು ವಿಭಾಗದಲ್ಲಿ ಪ್ರತಿ ವರ್ಷವೂ ವಿತರಣೆಯಾಗುವ ಗ್ರಂಥಗಳ ಸಂಖ್ಯೆ ಹೆಚ್ಚಾಗಿದೆ. ೧೯೬೫ರಲ್ಲಿದ್ದುದಕ್ಕಿಂತ ಶೇ. ೧೪೫ರಷ್ಟು ಹೆಚ್ಚು ಪುಸ್ತಕಗಳು ೧೯೭೧-೭೨ರ ಸಾಲಿನಲ್ಲಿ ವಿತರಣೆಯಾಗಿದೆ. (ಪರಿಶಿಷ್ಟ ೯)

ಅಂತರ ಗ್ರಂಥಾಲಯ ಎರವಲು ಸೇವೆ

ವಿಶ್ವವಿದ್ಯಾನಿಲಯ ಗ್ರಂಥಾಲಯವು ದೇಶದ ಅನೇಕ ಗ್ರಂಥಾಲಯಗಳೊಂದಿಗೆ ಸಂಪರ್ಕ ಇರಿಸಿಕೊಂಡಿದೆ. ೧೯೭೧-೭೨ರ ಸಾಲಿನಲ್ಲಿ ಕಳೆದೆಲ್ಲಾ ವರ್ಷಗಳಿಗಿಂತಲೂ ಹೆಚ್ಚು ಸಂಖ್ಯೆಯಲ್ಲಿ ಪುಸ್ತಕಗಳನ್ನು ಮೈಸೂರಿನ ಅನೇಕ ಭ್ರಾತೃ ಸಂಸ್ಥೆಗಳಿಗೂ, ದೇಶದಾದ್ಯಂತ ಅನೇಕ ಗ್ರಂಥಾಲಯಗಳಿಗೂ ಎರವಲಾಗಿ ಕಳುಹಿಸಿದೆ. ಅಗತ್ಯಬಿದ್ದಾಗ ಇತರ ಕಡೆಗಳಿಂದಲೂ ಎರವಲು ಪಡೆದಿದೆ. ಈ ಕೆಳಗೆ ಕೊಟ್ಟಿರುವ ಅಂಕಿ ಅಂಶಗಳಿಂದ ಅಂತರ ಗ್ರಂಥಾಲಯ ಎರವಲು ಸೇವೆಯಲ್ಲಾಗಿರುವ ಗಣನೀಯ ಪ್ರಗತಿಯನ್ನು ಗುರುತಿಸಬಹುದು.

ಇತರ ಗ್ರಂಥಾಲಯಗಳಿಂದ ಎರವಲು ಪಡೆದ ಪುಸ್ತಕ ಮತ್ತು ನಿಯಮಿತ ಕಾಲಿಕೆಗಳ ಸಂಖ್ಯೆ :

೧೯೬೭-೬೮	೧೨೫
೧೯೬೮-೬೯	೨೦೬
೧೯೬೯-೭೦	೨೧೮
೧೯೭೦-೭೧	೨೦೬
೧೯೭೧-೭೨	೪೧೫

ಇತರ ಗ್ರಂಥಾಲಯಗಳಿಗೆ ಎರವಲು ಕೊಟ್ಟಿರುವ ಪುಸ್ತಕಗಳ ಮತ್ತು ನಿಯತ ಕಾಲಿಕೆಗಳ ಸಂಖ್ಯೆ :

೧೯೬೭-೬೮	೧೭೨
೧೯೬೮-೬೯	೧೯೭
೧೯೬೯-೭೦	೮೧೪
೧೯೭೦-೭೧	೫೯೫
೧೯೭೧-೭೨	೧೦೮೪

ಸಂಯೆುಕ್ತ ಗ್ರಂಥಸೂಚಿ

ಮಾನಸ ಗಂಗೋತ್ರಿಯ ಪುಸ್ತಕ ಭಂಡಾರ, ಪದವಿ ಪೂರ್ವ ಗ್ರಂಥಾಲಯ ಮತ್ತು ಮಂಗಳೂರಿನ ಸ್ನಾತಕೋತ್ತರ ಶಿಕ್ಷಣ ಕೇಂದ್ರ ಗ್ರಂಥಾಲಯಗಳಲ್ಲಿರುವ ಗ್ರಂಥಗಳ ಸಂಯುಕ್ತ ಗ್ರಂಥಸೂಚಿಯನ್ನು ಪತ್ರಕ ರೂಪದಲ್ಲಿ (ಕಾರ್ಡ್ ಫಾರಂ) ತಯಾರಿಸುವ ಪ್ರಯತ್ನ ನಡೆದಿದೆ. ಪುಸ್ತಕ ಸಂಗ್ರಹಣೆ, ಎರವಲು ಮತ್ತು ಪರಾಮರ್ಶನ ಸೇವೆಗಳಲ್ಲಿ ಪರಸ್ಪರ ಹೊಂದಾಣಿಕೆಯಿಂದ ಕೆಲಸ ಮಾಡಲು ಈ ಸಂಯುಕ್ತಗ್ರಂಥ ಸೂಚಿಯು ನೆರವಾಗಬಲ್ಲದು. ಒಟ್ಟಿನಲ್ಲಿ ವಿಶ್ವವಿದ್ಯಾನಿಲಯದ ಆಡಳಿತಕ್ಕೊಳಪಟ್ಟ ಈ ಗ್ರಂಥಾಲಯಗಳಲ್ಲಿ ಪರಸ್ಪರ ಸಹಕಾರ ಸೌಹಾರ್ದ ಮತ್ತು ಏಕರೂಪದ ಸೇವಾ ವಿಧಾನಗಳನ್ನು ಕಲ್ಪಿಸಲು ಸಂಯುಕ್ತಸೂಚಿಯು ನೆರವಾಗುತ್ತದೆ.

ಗ್ರಂಥಾಲಯ ಶಾಸ್ತ್ರ ವಿಭಾಗ

೧೯೬೫ರಲ್ಲಿ ಮೈಸೂರು ರಾಜ್ಯದಲ್ಲೇ ಮೊದಲಬಾರಿಗೆ ಗ್ರಂಥಾಲಯ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ತರಗತಿಯನ್ನು ತೆರೆಯಲಾಗಿದ್ದು ಸುಮಾರು ೧೫೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ನಡೆಸಿ ಪದವಿ ಪಡೆದು ದೇಶ ಹಾಗೂ ವಿದೇಶಗಳ ಗ್ರಂಥಾಲಯಗಳಲ್ಲಿ ಉದ್ಯೋಗ ಪಡೆದಿದ್ದಾರೆ. ದೇಶದಲ್ಲಿ ಬೆಳೆಯುತ್ತಿರುವ ಗ್ರಂಥಾಲಯಗಳಿಗೆ ಸುಶಿಕ್ಷಿತ ಗ್ರಂಥಪಾಲಕರ ಆವಶ್ಯಕತೆಯನ್ನು ಪೂರೈಸುವಲ್ಲಿ ಈ ವಿಭಾಗವು ಸಾಕಷ್ಟು ಯಶಸ್ವಿಯಾಗಿದೆ. ಪ್ರಾರಂಭದಲ್ಲಿ ಕೇವಲ ಇಬ್ಬರು ಅಧ್ಯಾಪಕರುಗಳಿದ್ದ ಈ ವಿಭಾಗದಲ್ಲಿ ಈಗ ನಾಲ್ಕು ಮಂದಿ ಅಧ್ಯಾಪಕರು, ಒಬ್ಬ ರೀಡರ್ ಹಾಗೂ ಒಬ್ಬ ಪ್ರಾಧ್ಯಾಪಕರು ಸೇವೆ ಸಲ್ಲಿಸುತ್ತಿದ್ದಾರೆ. ಸದ್ಯದಲ್ಲಿ ಇನ್ನೂ ಒಂದು ರೀಡರ್ ಸ್ಥಳವನ್ನು ಭರ್ತಿಮಾಡಲಾಗುವುದು. ೧೯೭೧-೭೨ರ ವಿದ್ಯಾವರ್ಷದಲ್ಲಿ ದಕ್ಷಿಣ ಭಾರತದಲ್ಲೇ ಪ್ರಥಮ ಬಾರಿಗೆ ಗ್ರಂಥಾಲಯ ಶಾಸ್ತ್ರದಲ್ಲಿ ಮಾಸ್ಟರ್ಸ್ ಪದವಿ ತರಗತಿಯನ್ನು ಪ್ರಾರಂಭಿಸಲಾಗಿದೆ.

ಪದವಿಪೂರ್ವ ಗ್ರಂಥಾಲಯ ಮೈಸೂರು, ಸ್ನಾತಕೋತ್ತರ ಶಿಕ್ಷಣ ಗ್ರಂಥಾಲಯ ಮಂಗಳೂರು

ಸುಮಾರು ೧,೧೫,೦೦೦ಕ್ಕಿಂತಲೂ ಮೇಲ್ಪಟ್ಟ ಪುಸ್ತಕ ಸಂಗ್ರಹವಿರುವ ಮಹಾರಾಜಾ ಕಾಲೇಜಿನ ಕಟ್ಟಡದಲ್ಲಿರುವ ಪದವಿಪೂರ್ವ ಗ್ರಂಥಾಲಯವೂ ವಿಶ್ವವಿದ್ಯಾನಿಲಯದ ಗ್ರಂಥಪಾಲಕರ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದೆ. ಮಹಾರಾಜಾ ಕಾಲೇಜು, ಯುವರಾಜಾ ಕಾಲೇಜು, ವಿಶ್ವವಿದ್ಯಾನಿಲಯ ಸಂಜೆ ಕಾಲೇಜುಗಳ ವಿದ್ಯಾರ್ಥಿ ಮತ್ತು ಅಧ್ಯಾಪಕರು, ಆಡಳಿತ ವರ್ಗದವರು ಮತ್ತು ರಿಜಿಸ್ಟರ್ಡ್ ಪದವೀಧರರು ಈ ಗ್ರಂಥಾಲಯದ ಪ್ರಯೋಜನ ಪಡೆಯಬಹುದಾಗಿದೆ. ಪ್ರತಿ ವರ್ಷವೂ ಸುಮಾರು ೫೦೦೦ ಹೊಸ ಪುಸ್ತಕಗಳನ್ನು ಈ ಗ್ರಂಥಾಲಯಕ್ಕೆ ಕೊಳ್ಳಲಾಗುತ್ತಿದೆ.

ಮಂಗಳೂರಿನ ಸ್ನಾತಕೋತ್ತರ ಶಿಕ್ಷಣ ಕೇಂದ್ರದ ಗ್ರಂಥಾಲಯವು ವಿಶ್ವವಿದ್ಯಾನಿಲಯದ ಕೇಂದ್ರ ಗ್ರಂಥಾಲಯದ ಗ್ರಂಥಪಾಲಕರ ನಿರ್ದೇಶನಕ್ಕೊಳಪಟ್ಟಿದೆ. ಗಣಿತ ಶಾಸ್ತ್ರ, ಭೌತಶಾಸ್ತ್ರ, ವಾಣಿಜ್ಯಶಾಸ್ತ್ರ, ಕನ್ನಡ ಹಾಗೂ ಜೀವ ಶಾಸ್ತ್ರಗಳಲ್ಲಿ ಸ್ನಾತಕೋತ್ತರ ಪದವಿ ಶಿಕ್ಷಣ ನೀಡುತ್ತಿರುವ ಈ ಕೇಂದ್ರಕ್ಕೆ ಸುಸಜ್ಜಿತ ಗ್ರಂಥಾಲಯವನ್ನು ಸ್ಥಾಪಿಸಲು ವಿಶ್ವವಿದ್ಯಾನಿಲಯ ಅನುದಾನ ಆಯೋಗ ಹಾಗೂ ಮೈಸೂರು ವಿಶ್ವವಿದ್ಯಾನಿಲಯದಿಂದ ಸಾಕಷ್ಟು ಆರ್ಥಿಕ ನೆರವು ದೊರೆತಿದೆ. ವಾಣಿಜ್ಯ ಶಾಸ್ತ್ರದಲ್ಲಿ ಪುಸ್ತಕಗಳನ್ನು ಕೊಳ್ಳಲು ಯು.ಜಿ.ಸಿ. ಕಳೆದ ವರ್ಷ ಈ ಕೇಂದ್ರಕ್ಕೆ ೫೦,೦೦೦ ರೂಪಾಯಿ ವಿಶೇಷ ನೆರವಿತ್ತಿದೆ. ಅಭಿವೃದ್ಧಿ ಹೊಂದುತ್ತಿರುವ ಈ ಕೇಂದ್ರದಲ್ಲಿ ಈಗ ೧೨,೦೦೦ ಪುಸ್ತಕ ಸಂಗ್ರಹವಿದ್ದು ಸಾಕಷ್ಟು ಸಂಖ್ಯೆಯಲ್ಲಿ ನಿಯತಕಾಲಿಕೆ ಹಾಗೂ ದಿನಪತ್ರಿಕೆಗಳು ಬರುತ್ತಿವೆ.

ಗ್ರಂಥಾಲಯದ ಬಗ್ಗೆ ಪ್ರಕಟವಾದ ವರದಿಗಳು

ವಿಶ್ವವಿದ್ಯಾನಿಲಯಗಳ ಗ್ರಂಥಾಲಯಗಳಲ್ಲಿ ಪುಸ್ತಕ ಸಂಗ್ರಹ ಹಾಗೂ ಸೇವಾ ವಿಧಾನಗಳ ಕುರಿತು ಇತ್ತೀಚಿನ ಕೆಲವು ವರ್ಷಗಳಲ್ಲಿ ಉತ್ತಮ ವರದಿಗಳು ಬಂದಿವೆ.

ದೆಹಲಿ ವಿಶ್ವವಿದ್ಯಾನಿಲಯದ ಗ್ರಂಥಾಲಯವು ಸಮೀಕ್ಷೆ ನಡೆಸಿದ ಕಾರ್ಲ್‌ವೈಟ್‌ರವರ ವರದಿ, ಭಾರತ ಸರ್ಕಾರದ ಶಿಕ್ಷಣ ಆಯೋಗದ ವರದಿ ವಿಶ್ವವಿದ್ಯಾನಿಲಯ ಅನುದಾನ ಆಯೋಗ (ಯೂನಿವರ್ಸಿಟಿ ಗ್ರ್ಯಾಂಟ್ಸ್ ಕಮೀಷನ್) ಪುನರ್ ಸಲ್ಲಿಸಿದ ವರದಿ ಮೊದಲಾದವುಗಳು ವಿಶ್ವ ವಿದ್ಯಾನಿಲಯ ಗ್ರಂಥಾಲಯಗಳಲ್ಲಿನ ನ್ಯೂನತೆಗಳನ್ನು ವಿವರಿಸಿ ಅವುಗಳನ್ನು ಸರಿಪಡಿಸಿಕೊಳ್ಳಲು ಉತ್ತಮ ಸಲಹೆಗಳನ್ನಿತ್ತಿವೆ.* ಈ ಸಲಹೆಗಳನ್ನು ನಮ್ಮ ಗ್ರಂಥಾಲಯಗಳು ಆಚರಣೆಗೆ ತಂದಲ್ಲಿ ಅವು ತಮ್ಮ ಪುಸ್ತಕ ಪರಿಸ್ಥಿತಿಗಳನ್ನು ಖಂಡಿತವಾಗಿಯೂ ಸುಧಾರಿಸಿಕೊಳ್ಳಬಹುದು.

ವಿಶ್ವವಿದ್ಯಾನಿಲಯದ ಅನುದಾನ ಆಯೋಗವು ಸ್ಥಾಪನೆಯಾದಂದಿನಿಂದ ಗ್ರಂಥಾಲಯಗಳು ಉತ್ತಮ ಮಟ್ಟದ ಸೇವಾಸೌಲಭ್ಯಗಳನ್ನೂ, ಗ್ರಂಥಸಂಗ್ರಹವನ್ನೂ ಹೊಂದಲಾರಂಭಿಸಿವೆ. ಜ್ಞಾನದ ನಿರಂತರ ಸ್ಫೋಟದಿಂದಾಗಿ ಗ್ರಂಥಗಳ ಸಂಖ್ಯೆ ಏರುತ್ತಿವೆ. ಪುಸ್ತಕಗಳ ಬೆಲೆಯೂ ಸಹ ಏರುತ್ತಿದೆ. ಪುಸ್ತಕಗಳನ್ನು ಕೊಳ್ಳಲು ಗ್ರಂಥಾಲಯಗಳ ಆರ್ಥಿಕ ಪರಿಸ್ಥಿತಿ ಅಷ್ಟೇನೂ ಆಶಾದಾಯಕವಾಗಿಲ್ಲ. ಗ್ರಂಥಾಲಯಗಳಲ್ಲೂ ಸಾಕಷ್ಟು ಸಹಕಾರಿ ಮನೋಭಾವವಿಲ್ಲದಿರುವುದು ಇನ್ನೊಂದು ಕಾರಣವೆನ್ನಬಹುದು. ಈ ಹಿಂದೆ ಹೇಳಿದಂತೆ ಗ್ರಂಥಾಲಯಗಳು ತಮ್ಮ ಸಂಗ್ರಹದ ಕೊರತೆಗಳನ್ನು ವರ್ಷಕ್ಕೊಮ್ಮೆಯಾದರೂ, ಪರಿಶೀಲಿಸಬೇಕು. ಕೊರತೆ ಕಂಡುಬಂದ ವಿಭಾಗಗಳಲ್ಲಿ ಪುಸ್ತಕ ಸಂಗ್ರಹವನ್ನು ಬೆಳಸಿಕೊಳ್ಳಲು ವಿಶ್ವವಿದ್ಯಾನಿಲಯಗಳು ವಿಶೇಷ ಆರ್ಥಿಕ ಸಹಾಯವನ್ನೀಯಬೇಕು. ಮುಖ್ಯವಾಗಿ ಗ್ರಂಥಾಲಯಗಳು ತಮ್ಮ ಸಂಗ್ರಹವನ್ನು ಉತ್ತಮ ರೀತಿಯಲ್ಲಿ ಬೆಳೆಸಿಕೊಳ್ಳಲು ಅಧ್ಯಾಪಕ ವರ್ಗ ತಮ್ಮ ಸಹಕಾರ ಹಸ್ತವನ್ನೀಯುತ್ತಿರಬೇಕು. ಆಡಳಿತ ವರ್ಗ, ಶಿಕ್ಷಕ ವರ್ಗ ಹಾಗೂ ಗ್ರಂಥಪಾಲಕ ಈ ಮೂವರೂ ಒಂದಾಗಿ ಈ ದಿಸೆಯಲ್ಲಿ ಕೆಲಸ ಮಾಡಬೇಕು ವಿಶ್ವವಿದ್ಯಾನಿಲಯ ಅನುದಾನ ಆಯೋಗವು ವಿಶ್ವವಿದ್ಯಾನಿಲಯಗಳಿಗೆ ಸಮರ್ಥ ನಿರ್ದೇಶನವಿತ್ತು, ಗ್ರಂಥಾಲಯಗಳು ಎಲ್ಲ ವಿಧದಲ್ಲೂ ಉನ್ನತ ಮಟ್ಟವನ್ನು ಕಾಯ್ದುಕೊಳ್ಳಲು ನೆರವಾಗಬೇಕು.

ಅಭಿವೃದ್ಧಿ ಯೋಜನೆಗಳು

ಪ್ರತಿ ವರ್ಷ ಹೆಚ್ಚುತ್ತಿರುವ ಪುಸ್ತಕಗಳು, ನಿಯತ ಕಾಲಿಕೆಗಳು ಮತ್ತು ವಿದ್ಯಾರ್ಥಿಗಳಿಂದಾಗಿ ೧೯೬೦ರಲ್ಲಿ ಅಂದಾಜು ಹಾಕಿ ಕಟ್ಟಿದ ಗ್ರಂಥಾಲಯವು ಈಗ ತೀವ್ರ ಸ್ಥಳಾಭಾವವನ್ನೆದುರಿಸುತ್ತಿದೆ. ಪರಿಸ್ಥಿತಿಯನ್ನು ಅರಿತು ಸರಕಾರವು ಗ್ರಂಥಾಲಯ ಕಟ್ಟಡದ ವಿಸ್ತರಣೆಗಾಗಿ ಸುಮಾರು ಆರು ಲಕ್ಷ ರೂಪಾಯಿಗಳ ಮಂಜೂರಾತಿ ಇತ್ತಿದೆ. ನಿಯತ ಕಾಲಿಕೆ, ಕನ್ನಡ ವಿಭಾಗ ಪುಸ್ತಕ (ಸ್ಟ್ಯಾಕ್ ರೂಂ) ಮತ್ತು ಗ್ರಂಥಾಲಯ ಶಾಸ್ತ್ರ ವಿಭಾಗಗಳಿಗೆ ಈ ಕಟ್ಟಡದಲ್ಲಿ ಇನ್ನಷ್ಟು ಸ್ಥಳಾವಕಾಶ ದೊರೆಯಲಿದೆ. ಅಲ್ಲದೆ ಸಂಶೋಧಕರಿಗಾಗಿ ಪ್ರತ್ಯೇಕ ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ. ಕಟ್ಟಡದ ವಿಸ್ತರಣಾ ಕಾರ್ಯ ಪೂರ್ಣಗೊಂಡಾಗ ಪ್ರಾಯಶಃ ಭಾರತದಲ್ಲಿ ವಿಶ್ವವಿದ್ಯಾನಿಲಯ ಗ್ರಂಥಾಲಯಗಳ ಪೈಕಿ ಇದು ಅತಿ ದೊಡ್ಡ ಕಟ್ಟಡವಾಗುವ ನಿರೀಕ್ಷೆಯಿದೆ.

ಸಾಹಿತ್ಯ, ಸಂಸ್ಕೃತಿ, ಕಲೆ, ಕೈಗಾರಿಕೆ, ಶಿಕ್ಷಣ, ಮತಧರ್ಮ ಮೊದಲಾದ ಎಲ್ಲ ವಿಷಯಗಳಲ್ಲೂ ಮೈಸೂರು ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದಿದೆ. ಈ ಎಲ್ಲ ವಿಷಯಗಳಲ್ಲೂ ಸಾವಿರಾರು ಗ್ರಂಥಗಳು ಪ್ರಕಟವಾಗಿವೆ. ನಮ್ಮ ಗ್ರಂಥಾಲಯದಲ್ಲಿ 'ಮೈಸೂರಿಯಾನ'ದ ಬಗ್ಗೆ ಎಲ್ಲ ಗ್ರಂಥಗಳನ್ನು ಒಂದೆಡೆ ಕ್ರೋಢೀಕರಿಸಿ ಪ್ರತ್ಯೇಕ ವಿಭಾಗವೊಂದನ್ನು ತೆರೆಯುವ ಯೋಚನೆಯಿದೆ.

ಸಂಶೋಧನೆಗೆ ನೆರವಾಗಲು ಮೈಕ್ರೋಫಿಲ್ಮ್, ಫೋಟೋಸ್ಟ್ಯಾಟ್ ಮೊದಲಾದ ಛಾಯಾಪ್ರತಿಗಳನ್ನು ತೆಗೆಯುವ ಸಾಧನಗಳನ್ನು ತರಿಸಿಕೊಂಡು ಅದಕ್ಕಾಗಿ ರೇಖನ ಪ್ರತೀಕರಣ ವಿಭಾಗವೊಂದನ್ನು (Reprographic Section) ತೆರೆಯುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಓದುಗರಿಗೆ ವಿಷಯಾನ್ವೇಷಣೆಯಲ್ಲಿ, ಸಂಶೋಧನಾ ಕಾರ್ಯಗಳಲ್ಲಿ ನೆರವಾಗಲು ಆಯಾ ವಿಷಯಗಳಲ್ಲಿ ಪರಿಣತಿ

---

* ಗ್ರಂಥಾಲಯಗಳ ಸೇವಾ ವಿಧಾನಗಳ ನ್ಯೂನತೆಗಳ ಬಗ್ಗೆ ಅನೇಕ ವರದಿಗಳು ಬಂದಿವೆ. (೧) ಶಿಕ್ಷಣದ ಆಯೋಗದ ವರದಿ ೧೯೬೪-೬೬ ; (೨) ಕಾರ್ಲ್‌ವೈಟ್ ರವರ ದೆಹಲಿ ವಿಶ್ವವಿದ್ಯಾನಿಲಯ ಗ್ರಂಥಾಲಯದ ಸಮೀಕ್ಷೆ ವರದಿ ; (೩) ವಿಶ್ವವಿದ್ಯಾನಿಲಯಗಳ ಆಯೋಗದ ವರದಿ, ೧೯೪೮-೪೯, (೪) ಡರ್ಟ್ಯೋಗ್ ಸಮಿತಿಯ ವರದಿ ೧೯೨೯, (೫) ಕಲ್ಕತ್ತ ವಿಶ್ವವಿದ್ಯಾನಿಲಯ ಆಯೋಗದ ವರದಿ, (೬) ವಿಶ್ವವಿದ್ಯಾನಿಲಯ ಆಯೋಗದ ವರದಿ, ೧೯೦೨

ಪಡೆದ (Subject Specialist)ವರನ್ನು ಗ್ರಂಥಾಲಯಕ್ಕೆ ನೇಮಿಸಿಕೊಳ್ಳುವುದು ಇವೇ ಮೊದಲಾದ ಅನೇಕ ಅಭಿವೃದ್ಧಿ ಯೋಜನೆಗಳು ಕ್ರಮೇಣ ಕಾರ್ಯರೂಪಕ್ಕೆ ಬರಲಿವೆ.

ಗ್ರಂಥಾಲಯವು ಜ್ಞಾನದ ಗಂಗಾನದಿಯಿದ್ದಂತೆ. ಅಂತ್ಯವಿಲ್ಲದ ಜ್ಞಾನ ಗ್ರಂಥಗಳ ರೂಪದಲ್ಲಿ ಪ್ರವಾಹೋಪಾದಿಯಲ್ಲಿ ಹರಿದುಬರುತ್ತದೆ. ಗ್ರಂಥಾಲಯ ಈ ಪ್ರವಾಹಕ್ಕೆ ಆಸರೆಯಿತ್ತು, ಓದುಗರ ಜ್ಞಾನತೃಷೆಯನ್ನು ಹಿಂಗಿಸಲು ನೆರವಾಗುತ್ತದೆ. ಉನ್ನತ ವಿದ್ಯಾಭ್ಯಾಸದ ಗುರಿಯನ್ನು ಸಾಧಿಸಿ ಅದರ ಮೌಲ್ಯವನ್ನು ಹೆಚ್ಚಿಸುವ ದಿಸೆಯಲ್ಲಿ ಈ ವಿಶ್ವವಿದ್ಯಾನಿಲಯದ ಗ್ರಂಥಭಂಡಾರವು ಯೋಗ್ಯ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದೆ.

ಆಧಾರ ಗ್ರಂಥಗಳು

1. Mysore University, Hand Book of the University of Mysore, Mysore, Wesleyan Mission Press, 1917. p.4.
2. Mysore University, Annual Report Mysore. 1970–71, p.17.
3. Mysore University, Annual Report, 1917-18, p.7-8.
4. Mysore University Library, Inauguration of the new building by S. Radhakrishnan, p.18.
5. Mysore University Calendar, University of Mysore, Mysore 1918-19, p.100.
6. Bernard J. Toney: "Indian University Libraries". College and Research Libraries. V.28.6, Nov. 1967, p 439.
7. Mysore University. Hand Book of the University of Mysore, Mysore. Wesleyan Mission Press, 1917. p.10.
8. Mysore University Annual Report Mysore. 1970-71. p.64.

ಪರಿಶಿಷ್ಟಗಳು

	೧೯೬೫–೬೬	೬೬–೬೭	೬೭–೬೮	೬೮–೬೯	೬೯–೭೦	೭೦–೭೧	೭೧–೭೨
೧. ಸಂದರ್ಶನವಿತ್ತ ವಾಚಕರು	೩೧,೮೮೬	೬೫,೭೭೮	೭೨,೯೨೧	೭೩,೪೧೨	೭೪,೦೭೧	೭೧,೬೩೩	೧,೧೪,೬೯೭
೨. ಸದಸ್ಯ ಸಂಖ್ಯೆ ಹೆಚ್ಚಳ							
a. ಸಂಶೋಧಕರು ಮೊದಲಾದವರು	—	೧೭೦	೨೧೨	೨೪೧	೨೫೨	೨೮೯	೨೬೧
b. ಸ್ನಾತಕೋತ್ತರ ವಿದ್ಯಾರ್ಥಿಗಳು	—	೫೯೦	೬೨೫	೮೫೩	೧,೩೭೪	೧,೨೦೫	೧,೬೧೪
c. ಸ್ನಾತಕಪೂರ್ವ ವಿದ್ಯಾರ್ಥಿಗಳು	—	೨೫೪	೩೫೦	೫೭೦	೩೬೮	೫೫೯	೭೩೪
ಒಟ್ಟು		೧,೦೧೪	೧,೧೮೭	೧,೬೬೪	೧,೯೯೪	೨,೦೫೩	೨,೬೦೯

	೧೯೬೫–೬೬	೬೬–೬೭	೬೭–೬೮	೬೮–೬೯	೬೯–೭೦	೭೦–೭೧	೭೧–೭೨
೩. ವಾರ್ಷಿಕ ಪುಸ್ತಕ ಸಂಗ್ರಹ	೩,೫೧೩	೧೫,೩೪೯	೧೧,೮೯೯	೧೫,೨೧೯	೧೪,೪೪೪	೧೬,೨೦೨	೯,೬೧೨
೪. ೧೯೬೫ರಿಂದ ಪುಸ್ತಕಗಳ ಹಾಗೂ ನಿಯತ–ಕಾಲಿಕಗಳ ಸಂಗ್ರಹ	೧,೪೭,೫೪೪	೧,೫೨,೮೬೩	೧,೭೫,೪೯೫	೧,೯೦,೪೯೫	೨,೦೪,೯೩೯	೨,೨೧,೧೪೧	೨,೩೦,೫೭೩
೫. ೧೯೬೫ರಿಂದ ಪ್ರತಿ ವರ್ಷ ಸಲಹೆ ಪಡೆದ ಪುಸ್ತಕಗಳು	೮,೩೦೯	೨೨,೦೦೦	೨೦,೫೫೦	೪೨,೯೭೩	೬೨,೧೭೩	೬೯,೦೫೯	೧,೦೪,೨೭೯
೬. ವರ್ಗೀಕರಿಸಿದ ಮತ್ತು ಪಟ್ಟೀಕರಿಸಿದ ಪುಸ್ತಕಗಳು							
a. ವರ್ಗೀಕರಣ	—	—	—	೧,೪೧೯	೮,೪೬೪	೧೧,೦೦೦	೧೩,೬೫೭
b. ಪಟ್ಟೀಕರಣ	—	—	—	೮,೦೬೭	೯,೨೦೦	೧೦,೦೦೦	೧೦,೯೧೦
೭. (a) ಸಂಗ್ರಹಿಸಿದ ಗ್ರಂಥಗಳು	—	—	—	೨,೮೨೬	೪,೨೬೪	೨,೫೦೦	೧,೭೨೦
b. ಓದುಗರು	—	—	—	೯,೨೨೦	೧೫,೦೦೦	೨೦,೨೩೭	೨೬,೦೯೪
c. ವಿತರಣೆ ಮಾಡಿದ ಗ್ರಂಥಗಳು	—	—	—	೮,೪೮೪	೧೧,೫೫೬	೧೪,೬೫೯	೧೬,೪೧೭
೮. ನಿಯತ ಕಾಲಿಕೆಗಳು :							
a. ಇದ್ದವು	೧,೦೧೩	೧,೦೧೩	೧,೧೦೨	೧,೨೦೧	೧,೩೮೨	೧,೪೮೭	೧,೬೩೪
b. ಸೇರಿದವು	—	೮೯	೯೯	೧೮೧	೧೦೫	೧೪೭	೩೩
೯. ಪ್ರತಿ ವರ್ಷ ವಿತರಣೆ ಮಾಡಿದ ಪುಸ್ತಕಗಳು	೨೧,೮೩೭	೩೦,೮೪೨	೪೧,೦೯೮	೫೩,೩೦೨	೫೯,೭೮೪	೭೨,೫೮೧	೭೬,೨೧೬



ಮಾನಸಗಂಗೋತ್ರಿಯ ಗ್ರಂಥಾಲಯ ಭವನ

ವಿಜ್ಞಾನಿಗಳ ಜ್ಞಾನನಿಧಿ ಭಾರತೀಯ ವಿಜ್ಞಾನ ಮಂದಿರದ ಪುಸ್ತಕ ಭಂಡಾರ

ಮೂಲ ಲೇಖಕರು :
ಶ್ರೀ ಇ. ಎಸ್. ರಾಜಗೋಪಾಲ್
ಶ್ರೀ ಎ. ಜಿ. ನಾರಾಯಣರಾವ್


ಕನ್ನಡಕ್ಕೆ :
ಜಿ. ಅಶ್ವತ್ಥನಾರಾಯಣ

ಪ್ರಶಾಂತವಾದ ವಾತಾವರಣ ಸುಂದರವಾದ ಹೂವಿನ ತೋಟ. ನಡುವೆ ಅತ್ಯಾಧುನಿಕ ಕಟ್ಟಡ ಒಪ್ಪಓರಣಗಳಿಂದ ಜೋಡಿಸಿಟ್ಟ ಪುಸ್ತಕಗಳು ಮತ್ತು ನಿಯತಕಾಲಿಕೆಗಳು ಹೇಳಿ ಮಾಡಿಸಿದ ಕೂತು ಓದಲು ಸುಖಕರವಾದ ಕುರ್ಚಿಗಳು, ಬರೆಯಲು ಅನುಕೂಲವಾದ ಟೇಬಲ್ಲುಗಳು ಕೇಳಿದ ಪ್ರಶ್ನೆಗೆ ಉತ್ತರಿಸುವ ಕೇಳಿದ ಪುಸ್ತಕ ತೆಗೆದುಕೊಡುವ ಸಿಬ್ಬಂದಿವರ್ಗ. ಹರಿಯದ ಕೊಳೆಯಾಗದ ಸೊಗಸಾಗಿ ರಟ್ಟುಕಟ್ಟಿದ ಭಾರತದಲ್ಲೇ ಕೆಲವೇ ಕಡೆಗಳಲ್ಲಿ ದೊರೆಯಬಹುದಾದ ಅಪೂರ್ವ ನಿಯತಕಾಲಿಕೆಗಳು. ೧೭ನೇ ಶತಮಾನದಿಂದ ಹಿಡಿದು ಇಂದಿನವರೆಗೂ ಬಿಡದೆ ಪ್ರಕಟವಾದ ಪ್ರತಿಗಳ ಎಲ್ಲ ಸಂಚಿಕೆಗಳು ಇರುವ ವಿಜ್ಞಾನಿಗಳಿಗೆ ಜ್ಞಾನನಿಧಿ ನಿವಾಸವೊಂದು ಬೆಂಗಳೂರಿನಲ್ಲಿದೆ. ಇದು ಕೇವಲ ಕನ್ನಡನಾಡಿನಲ್ಲಷ್ಟೇ ಅಲ್ಲ ಭಾರತದಲ್ಲೇ ಪ್ರಸಿದ್ಧಿಹೊಂದಿದ ಪುಸ್ತಕ ಭಂಡಾರವಾಗಿದೆ ಎಂಬುದು ಅನೇಕರಿಗೆ ಬಹುಶಃ ತಿಳಿದಿರಲಾರದು. ಏಕೆಂದರೆ ಲಾಲ್‌ಬಾಗ್, ಕಬ್ಬನ್‌ಪಾರ್ಕ್, ಮ್ಯೂಸಿಯಂ. ವಿಧಾನಸೌಧ ಎಂಬುದಾಗಿ, ಬೆಂಗಳೂರು ಪ್ರವಾಸ ಮಾಡುವ ಜನಸಾಮಾನ್ಯರ ದೃಷ್ಟಿಯಲ್ಲಿ ಈ ಸಂಸ್ಥೆ ಇಲ್ಲ. ಬೆಂಗಳೂರಿನ ಮಲ್ಲೇಶ್ವರದ ತುದಿಯಲ್ಲಿ ವಿಶಾಲವಾದ ಜಾಗದಲ್ಲಿ ನೆಲೆಗೊಂಡಿರುವ ಈ ಪುಸ್ತಕ ಭಂಡಾರ ನಾಡಿನ ಹೆಮ್ಮೆಯ ಆಸ್ತಿಗಳಲ್ಲಿ ಒಂದಾಗಿದೆ. ವಿಶಿಷ್ಟವರ್ಗದ ಸೇವೆಯ ವಿಖ್ಯಾತ ಪುಸ್ತಕ ಭಂಡಾರವಾಗಿದೆ.

ಗ್ರಂಥಭಂಡಾರ ಭವನ

ತಾತಾ ವಿಜ್ಞಾನ ಮಂದಿರದ ಪುಸ್ತಕ ಭಂಡಾಗವು ಪುಸ್ತಕ ನಿಯತಕಾಲಿಕೆ ಒಳ್ಳೆಯ ವ್ಯವಸ್ಥೆ. ವೈಜ್ಞಾನಿಕ ಪದ್ಧತಿಗಳಿಗೆ ಪ್ರಖ್ಯಾತವಾಗಿರುವ ಹಾಗೆಯೇ ಪುಸ್ತಕ ಭಂಡಾರದ ಕಟ್ಟಡ ಹೇಗಿರಬೇಕು ಎಂಬುದಕ್ಕೆ ಮಾದರಿ ಆಗಿದೆ. ಈಗಿರುವ ಹೊಸ ಕಟ್ಟಡ ೧೯೬೫ರಲ್ಲಿ ನಿರ್ಮಾಣವಾಯಿತು. ವಿಶಾಲವಾದ ಸಭಾಂಗಣಗಳು, ಗಾಳಿ ಬೆಳಕಿನ ವ್ಯವಸ್ಥೆ, ಯಾವುದೇ ಸಂದರ್ಭದಲ್ಲೂ ಬಿಸಿಲು ಜೋಡಿಸಿರುವ ಪುಸ್ತಕಗಳ ಮೇಲೆ ಬೀಳದ ಹಾಗೆ ಅವು ಕೆಡದ ಹಾಗೆ ಕಟ್ಟಡನಿರ್ಮಾಣ, ಪುಸ್ತಕ ಬೀರುಗಳು, ಕುರ್ಚಿಮೇಜುಗಳು, ಸಂಶೋಧಕ ಓದುಗರ ಜಾಗಗಳ ವ್ಯವಸ್ಥೆ, ವಿಚಾರಗೋಷ್ಠಿಗಳ ಭವನ, ಮೈಕ್ರೋಫಿಲಂ, ರೀಡಿಂಗ್ ವಿಭಾಗ, ಪಠ್ಯಪುಸ್ತಕಗಳ ವಿಭಾಗ, ಪ್ರಮಾಣ ಗ್ರಂಥಗಳ ವಿಭಾಗ, ನಿಯತ ಕಾಲಿಕೆಗಳ ವಿಭಾಗ, ಮುಂತಾದ ಸುಸಜ್ಜಿತ ವ್ಯವಸ್ಥೆ ಈ ಭವನದಲ್ಲಿದೆ. ಒಂದು ಲಕ್ಷ ಅರವತ್ತೆರಡು ಸಾವಿರಕ್ಕೂ ಜಾಸ್ತಿಯಾಗಿ ಪುಸ್ತಕ–ಪತ್ರಿಕೆ–ವರದಿಗಳ ವೈಜ್ಞಾನಿಕ ಸಾಹಿತ್ಯವನ್ನು ಈ ಭಂಡಾರ ಹೊಂದಿದೆ. ದಿನಕ್ಕೆ ೫೦೦ಕ್ಕೂ ಹೆಚ್ಚು ಮಂದಿ ವಿದ್ಯಾರ್ಥಿಗಳು ಅಧ್ಯಾಪಕರು ಸಂಶೋಧಕರು ತಜ್ಞರು

ಗ್ರಂಥಾಲಯ ಭವನ



ಬೆಂಗಳೂರು ನಗರದಲ್ಲಿರುವ ಭಾರತೀಯ ವಿಜ್ಞಾನ ಮಂದಿರ

ಈ ಭಂಡಾರವನ್ನು ಬಳಸಿಕೊಳ್ಳುತ್ತಾರೆ. ಪ್ರಖ್ಯಾತ ವಿಜ್ಞಾನಿಗಳಾದ ಡಿ|| ಸಿ. ವಿ. ರಾಮನ್, ಡಿ|| ಹೆಚ್.ಜೆ. ಬಾಭಾ, ಡಾ. ಎಸ್. ಭಗವಂತಂ, ಕನ್ನಡದ ಡಿ|| ಆರ್. ಎಲ್. ನರಸಿಂಹಯ್ಯ ಮೊದಲಾದ ಪ್ರಸಿದ್ಧ ವ್ಯಕ್ತಿಗಳು ಈ ಪುಸ್ತಕ ಭಂಡಾರದ ಪರಮ ಪ್ರಯೋಜನವನ್ನು ಪಡೆದಿದ್ದಾರೆ. ಇಂದಿಗೂ ಇಲ್ಲಿ ಅಭ್ಯಾಸ ಮಾಡುವ ತರುಣ ಸಂಶೋಧಕರಲ್ಲದೆ, ರಾಜ್ಯ ಕೇಂದ್ರ ಸರ್ಕಾರಗಳ ಅನೇಕ ವೈಜ್ಞಾನಿಕ ಇಲಾಖೆಗಳ ತಜ್ಞರು ನಾಡಿನ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಿಕ್ಷಣದ ವಿಜ್ಞಾನ ಕ್ಷೇತ್ರದ ವಿದ್ಯಾರ್ಥಿಗಳು ಪ್ರಾಧ್ಯಾಪಕರಿಗೆ ಈ ಪುಸ್ತಕಭಂಡಾರ ಕಾಮಧೇನುವಾಗಿದೆ.

ಅಪೂರ್ವ ನಿಯತ ಕಾಲಿಕೆಗಳು

ಎರಡು ಅಂತಸ್ತಿನ ನಾಲ್ಕು ಅಟ್ಟಣೆಗಳಲ್ಲಿ ಸುಮಾರು ೩೦೦ ಉಕ್ಕಿನ ಕಪಾಟುಗಳಲ್ಲಿ ಒಂದೂವರೆ ಲಕ್ಷಕ್ಕೂ ಮಿಕ್ಕಿದ ಗ್ರಂಥಸಂಗ್ರಹ ಇಲ್ಲಿದೆ. ಈ ಗ್ರಂಥ-ಪತ್ರಿಕೆಗಳು ಅಪೂರ್ವವಾದವು ಮತ್ತು ಅಮೂಲ್ಯವಾದವು. ಉದಾಹರಣೆಗೆ ಇಲ್ಲಿನ ಸಂಗ್ರಹದ ವೈಶಿಷ್ಟ್ಯವನ್ನು ಕುರಿತು ಹೇಳಬಹುದಾದರೆ ಭಂಡಾರದಲ್ಲಿ ನಿಯತ ಕಾಲಿಕೆಗಳ ವಿಭಾಗದಲ್ಲಿ ಜಗದ್ವಿಖ್ಯಾತ ಕೆಲವು ವೈಜ್ಞಾನಿಕ ಪತ್ರಿಕೆಗಳ ಎಲ್ಲಾ ಸಂಚಿಕೆಗಳೂ ಸಿಗುತ್ತವೆ. ಇಡೀ ಭಾರತದಲ್ಲಿ ಕೆಲವೇ ಕಡೆ ಈ ರೀತಿ ಸಂಚಿಕೆಗಳು ದೊರೆಯುತ್ತವೆ—ಅಷ್ಟೆ. ನಿದರ್ಶನಕ್ಕೆ, ಜಗತ್ತಿನ ಅನೇಕ ವಿಜ್ಞಾನಿಗಳ ಪ್ರಥಮ ಶೋಧನಗಳನ್ನು ಪ್ರಕಟಿಸಿರುವ ಪ್ರಖ್ಯಾತ ವೈಜ್ಞಾನಿಕ ಪತ್ರಿಕೆ "ಫಿಲಾಸಫಿಕಲ್ ಟ್ರಾನ್ಸ್‌ಸಾಕ್ಷನ್ ಆಫ್ ರಾಯಲ್ ಸೊಸೈಟಿ ಆಫ್ ಲಂಡನ್" ಎಂಬ ಪತ್ರಿಕೆಯು ಕ್ರಿ.ಶ. ೧೬೬೫ನೇ ಇಸವಿಯಿಂದ ಪ್ರಕಟವಾಗಿದೆ. ಅಂದಿನಿಂದ ಇಂದಿನವರೆಗೆ ಪ್ರಕಟವಾದ ಎಲ್ಲಾ ಸಂಚಿಕೆಗಳು ಸುಮಾರು ೨೬೦ ಸಂಪುಟಗಳಲ್ಲಿ ಈ ಭಂಡಾರದಲ್ಲಿವೆ. ಹಾಗೆಯೇ, ಜರ್ಮನ್ ಭಾಷೆಯಲ್ಲಿ ಪ್ರಕಟವಾದ ೧೮೯೭ರಿಂದ ೧೯೭೦ರ ವರೆಗಿನ "ಕೆಮಿಷೆ ಜೆಂಟ್ರಾಬ್ಲಾಟ್" ಎಂಬ ಇನ್ನೊಂದು ಜಗದ್ವಿಖ್ಯಾತ ಪತ್ರಿಕಾ ಸಂಗ್ರಹವೂ ಇಂಗ್ಲಿಷಿನ 'ಕೆಮಿಕಲ್ ಅಬ್‌ಸ್ಟ್ರಾಕ್ಟ್' ಎಂಬ ವೈಜ್ಞಾನಿಕ ವಿಚಾರಗಳ ಸಾರ ಸಂಗ್ರಹ ಪತ್ರಿಕೆಯ ೧೯೦೭ರಿಂದ ಎಲ್ಲ ಸಂಚಿಕೆಗಳೂ, ಫ್ರೆಂಚ್ ಭಾಷೆಯ "ಕಾಂಪ್ಟೊರೆಂಡಸ್" ಎಂಬ ಪತ್ರಿಕೆಯ ೧೮೩೫ರಿಂದ ಎಲ್ಲ ಸಂಚಿಕೆಗಳೂ ಇಲ್ಲಿವೆ. ಇಂತಹ ಸಂಗ್ರಹದ ದೊಡ್ಡ ಪಟ್ಟಿಯನ್ನೇ ಕೊಡಬಹುದು. ಇಂಗ್ಲಿಷ್, ಜರ್ಮನ್, ರಷ್ಯನ್, ಫ್ರೆಂಚ್ ಮೊದಲಾದ ಭಾಷೆಗಳಲ್ಲಿ ಪ್ರಕಟವಾಗುವ ಸುಮಾರು ಎರಡು ಸಾವಿರ ನಿಯತ ಕಾಲಿಕೆಗಳು ಇಲ್ಲಿ ದೊರೆಯುತ್ತವೆ. ವಿಜ್ಞಾನ ಕ್ಷೇತ್ರದ ಅತ್ಯಾಧುನಿಕ ವಿಭಾಗಕ್ಕೆ ಸಂಬಂಧಿಸಿದ ಇತ್ತೀಚಿನ ಎಲ್ಲ ರೀತಿಯ ನಿಯತಕಾಲಿಕೆಗಳೂ ಸಹ.

ಸೇವಾ ಸೌಲಭ್ಯ

ವರ್ಷದಲ್ಲಿ ಕೇವಲ ೫ ಅಥವಾ ೬ ದಿನಗಳು ಮಾತ್ರ ರಜಾ ಕೊಡುವ, ಉಳಿದ ಎಲ್ಲಾ ದಿನಗಳು ಗೊತ್ತಾದ ಕಾಲದಲ್ಲಿ ತೆರೆದಿರುವ ಈ ಪುಸ್ತಕ ಭಂಡಾರವು ಓದುಗರಿಗೆ ವಿಶಿಷ್ಟ ಅನುಕೂಲಗಳನ್ನು ನೀಡಿದೆ.

ಕೋಲನ್ ಪದ್ಧತಿಯಲ್ಲಿ ಗ್ರಂಥ ವ್ಯವಸ್ಥೆ ಇದೆ. ಅಕಾರಾದಿ ಪಟ್ಟಿ, ವರ್ಗೀಕೃತ ವಿಷಯಗಳಪಟ್ಟಿ, ನಿಯತ ಕಾಲಿಕೆ—ವರದಿಗಳಪಟ್ಟಿ, ಲೇಖಕರಪಟ್ಟಿ 'ಎಂಬ ವಿವಿಧ ರೀತಿಯ ಗ್ರಂಥಸೂಚಿಗಳಿವೆ. ಇದಲ್ಲದೆ, ಓದುಗರು ಯಾವುದಾದರೂ ವಿಷಯದ ಬಗ್ಗೆ ಗ್ರಂಥಸೂಚಿ ಕೇಳಿದರೆ ಸಿದ್ಧಪಡಿಸಿಕೊಡುತ್ತಾರೆ.

ನಿರ್ದಿಷ್ಟ ವಿಷಯದ ಮೇಲೆ ಮುಖ್ಯವಾದ ಮತ್ತು ಓದಬೇಕಾದ ಪುಸ್ತಕ ವಿವರಗಳನ್ನು ನೀಡುತ್ತಾರೆ.

ಯಾವುದಾದರೂ ಯೋಜನೆ ಇದ್ದರೆ ಅದಕ್ಕೆ ತಕ್ಕ ಸಾಮಗ್ರಿ ಒದಗಿಸುತ್ತಾರೆ. ಅಪರೂಪದ ಅಮೂಲ್ಯವಾದ ಲೇಖನ, ಚಿತ್ರ, ಪಟ್ಟಿಗಳ ಪತ್ರಿಕಾ ಲೇಖನದ ಭಾಗಗಳು ಬೇಕಾದಲ್ಲಿ ಅದನ್ನು 'ಇನ್‌ಸ್‌ಡಾಕ್' ವಿಭಾಗದ ಮೂಲಕ ಪುನರ್ಮುದ್ರಿಸಿದ ಪ್ರತಿ ನೀಡುತ್ತಾರೆ.

ಪದೇ ಪದೇ ಬಳಸುವ ಪಠ್ಯಪುಸ್ತಕಗಳನ್ನು ಪ್ರತ್ಯೇಕವಾಗಿ ತೆಗೆದಿಟ್ಟು ನೀಡುವ ವ್ಯವಸ್ಥೆ ಇದೆ.

ಅಲಭ್ಯವಾದ ನಿಯತಕಾಲಿಕೆಗಳ ಮತ್ತು ಸಂಶೋಧನ ಪ್ರಬಂಧಗಳ ಮೈಕ್ರೋಫಿಲಂ ಭಂಡಾರವು ಓದುಗರಿಗೆ ಓದಲು ಸಿಗುತ್ತದೆ.

ವಾರಕ್ಕೊಮ್ಮೆ ಕಾಲ ವಿಶೇಷವಾಗಿ ವಿಶಿಷ್ಟ ವಿಷಯವನ್ನು ಪರಿಚಯ ಮಾಡಿಕೊಡುವ ಪ್ರದರ್ಶನವನ್ನು ಏರ್ಪಾಟುಮಾಡಿರುತ್ತದೆ.

ಭಾರತದಲ್ಲಿ ಪೇಟೆಂಟ್ ಆದ ಸಂಶೋಧನೆಗಳ ವಿವರಗಳು ದಾಖಲೆಗಳೆಲ್ಲಾ ಇಲ್ಲಿ ಪರಾಮರ್ಶೆಗೆ ದೊರೆಯು

ತ್ತವೆ.

ಈ ಸಂಸ್ಥೆಯಲ್ಲಿ ಸಂಶೋದನೆ ನಡೆಸಿದವರ ವೈಜ್ಞಾನಿಕ ಮಹಾ ಪ್ರಬಂಧಗಳು (ಥೀಸೆಸ್) ಜರ್ಮನಿ ಮೊದಲಾದ ದೇಶಗಳ ವಿಶ್ವವಿದ್ಯಾನಿಲಯಗಳಲ್ಲಿ ಪ್ರಕಟವಾದ ಸಂಶೋಧನಾ ಪ್ರಬಂಧಗಳು ಇಲ್ಲಿ ಓದಲು ಸಿಗುತ್ತವೆ.

ಗೋಷ್ಠಿಮಂದಿರ

ಈ ಪುಸ್ತಕಭಂಡಾರ ಕೇವಲ ಪುಸ್ತಕ ಕೂಡಿಟ್ಟ ಜೋಡಿಸಿಟ್ಟ ಓದಲು ನೀಡಲು ಮಾತ್ರ ವ್ಯವಸ್ಥೆ ಹೊಂದಿಲ್ಲ. ಜತೆಗೆ ಉನ್ನತ ವಿಚಾರಗಳ ಬಗ್ಗೆ ರಾಷ್ಟ್ರೀಯ ಅಂತರರಾಷ್ಟ್ರೀಯ 'ಸೆಮಿನಾರ್' (ವಿಚಾರಗೋಷ್ಠಿ) ವ್ಯವಸ್ಥೆಗೊಳಿಸುವ ಗೋಷ್ಠಿಮಂದಿರ ಇಲ್ಲಿದೆ. ಸುಮಾರು ೧೨೦ ಜನ ಕೂಡಬಹುದಾದ ಬರೆದುಕೊಳ್ಳಲು ಮೇಜಿನಕುರ್ಚಿ, ಧ್ವನಿವರ್ಧಕವ್ಯವಸ್ಥೆ, ಬರೆಯಲು ಗೋಡೆಹಲಗೆ ಮತ್ತು ಬರೆದು ಪ್ರತಿಬಿಂಬಿಸಲು ಪ್ಲೆಕ್ಲೊರೇಟರ್ ಸಾಧನ ಇತ್ಯಾದಿ ಸೌಕರ್ಯ ಅಲ್ಲಿದೆ. ಈ ಮಂದಿರದಲ್ಲಿ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಗೋಷ್ಠಿಗಳು ಜರುಗಿ ಅನೇಕ ವಿಜ್ಞಾನಿಗಳು ಭಾಗವಹಿಸಿದ್ದಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಅತ್ಯಾಧುನಿಕ ಸುಸಜ್ಜಿತ ಪುಸ್ತಕ ಭಂಡಾರದ ವ್ಯವಸ್ಥೆಗೆ ಮಾದರಿಯಾಗಿ ಈ ಗ್ರಂಥಾಲಯವನ್ನು ಆರಿಸಿಕೊಳ್ಳಬಹುದು ಎಂದರೆ ತಪ್ಪಾಗದು.

ಪ್ರತಿ ವರ್ಷವೂ ಸುಮಾರು ಆರು ಲಕ್ಷ ರೂಪಾಯಿಗಳನ್ನು ಪುಸ್ತಕಗಳಿಗಾಗಿಯೇ ವೆಚ್ಚಮಾಡಿ ದೇಶ ವಿದೇಶಗಳಿಂದ ವೈಯಕ್ತಿಕವಾಗಿ ಕೊಳ್ಳಲು ಅಸಾಧ್ಯವಾದ ಪ್ರಕಟನೆಗಳನ್ನೂ ಒಳಗೊಂಡು ಸುಮಾರು ಐದು ಸಾವಿರ ಪುಸ್ತಕಗಳನ್ನೂ, ಎರಡು ಸಾವಿರ ನಿಯತ ಕಾಲಿಕೆಗಳನ್ನು ತರಿಸುತ್ತಿರುವ, ಈಗ ಸಧ್ಯದಲ್ಲಿ ಒಂದೂವರೆ ಲಕ್ಷಕ್ಕೂ ಮಿಕ್ಕಿ ಪುಸ್ತಕ ನಿಯತಕಾಲಿಕೆ ವರದಿ ಪ್ರಕಟನೆಗಳ ಜ್ಞಾನನಿಧಿಯನ್ನೂ ಸಂಗ್ರಹಿಸಿರುವ ಈ ಗ್ರಂಥಭಂಡಾರ ನಮ್ಮ ನಾಡಿನ ಹೆಮ್ಮೆಯ ಆಸ್ತಿಯಾಗಿದೆ; ತರುಣ ಸಂಶೋಧಕರಿಗೆ ಜ್ಞಾನದೀಪವಾಗಿದೆ. ರಾಷ್ಟ್ರೀಯ ಮಟ್ಟದ ಶ್ರೇಷ್ಠ ಗ್ರಂಥಾಲಯವಾಗಿದೆ. ಎಲ್ಲಾ ಪುಸ್ತಕ ಪ್ರೇಮಿಗಳೂ ಗ್ರಂಥಭಂಡಾರಿಗಳೂ ಜ್ಞಾನದಾಹಿಗಳೂ ವಿಜ್ಞಾನಿಗಳೂ ನಾಡಿನ ಗಣ್ಯರೂ ಸಂದರ್ಶಿಸಬೇಕಾದ ಸ್ಥಳವಾಗಿದೆ.

ಜೀವನದಲ್ಲಿ ಪುಸ್ತಕವೆ ಭಾಗ್ಯ; ಅನುಭಾವಿಗಳ ಪುಸ್ತಕಗಳು ಸಕಲ ಸೌಭಾಗ್ಯ; ಕ್ರಾಂತಿ ನಡೆಸುವುದು, ಭ್ರಾಂತಿ ಬಿಡಿಸುವುದು, ಶಾಂತಿಯನ್ನು ನೆಲೆಸುವುದು ಪುಸ್ತಕ. ವೇದ, ವಚನ, ಗೀತೆ–ಎಲ್ಲವೂ ಪುಸ್ತಕ. ಸಂತರ ವಾಣಿ ಪುಸ್ತಕ. ಪರಂಪರಾನುಗತ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿರುವುದು ಪುಸ್ತಕ. ಬಸವಳಿದವರ ಬಾಳಿಗೆ ಬೆಳಕನ್ನೀಯುವುದು ಪುಸ್ತಕ.

—ಜೀರಿಗೆಕಟ್ಟೆ ಬಸವಪ್ಪ

[ಪುಟ ೧೨೬ರ ಲೇಖಕರ ಹೆಸರನ್ನು ಶ್ರೀಮತಿ ಸುಬ್ರಮಣ್ಯಂ ಎಂದು ಓದಿಕೊಳ್ಳಬೇಕಾಗಿ ವಿನಂತಿ]

ಮದ್ರಾಸು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ

● ಎಂ. ಮರಿಯಪ್ಪ ಭಟ್ಟ

೧೯೨೭ರಲ್ಲಿ ಮದ್ರಾಸು ವಿಶ್ವವಿದ್ಯಾನಿಲಯದಲ್ಲಿ ಭಾಷೆಗಳ ವಿಶೇಷ ಅಧ್ಯಯನಕ್ಕಾಗಿ ಪ್ರತ್ಯೇಕ ಪ್ರತ್ಯೇಕ ಆರು ವಿಭಾಗಗಳು ಉದಯಿಸಿದುವು. ಅವು ಹೀಗಿವೆ: ತಮಿಳು, ಕನ್ನಡ, ತೆಲುಗು, ಮಲೆಯಾಳ, ಸಂಸ್ಕೃತ, ಅರಬಿ, ಪರ್ಷಿಯನ್, ಉರ್ದು. ಅಂದು ಮದ್ರಾಸು ವಿಶ್ವವಿದ್ಯಾನಿಲಯದ ಕ್ಷೇತ್ರಕ್ಕೆ ಕನ್ನಡ ಪ್ರದೇಶಗಳಾದ ದಕ್ಷಿಣ ಕನ್ನಡ, ಬಳ್ಳಾರಿ, ಕೊಡಗುಗಳು ಸೇರಿದ್ದುವು. ಶಾಲಾ ಕಾಲೇಜುಗಳ ಎಲ್ಲ ಹಂತಗಳಲ್ಲೂ ಕನ್ನಡದ ಅಧ್ಯಯನಕ್ಕೆ ಅನುಕೂಲತೆಗಳು ಇದ್ದುವು. ಪ್ರಾದೇಶಿಕ ಭಾಷೆಗಳಲ್ಲಿ ಸಂಶೋಧನೆ, ಗ್ರಂಥಸಂಪಾದನೆ, ನಿಘಂಟು ರಚನೆ, ಉತ್ತಮ ಪಠ್ಯಪುಸ್ತಕಗಳ ನಿರ್ಮಾಣ, ದ್ರಾವಿಡ ಭಾಷೆಗಳ ತುಲನಾತ್ಮಕ ಅಭ್ಯಾಸ ಇತ್ಯಾದಿ ವಿಶ್ವವಿದ್ಯಾನಿಲಯದ ಭಾಷಾವಿಭಾಗಗಳ ಗೊತ್ತುಗುರಿಗಳಾಗಿದ್ದುವು. ಈ ಕಾರ್ಯಕ್ರಮ ಹೆಚ್ಚು ಯಶಸ್ವಿಯಾಗಬೇಕೆಂಬ ದೃಷ್ಟಿಯಿಂದ, ಅಧ್ಯಾಪಕರಿಗೆ ಕಲಿಸುವ ಕೆಲಸ ಸ್ನಾತಕೋತ್ತರ ವಿಭಾಗಕ್ಕೆ ಮಾತ್ರ ಸೀಮಿತವಾಗಿತ್ತು.

ಕನ್ನಡ ವಿಭಾಗದಲ್ಲಿ ಅಂದಿನಿಂದ (೧೯೨೭) ಇಂದಿನವರೆಗೆ (೧೯೭೨) ಪ್ರಕಟಿತವಾದ ಮುಖ್ಯ ಗ್ರಂಥಗಳ ವಿವರ:

ಕವಿರಾಜಮಾರ್ಗ, ಪುಷ್ಪದಂತಪುರಾಣ, ನೇಮಿನಾಥಪುರಾಣ, (ಕರ್ಣಪಾರ್ಯ), ಓಷಧಿಕೋಶ, ಅಭಿಧಾನ ರತ್ನಮಾಲೆ (ನಾಗವರ್ಮ), ರಸರತ್ನಾಕರ (ಸಾಳ್ವ), ಅಭಿಧಾನ ವಸ್ತುಕೋಶ (ನಾಗವರ್ಮ), ಖಗೇಂದ್ರ ಮಣಿದರ್ಪಣ, (ಮಂಗರಸ), ಶಬ್ದಮಣಿದರ್ಪಣ (ಲಿಂಗಣಾರಾಧ್ಯ ವೃತ್ತಿ ಸಮೇತ), ಅಭಿನವಾಭಿಧಾನ, (ಮಂಗರಾಜ), ಕನ್ನಡ ಶಾಸನಗಳು, ವರ್ಧಮಾನ ಪುರಾಣ (ಆಚಣ್ಣ), ಪಾರ್ಶ್ವನಾಥಪುರಾಣ (ಪಾರ್ಶ್ವ ಪಂಡಿತ) ವಿಷ್ಣುಪುರಾಣ (ಪಂಚವಾಂಶ ಚಿಕುಪಾಧ್ಯಾಯ), ಜಾತಕತಿಲಕ (ಶ್ರೀಧರಾಚಾರ್ಯ), ದ್ರಾವಿಡ ಜ್ಞಾತಿ ಪದಕೋಶ (ಎಲ್ಲ ವಿಭಾಗಗಳ ಜತೆ ಕೆಲಸ), ತುಳು–ಆಂಗ್ಲ ನಿಘಂಟು, ಕನ್ನಡದಲ್ಲಿನ ವಿದೇಶಿ ಎರವಲುಗಳು, ಕಿಟೆಲರ ನಿಘಂಟು (ವಿಸ್ತೃತ ಪರಿಷ್ಕೃತ)–ನಾಲ್ಕು ಸಂಪುಟಗಳು–ಇತ್ಯಾದಿ. ಇವಲ್ಲದೆ ಮದ್ರಾಸು ಪ್ರಾಚ್ಯ ಹಸ್ತಲಿಖಿತ ಪುಸ್ತಕಾಲಯದಿಂದ ಪ್ರಕಟಿತವಾದ ಕನ್ನಡ ಗ್ರಂಥಗಳ ಸಂಪಾದನೆ ಕಾರ್ಯದಲ್ಲಿ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ತನ್ನ ನೆರವನ್ನು ನೀಡಿದೆ. ಅಲ್ಲಿಂದ ಹೊರಬಂದ ಪ್ರಸಿದ್ಧ ಗ್ರಂಥಗಳಲ್ಲಿ ಕೆಲವು:

ವೆಂಕಾಮಾತ್ಯ ರಾಮಾಯಣ, ಲೋಕೋಪಕಾರ (ಚಾವುಂಡರಾಯ), ಅಶ್ವಶಾಸ್ತ್ರ, ವೈದ್ಯಸಾರ ಸಂಗ್ರಹ, ಸೂಪಶಾಸ್ತ್ರ, ಸದ್ಗುರು ರಹಸ್ಯ, ವ್ಯವಹಾರ ಗಣಿತ, ಸಂಗೀತ ರತ್ನಾಕರ, ಅಟ್ಟಮತ, ಮನ್ಮಥ ವಿಜಯ ಇತ್ಯಾದಿ.

ಕನ್ನಡ ವಿಭಾಗದಲ್ಲಿ ಈವರೆಗೆ ದುಡಿದ ಹಾಗೂ ದುಡಿಯುತ್ತಿರುವ ಅಧ್ಯಾಪಕರು:

ಸರ್ವಶ್ರೀ ೧. ಆಲಿಮಾನ್ ವೆಂಕಟರಾಯರು
೨. ಎಚ್. ಶೇಷಅಯ್ಯಂಗಾರ್ಯರು
೩. ಎಚ್. ಚೆನ್ನಕೇಶವಅಯ್ಯಂಗಾರ್ಯರು
೪. ಎಂ. ಗೋವಿಂದರಾಯರು
೫. ಎಂ. ಮರಿಯಪ್ಪಭಟ್ಟರು
೬. ಎ. ಶಂಕರ ಕೆದಿಲಾಯರು
೭. ಪಾ. ಶ. ಶ್ರೀನಿವಾಸ

ಭಾಷಾನುಗುಣ ಪ್ರಾಂತ ರಚನೆಯಾದ ಮೇಲೆ, ಸ್ನಾತಕೋತ್ತರ ತರಗತಿಗಳು ಕನ್ನಡಕ್ಕೆ ಮದ್ರಾಸಿನಲ್ಲಿ ಇಲ್ಲದಾಗಿದೆ. ಆದರೆ ಕನ್ನಡೇತರ ಜನದ ಅನುಕೂಲಕ್ಕಾಗಿ ಕನ್ನಡ ಡಿಪ್ಲೊಮಾ ತರಗತಿಗಳು ನಡೆಯುತ್ತಿವೆ. ಸಂಶೋಧನ ಹಾಗೂ ಗ್ರಂಥಾನುವಾದ, ಗ್ರಂಥಸಂಪಾದನ ಕಾರ್ಯಕ್ರಮಗಳು ಈಗಲೂ ನಡೆಯುತ್ತಿರುವುದು ಸಂತಸದ ವಿಷಯ. ತಮಿಳಿನ ಪೆರಿಯ ಪುರಾಣ. ತಿರಕ್ಕುರಳುಗಳ ಅಧಿಕೃತ ಕನ್ನಡ ಅನುವಾದ ಕಾರ್ಯ ಸಾಗುತ್ತಿದೆ. ಲಿಂಗಣಾರಾಧ್ಯ ವೃತ್ತಿಯನ್ನೊಳಗೊಂಡ ಶಬ್ದಮಣಿದರ್ಪಣದ ಪುನರ್ಮುದ್ರಣ ಕಾರ್ಯ ಮುಗಿಯುತ್ತಾ ಬಂದಿದೆ. ●

ಮಿಥಿಕ್ ಸೊಸೈಟಿಯ ಪುಸ್ತಕ ಭಂಡಾರ


● ತಿ. ತಾ. ಶರ್ಮ

"ಮಿಥಿಕ್ ಸೊಸೈಟಿ" ಎಂಬುದು ಒಂದು ಅಧ್ಯಯನ ಮತ್ತು ಸಂಶೋಧನ ಸಂಸ್ಥೆ–ಶುದ್ಧ ವಿಜ್ಞಾನ–ಯಂತ್ರ ವಿಜ್ಞಾನದಿಂದ ಭಿನ್ನವಾದ, ಭಾರತದ ಇತಿಹಾಸ, ಧರ್ಮ, ದರ್ಶನ, ಶಾಸ್ತ್ರ, ಸಾಹಿತ್ಯ, ಕಲೆ, ಇತ್ಯಾದಿ ಸಂಸ್ಕೃತಿಗೆ ಸಂಬಂಧಪಟ್ಟ ವಿಚಾರಗಳ ಅಧ್ಯಯನ ಮತ್ತು ಸಂಶೋಧನೆಗೆ ಅನುಕೂಲ ಕಲ್ಪಿಸಿರುವ ಸಂಸ್ಥೆ. ೧೯೦೯ರಲ್ಲಿ ಇದರ ಸ್ಥಾಪನೆಯಾಯಿತು. ದೂರದೃಷ್ಟಿಯುಳ್ಳವರೂ, ಭಾರತ ಸಂಸ್ಕೃತಿಯ ಪುನರುಜ್ಜೀವನ ಕಾರ್ಯದ ಆವಶ್ಯಕತೆ ಮತ್ತು ಅದರ ಪವಿತ್ರತೆಯನ್ನು ಅರಿತವರೂ, ಆದವರೆಲ್ಲ ಸೇರಿ, ಆಲೋಚನೆಮಾಡಿ ಈ ಸಂಸ್ಥೆಯನ್ನು ಕಟ್ಟಿದರು. ಈ ಸಂಸ್ಥೆ ಪತ್ರಿಕೆಯೊಂದನ್ನು ನಡೆಸಿ, ವಿದ್ವಾಂಸರ ಕಡೆಯಿಂದ ಲೇಖನಗಳನ್ನು ಬರೆಸಿ, ಅವುಗಳನ್ನು ಪ್ರಕಟಿಸುತ್ತಿದೆ. ಈ ಪತ್ರಿಕೆಯ ಸಂಚಿಕೆಗಳಿಗೆ ಈಗಲೂ ದೇಶ–ವಿದೇಶಗಳಿಂದ ಬೇಡಿಕೆ ಇದೆ.

ಈ ಸಂಸ್ಥೆ ಅತ್ಯಮೂಲ್ಯವಾದ ಅಂಗ ಎಂದರೆ ಅಲ್ಲಿರುವ ಪುಸ್ತಕ ಭಂಡಾರ. ಇದು ಪ್ರಧಾನವಾಗಿ ಅಧ್ಯಯನ-ಸಂಶೋಧನ ಕಾರ್ಯದಲ್ಲಿ ನಿರತರಾದವರಿಗಾಗಿ ರೂಪುಗೊಂಡಿದೆ. ಸಹಜವಾಗಿ ಆಕರ ಗ್ರಂಥಗಳು-ಪತ್ರಿಕೆಗಳು-(Reference Books and Journals) ಎಲ್ಲ ಇಂಗ್ಲಿಷಿನಲ್ಲಿವೆ. ಸಂಸ್ಕೃತ, ಕನ್ನಡ, ಇತರ ಭಾಷೆಗಳ ಪುಸ್ತಕಗಳೂ ಹಲವು ಇವೆ. ಸಂಸ್ಥೆಯ ಪುಸ್ತಕ ಭಂಡಾರದಲ್ಲಿ ಹತ್ತು ಸಾವಿರದ ಐದು ನೂರು ಪುಸ್ತಕಗಳಿವೆ. ಈ ವರ್ಗೀಕರಣದ ಪಟ್ಟಿಯಿಂದ ಪುಸ್ತಕ ಭಂಡಾರ ಎಷ್ಟು ಗುಣಭಾರದಿಂದ ಕೂಡಿದ್ದೆಂಬುದು ತಕ್ಕಮಟ್ಟಿಗೆ ವ್ಯಕ್ತವಾಗುತ್ತಿದೆ.

Imperial Gazetteers of India.


1. Provincial Gazetteers of Bombay, Burma, Central Provinces, Madras, Mysore, Punjab, United Provinces, Others.
2. Epigraphy
3. Archaeology
4. Art and Architecture
5. Anthropology, Ethnology, Etc.
6. Antiquities & Research
7. Astronomy and Chronometry
8. Lexicons
9. Folklore
10. Administration Reports
11. Indian History
12. Journals
13. Language and Literature
14. Memoirs, Miscellaneous
15. Mysore History
16. Other Histories
17. Oriental Literature
18. Paleography
19. Politics
20. Religion
21. Sanskrit and Kannada Books.



ಸುವರ್ಣ ಮಹೋತ್ಸವ ಕಟ್ಟಡದ ಶಂಕುಸ್ಥಾಪನೆ—ಶ್ರೀ ವೀರೇಂದ್ರಪಾಟೀಲರಿಂದ




ಸ್ವಾಗತ ಭಾಷಣ–ಶ್ರೀ ಜಿ. ನಾರಾಯಣರಿಂದ



ಪರಿಷತ್ತಿನ ಪ್ರಕಟಣೆಗಳ ಬಿಡುಗಡೆ ಶ್ರೀ ಕೆ. ವಿ. ಶಂಕರಗೌಡರಿಂದ




ಪ್ರೊ: ದೇ. ಜ. ಗೌ. ಅಧ್ಯಕ್ಷ ಭಾಷಣ




'ನಿಘಂಟು' ಪ್ರಥಮ ಸಂಪುಟದ ಬಿಡುಗಡೆ–ಶ್ರೀ ರಾಮಕೃಷ್ಣ ಹೆಗ್ಗಡೆ



ಶ್ರೀ ಸಿದ್ಧಗಂಗಾಮಠಾಧ್ಯಕ್ಷ ಶ್ರೀ ಶಿವಕುಮಾರಸ್ವಾಮಿಯವರಿಂದ ಉದ್ಘಾಟನಾ ಭಾಷಣ




"ಚಿನ್ನದ ಬೆಳಸು" ಬಿಡುಗಡೆ–ಶ್ರೀ ಕೆ. ಹನುಮಂತಯ್ಯನವರಿಂದ



ಸಮ್ಮೇಳನಾಧ್ಯಕ್ಷ ಶ್ರೀ ದೇ. ಜ. ಗೌ. ಅವರ ಮೆರವಣಿಗೆ



ಸನ್ಮಾನಿತರಿಗೆ ಆಶೀರ್ವಚನ ಡಾ|| ಮಾಸ್ತಿ ಅವರಿಂದ



“ ಅಂತರ್ ಭಾರತಿ ”ಯ ಅಧ್ಯಕ್ಷ ಭಾಷಣ–ಡಾ|| ಕೆ. ವಿ. ಪುಟ್ಟಪ್ಪನವರಿಂದ



ಶುಭ ಹಾರೈಕೆ–ಡಾ|| ಡಿ. ವಿ. ಜಿ. ಅವರಿಂದ



ಸನ್ಮಾನ ಸಮಾರಂಭದ ಅಧ್ಯಕ್ಷ ಭಾಷಣ–ಶ್ರೀ ಸಿ. ನಿಜಲಿಂಗಪ್ಪನವರಿಂದ



“ ಅಂತರ್ ಭಾರತಿ ” ನಿರ್ದೇಶಕ ಡಾ|| ಮುಗಳಿ ಅವರಿಂದ ಪ್ರಸ್ತಾವನೆ



ಸಾಹಿತ್ಯಗೋಷ್ಠಿ ಅಧ್ಯಕ್ಷ ಶ್ರೀ ಕೀರ್ತಿನಾಥ ಕುರ್ತುಕೋಟಿ




ಸಾಹಿತ್ಯ ಅಕಾಡೆಮಿಯಿಂದ ಅಧ್ಯಕ್ಷರಿಗೆ ಸನ್ಮಾನ



ಮಹಿಳಾಗೋಷ್ಠಿ–ಸಂಚಾಲಕಿ ಹೆಚ್. ಎಸ್. ಪಾರ್ವತಿ ಅವರ ಪ್ರಸ್ತಾವನಾ ಭಾಷಣ

ರಾಜ್ಯಪಾಲರಿಂದ

ಕನ್ನಡ ಪುಸ್ತಕಗಳ ಪ್ರದರ್ಶನದ ಉದ್ಘಾಟನೆ



ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಏರ್ಪಡಿಸಿರುವ ಪುಸ್ತಕಪ್ರದರ್ಶನವನ್ನು ರಾಜ್ಯಪಾಲ ಶ್ರೀ ಮೋಹನ್‌ಲಾಲ್ ಸುಖಾಡಿಯಾ, ವ್ಯವಸಾಯ ಮತ್ತು ಅರಣ್ಯ ಖಾತೆ ಸಚಿವ ಶ್ರೀ ಕೆ. ಎಚ್. ಪಾಟೀಲ್, ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರು ವೀಕ್ಷಿಸುತ್ತಿರುವುದು. ಹಿಂದಿರುವವರು: ಪರಿಷತ್ತಿನ ಗೌರವ ಕಾರ್ಯದರ್ಶಿ ಶ್ರೀ ವೆಂಕಟೇಶ ಸಾಂಗಲಿ.

ಪ್ರಕಾಶನ ಮತ್ತು ಮಾರಾಟದ ಅಭಿವೃದ್ಧಿಯನ್ನು ಬರಹಗಾರನ ಬದುಕು ಅವಲಂಬಿಸಿದೆ *

ಕನ್ನಡ ಸಾಹಿತ್ಯ ಪರಿಷತ್ತು ಸಾಹಿತ್ಯ ಪ್ರಸಾರ ಯೋಜನೆಯ ಮೂಲಕ, ಬೆಳ್ಳಿಹಬ್ಬವನ್ನು ಆಚರಿಸುತ್ತಿರುವುದು, ಉಚಿತವೂ ಸಂತೋಷದಾಯಕವೂ ಆಗಿದೆ. ಈ ಕಾರ್ಯಕ್ರಮವನ್ನು ಪುಸ್ತಕ ಪ್ರದರ್ಶನದ ಮೂಲಕ ಪ್ರಾರಂಭಿಸುತ್ತಿರುವುದು ಸಮಯೋಚಿತವಾಗಿದೆಯೆಂದು ಭಾವಿಸುತ್ತೇನೆ.

ಕನ್ನಡ ಸಾಹಿತ್ಯದ ಬಗ್ಗೆ ಅಧಿಕೃತವಾಗಿ ಪ್ರಸ್ತಾಪಿಸಲಾರೆ. ಆದರೂ, ಭಾರತದ ಎಲ್ಲಾ ಭಾಷೆಗಳ ಬರಹಗಾರರ ಸಮಸ್ಯೆಗಳು ಒಂದೇ ರೀತಿಯಲ್ಲಿವೆ ಎಂದು ಭಾವಿಸುತ್ತೇನೆ. ಪ್ರಾದೇಶಿಕ ಭಾಷೆಗಳಲ್ಲಿ ಬರೆಯುವವರ ಗ್ರಂಥಗಳ ಪ್ರಕಟಣೆಯು, ಯಾವಾಗಲೂ, ನಷ್ಟ ಹಾಗೂ ಕಷ್ಟದಾಯಕ ಕೆಲಸವೇ ಆಗಿದೆ. ಆದರಲ್ಲೂ ಪ್ರಕಟವಾದ ಕೃತಿಗಳನ್ನು ಓದುಗರಿಗೊದಗಿಸುವುದು ಮತ್ತಷ್ಟು ಕಷ್ಟದ ಕೆಲಸವಾಗಿದೆ. ಅನೇಕ ಪ್ರಾದೇಶಿಕ ಭಾಷೆಗಳಲ್ಲಿ ಬರೆಯುವ, ಪ್ರತಿಭಾವಂತ ಬರಹಗಾರರು ಕೂಡ, ತಮ್ಮ ಕೃತಿಗಳನ್ನು ಪ್ರಕಟಿಸುವ ಹಾಗೂ ವಾಚಕರ ಗಮನಕ್ಕೆ ತರುವ ತೊಂದರೆಯಿಂದಾಗಿ, ಅನೇಕ ವರ್ಷಗಳ ಕಾಲ ಕಷ್ಟಪಟ್ಟಿದ್ದಾರೆಂಬುದನ್ನು ನಾನು ಬಲ್ಲೆ. ಕೆಲವೊಂದು ಸಂದರ್ಭಗಳನ್ನು ಬಿಟ್ಟರೆ, ಬೇರೆ ದೇಶಗಳಲ್ಲಿರುವಂತೆ, ನಮ್ಮ ದೇಶಭಾಷೆಗಳಲ್ಲಿ ಕೂಡ, ಪ್ರಕಟಣೆಯ ಮತ್ತು ಪ್ರಚಾರದ ವಿಧಾನಗಳನ್ನು ಇನ್ನೂ ರೂಪಿಸಿಕೊಳ್ಳಬೇಕಾಗಿದೆ.

ಇತ್ತೀಚೆಗೆ, ರಾಷ್ಟ್ರ ಹಾಗೂ ರಾಜ್ಯಮಟ್ಟದಲ್ಲಿ ಪುಸ್ತಕ ಮೇಳಗಳು ನಡೆದಿವೆ. ಆದರೆ, ಯಾವಾಗಲೋ ಒಮ್ಮೆ ಇಂತಹ ಮೇಳಗಳನ್ನು ನಡೆಸುವುದರಲ್ಲಿ ಪ್ರಯೋಜನವಿಲ್ಲ. ಪುಸ್ತಕ ಪ್ರಕಟಣೆಯು ಪೂರ್ಣ ಕಾಲಾವಧಿಯ ಉದ್ಯಮ. ಅನೇಕ ವೇಳೆ, ನಮ್ಮ ಬರಹಗಾರರು ತಮ್ಮ ಪುಸ್ತಕಗಳನ್ನು ಮುದ್ರಣಕ್ಕೊಳಗು ಮಾಡುವುದೇ ಕಷ್ಟವಾಗಿದೆ. ಪುಸ್ತಕ ಮುದ್ರಣವಾದ ಮೇಲೆ ತಮ್ಮ ಕೆಲಸ ಮುಗಿಯಿತೆಂದೂ ಬರಹಗಾರನನ್ನು ಪೋಷಿಸುವುದು ಓದುಗನ ಕರ್ತವ್ಯವೆಂದೂ ಮುದ್ರಕರೂ ಪ್ರಕಾಶಕರೂ ಭಾವಿಸಿಕೊಳ್ಳುತ್ತಾರೆ. ಆದರೆ, ಈ ರೀತಿ ಎಂದಿಗೂ ಆಗುವುದಿಲ್ಲ. ಪುಸ್ತಕಗಳನ್ನು ಸಾರ್ವಜನಿಕರ ಗಮನಕ್ಕೆ ತರುವಂತೆ ವ್ಯವಸ್ಥೆ

---

* ಆಗಸ್ಟ್ ೧೩ರಂದು, ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಪ್ರಸಾರ ಯೋಜನೆಯನ್ನೂ ಪುಸ್ತಕಪ್ರದರ್ಶನವನ್ನು ಸಚಿವ ಶ್ರೀ ಕೆ. ಹೆಚ್. ಪಾಟೀಲರ ಅಧ್ಯಕ್ಷತೆಯಲ್ಲಿ ರಾಜ್ಯಪಾಲ ಶ್ರೀ ಮೋಹನಲಾಲ್ ಸುಖಾಡಿಯಾ ಅವರು ಉದ್ಘಾಟಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿ ಶ್ರೀ ಟಿ. ಕೆ. ತುಕೋಳ್ ಅವರು "ಪುಸ್ತಕ ಭಾಗ್ಯ" ವನ್ನು ಬಿಡುಗಡೆ ಮಾಡಿದರು. ಡಾ॥ ರಂ. ಶ್ರೀ. ಮುಗಳಿಯವರು ಉದಯೋನ್ಮುಖ ಬರಹಗಾರರ ಕತೆಗಳ ಸಂಗ್ರಹ ಹಾಗೂ ಕವನ ಸಂಗ್ರಹಗಳ ಎರಡು ಕೃತಿಗಳನ್ನೂ, ಸ್ವಾತಂತ್ರ್ಯೋತ್ತರ ಸಾಹಿತ್ಯ ಸಾಧನೆಯ ಸಂಬಂಧದಲ್ಲಿ ಹೊರತರಲಿರುವ ಕೃತಿಗಳ ಪೈಕಿ ಮೊದಲನೆಯದಾದ "ಜನಪದ ಸಾಹಿತ್ಯ" ಎಂಬ ಕೃತಿಯನ್ನೂ ಬಿಡುಗಡೆ ಮಾಡಿದರು. ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರು ಸ್ವಾಗತ ಭಾಷಣ ಮಾಡಿದರು.

ಮಾಡುವುದೂ ಅವರಲ್ಲಿ ವಾಚನಾಭಿರುಚಿ ಹೆಚ್ಚುವಂತೆ ಮಾಡುವುದೂ ಪ್ರಕಾಶಕ ಆದ್ಯ ಕರ್ತವ್ಯವಾಗಿದೆ. ವಾಚಕವೃಂದದ ಹೆಚ್ಚಳವು ಕೂಡ, ಸಾಹಿತ್ಯ ಪ್ರಸಾರ ಕಾರ್ಯದಲ್ಲಿ ಆಸಕ್ತಿ ಇರುವವರ ಪ್ರಯತ್ನವನ್ನು ಮುಖ್ಯವಾಗಿ ಅವಲಂಬಿಸಿಕೊಂಡಿರುತ್ತದೆ. ವಾಚನಾಭಿರುಚಿಯು ಕೂಡ ವೃದ್ಧಿಪಡಿಸಿಕೊಳ್ಳತಕ್ಕಂತಹ ಹವ್ಯಾಸವಾಗಿದೆ. ಈ ಪ್ರಯತ್ನದಲ್ಲಿ ಪುಸ್ತಕಪ್ರದರ್ಶನವು ಅತ್ಯಂತ ಪರಿಣಾಮಕಾರಿಯಾದ ಅಂಶವಾಗಿದೆ. ಆದರೆ, ಈ ಕೆಲಸ ಇಷ್ಟಕ್ಕೇ ಮುಗಿಯುವುದಿಲ್ಲ ; ಅದಕ್ಕೆ ಪೂರಕವಾದ ಪ್ರಯತ್ನಗಳು, ಅದರ ಹಿಂದೆಯೇ, ನಡೆಯಬೇಕಾಗುತ್ತದೆ.

ಪುಸ್ತಕ ಪ್ರದರ್ಶನವನ್ನು ಒಂದು ಭಾಗವನ್ನಾಗಿ ಪಡೆದಿರುವ, ಕನ್ನಡ ಸಾಹಿತ್ಯ ಪ್ರಸಾರ ಯೋಜನೆಯೊಂದನ್ನು ತಾವು ರೂಪಿಸಿಕೊಂಡಿರುವುದು ತುಂಬಾ ಸಂತೋಷದ ಸಂಗತಿಯಾಗಿದೆ. ಈ ವಿಚಾರದಲ್ಲಿ ತಾವು ನಡೆಸಿರುವ ಪ್ರಯತ್ನಗಳಿಗೆ, ತಮ್ಮ ಸಂಸ್ಥೆಯು (ಸಾಹಿತ್ಯ ಪರಿಷತ್ತು) ಹೆಸರಾಂತುದಾಗಿದೆ. ತಾವು ಹಾಕಿಕೊಂಡಿರುವ "ಮನೆಗೊಂದು ಪುಸ್ತಕ ಭಂಡಾರ ಯೋಜನೆ" ಮತ್ತು ನಾಡಿನ ದೂರದ ಮೂಲೆ ಮೂಲೆಗಳಿಗೆ ಸಾಹಿತ್ಯವನ್ನು ಕೊಂಡೊಯ್ಯುವ ತಮ್ಮ ಕಾರ್ಯಕ್ರಮ, ನನ್ನನ್ನು ತುಂಬಾ ಆಕರ್ಷಿತನನ್ನಾಗಿ ಮಾಡಿವೆ. ತಾವು ಈಗಾಗಲೇ ಅದ್ಭುತ ಸಾಧನೆಗಳನ್ನು ಮಾಡಿ, ಪ್ರಭಾವಪೂರ್ಣವಾದ ಹಿನ್ನೆಲೆಯನ್ನು ಪಡೆದಿದ್ದೀರಿ. ತಮ್ಮ ಈಗಿನ ಯೋಜನೆಯ ಮೂಲಕ, ಕನ್ನಡದ ಸೇವಾಪರಂಪರೆಯನ್ನು ಸಾಧಿಸಿಕೊಂಡು ಬರುವಿರೆಂಬುದರಲ್ಲಿ ಅನುಮಾನವಿಲ್ಲ. ತಮಗೆ ಒಳ್ಳೆಯದಾಗಲಿ ; ತಮ್ಮ ಸಾಹಸಪೂರ್ಣ ಪ್ರಯತ್ನಗಳು ಯಶಸ್ಸನ್ನು ತಂದುಕೊಡಲಿ."

—ಮೋಹನಲಾಲ್ ಸುಖಾಡಿಯಾ

* * * *

"ಸಾಹಿತಿಯ ತಪಸ್ಸು ಸಾರ್ವಜನಿಕರ ಉಪಯೋಗಕ್ಕೆ ಮೀಸಲಾಗಿರುತ್ತದೆ. ಇವರ ತಪಸ್ಸಿನ ಫಲದಿಂದ ಸಮಾಜ ಉದ್ಧಾರವಾಗುತ್ತದೆ. ಸನ್ಯಾಸಿಯ ತಪಸ್ಸಿಗಿಂತ ಸಾಹಿತಿಯ ತಪಸ್ಸು ಶ್ರೇಷ್ಠವಾದುದೆಂದು ನನ್ನ ಭಾವನೆ."

—ಕೆ. ಹೆಚ್. ಪಾಟೀಲ್

* * * *

"ಪುಸ್ತಕೋದ್ಯಮವೇನೊ ದೊಡ್ಡದಾಗಿ ಬೆಳೆಯುತ್ತಲಿದೆ. ಆದರೆ, ಪರಾಮರ್ಶನ (ರೆಫರೆನ್ಸ್) ಹಾಗೂ ವಿಮರ್ಶಾ ಗ್ರಂಥಗಳು ಹೆಚ್ಚಾಗಿ ಬರುತ್ತಲಿಲ್ಲ. ಆದ್ದರಿಂದ ಬರಹಗಾರರು ಈ ಕಡೆ ಗಮನ ಕೊಡಬೇಕು."

—ಟಿ. ಕೆ. ತುಕೋಳ್

* * * *

"ಉದಯೋನ್ಮುಖ ಬರಹಗಾರರಲ್ಲಿ ಅನೇಕರು ಪ್ರತಿಭಾವಂತರಿದ್ದಾರೆ. ಇಂಥವರಿಗೆ ಪ್ರೋತ್ಸಾಹ ಕೊಡಬೇಕೆಂಬ ದೃಷ್ಟಿಯಿಂದ ಕನ್ನಡ ಸಾಹಿತ್ಯ ಪರಿಷತ್ತು, ಉದಯೋನ್ಮುಖ ಬರಹಗಾರರ ಉತ್ತಮ ಕೃತಿಗಳನ್ನು ಹೊರತರಲು ಪ್ರಯತ್ನ ನಡೆಸಿದೆ."


—ರಂ. ಶ್ರೀ. ಮುಗಳಿ



ಮದ್ದೂರಿನಲ್ಲಿ ನಡೆದ ಮಂಡ್ಯ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ತೆಗೆದ ಚಿತ್ರ. ಶ್ರೀ ಹೆಚ್. ಎಲ್. ನಾಗೇಗೌಡರು ಮಾತನಾಡುತ್ತಿದ್ದಾರೆ.




ಕನಕಪುರದಲ್ಲಿ ನಡೆದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಮ್ಮೇಳನದಲ್ಲಿ ತೆಗೆದ ಚಿತ್ರ. ಶ್ರೀಗಳಾದ ಕೆ.ಜಿ. ತಿಮ್ಮಪ್ಪಗೌಡ, ಶ್ರೀ ದೇಜಗೌ, ಶ್ರೀ ಸಿ. ಕೆ. ವೆಂಕಟರಾಮಯ್ಯ, ಶ್ರೀ ಜಿ. ನಾರಾಯಣ, ಶ್ರೀ ಎಸ್. ಕರಿಯಪ್ಪ ಮತ್ತು ಶ್ರೀ ಕೆ. ವಿ. ಚಿಕ್ಕಣ್ಣಯ್ಯ ಮೊದಲಾದವರನ್ನು ಕಾಣಬಹುದು.



ಕೊಳ್ಳೆಗಾಲದಲ್ಲಿ ನಡೆದ ಮೈಸೂರು ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷ ಪ್ರೊ|| ಎಚ್ಚೆಸ್ಕೆ ಅವರು ಮಾತನಾಡುತ್ತಿರುವುದು. ಎಡದಿಂದ ಬಲಕ್ಕೆ : ಶ್ರೀ ವಿ. ಎಚ್. ಗೌಡ, ಶ್ರೀ ಜಿ. ನಾರಾಯಣ, ಶ್ರೀ ಶ್ರೀನಿವಾಸನ್, ಪ್ರೊ|| ಎಚ್.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ), ಪ್ರೊ|| ದೇ. ಜ. ಗೌ, ಹಾಗೂ ಶ್ರೀ ಚಿಕ್ಕಮರಿಗೌಡ.




ಕಾಸರಗೋಡಿನಲ್ಲಿ ನಡೆದ ಕನ್ನಡಿಗರ ಸಮ್ಮೇಳನದ ಸಂದರ್ಭದಲ್ಲಿ ಭಾರಿ ಮೆರವಣಿಗೆ ನಡೆದಾಗ ತೆಗೆದ ಚಿತ್ರ. ಚಿತ್ರದಲ್ಲಿ ಸಮ್ಮೇಳನಾಧ್ಯಕ್ಷ ಶ್ರೀ ದೇಜಗೌ, ಉದ್ಘಾಟಕರಾದ ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರು, ಶ್ರೀ ಜಿ. ನಾರಾಯಣ ಅವರೂ ಇದ್ದಾರೆ ಪಕ್ಕದಲ್ಲಿ ಕಾಸರಗೋಡಿನ ಪ್ರಮುಖ ಮುಂದಾಳುಗಳನ್ನೂ ಕಾಣಬಹುದು.



ಸೊಲ್ಲಾಪುರದಲ್ಲಿ ನಡೆದ ಕನ್ನಡಿಗರ ಸಮ್ಮೇಳನದ ಸಂದರ್ಭದಲ್ಲಿ ತೆಗೆದ ಚಿತ್ರ. ಸಮ್ಮೇಳನಾಧ್ಯಕ್ಷ ಸಿಂಪಿ ಲಿಂಗಣ್ಣ ಮೊದಲಾದವರನ್ನು ಕಾಣಬಹುದು.




ನಡೆದ ಕೊಡಗು ಜಿಲ್ಲಾ ಸಾಹಿತ್ಯ
ಅಧ್ಯಕ್ಷ ಶ್ರೀ ಕೆ.ಎಸ್. ಕಾರಂತರು
ದ್ದಾಗ ತೆಗೆದ ಚಿತ್ರ. ಎಡಗಡೆ
ಯಣ ಅವರಿದ್ದಾರೆ.



ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರು ಆದವಾನಿ ಮೊದಲಾದ ಗಡಿ ಪ್ರದೇಶಗಳಿಗೆ ಭೇಟಿ ಇತ್ತಾಗ, ಓಲಗದ ಸಮೇತ ಸ್ವಾಗತಿಸಿದ ಚಿತ್ರ.



ಪಟ್ಟಣದಲ್ಲಿ ನಡೆದ ಹಾಸನ ಜಿಲ್ಲಾ ಸಾಹಿತ್ಯ
ಸಂದರ್ಭದಲ್ಲಿ ತೆಗೆದ ಚಿತ್ರ.




ಕಾರವಾರ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ತೆಗೆದ ಚಿತ್ರ. ಉದ್ಘಾಟಕ ಶ್ರೀ ವಿ. ಬಿ. ನಾಯಕ ಮೊದಲಾದವರನ್ನು ಕಾಣಬಹುದು.



ಬಳ್ಳಾರಿ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ ಸಮಾರಂಭ ನಡೆದಾಗ ತೆಗೆದ ಚಿತ್ರದಲ್ಲಿ ಶ್ರೀ ಬೀಚಿ ಅವರು.



ಬಳ್ಳಾರಿ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ ಸಮಾರಂಭ ನಡೆದಾಗ ತೆಗೆದ ಚಿತ್ರದಲ್ಲಿ ಶ್ರೀ ರಾಜಪುರೋಹಿತರು.



ರಾಯಚೂರು ಜಿಲ್ಲಾ ಸಮ್ಮೇಳನದಲ್ಲಿ ತೆಗೆದ ಚಿತ್ರ. ಅಧ್ಯಕ್ಷ ಶ್ರೀ ಸಿದ್ದಯ್ಯ ಪುರಾಣಿಕ್. ಉದ್ಘಾಟಕ ಶ್ರೀ ದೇಜಗೌ ಮತ್ತು ಶ್ರೀ ಜಿ. ನಾರಾಯಣ ಮೊದಲಾದವನ್ನೂ ಸ್ವಾಗತ ಭಾಷಣ ಮಾಡುತ್ತಿರುವ ಡಾ|| ಎಸ್. ರಾಮಕೃಷ್ಣ ಅವರನ್ನೂ ಕಾಣಬಹುದು.



ಶಿರಗುಪ್ಪದಲ್ಲಿ ನಡೆದ ಬಳ್ಳಾರಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಶ್ರೀ ಇ. ಬಿ. ರಾಮಯ್ಯನವರು ಸ್ವಾಗತಿಸು ತ್ತಿದ್ದಾಗ ತೆಗೆದ ಚಿತ್ರ.



ಸಾಹಿತ್ಯ ಪ್ರಸಾರ ಯೋಜನೆಯ ಅಂಗವಾಗಿ ಸಾಹಿತ್ಯ ಶಾರದೆಯನ್ನು ನಾಡಿನಾದ್ಯಂತ
ಮೆರೆಯಿಸುವ ಸುಸಜ್ಜಿತ ವ್ಯಾನ್

ಸಾಹಿತ್ಯ ಪ್ರಸಾರ ಯೋಜನೆಯ ಪುಸ್ತಕ ಪ್ರದರ್ಶನ ಹಾಗೂ ಮಾರಾಟದ ಸಿಬ್ಬಂದಿ ವರ್ಗ—
ಪರಿಷತ್ತಿನ ಅಧ್ಯಕ್ಷರೊಡನೆ



ಕುಳಿತಿರುವವರಲ್ಲಿ ಮಧ್ಯದಲ್ಲಿರುವವರು ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರು. ಅವರ ಎಡಗಡೆ ಇರುವವರು ಸಾಹಿತ್ಯ ಪ್ರಸಾರ ಯೋಜನೆಯ ಬೆಂಗಳೂರು ನಗರ ಸಂಚಾಲಕರಾದ ಶ್ರೀ ಜಿ. ಕೆ. ಗುಂಡೂರಾಯರು. ಬಲಗಡೆ ಇರುವವರು ಪುಸ್ತಕ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆಯ ಮೇಲ್ವಿಚಾರಕರಾದ ಶ್ರೀ ಕೆ. ಎಂ. ಮುಕುಂದರಾವ್ ಅವರು.

ಕರ್ನಾಟಕದ ಪ್ರಕಾಶಕರು

೧. 'ಅಭಿರುಚಿ' — ಲೇಖಕರ ಸಹಕಾರ ಪ್ರಕಾಶನ, ೫, ನಾಗಪ್ಪನ ಬೀದಿ, ಶೇಷಾದ್ರಿಪುರ, ಬೆಂಗಳೂರು–೨೦
೨. ಅನ್ನಪೂರ್ಣ ಪ್ರಕಟನ ಮಂದಿರ, ವಿಶ್ವೇಶ್ವರಪುರಂ, ಬೆಂಗಳೂರು–೪
೩. ಅರವಿಂದ ಗ್ರಂಥಾಲಯ, ಚಡಚಣ, ವಿಜಾಪುರ (ಜಿಲ್ಲೆ)
೪. ಅಕ್ಷರ ಪ್ರಕಾಶನ, ಸಾಗರ, ಶಿವಮೊಗ್ಗ (ಜಿಲ್ಲೆ)
೫. ಆನಂದ ಪ್ರಕಾಶನ, ಮಂಗಳೂರು, ದಕ್ಷಿಣ ಕನ್ನಡ
೬. ಆಕಳವಾಡಿ ಬುಕ್ ಡಿಪೊ, ವಿಜಯ ರೋಡ್, ಧಾರವಾಡ–೧
೭. ಆರ್. ವಿಟ್ಟಪ್ಪ ಶೆಣೈ ಅಂಡ್ ಸನ್ಸ್, ಕಾರ್ಕಳ, ದಕ್ಷಿಣ ಕನ್ನಡ
೮. ಆರ್. ಆರ್. ಕುಪ್ಪಸದ ಎಂ.ಎ., ಬಿ.ಟಿ., ನಂ. ೭೧, ನಾಲ್ಕನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–೧೦
೯. ಇಂಡಿಯಾ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು–೯
೧೦. ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು–೨
೧೧. ಉಷಾ ಪ್ರೆಸ್, ಚಂದ್ರಗುಪ್ತ ರಸ್ತೆ, ಮೈಸೂರು–೧.
೧೨. ಎ. ಗಣಪಯ್ಯ, ಪುಸ್ತಕ ಮಾರಾಟಗಾರರು, ಚೊಕ್ಕಾಡಿ, ಸುಳ್ಯ (ತಾ), ದ. ಕ.
೧೩. ಎಚ್. ಎಸ್. ಪಾರ್ವತಿ, ೬೪೯, ಹತ್ತನೇ ಮೈನ್, ನಾಲ್ಕನೇ ಬ್ಲಾಕ್, ಜಯನಗರ, ಬೆಂಗಳೂರು–೧೧
೧೪. ಎಚ್. ದೇವೀರಪ್ಪ, ೫೨, 'ಹರಿಹರ' ಕಾರ್ಡ್ ರಸ್ತೆ, ಬೆಂಗಳೂರು-೪೦
೧೫. ಎಲ್. ಗುಂಡಪ್ಪ, ವಿಲ್ಸನ್ ಗಾರ್ಡನ್ಸ್, ಹತ್ತನೇ ಕ್ರಾಸ್, ಬೆಂಗಳೂರು–೨೭
೧೬. ಎಸ್. ಬಿ. ದಾನಿ, ೪೧೭, ೪ನೇ ಕ್ರಾಸ್, ವಿಲ್ಸನ್‌ಗಾರ್ಡನ್ಸ್, ಬೆಂಗಳೂರು–೨೭
೧೭. ಎಸ್. ಸಂಪತ್ತೈಯ್ಯಂಗಾರ್, ೬, ೬ನೇ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೧೮
೧೮. ಎಸ್. ಆರ್. ಪ್ರಕಾಶನ, ೧೭೭, ಸರ್ವೋದಯ ಬಿಲ್ಡಿಂಗ್ಸ್, ಬಳೇಪೇಟೆ, ಬೆಂಗಳೂರು-೨
೧೯. ಎಸ್. ಜಿ. ರೇವಣಸಿದ್ದಪ್ಪ, ೯೬, ನಂದೀದುರ್ಗ ರಸ್ತೆ ಬಡಾವಣೆ, ಬೆಂಗಳೂರು-೬
೨೦. ಎಸ್. ವಿ. ಎನ್. ನಾಯುಡು, ೯೮, ಕೆ. ಎಚ್. ರೋಡ್ ಕ್ರಾಸ್ (ರಿವೊಲಿ ಹೋಟೆಲ್ ಹಿಂದೆ), ಬೆಂಗಳೂರು–೨೭
೨೧. ಎಸ್.ಎಲ್. ವಿ. ಬುಕ್ ಡಿಪೊ, ಪ್ರಕಾಶಕರು ಹಾಗೂ ಮಾರಾಟಗಾರರು, ಅವೆನ್ಯೂ ರಸ್ತೆ, ಬೆಂಗಳೂರು–೨
೨೨. ಕವಿತಾ ಪ್ರಕಾಶನ, ಕ್ಯಾತ್ಸಂದ್ರ, ತುಮಕೂರು (ಜಿಲ್ಲೆ)
೨೩. ಕಲಾಭಾರತಿ, ಸಾಸಲು, ಚಿಕ್ಕನಾಯಕನಹಳ್ಳಿ (ತಾ), ತುಮಕೂರು (ಜಿಲ್ಲೆ)
೨೪. ಕನ್ನಡ ಕವಿ ಕಾವ್ಯಮಾಲೆ, ಶಾರದಾ ಮಂದಿರ, ೧೪೯೫/೨೫, ರಾಮಯ್ಯರ್ ರೋಡ್, ಮೈಸೂರು–೪

೨೫. ಕನ್ನಡ ಲೇಖಕರು, ೪೫, ನರಸಿಂಹ ನಿಲಯ, ೩೮ನೇ ಕ್ರಾಸ್, ೫ನೇ ಬ್ಲಾಕ್, ಜಯನಗರ, ಬೆಂಗಳೂರು-೨೫

೨೬. ಕರ್ನಾಟಕ ಲೇಖಕರ ಸಂಘ, ಬೆಂಗಳೂರು-೨

೨೭. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

೨೮. ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ, ವಲ್ಲಭ ನಿಕೇತನ, ಕುಮಾರ ಪಾರ್ಕ್ (ಪೂರ್ವ), ಬೆಂಗಳೂರು-೧

೨೯. ಕಲ್ಯಾಣ ಸಾಹಿತ್ಯ ಭಂಡಾರ, ಕಲ್ಯಾಣ ಭವನ, ಚಿಕ್ಕಪೇಟೆ, ಬೆಂಗಳೂರು-೨ ಎ

೩೦. ಕಾವ್ಯಶ್ರೀ ಪ್ರಕಾಶನ, ಆಸ್ಪತ್ರೆ ರಸ್ತೆ, ಶಿವಮೊಗ್ಗ

೩೧. ಕಾವೇರಿ ಪ್ರಕಾಶನ, ೩೦೦/೫೦, ಏಳನೇ ಬ್ಲಾಕ್, ಜಯನಗರ, ಬೆಂಗಳೂರು-೧೧

೩೨. ಕಾವೇರಿ ಪ್ರಕಾಶನ, ಎಸ್. ಆರ್. ನಾರಾಯಣರಾವ್ (ಭಾರತೀಸುತ) ೧೪/೩೦, ಹೊಸ ವಿಸ್ತೀರ್ಣ, ಮಡಿಕೇರಿ (ಕೊಡಗು)

೩೩. ಕುಮಾರ ಪ್ರಕಾಶನ, ಕೊಪ್ಪಳ ರಾಯಚೂರು (ಜಿಲ್ಲೆ)

೩೪. ಕೃಷಿ ವಿಶ್ವವಿದ್ಯಾಲಯದ ಕಾರ್ಯದರ್ಶಿಗಳು, ಬೆಂಗಳೂರು-೨೪

೩೫. ಕೃಷ್ಣ ಆಲೂರ, ಸಾಧನಕೇರಿ, ಧಾರವಾಡ

೩೬. ಕೆ. ಕೆ. ಭಕ್ತ, ಲೇಖಕರು, ಕೊಂಚಾಡಿ, ಮಂಗಳೂರು-೮, ದ. ಕ.

೩೭. ಕೆ. ಶಿವರಾಮ ಕಾರಂತ, ಹರ್ಷ ಪಬ್ಲಿಕೇಷನ್ಸ್, ಪುತ್ತೂರು, ದಕ್ಷಿಣ ಕನ್ನಡ

೩೮. ಕೆ. ಪಿ. ರಾಜಣ್ಣ, ಶ್ರೀ ಶಿವಕುಮಾರ್ ಟ್ರೇಡಿಂಗ್ ಕಂಪೆನಿ, ೩೩೮, ಹೊಳಲ್ಕೆರೆ ರಸ್ತೆ, ಚಿತ್ರದುರ್ಗ

೩೯. ಗಾಂಧೀ ಸಾಹಿತ್ಯ ಸಂಘ, ೮ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು-೩

೪೦. ಗೀತಾ ಬುಕ್ ಹೌಸ್, ನ್ಯೂ ಸ್ಟ್ಯಾಚ್ಯು ಸರ್ಕಲ್, ಮೈಸೂರು-೧

೪೧. ಚ. ಸುಂದರೇಶನ್, ಭವತಾರಿಣಿ ಗ್ರಂಥಮಾಲೆ, ೫೨, ಚೌಳುಬೀದಿ, ಬೆಂಗಳೂರು-೨

೪೨. ಚಂದ್ರಿಕಾ ಪ್ರಕಟಣ ಮಂದಿರ, ಎನ್ ಎ-೧೩೬, ಬಿ. ಇ. ಎಲ್. ಕಾಲೊನಿ, ಬೆಂಗಳೂರು-೧೩

೪೩. ಚೇತನಾ ಪ್ರಕಟನಾಲಯ, ಸ್ಟೇಷನ್ ರೋಡ್, ಗದಗ

೪೪. ಜನಮಿತ್ರ ಪ್ರಕಾಶನ, ಪ್ರಕಾಶಕರು ಮತ್ತು ಮಾರಾಟಗಾರರು, ಸಿಲ್ವರ್ ಜ್ಯೂಬಿಲಿ ಪಾರ್ಕ್ ರಸ್ತೆ, ಹಾಸನ

೪೫. ಜಿ. ಪಿ ರಾಜತ್ನಂ, ೧೪, ೧೭ನೇ ಕ್ರಾಸ್ ರಸ್ತೆ, ಮಲ್ಲೇಶ್ವರ, ಬೆಂಗಳೂರು-೩

೪೬. ಜಿ. ಎಸ್. ಗುಂಡಪ್ಪ, ಉಪಾಧ್ಯಾಯ, ಹೊಸಪೇಟೆ,-ಆನೆಕಲ್ಲು, ಬೆಂಗಳೂರು (ಜಿಲ್ಲೆ)

೪೭. ಜೀವನ ಕಾರ್ಯಾಲಯ, ಗವಿಪುರಂ ಬಡಾವಣೆ, ಬೆಂಗಳೂರು-೧೯

೪೮. ಜೀವನ ವಿಕಾಸ ಸಾಹಿತ್ಯ, ಬ್ರಹ್ಮಪುರ-೨೫, ಶ್ರೀರಾಮಪುರಂ, ಬೆಂಗಳೂರು-೨೧

೪೯. ಡಾ|| ಕೆ. ಮುದ್ದಣ್ಣ, ಬೆಂಗಳೂರು

೫೦. ಡಿಪಾರ್ಟ್‌ಮೆಂಟ್ ಆಫ್ ಪೊಲಿಟಿಕಲ್ ಸೈನ್ಸ್, ಕಲ್ಪತರು ಕಾಲೇಜ್, ತಿಪಟೂರು

೫೧. ಡಿ. ಲಿಂಗಯ್ಯ, ಕನ್ನಡ ವಿಭಾಗದ ಮುಖ್ಯಸ್ಥ, ಕಲೆ ಮತ್ತು ವಿಜ್ಞಾನ ಕಾಲೇಜು, ವಿಶ್ವೇಶ್ವರಪುರಂ ಬೆಂಗಳೂರು-೪

೫೨. ಡಿ. ವಿ. ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು-೪

೫೩. ಡೆಪ್ಯುಟಿ ಡೈರೆಕ್ಟರ್ ಆಫ್ ಟೆಕ್ಸ್ಟ್‌ಬುಕ್ ಕಮಿಟಿ, ಮೈಸೂರು ಸರ್ಕಾರ, ಬೆಂಗಳೂರು-೧

೫೪. ತರಳಬಾಳು ಪ್ರಕಾಶನ, ಸಿರಿಗೆರೆ (ಪೋಸ್ಟ್), ಚಿತ್ರದುರ್ಗ (ಜಿಲ್ಲೆ)

೫೫. ತಾಳ್ಯ ಪಬ್ಲಿಕೇಷನ್ಸ್, ೨, ಪೋಲಿಸ್ ಸ್ಟೇಶನ್ ರಸ್ತೆ, ಬಸವನಗುಡಿ ಅಂಚೆ, ಬೆಂಗಳೂರು-೪

೫೬. ತಿ. ಶಾ. ಅಚ್ಯುತರಾವ್, ತಿಮ್ಮಯ್ಯನಹಳ್ಳಿ, ಕ್ಯಾತಗಾನಕೆರೆ (ಅಂಚೆ),
ಪಾವಗಡ (ತಾಲ್ಲೂಕು)

೫೭. ನವರಸ ಸಾಹಿತ್ಯ ಮಾಲೆ, ಕಡಬ, ದಕ್ಷಿಣ ಕನ್ನಡ

೫೮. ನಾ. ಕೃ. ಸತ್ಯನಾರಾಯಣ, ೧೪/೩, ಮೊದಲನೆಯ ಬ್ಲಾಕ್ (ಪೂರ್ವ),
ಜಯನಗರ, ಬೆಂಗಳೂರು–೧೧

೫೯. ಪದವಿ ಏಜನ್ಸೀಸ್, ಕೃಷ್ಣಮೂರ್ತಿಪುರಂ, ಮೈಸೂರು–೪

೬೦. ಪಿ. ಎಸ್. ಸಿ. ಅಯ್ಯಂಗಾರ್, ೪೨, ಫಸ್ಟ್ ಫ್ಲೋರ್, ಎರಡನೇ ಮೈನ್ ರಸ್ತೆ,
ಶಾಂತಿನಗರ, ಬೆಂಗಳೂರು–೨೭

೬೧. ಪಿ. ಎಲ್. ಪದ್ಮಾವತಿ, ಜಿ. ರೇವಣಸಿದ್ದಪ್ಪ, ಉಪನ್ಯಾಸಕರು, ವಿಜಯ ಶಿಕ್ಷಕರ ಕಾಲೇಜು,
ಬಸವನ ಗುಡಿ ರಸ್ತೆ, ಬೆಂಗಳೂರು–೧೯

೬೨. ಪುಸ್ತಕ ಕೇಂದ್ರ, ಜಯನಿವಾಸ್, ಶಂಕರಮಠ ರಸ್ತೆ, ಬೆಂಗಳೂರು–೪

೬೩. ಪುರೋಗಾಮಿ ಸಾಹಿತ್ಯ ಸಂಘ, ಹತ್ತನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು–೩

೬೪. ಪುಲಿಕೇಶಿ ಪ್ರಕಾಶನ, ಹತ್ತನೇ ಕ್ರಾಸ್, ಮತ್ತಿಕೆರೆ ರೋಡ್, ಯಶವಂತಪುರ,
ಬೆಂಗಳೂರು-೨೨

೬೫. ಪ್ರಸನ್ನ ಪ್ರಕಾಶನ, ನೊಸಿಕುಂಟೆ ಹೊಸೂರು, ಕಂಗಾನಹಳ್ಳಿ (ಅಂಚೆ), ಕೋಲಾರ (ಜಿಲ್ಲೆ)

೬೬. ಪ್ರತಿಭಾ ಕಲಾ ಪರಿಷತ್, 'ನರ್ಮದಾ', ೧೭೬/೧ ಕೊಠಡಿ, ಸುಬ್ಬರಾಮಶೆಟ್ಟಿ ರಸ್ತೆ,
ಬೆಂಗಳೂರು–೪

೬೭. ಪ್ರಬುದ್ಧ ಪ್ರಕಾಶನ, ಮಂಡ್ಯ

೬೮. ಬಸವ ಸಮಿತಿ, ಬಸವ ಭವನ, ಶ್ರೀ ಬಸವೇಶ್ವರ ಸರ್ಕಲ್ ಹೈಗ್ರೌಂಡ್ಸ್, ಬೆಂಗಳೂರು–೧

೬೯. ಬಾ. ಪಾ. ನಾಯ್ಕರ, ಶೋಭಾ ಸಾಹಿತ್ಯ ಪ್ರಕಾರ, ಅಣ್ಣಿಗೇರಿ

೭೦. ಬಿ. ಎಲ್. ಗುಂಡೂರಾವ್, ೨೨, ಶ್ರೀರಾಮ ಮಂದಿರ ರಸ್ತೆ, ಬಸವನಗುಡಿ, ಬೆಂಗಳೂರು–೪

೭೧. ಬಿ. ಪಿ. ಬಾಯರಿ, ಚಿತ್ರಕುಟೀರ, ಉಡುಪಿ

೭೨. ಬಿ. ವಿ. ನಂಜುಂಡಯ್ಯ, ಎಂ.ಎ., ಬಿ.ಟಿ., ಎಂ.ಇಡಿ., ಮುಖ್ಯೋಪಾಧ್ಯಾಯರು,
ಪ್ರೌಢಶಾಲೆ, ಗುಂಡ್ಲುಪೇಟೆ, ಮೈಸೂರು (ಜಿಲ್ಲೆ)

೭೩. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧

೭೪. ಭಾರತದರ್ಶನ ಕಾರ್ಯಾಲಯ, ತ್ಯಾಗರಾಜ ನಗರ್, ಬೆಂಗಳೂರು–೨೮

೭೫. ಭಾರತಿ ಪ್ರಕಾಶನ, ಮುಗುಟಖಾನ, ೩೦೫, ಹುಬ್ಬಳ್ಳಿ

೭೬. ಭಾರತೀ ಶ್ರೀ ಪ್ರಕಾಶನ, ಕುಂಭಾಸಿ, ಕುಂದಾಪುರ (ತಾ.), ದಕ್ಷಿಣ ಕನ್ನಡ (ಜಿಲ್ಲೆ)

೭೭. ಭಾರ್ಗವ ಪ್ರಕಾಶನ, ಹಿರೇಮಗಳೂರು, ಚಿಕ್ಕಮಗಳೂರು (ಜಿಲ್ಲೆ)

೭೮. ಭಾರದ್ವಾಜ ಪ್ರಕಾಶನ, ಮಂಗಳೂರು–೨

೭೯. ಭಾವೈಕ್ಯ ಪ್ರಕಾಶನ, ಸ್ಟೇಶನ್ ರೋಡ್, ಗದಗ

೮೦. ಮಿತ್ರ ಪ್ರಕಾಶನ, ಎಸ್.ಆರ್.ಎ. ಪ್ರಿಂಟರ್ಸ್, ಕೆ. ಆರ್. ರಸ್ತೆ, ಬೆಂಗಳೂರು–೪

೮೧. ಮೂರ್ತಿ ಸಹೋದರರು, ಚಿತ್ರವಾಡ್ಗಿ, ಹೊಸಪೇಟೆ, ಬಳ್ಳಾರಿ (ಜಿಲ್ಲೆ)

೮೨. ಮೈಸೂರು ರಾಜ್ಯದ ಸಂಗೀತ ನಾಟಕ ಅಕಾಡೆಮಿ, ರವೀಂದ್ರ ಕಲಾಕ್ಷೇತ್ರ,
ಜಯಚಾಮರಾಜ ಒಡೆಯರ್ ರಸ್ತೆ, ಬೆಂಗಳೂರು–೨

೮೩. ಮೈಸೂರು ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಪೋ. ಬಾ. ನಂ. ೨, ಕೆ. ಆರ್. ಪುರಂ, ಮೈಸೂರು–೪

೮೪. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ, ಮೈಸೂರು–೩

೮೫. ಮೈಸೂರು ರಾಜ್ಯ ಗಾಂಧಿ ಸ್ಮಾರಕ ನಿಧಿ, ಗಾಂಧಿಭವನ್, ಕುಮಾರ ಪಾರ್ಕ್, ಬೆಂಗಳೂರು–೧

೮೬. ಯಕ್ಷಗಾನ ಸಂಘಟನಾ ಸಮಿತಿ, ಮಂಚಿ, ದಕ್ಷಿಣ ಕನ್ನಡ

೮೭. ಯು. ರಮೇಶ ವೈದ್ಯ, ಬಿ. ಕಾಂ, ಕೆನರಾ ಬ್ಯಾಂಕ್ ಹೆಡ್ ಆಫೀಸ್, ಬೆಂಗಳೂರು–೨

೮೮. ಯುಗಪುರುಷ ಪ್ರಕಟನಾಲಯ, (ಕೆ. ಎಸ್. ಉಡುಪ), ಕಿನ್ನಿಗೋಳಿ, ದಕ್ಷಿಣ ಕನ್ನಡ

೮೯. ರವೀಂದ್ರ ಪುಸ್ತಕಾಲಯ, ಸಾಗರ–ಕಾರ್ಗಲ್, ಶಿವಮೊಗ್ಗ (ಜಿಲ್ಲೆ)

೯೦. ರಾಗಿಣಿ ಪ್ರಕಾಶನ, ಸಾಸಲು, ಚಿಕ್ಕನಾಯಕನಹಳ್ಳಿ (ತಾ.), ತುಮಕೂರು (ಜಿಲ್ಲೆ)

೯೧. ರಾಘವೇಂದ್ರಾಚಾರ್ಯ, ಹಡಗಲಿ, ಬಳ್ಳಾರಿ (ಜಿಲ್ಲೆ)

೯೨. ರಾಘವ ಪ್ರಕಾಶನ, ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು, ೩ನೇ ಕ್ರಾಸ್, ಗವಿಪುರಂ ಎಕ್ಸ್‌ಟೆನ್‌ಶನ್, ಬೆಂಗಳೂರು–೧೯

೯೩. ರಾಮಾನಂದಸ್ವಾಮಿಗಳು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಬೆಳ್ಳೂರು (ಪೋಸ್ಟ್), ನಾಗಮಂಗಲ (ತಾಲ್ಲೂಕು), ಮಂಡ್ಯ (ಜಿಲ್ಲೆ)

೯೪. ರಾಷ್ಟ್ರೋತ್ಥಾನ ಸಾಹಿತ್ಯ, ಕೆಂಪೇಗೌಡ ನಗರ, ಬೆಂಗಳೂರು–೧೯

೯೫. ಲಕ್ಷ್ಮೀಪ್ರಕಾಶನ, ನಂ. ೭, ಲ್ಯಾಂಗ್‌ಫೋರ್ಡ್ ರಸ್ತೆ, ಬೆಂಗಳೂರು–೨೭

೯೬. ಲಿಕೊ ಬಿಂದು ಪ್ರಕಾಶ ಸಾಹಿತ್ಯ, ಬೆಂಗಳೂರು

೯೭. ವಸಂತ ಸಾಹಿತ್ಯ, ಜೊಕ್ಕಾಡಿ, ಸುಳ್ಯ, ದಕ್ಷಿಣ ಕನ್ನಡ

೯೮. ವಸಂತ ಪ್ರಕಾಶನ, ಎಚ್. ೧೧೮, ಲಕ್ಷ್ಮೀನಾರಾಯಣಪುರ, ಶ್ರೀರಾಮಪುರ, ಬೆಂಗಳೂರು–೨೧

೯೯. ವನಸುಮ ಪ್ರಕಾಶನ, ೭೨, ಬಸಪ್ಪ ಲೇ ಔಟ್ (ಪಶ್ಚಿಮ), ಹನುಮಂತನಗರ, ಬೆಂಗಳೂರು-೧೯

೧೦೦. ವಿಜಯ ಪ್ರಕಾಶನ, ೨೦/ಬಿ, ೯ನೆಯ ಬಡಾವಣೆ, ಜಯನಗರ, ಬೆಂಗಳೂರು–೧೧

೧೦೧. ವಿ. ಕುಮಾರಸ್ವಾಮಿ ಭಾರತಿ, ನಂ. ೧೪೫೪/೬೦, ಲಷ್ಕರ್ ಮೊಹಲ್ಲಾ, ಮೈಸೂರು–೧

೧೦೨. ವಿಜ್ಞಾನ ಸಾಹಿತ್ಯ ಪ್ರಕಾಶನ, ಅಮರನಾಥ್, ೧೧೦೮, ೯ನೇ ಬ್ಲಾಕ್, ಜಯನಗರ, ಬೆಂಗಳೂರು–೧೧

೧೦೩. ವಿ. ಎಸ್. ಸಬ್ರಕರ್, ಲೈಬ್ರೆರಿಯನ್, ಕನ್ನಡ ಸಾಹಿತ್ಯ ಸಂಘ, ಜಾಲಹಳ್ಳಿ (ಪೋಸ್ಟ್) ಬೆಂಗಳೂರು–೧೩

೧೦೪. ವಿಚಾರ ಸಾಹಿತ್ಯ ಪ್ರೈವೇಟ್ ಲಿಮಿಟೆಡ್, ಪಬ್ಲಿಷರ್ಸ್ ಅಂಡ್ ಬುಕ್ ಸೆಲ್ಲರ್ಸ್, ಬಳೇಪೇಟೆ, ಬೆಂಗಳೂರು–೨

೧೦೫. ವಾಗ್ವಿಲಾಸ ಪ್ರಕಾಶನ, ೩೩೧೭ ಎ/೨೪೩೧, ೨ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-೧೦

೧೦೬. ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು-೪

೧೦೭. ವೇಣುಗೋಪಾಲರಾವ್, ವಿ. ಎಸ್., ಎಂ.ಎ., ಬಿ.ಕಾಂ., ಕನ್ನಡ ಅಧ್ಯಾಪಕ, ಕಮಲಾ ನೆಹರೂ ಕಾಲೇಜು, ಶಿವಮೊಗ್ಗ

೧೦೮. ವೈ. ಜಿ. ಶಾಂತವೀರಯ್ಯ, ೭೨/೮೨, ಮೂರನೇ ಮೈನ್, ನಾಲ್ಕನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-೧೦

೧೦೯. ಶಶಿ ಪ್ರಕಾಶನ, ೧೬ನೇ ಲೆವೆಲ್ ರಸ್ತೆ, ಬೆಂಗಳೂರು-೧

೧೧೦. **ಶರಣ ಸಾಹಿತ್ಯ,** ಬಿ. ಶಿವಮೂರ್ತಿಶಾಸ್ತ್ರಿ, ಬಳೇಪೇಟೆ, ಬೆಂಗಳೂರು-೨ ಎ

೧೧೧. **ಶರಾವತಿ ಸಾಹಿತ್ಯ,** ಮಂಜುನಾಥಪುರ, ಧಾರವಾಡ–೨

೧೧೨. **ಶಾ. ಮಂ. ಕೃಷ್ಣರಾಯ,** ಗೋವಾ ಕನ್ನಡ ಸಂಘ, ಮಡಗಾಂ, ಗೋವಾ

೧೧೩. **ಶಾಂತಿ ಸಾಹಿತ್ಯ ಪ್ರಕಾಶನ,** ಮಹಮದ್ ಷೌಕತ್ ಅಲಿ, ೨, ಅಪ್ಪೂರಾಯಪ್ಪ, 'ಎ' ಲೇನ್, ನಗರ್ತರಪೇಟೆ, ಬೆಂಗಳೂರು–೨

೧೧೪. **ಶಾಂತಿ ಪ್ರಕಾಶನ,** ಚಾಮರಾಜಪೇಟೆ, ಬೆಂಗಳೂರು-೧೮

೧೧೫. **ಶೃಂಗಾರ ಮುದ್ರಣ ಮತ್ತು ಪ್ರಕಾಶನ,** ಪ್ರಭಾತ್‌ನಗರ, ಹೊನ್ನಾವರ, ಉತ್ತರ ಕನ್ನಡ

೧೧೬. **ಶ್ರೀ ವಿವೇಕೋದಯ ಗ್ರಂಥಮಾಲೆ,** ಗುಡಿಬಂಡೆ, ಕೋಲಾರ (ಜಿಲ್ಲೆ)

೧೧೭. **ಶ್ರೀ ಪ್ರಸಾದ ಪ್ರಕಾಶನ,** (ಹೀ. ಚಿ. ಶಾಂತವೀರಯ್ಯ), ೯, ಮನುವನ, ವಿಜಯನಗರ, (ಹೊಸಹಳ್ಳಿ) ಬೆಂಗಳೂರು–೪೦

೧೧೮. **ಶ್ರೀ ಪುರಂದರದಾಸರ ೪ನೇ ಶತಮಾನೋತ್ಸವ ಸಮಿತಿ,** ೧೩-೧೧, ಗವೀಪುರ ವಿಸ್ತರಣ, ಬೆಂಗಳೂರು-೧೯

೧೧೯. **ಶ್ರೀ ವಿನಾಯಕ ವಾಣಿಜ್ಯ ವಿದ್ಯಾಶಾಲೆ,** ೩೮, ಸುಣಕಲ್ ಪೇಟೆ, ಬೆಂಗಳೂರು-೨

೧೨೦. **ಶ್ರೀ ಪ್ರಸಾದ ಪ್ರಕಾಶನ,** ಬೆಂಗಳೂರು-೨೩

೧೨೧. **ಶ್ರೀಕಂಠೇಶ್ವರ ಪ್ರೆಸ್ ಮತ್ತು ಬುಕ್ ಡಿಪೊ,** ಎಂ.ಜಿ. ರೋಡ್, ತುಮಕೂರು

೧೨೨. **ಶ್ರೀ ಕೊಟ್ಟೂರೇಶ್ವರ ಪ್ರಕಾಶನ,** (ಕೆ ವಿರೂಪಾಕ್ಷಗೌಡ) ಹಗರಿಬೊಮ್ಮನಹಳ್ಳಿ, ಬಳ್ಳಾರಿ (ಜಿಲ್ಲೆ)

೧೨೩. **ಸರಸ್ವತೀ ಸದನ,** ಚಾಮರಾಜಪೇಟೆ, ಸಾಗರ, ಶಿವಮೊಗ್ಗ (ಜಿಲ್ಲೆ)

೧೨೪. **ಸತ್ಯಶೋಧನ ಪ್ರಕಟನ ಮಂದಿರ,** ಕೋಟೆ, ಬೆಂಗಳೂರು-೨

೧೨೫. **ಸ. ಸ. ಮಾಳವಾಡ,** ಜಯಪ್ರಕಾಶನ, ಧಾರವಾಡ-೨

೧೨೬. **ಸಮಾಜ ಬುಕ್ ಡಿಪೊ,** ಶಿವಾಜಿ ರೋಡ್, ಧಾರವಾಡ–೧

೧೨೭. **ಸಮೇತನಹಳ್ಳಿ ರಾಮರಾಯ,** ರಾಸ ಪ್ರಕಾಶನ, ೩೨೧, ಒಂದನೇ ಕ್ರಾಸ್, ಡಿ. ಸುಬ್ಬಯ್ಯ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು

೧೨೮. **ಸಂಪದ ಪ್ರಕಾಶನ,** ೨ (೬೯), ೬ನೇ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

೧೨೯. **ಸಂಯುಕ್ತ ಕರ್ನಾಟಕ,** ೨, ರೆಸಿಡೆನ್ಸಿರಸ್ತೆ, ಬೆಂಗಳೂರು-೨೫

೧೩೦. **ಸಾಹಿತ್ಯ ಸೇವಾ ಕುಟೀರ,** ಸಿ.ಎಚ್ ೨, ಒಂದನೇ ಬೀದಿ, ಕೆ.ಆರ್. ವನಂ, ಮೈಸೂರು–೮

೧೩೧. **ಸಾಹಿತ್ಯಸುಧಾ ಪ್ರಕಾಶನ,** ೧೨, ಆಂಜನೇಯ ದೇವಸ್ಥಾನದ ೨ನೇ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–೨೦

೧೩೨. **ಸಾಹಿತ್ಯ ಭಂಡಾರ,** ಜಂಗಮ ಮೇಸ್ತ್ರಿಗಲ್ಲಿ, ನಂ. ೧, ಬಳೇಪೇಟೆ, ಬೆಂಗಳೂರು-೨ಎ

೧೩೩. **ಸಾಹಿತ್ಯ ಸದನ,** ನಂ. ೩೧, ೧೦ನೇ ಬ್ಲಾಕ್, ಕುಮಾರಾ ಪಾರ್ಕ್ (ಪಶ್ಚಿಮ), ಬೆಂಗಳೂರು–೨೦

೧೩೪. **ಸಾಹಿತ್ಯ ಮಂದಿರ,** ಪುಸ್ತಕ ಮಾರಾಟಗಾರರು ಮತ್ತು ಪ್ರಕಾಶಕರು, ೨೪೯, ೧ನೇ ಕ್ರಾಸ್, ಹನುಮಂತನಗರ, ಬೆಂಗಳೂರು–೧೯

೧೩೫. **ಸಿ. ಎಂ. ಚನ್ನಬಸವಯ್ಯ,** ಲೆಕ್ಚರರ್, ಪಾಲಿಟೆಕ್ನಿಕ್, ಗುಲ್ಬರ್ಗಾ

೧೩೬. **ಸುರುಚಿ ಪ್ರಕಾಶನ,** ಸರಸ್ವತೀ ಪುರಂ, ಮೈಸೂರು–೯

೧೩೭. **ಸೂರ್ಯ ಪ್ರಕಾಶನ,** ವೈಯಾಳಿಕಾವಲ್, ಎಕ್ಸ್‌ಟೆನ್‌ಶನ್, ಮಲ್ಲೇಶ್ವರ-೩

೧೩೮. **ಸೂರ್ಯನಾರಾಯಣ ಚಡಗ,** 'ನಂದನ ಪ್ರಕಾಶನ', ೧೭ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು–೩

೧೩೯. ಸೂ. ಸುಬ್ರಹ್ಮಣ್ಯಂ, 'ವನಸುಮ', ೭೧೧, ೪ನೇ ಬ್ಲಾಕು, ಜಯನಗರ, ಬೆಂಗಳೂರು-೧೧

೧೪೦. ಸ್ವಯಂಪ್ರಭಾ ಗ್ರಂಥಮಾಲಾ, ರಾಯಚೂರು

೧೪೧. ಸೌಭಾಗ್ಯ ಪ್ರಕಾಶನ, ಕಾಡುಕೊತ್ತನಹಳ್ಳಿ, ಮದ್ದೂರು (ತಾಲ್ಲೂಕು)

೧೪೨. ಹಂಸಧ್ವನಿ ಪ್ರಕಾಶನ, ೫೯, ಆರನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-೧೦

೧೪೩. ಹ. ವೆಂ. ಸೀತಾರಾಮಯ್ಯ, ಪತ್ರಿಕೋದ್ಯೋಗಿ, ನಂ. ಪಿ. ೨೦/೧, ೩ನೇ ಕ್ರಾಸ್, ನಾಗಪ್ಪ ಬ್ಲಾಕ್, ಬೆಂಗಳೂರು-೨೧

೧೪೪. ಹಿಮಾಲಯ ಪ್ರಕಾಶನ, ೧೫೫೪, ೨೨ನೇ ಮೆಯ್ನ್ ರಸ್ತೆ, ೩೯ನೇ ಎಫ್ ಕ್ರಾಸ್, ನಾಲ್ಕನೆಯ ಬ್ಲಾಕ್ ಟಿ, ಜಯನಗರ, ಬೆಂಗಳೂರು-೧೧

೧೪೫. ಹುಲ್ಲೂರು ಶ್ರೀನಿವಾಸ ಜೋಯಿಸರ ಸ್ಮಾರಕ ಗ್ರಂಥಮಾಲೆ, ವಿಶ್ವಾಮಿತ್ರ ಆಶ್ರಮ, ವೆಂಕಟೇಶಪುರ ಬಡಾವಣೆ, ಚಿತ್ರದುರ್ಗ

೧೪೬. ಹೆಚ್. ಎನ್. ರಾವ್ ಅಂಡ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು-೨೩

೧೪೭. ಹೆಚ್. ಕೆ. ಗಂಗಮ್ಮ, ಬಿ. ಎಂ. ಬಸಪ್ಪ, ಜೆ. ಎ. ಮಠ, ಸಾಲಿಗ್ರಾಮ ರಸ್ತೆ, ಹಾಸನ

೧೪೮. ಹೇಮಾ ಪ್ರಕಾಶನ, ಹಾಸ್ಪಿಟಲ್ ಅಂಡ್ ರಿಸರ್ಚ್ ಇನ್ಸ್ಟಿಟ್ಯೂಟ್ ಹಿಂದೆ, ಏಳನೇ ಮುಖ್ಯರಸ್ತೆ, ಶ್ರೀರಾಮಪುರಂ, ಬೆಂಗಳೂರು-೨೧

೧೪೯. ಹೇಮಂತ ಸಾಹಿತ್ಯ, ಭಾಷ್ಯಂ ರಸ್ತೆ, ಬೆಂಗಳೂರು-೨೩

* ಕನ್ನಡ ಸಾಹಿತ್ಯ ಪರಿಷತ್ತಿಗೆ ಆಗಸ್ಟ್ ೧೩ ರೊಳಗೆ ತಲುಪಿದ ಪ್ರಕಾಶಕರ ವಿಳಾಸಗಳನ್ನು ಮಾತ್ರ ಇಲ್ಲಿ ಪ್ರಕಟಿಸಲಾಗಿದೆ.

ಜನಕಕಟ ಸತ್ಪದಾರ್ಥದೊಳನಾದರಂ
ದುಷ್ಟವಸ್ತುಗಳೊಳನುರಾಗಂ
ಮನೆಮನೆಗೆ ಪೊತ್ತು ತಿರುಗಿದೊ-
ಡಿನಿವಾಲ್ ಬೆಲೆವಡೆಗುಂ; ಇರ್ಪ ಕಾಣದೊಳೆ ಕಳ್.

ನಮ್ಮ ಪ್ರಕಟನೆಗಳು

		ರೂ. ಪೈ.
೧.	ಕನ್ನಡದ ಬಾವುಟ	೩-೦೦
೨.	ಜೇಮ್ಸ್ ಏಬ್ರಹಾಮ್ ಗಾರ್‌ಫೀಲ್ಡನ ಚರಿತ್ರೆ ; ಕ್ಯಾಲಿಕೋ ಪ್ರತಿ	೧-೫೦
	ನಾಲ್ಕನೇ ಮುದ್ರಣ : ಸಾದಾ ಪ್ರತಿ	೧-೦೦
೩.	ಜ್ಯೋತಿರ್ವಿನೋದಿನಿ	೨-೦೦
೪.	ಕನ್ನಡ ನಾಡಿನ ಚರಿತ್ರೆ: ಭಾಗ ೧	೩-೦೦
	ಭಾಗ ೨	೨-೭೫
	ಭಾಗ ೩	೧-೨೫
೫.	ಗಾಳಿಯಲ್ಲಿನ ಅಗೋಚರ ಶತ್ರುಗಳು	೧-೨೫
೬.	ನಕ್ಷತ್ರ ದರ್ಶನ	೧-೫೦
೭.	ಹರಿದಾಸ ಕೃತಿಮಂಜರಿ	೧-೨೫
೮.	ಪ್ಲೇಟೋವಿನ ಆದರ್ಶ ರಾಜ್ಯ	೧-೩೮
೯.	ಚೇರಮ ಕಾವ್ಯಂ	೨-೦೦
೧೦.	ಕನ್ನಡದ ಅತ್ಯುತ್ತಮ ಸಣ್ಣಕತೆಗಳು	೮-೦೦
೧೧.	ಕನ್ನಡದ ಅತ್ಯುತ್ತಮ ಸಣ್ಣಕತೆಗಳು (೧೨ ಕತೆಗಳ ಸಂಗ್ರಹ)	೨-೭೫
೧೨.	ಕಾದಂಬರಿ—ಸಾಮಾನ್ಯ ಮನುಷ್ಯ	೧-೦೦
೧೩.	ಮಧುರಚೆನ್ನರ ಜೀವನ ಮತ್ತು ಕಾರ್ಯ	೨-೦೦
೧೪.	ಅಲರ್ಜಿ	೨-೦೦
೧೫.	ಉದ್ಭಟದೇವ ಚರಿತೆ	೧-೫೦
೧೬.	ತ್ರಿಪುರದಹನ ಸಾಂಗತ್ಯ	೦-೭೫
೧೭.	ಗಮಕ ಪ್ರವೇಶದಾಯಿನಿ	೧-೫೦
೧೮.	ಗಮಕ ಪ್ರಚಾರ ಬೋಧಿನಿ	೦-೭೫
೧೯.	ಕಾಳಿದಾಸನ ದೃಷ್ಟಿ-ಸೃಷ್ಟಿ	೨-೦೦
೨೦.	ಆಧುನಿಕ ಗದ್ಯ ಸಾಹಿತ್ಯ : ಭಾಗ ೧	೩-೦೦
	ಆಧುನಿಕ ಗದ್ಯ ಸಾಹಿತ್ಯ : ಭಾಗ ೨	೩-೦೦
೨೧.	ಸರ್ವೋದಯ	೦-೩೨
೨೨.	ಅರುಂಧತಿ	೦-೨೫
೨೩.	ಕಾವ್ಯಸೌರಭ	೨-೦೦
೨೪.	ವಾಚನ ಕಾವ್ಯಮಂಜರಿ	೦-೧೯
೨೫.	ಕರ್ಣ ಕರ್ಣಾಮೃತ	೨-೫೦
೨೬.	ಕವಿಹೃದಯ	೨-೫೦
೨೭.	ಚಂದ್ರಹಾಸೋಪಾಖ್ಯಾನ	೧-೭೫

		ರೂ. ಪೈ.
೨೮.	ಸೋಮೇಶ್ವರ ಶತಕ	೨-೨೫
೨೯.	ಸೀತಾ ಪರಿತ್ಯಾಗ	೧-೨೫
೩೦.	ಬಸವೇಶ್ವರ ವಚನಗಾನ ಮಂಜರಿ	೨-೦೦
೩೧.	ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು	೧೦-೦೦
೩೨.	ಕನ್ನಡ ಸ್ವಯಂಬೋಧಿನಿ ಭಾಗ-೧	೧-೨೫
	ಭಾಗ-೨	೧-೭೫
೩೩.	ಕಾವ್ಯಗಾಯನ ಕಲಾಸಂಗ್ರಹ	೨-೦೦
೩೪.	Kannada through English	೩-೦೦
೩೫.	ಚಿನ್ನದ ಬೆಳಸು	೮-೦೦
೩೬.	ಆಲೂರ ವೆಂಕಟರಾಯರ ಜೀವನ ಮತ್ತು ಕಾರ್ಯ	೨-೦೦
೩೭.	ಮಾದರಿ ಪತ್ರಗಳು	೧-೨೫
೩೮.	ನಮ್ಮ ಸೂರ್ಯ	೧-೨೦
೩೯.	ಶಬ್ದಾವರ್ತ ನಿರುಕ್ತ	೩-೦೦
೪೦.	ಆಧುನಿಕ ವ್ಯವಸಾಯ	೭-೫೦
೪೧.	ತಿರುಳುಗನ್ನಡ ತಿರುಕ	೧-೭೫
೪೨.	ಕರ್ನಾಟಕ ಮಹಿಮ್ನಃ ಸ್ತೋತ್ರ	೨-೦೫
೪೩.	ಗಮಕ ಚಂದ್ರಿಕೆ	೨-೦೦
೪೪.	ಗಮಕ ರಸಾಯನ	೨-೦೦
೪೫.	ಭಕ್ತವಾಣಿ	೧-೫೦
೪೬.	ಸಾಹಿತ್ಯಶಾಸ್ತ್ರ	೨-೫೦
೪೭.	ಎಚ್. ವಿ. ನಂಜುಂಡಯ್ಯ	೧-೨೫
೪೮.	ಚಾರಿತ್ರಿಕ ದಾಖಲೆಗಳು	೨-೨೫
೪೯.	ಗಾಂಧಿ ಸಾಹಿತ್ಯ	೨-೫೦
೫೦.	ಸ್ವಸ್ಥ ಜೀವನ	೨-೫೦
೫೧.	ಅಧ್ಯಕ್ಷರ ಭಾಷಣಗಳು ಸಂ. ೨	೧೦-೦೦
	ಸಂ. ೩	೧೦-೦೦
೫೨.	ಸೋಬಾನೆ ಚಿಕ್ಕಮ್ಮನ ಪದಗಳು	೬-೦೦
೫೩.	ಸುಬೋಧ ಎಂ. ರಾಮರಾವ್	೧-೫೦
೫೪.	ಹರಿಶ್ಚಂದ್ರ ಚರಿತ್ರೆ	೨-೦೦

ಭಾರತೀಯ ಜ್ಞಾನಪೀಠದ ಪ್ರಕಟನೆ:

೧.	ರಾಮವಿಜಯ ಕಾವ್ಯ	೨೦-೦೦
೨.	ಚಿದಂಬರಾ ಸಂಚಯನ	೬-೦೦

COVER PRINTED AT THE EASTERN PRESS